
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತ ಗಂಗೋತ್ರಿ, ಮೈಸೂರು– 570 006

## ಪ್ರಥಮ ಎಂ.ಎ.

# ಪುರಾತನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ

## ಐತಿಹಾಸಿಕ ವಿಧಾನಗಳು



ಕೋರ್ಸ್ – 5

ಬ್ಲಾಕ್ 1 – 5

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು– 570 006

## ಪುರಾತನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ

## ಪ್ರಥಮ ಎಂ.ಎ.

### ಕೋರ್ಸ್ – 5: ಐತಿಹಾಸಿಕ ವಿಧಾನಗಳು

**ಪುಟ ಸಂಖ್ಯೆ**

**ಬ್ಲಾಕ್ – 1: ಪೀಠಿಕೆ**


ಘಟಕ– 1: ಇತಿಹಾಸ–ವ್ಯಾಖ್ಯೆ–ಸ್ವರೂಪ, ವ್ಯಾಪ್ತಿ ಮತ್ತು ಪ್ರಾಮುಖ್ಯತೆ 1–20
ಘಟಕ– 2: ಇತಿಹಾಸದ ವಿಧಗಳು 21–38
ಘಟಕ– 3: ಇತಿಹಾಸದ ಮತ್ತು ಇತರೆ ಸಮಾಜ ವಿಜ್ಞಾನಗಳು 39–61
ಘಟಕ– 4: ಇತಿಹಾಸ ದರ್ಶನ 62–82


**ಬ್ಲಾಕ್ – 2: ಸಂಶೋಧನ ವಿಧಾನ**


ಘಟಕ– 5: ಸಂಶೋಧಕನಲ್ಲಿ ಇರಬೇಕಾದ ಅತ್ಯಾವಶ್ಯಕ ಗುಣಗಳು ಮತ್ತು ವಿಷಯದ ಆಯ್ಕೆ 83–107
ಘಟಕ– 6: ಸಂಯೋಜನಾ ಕಾರ್ಯಗಳು 108–121
ಘಟಕ– 7: ಬಾಹ್ಯ ಮತ್ತು ಆಂತರಿಕ ವಿಮರ್ಶೆ 122–139
ಘಟಕ– 8: ಐತಿಹಾಸಿಕ ಸಂಶೋಧನೆಯಲ್ಲಿ ಪರಿಕಲ್ಪನೆಗಳು – ವಸ್ತುನಿಷ್ಠತೆ ಹಾಗೂ ಕಾರ್ಯಕಾರಣ ಸಂಬಂಧಗಳು 140–154
ಘಟಕ– 9: ಸಂಶೋಧನ ವಿಧಾನ–ಪ್ರಾಥಮಿಕ ವಿಶ್ಲೇಷಣೆ ಹಾಗೂ ವಿವರಣಾತ್ಮಕ ವಿಶ್ಲೇಷಣೆ 155–166
ಘಟಕ– 10: ಸಂಯೋಜನಾತ್ಮಕ ಅಥವಾ ಸಾಂಶ್ಲೇಷಿಕ ಕಾರ್ಯ ರೀತಿಗಳು ಮತ್ತು ಅಂತಿಮ ಕಾರ್ಯನೀತಿಗಳು 167–205


**ಬ್ಲಾಕ್ – 3: ಇತಿಹಾಸ ಲೇಖನಕಲೆ**


ಘಟಕ– 11: ಪ್ರಾಚೀನ ಮತ್ತು ಮಧ್ಯಕಾಲೀನ ಇತಿಹಾಸ ಲೇಖನ ಕಲೆ – ಗ್ರೀಕ್, ರೋಮನ್, ಚೀನಾ, ಕ್ರಿಶ್ಚಿಯನ್ ಮತ್ತು ಪಶ್ಚಿಮ ಏಷ್ಯಾ 208–238
ಘಟಕ– 12: 19ನೆಯ ಶತಮಾನದ ಆಧುನಿಕ ಇತಿಹಾಸ ರಚನೆ 239–253
ಘಟಕ– 13: 20ನೆಯ ಶತಮಾನದ ಇತಿಹಾಸ ಲೇಖನ ಕಲೆ 254–296

**ಬ್ಲಾಕ್ – 4: ಭಾರತೀಯ ಇತಿಹಾಸ ಲೇಖನಕಾರರು**


ಘಟಕ– 14: ಆರಂಭದ ಹಾಗೂ ಮಧ್ಯಕಾಲೀನ ಭಾರತದ ಇತಿಹಾಸಕಾರರು ಹಾಗೂ ಜೀವನ ಚರಿತ್ರೆಕಾರರು 297–307
ಘಟಕ– 15: ಮಧ್ಯಯುಗದ ಚರಿತ್ರೆಕಾರರು ಹಾಗೂ ಜೀವನಚರಿತ್ರೆಕಾರರು 308–317
ಘಟಕ– 16: ಇಂಡೋ–ಇಸ್ಲಾಮಿಕ್ ಇತಿಹಾಸಕಾರರು 318–327
ಘಟಕ– 17: ವಸಹಾತುಶಾಹಿ ಇತಿಹಾಸಕಾರರು – ಓರಿಯಂಟಲ್ – ಆಡಳಿತಗಾರ ಇತಿಹಾಸಕಾರರು 328–348
ಘಟಕ– 18: ಭಾರತದ ರಾಷ್ಟ್ರೀಯ ಇತಿಹಾಸ ಲೇಖನ ಕಲೆ 349–374


**ಬ್ಲಾಕ್ – 5: ಇತ್ತೀಚಿನ ಇತಿಹಾಸ ಲೇಖನದ ವಿಧಾನಗಳು**


ಘಟಕ– 19: ಮಾರ್ಕ್ಸವಾದಿ/ಸಮಾಜವಾದಿ ಇತಿಹಾಸಕಾರರು 375–385
ಘಟಕ– 20: ಕೆಳಸ್ತರದ ಇತಿಹಾಸ ಲೇಖನ ಕಲೆ ಮತ್ತು ಕೆಳಸ್ತರದ ಇತಿಹಾಸ ಲೇಖಕರು 386–400


**ಕೋರ್ಸಿನ ವಿನ್ಯಾಸ ಮತ್ತು ಸಂಪಾದನಾ ಸಮಿತಿ:**


**ಪ್ರೊ. ಎಂ.ಜಿ. ಕೃಷ್ಣನ್**
ಉಪಕುಲಪತಿ ಮತ್ತು ಮುಖ್ಯಸ್ಥರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು– 570 006

**ಪ್ರೊ. ಟಿ.ಡಿ. ದೇವೆಗೌಡ**
ಡೀನ್(ಶೈಕ್ಷಣಿಕ) ಮತ್ತು ಸಂಚಾಲಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು– 570 006


**ಸಂಪಾದಕರು ಮತ್ತು ಕೋರ್ಸಿನ ಸಂಯೋಜಕರು**


**ಡಾ. ಎನ್.ಸಿ. ಸುಜಾತ**
ಮುಖ್ಯಸ್ಥರು
ಪುರಾತನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು– 570 006


**ಕೋರ್ಸಿನ ಲೇಖಕರು**


**ಪ್ರೊ. ಎನ್. ಸರಸ್ವತಿ** **ಘಟಕಗಳು–1, 2, 3, 4, 5, 6 ಮತ್ತು 7**
ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು– 570 006

**ಡಾ. ವೈ. ಎಚ್. ನಾಯಕವಾಡಿ** **ಘಟಕಗಳು–8, 9, 12, 13, 14, 15 16, 17 ಮತ್ತು 18**
ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು– 570 006

**ಡಾ. ಜಿ.ಟಿ. ಸೋಮಶೇಖರ** **ಘಟಕಗಳು–10, 11, 19 ಮತ್ತು 20**
ಸಹ ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು– 570 006

**ಪ್ರಕಾಶಕರು**

**ಕುಲಸಚಿವರು**
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು– 570 006

**ಅಭಿವೃದ್ಧಿ ಪಡಿಸಿದವರು– ಕ.ರಾ.ಮು.ವಿ., ಮೈಸೂರು.**
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2013.

ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಲಿಖಿತ ಅನುಮತಿಯಿಲ್ಲದೆ ಇದರ ಯಾವ ಭಾಗವನ್ನೂ ಪಡಿಯಚ್ಚು ಅಥವಾ ಇನ್ನಾವುದೇ ವಿಧಾನದಿಂದ ನಕಲು ಮಾಡುವಂತಿಲ್ಲ. ಹೆಚ್ಚಿನ ಮಾಹಿತಿಗಾಗಿ ಮುಕ್ತಗಂಗೋತ್ರಿ, ಮೈಸೂರು–06 ಇಲ್ಲಿರುವ ವಿಶ್ವವಿದ್ಯಾನಿಲಯದ ಕಛೇರಿಯನ್ನು ಸಂಪರ್ಕಿಸಬಹುದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು–06, ಇದರ ಪರವಾಗಿ ಮುದ್ರಿಸಿದವರು ಮತ್ತು ಪ್ರಕಟಿಸಿದವರು ಕುಲಸಚಿವರು (ಆಡಳಿತ).

## ಬ್ಲಾಕ್‌ಗಳ ಪರಿಚಯ

**ಪ್ರಿಯ ವಿದ್ಯಾರ್ಥಿಗಳೇ,**

ಐತಿಹಾಸಿಕ ವಿಧಾನ ಎಂಬ, ಎಂ.ಎ. ಪ್ರಥಮ ವರ್ಷದ 5 ನೆಯ ಕೋರ್ಸ್‌ನ್ನು 5 ಬ್ಲಾಕ್‌ಗಳಾಗಿ ವಿಭಜಿಸಲಾಗಿದೆ.

ಬ್ಲಾಕ್ 1 ರಲ್ಲಿ 4 ಘಟಕಗಳಿವೆ. ಇದು ಇತಿಹಾಸ, ಇತಿಹಾಸದ ವಿಧಗಳು ಹಗೂ ಇತಿಹಾಸದ ತತ್ವ ಇವುಗಳ ಪರಿಚಯ ಮಾಡಿಸುತ್ತದೆ.

ಬ್ಲಾಕ್ 2 ಸಂಶೋಧನಾ ವಿಧಾನವನ್ನು ವಿವರಿಸುತ್ತದೆ.

ಬ್ಲಾಕ್ 3 ರಲ್ಲಿ ಆರಂಭಿಕ ಗ್ರೀಕ್, ರೋಮನ್, ಚೀನಿಯರಿಂದ 20 ನೆಯ ಶತಮಾನದ ಆಧುನಿಕ ಚರಿತ್ರಲೇಖನದ ಪರಿಚಯವಿದೆ.

ಬ್ಲಾಕ್ 4 ಈ ಕೆಳಗಿನ ವಿಷಯಗಳ ಪರಿಚಯ ಮಾಡಿಸುತ್ತದೆ ಆರಂಭಿಕ ಚರಿತ್ರಲೇಖಕರಿಂದ ಹಿಡಿದು ಮಧ್ಯಯುಗದವರವರೆಗಿನ ಭಾರತದಲ್ಲಿನ ಚರಿತ್ರಲೇಖನ, ಇಂಡೊ–ಇಸ್ಲಾಮಿಕ್ ಚರಿತ್ರಲೇಖನ ಹಾಗೂ ರಾಷ್ಟ್ರೀಯವಾದಿ ಚರಿತ್ರಲೇಖನ.

ಬ್ಲಾಕ್ 5 ಚರಿತ್ರಲೇಖನದಲ್ಲಿ ಇತ್ತೀಚಿನ ಬೆಳವಣಿಗೆಗಳನ್ನು ಪರಿಚಯಿಸುತ್ತದೆ.

# ಪರಿಚಯ

**ಪ್ರಿಯ ವಿದ್ಯಾರ್ಥಿಗಳೇ,**

ಜಿ.ಆರ್.ಎಲ್ಟನ್ ಸಾಲುಗಳೊಂದಿಗೆ ನಿಮ್ಮನ್ನು ಸ್ವಾಗತಿಸಲು ಸಂತೋಷವಾಗುತ್ತಿದೆ, "ಇತಿಹಾಸವು ಹಿಂದೆ ಸಂಭವಿಸಿ ಇಂದಿಗೂ ಕುರುಹುಗಳನ್ನು ಬಿಟ್ಟಿರುವ ಮನುಷ್ಯನ ಎಲ್ಲ ಹೇಳಿಕೆಗಳು, ಆಲೋಚನೆಗಳು, ಕಾರ್ಯಗಳು ಹಾಗೂ ಯಾತನೆಗಳೊಂದಿಗೆ ಸಂಬಂಧಿಸಿದೆ. ಈ ವಿಷಯಗಳನ್ನು ಇದು ಸದಾ ಉಂಟಾಗುತ್ತಿರುವ ಬದಲಾವಣೆ ಹಾಗೂ ನಿರ್ದಿಷ್ಟತೆಯ ದೃಷ್ಟಿಕೋನದಿಂದ ನೋಡುತ್ತದೆ".

ಇತಿಹಾಸಕಾರರು ಬಹಳ ಕಾಲದವರೆಗೂ ಮನುಷ್ಯರು ಹಾಗೂ ಘಟನೆಗಳ ಸವಿವರವಾದ ದಾಖಲೆಗಳನ್ನು ಬರೆಯುವುದರಲ್ಲಿಯೇ ನಿರತರಾಗಿದ್ದರೇ ಹೊರತು ಇತಿಹಾಸದ ಹರಿವಿನ ಮೇಲೆ ವೈಚಾರಿಕ ಅಥವಾ ನೈತಿಕ ಮೌಲ್ಯಗಳು, ಮನಃಶಾಸ್ತ್ರೀಯ ಅಥವಾ ತಾತ್ವಿಕ ಪರಿಕಲ್ಪನೆಗಳು, ಸಾಮಾಜಿಕ ಅಥವಾ ಆರ್ಥಿಕ ಶಕ್ತಿಗಳು, ಮತ್ತು ವಸ್ತುಕ ಅಥವಾ ಭೌತಿಕ ವಿಚಾರಗಳ ಪ್ರಭಾವವನ್ನು ಕುರಿತು ವಿಮರ್ಶಿಸುವ ಪ್ರಯತ್ನ ಮಾಡಿಯೇ ಇರಲಿಲ್ಲ. 18 ನೆಯ ಶತಮಾನದ ಕೊನೆ ಹಾಗೂ 19ನೆಯ ಶತಮಾನದ ಆರಂಭದಲ್ಲಷ್ಟೇ ಈ ವಿಚಾರಗಳ ಬಗ್ಗೆ ಗಮನ ಹರಿಸಲಾಯಿತು. ಈ ಕೆಲಸವನ್ನು ಮಾಡಿ ಇತಿಹಾಸದ ಅಧ್ಯಯನಕ್ಕೆ ಹೊಸ ಆಯಾಮಗಳನ್ನು ನೀಡಿದವರೆಂದರೆ ವೊಲ್ಟೈರ್, ಕಾರ್ಲೈಲ್, ಹೆಗೆಲ್, ರೇಂಕ್, ಮಾರ್ಕ್ಸ್, ಕಾಮ್ಟ್, ಕ್ರೋಸ್, ಬರಿ, ಸ್ಪೆಂಗ್ಲರ್ ಮತ್ತು ಟಾಯ್ನ್‌ಬೀ.

ಈ ವರ್ಷ ನೀವು ಐತಿಹಾಸಿಕ ವಿಧಾನ ಎಂಬ ವಿಷಯವನ್ನು ಅಧ್ಯಯನ ಮಾಡಲಿದ್ದು ಇದು ಮೂರು ವಿವಿಧ ಆಯಾಮಗಳಲ್ಲಿ ಬೆಳೆದು ನಿಂತಿದೆ; ಐತಿಹಾಸಿಕ ಸಿದ್ಧಾಂತಗಳು, ಐತಿಹಾಸಿಕ ವಿಧಾನಶಾಸ್ತ್ರ ಮತ್ತು ಚರಿತ್ರಲೇಖನ. ಕ.ರಾ.ಮು.ವಿ.ಯು ನಿಮಗೆ ಒದಗಿಸಿರುವ ಅಧ್ಯಯನ ಸಾಮಗ್ರಿಗಳು ಐತಿಹಾಸಿಕ ವಿಧಾನಶಾಸ್ತ್ರವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದಷ್ಟೇ ಅಲ್ಲದೆ ನಿಮ್ಮ ಜ್ಞಾನವೃದ್ಧಿಗೆ ಪೂರಕವಾಗಿವೆ.

ನೀವು ಈ ಅಧ್ಯಯನವನ್ನು ಆನಂದಿಸುತ್ತೀರೆಂದು ಆಶಿಸುತ್ತ ನಿಮಗೆ ಶುಭ ಹಾರೈಸುತ್ತೇನೆ.

**ಡಾ. ಎನ್.ಸಿ. ಸುಜಾತ**
ಮುಖ್ಯಸ್ಥರು
ಪುರಾತನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು– 570 006

# ಬ್ಲಾಕ್ – 1: ಪೀಠಿಕೆ

## ಘಟಕ –1 ಇತಿಹಾಸ–ವ್ಯಾಖ್ಯೆ–ಸ್ವರೂಪ, ವ್ಯಾಪ್ತಿ ಮತ್ತು ಪ್ರಾಮುಖ್ಯತೆ

**ರಚನೆ**


**1.0** ಉದ್ದೇಶಗಳು

**1.1** ಪೀಠಿಕೆ

**1.2** ಮೂಲ ಹಾಗೂ ಬೆಳವಣಿಗೆ

**1.3** ವ್ಯಾಖ್ಯೆ

**1.4** ಇತಿಹಾಸದ ವ್ಯಾಪ್ತಿ

**1.5** ಸ್ವರೂಪ

**1.6** ಪ್ರಾಮುಖ್ಯತೆ

**1.7** ಸಾರಾಂಶ

**1.8** ಪ್ರಮುಖ ಪದಗಳು

**1.9** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**1.10** ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

**1.11** ಪರಾಮರ್ಶನ ಗ್ರಂಥಗಳು

## 1.0 ಉದ್ದೇಶಗಳು

ಈ ಘಟಕವನ್ನು ಅಧ್ಯಯನ ಮಾಡುವುದರಿಂದ ನೀವು ಈ ಕೆಳಗಿನ ವಿಷಯಗಳನ್ನು ತಿಳಿಯುವಿರಿ:

- ಇತಿಹಾಸದ ಅರ್ಥ ಮತ್ತು ಇತಿಹಾಸವನ್ನು ಕುರಿತು ಪ್ರಮುಖ ಇತಿಹಾಸಕಾರರು ನೀಡಿರುವ ಇತಿಹಾಸದ ಹತ್ತು ಹಲವು ವ್ಯಾಖ್ಯೆಗಳನ್ನು ತಿಳಿಯುವಿರಿ.
- ಇತಿಹಾಸದ ಮೂಲ ಸ್ವರೂಪವನ್ನು ಸಹ ಅರಿತುಕೊಳ್ಳುವಿರಿ.
- ಇದಲ್ಲದೇ ಇತಿಹಾಸ ವಿಷಯದ ವ್ಯಾಪ್ತಿಯ ಬಗ್ಗೆಯು ಸಹ ಅರ್ಥ ಮಾಡಿಕೊಳ್ಳುವಿರಿ.

## 1.1 ಪೀಠಿಕೆ

ಪ್ರೀತಿಯ ವಿದ್ಯಾರ್ಥಿ ಯಾವುದೇ ಒಬ್ಬ ವ್ಯಕ್ತಿಯೇ ಆಗಲಿ ತನ್ನ ದೇಶದ ಮತ್ತು ಪ್ರಪಂಚದ ಇತಿಹಾಸವನ್ನು ತಿಳಿದುಕೊಳ್ಳಬೇಕು. ಇಲ್ಲದಿದ್ದಲ್ಲಿ ಅವನ ಜೀವನ ವ್ಯರ್ಥವೆಂದು ಕಾಣಿಸುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಘಟಕ ಒಂದರಲ್ಲಿ ನೀವು ಪ್ರಪಂಚದಲ್ಲಿ ಇತಿಹಾಸವು ಯಾವ ರೀತಿಯಲ್ಲಿ ನಿರ್ಮಾಣವಾಯಿತೆಂಬುದನ್ನು ಅರ್ಥ ಮಾಡಿಕೊಳ್ಳುವಿರಿ. ಸಮಾಜದಲ್ಲಿ ಇತಿಹಾಸದ ಪ್ರಾಮುಖ್ಯತೆಯೇನು? ಮತ್ತು ಅರ್ಥವೇನು? ಎಂಬುದನ್ನೂ ಇತಿಹಾಸದ ಬಗ್ಗೆ ಪ್ರಮುಖ ಇತಿಹಾಸಕಾರರು ಹಾಗೂ ವಿದ್ವಾಂಸರು ನೀಡಿರುವ ಹಲವು ವ್ಯಾಖ್ಯೆಗಳನ್ನೂ ಇತಿಹಾಸದ ಸ್ವರೂಪವೆಂತದ್ದು? ಮತ್ತು ಇತಿಹಾಸಕ್ಕಿರುವ ವ್ಯಾಪ್ತಿಯನ್ನೂ ಕುರಿತು ಅಧ್ಯಯನ ನಡೆಸುವಿರಿ. ಈ ಅಧ್ಯಯನದಿಂದ ಸಮಾಜಕ್ಕೆ ಎಷ್ಟು ಅನುಕೂಲವಾಗುತ್ತದೆಂಬುದನ್ನೂ ಸಹ ತಿಳಿಯುವಿರಿ.

**ಸಿದ್ಧಾಂತ ಮತ್ತು ವಿಧಾನ**

ಸೃಷ್ಟಿಯ ಅನಾದಿಯಿಂದಲೂ ಮಾನವ ಜ್ಞಾನಪಿಪಾಸು. ಜಿಜ್ಞಾಸೆಯ ಪ್ರವೃತ್ತಿಯೇ ಆತನ ಸಾಧನೆಗೆ ಮೂಲಧಾರವಾಗಿದೆ. ಹಳೆಯ ಅನುಭವದೊಡನೆ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವ ಶಕ್ತಿಯನ್ನು ಪಡೆಯಬಲ್ಲ ಹಳೆಯ ಅನುಭವಕ್ಕೆ 'ಇತಿಹಾಸ ಪ್ರಜ್ಞೆ' ತೀರಾ ಅವಶ್ಯಕ. ಮಾನವನೊಬ್ಬ ಐತಿಹಾಸಿಕ ಜೀವಿ. ಇವನು ಐತಿಹಾಸಿಕ ವಲಯದಿಂದ ಎಂದೆಂದೂ ತಪ್ಪಿಸಿಕೊಳ್ಳಲಾರ. ಇಡೀ ಮಾನವ ಜನಾಂಗದ ಜ್ಞನವಾಹಿನಿಯ ಪ್ರಮುಖ ಶಾಖೆಯೇ 'ಇತಿಹಾಸ'. ಇತಿಹಾಸದ ಅರಿವಿಲ್ಲದ ಮನುಷ್ಯ ಮಾತು ಬಾರದ ಮೂಕ, ಇಲ್ಲ, ಇವನು ಸಮಾಜದ ಸಾಂಸ್ಕೃತೀಕರಣದ ಕ್ರಿಯೆಗೆ ಒಳಗಾಗದ ಪಶು. ಪ್ರಾರಂಭದಲ್ಲಿ ಮನುಷ್ಯ ಕೇವಲ ಮಾಂಸದ ಮುದ್ದೆ. ಸಮಾಜ ಇವನನ್ನು ತನ್ನ ವಿವಿಧ ಪ್ರಕ್ರಿಯೆಯಿಂದಾಗಿ ಸಮಾಜೋಪಯೋಗಿಯನ್ನಾಗಿ ಮಾಡುತ್ತದೆ. ಇದಲ್ಲದೆ ಸಮಾಜಕ್ಕೂ ಕೂಡ ಇತಿಹಾಸ ಪ್ರಜ್ಞೆ ಅವಶ್ಯಕ. 'ಸಮಾಜ' ಮೂರ್ತರೂಪದಲ್ಲಿ ಅರಿವಾಗದಿರುವ ಕಾರಣ ಅಲ್ಲಿನ ಗಣ್ಯವ್ಯಕ್ತಿಗಳು ಆಯಾಯ ಸಮಾಜದ

‘ಇತಿಹಾಸ ಪ್ರಜ್ಞೆ’ಗೆ ಸಹಾಯಕರಾಗುತ್ತಾರೆ. ವ್ಯಕ್ತಿಗಳು ತಮ್ಮ ಜಾಗೃತ ಇತಿಹಾಸ ಪ್ರಜ್ಞೆಯಿಂದಾಗಿ ತಮ್ಮ ಒಳಿತಷ್ಟನ್ನೇ ಸಾಧಿಸದೆ ಇಡೀ ಸಮಾಜದ ಒಳಿತನ್ನು ಸಾಧಿಸುತ್ತಾರೆ. ಅಂದಮೇಲೆ ‘ಇತಿಹಾಸ’ದ ಉಪಯುಕ್ತತೆ ವ್ಯಕ್ತಿಮಾತ್ರದಿಂದ ಹಿಡಿದು ಇಡೀ ಸಮಾಜಕ್ಕೆ ವ್ಯಾಪಿಸುತ್ತದೆ.

ಮಾನವ ಜೀವನದಲ್ಲಿ ಗತಕಾಲದ ಬಗ್ಗೆ ವಿಚಾರ ಮಾಡಿ ಉಲ್ಲೇಖಿಸುವ ಅವಶ್ಯಕತೆ ಸಾರ್ವತ್ರಿಕವಾಗಿದೆ. ಬದುಕಿನ ದಿನನಿತ್ಯದ ವ್ಯಾಪಾರಗಳಲ್ಲಿ ಲಿಖಿತ ಇತಿಹಾಸದ ಅನೇಕ ಆಕರ್ಷಕ–ಅನಾಕರ್ಷಕ, ಉಪಯುಕ್ತ–ಅನುಪಯುಕ್ತ ಉಳಿಕೆಗಳು ನಮ್ಮ ಗಮನವನ್ನು ಸೆಳೆಯುತ್ತಲೇ ಇರುತ್ತವೆ. "ನಾನು ಅಲ್ಲಿದ್ದೆನು", "ಅವನು ಮಾಡಿದನು" ಮುಂತಾದ ಭೂತಕಾಲದ ಪ್ರತಿ ಪ್ರಯೋಗವೂ ಇತಿಹಾಸದ ತುಣುಕೇ ಆಗಿದೆ. ಕಾಲಗರ್ಭದಲ್ಲಿ ಅಡಗಿಹೋದ ದಿನದ ಇತಿಹಾಸದ ಬಗ್ಗೆ ನಮ್ಮಲ್ಲಿ ಕುತೂಹಲ ಕೆರಳಿಸುವುದಕ್ಕೆ ವೃತ್ತಪತ್ರಿಕೆಗಳಿವೆ. ನಾವು ನಡೆಸುವ ಪತ್ರ ವ್ಯವಹಾರ ಬಹುಮಟ್ಟಿಗೆ ಜರುಗಿದ ಘಟನೆಗಳ ವ್ಯಾಖ್ಯಾನವಾಗಿದ್ದರೂ ಇತಿಹಾಸ ಕ್ರಿಯೆ ಕಾಣಬರುತ್ತದೆ. ವ್ಯಕ್ತಿಗಳು ತಮ್ಮ ನೆನಪುಗಳನ್ನು ಸಮರ್ಪಕವಾಗಿ ಸಂರಕ್ಷಿಸಿಡುವುದಕ್ಕಾಗಿ ತಮ್ಮ ಸಾಧನೆಗಳನ್ನು ಮುಂದಿನ ತಲೆಮಾರಿನವರಿಗೆ ತಿಳಿಸುವುದಕ್ಕಾಗಿ ದಿನಚರಿಗಳನ್ನು ಬರೆದಿಡುತ್ತಾರೆ; ತಮ್ಮ ಪ್ರತಿಷ್ಠೆಯನ್ನು ಪುಷ್ಟೀಕರಿಸುವುದಕ್ಕಾಗಿ ಹಾಗೂ ತಮ್ಮ ವರ್ಗದವರೆಲ್ಲಾ ಒಂದೇ ಎಂಬ ಭಾವನೆಯನ್ನು ಬಲಪಡಿಸುವುದಕ್ಕಾಗಿ ತಮ್ಮ ವಂಶವೃಕ್ಷಗಳನ್ನು ಅಗೆದು ತೆಗೆದು ಅನ್ವೇಷಣೆ ನಡೆಸುತ್ತಾರೆ.

ಪ್ರತಿ ವಿಷಯವನ್ನು ಕುರಿತು ಐತಿಹಾಸಿಕವಾದ ರೀತಿಯಲ್ಲಿ ವಿಚಾರ ಮಾಡುವುದು ಅಸಾಧ್ಯ ಎಂಬುದು ನಿಜ. ಆದ್ದರಿಂದ ನಾವು ನಮಗೆ ಇಷ್ಟವಾಗಿರುವ ವಿಷಯದ ಇತಿಹಾಸವನ್ನು ಸರಿಯಾಗಿ ಅರಿತುಕೊಳ್ಳಲು ಯತ್ನಿಸುತ್ತೇವೆ. ಇದರಿಂದ ನಮ್ಮ ಅನುಭವ ವ್ಯಾಪಕವಾಗುತ್ತದೆ ಹಾಗೂ ಘನವಾಗುತ್ತದೆ. ಸಂಕೀರ್ಣವಾಗಿರುವ ಅಥವಾ ಅನಿರೀಕ್ಷಿತವಾಗಿರುವ ಹಾಗೂ ದಿಗ್ಭ್ರಮೆ ಹಿಡಿಸುವಂತಹ ಪರಿಸ್ಥಿತಿಗಳು ತಲೆದೋರಿ ಸವಾಲನ್ನು ಒಡ್ಡಿದಾಗ ವ್ಯಕ್ತಿಗಳು ಆ ಸವಾಲಿಗೆ ತಕ್ಕ ಪ್ರತಿಕ್ರಿಯೆಯನ್ನು ತೋರುವ ಮೊದಲು ಗಾಢವಾಗಿ ಆಲೋಚಿಸುತ್ತಾರೆ. ಹಿಂದಿನ ಅನುಭವಗಳನ್ನು ಜ್ಞಾಪಕಕ್ಕೆ ತಂದುಕೊಳ್ಳುತ್ತಾರೆ ಮತ್ತು ಅವುಗಳನ್ನು ಇಂದಿನ ಅಹಿತಕರ ಬಿಕ್ಕಟ್ಟಿನ ಸ್ಥಿತಿಯೊಂದಿಗೆ ಹೋಲಿಸಿ ನೋಡಿ, ಒಂದು ನಿರ್ದಿಷ್ಟವಾದ ನಿರ್ಣಯವನ್ನು ಕೈಗೊಳ್ಳುತ್ತಾರೆ. ವ್ಯಕ್ತಿಗೆ ಜ್ಞಾಪಕಶಕ್ತಿಯು ಎಷ್ಟು ಮುಖ್ಯವೋ ಸಮಾಜಕ್ಕೆ ಈ ಗತಕಾಲದ ಅನುಭವಗಳ ಕಥನವು ಅಷ್ಟೇ ಮುಖ್ಯ.

ಐತಿಹಾಸಿಕ ಭಾವನೆ ಹಾಗೂ ಪ್ರತೀಕಗಳು ನಮ್ಮ ಬದುಕನ್ನು ರೂಪಿಸಿ ಮುಂದುವರಿಸುತ್ತವೆ. ಅವುಗಳನ್ನು ಯಥಾವತ್ತಾಗಿ ನಕಲು ಮಾಡುವುದರ ಮೂಲಕ ನಮ್ಮ ರಾಷ್ಟ್ರೀಯ ಜೀವನವು ಮುಂದೆ ಸಾಗುತ್ತದೆ. ನಾವು ಸುಪ್ರಸಿದ್ಧ ಮಹಾಪುರುಷ ಹಾಗೂ ಮಹಿಳೆಯರ ಚಿತ್ರಗಳಿಂದ ನಮ್ಮ ಅಂಚೆಚೀಟಿ ಹಾಗೂ ನಾಣ್ಯಗಳನ್ನು ಅಲಂಕರಿಸುತ್ತೇವೆ; ಇತಿಹಾಸ ಪ್ರಸಿದ್ಧ ಸ್ಥಳ ಹಾಗೂ ವಸ್ತುಗಳನ್ನು ಲಾಂಚನ ಮಾಡಿಕೊಳ್ಳುತ್ತೇವೆ; ಕಳೆದುಹೋದ ಐತಿಹಾಸಿಕ ಘಟನೆಗಳನ್ನು ಯಥಾವತ್ತಾಗಿ ನಿರೂಪಿಸಿ, ಅವುಗಳನ್ನು ದೃಗ್ಗೋಚರವಾಗುವಂತೆ ಪ್ರದರ್ಶಿಸುತ್ತೇವೆ; ಬ್ಯಾಂಕು, ಕಾಲೇಜು ಹಾಗೂ ವಿವಾಹಿತ ಜೋಡಿಗಳಂತೆ ಮುಖ್ಯವಾದ ಐತಿಹಾಸಿಕ ವಾರ್ಷಿಕೋತ್ಸವಗಳನ್ನು ಆಚರಿಸುತ್ತೇವೆ; ನೆನಪುಗಳನ್ನು ಸಂರಕ್ಷಿಸಿಡುವುದಕ್ಕಾಗಿ ಕಲಾಕೃತಿಗಳನ್ನು ಕಾಪಾಡಲು

ಸಾಕಷ್ಟು ಪ್ರಯತ್ನಿಸುತ್ತೇವೆ. ಹೀಗೆ ಚಾರಿತ್ರಿಕ ಸಂಗತಿಗಳು ಜನರಲ್ಲಿ ಐಕ್ಯತೆ, ಹೆಮ್ಮೆ ಹಾಗೂ ಸದಾಭಿಮಾನಗಳನ್ನು ಉದ್ದೀಪನಗೊಳಿಸುವುದಕ್ಕೆ ಅತಿ ಉಪಯುಕ್ತ.

ಇಂದು ನಾವು ವೈಜ್ಞಾನಿಕ ಯುಗದಲ್ಲಿ ಬಾಳುತ್ತಿದ್ದೇವೆ ಎಂಬುದಾಗಿ ಹೇಳಿಕೊಳ್ಳುತ್ತೇವೆ. ಆದರೆ, ಇನ್ನೂ ಗಾಢವಾಗಿ ಆಲೋಚಿಸಿ ನೋಡಿದರೆ ನಾವೆಲ್ಲರೂ ಒಂದು ಐತಿಹಾಸಿಕ ಯುಗದಲ್ಲಿ ಇದ್ದೇವೆ ಎಂಬುದು ಸ್ಪಷ್ಟವಾಗುತ್ತದೆ. ಇದು ನಾವು ಇತಿಹಾಸದ ವಿಚಾರದಲ್ಲಿ ಆಸಕ್ತಿ ವಹಿಸುವುದಕ್ಕೆ ಪ್ರಧಾನವಾದ ಹಾಗೂ ಕೊನೆಯ ಕಾರಣವಾಗುತ್ತದೆ. ನಮಗಿಷ್ಟವಿರಲಿ ಅಥವಾ ಇಲ್ಲದಿರಲಿ ಇದು ನಮ್ಮ ಬೌದ್ಧಿಕ ಪ್ರತಿಕ್ರಿಯೆಗಳ ಹಾಗೂ ನಮ್ಮ ಬದುಕಿನ ಅನಿವಾರ್ಯವಾದ ಭಾಗವಾಗಿರುತ್ತದೆ. ಹೀಗೆ ಯಥಾರ್ಥವಾದ ಇತಿಹಾಸವು ನಮ್ಮ ನುಡಿ, ನಮ್ಮ ನಂಬಿಕೆ, ನಮ್ಮ ಭಾವೋದ್ರೇಕ, ನಮ್ಮ ಸಂಸ್ಥೆ, ಏಕೆ ನಮ್ಮ ಸಮಗ್ರ ಜೀವನದೊಂದಿಗೆ ಹಾಸುಹೊಕ್ಕಾಗಿ ಹೆಣೆದುಕೊಂಡಿದೆ. ವ್ಯಕ್ತಿಯ ಬದುಕಿನಿಂದ ಐತಿಹಾಸಿಕ ಆದರ್ಶರೂಪ ಹಾಗೂ ಭಾವನೆಗಳನ್ನು ಬೇರುಸಹಿತ ಕಿತ್ತುಹಾಕುವುದು ಸಾಧ್ಯವಿಲ್ಲವಾಗಿರುವುದರಿಂದ ಮಾನವನು ಸ್ವಭಾವತಃ ಐತಿಹಾಸಿಕ ಜೀವಿ ಎಂಬುದಾಗಿ ಹೇಳಬಹುದು. ವಾಸ್ತವವಾಗಿ ಇತಿಹಾಸವು ಎಲ್ಲವನ್ನೂ ಒಳಗೊಳ್ಳುವ ಪ್ರಧಾನ ಶಾಸ್ತ್ರವಾಗಿದೆ.

## 1.2 ಮೂಲ ಹಾಗೂ ಬೆಳವಣಿಗೆ

ಇತಿಹಾಸವು ಮನುಷ್ಯನಷ್ಟೇ ಹಳೆಯದು. ಬಹುಶಃ ಅತಿ ಪುರಾತನವಾದುದು. ಆಹಾರವನ್ನು ಹುಡುಕುತ್ತಾ, ಬೇಟೆಯಾಡುತ್ತಾ, ಶತ್ರುಗಳ ವಿರುದ್ಧ ಕಾದಾಡುತ್ತಾ ಅಲೆದಾಡುತ್ತಿದ್ದ ಕಾಲದಿಂದಲೂ ಆತನಿಗೆ ಚರಿತ್ರೆ ಇದ್ದಿತು. ವ್ಯಕ್ತಿಗಳು ಒಂದು ಮರದ ತಂಪು ನೆರಳಿನಲ್ಲಿ, ಹೊಳೆಯ ದಂಡೆಯಲ್ಲಿ ಅಥವಾ ದೇವಾಲಯದಲ್ಲಿ ಒಟ್ಟು ಸೇರಿದಾಗ ತಮ್ಮ ಕಹಿ–ಸಿಹಿ ಅನುಭವಗಳನ್ನು ಪರಸ್ಪರ ಹೇಳಿಕೊಳ್ಳುತ್ತಿದ್ದರು. ತಮ್ಮ ಸಾಹಸ ಹಾಗೂ ಸಾಧನೆಗಳನ್ನು ಸರ್ವವಿದಿತವಾಗುವಂತೆ ಮಾಡುವುದಕ್ಕಾಗಿ ಲಾವಣಿ, ಕಥೆ, ಪುರಾಣ ಇತ್ಯಾದಿಗಳನ್ನು ರಚಿಸುತ್ತಿದ್ದರು. ಇಲ್ಲವೇ ಗುಹೆಗಳಲ್ಲಿ ಒರಟಾದ ಕೆತ್ತನೆಯ ಮೂಲಕ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. ಲಿಪಿಗಿಂತ ಮುಂಚೆ ಪದ್ಯರೂಪದ ಸಾಹಿತ್ಯ ಪ್ರಚಲಿತವಾಗಿದ್ದಿತು. ಬಹುಶಃ ಮಾನವ ವ್ಯಕ್ತಿಗಳಲ್ಲಿ ಗತಕಾಲದ ಅನುಭವಗಳ ಕಥನಕ್ಕೆ ಸಾಮಾಜಿಕ ಗುರಿಯು ಇರಬೇಕೆಂಬ ಪ್ರಜ್ಞೆಯು ಮೂಡಿದಾಗ ಗದ್ಯರೂಪವು ತಲೆದೋರಿರಬೇಕು. ಕಥನವು ಹೆಚ್ಚು ವ್ಯಾವಹಾರಿಕವಾದಂತೆ ಅದನ್ನು ರಚಿಸುವ ಜವಾಬ್ದಾರಿಯನ್ನು ಸಂಕಲನ ಕಸಬಿನವರಿಗೆ ವಹಿಸಿಕೊಡಲಾಯಿತು. ಅವರು ಬರೆದಿದ್ದುದೆಲ್ಲವೂ ಇತಿಹಾಸವಾಯಿತು.

ಆದರೆ ನಿಜವಾದ ಚರಿತ್ರೆಯು ಇತ್ತೀಚೆಗೆ ಬೆಳಕಿಗೆ ಬಂದಿತು. ಚೀನಾ ದೇಶವನ್ನು ಇತಿಹಾಸಕಾರರು ನಂದನವನ ಎಂಬುವುದಾಗಿ ವಿವರಿಸಲಾಗಿದೆ. ಅಲ್ಲಿ ಬಹು ಮುಂಚಿನಿಂದಲೂ ಚರಿತ್ರ ಲೇಖಕರಿದ್ದರು, ಐತಿಹಾಸಿಕ ಬರಹಗಳಿದ್ದುವು, ಆರಂಭದಿಂದಲೂ ಆಸ್ಥಾನ ಸಂಪ್ರದಾಯ, ಧಾರ್ಮಿಕ ವಿಧಿ ಮುಂತಾಗಿ ಸಂಭವಿಸಿದ್ದ ಎಲ್ಲಾ ಗಮನಾರ್ಹ ಘಟನೆಗಳನ್ನು ದಾಖಲು ಮಾಡಲಾಗುತ್ತಿದ್ದಿತು. ಕೊನಗೆ ದಿನನಿತ್ಯದ

ದಾಖಲೆಗಳನ್ನು ಇಡಲಾಯಿತು. ಇದು ಸಮಗ್ರ ವರ್ಷಕ್ಕೆ ಅನ್ವಯವಾದರೂ ಇದನ್ನು ವಸಂತ ಹಾಗೂ ಶರತ್ಕಾಲಗಳ ಚರಿತ್ರ ಲೇಖನಗಳೆಂಬುದಾಗಿ ಕರೆಯಲಾಯಿತು. ಆದರೆ ಇದಕ್ಕಿಂತ ಮೊದಲೇ ಇದು ವಾಸ್ತವಾಂಶಗಳ ನೀರಸ ವಿವರಣ ಪಟ್ಟಿ ಹಾಗೂ ವೃತ್ತಾಂತಕ್ಕಿಂತ ಹೆಚ್ಚು ಪದ್ಮಾತ್ಮಕವೂ ಆಕರ್ಷಕವೂ ಆಗಿದ್ದಿತು. ಪ್ರಾರಂಭದಲ್ಲಿ ಇತಿಹಾಸ ಗ್ರಂಥ ಅಥವಾ ದಾಖಲೆಗಳ ಪುಸ್ತಕವೆಂದರೆ ಅಧಿಕಾರಿಗಳಿಗೆ ನೀಡಲಾದ ನೀತಿ ಕಟ್ಟಳೆಗಳ ಸಂಕಲನವೆಂದು ತೋರುತ್ತದೆ.

ಪಾಶ್ಚಾತ್ಯವಲಯದಲ್ಲೂ ಇದೇ ಆಸಕ್ತಿ ಹಾಗೂ ಅಭಿವ್ಯಕ್ತಿಯ ಸರಣಿಯು ಕಂಡುಬಂದಿತು. ಗ್ರೀಕರು ಮುಖ್ಯವಾಗಿ ಅಯೋನಿಯಾದ ಜನರು ಯಥಾರ್ಥವಾಗಿದ್ದ ಇತಿಹಾಸದ ಉಗಮ ಹಾಗೂ ಬೆಳವಣಿಗೆಗೆ ತಕ್ಕ ಆಸ್ತಿಭಾರವನ್ನು ಹಾಕಿದರು. ಇದಕ್ಕೆ ಮೂಲಕಾರಣಕರ್ತರಾಗಿದ್ದವರು ಲಗಾಗ್ರಫರ್ ಅಥವಾ ಗದ್ಯಾಥ್ಮಕ ಚರಿತ್ರ ಲೇಖಕರು. ಹೋಮರನ ಟ್ರೋಜನ್ ಯುದ್ಧವನ್ನು ಕುರಿತ ವೃತ್ತಾಂತವು ಹೆಚ್ಚು ವ್ಯವಸ್ಥಿತವಾಗಿದ್ದ ಐತಿಹ್ಯ ಇತಿಹಾಸವಾಗಿದ್ದಿತು. ಗ್ರೀಕ್ ರಂಗಭೂಮಿಯಲ್ಲಿ ಹೆರೊಡೋಟಸ್‌ನ ಪ್ರವೇಶದಿಂದಾಗಿ ಇತಿಹಾಸವು ಸಾಹಿತ್ಯ ಕಲೆ ಮಾತ್ರವಾಗಿರದೆ, ಈಜಿಪ್ಟ್ ಪರ್ಷಿಯ ಮುಂತಾದ ಬೇರೆ ದೇಶಗಳ ಜನರ ಚರಿತ್ರೆಯನ್ನು ತಿಳಿದುಕೊಳ್ಳಬೇಕೆಂಬ ಪ್ರಜ್ಞೆ ಮೂಡಿಸಿತು. ಹೀಗೆ ಇತಿಹಾಸದ ಚೌಕಟ್ಟು ಸ್ಥಳೀಯ ಸರಹದ್ದುಗಳಾಚೆಗೆ ವಿಸ್ತರಿಸಿತು. ಮಗು ಬೆಳೆದಂತೆಲ್ಲಾ ತಾಯಿಯಿಂದ ಹೊರತಾದ ಪ್ರಪಂಚವನ್ನು ನೋಡಿ ಅರಿಯುವಂತೆ ಇತಿಹಾಸ ಕೂಡ ಪ್ರಾಚೀನ ಮಾನವನ ಸೀಮಿತ ಬದುಕನ್ನು ಮಾತ್ರ ಹೇಳುತ್ತಿದ್ದು, ಅನಂತರ ಅವನ ಕ್ರಿಯಾಶೀಲ ಚಟುವಟಿಕೆಯತ್ತ ಗಮನ ಕೇಂದ್ರೀಕರಿಸಿತು. ಇದಕ್ಕೆ ಮೂಲಪ್ರೇರಕ 'ಹೆರೊಡೋಟಸ್'.

ಇತರ ಜನರ ಬಗ್ಗೆ ತಿಳಿದುಕೊಳ್ಳಬೇಕೆಂಬ ಅತ್ಯಾಸಕ್ತಿ ಮತ್ತು ವಿಷಯ ಸಂಗ್ರಹಣೆಗಾಗಿ ಕೈಗೊಂಡ ಯಾತ್ರೆಗಳು ಹೆರೊಡೋಟಸ್‌ಗೆ ಮಾತ್ರ ಸೀಮಿತವಾಗಿರಲಿಲ್ಲ; ವ್ಯಾಪಾರಿಗಳು ಹಾಗೂ ನಾವಿಕರೂ ಆಗಿದ್ದ ಗ್ರೀಕರಲ್ಲೂ ಸಹ ಹೆಚ್ಚು ತಿಳಿಯುವ ಬಯಕೆ ಬಲವಾಗಿದಿದತು. ಅವರಿಗೆ ಹೆರೊಡೋಟಸ್ ನೀಡಿದ ಅಮೂಲ್ಯ ಕಾಣಿಕೆಯೇ 'ಸಂಶೋಧನೆಗಳು' ಎಂಬ ಅರ್ಥವನ್ನು ಹೊಂದಿದ್ದ 'ಹಿಸ್ಟೋರಿಯೈ' ಎಂಬ ಗ್ರಂಥ; ಓದುಗರಿಗೆ ತನ್ನ ಸಂಶೋಧನೆಗಳನ್ನು ಅತ್ಯಾಕರ್ಷಕವಾಗಿ ಅಚ್ಚುಕಟ್ಟಾಗಿ ಕೊಟ್ಟು ಅವರ ಸಾಹಸತೆಯನ್ನು ಕೆಣಕಿದ ಕಾರಣ ಅವನು "ಇತಿಹಾಸದ ಜನಕ" ಎನಿಸಿಕೊಂಡಿದ್ದಾನೆ. ಅವನಾದ ನಂತರ ಲಿಖಿತ ಇತಿಹಾಸವು ಅಂಗೀಕೃತ ಕಲೆಯಾಗಿ ಅರಳಿತು. ಮುಂದೆ ಸ್ತುತ್ಯರ್ಹವಾಗಿದ್ದ ಕೊಡುಗೆಗಳನ್ನು ನೀಡಿ ಇತಿಹಾಸದ ಬೆಳವಣಿಗೆಗೆ ಕಾರಣರಾದವರು ಥ್ಯೂಸಿಡಿಡಿಸ್, ಪೆರಿಕ್ಲಿಸ್, ಜೆನಫನ್ ಮುಂತಾದವರು. ಫೇಬಿಯಸ್ ಪ್ರಸಿದ್ಧ ಪಿಚ್ಚರನು ರೋಮನ್ ಘಟನೆಗಳ ನಿರ್ಮಾಣದ ಉದ್ದೇಶ ಹೇಳಿದ ರೋಮನ್ ಚರಿತ್ರೆಯ ನಿಜವಾದ ಸ್ಥಾಪಕನಾಗಿದ್ದರೆ ಹಿರಿಯಕೇಟೋ, ಜೂಲಿಯಸ್ ಸೀಸರ್, ಲೈವೀ, ಟ್ಯಾಸಿಟಸ್ ಆ ಕಾಲದ ಇತರ ಪ್ರಧಾನ ಇತಿಹಾಸಕಾರರಾಗಿದ್ದರು.

ಮಧ್ಯಯುಗದಲ್ಲಿ ಇತಿಹಾಸ ಕ್ಷೇತ್ರವು ಕ್ರೈಸ್ತ ಲೇಖಕರ ಅಧಿಕಾರಕ್ಕೆ ಒಳಗಾಯಿತು. ಆದರೆ ಅವರು ರಚಿಸಿದ ಸುವಾರ್ತೆಗಳು ಚಾರಿತ್ರಿಕವಾಗಿ ಮುಖ್ಯವಾಗಿರಲಿಲ್ಲ. ಕಾಲ ಹಾದುಹೋದಂತೆ ಚರಿತ್ರೆಯ ಅಗತ್ಯ ಎಷ್ಟೆಂಬುದರ ಅರಿವು ಅವರಲ್ಲಿ ಮೂಡಿತು. ಅದರ ಫಲವಾಗಿ ಇತಿಹಾಸ ಕ್ಷೇತ್ರಕ್ಕೆ ಕೊಡುಗೆಗಳನ್ನು ನೀಡಲು

ಮುಂದೆ ಬಂದು ಮುಖ್ಯ ಪಾತ್ರ ವಹಿಸಿದವರೆಂದರೆ ಸೆಕ್ಸೆಟನ್ ಜೂಲಿಯಸ್ ಆಫ್ರಿಕಾನಸ್, ಮಠೀಯ ಇತಿಹಾಸದ ಪಿತಾಮಹ ಯೂಸಿಬಿಯಸ್, ಸಲ್ಪಿಸಿಯಸ್ ಸೆವೆರಸ್ ಮತ್ತು ಸೆಯ್‌ಂಟ್ ಆಗಸ್ಟೀನ್.

ಆಧುನಿಕ ಯುಗದಲ್ಲಿ ಪುನರುಜ್ಜೀವನದ ಅರುಣೋದಯ ತಲೆದೋರಿದಂತೆ, ಧಾರ್ಮಿಕ ಸುಧಾರಣಾ ಚಳವಳಿಯ ಬೆಳಕು ಹರಡಿದಂತೆ, ಇತಿಹಾಸವು ಶಾಖೆ–ಉಪಶಾಖೆಗಳಿಂದ ಕೂಡಿದ ಬೃಹತ್ ವೈಜ್ಞಾನಿಕ ವೃಕ್ಷವಾಗಿ ಬೆಳೆಯಿತು. ಇದರ ಕೀರ್ತಿ ಇಟಲಿಯ ಮ್ಯಾಕೆವಲ್ಲಿ, ವಿಕೋ ಮತ್ತು ಕ್ರೋಚೆ; ಜರ್ಮನಿಯ ಮೈಕೇ ಐ ಷ್ಮಿಟ್ಟ್, ಹೆಗಲ್, ಕಾರ್ಲ್‌ಮಾರ್ಕ್ಸ್, ಥಿಯೋಡರ್ ಮಾಮ್‌ಸೇನ್ ಹಾಗೂ ಲಿಯೋಪಾಲ್ಡ್ ವಾನ್ ರಾಂಕ, ಸ್ಪೆಂಗ್ಲರ್ ಮತ್ತು ಗಟೆ; ಫ್ರಾನ್ಸ್ ದೇಶದ ಡೆಕಾರ್ಟ್, ಮಾಂಟೆಸ್ಕ್ಯು, ವಾಲ್ಟೇರ್ ಮತ್ತು ಕಾಂಪ್ಟ್; ಮತ್ತು ಇಂಗ್ಲೆಂಡಿನ ಹ್ಯೂಮ್, ಎಡ್ವರ್ಡ್ ಗಿಬನ್, ಥಾಮಸ್ ಕಾರ್ಲೈಲ್, ಹೆನ್ರಿ ಥಾಮಸ್ ಬಕಲ್, ಟ್ರೆವಿಲಿಯಾನ್ ಹಾಗೂ ಆರ್ನಾಲ್ಡ್ ಟಾಯನ್ಬಿ; ಸ್ಕಾಟ್ಲೆಂಡಿನ ರಾಬರ್ಟ್ಸ್‌ಸನ್ ಮುಂತಾದವರಿಗೆ ಸಲ್ಲಬೇಕು.

ಇತಿಹಾಸವು ಪ್ರಗತಿಪಥದಲ್ಲಿ ವೇಗವಾಗಿ ಮುಂದುವರಿಯುವಂತೆ ಮಾಡಿದ ಪ್ರಶಂಸೆಗೆ ಅರ್ಹರಾದವರ ಪಟ್ಟಿಗೆ ಅರಬ್ ದೇಶದವರನ್ನು ಸೇರಿಸಬೇಕು. ಘಟನೆಯಲ್ಲಿ ಭಾಗವಹಿಸಿದವರ ಅಥವಾ ಅವುಗಳನ್ನು ಕಣ್ಣಾರೆ ಕಂಡ ವಿಶ್ವಾಸಾರ್ಹ ವ್ಯಕ್ತಿಗಳ ಅಧಿಕೃತ ಸಾಕ್ಷಿಯ ಆಧಾರದ ಮೇಲೆ ರಚಿಸಿದ 'ಇಸಾನಾದ್' ಮತ್ತು 'ಪ್ರಯಾಣ ವೃತ್ತಾಂತಗಳು' ಅವರು ಇತಿಹಾಸಕ್ಕೆ ನೀಡಿದ ಗಮನಾರ್ಹವಾದ ಕಾಣಿಕೆಗಳು. ಚರಿತ್ರೆಯ ರಂಗಭೂಮಿಯಲ್ಲಿ ಪ್ರಧಾನ ಪಾತ್ರಧಾರಿಗಳಾಗಿ ಈ ಕ್ಷೇತ್ರವು ಹೆಚ್ಚು ವ್ಯಾಪಕವೂ ಹಾಗೂ ಸಮೃದ್ಧವೂ ಆಗುವಂತೆ ಮಾಡಿದ ಅರಬ್ ಲೇಖಕರಲ್ಲಿ ಇಬ್ನೆ–ಇ–ಹಿಶಾಮ್, ಮಹಮ್ಮದ್ ಇಷಾಕ್, ಇಬ್ನೆ–ಇ–ಯಾಹ್ಯಾ, ವಾಕಿದಿ, ಆಲ್ ಮದಾನಿ, ಆಲ್–ಫಕ್ರೀ. ಎಲ್ಲರಿಗಿಂತ ಆಲ್ಬರೂನಿ, ಮಸೂದಿ, ಇಬ್ನೆ–ಕಾಲ್ಡನ್ ಅತಿ ಮುಖ್ಯರಾದವರು.

ಇತಿಹಾಸ ಕ್ಷೇತ್ರಕ್ಕೆ ಭಾರತದ ಕಾಣಿಕೆ ಕಡಿಮೆಯಲ್ಲ. ಪುರಾತನ ಕಾಲದಿಂದಲೂ ಪುರಾಣ, ಮಹಾಕಾವ್ಯಗಳಲ್ಲಿ ಜೈನ ಹಾಗೂ ಬೌದ್ಧ ಸಾಹಿತ್ಯಗಳಲ್ಲಿ ಮನು, ಶುಕ್ರ ಅವರ ಧರ್ಮಶಾಸ್ತ್ರ ಕೃತಿಗಳಲ್ಲಿ ಅಶ್ವಘೋಷ, ಬಾಣ, ಬಿಲ್ಹಣ ಮುಂತಾದವರ ಕಾವ್ಯಗಳಲ್ಲಿ ಸಂದರ್ಭೋಚಿತವಾಗಿ ಇತಿಹಾಸಕ್ಕೆ ಸಂಬಂಧಪಟ್ಟ ವಿಷಯಗಳು ಬಂದಿವೆ. ಸಮಾಜದ ಪರಿಪೂರ್ಣ ವಿಮರ್ಶೆ ಆ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ರಂಗದ ಪರಿಚಯ ಈ ಕೃತಿಗಳಲ್ಲಿ ದೊರಕುತ್ತವೆ. ದಕ್ಷಿಣ ಭಾರತದ ಸಂಗಮ್ ಯುಗದ ಸಾಹಿತ್ಯ ಕೃತಿಗಳಲ್ಲಿ ವ್ಯಾಪಾರ, ಕಲೆ, ಧರ್ಮವೃತ್ತಿ, ಧಾರ್ಮಿಕ ಬದುಕು ಮುಂತಾದವುಗಳ ಬಗ್ಗೆ ಉಲ್ಲೇಖವಿದೆ. ಕಲ್ಹಣನ ರಾಜತರಂಗಿಣಿ ಉತ್ತಮ ಕೃತಿ.

ಮಧ್ಯಯುಗದಲ್ಲಿ ಮುಸ್ಲಿಮರು ಭಾರತದ ಮಣ್ಣಿನಲ್ಲಿ ಪಾದಾರ್ಪಣೆ ಮಾಡಿ ಇಲ್ಲೇ ಭದ್ರವಾಗಿ ಬೇರೂರಿದ ನಂತರ ಐತಿಹಾಸಿಕ ಪ್ರಜ್ಞೆ ಮತ್ತಷ್ಟು ಬಲವಾಯಿತು. ಉತ್ಬಿ, ಅಮೀರ್ ಕುಸ್ರೋ, ಭರಣಿ, ಖಲಂದರ್, ಸಿರಾಜ್ ಅಫೀಫ್, ಗುಲ್‌ಬದನ್ ಬೇಗಂ, ಸಿರ್‌ಹಿಂದಿ, ಅಬುಲ್‌ಫಸಲ್, ಬದೌನಿ, ನಿಸಾಮುದ್ದೀನ್ ಬಕ್ಷಿ, ಲಾಹೋರಿ, ಖಾಸಿಂ ಕಾಫಿಖಾನ್ ಮುಂತಾದವರ ಅಧಿಕೃತ ಬರಹಗಳು, ಆಡಳಿತ

ದಾಖಲೆಗಳು, ಸನ್ನದು, ಫರ್ಮನ್, ವಸಿಯತ್–ನಾಮ ಅಥವಾ ಪ್ರಮುಖ ರಾಜರುಗಳ ಆದೇಶಗಳು, ಜೀವನ ಚರಿತ್ರೆ ಹಾಗೂ ಆತ್ಮಕಥೆಗಳು, ಸ್ಥಳೀಯ ಸಂಗತಿಗಳು, ಪತ್ರಸಂಚಯ, ದೇಶ ವಿಚಾರಕೋಶ, ಕೈಪಿಡಿಗಳು ಭಕ್ತಿ ಪಂಥದ ನಾಯಕ ಸಂತರ ಹಾಗೂ ಸೂಫಿಗಳ ಉಪದೇಶಗಳು ಇವೆಲ್ಲವೂ ಇತಿಹಾಸದ ಕ್ಷೇತ್ರವನ್ನು ಮತ್ತಷ್ಟು ಶ್ರೀಮಂತಗೊಳಿಸಿದುವು. ಇಷ್ಟು ಮಾತ್ರವಲ್ಲದೆ ಅವುಗಳು ಇತಿಹಾಸ ಸಂಶೋಧಕನಿಗೆ ಬೆಲೆಬಾಳುವ ಮೂಲಾಧಾರಗಳೂ ಆಗಿವೆ.

ಆಧುನಿಕ ಕಾಲದಲ್ಲಿ ಭಾರತ ದೇಶವು ಅನೇಕ ಬಗೆಯ ಇತಿಹಾಸಕಾರರನ್ನು ಕಾಣಿಕೆಯಾಗಿ ನೀಡಿದೆ. ಜೇಮ್ಸ್ ಮಿಲ್, ಮಕಾಲೆ, ಸರ್ ವಿಲಿಯಂ ಜೋನ್ಸ್, ಕನಿಂಗ್‌ಹ್ಯಾಂ, ವಿಲ್ಕಿನ್ಸ್, ಮನ್ರೋ, ಷೋರ್ ಗ್ರಾಂಟ್, ಫರ್ಗೂಸನ್, ವಿಲಿಯಂ ಹಂಟರ್, ಪಿ.ಇ.ರಾಬರ್ಟ್ಸ್ ಮುಂತಾದ ಯೂರೋಪಿನ ಪಂಡಿತರು ಹಾಗೂ ನಾರಾಯಣ ಬೋಸ್, ಬಂಕಿಮ ಚಂದ್ರನಾಥ ಚಟರ್ಜಿ, ಎ.ಸಿ.ದಾಸ್, ಕೆ.ಪಿ.ಜಯಸ್ವಾಲ್, ಆರ್.ಜಿ.ಭಂಡಾರ್‌ಕರ್, ಸಾವರ್‌ಕರ್, ರಾಜೇಂದ್ರಲಾಲ್ ಮಿತ್ರ, ಆರ್.ಸಿ.ದತ್, ಆರ್.ಜಿ.ಚಿಂತಾಮಣಿ, ಸತೀಂದ್ರನಾಥ್ ಬ್ಯಾನರ್ಜಿ, ಹಿರೇನ್ ಮುಖರ್ಜಿ, ಕೋಸಾಂಬಿ, ಸರ್ಕಾರ್, ಆರ್.ಸಿ.ಮಜುಂದಾರ್, ಡಾ.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್, ಶ್ರೀನಿವಾಸಚಾರಿಯರ್, ಶ್ರೀಕಂಠಶಾಶ್ತ್ರಿ, ಎಂ.ಎಚ್.ಕೃಷ್ಣ, ನೀಲಕಂಠಶಾಸ್ತ್ರಿ, ಸರ್ದಾರ್, ಎಂ.ಫಣಿಕ್ಕರ್, ಜಾದೂನಾಥ್ ಸರ್ಕಾರ್ ಮುಂತಾದ ಭಾರತೀಯ ವಿದ್ವಾಂಸರು ಚರಿತ್ರೆಯ ಕ್ಷೇತ್ರಕ್ಕೆ ಅಮೂಲ್ಯ ನಿಧಿಯನ್ನೇ ಒದಗಿಸಿಕೊಟ್ಟಿದ್ದಾರೆ. ಪ್ರಾದೇಶಿಕ ಭಾಷೆಗಳಲ್ಲಿ ಸ್ಥಳೀಯ ಚರಿತ್ರೆಗಳ ಸಂಖ್ಯೆ ಈಗ ಹೆಚ್ಚುತ್ತಿದೆ.

ಹೀಗೆ ಈ ಐತಿಹಾಸಿಕ ಸಂಪ್ರದಾಯ ಮುಂದುವರಿದುಕೊಂಡು ಬಂದಿದೆ. ಗ್ರೀಕರಿಗೆ ಪರ್ಷಿಯನ್ ಮತ್ತಿತರ ಹಿಂದಿನ ಚರಿತ್ರೆಯನ್ನು ತಿಳಿಸುವುದಕ್ಕಾಗಿ ಹೆರೊಡೋಟಸ್‌ನು ಕಾಲದ ಆವಾರಗಳಲ್ಲಿ ಹಿಂದಕ್ಕೆ ಹೆಜ್ಜೆ ಇಟ್ಟುಹೋದಂತೆ ನಾವೂ ಇಂದು ಹಿಂದಿನ ಅಸಂಖ್ಯಾತ ಐತಿಹಾಸಿಕ ಭಾವನೆಗಳ ಸಹಾಯದಿಂದ ನಮ್ಮ ಪರಿಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಯತ್ನಿಸುತ್ತಿದ್ದೇವೆ. ನಾವು ನಮ್ಮ ಐತಿಹಾಸಿಕವಾದದ ಮೂಲ ಬೇರನ್ನು ಒಬ್ಬ ಗ್ರೀಕ್ ಮಹಾಪಂಡಿತನಲ್ಲಿ ಗುರುತಿಸಿ ಅವನನ್ನು ನಮ್ಮ ಬೌದ್ಧಿಕ ಶಾಸ್ತ್ರಗಳಲ್ಲಿ ಒಂದಾಗಿರುವ ಚರಿತ್ರೆಯ ಜನಕನೆಂಬುದಾಗಿ ಕರೆಯುತ್ತಾ ಇಂದು ಇಲ್ಲಿನ ಇತಿಹಾಸದ ಬೆಳಕಿನಲ್ಲಿ ನಮ್ಮ ಸ್ಥಿತಿಗತಿಗಳನ್ನು ಅರಿಯುವ ಪ್ರಯತ್ನವನ್ನು ಮುಂದುವರಿಸಿಕೊಂಡು ಬರುತ್ತಾ ಇದ್ದೇವೆ. ನಾವು ಸ್ವಸಾಮರ್ಥ್ಯದಲ್ಲಿ ನಮ್ಮದೆನ್ನುವ ವಿಶಿಷ್ಟತೆಯನ್ನು ಒತ್ತಿ ಹೇಳಿ ವಿವರಿಸುವ ನಮ್ಮ ಸಂಸ್ಕೃತಿ–ನಾಗರಿಕತೆಗಳ ವಿಭಿನ್ನ ಭಾಗಗಳನ್ನು ಹೆಸರಿಸುವ ಮೂಲಕ ನಮ್ಮ ಐತಿಹಾಸಿಕ ಅವಿಚ್ಛಿನ್ನತೆಯನ್ನು ಗುರುತಿಸುತ್ತೇವೆ. ನಾವು ಒಂದು ಭಾವನೆ ಅಥವಾ ಸಂಪ್ರದಾಯ ಒಂದು ನಿರ್ದಿಷ್ಟ ಕಾಲಕ್ಕೆ ಸೇರಿದವೆಂದೂ ಕಾಲನಿರ್ದೇಶನ ಮಾಡುತ್ತೇವೆ. ಈ ಎಲ್ಲದರ ಫಲವು ನಮ್ಮಲ್ಲಿ ಈಗಲೂ ಉಳಿದುಕೊಂಡು ಬರುತ್ತಿದೆ. 'ಇತಿಹಾಸ' ಎಂಬ ಪದವೂ ಸೇರಿದಂತೆ ಅತ್ಯಂತ ಸಾಮಾನ್ಯವಾಗಿರುವ ಶಬ್ದಗಳ ಸ್ವರೂಪ ಹಾಗೂ ಅರ್ಥಗಳನ್ನು ವಿವರಿಸುವ ಬಗೆಯಲ್ಲೇ ನಮ್ಮ ಭಾವನೆ ಹಾಗೂ ಜೀವನ ಕ್ರಮಗಳನ್ನು ಇಪ್ಪತ್ತೈದು ಸಾವಿರ ವರ್ಷಗಳಿಗಿಂತ ಹಿಂದಿನಿಂದಲೂ ಆಗುತ್ತಿರುವ ನಿರಂತರ ಪರಿವರ್ತನೆಗಳು ಎಂಬುದಾಗಿ ಸ್ಪಷ್ಟೀಕರಿಸುತ್ತೇವೆ.

ಹೀಗೆ ಇತಿಹಾಸವು ವಿಭಿನ್ನ ಹೊನಲುಗಳಾಗಿ ವಿವಿಧ ದಿಕ್ಕುಗಳಲ್ಲಿ ಪ್ರವಹಿಸಿ ಪ್ರಧಾನ ಜ್ಞಾನವಾಹಿನಿಯಾಗಿ ವಿಕಾಸ ಹೊಂದಿತು. ಈ ಎಲ್ಲಾ ಪಂಡಿತರ ಪ್ರತಿಭೆ ಹಾಗೂ ಪರಿಶ್ರಮಗಳ ಫಲವಾಗಿ ಇದು ಸ್ವತಂತ್ರ ಅಧ್ಯಯನ ಕ್ಷೇತ್ರವನ್ನು ಹೊಂದಿರುವ ನಿರ್ದಿಷ್ಟ ಜ್ಞಾನಶಾಖೆಯಾಗಿ ಅರಳಿದೆ. ಇದಕ್ಕೆ ಮಾನವ ಜ್ಞಾನ–ಕ್ಷೇತ್ರವನ್ನು ಅಲಂಕರಿಸುವ ಶಾಸ್ತ್ರಗಳಲ್ಲಿ ಉನ್ನತ ಸ್ಥಾನ ಮೀಸಲಾಗಿದೆ. ಗತಕಾಲದ ಚರಿತ್ರೆಯ ಪ್ರಾಮುಖ್ಯತೆ ಹಾಗೂ ಮಜಲನ್ನು ತಿಳಿದಿದ್ದೇವೆ. ಮನುಷ್ಯ ಹುಟ್ಟಿನಿಂದಲೇ ಇತಿಹಾಸದ ಬಗ್ಗೆ ಆಸಕ್ತಿ ಕೆರಳಿಸಿಕೊಂಡ. ಇವನು ಯೋಚಿಸಿದ ದಿಕ್ಕಿನ ಕ್ರಮವೇ ಒಂದು ಇತಿಹಾಸವಾಗುತ್ತದೆ. ನಿರಂತರ ಬದಲಾವಣೆಯ ದಾಖಲೆ ಕೂಡ ಇತಿಹಾಸವಾಗುತ್ತದೆ. ಮುಂದೆ ಇವನು ಹೆಚ್ಚು ಹೆಚ್ಚು ಬೌದ್ಧಿಕವಾಗಿ ಬೆಳೆದಂತೆಲ್ಲಾ ಕ್ರಮಬದ್ಧ ದೃಷ್ಟಿಯಿಂದ ಗತಕಾಲದ ಬದುಕಿನ ಅಧ್ಯಯನಕ್ಕೆ ಮಹತ್ವ ಕೊಟ್ಟ ಪ್ರಾರಂಭದಲ್ಲಿ ಪ್ರಧಾನ ಘಟನೆಗಳಲ್ಲಿ, ವ್ಯಕ್ತಿಗಳಲ್ಲಿ ಇವನ ಮನಸ್ಸು ಕೇಂದ್ರೀಕೃತವಾದರೆ ಅನಂತರದಲ್ಲಿ ಶ್ರೀ ಸಾಮಾನ್ಯನ ಬದುಕಿನಲ್ಲಿ ಇವನ ಆಸಕ್ತಿ ಕೇಂದ್ರೀಕೃತವಾಯಿತು.

## 1.3 ವ್ಯಾಖ್ಯೆ

ವಿದ್ವಾಂಸರು ನಿರೂಪಿಸಿರುವ ಇತಿಹಾಸದ ಅಧ್ಯಯನ ರಂಗವು ಬಹು ವ್ಯಾಪಕವಾಗಿರುವುದರಿಂದ ಇದರಲ್ಲಿ ಮಾರ್ಪಾಡುಗಳಾಗುವ ಸಾಧ್ಯತೆಗಳು ಹೆಚ್ಚು. ಒಂದು ಹೊಸ ಪ್ರಭಾವ, ಒಂದು ನವೀನ ದೃಷ್ಟಿಕೋನ ತಲೆದೋರಿದಂತೆಲ್ಲಾ ಪರಿಸರಕ್ಕೆ ತಕ್ಕಂತೆ ಮೈಬಣ್ಣವನ್ನು ಬದಲಾಯಿಸಿಕೊಳ್ಳುವ ಶಕ್ತಿಯುಳ್ಳ ಪ್ರಾಣಿಯಂತೆ ವ್ಯಾಖ್ಯೆಗಳಲ್ಲೂ ಸಹ ಪರಿವರ್ತನೆಗಳು ಉಂಟಾಗುತ್ತವೆ. ವಿವಿಧ ವಿದ್ವಾಂಸರ ಲೇಖನಿ–ಕುಂಚಗಳು ವಿಭಿನ್ನ ಸ್ವರೂಪ ಹಾಗೂ ಸೌಂದರ್ಯದಿಂದ ಕೂಡಿರುವ ಪದಸಂಚಯಗಳಿಂದ ಈ ಜ್ಞಾನಶಾಖೆಯ ವ್ಯಾಖ್ಯೆಗಳನ್ನು ಚಿತ್ರಿಸಲು ಯತ್ನ ಮಾಡಿವೆ. ಆದರೆ ಈ ವ್ಯಾಖ್ಯೆಗಳು ಪರಿಪೂರ್ಣವಾಗಿಲ್ಲ. ಚಿಕ್ಕದಾಗಿರುವ ವ್ಯಾಖ್ಯೆಗಳು ಸಾಧಾರಣವಾಗಿ ಈ ಶಾಸ್ತ್ರವನ್ನು ಸರಿಯಾಗಿ ನಿರೂಪಿಸುವುದಿಲ್ಲ. ದೀರ್ಘವಾಗಿರುವ ವ್ಯಾಖ್ಯೆಗಳು ಅಸ್ಪಷ್ಟವಾಗಿರುತ್ತವೆ. ಆದ್ದರಿಂದ ಇದನ್ನು ವ್ಯಾಖ್ಯಾನಿಸುವುದು ಸುಲಭಸಾಧ್ಯವಲ್ಲ. ಆದರೂ ಇದು ತನ್ನ ವಸ್ತುವಿಷಯವನ್ನು ವೈಜ್ಞಾನಿಕವಾಗಿ ವೀಕ್ಷಿಸಿ ವಿಚಾರ ಮಾಡಿ ವಿವರಿಸಲು ಯತ್ನಿಸುವುದರಿಂದ ಇದಕ್ಕೆ ಯಾವುದಾದರೂ ಒಂದು ವ್ಯಾಖ್ಯೆಯನ್ನು ಕೊಡಬೇಕಾದುದು ಅವಶ್ಯಕ.

ಶಬ್ದಾರ್ಥದ ಪ್ರಕಾರ ಇಂಗ್ಲಿಷ್ ಪದ ಹಿಸ್ಟೋರಿ ಎಂಬುದಕ್ಕೆ ಸಂಶೋಧನೆಯ ಮೂಲಕ ವಿಷಯಗಳನ್ನು ಸಂಗ್ರಹಿಸುವುದು, ಪರಿಶೋಧಿಸುವುದು, ಅರಿಯುವುದು ಅಥವಾ ಜ್ಞಾನ ಸಂಪಾದನೆ ಮಾಡುವುದು ಎಂಬ ಅರ್ಥವಿದೆ. ಈ ಆಧಾರದ ಮೇಲೆ ಇತಿಹಾಸವನ್ನು ಮೊದಲಿನಿಂದ ಮಾನವನ ಬದುಕು ಹಾಗೂ ಸಾಧನೆಗಳ ವೈಜ್ಞಾನಿಕ ಅಧ್ಯಯನ ಎಂಬುದಾಗಿ ನಿರೂಪಿಸಬಹುದು. ಇದರ ಮೂಲವನ್ನು ಅರಿಯುವುದು ಎಂಬ ಅರ್ಥದಿಂದ ಕೂಡಿರುವ ಜುಜಜಟಚಿಚುಎಂಬ ಗ್ರೀಕ್ ಕ್ರಿಯಾಧಾತುವಿನೊಂದಿಗೆ ಮೂಲತಃ ಸಂಬಂಧಪಟ್ಟಿರುವ ಶಬ್ಧದಲ್ಲಿ ಕಾಣಬಹುದು. ಇದರಿಂದ ನಂತರ ತಲೆದೋರಿದ ಕಥೆ ಅಥವಾ ಕಥನ ಎಂಬ ಅರ್ಥವು ಬೆಳೆದುಬಂದಿತು. ಇದೇ ಮೂಲ ಬೇರಿನಿಂದ ಮೂಲಕಥೆ ಎಂಬ ಮತ್ತೊಂದು ಅರ್ಥವುಳ್ಳ ಸ್ವಜಾತಿ ನಾಮಪದದ ಉತ್ಪತ್ತಿಯಾಗಿದೆ. ಅದರ ಆಧಾರದ ಮೇಲೆ ಇತಿಹಾಸವನ್ನು ಗತಕಾಲದ

ವಾಸ್ತವಾಂಶಗಳ ಕಥೆ, ಏನು ಸಂಭವಿತೆಂಬುದರ ಕಥೆ ಮತ್ತು ಏನು ನಡೆಯಿತೆಂಬುದರ ಸಾರಾಂಶ ಎಂಬುದಾಗಿ ಸರಳವಾಗಿ ನಿರೂಪಿಸಬಹುದು. ಭಾರತದ ಸಂಸ್ಕೃತ ಸಾಹಿತ್ಯದಲ್ಲಿ ಇತಿಹಾಸ ಎಂಬ ಪದವನ್ನು ಒಂದು ವಿಶಿಷ್ಟಾರ್ಥದಲ್ಲಿ ವ್ಯಾಖ್ಯಾನಿಸಿರುವುದನ್ನು ಕಾಣಬಹುದು. ಇತಿ+ಹ+ಆಸ "ಹೀಗೆ ಇತ್ತಂತೆ", "ಹೀಗೆ ನಡೆಯಿತಂತೆ" ಎಂಬ ವೃತ್ತಾಂತವು ಇತಿಹಾಸ. ಕೌಟಿಲ್ಯನ ಪ್ರಕಾರ, ಇತಿಹಾಸವು ಪುರಾಣ ಕಥೆ, ನಿದರ್ಶನ, ನೀತಿ, ಆರ್ಥಿಕಾಂಶ ಎಲ್ಲವನ್ನೂ ಒಳಗೊಂಡಿರುತ್ತದೆ. ಈ ದೃಷ್ಟಿಕೋನದ ಪ್ರಕಾರ ಮಹಾಭಾರತವು ಒಂದು ಇತಿಹಾಸವೇ. ಅದು ವೀರರ ವೃತ್ತಾಂತ.

"ಇತಿಹಾಸ" ಎಂಬ ಶಬ್ಧಕ್ಕೆ ಅತ್ಯಂತ ಮೊದಲಿನ ವ್ಯಾಖ್ಯೆಯು ಗ್ರೀಕರಿಂದ ಬಂದಿತು. ಡಯೋನಿಷಿಯಸ್‌ನು "ನಿದರ್ಶನಗಳ ಮೂಲಕ ತತ್ವಶಾಸ್ತ್ರವನ್ನು ಹೇಳಿಕೊಡುವುದೇ ಇತಿಹಾಸ" ಎಂದನು. ಅಂದರೆ, ಇತಿಹಾಸವು ಮಾನವ ಅನುಭವದ ಶುದ್ಧ ಸಾರವಾಗಿದೆ ಹಾಗೂ ಇದರ ಅಧ್ಯಯನಕ್ಕೆ ಸಾರ್ವತ್ರಿಕ ಮೌಲ್ಯವಿದೆ. ಅರಿಸ್ಟಾಟಲನ ಪ್ರಕಾರ "ಇತಿಹಾಸವು ಸಂಶೋಧನೆಯನ್ನು ವಾಸ್ತವಾಂಶಗಳಿಗೆ ಅನ್ವಯಿಸಿ ತಾರ್ಕಿಕವಾದ ವಿವರಣೆಯನ್ನು ಕೊಡುತ್ತದೆ". ಅಂದರೆ, ಇತಿಹಾಸದಲ್ಲಿ ವಿಷಯಗಳು ಕ್ರಮಬದ್ಧವಾದ ರೀತಿಯಲ್ಲಿ ಪರಸ್ಪರ ಸಂಬಂಧಪಟ್ಟು ಮಾನವನ ಸಮಗ್ರ ಕಥೆಯನ್ನು ಒಂದು ಸಂಘಟಿತ ಸಮಷ್ಟಿಯನ್ನಾಗಿಸುತ್ತವೆ. ಅರಿಸ್ಟಾಟಲನು "ಇತಿಹಾಸವು ಬದಲಾಗದ ಗತಕಾಲದ ವೃತ್ತಾಂತವಾಗಿದೆ" ಎಂಬುದಾಗಿಯೂ ಹೇಳಿದನು. ಅಂದರೆ ಮಾನವ ಸ್ವರೂಪ ಮಾರ್ಪಡುವುದಿಲ್ಲ. ಎಲ್ಲಾ ಚಟುವಟಿಕೆಗಳು ಒಂದೇ ತೆರನಾದ ಉದ್ದೇಶ ಹಾಗೂ ಪ್ರೇರಣೆಗಳಿಂದ ಕೂಡಿರುತ್ತವೆ. ಅವುಗಳ ವಿವರಣೆಯ ಪ್ರಮಾಣದಲ್ಲಿ ಭೇದವಿರುತ್ತದೆಯೇ ಹೊರತು ಅವುಗಳ ಮೊದಲ ಸ್ವರೂಪದಲ್ಲಿ ವ್ಯತ್ಯಾಸವಿರುವುದಿಲ್ಲ ಎಂದರ್ಥವಾಗುತ್ತದೆ. ಉದಾಹರಣೆಗೆ, ಇತಿಹಾಸದಲ್ಲಿ ಯುದ್ಧ, ಆಕ್ರಮಣ, ವಿಸ್ತರಣೆ ಹಾಗೂ ಶೋಷಣೆ ಇತ್ಯಾದಿಗಳು ನಿರಂತರವಾಗಿರುವ ಅಂಶಗಳಾದರೂ ತನ್ನ ಉದ್ದೇಶ ಸಾಧನೆಗಾಗಿ ಪ್ರತಿ ನಾಡು, ಪ್ರತಿ ಕಾಲದಲ್ಲೂ ತನ್ನದೇ ಆದ ಮಾಧ್ಯಮಗಳನ್ನು ಅನುಸರಿಸುತ್ತಾ ಬಂದಿರುವುದನ್ನು ಕಾಣಬಹುದು. ಪಾಲಿಬಿಯಸ್ ಹಾಗೂ ಥ್ಯೂಸಿಡಿಡಿಸ್‌ರವರ ಅಭಿಪ್ರಾಯದಲ್ಲಿ "ಇತಿಹಾಸವು ನೆನಪಿನಲ್ಲಿಟ್ಟುಕೊಳ್ಳಲು ಯೋಗ್ಯವಾದ ವಿಷಯಗಳ ಕಥೆಯಾಗಿದೆ. ವ್ಯಾಪಕಾರ್ಥದಲ್ಲಿ ಸಂಭವಿಸಿದ ಪ್ರತಿ ವಿಷಯವೂ ಇತಿಹಾಸವೇ ಆಗಿದೆ, ಅದು ಗತಕಾಲದ ಕಥೆಯೇ ಆಗಿದೆ." ಹೆನ್ರಿ ಜಾನ್‌ಸನ್‌ನ ಪ್ರಕಾರ, "ಕೇವಲ ಮಹಾಪುರುಷರ ಜೀವನ ಚರಿತ್ರೆಯೇ ಇತಿಹಾಸ". "ಇತಿಹಾಸವು ಒಂದು ಕಾಲವು ಮತ್ತೊಂದರಲ್ಲಿ ಕಾಣುವ ಗಮನಾರ್ಹ ಅಂಶಗಳ ದಾಖಲೆಯಾಗಿದೆ" ಎಂದಿದ್ದಾನೆ ಬರ್ಕ್‌ಹಾರ್ಡ್.

ಹಲವಾರು ಚರಿತ್ರ ಲೇಖಕರು ಸಂಕೀರ್ಣವಾಗಿರುವ ವ್ಯಾಖ್ಯೆಗಳನ್ನು ನೀಡಲು ಯತ್ನಿಸಿದ್ದಾರೆ. ಪ್ರೊ.ಫಿನ್ಲೆ. "ಇತಿಹಾಸವೆಂದರೆ ಘಟನೆಗಳ ಸಂಬಂಧಗಳಲ್ಲಿ ಗುರುತಿಸಲಾದ ಶ್ರೇಣಿ" ಎಂದು ಹೇಳಿ "ಗತಕಾಲದ ಘಟನೆಗಳನ್ನು ಸರಿಯಾದ ದೃಷ್ಟಿಕೋನದಿಂದ ವೀಕ್ಷಿಸಿ ಒಂದು ತೀರ್ಮಾನಕ್ಕೆ ಬರಬೇಕು" ಎಂಬುದನ್ನು ಸ್ಪಷ್ಟಪಡಿಸಿದರು. ಪ್ರೊ.ಮೈಟ್‌ಲ್ಯಾಂಡ್ ಪ್ರಕಾರ, "ವ್ಯಕ್ತಿಗಳು ಮಾಡಿದ, ಹೇಳಿದ, ಎಲ್ಲಕ್ಕಿಂತ ಹೆಚ್ಚಾಗಿ ಯೋಚನೆ ಮಾಡಿದ ಕೃತಿ ಹಾಗೂ ವಿಷಯಗಳೆಲ್ಲವೂ ಇತಿಹಾಸ". ಕ್ಲೈಡ್ ಹಾಗೂ ಬಿಯರ್ಸ್‌ರವರ ಮಾತಿನಲ್ಲಿ "ಯೋಚಿಸಲಾದ, ಹೇಳಲಾದ ಹಾಗೂ ವೀಕ್ಷಿಸಲಾದ ವಿಷಯ ಹಾಗೂ ಘಟನೆಗಳ ದಾಖಲೆಯೇ

ಇತಿಹಾಸವಾಗಿದೆ." ಲಾರ್ಡ್ ಆಕ್ಟನ್ "ಇತಿಹಾಸ ಮಾನವ ಸ್ವಾತಂತ್ರ್ಯದ ಬದಲಾಗುತ್ತಿರುವ ಕಥೆಯಾಗಿದೆ" ಎಂದು ಹೇಳಿ ಇತಿಹಾಸಕ್ಕೆ ಒಂದು ತಿರುವನ್ನು ಕೊಟ್ಟಿದ್ದಾರೆ. ಎನಿಯರ್‌ರವರು "ನಾಗರಿಕ ಸಮಾಜಗಳಲ್ಲಿ ಬಾಳುತ್ತಿರುವ ವ್ಯಕ್ತಿಗಳ ಅನುಭವಗಳ ಕಥೆಯೇ ಇತಿಹಾಸವಾಗಿದೆ" ಎಂದು ಅದರ ಪರಿಧಿಯನ್ನು ವಿಸ್ತರಿಸಿದ್ದಾರೆ. ಎ.ಎಲ್.ರೌಸ್‌ರವರ ಪ್ರಕಾರ, "ಇತಿಹಾಸವು ಮುಖ್ಯವಾಗಿ ಭೌಗೋಳಿಕ ಹಾಗೂ ಭೌತಿಕ ಪರಿಸರಕ್ಕೆ ಸಂಬಂಧಪಟ್ಟಂತೆ ಸಮಾಜದಲ್ಲಿ ಬಾಳುತ್ತಿರುವ ವ್ಯಕ್ತಿಗಳ ಜೀವನದ ದಾಖಲೆಯಾಗಿದೆ". ಸರ್ ಚಾರ್ಲೆಸ್ ಫರ್ಕ್‌ರವರು ಒಂದು ದೀರ್ಘವಾದ ಹಾಗೂ ಹೆಚ್ಚು ಸ್ಪಷ್ಟವಾದ ವ್ಯಾಖ್ಯೆಯನ್ನು ನಿರೂಪಿಸಿದ್ದಾರೆ. ಅವರ ಮಾತಿನಲ್ಲಿ ಹೇಳಬೇಕಾದರೆ, "ಮಾನವ ಸಮಾಜದ ಬದುಕಿನ ಪರಿವರ್ತನೆ ಹಾಗೂ ಕ್ರಿಯೆಯನ್ನು ನಿರ್ಧರಿಸಿದ ಭಾವನೆಗಳು, ಜೊತೆಗೆ ಅದರ ಬೆಳವಣಿಗೆಗೆ ಸಹಾಯಕವಾಗಿದ್ದ ಇಲ್ಲವೇ ಅಡಚಣೆಯಾಗಿದ್ದ ಭೌತ ಪರಿಸ್ಥಿತಿಗಳ ದಾಖಲೆ ಇತಿಹಾಸ."

ಒಟ್ಟಿನಲ್ಲಿ ವಾಲ್ಟೇರ್ ಹೇಳಿದಂತೆ, "ಇತಿಹಾಸವು ಕೇವಲ ಅಪರಾಧ ಹಾಗೂ ದುರದೃಷ್ಟಗಳ ಚಿತ್ರಣವಲ್ಲ. ವಾಸ್ತವದಲ್ಲಿ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಮುಂತಾಗಿ ಎಲ್ಲಾ ಮುಖಗಳನ್ನು ಒಳಗೊಂಡ ಸಮಾಜದ ಜನರ ಸಮಗ್ರ ಜೀವನವನ್ನು ಕುರಿತ ಸಕಾರಣವಾದ ತರ್ಕಬದ್ಧವಾದ ಹಾಗೂ ಸಮಂಜಸವಾದ ವೈಜ್ಞಾನಿಕ ದಾಖಲೆ."

## 1.4 ಇತಿಹಾಸದ ವ್ಯಾಪ್ತಿ

ಒಂದು ಶಾಸ್ತ್ರದ ವ್ಯಾಪ್ತಿ ಎಂದರೆ ಆ ಕ್ಷೇತ್ರ ವೈಶಾಲ್ಯ, ವಿಷಯದ ಹರವು, ಅಧ್ಯಯನದ ಮೇರೆಗಳನ್ನು ನಿರ್ಧರಿಸುವುದು ಎಂದರ್ಥ. ಪ್ರತಿ ಶಾಸ್ತ್ರವೂ ತನ್ನದೇ ಆದ ಸ್ಪಷ್ಟವಾಗಿ ಗುರುತಿಸಲಾಗಿರುವ ಕ್ಷೇತ್ರವನ್ನು ಹೊಂದಿದೆ. ಇತಿಹಾಸವೂ ತನ್ನದೇ ಆದ ವಿಶಾಲವಾದ ಕ್ಷೇತ್ರವನ್ನು ಹೊಂದಿದೆ. ಶಾಸ್ತ್ರಗಳ ಅಧ್ಯಯನ ವಿಷಯಗಳು ಪರಸ್ಪರ ಪ್ರಸರಿಸುವುದರಿಂದ ಇತಿಹಾಸದ ಅಧ್ಯಯನ ರಂಗದ ಸೀಮಾರೇಖೆಗಳು ಖಚಿತವಾಗಿ ಎಲ್ಲಿವೆ ಎಂಬುದನ್ನು ಅರಿಯುವುದು ಕಷ್ಟ. ಆದರೂ ಸರಿಯಾಗಿ ಗುರುತಿಸಿರುವ ಎಲ್ಲೆಗಳಿಲ್ಲದ ಅಧ್ಯಯನ ಕ್ಷೇತ್ರವನ್ನು ಪ್ರವೇಶಿಸುವುದು ಎಂದಿಗೂ ಅಪಾಯಕರ. ವಿಷಯಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡು, ಸಂಪೂರ್ಣವಾದ ಅರಿವನ್ನು ಗಳಿಸಬೇಕಾದರೆ ಶಾಸ್ತ್ರದ ವ್ಯಾಪ್ತಿಯನ್ನು ನಿರ್ಧರಿಸಬೇಕಾದುದು ಅವಶ್ಯಕ.

ಇತಿಹಾಸದ ವ್ಯಾಖೆಗಳು ಈ ಅಧ್ಯಯನ ವಿಷಯದ ವ್ಯಾಪ್ತಿಯನ್ನು ವಿಸ್ತರಿಸಿವೆ. ಇದು ಆಸಕ್ತಿ ವಹಿಸಿ ಅಧ್ಯಯನ ಮಾಡಿ ವೈಜ್ಞಾನಿಕವಾಗಿ ವಿಚಾರ ಮಾಡಿ ಸವಿಸ್ತಾರವಾಗಿ, ಸುಸಂಬದ್ಧವಾಗಿ, ವಿಶದೀಕರಿಸುವ ವಿಷಯಗಳನ್ನು ನೋಡಿದರೆ ಇದರ ವ್ಯಾಪ್ತಿ ಎಷ್ಟು ದೊಡ್ಡದಾಗಿದೆ ಎಂಬುದು ಅರ್ಥವಾಗುತ್ತದೆ.

ಮೊದಲು ಇತಿಹಾಸದ ವ್ಯಾಪ್ತಿಯು ರಾಜಕೀಯ ಘಟನೆಗಳ ಅಧ್ಯಯನಕ್ಕೆ ಮಾತ್ರ ಸೀಮಿತವಾಗಿದ್ದಿತು. ಆಳಿದ ಸಂತತಿಗಳ ಉದಯ, ಪತನ, ದೊರೆಗಳು, ಅವರ ರಾಜಾಸ್ಥಾನದ ವ್ಯವಹಾರಗಳು, ಅವರು ನಡೆಸಿದ ಆಡಳಿತ, ರಾಜತಂತ್ರ, ಯುದ್ಧಗಳು ಹಾಗೂ ಶಾಂತಿ ಸಂಧಾನ ಮುಂತಾದ ರಾಜಕೀಯ ವಿಚಾರಗಳ

ವರ್ಣನಾತ್ಮಕ ಪಟ್ಟಿಯನ್ನು ರಚಿಸುವುದು ಇದರ ಮುಖ್ಯ ಕರ್ತವ್ಯವಾಗಿದ್ದಿತು. ಇದು ರಾಜಕೀಯ ರಂಗಮಂಚದ ಮೇಲೆ ಅತ್ಯುನ್ನತ ಆಸನವನ್ನು ಅಲಂಕರಿಸಿ ಪ್ರಕಾಶಮಯ ಬೆಳಕಿನಲ್ಲಿ ಪ್ರಧಾನವಾಗಿ ಕಾಣುತ್ತಿದ್ದ ಸುಪ್ರಸಿದ್ಧ ವ್ಯಕ್ತಿಗಳ ಮೇಲೆ ಮಾತ್ರ ಗಮನವನ್ನು ಕೇಂದ್ರೀಕರಿಸಿದ್ದಿತು. ಜಗತ್ತಿನ ಇತಿಹಾಸದಲ್ಲಿ **'ವಾಸ್ಕೊಡಿಗಾಮನ ಶಕೆ'** ಎಂಬುದಾಗಿ ಕರೆಯಲಾದ ಹಂತದಲ್ಲಿ ಯೂರೋಪು ಪ್ರಧಾನ ಪಾತ್ರಧಾರಿಯಾಗಿದ್ದಂತೆ ಕಂಡುಬಂದಿದ್ದರಿಂದ ಯೂರೋಪಿನ ಇತಿಹಾಸ ಮುಖ್ಯವಾಗಿ ಯೂರೋಪಿನ ವಿಸ್ತರಣೆಯ ಅಧ್ಯಯನ, ಇತಿಹಾಸಕಾರನ ಪ್ರಮುಖ ಹವ್ಯಾಸವಾಯಿತು. ಆದರೆ 20ನೆಯ ಶತಮಾನದ ಜಗತ್ತು ಯೂರೋಪಿನ ಸರಹದ್ದುಗಳಾಚೆ ನಡೆದ ಘಟನೆ ಹಾಗೂ ಪ್ರಬಲವಾಗಿರುವ ಶಕ್ತಿಗಳ ಕಾರಣ ಬದಲಾಗಿದೆ. ಹಾಗಾಗಿ ಈಗ ಸಾಮಾಜಿಕ ಹಾಗೂ ಆರ್ಥಿಕ ಅಂಶಗಳ ಬೆಳವಣಿಗೆಯು ಇತಿಹಾಸದ ಮುಖ್ಯ ವಿಷಯವಾಗುತ್ತದೆ. ಆದ್ದರಿಂದ ಇದು ಕಡೆಗಣಿಸಲಾಗಿದ್ದ ಗತಕಾಲದ ಈ ಕ್ಷೇತ್ರವನ್ನು ಈಗ ಅಪ್ಪಿಕೊಳ್ಳುತ್ತದೆ. ಕ್ರಮೇಣ ಇದರ ಚಿತ್ರಪಟ ಬಹು ದೊಡ್ಡದಾಗುತ್ತಾ ಬಂದಿತು. ಇದರ ದೃಷ್ಟಿಕೋನ ಬದಲಾಯಿತು. ಇದರ ದೃಷ್ಟಿ ವ್ಯಾಪಕವಾಯಿತು; ಇದರ ಪೂರ್ಣದೃಷ್ಟಿ ಬೆಳೆಯಿತು. ಇದಕ್ಕೆ ಸರ್ಕಾರದ ಸರಹದ್ದುಗಳಾಚೆ, ಸದ್ದುಗದ್ದಲವಿಲ್ಲದೆ ಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದ ಸಾಮಾನ್ಯ ಜನರು, ಅವಿಶ್ರಾಂತವಾಗಿ ದುಡಿಯುತ್ತಿದ್ದ ದುಡಿಮೆಗಾರರು, ದೂರದ ಹೊಲದಲ್ಲಿ ಏಕಾಂಗಿಯಾಗಿ ಉಳುತ್ತಿದ್ದ ರೈತ ಮುಂತಾದವರೂ ಸಹ ಈಗ ಮಾನ್ಯರಾದರು. ಕಾನೂನಿನ ಚೌಕಟ್ಟಿನಾಚೆ ಇದ್ದುಕೊಂಡು, ಜನಜೀವನವನ್ನು ನಿಯಂತ್ರಿಸಿ, ನಿರ್ದೇಶಿಸುವ ಸಂಪ್ರದಾಯ, ಲೋಕರೂಢಿ, ಲೋಕನೀತಿ, ಪುರಾಣ ಕಥೆ, ಆದರ್ಶ ವಚನಗಳು ಮೊದಲಾದವುಗಳು ಗಣನೆಗೆ ಬಂದುವು. ಇದು ಮತಧರ್ಮದ ಮೇರೆಗಳಾಚೆ ಗುಪ್ತಗಾಮಿನಿಯಾಗಿ ಇದ್ದುಕೊಂಡು ಜನಜೀವನಕ್ಕೆ ಮೆರುಗನ್ನು ಕೊಡುವಂತಹ ಸದಾಚಾರಗಳು, ಜನಶ್ರುತಿ, ಕಲೆ ಮೊದಲಾದ ಕ್ಷೇತ್ರಗಳ ಮೇಲೆ ದೃಷ್ಟಿ ಹಾಯಿಸಿ, ಅವುಗಳ ಒಳಹೊಕ್ಕು ವಸ್ತುನಿಷ್ಠವಾಗಿ ಪರಿಶೀಲಿಸಿ ವಿಚಾರ ಮಾಡತೊಡಗಿತು. ಹೀಗೆ ಮಾನವನ ಎಲ್ಲಾ ಚಟುವಟಿಕೆಗಳ ಅಧ್ಯಯನವು ಇತಿಹಾಸದ ವ್ಯಾಪ್ತಿಗೆ ಒಳಪಟ್ಟಿತು.

ಇಂದು ಇತಿಹಾಸವು ಸಮಾಜದಲ್ಲಿ ಬಾಳಿದ ಹಾಗೂ ಬಾಳುತ್ತಿರುವ ವ್ಯಕ್ತಿಗೆ ಸಂಬಂಧಿಸಿದ ರಾಜಕೀಯ, ಸಾಮಾಜಿಕ, ಆರ್ಥಿಕ, ಬೌದ್ಧಿಕ, ದಾರ್ಶನಿಕ, ಧಾರ್ಮಿಕ, ನೈತಿಕ, ಭಾವಾತ್ಮಕ ಮುಂತಾದ ಪ್ರತಿ ಅಂಶದ ಜೊತೆ ಆ ಪ್ರಕಾರದಲ್ಲಿ ಅವನ ಸಾಧನೆಯನ್ನು ಕುರಿತು ಅಧ್ಯಯನ ಮಾಡಬೇಕಾಗಿದೆ. ಆಳಿದ ಪ್ರಭುಗಳು ಅವರ ಪರಿವಾರ, ಅಧಿಕಾರಶಾಹಿ, ಜನಜೀವನದಲ್ಲಿ ಹಾಸುಹೊಕ್ಕಾಗಿರುವ ಎಲ್ಲಾ ರಾಜಕೀಯ ಸಂಸ್ಥೆಗಳು; ಸಾಮಾಜಿಕ ಸ್ತರ ವಿನ್ಯಾಸ, ಜಾತಿ–ವರ್ಗ, ವಿವಾಹ, ಕೌಟುಂಬಿಕ ಜೀವನ, ಸ್ತ್ರೀ ಸ್ಥಾನಮಾನ, ಸಮೂಹ ಜೀವನ, ಗ್ರಾಮ–ನಗರ ಜೀವನ, ಸಂಪ್ರದಾಯಗಳು, ನಡೆವಳಿ, ಸಮಾಜದ ಸ್ಥಿತಿಗತಿಗಳು, ಸುಧಾರಣೆಗಳೂ, ಎಲ್ಲಾ ಸಾಮಾಜಿಕ ವ್ಯವಹಾರಗಳು; ಕೃಷಿ, ಭೂಹಿಡುವಳಿ, ನೀರಾವರಿ ವ್ಯವಸ್ಥೆ, ಕೈಕಸುಬುಗಳು, ಕೈಗಾರಿಕೆ, ಕಾರ್ಮಿಕರ ಪರಿಸ್ಥಿತಿ, ಅವರ ಚಳವಳಿ, ಒಳ–ಹೊರ ವ್ಯಾಪಾರ, ಆರ್ಥಿಕ ಸಂಸ್ಥೆಗಳು; ಶಿಕ್ಷಣ ಪದ್ಧತಿ, ಶೈಕ್ಷಣಿಕ ಸಂಸ್ಥೆಗಳು; ಧರ್ಮ, ಮತಾಚರಣೆ, ದೇವಾಲಯ, ವಾಸ್ತುಶಿಲ್ಪ, ಶಿಲ್ಪಕಲೆ, ಚಿತ್ರಕಲೆ, ಸಂಗೀತ, ನೃತ್ಯ ಮುಂತಾದ ವಿವಿಧ ಬಗೆಯ ಕಲೆಗಳು; ಜೀವನ ಹಾಗೂ ಪ್ರಾಕೃತಿಕ ಪರಿಸರ; ಆದಿವಾಸಿಗಳ ಜೀವನದ ಐತಿಹಾಸಿಕ ವಿವರಣೆ; ಪ್ರಾದೇಶಿಕ ಚರಿತ್ರೆಗಳು; ಸಾಮಾಜಿಕ ಪರಿವರ್ತನೆ, ಪ್ರತಿ ಕಾಲ–ದೇಶದಲ್ಲೂ ಕಂಡುಬಂದ ಸವಾಲುಗಳು, ಅವುಗಳಿಗೆ ಜನರು ತೋರಿದ ಪ್ರತಿಕ್ರಿಯೆ ಹಾಗೂ

ಕಂಡುಹಿಡಿದ ಪರಿಹಾರಗಳು; ಸಮಾಜದಲ್ಲಿ ಬೆಳೆದು ಬಂದ ವಿವಿಧ ರೀತಿಯ ನಿಯಂತ್ರಣ ಮಾಧ್ಯಮಗಳು, ಕಟ್ಟುಪಾಡುಗಳು, ಪರಂಪರಾಗತ ಆಚಾರಗಳು, ಜನರಿಗೆ ಜೀವನ ಪಯಣವನ್ನು ಸರಿಯಾದ ಮಾರ್ಗದಲ್ಲಿ ಮುಂದುವರಿಸಿ ಗುರಿಮುಟ್ಟಲು ಸಹಾಯಕವಾದ ಮಾರ್ಗಗಳು, ಉಪದೇಶಾಮೃತಗಳು, ಸನ್ನಡತೆ ಹಾಗೂ ಉಪದೇಶದಿಂದ ಹೊರಬಂದಿರುವ ಆದರ್ಶಗಳು; ವ್ಯಕ್ತಿ ಚಿಂತನೆ, ಅವುಗಳಿಂದ ಉದ್ಭವಿಸಿದ ವಿಚಾರಧಾರೆ, ಅದರ ಫಲವಾಗಿ ಬೆಳೆಯುತ್ತಿರುವ ಪಾಂಡಿತ್ಯದ ಪ್ರವಾಹ, ಬೌದ್ಧಿಕ ನಿಧಿ ಹಾಗೂ ಭಾವಾತ್ಮಕ ಭಂಡಾರ ಇವೆಲ್ಲವನ್ನು ಕುರಿತು ಇತಿಹಾಸ ಒಂದಲ್ಲ ಒಂದು ರೀತಿ ಯೋಚಿಸುತ್ತದೆ. ಇತಿಹಾಸ ಆ ಕಾಲದ ಶ್ರೇಷ್ಠ ಸಾಹಿತ್ಯ ಕೃತಿಗಳ ತೌಲನಿಕ ಅಧ್ಯಯನ ನಡೆಸುತ್ತದೆ. ಇದು ಸಂಸ್ಕೃತಿಗೆ ಸಹಾಯಕವಾದ ವಿಚಾರಗಳಲ್ಲಿ ಸಾಹಿತ್ಯ ಕೃತಿಗಳಲ್ಲಿ ತನ್ನ ಗಮನ ಕೇಂದ್ರೀಕರಿಸುತ್ತದೆ. ಇದರ ಜೊತೆ ಸಮಾಜಶಾಸ್ತ್ರ, ಮಾನವಶಾಸ್ತ್ರ, ಅರ್ಥಶಾಸ್ತ್ರ ಮುಂತಾದ ಮಾನವಿಕ ಶಾಸ್ತ್ರಗಳ ವಿಷಯಗಳನ್ನು ಒಮ್ಮೊಮ್ಮೆ ತನ್ನದನ್ನಾಗಿ ಮಾಡಿಕೊಳ್ಳುತ್ತದೆ. ಹೀಗೆ ಪ್ರತಿ ದಿನವೂ ಒಂದೊಂದು ವಿಷಯಗಳನ್ನು ತನ್ನದಾಗಿಸಿಕೊಳ್ಳುವ ಪ್ರಯತ್ನ ಇದರದು.

ವ್ಯಕ್ತಿಗೆ ಸಂಬಂಧಿಸಿರುವ ನಿಸರ್ಗವೂ ಸಹ ಇತಿಹಾಸದ ಅಧ್ಯಯನ ವಿಷಯವಾಗುತ್ತದೆ. ಮಾನವ ಕುಲ ಜೀವನವನ್ನು ರೂಪಿಸಿ, ಮಾನವನ ಜೀವನಾಧಾರಗಳನ್ನು ನಿರ್ದೇಶಿಸಿ ಅವನಿಗೆ ಸ್ಫೂರ್ತಿಯನ್ನು ನೀಡಿ ಅವನು ಮಹತ್ಸಾಧನೆಗಳನ್ನು ಗಳಿಸುವಂತೆ ಮಾಡುವ ಮಹಾಕಾರ್ಯದಲ್ಲಿ ಪ್ರಧಾನ ಪಾಥ್ರ ವಹಿಸಿರುವ ನದಿಗಳೂ, ಪರ್ವತಗಳು, ಸರೋವರಗಳು, ಸಮುದ್ರಗಳು ಮುಂತಾದ ಪ್ರಾಕೃತಿಕ ಅಂಶಗಳು ಇತಿಹಾಸದ ಮುಖ್ಯ ವಸ್ತುವಾಗುತ್ತವೆ. ಉದಾಹರಣೆಗೆ, ಭಾರತದ ಐತಿಹಾಸಿಕ ರಂಗಭೂಮಿಯಲ್ಲಿ ಮೊದಲಿನಿಂದಲೂ ಸಿಂಧೂ, ಗಂಗಾ, ಕಾವೇರಿ ಮುಂತಾದ ನದಿಗಳು, ಹಿಮಾಲಯ, ವಿಂಧ್ಯ ಪರ್ವತಗಳು ಮುಂತಾದ ಪ್ರಾಕೃತಿಕ ವಸ್ತುಸ್ಥಿತಿಗಳು ಪ್ರಧಾನ ಪಾತ್ರ ವಹಿಸಿರುವುದನ್ನು ಕಾಣಬಹುದು. ರಾಣಾ ಸಂಗ್ರಾಮ್‌ಸಿಂಗ್, ಕ್ಲೈವ್, ನೆಪೋಲಿಯನ್ನರಂತಹ ಐತಿಹಾಸಿಕ ಸುಪ್ರಸಿದ್ಧ ವ್ಯಕ್ತಿಗಳಿಗೆ ಸಂಬಂಧಪಟ್ಟಿದ್ದರಿಂದ ಕಣ್ವ, ಪ್ಲಾಸಿ ಮತ್ತು ವಾಟರ್‌ಲೂಗಳೆಂಬ ಪ್ರದೇಶಗಳು ಪ್ರಸಿದ್ಧವಾಗಿವೆ. ಇತಿಹಾಸವು ಮೊದಲು ಕೇವಲ ವಸ್ತುನಿಷ್ಠ ಅನುಭವೈಕವಾದಕ್ಕೆ ಮಾತ್ರ ಸೀಮಿತವಾಗಿದ್ದಿತು. ಅಂದರೆ ವಾಸ್ತವಾಂಶಗಳನ್ನು ಇರುವಂತೆ ವರ್ಣಿಸುವುದು ಮತ್ತು ಗತಕಾಲದಲ್ಲಿ ಸಂಭವಿಸಿದ ಘಟನೆಗಳ ವಾಸ್ತವಿಕ ಛಾಯಾಚಿತ್ರಗಳನ್ನು ನೀಡುವುದು ಇದರ ಕರ್ತವ್ಯವಾಗಿದ್ದಿತು.

ಆದರೆ ಇಂದು ಐತಿಹಾಸಿಕವಾದವು ಮುಖ್ಯವಾಗಿದೆ, ಅಂದರೆ ವಸ್ತುಸ್ಥಿತಿಯನ್ನು ಆಧ್ಯಾತ್ಮಿಕ ನಿರ್ಮಾಣಕ್ಕೆ ಸಂಬಂಧಿಸಿದ ಐತಿಹಾಸಿಕ ಪ್ರಕ್ರಿಯೆಯಾಗಿ ಎಣಿಕೆ ಮಾಡುವ ಮೌಲ್ಯ ನಿರ್ಧರಣ ಎಂದು ಹೇಳಬಹುದು. ಇತಿಹಾಸವು ಪ್ರತಿ ಘಟನೆಯ ಜಾಡು ಹಿಡಿದು ಹಿಂದಕ್ಕೆ ಹೋಗಿ ಮೊದಲಿನಿಂದ ಆದ ಅದರ ಬೆಳವಣಿಗೆಯನ್ನು ಗುರುತಿಸುವುದರಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸುತ್ತದೆ. ಈ ಕ್ರಮವು ವಿಕಾಸಾತ್ಮಕ ಪ್ರವೃತ್ತಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಹೇಗೆ ಕಾಲಕಾಲಕ್ಕೆ ಪ್ರಗತಿಯನ್ನು ಗಳಿಸಲಾಯಿತು ಎಂಬುದನ್ನು ವಿವರಿಸುವ ಉತ್ಪತ್ತಿ ವಿಷಯದ ಪ್ರಕ್ರಿಯೆಯಂತಿದೆ. ಇಷ್ಟು ಮಾತ್ರವಲ್ಲದೆ, ಇತಿಹಾಸವು ವಾಸ್ತವಿಕವಾದಿಗಳ ಕ್ಷೇತ್ರಕ್ಕೂ ಪದಾರ್ಪಣೆ ಮಾಡಿದೆ; ಇಂದು ಸಾಮಾನ್ಯ ನಿಯಮಗಳ ಸರಣಿಯನ್ನು ನಿರೂಪಿಸಲು ಸರ್ವವಿಧದಲ್ಲೂ ಅರ್ಹವಾಗಿದೆ. ಫ್ರಾಯ್ಡ್ ಹಾಗೂ ಐನ್‌ಸ್ಟೀನರ ತತ್ವಗಳನ್ನೂ ಸಹ ಐತಿಹಾಸಿಕ

ಬೆಳವಣಿಗೆಯ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಇಬ್ಬರು ಮಹಾಪಂಡಿತರ ತತ್ವಗಳನ್ನು ಕುರಿತು ಮಾಡಲಾದ ಅಧ್ಯಯನದ ಫಲವಾಗಿ ಐತಿಹಾಸಿಕ ಸಾಪೇಕ್ಷವಾದ ಎಂಬ ನೂತನ ಭಾವರೂಪದ ವ್ಯುತ್ಪತ್ತಿಯಾಗಿದೆ.

19ನೆಯ ಶತಮಾನದ ನಂತರ ಇತಿಹಾಸದ ಅಧ್ಯಯನ ವಿಷಯಗಳ ಸಂಖ್ಯೆ ಹೆಚ್ಚುತ್ತಾ ಬಂದು, ಇದರ ವ್ಯಾಪ್ತಿ ವಿಸ್ತಾರವಾಗುತ್ತಾ ಬಂದಿತು. ಮಾನವು ಮಹತ್ಸಾಧನೆಗಳ ಮೆಟ್ಟಿಲುಗಳನ್ನು ಏರುತ್ತಾ ಹೋದಂತೆ ಹೊಸ ಹೊಸ ವಾಸ್ತವಾಂಶಗಳು ಬೆಳಕಿಗೆ ಬರುತ್ತಾ ಇವೆ. ಇತಿಹಾಸ ಕ್ಷೇತ್ರಕ್ಕೆ ಹೊಸ ಹೊಸ ವಿಷಯಗಳು ಸೇರುತ್ತಾ ಬರುತ್ತಿವೆ. ಇದರಿಂದ ಇದರ ಅಧ್ಯಯನ–ವಿಷಯಗಳ ಪಟ್ಟಿ ಇನ್ನೂ ಅಪೂರ್ಣವಾಗಿಯೇ ಇದೆ. ಉದಾಹರಣೆಗೆ, ಎಲ್.ರೌಸ್ ಹೇಳಿದಂತೆ, "ಸಮಗ್ರ ವಿಶ್ವದಿಂದ ಹಿಡಿದು ನಾವು ಇಲ್ಲಿ ಬಳಸುತ್ತಿರುವ ಲೇಖನಿಯ ಮೊನೆಯವರೆಗೆ ಇರುವ ಪ್ರತಿ ವಿಷಯಕ್ಕೂ, ವಸ್ತುವಿಗೂ ಒಂದು ಇತಿಹಾಸ ಇದೆ. ಲೇಖನಿ ಮೊನೆಯ ಇತಿಹಾಸವು ಸ್ವಾರಸ್ಯಕರವಾದುದು. ಅದರ ಸಹಾಯದಿಂದ ಬರೆಯಲಾದ ಅನೇಕ ಕೃತಿಗಳು ಮಾನವ ಕುಲಕ್ಕೆ ಅಮೂಲ್ಯ ಬೌದ್ಧಿಕ ಭಂಡಾರವಾಗಿವೆ. ಅದನ್ನು ಬಳಸಿ ಬರೆಯಲಾದ ವಿಷಯವೆಲ್ಲವೂ ಮಾನವ ಇತಿಹಾಸದ ಭಾಗವೇ ಆಗಿವೆ. ಇಷ್ಟು ಮಾತ್ರವಲ್ಲದೆ ಅದರ ಉತ್ಪಾದನೆಯ ಬಗ್ಗೆಯೂ ಒಂದು ಇತಿಹಾಸವಿದೆ. ಪ್ರತಿ ಲೇಖನಿ ಮೊನೆಯ ಹಿಂದೆ ಅದರ ಉತ್ಪಾದನಾ ಪ್ರಕ್ರಿಯೆಗಳ ಇತಿಹಾಸ ಅಡಗಿರುತ್ತದೆ. ಆ ಇತಿಹಾಸದ ಅಧ್ಯಯನವು ಕೈಗಾರಿಕಾ ಕ್ರಾಂತಿಯ ಇತಿಹಾಸಕ್ಕೆ ಪೀಠಿಕೆಯಾಗಬಹುದು. ಇದರೊಂದಿಗೆ ಈ ಲೇಖನಿ ಮೊನೆಯನ್ನು ಮಾಡುವುದರಲ್ಲಿ ಬಳಸಲಾದ ಲೋಹಗಳು ಅವುಗಳ ಉತ್ಪತ್ತಿ ಸ್ಥಾನ, ಅವುಗಳನ್ನು ರಫ್ತು ಮಾಡಿದ ಅಥವಾ ಆಮದು ಮಾಡಿಕೊಂಡ ದೇಶಗಳು ಮುಂತಾದ ವಿಷಯಗಳು ಮುಖ್ಯವಾಗಿವೆ. ಲೇಖನಿ ಮೊನೆಯ ಇತಿಹಾಸಕಾರನಿಗೆ ಕೈಗಾರಿಕಾ ಪ್ರಕ್ರಿಯೆ, ಭೂಗೋಳಶಾಸ್ತ್ರ, ಖನಿಜಶಾಸ್ತ್ರ, ಇತ್ಯಾದಿಗಳ ಬಗ್ಗೆ ಅರಿವಿರಬೇಕಾಗುತ್ತದೆ."

ಹೀಗೆ ಇತಿಹಾಸವು ವಸ್ತುಗಳ ಕಾಲಿಕ ಹಾಗೂ ಪ್ರಾದೇಶಿಕ ಮುಖಗಳನ್ನು ವೀಕ್ಷಿಸಿ ವಿಚಾರ ಮಾಡುತ್ತದೆ. ಇಷ್ಟು ಮಾತ್ರವಲ್ಲದೆ ಇದು ಸಮಗ್ರ ಸಮಾಜದ ಚರಿತ್ರೆಯೂ ಆಗಿದೆ. ಇದು ಭೌಗೋಳಿಕ ಪರಿಸರ, ಆರ್ಥಿಕ ಆಧಾರ, ಭೂವ್ಯವಸ್ಥೆ ಹಾಗೂ ಕೈಗಾರಿಕೆ, ಸಾಮಾಜಿಕ ರಚನೆ, ರಾಜಕೀಯ ಘಟನೆಗಳು, ಸಾಮಾಜಿಕ, ಧಾರ್ಮಿಕ, ಕಲಾತ್ಮಕ ಹಾಗೂ ಸಾಂಸ್ಕೃತಿಕ ಜೀವನ ಮುಂತಾಗಿ ಎಲ್ಲಾ ಕ್ಷೇತ್ರಗಳನ್ನು ಒಳಗೊಂಡಂತೆ ಸಮಗ್ರ ಸಮಾಜದ ಯಥಾರ್ಥ ಚಿತ್ರಣವನ್ನು ನೀಡುವ ಹೊಣೆಗಾರಿಕೆಯನ್ನು ಹೊತ್ತುಕೊಂಡಿದೆ. ಆದ್ದರಿಂದ ಇದರ ವ್ಯಾಪ್ತಿ ಬಹು ದೊಡ್ಡದಾಗಿದೆ. ಇದರ ಅಧ್ಯಯನ ಕ್ಷೇತ್ರದ ಉದ್ದ, ಅಗಲ, ಆಳ ಇನ್ನೂ ಹೆಚ್ಚುತ್ತಾ ಬರುತ್ತಿದೆ.

## 1.5 ಇತಿಹಾಸದ ಸ್ವರೂಪ

ಮನುಷ್ಯರು ಹಾಗೂ ರಾಷ್ಟ್ರಗಳ ವಿಷಯಗಳು ನಿರಂತರ ಚಾಲನೆಯಲ್ಲಿರುತ್ತವೆ. ಇದರಿಂದಾಗಿ ಇತಿಹಾಸದ ಸ್ವರೂಪ ಮತ್ತು ವ್ಯಾಪ್ತಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಆಮೂಲಾಗ್ರ

ಬದಲಾವಣೆಯಾಗಿದೆಯೆನ್ನಬಹುದು. ಇತಿಹಾಸವನ್ನು ಈ ಹಿಂದೆ ಕೇವಲ ಘಟನೆಗಳ ಪಟ್ಟಿಯನ್ನು ಧಾರಾವಾಹಿಯ ರೀತಿಯಲ್ಲಿ ವಿವರಿಸುವ ಪದ್ಧತಿಯಿತ್ತು. ಆದರೆ ಪ್ರಸ್ತುತದಲ್ಲಿ ಇತಿಹಾಸದ ಅಧ್ಯಯನವು ವಿಮರ್ಶಾತ್ಮಕ ಹಾಗೂ ವೈಜ್ಞಾನಿಕ ರೀತಿಯಲ್ಲಿ ಆಗುತ್ತಿದೆ. ಅಂತೆಯೇ ಇತಿಹಾಸಕಾರರು ಹಳೆಯ ಗ್ರಂಥಗಳಲ್ಲಿರುವ ವಿಷಯಗಳನ್ನು ಪುನರುಚ್ಚರಿಸದೇ ಬಹಳಷ್ಟು ರೀತಿಯಲ್ಲಿ ವಿಷಯಗಳ ಬಗ್ಗೆ ಚಿಂತನೆ ಮಾಡಿ ವರದಿ ನೀಡುವರು. ಇತಿಹಾಸದ ಅಧ್ಯಯನವನ್ನು ಇತಿಹಾಸದ ಘಟನೆಗಳು ಹೇಗೆ ನಡೆದವೋ ಅದನ್ನೇ ಸತ್ಯವಾಗಿ ನಡೆದ ರೀತಿಯಲ್ಲಿ ಅಧ್ಯಯನ ಮಾಡುವುದಾಗಿದೆ. ಇತಿಹಾಸಕಾರನ ಕಾರ್ಯಗಳು ಹಿಂದಿನ ಕಾಲವನ್ನು ಪ್ರೀತಿಸುವುದಾಗಲೀ ಅಥವಾ ಹಿಂದಿನ ಕಾಲವನ್ನು ಪೂರ್ಣವಾಗಿ ಅಧ್ಯಯನ ಮಾಡುವುದಾಗಿದೆಯೆನ್ನಬಹುದು. ಇತಿಹಾಸವು ಘಟನೆಗಳ ಮಹಾಪೂರವೂ ಆಗಿರಬಹುದು ಅಥವಾ ಘಟನೆಗಳ ಸೈರಣೆಯಾಗಿರಲೂ ಬಹುದು.

ಇತಿಹಾಸದ ಸ್ವರೂಪದಲ್ಲಿ ಯಾವುದೇ ರೀತಿಯ ಒಮ್ಮತದ ಅಭಿಪ್ರಾಯವಿಲ್ಲ. ಈ ಸ್ವರೂಪದ ಬಗೆ ಭಿನ್ನವಾದ ಅಭಿಪ್ರಾಯಗಳು ಬಂದಿರುವುದು ಗೊತ್ತಾಗುತ್ತದೆ. ಕೆಲವು ವಿದ್ವಾಂಸರು ಇತಿಹಾಸವು ಮರುಕಳಿಸು–ತ್ತದೆಂದೂ ಮತ್ತೆ ಹಲವರು ಈ ವಾದವನ್ನು ವಿರೋಧಿಸುತ್ತಾರೆ. ಮೊದಲ ಗುಂಪಿನ ವಿದ್ವಾಂಸರು ಮಾನವನ ಭಾವನೆಗಳು ಎಲ್ಲ ಕಾಲಕ್ಕೂ ಹಾಗೂ ಎಲ್ಲಾ ಸ್ಥಳಗಳಲ್ಲೂ ಒಂದೇ ರೀತಿಯಲ್ಲಿ ಇರುತ್ತವೆಂಬ ಆಧಾರದ ಮೇಲೆ ಇತಿಹಾಸವು ಮರುಕಳಿಸುತ್ತದೆಂದು ಹೇಳುವರು. ಈ ಮರುಕಳಿಸುವಿಕೆಯಲ್ಲಿ ಬದಲಾವಣೆಗಳು. ಅಷ್ಟೊಂದು ವೈವಿಧ್ಯತೆಯನ್ನು ತೋರಿಸುವುದಿಲ್ಲ ಉದಾಹರಣೆಗೆ ಮನುಷ್ಯನ ಗುಣವು ಹೋರಾಟವಾಗಿದ್ದು ಇಡೀ ಪ್ರಪಂಚದ ಎಲ್ಲಾ ಕಾಲದಲ್ಲಿಯೂ ಯುದ್ಧವು ಒಂದು ಮನೋವಿಜ್ಞಾನದ ಒಂದು ಅಂಶವಾಗಿ ಸಾಧಿಸುತ್ತಿದ್ದು. ಆದರೆ ಆಗಾಗ ಬದಲಾವಣೆಯು ಕಂಡರೂ ಯುದ್ಧವು ಒಂದೇ ಆದರೆ ಯುದ್ಧ ಮಾಡುವುದು ವೈವಿಧ್ಯಮಯ ರೀತಿಯಾಗಿದ್ದು ನಿರಂತರವಾಗಿರುತ್ತದೆ. ಈ ಅಭಿಪ್ರಾಯವನ್ನು ಒಪ್ಪದ ಇನ್ನೊಂದು ಗುಂಪಿನ ವಿದ್ವಾಂಸರು ಬದಲಾವಣೆಯ ಪ್ರಕೃತಿಯ ನಿಯಮ ಮತ್ತು ಪ್ರಕೃತಿಯಲ್ಲಿ ಎರಡು ಘಟನೆಗಳು ನಡೆದು ಒಂದೇ ರೀತಿಯಲ್ಲಿ ಕಾಣಿಸಿದರೂ ಅವುಗಳು ಒಂದಕ್ಕೊಂದು ವಿಭಿನ್ನವಾಗಿರುತ್ತವೆಂದು ತಿಳಿಸುತ್ತಾರೆ. ಇತಿಹಾಸವು ಒಂದು ಅಪೂರ್ವ ವೈಯಕ್ತಿಕ ಹಾಗೂ ಬಹಳ ಪ್ರಮುಖ ಘಟನೆಗಳ ದಾಖಲೆಯಾಗಿದೆ ಎನ್ನಬಹುದು. ಕೆಲವು ಇತಿಹಾಸಕಾರರು ಎಲ್ಲಾ ಇತಿಹಾಸವೂ ಸಮಕಾಲೀನ ಇತಿಹಾಸವಾಗಿದೆ ಎನ್ನುತ್ತಾರೆ. ಕ್ರೋಷೆಯು ಈ ಸಮಕಾಲೀನ ಇತಿಹಾಸ ವ್ಯಾಖ್ಯಾನದ ಪ್ರತಿಪಾದಕ ಇಲ್ಲಿ ಭೂತಕಾಲ ಮತ್ತು ವರ್ತಮಾನಕಾಲದ ಸಾಮಾನ್ಯ ಪ್ರಕ್ರಿಯೆಗಳ ಸರಪಣಿಯಾಗಿದೆ. ಎಲ್ಲಾ ರೀತಿಯ ಘಟನೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಎಣೆಯಲಾಗಿದೆ. ಇತಿಹಾಸಕಾರನು ಯಾವುದೇ ಕಾಲಕ್ಕೆ ಸಂಬಂಧ ಪಡದೇ ಇದ್ದರೂ ಗತಿಸಿದ ಘಟನೆಗಳನ್ನು ತನ್ನದೇ ಆದ ದೃಷ್ಟಿಕೋನದಲ್ಲಿ ನೋಡುವುದರಿಂದ ಇಲ್ಲಿ ಸಮಕಾಲೀನತೆಯನ್ನು ಹೊರದೂಡಲು ಆಗುವುದಿಲ್ಲ.

ಹೀಗೆ ಇತಿಹಾಸದ ಸ್ವರೂಪದೊಂದಿಗೆ ಹತ್ತು ಹಲವಾರು ಅಂಶಗಳು ಸೇರಿಕೊಂಡಿರುವುದು ಕಾಣುತ್ತಾರೆ. ಇದರಿಂದಾಗಿ ಇತಿಹಾಸದ ವಸ್ತುವಿಷಯವು ಅದರ ಆಗಾಧತೆಯನ್ನು ಬಿಂಬಿಸುತ್ತದೆ. ಇದು ಜೀವನದಲ್ಲಿ ನಡೆಯುವ ಎಲ್ಲಾ ರೀತಿಯ ನಾಟಕಗಳನ್ನು ಹಾಗೂ ಸಂಸ್ಕೃತಿಯ ಏಳು, ಬೀಳು ಮತ್ತು

ಅಭಿವೃದ್ಧಿಯನ್ನು ತಿಳಿಸುತ್ತದೆ. ಈ ಹೆಚ್.ಕಾರ್‌ರವರು ಇತಿಹಾಸವು ಭೂತ ಮತ್ತು ವರ್ತಮಾನಕಾಲದಲ್ಲಿ ನಿರಂತರವಾಗಿ ನಡೆಯುವ ಸಂಭಾಷಣೆಯಂತೆ ಎನ್ನುತ್ತಾರೆ ಇದು ಕೇವಲ ಘಟನೆಗಳ ಪಟ್ಟಿಯಾಗಿರದೇ, ಕ್ರಿಯಾತ್ಮಕವಾದ ವಿಮರ್ಶಾತ್ಮಕವಾದ ಒಂದು ಮಾನಸಿಕ ಕಾರ್ಯವಾಗಿದೆ. ಇದರೊಂದಿಗೆ ಇವುಗಳನ್ನೇ ವಿವರಿಸಲು ಬೇಕಾದ ಒಬ್ಬ ಮನುಷ್ಯನಿಂದ ಮತ್ತೊಬ್ಬರ ನಡುವೆ ವ್ಯತ್ಯಾಸದ ಕಲ್ಪನಾಶಕ್ತಿಯನ್ನು ತೋರಿಸುತ್ತದೆ. ಆದರೆ ಇತಿಹಾಸವು ಪರಮೋಚ್ಛ ನ್ಯಾಯಾಲಯದಂತೆ ಕಾರ್ಯ ನಿರ್ವಹಿಸಿ ವಾದವಿವಾದಗಳನ್ನು ಆಲಿಸಿ ಉತ್ತಮ ತೀರ್ಮಾನವನ್ನು ನೀಡುವುದೇ ಆಗಿದೆ. ಇದಕ್ಕೆ ಉದಾಹರಣೆಯಾಗಿ ವೈಜ್ಞಾನಿಕ ಇತಿಹಾಸಜ್ಞನೆನಿಸಿರುವ ರ್‍ಯಾಂಕೆಯು ಘಟನೆಗಳನ್ನು ಹೇಗೆ ನಡೆದವೋ ಹಾಗೆಯೇ ವಿವರಿಸಬೇಕೆಂದಿದ್ದು ಇತಿಹಾಸ ಪುನಃರಚನೆಯಲ್ಲಿ ಮೌಲ್ಯಧಾರಿತ ತೀರ್ಮಾನವನ್ನು ಕೊಡಬೇಕೆಂದಿದ್ದಾನೆ. ಆದರೆ ಈ ವಾದವನ್ನು ಒಪ್ಪದ ವಿದ್ವಾಂಸರು ಇತಿಹಾಸವು ಒಳ್ಳೆಯದನ್ನು ಸೂಚಿಸುತ್ತದೆ ಹಾಗೂ ಕೆಟ್ಟದ್ದನ್ನು ಹೊಡೆದೋಡಿಸುವ ಕಾರ್ಯವನ್ನು ಮಾಡುವ ಹಾಳೆಯಲ್ಲಿ ಕಾರ್ಯ ನಿರ್ವಹಿಸುತ್ತಾನೆ. ಆದ್ದರಿಂದ ಇತಿಹಾಸಕಾರನು ತೀರ್ಮಾನವನ್ನು ನೀಡುವಾಗ ವಿಭಿನ್ನ ಭಾವನೆಗಳನ್ನು ಇಟ್ಟುಕೊಳ್ಳಬಾರದೆನ್ನುತ್ತಾರೆ. ಆಕ್ಟನ್‌ರವರ ಪ್ರಕಾರ ಇತಿಹಾಸವು ಆತ್ಮಸಾಕ್ಷಿಯನ್ನು ಬೆಳೆಸಿ, ಅಚ್ಚುಕಟ್ಟಾಗಿಸುವುದಲ್ಲದೇ ಅದನ್ನು ಕಾಪಾಡುವ ಕಾರ್ಯ ನಿರ್ವಹಿಸುತ್ತದೆ. ಆದರೂ ಇತಿಹಾಸದಲ್ಲಿ ಹೆಚ್ಚಿನ ನೈತಿಕತೆಯು ಒಳ್ಳೆಯ ಫಲಿತಾಂಶವನ್ನು ಒದಗಿಸುವುದಿಲ್ಲ.

ಇದಲ್ಲದೇ ಇತಿಹಾಸದ ಸ್ವರೂಪವು ಇತಿಹಾಸದ ತತ್ವ ನಿಯಮದಂತೆ ಬದಲಾವಣೆಯಾಗುತ್ತದೆ ಹಾಗೂ ಇದನ್ನು ಒಬ್ಬ ಇತಿಹಾಸಕಾರನು ಇನ್ನೊಬ್ಬ ಇತಿಹಾಸಕಾರನಿಂದ ಭಿನ್ನವಾದ ಅಭಿಪ್ರಾಯಕ್ಕೆ ಒಳಗಾಗುತ್ತದೆ. ಉದಾ: ಭಾರತದಂಥಹ ರಾಷ್ಟ್ರಗಳು, ತಮ್ಮ ಸಾಮ್ರಾಜ್ಯಶಾಹಿ ರಾಷ್ಟ್ರಗಳ ನಿಯಂತ್ರಣದಿಂದ ಸ್ವಾತಂತ್ರ್ಯ ಹೊಂದಿದ ನಂತರ ಇವರ ದೇಶದ ಇತಿಹಾಸವನ್ನು ಸಂಪೂರ್ಣವಾಗಿ ತಾವೇ ಪುನಃ ರಚನೆ ಮಾಡಬೇಕೆನ್ನುತ್ತಾರೆ. ಈ ಕಾರ್ಯವು ತುಂಬಾ ಸೂಕ್ಷ್ಮವಾದ ವಿಷಯವಾಗಿದ್ದು ಭಾವನೆಗಳು ಇಲ್ಲಿ ಪ್ರಧಾನ ಕಾರ್ಯವನ್ನು ವಹಿಸಬಹುದಲ್ಲದೇ, ಸ್ವಾನುಭವ ದೃಷ್ಟಿಕೋನವು ಇಲ್ಲಿ ಮೆರೆಯಬಹುದು. ಹೀಗಾಗಿ ರಾಷ್ಟ್ರೀಯವಾದಿ ಇತಿಹಾಸಕಾರರಾದ ಗ್ರೀನ್, ಫ್ರೀಮನ್, ಸೇಲೆ ಮುಂತಾದವರು ಇತಿಹಾಸವು ಬೇರು ಮತ್ತು ರಾಜಕೀಯ ಹಣ್ಣು ಮತ್ತು ಎಲ್ಲಾ ಇತಿಹಾಸವೂ ಗತಿಸದ ರಾಜಕೀಯವೆನ್ನುತ್ತಾರೆ. ಕ್ರಿ.ಶ.19ನೇ ಶತಮಾನದಲ್ಲಿ ಯಾವುದೇ ವಿಷಯದ ವಿಭಾಗವನ್ನು ವೈಜ್ಞಾನಿಕ ವಿಷಯವೆನ್ನುವ ಸಂಪ್ರದಾಯವನ್ನು ಕಾಣುತ್ತೇವೆ. ಇದನ್ನು ಆದರಿಸಿ ಬ್ಯೂರಿ ಎಂಬುವನು ಇತಿಹಾಸವು ಒಂದು ವಿಜ್ಞಾನ, ಹೆಚ್ಚೂ ಇಲ್ಲ, ಕಡಿಮೆಯೂ ಇಲ್ಲ ಎನ್ನುವಷ್ಟರ ಮಟ್ಟಿಗೆ ಅಭಿಪ್ರಾಯ ಪಟ್ಟಿದ್ದಾನೆ ಕಾರ್ಲ್‌ಮಾರ್ಕ್ಸ್ ತನ್ನ ಆರ್ಥಿಕ ನಿರ್ಣಯವಾದದ ಹಿನ್ನೆಲೆಯಲ್ಲಿ ಇತಿಹಾಸಕ್ಕೆ ಹೊಸ ಆಯಾಮವನ್ನು ನೀಡಿ ಘಟನೆಗಳಿಗೆ ಇದೇ ರೀತಿ ಹುರುಪನ್ನು ನೀಡುತ್ತಾನೆ. ಇದರಿಂದಾಗಿ ಇತಿಹಾಸಕಾರನ ನೋಟವು ಅವನ ಇತಿಹಾಸ ಬರವಣಿಗೆಯ ಮೇಲೆ ಪ್ರಭಾವ ಬೀರಿದೆ.

ಇತ್ತೀಚಿನ ವಿದ್ವಾಂಸರ ಪ್ರಕಾರ ಗತಕಾಲದ ಇತಿಹಾಸದ ವ್ಯಾಖ್ಯಾನವು ಭವಿಷ್ಯವನ್ನು ರೂಪಿಸಲು ಇತಿಹಾಸವನ್ನು ಉಪಯೋಗಿಸಲಾಗುವುದೆನ್ನುತ್ತಾರೆ. ಇದಲ್ಲದೇ ಇತಿಹಾಸವು ಗತಕಾಲದ ಇತಿಹಾಸದ ನಿರೂಪಣೆಯು ಬಲಿಷ್ಠರನ್ನು ಎದುರಿಸಲು ಶಕ್ತಿ ನೀಡುವುದೆಂಬುದನ್ನು ಇವರು ತಿಳಿಸುತ್ತರೆ. ಇಲ್ಲಿ ಇತಿಹಾಸದ ಪ್ರಮುಖ ಕಾರ್ಯವು ಇತಿಹಾಸದ ವಿವರಣೆ ನೀಡುವುದೇ ಆಗಿದೆ ಇತಿಹಾಸವು ಕಾಲ ಮತ್ತು ಪ್ರದೇಶಗಳಲ್ಲಿ

ಆದಂತಹ ಘಟನೆಗಳ ವಿವರ ಆಗದೆ ಇತಿಹಾಸವು ಲೌಕಿಕವೂ ಮತ್ತು ಭೌತಿಕವೂ ಆಗಿದೆಯೇ ಹೊರತು ಆಧ್ಯಾತ್ಮಿಕವು ಅಲ್ಲ ಅಥವಾ ಪ್ರತ್ಯಕ್ಷತೀತ್ವ ಆಗಿಲ್ಲ. ಇತಿಹಾಸದ ಘಟನೆಗಳು ಅವನ ಅನುಭವಗಳ ದಾಖಲೆಗಳಾಗಿದ್ದು ಪ್ರಪಂಚದಲ್ಲಿ ಮಾನವನ ಸುತ್ತಾ ಘಟಿಸಿದ ಘಟನೆಗಳು ಮಾನವನ ಚಟುವಟಿಕೆಗಳ ಚಿತ್ರಣವಾಗಿದೆ. ಇತಿಹಾಸದ ಚಟುವಟಿಕೆಗಳ ಹಿಂದಿನ ಘಟನೆಗಳ ಮೇಲೆ ಅವುಗಳ ಪ್ರಭಾವವನ್ನು ಸಹ ಸೂಚಿಸುತ್ತವೆ. ಯಾವುದೇ ಒಬ್ಬ ವ್ಯಕ್ತಿಯ ಖಾಸಗಿ ಚಟುವಟಿಕೆಯು ಇತಿಹಾಸವಾಗದೇ ಅದು ಸಾರ್ವಜನಿಕ ಕ್ಷೇತ್ರದ ಮೇಲೆ ಪ್ರಭಾವಿತವಾಗುವುದಾದರೆ ಅಂತಹ ಕ್ರಿಯೆಯು ಇತಿಹಾಸವೆನಿಸುತ್ತದೆ. ಇದರಿಂದಾಗಿ ಇತಿಹಾಸವು ಮಾನವನ ಜೀವನ ಹಾಗೂ ಅವನ ಕಾರ್ಯ ಚಟುವಟಿಕೆಗಳನ್ನು ಒಳಗೊಂಡ ಕ್ರಿಯೆಯಾಗಿದೆಯೆನ್ನಬಹುದು.

ಇತಿಹಾಸವು ಗತಕಾಲವನ್ನು ನಿರೂಪಿಸುವುದಾಗಿದ್ದು ಮುಂದಿನ ಭವಿಷ್ಯವನ್ನು ಹೇಳುವುದಿಲ್ಲ. ಆದ್ದರಿಂದ ಭವಿಷ್ಯವನ್ನು ನುಡಿಯುವುದು ಇತಿಹಾಸದ ಅಚ್ಚುಕಟ್ಟಿನಿಂದ ದೂರವಾಗಿದೆ. ಗತಕಾಲದ ಘಟನೆಗಳನ್ನು ಹಾಗೂ ಜೀವಿಸಿದ್ದ ಎಲ್ಲಾ ಜನರ ಬಗ್ಗೆಯೂ ತಿಳಿಸುವುದಿಲ್ಲ. ಕೇವಲ ಪ್ರಮುಖ ವ್ಯಕ್ತಿಗಳು ಮತ್ತು ಪ್ರಮುಖ ಘಟನೆಗಳು ಇತಿಹಾಸಕಾರರನ್ನು ಅವಲಂಬಿಸುತ್ತವೆ. ಅವನ್ನು ಉತ್ತಮ ಆಯ್ಕೆದಾರನಾಗಿದ್ದು ಯಾವುದು ಪ್ರಸ್ತುತ ಮತ್ತು ಸತ್ಯವಾದದ್ದು ಎಂಬುದನ್ನು ಎಚ್ಚರಿಕೆಯಿಂದ ಆಯ್ದುಕೊಳ್ಳುವನು. ಇವರು ಯಾವುದು ಸಾಧ್ಯ ಮತ್ತು ಉಪಯುಕ್ತ ಎಂಬುದನ್ನು ಯೋಚಿಸುವನು. ಯಾವುದನ್ನು ಆಯ್ಕೆ ಮಾಡುವುದೆಂಬುದನ್ನು ಅರಿತುಕೊಂಡು ಇತಿಹಾಸಕಾರನು ಸಮಸ್ಯೆಯ ಆಳವನ್ನು ಹಾಗೂ ಅದರ ಮೂಲವನ್ನು ಆಮೂಲಾಗ್ರವಾಗಿ ಶೋಧಿಸುವನು. ಇವನು ಸಮಸ್ಯೆಯ ಮೂರು ಪ್ರಶ್ನೆಗಳಾದ 'ಏನು ಹೇಗೆ' ಮತ್ತು ಎಂಬುದನ್ನು ಎದುರಿಸುತ್ತಾನೆ. ಇತಿಹಾಸವನ್ನು ಬಹಳ ಪ್ರಮುಖವಾಗಿ ಕಾಲವನ್ನೂ ಪ್ರಕೃತಿ ಮತ್ತು ಸಮಸ್ಯೆಯ ವಿಸ್ತರಣೆಯ ಬಗ್ಗೆ ಯೋಚಿಸುತ್ತನೆ. ಈ ನಿರೂಪಣೆಯಲ್ಲಿ ಇತಿಹಾಸಕಾರನು ಸತ್ಯಾಸತ್ಯತೆ ಮತ್ತು ಅವುಗಳ ನಿಖರ ಕಾರಣಗಳನ್ನು ತಿಳಿದುಕೊಂಡು ಪೂರ್ಣವೂ ಮತ್ತು ವಿಸ್ತೃತರೂ ಆದಂತಹ ಇತಿಹಾಸವನ್ನು ಬರೆಯುವನು.

ಇತಿಹಾಸವು ನಿಂತ ನೀರಿನಂತಿರದೇ ಚಲನಾತ್ಮಕವಾಗಿದ್ದು ಕಾಲದ ಜೊತೆಗೆ ಸಾಗುತ್ತದೆ. ಈ ಕಾಲದ ಚಲನೆಯು ವಿವಿಧ ಕಾಲದಲ್ಲಾದ ವಿವಿಧ ಸಂಸ್ಕೃತಿಯನ್ನು ತಿಳಿಸುತ್ತದೆ. ಕೆಲವರು ಇತಿಹಾಸವು ಸುರುಳಿಯಾಕಾರ–ವಾಗಿದೆಯೆಂದೂ, ಮತ್ತೆ ಕೆಲವರ ಇತಿಹಾಸವು ಸಮಾನ ರೇಖೆಯಲ್ಲಿ ನಡೆಯುತ್ತಾದೆಂದೂ, ಇನ್ನೂ ಕೆಲವರು ಇದೊಂದು ಪ್ರಗತಿ ಅಥವಾ ಅಭಿವೃದ್ಧಿಯತ್ತ ಸಾಗುವ ಚಲನೆಯೆಂದೂ ತಿಳಿಸುತ್ತಾರೆ. ಪ್ರಗತಿಯು ವಿಕಾಸವಾದಕ್ಕೆ ಸಂಬಂಧಿಸಿದ್ದಾಗಿದೆ. ಈ ಪ್ರಗತಿಯ ಬಗ್ಗೆ ಮತ್ತು ವಿಕಾಸಲಾದದ ಬಗ್ಗೆ ವೀಕೋ, ಡಾರ್ವಿನ್, ಕಾಮ್ಟೆ, ನಂಬಿಕೆಯಿಟ್ಟಿದ್ದು ನೆಪೋಲಿಯನ್ ಮತ್ತು ಬಿಸ್ಮಾರ್ಕ್‌ರ ಸಾಮಾನ್ಯ ನಿರ್ಧಾರಗಳು ಮಾನವನ ನಡವಳಿಕೆಗಳ ಮೇಲೆ ನಿಂತಿರುತ್ತದೆಂದು ತಿಳಿಸುತ್ತಾರೆ.

ಹೀಗೆ ಇತಿಹಾಸದ ಸ್ವರೂಪ ಸಂಕೀರ್ಣತೆಯಿಂದ ಕೂಡಿದೆಯೆಂದು ಹೇಳಬಹುದು. ಇದು ಹಲವಾರು ವಿವರಣೆಗಳನ್ನು ನೀಡುತ್ತದೆ. ಇತಿಹಾಸದಲ್ಲಿ ಒಂದು ವಿಷಯವು ಮಾತ್ರ ಸೇರಿರುವುದಿಲ್ಲ. ಏಕೆಂದರೆ

ಇತಿಹಾಸವು ವರ್ತಮಾನ ಮತ್ತು ಭೂತಕಾಲದ ನಡುವಿನ ನಿರಂತರ ಸಂಭಾಷಣೆಯಂತಿರುತ್ತದೆ. ಇದು ಮನುಷ್ಯನ ಆಸಕ್ತಿಯಂತೆ ಕಾಲಕಾಲಕ್ಕೆ ತಕ್ಕಂತೆ ಇತಿಹಾಸದ ಸ್ವರೂಪದ ಬದಲಾವಣೆಯಾಗುತ್ತಿರುತ್ತದೆ. ಇತಿಹಾಸಕಾರ ನೇಮಿಯರ್ ಇತಿಹಾಸದ ಸ್ವರೂಪವನ್ನು ಹೀಗೆ ಬಣ್ಣಿಸಿದ್ದಾರೆ. "ಇತಿಹಾಸಕಾರನ ಕಾರ್ಯಗಳು ಒಬ್ಬ ಛಾಯಾಚಿತ್ರ ತೆಗೆಯುವ ಕ್ಯಾಮರದಂತಿರದೇ ವರ್ಣಚಿತ್ರಕಾರನ ಕಾರ್ಯದ ರೀತಿಯಂತಿರುತ್ತದೆ. ಅಂದರೆ ತಾನು ಕಾಣುವುದನ್ನು ತನ್ನ ಕಣ್ಣಿಗೆ ಅಂದವಾಗಿ ಕಾಣುವಂತೆ ಚಿತ್ರಿಸಿ". ತನ್ನ ಚಿತ್ರವು ಎಲ್ಲಾ ಕೋನಗಳನ್ನು ಸ್ಪಷ್ಟವಾಗಿ ಕಾಣುವಂತೆ ಮಾಡುವುದು ಇವನ ಕಾರ್ಯ, ಆದ್ದರಿಂದ ಇತಿಹಾಸವು ಅವಶ್ಯಕವಾಗಿ ವಸ್ತುನಿಷ್ಟವೂ ಹಾಗೂ ವ್ಯಕ್ತಿಗತವೂ ಆಗಿದೆ" ಎನ್ನುತ್ತಾರೆ. ಇತಿಹಾಸ ಪುನರಾವರ್ತನೆಯಾಗುತ್ತದೆಂಬುದು ತಪ್ಪು ಅಭಿಪ್ರಾಯ ಕಾರಣ ಇತಿಹಾಸದ ದಾಖಲೆಗಳು ಒಂದೇ ತೆರವಾಗಿರುವುದಿಲ್ಲ, ಒಂದೊಂದು ಘಟನೆಯು ಪ್ರಾಮುಖ್ಯವೂ ಆಗಿದ್ದು ಒಂದೇ ಘಟನೆಗಳು ಬೇರೆ ಬೇರೆ ಕಾಲದಲ್ಲಿ ನಡೆದು ಇವುಗಳು ಒಂದೇ ತೆರವಾಗಿರುವುದಿಲ್ಲ. ಒಂದೇ ರೀತಿಯ ಇತಿಹಾಸದ ದೃಷ್ಟಾಂತಗಳು ಉದ್ಭವಿಸಬಹುದು. ಉದಾ: ಕ್ರಾಂತಿಗಳು, ಸುಧಾರಣೆಗಳು, ವಸಾಹತು ನಿರ್ಮಾಣ, ನಿರಂಕುಶ ಪ್ರಭುತ್ವ, ರಾಜಕೀಯ ಕ್ಷಿಪ್ರತೆ, ಸಾಮಾಜಿಕ ಬದಲಾವಣೆ ಮತ್ತು ಆರ್ಥಿಕ ಬದಲಾವಣೆ ಇವುಗಳು ಇದ್ದರೂ ಒಂದೇ ತೆರವಾಗಿರುವುದಿಲ್ಲ. ಟ್ರೈವೆಲ್ಯಾನ್‌ರವರ ಪ್ರಕಾರ ಇತಿಹಾಸವು ಪುನರಾವರ್ತನೆಯಾಗುತ್ತದೆ. ಇತಿಹಾಸವು ಪುನರಾವರ್ತನೆಯಾಗುವುದಿಲ್ಲ ಎಂಬ ಮಾತು ಸಮಾನ ಸತ್ಯವಾಗಿದೆ. ಏಕೆಂದರೆ ಇತಿಹಾಸದಲ್ಲಿ ನಡೆದ ರಾಜಕೀಯ ಅಥವಾ ಸಾಮಾಜಿಕ ಕ್ರಾಂತಿಗಳ ನಂತರ ಮಿಲಿಟರಿ ಆಡಳಿತ ಎಲ್ಲಾ ಕಡೆಯೂ ಸಂಭವಿಸಲಿಲ್ಲ. ಉದಾ: ಜಾರ್ಜ್‌ವಾಷಿಂಗ್‌ಟನ್ನನು ಮಿಲಿಟರಿ ಪ್ರಭುತ್ವವಾದಿಯಾಗಿರಲಿಲ್ಲ. ಹೀಗೆ ಇತಿಹಾಸದ ಸ್ವರೂಪವು ವೈವಿಧ್ಯತೆಯಿಂದ ಕೂಡಿರುವುದನ್ನು ನಾವು ಕಾಣುತ್ತೇವೆ.

## 1.6 ಇತಿಹಾಸದ ಪ್ರಾಮುಖ್ಯತೆ

### 1.6.1 ಇತಿಹಾಸವು ಸ್ಫೂರ್ತಿಯನ್ನು ತುಂಬುತ್ತದೆ

ಕಾರ್ಯಕ್ಕೆ ಸ್ಫೂರ್ತಿಯನ್ನು ತುಂಬುವುದೇ/ಒದಗಿಸುವುದೇ ಇತಿಹಾಸದ ಮುಖ್ಯ ಕೆಲಸ. ಮಹಾಪುರುಷರ ಕಾರ್ಯಗಳು ನಂತರದ ತಲೆಮಾರುಗಳಿಗೆ, ಸ್ಫೂರ್ತಿಯ ಒಂದು ಮೂಲವಗಿ ಕೆಲಸ ಮಾಡಿದವು. ಓರ್ವ ತರುಣ ಗ್ರೀಕ್‌ನು ಹರ್‌ಕ್ಯೂಲಸ್‌ನ ಮಹಾಕಾರ್ಯಗಳಿಂದ, ಸ್ಫೂರ್ತಿ ಪಡೆದನು. ಮಹಾಭಾರತ ಮತ್ತು ರಾಮಾಯಾಣದ ಕಥೆಗಳು, ಅನೇಕ ತರುಣರಿಗೆ, ನಾಯಕರನ್ನನುಕರಿಸಲು ಪ್ರೋತ್ಸಾಹಿಸಿದವು. ಇತಿಹಾಸವು ನಮಗೆ ಸ್ಫೂರ್ತಿಯನ್ನು ನೀಡುವುದಾದರೆ, ಅದು ನಾಯಕರ ಸತ್ಯ ವರದಿಯನ್ನು ಒದಗಿಸಬೇಕು. ಸತ್ಯವಾಗಿ ವರದಿಯು ಮಹಾಪುರುಷರ ಮಹಾನ್ ಕಾರ್ಯಗಳ ಜೊತೆಜೊತೆಗೂ ನಡೆದ ತಪ್ಪುಗಳು, ವಿಫಲತೆಗಳು, ದೌರ್ಬಲ್ಯಗಳು ಮತ್ತು ಅಪರಾಧಗಳನ್ನು ಸಹ ತೆರೆದಿಡಬೇಕು.

### 1.6.2 ಇತಿಹಾಸವು ಗತಕಾಲವನ್ನು ಕಾಯ್ದಿಡುತ್ತದೆ

ಇತಿಹಾಸವು ಗತಕಾಲವನ್ನು ಕಾಯ್ದಿಡುತ್ತದೆ. ಮತ್ತು ಸಮಾಜವು ಸದಾ, ಗತಕಾಲದ ಜ್ಞಾನವನ್ನರಸುತ್ತಾ ಸಾಗುತ್ತದೆ. ಗತಕಲದ ಜ್ಞಾನವು, ಭವಿಷ್ಯದ ಬಗ್ಗೆ ನ್ಯಾಯಬದ್ಧ/ಸರಿಯಾದ ತೀರ್ಮಾನಗಳನ್ನು ಕೈಗೊಳ್ಳಲು ಉಪಯೋಗಕರವಾಗಿದೆ. ರಾಷ್ಟ್ರಗಳ ಸಂಘದ ವಿಫಲತೆಗಳು, ವಿಶ್ವಸಂಸ್ಥೆಯನ್ನು ಸ್ಥಾಪಿಸಲು ಯೋಜಿಸಿದವರಿಗೆ ಒಳ್ಳೆಯ ಅನುಭವವನ್ನು ತಂದುಕೊಟ್ಟವು.

### 1.6.3 ಇತಿಹಾಸ ಮತ್ತು ರಾಷ್ಟ್ರೀಯ ಭಾವನೆ

ರಾಷ್ಟ್ರ ರಾಜ್ಯಗಳ ಉದಯದೊಂದಿಗೆ, ಇತಿಹಾಸವು ಪ್ರಾಮುಖ್ಯತೆಯನ್ನು ಪಡೆಯಿತು. ತಿಳಿದೋ ಅಥವಾ ತಿಳಿಯದೆಯೋ ಪ್ರತಿ ರಾಷ್ಟ್ರದ ಇತಿಹಾಸವು ಅದರ ನಿವಾಸಿಗಳಲ್ಲಿ, ರಾಷ್ಟ್ರೀಯ ಭಾವನೆಯನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ. ಅದಕ್ಕಾಗಿಯೇ ಇತಿಹಾಸವನ್ನು ಮರೆಯುವ ರಾಷ್ಟ್ರಕ್ಕೆ ಭವಿಷ್ಯವಿರುವುದಿಲ್ಲವೆಂದು ಹೇಳಲಾಗಿದೆ. ರಾಷ್ಟ್ರರಾಜ್ಯಗಳಲ್ಲಿಯೂ, ಜನರ ಪ್ರತಿಗುಂಪೂ, ತನ್ನ ಇತಿಹಾಸವನ್ನು ಹೊಂದಿರುತ್ತದೆ. ಇಂದು ಜನಾಂಗೀಯ ಇತಿಹಾಸವು ಗುಂಪಿನ ವಿಶ್ಲೇಷಣೆಯ ಪ್ರತಿಫಲವಾಗಿದೆ.

### 1.6.4 ಇತಿಹಾಸ ಮತ್ತು ಅನನ್ಯತೆ

ವ್ಯಕ್ತಿಯೋರ್ವನಿಗೆ ನೆನಪು ಮೂಡುವಂತೆ, ಇತಿಹಾಸವು ನಮಗೆ ಒಂದು ಅನನ್ಯತೆಯನ್ನು ಒದಗಿಸುತ್ತದೆ. ಇದು ಖಂಡಿತವಾಗಿಯೂ ಒಂದು ಚಮತ್ಕಾರದಂತೆಯೇ ಸತ್ಯವಾದುದು. ಅನೇಕ ಗುಂಪುಗಳು, ಅವುಗಳ ಸಾಮೂಹಿಕ ಗುರುತುಗಳಾಗಿ, ಗತಿಸಿದ ಘಟನೆಗಳನ್ನು ಆಧಾರವಾಗಿ ವಾದ ಹೂಡುತ್ತದೆ.

### 1.6.5 ಇತಿಹಾಸವು ಮನುಷ್ಯರನ್ನು ಬುದ್ಧಿವಂತರನ್ನಾಗಿ ಮಾಡುತ್ತದೆ

ಇತಿಹಾಸವು ಮಾನವ ಅನುಭವಗಳ ಒಂದು ಉಗ್ರಾಣ. ಮಾನವ ಸಮಾಜದ ವಿಕಾಸದೊಂದಿಗೆ ಅದು ವ್ಯವಹರಿಸುತ್ತದೆ. ಮನುಷ್ಯನ ಹುಟ್ಟು, ಅಲೆಮಾರಿ ಜೀವನ, ಸ್ಥಿರಜೀವನ, ಧಾರ್ಮಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗಳು, ಯುದ್ಧಗಳು ಮತ್ತು ಶಾಂತಿ, ಕಲೆ, ಶಿಕ್ಷಣ, ತತ್ವಶಾಸ್ತ್ರ, ಇಂದಿನವರೆಗೂ ವಿಜ್ಞಾನ ಮತ್ತು ತಾಂತ್ರಿಕತೆಯ ಸಾಧನೆಗಳು. ಇವೇ ಮುಂತಾದ ಮಾನವ ಜೀವನದ ಎಲ್ಲಾ ಮುಖ್ಯ ವಿಚಾರಗಳು ಇತಿಹಾಸದಲ್ಲಿ ದಾಖಲಾಗುತ್ತದೆ. ಇತಿಹಾಸವು ಮಾನವ ಅನುಭವದ ಸಾರವನ್ನು ಸಾದರಪಡಿಸುತ್ತದೆ. ಈ ಅನುಭವವು ಮನುಷ್ಯರನ್ನು ಬುದ್ಧಿವಂತರನ್ನಾಗಿ ಮಾಡುತ್ತದೆ.

## 1.6.6 ಇತಿಹಾಸವು ಶೈಕ್ಷಣಿಕ ಮೌಲ್ಯವನ್ನು ತಿಳಿಸುವುದು

ಇತಿಹಾಸವು ಮನುಷ್ಯರನ್ನು ಗತಕಾಲದ ಬಗ್ಗೆ ಪ್ರತಿಬಿಂಬಿಸುವಂತೆ ಮಾಡುವುದರ ಮೂಲಕ ಅವರ ಮನಸ್ಸುಗಳಿಗೆ ಶಿಕ್ಷಣ ನೀಡಬಲ್ಲದು. ಅದು ಮನುಷ್ಯನ ವಿಕಾಸವಲ್ಲ. ಆದರೆ, ಗತ ಜೀವನದ ದೊಡ್ಡ ಪಾಠದ ಅವನ ಸಾಧನೆ ಮತ್ತು ಇತಿಹಾಸದ ಅತ್ಯುನ್ನತ ವಿಷಯವು ಅದೇ ಆಗಿದೆ. ಇತಿಹಾಸದ ಅಧ್ಯಯನವು ಮನಸ್ಸನ್ನು ವಿಕಸಿತಗೊಳಿಸುವುದು. ಹಿಂದೆ ಏನು ನಡೆಯಿತು, ಈಗ ಏನು ನಡೆಯುತ್ತಿದೆ. ಮತ್ತು ಬಹುಶಃ ಭವಿಷ್ಯದಲ್ಲಿ ಏನು ಸಂಭವಿಸಬಹುದು, ಎನ್ನುವುದರ ಬಗ್ಗೆ ಸರಿಯಾದ ತೀರ್ಮಾನ ಕೈಗೊಳ್ಳಲು ಅದು ಮನಸ್ಸನ್ನು ರೂಪಿಸುವುದು.

ಇತಿಹಾಸವು ಅವನು ಅಥವಾ ಅವಳು, ರಾಜಕೀಯ ಸಮಸ್ಯೆಗಳ ಸರಿಯಾದ ನಿಲುವನ್ನು ತೆಗೆದುಕೊಳ್ಳಲು ಸಮರ್ಥರಾಗುವ ಸ್ಥಿತಿಗೆ ಪೌರನ ಮನಸ್ಸನ್ನು ತರಬೇತಿಗೊಳಿಸುವುದು. ಇತಿಹಾಸವು ದೊಡ್ಡ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಇತರ ಮನುಷ್ಯರ ಬಗ್ಗೆ, ಸಹಾನುಭೂತಿ ತೋರಿಸಲು ಮನುಷ್ಯರನ್ನು ಸಮರ್ಥರನ್ನಾಗಿ ಮಾಡುವುದು.

## 1.6.7 ಸ್ವತಂತ್ರ್ಯತೆ, ಸಮಾನತೆ ಮತ್ತು ಸಹೋದರತೆಗಳ ವಿಚಾರಗಳನ್ನು ಹರಡಲು ಇತಿಹಾಸವು ಒಂದು ಮಾಧ್ಯಮದಂತೆ

ಸ್ವಾತಂತ್ರ್ಯತೆ, ಸಮಾನತೆ ಮತ್ತು ಸಹೋದರತೆಯ ವಿಚಾರಗಳನ್ನು ಹರಡುವುದರಲ್ಲಿ ಅದು ಒಂದು ಮಾಧ್ಯಮದಂತೆ, ಕೆಲಸ ಮಾಡಿತು ಎನ್ನುವ ವಿಷಯದಿಂದ ಇತಿಹಾಸದ ಮೌಲ್ಯವನ್ನು ಇನ್ನೂ ಚೆನ್ನಾಗಿ ಅರಿತುಕೊಳ್ಳಬಹುದು. ಫ್ರೆಂಚ್ ತತ್ವಜ್ಞಾನಿಗಳು ಪ್ರಾಚೀನ ಗ್ರೀಕ್ ರಾಜಕೀಯ ಜೀವನದ ಅಧ್ಯಯನದಿಂದ ಸ್ವಾತಂತ್ರ್ಯದ ಮೌಲ್ಯವನ್ನು ಅರಿತರು. ಆಧುನಿಕ ಜಗತ್ತು, ಫ್ರಾನ್ಸಿನ ಕ್ರಾಂತಿಯಿಂದ ಮತ್ತು ಅಮೇರಿಕಾದ ಸ್ವಾತಂತ್ರ್ಯ ಸಮರದಿಂದ ಸ್ವಾತಂತ್ರ್ಯತೆ, ಸಮಾನತೆ, ಮತ್ತು ಸಹೋದರತೆಗಳ ವಿಚಾರಗಳನ್ನು ಪಡೆಯಿತು. ಹೀಗೆ ಇತಿಹಾಸವು ಹೆಚ್ಚು ಪ್ರಗತಿಪರ ವಿಚಾರಗಳನ್ನು ಹರಡುವುದರಲ್ಲಿ ಒಂದು ಸಂವಹನದಂತೆ ಕೆಲಸ ಮಾಡುತ್ತದೆ. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಪರಿಣಾಮಗಳನ್ನು ಇತಿಹಾಸಕಾರರು ನಿರೀಕ್ಷಿಸುತ್ತಿದ್ದಾರೆ. ಹೀಗೆ ಇತಿಹಾಸಕಾರರ ಕೃತಿಗಳು, ಉದ್ದಗಲಕ್ಕೂ ಇರುವ, ಇಂದಿನ ಅಭಿವೃದ್ಧಿಗಳ ಬಗ್ಗೆಯೂ, ವಿಚಾರಗಳನ್ನು ಒಯ್ಯುತ್ತದೆ. ಮೇಲಿನ ಮೌಲ್ಯಗಳ ಕಾರಣದಿಂದ ಮತ್ತು ಇನ್ನೂ ಹೆಚ್ಚು ಇತರ ಮೌಲ್ಯಗಳಿಂದ ಇತಿಹಾಸವು ಯಾವಾಗಲೂ ಸರಿಯಾದುದು ಮತ್ತು ಉಪಯುಕ್ತವಾದುದು.

## 1.7 ಸಾರಾಂಶ

ಮೇಲೆ ತಿಳಿಸಿದ ಘಟಕದಲ್ಲಿ ನಾವು ಇತಿಹಾಸದ ಅರ್ಥ, ಇತಿಹಾಸದ ವ್ಯಾಖ್ಯೆಗಳು, ಇತಿಹಾಸದ ಸ್ವರೂಪ ಮತ್ತು ಇತಿಹಾಸದ ವ್ಯಾಪ್ತಿ ಇತ್ಯಾದಿ ವಿಷಯಗಳನ್ನು ಅರ್ಥ ಮಾಡಿಕೊಳ್ಳುವಂತಾಯಿತು.

## 1.8 ಪ್ರಮುಖ ಪದಗಳು

1. ಗೆಸ್ಕಿಕ್ಟ್: ಹಳೆಯ ಘಟನೆಗಳ ಬುದ್ಧಿವಂತ ಮತ್ತು ಗಮನಾರ್ಹ ನಿರೂಪಣೆಯ ಅರ್ಥ ಹೊಂದಿರುವ ಜರ್ಮನ್ ಪದ
2. ವಿಸ್ಮೃತಿ: ಜ್ಞಾಪಕ ಶಕ್ತಿ ಕಳೆದುಹೋಗುವುದು

## 1.9 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಇತಿಹಾಸದ ವ್ಯಾಖ್ಯೆಗಳನ್ನು ಕುರಿತು ಟಿಪ್ಪಣಿ ಬರೆಯಿರಿ.
2. ಇತಿಹಾಸದ ಸ್ವರೂಪ ಮತ್ತು ವ್ಯಾಪ್ತಿಯನ್ನು ವಿಮರ್ಶಿಸಿ.
3. ಇತಿಹಾಸದ ಪ್ರಾಮುಖ್ಯತೆಯನ್ನು ವಿವರಿಸಿ.

## 1.10 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 1.3 ನೋಡಿ
2. ವಿಭಾಗ 1.4 ಮತ್ತು 1.5 ನೋಡಿ
3. ವಿಭಾಗ 1.6 ನೋಡಿ

## 1.11 ಪರಾಮರ್ಶನ ಗ್ರಂಥಗಳು


1. Renier G.I - History-Its purpose and method
2. Carr E.H - What is History
3. Colling Wood R.G - The Idea of History
4. ಇತಿಹಾಸ ಸಂಶೋಧನಾ ಮಾರ್ಗ – ಡಾ.ಎ.ವಿ.ವೆಂಕಟರತ್ನಂ ಮತ್ತು ಡಾ.ಎಂ.ಬಿ.ಪದ್ಮ



**ಪಠ್ಯವನ್ನು ರಚಿಸಿದವರು:**

**ಪ್ರೊ.ಎನ್.ಸರಸ್ವತಿ**

# ಘಟಕ–2 ಇತಿಹಾಸದ ವಿಧಗಳು

**ರಚನೆ**

**2.0** ಉದ್ದೇಶಗಳು

**2.1** ಪೀಠಿಕೆ

**2.2** ವಿಧಗಳು

- **2.2.1** ರಾಜಕೀಯ ಇತಿಹಾಸ
- **2.2.2** ಆರ್ಥಿಕ ಇತಿಹಾಸ
- **2.2.3** ವಾಣಿಜ್ಯ ಇತಿಹಾಸ
- **2.2.4** ಸಾಮಾಜಿಕ ಇತಿಹಾಸ
- **2.2.5** ಬೌದ್ಧಿಕ ಇತಿಹಾಸ
- **2.2.6** ಸಾಂಸ್ಕೃತಿಕ ಇತಿಹಾಸ
- **2.2.7** ಮಾನವ ಜನಾಂಗ ಇತಿಹಾಸ

**2.3** ಸಾರಾಂಶ

**2.4** ಪ್ರಮುಖ ಪದಗಳು

**2.5** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**2.6** ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

**2.7** ಪರಾಮರ್ಶನ ಗ್ರಂಥಗಳು

## 2.0 ಉದ್ದೇಶಗಳು

ನಾವು ಮೊದಲ ಘಟಕದಲ್ಲಿ ಇತಿಹಾಸ ಅರ್ಥ, ಪ್ರಾಮುಖ್ಯತೆ, ಸ್ವರೂಪವನ್ನು ತಿಳಿದುಕೊಂಡಿದ್ದೇವೆ. ಈ ಘಟಕದ ಅಧ್ಯಾಯದಲ್ಲಿ ಇತಿಹಾಸದಲ್ಲಿ ಯಾವ ಯಾವ ಪ್ರಕಾರಗಳನ್ನು ಅಧ್ಯಯನ ನಡೆಸುತ್ತೇವೆ. ಇದರಲ್ಲಿ ರಾಜಕೀಯ ಇತಿಹಾಸ, ವಾಣಿಜ್ಯ ಇತಿಹಾಸ, ಸಾಮಾಜಿಕ, ಬೌದ್ಧಿಕ ಇತಿಹಾಸ, ಸಾಂಸ್ಕೃತಿಕ ಇತಿಹಾಸ, ಮಾನವ ಜನಾಂಗ ಇತಿಹಾಸವನ್ನು ಅಧ್ಯಯನ ಮಾಡುತ್ತೇವೆ.

## 2.1 ಪೀಠಿಕೆ

ಇತಿಹಾಸವು ಒಂದು ಸಮಗ್ರ ಅಧ್ಯಯನಶೀಲ ವಿಷಯವಾಗಿದ್ದು ಹಲವು ವಿಷಯಗಳನ್ನು ನಮಗೆ ಇದು ಪರಿಚಯಿಸುತ್ತದೆ. ಉದಾಹರಣೆಗೆ ರಾಜಕೀಯ ಇತಿಹಾಸ, ವಾಣಿಜ್ಯ ಇತಿಹಾಸ, ಸಾಮಾಜಿಕ ಇತಿಹಾಸ, ಬೌದ್ಧಿಕ ಇತಿಹಾಸ, ಸಾಂಸ್ಕೃತಿಕ ಇತಿಹಾಸ, ಮಾನವ ಜನಾಂಗ ಇತಿಹಾಸ ಮುಂತಾದವುಗಳನ್ನು ಇತಿಹಾಸವು ಹಲವು ವಿಭಾಗಗಳಾಗಿ ಸಮಗ್ರತೆಯನ್ನು ಕಾಪಾಡಿಕೊಂಡು ಅಧ್ಯಯನ ಮಾಡುತ್ತದೆ.

## 2.2 ಇತಿಹಾಸದ ವಿಧಗಳು

ಇತಿಹಾಸವು ಅತ್ಯಂತ ವ್ಯಾಪಕವಾದ ಶಾಸ್ತ್ರವಾಗಿರುವುದರಿಂದ ಸಾಕಷ್ಟು ವೈವಿಧ್ಯತೆ ಇರುವುದರಿಂದ ಅನೇಕ ಸಮಸ್ಯೆಗಳ ಪರಿಹಾರಕ್ಕಾಗಿ ಇತಿಹಾಸಕಾರರು ಮೂರು ಬಗೆಯ ಶ್ರಮ ವಿಭಜನಾ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದಾರೆ. ಇವರು ಪ್ರಾಚೀನಯುಗ, ಮಧ್ಯಯುಗ, ಆಧುನಿಕಯುಗ ಎಂದು ನಿರ್ದಿಷ್ಟವಾಗಿ ಅದರ ವಿಶಿಷ್ಟತೆಯ ಪ್ರಕಾರ ವಿಭಜಿಸಿ ಅದರ ಬಗ್ಗೆ ಆಳವಾಗಿ ಅಧ್ಯಯನ ಮಾಡುತ್ತಾರೆ; ಕಾಲ ಗಣನೆ, ಪರಿಸರ ಹಾಗೂ ಆಯ್ದ ವಾಸ್ತವಾಂಶಗಳನ್ನು ವಿಭಿನ್ನ ದೃಷ್ಟಿಯಿಂದ ವಿಶ್ಲೇಷಿಸಿ, ಉತ್ತಮ ಫಲಿತಾಂಶ ತರಲು ಪ್ರಯತ್ನಿಸುತ್ತಾರೆ. ತಮ್ಮ ದೃಷ್ಟಿಕೋನವನ್ನು ಸ್ಪಷ್ಟಪಡಿಸಬೇಕಾದರೆ ತಮ್ಮ ಬೌದ್ಧಿಕ ಸರಕುಗಳ ಸರಿಯಾದ ಮೌಲ್ಯಮಾಪನ ಮಾಡಿ ನಂತರ ತಾಂತ್ರಿಕ ನಿಲುವನ್ನು ತಳೆಯಬೇಕು. ಹೀಗೆ ಇತಿಹಾಸ ರಂಗದಲ್ಲಿ ನೂತನ ಶಾಖೆಗಳು ತಲೆ ಎತ್ತಿಕೊಂಡಿವೆ. ಹಿಂದೆ ಕ್ಷೇತ್ರ–ವಿಶೇಷಜ್ಞರಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಹಾಗೂ ಯೂರೋಪಿನ ಇತಿಹಾಸ ಎಂಬ ವಿಭಾಗಗಳನ್ನು ಮಾಡಲಾಗುತ್ತಿದ್ದಿತು. ಈಗ ಆಫ್ರಿಕಾ, ಏಷ್ಯಾ ಚರಿತ್ರೆಗಳಲ್ಲದೆ ಅನೇಕ ಪ್ರಾದೇಶಿಕ ಇತಿಹಾಸಗಳು ಬಹುಮುಖ್ಯವಾಗುತ್ತಿವೆ. ವಿಶೇಷಜ್ಞತೆಯ ಮೂರನೆಯ ಬಗೆಯಾದ ಆಯ್ದ ವಾಸ್ತವಾಂಶಗಳ ಸಂಚಯದ ಬಗ್ಗೆ ಅಳವಡಿಸಿಕೊಳ್ಳಲಾದ ದೃಷ್ಟಿಕೋನವು ಅತ್ಯಂತ ಗಮನಾರ್ಹವಾದ ಬೆಳವಣಿಗೆಯಾಗಿದೆ. ಇದರ ಪರಿಣಾಮವಾಗಿ ಇತಿಹಾಸ ಅನೇಕ ಪ್ರಧಾನ ಶಾಖೆ ಹಾಗೂ ಉಪಶಾಖೆಗಳಿಂದ ಕೂಡಿದ ಬೃಹದಾಕಾರವಾದ ಮರದಂತೆ ಕಾಣಬರುತ್ತಿದೆ. ಈ ಶಾಖೆ ಹಾಗೂ ಉಪಶಾಖೆಗಳ ವ್ಯಾಪ್ತಿ ಸಹ ಅತ್ಯಂತ ವಿಶಾಲವಾಗಿದೆ.

## 2.2.1 ರಾಜಕೀಯ ಇತಿಹಾಸ

ಇತಿಹಾಸದ ಕ್ಷೇತ್ರದಲ್ಲಿ ಹಿರಿಯತನ ಅನುಕ್ರಮದ ಒಂದೇ ಕಾರಣದಿಂದ ಮೊದಲು ಬರುವ ಪ್ರಧಾನ ಶಾಖೆ ರಾಜಕೀಯ ಇತಿಹಾಸ. ಇದು ಇತಿಹಾಸದ ಕಾರ್ಖಾನೆಯಲ್ಲಿ ಹೆಚ್ಚಿನ ಪಾಲನ್ನು ಹಕ್ಕು ಹಿಡಿದು ಕೇಳುವ ಪ್ರಧಾನ ಶಾಖೆಯಾಗಿದೆ. ರಾಜಕೀಯ ವ್ಯವಹಾರಗಲು, ಸಮಾಜದಲ್ಲಿ ಆಮೂಲಾಗ್ರವಾದ, ಚುರುಕಾದ ಹಾಗೂ ವಿಶೇಷ ಪರಿವರ್ತನೆಗಳನ್ನು ಉಂಟು ಮಾಡುವ ಮುಖ್ಯ ಚಟುವಟಿಕೆಗಳಾಗಿರುತ್ತವೆ. ಮೊದಲಿನಿಂದ ಹಿಡಿದು ಇಂದಿನವರೆಗೆ ಜೀವನ ರಂಗದ ಪ್ರತಿ ತಿರುವಿನಲ್ಲೂ ರಾಜಕೀಯ ಚಟುವಟಿಕೆಯು, ರಾಜಪ್ರಭುತ್ವ, ಶ್ರೀಮಂತ, ಅಥವ ನಿರಂಕುಶಾಧಿಕಾರ, ಅಲ್ಪಜನಾಧಿಪತ್ಯ, ಪ್ರಜಾಪ್ರಭುತ್ವ ಮುಂತಾದವುಗಳು ಮಾನವ ಸಮಾಜದ ಮೇಲೆ ಪ್ರಭಾವ ಬೀರಿವೆ. ರಾಜಕೀಯ ಇತಿಹಾಸವು ಹೆಚ್ಚಾಗಿ ರಾಜರು, ಸಂಘ ಹಾಗೂ ಯುದ್ಧಗಳ ಕಥನವಾಗಿಯೇ ಇದೆ. ರಾಜರ ಕಾರ್ಯಕಲಾಪಗಳೇ ಹೆಚ್ಚಾಗಿ ಸಾಮಾನ್ಯರ ಹಣೆಯಬರಹವನ್ನು ರೂಪಿಸಿವೆ. ಅವರ ಆಕ್ರಮಣಗಳೇ ಮುಖ್ಯವಾಗಿದ್ದ ಕಾಲಗಳಿದ್ದುವು. ದುರದೃಷ್ಟವಶಾತ್, ಇಂದೂ ಸಹ ಆಕ್ರಮಣ ನೀತಿಯು ಜಗತ್ತಿನ ಕಾರ್ಯಕಲಾಪಗಳಲ್ಲಿ ಪ್ರಮುಖ ಅಂಶವಾಗಿಯೇ ಇದೆ. ಸಮಾಜವು ಪ್ರವೀಣ ಕಥೆಗಾರರನ್ನು ಚಕ್ರಾಧಿಪತ್ಯಗಳ ಉದಯ ಹಾಗೂ ಪತನಕ್ಕೆ ಸಂಬಂಧಿಸಿದ ವಿವರಗಳನ್ನು ತಿಳಿಸುವಂತೆ ಕೇಳುತ್ತದೆ. ಕುರಿಕಾಯುವವನ ಕಥೆಯು ಆಕರ್ಷಿಸುವಂತೆ ಏಕಪ್ರಕಾರವಾದ ಕ್ರಮದಲ್ಲಿ ವರ್ತಿಸುವ ಕುರಿಮಂದೆಯ ವೃತ್ತಾಂತವು ಮನಸ್ಸನ್ನು ಸೆಳೆಯುವುದಿಲ್ಲ. ಆಧುನಿಕ ಕಾಲದಲ್ಲೂ ರಾಷ್ಟ್ರಾಧ್ಯಕ್ಷ, ಪ್ರಧಾನಮಂತ್ರಿ, ಉಪಪ್ರಧಾನಿ, ಮುಖ್ಯಮಂತ್ರಿ ಮುಂತಾದ ರಾಜಕೀಯ ಧುರೀಣರು ಎಷ್ಟರಮಟ್ಟಿಗೆ ಸುದ್ದಿಯಲ್ಲಿರುವ ವಿಷಯವಾಗಿರುತ್ತಾರೆಂಬುದು ತಿಳಿದ ವಿಷಯವೇ. ರಾಜಕೀಯ ವ್ಯವಹಾರವು ಇತಿಹಾಸದ ಪ್ರಧಾನ ಪ್ರವಾಹವಾಗಿರುತ್ತದೆ. ಇತಿಹಾಸಕಾರನು ತನ್ನ ಗಮನವನ್ನು ಇದರ ಮೇಲೆ ಕೇಂದ್ರೀಕರಿಸಬೇಕೆಂಬುದಾಗಿ ಎದುರು ನೋಡಲಾಗುತ್ತದೆ. ಚರಿತ್ರೆಯ ರಂಗದಲ್ಲಿ ಸಿಂಹಪಾಲು ಈ ಶಾಖೆಗೆ ಸಲ್ಲುತ್ತದೆ. ಆದ್ದರಿಂದಲೇ ಆಕ್ಟನ್ "ರಾಜಕೀಯ ವ್ಯವಹಾರ ಎಂಬುದು ಕಾಲದ ಮರಳಿನಲ್ಲಿ ಇತಿಹಾಸ ವಾಹಿನಿಯು ತಂದು ಹಾಕಿರುವ ಬಂಗಾರದ ಕಣಗಳಾಗಿವೆ" ಎಂಬುದಾಗಿ ಹೇಳಿದ್ದಾನೆ. ಎಡ್ವರ್ಡ್ ಎ.ಫ್ರೀಮನ್ನನು "ಇತಿಹಾಸವು ಸಾಮಾನ್ಯವಾಗಿ ಗತಕಾಲದ ರಾಜಕೀಯ" ಎಂಬುದಾಗಿ ಮತ್ತು ಜಿಯೋಫ್ರೆ ಆರ್.ಎಲ್ಟನ್ನನು "ರಾಜಕೀಯ ಚರಿತ್ರೆಯು ಐತಿಹಾಸಿಕ ವಾಸ್ತವಾಂಶಗಳನ್ನು ತಕ್ಕ ಕ್ರಮದಲ್ಲಿ ಜೋಡಿಸುವುದಕ್ಕೆ ಬೇಕಾದ ಅತ್ಯುತ್ತಮ ಚೌಕಟ್ಟನ್ನು ಒದಗಿಸಿಕೊಡುತ್ತದೆ" ಎಂಬುದಾಗಿ ವರ್ಣಿಸಿದ್ದಾರೆ. ಈ.ಎನ್.ಕ್ಲಾರ್ಕ್‌ನ ಪ್ರಕಾರ, ಇಂದೂ ಸಹ ರಾಜಕೀಯ ಇತಿಹಾಸವು ಪ್ರಮುಖ ಸ್ಥಾನವನ್ನು ಅಲಂಕರಿಸಲು ಅರ್ಹವಾಗಿದೆ.

(1) ಈ ಪ್ರಧಾನ ಶಾಖೆಯಲ್ಲಿ ಹಲವಾರು ಮುಖ್ಯ ಉಪಶಾಖೆಗಳನ್ನು ನೋಡಬಹುದು. ಸರ್ಕಾರವನ್ನು ಕುರಿತು ವಿಚಾರ ಮಾಡುವ ಮತ್ತು ಎಲ್ಲಾ ಕಾಲದ ರಾಜಕೀಯ ಪ್ರವೃತ್ತಿಗಳನ್ನು ಅರಿಯಲು ಸಹಾಯ ಮಾಡುವ ಸಂವಿಧಾನಾತ್ಮಕ ಚರಿತ್ರೆಯು ರಾಜಕೀಯ ಇತಿಹಾಸದ ಒಂದು ಪ್ರಮುಖ ಉಪಶಾಖೆಯಾಗಿದೆ. ರಾಜಕೀಯ ಸಂಸ್ಥೆಗಳ ಬೆಳವಣಿಗೆ ನಿಯಮ, ನಿಯಂತ್ರಣ, ನಿಬಂಧನೆ, ಹಕ್ಕು ಬಾಧ್ಯತೆಗಳು, ಕಾನೂನು, ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗ, ಆಡಳಿತದ ಕಾರ್ಯಗಳು, ಹಣಕಾಸಿನ ಪರಿಣಾಮಗಳು, ಅಧಿಕಾರಶಾಹಿಯ ಸ್ವರೂಪ, ರಾಜನೀತಿಯ ಮೂಲಭೂತ ತತ್ವಗಳು ಮುಂತಾದ

ವಿಚಾರಗಳು ಈ ಉಪಶಾಖೆಯ ಅಧ್ಯಯನದ ವಿಷಯಗಳಾಗಿವೆ. ರಾಜ್ಯವನ್ನು ಆಳುವುದಕ್ಕಾಗಿ ವ್ಯಕ್ತಿಗಳು ಅಳವಡಿಸಿಕೊಂಡಿರುವ ವಿಧಾನ, ಸಂಪ್ರದಾಯ ಹಾಗೂ ಪದ್ಧತಿ ಸಂಚಯಗಳೇ ಸಂವಿಧಾನಗಳು. ಕೆಲವು ರಾಷ್ಟ್ರಗಳು ಕಟ್ಟುನಿಟ್ಟಾದ ಲಿಖಿತ ಸಂವಿಧಾನಗಳನ್ನು ಹೊಂದಿವೆ. ಲಿಖಿತ ಸಂವಿಧಾನ ಸಂವಿಧಾನಾತ್ಮಕ ಇತಿಹಾಸದ ಅಧ್ಯಯನ ವಸ್ತುವಿನ ಅತ್ಯಂತ ಸೂಕ್ಷ್ಮವಾದ ಭಾಗವಾಗಿದೆ.

(2) ರಾಯಭಾರದ ಇತಿಹಾಸವು ರಾಜಕೀಯ ಚರಿತ್ರೆಯ ಇನ್ನೊಂದು ವಿಶೇಷವಾದ ಉಪಶಾಖೆಯಾಗಿದೆ. ಇದು ರಾಜ್ಯ–ರಾಜ್ಯಗಳ ಸಂಬಂಧ ಹಾಗೂ ರಾಷ್ಟ್ರ–ರಾಷ್ಟ್ರಗಳ ಪರಸ್ಪರ ಸಂಬಂಧ ಕುರಿತಾದ ಚರಿತ್ರೆಯಾಗಿದೆ. ರಾಷ್ಟ್ರ–ರಾಷ್ಟ್ರಗಳ ಪರಸ್ಪರ ಸಂಬಂಧಗಳು ರಾಯಭಾರಿಗಳ ಕೈಯಲ್ಲಿರುತ್ತವೆ. ಅವರುಗಳು ರಾಷ್ಟ್ರಗಳ ನಡುವಿನ ಕೊಂಡಿಗಳಾಗಿರುತ್ತಾರೆ; ಅಂತರರಾಷ್ಟ್ರೀಯ ವ್ಯವಹಾರ ನಿರ್ವಹಿಸುವ ಅವರು ಅನೇಕ ವಾದದಲ್ಲಿ ಮಾನ್ಯರಾಗಿರುತ್ತಾರೆ. ಈ ಇತಿಹಾಸವನ್ನು ಅಂತರರಾಷ್ಟ್ರೀಯ ಇತಿಹಾಸ ಎಂಬುದಾಗಿಯೂ ಕರೆಯಲಾಗುತ್ತದೆ. ಇದು ಜಗತ್ತಿನಲ್ಲಿ ಸಂಭವಿಸುತ್ತಿರುವ ಘಟನೆಗಳ ಮೇಲೆ ಒಂದು ಕಣ್ಣಿಟ್ಟಿರಬೇಕು. ರಾಯಭಾರಿ ಕಛೇರಿಗಳಾಚೆ ಸಂಭವಿಸುವ ಘಟನೆಗಳು ರಾಜನೀತಿಜ್ಞರ ಕ್ರಿಯೆ ಹಾಗೂ ವರ್ತನೆಗಳ ಮೇಲೆ ಪ್ರಭಾವವನ್ನು ಬೀರುತ್ತವೆ. ಅವರುಗಳು ನಡೆಸುವ ಸಮಾಲೋಚನೆಗಳು ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ ಮುಂತಾದ ವಿಷಯಗಳಾಗಿರುವುದರಿಂದ ಈ ಶಾಖೆ ಇತಿಹಾಸದ ಇತರ ಶಾಖೆಗಳಿಂದ ಪ್ರತ್ಯೇಕವಾಗಿ ಇರುವುದು ಸಾಧ್ಯವಿಲ್ಲ.

(3) ಮಿಲಿಟರಿ ಇತಿಹಾಸವೂ ಸಹ ರಾಜಕೀಯ ಇತಿಹಾಸದ ಮತ್ತೊಂದು ಮುಖ್ಯವಾದ ಉಪಶಾಖೆಯಾಗಿದೆ. ಮಿಲಿಟರಿ ಯಂತ್ರಶಿಲ್ಪಿ, ಉತ್ಕ್ಷೇಪವಿದ್ಯೆ, ಸೈನಿಕ ದಳಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುವ ಹಾಗೂ ಬೀಡು ಬಿಡಿಸುವ ಕಲೆ, ಅಧಿಕಾರ ಸಮತೋಲನ, ಶೀತಲಯುದ್ಧ, ಅಂತರರಾಷ್ಟ್ರೀಯ ಶಾಂತಿ, ನಿಶ್ಶಸ್ತ್ರೀಕರಣ, ಯುದ್ಧ ನಿಷೇಧ ಮುಂತಾಗಿ ಇತ್ತೀಚೆಗೆ ಅತಿ ಮುಖ್ಯವಾಗಿರುವ ವಿಷಯಗಳು; ಸೈನ್ಯದ ಸ್ಥೈರ್ಯ ಹಾಗೂ ನೈತಿಕ ಸ್ಥಿತಿ, ತರಬೇತಿ ಇತ್ಯಾದಿ; ಯುದ್ಧದ ಕಾರಣಗಳೂ, ವ್ಯೂಹ ನಿರ್ಮಾಣ ತಂತ್ರ, ಸೈನ್ಯ ಸಂಚಾಲನೋಪಾಯ, ಆಯುಧಗಳು, ಕಾದಾಡುವ ಕ್ರಮ ಮುಂತಾದ ವಿಚಾರಗಳು ಈ ಉಪಶಾಖೆಯ ಪ್ರಧಾನ ಅಧ್ಯಯನ ವಸ್ತುಗಳಾಗಿವೆ.

ರಾಷ್ಟ್ರಗಳ ಇತಿಹಾಸ ನಾಟಕದಲ್ಲಿ ಯುದ್ಧವು ವಹಿಸಿರುವ ಪಾತ್ರವು ಗೌಣವಾದುದು, ವ್ಯಕ್ತಿಗಳ ಪ್ರಭಾವಕ್ಕೆ ಒಳಗಾಗದೆಯೇ ಮಹಾ ಘಟನೆಗಳು ಸಂಭವಿಸಿವೆ, ರಾಜ್ಯಗಳ ಪರಮಾಧಿಕಾರಗಳು ಹಾಗೂ ಸೇನಾಧಿಕಾರಿಗಳು ಅಷ್ಟೇನೂ ಮುಖ್ಯರಲ್ಲ, ಅವರ ಕಾದಾಟಗಳಿಂದ ಯಾವ ರೀತಿಯಲ್ಲೂ ಕದಡಿಹೋಗದೆ ಇತಿಹಾಸದ ಹೊನಲು ಹರಿದು ಮುಂದೆ ಸಾಗಿ ಹೋಗುತ್ತದೆ ಎಂಬುದಾಗಿ ಜಾನ್ ರಿಚರ್ಡ್ ಗ್ರೀನ್ ಅವರು ಅಭಿಪ್ರಾಯ ಪಡುತ್ತಾರೆ. ಇದರಲ್ಲಿ ಹುರುಳಿಲ್ಲವೆಂಬುದು ಸ್ಪಷ್ಟ. ಪರ್ಷಿಯಾ ದೇಶದವರು ಗ್ರೀಸ್ ನಾಡನ್ನು ಆಕ್ರಮಿಸಿಕೊಂಡಿದ್ದಿದ್ದರೆ, ಹ್ಯಾನಿಬಾಲ್ ರೋಮ್ ನಗರವನ್ನು ವಶಪಡಿಸಿಕೊಂಡಿದ್ದಿದ್ದರೆ, ಜೂಲಿಯಸ್ ಸೀಸರನು ರೋಮ್ ನಗರದ ಮೇಲೆ ದಾಳಿ ಮಾಡಬೇಕೆಂದು ನಿಶ್ಚಯಿಸದೇ ಇದ್ದಿದ್ದರೆ, ರೂಬಿಕನ್ ನದಿಯನ್ನು ದಾಟದೆ ಇದ್ದಿದ್ದರೆ, ಮಹಮ್ಮದ್ ಘೋರಿಯು ತರೇನ್ ರಣರಂಗದಲ್ಲಿ ಅಪಜಯದ ಕಹಿಯನ್ನು

ಉಂಡಿದ್ದರೆ, ನೆಪೋಲಿಯನ್ನನು ಟೌಲಾನಿನಲ್ಲಿ ಕೊಲೆಯಾಗಿ ಹೋಗಿದ್ದಿದ್ದರೆ, ಹಿಟ್ಲರನು ಡನ್‌ಕಿರ್ಕ್‌ನಲ್ಲಿ ತಂಗದೆ ಡೌವರನ್ನು ತಲುಪಿದ್ದಿದ್ದರೆ, 1857 ಭಾರತದ ಕ್ರಾಂತಿ ಸತ್‌ಫಲ ಕೊಟ್ಟಿದ್ದಿದ್ದರೆ ಜಗತ್ತಿನ ಇತಿಹಾಸವು ಬೇರೆಯಾಗುತ್ತಿರಲಿಲ್ಲವೆ? ವಿಪ್ಲವಕಾರಿ ಸಂಭವಗಳ ಹಾಗೂ ಇತಿಹಾಸವನ್ನೇ ಬದಲಾಯಿಸುವಂತಹ ಅನಿರೀಕ್ಷಿತ ಘಟನೆಗಳ ಪಟ್ಟಿಯು ತುದಿ ಮೊದಲಿಲ್ಲದಂತಹುದು. ಇತಿಹಾಸದ ಓಟದಲ್ಲಿ ಹಠಾತ್ತಾದ, ಅತಿ ತೀವ್ರವಾದ ಪರಿವರ್ತನೆಗಳನ್ನು ಉಂಟು ಮಾಡಿದಂತಹ ಅಂಶಗಳಲ್ಲಿ ಯುದ್ಧದ ಸಂಗತಿಗಳು ದಿಢೀರನೆ ಸಂಭವಿಸುವ ವಿಷಯಗಳಲ್ಲ. ಕದನಗಳಲ್ಲಿ ಉಂಟಾದ ಜಯಾಪಜಯಗಳಿಗೆ ಮಿಂಚಿನಂತೆ ಥಟ್ಟನೆ ಹೊಳೆದ, ಸಮಯೋಚಿತ ಸ್ಫೂರ್ತಿಯೇ ಕಾರಣ ಎಮದು ಹೇಳುವುದು ಭಾವೋದ್ರೇಕಕಾರಿಯಾದ ವಾಡಿಕೆಯಾಗಿದೆ. ವಾಸ್ತವದಲ್ಲಿ ಅವುಗಳು ವಿಜಯಲಕ್ಷ್ಮಿಯ ಕೃಪೆಗೆ ಪಾತ್ರವಾದ ಪಕ್ಷವು ಬೆಳೆಸಿಕೊಂಡ ನೂತನ ಪರಿಣಾಮಕಾರಿ ಸೈನಿಕ ತಂತ್ರ, ಅಪಜಯ ಹಾಗೂ ಅಪಮಾನಕ್ಕೆ ತುತ್ತಾದ ಪಕ್ಷದ ಸೈನ್ಯ ಪದ್ಧತಿಯಲ್ಲಿ ಉದಾಸೀನತೆಯ ಕಾರಣ ತಡೆಗಟ್ಟದೇ ಹೋದ ಅವ್ಯವಸ್ಥೆ, ಅದರ ಫಲವಾಗಿ ಉಂಟಾದ ಶೈಥಿಲ್ಯ ಬಹುಕಾಲದಿಂದಲೇ ನೆಡಲಾಗಿದ್ದ ಬೀಜಗಳ ಪರಿಣಾಮವಾಗಿರುತ್ತವೆ.

ಈ ಉಪಶಾಖೆಗೆ ಸಂಬಂಧಪಟ್ಟಂತೆ ಇನ್ನೊಂದು ಅಂಶವೂ ಬಹು ಗಮನಾರ್ಹವಾಗಿದೆ. ಈ ಕ್ಷೇತ್ರದಂತೆ ಮತ್ತ್ಯಾವ ರಂಗದಲ್ಲೂ ಸತ್ಯಾನ್ವೇಷಣೆಯ ಕಾರ್ಯವು ಇಷ್ಟೊಂದು ಕಷ್ಟಕರವಾಗಿಲ್ಲ. ಮಿಲಿಟರಿ ಇತಿಹಾಸಕ್ಕೆ ಸಂಬಂಧಿಸಿರುವ ಕೃತಿಗಳ ಬರಹಗಳಿಗೂ ಹಾಗೂ ಐತಿಹಾಸಿಕ ಸತ್ಯಕ್ಕೂ ನಡುವೆ ಬಹು ಆಳವಾದ ಕಂದಕಗಳಿರುತ್ತವೆ, ಧ್ರುವಗಳ ಅಂತರವಿರುತ್ತದೆ, ಅಧಿಕೃತ ಕಾಗದ ಪತ್ರಗಳಲ್ಲಿ ಅನೇಕ ಖಾಲಿ ಸ್ಥಳಗಳಿರುತ್ತವೆ. ಇದರಿಂದ ಸೇನಾಧಿಕಾರಿಗಳ ವರ್ತನೆಯನ್ನು ಖಂಡಿಸಿದಂತಹ ಆ ಮೂಲಕ ಅವರ ಕೀರ್ತಿಗೆ ಹಾನಿಯನ್ನು ಉಂಟುಮಾಡಬಹುದಾದಂತಹ ವಿವರಣೆಗಳನ್ನು ಅಳಿಸಿಹಾಕಲಾಗಿದೆ. ದಾಖಲೆಗಳನ್ನು ನಾಶಪಡಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಆ ಯಥಾರ್ಥವಾಗಿದ್ದ ದಾಖಲೆಗಳ ಬದಲಿಗೆ ಸೃಷ್ಟಿಸಲಾಗಿರುವ ಸುಳ್ಳು ದಸ್ತಾವೈಜನ್ನು ಕಂಡುಹಿಡಿಯುವುದು ಕಷ್ಟವಾಗುತ್ತದೆ. ವಾಚಕರನ್ನು ವಂಚಿಸುವುದಕ್ಕಾಗಿ ಅಥವಾ ಸತ್ಯಾಂಶಗಳನ್ನು ಮುಚ್ಚಿಡುವುದಕ್ಕಾಗಿ ಅನೇಕ ದಾಖಲೆಗಳನ್ನು ಬರೆದಿಡಲಾಗಿದೆ. ಒಬ್ಬ ಸೇನಾಧಿಕಾರಿಯು ತನ್ನ ಹಾಗೂ ತನ್ನಪಡೆಯ ಕೀರ್ತಿಯನ್ನು ಗಮನದಲ್ಲಿಟ್ಟುಕೊಂಡು ಅಸ್ತಿತ್ವದಲ್ಲಿ ಇಲ್ಲದೇ ಇದ್ದಂತಹ ಯುದ್ಧ ಸನ್ನಿವೇಶದ ಬಗ್ಗೆ ವಿವರಿಸಿ ನಡೆಯದೇ ಇದ್ದ ಕಾದಾಟದಲ್ಲಿ ತನ್ನ ಪಡೆಯ ಕಾರ್ಯಸಾಧನೆ ಅಸಮಾನವಾಗಿದ್ದಿತು ಎಂಬುದಾಗಿ ದಾಖಲು ಮಾಡಬಹುದು. ಅವನು ತನ್ನ ತಿಳಿವಳಿಕೆಯ ಪ್ರಕಾರ ತಾನು ಪ್ರಾಮಾಣಿಕನಾಗಿರುವುದಾಗಿ ಎಣಿಸಬಹುದು. ಆದರೆ ಅವನ ಅರಿವಿನ ಬೆಳಕು ಅತ್ಯಂತ ಮಂಕಾಗಿರುತ್ತದೆ. ಸೇನಾ ಇಲಾಖೆಯ ಬಗ್ಗೆ ಇರುವ ಕುರುಡು ನಿಷ್ಠೆಯ ಕಾರಣ ಅವನು ಎಷ್ಟೋ ಸತ್ಯಾಂಶಗಳನ್ನು ಕಂಡರೂ ಕಾಣದಂತೆ ಇದ್ದು, ಸತ್ಯಕ್ಕೆ ದೂರವಾಗಿರುವ ವಿವರಗಳನ್ನು ಬರೆದಿಡಬಹುದು. ಯುದ್ಧ ರಂಗಭೂಮಿಯ ದೃಶ್ಯಗಳ ಹಿಂದ ನಡೆದ ಎಷ್ಟೋ ನಿರ್ಧಾರಕ ಅಂಶಗಳ ಹಾಗೂ ಘಟನೆಗಳ ಬಗ್ಗೆ ದಾಖಲೆಗಳಲ್ಲಿ ಎಲ್ಲೂ ಉಲ್ಲೇಖವಿರುವುದಿಲ್ಲ. ಬೇಕು ಬೇಕೆಂತಲೇ ಅವುಗಳನ್ನು ಕೈಬಿಡಲಾಗಿರುತ್ತದೆ. ಮೋಸದ ಸೇನಾ ಚಾಲನ ಅಥವಾ ಕುಶಲ ವ್ಯೂಹ ಯೋಜನೆಯನ್ನು ಹಾಗೂ ಒಂದು ವಿವಾದಾಂಶವನ್ನು ಮರೆಮಾಡುವುದಕ್ಕಾಗಿ ದಾಖಲು ಮಾಡಬೇಕಾದ ವಿಷಯಗಳನ್ನು ಉದ್ದೇಶಪೂರ್ವಕವಾಗಿಯೇ ಬಿಟ್ಟು ಅಸ್ಖಾಲಿತ್ಯಕ್ಕೆ ಕಾರಣವನ್ನೀಡದೆ ತಪ್ಪಿಸಿಕೊಳ್ಳಲು ಮತ್ತು ಸೈನಿಕ ಕಾರ್ಯಾಚರಣೆಗಳನ್ನು ಮರೆಸಿಡಲು ಸತ್ಯ ಎಂಬ ಭಾವರೂಪವನ್ನು

ಧೂಮಪಟವಾಗಿ ಬಳಸಲಾಗುತ್ತದೆ. ಆದ್ದರಿಂದ ಮಿಲಿಟರಿ ಇತಿಹಾಸಕ್ಕೆ ಸಂಬಂಧಪಟ್ಟಿರುವ ದಾಖಲೆಗಳನ್ನು ಬಳಸುವಾಗ ಅತ್ಯಂತ ಎಚ್ಚರಿಕೆಯಿಂದಿರಬೇಕಾಗುತ್ತದೆ.

## 2.2.2 ಆರ್ಥಿಕ ಇತಿಹಾಸ

ಇತಿಹಾಸ ವೃಕ್ಷದ ದ್ವಿತೀಯ ಪ್ರಧಾನ ಶಾಖೆಯೇ ಆರ್ಥಿಕ ಇತಿಹಾಸ. ಇದು ಮೊಟ್ಟಮೊದಲು ವಾಣಿಜ್ಯ ಇತಿಹಾಸವಾಗಿ ತಲೆದೋರಿತು. ಮಾನವರ ಆರ್ಥಿಕ ಚಟುವಟಿಕೆಗಳಲ್ಲಿ ವ್ಯಾಪಾರವು ಒಂದು ಎಂಬ ಅರಿವು ಇತಿಹಾಸಕಾರರಲ್ಲಿ ಮೂಡಿದಾಗ ಇದರ ವ್ಯಾಪ್ತಿ ವಿಸ್ತಾರವಾಯಿತು. ಸರ್ ವಿಲಿಯಂ ಆಶ್ಲೆ, "ಆರ್ಥಿಕ ಇತಿಹಾಸವು ಜೀವನದ ಭೌತಿಕ ಮೂಲಕ್ಕೆ ಸಂಬಂಧಪಟ್ಟ ವಾಸ್ತವಿಕ ಮಾನವ ಪರಿಪಾಠದ ಅಥವಾ ರೂಢಿಯ ಕಾರ್ಯಗಳ ಚರಿತ್ರೆಯಾಗಿದೆ" ಎಂಬುದಾಗಿ ನಿರೂಪಿಸುತ್ತಾರೆ. ಎನ್.ಎಸ್.ಬಿ.ಗ್ರಾಸ್‌ರವರ ಪ್ರಕಾರ, "ಆರ್ಥಿಕ ಇತಿಹಾಸವು ಮಾನವನು ಜೀವನೋಪಾಯವನ್ನು ಪಡೆಯಲು ಬಳಸಿದ ಅನೇಕ ಕರಮಗಳ ಕಥೆಯಾಗಿದೆ." ವಿಶಾಲಾರ್ಥದಲ್ಲಿ ಇದು ಗತಕಾಲದ ಆರ್ಥಿಕ ರಚನೆಯ ನಿರ್ವಾಹದಲ್ಲಿ ಆಸಕ್ತಿಯನ್ನು ವಹಿಸುತ್ತದೆ. ಇದು ಕಾಂಡರ್‌ಸೆಟ್, ಕಾಂಪ್ಟ್, ಬಕಲ್, ಮಾರ್ಕ್ಸ್ ಹಾಗೂ ಬ್ಯೂರಿಯವರ ಕಾಲದಿಂದ ಅತ್ಯಂತ ಜನಪ್ರಿಯವಾಯಿತು. ಮಾರ್ಕ್ಸ್‌ನು ಇತಿಹಾಸದ ಭೌತಿಕ ವಿವರಣೆಯನ್ನು ಪ್ರತಿಪಾದಿಸಿದಂದಿನಿಂದ ಒಂದು ನೂತನ ದೃಷ್ಟಿಕೋನ ಈ ಕ್ಷೇತ್ರದಲ್ಲಿ ಪ್ರಮುಖವಾಗಿ ಬೆಳೆಯಿತು. ಇದರ ಸಂಪೂರ್ಣ ಅರಿವನ್ನು ಪಡೆಯುವುದಕ್ಕಾಗಿ ಅರ್ಥಶಾಸ್ತ್ರದ ಜ್ಞಾನದ ಅವಶ್ಯಕ ಎಂಬುದಾಗಿ ವರ್ಣಿಸುವ ಇತಿಹಾಸದ ಭಾಗವಾಗಿದೆ ಇದು ಎಂಬುದಾಗಿ ಹೇಳಲಾಗಿದೆ. ಹೀಗೆ ತನ್ನ ದಿನನಿತ್ಯದ ಜೀವನಾಧಾರವನ್ನು ಗಳಿಸುವುದರಲ್ಲಿ ಮಾನವನು ತೋರುತ್ತಾ ಬಂದಿರುವ ಜಾಣ್ಮೆ ಹಾಗೂ ಕೈಚಳಕ, ಸಾರಿಗೆ ಹಾಗೂ ಸಂಪರ್ಕ ಮಾಧ್ಯಮ, ಉತ್ಪಾದನೆ, ವಿತರಣೆ, ಅನುಭೋಗ, ವರ್ಗಕಲಹ, ಜನಸಂಖ್ಯಾಭಿವೃದ್ಧಿ, ಕೃಷಿ, ಕೈಗಾರಿಕೆ, ಕಲೆ–ಕೈಕಸುಬು, ವಾಣಿಜ್ಯೋದ್ಯಮ, ವ್ಯಾಪಾರ, ತೆರಿಗೆ ಮುಂತಾದ ಅನೇಕ ಗತಕಾಲದ ಆರ್ಥಿಕ ಕಾರ್ಯರೂಪಗಳು ಇದರ ಪ್ರಧಾನ ಅಧ್ಯಯನವಸ್ತುಗಳಾಗಿವೆ. ಯುದ್ಧ, ಆಕ್ರಮಣ, ವಸಾಹತು ಸ್ಥಾಪನೆ, ಸಾಮ್ರಾಜ್ಯಷಾಹಿ ಪ್ರಭುತ್ವ ಮುಂತಾದ ಯಾವುದೇ ಐತಿಹಾಸಿಕ ಚಟುವಟಿಕೆಯಾಗಲಿ, ಅವುಗಳಿಗೆಲ್ಲಾ ಆರ್ಥಿಕ ಉದ್ದೇಶಗಳೇ ಮುಖ್ಯ ಪ್ರೇರಕವಾಗಿವೆ. ಗುಲಾಮಗಿರಿ, ಊಳಿಗಮಾನ್ಯ ಪದ್ಧತಿ, ಸಾರ್ವಭೌಮತ್ವ, ಸಮತಾವಾದ, ಸಮಷ್ಟಿವಾದ ಮುಂತಾದ ಸಿದ್ಧಾಂತಗಳನ್ನೂ ಸಹ ಆರ್ಥಿಕ ಧ್ಯೇಯೋದ್ದೇಶಗಳ ಪರಿಭಾಷೆಯಲ್ಲಿ ವಿವರಿಸಲಾಗಿದೆ. ಆರ್ಥಿಕ ಇತಿಹಾಸವು ಎಷ್ಟರಮಟ್ಟಿಗೆ ಆರ್ಥಿಕ ಪರಿಸ್ಥಿತಿಗಳಿಂದ ಆರ್ಥಿಕ ಆಲೋಚನೆಗಳು ಉದ್ಭವಿಸುತ್ತವೆ ಎಂಬುದನ್ನು ತಿಳಿಯುವುದರಲ್ಲಿ ಆಸಕ್ತಿಯನ್ನು ವಹಿಸುತ್ತದೆ. ಇದು ಆಲೋಚನೆಯ ಪರಮಾಧಿಪತ್ಯ, ಘಟನೆಯ ನಿರಂಕುಶಾಧಿಕಾರದ ನಡುವಿನ ಸ್ಥಾನವನ್ನು ಆಕ್ರಮಿಸಿಕೊಳ್ಳಬೇಕು ಎಂದು ಎದುರು ನೋಡಲಾಗುತ್ತದೆ. ಇದು ರಾಷ್ಟ್ರೀಯ ಹಾಗೂ ಸ್ಥಳೀಯ ಇತಿಹಾಸದ ಸಮಸ್ಯೆಯ ಮೇಲೆ ಬೆಳಕನ್ನು ಬೀರುತ್ತದೆ.

ಆರ್ಥಿಕ ಇತಿಹಾಸವು ಗತಕಾಲದ ಸಮಾಜಗಳ ಆರ್ಥಿಕ ಮುಖದಲ್ಲಿ ವಿಶೇಷವಾದ ಆಸಕ್ತಿಯನ್ನು ವಹಿಸುವುದಲ್ಲದೆ, ಸಾಮಾನ್ಯೀಕರಣದ ಆಧಾರವಾಗಿ ಒಂದು ವ್ಯವಸ್ಥಿತ ಸಿದ್ಧಾಂತ ಸಂಚಯ ಹಾಗೂ ಪರಿಮಾಣಾತ್ಮಕ ವಿಧಾನಗಳನ್ನು ಕ್ರಮಬದ್ಧವಾಗಿ ಬಳಸುತ್ತದೆ. ಇದು ಉಪಯೋಗಿಸುವ ಸಿದ್ಧಾಂತ

ಸಂಚಯವು ಅರ್ಥಶಾಸ್ತ್ರದ್ದಾಗಿದೆ. ಆರ್ಥಿಕ ಸಿದ್ಧಾಂತವು ಕೆಲವು ಆರ್ಥಿಕ ವರ್ತನೆಯ ಮೂಲಭೂತ ಮಾದರಿಗಳನ್ನು ಒದಗಿಸಿಕೊಡುತ್ತದೆ. ಆರ್ಥಿಕ ಇತಿಹಾಸವು ಈ ಮಾದರಿಗಳನ್ನು ನಿರ್ದಿಷ್ಟವಾದ ಐತಿಹಾಸಿಕ ಸನ್ನಿವೇಶಗಳಿಗೆ ಸಮರ್ಪಕವಾದ ಬಗೆಯಲ್ಲಿ ಅನ್ವಯಿಸಬೇಕು. ವೈಜ್ಞಾನಿಕ ವಿಧಾನ ಹಾಗೂ ಪರಿಮಾಣಾತ್ಮಕ ಅಳತೆಗಳ ಕ್ರಮಬದ್ಧ ಬಳಕೆಯ ಕಾರಣ ಆರ್ಥಿಕ ಚರಿತ್ರೆಯು ಗತಕಾಲವನ್ನು ಕುರಿತು ಇನ್ನೂ ಹೆಚ್ಚು ವಿಶ್ವಾಸಾರ್ಹವಾದ ಅರಿವನ್ನು ಕೊಡಲು ಶಕ್ತವಾಗಿದೆ. ಆರ್ಥಿಕ ಇತಿಹಾಸಕಾರನು ಎಷ್ಟರಮಟ್ಟಿಗೆ ತಾನು ನೀಡುವ ವಿವರಣೆಗಳು, ತಾನು ಸಂಗ್ರಹಿಸಿರುವ ಅನುಭವಾತ್ಮಕ ಪ್ರಾಯೋಗಿಕ ಪ್ರಮಾಣ ನಿದರ್ಶನಗಳಿಗೆ ತಕ್ಕದ್ದಾಗಿವೆ ಎಂಬುದನ್ನು ನಿರ್ಧರಿಸುವುದರಲ್ಲಿ ಹೆಚ್ಚು ಆಸಕ್ತನಾಗಿರುತ್ತಾನೆ. ಒಟ್ಟಿನಲ್ಲಿ ಇವನು ಗತಕಾಲದ ಆರ್ಥಿಕ ರಚನೆಯ ಬಗ್ಗೆ ಕ್ರಮಬದ್ಧ, ಸಂಯೋಜಿತವಾದ ವಿವರಣೆಯನ್ನು ನೀಡಲು ಪ್ರಯತ್ನಿಸುತ್ತಾನೆ.

ಆಧುನಿಕ ಆರ್ಥಿಕ ಸಿದ್ಧಾಂತವು ಹೆಚ್ಚಾಗಿ ಸಂಖ್ಯಾಶಾಸ್ತ್ರೀಯ ವಾಸ್ತವಾಂಶಗಳನ್ನು ಆಧರಿಸಿರುವುದ–ರಿಂದಲೂ ಆರ್ಥಿಕ ನಿಯಮಗಳನ್ನು ಗಣಿತಶಾಸ್ತ್ರೀಯ ರೂಪದಲ್ಲಿ ವ್ಯಕ್ತಪಡಿಸಲು ಯತ್ನಿಸುವುದರಿಂದಲೂ ಈ ಸಿದ್ಧಾಂತವನ್ನು ಬಳಸುವ ಇತಿಹಾಸಕಾರರು ಸಂಖ್ಯಾಶಾಸ್ತ್ರದ ಪ್ರಭಾವದ ಹಿಡಿತದಿಂದ ತಪ್ಪಿಸಿಕೊಳ್ಳಲಾರರು. ಆದ್ದರಿಂದಲೇ ಚರಿತ್ರ ಮಾಪನ ಎಂಬ ನೂತನ ಶಾಖೆಯೊಂದು ಬೆಳೆದುಬಂದಿದೆ. ಇತಿಹಾಸಕಾರರು ತಾವು ಬಳಸುವ ವಾಸ್ತವಾಂಶಗಳ ವಿಚಾರದಲ್ಲಿ ನಿಷ್ಕೃಷ್ಟತೆಯನ್ನು ಸಾಧಿಸುವುದಕ್ಕಾಗಿ ಸಂಖ್ಯಾಶಾಸ್ತ್ರವನ್ನು ಬಳಸುತ್ತಿದ್ದಾರೆ. ಚರಿತ್ರೆ ರಚನೆಯಲ್ಲಿ ಗಣಿತಶಾಸ್ತ್ರದ ನಿಯಮಗಳ ಬಳಕೆ ಹೆಚ್ಚಾಗುತ್ತಿದೆ. ಇದರ ಫಲವಾಗಿ ಬೆಳೆದು ಬರುತ್ತಿರುವ ಮತ್ತೊಂದು ಮುಖ್ಯ ಶಾಖೆಯೇ ಪರಮಾಣೀಕೃತ ಅಥವಾ ಪರಿಮಾಣ ಇತಿಹಾಸ. ಆದರೆ ಇತಿಹಾಸ ರಚನೆಯು ಈ ಪರಿಮಾಣಾತ್ಮಕ ಶಾಸ್ತ್ರಗಳನ್ನೇ ಅವಲಂಬಿಸಿಬಿಟ್ಟರೆ ಗತಕಾಲದ ಮನೋರಂಜಕ ಕಥೆಗೆ ಧಕ್ಕೆ ಉಂಟಾಗಿ ಇತಿಹಾಸಕ್ಕೆ ಇರುವ ಸಹಜ ಸೊಗಸು, ರಮ್ಯತೆ ಕಣ್ಮರೆಯಾಗಿ ಹೋಗಿ ಇದು ನೀರಸ ಶಾಸ್ತ್ರವಾಗಿ ಬಿಡುತ್ತದೆ. ಗಣಿತಶಾಸ್ತ್ರೀಯ ಸೂತ್ರಗಳನ್ನೇ ಬಳಸಿದರೆ, ಇಲ್ಲಿ ಕಥನದಲ್ಲಿ ಗೊಂದಲ ಹೆಚ್ಚಾಗುತ್ತದೆ, ವಿವರಣೆ ಅತ್ಯಂತ ನೀರಸವಾಗುತ್ತದೆ, ಬರುವ ಫಲ ಕದಡಿದ ಕೆಸರಿನ ರಾಶಿಯಾಗುತ್ತದೆ: ಉದಾಹರಣೆಗೆ, ಉತ್ತಮವಾದ ಐತಿಹಾಸಿಕ ಬರವಣಿಗೆಯನ್ನು ಆ = ಅ+ಇ ಎಂಬುದಾಗಿ ವಿವರಿಸಲಾಗುತ್ತದೆ. ಇಲ್ಲಿ 'ಅ' ಎಂಬುದು ಇತಿಹಾಸಕಾರನ ಲೇಖನಿಯಿಂದ ಹೊರಹೊಮ್ಮಿ ಹರಿದು ಬರುವ ಸಮಗ್ರ ಬೌದ್ಧಿಕ ಫಲವನ್ನು ಸೂಚಿಸಿದರೆ 'ಆ' ಎಂಬುದು ದಾಖಲೆಗಳಲ್ಲಿ ಇವನಿಗೆ ಸಿಗುವ ವಾಸ್ತವಾಂಶಗಳ ಸೂಚಕವಾಗುತ್ತದೆ. 'ಇ' ಎಂಬುದು ಮೂಲಾಧಾರಗಳನ್ನು ಸಮರ್ಪಕವಾಗಿ ಊಹಿಸಲು, ವಿವರಿಸಲು ಇವನಿಗಿರುವ ಚಾತುರ್ಯದ ಸಂಕೇತವಾಗುತ್ತದೆ. ಇತಿಹಾಸವು ಅರ್ಥಗರ್ಭಿತವಾಗಬೇಕಾದರೆ ಇವುಗಳು ಅತ್ಯಾವಶ್ಯಕ. ಅಂಟುಹಿಟ್ಟನ್ನು ಕತ್ತರಿಯಿಂದ ಕತ್ತರಿಸುವಂತೆ ಉತ್ತಮ ಕಥೆಗೆ ಬೇಕಾದ ಚಲನಾತ್ಮಕ ಅವಶ್ಯಕತೆಗಳನ್ನು ಮರೆತು ಸೂತ್ರಕ್ಕೆ ಅಂಟಿಕೊಂಡು ಇದ್ದರೆ, ನೀರಸತೆಯನ್ನು ಬಿತ್ತರಿಸಿದಂತೆ ಎನ್ನಬಹುದು. ಯಾವುದೋ ನೀರಸ ವಿಷಯವನ್ನು ವಿವರಿಸುವುದು, ಹೇಳುವುದು ಶಾಸ್ತ್ರದ ಉದ್ದೇಶ ನಿಜ. 'ಇತಿಹಾಸ' ಸಹ ಶಾಸ್ತ್ರವೆಂದು ಕರೆಸಿಕೊಂಡರೂ ಇದು ತನ್ನದೇ ಆದ ಆಕರ್ಷಣೆಯಿಂದಾಗಿ ಎಲ್ಲರಿಗೂ ಬೇಕಾದ ಶಾಸ್ತ್ರವಾಗಿದೆ. ಅರ್ಥಶಾಸ್ತ್ರದ ಗಣಿತಾಂಶಗಳು ಇತಿಹಾಸಕ್ಕೆ ಕೆಲವೊಮ್ಮೆ ಅವಶ್ಯಕವೆನಿಸಿದರೂ ಅದಕ್ಕಾಗಿ ಗೊಂಡಾರಣ್ಯದಲ್ಲಿ ಸಿಲುಕಿಕೊಂಡ ಭಯದಿಂದಾಗಿ ಗಂಧದ ಮರದ ಪ್ರಾಮುಖ್ಯತೆಯನ್ನು ಮರೆತುಬಿಡುವವರಂತೆ ಅವುಗಳೇ

ವಾಸ್ತವಾಂಶಗಳೆಂಬ ಭ್ರಮೆಯಲ್ಲಿ ಪಥಭ್ರಷ್ಟವಾಗಬಾರದು, ಬೌದ್ಧಿಕ ಚಿಂತನೆಯಿಂದ ಅವಶ್ಯಕವಾದಷ್ಟು ಅಂಶವನ್ನು ಮಾತ್ರ ತೆಗೆದುಕೊಂಡು ನೈಜವಾದ ಇತಿಹಾಸವನ್ನು ಬರೆಯಬೇಕು.

## 2.2.3 ವಾಣಿಜ್ಯ ಇತಿಹಾಸ

ವಾಣಿಜ್ಯ ಚರಿತ್ರೆಯು ಇತ್ತೀಚೆಗೆ ಹೆಚ್ಚು ಪ್ರಸಿದ್ಧವಾಗುತ್ತಿರುವ ಇನ್ನೊಂದು ಪ್ರಧಾನ ಶಾಖೆ. ಇದು ಹಾರ್ವರ್ಡ್ ವಿಶ್ವವಿದ್ಯಾನಿಲಯದ ವಾಣೀಜ್ಯ ವಿಭಾಗದಲ್ಲಿ ಮೊಟ್ಟಮೊದಲು ಒಂದು ನಿರ್ದಿಷ್ಟ ರೂಪದಲ್ಲಿ ತಲೆದೋರಿತು. ಇದಕ್ಕೆ ರೂಪ ಕೊಟ್ಟು ಬೆಳೆಸಿದ ಕೀರ್ತಿ ವಾಲ್ಯೇಸ್ ಬಿ.ಡನ್‌ಹ್ಯಾಮ್ ಹಾಗೂ ಎನ್.ಎಸ್.ಬಿ.ಗ್ರಾಸ್ ರವರಿಗೆ ಸಲ್ಲಬೇಕು. ವಿಶಾಲಾರ್ಥದಲ್ಲಿ ಇದು ಗತಕಾಲದ ವ್ಯಾಪಾರಿಗಳ ಸಮಸ್ತ ಚಟುವಟಿಕೆಗಳನ್ನು ಒಳಗೊಳ್ಳುತ್ತವೆಯಾದರೂ ಪ್ರಧಾನವಾಗಿ ಆರ್ಥಿಕ ಸೇವೆ ಮತ್ತು ವಸ್ತುಗಳ ಉತ್ಪಾದನೆಯ ಮೂಲಕ ವೈಯಕ್ತಿಕ ಲಾಭವನ್ನು ಪಡೆಯಲು ಪ್ರಯತ್ನಿಸುವ ವ್ಯಕ್ತಿಗಳು ಮಾಡುವ ನಿರ್ಧಾರಗಳ ಲಿಖಿತ ದಾಖಲೆಗಳಲ್ಲಿ ಆಸಕ್ತಿಯನ್ನು ವಹಿಸುತ್ತದೆ. ಹೆಚ್ಚಾಗಿ ಗತಕಾಲದಲ್ಲಿದ್ದ ಸೂಕ್ಷ್ಮ ಆರ್ಥಿಕಾಂಶಗಳು; ಲಾಭವನ್ನು ಗಳಿಸಬೇಕೆಂಬ ಉದ್ದೇಶದಿಂದ ಕೈಗೊಳ್ಳಲಾದ ಮಾನವ ನಿರ್ಧಾರಗಳು; ಶತಮಾನಗಳು ಹಾದುಬಂದಂತೆ ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗಳನ್ನು ಉಂಟು ಮಾಡಿ, ಆ ಪರಿವರ್ತನೆಯ ಪ್ರವಾಹ ಪಥವನ್ನು ರೂಪಿಸಿದ ರೀತಿ; ನಿರ್ಧಾರವನ್ನು ಕೈಗೊಳ್ಳುವ ಸಂಸ್ಥೆಗಳನ್ನು ಕಟ್ಟುವ ಅಥವಾ ಕೆಡವಿ ಹಾಕುವ ಪಾತ್ರವನ್ನು ವಹಿಸಿದ ವ್ಯಾಪಾರಿಗಳು; ವಾಣಿಜ್ಯ ಚಟುವಟಿಕೆಗಳ ಸ್ಥಳ, ಕಾಲ, ನಿರ್ವಹಣದ ಮೇಲೆ ಪ್ರಭಾವ ಬೀರಿದ ಸಂಬಂಧಪಟ್ಟ ಆಲೋಚನೆ ಹಾಗೂ ಸಂಚಿತ ಜ್ಞಾನ; ಹಣಕಾಸು, ಉತ್ಪಾದನೆ, ಮಾರುಕಟ್ಟೆ ಮುಂತಾದ ವಿಶಿಷ್ಟವಾದ ವ್ಯಾಪಾರದ ಬೆಳವಣಿಗೆಯ ಕಾರ್ಯಾತ್ಮಕ ಕ್ಷೇತ್ರಗಳು; ವ್ಯಾಪಾರ ಸಂಸ್ಥೆ, ಮಾಧ್ಯಮಗಳು, ವ್ಯಾಪಾರಿಗಳಿಗೂ ಅವರ ಪರಿಸರಕ್ಕೂ ನಡುವೆ ಉಂಟಾಗುವ ಪರಸ್ಪರ ಕ್ರಿಯೆ ಹಾಗೂ ಪ್ರಭಾವ; ವ್ಯಾಪಾರ ಯೋಜನೆ, ಚಾಲನೆ, ವ್ಯವಸ್ಥಾಪನೆ ಮತ್ತು ರಚನಾತ್ಮಕ ವ್ಯಾಪಾರಿಯು ವಾಣಿಜ್ಯ ಕ್ಷೇತ್ರದಲ್ಲಿ ಉಂಟು ಮಾಡುವ ಬದಲಾವಣೆಗಳನ್ನು ಪ್ರಧಾನವಾಗಿ ಈ ಶಾಖೆ ಅಧ್ಯಯನ ಮಾಡುತ್ತದೆ. ವಿವಿಧ ವಿಷಯ ಹಾಗೂ ದೃಷ್ಟಿಕೋನಗಳಿಂದಾಗಿ ಈ ಅಧ್ಯಯನ ಕ್ಷೇತ್ರವು ಆಸಕ್ತಿಯುತ ವಸ್ತುವನ್ನು ಹೊಂದಿದೆ ಎಂಬುದು ಸ್ಪಷ್ಟವಾಗುತ್ತದೆ. ಇತ್ತೀಚೆಗೆ ಇದು 'ಇತಿಹಾಸದಲ್ಲಿ ವ್ಯಾಪಾರ' ಎಂಬ ವಿಷಯದಲ್ಲಿ ಹೆಚ್ಚು ಆಸಕ್ತಿಯನ್ನು ತೋರುತ್ತಿದೆ; ವ್ಯಾಪಾರಿಗಳಿಗೂ ಹಾಗೂ ವಾಣಿಜ್ಯ ಸಂಸ್ಥೆಗಳಿಗೂ, ಪರಿಸರದ ಪ್ರಭಾವಯುತ ಭಾಗಗಳಿಗೂ ಉಂಟಾಗುವ ಪರಸ್ಪರ ಕ್ರಿಯೆ ಹಾಗೂ ಸಂಬಂಧಗಳನ್ನೂ ಕುರಿತು ವಿಚಾರ ಮಾಡುತ್ತದೆ; ಸಮಾಜಶಾಸ್ತ್ರ, ಮಾನವಶಾಸ್ತ್ರ, ಸಾಮಾಜಿ, ಮನೋವಿಜ್ಞಾನ ಮುಂತಾದ ಶಾಸ್ತ್ರಗಳ ಭಾವರೂಪ, ಸಿದ್ಧಾಂತ ಹಾಗೂ ಸಂಶೋಧನಾ ವಿಧಾನಗಳನ್ನು ಬಳಸಿಕೊಳ್ಳುತ್ತಿದೆ. 1960ರ ಹೊತ್ತಿಗೆ ಅನುಕ್ರಮಿಕ ಇತಿಹಾಸ ಎಂಬ ನೂತನ ಪಾರಿಭಾಷಿಕ ಪದವನ್ನೂ ಸೃಷ್ಟಿಸಲಾಯಿತು. ಇದು ಬೆಲೆಗಳ ದಾಖಲೆಗಳಂತಹ ಸಾಪೇಕ್ಷವಾಗಿ ಒಂದೇ ತೆರನಾಗಿರುವ ಮಾಹಿತಿಗಳ ಸರಣಿಗಳಿಂದ ಬೆಳಕಿಗೆ ಬಂದಿರುವ ದೀರ್ಘಕಾಲಿಕ ಪ್ರವೃತ್ತಿಗಳ ಕ್ರಮಬದ್ಧ ಅಧ್ಯಯನವಾಗಿದೆ.

### 2.2.4 ಸಾಮಾಜಿಕ ಇತಿಹಾಸ

ಇತಿಹಾಸದ ಇನ್ನೊಂದು ಪ್ರಧಾನ ಶಾಖೆಯೇ ಸಾಮಾಜಿಕ ಇತಿಹಾಸ. ಇದನ್ನು ದಾಖಲು ಮಾಡಲಾದ ಹಾಗೂ ಗತಕಾಲದ ಸಾಮಾಜಿಕ–ಸಾಂಸ್ಕೃತಿಕ ಸಂದರ್ಭದಲ್ಲಿ ಉಂಟಾದ ಮಾನವ ಕ್ರಿಯೆ ಹಾಗೂ ಒಡನಾಟದ ರಚನೆ ಮತ್ತು ಪ್ರಕ್ರಿಯೆಯ ಅಧ್ಯಯನವಾಗಿದೆ ಎಂಬುದಾಗಿ ನಿರೂಪಿಸಲಾಗಿದೆ. ಪಿ.ಜೆ.ಬ್ಲಾಕ್ ಎಂಬ ಡಚ್ ಚರಿತ್ರ ಲೇಖಕನು ಇದನ್ನು ಜನರ ಇತಿಹಾಸ ಎಂಬುದಾಗಿ ವ್ಯಾಖ್ಯಾನಿಸಿ, "ಇದು ನಮ್ಮ ಪೂರ್ವಿಕರ ಆಲೋಚನೆ, ಕಾರ್ಯ ಸಾಧನೆ, ದಿನನಿತ್ಯ ಜೀವನ, ನಂಬಿಕೆ, ಅವಶ್ಯಕತೆ, ಅಭ್ಯಾಸಗಳನ್ನು ಕುರಿತು ವಿಚಾರ ಮಾಡುತ್ತದೆ" ಎಂಬುದಾಗಿ ಹೇಳುತ್ತಾನೆ.

ಹೆರೊಡೋಟಸನು ಸಿಥಿಯನ್ ಜನರ ಲೋಕರೂಢಿಗಳ ಬಗ್ಗೆ ವರದಿ ಮಾಡಿದಂದಿನಿಂದ ಮತ್ತು ಟ್ಯಾಸಿಟಸನು ಜರ್ಮನಿಯ ಅಥವಾ ಟ್ಯೂಟಾನಿಕ್ ಬುಡಕಟ್ಟಿನ ಜನರ ಸಂಸ್ಥೆಗಳನ್ನು ವರ್ಣಿಸಿದ ಸಮಯದಿಂದ ಒಂದಲ್ಲ ಒಂದು ರೀತಿಯ ಸಾಮಾಜಿಕ ಇತಿಹಾಸ ಎಂಬುದಾಗಿ ಗುರುತಿಸಲಾಗಬಹುದಾದ ವೃತ್ತಾಂತಗಳನ್ನು ಇತಿಹಾಸಕಾರರು ಬರೆದಿದ್ದಾರೆ. ಮಾನವ ಹಾಗೂ ಸಮಾಜದ ಅಧ್ಯಯನವನ್ನು ಭದ್ರವಾದ ಅನುಭವಿಕ ಆಧಾರದ ಮೇಲೆ ಬೆಳೆಸಬೇಕೆಂಬ ಆಸೆ ಹೆಚ್ಚಿದಂತೆ ಸಾಮಾಜಿಕ ಇತಿಹಾಸವು ಒಂದು ನಿರ್ದಿಷ್ಟ ಬಗೆಯ ಶಾಸ್ತ್ರವಾಗಿ ತಲೆದೋರಿ ಬೆಳೆಯಿತು. ಜಸ್ಟಸ್ ಮೋಸರ್‌ನನ್ನು ಈ ಶೈಲಿಯ ಪ್ರಜಲಕ ಅಥವಾ ಆದಿಪ್ರವರ್ತಕನೆಂಬುದಾಗಿ ಸಾಂಪ್ರದಾಯಿಕವಾಗಿ ಕರೆದರೂ, ವಾಲ್ಟೇರನು ನಿಜವಾಗಿ ಇದರ ಉದಯಕ್ಕೆ ಮೂಲಕರ್ತೃವಾಗಿದ್ದಾನೆ. ಇವನ ಆದಿಪರಿಶೋಧಕ ಕೃತಿಗಳು ನಾಗರಿಕತೆ ಅಥವಾ ಸಂಸ್ಕೃತಿಗಳ ಇತಿಹಾಸದ ಸಾಂಪ್ರದಾಯಿಕ ಬೆಳವಣಿಗೆಯನ್ನು ಉದ್ಘಾಟಿಸಿದುವು. ಇದು ಸಾಂಸ್ಕೃತಿಕ ಮಾದರಿಗಳನ್ನು ಭಾಗಭಾಗವಾಗಿ ಪರೀಕ್ಷಿಸಿ, ವಿವರಿಸುವ ಕಾರ್ಯದಲ್ಲಿ ಮಗ್ನವಾಗಿದ್ದರೂ, ಮುಖ್ಯವಾಗಿ ಸಾಮಾಜಿಕ ಬಗೆ ಹಾಗೂ ಸಂಸ್ಥೆಗಳಲ್ಲಿ ಹೆಚ್ಚು ಆಸಕ್ತಿಯನ್ನು ತೋರುತ್ತದೆ. ಇದರ ಆಧಾರಪ್ರತಿಜ್ಞೆಗಳಿಗೆ ಭಾವನಾಸ್ವಾತಂತ್ರ್ಯವಾದ, ಪ್ರಗತಿ ಎಂಬ ಭಾವರೂಪವಿದ್ದರೂ ಫಿಚೆ ಹಾಗೂ ಹೆಗಲ್ ಮುಂತಾದವರ 'ಆದರ್ಶವಾದ'ದ ಪ್ರಧಾನ ಭಾವಾತ್ಮಕ ಹೊನಲುಗಳು ಪ್ರಬಲವಾಗಿ ಬೆಂಬಲವನ್ನು ನೀಡಿದುವು. ಜರ್ಮನಿಯ ಲ್ಯಾಂಪ್ರೆಚ್‌ಟನು ಸಂಸ್ಕೃತಿ ಇತಿಹಾಸದ ವಾಸ್ತವಿಕ ಬಗೆಯೊಂದನ್ನು ನೀಡಿದನು. ಅದರ ಪ್ರಕಾರ, ಐತಿಹಾಸಿಕ ಪ್ರಕ್ರಿಯೆಗೆ ಅನ್ವಯವಾಗುವ ನಿಯಮಗಳನ್ನು ಕಂಡುಹಿಡಿಯಬಹುದು, ಮಾನವ ಇತಿಹಾಸದ ಸಮಗ್ರ ವರಿಸೆಗೆ ಸಾಮಾಜಿಕ ವಿಜ್ಞಾನಗಳ ವಿಧಾನಗಳನ್ನು ಅನ್ವಯಿಸುವುದರ ಮೂಲಕ ಇದನ್ನು ಸಾಧಿಸಬಹುದು ಎಂಬುದಾಗಿ ಭಾವಿಸಲಾಯಿತು. ಇದು ಐತಿಹಾಸಿಕ ಸಮಾಜಶಾಸ್ತ್ರದೊಡನೆ ಅತ್ಯಂತ ನಿಕಟ ಸಂಬಂಧವನ್ನು ಹೊಂದಿ ಬೆಳೆಯಿತು.

ಇದರೊಂದಿಗೆ ಅಧ್ಯಯನ ಮಾಡುವ ವಿಷಯಗಳಿಗೆ ಸಮಾನ ಲಕ್ಷಣದ ಭಾವವಿಲ್ಲದ ಇನ್ನೊಂದು ಸಾಮಾಜಿಕ ಇತಿಹಾಸ ಬೆಳೆದು ಬಂದಿತು. ಸಮಾಜದ ಜನಜೀವನವನ್ನು ಚಿತ್ರಿಸುವುದು ಇದರ ಪ್ರಧಾನ ಉದ್ದೇಶ. ಇದು ಗತಕಾಲದ ಸಾಮಾನ್ಯ ಜನರನ್ನೂ ಸಹ ಐತಿಹಾಸಿಕ ಅನ್ವೇಷಣೆಯ ವಿಷಯಗಳನ್ನಾಗಿ ಸೇರಿಸಿಕೊಂಡಿದ್ದರಿಂದ ಇದರ ವ್ಯಾಪ್ತಿ ದೊಡ್ಡದಾಯಿತು. ಇಷ್ಟು ಮಾತ್ರವಲ್ಲದೆ, ಕಾನೂನು ವ್ಯವಸ್ಥೆ ಹಾಗೂ ಆರ್ಥಿಕ ಸಂಸ್ಥೆಗಳನ್ನು ಇತರ ಸಾಮಾಜಿಕ ವಿಷಯಗಳಿಗೆ ಸಂಬಂಧಪಡದಂತೆ ಪ್ರತ್ಯೇಕವಾಗಿ ಅಧ್ಯಯನ

ಮಾಡುವುದು ವ್ಯರ್ಥ ಎಂಬುದಾಗಿ ಅರಿತ ಪಂಡಿತರು ಅವುಗಳನ್ನು ಸಾಮಾಜಿಕ ರಚನೆಯ ಇತರ ಭಾಗಗಳಿಗೆ ಸಂಬಂಧಪಟ್ಟಂತೆ ನೋಡಿ ವಿಚಾರ ಮಾಡಲಾರಂಭಿಸಿದರು. ಈ ರೂಢಿಯನ್ನು ಅಳವಡಿಸಿಕೊಂಡಿದ್ದರಿಂದ ನಿಧಾನವಾಗಿ ಎಲ್ಲಾ ಸಂಸ್ಥೆಗಳ ಸಾಮಾಜಿಕ ಮುಖದ ಬಗ್ಗೆ ಒಂದು ಗಾಢವಾದ ಪ್ರಜ್ಞೆ ಮೂಢಿಬಂದಿತು. ಇದರಿಂದ ಸಾಮಾಜಿಕ ಹಾಗೂ ಆರ್ಥಿಕ ಇತಿಹಾಸಗಳನ್ನು ನಿಕಟವಾಗಿ ಒಟ್ಟುಗೂಡಿರುವ ಕ್ಷೇತ್ರಗಳೆಂಬುದಾಗಿ ಎಣಿಸುವ ಪ್ರಬಲ ಪ್ರವೃತ್ತಿಯ ಉದಯವಾಯಿತು. ಡಚ್ ಆರ್ಥಿಕ ಇತಿಹಾಸಕಾರನಾದ ವ್ಯಾನ್ ಡಿಲೆನ್ ಈ ಎರಡು ಪ್ರಧಾನ ಶಾಖೆಗಳನ್ನು ಗುರುತಿಸಿ, ಇವುಗಳ ಕೂಡುಗೆರೆಯನ್ನು ಬಳಸಿ ಈ ಸಂಘಟಿತ ಶಾಸ್ತ್ರವನ್ನು "ಸಾಮಾಜಿಕ–ಆರ್ಥಿಕ ಇತಿಹಾಸ" ಎಂಬುದಾಗಿ ಕರೆದಿದ್ದಾನೆ. ಮೊದಮೊದಲು ಸಾಮಾಜಿಕ ಇತಿಹಾಸವನ್ನು ಆರ್ಥಿಕ ಚರಿತ್ರೆಗೆ ಅಧೀನವಾದುದೆಂಬುದಾಗಿ ಎಣಿಸಲಾಗಿದ್ದಿತು. ಆರ್ಥಿಕ ಇತಿಹಾಸವು ಚರಿತ್ರೆಯ ಒಂದು ಬಹುವಾಗಿ ವಿಶೇಷೀಕೃತವಾದ ಶಾಖೆಯಾಗಿ ಬಹಳ ಬೇಗ ಬೆಳೆದು ಬಂದಿತು. ಆದರೆ ಇತ್ತೀಚಿನವರೆಗೆ ಸಾಮಾಜಿಕ ಇತಿಹಾಸದಲ್ಲಿ ಕ್ರಮಬದ್ಧವಾದ ಅಧ್ಯಯನ ಕಾರ್ಯ ನಡೆದು ಬರಲಿಲ್ಲ. ಇದರಮೊದಲ ಪಂಡಿತರು ರಾಜಕೀಯ ಇತಿಹಾಸದ ಪ್ರಾಬಲ್ಯವನ್ನು ತೀವ್ರವಾಗಿ ವಿರೋಧಿಸಿದ ಪ್ರತಿರೋಧಿಗಳಾಗಿದ್ದರು. ರಾಜ್ಯಾಧಿಕಾರ, ಆಡಳಿತ ವಿಧಾನ, ಯುದ್ಧ, ಅರಮನೆ ವೈಭವ ಮುಂತಾದವುಗಳ ಅಧ್ಯಯನಕ್ಕೆ ಬದಲಾಗಿ ಜನಸಾಮಾನ್ಯರ ದಿನನಿತ್ಯದ ಜೀವನ ಕ್ರಮಗಳ ಅಧ್ಯಯನಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟರು. ಇಷ್ಟು ಮಾತ್ರವಲ್ಲದೆ ಆರ್ಥಿಕ ಇತಿಹಾಸವು ಹೆಚ್ಚು ಪರಿಮಾಣಾತ್ಮಕ ಹಾಗೂ ಸೈದ್ಧಾಂತಿಕವಾದ ಶಾಸ್ತ್ರವಾಗಿ ವಿಕಾಸ ಹೊಂದಿದರೆ, ಸಾಮಾಜಿಕ ಇತಿಹಾಸವು ಹೆಚ್ಚಾಗಿ ಗುಣಾತ್ಮಕವಾದ ಶಾಸ್ತ್ರವಾಗಿ ಬೆಳೆಯಿತು. ಈ ವ್ಯತ್ಯಾಸಗಳ ಕಾರಣ ಒಂದೇ ಬಗೆಯ ಸಮಸ್ಯೆಗಳ ಬಗ್ಗೆ ವಿಚಾರ ಮಾಡುವಾಗಲೆಲ್ಲಾ ಆರ್ಥಿಕ ಇತಿಹಾಸಕಾರರು ಹಾಗೂ ಸಾಮಾಜಿಕ ಇತಿಹಾಸಕಾರರ ನಡುವೆ ಭಯಂಕರ ವಾಗ್ಯುದ್ಧಗಳು ನಡೆಯುತ್ತಲೇ ಇದ್ದವು.

ನಂತರ ಮಾರ್ಕ್ ಬ್ಲಾಕ್ ಮತ್ತು ಲೂಸಿಯನ್ ಫೆಬ್ರೆ ಈ ಎರಡು ಬಗೆಯ ಸಾಮಾಜಿಕ ಇತಿಹಾಸಗಳ ಸಂಪ್ರದಾಯಗಳ ಪರಿಚ್ಛಿನ್ನತೆಯನ್ನು ಪ್ರತಿನಿಧಿಸಿದಂತಹ ಒಂದು ಚಳವಳಿಯನ್ನು ಬೆಳೆಸಿದರು. ಸಾಮಾಜಿಕ–ಸಾಂಸ್ಕೃತಿಕ ಸಂದರ್ಭಗಳನ್ನು ಸರಿಯಾಗಿ ಗ್ರಹಿಸಬೇಕಾದರೆ ಅವುಗಳನ್ನು ಸಮಷ್ಟಿಯಾಗಿ ಎಣಿಸಿ ಅಧ್ಯಯನ ಮಾಡಬೇಕಾದುದು ಅವಶ್ಯಕವೆಂಬ ನಂಬಿಕೆಯಿಂದ ಕೂಡಿದ್ದ ಈ ಚಳವಳಿಯು ಸಾಮಾಜಿಕ ಚರಿತ್ರ ಕಥನವನ್ನು ಸಾಮಾಜಿಕ ಇತಿಹಾಸವಾಗಿ ಮಾರ್ಪಡಿಸಲು ಬಯಸಿತು.

ಸಾಮಾಜಿಕ ಇತಿಹಾಸಕ್ಕೆ ತನ್ನ ನಿರ್ದಿಷ್ಟ ಅಧ್ಯಯನ ಕ್ಷೇತ್ರದ ವ್ಯಾಪ್ತಿಯನ್ನು ಸ್ಪಷ್ಟವಾಗಿ ನಿರ್ಧರಿಸಿಕೊಳ್ಳುವ ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ಕೆಲಸದೊಂದಿಗೆ ರಾಜಕೀಯ ಚರಿತ್ರೆಗೆ ಕೊಡಲಾದ ಪ್ರಾಮುಖ್ಯತೆಯ ಕಾರಣ ತನ್ನ ಬೆಳವಣಿಗೆಗೆ ಉಂಟಾದ ಅಡಚಣೆಗಳನ್ನು ನಿವಾರಿಸಿಕೊಳ್ಳಬೇಕಾಯಿತು. ತನ್ನ ಐತಿಹಾಸಿಕ ಅಧ್ಯಯನಗಳ ವ್ಯಾಪ್ತಿಯನ್ನು ವಿಸ್ತರಿಸುವುದಕ್ಕಾಗಿ ವಾಸ್ತವಾಂಶಗಳ ಒಂದುಗೂಡಿಕೆ, ಕಥನದೃಷ್ಟಿ ಹಾಗೂ ಪ್ರಸಿದ್ಧ ಪುರುಷರೇ ಅಧ್ಯಯನ ವಿಷಯವಾಗಿರಬೇಕೇ ಹೊರತು ಸಾಮಾನ್ಯೀಕರಣ, ಸಮೂಹ ವಿಶ್ಲೇಷಣೆ ಅನವಶ್ಯಕ ಮಹತ್ವ ಪಡೆಯಬಾರದೆಂಬ ರಾಂಕೆ ನಿಯಮವನ್ನು ಪ್ರಾರಂಭದಲ್ಲಿ ಪ್ರತಿಭಟಿಸಿದ್ದರಿಂದ

ಸಾಮಾಜಿಕ ಇತಿಹಾಸದ ಬೆಳವಣಿಗೆ ಕುಂಠಿತಗೊಂಡಿತು. ಆದರೆ ಇತ್ತೀಚೆಗೆ ಇದಕ್ಕೆ ಅಸಾಧಾರಣ ಬೆಲೆ ದೊರಕಿದೆ.

ಅದೂ ಅಲ್ಲದೆ ರಾಜಕೀಯ ಇತಿಹಾಸ ಹಾಗೂ ಸಾಮಾಜಿಕ ಇತಿಹಾಸಗಳಿಗೆ ಇದ್ದ ಪ್ರತಿಷ್ಠೆಯಲ್ಲೂ ಭೇದ ಕಂಡುಬಂದಿತು. ರಾಜಕೀಯ ಇತಿಹಾಸವನ್ನು ರಾಷ್ಟ್ರೀಯ ಸಂಪ್ರದಾಯವನ್ನು ರಕ್ಷಿಸುವ, ದೇಶಪ್ರೇಮವನ್ನು ಪದೇ ಪದೇ ಬೋಧಿಸುವ ಅಗತ್ಯಪೂರ್ಣ ಶಾಸ್ತ್ರ ಎಂಬುದಾಗಿ ಬಹುವಾಗಿ ಗೌರವಿಸಲಾಯಿತು. ಆದರೆ ಸಾಮಾಜಿಕ ಇತಿಹಾಸವನ್ನು ಕುತೂಹಲವನ್ನು ತಣಿಸುವ ಮತ್ತು ವಿಚಿತ್ರ ಕಲ್ಪನೆಗಳನ್ನು ಉಂಟುಮಾಡುವ ಒಂದು ವಿನೋದ ಎಂಬುದಾಗಿ ಎಣಿಸಿ ನಿರ್ಲಕ್ಷಿಸಲಾಗಿದ್ದಿತು. ಶಾಸ್ತ್ರಗಳು ಚೆನ್ನಾಗಿ ವಿಕಾಸಗೊಂಡು ರಾಜ್ಯಕ್ಕಿಂತ ಸಮಾಜವೇ ಹೆಚ್ಚು ಮುಖ್ಯವಾದುದು, ಮೂಲಭೂತವಾದುದು ಎಂಬುದನ್ನು ಪ್ರತಿಪಾದಿಸಿ ಸಮರ್ಥಿಸಿದಾಗ, ರಾಜಕೀಯ ಇತಿಹಾಸದಂತೆ ಸಾಮಾಜಿಕ ಇತಿಹಾಸವೂ ಬಹು ಮುಖ್ಯವಾಯಿತು. ಅಲ್ಲಿಂದ ಸಾಮಾಜಿಕ ಇತಿಹಾಸ ಮುಖ್ಯವಾದ ಶಾಖೆಯಾಗಿ ಬೆಳೆಯುವುದಕ್ಕೆ ಹೆಚ್ಚು ಅವಕಾಶವಾಯಿತು. ಆದರೂ ರಾಜಕೀಯ ಇತಿಹಾಸದ ಕಾಲಗಣನಾ ಚೌಕಟ್ಟು ಇದಕ್ಕೆ ಅನಿವಾರ್ಯವಾಗಿ ಬೇಕಾಗುತ್ತದೆ. ಸರ್ಕಾರವು ಎಲ್ಲಾ ಕ್ಷೇತ್ರಗಳಲ್ಲಿ ತಲೆ ಹಾಕುವುದರಿಂದ ಮತ್ತು ಯೋಜನೆಗಳನ್ನು ಮಾಡುವುದರಿಂದ ಸಾಮಾನ್ಯ ಜನರ ಜೀವನದ ಮೇಲೆ ಆಗುವ ಪರಿಣಾಮ, ಇದರಿಂದ ನಾಡಿಂದ ನಾಡಿಗೆ ಜನಜೀವನದಲ್ಲಿ ಆಗುವ ಭೇದ ಮುಂತಾದ ಮಾನವ ಅಸ್ತಿತ್ವದ ಮುಖವನ್ನು ಸಾಮಾಜಿಕ ಇತಿಹಾಸಕಾರರು ನಿರ್ಲಕ್ಷಿಸಲಾರನು.

ಇಂದು ಈ ಶಾಖೆಯಲ್ಲಿ ಸಾಮಾಜಿಕ ರಚನೆಯನ್ನು ಕುರಿತ ಐತಿಹಾಸಿಕ ಅಧ್ಯಯನಗಳು ಮುಖ್ಯವಾಗುತ್ತಿವೆ. ಸಮಾಜಶಾಸ್ತ್ರಜ್ಞ ಹಾಗೂ ಮಾನವವಿಜ್ಞಾನಿಯಂತೆ, ಸಾಮಾಜಿಕ ರಚನಾ ಇತಿಹಾಸಕಾರನೂ ಸಹ ತನ್ನ ಅಧ್ಯಯನವನ್ನು ತಾನು ಆರಿಸಿಕೊಂಡಿರುವ ವಿಷಯವಾದ ಸಮಾಜದಲ್ಲಿ ಇದ್ದ ಕುಟುಂಬದ ಗಾತ್ರ, ರಚನೆ, ಕಾರ್ಯಗಳಿಂದ ಆರಂಭಿಸಿ ನಂತರ ಅದರ ಬಂಧುತ್ವ ವ್ಯವಸ್ಥೆ ಹಾಗೂ ಒಂದು ಸಮುದಾಯವನ್ನು ನಿರ್ಮಿಸಿ, ನಿರೂಪಿಸಿ ಬೆಳೆಸುವುದಕ್ಕೆ ಬೇಕಾದ ಭೌಗೋಳಿಕ, ಆರ್ಥಿಕ, ಧಾರ್ಮಿಕ, ಬೌದ್ಧಿಕ ಮುಂತಾದ ಅಂಶ ಹಾಗೂ ಸಂಬಂಧಗಳನ್ನು ಕುರಿತು ವಿಚಾರ ಮಾಡಬೇಕು; ತಾನು ಆರಿಸಿಕೊಂಡಿರುವ ವಿಷಯಗಳು ಪ್ರಮುಖವಾದುವು, ಉಪಯುಕ್ತವಾದುವು ಎಂಬುದನ್ನು ಸಾಧಿಸಬೇಕಾದರೆ ಇವನಿಗೆ ಸಾಮಾಜಿಕ ಸಿದ್ಧಾಂತಗಳ ಬಗ್ಗೆ ಸ್ಪಷ್ಟವಾದ ಅರಿವಿರಬೇಕು; ಜೊತೆಗೆ ತನ್ನದೂ ಸಹ ಸೈದ್ಧಾಂತಿಕ ಹಾಗೂ ಅನುಭವಿಕ ವರ್ಣನಾತ್ಮಕ ಅಧ್ಯಯನವೆಂಬುದನ್ನು ಮನಗಾಣಬೇಕು. ಇವನು ಕಥನ ಕ್ರಮಕ್ಕೆ ಬದಲಾಗಿ ತುಲನಾತ್ಮಕ ವಿಧಾನವನ್ನು ಅನುಸರಿಸಿ, ನಿರ್ದಿಷ್ಟ ಸಂಸ್ಥೆಗಳನ್ನು ಕುರಿತು ವಿಚಾರ ಮಾಡುವುದಕ್ಕೆ ಬದಲಾಗಿ ಸಮಗ್ರ ಸಾಮಾಜಿಕ ರಚನೆಯ ಬಗ್ಗೆ ಅಧ್ಯಯನ ಮಾಡಬಹುದು; ಗತಕಾಲದ ಯಾವುದೋ ವಿಶಿಷ್ಟ ಸಮಯದಲ್ಲಿ ಇದ್ದ ನಿರ್ದಿಷ್ಟ ಸಮಾಜಗಳ ಬಗ್ಗೆ ವ್ಯಾಪಕವಾಗಿ ಸಮೀಕ್ಷೆ ನಡೆಸಬಹುದು; ಒಂದು ನಿರ್ದಿಷ್ಟ ಕಾಲದಲ್ಲಿ ಸಂಭವಿಸಿದ ಸಾಮಾಜಿಕ ಪರಿವರ್ತನೆಯನ್ನು ಕುರಿತು ದಾಖಲೆಯನ್ನು ಸಿದ್ಧಪಡಿಸಬಹುದು; ಇಷ್ಟು ಮಾತ್ರವಲ್ಲದೆ ಇವನು ಸಾಮಾಜಿಕ ಕ್ಷೇತ್ರದ ಯಾವುದೋ ಒಂದು ಪ್ರತ್ಯೇಕ ವಿಭಾಗವನ್ನು ಆರಿಸಿಕೊಂಡು ವಿಚಾರ ಮಾಡಬಹುದು. ಆಗ ಆ ವಿಭಾಗಕ್ಕೆ ನಿಕಟವಾಗಿ ಸಂಬಂಧಿಸಿರುವ ಸಾಮಾಜಿಕ ಶಾಸ್ತ್ರದ ಸಿದ್ಧಾಂತ ಹಾಗೂ ಅಧ್ಯಯನ

ತಂತ್ರಗಳನ್ನು ಬಳಸಬೇಕಾಗುತ್ತದೆ. ಉದಾಹರಣೆಗೆ, ಆರ್ಥಿಕ ಇತಿಹಾಸವು ಅರ್ಥಶಾಸ್ತ್ರದ ಮತ್ತು ಜನಸಂಖ್ಯಾ ವಿಜ್ಞಾನದ ಸಿದ್ಧಾಂತ, ತಂತ್ರಗಳನ್ನು ಉಪಯೋಗಿಸಿಕೊಳ್ಳುತ್ತದೆ. ಈ ಎರಡು ಸಾಮಾಜಿಕ ಶಾಸ್ತ್ರಗಳಲ್ಲಿ ಪರಿಮಾಣಿಸುವುದು ಹಾಗೂ ಗಣಿತ ಶಾಸ್ತ್ರೀಯವಾಗಿ ವಿಶ್ಲೇಷಿಸುವುದು ಬಹುಮಟ್ಟಿಗೆ ಸುಲಭ. ಹೀಗೆಂದ ಮಾತ್ರಕ್ಕೆ ಇತರ ಸಾಮಾಜಿಕ ವಿಜ್ಞಾನಗಳ ಸಿದ್ಧಾಂತ, ವಿಧಾನಗಳು ಪರಿಣಾಮಕಾರಿಯಾದುವಲ್ಲ, ಉಪಯುಕ್ತವಾದುದಲ್ಲ ಎಂದರ್ಥವಲ್ಲ. ಉದಾಹರಣೆಗೆ, ಮತಧರ್ಮ ಹಾಗೂ ಶಿಕ್ಷಣ ಇತಿಹಾಸವು ಧಾರ್ಮಿಕ ಹಾಗೂ ಶೈಕ್ಷಣಿಕ ಸಿದ್ಧಾಂತಗಳನ್ನು ಬಳಸಿಕೊಳ್ಳುತ್ತವೆ. ಅದೇ ರೀತಿ ಸಮಾಜ ವಿಜ್ಞಾನ ಹಾಗೂ ಮನೋವಿಜ್ಞಾನಗಳ ಸಿದ್ಧಾಂತಗಳನ್ನು ಸಾಹಿತ್ಯ ಹಾಗೂ ಲಲಿತಕಲೆಗಳ ಇತಿಹಾಸ ಮತ್ತು ಸಾಮಾಜಿಕ ಹಾಗೂ ರಾಜಕೀಯ ಚಿಂತನ ಚರಿತ್ರೆಯ ಅಧ್ಯಯನದಲ್ಲಿ ಬಳಸಿಕೊಳ್ಳಲಾಗುತ್ತದೆ. ಇತಿಹಾಸ, ಗಣಿತಶಾಸ್ತ್ರ ಹಾಗೂ ಇತರ ವಿಜ್ಞಾನಗಳನ್ನು ಅವಶ್ಯಕವಾಗಿ ಉಪಯೋಗಿಸಬಹುದು. ಇಂದು ರಾಜ್ಯಶಾಸ್ತ್ರ ಹಾಗೂ ಸಮಾಜಶಾಸ್ತ್ರದ ಸಿದ್ಧಾಂತಗಳನ್ನು ಬಳಸಿಕೊಳ್ಳಲು ಶಕ್ತವಾಗಿರುವ ಇನ್ನೊಂದು ಹೊಸ ಉಪಶಾಖೆ ಮೇಲಕ್ಕೇಳುತ್ತಿದೆ. ಅದನ್ನು "ಪ್ರಾಯೋಗಿಕವಾಗಿ ರಾಜಕೀಯ ವ್ಯವಸ್ಥೆ" ಅಥವಾ "ಪಾಲ್ಗೊಳ್ಳುವಿಕೆಯ ಇತಿಹಾಸ" ಎಂಬುದಾಗಿ ಕರೆಯಬಹುದು. ಇದರೊಂದಿಗೆ ಕೇವಲ ಕುಟುಂಬ ರಚನೆ ಹಾಗೂ ಬಂಧುತ್ವ ವ್ಯವಸ್ಥೆಗಳನ್ನು ಒಳಗೊಂಡಂತೆ ಎಲ್ಲಾ ಸದಸ್ಯರ ಪಟ್ಟಿ; ವಿವಾಹವಾಗಲು ನೀಡಲಾದ ಪರವಾನೆ; ದಾರಿದ್ರ್ಯ ಪರಿಹಾರಕ್ಕೆ ಸಂಬಂಧಪಟ್ಟಂತೆ ಸಿದ್ಧಪಡಿಸಲಾದ ನಿಯತವಾದ ದಾಖಲೆಗಳ ಮೇಲೆ ಮುಂತಾದ ಪ್ರಮಾಣ ಪತ್ರಗಳ ಆಧಾರದ ಮೇಲೆ ವಾಸ್ತವಾಂಶಗಳನ್ನು ಸಂಗ್ರಹಿಸಿ ಸಾಮಾಜಿಕ ರಚನೆಯನ್ನು ವಿವರಿಸಬಹುದು.

ಇಲ್ಲಿ ಇತ್ತೀಚೆಗೆ ಶೀಘ್ರವಾಗಿ ಬೆಳೆದುಬಂದಿರುವ ಸ್ವಾರಸ್ಯಕರವಾದ ಉಪಶಾಖೆಗಳಲ್ಲಿ ಜನಸಂಖ್ಯಾ ಇತಿಹಾಸವು ಒಂದಾಗಿದೆ. ಈ ಉಪಶಾಖೆಗೆ ಸಂಬಂಧಿಸಿದ ಮಾಹಿತಿಗಳನ್ನು ವೈಜ್ಞಾನಿಕ ರೀತಿಯಲ್ಲಿ ಸಂಗ್ರಹಿಸಿ, ವಿವರಿಸುವ ಕ್ರಮವನ್ನು ಅಳವಡಿಸಿಕೊಳ್ಳುವುದಕ್ಕೆ ಬಹು ಮುಂಚಿನಿಂದಲೂ ಇದರ ಅಧ್ಯಯನದಲ್ಲಿ ಆಸಕ್ತಿಯನ್ನು ತೋರಲಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಆರ್ಥಿಕ ಇತಿಹಾಸಕಾರರು ಆರ್ಥಿಕ ಬದಲಾವಣೆಯ ಅಧ್ಯಯನದಲ್ಲಿ ಜನಸಂಖ್ಯೆಯನ್ನು ಒಂದು ಮುಖ್ಯವಾದ ಚಲಪರಿಮಾಣವಾಗಿ ಬಳಸುವುದಕ್ಕೆ ಆರಂಭಿಸಿದ್ದಾರೆ ಮತ್ತು ಕುಟುಂಬವನ್ನು ಒಂದು ಘಟಕವಾಗಿ ವಿಚಾರ ಮಾಡುವುದರಲ್ಲಿ ಅತೀವ ಆಸಕ್ತಿಯನ್ನು ವಹಿಸಿದವರು ಸಾಮಾಜಿಕ ಇತಿಹಾಸಕಾರರು. ಸಂತಾನಶಕ್ತಿ, ವಿವಾಹ ಮಾದರಿಗಳು, ಜನಸಂಖ್ಯೆ ಮೇಲೆ ಕೈಗಾರಿಕೀಕರಣದ ಪ್ರಭಾವ, ಕೈಗಾರಿಕೀಕರಣದ ಪ್ರಕ್ರಿಯೆಗಳಲ್ಲಿ ಜನಸಂಖ್ಯೆ ಪಾತ್ರ, ಕುಟುಂಬದ ಗಾತ್ರ, ವಿವಾಹಯೋಗ್ಯ ವಯಸ್ಸಿಗೆ ಸಂಬಂಧಿಸಿದ ಅಂಕಿ ಅಂಶ ಇತ್ಯಾದಿಗಳ ವಿಶ್ಲೇಷಣೆ ಉದ್ಭವಿಸುತ್ತದೆ. ಈ ಸಾಮಗ್ರಿಗಳ ಜೊತೆ ಕಾರ್ಯನೀತಿಯ ಸಮಸ್ಯೆಗಳಿಗೆ ಉತ್ತರಿಸಬೇಕು. ಉದಾ: ಕೈಗಾರಿಕಾ ಪೂರ್ವ ಜಗತ್ತಿನಲ್ಲಿ ಕುಟುಂಬವು ನಿರ್ವಹಿಸುತ್ತಿದ್ದ ಕಲ್ಯಾಣ ಕಾರ್ಯಗಳ ಹೊಣೆಗಾರಿಕೆಯನ್ನು ವಹಿಸಿಕೊಳ್ಳಲು ಯತ್ನಿಸುವ ಇಂದಿನ ಸಾಮಾಜಿಕ ನೀತಿಯ ಮೌಲ್ಯವನ್ನು ನಿರ್ಧರಿಸುವುದು. ಇದರಿಂದಾಗಿ ಈ ಉಪಶಾಖೆಯಲ್ಲಿ ನೂತನ ಜೀವಕಳೆಯು ಮೂಡಿಬಂದಿತು. ಈ ಉಪಶಾಖೆಯು ಸಂಖ್ಯೆಗಳ ವಿಚಾರದಲ್ಲಿ ಕುತೂಹಲ ತೋರುವುದಕ್ಕಿಂತ ಹೆಚ್ಚಾಗಿ ಘೋಷಣೆ, ಜೀತಪದ್ಧತಿ, ಔಷಧಿ, ಜೀವನ್ಮರಣದ ಬಗ್ಗೆ ಮೂಲಭೂತ ಮನೋಭಾವ, ಇತ್ಯಾದಿ ಸಮಸ್ಯೆಗಳಲ್ಲಿ ಆಸಕ್ತಿಯನ್ನು ವಹಿಸುತ್ತದೆ. ಇದರ ಉಪಶಾಖೆಗಳೂ ಹೆಚ್ಚು ಸಾಮಾಜಿಕವಾಗುತ್ತಿವೆ. ಮತಧರ್ಮವನ್ನು ಕುರಿತ ಇತಿಹಾಸವು ಕೈಗಾರಿಕಾ ಸಮಾಜಗಳಲ್ಲಿ ಮತಧರ್ಮದ ಪ್ರಭಾವದಲ್ಲಿ

ಉಂಟಾಗಿರುವ ಬದಲಾವಣೆಯನ್ನು ಕುರಿತಾದ ಅಧ್ಯಯನದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರುತ್ತಿದೆ. ಸ್ಥಳೀಯ ಇತಿಹಾಸವು ನಿರ್ದಿಷ್ಟವಾಗಿ ಸಮುದಾಯ ಎಂಬ ಭಾವರೂಪದ ಬಗ್ಗೆ ವಿಚಾರ ಮಾಡುತ್ತದೆ. ಇದರ ವಿಷಯಗಳು ಸೂಕ್ಷ್ಮ ಐತಿಹಾಸಿಕವಾದುವುಗಳಾಗಿವೆ ಎಂದು ಹೇಳಬಹುದು. ಎರಡು ಸಮಾಜಗಳು ವಿಕಾಸ ಹೊಂದಿದ ಬಗೆಯನ್ನು ಅಧ್ಯಯನ ಮಾಡುವಾಗ ಸಾಮ್ಯ ಹಾಗೂ ವ್ಯತ್ಯಾಸಗಳ ವಿಷಯಕ್ಕೆ ಇದು ಹೆಚ್ಚಿನ ಗಮನ ಕೊಡುತ್ತದೆ. ಹೆಚ್ಚುಕಡಿಮೆ ಈ ಎಲ್ಲಾ ಉಪಶಾಖೆಗಳಲ್ಲಿ ಕೇವಲ ನಿರ್ದಿಷ್ಟ ವ್ಯಕ್ತಿಗಳ ಬಗ್ಗೆ ವಿಚಾರ ಮಾಡುವುದಕ್ಕೆ ಬದಲಾಗಿ ಮಾದರಿಗಳನ್ನು ಬಳಸುವ ಹಾಗೂ ನಮೂನೆಗಳನ್ನು ಅವಲಂಬಿಸುವ ಪ್ರವೃತ್ತಿ ಕಂಡುಬರುತ್ತಿದೆ.

## 2.2.5 ಬೌದ್ಧಿಕ ಇತಿಹಾಸ

ಬೌದ್ಧಿಕ ಚರಿತ್ರೆಯು ಇತಿಹಾಸದ ಇನ್ನೊಂದು ಪ್ರಧಾನ ಶಾಖೆಯಾಗಿದೆ. ಇದರ ಕೆಲವು ಅಂಗಭಾಗಗಳು ಹೆರೊಡೋಟಸ್, ಥೂಸಿಡಿಡಿಸ್ ಮುಂತಾದ ಗ್ರೀಕ್ ಪಂಡಿತರ ಐತಿಹಾಸಿಕ ಬರಹಗಳಲ್ಲಿ ಕಂಡುಬರುತ್ತವೆ. ಆದರೆ 19ನೆಯ ಶತಮಾನದ ಕೊನೆಕೊನೆಗೆ ಬೌದ್ಧಿಕ ಇತಿಹಾಸವೂ ಭಾವನೆಗಳ ಅಥವಾ ಚಿಂತನೆಗಳ ಚರಿತ್ರೆ ಎಂಬ ಹೆಸರನ್ನು ಪಡೆದುಕೊಂಡಿತು. ಜರ್ಮನಿಯಲ್ಲಿ ಡಿಲ್ತೆ ಹಾಗೂ ಮ್ಯಾಕ್ಸ್‌ವೆಬರ್, ಫ್ರಾನ್ಸಿನಲ್ಲಿ ಹೆನ್ರಿ ಬರ್, ಬ್ರಿಟನ್ನಿನಲ್ಲಿ ಜೆ.ಬಿ.ಬ್ಯೂರಿ, ಕ್ರಿಸ್ಟೋಫರ್ ಡೌಸನ್ ಮುಂತಾದ ಚರಿತ್ರ ಲೇಖಕರು ಹಾಗೂ ಸ್ಟೀಫನ್‌ರಂಥ ಸಾಹಿತಿಗಳು ಮತ್ತು ಅಮೆರಿಕಾದಲ್ಲಿ ಜೇಮ್ಸ್ ಹಾರ್ವೆ ರಾಬಿನ್‌ಸನ್ ಮುಂತಾದ ಪಂಡಿತರು ಈ ಕ್ಷೇತ್ರಕ್ಕೆ ಸಾಕಷ್ಟು ಗಮನಾರ್ಹವಾದ ಕೊಡುಗೆಗಳನ್ನಿತ್ತು, ಇದೊಂದು ನಿರ್ದಿಷ್ಟ ಜ್ಞಾನಶಾಖೆಯಾಗಿ ಅರಳುವಂತೆ ಮಾಡಿದರು. ಇದು ಕೊನೆಗೆ ಮಾನವ ಇತಿಹಾಸವನ್ನು ರೂಪಿಸುವ ಮೂಲಭೂತ ಚಿಂತನೆ ಹಾಗೂ ಭಾವನಾ ಸಮುಚ್ಚಯವನ್ನು ಕುರಿತು ವಿಚಾರ ಮಾಡುತ್ತದೆ. ವ್ಯಕ್ತಿಗಳು ಯಾವ ವಿಚಾರವನ್ನು ಕುರಿತು ಹೇಗೆ ಚಿಂತನೆ ಮಾಡುತ್ತಾರೆ, ಅವರ ಮನಸ್ಸಿನಲ್ಲಿ ಉದ್ಭವಿಸುವ ಆಲೋಚನೆಗಳಾವುವು ಎಂಬುದನ್ನು ಪರಿಶೀಲಿಸುವುದರಲ್ಲಿ ಹಎಚ್ಚು ಆಸಕ್ತಿ ವಹಿಸುತ್ತದೆ. ಇದು ಚಿಂತನೆಗಳ ಮೂಲ ಹಾಗೂ ಬೆಳವಣಿಗೆಯನ್ನು ಪ್ರಾರಂಭದಿಂದಲೂ ಗುರುತಿಸಲು, ವಿಭಿನ್ನ ಸ್ಥಳ ಕಾಲಗಳಲ್ಲಿ ಅಭಿವ್ಯಕ್ತವಾದ ಚಿಂತನೆ ಹಾಗೂ ಮನೋಭಾವಗಳಲ್ಲಿ ಇದ್ದ ಸಾಮಾನ್ಯ ಹಾಗೂ ಅಸಾಧಾರಣ ಲಕ್ಷಣಗಳನ್ನು ಅರಿತುಕೊಳ್ಳಲು ಅವುಗಳು ಮಾನವ ಘಟನೆಗಳ ಮೇಲೆ ಬೀರಿದ ಪ್ರಭಾವದ ಹಾಗೂ ರಚನಾತ್ಮಕ ಚಿಂತನೆಗಳ ಪರಸ್ಪರ ಸಂಬಂಧವನ್ನು ವಿವರಿಸಲು ಪ್ರಯತ್ನಿಸುತ್ತದೆ. ಶಿಲ್ಲರ್ ಅವರು "ಚಿಂತನಗಳ ಚರಿತ್ರೆಯೇ ಮಾನವ ಕುಲದ ಯಥಾರ್ಥವಾದ ಇತಿಹಾಸ"ವಾಗಿದೆ ಎನ್ನುತ್ತಾರೆ. ಕಾಲಿಂಗ್‌ವುಡ್, "ಇತಿಹಾಸವು ಮಾನವ ಚಿಂತನಗಳ ಅಭಿವ್ಯಕ್ತಿ" ಎನ್ನುತ್ತಾರೆ. ಒಟ್ಟಿನಲ್ಲಿ, ಇದು ಯಾರು, ಎಲ್ಲಿ, ಯಾವಾಗ, ಹೇಗೆ, ಯಾವ ಬೌದ್ಧಿಕ ಅಥವಾ ಸಾಂಸ್ಕೃತಿಕ ಸಾಧನೆಗಳನ್ನು ಗಳಿಸಿದರು ಎಂಬುದನ್ನು ತಿಳಿಸುತ್ತದೆ. ಅತ್ಯಂತ ವಿಶಾಲಾರ್ಥದಲ್ಲಿ ಇದು ಮಾನವನ ಬೌದ್ಧಿಕ ಚಟುವಟಿಕೆಗಳ ಬಗ್ಗೆ ಇರುವ ದಾಖಲೆಯನ್ನೆಲ್ಲಾ ತನ್ನ ಅಧ್ಯಯನದ ವಸ್ತುವನ್ನಾಗಿ ಮಾಡಿಕೊಳ್ಳುತ್ತದೆ.

ಬೌದ್ಧಿಕ ಇತಿಹಾಸವು ಮಾನವನ ಬುದ್ಧಿಶಕ್ತಿಯ ಕಾರಣ ಉದ್ಭವಿಸಿರುವ ಫಲಗಳನ್ನೆಲ್ಲಾ ತನ್ನ ಅಧ್ಯಯನಕ್ಕೆ ಮೂಲಾಧಾರ ಸಾಮಗ್ರಿಗಳನ್ನಾಗಿ ತೆಗೆದುಕೊಳ್ಳುತ್ತದೆ. ವಿಚಾರ ಮಾಡುತ್ತಿರುವ ಚಿಂತನೆಗಳನ್ನು ಮಾತ್ರವಲ್ಲದೆ, ಅವುಗಳ ಪ್ರಭಾವಕ್ಕೆ ಒಳಗಾಗಿರುವ ಒಂದು ನಿರ್ದಿಷ್ಟ ಸಮಾಜದ ಸ್ತರಗಳ ಸದಸ್ಯರ ಅಭಿಪ್ರಾಯ, ಮನೋಭಾವಗಳನ್ನು ಸ್ಪಷ್ಟವಾಗಿ ತಿಳಿಸುವಂತಹ ಮೂಲಾಧಾರಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಇಂದು ಮುದ್ರಣ ಕಲೆ, ಸಾರ್ವಜನಿಕ ಸಂಪರ್ಕ ಮಾಧ್ಯಮ, ಜನಾಭಿಪ್ರಾಯ ಸಂಗ್ರಹಣೆಗಾಗಿ ಇರುವ ಅನುಕೂಲಗಳ ಕಾರಣ ಇದು ಅತೀ ಹೆಚ್ಚಿನ ಅಧ್ಯಯನದ ಮೂಲ ಸಾಮಗ್ರಿಗಳನ್ನು ಪಡೆಯಬಲ್ಲದು. ಆದರೆ ಕಾಲಗರ್ಭದಲ್ಲಿ ಕಣ್ಮರೆಯಾಗಿ ಹೋಗಿರುವ ಮುಂಚಿನ ಕಾಲಗಳ ಅಧ್ಯಯನಕ್ಕೆ ಬೇಕಾದ ಮೂಲ ಸಾಮಗ್ರಿಗಳಿಗಾಗಿ ಇದು ದರ್ಶನ, ಸಾಹಿತ್ಯ, ಮತಧರ್ಮ, ವಿಜ್ಞಾನ, ಕಲೆ ಮುಂತಾದ ಶಾಸ್ತ್ರ ಕ್ಷೇತ್ರಗಳನ್ನು ಅವಲಂಬಿಸಬೇಕಾಗುತ್ತದೆ.

ಹೀಗೆಂದ ಮಾತ್ರಕ್ಕೆ ಬೌದ್ಧಿಕ ಇತಿಹಾಸವು ಈ ಎಲ್ಲಾ ಶಾಸ್ತ್ರಗಳನ್ನು ಒಳಗೊಂಡ ಒಂದು ಸಂಯೋಜನೆಯಾಗಿದೆ ಎಂದರ್ಥವಲ್ಲ. ಇದಕ್ಕೂ ಈ ಎಲ್ಲಾ ಶಾಸ್ತ್ರಗಳಿಗೂ ಸಾಕಷ್ಟು ಭೇದವಿದೆ. ಉದಾಹರಣೆಗೆ, ಅಗೋಚರವಾಗಿರುವ ವಿಷಯಗಳ ಅನ್ವೇಷಣೆ ಕೈಗೊಂಡು ಸಿದ್ಧಾಂತಗಳನ್ನು ಕಾಲಗಣನೆಯ ಪ್ರಕಾರ ದಾಖಲು ಮಾಡಿ ಅವುಗಳು ಹೇಗೆ ವಿಜ್ಞಾನಿಗಳಲ್ಲಿ ಹರಡಿ ಪ್ರಭಾವ ಬೀರಿದುವು ಎಂಬುದನ್ನು ದಾಖಲು ಮಾಡಬೇಕಾದುದು ವಿಜ್ಞಾನ ಇತಿಹಾಸಕಾರನ ಉದ್ದೇಶವಾಗಿರುತ್ತದೆ. ಬೌದ್ಧಿಕ ಇತಿಹಾಸಕಾರನು ಈ ಎಲ್ಲಾ ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡಿರಬೇಕು. ಈ ವೈಜ್ಞಾನಿಕ ಚಿಂತನೆ ಹಾಗೂ ಸಿದ್ಧಾಂತಗಳು ಸಾಮಾನ್ಯ ಜನರಲ್ಲಿ ಚಲಾವಣೆಗೆ ಬಂದಾಗ ಏನಾಯಿತು ಎಂಬುದನ್ನು ಸ್ಪಷ್ಟಪಡಿಸಬೇಕಾದುದು ಇವನ ಕರ್ತವ್ಯವಾಗಿರುತ್ತದೆ. ಹಾಗೆಯೇ ಫ್ರಾಯ್ಡ್‌ನ ಕೃತಿಯು ಮನೋವಿಶ್ಲೇಷಕರ ಹಾಗೂ ಮನೋರೋಗ ಚಿಕಿತ್ಸಕರ ಎಲೆ ಬೀರಿದ ಪ್ರಭಾವದ ಬಗ್ಗೆ ಒಂದು ಒಳ್ಳೆಯ ಇತಿಹಾಸವನ್ನು ಬರೆಯಬಹುದು. ಆದರೆ ಕಾದಂಬರಿಕಾರ, ನಾಟಕಕಾರ, ವರ್ಣಚಿತ್ರಕಾರ, ಪ್ರಬಂಧಕಾರ ಹಾಗೂ ಸಾಮಾನ್ಯ ಜನರ ಮೇಲೆ ಉಂಟಾಗಿರುವ ಅವುಗಳ ಪ್ರಭಾವದ ಪ್ರಮಾಣಕ್ಕೆ ಸರಿಯಾದ ಗಮನ ಕೊಡದೆ ಬೌದ್ಧಿಕ ಇತಿಹಾಸವನ್ನು ರಚಿಸುವುದು ಸಾಧ್ಯವಿಲ್ಲ. ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಆಲೋಚನೆಗಳು ಪ್ರವೀಣರ ಮೇಲೆ ಬೀರುವ ಪ್ರಭಾವಕ್ಕೂ, ಸಾಮಾನ್ಯ ಶಿಕ್ಷಿತ ಹಾಗೂ ಅಶಿಕ್ಷಿತರ ಮೇಲೆ ಬೀರುವ ಪ್ರಭಾವಕ್ಕೂ ಇರುವ ಸಾಕಷ್ಟು ವ್ಯತ್ಯಾಸವೇ ವಿಶ್ಲೇಷಣಾ ಇತಿಹಾಸ ಹಾಗೂ ಬೌದ್ಧಿಕ ಇತಿಹಾಸಗಳ ನಡುವೆ ಕಂಡುಬರುವ ಮೂಲ ಭೇದವಾಗುತ್ತದೆ. ಆದ್ದರಿಂದ ಬೌದ್ಧಿಕ ಇತಿಹಾಸಕಾರನ ಕಾರ್ಯ ಕಷ್ಟಸಾಧ್ಯವಾದುದು.

ಇಷ್ಟು ಮಾತ್ರವಲ್ಲದೆ, ಬೌದ್ಧಿಕ ಇತಿಹಾಸವು ಒಂದು ನಿರ್ದಿಷ್ಟ ಸಮಾಜದ ಮೇಲೆ ಚಿಂತನೆ ಅಥವಾ ಮನೋಭಾವನೆಗಳು ಬೀರುವ ಪ್ರಭಾವಗಳ ಸ್ವರೂಪದ ಬಗ್ಗೆ ಒಂದು ತೀರ್ಮಾನಕ್ಕೆ ಬರುವಾಗ ಮೌಲ್ಯನಿರ್ಣಯದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇದನ್ನು ರೂಪಕವಾಗಿ "ಚಿಂತನಗಳ ನಿರೂಪಣ ಪಟ" ಎಂಬುದಾಗಿ ವಿವರಿಸಬಹುದು. ಆದರೆ ಭೂಪಟ ರಚಿಸುವವನು ತಾನು ನಿರೂಪಣ ಪಟದಲ್ಲಿ ರೇಖಿಸುತ್ತಿರುವ ಭೂಮಂಡಲದ ನಿರ್ದಿಷ್ಟ ಪ್ರದೇಶದ ಬಗ್ಗೆ ಒಂದು ತೀರ್ಮಾನಕ್ಕೆ ಬರಲು, ಬೆಲೆ ಕಟ್ಟಲು, ತಪ್ಪು ಕಂಡುಹಿಡಿದು ಖಂಡಿಸಲು ಅಥವಾ ಗುಣ ದೋಷವನ್ನು ವಿಮರ್ಶಿಸಿ ವ್ಯಾಖ್ಯೆ ಮಾಡಲು

ಯತ್ನಿಸುವುದಿಲ್ಲ. ಆ ಭೂಪಟವನ್ನು ಒಂದು ಮಾರ್ಗ ನಿರ್ದೇಶಕನಾಗಿ ಬಳಸುತ್ತಿರುವ ಪ್ರಯಾಣಿಕನು ಆ ಭೂಭಾಗವನ್ನು ಕಂಡಾಗ ಪರೀಕ್ಷಿಸಿ, "ಇದು ಸುಂದರವಾದುದು", "ಇದು ವಿಕಾರವಾದುದು" ಎಂಬುದಾಗಿ ತೀರ್ಮಾನಿಸಿ ಹೇಳುತ್ತಾನೆ. ಬೌದ್ಧಿಕ ಇತಿಹಾಸಕಾರನು ಭೂಪಟ ನಿರ್ಮಾಪಕನಂತಿದ್ದರೂ ಅದನ್ನು ಬಳಸುವ ಪ್ರಯಾಣಿಕನಾಗದೇ ಇರಲಾರನು.

ಹೀಗೆ ಬೌದ್ಧಿಕ ಇತಿಹಾಸವು ವ್ಯಾಪಕವಾದ ಅಧ್ಯಯನ ವಿಷಯ ಹಾಗೂ ದೃಷ್ಟಿಕೋನಗಳಿಂದ ಕೂಡಿರುವ ದೊಡ್ಡ ಅಧ್ಯಯನ ರಂಗವಾಗಿದೆ.

## 2.2.6 ಸಾಂಸ್ಕೃತಿಕ ಇತಿಹಾಸ

ಸಾಂಸ್ಕೃತಿಕ ಚರಿತ್ರೆಯು ಇತಿಹಾಸದ ಇನ್ನೊಂದು ಪ್ರಮುಖ ಶಾಖೆ. ಇದು ಸಾಮಾನ್ಯವಾಗಿ ಇತಿಹಾಸದ ಉಪಭಾಗ; ಗತಕಾಲದ ಅಶಿಕ್ಷಿತ ಹಾಗೂ ಇಂದಿನ ಸಾಮಾನ್ಯ ಜನ ಐತಿಹಾಸಿಕ ಬೆಳವಣಿಗೆಯಲ್ಲಿ ವಹಿಸಿದ ಆಸಕ್ತಿಯನ್ನೂ ಕುರಿತು ವಿಶ್ಲೇಷಿಸುತ್ತದೆ. ಸಾಂಸ್ಕೃತಿಕ ಇತಿಹಾಸವು ಸಂಸ್ಕೃತಿಯ ಎಲ್ಲಾ ಮುಖಗಳ ಚರಿತ್ರೆಯಾಗಿದೆ. ಸಾಂಸ್ಕೃತಿಕ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳುವುದೇ ಇದರ ಪ್ರಧಾನ ಗುರಿಯಾಗಿದೆ. ಅದಕ್ಕಾಗಿ ಪರಿಸರದ ಪರಿವರ್ತನೆಗಳು, ಮಾನವ ಜನಾಂಗ ಭೇದಗಳು, ಪ್ರಾಚೀನ ಜನಸಂಖ್ಯಾಂಶಗಳಿಗೆ ಸಂಬಂಧಪಟ್ಟಿರುವ ಅನುಮಾನಗಳು ಮುಂತಾದ ಸಾಂಸ್ಕೃತಿಕವಾಗಿಲ್ಲದಿರುವ ಅಂಶಗಳ ಪ್ರತಿ ಜ್ಞಾನವು ಇದಕ್ಕೆ ಅವಶ್ಯಕವಾಗುತ್ತದೆ.

ದಾಖಲು ಮಾಡಲಾಗಿರುವ ಪ್ರಮಾಣಗಳಲ್ಲದೆ, ದಾಖಲು ಮಾಡಲಾಗಿಲ್ಲದೇ ಇರುವ ಶಾಬ್ಧಿಕ ಅಥವಾ ಬಾಯಿ ಮಾತಿನ ಪ್ರಮಾಣ, ವಾಚಿಕ ಸಂಪ್ರದಾಯ, ಗಾದೆ, ಮಹಾಕಾವ್ಯ, ಪ್ರಾಚ್ಯವಸ್ತು ಶೋಧನ ಶಾಸ್ತ್ರದ ಅನ್ವೇಷಣೆಗಳು, ಭಾಷಾ ಸಂಬಂಧವಾದ ವಿಷಯಗಳು ಸಾಂಸ್ಕೃತಿಕ ಇತಿಹಾಸಕ್ಕೆ ಮೂಲಾಧಾರಗಳಾಗುತ್ತವೆ. ಮುಖ್ಯವಾಗಿ ವಸ್ತುಗಳನ್ನು ಅವುಗಳು ತಲೆದೋರಿದ ಕಾಲದ ಸಾಂಸ್ಕ್ರತಿಕ ಚಟುವಟಿಕೆಗಳಿಗೆ ಪ್ರಮಾಣಗಳನ್ನಾಗಿ ಎಣಿಸಿ ವಿಚಾರ ಮಾಡುವ ಪ್ರಾಚ್ಯವಸ್ತು ಸಂಶೋಧನಾ ಶಾಸ್ತ್ರವು ಹೆಚ್ಚು ಉಪಯುಕ್ತವಾಗಿದೆ. ಒಂದು ನಿರ್ದಿಷ್ಟ ನಿವೇಶನ ಅಥವಾ ಭೂಸ್ತರದಲ್ಲಿ ಕಂಡುಬಂದ ಮನುಷ್ಯ ನಿರ್ಮಿತ ವಸ್ತುಗಳನ್ನು ಒಂದು ಸ್ಥಳೀಯ ಸಮುದಾಯ ಜೀವನದ ಭೌತ ಅಭಿವ್ಯಕ್ತಿಗಳೆಂಬುದಾಗಿ ಎಣಿಸಲಾಗುತ್ತದೆ. ಒಂದು ವ್ಯಾಪಕ ಪ್ರದೇಶದಲ್ಲಿ ನಿರಂತರವಾಗಿ ಕಂಡುಬಂದಿರುವ ಒಂದೇ ತೆರನಾದ ಮೂರ್ತ ವಸ್ತುಗಳನ್ನು ಹೆಚ್ಚುಕಡಿಮೆ ಒಂದೇ ಕಾಲಕ್ಕೆ ಸೇರಿದ್ದುವು ಎಂಬುದನ್ನು ಸೂಚಿಸುವ ಚಿಹ್ನೆಗಳಾಗಿ ಎಣಿಸಬಹುದು. ಒಂದು ಅವಸ್ಥೆ ಅಥವಾ ಮಟ್ಟ ಎಂಬುದಾಗಿ ಕರೆಯಲಾದ ಈ ತೆರನಾದ ಏಕಾಂಕವು ಒಂದು ಗಿರಿಪ್ರದೇಶದ ತಂಡದಂತಹ ಯಾವುದೋ ಸಾಮಾಜಿಕ–ಸಾಂಸ್ಕೃತಿಕ ಸಮೂಹವನ್ನು ಪ್ರತಿನಿಧಿಸುತ್ತದೆ ಎಂಬುದಾಗಿ ಊಹಿಸಬಹುದು. ಪ್ರಾಚ್ಯವಸ್ತು ಶೋಧನಾ ಶಾಸ್ತ್ರವು ಭೌತವಸ್ತುಗಳ ಉಳಿಕೆಗಳ ಆಧಾರದ ಮೇಲೆ ಸಾಮಾಜಿಕ–ಸಾಂಸ್ಕೃತಿಕ ಘಟಕಗಳಿಗೆ ಇದ್ದ ಕಾಲ–ದೇಶ ಸಂಬಂಧಗಳನ್ನು ಊಹಿಸುತ್ತದೆ; ನಿರ್ದಿಷ್ಟ ಸಾಂಸ್ಕೃತಿಕ ಲಕ್ಷಣ, ಸಂಮಿಶ್ರಣ ಅಥವಾ ಸಮಗ್ರ ಸಂಸ್ಕೃತಿಗಳ ಐತಿಹಾಸಿಕ ಸಂಬಂಧಗಳ ಬಗ್ಗೆ ಸಾಂಸ್ಕೃತಿಕ

ಸಾದೃಶ್ಯಗಳು ಹಾಗೂ ಜನರ ಪ್ರಾದೇಶಿಕ ಚಲನೆ ಬಗ್ಗೆ ವಿಚಾರ ಮಾಡುತ್ತದೆ; ಪ್ರಾದೇಶಿಕ ಚಲನೆ ಅಥವಾ ಒಂದು ಸಂಸ್ಕೃತಿಯು ನೆರೆಯ ಸಂಸ್ಕೃತಿಯೊಂದಿಗೆ ಸಂಪರ್ಕ ಬೆಳೆಸಿ ಅದರ ವಿಶಿಷ್ಟ ಲಕ್ಷಣಗಳನ್ನು ಎರವಲಾಗಿ ಪಡೆದುದ್ದು ಹೇಗೆಂಬುದನ್ನು ವಿವರಿಸಲು ಯತ್ನಿಸುತ್ತದೆ. ಪ್ರಾಚ್ಯವಸ್ತು ಶೋಧನಾ ಶಾಸ್ತ್ರವು ಸಾಂಸ್ಕೃತಿಕ ಇತಿಹಾಸಕ್ಕೆ ಈ ಅನುಕೂಲಗಳನ್ನು ಒದಗಿಸುವುದಲ್ಲದೆ, ಇತ್ತೀಚಿನ ಕಾಲಗಳ ದಾಖಲಾದ ಇತಿಹಾಸಕ್ಕೆ ಪೂರಕವಾಗಿರುವಂತಹ ಅತ್ಯಂತ ಪ್ರಾಚೀನ ಕಾಲದಲ್ಲಿದ್ದ ಸಾಮಗ್ರಿಗಳನ್ನು ಒದಗಿಸಿ, ಸಾಂಸ್ಕೃತಿಕ ಬೆಳವಣಿಗೆಯ ದೀರ್ಘಕಾಲಿಕ ವಿಕಾಸಾತ್ಮಕ ಪ್ರವೃತ್ತಿಗಳ ಬಗ್ಗೆ ಊಹೆ ಮಾಡಲು ಸಹಾಯ ಮಾಡುತ್ತದೆ.

ಸಾಂಸ್ಕೃತಿಕ ವಿಶೇಷ ಲಕ್ಷಣಗಳ ಪ್ರಾದೇಶಿಕ ಪ್ರಸಾರದ ಅಧ್ಯಯನ ಮಾಡುವುದರ ಮೂಲಕ ಸಾಂಸ್ಕೃತಿಕ ಸಾಮಗ್ರಿಗಳನ್ನು ಬಳಸಿ ಇತಿಹಾಸವನ್ನು ಪುನರ್ರಚಿಸುವುದು ಇನ್ನೊಂದು ವಿಧಾನ. ತುಲನಾತ್ಮಕ ಭಾಷಾಶಾಸ್ತ್ರವು ಈ ಪದ್ಧತಿಯ ಒಂದು ನಿದರ್ಶನವಾಗುತ್ತದೆ. ಭಾಷಾ ಸಂಬಂಧವಾದ ಸಂಪರ್ಕದ ವಿಷಯಗಳನ್ನು ಅಧ್ಯಯನ ಮಾಡುವುದರಿಂದ ಭಾಷಾ ಸಂಬಂಧವಾದ ಆಧಾರಾಂಶಗಳ ಮೇಲೆ ಅವಲಂಬಿತವಾಗಿರುವಂತಹ ಸಾಂಸ್ಕೃತಿಕ–ಐತಿಹಾಸಿಕ ವಿಷಯಗಳನ್ನು ಸಂಗ್ರಹಿಸಿಕೊಳ್ಳಬಹುದು. ಉದಾಹರಣೆಗೆ, ನಿರ್ದಿಷ್ಟ ಸಾಂಸ್ಕೃತಿಕ ವಿಷಯಗಳಿಂದ ಕೂಡಿರುವ ಹಾಗೂ ಒಂದು ಸಂಸ್ಕೃತಿಯವರು ಮತ್ತೊಂದು ಸಂಸ್ಕೃತಿಯಿಂದ ಪಡೆದುಕೊಂಡ ಎರವಲು ಮಾತುಗಳು ಅತ್ಯಂತ ಮುಖ್ಯವಾದ ವಿಷಯ ಸಾಮಗ್ರಿಗಳನ್ನು ಒದಗಿಸಿಕೊಡುತ್ತವೆ.

ಇಷ್ಟು ಮಾತ್ರವಲ್ಲದೆ, ಕೆಲವು ಸಾಂಸ್ಕೃತಿಕವಾಗಿಲ್ಲದ ವಿಷಯಗಳ ಅಧ್ಯಯನವನ್ನೂ ಸಹ ಸಾಂಸ್ಕೃತಿಕ ಇತಿಹಾಸದ ಅಧ್ಯಯನದೊಂದಿಗೆ ಸಂಯೋಜಿಸಬಹುದು. ಮಾನವ ಜನಾಂಗಗಳ ಉತ್ಪತ್ತಿ ವಿಷಯದ ಚರಿತ್ರೆಯು ಸಾಂಸ್ಕೃತಿಕ ಇತಿಹಾಸಕ್ಕೆ ಸಂಬಂಧಿಸಿದೆ. ಅದರ ವಿಷಯಗಳು ಈ ಕ್ಷೇತ್ರಕ್ಕೆ ಸುಸಂಬದ್ಧವಾಗಿವೆ. ಅದೇ ರೀತಿ ಮಾನವನು ತಾನೇ ಬೆಳೆದ ಸಸ್ಯ ಹಾಗೂ ಪಳಗಿಸಿದ ಪ್ರಾಣಿಗಳ ಬಗ್ಗೆ ಮಾಡಿದ ಅಧ್ಯಯನವೂ ಸಹ ಸಾಂಸ್ಕೃತಿಕ ಇತಿಹಾಸಕ್ಕೆ ವಿಷಯಗಳನ್ನು ಒದಗಿಸಿಕೊಡುವ ಸಾಂಸ್ಕೃತಿಕವಾಗಿಲ್ಲದ ಇನ್ನೊಂದು ಮೂಲಾಧಾರವಾಗಿದೆ. ಇದು ಜನರ ನಡುವೆ ಬೆಳೆದುಬಂದ ಸಂಪರ್ಕಗಳ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಹಾಗೂ ಪ್ರಮಾಣಗಳನ್ನು ಒದಗಿಸಿಕೊಡುತ್ತದೆ.

ಹೀಗೆ ಸಾಂಸ್ಕೃತಿಕ ಚರಿತ್ರೆಯು ಇತಿಹಾಸ ವೃಕ್ಷದಲ್ಲಿ ಅತ್ಯಂತ ಗಮನಾರ್ಹವಾಗಿರುವ ದೊಡ್ಡ ಶಾಖೆಯಾಗಿ ಬೆಳೆದುಬರುತ್ತಿದೆ.

### 2.2.7 ಮಾನವ ಜನಾಂಗ ಇತಿಹಾಸ

ಇತಿಹಾಸ ಕ್ಷೇತ್ರದಲ್ಲಿ ಗಮನಾರ್ಹವಾಗಿರುವ ಮತ್ತೊಂದು ಶಾಖೆಯೇ ಮಾನವ ಜನಾಂಗದ ಚರಿತ್ರೆ. ಈ ಹೆಸರು ಇಪ್ಪತ್ತನೆಯ ಶತಮಾನದ ಅರುಣೋದಯ ಕಾಲದಿಂದ ಮಿಂಚು ಸುಳಿದಂತೆ ಆಗೊಮ್ಮೆ ಈಗೊಮ್ಮೆ ಬೆಳಕಿಗೆ ಬರುತ್ತಿದ್ದಿತು. 1940ರ ನಂತರ ಹಾದು ಬಂದ ವರ್ಷಗಳಲ್ಲಿ ಉತ್ತರ ಅಮೇರಿಕಾದ

ಸಾಂಸ್ಕೃತಿಕ ಮಾನವಶಾಸ್ತ್ರಜ್ಞರು, ಪ್ರಾಚ್ಯವಸ್ತು ಶೋಧಕರು ಹಾಗೂ ಇತಿಹಾಸಕಾರರು ನೂತನ ಜಗತ್ತಿನ ಮೂಲ ನಿವಾಸಿಗಳ ಬಗ್ಗೆ ತಾವು ಮಾಡಿದ ಅನ್ವೇಷಣೆ ಹಾಗೂ ಸಿದ್ಧಪಡಿಸಿದ ಬರಹಗಳನ್ನು ವಿವರಿಸುವುದಕ್ಕಾಗಿ ಈ ಪದವನ್ನು ಮೊದಲ ಬಾರಿಗೆ ಕ್ರಮಬದ್ಧವಾಗಿ ಬಳಸಿದರು.

ಮಾನವ ಜನಾಂಗದ ಇತಿಹಾಸಕಾರರು ಐತಿಹಾಸಿಕ ಘಟನೆಗಳನ್ನು ಮೂಲನಿವಾಸಿಗಳ ದೃಷ್ಟಿಕೋನದಿಂದ ನೋಡಿ ಅಧ್ಯಯನ ಮಾಡಲು ಪ್ರಯತ್ನಿಸುತ್ತಾನೆ; ಆದ್ದರಿಂದ ಲಿಖಿತ ದಾಖಲೆಗಳಲ್ಲದೆ, ವಿವಿಧ ವಿಷಯಗಳನ್ನು ಒಳಗೊಂಡಿರುವ ಹಾಗೂ ವಿಭಿನ್ನ ಬಗೆಗಳಲ್ಲಿರುವ ವಾಚಿಕ ಸಂಪ್ರದಾಯ, ಪವಿತ್ರ ಸೂತ್ರ ಹಾಗೂ ಹೆಸರು, ಪದ್ಯ, ವಂಶಾವಳಿ, ಜನಪದ ಗೀತೆ ಹಾಗೂ ಕಥೆ, ಪುರಾಣ, ಕಾನೂನು, ಪೂರ್ವ ನಿದರ್ಶನ ಮುಂತಾದ ಮೂಲಾಧಾರಗಳನ್ನು ಬಳಸಿಕೊಳ್ಳುತ್ತಾನೆ. ಕ್ಷೇತ್ರಕಾರ್ಯವು ಇವನಿಗೆ ಅತ್ಯಾವಶ್ಯಕ. ಸಾಮಾನ್ಯವಾಗಿ ನೇರವಾದ ಕ್ಷೇತ್ರಾನುಭವ ಇವನಿಗಿರುತ್ತದೆ. ಈ ಅನುಭವವು ಸ್ಥಳೀಯ ಸಮಾಜವು ಹೇಗೆ ಕಾರ್ಯವನ್ನು ನಿರ್ವಹಿಸುತ್ತಿದ್ದಿತು ಅಥವಾ ನಿರ್ವಹಿಸುತ್ತಿದೆ ಎಂಬುದರ ಬಗ್ಗೆ ತನಗಿರುವ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಇವನಿಗೆ ಸಹಾಯಕವಾಗುತ್ತದೆ. ಹೀಗೆ ಇವನು ದಾಖಲಾದ ಪ್ರಮಾಣಗಳ ಬಗ್ಗೆ ನೀಡುವ ಅರ್ಥ ವಿವರಣೆಯು ಇನ್ನೂ ಹೆಚ್ಚು ವಿಶ್ವಾಸಾರ್ಹವೂ ಹಾಗೂ ಗಾಢವೂ ಆಗುತ್ತದೆ ಮತ್ತು ಇವನು ನೀಡುವ ವ್ಯವಸ್ಥಿತ ಜ್ಞಾನವು ಇತಿಹಾಸ ಕ್ಷೇತ್ರವನ್ನು ಇನ್ನೂ ಹೆಚ್ಚು ಸಂಪತ್ಸಮೃದ್ಧವನ್ನಾಗಿಸುತ್ತದೆ.

ಇಷ್ಟು ಮಾತ್ರವಲ್ಲದೆ, ಮಾನವನಿಗೆ ಸಂಬಂಧಿಸಿರುವ ಪ್ರತಿ ವಿಷಯದ ಬಗ್ಗೆಯೂ ಒಂದು ಇತಿಹಾಸವನ್ನು ರಚಿಸಬಹುದು. ಇದರಿಂದ ಇತಿಹಾಸವನ್ನು ಪರಸ್ಪರ ಸಂಬಂಧಪಟ್ಟಿರುವ ಅನೇಕ ಪ್ರಮುಖ ಶಾಖೆ ಹಾಗೂ ಉಪಶಾಖೆಗಳಿಂದ ಕೂಡಿರುವ ಒಂದು ಮಹಾವೃಕ್ಷಕ್ಕೆ ಹೋಲಿಸಬಹುದು. ಇಲ್ಲಿ ಪ್ರತಿ ಶಾಖೆಯೂ ಹಾಗೂ ಉಪಶಾಖೆಯೂ ಮುಖ್ಯವೆ. ಒಂದಿಲ್ಲದಿದ್ದರೂ ಮಹಾವೃಕ್ಷದ ಸೊಗಸಿಗೆ ಕುಂದುಂಟಾಗುತ್ತದೆ.

## 2.3 ಸಾರಾಂಶ

ಈ ಘಟಕದ ಅಧ್ಯಯನವನ್ನು ನಡೆಸಿದ ನಂತರ ನಾವುಗಳೆಲ್ಲರೂ ಈ ಕೆಳಕಂಡ ವಿಷಯಗಳನ್ನು ಅರಿತುಕೊಂಡಂತಾಗಿದೆ.

- ಇತಿಹಾಸ ವಿಧಗಳನ್ನು ತಿಳಿದುಕೊಂಡೆವು.
- ಇದರ ಅಧ್ಯಯನದಿಂದ ಇತಿಹಾಸ ಅಧ್ಯಯನ ವಿವಿಧ ವಿಭಾಗಗಳ ಪರಿಚಯ ಮಾಡಿಕೊಂಡೆವು.

## 2.4 ಪ್ರಮುಖ ಪದಗಳು

1. ಸಬ್ ಆಲ್ಟರ್ನ್: ಕೆಳಮಟ್ಟದ ಅಥವಾ ಅಧೀನವಾದ

2. ಹೆಚ್.ಜಿ.ವೆಲ್ಸ್ : 'ಔಟ್‌ಲೈನ್ ಆಫ್ ಹಿಸ್ಟರಿ' ಕೃತಿಯ ಲೇಖಕ

## 2.5 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಇತಿಹಾಸದ ವಿಧಗಳಾವುವು? ವಿವರಿಸಿ.

## 2.6 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 2.2 ನೋಡಿ

## 2.7 ಪರಾಮರ್ಶನ ಗ್ರಂಥಗಳು


1) ಸುಬ್ರಹ್ಮಣ್ಯ ಎನ್ – Historiography

2) ಕಾಲಿಂಗ್‌ವುಡ್ ಆರ್.ಜಿ – The Idea of History

3) ಹ್ಯಾರಿಸನ್ – The Meaning of History

4) ಗೋಪಾಲ ಬಾ.ರಾ. – ಇತಿಹಾಸಶಾಸ್ತ್ರ ಮತ್ತು ಸಿದ್ಧಾಂತ



**ಪಠ್ಯವನ್ನು ರಚಿಸಿದವರು:**

**ಪ್ರೊ.ಎನ್.ಸರಸ್ವತಿ**

## ಘಟಕ–3 ಇತಿಹಾಸದ ಮತ್ತು ಇತರೆ ಸಮಾಜ ವಿಜ್ಞಾನಗಳು

ರಚನೆ


3.0 ಉದ್ದೇಶಗಳು

3.1 ಪೀಠಿಕೆ

3.2 ಇತಿಹಾಸ ಮತ್ತು ಸಮಾಜ ವಿಜ್ಞಾನಗಳೊಂದಿಗೆ ಸಂಬಂಧ

3.2.1 ಇತಿಹಾಸ ಮತ್ತು ರಾಜ್ಯಶಾಸ್ತ್ರ

3.2.2 ಇತಿಹಾಸ ಮತ್ತು ಅರ್ಥಶಾಸ್ತ್ರ

3.2.3 ಇತಿಹಾಸ ಮತ್ತು ಸಮಾಜಶಾಸ್ತ್ರ

3.2.4 ಇತಿಹಾಸ ಮತ್ತು ಮಾನವಶಾಸ್ತ್ರ

3.2.5 ಇತಿಹಾಸ ಮತ್ತು ಭೂಗೋಳಶಾಸ್ತ್ರ

3.2.6 ಇತಿಹಾಸ ಮತ್ತು ಮನಶಾಸ್ತ್ರ

3.3 ಇತರ ಸಹಾಯಕ – ಉಪಕಾರಕ ಶಾಸ್ತ್ರಗಳು

3.3.1 ಇತಿಹಾಸ ಮತ್ತು ಕಾಲಗಣನಾಶಾಸ್ತ್ರ

3.3.2 ಇತಿಹಾಸ ಮತ್ತು ಪ್ರಾಚೀನ ಲಿಪಿಶಾಸ್ತ್ರ

3.3.3 ಇತಿಹಾಸ ಮತ್ತು ಹಸ್ತಾಕ್ಷರ ಸಾಮುದ್ರಿಕ

3.3.4 ಇತಿಹಾಸ ಮತ್ತು ರಾಜಪತ್ರ ಹಾಗೂ ತಂತ್ರಶಾಸ್ತ್ರ

3.3.5 ಇತಿಹಾಸ ಮತ್ತು ಮುದ್ರಾಶಾಸ್ತ್ರ

3.3.6 ಇತಿಹಾಸ ಮತ್ತು ಭಾಷಾಶಾಸ್ತ್ರ

3.3.7 ಇತಿಹಾಸ ಮತ್ತು ಪ್ರಾಚೀನ ಶೋಧನ ವಿಜ್ಞಾನ, ಶಾಸನ ಶಾಸ್ತ್ರ ಹಾಗೂ ನಾಣ್ಯ ವಿಜ್ಞಾನ

3.3.8 ಇತಿಹಾಸ ಮತ್ತು ಸಾಹಿತ್ಯ ಹಾಗೂ ಭೌತವಿಜ್ಞಾನ

3.4 ಸಾರಾಂಶ

3.5 ಪ್ರಮುಖ ಪದಗಳು

3.6 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

3.7 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

3.8 ಪರಾಮರ್ಶನ ಗ್ರಂಥಗಳು

## 3.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನಾವುಗಳು ಈ ಕೆಳಕಂಡ ವಿಷಯಗಳನ್ನು ತಿಳಿಯಲಿದ್ದೇವೆ:

- ಇತಿಹಾಸದ ಅರ್ಥವನ್ನು ತಿಳಿಯುವೆವು.
- ಇತಿಹಾಸವು ಸಮಾಜ ವಿಜ್ಞಾನಗಳಾದ ಭೂಗೋಳಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮತ್ತು ಇತರೆ ವಿಷಯಗಳೊಂದಿಗಿನ ಸಂಬಂಧವನ್ನು ತಿಳಿಯುವೆವು.
- ಇತಿಹಾಸವು ಇತರೇ ವಿಜ್ಞಾನಗಳೊಂದಿಗೆ ಹೊಂದಿರುವ ಸಂಬಂಧಗಳು ಹಾಗೂ ಇನ್ನಿತರ ವಿಷಯಗಳ ಸಂಬಂಧವನ್ನು ಸಹ ತಿಳಿಯುವೆವು.

## 3.1 ಪೀಠಿಕೆ

ಇತಿಹಾಸವು ಮಾನವನ ಹಲವಾರು ಮುಖಗಳ ಅಧ್ಯಯನದ ವಿಷಯವಾಗಿದೆ. ಇತಿಹಾಸವು ಹಲವು ಸಮಾಜವಿಜ್ಞಾನಗಳೊಂದಿಗೆ ಸಂಬಂಧ ಹೊಂದಿದ್ದು ಈ ಸಂಬಂಧಗಳ ವ್ಯವಸ್ಥಿತವಾದ ಅಧ್ಯಯನವು ಮಾನವನ ಇತಿಹಾಸದ ಹಲವಾರು ಮುಖಗಳನ್ನು ತಿಳಿಸುವುದು. ಹಲವು ವಿದ್ವಾಂಸರು ಹೇಳುವಂತೆ ಇತಿಹಾಸವು ಸಮಾಜ ವಿಜ್ಞಾನಗಳ ಕೇಂದ್ರ ವಿಷಯವಾಗಿದ್ದು, ಇದರ ಬೆಳವಣಿಗೆಗೆ ಇತರೇ ವಿಜ್ಞಾನಗಳೊಂದಿಗೆ ಒಳ್ಳೆಯ ಸಂಬಂಧವಿರಬೇಕೆಂದು ಅವರೆಲ್ಲರ ವಾದ. ಒಟ್ಟಾಗಿ ಹೇಳಬೇಕೆಂದರೆ ಇತಹಾಸವು ಇತರೆ ಸಮಾಜ ವಿಜ್ಞಾನಗಳೊಂದಿಗೆ ಹೊಂದಿರುವ ಪ್ರಮುಖ ಸಂಬಂಧವನ್ನು ಹೊಂದಿದೆ ಎಂದು ಹೇಳಬಹುದು. ಈ ಅಧ್ಯಯನವನ್ನು ಸವಿಸ್ತಾರವಾಗಿ ನೋಡೋಣ.

## 3.2 ಇತಿಹಾಸ ಮತ್ತು ಸಾಮಾಜಿಕ ವಿಜ್ಞಾನಗಳಿಗಿರುವ ಸಂಬಂಧ ಹಾಗೂ ಇತರೆ ಸಹಾಯಕ ಶಾಸ್ತ್ರಗಳು

ಇತಿಹಾಸವು ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಮಾನವಶಾಸ್ತ್ರ, ಭೂಗೋಳಶಾಸ್ತ್ರ, ಮನಶ್ಯಾಸ್ತ್ರ ಮುಂತಾದವುಗಳೊಂದಿಗೆ ಬಹು ಆಪ್ತವಾದ ಸಂಬಂಧವನ್ನು ಬೆಳೆಸಿಕೊಂಡು ಬಂದಿದೆ. ಇವುಗಳ ನಡುವೆ ಬೌದ್ಧಿಕ ಶ್ರಮ ವಿಭಜನೆ ಇರುವುದನ್ನು ಕಾಣಬಹುದು. ಪ್ರತಿಯೊಂದೂ ತನ್ನದೇ ಆದ ಚರಿತ್ರೆ, ನಿರ್ದಿಷ್ಟ ಅಧ್ಯಯನ ವಿಷಯ ಹಾಗೂ ಸಂಶೋಧನಾ ಕ್ಷೇತ್ರ ಹೊಂದಿದೆ. ಪ್ರತಿಯೊಂದಕ್ಕೂ ತನ್ನದೇ ಆದ ನಿರ್ದಿಷ್ಟವಾದ ಎಲ್ಲೆಗಳಿವೆ. ಆದರೆ ಈ ಎಲ್ಲೆಗಳು ಆಕೃತಿಯ ರೂಪುರೇಖೆಯನ್ನು ತೋರುವ ಸಡಿಲವಾದ ಮೇಲಂಗಿಯಂತೆ ಇದೆಯೇ ಹೊರತು, ಪ್ರತ್ಯೇಕಿಸಿ ನಿರ್ಬಂಧಪಡಿಸುವ ಯೋಧನ ರಕ್ಷಾಕವಚದಂತಿರುವುದಿಲ್ಲ. ಕಾರಣ ಪಠ್ಯಪುಸ್ತಕಗಳಲ್ಲಿ ಅಥವಾ ವಿಶ್ವವಿದ್ಯಾನಿಲಯದ ಪ್ರೌಢ ವ್ಯಾಸಂಗಗಳಿಗೆ ನಿಗದಿಪಡಿಸಲಾಗಿರುವ ಪಠ್ಯವಿಷಯಗಳಲ್ಲಿ ಮಾತ್ರ ಈ ಶಾಸ್ತ್ರಗಳ ನಡುವೆ ಪ್ರತ್ಯೇಕಿಸುವಂತಹ ಗೆರೆಗಳನ್ನು ಸ್ಪಷ್ಟವಾಗಿ ಎಳೆಯಲಾಗಿದೆಯೇ ಹೊರತು, ವಾಸ್ತವದಲ್ಲಿ ಇವುಗಳ ಮಧ್ಯೆ ಬಹು ಕಟ್ಟುನಿಟ್ಟಾದ ರೇಖೆಗಳನ್ನು ಹಾಕಿ

ಪ್ರತ್ಯೇಕಿಸುವುದು ಸಾಧ್ಯವೇ ಇಲ್ಲ. ಮಾನವನ ಜ್ಞಾನರಂಗಗಳನ್ನು ವಿಭಜಿಸುವ ಯಾವ ಕಟ್ಟಳೆಗಳಿಗೂ ಶಾಸನದ ಬಲವಿಲ್ಲ. ವಿದ್ವಾಂಸರು, ವಿಜ್ಞಾನಿಗಳು ಹಾಗೂ ಸಂಶೋಧಕರು ತಮ್ಮ ಆಸಕ್ತಿಗಳನ್ನು ಸೆಳೆಯುವ ಕಡೆಗೆ ಹೋಗುತ್ತಾರೆ; ತಾವು ಇಷ್ಟಪಡುವ ವಿಷಯಗಳನ್ನು ಕುರಿತು ತಮಗೆ ಇಷ್ಟ ಬಂದಾಗ ಅಧ್ಯಯನ ಮಾಡುತ್ತಾರೆ; ಅವರು "ಅತಿಕ್ರಮ ಪ್ರವೇಶವಿಲ್ಲ" ಎಂಬ ನಿಯಮವನ್ನು ಗಮನಿಸದಂತಹ ಸ್ವಾಭಾವಿಕ ಆಕ್ರಮಣಕಾರರಾಗಿರುತ್ತಾರೆ. ಸುಂದರವಾದ ಮೊಗ್ಗು ಒಟ್ಟಾಗಿ ಅರಳಿದಾಗ ತಾನೇ ಅದು ಆಕರ್ಷಣೀಯ ಎಂದೆಣಿಸಿಕೊಳ್ಳುವುದು. ದಳಗಳಿಗೆ ಪರಸ್ಪರ ಸಂಬಂಧವಿದೆ. ಅದೇ ರೀತಿ ಈ ಎಲ್ಲಾ ಶಾಸ್ತ್ರಗಳು ಒಟ್ಟಾಗಿ ಮಾನವನಿಗೆ ಅಮೂಲ್ಯವಾದ ಬೌದ್ಧಿಕ ನಿಧಿಯನ್ನು ಕಾಣಿಕೆಯಾಗಿ ಕೊಡುತ್ತವೆ. ಅಷ್ಟು ಆತ್ಮೀಯವಾದ ಹಾಗೂ ಬೇರ್ಪಡಿಸಲಾಗದಂತಹ ಬಾಂಧವ್ಯ ಇತಿಹಾಸ ಮತ್ತು ಇತರ ಶಾಸ್ತ್ರಗಳ ನಡುವೆ ಬೆಳೆದುಬಂದಿದೆ.

### 3.2.1 ಇತಿಹಾಸ ಮತ್ತು ರಾಜ್ಯಶಾಸ್ತ್ರ

ಇತಿಹಾಸವು ರಾಜ್ಯಶಾಸ್ತ್ರದೊಂದಿಗೆ ನಿಕಟವಾದ ಸಂಬಂಧವನ್ನು ಬೆಳೆಸಿಕೊಂಡಿದೆ. ರಾಜ್ಯಶಾಸ್ತ್ರವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ ಇತಿಹಾಸದ ಅಧ್ಯಯನ ಅನಿವಾರ್ಯವಾಗುತ್ತದೆ. ಅಲ್ಲದೆ ರಾಜ್ಯಶಾಸ್ತ್ರದ ಅಧ್ಯಯನದಲ್ಲಿ ಇತಿಹಾಸದ ಮಾರ್ಗದರ್ಶನ ಅತ್ಯಾವಶ್ಯಕ. "ರಾಜ್ಯಶಾಸ್ತ್ರದೊಂದಿಗೆ ಸಂಬಂಧವಿಲ್ಲದಿದ್ದರೆ ಇತಿಹಾಸಕ್ಕೆ ಫಲವಿರುವುದಿಲ್ಲ. ಇತಿಹಾಸದೊಂದಿಗೆ ಸಂಬಂಧವನ್ನು ಬೆಳೆಸದಿದ್ದರೆ ರಾಜ್ಯಶಾಸ್ತ್ರಕ್ಕೆ ಬೇರು, ಅಂದರೆ ಮೂಲಾಧಾರವೇ ಇರುವುದಿಲ್ಲ" ಎಂಬ ಸೀಲಿಯ ಪ್ರಸಿದ್ಧ ದ್ವಿಪದಿಯಿಂದ ಈ ಎರಡು ಶಾಸ್ತ್ರಗಳಿರುವ ಸಂಬಂಧ ಎಷ್ಟು ಆಪ್ತವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಇತಿಹಾಸವು ಮಾನವನ ಗತಕಾಲದ ಸಾಧನೆಗಳ ವಿವೇಕಯುತವಾದ ದಾಖಲೆಯಾಗಿದೆ. ಇದು ಒಟ್ಟಾರೆ ಮಾನವ ಜೀವನದ ಮೇಲೆ ಪ್ರಭಾವವನ್ನು ಬೀರುವ ಅಸಮಾನ ಘಟನೆಗಳ ದಾಖಲೆಯಾಗಿದೆ ಎಂದು ನಿರೂಪಿಸಬಹುದು. ರಾಜ್ಯಶಾಸ್ತ್ರವು ರಾಜ್ಯವನ್ನು ಕುರಿತ ವಿಜ್ಞಾನವಾಗಿದೆ. ಇದು ಮುಖ್ಯವಾಗಿ ರಾಜ್ಯ ಸ್ವರೂಪ, ರಚನೆ, ಕ್ರಿಯೆ, ಸರ್ಕಾರ ಇತ್ಯಾದಿ ವಿಷಯಗಳನ್ನು ವಿವರಿಸಲು ಯತ್ನಿಸುತ್ತದೆ; ಮಾನವನನ್ನು ರಾಜಕೀಯ ಜೀವಿ ಎಂಬುದಾಗಿ ಎಣಿಸಿ ಒಂದು ವ್ಯವಸ್ಥಿತ ರಾಜಕೀಯ ರಚನೆಯ ಚೌಕಟ್ಟಿನೊಳಗೆ ಅವನು ನಡೆಸುವ ಕಾರ್ಯಕಲಾಪಗಳ ಮೇಲೆ ಬೆಳಕನ್ನು ಬೀರಲು ಪ್ರಯತ್ನಿಸುತ್ತದೆ. ಇದು ರಾಜಕೀಯ ಘಟನೆಗಳ ಅಸಂಬದ್ಧ ಗುಚ್ಛದ ಹಿಂದಿರುವ ನಿಯತತೆಗಳನ್ನು ಅನ್ವೇಷಣೆ ಮಾಡುವುದರ ಮೂಲಕ ರಾಜಕೀಯ ಜೀವನದ ರಚನೆಯನ್ನು ಅರ್ಥಮಾಡಿಕೊಳ್ಳಲು ಯತ್ನಗಳನ್ನು ಮಾಡುತ್ತದೆ. ಈ ವ್ಯಾಖ್ಯೆಗಳಿಂದ ಈ ಎರಡು ಶಾಸ್ತ್ರಗಳಿಗೆ ನಿಕಟ ಸಂಬಂಧವಿದೆ ಎನ್ನುವುದು ಅರಿವಾಗುತ್ತದೆ. ಇವುಗಳು ಪರಸ್ಪರ ವಿಕಾಸಕ್ಕಾಗಿ ನೀಡುವ ಪರಸ್ಪರ ಸಹಾಯದ ಮೂಲಕ ಈ ಆಪ್ತ ಸಂಬಂಧವು ವ್ಯಕ್ತವಾಗುತ್ತದೆ.

**(ಅ) ರಾಜ್ಯಶಾಸ್ತ್ರ ರಂಗಕ್ಕೆ ಇತಿಹಾಸದ ಕೊಡುಗೆ**

ಇತಿಹಾಸವು ಒದಗಿಸಿಕೊಡುವ ಅಧ್ಯಯನ ಸಾಮಗ್ರಿಗಳಿಗಾಗಿ ರಾಜ್ಯಶಾಸ್ತ್ರವು ಇದಕ್ಕೆ ಬಹುಮಟ್ಟಿಗೆ ಋಣಬದ್ಧವಾಗಿದೆ. (1) ರಾಜ್ಯಸಂಸ್ಥೆಗಳಿಗೂ ಸಹ ತಮ್ಮದೇ ಆದ ಚರಿತ್ರೆಗಳಿರುತ್ತವೆ. ಅವುಗಳೂ ಸಹ ಒಂದು ಐತಿಹಾಸಿಕ ಪ್ರಕ್ರಿಯೆಯ ಮೂಲಕ ಪೂರ್ತಿಯಾಗಿ ಬೆಳೆದುಬರುತ್ತವೆ. ಅವುಗಳನ್ನು ಸಂಪೂರ್ಣವಾಗಿ

ಅರ್ಥಮಾಡಿಕೊಳ್ಳಬೇಕಾದರೆ ಅವುಗಳ ವಿಕಾಸದ ತರಂಗ ಧಾಟಿಯ ಬಗ್ಗೆ ಪರಿಪೂರ್ಣವಾದ ತಿಳಿವಳಿಕೆ ಇರಬೇಕು. ಇಲ್ಲಿ ಇತಿಹಾಸದ ಸಹಾಯ ರಾಜ್ಯಶಾಸ್ತ್ರಕ್ಕೆ ಬೇಕಾಗುತ್ತದೆ. (2) ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ಇತಿಹಾಸದ ವಿವಿಧ ವಸ್ತುಸಂಗ್ರಹ ಶಾಲೆಯನ್ನು ಪ್ರವೇಶಿಸಿ ಅಧ್ಯಯನ ಮಾಡಲು ಅವಶ್ಯಕವಿಲ್ಲದೇ ಹೋದರೆ ಆಗ ರಾಜ್ಯಶಾಸ್ತ್ರದ ಅಧ್ಯಯನಗಳಲ್ಲಿ ಪರಿಜ್ಞಾನದ ವ್ಯಾಪ್ತಿಯ ಬಗ್ಗೆ ಅರಿವು ಇಲ್ಲವಾಗುತ್ತದೆ. ಮತ್ತು ಈ ಶಾಸ್ತ್ರವು ಬುದ್ಧಿರೂಢವಾದ ಅಥವಾ ಊಹಾಪೋಹದ ಅಧ್ಯಯನ ಮಾತ್ರವಾಗುತ್ತದೆ. ಲಾಸ್ಕಿಯವರ ಪ್ರಕಾರ ಈ ತೆರನಾದ ಊಹಾಪೋಹದ ರಾಜ್ಯಶಾಸ್ತ್ರದ ಅಧ್ಯಯನ ವ್ಯರ್ಥಪ್ರಯತ್ನವಾಗುತ್ತದೆ. (3) ಗತಕಾಲದ ಅರಿವಿನ ಬೆಳಕು ವರ್ತಮಾನ ಸಮಾಜದಲ್ಲಿ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಲು ವ್ಯಕ್ತಿಗಳನ್ನು ಹಾಗೂ ಸಮೂಹಗಳನ್ನು ಸರಿಯಾಗಿ ಸಿದ್ಧಪಡಿಸುತ್ತದೆ. (4) ಪ್ರತಿ ಕಾಲದಲ್ಲೂ ಪ್ರತಿ ಸಮಾಜವೂ ತನ್ನ ಬಲವಾದ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ವಿಭಿನ್ನ ಕ್ರಮಗಳನ್ನು ಕಂಡುಹಿಡಿದು ಬೆಳೆಸಿ ಅನುಸರಿಸುತ್ತದೆ. ಇತಿಹಾಸವು ಈ ವೈವಿಧ್ಯಮಯವಾದ ಅನೇಕ ಕ್ರಮಗಳ ಬಗ್ಗೆ ನಂಬಲರ್ಹವಾದ ದಾಖಲೆಯನ್ನು ರಾಜ್ಯಶಾಸ್ತ್ರಕ್ಕೆ ಕೊಡುಗೆಯಾಗಿ ನೀಡುತ್ತದೆ. ಸಮಕಾಲೀನ ಸಮಾಜದ ಅವಶ್ಯಕತೆಗಳನ್ನು ತೃಪ್ತಿಪಡಿಸುವುದಕ್ಕೆ ತಕ್ಕದಾದ ರಾಜ್ಯಸಂಸ್ಥೆಗಳನ್ನು ರೂಪಿಸುವಾಗ ರಾಜ್ಯಶಾಸ್ತ್ರವು ಇತಿಹಾಸದ ಪುಟಗಳನ್ನು ಎಚ್ಚರಿಕೆಯಿಂದ ತಿರುವಿ ಹಾಕಿ ಅಧ್ಯಯನ ಮಾಡಬೇಕಾಗುತ್ತದೆ. ಇದು ಇತಿಹಾಸದ ಸಹಾಯದಿಂದ ಅರ್ಥಮಾಡಿಕೊಂಡಿರುವ ವಿಭಿನ್ನ ಕ್ರಮಗಳಲ್ಲಿ ಸರಿಯಾದುದನ್ನು ಆರಿಸಿಕೊಂಡು ಅದನ್ನು ಸಮಕಾಲೀನ ಪರಿಸ್ಥಿತಿಗಳಿಗೆ ಅನುಗುಣವಾಗಿ ನವೀಕರಿಸಿ, ಶಕ್ತಿಯುತವಾಗಿ ಮಾಡಬೇಕಾಗುತ್ತದೆ. ಇತಿಹಾಸವು ವರ್ತಮಾನ ಹಾಗೂ ಭವಿಷ್ಯಕಾಲದ ವ್ಯವಸ್ಥೆಗಳಲ್ಲಿ ಗುಪ್ತವಾಗಿರುವ, ಅಂಧಕಾರದಲ್ಲಿರುವ ಅಂಶಗಳನ್ನು ಬೆಳಕಿಗೆ ತಂದು ಎಲ್ಲರಿಗೂ ಗೋಚರವಾಗುವಂತೆ ಮಾಡಲು ಶಕ್ತವಾಗಿರುತ್ತದೆ. ರಾಜ್ಯಶಾಸ್ತ್ರವು ಇಂದಿನ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಮತ್ತು ಮುಂದಿನ ಸವಾಲುಗಳನ್ನು ಪರಿಶೋಧಿಸುವುದಕ್ಕೆ ಬೇಕಾದ ಸುಳಿವುಗಳನ್ನು ಕಂಡುಹಿಡಿಯಲು ಗತಕಾಲದ ಘಟನೆಗಳ ಮೊರೆ ಹೋಗಬೇಕಾಗುತ್ತದೆ. ಇಲ್ಲಿ ಇತಿಹಾಸದ ಸಹಾಯ ಇದಕ್ಕೆ ಅತ್ಯಾವಶ್ಯಕವಾಗುತ್ತದೆ. ಇಂದಿನ ಕಾಲದ ಪರಿಸ್ಥಿತಿಗಳ ತಕ್ಕ ವಿಮರ್ಶೆಗೆ ಹಾಗೂ ಮುಂಬರುವ ಸ್ಥಿತಿಗಳ ಮಾರ್ಪಾಡುಗಳಿಗೆ ಬೇಕಾದ ಆಧಾರವಾಗುತ್ತದೆ. ಆಗ ಇದನ್ನು "ಆದರ್ಶಗಳ ಜೀವನ ಚರಿತ್ರೆ ಎಂಬುದಾಗಿ ಎಣಿಸಲಾಗುತ್ತದೆ" ಎಂದು ಬರ್ನ್ಸ್ ಹೇಳುತ್ತಾರೆ. (5) ಕಾಲಗಣನಾ ಕ್ರಮದಲ್ಲಿ ಘಟನೆಗಳನ್ನು ವಿವರಿಸುವುದರ ಮೂಲಕ ಇತಿಹಾಸವು ರಾಜ್ಯಶಾಸ್ತ್ರಕ್ಕೆ ರಾಜಕೀಯ ಚಲನಾಶಕ್ತಿಯ ಗತಿಯ ವಿಚಾರದ ಬಗ್ಗೆ ಸೂಕ್ಷ್ಮಜ್ಞಾನವನ್ನು ಒದಗಿಸಿಕೊಡುತ್ತದೆ. ಆದ್ದರಿಂದ ಲಿಪ್ಸನ್ ಹೇಳುವಂತೆ, ಇತಿಹಾಸವು ಕಾಲಗಣನಾ ಕ್ರಮದ ಅಧ್ಯಯನದ ಮೂಲಕ ರಾಜ್ಯಶಾಸ್ತ್ರಕ್ಕೆ ತನ್ನ ವಿಕಾಸದ ಬಗ್ಗೆ ಒಂದು ನಂಬಲರ್ಹವಾದ ಜ್ಞಾನಸಂಚಯವನ್ನು ಕೊಡುಗೆಯಾಗಿ ನೀಡಿ ರಾಜಕೀಯ–ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಗಳ ಬಗ್ಗೆ ಸೂಕ್ಷ್ಮವಾದ ತಿಳಿವಳಿಕೆ ಉಂಟಾಗುವಂತೆ ಮಾಡುತ್ತದೆ. (6) ರಾಜ್ಯಶಾಸ್ತ್ರವು ಇತಿಹಾಸವನ್ನು ನಿರ್ಲಕ್ಷಿಸಿ ದೂರವಿಟ್ಟರೆ ಇದಕ್ಕೆ ನಷ್ಟ, ಆಗ ಇದು ನೀಡುವ ವರ್ತಮಾನ ಘಟನೆಗಳ ವಿವರಣೆಯು ಅತ್ಯಂತ ನೀರಸವಾಗುತ್ತದೆ. ವಿಭಿನ್ನ ಕಾಲಗಳಲ್ಲಿ ವಿವಿಧ ಕಾರ್ಯ ವಿಧಾನದ ಪರಿಸ್ಥಿತಿಗಳಲ್ಲಿ ರಾಜಕೀಯ ಸಂಸ್ಥೆಗಳು ನಡೆಸಿದ ಕೆಲಸಗಳ ಬಗ್ಗೆ ತುಲನಾತ್ಮಕ ಅಧ್ಯಯನಗಳನ್ನು ಕೈಗೊಳ್ಳುವುದು ಅಸಾಧ್ಯವಾಗುತ್ತದೆ. ಆದ್ದರಿಂದ ಇತಿಹಾಸವಿಲ್ಲದಿದ್ದರೆ ರಾಜ್ಯಶಾಸ್ತ್ರವು ಒಂದು ಮುಖ್ಯವಾದ ಪರಿಮಾಣವನ್ನು ಕಳೆದುಕೊಳ್ಳಬೇಕಾಗುತ್ತದೆ. (7) ರಾಜಕೀಯ ದರ್ಶನವು ಇತಿಹಾಸವು ಒದಗಿಸುವ ಕಚ್ಚಾ ಬೌದ್ಧಿಕ ಸಾಮಗ್ರಿಗಳನ್ನು ಬಳಸಿಕೊಂಡು ಅವುಗಳನ್ನು ಅರ್ಥಗರ್ಭಿತವಾದ

ಮಾದರಿಗಳನ್ನಾಗಿ ನೇಯುತ್ತದೆ. ಇದರಿಂದ ರಾಜ್ಯಶಾಸ್ತ್ರ ಹಾಗೂ ರಾಜಕೀಯ ದರ್ಶನಕ್ಕೆ ಇತಿಹಾಸದ ಬೆಂಬಲ ಎಷ್ಟು ಅನಿವಾರ್ಯ ಎಂಬುದು ಸ್ಪಷ್ಟವಾಗುತ್ತದೆ.

**(ಆ) ಇತಿಹಾಸದ ಕ್ಷೇತ್ರಕ್ಕೆ ರಾಜ್ಯಶಾಸ್ತ್ರದ ಕಾಣಿಕೆ**

ಇದೇ ರೀತಿ ರಾಜ್ಯಶಾಸ್ತ್ರವೂ ಸಹ ಇತಿಹಾಸಕ್ಕೆ ಸಹಾಯಕವಾಗಿದೆ. (1) ಐತಿಹಾಸಿಕ ಘಟನೆಗಳ ರಾಜಕೀಯ ಅಂತರಾರ್ಥಗಳನ್ನು ಅರ್ಥಮಾಡಿಕೊಂಡು, ತಾನು ಸಿದ್ಧಪಡಿಸುವ ವೃತ್ತಾಂತದಲ್ಲಿ ಸೇರಿಸಬೇಕಾದುದು ಇತಿಹಾಸದ ಕೆಲಸ. ಇಲ್ಲಿ ಇದಕ್ಕೆ ರಾಜ್ಯಶಾಸ್ತ್ರದ ನೆರವು ಅಗತ್ಯವಾಗುತ್ತದೆ. ಉದಾಹರಣೆಗೆ, ಇತಿಹಾಸಕಾರನು ಸಮಕಾಲೀನ ಕರ್ನಾಟಕದ ಬಗ್ಗೆ ವೃತ್ತಾಂತವನ್ನು ತಯಾರಿಸುವಾಗ ಅದರ ಮೇಲೆ ರಾಷ್ಟ್ರೀಯ ಚಳವಳಿಯು ಬೀರಿದ ಪ್ರಭಾವವನ್ನು ಅರ್ಥಮಾಡಿಕೊಳ್ಳಬೇಕು. ಇಲ್ಲದಿದ್ದರೆ ಇವನ ದಾಖಲೆಯು ಶುಷ್ಕ ಘಟನೆಗಳ ಅಸ್ಪಷ್ಟ ಹಾಗೂ ನಿರುತ್ಸಾಹಕರ ಕಥನವಾಗುತ್ತದೆ. (2) ರಾಜಕೀಯ ಇತಿಹಾಸದ ಅಧ್ಯಯನಗಳಲ್ಲಿ ರಾಜ್ಯಶಾಸ್ತ್ರದ ಉಪಕಲ್ಪನೆಗಳು, ಭಾವರೂಪಗಳು ಹಾಗೂ ಸಿದ್ಧಾಂತಗಳು ಬಹು ಉಪಯುಕ್ತವಾಗಿವೆ. (3) ಅಮಾನುಷ ಸರ್ವಾಧಿಕಾರ, ಅರಾಜಕ ಸ್ಥಿತಿ ಮುಂತಾದ ರಾಜಕೀಯ ವ್ಯಾಧಿಗಳನ್ನು ನಾಶಪಡಿಸಿ, ರೋಗಾಣುವಾಹಕ ಅಂಗಗಳಿಗೆ ಬದಲಾಗಿ ಆರೋಗ್ಯಕರವಾದ ರಚನೆಗಳನ್ನು ಬೆಳೆಸುವುದಕ್ಕೆ ಬೇಕಾದ ಕ್ರಮಗಳನ್ನು ತಿಳಿಯಬೇಕಾದರೆ ಸರ್ಕಾರದ ಅಂಗರಚನೆ ಹಾಗೂ ಲಕ್ಷಣಗಳನ್ನು ಅರಿಯಬೇಕಾದುದು ಅಗತ್ಯವಾಗುತ್ತದೆ. ಇಲ್ಲಿ ಇತಿಹಾಸಕ್ಕೆ ರಾಜ್ಯಶಾಸ್ತ್ರದ ಸಹಾಯ ಬೇಕಾಗುತ್ತದೆ.

*ಇತಿಹಾಸ ಮತ್ತು ರಾಜ್ಯಶಾಸ್ತ್ರಕ್ಕಿರುವ ಭೇದಗಳು*

ಈ ಎರಡು ಶಾಸ್ತ್ರಗಳು ನಿಕಟವಾದ ಸಂಬಂಧ ಹೊಂದಿ ಪರಸ್ಪರ ಸಹಾಯಕವಾಗಿದ್ದರೂ ಕೆಲವು ಅಂಶಗಳಲ್ಲಿ ಭಿನ್ನವಾಗಿವೆ. (1) ರಾಜ್ಯಶಾಸ್ತ್ರದ ರಂಗಕ್ಕಿಂತ ಇತಿಹಾಸದ ಕ್ಷೇತ್ರ ಹೆಚ್ಚು ವ್ಯಾಪಕವಾಗಿದೆ. ಇದು ವಿಭಿನ್ನ ಬಗೆಯ ಅಧ್ಯಯನ ಸಾಮಗ್ರಿಗಳನ್ನು ಬಳಸಿ ಗತಕಾಲದಿಂದ ಹಿಡಿದು ಇಂದಿನ ಕಾಲದವರೆಗೆ ನಿರಂತರವಾಗಿ ಸಾಗಿಬಂದಿರುವ ಕಥೆಯನ್ನು ನಮ್ಮ ಮುಂದಿಡುತ್ತದೆ. ಆದರೆ ಈ ಅಧ್ಯಯನ ಸಾಮಗ್ರಿಗಳಲ್ಲಿ ಕೆಲವನ್ನು ಮಾತ್ರ ರಾಜ್ಯಶಾಸ್ತ್ರವು ಬಳಸಿಕೊಳ್ಳುತ್ತದೆ. ಇದು ರಾಜಕೀಯ ದೃಷ್ಟಿಕೋನದಿಂದ ವೀಕ್ಷಿಸಿ ಮುಖ್ಯವಾಗಿರುವ ಅಂಶಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುತ್ತದೆ.

(2) ರಾಜ್ಯಶಾಸ್ತ್ರದ ಅಧ್ಯಯನಗಳಿಗಿಂತ ಐತಿಹಾಸಿಕ ವಿಷಯಗಳ ಹರವು ಹೆಚ್ಚು ವ್ಯಾಪಕವಾಗಿದೆ. ಉದಾಹರಣೆಗೆ, ವಿಜಯನಗರದ ಕಾಲವನ್ನು ಕುರಿತು ಅಧ್ಯಯನ ಮಾಡುವಾಗ ರಾಜ್ಯಶಾಸ್ತ್ರವು ಆ ಕಾಲದಲ್ಲಿ ರಾಜಕೀಯ ಐಕ್ಯತೆಗೆ ಸಹಾಯಕವಾಗಿದ್ದ ಅಂಶಗಳನ್ನು ಮತ್ತು ಅವುಗಳ ಪ್ರಾಮುಖ್ಯವನ್ನು ಕುರಿತು ಮಾತ್ರ ವಿಚಾರ ಮಾಡುತ್ತದೆ. (3) ಇತಿಹಾಸವು ನಿರ್ದಿಷ್ಟ ಹಾಗೂ ಅದ್ವಿತೀಯವಾದುದೆಂಬುದಾಗಿ ಎಣಿಸಲಾದ ಘಟನೆಗಳನ್ನು ವಿವರಿಸುವುದರಲ್ಲಿ ಆಸಕ್ತಿಯನ್ನು ತೋರುತ್ತದೆ. ರಾಜ್ಯಶಾಸ್ತ್ರವು ಸಾಮಾನ್ಯ ಸಿದ್ಧಾಂತ ಹಾಗೂ ಭಾವರೂಪಗಳನ್ನು ನಿರೂಪಿಸುವುದರಲ್ಲಿ ಆಸಕ್ತಿಯನ್ನು ವಹಿಸುತ್ತದೆ. ಕೆಲವು ರಾಜ್ಯಶಾಸ್ತ್ರಜ್ಞರು ಇತಿಹಾಸದ ಆಧಾರವಿಲ್ಲದೆಯೇ ರಾಜಕೀಯ ಸಿದ್ಧಾಂತವನ್ನು ರೂಪಿಸಬಹುದು ಎಂಬುದಾಗಿ ಅಭಿಪ್ರಾಯ ಪಡುತ್ತಾರೆ.

ಈ ಭೇದಗಳು ಇತಿಹಾಸ ಮತ್ತು ರಾಜ್ಯಶಾಸ್ತ್ರವು ಪ್ರತ್ಯೇಕವಾಗಿರುವ ಹಾಗೂ ಸ್ವತಂತ್ರವಾಗಿರುವ ಅಧ್ಯಯನಗಳಾಗಿವೆ ಎಂಬುದನ್ನು ಸ್ಪಷ್ಟಪಡಿಸುತ್ತವೆ.

## 3.2.2 ಇತಿಹಾಸ ಮತ್ತು ಅರ್ಥಶಾಸ್ತ್ರಗಳಿರುವ ಸಂಬಂಧ

ಇತಿಹಾಸವು ಗತಕಾಲದ ಕಥೆಯನ್ನು ಕುರಿತು ವಿಚಾರ ಮಾಡುವ ಶಾಸ್ತ್ರವಾಗಿದೆ ಮತ್ತು ಮಾನವನು ಹೇಗೆ ಉತ್ತಮವಾದ ಜೀವನ ಕ್ರಮಗಳನ್ನು ಬೆಳೆಸಿಕೊಂಡು ವ್ಯವಸ್ಥಿತ ಸಾಮಾಜಿಕ ರಚನೆಗಳನ್ನು ಕಟ್ಟಿದನೆಂಬುದನ್ನು ಸ್ಪಷ್ಟವಾಗಿ ವಿವರಿಸುವ ನಂಬಲರ್ಹವಾದ ದಾಖಲೆಯಾಗಿದೆ. ಅರ್ಥಶಾಸ್ತ್ರವನ್ನು ಉತ್ಪಾದನೆ, ವಿತರಣೆ ಮತ್ತು ಅನುಭೋಗ ಎಂಬ ಮೂರು ಸ್ಥಿತಿಗಳಲ್ಲಿ ಅರ್ಥ ಅಥವಾ ಸಂಪತ್ತನ್ನು ಪರಿಶೀಲಿಸಿ ಅಧ್ಯಯನ ಮಾಡುವ ವಿಜ್ಞಾನ ಎಂಬುದಾಗಿ ವಿವರಿಸಲಾಗಿದೆ. ಈ ವ್ಯಾಖ್ಯೆಗಳು ಈ ಎರಡು ಅಧ್ಯಯನಗಳಿಗೆ ನಿಕಟ ಸಂಬಂಧವಿದೆ ಎಂಬುದನ್ನು ಸೂಚಿಸುತ್ತವೆ. ಈ ಎರಡು ಶಾಸ್ತ್ರಗಳು ಮಾಡುವ ಪರಸ್ಪರ ಸಹಾಯದಲ್ಲಿ ಇವುಗಳಿಗಿರುವ ಹತ್ತಿರದ ಸಂಬಂಧದ ಸ್ಪಷ್ಟವಾದ ಪ್ರತಿಬಿಂಬವನ್ನು ಕಾಣಬಹುದು.

**ಪರಸ್ಪರ ಸಹಾಯ**

**(ಅ) ಇತಿಹಾಸ**

ಅರ್ಥಶಾಸ್ತ್ರಕ್ಕೆ ಇತಿಹಾಸವು ಬೇಕಾಗಿರುವ ಬೆಲೆಬಾಳುವ ವಿಷಯಗಳ ಗಣಿಯಾಗಿದೆ. (1) ಅರ್ಥಶಾಸ್ತ್ರವು ಆರ್ಥಿಕ ಕಲ್ಯಾಣದ ಬಗ್ಗೆ ವಿಚಾರ ಮಾಡುತ್ತದೆ. ಆರ್ಥಿಕಹಿತ ಮಾನವ ಕಲ್ಯಾಣದ ಒಂದು ಭಾಗವಾಗಿರುವುದರಿಂದ ಮೊದಲಿನಿಂದ ಮಾನವಕಲ್ಯಾಣದ ವಿಚಾರವನ್ನು ಕುರಿತು ವಿಶ್ಲೇಷಿಸುವ ಇತಿಹಾಸದ ನೆರವು ಅರ್ಥಶಾಸ್ತ್ರಕ್ಕೆ ಇಲ್ಲಿ ಅಗತ್ಯವಾಗುತ್ತದೆ. (2) ಅರ್ಥಶಾಸ್ತ್ರವು ಆರ್ಥಿಕ ವ್ಯವಸ್ಥೆಗಳ ಮೂಲ, ಬೆಳವಣಿಗೆ ಇತ್ಯಾದಿ ವಿಷಯಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಇದಕ್ಕೆ ಐತಿಹಾಸಿಕ ಹಿನ್ನೆಲೆ ಅವಶ್ಯಕವಾಗುತ್ತದೆ. (3) ಇಂದಿನ ಸಮಾಜದ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಲು ಬೇಕಾಗಿರುವ ತಕ್ಕ ಕ್ರಮಗಳನ್ನು ನಿಯೋಜಿಸುವಾಗ ಅರ್ಥಶಾಸ್ತ್ರಕ್ಕೆ ಹಿಂದೆ ಸಮಾಜಗಳಲ್ಲಿ ಯಾವ ರೀತಿಯ ಆರ್ಥಿಕ ವ್ಯವಸ್ಥೆಗಳನ್ನು ಕಟ್ಟಲಾಗಿದ್ದಿತು. ಅವುಗಳು ಹೇಗೆ ಕಾರ್ಯಗಳನ್ನು ನಿರ್ವಹಿಸಿದುವು ಮತ್ತು ಸಮಸ್ಯೆಗಳನ್ನು ಬಗೆಹರಿಸಲು ಸಹಾಯಕವಾದುವು ಎಂಬುದನ್ನು ಅರಿಯಬೇಕಾದುದು ಅವಶ್ಯಕ. ಇಲ್ಲಿ ಇತಿಹಾಸ ಇದಕ್ಕೆ ಅತ್ಯಂತ ಉಪಯುಕ್ತವಾಗುತ್ತದೆ. (4) ಆರ್ಥಿಕ ಪ್ರಮೇಯಗಳನ್ನು ಪರೀಕ್ಷಿಸುವುದಕ್ಕೆ ಹಾಗೂ ಬಳಸುವುದಕ್ಕೆ ಅರ್ಥಶಾಸ್ತ್ರವು ಆರ್ಥಿಕ ಇತಿಹಾಸದ ಬೆಂಬಲವನ್ನು ಕೋರುತ್ತದೆ. (5) ಅರ್ಥಶಾಸ್ತ್ರಜ್ಞನು ಒಂದು ಕ್ರಮಬದ್ಧವಾದ ಸೈದ್ಧಾಂತಿಕ ಚೌಕಟ್ಟಿನೊಳಗೆ ಐತಿಹಾಸಿಕ ವಿಷಯಗಳನ್ನು ಬಳಸಿ ಅಧ್ಯಯನ ಮಾಡಿದರೆ, ಸ್ವಾರಸ್ಯಕರವಾದ ವಿಚಾರಗಳನ್ನು ಬೆಳಕಿಗೆ ತರಬಹುದು. ಐತಿಹಾಸಿಕ ಸಾಮಾನ್ಯೀಕರಣಗಳನ್ನು ಉಪಯೋಗಿಸುವುದರ ಮೂಲಕ ಸಿದ್ಧಾಂತದ ರಚನೆಗೆ ಹೆಚ್ಚು ಅಂಶಗಳನ್ನು ಸೇರಿಸಬಹುದು. ಅರ್ಥಶಾಸ್ತ್ರದ ಸಿದ್ಧಾಂತಗಳನ್ನು ಬಳಸಿ ನಿರ್ದಿಷ್ಟ ಸಮಸ್ಯೆಗಳನ್ನು ಕುರಿತು ವಿಚಾರ ಮಾಡುವುದರ ಮೂಲಕ ಇತಿಹಾಸವು ಅರ್ಥಶಾಸ್ತ್ರಕ್ಕೆ ನೂತನ ಭಾವನೆಗಳನ್ನು ಕಾಣಿಕೆಯಾಗಿ ನೀಡುತ್ತದೆ. (6) ಸಿದ್ಧಾಂತಗಳನ್ನು ವಾಸ್ತವವಾದ ಐತಿಹಾಸಿಕ ಹಾಗೂ ಸಮಕಾಲೀನ ಸನ್ನಿವೇಶಗಳಿಗೆ ಅನ್ವಯಿಸುವಾಗ ಆರ್ಥಿಕ ಜೀವನದಲ್ಲಿರುವ

ದೀರ್ಘಕಾಲಿಕ ಅಂಶಗಳನ್ನು ವೀಕ್ಷಿಸಿ ವಿಚಾರ ಮಾಡುವಾಗ ಅರ್ಥಶಾಸ್ತ್ರಕ್ಕೆ ಇತಿಹಾಸದ ಬೆಂಬಲ ಅವಶ್ಯಕವಾಗುತ್ತದೆ. (7) ಬೆಳವಣಿಗೆ, ಪ್ರಗತಿ ಎನ್ನುವುದು ದೀರ್ಘಕಾಲಿಕ ವಿಷಯವಾಗಿರುವುದರಿಂದ ಅರ್ಥಶಾಸ್ತ್ರವು ಇತಿಹಾಸವನ್ನು ಅಧ್ಯಯನ ಮಾಡಬೇಕಾಗುತ್ತದೆ.

**(ಆ) ಅರ್ಥಶಾಸ್ತ್ರ**

ಅರ್ಥಶಾಸ್ತ್ರವೂ ಸಹ ಇತಿಹಾಸ ಕ್ಷೇತ್ರಕ್ಕೆ ಗಣನೀಯವಾದ ರೀತಿಯಲ್ಲಿ ಸಹಾಯವನ್ನು ಮಾಡುತ್ತಿದೆ. (1) ಪ್ರಾರಂಭದಿಂದಲೂ ಮಾನವನು ತನ್ನ ಜೀವಿತ ಕಾಲದಬಹುಭಾಗವನ್ನು ಜೀವನೋಪಾಯಗಳನ್ನು ಕಂಡುಕೊಳ್ಳುವ ಕಾರ್ಯಕ್ಕಾಗಿ ವಿನಿಯೋಗಿಸಬೇಕಾಯಿತು ಎಂಬುದಾಗಿ ಬರ್ಟ್ ಎಫ್. ಹೋಸೆಲಿಟ್ಸ್ ಹೇಳಿರುವುದು ಸಮರ್ಪಕವಾಗಿದೆ. ಮೊದಲಿನಿಂದಲೂ ಮಾನವ ಸಮಾಜದಲ್ಲಿ ಆರ್ಥಿಕಾಂಶ ಹಾಗೂ ಪ್ರಕ್ರಿಯೆಗಳು ಮುಖ್ಯ ಪಾತ್ರವನ್ನು ವಹಿಸುತ್ತಾ ಬಂದಿವೆ. ಆದ್ದರಿಂದ ಇತಿಹಾಸವು ಆರ್ಥಿಕ ರಚನೆಗಳ ಬಗ್ಗೆ ಅಧ್ಯಯನ ಮಾಡುವಾಗ ಅರ್ಥಶಾಸ್ತ್ರದ ವಿಶ್ಲೇಷಣಾಕ್ರಮ ಇದಕ್ಕೆ ಉಪಯುಕ್ತವಾಗುತ್ತದೆ. (2) ಅರ್ಥಶಾಸ್ತ್ರವು ಕೆಲವು ವಿಷಯಗಳನ್ನು ಇತಿಹಾಸಕಾರನ ಗಮನಕ್ಕೆ ತರುತ್ತದೆ. ಇಲ್ಲದಿದ್ದರೆ ಇವನು ಅವುಗಳನ್ನು ಲಕ್ಷಿಸದೇ ಹೋಗುವ ಸಂಭವ ಉಂಟು. ಉದಾಹರಣೆಗೆ, ಸಮಕಾಲೀನ ಸಮಾಜದಲ್ಲಿ ಕಂಡುಬರುವ ಆರ್ಥಿಕ ಸಮಸ್ಯೆಗಳ ಬಗ್ಗೆ ಅರ್ಥಶಾಶ್ತ್ರವು ನಡೆಸುವ ಅಧ್ಯಯನ ಗತಕಾಲದ ಸಮಾಜಗಳಲ್ಲಿದ್ದ ಇದೇ ತೆರನಾದ ಸಮಸ್ಯೆಗಳನ್ನು ಕುರಿತು ಇನ್ನೂ ಹೆಚ್ಚು ಕ್ರಮಬದ್ಧವಾದ ರೀತಿಯಲ್ಲಿ ವಿಚಾರ ಮಾಡಲು ಇವನಿಗೆ ಸಹಾಯ ಮಾಡುತ್ತದೆ. ಹೀಗೆ ಅರ್ಥಶಾಸ್ತ್ರದ ಅವಲಂಬನ ಇವನಿಗೆ ಅತ್ಯಗತ್ಯವಾಗುತ್ತದೆ. (3) ಮುಖ್ಯವಾಗಿ ಅರ್ಥಶಾಸ್ತ್ರವು ಇತಿಹಾಸದ ಪ್ರಧಾನ ಶಾಖೆಗಳಲ್ಲಿ ಒಂದಾಗಿರುವ ಆರ್ಥಿಕ ಇತಿಹಾಸಕ್ಕೆ ಬಹು ಸಹಾಯಕವಾಗಿದೆ. (4) ಇತಿಹಾಸದ ಸಮಸ್ಯೆಗಳನ್ನು ವಿಶ್ಲೇಷಿಸುವಾಗ ಆರ್ಥಿಕ ಸಿದ್ಧಾಂತಗಳು ಅತ್ಯಮೂಲ್ಯ ಸಹಾಯವನ್ನು ಒದಗಿಸಿಕೊಡುತ್ತವೆ. ಈ ಸಿದ್ಧಾಂತಗಳು ಸಮಸ್ಯೆಯನ್ನು ಸ್ಪಷ್ಟವಾಗಿ ವಿವರಿಸುವುದಕ್ಕೆ ದೀರ್ಘಕಾಲಿಕ ಬದಲಾವಣೆಗಳ ಬಗ್ಗೆ ಮುಖ್ಯವಾಗಿರುವ ಸೈದ್ಧಾಂತಿಕ ಪ್ರಮೇಯಗಳನ್ನು ರಚಿಸುವುದಕ್ಕೆ ಹಾಗೂ ಅವುಗಳನ್ನು ತುಲನೆ ಮಾಡಲು ಹಾಗೂ ಸಾಮಾನ್ಯೀಕರಣವನ್ನು ನಿರೂಪಿಸಲು ಅನುಕೂಲವಾಗಿರುವ ವಿಶ್ಲೇಷಣಾತ್ಮಕ ತತ್ವಗಳ ಪರಿಭಾಷೆಯಲ್ಲಿ ಗತಕಾಲದ ಬಗ್ಗೆ ಇರುವ ಜ್ಞಾನವನ್ನು ಕ್ರಮಬದ್ಧವಾದ ರೀತಿಯಲ್ಲಿ ವ್ಯವಸ್ಥಿತಗೊಳಿಸುವುದಕ್ಕೆ ಚರಿತ್ರೆಗೆ ಸಹಾಯ ಮಾಡುತ್ತವೆ. (5) ಆರ್ಥಿಕ ಪರಿವರ್ತನೆಯ ಪ್ರಮಾಣ ಮತ್ತು ಆರ್ಥಿಕ ಬೆಳವಣಿಗೆ ಹಾಗೂ ಅವನತಿಯ ಪ್ರಕ್ರಿಯೆಯನ್ನು ಪರೀಕ್ಷಿಸುವುದರಲ್ಲಿ ಮತ್ತು ಆರ್ಥಿಕ ಕಲ್ಯಾಣ ಸಾಧನೆಯ ಬಗ್ಗೆ ಅಂದಾಜು ಮಾಡುವುದರಲ್ಲಿ ಇತಿಹಾಸ ಹಾಗೂ ಅರ್ಥಶಾಸ್ತ್ರಗಳು ಪರಸ್ಪರ ಒಂದುಗೂಡಿ ಕೆಲಸ ಮಾಡುತ್ತವೆ. ಹೀಗೆ ಈ ಎರಡು ಶಾಸ್ತ್ರಗಳ ನಡುವೆ ಪರಸ್ಪರ ದ್ವಿಮಾರ್ಗದ ಬೌದ್ಧಿಕ ವ್ಯಾಪಾರವು ನಿರಂತರವಾಗಿ ನಡೆಯುತ್ತಿರುತ್ತದೆ.

**ಇತಿಹಾಸ ಹಾಗೂ ಅರ್ಥಶಾಸ್ತ್ರಕ್ಕಿರುವ ವ್ಯತ್ಯಾಸಗಳು**

ಈ ಎರಡು ಅಧ್ಯಯನಗಳು ಕೆಲವು ಅಂಶಗಳಲ್ಲಿ ವಿಭಿನ್ನವಾಗಿವೆ. (1) ಇತಿಹಾಸವು ಸಾಮಾನ್ಯ ಅಧ್ಯಯನವಾದರೆ, ಅರ್ಥವಿಜ್ಞಾನವು ವಿಶೇಷವಾದ ಸಾಮಾಜಿಕ ಶಾಸ್ತ್ರವಾಗಿದೆ. (2) ಇತಿಹಾಸದ ಕ್ಷೇತ್ರವು ಅರ್ಥಶಾಸ್ತ್ರದ ರಂಗಕ್ಕಿಂತ ಹೆಚ್ಚು ವ್ಯಾಪಕವಾಗಿದೆ. ಅರ್ಥವಿಜ್ಞಾನವು ಮಾನವ ಜೀವನದ ಒಂದು

ಭಾಗವಾಗಿರುವ, ಸಂಪತ್ತಿಗೆ ಸಂಬಂಧಿಸಿರುವ ವಿಷಯಗಳನ್ನು ಮಾತ್ರ ಅಧ್ಯಯನ ಮಾಡುವುದರಿಂದ ಇದರ ವ್ಯಾಪ್ತಿ ಸೀಮಿತವಾಗಿದೆ. (3) ಇತಿಹಾಸವು ಮೊದಲಿನಿಂದ ಮಾನವನ ಸಾಧನೆಗಳನ್ನು ವಿವರಿಸಲು ಯತ್ನಿಸುತ್ತದೆ. ಇದರ ದೃಷ್ಟಿಕೋನ ಅತ್ಯಂತ ವಿಶಾಲವಾಗಿದೆ. ಅರ್ಥಶಾಸ್ತ್ರವು ಮುಖ್ಯವಾಗಿ ಆರ್ಥಿಕ ಚಟುವಟಿಕೆ ಹಾಗೂ ವ್ಯವಸ್ಥೆಗಳಲ್ಲಿ ಆಸಕ್ತಿಯನ್ನು ವಹಿಸುವುದರಿಂದ ತುಲನಾತ್ಮಕವಾಗಿ ಇದರ ನೋಟದ ನಿಟ್ಟು ಪರಿಮಿತವಾಗಿರುತ್ತದೆ. (4) ಅಧ್ಯಯನ ವಿಧಾನಗಳ ವಿಷಯದಲ್ಲೂ ಈ ಎರಡು ಅಧ್ಯಯನಗಳಿಗೆ ಭೇದವಿರುವುದನ್ನು ಕಾಣಬಹುದು. ಮೇಲ್ನೋಟಕ್ಕೆ ಈ ಎರಡು ಶಾಸ್ತ್ರಗಳಿಗೆ ಸಾಕಷ್ಟು ಸಾಮ್ಯ ಕಂಡುಬಂದರೂ ಇತಿಹಾಸ ಹಾಗೂ ಅರ್ಥಶಾಸ್ತ್ರಗಳ ಮೂಲ ಉದ್ದೇಶಗಳೇ ಭಿನ್ನವಾಗಿರುತ್ತವೆ. ಇವೆರಡು ಪ್ರತ್ಯೇಕ ಮಾರ್ಗಗಳೇ ಹೊರತು ಕವಲು ದಾರಿಗಳಲ್ಲ.

ಪ್ರತಿಯೊಂದಕ್ಕೂ ಪ್ರತ್ಯೇಕವಾದ ಅಧ್ಯಯನ ಕ್ಷೇತ್ರವಿದೆ. ಆದರೂ ಈ ಶಾಸ್ತ್ರಗಳಿಗೆ ನಿಟಕವಾದ ಸಂಬಂಧವಿದೆ. ಇವುಗಳು ಪರಸ್ಪರರ ಅದ್ವಿತೀಯ ವೃತ್ತಿಪರ ಮಹತ್ಸಾಧನೆಗಳಲ್ಲಿ ಪಾಲ್ಗೊಳ್ಳಲು ಪ್ರಯತ್ನಿಸುತ್ತವೆ ಮತ್ತು ಉದಾರವಾಗಿ ಪರಸ್ಪರ ಸಹಾಯ ಮಾಡುವುದರ ಮೂಲಕ ಪರಸ್ಪರರ ಪ್ರಗತಿಗೆ ಪೋಷಕವಾಗಿವೆ. ಹೀಗೆ ಈ ಎರಡು ಶಾಸ್ತ್ರಗಳು ಸ್ವತಂತ್ರವಾದ ಆದರೆ ಪರಸ್ಪರಾವಲಂಬನವುಳ್ಳ ಅಧ್ಯಯನಗಳಗಿವೆ.

### 3.2.3 ಇತಿಹಾಸ ಮತ್ತು ಸಮಾಜಶಾಸ್ತ್ರ

ಇತಿಹಾಸಕ್ಕೂ ಮತ್ತು ಸಮಾಜಶಾಸ್ತ್ರಕ್ಕೂ ಒಂದು ಆತ್ಮೀಯವಾದ ಸಂಬಂಧ ಬೆಳೆಸಿಕೊಂಡು ಬಂದಿದೆ. ಅನೇಕ ಇತಿಹಾಸಕಾರರನ್ನು ಸಮಾಜಶಾಸ್ತ್ರಜ್ಞರೆಂಬುದಾಗಿ ಪರಿಗಣಿಸಬಹುದು ಮತ್ತು ಪರ್ಯಾಯವಾಗಿ ಅನೇಕ ಸಮಾಜಶಾಸ್ತ್ರಜ್ಞರನ್ನು ಇತಿಹಾಸಕಾರರೆಂಬುದಾಗಿ ಕರೆಯಬಹುದು. ಇತಿಹಾಸವು ಮಾನವ ಸಮಾಜಗಳ ಜೀವನ ಕ್ರಮ, ಅವುಗಳಲ್ಲಿ ಆದ ಬದಲಾವಣೆ, ಪ್ರಭಾವ ಬೀರಿದ ಆಲೋಚನೆ ಹಾಗೂ ಭೌತಪರಿಸ್ಥಿತಿಗಳ ದಾಖಲೆಯಾಗಿದೆ. ಸಮಾಜಶಾಸ್ತ್ರವು ಸಮಾಜ ಹಾಗೂ ಅದರ ಮೂಲಭೂತ ತತ್ವ, ಸಂಸ್ಥೆ, ಸಾಮಾಜಿಕ ಸಂಬಂಧ ಹಾಗೂ ಕ್ರಿಯೆಗಳನ್ನು ಕುರಿತು ವಿಚಾರ ಮಾಡುವ ವಿಷಯಗಳಲ್ಲಿ ಸಾಮ್ಯವಿರುವುದರಿಂದ ಮತ್ತು ಗತಕಾಲದಿಂದ ಇಂದಿನವರೆಗೂ ಹಬ್ಬಿಕೊಂಡು ಬಂದಿರುವ ಒಂದೇ ತೆರನಾದ ಸಮಸ್ಯೆಗಳಲ್ಲಿ ಆಸಕ್ತಿಯನ್ನು ವಹಿಸುವುದರಿಂದ ಇವುಗಳ ನಡುವೆ ಅನ್ಯೋನ್ಯವಾದ ಸಂಬಂಧ ಬೆಳೆದುಬಂದಿದೆ.

**(ಅ) ಇತಿಹಾಸವು ಸಮಾಜಶಾಸ್ತ್ರಕ್ಕೆ ನೀಡುವ ಸಹಾಯ**

(1) ಪಿ.ಗಿಸ್ಬರ್ಟ್‌ರ ಪ್ರಕಾರ ಸಮಾಜಶಾಸ್ತ್ರವು ಔಪಚಾರಿಕವಾಗದೇ ಇರಬೇಕಾದರೆ, ಇದು ಮಾನವಶಾಸ್ತ್ರದಿಂದ ಮಾತ್ರವಲ್ಲದೆ ಇತಿಹಾಸದಿಂದಲೂ ಸಹ ವಿಷಯಗಳನ್ನು ತೆಗೆದುಕೊಳ್ಳಬೇಕು. (2) ಸಮಾಜವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ ಅದರ ಗತಕಾಲದ ಬಗ್ಗೆ ತಿಳಿದುಕೊಳ್ಳ ಬೇಕಾದುದು ಸಮಾಜವಿಜ್ಞಾನಿಗೆ ಅವಶ್ಯಕವಾಗುತ್ತದೆ. ಹಾದು ಹೋದ ಬಾಳು ಇಂದಿನ ಬದುಕಿನ ಒಗಟನ್ನು ಬಿಡಿಸುವ ಕೀಲಿಯಾಗಬಲ್ಲದು. ಸಾಮಾಜಿಕ ಸಮೂಹದ ಗತಕಾಲದ ಜೀವನಕ್ಕೂ, ಅದರ ಇಂದಿನ ಬದುಕಿಗೂ

ಕಾರ್ಯಕಾರಣ ಸಂಬಂಧವಿರುತ್ತದೆ. ಆದ್ದರಿಂದ ಇಂದಿನ ಸಮಾಜದ ರಚನೆ ಹಾಗೂ ಕ್ರಿಯೆಯ ಬಗ್ಗೆ ಇನ್ನೂ ಹೆಚ್ಚು ಸೂಕ್ಷ್ಮ ಪರಿಜ್ಞಾನವನ್ನು ಪಡೆಯಬೇಕಾದರೆ ಐತಿಹಾಸಿಕ ಜ್ಞಾನ ಅವಶ್ಯಕ. (3) ಸಾಮಾಜಿಕ ಸಂಸ್ಥೆ, ಪ್ರಕ್ರಿಯೆ, ಮೌಲ್ಯ, ನಂಬಿಕೆ ಇತ್ಯಾದಿಗಳ ಬಗ್ಗೆ ವಿಚಾರ ಮಾಡುವಾಗ ಸಮಾಜ ವಿಜ್ಞಾನವು ಐತಿಹಾಸಿಕ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಸಮಾಜಶಾಸ್ತ್ರವು ಇತಿಹಾಸವನ್ನು ಕಡೆಗಣಿಸಿದರೆ ಸಮಾಜವೆಂಬ ಕ್ಷೇತ್ರದಲ್ಲಿ ಬೆಳೆದು ನಿಂತಿರುವ ಸಂಸ್ಥೆಗಳ ಮೂಲಬೇರುಗಳ ಅತ್ಯಮೂಲ್ಯ ಅರಿವು ಇದಕ್ಕೆ ಇಲ್ಲವಾಗುತ್ತದೆ. (4) ಇತಿಹಾಸವು ಸಮಾಜಶಾಸ್ತ್ರಕ್ಕೆ ಹೆಚ್ಚು ವೈವಿಧ್ಯಮಯವಾಗಿರುವ ಅಧ್ಯಯನ ಸಮಸ್ಯೆಗಳನ್ನು ಒದಗಿಸಿಕೊಡುತ್ತದೆ. (5) ಸಮಕಾಲೀನ ಜೀವನದ ಸಮಸ್ತ ಸಾಮಾಜಿಕ ಬಗೆಗಳು ಐತಿಹಾಸಿಕ ಫಲಗಳಾಗಿರುವುದರಿಂದ ಅವುಗಳನ್ನು ಬೆಳವಣಿಗೆಯ ದೃಷ್ಟಿಯಿಂದ ನೋಡಿ ಅಧ್ಯಯನ ಮಾಡುವುದಕ್ಕೆ ಇತಿಹಾಸದ ಅರಿವು ಅತಿ ಉಪಯುಕ್ತವಾಗಿರುತ್ತದೆ. ಬೇರೆ ಬೇರೆ ಯುಗಗಳಲ್ಲಿ ವಿಭಿನ್ನ ಪರಿಸ್ಥಿತಿಗಳಲ್ಲಿ ವಿಕಾಸ ಹೊಂದಿರುವ ಸಾಮಾಜಿಕ ಸಂಸ್ಥೆಗಳ ಬಗ್ಗೆ ತುಲನಾತ್ಮಕವಾದ ಅಧ್ಯಯನಗಳನ್ನು ನಡೆಸಲು ಪರಿವರ್ತನೆಯ ಪ್ರಕ್ರಿಯೆಗಳನ್ನು ಅರಿಯಲು ಮತ್ತು ಗತಕಾಲದ ಸಮಾಜಗಳು ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ ಅನುಸರಿಸಿದ ಕ್ರಮಗಳನ್ನು ಅರ್ಥಮಾಡಿಕೊಳ್ಳಲು ಸಮಾಜಶಾಸ್ತ್ರಕ್ಕೆ ಇತಿಹಾಸಕಾರನ ಬೆಂಬಲ ಅವಶ್ಯಕವಾಗುತ್ತದೆ. ಹೀಗೆ ಇತಿಹಾಸವು ಸಮಾಜಶಾಸ್ತ್ರ ಕ್ಷೇತ್ರಕ್ಕೆ ಅನೇಕ ಉಪಯುಕ್ತವಾದ ಕಾಣಿಕೆಗಳನ್ನು ನೀಡುತ್ತದೆ.

**(ಆ) ಇತಿಹಾಸಕ್ಕೆ ಸಮಾಜಶಾಸ್ತ್ರದ ನೆರವು**

ಸಮಾಜಶಾಸ್ತ್ರವೂ ಸಹ ಇತಿಹಾಸ ಕ್ಷೇತ್ರಕ್ಕೆ ಪ್ರಶಂಸಾರ್ಹವಾದ ರೀತಿಯಲ್ಲಿ ಸಹಾಯವನ್ನು ಮಾಡುತ್ತದೆ. (1) ಸಂಸ್ಕೃತಿ, ಸಾಮಾಜಿಕ ರಚನೆ ಮುಂತಾದ ವಿಷಯಗಳ ಬಗ್ಗೆ ಇತಿಹಾಸಕಾರನು ಮಾಡುವ ಅಧ್ಯಯನಗಳಲ್ಲಿ ಸಮಾಜಶಾಸ್ತ್ರೀಯ ವಿಶ್ಲೇಷಣೆ ಉಪಯುಕ್ತವಗುತ್ತದೆ ಮತ್ತು ಸಮಾಜಶಾಸ್ತ್ರವು ಇವನಿಗೆ ಒಂದು ನೂತನ ದೃಷ್ಟಿಕೋನವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. (2) ಯಾವುದಾದರೂ ಪ್ರಮುಖ ವಿಷಯವನ್ನು ಕುರಿತು ಅಧ್ಯಯನ ಮಾಡುವಾಗ ಇತಿಹಾಸಕಾರನು ಸಮಾಜಶಾಸ್ತ್ರಜ್ಞರ ಅಭಿಪ್ರಾಯಗಳನ್ನು ಅರಿತುಕೊಂಡು ಅಧ್ಯಯನವನ್ನು ಆರಂಭಿಸಿದರೆ ಸಂಗತವಾದ ಸಂಗತಿಗಳನ್ನು ಅರಸುವುದು ಸುಲಭವಾಗುತ್ತದೆ ಹಾಗೂ ಆರಂಭದ ಅನ್ವೇಷಣೆಯಲ್ಲಿ ಇವನಿಗೆ ಕಾಲ ವ್ಯರ್ಥವಾಗುವುದಿಲ್ಲ. (3) ಸಮಾಜಶಾಸ್ತ್ರವು ಕೆಲವು ಮುಖ್ಯ ವಿಷಯಗಳ ಪ್ರತಿ ಇತಿಹಾಸಕಾರನ ಗಮನವನ್ನು ಆಕರ್ಷಿಸುತ್ತದೆ. ಉದಾಹರಣೆಗೆ, ಸಮಕಾಲೀನ ಸಮಾಜದಲ್ಲಿ ಪ್ರಬಲವಾಗಿರುವ ಅಪರಾಧ, ವೇಶ್ಯಾವೃತ್ತಿಯೇ ಮುಂತಾದ ಸಾಮಾಜಿಕ ಸಮಸ್ಯೆಗಳ ಬಗ್ಗೆ ಸಮಾಜಶಾಸ್ತ್ರವು ನಡೆಸುವ ಅಧ್ಯಯನಗಳು, (4) ಇತಿಹಾಸದ ಪ್ರಮುಖ ಶಾಖೆಗಳಲ್ಲಿ ಒಂದಾಗಿರುವ ಸಾಮಾಜಿಕ ಇತಿಹಾಸಕ್ಕೆ ಸಮಾಜಶಾಸ್ತ್ರವು ಅತ್ಯಮೂಲ್ಯವಾದ ನೆರವನ್ನು ನೀಡುತ್ತದೆ.

ಇಲ್ಲಿ ಸಮಾಜಶಾಸ್ತ್ರೀಯ ಸಿದ್ಧಾಂತ, ಭಾವರೂಪ ಹಾಗೂ ಅಧ್ಯಯನ ತಂತ್ರಗಳು ಅತ್ಯಂತ ಉಪಯುಕ್ತವಾಗುತ್ತದೆ. (5) ಇತಿಹಾಸಕಾರನು ತಾನು ಅಧ್ಯಯನ ಮಾಡುವ ಐತಿಹಾಸಿಕ ಘಟನೆಗಳ ಸಾಮಾಜಿಕ ಒಳಾರ್ಥಗಳನ್ನು ಚೆನ್ನಾಗಿ ಗ್ರಹಿಸಬೇಕು. ಇಲ್ಲದಿದ್ದರೆ ಇವನು ಘಟನೆಗಳ ಬಗ್ಗೆ ನೀಡುವ ವಿವರಣೆ ನೀರಸವಾಗುತ್ತದೆ. ಉದಾಹರಣೆಗೆ, ಒಬ್ಬ ಇತಿಹಾಸಕಾರನು ಸಮಕಾಲೀನ ಭಾರತ ಸಮಾಜವನ್ನು ಕುರಿತು

ಒಂದು ವೃತ್ತಾಂತವನ್ನು ಬರೆಯಲು ಪ್ರಯತ್ನಿಸುವಾಗ ಸಮಕಾಲೀನ ಭಾರತ ಸಮಾಜದ ಮೇಲೆ ಮಹಾತ್ಮ ಗಾಂಧಿಯವರು ನಡೆಸಿದ ಸತ್ಯಾಗ್ರಹ ಚಳವಳಿಯು ಬೀರಿದ ಸಾಮಾಜಿಕ ಪ್ರಭಾವದ ಸ್ವರೂಪವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಇಲ್ಲದಿದ್ದರೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಸಿದ್ಧಪಡಿಸುವ ದಾಖಲೆಯು ನಿಸ್ಸಾರವಾದ ಘಟನೆಗಳ ಸ್ವಾರಸ್ಯಹೀನ ಕಥನವಾಗುತ್ತದೆ. ಈ ದೃಷ್ಟಿಯಲ್ಲಿ ಸಮಾಜಶಾಸ್ತ್ರವೂ ಇತಿಹಾಸವೆಂಬ ಮಹಾಭವನಕ್ಕೆ ಬಲವಾದ ಆಧಾರಸ್ತಂಭವಾಗುತ್ತದೆ.

*ಇತಿಹಾಸ ಹಾಗೂ ಸಮಾಜಶಾಸ್ತ್ರಕ್ಕಿರುವ ಭೇದಗಳು*

ಮಾನವಜ್ಞಾನ ಎಂಬ ವ್ಯಾಪಕವಾಗಿರುವ ಕುಟುಂಬದಲ್ಲಿ ಇತಿಹಾಸ ಹಾಗೂ ಸಮಾಜಶಾಸ್ತ್ರ ನಿಕಟತಮವಾದ ಸಂಬಂಧವನ್ನು ಹೊಂದಿರುವ ಬಂಧುಶಾಸ್ತ್ರಗಳಾಗಿದ್ದರೂ ಹಲವಾರು ಅಂಶಗಳಲ್ಲಿ ಇವುಗಳಿಗೆ ವ್ಯತ್ಯಾಸಗಳಿವೆ. (1) ಇತಿಹಾಸವು ವಿಶೇಷವಾಗಿ ಗತಕಾಲದ ವಿಚಾರಗಳಲ್ಲಿ ಆಸಕ್ತಿಯನ್ನು ವಹಿಸುತ್ತದೆ. ಸಮಾಜಶಾಸ್ತ್ರವು ಹೆಚ್ಚಾಗಿ ಸಮಕಾಲೀನ ಸಾಮಾಜಿಕ ವ್ಯವಸ್ಥೆಯ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸುತ್ತದೆ. (2) ಇತಿಹಾಸವು ಪ್ರತಿ ಘಟನೆಯನ್ನು ಅದ್ವಿತೀಯವೆಂಬುದಾಗಿ ಎಣಿಸಿ ನಿರ್ದಿಷ್ಟವಾದ ಘಟನೆಗಳನ್ನು ವರ್ಣಿಸುವುದರಲ್ಲಿ ಆಸಕ್ತಿಯನ್ನು ತೋರುತ್ತದೆಯಾದರೆ, ಸಮಾಜಶಾಸ್ತ್ರಕ್ಕೆ ಪ್ರಧಾನವಾಗಿ ಸಮಾಜದ ಸಾಮಾನ್ಯ ನಿಯಮಗಳನ್ನು ಕಂಡುಹಿಡಿಯುವುದರಲ್ಲಿ ಹೆಚ್ಚಿನ ಆಸಕ್ತಿ ಇರುತ್ತದೆ. (3) ಇತಿಹಾಸವು ಅದ್ವಿತೀಯವಾಗಿರುವ ವಿಶಿಷ್ಟ ವಿಷಯಗಳ ಬಗ್ಗೆ ಅಧ್ಯಯನಗಳನ್ನು ನಡೆಸಿದರೆ ಸಮಾಜಶಾಸ್ತ್ರವು ನಿಯತವಾಗಿರುವ ಹಾಗೂ ಪುನರಾವರ್ತಕವಾಗುವ ಸಾರ್ವತ್ರಿಕ ವಿಷಯಗಳನ್ನು ಕುರಿತು ವಿಚಾರ ಮಾಡುತ್ತದೆ. ಉದಾಹರಣೆಗೆ, ಇತಿಹಾಸವು ಮೂರು ಪಾಣೀಪತ್ ಯುದ್ಧಗಳು, ಪ್ರಪಂಚದ ಮಹಾಯುದ್ಧಗಳು ಮುಂತಾದವುಗಳ ಬಗ್ಗೆ ಅಧ್ಯಯನವನ್ನು ನಡೆಸುತ್ತದೆ. ಸಮಾಜಶಾಸ್ತ್ರವು ಈ ಯಾವ ನಿರ್ದಿಷ್ಟ ಯುದ್ಧಗಳಲ್ಲೂ ಆಸಕ್ತಿಯನ್ನು ತೋರದೆ, ಯುದ್ಧವನ್ನೇ ಒಂದು ಸಾಮಾನ್ಯ ಸಾಮಾಜಿಕ ವಿಷಯವನ್ನಾಗಿ ಎಣಿಸಿ ವಿಚಾರ ಮಾಡುತ್ತದೆ. (4) ಇತಿಹಾಸವು ವಿಷಯಗಳನ್ನು ಸರಿಯಾಗಿ ವಿವರಿಸುವ ವರ್ಣನಾತ್ಮಕ ಅಧ್ಯಯನವಾದರೆ, ಸಮಾಜಶಾಸ್ತ್ರವು ಸಾಮಾನ್ಯ ಸೂತ್ರವನ್ನು ನಿರೂಪಿಸುವ ಹಾಗೂ ವಿಶ್ಲೇಷಣಾತ್ಮಕವಾದ ಶಾಸ್ತ್ರವಾಗಿದೆ.

### 3.2.4 ಇತಿಹಾಸ ಮತ್ತು ಮಾನವಶಾಸ್ತ್ರ

ಮೈಟ್‌ಲ್ಯಾಂಡರ ಅಭಿಪ್ರಾಯದಲ್ಲಿ ಮಾನವಶಾಸ್ತ್ರವು ಇತಿಹಾಸವಾಗಬೇಕು. ಇಲ್ಲದಿದ್ದರೆ ಇದಕ್ಕೆ ಅಸ್ತಿತ್ವವಿರುವುದಿಲ್ಲ. ವಿಲ್ ಡ್ಯೂರಂಟರ ಪ್ರಕಾರ "ನಾವು ಮಾನವ ಶಾಸ್ತ್ರದಿಂದ ಪ್ರಾರಂಭಿಸಿ ಪ್ರಾಚೀನ ವಸ್ತುಶೋಧನ ಶಾಸ್ತ್ರದ ಮೂಲಕ ಇತಿಹಾಸ ಕ್ಷೇತ್ರಕ್ಕೆ ಬರಬೇಕು". ಅಂದರೆ, ಮಾನವನನ್ನು ಕುರಿತ ಅಧ್ಯಯನವೇ ಮಾನವಶಾಸ್ತ್ರದ ಗುರಿ. ಇದು ಮಾನವನ ಶಾರೀರಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ವಿಕಾಸದ ಬಗ್ಗೆ ಪ್ರಾರಂಭದಿಂದಲೂ ಅಧ್ಯಯನ ಮಾಡುವುದರಲ್ಲಿ ಆಸಕ್ತಿಯನ್ನು ವಹಿಸುತ್ತದೆ; ಮಾನವ ಜೀವನದಲ್ಲಿ ಲಿಖಿತ ದಾಖಲೆಗಳಿಲ್ಲದ ಕಾಲವನ್ನು ಕುರಿತೂ ಸಹ ವಿಚಾರ ಮಾಡುತ್ತದೆ. ಇದರಿಂದ ಇದು ಇತಿಹಾಸಕ್ಕೆ ಪೂರ್ವಗಾಮಿಯಾಗುತ್ತದೆ. ಇತಿಹಾಸವೆಂದರೆ ಮಾನವನ ಗತಕಾಲದ ಸಾಧನೆಗಳ

ತರ್ಕಬದ್ಧವಾದ ದಾಖಲೆ ಎಂಬುದಾಗಿ ನಿರೂಪಿಸಲಾಗಿದೆ. ಮಾನವಶಾಸ್ತ್ರವೂ ವಿಜ್ಞಾನ ಹಾಗೂ ಇತಿಹಾಸ ಎರಡೂ ಆಗಿದೆ ಎಂಬುದಾಗಿ ಹೇಳಲಾಗುತ್ತದೆ. ಈ ಎಲ್ಲಾ ಅಂಶಗಳಿಂದ ಇತಿಹಾಸ ಹಾಗೂ ಮಾನವಶಾಸ್ತ್ರಗಳಿಗೆ ಅತ್ಯಂತ ನಿಕಟವಾದ ಸಂಬಂಧವಿದೆ ಎಂಬುದು ತಿಳಿದುಬರುತ್ತದೆ. ಇವುಗಳು ನೀಡುವ ಪರಸ್ಪರ ಸಹಕಾರ ಮತ್ತು ಸಹಾಯದಲ್ಲಿ ಈ ಆಪ್ತಸಂಬಮಧ ಬಹು ಸ್ಪಷ್ಟವಾಗಿ ಪ್ರತಿಬಿಂಬಿತವಾಗುತ್ತದೆ.

**(ಅ) ಮಾನವಶಾಸ್ತ್ರಕ್ಕೆ ಇತಿಹಾಸದ ನೆರವು**

ಮಾನವಶಾಸ್ತ್ರದ ಅಧ್ಯಯನಗಳಲ್ಲಿ ಇತಿಹಾಸವು ಬಹು ಉಪಯುಕ್ತವಾಗಿದೆ. (1) ಐತಿಹಾಸಿಕ ಘಟನೆಗಳು ಒಂದು ನಿರ್ದಿಷ್ಟ ಸಮಾಜದ ಸಂಸ್ಕೃತಿಯ ಹರಿವಿನ ಮೇಲೆ ಪ್ರಭಾವವನ್ನು ಬೀರುತ್ತವೆ. ಆದ್ದರಿಂದ ಸಂಸ್ಕೃತಿಗಳ ಐತಿಹಾಸಿಕ ಪ್ರಕ್ರಿಯೆಗಳನ್ನು ಅರಿತುಕೊಳ್ಳಬೇಕಾದುದು ಅಗತ್ಯ. ಬೋಅಸ್ ಅವರು ಪ್ರಸಕ್ತ ಸಾಂಸ್ಕೃತಿಕ ಪರಿಸ್ಥಿತಿಗಳ ಪ್ರಾಮುಖ್ಯವನ್ನು ಸರಿಯಾಗಿ ಗ್ರಹಿಸಬೇಕಾದರೆ ಮಾನವಶಾಸ್ತ್ರನು ತಾನು ಅವಲೋಕಿಸುತ್ತಿರುವ ಆದಿವಾಸಿ ಜನರ ಜೀವನದಲ್ಲಿ ಹಿಂದೆ ತಲೆದೋರಿದ್ದ ನಿರ್ದಿಷ್ಟ ಐತಿಹಾಸಿಕ ಘಟನೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕಾದುದು ಅತ್ಯಾವಶ್ಯಕ ಎಂಬುದಾಗಿ ಒತ್ತಿಹೇಳಿದರು. ಆದ್ದರಿಂದ ಮಾನವಶಾಸ್ತ್ರದ ಅಧ್ಯಯನಗಳಲ್ಲಿ ಐತಿಹಾಸಿಕ ವಿಷಯಗಳು ಮುಖ್ಯವಾಗುತ್ತವೆ. (2) ಐತಿಹಾಸಿಕ ದಾಖಲೆಗಳು ಮಾನವಶಾಸ್ತ್ರಜ್ಞನಿಗೆ ಸಂಸ್ಕೃತೀಕರಣದ ಹಾಗೂ ಸಾಂಸ್ಕೃತಿಕ ಬದಲಾವಣೆಯ ಬಗ್ಗೆ ಮಾಡುವ ಚರ್ಚೆಗಳಲ್ಲಿ ಅತ್ಯಂತ ಉಪಯುಕ್ತವೆನಿಸುತ್ತವೆ. ಒಂದು ಸಮಾಜದ ಒಳಗೆ ನಡೆಯುವ ಸಾಂಸ್ಕೃತಿಕ ಅನ್ವೇಚಣೆಗಳು ಅಥವಾ ಹೊರಗಿನ ಸಂಸ್ಕೃತಿಗಳ ಸಂಪರ್ಕದ ಕಾರಣದಿಂದ ಒಂದು ಸಂಸ್ಕೃತಿಯಲ್ಲಿ ತಲೆದೋರುವ ಬದಲಾವಣೆಗಳನ್ನು ಐತಿಹಾಸಿ ಪ್ರಮಾದಗಳು ಎಂಬುದಾಗಿ ಕರೆಯಲಾಗುತ್ತದೆ. (3) ಸಂಸ್ಕೃತಿಯ ಐತಿಹಾಸಿಕ ಬೆಳವಣಿಗೆಗಳು ಈ ಶಾಸ್ತ್ರಕ್ಕೆ ಒಂದು ಪ್ರಯೋಗಶಾಲೆಯಾಗಿ ಸಹಾಯ ಮಾಡಬಲ್ಲವು. ಐತಿಹಾಸಿಕ ವಿಷಯಗಳ ಭಂಡಾರವೇ ಮಾನವವಿಜ್ಞಾನಕ್ಕೆ ಪ್ರಯೋಗಮಂದಿರವಾಗುತ್ತದೆ. (4) ಇಷ್ಟು ಮಾತ್ರವಲ್ಲದೆ ಸಮಕಾಲೀನ ಸಮಾಜಗಳನ್ನು ಕುರಿತು ವೈಜ್ಞಾನಿಕ ವೃತ್ತಾಂತವೊಂದನ್ನು ಸಿದ್ಧಪಡಿಸ–ಬೇಕಾದರೆ ಮಾನವಶಾಸ್ತ್ರಜ್ಞನಿಗೆ ಅವುಗಳ ಮೇಲೆ ಐತಿಹಾಸಿಕ ಶಕ್ತಿಗಳು ಬೀರಿರುವ ಪ್ರಭಾವಗಳ ಅರಿವು ಅವಶ್ಯಕ.

**(ಆ) ಇತಿಹಾಸಕ್ಕೆ ಮಾನವಶಾಸ್ತ್ರದ ಸಹಾಯ**

ಮಾನವಶಾಸ್ತ್ರವು ಒದಗಿಸುವ ವಿಷಯ ಹಾಗೂ ವಿಧಾನಗಳು ಇತಿಹಾಸದ ಅಧ್ಯಯನಗಳಿಗೆ ಬಹು ಪ್ರಯೋಜನಕಾರಿಯಾಗಿವೆ. (1) ಆದಿವಾಸಿಗಳ ಪುರಾಣ ಕಥೆ, ಪರಂಪರಾಗತ ನಂಬಿಕೆ, ಕಲೆ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ನೀಡುವ ವರ್ಣನೆಗಳು ಮತ್ತು ಅವರ ಸಂಸ್ಕೃತಿಯ ಬಗ್ಗೆ ಮಾನವಶಾಸ್ತ್ರ ಕೊಡುವ ವಿವರಣೆಗಳು ಐತಿಹಾಸಿಕ ವಿಶ್ಲೇಷಣೆಗೆ ಅಮೂಲ್ಯವಾದ ನಿಧಿಯಾಗಿವೆ. (2) ಆದಿವಾಸಿಗಳ ಶಿಲ್ಪಕಲೆ, ಆಕೃತಿ ಶಿಲ್ಪಕಲೆ ಮುಂತಾದವುಗಳ ಬಗ್ಗೆ ಮಾನವಶಾಸ್ತ್ರವು ಒದಗಿಸುವ ವಿಷಯಗಳು ಕಲಾ ಇತಿಹಾಸಕಾರರಿಗೆ ಬಹು ಉಪಯುಕ್ತವಾಗುತ್ತವೆ. (3) ಮಾನವಶಾಸ್ತ್ರದ ಪ್ರಧಾನ ಶಾಖೆಗಳಲ್ಲಿ ಒಂದಾಗಿರುವ ಮಾನವನ ಶಾರೀರಿಕ ವಿಕಾಸ ವಿಷಯದಿಂದ ಇತಿಹಾಸಕಾರನು ಶುದ್ಧ ಜನಾಂಗವಾದ ಎಂಬಕಲ್ಪನೆ ತಪ್ಪಾದುದು ಎಂಬುದನ್ನು ದೃಢಪಡಿಸಬಲ್ಲನು. (4) ಮಾನವಶಾಸ್ತ್ರದ ಇನ್ನೊಂದು ಪ್ರಧಾನ ಶಾಖೆಯಾಗಿರುವ ಸಾಂಸ್ಕೃತಿಕ

ಮಾನವಶಾಸ್ತ್ರವು ಇತಿಹಾಸಕಾರನಿಗೆ ಸಂಸ್ಕೃತಿಗಳಿಗೆ ಸಂಬಂಧಿಸಿದ ಐತಿಹಾಸಿಕ ಪ್ರಕ್ರಿಯೆಗಳ ಬಗ್ಗೆ ತುಲನಾತ್ಮಕ ಅಧ್ಯಯನ ನಡೆಸಲು ಸಹಾಯ ಮಾಡುತ್ತದೆ. (5) ಮಾನವಶಾಸ್ತ್ರದ ಇನ್ನೊಂದು ಪ್ರಧಾನ ಶಾಖೆಯಾಗಿರುವ ಸಾಮಾಜಿಕ ಮಾನವಶಾಸ್ತ್ರವು ಆದಿವಾಸಿ ಸಮಾಜಗಳಲ್ಲಿರುವ ಸಾಮಾಜಿಕ ಸಂಸ್ಥೆಗಳ ಬಗ್ಗೆ ಅಧ್ಯಯನ ಮಾಡಿ ನೀಡುವ ಜ್ಞಾನವು ಸಾಮಾಜಿಕ ಇತಿಹಾಸಕಾರನಿಗೆ ಬಹು ಲಾಭದಾಯಕವಾಗಿರುತ್ತದೆ. (6) ಮಾನವಶಾಸ್ತ್ರವು ಬೆಳೆಸಿರುವ ಅಧ್ಯಯನ–ವಿಧಾನಗಳೂ ಸಹ ಐತಿಹಾಸಿಕ ಅಧ್ಯಯನಗಳಲ್ಲಿ ಬಹು ಉಪಯುಕ್ತವಾಗಿವೆ. (7) ಮಾನವ ವಿಜ್ಞಾನದಿಂದ ಇತಿಹಾಸದ ಪ್ರಧಾನ ಶಾಖೆಗಳಾಗಿರುವ ಸಾಂಸ್ಕೃತಿಕ ಇತಿಹಾಸ ಹಾಗೂ ನೃಜಾತಿ–ಇತಿಹಾಸಕ್ಕೆ ಬಹು ಪ್ರಯೋಜನಗಳು ಉಂಟಾಗುತ್ತವೆ.

*ಇತಿಹಾಸ ಮತ್ತು ಮಾನವಶಾಸ್ತ್ರಕ್ಕಿರುವ ವ್ಯತ್ಯಾಸಗಳು*

ಈ ಎರಡು ಅಧ್ಯಯನಗಳು ಅನ್ಯೋನ್ಯವಾದ ಸಂಬಂಧವನ್ನು ಹೊಂದಿ ಪರಸ್ಪರ ಸಹಾಯವನ್ನು ಮಾಡುತ್ತಿದ್ದರೂ ಕೆಲವು ಅಂಶಗಳಲ್ಲಿ ಇವು ಬೇರೆ ಬೇರೆಯಾಗಿವೆ. (1) ಇತಿಹಾಸದ ಅಧ್ಯಯನವು ಮುಖ್ಯವಾಗಿ ಬರವಣಿಗೆ ಕಲೆಯ ಅರುಣೋದಯವಾದ ಕಾಲದಿಂದ ಪ್ರಾರಂಭವಾಗುತ್ತದೆ. ಆದರೆ ಮಾನವಶಾಸ್ತ್ರವು ತನ್ನ ಅಧ್ಯಯನವನ್ನು ಲಿಖಿತ ದಾಖಲೆಗಳನ್ನು ಹೊಂದಿರುವ ಯುಗಕ್ಕೆ ಮಾತ್ರ ಸೀಮಿತಗೊಳಿಸದೆ, (2) ಬಹು ಹಿಂದೆ ಕಳೆದುಹೋದ ಪತ್ರಗುಚ್ಛ, ಮರೆಯಾಗಿದ್ದ ದಾಖಲೆ, ಅಜ್ಞಾತವಾಗಿದ್ದ ಶಾಸನಾಧಾರ ಇತ್ಯಾದಿಗಳು ಕೈಗೆ ಸಿಕ್ಕಿದರೆ ಇತಿಹಾಸಕಾರನಿಗೆ ಮಹದಾನಂದವಾಗುತ್ತದೆ. (3) ಈ ಎರಡು ಅಧ್ಯಯನಗಳು ಬಳಸುವ ಅಧ್ಯಯನ ವಿಧಾನಗಳಲ್ಲೂ ಭೇದವಿದೆ. ಇತಿಹಾಸ ಪ್ರಧಾನವಾಗಿ ವರ್ಣನಾತ್ಮಕವಾಗಿರುತ್ತದೆ ಹಾಗೂ ದಾಖಲೆಗಳ ಆಧಾರಗಳನ್ನು ಅವಲಂಬಿಸಿಕೊಂಡಿರುತ್ತದೆ. ಆದರೆ ಮಾನವಶಾಸ್ತ್ರವು ವರ್ಣನಾ ವಿಧಾನವನ್ನಲ್ಲದೆ ಸಹಭಾಗಿ ಅವಲೋಕನ, ಸಂದರ್ಶನ ಮುಂತಾದ ಅಧ್ಯಯನ ತಂತ್ರಗಳನ್ನೂ ಸಹ ಬಳಸುತ್ತದೆ. (4) ಇತಿಹಾಸದಂತೆ ಮಾನವಶಾಸ್ತ್ರವು ನಿಷ್ಕೃಷ್ಟವಾದ ಬಗೆಯಲ್ಲಿ ಒಂದು ಕಾಲಗಣನಾ ಸೂಚಿಯನ್ನು ಕೊಡಲಾರದು. ಇದು ಹಿಂದಿನ ಸಂಸ್ಕೃತಿಗಳ ಕಾಲವನ್ನು ಸಾಪೇಕ್ಷವಾಗಿ ಮಾತ್ರ ನಿರ್ಧರಿಸಬಲ್ಲುದು.

## 3.2.5 ಇತಿಹಾಸ ಮತ್ತು ಭೂಗೋಳಶಾಸ್ತ್ರ

ಮಾನವ ವಿಜ್ಞಾನ ಎಂಬ ಬೃಹತ್ ಕುಟುಂಬದಲ್ಲಿ ಇತಿಹಾಸದೊಂದಿಗೆ ಅತ್ಯಂತ ಆತ್ಮೀಯವಾದ ರೀತಿಯಲ್ಲಿ ಸಂಬಂಧಪಟ್ಟಿರುವ ಮತ್ತೊಂದು ಶಾಸ್ತ್ರವೇ ಭೂಗೋಳ ವಿಜ್ಞಾನ. ಇತಿಹಾಸವು ಸಮಾಜಗಳಲ್ಲಿ ಬಾಳುತ್ತಿರುವ ಜನರ ಜೀವನವನ್ನು ಭೌಗೋಳಿಕ ಹಾಗೂ ಭೌತ ಪರಿಸರಕ್ಕೆ ಸಂಬಂಧಿಸಿದಂತೆ ವಿವರಿಸುವ ಶಾಸ್ತ್ರವಾಗಿದೆ. ಭೂಗೋಳಶಾಸ್ತ್ರವೆಂದರೆ ಪರಿಸರ ಪ್ರಭಾವಗಳ ಮಾನವ ಹಾಗೂ ನಿಸರ್ಗಕ್ಕಿರುವ ಸಂಬಂಧಗಳ ಅಥವಾ ಭೂ ದೃಶ್ಯಗಳ ಅಧ್ಯಯನ ಅಥವಾ ಈ ಭೂಮಿಯ ಮೇಲೆ ಆಗಿರುವ ಎಲ್ಲಾ ಬಗೆಯ ವಿತರಣೆಗಳ ವಿಜ್ಞಾನ ಎಂಬುದಾಗಿ ವ್ಯಾಖ್ಯಾನಿಸಲಾಗಿದೆ. ಭೂಗೋಳ ವಿಜ್ಞಾನವು ಮಾನವರು ಹೇಗೆ ಪ್ರದೇಶವನ್ನು ಆಕ್ರಮಿಸಿಕೊಂಡು ವಾಸ ಮಾಡುತ್ತಾರೆ ಎಂಬುದನ್ನು ಕುರಿತು ಅಧ್ಯಯನ ಮಾಡುತ್ತದೆ ಎಂಬುದಾಗಿ ವೆಲ್ಲಿಂಗ್‌ಟನ್ ಜೋನ್ಸ್ ಹೇಳುತ್ತಾನೆ.

ಇತಿಹಾಸಕ್ಕೆ ಭೂಗೋಳಶಾಸ್ತ್ರ ಮತ್ತು ಕಾಲಗಣನಾಶಾಸ್ತ್ರ ಕಣ್ಣುಗಳಿದ್ದಂತೆ ಎಂಬುದಾಗಿ ಹೇಳಲಾಗಿದೆ. ಈ ವ್ಯಾಖ್ಯೆ ಇತಿಹಾಸ ಹಾಗೂ ಭೂಗೋಳಶಾಸ್ತ್ರದ ನಿಕಟ ಸಂಬಂಧವನ್ನು ಸ್ಪಷ್ಟಪಡಿಸುತ್ತದೆ.

**(ಅ) ಭೂಗೋಳಶಾಸ್ತ್ರಕ್ಕೆ ಇತಿಹಾಸ ಕೊಡುಗೆ**

ಇತಿಹಾಸದಿಂದ ಭೂಗೋಳ ವಿಜ್ಞಾನಿಗೆ ಅನೇಕ ಪ್ರಯೋಜನಗಳುಂಟಾಗುತ್ತವೆ. (1) ಒಬ್ಬ ವಿದ್ಯಾರ್ಥಿಯು ಒಳ್ಳೆಯ ಭೂಗೋಳಶಾಸ್ತ್ರಜ್ಞನಾಗಬೇಕಾದರೆ ಮೊದಲು ಇವನು ಭೂಗೋಳಶಾಸ್ತ್ರದ ಐತಿಹಾಸಿಕ ಹಿನ್ನೆಲೆಯನ್ನು ತಿಳಿಯಬೇಕು. ಇಲ್ಲಿ ಇತಿಹಾಸದ ಸಹಾಯ ಅವಶ್ಯಕವಾಗುತ್ತದೆ. (2) ಮಾನವನಿಗೆ ಸಂಬಂಧಪಟ್ಟಿರುವ ಪ್ರತಿ ಭೂದೃಶ್ಯವೂ ಹಾಗೂ ಮಾನವ ನೆಲೆಗಳು ವಾಸ್ತವಿಕ ಅನುಭವಗಳ ಸಂಚಯವಾಗಿರುತ್ತದೆ. ಭುಗೋಳಶಾಸ್ತ್ರಜ್ಞನು ಜಮೀನು, ಕಾರ್ಖಾನೆ, ಮನೆ, ನಗರ ಮುಂತಾದವುಗಳ ಮೂಲಗಳ ಬಗ್ಗೆ ತಿಳಿದುಕೊಳ್ಳಬೇಕು. ಅದಕ್ಕಾಗಿ ಇವನಿಗೆ ಮೂಲಗಳ ಬಗ್ಗೆ ಇತಿಹಾಸವು ನೀಡುವ ವಿವರ, ಐತಿಹಾಸಿಕ ಪ್ರಕ್ರಿಯೆ ಹಾಗೂ ಕ್ರಮಾನುಗತಿ, ಐತಿಹಾಸಿಕ ಬೆಳವಣಿಗೆ, ಪತನ, ಲಾಭ–ನಷ್ಟವನ್ನು ಕುರಿತ ಸಂಕೀರ್ಣವಾದ ಸಂಕಲನದ ಬಗ್ಗೆ ಅರಿವಿರಬೇಕು. ಇದಕ್ಕಾಗಿ ಇವನು ಇತಿಹಾಸದ ನೆರವನ್ನು ಕೋರಬೇಕಾಗುತ್ತದೆ. (3) ಮಾನವ ಭೂಗೋಳವಿಜ್ಞಾನಿಯು ಜೀವನಕ್ರಮ ಹಾಗೂ ಮಾನವ ಚಟುವಟಿಕೆಗಳ ಬಗ್ಗೆ ವಿಚಾರ ಮಾಡುತ್ತಾನೆ. ಅದಕ್ಕಾಗಿ ಇವನು ಗತಕಾಲದ ಇತಿಹಾಸವನ್ನು ಪುನರ್ರಚಿಸಬೇಕಾಗುತ್ತದೆ. ಒಂದು ಪ್ರದೇಶದಲ್ಲಿ ಹಿಂದೆ ಬಾಳುತ್ತಿದ್ದ ಜನರು ಹಾಗೂ ಅವರ ಅವಶ್ಯಕತೆಗಳ ದೃಷ್ಟಿಕೋನದಿಂದ ಆ ಪ್ರದೇಶವನ್ನು ವೀಕ್ಷಿಸಬೇಕು. ಅದಕ್ಕಾಗಿ ಇವನು ಇತಿಹಾಸವನ್ನು ಆಶ್ರಯಿಸಬೇಕಾಗುತ್ತದೆ. (4) ಐತಿಹಾಸಿಕ ಪ್ರಾದೇಶಿಕ ಅಧ್ಯಯನಗಳು ಭೂಗೋಳಶಾಸ್ತ್ರದಲ್ಲಿ ಮುಖ್ಯವಾಗಿವೆ. (5) ಒಂದು ನಿರ್ದಿಷ್ಟ ಸಂಸ್ಕೃತಿ ಹಾಗೂ ಒಂದು ವಿಶಿಷ್ಟ ಪ್ರದೇಶಕ್ಕೂ ಇರುವ ಸಂಬಂಧಗಳನ್ನು ವಿವರಿಸಬೇಕಾದರೆ ಭೂಗೋಳಶಾಸ್ತ್ರವೂ ಸಂಸ್ಕೃತಿಯ ಐತಿಹಾಸಿಕ ಸ್ವರೂಪವನ್ನೂ, ಸಂಸ್ಕೃತಿಯ ಪ್ರಕ್ರಿಯೆ, ಬೆಳವಣಿಗೆ ಹಾಗೂ ವೈವಿಧ್ಯವನ್ನು ಅರ್ಥಮಾಡಿ–ಕೊಳ್ಳಬೇಕು. ಅದಕ್ಕಾಗಿ ಇದು ಇತಿಹಾಸವನ್ನು ಅವಲಂಬಿಸಬೇಕಾಗುತ್ತದೆ.

**(ಆ) ಇತಿಹಾಸ ಕ್ಷೇತ್ರಕ್ಕೆ ಭೂಗೋಳ ವಿಜ್ಞಾನದ ಕಾಣಿಕೆ**

ಇತಿಹಾಸಕ್ಕೂ ಭೂಗೋಳವಿಜ್ಞಾನದ ನೆರವು ಅತ್ಯಾವಶ್ಯಕ. (1) ಕಾರಣ ಇತಿಹಾಸದ ಅಧ್ಯಯನಗಳಲ್ಲಿ ಪ್ರದೇಶ ಎನ್ನುವ ಭಾವರೂಪವು ಕಾಲ ಎನ್ನುವ ಭಾವರೂಪದಷ್ಟೇ ಪ್ರಮುಖವಾದುದು. ಈ ಎರಡು ಭಾವರೂಪಗಳನ್ನು ಇತಿಹಾಸದ ಜೀವದುಸಿರು ಎಂಬುದಾಗಿ ಹೇಳಬಹುದು. ಅಂದರೆ ಐತಿಹಾಸಿಕ ವಿವರಣೆಯಲ್ಲಿ ಕಾಲ ದೇಶಗಳಿಗೆ ಸಂಬಂಧಪಟ್ಟಂತೆ ಘಟನೆಗಳನ್ನು ಚಿತ್ರಿಸಲಾಗುತ್ತದೆ. ಇಲ್ಲಿ ಇತಿಹಾಸಕ್ಕೆ ಭೂಗೋಳಶಾಸ್ತ್ರದ ಸಹಕಾರ ಅವಶ್ಯಕ. (2) ಮೊದಲಿನಿಂದಲೂ ಭೂವೈಜ್ಞಾನಿಕ ಹಾಗೂ ಭೂಗೋಳಶಾಸ್ತ್ರೀಯ ಅಂಶಗಳು ಮಾನವನ ವಿಕಾಸ, ಅವನ ಸಮಾಜದ ಬೆಳವಣಿಗೆ ಹಾಗೂ ಪ್ರಗತಿಯ ಮೇಲೆ ಪ್ರಭಾವವನ್ನು ಬೀರಿ ಅವುಗಳನ್ನು ನಿರ್ಧರಿಸುತ್ತಾ ಬಂದಿವೆ. ಆದ್ದರಿಂದ ಸಮಾಜಗಳಲ್ಲಿ ಬಾಳುತ್ತಿರುವ ವ್ಯಕ್ತಿಗಳ ಐತಿಹಾಸಿಕ ಕಥೆಯನ್ನು ರಚಿಸುವಾಗ ಇತಿಹಾಸಕಾರನು ಭೂಗೋಳಶಾಸ್ತ್ರದ ಸಹಾಯವನ್ನು ಕೋರಬೇಕಾಗುತ್ತದೆ. (3) ಜಗತ್ತಿನ ರಾಷ್ಟ್ರಗಳ ಸ್ವರೂಪ, ಸ್ವಭಾವ ಹಾಗೂ ವಿಶಿಷ್ಟ ಚಟುವಟಿಕೆ ಇತ್ಯಾದಿಗಳನ್ನು ನಿರ್ಧರಿಸುವ ಕಾರ್ಯದಲ್ಲಿ ಭೌಗೋಳಿಕಾಂಶಗಳು ಪ್ರಧಾನ ಪಾತ್ರವನ್ನು ವಹಿಸುತ್ತವೆ. ಉದಾಹರಣೆಗೆ, ಸಿಂಧೂ,

ಗಂಗಾ, ಕಾವೇರಿ, ಕೃಷ್ಣಾ ಮುಂತಾದ ನದಿಗಳು ಭಾರತದ ಇತಿಹಾಸದಲ್ಲಿ ಅತ್ಯಂತ ಮುಖ್ಯವಾದ ಪಾತ್ರವನ್ನು ವಹಿಸುತ್ತಾ ಬಂದಿವೆ. ಬ್ರಿಟನ್, ಜಪಾನ್ ಹಾಗೂ ಗ್ರೀಸ್ ದೇಶಗಳ ಡೊಂಕಾದ ಕರಾವಳಿ ಪ್ರದೇಶಗಳು, ಈ ದೇಶಗಳ ನೌಕಾಬಲ ಹಾಗೂ ಸಾಮ್ರಾಜ್ಯ ನಿರ್ಮಾಣ ಕಾರ್ಯಗಳನ್ನು ನಿರ್ಣಯಿಸಿದ ಪ್ರಧಾನಾಂಶಗಳಾದುವು. 15–16ನೆಯ ಶತಮಾನಗಳ ಅದ್ಭುತ ಸಾಧನೆಗಳಾದ ಭೌಗೋಳಿಕ ಅನ್ವೇಷಣೆಗಳು ಜಗತ್ತಿನ ಇತಿಹಾಸದ ಹರಿವನ್ನೇ ಬದಲಾಯಿಸಿದುವು. ಖನಿಜ, ನಿಧಿ ನಿಕ್ಷೇಪ, ಮಣ್ಣಿನ ಮಹಿಮೆ, ಭೂ ಫಲಶಕ್ತಿ, ನದಿ, ಸರೋವರ, ಕೊಳ ಇತ್ಯಾದಿಗಳು, ತೀರ ಪ್ರದೇಶಗಳ ಸ್ವರೂಪ, ವಾಯುಗುಣ, ಹುಲ್ಲುಗಾವಲು, ತೋಟ, ಅರಣ್ಯ ಸಂಪತ್ತು ಮುಂತಾದ ರಚನಾತ್ಮಕ ಭೌಗೋಳಿಕ ಅಂಶಗಳು ಅನೇಕ ಜನಸಮೂಹಗಳ ಸಾಧನೆಗಳ ಇತಿಹಾಸಗಳನ್ನು ಸಮಂಜಸವಾದ ರೀತಿಯಲ್ಲಿ ಬರೆಯುವುದಕ್ಕೆ ಇತಿಹಾಸಕಾರನಿಗೆ ಅತ್ಯಂತ ಸಹಾಯಕವಾಗಿರುವ ವಿಷಯಸೂಚಕ ಹಾಗೂ ಪರಾಮರ್ಶಕ ಗ್ರಂಥ ಭಂಡಾರದಂತಿವೆ. (4) ವಿಭಿನ್ನ ಕಾಲದೇಶಗಳಲ್ಲಿ ಆದ ವಿವಿಧ ಜನರ ಹಾಗೂ ಸಂಸ್ಕೃತಿಗಳ ಪ್ರಾದೇಶಿಕ ವಲಸೆಯ ಬಗ್ಗೆ ವಿಚಾರ ಮಾಡುವಾಗ ವಿಶಿಷ್ಟ ಭೂಪ್ರದೇಶಗಳ ಪ್ರಭಾವ, ಬದಲಾವಣೆ ಇತ್ಯಾದಿಗಳನ್ನು ಇತಿಹಾಸಕಾರನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಇಲ್ಲಿಯೂ ಭೂಗೋಳಶಾಸ್ತ್ರವು ಇವನಿಗೆ ಬಹು ಸಹಾಯಕ. (5) ಇಷ್ಟು ಮಾತ್ರವಲ್ಲದೆ, ಜಗತ್ತಿನ ರಂಗಮಂಚದ ಮೇಲೆ ತಲೆದೋರಿ ನಿಷ್ಕ್ರಮಿಸಿರುವ ವಿವಿಧ ಸಂಸ್ಕೃತಿ–ನಾಗರಿಕತೆಗಳ ಪ್ರಗತಿ ಹಾಗೂ ಪತನದ ಬಗ್ಗೆ ಚರ್ಚಿಸುವಾಗ ಇತಿಹಾಸಕಾರನು ಆಯಾಯ ದೇಶಗಳಲ್ಲಿ ಕಂಡುಬಂದ ಪ್ರವಾಹ ಅತಿವೃಷ್ಟಿ, ಅನಾವೃಷ್ಟಿ, ಭೂಸವೆತ ಹಾಗೂ ಭೂ ಫಲಶಕ್ತಿಯ ನಾಶ, ಭೂಕಂಪನ, ಸುಂಟರಗಾಳಿ ಮುಂತಾದ ವಿನಾಶಕರ ಭೌಗೋಳಿಕ ಶಕ್ತಿಗಳು ಎಷ್ಟರಮಟ್ಟಿಗೆ ಈ ಬದಲಾವಣೆಗಳಿಗೆ ಕಾರಣಗಳಾದುವು ಎಂಬುದನ್ನು ಅರಿತುಕೊಳ್ಳಬೇಕಾಗುತ್ತದೆ. ಭೂಗೋಳವಿಜ್ಞಾನವು ಒದಗಿಸುವ ಜ್ಞಾನದ ಬೆಳಕು ಇವನಿಗೆ ನಿಸರ್ಗದೇವಿಯ ನಗು ಹಾಗೂ ಕೋಪವನ್ನು ತಿಳಿಯುವ ರೂಪರೇಷೆಗಳಾಗಿ ಮಾರ್ಪಾಡನ್ನು ಹೊಂದುತ್ತದೆ. ಹೀಗೆ ಇತಿಹಾಸಕಾರನು ಸದಾ ವಿಭಿನ್ನ ಪ್ರದೇಶಗಳ ಭೂಪಟಗಳನ್ನು ತನ್ನ ಪಕ್ಕದಲ್ಲೇ ಇಟ್ಟುಕೊಂಡಿರಬೇಕಾಗುತ್ತದೆ. (6) ಪ್ರಾರಂಭದಿಂದಲೂ ಜಗತ್ತಿನಲ್ಲಿ ಮಾನವನ ಬದುಕಿನಲ್ಲಿ ಆಗುತ್ತಾ ಬಂದಿರುವ ಏರುಪೇರುಗಳನ್ನು ಕುರಿತ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ನೀಡಲು ಯತ್ನಿಸುವ ಇತಿಹಾಸಕಾರನು ಸಂಸ್ಕೃತಿಯ ಧಾರಣಾಶಕ್ತಿಗೂ ಒಂದು ಇರುನೆಲೆಯ ಲಕ್ಷಣಕ್ಕೂ ಇರುವ ಸಂಬಂಧವನ್ನು ಸರಿಯಾಗಿ ತಿಳಿದುಕೊಂಡಿರಬೇಕು.

**ಇತಿಹಾಸಕ್ಕೂ ಭೂಗೋಳವಿಜ್ಞಾನಕ್ಕೂ ಇರುವ ವ್ಯತ್ಯಾಸಗಳು**

ಆದರೆ ಈ ಎರಡು ಅಧ್ಯಯನಗಳ ನಡುವೆ ಸಮಗ್ರ ಹೋಲಿಕೆ ಇಲ್ಲ. ಇವೆರಡರ ನಡುವೆ ಕೆಲವು ಭೇದಗಳನ್ನು ಕಾಣಬಹುದು. (1) ಇತಿಹಾಸ ಕ್ಷೇತ್ರದ ವ್ಯಾಪ್ತಿಯು ಭೂಗೋಳಶಾಸ್ತ್ರದ ಅಧ್ಯಯನ ರಂಗಕ್ಕಿಂತ ಹೆಚ್ಚು ವಿಶಾಲವಾಗಿದೆ. ಕಾರಣ, ಇತಿಹಾಸವು ಮೊದಲಿನಿಂದಲೂ ಮಾನವನು ಗಳಿಸಿದ ಸಾಧನೆಗಳ ಕಥನವಾಗಿದೆ. ಭೂಗೋಳಶಾಸ್ತ್ರವು ಭೂ ವಿವರಣೆಯಾಗಿದೆ. (2) ಭೂಗೋಳ ವಿಜ್ಞಾನವು ಭೂಮಿ ಹಾಗೂ ನಿಸರ್ಗದ ಪ್ರತಿ ಅಂಶವನ್ನು ಕುರಿತು ವಿಚಾರ ಮಾಡುತ್ತದೆ. ಆದರೆ ಇತಿಹಾಸವು ಮಾನವನಿಗೆ ಸಂಬಂಧಪಟ್ಟಿರುವ ಹಾಗೂ ಅವನ ಜೀವನದ ಮೇಲೆ ಪ್ರಭಾವ ಬೀರುವ ಭೌಗೋಳಿಕ ಅಂಶಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುತ್ತದೆ. (3) ಅಧ್ಯಯನ ವಿಧಾನಗಳಲ್ಲೂ ಈ ಎರಡು ಶಾಸ್ತ್ರಗಳಿಗೆ ವ್ಯತ್ಯಾಸವಿದೆ.

## 3.2.6 ಇತಿಹಾಸ ಮತ್ತು ಮನಶ್ಶಾಸ್ತ್ರ

ಇತಿಹಾಸವು ಇನ್ನೊಂದು ಸಾಮಾಜಿಕ ಶಾಸ್ತ್ರವಾಗಿರುವ ಮನಶ್ಶಾಸ್ತ್ರದೊಂದಿಗೂ ಸಹ ನಿಕಟ ಸಂಬಂಧವನ್ನು ಬೆಳೆಸಿಕೊಂಡು ಬಂದಿದೆ. ಇತಿಹಾಸವು ಸಮಾಜಗಳಲ್ಲಿ ಬಾಳುತ್ತಿದ್ದ ವ್ಯಕ್ತಿಗಳ ಅನುಭವಗಳ ದಾಖಲೆಯಾಗಿದೆ. ಮನಶ್ಶಾಸ್ತ್ರವು ಮಾನವನ ಮನಸ್ಸನ್ನು ಕುರಿತು ಅಧ್ಯಯನ ಮಾಡುವ ಶಾಸ್ತ್ರವಾಗಿದೆ. ಸಾಧಾರಣವಾಗಿ ಮನೋವಿಜ್ಞಾನವು ಮಾನವನ ಮಾನಸಿಕ ಜೀವನವನ್ನು ಅದರ ಎಲ್ಲಾ ಅಭಿವ್ಯಕ್ತಿಗಳಲ್ಲಿ ವೀಕ್ಷಿಸಿ ವೈಜ್ಞಾನಿಕವಾಗಿ ವಿಚಾರ ಮಾಡುವ ಶಾಸ್ತ್ರ. ಇದು ಮಾನವನ ಬುದ್ಧಿಶಕ್ತಿ, ವರ್ತನೆ, ಕಲಿಕೆ, ಪ್ರೇರಣೆ, ಜ್ಞಾಪಕಶಕ್ತಿ, ಅವನ ಮನಸ್ಸಿನ ವ್ಯವಸ್ಥೆ ಇತ್ಯಾದಿ ವಿಷಯಗಳನ್ನು ಕುರಿತು ಅಧ್ಯಯನ ಮಾಡುತ್ತದೆ. ಸಾಮಾಜಿಕ ಮನೋವಿಜ್ಞಾನವು ಸಾಮಾಜಿಕ–ಸಾಂಸ್ಕೃತಿಕ ಸನ್ನಿವೇಶಗಳಲ್ಲಿ ವ್ಯಕ್ತಿ ಹಾಗೂ ಅವನ ಮಾನಸಿಕ ಜೀವನದ ಎಲ್ಲಾ ಅಂಶಗಳನ್ನು ಪರಿಗಣಿಸಿ ಪರ್ಯಾಲೋಚಿಸುವ ಶಾಸ್ತ್ರವಾಗಿದೆ. ಸಾಮಾಜಿಕ ಸಮೂಹಗಳು ಹಾಗೂ ಪರಿಸರವು ವ್ಯಕ್ತಿಯ ಮಾನಸಿಕ ಜೀವನದ ಮೇಲೆ ಹೇಗೆ ಪ್ರಭಾವವನ್ನು ಬೀರುತ್ತವೆ ಎಂಬುದನ್ನು ವಿವರಿಸುವುದು ಇದರ ಉದ್ದೇಶವಾಗಿದೆ.

### (ಅ) ಮನಶ್ಶಾಸ್ತ್ರ

ಮನಶ್ಶಾಸ್ತ್ರವೂ ಸಹ ಇತಿಹಾಸ ಕ್ಷೇತ್ರಕ್ಕೆ ಸ್ತುತ್ಯರ್ಹವಾದ ಕೊಡುಗೆಗಳನ್ನು ಕೊಡುತ್ತದೆ. (1) ಮಾನವ ವರ್ತನೆಯ ಮೂಲ ಪ್ರಕ್ರಿಯೆ, ಮಾನಸಿಕ ಗ್ರಹಿಕೆ, ಭಾವ, ಸಲಹೆ, ಅನುಕರಣ, ಅನುಕಂಪ, ಸಹಜ ಪ್ರವೃತ್ತಿ, ಪೂರ್ವಾಗ್ರಹ, ಸಮೂಹ ಮನಸ್ಸು ಇತ್ಯಾದಿ ವಿಷಯಗಳ ಬಗ್ಗೆ ಮನಶ್ಶಾಸ್ತ್ರ ಹಾಗೂ ಸಾಮಾಜಿಕ ಮನೋವಿಜ್ಞಾನಗಳು ಒದಗಿಸಿರುವ ಜ್ಞಾನವು ಹಿಂದಿನಿಂದ ಹಿಡಿದು ಇಂದಿನವರೆಗೆ ಸಮಾಜಗಳಲ್ಲಿ ಕಂಡುಬಂದ ಸಾಮಾಜಿಕ ಒಡನಾಟ, ಸಂಬಂಧ, ಸಮೂಹ ವರ್ತನೆ ಇತ್ಯಾದಿಗಳನ್ನು ಅರ್ಥಮಾಡಿಕೊಳ್ಳಲು ಇತಿಹಾಸಕಾರನಿಗೆ ಸಹಾಯಕವಾಗುತ್ತದೆ. (2) ಮಾನಸಿಕ ಶಕ್ತಿ ಹಾಗೂ ಅಂಶಗಳು ವ್ಯಕ್ತಿಗಳ ವರ್ತನೆಯ ಮೇಲೆ ಹೇಗೆ ಪ್ರಭಾವವನ್ನು ಬೀರುತ್ತವೆ ಎಂಬ ಅರಿವು ಐತಿಹಾಸಿಕ ವಿವರಣೆಗಳಲ್ಲಿ ಉಪಯುಕ್ತವಾಗುತ್ತದೆ. (3) ರಾಜರು ಹಾಗೂ ನಾಯಕರುಗಳ ವರ್ತನೆಯನ್ನು ವಿವರಿಸಬೇಕಾದುದು, ಸ್ಪಷ್ಟಪಡಿಸಬೇಕಾದುದು ಇತಿಹಾಸಕಾರನ ಕಾರ್ಯ. ಇಲ್ಲಿ ಅವರ ಉದ್ದೇಶ ಹಾಗೂ ಪ್ರೇರಣೆಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಆಗ ಇವನಿಗೆ ವ್ಯಕ್ತಿತ್ವವನ್ನು ಕುರಿತ ಮನಶ್ಶಾಸ್ತ್ರೀಯ ಅಧ್ಯಯನಗಳು ಬಹು ಪ್ರಯೋಜನಕರವಾಗುತ್ತವೆ. (4) ಸಾಮಾನ್ಯ ಜನರ ಜೀವನದಲ್ಲಿ ಆಸಕ್ತಿಯನ್ನು ವಹಿಸುವ ಸಾಮಾಜಿಕ ಇತಿಹಾಸಕ್ಕೆ ಸಮಾಜೀಕರಣ, ವ್ಯಕ್ತಿತ್ವ ಮುಂತಾದ ವಿಷಯಗಳ ಬಗ್ಗೆ ಸಾಮಾಜಿಕ ಮನೋವಿಜ್ಞಾನವು ನೀಡುವ ವಿವರಗಳು ಬಹು ಲಾಭದಾಯಕವಾಗುತ್ತವೆ. (7) ಈ ಶಾಸ್ತ್ರಗಳ ಭಾವರೂಪ ಹಾಗೂ ವಿಧಾನಗಳೂ ಸಹ ಇತಿಹಾಸಕಾರನಿಗೆ ಅಗತ್ಯವಾಗಿ ಬೇಕು. ಹೀಗೆ ಮನಶ್ಶಾಸ್ತ್ರ ಹಾಗೂ ಸಾಮಾಜಿಕ ಮನೋವಿಜ್ಞಾನದಿಂದ ಇತಿಹಾಸಕ್ಕೂ ಬಹು ಸಹಾಯವಾಗುತ್ತದೆ.

## 3.3 ಇತರ ಸಹಾಯಕ ಅಥವಾ ಉಪಕಾರಕ ಶಾಸ್ತ್ರಗಳು

ಮೇಲೆ ವಿವರಿಸಿರುವ ಶಾಸ್ತ್ರಗಳು ಮಾತ್ರವಲ್ಲದೆ, ವಾಸ್ತವಾಂಶಗಳ ಕ್ರಮಬದ್ಧವಾದ ನಿಧಿ ಹಾಗೂ ವಾಸ್ತವಿಕ ಅನುಭವಗಳ ಸಾರಸಂಗ್ರಹವಾಗಿರುವ ಇತರ ಸಹಾಯಕ ಹಾಗೂ ಉಪಕಾರಕ ಶಾಸ್ತ್ರಗಳೂ ಇತಿಹಾಸಕ್ಕೆ ಅವಶ್ಯಕವಾಗಿವೆ. ಇವುಗಳು ಚರಿತ್ರೆಗೆ ಮಿತ್ರ ಅಥವಾ ಸಹೋದರಿ ವಿಜ್ಞಾನಗಳಾಗಿ ಸಹಾಯ ಮಾಡುತ್ತವೆ.

### 3.3.1 ಕಾಲಗಣನಾಶಾಸ್ತ್ರ

ಈ ಸಹಾಯಕ ಅಥವಾ ಉಪಕಾರಕ ಶಾಸ್ತ್ರಗಳಲ್ಲಿ ಇತಿಹಾಸದಲ್ಲಿ ಪ್ರಧಾನ ಭಾವರೂಪವಾಗಿರುವ ಮತ್ತು ಐತಿಹಾಸಿಕ ಕಥನದ ಚೌಕಟ್ಟೇ ಆಗಿರುವ ಕಾಲವೆಂಬ ಮೂಲಾಂಶವನ್ನು ಕುರಿತು ಅಧ್ಯಯನವಾಗಿರುವ ಕಾಲಗಣನಶಾಸ್ತ್ರವು ಬಹುಮುಖ್ಯವಾದುದು. ಕಾಲದ ಪ್ರಜ್ಞೆ ಇಲ್ಲದಿದ್ದರೆ ನಿಜವಾದ ಐತಿಹಾಸಿಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳುವುದು ಸಾಧ್ಯವಿಲ್ಲ. ಸ್ಥಳ, ಕಾಲ ಹಾಗೂ ಕಾರಣ ಎಂಬ ಭಾವರೂಪಗಳು ಮಾನವನಿಗೆ ಸಂಬಂಧಿಸಿದ ಪ್ರತಿ ವಿಷಯ ಅಥವಾ ಅನುಭವಕ್ಕೆ ಮೂಲಭೂತವಾದ ಅಂಶವಾಗುತ್ತವೆ. ಕಾಲಗಣನಶಾಸ್ತ್ರವು ಗತಕಾಲದಲ್ಲಿ ಸಂಭವಿಸಿದ ಪ್ರಮುಖ ಘಟನೆಗಳನ್ನು ಅವುಗಳ ಕಾಲಾನುಕ್ರಮಕ್ಕೆ ತಕ್ಕಂತೆ ಅಣಿಮಾಡುತ್ತದೆ. ಪ್ರಾಯಶಃ ಮುಂಚಿನ ಕಾಲಗಳಲ್ಲಿ ಮತಸಂಬಂಧವಾದ ಉತ್ಸವ ಹಾಗೂ ಆಚರಣೆಗಳಿಗಾಗಿ ಮತ್ತು ಕೃಷಿ ಕಾರ್ಯಗಳನ್ನು ನಡೆಸುವುದಕ್ಕಾಗಿ ಕಾಲವನ್ನು ಗೊತ್ತು ಮಾಡುವುದು ಎಂಬ ಎರಡು ಸಮಾನವಾದ ಪ್ರಯೋಜನಾತ್ಮಕ ಉದ್ದೇಶಗಳ ಸಾಧನೆಗಾಗಿ ಕಾಲಗಣನಶಾಸ್ತ್ರವನ್ನು ಸೃಷ್ಟಿಸಿ ಬೆಳೆಸಿರಬೇಕು. ಇತಿಹಾಸದ ನಭೋಮಂಡಲದಲ್ಲಿ ಮಿಂಚುವ ವಿವಿಧ ಕಾಲ, ಶಕೆ, ಯುಗ, ನಿರ್ದೇಶನ ಕ್ರಮದ ಗೋಜನ್ನು ಬಿಡಿಸಿ ವಸ್ತುನಿಷ್ಠವಾದ ರೀತಿಯಲ್ಲಿ ವಿವರಣೆಗಳನ್ನು ನೀಡಬೇಕಾದರೆ ಇತಿಹಾಸಕಾರನಿಗೆ ಕಾಲಗಣನಾಶಾಸ್ತ್ರದ ಪರಿಪೂರ್ಣ ಜ್ಞಾನಜ್ಯೋತಿಯು ಬೇಕೇ ಬೇಕು.

### 3.3.2 ಇತಿಹಾಸ ಮತ್ತು ಪ್ರಾಚೀನ ಲಿಪಿಶಾಸ್ತ್ರ

ಹೆಸರೇ ಹೇಳುವಂತೆ ಇದು ಹಳೆಯ ಕೈಬರಹಗಳ ಕ್ರಮಬದ್ಧವಾದ ಅಧ್ಯಯನವಾಗಿದೆ. ವ್ಯಕ್ತಿಗಳು ವರ್ಣಮಾಲೆಗಳ ಅಕ್ಷರಗಳನ್ನು ರೂಪಿಸಿದ ಕ್ರಮಗಳು ಕಾಲದಿಂದ ಕಾಲಕ್ಕೆ, ದೇಶದಿಂದ ದೇಶಕ್ಕೆ ಬದಲಾಗುತ್ತಾ ಬಂದಿವೆ. ಪ್ರಾಚೀನ ಲಿಪಿ ಶಾಸ್ತ್ರವು ಕಾಲ ಹಾಗೂ ದೇಶಗಳಲ್ಲಿ ಆದ ಪ್ರತಿ ಅಕ್ಷರದ ವಿಕಾಸವನ್ನು ವಿವರಿಸುತ್ತದೆ; ಹಳೆಯ ಹಸ್ತಪ್ರತಿ ಅಥವಾ ಶಾಸನಗಳನ್ನು ಸರಿಯಾಗಿ ಓದಿ ಅರ್ಥೈಸಲು ಅವುಗಳ ಕಾಲವನ್ನು ಗೊತ್ತು ಮಾಡಲು ಅವುಗಳು ಎಲ್ಲಿಂದ ಎಲ್ಲಿಗೆ ಹೇಗೆ ಉತ್ಪತ್ತಿಯಾದುವು ಎಂಬುದನ್ನು ಪತ್ತೆಹಚ್ಚಲು ಆ ಅಕ್ಷರಗಳ ಇತಿಹಾಸವನ್ನು ಸಿದ್ಧಪಡಿಸಲು ಮತ್ತು ಹೇಗೆ ಅವುಗಳು ಕಾಲಕ್ರಮದಲ್ಲಿ ಬದಲಾವಣೆಗಳಿಗೆ ಒಳಗಾದುವು ಎಂಬುದನ್ನು ವರ್ಣಿಸಲು ಸಮರ್ಥವಾಗಿದೆ. ಗತಕಾಲದಲ್ಲೂ ಸಹ ಮಾನವ ಸಂಸ್ಕೃತಿಯ ಪ್ರತಿ ಕೇಂದ್ರದಲ್ಲೂ ಶಿಕ್ಷಣ ವ್ಯವಸ್ಥೆಯು ಅಕ್ಷರಗಳ ಆಕಾರಗಳು, ಒಂದು ನಿರ್ದಿಷ್ಟ ಪ್ರಮಾಣದಲ್ಲಿರಬೇಕೆಂಬುದಾಗಿ

ನಿರ್ಧರಿಸುತ್ತಿದ್ದಿತು. ಮೊದಲಿನಿಂದ ಮಾನವ ಸಮಾಜ ಸಂಸ್ಕೃತಿಗಳಲ್ಲಿ ಕಂಡುಬರುವ ಅಸಂಖ್ಯಾತ ಬಗೆಯ ಭಾಷೆ, ಲಿಪಿ, ಅಕ್ಷರಮಾಲೆಗಳನ್ನು ಸರಿಯಾಗಿ ಅರ್ಥಮಾಡಿ–ಕೊಳ್ಳಬೇಕಾದರೆ, ಇತಿಹಾಸಕಾರನಿಗೆ ಪ್ರಾಚೀನ ಲಿಪಿಶಾಸ್ತ್ರದ ಆಧಾರ ಬೇಕೇ ಬೇಕಾಗುತ್ತದೆ. ಇಷ್ಟು ಮಾತ್ರವಲ್ಲದೆ, ಈ ಶಾಸ್ತ್ರವು ಮುದ್ರಣಕಲೆಯ ಅನ್ವೇಷಣೆಗೆ ಮೊದಲು ಇದ್ದ ಕಾಲಗಳಲ್ಲಿ ಅಪಾರ ಬೇಡಿಕೆಯನ್ನು ಪಡೆದಿದ್ದ, ಸಂಶೋಧಕನು ವಿವರಗಳಿಗೆ ಹೆಚ್ಚು ಗಮನವನ್ನು ಕೊಡಬೇಕೆಂದು ಒತ್ತಾಯ ಪಡಿಸುತ್ತದೆ; ಚುರುಕಾದ ಬುದ್ಧಿಶಕ್ತಿಯನ್ನು, ಅನುಭವಿಕ ಸಾಮರ್ಥ್ಯಗಳನ್ನು ಮತ್ತು ಸಾಮಾನ್ಯ ತತ್ತ್ವಗಳ ವ್ಯಾಪ್ತಿಗೆ ಒಳಪಡದ ಸಮಸ್ಯೆ ಹಾಗೂ ಒಗಟುಗಳನ್ನು ಬಗೆಹರಿಸುವಾಗ ಸವಾಲಾಗಿ ಮುಂದೆ ನಿಲ್ಲುವ ಕಷ್ಟಗಳನ್ನು ಎದುರಿಸುವ ಯೋಗ್ಯತೆಯನ್ನು ಬೆಳೆಸಿಕೊಳ್ಳಲು ಹೆಚ್ಚು ಅವಕಾಶೌನ್ನು ಮಾಡಿಕೊಡುತ್ತದೆ; ಮತ್ತು ಅವನ ವಿಮರ್ಶಾತ್ಮಕ ಶಕ್ತಿಯನ್ನು ಮತ್ತಷ್ಟು ಹರಿತಗೊಳಿಸುತ್ತದೆ. ಪತ್ರಾಗಾರದಲ್ಲಿ ಸರಿಯಾಗಿ ಸಂಶೋಧನೆ ನಡೆಸಿ ಗೋಪ್ಯ ಲಿಪಿಯಲ್ಲಿರುವ ಕಷ್ಟಕರವಾದ ಹಸ್ತಪ್ರತಿಗಳ ಸಂಕೇತವನ್ನು ಕಂಡುಹಿಡಿದು ಅದರ ಅರ್ಥವನ್ನು ವಿವರಿಸಲು ಶಕ್ತನಾಗಿರುವ ಅನ್ವೇಷಕನನ್ನು ತೋರ್ಕೆಯ ಸಾಮ್ಯಗಳು ಪರವಶನನ್ನಾಗಿ ಮಾಡಲಾರವು.

### 3.3.3 ಇತಿಹಾಸ ಮತ್ತು ಹಸ್ತಾಕ್ಷರ ಸಾಮುದ್ರಿಕ

ಇತಿಹಾಸಕ್ಕೆ ಉಪಕಾರಕವಾಗಿರುವ ಇನ್ನೊಂದು ಅಧ್ಯಯನವೇ ಹಸ್ತಾಕ್ಷರ ಸಾಮುದ್ರಿಕ ವಿಜ್ಞಾನ. ಅಂದರೆ, ಇದು ಒಬ್ಬ ವ್ಯಕ್ತಿಯ ಕೈಬರಹವನ್ನು ನೋಡಿ ಅವನ ಶೀಲಸ್ವಭಾವನ್ನು ಊಹಿಸಿ ತಿಳಿಯುವ ಕಲೆ. ಒಬ್ಬ ವ್ಯಕ್ತಿಯ ಶೀಲ ಸ್ವಭಾವಕ್ಕೂ ಹಾಗೂ ಅವನ ಕೈಬರಹಕ್ಕೂ ನಿಸ್ಸಂದೇಹವಾಗಿ ಒಂದು ಸಂಬಂಧವಿರುತ್ತದೆ. ಒಬ್ಬ ವ್ಯಕ್ತಿಯ ಕೈಬರಹದ ಆಧಾರದ ಮೇಲೆ ಅವನ ಶೀಲಸ್ವಭಾವದ ಬಗ್ಗೆ ಒಂದು ನಿರ್ಧಾರಕ್ಕೆ ಬರುವ ಮೊದಲು ಹಸ್ತಾಕ್ಷರ ಸಾಮುದ್ರಿಕ ವಿಜ್ಞಾನಿಯು ಬರೆಯುವುದಕ್ಕಾಗಿ ಬಳಸಲಾದ ಸಾಮಗ್ರಿ, ಬರೆದ ವ್ಯಕ್ತಿಯು ಬಾಳಿದ ಸ್ಥಳ ಹಾಗೂ ಸಮಾಜದಲ್ಲಿ ಅವನಿಗಿದ್ದ ಸ್ಥಾನ, ಬರೆಯುವಾಗ ಇದ್ದ ಅವನ ಮನಸ್ಸಿನ ಸ್ಥಿತಿ ಹಾಗೂ ಹೊರಗಿನ ಪರಿಸ್ಥಿತಿ ಇತ್ಯಾದಿ ಅಂಶಗಳನ್ನೆಲ್ಲಾ ಗಮನವಿಟ್ಟು ಎಚ್ಚರಿಕೆಯಿಂದ ಪರಿಶೀಲಿಸಬೇಕಾಗುತ್ತದೆ; ಆ ವ್ಯಕ್ತಿ ತನ್ನ ಜೀವನ ವಿನ್ಯಾಸದಲ್ಲಿ ಬರವಣಿಗೆಗೆ ಯಾವ ಸ್ಥಾನವನ್ನು ಕೊಟ್ಟಿದ್ದನು ಎಂಬುದನ್ನೂ ಸಹ ಗಮನಿಸಬೇಕಾಗುತ್ತದೆ. ಕಾರಣ, ಬರೆಯುವುದನ್ನೇ ನಿತ್ಯಗಟ್ಟಲೆ ಅಭ್ಯಾಸವಾಗಿ ಬೆಳೆಸಿಕೊಂಡಿರುವ ವ್ಯಕ್ತಿಯಂತೆ, ಬರೆಯುವುದನ್ನು ದಿನನಿತ್ಯದ ರೂಢಿಯಾಗಿಸಿಕೊಂಡಿಲ್ಲದ ವ್ಯಕ್ತಿಯು ತಾನು ಬಳಸುವ ಔಪಚಾರಿಕವಾದ ಅಕ್ಷರಗಳಲ್ಲಿ ತನ್ನ ವ್ಯಕ್ತಿತ್ವವನ್ನು ಪೂರ್ಣವಾಗಿ ಪ್ರತಿಬಿಂಬಿಸುವುದಿಲ್ಲ. ಹೀಗೆ ಹಸ್ತಾಕ್ಷರ ಸಾಮುದ್ರಿಕ ಶಾಸ್ತ್ರವು ಒಬ್ಬ ವ್ಯಕ್ತಿಯು ಬರಹಗಾರನೇ ಅಥವಾ ಸ್ಥಿರ ಮನಸ್ಸಿನವನೇ ಅಥವಾ ಮುಂದಾಲೋಚನೆಯಿಲ್ಲದ ಹುಚ್ಚು ಧೈರ್ಯದವನೇ ಅಥವಾ ಕಲೋಪಾಸಕನೇ ಎಂಬುದನ್ನು ಅರಿಯಲು ಮತ್ತು ಅವನ ವಯಸ್ಸು, ಲಿಂಗ ಹಾಗೂ ಮನಸ್ಸಿನ ಸ್ಥಿತಿಯ ಬಗ್ಗೆ ಒಂದು ಅಭಿಪ್ರಾಯಕ್ಕೆ ಬರಲು ಇತಿಹಾಸಕಾರನಿಗೆ ಸಹಾಯವನ್ನು ಮಾಡುತ್ತದೆ. ಕಾರ್ಮುಗಿಲಿನಲ್ಲಿ ಆಗೊಮ್ಮೆ–ಈಗೊಮ್ಮೆ ಮಿಂಚು ಸುಳಿವಂತೆ ಒಬ್ಬ ವ್ಯಕ್ತಿಯ ಬರಹಗಳಲ್ಲಿ ಅಲ್ಲಲ್ಲಿ ಇಣುಕಿ ನೋಡುವ ಈ ಸೂಚನೆಗಳನ್ನೆಲ್ಲಾ ವೈಜ್ಞಾನಿಕವಾದ ದತ್ತಾಂಶಗಳೆಂಬುದಾಗಿ ಭಾವಿಸುವುದು ಕಷ್ಟ. ಆದರೂ, ಇವುಗಳು ಗತಕಾಲದ ವಸ್ತುಸ್ಥಿತಿಗಳ ಮಸುಕಾದ ಕುರುಹುಗಳಾಗಿರಬಹುದು. ಒಟ್ಟಿನಲ್ಲಿ, ಹಸ್ತಾಕ್ಷರ ಸಾಮುದ್ರಿಕ ವಿಜ್ಞಾನದ ಬೆಳಕಿನಲ್ಲಿ ಇತಿಹಾಸಕಾರನು ಗತಕಾಲಗಳಲ್ಲಿ ಬಾಳಿ, ಕಣ್ಮರೆಯಾಗಿ ಹೋದ

ವ್ಯಕ್ತಿಗಳ ಕೈಬರಹಗಳನ್ನು ಅರ್ಥಮಾಡಿಕೊಂಡು ಆ ಮೂಲಕ ಅವರ ಚಿತ್ತವೃತ್ತಿ ಹಾಗೂ ಶೀಲಸ್ವಭಾವಗಳನ್ನು ಅರಿಯಲು ಶಕ್ತನಾಗುತ್ತಾನೆ.

### 3.3.4 ಇತಿಹಾಸ ಮತ್ತು ರಾಜ್ಯಪತ್ರ ಹಾಗೂ ತಂತ್ರಶಾಸ್ತ್ರ

ರಾಜ್ಯ ಪತ್ರ ಹಾಗೂ ತಂತ್ರ ಶಾಸ್ತ್ರವು ಇತಿಹಾಸಕ್ಕೆ ಆಪ್ತವಾಗಿ ಸಂಬಂಧಿಸಿರುವ ಇನ್ನೊಂದು ಸಹಾಯಕ ವಿಜ್ಞಾನವಾಗಿದೆ. ಸರ್ಕಾರಿ ಪತ್ರ ಎಂಬ ಪದವು ಮೂಲತಃ ಎರಡಾಗಿ ಮಡಿಸಲಾದ ಒಂದು ಚಿಕ್ಕ ಬರಹ ಎಂಬ ಅರ್ಥವನ್ನು ಹೊಂದಿದ್ದಿತು. ನಂತರ ಕಾಲಕ್ರಮೇಣ ಇದಕ್ಕೆ ಪ್ರಾಂತ್ಯಗಳಲ್ಲಿ ಪ್ರಮಾಣ ಮಾಡುವುದಕ್ಕಾಗಿ ವ್ಯಕ್ತಿಗಳಿಗೆ ಕೊಡಲಾಗುತ್ತಿದ್ದ ಶಿಫಾರಸು ಪತ್ರ ಅಥವಾ ಪ್ರವೇಶಾಧಿಕಾರ ಪತ್ರ ಅಥವಾ ರಹದಾರಿ ಎಂಬುದಾಗಿ ಕಾನೂನು ಅಥವಾ ಇತಿಹಾಸ ಅಥವಾ ಸಾಹಿತ್ಯದ ದೃಷ್ಟಿಯಲ್ಲಿ ಪ್ರಾಮುಖ್ಯವನ್ನು ಪಡೆದಿದ್ದ ಹಸ್ತಪ್ರತಿ ಅಥವಾ ದಾಖಲೆ ಎಂಬುದಾಗಿ ಕೊನೆಯಲ್ಲಿ ಯಾವುದಾದರೂ ಅಧಿಕೃತ ಬರಹ ಎಂಬುದಾಗಿ ಹೆಚ್ಚಿನ ಅರ್ಥಗಳನ್ನು ಸೇರಿಸಲಾಯಿತು. ಇದು ರಾಜ್ಯ ಶಾಸ್ತ್ರೀಯ ಅರ್ಥದಲ್ಲಿ ರಾಯಭಾರ ನಿರ್ವಹಣಾ ಚತುರತೆ ಹಾಗೂ ರಾಯಭಾರ ಕೌಶಲ ಎಂಬ ಪದಗಳು ತಲೆದೋರುವುದಕ್ಕೆ ಕಾರಣವಾಯಿತು. 17ನೆಯ ಶತಮಾನದ ಮೊದಲಿಗೆ ಪೋಪ್ ಗುರುವಿನ ಕಛೇರಿಯಂತಹ ಅಧಿಕೃತ ಅಧಿಕಾರಶಾಹಿಯು ಹೊರಡಿಸುತ್ತಿದ್ದ ಪತ್ರ ಅಥವ ದಾಖಲೆಗಳ ರಚನೆಯಲ್ಲಿ ವಿಷಯಗಳನ್ನು ವ್ಯವಸ್ಥಿತವಾಗಿ ಅಣಿಮಾಡುವುದರಲ್ಲಿ ಒಂದು ಕಟ್ಟುನಿಟ್ಟಾದ ಕ್ರಮವನ್ನು ಮಾತ್ರವಲ್ಲದೆ ದಾಖಲೆಯ ಪ್ರತಿ ಭಾಗದಲ್ಲೂ ಏಕಪ್ರಕಾರವಾಗಿದ್ದ ಸೂತ್ರಗಳನ್ನು ಬಳಸಲಾಗುತ್ತಿದ್ದಿತು. ಈ ಕಛೇರಿಗಳಲ್ಲಿ ಕೆಲಸ ಮಾಡುತ್ತಿದ್ದ ಗುಮಾಸ್ತರು ವಿಭಿನ್ನ ಸಂದರ್ಭಗಳಲ್ಲಿ ನಕಲು ಮಾಡಬೇಕಾಗಿದ್ದ ಸೂತ್ರ ಸಂಕೇತಗಳನ್ನು ಹೊಂದಿದ್ದರು. ಇಂದೂ ಸಹ ಪೌರಸೇವಾ ಸಂಸ್ಥೆಗಳಲ್ಲಿ ಇದೇ ಕಾರ್ಯವಿಧಾನವನ್ನು ಅನುಸರಿಸಲಾಗುತ್ತಿದೆ. ಕಾಲವು ಹಾದುಹೋದಂತೆ ವ್ಯಾಪಾರದ ಸ್ವರೂಪವು ಬದಲಾಗುತ್ತಾ ಬಂದಿತು. ಆದ್ದರಿಂದ ಈ ಸೂತ್ರಗಳನ್ನೂ ಸಹ ಕಾಲಕಾಲಕ್ಕೆ ತಕ್ಕಂತೆ ಮಾರ್ಪಡಿಸಲಾಯಿತು. ರಾಜ್ಯತಂತ್ರ ಹಾಗೂ ಪತ್ರಶಾಸ್ತ್ರಜ್ಞರು ಅಧಿಕೃತ ದಾಖಲೆಗಳ ಸ್ವರೂಪವನ್ನು ಕುರಿತು ಅಧ್ಯಯನ ಮಾಡಿ ಬಳಸಲಾದ ಸೂತ್ರಗಳ ಪಟ್ಟಿಯನ್ನು ಮಾಡುತ್ತಾರೆ. ಒಂದು ದಾಖಲೆಯ ಬಗ್ಗೆ ಪ್ರಾಚೀನ ಲಿಪಿಶಾಸ್ತ್ರ ಮತ್ತು ರಾಜ್ಯತಂತ್ರ ಹಾಗೂ ಪತ್ರವಿಜ್ಞಾನಗಳು ನಡೆಸಿದ ಅನ್ವೇಷಣೆಗಳ ಫಲ ಒಂದೇ ಆದರೆ ಆಗ ಅದನ್ನು ನಿಜವಾದುದೆಂಬುದಾಗಿ ಎಣಿಸಬಹುದು. ಒಟ್ಟಿನಲ್ಲಿ ಈ ಉಪಕಾರಕ ಶಾಸ್ತ್ರದ ಬೆಂಬಲದಲ್ಲಿ ಇತಿಹಾಸಕಾರನು ಒಂದು ದಾಖಲೆಯ ನಿಜವಾದ ಸ್ವರೂಪ, ಅರ್ಥ ಹಾಘೂ ಯಥಾರ್ಥತೆಯ ಬಗ್ಗೆ ಸ್ಪಷ್ಟವಾಗಿ ತಿಳಿದುಕೊಳ್ಳಬಲ್ಲನು.

### 3.3.5 ಇತಿಹಾಸ ಮತ್ತು ಮುದ್ರಾಶಾಸ್ತ್ರ

ಇತಿಹಾಸಕ್ಕೆ ಪ್ರಯೋಜನಕಾರಿಯಾಗಿರುವ ಇನ್ನೊಂದು ವಿಜ್ಞಾನವೇ ಮುದ್ರಾಶಾಸ್ತ್ರ. ಇದಕ್ಕೆ ಸಿಜಿಲಂ ಎಂಬುದು ಮೂಲಪದ, ಅಂದರೆ ಮುದ್ರೆ ಅಥವಾ ಹಸ್ತಾಕ್ಷರದ ಸಹಿ ಅಥವಾ ಮಾಂತ್ರಿಕ ಶಕ್ತಿಯ ಬಳಕೆಯನ್ನು ಸೂಚಿಸುವ ಚಿಹ್ನೆ ಎಂಬುದಾಗಿ ಅರ್ಥಮಾಡಲಾಗಿದ್ದಿತು. ಇತಿಹಾಸದಲ್ಲಿ ಇದನ್ನು ಮುದ್ರೆಗಳ

ಅಧ್ಯಯನ, ರಾಜ್ಯತಂತ್ರ ಹಾಗೂ ಪತ್ರಶಾಸ್ತ್ರದ ವಿಭಾಗ ಎಂಬುದಾಗಿ ಎಣಿಸಲಾಗುತ್ತದೆ. ಇದು ಕೆತ್ತಲಾದ ಹಾಗೂ ಒಂದು ಕಾಲಕ್ಕೆ ಸಂಬಂಧಿಸಿರುವ ವಿವರಗಳಿಂದ ಕೂಡಿರುವ ಮುದ್ರೆಗಳ ಶಾಸ್ತ್ರವಾಗಿದೆ. ಇದು ಅಧಿಕೃತ ದಾಖಲೆಗಳನ್ನು ನಂಬಲರ್ಹವಾದುವು ಎಂಬುದಾಗಿ ದೃಢೀಕರಿಸುವುದಕ್ಕಾಗಿ ಬಳಸಲಾದ ಮುದ್ರೆಗಳನ್ನು ವರ್ಣಿಸುತ್ತದೆ; ಅವುಗಳನ್ನು ಯಾವ ರೀತಿ ದಾಖಲೆಗಳಿಗೆ ಸೇರಿಸಲಾಗಿದೆ ಮತ್ತು ಅವುಗಳನ್ನು ಯಾವ ಪದಾರ್ಥಗಳಿಂದ ಮಾಡಲಾಗಿದೆ ಎಂಬುದನ್ನು ಪರಿಗಣಿಸುತ್ತದೆ. ಇದು ಮೇಣ ಅಥವಾ ಈಗ ಅರಗಿನ ಮೇಲೆ ಒತ್ತಲಾದ ಮಾತೃಕೆಯನ್ನು ಮತ್ತು ಅದರ ಕಾರಣ ಉಬ್ಬು ಚಿತ್ರದಂತೆ ಎದ್ದುತೋರುವ ವಸ್ತು ವಿಷಯವನ್ನು ಸೂಚಿಸುತ್ತದೆ. ಮೊದಲಿನಿಂದ ಸಾಮಾನ್ಯವಾಗಿ ಮುದ್ರೆಗಳಿಗೆ ಮೇಣವನ್ನು ಬಳಸಲಾಗುತ್ತಿದ್ದಿತು. ಉಷ್ಣ ದೇಶಗಳಲ್ಲಿ ಸೀಸವನ್ನು ಉಪಯೋಗಿಸಲಾಗುತ್ತಿದ್ದಿತು. ಭಾರತದ ಇತಿಹಾಸದ ಪುಟಗಳನ್ನು ತಿರುವಿ ಹಾಕಿ ನೋಡಿದರೆ ಸಿಂಧೂನದಿ ಕಣಿವೆ ಸಂಸ್ಕೃತಿಯಿಂದ ಹಿಡಿದು ಎಲ್ಲಾ ಕಾಲಗಳಲ್ಲಿ ಮುಖ್ಯವಾಗಿದ್ದ ಅಂಶಗಳಲ್ಲಿ ಮುದ್ರೆಗಳು ಒಂದಾಗಿರುವುದನ್ನು ನೋಡಬಹುದು. ಇವುಗಳು ಆಳುತ್ತಿದ್ದ ದೊರೆಯ ಹೆಸರು, ಸಂತತಿ, ಮತಧರ್ಮ, ರಾಜ್ಯದ ವಿಸ್ತೀರ್ಣ,ಅವನು ಹೊರಡಿಸಿದ ದಾಖಲೆಗಳ ತಾರೀಖು, ಶಕೆ ಇತ್ಯಾದಿ ವಿಷಯಗಳನ್ನು ಮಾತ್ರವಲ್ಲದೆ, ಸಾಮಾಜಿಕ ಜೀವನಕ್ಕೆ ಸಂಬಂಧಿಸಿದ ಕೆಲವು ವಿವರಗಳನ್ನು ತಿಳಿಸುತ್ತವೆ. ಕೆಲವು ಮುದ್ರೆಗಳು ಸುಂದರವಾಗಿರುತ್ತವೆ. ಅವುಗಳ ಮೇಲಿರುವ ಚಿತ್ರಗಳಲ್ಲಿ ಆ ಕಾಲಗಳಲ್ಲಿ ಪ್ರಚಲಿತವಾಗಿದ್ದ ಸಾಮಾಜಿಕ ಸಂಪ್ರದಾಯ, ಉಡಿಗೆ ತೊಡಿಗೆ, ಅಲಂಕರಣ ಇತ್ಯಾದಿಗಳ ಬಗ್ಗೆ ಕಾಣಬಹುದು. ಅವುಗಳಲ್ಲಿ ಕಾಣಬರುವ ಅಲಂಕಾರಾಕ್ಷರಗಳಿಂದ ಕೂಡಿರುವ ಸುಂದರ ಬರವಣಿಗೆ ಮತ್ತು ಬಳಸಲಾಗಿರುವ ಪದಾರ್ಥಗಳಿಂದ ಆ ಕಾಲಗಳ ಜನಜೀವನ ಹಾಗೂ ಸಂಸ್ಕೃತಿಗಳ ಮಟ್ಟವನ್ನು ತಿಳಿಯಬಹುದು. ವಂಶಲಾಂಛನ ಶಾಸ್ತ್ರದ ವಿಧಾನಗಳನ್ನು ಅನುಸರಿಸಿ ವರ್ಣಿಸಬಹುದು. ಈ ಶಾಸ್ತ್ರವೂ ಇತಿಹಾಸಕ್ಕೆ ಉಪಕಾರಕವಾಗಿರುವ ಮಿತ್ರ ವಿಜ್ಞಾನವಾಗಿದೆ.

### 3.3.6 ಇತಿಹಾಸ ಮತ್ತು ಭಾಷಾಶಾಸ್ತ್ರ

ಭಾಷೆಗಳ ಅಧ್ಯಯನವಾಗಿರುವ ಭಾಷಾಶಾಸ್ತ್ರವು ಇತಿಹಾಸಕ್ಕೆ ಅತ್ಯಂತ ಸಮೀಪವಾಗಿರುವ ಇನ್ನೊಂದು ಸಹಾಯಕ ವಿಜ್ಞಾನವಾಗಿದೆ. ಇದಕ್ಕೆ ಇತಿಹಾಸವು ಬಹು ಋಣಬದ್ಧವಾಗಿದೆ. ಐತಿಹಾಸಿಕ ವಿಧಾನವನ್ನು ಕಂಡುಹಿಡಿದು ಬೆಳೆಸಿದ ಕೀರ್ತಿ ಮೊದಲು ಭಾಷಾಶಾಸ್ತ್ರಜ್ಞರಿಗೆ ಸಲ್ಲುತ್ತದೆ. ಎಲ್ಲಾ ಬೌದ್ಧಿಕ ಕಾರ್ಯಕರ್ತರಂತೆ ಇತಿಹಾಸಕಾರನಿಗೂ ಸಹ ಅನೇಕ ಭಾಷೆಗಳ ಪರಿಚಯವಿರಬೇಕಾಗುತ್ತದೆ. ಇಲ್ಲಿ ಭಾಷಾಶಾಸ್ತ್ರವು ಇವನಿಗೆ ವಿವಿಧ ಭಾಷೆಗಳ ಪ್ರತಿ ಸೂಕ್ಷ್ಮ ಪರಿಜ್ಞಾನವನ್ನು ಒದಗಿಸಿಕೊಡುತ್ತದೆ. ಅವುಗಳಲ್ಲಿ ಕಂಡುಬರುವ ಗತಕಾಲದ ಸುಳಿವುಗಳನ್ನು ಪತ್ತೆಹಚ್ಚಲು ಸಹಾಯ ಮಾಡುತ್ತದೆ. ಸ್ಥಳಗಳ ಹೆಸರುಗಳಿಗೆ ಸಂಬಂಧಿಸಿರುವ ಇತಿಹಾಸ ರಂಗವು ಇತಿಹಾಸಕಾರ ಹಾಗೂ ಭಾಷಾಶಾಸ್ತ್ರಜ್ಞರು ಸಹಕರಿಸಿ ಕೆಲಸ ಮಾಡುವ ಅನೇಕ ಬೌದ್ಧಿಕ ಕ್ಷೇತ್ರಗಳಲ್ಲಿ ಒಂದಾಗಿದೆ.

### 3.3.7 ಇತಿಹಾಸ ಮತ್ತು ಪ್ರಾಚೀನ ಶೋಧನ ವಿಜ್ಞಾನ, ಶಾಸನಶಾಸ್ತ್ರ ಹಾಗೂ ನಾಣ್ಯ ವಿಜ್ಞಾನ

ಎಲ್ಲಕ್ಕಿಂತ ಮುಖ್ಯವಾಗಿ ಪ್ರಾಚೀನ ಶೋಧನ ವಿಜ್ಞಾನ, ಶಾಸನಶಾಸ್ತ್ರ ಹಾಗೂ ನಾಣ್ಯ ವಿಜ್ಞಾನಗಳು ಇತಿಹಾಸಕ್ಕೆ ಅತ್ಯಮೂಲ್ಯವಾದ ಸಹಾಯಕ ಸಹೋದರಿ ಶಾಸ್ತ್ರಗಳಾಗಿವೆ. ಪ್ರಾಚೀನ ಶೋಧನ ಶಾಸ್ತ್ರವು ಸ್ಮಾರಕಗಳ ಕ್ರಮಬದ್ಧ ವ್ಯವಸ್ಥೆ ಮತ್ತು ನಿರ್ದಿಷ್ಟವಾದ ಅವಶೇಷಗಳನ್ನು ಬೆಳಕಿಗೆ ತಂದು ಅವುಗಳ ಆಧಾರದ ಮೇಲೆ ವಿವಿಧ ಜೀವನಕ್ರಮಗಳ ಬಗ್ಗೆ ಅಧ್ಯಯನ ಮಾಡುವ ವಿಜ್ಞಾನ ಎಂಬುದಾಗಿ ವಿವರಿಸಲಾಗಿದೆ. ಇದು ಲಿಖಿತ ದಾಖಲೆಗಳು ತಲೆದೋರುವುದಕ್ಕೆ ಮೊದಲು ಜಗತ್ತಿನ ವಿವಿಧ ಪ್ರದೇಶಗಳಲ್ಲಿ ಕಂಡುಬಂದ ಮಾನವರ ಕಾರ್ಯಕಲಾಪ ಹಾಗೂ ಜೀವನಕ್ರಮಗಳ ಮೇಲೆ ಬೆಳಕನ್ನು ಬೀರುತ್ತದೆ. ಇದು ಪ್ರಾಗ್‌ಲಿಪಿ ಕಾಲದ ಮಾನವ, ಅವನ ಜೀವನ ಹಾಗೂ ಸಂಸ್ಕೃತಿಯ ಬಗ್ಗೆ ಆಸಕ್ತಿಯನ್ನು ವಹಿಸುವುದರಿಂದ ಇದನ್ನು "ಪೂರ್ವೇತಿಹಾಸ" ವೆಂಬುದಾಗಿ ಕರೆಯಲಾಗುತ್ತದೆ. ವಿವಿಧ ಐತಿಹಾಸಿಕ ವಸ್ತುಪ್ರದರ್ಶನಾಲಯಗಳಲ್ಲಿರುವ ಪ್ರದರ್ಶನ ಬೀರು ಹಾಗೂ ಕೋಶಿಗಳನ್ನು ತುಂಬುವುದಕ್ಕೆ ಇದು ಒದಗಿಸುವ ಪ್ರಾಚೀನ ವಸ್ತುಗಳಲ್ಲಿ ಇದರ ನಿಜವಾದ ಮಹತ್ತ್ವ ಕಂಡುಬರುವುದಿಲ್ಲ. ಇದಕ್ಕಿಂತ ಹೆಚ್ಚಾಗಿ ಭೂತಾಯಿಯ ಮೇಲು ಹೊದಿಕೆಯನ್ನು ತೆಗೆದು ಮಣ್ಣಿನಲ್ಲಿ ಮರೆಯಾಗಿರುವ ಪ್ರಾಚೀನ ಸಂಸ್ಕೃತಿಗಳ ಅವಶೇಷ, ಮಾನವ ಹಾಘೂ ಇತರ ಸಸ್ಯ ಹಾಗೂ ಪ್ರಾಣಿಗಳ ಶಾರೀರಿಕ ಉಳಿಕೆಗಳನ್ನು ಬೆಳಕಿಗೆ ತಂದು, ಆ ಮೂಲಕ ಸಂದುಹೋದ ಯುಗಗಳಲ್ಲಿ ಬೆಳಗಿದ ಸಂಸ್ಕ್ರತಿಗಳ ಚರಿತ್ರೆಯನ್ನು ಪುನರ್ರಚಿಸಲು ಇದು ಮಾಡುವ ಸಹಾಯವೇ ಇದರ ನಿಜವಾದ ಸಾಧನೆ. ಮಾನವ ಸಾಧನೆಯನ್ನು ಕುರಿತಂತೆ ಒಂದು ಸತತವಾದ ಯಥಾರ್ಥ ದಾಖಲೆಯನ್ನು ಸಿದ್ಧಪಡಿಸಬೇಕಾದರೆ ಇತಿಹಾಸಕಾರನು ಈ ವಿಭಿನ್ನ ಸಂಸ್ಕೃತಿ ಹಾಗೂ ಜೀವನ ಕ್ರಮಗಳ ಬಗ್ಗೆ ಸರಿಯಾಗಿ ಅರಿತುಕೊಳ್ಳಬೇಕಾದುದು ಅವಶ್ಯಕ. ಇಲ್ಲಿ ಪ್ರಾಚೀನ ಶೋಧನಶಾಸ್ತ್ರವು ಇವನಿಗೆ ಬೌದ್ಧಿಕ ಸಾಮಗ್ರಿ, ವಿಷಯಗಳನ್ನು ಒದಗಿಸುವ ಮುಖ್ಯ ನಿಧಿಯಾಗುತ್ತದೆ. ಈ ಶಾಸ್ತ್ರವು ಮಾನವ ಅವನ ಸಂಸ್ಕೃತಿಗಳ ಮೂಲ ಹಾಗೂ ತರುವಾಯ ಲಿಖಿತ ದಾಖಲೆಗಳು ಕಂಡುಬರುವುದಕ್ಕೆ ಮೊದಲಿದ್ದ ಕಾಲಗಳಲ್ಲಿ ಆದ ಅವುಗಳ ವಿಕಾಸ ಇತ್ಯಾದಿ ವಿಚಾರಗಳನ್ನು ಅರ್ಥಮಾಡಿಕೊಳ್ಳಲು ಇತಿಹಾಸಕಾರನಿಗೆ ಅತ್ಯಂತ ಸಹಾಯಕವಾದ ಪಠ್ಯಪುಸ್ತಕವಾಗುತ್ತದೆ. ಆದ್ದರಿಂದ ಇದನ್ನು ಮಾನವ ಶಾಸ್ತ್ರೀಯ ಇತಿಹಾಸ ಎಂಬುದಾಗಿ ಕರೆಯಬಹುದು. ಇದರಿಂದ ಇದು ಇತಿಹಾಸಕ್ಕೆ ಎಷ್ಟು ಉಪಯುಕ್ತವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಇದೇ ರೀತಿ ಇತಿಹಾಸವು ಶಾಸನಶಾಸ್ತ್ರ ಹಾಗೂ ನಾಣ್ಯಶಾಸ್ತ್ರಗಳಿಂದ ಹೆಚ್ಚು ಉಪಕೃತವಾಗಿದೆ. ಶಾಸನಶಾಸ್ತ್ರವನ್ನು ಶಿಲೆ, ತಾಮ್ರ ಹಾಗೂ ಸ್ಮಾರಕಗಳ ಮೇಲೆ ಕೆತ್ತಲಾಗಿರುವ ಪ್ರಾಚೀನ ಲಿಪಿ ಎಂಬುದಾಗಿ ಕರೆಯಲಾಗುತ್ತದೆ. ಹಿಂದೆ ಸಂಭವಿಸಿದ ಘಟನೆಗಳ ಸ್ಪಷ್ಟ ಸುಳಿವುಗಳನ್ನು ಈ ಶಾಸನಗಳಲ್ಲಿ ಕಾಣಬಹುದು. ಇತಿಹಾಸಕಾರನಿಗೆ ಇವುಗಳು ಅತ್ಯಮೂಲ್ಯ ವಿಷಯ ಸಾಮಗ್ರಿಗಳ ಭಂಡಾರವಾಗಿವೆ. ಇವುಗಳನ್ನು ಸರಿಯಾಗಿ ಬಳಸಿಕೊಳ್ಳಬೇಕಾದರೆ ಇವನು ಇವುಗಳಲ್ಲಿ ಉಪಯೋಗಿಸಲಾಗಿರುವ ಭಾಷೆ ಹಾಗೂ ಸಂಕೇತಾಕ್ಷರಗಳನ್ನು ಚೆನ್ನಾಗಿ ತಿಳಿದುಕೊಂಡಿರಬೇಕು. ಮುಖ್ಯವಾಗಿ ದಕ್ಷಿಣ ಭಾರತದ ಕರ್ನಾಟಕ ಹಾಗೂ ತಮಿಳುನಾಡುಗಳಲ್ಲಿ ಅಸಂಖ್ಯಾತ ಶಾಸನಗಳನ್ನು ಬೆಳಖಿಗೆ ತರಲಾಗಿದೆ. ಇವುಗಳು ಜೀವನದ ಪ್ರತಿಮುಖಕ್ಕೂ ಸಂಬಂಧಿಸಿರುವ ವಿಷಯಗಳ ಸಮೃದ್ಧ ಚಿನ್ನದ ಗಣಿಯೇ ಆಗಿವೆ. ಹಾಗೆಯೇ ವಿವಿಧ ವಿಷಯಗಳ ಮೇಲೆ ಬೆಳಖನ್ನು ಬೀರುವ

ನಾಣ್ಯಶಾಸ್ತ್ರವು ಇತಿಹಾಸಕ್ಕೆ ಹಿಂದಿನಿಂದ ಇಂದಿನವರೆಗೆ ಕಾಣಸಿಗುವ ಸಮಾಜಗಳ ಆರ್ಥಿಕ ವ್ಯವಸ್ಥೆಯನ್ನು ಕುರಿತು ನಂಬಲರ್ಹವಾದ ಮಾಹಿತಿಗಳನ್ನು ಒದಗಿಸಿಕೊಡುತ್ತದೆ. ಪ್ರಾಚೀನ ಶೋಧನವಿಜ್ಞಾನ, ಶಾಸನಶಾಸ್ತ್ರ ಮತ್ತು ನಾಣ್ಯವಿಜ್ಞಾನಗಳ ಸಹಾಯದಿಂದ ಚರಿತ್ರಲೇಖಕರು ಭಾರತ ಹಾಗೂ ಜಗತ್ತಿನ ಇತಿಹಾಸ ಗ್ರಂಥಗಳಿಗೆ ಅನೇಕ ಅಧ್ಯಾಯಗಳನ್ನು ಸೇರಿಸಲು ಶಕ್ತರಾಗಿದ್ದಾರೆ.

### 3.3.8 ಇತಿಹಾಸ ಮತ್ತು ಸಾಹಿತ್ಯ ಹಾಗೂ ಭೌತವಿಜ್ಞಾನ

ಇವುಗಳು ಮಾತ್ರವಲ್ಲದ ಸಾಹಿತ್ಯ ಹಾಗೂ ಇತರ ಭೌತಶಾಸ್ತ್ರಗಳೂ ಸಹ ಇತಿಹಾಸಕ್ಕೆ ಉಪಕಾರಕ ಉಪಕರಣಗಳಾಗಿವೆ. ಇತಿಹಾಸವು ಮಾನವಜೀವನದ ದಾಖಲೆಯಾದರೆ ಸಾಹಿತ್ಯವು ಅದರ ಪ್ರತಿಬಿಂಬವಾಗುತ್ತದೆ. ಈ ಎರಡು ಅಧ್ಯಯನಗಳೂ ಸಮಾಜದಲ್ಲಿರುವ ಮಾನವನಲ್ಲಿ ಆಸಕ್ತಿಯನ್ನು ತೋರುತ್ತವೆ ಹಾಗೂ ಕಲ್ಪನಾಕ್ರಮವನ್ನು ಬಳಸುತ್ತವೆ. ಇತಿಹಾಸ ಹಾಗೂ ಸಾಹಿತ್ಯ ಒಟ್ಟಾಗಿ ಸೇರಿ ಚರ್ಚಿಸಬೇಕಾದ ವಿಷಯಗಳು ಹಲವಾರಿವೆ. ಆದ್ದರಿಂದ ಸಾಹಿತ್ಯಾತ್ಮಕ ಸಾಮಗ್ರಿಗಳು ಐತಿಹಾಸಿಕ ಬರಹಗಳನ್ನು ಅಲಂಕರಿಸುವುದಕ್ಕೆ ಅಗತ್ಯವಾದ ಶೃಂಗಾರ ಸಾಧನಗಳು ಮಾತ್ರವಲ್ಲ, ಇತಿಹಾಸವು ಗತಕಾಲದ ಕಲಾ ಹಾಗೂ ಸಾಹಿತ್ಯ ಕೃತಿಗಳನ್ನು ಸಮಕಾಲೀನ ರೀತ್ಯಾ ಪ್ರದರ್ಶಿಸುವುದಕ್ಕೆ ಬೇಕಾದ ಹಿನ್ನೆಲೆ ದೃಶ್ಯ ಮಾತ್ರವಲ್ಲ.

ಭೌತವಿಜ್ಞಾನಗಳೂ ಸಹ ಇತಿಹಾಸದ ಸಂಶೋಧನಾ ಮಾರ್ಗದಲ್ಲಿ ನಂಬಲರ್ಹವಾದ ಗುರುತು ಹಲಗೆ ಹಾಗೂ ದೀಪಕಂಬಗಳಂತೆ ಸಹಾಯಕವಾಗಿವೆ ಮತ್ತು ಐತಿಹಾಸಿಕ ವಿವರಣೆಗಳನ್ನು ಸಿದ್ಧಪಡಿಸುವುದಕ್ಕೆ ಬೇಕಾದ ಆಕರ ಗ್ರಂಥಗಳಂತೆ ಉಪಕಾರ ಮಾಡುತ್ತವೆ. ಒಂದು ಸಮಾಜದಲ್ಲಿ ಪ್ರಚಲಿತವಾಗಿದ್ದ ಪಂಚಾಂಗ ಮತ್ತು ಶಿಲಾ ಹಾಗೂ ಲೋಹದ ಉಪಕರಣಗಳ ಮಹತ್ತ್ವವನ್ನು ಅರಿಯಲು ಇತಿಹಾಸಕಾರನಿಗೆ ಖಗೋಳಶಾಸ್ತ್ರ ಮತ್ತು ಖನಿಜ ಹಾಗೂ ಲೋಹ ವಿಜ್ಞಾನಗಳು ಸಹಾಯ ಮಾಡುತ್ತವೆ. ರಕ್ಷಿತ ಶವಗಳ ಬಗ್ಗೆ ರಾಸಾಯನಿಕ ಹಾಗೂ ಜೀವಶಾಸ್ತ್ರಗಳು ಮಾಡಿದ ಪರಿಶೀಲನೆಗಳು ಈಜಿಪ್ಟಿನ ಇತಿಹಾಸದ ರಚನಕಾರನಿಗೆ ಬಹು ಪ್ರಯೋಜನಕಾರಿಯಾಗಿವೆ. ರೋಮನ್ ಚಕ್ರವರ್ತಿ ಹಾಗೂ ಫ್ರೆಂಚ್ ದೊರೆಗಳಲ್ಲಿ ತಲೆದೋರಿದ ಅನಾರೋಗ್ಯದ ವಿಶಿಷ್ಟ ಚಿಹ್ನೆಗಳ ಬಗ್ಗೆ ಮಾಡಲಾದ ವೈದ್ಯಕೀಯ ಅಧ್ಯಯನಗಳಿಂದ ಆ ಆಳಿದ ಪ್ರಭುಗಳ ವ್ಯಕ್ತಿತ್ವದ ಬಗ್ಗೆ ಇನ್ನೂ ಹೆಚ್ಚು ತಿಳಿಯಲು ಇತಿಹಾಸಕಾರರಿಗೆ ಸಹಾಯಕವಾಯಿತು. ಇಂದು ಇತಿಹಾಸ ರಂಗದಲ್ಲಿ ಪರಿಮಾಣಾತ್ಮಕ ವಿಧಾನಗಳನ್ನು ಬಳಸಲು ಪ್ರಯತ್ನಗಳನ್ನು ಕೈಗೊಳ್ಳಲಾಗುತ್ತಿದೆ. ಅದಕ್ಕಾಗಿ ಗಣಿತ ಹಾಗೂ ಸಂಖ್ಯಾಶಾಸ್ತ್ರಗಳ ನೆರವು ಇದಕ್ಕೆ ಅಗತ್ಯವಾಗುತ್ತಿದೆ.

ಇತಿಹಾಸವು ತನ್ನ ಸಂಕೀರ್ಣ ಅಧ್ಯಯನ ವಿಷಯವನ್ನು ಸಮರ್ಪಕವಾಗಿ, ವೈಜ್ಞಾನಿಕವಾದ ರೀತಿಯಲ್ಲಿ ವಿವರಿಸುವುದಕ್ಕಾಗಿ ಮತ್ತು ನಂಬಲರ್ಹವಾದ ಯಥಾರ್ಥ ಜ್ಞಾನವ್ಯವಸ್ಥೆಯನ್ನು ನೀಡುವುದಕ್ಕಾಗಿ ಮುಕ್ಕಾಲು ಪಾಲು ಎಲ್ಲಾ ಶಾಸ್ತ್ರಗಳೊಂದಿಗೆ ಆತ್ಮೀಯವಾದ ಅನ್ಯೋನ್ಯಾಶ್ರಯ ಸಂಬಂಧವನ್ನು ಬೆಳೆಸಿಕೊಂಡು ಬಂದಿದೆ. ಇದರಿಂದಲೂ ಇದರ ಅಧ್ಯಯನ ಕ್ಷೇತ್ರ ಎಷ್ಟು ವ್ಯಾಪಕವಾದುದು ಎಂಬುದು ದೃಢಪಡುತ್ತದೆ.

## 3.4 ಸಾರಾಂಶ

ಈ ಘಟಕದ ಅಧ್ಯಯನದ ನಂತರ ನಾವುಗಳು ಈ ಕೆಳಗಿನ ವಿಷಯಗಳನ್ನು ಅಧ್ಯಯನ ಮಾಡಿದೆವು.

- ಇತಿಹಾಸದ ವಿಷಯವನ್ನು ಪರಿಚಯ ಮಾಡಿಕೊಂಡೆವು.
- ಇತಿಹಾಸ ಮತ್ತು ಸಮಾಜ ವಿಜ್ಞಾನಗಳಾದ ಸಮಾಜಶಾಸ್ತ್ರ, ಭೂಗೋಳಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಇತರೆ ವಿಷಯಗಳ ಇತಿಹಾಸದೊಂದಿಗೆ ಹೊಂದಿರುವ ಸಂಬಂಧವನ್ನು ತಿಳಿದೆವು.
- ಇತಿಹಾಸ ಮತ್ತು ಇತರೆ ವಿಜ್ಞಾನಗಳಾದ ಪುರಾತತ್ವಶಾಸ್ತ್ರ, ಕಾಲಗಣನಾಶಾಸ್ತ್ರ ಮುಂತಾದವುಗಳ ಸಂಬಂಧವನ್ನು ಸಹ ಅರಿತೆವು.
- ಇತಿಹಾಸ ಮತ್ತು ಇತರೇ ಸಂಬಂಧಿತ ವಿಜ್ಞಾನಗಳ ಬಗ್ಗೆಯೂ ಸಹ ತಿಳಿಯಲಾಯ್ತು.

## 3.5 ಪ್ರಮುಖ ಪದಗಳು

1. ಸಮಾಜಶಾಸ್ತ್ರ: ಸಮಾಜದ ಸಂಶೋಧನಾತ್ಮಕ ಅಧ್ಯಯನ
2. ತತ್ವಶಾಸ್ತ್ರ: ಮನುಷ್ಯನ ಜೀವನ ಮತ್ತು ಆಲೋಚನೆಯ ಬಗೆಗಿನ ವಿಚಾರಣೆ

## 3.6 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಇತಿಹಾಸ ಮತ್ತು ಇತರೆ ಸಮಾಜವಿಜ್ಞಾನಗಳ ಸಂಬಂಧವನ್ನು ಚರ್ಚಿಸಿ.
2. ಇತಿಹಾಸ ಮತ್ತು ಇತರೆ ಸಹಾಯಕ ಅಥವಾ ಉಪಕಾರಕ ಶಾಸ್ತ್ರಗಳು ಪರಸ್ಪರ ಸಂಬಂಧವನ್ನು ವಿವರಿಸಿ.

## 3.7 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 3.2 ನೋಡಿ
2. ವಿಭಾಗ 3.3 ನೋಡಿ

## 3.8 ಪರಾಮರ್ಶನ ಗ್ರಂಥಗಳು


1) Sheik Ali B : History: Its Theory and Method
2) Rajayyan K : History of Theory and Method
3) ವೆಂಕಟರತ್ನಂ ಮತ್ತು ಪದ್ಮ. ಎಂ.ಬಿ : ಸಂಶೋಧನಾ ಮಾರ್ಗ



**ಪಠ್ಯವನ್ನು ರಚಿಸಿದವರು:**
**ಪ್ರೊ.ಎನ್.ಸರಸ್ವತಿ**

# ಘಟಕ–4 ಇತಿಹಾಸ ದರ್ಶನ

## ರಚನೆ

4.0 ಉದ್ದೇಶಗಳು

4.1 ಪೀಠಿಕೆ

4.2 ಕಾರ್ಯಕಾರಣ ಸಂಬಂಧಗಳು–ಐತಿಹಾಸಿಕ ಸಂಯೋಜನೆ

4.3 ಇತಿಹಾಸದರ್ಶನ ಎಂದರೇನು?

4.4 ಇತಿಹಾಸ ದರ್ಶನದ ಶಾಖೆಗಳು

4.4.1 ವಿಮರ್ಶಾತ್ಮಕ ಇತಿಹಾಸ ದರ್ಶನ

4.4.2 ಚಿಂತನಾತ್ಮಕ ಅಥವಾ ಪರಿಕಲ್ಪಕ ಇತಿಹಾಸ ದರ್ಶನ – ಇತಿಹಾಸದ ಸಿದ್ಧಾಂತಗಳು

4.4.2.1 ಪಾರಮಾರ್ಥಿಕ ಸಿದ್ಧಾಂತಗಳು

4.4.2.2 ವೈಜ್ಞಾನಿಕ ಅಥವಾ ತರ್ಕಸಮ್ಮತವಾದ ಸಿದ್ಧಾಂತಗಳು

4.4.2.3 ಆಧುನಿಕ ಯುಗ

4.5 ಸಾರಾಂಶ

4.6 ಪ್ರಮುಖ ಪದಗಳು

4.7 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

4.8 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

4.9 ಪರಾಮರ್ಶನ ಗ್ರಂಥಗಳು

## 4.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನಾವು,

- ಇತಿಹಾಸ ದರ್ಶನ ಎಂದರೇನು ಎಂಬುದನ್ನು ತಿಳಿದುಕೊಳ್ಳುತ್ತೇವೆ.
- ಇತಿಹಾಸ ದರ್ಶನದ ಶಾಖೆಗಳಾದ ವಿಮರ್ಶಾತ್ಮಕ ಇತಿಹಾಸ ದರ್ಶನ ಹಾಗೂ ಚಿಂತನಾತ್ಮಕ ಪರಿಕಲ್ಪಕ ಇತಿಹಾಸ ದರ್ಶನದ ಬಗ್ಗೆ ತಿಳಿದುಕೊಳ್ಳುತ್ತೇವೆ.

## 4.1 ಪೀಠಿಕೆ

ಇತಿಹಾಸ ದರ್ಶನ ಎಂಬುದು ಅತ್ಯಂತ ಅರ್ಥಗರ್ಭಿತವಾದ ಭಾವರೂಪ. ಇತಿಹಾಸ ಮತ್ತು ದರ್ಶನ ಎರಡು ಪದಗಳ ಸಂಯೋಜನೆಯಾಗಿರುವ ಈ ಭಾವರೂಪವನ್ನು ಚರ್ಚಿಸುವುದರ ಮೂಲಕ ಅರ್ಥಮಾಡಿಕೊಳ್ಳಬೇಕಾದುದು ಅಗತ್ಯ. ದರ್ಶನವು ವಸ್ತುಗಳ ಸಾರ್ವತ್ರಿಕ ಹಾಗೂ ಸಾರಭೂತವಾದ ಲಕ್ಷಣಗಳ ಬಗ್ಗೆ ಅಧ್ಯಯನ ಮಾಡುವುದು. ಇದು ನೇರವಾದ ಅವಲೋಕನ ಮತ್ತು ನಿತ್ಕೃಷ್ಟವಾದ ವೈಜ್ಞಾನಿಕ ಅಧ್ಯಯನಕ್ಕೆ ಒಳಪಡದ ವಿಷಯಗಳನ್ನು ವಿವೇಚಾನಾಯುಕ್ತವಾದ ಕ್ರಮದಲ್ಲಿ ವಿವರಿಸುವ ಸುವ್ಯವಸ್ಥಿತ ಜ್ಞಾನ ಸಂಚಯವಾಗುತ್ತದೆ.

## 4.2 ಕಾರ್ಯಕಾರಣ ಸಂಬಂಧಗಳು–ಐತಿಹಾಸಿಕ ಸಂಯೋಜನೆ

"ಇತಿಹಾಸ ದರ್ಶನ" ಎಂಬುದು ಅತ್ಯಂತ ಅರ್ಥಗರ್ಭಿತವಾದ ಭಾವರೂಪ: ಇತಿಹಾಸ ಮತ್ತು ದರ್ಶನ ಎರಡು ಪದಗಳ ಸಂಯೋಜನೆಯಾಗಿರುವ ಈ ಭಾವರೂಪವನ್ನು ಚರ್ಚಿಸುವುದರ ಮೂಲಕ ಅರ್ಥಮಾಡಿಕೊಳ್ಳಬೇಕಾದುದು ಅಗತ್ಯ.

**'ದರ್ಶನ'** ಎಂದರೇನು? ದರ್ಶನ ಎಂದರೆ ಸಾಮಾನ್ಯವಾಗಿ ಜ್ಞಾನಪ್ರೇಮ ಎಂಬುದಾಗಿ ಹೇಳಲಾಗುತ್ತದೆ. ಇದರ ಅರ್ಥದ ವ್ಯಾಪ್ತಿ ಅತ್ಯಂತ ವಿಶಾಲವಾಗಿದೆ. ದರ್ಶನ ಎಂದರೆ "ಜಗತ್ತನ್ನು ಕುರಿತು ಸಮಗ್ರವಾಗಿ ವೀಕ್ಷಿಸಿ ವಿಚಾರ ಮಾಡುವುದು, ಪಾರಿಭಾಷಿಕ ಭಾಷೆಯಲ್ಲಿ ಹೇಳಬೇಕಾದರೆ, ವಸ್ತುಗಳ ಸಾರ್ವತ್ರಿಕ ಹಾಗೂ ಸಾರಭೂತವಾದ ಲಕ್ಷಣಗಳ ಬಗ್ಗೆ ಅಧ್ಯಯನ ಮಾಡುವುದು" ಎಂದಾಗುತ್ತದೆ. ವೈಜ್ಞಾನಿಕ ವಿಧಾನಗಳಿಗೆ ಅತೀತವಾಗಿರುವ ತಂತ್ರಗಳ ಮೂಲಕ ಅಜ್ಞಾತವಾದುದನ್ನು ತಿಳಿದುಕೊಳ್ಳಲು ಮಾಡುವ ಪ್ರಯತ್ನವನ್ನು ದರ್ಶನ ಎಂದು ಕರೆಯಲಾಗುತ್ತದೆ. ಇದು ಅಜ್ಞಾತ ವಿಷಯಗಳ ಊಹಾತ್ಮಕ ವಿವರಣೆ. ಒಂದು ವಿಷಯವನ್ನು ಅವಲೋಕನೆ, ಪ್ರಯೋಗ, ಪರಿಶೀಲನೆ ಹಾಗೂ ಸಾಮಾನ್ಯೀಕರಣ ಕ್ರಮಗಳ ಮೂಲಕ ವಿಶ್ಲೇಷಿಸುವುದಕ್ಕೆ ಸಾಧ್ಯವಾಗದೇ ಹೋದಾಗ ಸತ್ಯವನ್ನು ಅರಿಯುವುದಕ್ಕಾಗಿ ದರ್ಶನದ ಮೊರೆ ಹೋಗಬೇಕಾಗುತ್ತದೆ. ವಿಜ್ಞಾನದ ಕ್ಷೇತ್ರದಲ್ಲಿ ಸಂಶೋಧಕನಿಗೆ ತಾನು ಎಲ್ಲಿ ನಿಂತಿರುವೆ, ತನ್ನ ಕ್ಷೇತ್ರ ವಿಷಯ

ಹಾಗೂ ಅದರ ವ್ಯಾಪ್ತಿ ಏನು ಎಂಬುದರ ಬಗ್ಗೆ ಖಚಿತವಾಗಿ ಗೊತ್ತಿರುತ್ತದೆ. ವೈಜ್ಞಾನಿಕ ವಿಧಾನಗಳನ್ನು ಬಳಸಿ ಘನ, ದ್ರವ ಮತ್ತು ಅನಿಲಗಳ ಸ್ವರೂಪ, ಲಕ್ಷಣ, ವರ್ತನೆ ಮತ್ತು ಉಪಯೋಗಗಳನ್ನು ಅರ್ಥಮಾಡಿಕೊಳ್ಳುವುದು ಸಾಧ್ಯ. ಆತ್ಮ ಎಂದರೇನು? ಮಾನವ ಶರೀರವನ್ನು ಬಿಟ್ಟು ಹೊರಗೆ ಹೋದ ಮೇಲೆ ಅದರ ಸ್ಥಿತಿ ಏನಾಗುತ್ತದೆ? ಅಂತಿಮ ವಸ್ತುಸ್ಥಿತಿ ಎಂದರೇನು? ದೈವತ್ವದ ಸ್ವರೂಪ ಹೇಗಿರುತ್ತದೆ? ಮತ್ತು ಸತ್ಯ, ಸೌಂದರ್ಯ, ಸದ್ಗುಣ, ನೀತಿ ಮುಂತಾದ ಭಾವರೂಪಗಳಿಗೆ ಅರ್ಥವೇನು? ಮುಂತಾದ ಅನೇಕ ಅಮೂರ್ತ ಪ್ರಶ್ನೆಗಳಿಗೆ ನಿಷ್ಕೃಷ್ಟವಾಗಿರುವ ವೈಜ್ಞಾನಿಕ ವಿಧಾನಗಳ ಸಹಾಯದಿಂದ ತಕ್ಕ ಉತ್ತರಗಳನ್ನು ಕಂಡುಹಿಡಿಯುವುದು ಸಾಧ್ಯವಿಲ್ಲ. ಇವುಗಳಿಗೆ ತಕ್ಕ ಸಮಾಧಾನಗಳನ್ನು ತಿಳಿಯದೇ ಹೋದರೆ ಮಾನವನಿಗೆ ಶಾಂತಿ ಸಮಾಧಾನಗಳಿರುವುದಿಲ್ಲ. ದರ್ಶನವು ವಿವೇಚನೆ, ತರ್ಕ, ಪ್ರಮಾಣ ಮತ್ತು ಅನುಗಮನ ಕ್ರಮಗಳನ್ನು ಬಳಸಿ ಈ ತೆರನಾದ ಅಮೂರ್ತ ಸಮಸ್ಯೆ ಹಾಗೂ ಭಾವರೂಪಗಳನ್ನು ಕುರಿತು ವಿಚಾರ ಮಾಡುತ್ತದೆ. ವಿಜ್ಞಾನವು ಬಾಹ್ಯ ಜಗತ್ತನ್ನು ಹಾಗೂ ಪ್ರಕೃತಿಯನ್ನು ಕುರಿತು ಅಧ್ಯಯನ ಮಾಡುತ್ತದೆ. ದರ್ಶನವು ಮಾನವನ ಆಂತರಿಕ ಜಗತ್ತು ಹಾಗೂ ವಿಶಿಷ್ಟ ಸಮಸ್ಯೆಗಳ ಬಗ್ಗೆ ವಿಚಾರ ಮಾಡುತ್ತದೆ. ವಿಜ್ಞಾನವು ವಿನಾಶಕಾರಿ ಶಕ್ತಿಗಳ ಬಗ್ಗೆ ತಿಳಿಸುತ್ತದೆ. ದರ್ಶನವು ಹೇಗೆ ಬಾಳಬೇಕು ಹಾಗೂ ಹೇಗೆ ಆನಂದವನ್ನು ಅನುಭವಿಸಬೇಕು ಎಂಬುದನ್ನು ಹೇಳಿಕೊಡುತ್ತದೆ. ವಿಜ್ಞಾನವು ಅವಲೋಕನೆಗಳಿಂದ ಸಂಗ್ರಹಿಸಲಾದ ವಿಷಯಗಳನ್ನು ಸುಸಂಘಟಿಸಿದರೆ ದರ್ಶನವು ಅವುಗಳನ್ನೆಲ್ಲಾ ಒಂದು ತತ್ತ್ವಕ್ಕೆ ಅಧೀನಪಡಿಸುತ್ತದೆ. ವಿಜ್ಞಾನವು ವಿಶ್ಲೇಷಣೆಯನ್ನು ಎತ್ತಿಹಿಡಿದರೆ ದರ್ಶನವು ಸಂಯೋಜನೆಗೆ ಪ್ರಾಧಾನ್ಯವನ್ನು ಕೊಡುತ್ತದೆ. ಇದು ವ್ಯಾಪಕವಾದ ನಿರ್ಣಯಗಳಿಗೆ ಬರುವುದಕ್ಕಾಗಿ ವಾಸ್ತವಾಂಶಗಳನ್ನು ಸಂಯೋಜಿಸುತ್ತದೆ. ವಿಷಯಗಳನ್ನು ಸಂಯೋಜಿಸಲು ಅನೇಕ ವರ್ಷಗಳ ವಿಶ್ಲೇಷಣಾ ಕಾರ್ಯ ಅಗತ್ಯವಾಗುತ್ತದೆ. ಕಾರ್ಯಕಾರಣ ಸಂಬಂಧದ ನಿಯಮಗಳ ಮೂಲಕ ಅಸ್ತಿತ್ವದ ವಿಷಯಗಳನ್ನು ವಿವರಿಸುವುದಕ್ಕೆ ಅವಶ್ಯಕವಾಗಿರುವ ಸಂಯೋಜನಾ ಕ್ರಮವು ದರ್ಶನದ ತಿರುಳೇ ಆಗಿರುತ್ತದೆ. ವಿಜ್ಞಾನವು ಅರಿವನ್ನು ನೀಡಿದರೆ ದರ್ಶನವು ಜ್ಞಾನ ಹಾಗೂ ವಿವೇಕವನ್ನು ಕೊಡುತ್ತದೆ. ಆದ್ದರಿಂದ ಇದು ವಿಜ್ಞಾನಗಳ ವಿಜ್ಞಾನವಾಗಿದೆ ಎಂಬುದಾಗಿ ಹೇಳಬಹುದು. ಇದು ಅಪರಿಚಿತ ಜ್ಞಾನಕ್ಷೇತ್ರಗಳ ಮೇಲೆ ದಾಳಿ ಮಾಡಿ ಅಲ್ಲೆಲ್ಲಾ ಸಂಚರಿಸಿ ಒಳಹೊಕ್ಕು ನೋಡಿ ಪರಿಶೋಧಿಸಿ, ವಿಷಯಗಳನ್ನು ಕಂಡುಹಿಡಿದು ವಿವರಿಸುತ್ತದೆ. ಆದ್ದರಿಂದ ಇದನ್ನು ಎಲ್ಲಾ ಜ್ಞಾನದ ಜನನಿ ಎಂಬುದಾಗಿ ಕರೆಯಲಾಗುತ್ತದೆ. ಅತ್ಯಂತ ಸೂಕ್ಷ್ಮವಾದ ವಿವೇಚನೆಯನ್ನು ಎತ್ತಿಹಿಡಿಯುತ್ತದೆ; ಇತಿಹಾಸಕ್ಕೆ ಸಂಬಂಧಿಸಿರುವ ಪ್ರಾಕೃತಿಕ ನಿಯಮ, ಕಾರ್ಯ ಕಾರಣ ಸಂಬಂಧ, ವರ್ತನಾ ಮಾದರಿ, ಭಾವನೆ, ಬೆಳವಣಿಗೆಯ ನಿಯತತೆ ಮತ್ತು ಗುರಿ ಹಾಗೂ ಆದರ್ಶ ಮುಂತಾದ ಅನೇಕ ಭಾವರೂಪಗಳ ಬಗ್ಗೆ ವಿಚಾರ ಮಾಡುತ್ತದೆ. ದರ್ಶನದ ಪ್ರಗತಿ ನಿಯಮಗಳನ್ನು ಅರಿತುಕೊಳ್ಳಬೇಕಾದರೆ ಅದನ್ನು ಇತಿಹಾಸದ ಬೆಳಕಿನಲ್ಲಿ ನೋಡಬೇಕು. ಆದ್ದರಿಂದಲೇ ದರ್ಶನವು ಚರಿತ್ರೆಯಲ್ಲಿ ತನ್ನ ಪ್ರತಿಫಲವನ್ನು ಕಾಣುತ್ತದೆ. ಇದು ಪಠ್ಯ ವಿಷಯವಾದರೆ ಇದಕ್ಕೆ ಇತಿಹಾಸವು ವ್ಯಾಖ್ಯಾನವನ್ನು ಒದಗಿಸುತ್ತದೆ ಎಂಬುದಾಗಿ ಕ್ರಗ್ ಹೇಳಿದ್ದಾರೆ. ಹಾಗೆಯೇ ವ್ಯಕ್ತಿಗಳ ಭಾವನೆ ಹಾಗೂ ಕ್ರಿಯೆಗಳ ದಾಖಲೆಯಾಗಿರುವ ಇತಿಹಾಸವು ದರ್ಶನವನ್ನು ಕಡೆಗಣಿಸಲಾರದು. ಒಂದು ಪಕ್ಷ ಅಲಕ್ಷಿಸಿದರೆ ಇದಕ್ಕೆ ಸುಸಂಬದ್ಧತೆ ಹಾಗೂ ನಿರ್ದೇಶನವಿಲ್ಲವಾಗುತ್ತದೆ. ದರ್ಶನವು ಇದನ್ನೂ ಸಹ ತನ್ನ ನಿಯಮಗಳಿಗೆ ಒಳಪಡಿಸಲು ಯತ್ನಿಸುತ್ತದೆ. ಆದ್ದರಿಂದಲೇ ಇತಿಹಾಸ ದರ್ಶನವು ತಲೆ ಎತ್ತಿಕೊಂಡಿತು.

## 4.3 ಇತಿಹಾಸದರ್ಶನ ಎಂದರೇನು?

ಇತಿಹಾಸ ದರ್ಶನ ಎಂಬ ಭಾವರೂಪವನ್ನು ಸೃಷ್ಟಿಸಿದ ಕೀರ್ತಿಯು ಯಾರಿಗೆ ಸಲ್ಲಬೇಕು ಎಂಬುದು ವಿವಾದಾಸ್ಪದವಾದ ವಿಷಯವಾಗಿದೆ. ಕೆಲವರು ಈ ಭಾವರೂಪವನ್ನು ಸೃಷ್ಟಿಸಿದವನು ವಾಲ್ಟೇರ್, ಆದ್ದರಿಂದ ಅವನನ್ನು ಇತಿಹಾಸ ದರ್ಶನದ ಜನಕನೆಂಬುದಾಗಿ ಕರೆಯಬಹುದು ಮತ್ತು ಅವನ ಪ್ರಕಾರ ಇತಿಹಾಸ ದರ್ಶನವೆಂದರೆ ವಿಮರ್ಶಾತ್ಮಕ ಅಥವಾ ವೈಜ್ಞನಿಕ ಇತಿಹಾಸ ಎಂದರ್ಥ, ಎಂದರೆ ಇಟಲಿಯ ದಾರ್ಶನಿಕನಾಗಿದ್ದ ವಿಕೋ (1668–1744) ಈ ಭಾವರೂಪವನ್ನು ಸೃಷ್ಟಿಸಿದವನು ಎಂದು ಕೆಲವರು ಹೇಳುತ್ತಾರೆ. ಮತ್ತೆ ಕೆಲವರು ಸೇಯ್ಂಟ್ ಆಗಸ್ಟೀನನ ಬರಹಗಳಲ್ಲಿ ಅಥವಾ ಬೈಬಲ್ಲಿನ ಹಳೆಯ ಒಡಂಬಡಿಕೆಯ ಕೆಲವು ಭಾಗಗಳಲ್ಲಿ ಇದರ ಮೂಲವನ್ನು ಕಾಣಲು ಯತ್ನಿಸಿದ್ದಾರೆ. ಹರ್ಡರನ "ಐಡಿಯಾಸ್ ಫಾರ್ ಎ ಫಿಲಾಸಾಫಿಕಲ್ ಹಿಸ್ಟೊರಿ ಆವ್ ಮ್ಯಾನ್‌ಕೈಂಡ್" ಎಂಬ ಕೃತಿಯ ಮೊದಲ ಭಾಗ ಪ್ರಕಟವಾದ 1784 ನೆಯ ವರ್ಷದಿಂದ ಆರಂಭವಾಗಿ ಹೆಗಲನ ಮರಣಾನಂತರ ಅವನ "ಲೆಕ್ಚರ್ಸ್ ಆನ್ ದಿ ಫಿಲಾಸೊಫಿ ಆವ್ ಹಿಸ್ಟೊರಿ" ಎಂಬ ಗ್ರಂಥವು ತಲೆದೋರಿ 1837ನೆಯ ವರ್ಷದಲ್ಲಿ ಮುಕ್ತಾಯಗೊಂಡ ಕಾಲದಲ್ಲಿ ಇತಿಹಾಸ ದರ್ಶನವನ್ನು ಮೊಟ್ಟಮೊದಲು ಒಂದು ಪ್ರತ್ಯೇಕ ವಿಷಯವಾಗಿ ಗುರುತಿಸಿ ಗೌರವಿಸಲಾಯಿತು ಎಂಬುದಾಗಿ ಹೇಳಬಹುದು. ಈ ಕಾಲದಲ್ಲಿ ಇದು ಕೇವಲ ಆಧ್ಯಾತ್ಮಿಕ ಊಹೆಯ ವಿಚಾರ ಮಾತ್ರವಾಗಿದ್ದಿತು. ಇತಿಹಾಸದ ಗತಿಯನ್ನು ಸಮಗ್ರವಾಗಿ ಅರಿಯುವುದಲ್ಲದೆ ಅನೇಕ ಅಸಂಗತಿ ಹಾಗೂ ಅಸಂಬದ್ಧತೆಗಳನ್ನು ಮುಂದಿಟ್ಟಿದ್ದರೂ ಇದು ಸಮಗ್ರ ಯೋಜನೆಯೊಂದನ್ನು ಪ್ರತಿಬಿಂಬಿಸುವ ಏಕತೆಯಾಗಿದೆ ಎಂಬುದಾಗಿ ಎಣಿಸಬಹುದು; ಈ ಯೋಜನೆಯನ್ನು ಸರಿಯಾಗಿ ಗ್ರಹಿಸಿದರೆ ಘಟನೆಗಳ ಸವಿಸ್ತರ ಗತಿಯನ್ನು ತಿಳಿಯಬಹುದು; ಒಂದು ವಿಶೇಷಾರ್ಥದಲ್ಲಿ ಐತಿಹಾಸಿಕ ಪ್ರಕ್ರಿಯೆಗಳನ್ನು ತರ್ಕ ಹಾಗೂ ವಿವೇಚನಾ ಕ್ರಮಕ್ಕೆ ಅನುಗುಣವಾದ ಕ್ರಮದಲ್ಲಿ ವೀಕ್ಷಿಸಿ ವಿಚಾರ ಮಾಡುವುದಕ್ಕೆ ಶಕ್ತರಾಗಬಹುದು ಎಂಬುದಾಗಿ ಭಾವಿಸಲಾಗಿದ್ದಿತು. ಈ ವಿಷಯದ ನಿರೂಪಕರು ಇತಿಹಾಸದ ಸಮಗ್ರ ಸಂಚಾಲನೆಯನ್ನು ಊಹಾತ್ಮಕವಾಗಿ ಪ್ರತಿಪಾದಿಸುವುದರ ಮೂಲಕ ಚರಿತ್ರೆಯ ರಹಸ್ಯವನ್ನು ಪೂರ್ಣವಾಗಿ ಬಹಿರಂಗಪಡಿಸುವ ಭರವಸೆಯನ್ನು ಹೊಂದಿದ್ದರು. ಹೆಗಲನ ಮೃತ್ಯುವಿನೊಂದಿಗೆ ಅಸಾಂಪ್ರದಾಯಿಕ ಇತಿಹಾಸ ದರ್ಶನ ಬಗೆಯು ಅದೃಶ್ಯಯವಾಗಿ ಹೋಗಲಿಲ್ಲ. ಇದನ್ನು ಮಾರ್ಕ್ಸ್ ನಂತರ ಸ್ಪೆಂಗ್ಲರ್, ಟಾಯ್ನಬಿ ಮುಂತಾದ ಪಂಡಿತರು ಮುಂದುವರಿಸಿದರು. ಇಲ್ಲಿ ಇತಿಹಾಸಕಾರನು ಮುಂಚಿನ ಕೃತಿಗಳಲ್ಲಿ ಕಂಡುಬರುವ ಕಥೆಗಳನ್ನು ಪುನರಾವೃತ್ತಿ ಮಾಡುವುದಕ್ಕೆ ಬದಲಾಗಿ ತಾನೇ ಸ್ವತಃ ವಿಷಯಗಳನ್ನು ಕುರಿತು ಕ್ರಮಬದ್ಧವಾದ ರೀತಿಯಲ್ಲಿ ಆಲೋಚಿಸಿ ಒಂದು ನಿರ್ಣಯಕ್ಕೆ ಬರುತ್ತಾನೆ. ಈ ಸರಳವಾದ ಅರ್ಥದಿಂದ ಪ್ರಾರಂಭವಾದ ಈ ಭಾವರೂಪಕ್ಕೆ ಮುಂದೆ ಅನೇಕ ಸಂಕೀರ್ಣವಾದ ಅರ್ಥಗಳನ್ನು ಕೊಡಲಾಯಿತು. ಇದನ್ನು ಘಟನೆಗಳ ಹಿಂದಿರುವ ಸಾಮಾನ್ಯ ನಿಯಮಗಳನ್ನು ಪ್ರತಿಪಾದಿಸುವ ಕ್ರಮ, ಸಂಗತಿಗಳನ್ನು ತರ್ಕಬದ್ಧವಾಗಿ ಅರಿಯುವ ಯತ್ನ, ಮಾನವನ ಗತಕಾಲದ ಸಂಭವಗಳನ್ನು ಸಮಗ್ರವಾಗಿ ವೀಕ್ಷಿಸಿ ಸಕಾರಣವಾಗಿ ತಿಳಿದುಕೊಳ್ಳುವ ಅಧ್ಯಯನ ಎಂಬುದಾಗಿ ವಿವರಿಸಲಾಗಿದೆ. ಹೆಗಲಿನ ಪ್ರಕಾರ, ಆದರ್ಶಗಳು ಹಾಗೂ ಭಾವನೆಗಳು ಐತಿಹಾಸಿಕ ಘಟನೆಗಳಿಗೆ ಹಿಂದಿರುವ ಪ್ರೇರಕ ಶಕ್ತಿ. ಕಾಂಪ್ಟ್‌ನು ಘಟನೆಗಳ ಗತಿಗೆ ಅನ್ವಯಿಸುವ ಸಾಮಾನ್ಯ ನಿಯಮಗಳನ್ನು ಕಂಡುಹಿಡಿಯುವುದಕ್ಕಾಗಿ ಈ ಭಾವರೂಪವನ್ನು ಬಳಸಿದನು ಹಾಗೂ ಘಟನೆಗಳನ್ನು ವಿಸ್ತಾರವಾಗಿ

ವರ್ಣಿಸುವುದು ಮತ್ತು ಅವುಗಳ ಹಿಂದಿರುವ ಸಾಮಾನ್ಯ ನಿಯಮಗಳನ್ನು ಕಂಡುಹಿಡಿಯುವುದು ಇದರ ಕರ್ತವ್ಯ ಎಂಬುದನ್ನು ಸ್ಪಷ್ಟಪಡಿಸಿದನು. ಮಾನವ ಘಟನೆಗಳ ಕಾರಣಗಳನ್ನು ಪರಿಶೋಧಿಸುವುದರ ಮೂಲಕ ಈ ಘಟನೆಗಳನ್ನು ಕುರಿತು ವಿವರಣೆಗಳನ್ನು ನೀಡುವ ಅಧ್ಯಯನ ಎಂಬರ್ಥದಲ್ಲಿ ಈ ಭಾವರೂಪವನ್ನು ಬಳಸಲಾಗಿದೆ. ಕೆಲವರು ಪುರಾತನ ಚಿಂತಕರ ಕೃತಿಗಳಲ್ಲಿ ಇರುವ ಊಹಾತ್ಮಕ ಅಂಶಗಳನ್ನು ಗೋಜಿಲ್ಲದಂತೆ ಬಿಡಿಸುವುದು, ಹಳೆಯ ಪುರಾಣಗಳನ್ನು ಪರಿವರ್ತಿಸುವುದು ಇದರ ಕರ್ತವ್ಯ ಎಂಬುದಾಗಿ ಅಭಿಪ್ರಾಯಪಡುತ್ತಾರೆ. ಇನ್ನೂ ಕೆಲವರ ಪ್ರಕಾರ ಸಂಸ್ಕೃತಿ ಹಾಗೂ ನಾಗರಿಕತೆಯ ಪ್ರಕ್ರಿಯೆಯಲ್ಲಿ ಸಾಧನೆಗಳನ್ನು ಗಳಿಸಲು ಯತ್ನಿಸುತ್ತಿರುವ ಮಾನವನನ್ನು ಗುರುತಿಸಲು ಮಾನವ ವಿಚಾರಶಕ್ತಿ ಮಾಡುವ ಪ್ರಯತ್ನಕ್ಕೆ ಇದು ಸಂಕೇತವಾಗಿರುತ್ತದೆ: ಐತಿಹಾಸಿಕ ಪರಿವರ್ತನೆ ಹಾಗೂ ಹಿಂಬೀಳಿಕೆಯ ಪ್ರಕ್ರಿಯೆಗಳನ್ನು ತ್ವರೆಗೊಳಿಸಿದ ಅಂಶ ಹಾಗೂ ಶಕ್ತಿಗಳ ಪರಿಶೋಧನೆಯಾಗಿದೆ; ಕಾರ್ಯಕಾರಣ ಸಂಬಂಧ, ಪ್ರಗತಿಗೆ ಸಂಬಂಧಿಸಿರುವ ಮೂಲಭೂತ ಭಾವನೆಗಳ ಹಾಗೂ ಇತಿಹಾಸದ ಮೂಲಭೂತ ಪ್ರವೃತ್ತಿಗಳ ವಿಶ್ಲೇಷಣೆಯಾಗಿದೆ; ಒಂದು ನಿರ್ದಿಷ್ಟ ಇತಿಹಾಸಕಾಲದ ವಿಶೇಷ ಲಕ್ಷಣಗಳಾಗಿರುವ ಅಥವಾ ಸಾಮಾನ್ಯವಾಗಿ ಮಾನವ ಇತಿಹಾಸದ ಮುಖ್ಯ ಮುಖವಾಗಿರುವ ಸಾರ್ವತ್ರಿಕ ಆಲೋಚನಾ ವಿಷಯಗಳು ಇದರ ವಾಸ್ತವಿಕ ಅಧ್ಯಯನ ವಸ್ತುಗಳಾಗಿವೆ. ಇದು ಕೇವಲ ಗತಕಾಲದ ವಿಚಾರದಲ್ಲಿ ಮಾತ್ರ ಅಥವಾ ಇತಿಹಾಸಕಾರನ ಆಲೋಚನೆಯ ವಿಚಾರದಲ್ಲಿ ಮಾತ್ರ ಆಸಕ್ತವಾಗಿಲ್ಲ; ಪರಸ್ಪರ ಸಂಬಂಧಪಟ್ಟಿರುವ ಈ ಎರಡು ವಿಚಾರಗಳಲ್ಲೂ ಆಸಕ್ತಿಯನ್ನು ವಹಿಸುತ್ತದೆ. ಮೊದಲನೆಯದು ಗತಕಾಲದ ಘಟನೆಗಳ ಮೊತ್ತವಾದರೆ, ಎರಡನೆಯದು ಇತಿಹಾಸಕಾರನು ನಡೆಸಿದ ಶೋಧನೆಯಾಗುತ್ತದೆ ಎಂಬುದಾಗಿ ಕಾಲಿಂಗ್‌ವುಡ್ ಅಭಿಪ್ರಾಯಪಡುತ್ತಾರೆ. ಫಿಷರ್, ಫ್ರೌಡೆ ಮುಂತಾದವರು ಇತಿಹಾಸದಲ್ಲಿ ಕಥಾವಸ್ತು, ಸಾಮರಸ್ಯ, ಗತಿ ಮತ್ತು ಪೂರ್ವಭಾವಿಯಾಗಿ ನಿರ್ಧರಿಸಲಾದ ಮಾದರಿಗಳಿವೆ ಎಂಬುದನ್ನು ಒಪ್ಪಲು ನಿರಾಕರಿಸಿದರು. ಕಾರ್ಲ್‌ಮಾರ್ಕ್ಸ್ ಆರ್ಥಿಕ ನೀತಿವಾದದ ಪರಿಭಾಷೆಯಲ್ಲಿ ಇದನ್ನು ಕುರಿತು ಪರ್ಯಾಲೋಚಿಸಿದನು. ಆರ್ನಾಲ್ಡ್ ಟಾಯ್ನಬಿಯವರು ಸಮಾಜಗಳಿಗೆ ಪ್ರಾಮುಖ್ಯವನ್ನು ಕೊಟ್ಟರು. ಕ್ರೋಚೆಯವರ ದೃಷ್ಟಿಯಲ್ಲಿ ಇದು ಬೌದ್ಧಿಕ ಸಹಜ ಜ್ಞಾನವಾಗಿರುತ್ತದೆ. ಹೀಗೆ "ಇತಿಹಾಸ ದರ್ಶನ" ಎಂಬ ಸರಳವಾದ ಅನೇಕ ವಿವರಣೆಗಳನ್ನು ನೀಡಲಾಗಿದೆ.

ಮೊದಲು ಇತಿಹಾಸವನ್ನು ದರ್ಶನ ಅಥವಾ ಸಾಹಿತ್ಯದ ಒಂದು ಶಾಖೆ ಎಂಬುದಾಗಿ ಭಾವಿಸಲಾಗಿದ್ದಿತು. ವಿಕೋ ಇದಕ್ಕೆ ಮೊಟ್ಟಮೊದಲು ದಾರ್ಶನಿಕ ಗಹನತೆ ಬರುವಂತೆ ಮಾಡಿದವನು. ಅವನ ಪ್ರಕಾರ, ಮಾನವನು ತಾನು ಸೃಷ್ಟಿಸಿರುವುದನ್ನು ಮಾತ್ರ ಚೆನ್ನಾಗಿ ಅರ್ಥಮಾಡಿಕೊಳ್ಳ ಬಲ್ಲವನಾದ್ದರಿಂದ ಪ್ರಕೃತಿಯನ್ನು ಕುರಿತ ಅಧ್ಯಯನಕ್ಕಿಂತ ಪೌರಸಮಾಜದ ಅಧ್ಯಯನವು ಹೆಚ್ಚು ಭರವಸೆಯನ್ನು ಮೂಡಿಸುತ್ತದೆ. ಬುದ್ಧಿಜೀವಿಯಾದ ಮಾನವನು ನಡೆಸುವ ಅಧ್ಯಯನದ ಸಮರ್ಪಕವಾದ ವಸ್ತುವಿಷಯ ಮಾನವನೇ. ರೂಸೋ ಹಾಗೂ ಕಾರ್ಲೇರಂತಹ ಭಾವನಾಸ್ವಾತಂತ್ರ್ಯ ಪಂಥದವರು, ಹೆಗಲನಂಥ ಆದರ್ಶವಾದಿಗಳು, ಕಾಂಪ್ಟ್ ಹಾಗೂ ಮಿಲ್‌ರಂತಹ ವಾಸ್ತವವಾದಿಗಳು ಮತ್ತು ಮಾರ್ಕ್ಸ್ ಹಾಗೂ ಬಕೆಲ್‌ರಂಥ ವಸ್ತುನಿಷ್ಠವಾದಿಗಳು ಗತಕಾಲದಲ್ಲಿ ಘಟನೆಗಳನ್ನು ಪ್ರಚೋದಿಸಿದ ಮೂಲಭೂತ ಶಕ್ತಿಯನ್ನು ವಿವರಿಸುವುದಕ್ಕೆ ಬೇಕಾದ ಸಾಮಾನ್ಯೀಕರಣಗಳನ್ನು ನಿರೂಪಿಸುವುದಕ್ಕೆ ಇತಿಹಾಸವು ಬಹುಯುಕ್ತವಾಗಿದೆ ಎಂಬುದಾಗಿ

ಪ್ರತಿಪಾದಿಸಿದರು. ಪ್ರಕೃತಿ ಹಾಗೂ ಇತಿಹಾಸವನ್ನು ಪ್ರತ್ಯೇಕಿಸಿದ ತನ್ನ ಆದರ್ಶವಾದವೆಂಬ ಭಾವರೂಪದ ಮೂಲಕ ಇತಿಹಾಸ ದರ್ಶನದಲ್ಲಿ ಗಾಢತೆ ಹಾಗೂ ಘನತೆ ಉಂಟಾಗುವಂತೆ ಮಾಡಿದವನು ಹೆಗಲ್. ಇತಿಹಾಸವನ್ನು ವಾಸ್ತವಾಂಶಗಳನ್ನು ಅರಸುವ ವಿಜ್ಞಾನ ಎಂಬುದಾಗಿ ಕರೆಯುವುದಕ್ಕೆ ಬದಲಾಗಿ ಇದನ್ನು ಮೌಲ್ಯನಿರ್ಧಾರ ಮಾಡುವ ಶಾಸ್ತ್ರ ಎಂಬುದಾಗಿ ಎಣಿಸಲಾಯಿತು ಮತ್ತು ಕೆಲವು ಪಾರಿಭಾಷಿಕ ಪದಗಳನ್ನು ಸೃಷ್ಟಿಸಲಾಯಿತು. ಹತ್ತೊಂಭತ್ತನೆಯ ಶತಮಾನದಲ್ಲಿ ವಿಲ್ ಹೆಲಂಡಿಲ್ತೆಯು ಕ್ಯಾಂಟನು ದರ್ಶನಶಾಸ್ತ್ರವನ್ನು ಉತ್ತಮಗೊಳಿಸಿದ ರೀತಿಯಲ್ಲಿ ಇತಿಹಾಸವನ್ನು ಉತ್ಕರ್ಷಗೊಳಿಸಿದ ಅತ್ಯಂತ ಮುಖ್ಯ ವಿಮರ್ಶಾತ್ಮಕ ಇತಿಹಾಸ ದಾರ್ಶನಿಕನಾಗಿದ್ದನು. ಕ್ರೋಚೆಯು ಐತಿಹಾಸಿಕ ಪುನರ್ರಚನೆಯು ಇತಿಹಾಸಕಾರನ ಮನಸ್ಸಿನಲ್ಲಿ ಉಂಟಾಗುವ ಗತಕಾಲದ ಅನುಭವದ ಪುನಃ ಸೃಷ್ಟಿಯೇ ಆಗಿರುತ್ತದೆ ಎಂಬುದಾಗಿ ವಿವರಿಸಿದನು. ಇತಿಹಾಸಕಾರನಾಗಿರುವುದ–ಕ್ಕಿಂತ ಹೆಚ್ಚಾಗಿ ದಾರ್ಶನಿಕನೇ ಆಗಿದ್ದ ಆರ್.ಜಿ.ಕಾಲಿಂಗ್‌ವುಡ್ ಕ್ರೋಚೆಯ ಅಭಿಪ್ರಾಯಗಳನ್ನು ಪರಿಷ್ಕರಿಸಿ ಅತ್ಯಂತ ಸೊಗಸಾದ ಶೈಲಿಯಲ್ಲಿ ಪ್ರತಿಪಾದಿಸಿದನು. ಅವನ ಪ್ರಕಾರ, "ಗತಕಾಲವು ಇತಿಹಾಸಕಾರನ ಮನಸ್ಸಿನಲ್ಲಿರುತ್ತದೆ". ಇದು ಅಪರಿಚಿತವಾಗಿದ್ದ ತರ್ಕ ಆದರೂ ಇದು ಇತಿಹಾಸದಲ್ಲಿ ನೂತನ ದೃಷ್ಟಿಕೋನವಾಯಿತು.

## 4.4 ಇತಿಹಾಸದರ್ಶನದ ಶಾಖೆಗಳು

ಇತಿಹಾಸದರ್ಶನವು ಮೂಲಭೂತವಾಗಿ ದಾರ್ಶನಿಕ ಪರಿಶೋಧನೆಯ ಎರಡು ವಿಭಿನ್ನವಾಗಿವೆ. ಆದರೆ ಪರಸ್ಪರ ಸಂಬಂಧಪಟ್ಟಿರುವ ಶಾಖೆಗಳಲ್ಲಿ ಆಸಕ್ತಿಯನ್ನು ತೋರುತ್ತದೆ. ಒಂದು ಶಾಖೆಯು ಐತಿಹಾಸಿಕ ಆಲೋಚನೆಯ ಪ್ರಕ್ರಿಯೆಗಳಲ್ಲಿ ಆಸಕ್ತಿಯನ್ನು ವಹಿಸಿದರೆ ಇನ್ನೊಂದು ಶಾಖೆಯು ಐತಿಹಾಸಿಕ ಘಟನೆಗಳ ವಾಸ್ತವಿಕ ಗತಿಯಲ್ಲಿ ಆಸಕ್ತಿಯನ್ನು ತೋರುತ್ತದೆ. ಪ್ರಾಧ್ಯಾಪಕ ಬ್ರಾಡ್‌ರವರ ಪರಿಭಾಷೆಯಲ್ಲಿ ಈ ಶಾಖೆಗಳನ್ನು ಕ್ರಮವಾಗಿ ವಿಮರ್ಶಾತ್ಮಕ ಮತ್ತು ಚಿಂತನಾತ್ಮಕ ಅಥವಾ ಪರಿಕಲ್ಪಕ ಅಧ್ಯಯನಗಳೆಂಬುದಾಗಿ ಕರೆಯಬಹುದು. ಐತಿಹಾಸಿಕ ವಿವರಣೆಗಳ ಸ್ವರೂಪದ ಜೊತೆಗೆ ಐತಿಹಾಸಿಕ ವಸ್ತುನಿಷ್ಠತೆ, ಮೌಲ್ಯನಿರ್ಧಾರ ಮತ್ತು ಇತಿಹಾಸವಾದ ಮುಂತಾದ ಐತಿಹಾಸಿಕ ಜ್ಞಾನದ ಸಮಸ್ಯೆಗಳನ್ನು ಗಣನೆಗೆ ತೆಗೆದುಕೊಂಡು ಅಧ್ಯಯನ ಮಾಡುವ ಇತಿಹಾಸ ಲೇಖನದ ದಾರ್ಶನಿಕ ವಿಶ್ಲೇಷಣೆಯಲ್ಲಿ ಆಸಕ್ತಿಯನ್ನು ವಹಿಸುವ ಮತ್ತು ಇತಿಹಾಸಕಾರರ ಕೃತಿಗಳಲ್ಲಿನ ತಾರ್ಕಿಕ, ಭಾವರೂಪಾತ್ಮಕ ಹಾಗೂ ಪ್ರಮಾಣ ಪ್ರಮೇಯ ವಿಚಾರದ ವೈಲಕ್ಷಣ್ಯಗಳನ್ನು ಪರಿಶೋಧಿಸುವ ವಿಮರ್ಶಾತ್ಮಕ ಇತಿಹಾಸದರ್ಶನ: (2) ಔಪಚಾರಿಕವೂ ಹಾಗೂ ವಿಷಯಕವೂ ಆಗಿರುವ ಐತಿಹಾಸಿಕ ಘಟನಾವಳಿಗಳ ಹಿಂದಿರುವ ಸ್ಪಷ್ಟವಾದ ಮೂಲಭೂತ ಸಂಯೋಜನೆ ಅಥವಾ ಮಾದರಿಯನ್ನು ಗುರುತಿಸಲು ಅವುಗಳ ಸವಿಸ್ತರಗತಿಯ ನಿಜವಾದ ಮಹತ್ತ್ವ ಹಾಗೂ ತರ್ಕ ಸಾಂಗತ್ಯವು ಸ್ಪಷ್ಟವಾಗುವ ತರಹದಲ್ಲಿ ಅದರ ಬಗ್ಗೆ ವೃತ್ತಾಂತವನ್ನು ರಚಿಸಲು ಯತ್ನಿಸುವ ಮತ್ತು ಐತಿಹಾಸಿಕ ಶಕ್ತಿಗಳನ್ನು ನಿಯಂತ್ರಿಸಿ ನಿರ್ದೇಶಿಸುವ ಮೂಲಭೂತ ಅಂಶಗಳನ್ನು ನಿರ್ಧರಿಸುವ ಐತಿಹಾಸಿಕ ಸಂಯೋಜನೆ ಮತ್ತು ಸಿದ್ಧಾಂತಗಳಿಗೆ ಸಂಬಂಧಪಟ್ಟಿರುವ ಚಿಂತನಾತ್ಮಕ ಅಥವಾ ಪರಿಕಲ್ಪನೆ ಇತಿಹಾಸ ದರ್ಶನ ಎಂಬುದೇ ಈ ಎರಡು ಶಾಖೆಗಳು.

### 4.4.1 ವಿಮರ್ಶಾತ್ಮಕ ಇತಿಹಾಸ ದರ್ಶನ

ಇತಿಹಾಸ ಎಂಬ ಭಾವರೂಪವನ್ನು ವಿಶ್ಲೇಷಿಸಿ ಸ್ಪಷ್ಟಪಡಿಸುವುದೇ ಇತ್ತೀಚೆಗೆ ಬೆಳೆದುಬಂದಿರುವ ಈ ಶಾಖೆಯ ಪ್ರಧಾನ ಕಾರ್ಯ. ಇದು ಐತಿಹಾಸಿಕ ಅನ್ವೇಷಣೆಯ ಉದ್ದೇಶ, ಇತಿಹಾಸಕಾರರು ತಮ್ಮ ವಿಷಯ ಸಾಮಗ್ರಿಯನ್ನು ವರ್ಗೀಕರಿಸಿ ವರ್ಣಿಸುವ ಕ್ರಮಗಳು, ಅವರು ಉಪಕಲ್ಪನೆಗಳನ್ನು ರೂಪಿಸುವ ಹಾಗೂ ವಿವರಣೆಗಳನ್ನು ನೀಡುವ ಅವುಗಳನ್ನು ಸಮರ್ಥಿಸುವ ಬಗೆ ಅವರು ಅನುಸರಿಸುವ ಸಂಶೋಧನಾ ಕಾರ್ಯವಿಧಿಗೆ ಮೂಲವಾಗಿರುವ ಕಲ್ಪನೆ ಮತ್ತು ತತ್ತ್ವಗಳು ಇತಿಹಾಸ ಹಾಗೂ ಇತರ ಅನ್ವೇಷಣಾ ಬಗೆಗಳ ನಡುವೆ ಇರುವ ಸಂಬಂಧಗಳು ಇತ್ಯಾದಿ ವಿಷಯಗಳಲ್ಲಿ ಆಸಕ್ತಿಯನ್ನು ತೋರುತ್ತದೆ. ಇತಿಹಾಸ ಹಾಗೂ ಇತರ ಜ್ಞಾನ ಪ್ರಕಾರಗಳು ಸತ್ಯ ಹಾಗೂ ವಾಸ್ತವಾಂಶ. ಐತಿಹಾಸಿಕ ವಿವರಣೆ ಹಾಗೂ ವಸ್ತುನಿಷ್ಟತೆ, ಮೌಲ್ಯನಿರ್ಧಾರ ಹಾಗೂ ಇತಿಹಾಸವಾದ ಎಂಬುದು ಇದರ ಅಧ್ಯಯನವಸ್ತುಗಳಾಗುತ್ತವೆ.

ಇತಿಹಾಸ ಹಾಗೂ ಇತರ ಜ್ಞಾನ ಪ್ರಕಾರಳಿಗೆ ಅಂದರೆ ಐತಿಹಾಸಿಕ ಚಿಂತನೆಯ ನಿಜಸ್ವರೂಪಕ್ಕೆ ಸಂಬಂಧಿಸಿರುವ ಪ್ರಶ್ನೆಗಳನ್ನು ಕುರಿತು ಈ ಶಾಖೆಯು ವಿಚಾರ ಮಾಡುತ್ತದೆ. ಚರಿತ್ರೆಯ ಗತಕಾಲದ ಅಧ್ಯಯನ: ಯಾವ ಗತಕಾಲ ಎಂಬ ಪ್ರಶ್ನೆಗೆ ಮಾನವರಿಗೆ ಸಂಬಂಧಿಸಿದ ಗತಕಾಲ ಎಂಬುದು ಉತ್ತರ. ಗತಕಾಲದ ಘಟನೆಗಳ ಬಗ್ಗೆ ಅತ್ಯಂತ ಸರಳವಾದ ವೃತ್ತಾಂತವನ್ನು ಸಿದ್ಧಪಡಿಸಬಹುದು. ಇನ್ನು ಮುಂದೆ ಹೋಗಿ ಆ ಘಟನೆಗಳು ಏಕೆ ಸಂಭವಿಸಿದುವು ಎಂಬುದನ್ನು ವಿವರಿಸಲು ಅವುಗಳ ಬಗ್ಗೆ ಅತ್ಯಂತ ಸಾರಗರ್ಭಿತವಾದ ಸಂವಹನೀಯವಾದ ಹಾಗೂ ಸರ್ವಗ್ರಾಹ್ಯವಾದ ವೃತ್ತಾಂತವನ್ನು ತಯಾರು ಮಾಡಬಹುದು. ಐತಿಹಾಸಿಕ ಆಲೋಚನೆಯೂ ಸಹ ಒಂದು ವಿಶಿಷ್ಟವಾದ ವೈಜ್ಞಾನಿಕ ಚಿಂತನೆಯಾಗಿದೆ ಎಂದು ಹೇಳಬಹುದು. ಇತಿಹಾಸದಲ್ಲಿ ಸತ್ಯ ಹಾಗೂ ವಾಸ್ತವಾಂಶ ಎಂಬ ವಿಷಯಗಳು ಈ ಶಾಖೆಯು ಅಧ್ಯಯನ ಮಾಡುವ ಇನ್ನೊಂದು ವರ್ಗದ ಸಮಸ್ಯೆಗಳಾಗಿವೆ. ಐತಿಹಾಸಿಕ ವಾಸ್ತವಾಂಶ ಎಂದರೇನು ಮತ್ತು ಯಾವುದರ ಆಧಾರದ ಮೇಲೆ ಇತಿಹಾಸಕಾರನ ಹೇಳಿಕೆಗಳನ್ನು ಸತ್ಯವಾದುವೋ ಅಲ್ಲವೋ ಎಂಬುದನ್ನು ನಿರ್ಧರಿಸಬೇಕು ಎಂಬುದು ಪ್ರಶ್ನೆ. ಪ್ರತಿ ಜ್ಞಾನ ಶಾಖೆಯಲ್ಲೂ ವಾಸ್ತವಾಂಶಗಳು ನೇರವಾದ ಪರೀಕ್ಷೆಗೆ ಒಳಪಡುವಂತಿರಬೇಕು. ಗತಕಾಲದ ವಿಷಯಗಳನ್ನು ನೇರವಾಗಿ ನೋಡಿ ಪರೀಕ್ಷಿಸುವುದಕ್ಕಾಗುವುದಿಲ್ಲ ಎಂಬುದು ನಿಜ. ಆದರೂ ಗತಕಾಲವು ಇಂದು ದಾಖಲೆ, ಕಟ್ಟಡ, ನಾಣ್ಯ, ಸಂಸ್ಥೆ, ಶಾಸನ, ಕಾರ್ಯರೂಢಿ ಮುಂತಾದುವುಗಳಲ್ಲಿ ತನ್ನ ಸಾಕಷ್ಟು ಗುರುತುಗಳನ್ನು ಬಿಟ್ಟುಹೋಗಿದೆ. ಅವುಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಪರಿಶೀಲಿಸಿ ಬಳಸಿ ಇತಿಹಾಸಕಾರನು ತನ್ನ ಚಾರಿತ್ರಿಕ ವೃತ್ತಾಂತವನ್ನು ಸಿದ್ಧಪಡಿಸುತ್ತಾನೆ. ಪ್ರತ್ಯಕ್ಷ ಅಥವಾ ಪರೋಕ್ಷ ಪ್ರಮಾಣಗಳ ಆಧಾರದ ಮೇಲೆ ನಿಶ್ಚಿತವಾದ ಹೇಳಿಕೆಗಳನ್ನು ನೀಡಲು ಯತ್ನಿಸುತ್ತಾನೆ.

ಐತಿಹಾಸಿಕ ವಿವರಣೆ ವಸ್ತುನಿಷ್ಠತೆ, ಮೌಲ್ಯನಿರ್ಧಾರ ಹಾಗೂ ಇತಿಹಾಸವಾದ ಮುಂತಾದ ತೀವ್ರವಾದ ಸಮಸ್ಯೆಗಳನ್ನು ವಿಮರ್ಶಾತ್ಮಕ ಇತಿಹಾಸ ದರ್ಶನವು ಬಗೆಹರಿಸಬೇಕು. ಐತಿಹಾಸಿಕ ವಿವರಣೆಯ ಸಮಸ್ಯೆಯು ವಿದ್ವಾಂಸರಿಗೆ ಸಾಕಷ್ಟು ತಲೆನೋವನ್ನು ಉಂಟುಮಾಡಿದೆ. ಐತಿಹಾಸಿಕ ಅಧ್ಯಯನಗಳಲ್ಲಿ ಯಾವ ತರಹದ ವಿವರಣೆಯನ್ನು ನೀಡಬೇಕು ಎಂಬುದು ಚರ್ಚಾಸ್ಪದ ವಿಷಯವಾಗಿದೆ. ಕೆಲವು ಚಿಂತಕರು ಸಂಭವಿಸಿದ

ಘಟನೆಗೆ ಹಿಂದೆ ಇದ್ದ ಪರಿಸ್ಥಿತಿಗಳ ಕಾರಣಾ ತರಹದ ಘಟನೆಯು ಜರುಗಿರಬಹುದೆಂಬುದಾಗಿ ನಿರೀಕ್ಷಿಸಬಹುದು ಎಂಬುದನ್ನು ತೋರುವುದೇ ಎಲ್ಲಾ ಐತಿಹಾಸಿಕ ಘಟನೆಗಳ ವಿವರಣೆಗಳ ಗುರಿಯಾಗುತ್ತದೆ ಎಂಬುದಾಗಿ ವಾದಿಸುತ್ತಾರೆ. ಆದರೂ ತರ್ಕ ಮತ್ತು ವಿವೇಚನಾಕ್ರಮದ ಆಧಾರದಮೇಲೆ ಈ ಬಹು ಕಷ್ಟಕರವಾಗಿರುವ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಕಂಡುಹಿಡಿದು ನಿರೂಪಿಸಲು ಪ್ರಯತ್ನಿಸಲಾಗಿದೆ ಎಂಬ ಸತ್ಯವೇ ವಿಮರ್ಶಾತ್ಮಕ ಇತಿಹಾಸ ದರ್ಶನವನ್ನು ಐತಿಹಾಸಿಕ ಅಧ್ಯಯನಕ್ಕೆ ಬಹು ಉಪಯುಕ್ತವಾದ ಸಹಾಯಕ ಸಾಧನವನ್ನಾಗಿಸುತ್ತದೆ. ಆದರೆ ಅನುಭವಿಕ ಪರೀಕ್ಷೆ ಹಾಗೂ ಸಮರ್ಥನೆಗೆ ಒಳಪಡಿಸಬೇಕಾದಂತಹ ತಕ್ಕ ಸಾಮಾನ್ಯ ನಿಯಮಗಳನ್ನು ಪರಿಭಾವಿಸಿದರೆ ಮಾತ್ರ ಈ ತೆರನಾದ ವಿವೇಚನಾಯುಕ್ತವಾದ ವಿವರಣೆಗಳನ್ನು ನೀಡುವುದು ಸಾಧ್ಯವಗುತ್ತದೆ. ಬೇರೆ ಮಾತುಗಳಲ್ಲಿ ಹೇಳಬೇಕಾದರೆ ಇತರ ವಿಜ್ಞಾನಗಳಲ್ಲಿರುವಂತೆ ಇತಿಹಾಸದಲ್ಲೂ ಸಹ ಐತಿಹಾಸಿಕ ಘಟನೆಗಳನ್ನು ಒಂದು ಸಾಮಾನ್ಯ ಊಹಾಮಾದರಿಗೆ ಹೊಂದಿಕೆಯಾಗುವಂತೆ ಮಾಡಬಹುದು.

ಐತಿಹಾಸಿಕ ವಿವರಣೆಗಳನ್ನು ನೀಡಬೇಕಾದರೆ ಚರಿತ್ರ ಲೇಖಕನು ಗತಕಾಲದಲ್ಲಿ ನಡೆದ ವಿವಿಧ ನಾಟಕಗಳಲ್ಲಿ ಪಾತ್ರ ವಹಿಸಿದವರ ಶೀಲಸ್ವಭಾವ ಹಾಗೂ ಯೋಗ್ಯತೆ ಮತ್ತು ಯಾವ ಪರಿಸ್ಥಿತಿಗಳ ಕಾರಣ ಅವರುಗಳು ಹೇಗೆ ಪಾತ್ರಗಳನ್ನು ನಿರ್ವಹಿಸಿದರು ಎಂಬ ವಿಷಯಗಳನ್ನು ತನ್ನ ಮನೋಪಟಲದಲ್ಲಿ ಪುನಃ ಚಿತ್ರಿಸಿಕೊಳ್ಳಬೇಕಾಗುತ್ತದೆ. ಅಂದರೆ ತಾನು ವಿವರಿಸಲು ಯತ್ನಿಸುವ ಗತಕಾಲವನ್ನು ಪುನರ್‍ರಚಿಸಿಕೊಳ್ಳಬೇಕಾಗುತ್ತದೆ. ಹಿಂದೆ ನಡೆದ ಪ್ರತಿಯೊಂದು ಕ್ರಿಯೆಗೂ ಒಂದು ಆಲೋಚನಾತ್ಮಕವಾದ ಮುಖ, ಅಂದರೆ ಪ್ರತಿಯೊಮದು ಕ್ರಿಯೆಯ ಹಿಂದೆಯೂ ಪ್ರೇರಕವಾಗಿ ಒಂದು ಭಾವನೆಯಿರುತ್ತದೆ. ಅದರ ಬಗ್ಗೆ ಅವನು ಪುನಃ ಪರ್ಯಾಲೋಚಿಸಿ ನಂತರ ಸಮರ್ಪಕವಾಗಿರುವ ವಿವರಣೆಗಳನ್ನು ಕೊಡಬೇಕಾಗುತ್ತದೆ. ಇಲ್ಲಿ ಒಂದು ಘಟನೆಗೂ ಹಾಗೂ ಇತರ ಸಂಗತಿಗಳಿಗೂ ನಡುವೆ ಇರುವ ವಾಸ್ತವಿಕ ಸಂಬಂಧಗಳನ್ನು ಗುರುತಿಸಿ ಮತ್ತು ಅದರ ಐತಿಹಾಸಿಕ ಸನ್ನಿವೇಶದಲ್ಲಿ ಅದನ್ನು ವೀಕ್ಷಿಸಿ ವಿವರಿಸುವ ಪ್ರಕ್ರಿಯೆಯನ್ನು ವಿಭಿನ್ನ ವಿಷಯಗಳ ಸಮಾನ ಧರ್ಮವನ್ನು ಅರಿತು ಅವುಗಳನ್ನು ಸಮಾವೇಶಗೊಳಿಸುವ ಪದ್ಧತಿ ಎಂಬುದಾಗಿ ಕರೆಯಲಾಗುತ್ತದೆ. ಘಟನೆಗಳನ್ನು ತಕ್ಕ ಭಾವರೂಪಗಳ ಕೆಳಗೆ ಸಮಾವೇಶಗೊಳಿಸುವ ಈ ವಿಧಿಯ ಐತಿಹಾಸಿಕ ವಿವರಣೆಯಲ್ಲಿ ಮುಖ್ಯವಾಗಿರುತ್ತದೆ. ಇದರೊಂದಿಗೆ ಇದರಲ್ಲಿ ಸಾಮಾನ್ಯ ಸತ್ಯಾಂಶಗಳು ಹಾಗೂ ಮಾನವ ಸ್ವರೂಪವನ್ನು ಕುರಿತ ಸಾಮಾನ್ಯ ಪ್ರಮೇಯಗಳೂ ಅವಶ್ಯಕ. ಹೀಗೆ ಐತಿಹಾಸಿಕ ಚಿಂತನೆ ಹಾಗೂ ವಿವರಣೆ ಕೆಲವು ವೈಶಿಷ್ಟ್ಯಗಳನ್ನು ಹೊಂದಿದ್ದರೂ ಅವು ವೈಜ್ಞಾನಿಕ ಆಲೋಚನೆ ಹಾಗೂ ವಿವರಣೆಗಿಂತ ಭಿನ್ನವಾಗಿರುವುದಿಲ್ಲ.

ಕಾಲ್. ಜಿ. ಹ್ಯಾಂಪೆಲ್ ಇತಿಹಾಸ ಹಾಗೂ ಪ್ರಾಕೃತಿಕ ವಿಜ್ಞಾನ ಕ್ಷೇತ್ರಗಳಲ್ಲಿ ಸಾರ್ವತ್ರಿಕ ನಿಯಮಗಳ ಕಾರ್ಯಗಳು ಒಂದೇ ತೆರನಾಗಿರುತ್ತವೆ ಮತ್ತು ಘಟನೆಗಳನ್ನು ವಿವರಣೆ ಹಾಗೂ ಪ್ರಾಗುಕ್ತಿ ಎಂಬುದಾಗಿ ಸಾಧಾರಣವಾಗಿ ಕರೆಯಲಾಗಿರುವ ಮಾದರಿಗಳಾಗಿ ಒಟ್ಟುಗೂಡಿಸುವುದೇ ಅವುಗಳ ಪ್ರಧಾನ ಕ್ರಿಯೆ ಎಂಬುದಾಗಿ ಎಣಿಸಿದನು. ಅವನು 1942ರಲ್ಲಿ "ಇತಿಹಾಸದಲ್ಲಿ ಸಾಮಾನ್ಯ ನಿಯಮಗಳ ಕ್ರಿಯೆ" ಎಂಬ ತನ್ನ ಲೇಖನದಲ್ಲಿ ಪ್ರಾಕೃತಿಕ ವಿಜ್ಞಾನಿಯು ಭೌತ ಜಗತ್ತಿನ ಸಂಗತಿಗಳನ್ನು ವಿವರಿಸುವ ಕ್ರಮದಲ್ಲೇ ಮಾನವ

ಇತಿಹಾಸದ ಘಟನೆಗಳನ್ನು ವರ್ಣಿಸಬಹುದು ಎಂಬುದಾಗಿ ಸಮರ್ಥಿಸಲು ಪ್ರಯತ್ನಿಸಿದನು. ನಾವು ಎಲ್ಲಾ ಉಡುಪಿನ ಶೈಲಿಗಳು ಹೇಗೆ ಉದ್ಭವಿಸಿದವು ಎಂಬುದನ್ನು ಸೂಚಿಸುವ ಸಾಮಾನ್ಯ ಆಧಾರಕಲ್ಪನೆಯ ಬಗ್ಗೆ ತಿಳಿದುಕೊಂಡಿದ್ದರೆ ಅಂದರೆ ಕೆಲವು ವ್ಯಕ್ತಿಗಳು ಇರುವ ಉಡುಪಿನ ಮಾದರಿಯನ್ನು ಅನುದ್ದಿಷ್ಟವಾಗಿ ಬದಲಾಯಿಸಿದಾಗ ಇತರರು ಅದನ್ನು ಅನುಸರಿಸಿದಾಗ ಆ ಅನುಕರಣೆ ಹರಡಿ ಸಾಮಾನ್ಯವಾದಾಗ ಆ ಸಾಮಾನ್ಯವಾಗಿ ಒಪ್ಪಿಕೊಳ್ಳಲಾದ ಮಾರ್ಪಟ್ಟ ಉಡುಪಿನ ಶೈಲಿಯು ಸಾಮಾಜಿಕವಾಗಿ ಅಂಗೀಕೃತವಾದಾಗ ಈ ಸಾಮಾಜಿಕ ಅಂಗೀಕಾರವು ಅದನ್ನು ಜನಪ್ರಿಯವನ್ನಾಗಿಸುತ್ತದೆ ಎಂಬುದನ್ನು ಅರಿತಿದ್ದರೆ ನಮಗೆ ಒಂದು ನಿರ್ದಿಷ್ಟ ಸಾಮಾಜಿಕ ಶೈಲಿಯ ಮೂಲದ ಬಗ್ಗೆ ವಿವರಿಸುವುದು ಸಾಧ್ಯವಾಗುತ್ತದೆ. ಈ ವಿವರಣೆಯು ಸಾಮಾನ್ಯ ಆಧಾರ ಕಲ್ಪನೆಯಲ್ಲಿ ಇರುವ ಸತ್ಯದ ಪ್ರಮಾಣಕ್ಕೆ ಅನುಸಾರವಾಗಿ ಯಥಾರ್ಥವಾಗಿರುತ್ತದೆ. ಇದು ತರ್ಕಸರಣಿಯಲ್ಲಿ ಬಳಸಲಾಗುವ ಅರಿಸ್ಟಾಟಲನ ನಿಗಮನ ತರ್ಕವಲ್ಲದೆ ಮತ್ತೇನಲ್ಲ.

ಈ ಸಿದ್ಧಾಂತವನ್ನು ಅನೇಕರು ಒಪ್ಪದೆ ಐತಿಹಾಸಿಕ ಸಂಗತಿಗಳು ಅಸಮಾನವಾಗಿವೆ ಎಂಬ ಆಧಾರದ ಮೇಲೆ ಟೀಕಿಸಿದ್ದಾರೆ. ಅವರ ಪ್ರಕಾರ ಕೆಲವು ನಿರ್ದಿಷ್ಟ ಆದ್ಯ ಪರಿಸ್ಥಿತಿಗಳಿದ್ದರೆ ಒಂದು ವಿಶಿಷ್ಟ ಘಟನೆಯು ಸಂಭವಿಸಿಯೇ ತೀರುತ್ತದೆ ಮತ್ತು ವಿವರಣೆಯನ್ನು ಕೆಲವು ಸಾರ್ವತ್ರಿಕ ನಿಯಮಗಳ ಆಧಾರದ ಮೇಲೆಯೇ ನೀಡಬೇಕಾಗುತ್ತದೆ ಎಂಬುದಾಗಿ ಸಾಧಿಸಿ ಹೇಳುವುದು ನಿಷ್ಪ್ರಮಾಣವಾದ ಅಭಿಪ್ರಾಯವಾಗುತ್ತದೆ. ಐತಿಹಾಸಿಕ ವಿವರಣೆಯಲ್ಲಿ ಯಾವ ಘಟನೆಯು ಹೇಗೆ, ಏಕೆ, ಎಲ್ಲಿ, ಯಾವಾಗ ಸಂಭವಿಸಿತು ಎಂಬುದನ್ನು ಸಂಕ್ಷಿಪ್ತವಾಗಿ ಸ್ಪಷ್ಟಪಡಿಸಲು ಪ್ರಯತ್ನಿಸಲಾಗುತ್ತದೆ; ಇತಿಹಾಸಕಾರನು ಒಂದು ಘಟನೆಯು ಜರುಗುವುದು ಹೇಗೆ ಸಾಧ್ಯವಾಯಿತು ಎಂಬುದನ್ನು ವಿವರಿಸುವುದಕ್ಕಾಗಿ ಕಾರಣಗಳನ್ನು ನಮೂದಿಸುತ್ತಾನೆ. ಆ ನಿರ್ದಿಷ್ಟ ಸಂಭವವನ್ನು ವಿಶ್ಲೇಷಿಸಿ ಸವಿಸ್ತರವಾದ ಅನ್ವೇಷಣೆಯ ಮೂಲಕ ಹೇಗೆ ವಿಭಿನ್ನ ಅಂಶಗಳ ಸಂಬಂಧಿತ ಶ್ರೇಣಿಗಳು ಒಟ್ಟಾಗಿ ಈ ಸಂಕೀರ್ಣ ಸಂಗತಿಯು ತಲೆದೋರುವಂತೆ ಮಾಡಿದುವು ಎಂಬುದನ್ನು ಎತ್ತಿ ತೋರಲು ಪ್ರಯತ್ನಿಸುತ್ತಾನೆ. ಒಂದು ಕ್ರಾಂತಿಯ ಬಗ್ಗೆ ವಿಚಾರ ಮಾಡುವಾಗ ಇತಿಹಾಸಕಾರನು ಅದು ಹೇಗೆ ಕಾರಣ ಮತ್ತು ಗತಿ ಅಥವಾ ಪರಿಣಾಮಗಳ ವಿಚಾರದಲ್ಲಿ ಇತರ ಕ್ರಾಂತಿಗಳಿಗಿಂತ ವಿಭಿನ್ನವಾಗಿದೆ ಎಂಬುದನ್ನು ಸ್ಪಷ್ಟಪಡಿಸಲು ಬಯಸುತ್ತಾನೆ. ಅದೂ ಅಲ್ಲದೆ ಸಾಮಾನ್ಯ ನಿಯಮಗಳ ಅರಿವು ಇಲ್ಲದೆಯೇ ಮಾನವ ಕ್ರಿಯೆಯ ಕಾರಣವನ್ನು ಕಂಡುಹಿಡಿದು ವಿವರಿಸುವುದು ಸಾಧ್ಯ ಎಂಬುದಾಗಿ ವಿಮರ್ಶಕರು ವಾದಿಸುತ್ತಾರೆ. ಇದರೊಂದಿಗೆ ಇತಿಹಾಸದಲ್ಲಿ ಕಂಡುಬರುವ ಸಾಮಾನ್ಯ ನಿಯಮಗಳ ವಿವರಣೆಗಳು ಸಂಪೂರ್ಣವಾಗಿ ಹಾಗೂ ಯಥಾರ್ಥವಾಗಿ ಇರುವುದಿಲ್ಲವಾದ ಕಾರಣ ಅವುಗಳು ತೃಪ್ತಿಕರವಾಗಿರುವುದಿಲ್ಲ. ಇಷ್ಟು ಮಾತ್ರವಲ್ಲದೆ, ವ್ಯಕ್ತಿಗಳು ನಿರ್ದಿಷ್ಟ ಉದ್ದೇಶ, ಪ್ರೇರಣೆ ಹಾಗೂ ಆಶಯಗಳನ್ನು ಹೊಂದಿರುತ್ತಾರೆ. ಅವರ ಕ್ರಿಯೆಗಳಿಗೆ ವಿಶಿಷ್ಟ ಗುರಿ ಇರುತ್ತದೆ. ಆದ್ದರಿಂದ ಇತಿಹಾಸದಲ್ಲಿ ಅನ್ವಯಿಸಲಾಗುವ ಕಾರ್ಯಕಾರಣ ನಿಯಮಗಳನ್ನು ಪ್ರಾಕೃತಿಕ ವಿಜ್ಞಾನಗಳ ಕಾರಣಾತ್ಮಕ ನಿಯಮಗಳೊಂದಿಗೆ ಹೋಲಿಸುವುದು ಸಾಧ್ಯವಿಲ್ಲ. ಇತಿಹಾಸದಲ್ಲಿ ಅನುಭೂತಿ ಹಾಗೂ ಅಂತರ್ದೃಷ್ಟಿ ಶಕ್ತಿಯ ಮೂಲಕ ವಿಷಯಗಳನ್ನು ಸಂಗ್ರಹಿಸಿ ವಿವರಿಸುವ ವಿಧಾನ ಹೆಚ್ಚು ಅಪೇಕ್ಷಣೀಯವಾಗಿರುತ್ತದೆ. ಐತಿಹಾಸಿಕ ವಿವರಣೆಗಳನ್ನು ನೀಡಬೇಕಾದರೆ ಇತಿಹಾಸಕಾರನು ತನ್ನ ಮನೋಪಟಲದಲ್ಲಿ ಹಿಂದೆ ಇತಿಹಾಸ ನಾಟಕದಲ್ಲಿ ಪಾತ್ರ ವಹಿಸಿದ್ದವರ ಸ್ವರೂಪ ಮತ್ತು ಅವರು ಆ

ರೀತಿಯ ಪಾತ್ರ ವಹಿಸಲು ಕಾರಣವಾದ ಪರಿಸ್ಥಿತಿಗಳ ಚಿತ್ರವನ್ನು ಪುನಃ ರಚಿಸಿಕೊಳ್ಳಬೇಕಾಗುತ್ತದೆ ಎಂಬುದು ಅವರ ವಾದ.

ಆದರೆ ಈ ಸಿದ್ಧಾಂತವನ್ನು ಸಮರ್ಥಿಸುವವರು ಅನೇಕ ಮನಶ್ಶಾಸ್ತ್ರೀಯ ಹಾಗೂ ಸಮಾಜ ಶಾಸ್ತ್ರೀಯ ನಿಯಮಗಳು ಐತಿಹಾಸಿಕ ಸಂಗತಿಗಳಿಗೆ ಸುಸಂಬದ್ಧವಾಗಿರುವುದರಿಂದ ಈ ನಿಯಮಗಳು ಸಮಂಜಸವಾಗಿರುತ್ತವೆ ಎಂಬುದಾಗಿ ವಾದಿಸುತ್ತಾರೆ. ಒಂದು ವೇಳೆ ವ್ಯಾಪಕವಾದ ಮಾದರಿ ಇತಿಹಾಸಕ್ಕೆ ಸರಿಹೊಂದದಿದ್ದರೆ ಅದನ್ನು ಸೀಮಿತಗೊಳಿಸುವುದಕ್ಕೆ ಅವರು ಸಿದ್ಧರಿರುತ್ತಾರೆ. ಕೆಲವರು ಒಂದು ಘಟನೆಯನ್ನು ವಿವರಿಸುವಾಗ ತಕ್ಕ ಪರಿಸ್ಥಿತಿ ಹಾಗೂ ಅಂತಿಮ ಕಾರಣಗಳನ್ನು ಎತ್ತಿ ಹೇಳಿದರೆ ಸಾಕು ಎಂಬುದಾಗಿ ಮತ್ತೆ ಕೆಲವರು ಅವಶ್ಯಕ ಪರಿಸ್ಥಿತಿಗಳನ್ನು ಸೂಚಿಸಿದರೆ ಸಾಕು ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಉದಾಹರಣೆಗೆ, ಕರ್ನಾಟಕದ ಇತಿಹಾಸದಲ್ಲಿ ತಾಳಿಕೋಟೆ ಯುದ್ಧದ ಬಗ್ಗೆ ವರ್ಣಿಸುವಾಗ ಆ ಘಟನೆಯು ಸಂಭವಿಸುವುದಕ್ಕೆ ಇದ್ದ ತಕ್ಕ ಪರಿಸ್ಥಿತಿ ಹಾಗೂ ಅಂತಿಮ ಕಾರಣಗಳನ್ನು ತಿಳಿಸಿದರೆ ಸಾಕು. ಹಾಗೆಯೇ ಕರ್ನಾಟಕದ ಒಂದು ಆಳುವ ಸಂತತಿಯ ಮೂಲವನ್ನು ವಿವರಿಸುವಾಗ ಹೇಗೆ ಎಲ್ಲಾ ಆಳುವ ಸಂತತಿಗಳು ತಲೆ ಎತ್ತಿಕೊಳ್ಳುತ್ತವೆ ಎಂಬುದನ್ನು ಕುರಿತ ಸಾಮಾನ್ಯ ನಿಯಮದ ಬಗ್ಗೆ ಅರಿವು ಅವಶ್ಯಕವಿಲ್ಲ.

ಇಷ್ಟು ಮಾತ್ರವಲ್ಲದೆ ವಸ್ತುನಿಷ್ಠತೆ, ಮೌಲ್ಯ ನಿರ್ಣಯಗಳ ಸಮಸ್ಯೆಯೂ ವಿಮರ್ಶಾತ್ಮಕ ಇತಿಹಾಸ ದರ್ಶನಕ್ಕೆ ಸವಾಲಾಗುತ್ತದೆ. ಇತಿಹಾಸವನ್ನು ವಿಜ್ಞಾನ ಎಂಬುದಾಗಿ ಸಮರ್ಥಿಸುವವರು ಇದರಲ್ಲಿ ವಸ್ತುನಿಷ್ಠತೆ ಇರಬೇಕಾದುದು ಅತ್ಯಾವಶ್ಯಕ ಎಂಬುದಾಗಿ ಒತ್ತಿ ಹೇಳುತ್ತಾರೆ. ವಸ್ತುನಿಷ್ಠತೆ ಎಂದರೆ ಚರಿತ್ರಲೇಖಕನು ತಾನು ನಿರೂಪಿಸುವ ಘಟನೆಗಳನ್ನು ನಿಷ್ಪಕ್ಷಪಾತವಾದ ವೈಜ್ಞಾನಿಕ ದೃಷ್ಟಿಕೋನದಿಂದ ವೀಕ್ಷಿಸಿ ವಿಚಾರ ಮಾಡುವ ಕ್ರಮ ಎಂದರ್ಥವಾಗುತ್ತದೆ. ಇವನು ಯಾವ ಆಗ್ರಹ ಹಾಗೂ ಅನುಗ್ರಹಗಳಿಗೂ ಲಕ್ಷ್ಯಕೊಡದೆ ಅತ್ಯಂತ ನಿಷ್ಪಕ್ಷಪಾತವಾದ ರೀತಿಯಲ್ಲಿ ತೀರ್ಪನ್ನು ನೀಡುವ ಯಥಾರ್ಥವಾದಿ ನ್ಯಾಯಾಧೀಶನಂತಿರಬೇಕು. ಮಾನವ ಸ್ವರೂಪವು ವೈಶಿಷ್ಟ್ಯಪೂರ್ಣವಾಗಿರುವುದರಿಂದ ಅದನ್ನು ಕುರಿತು ಅಧ್ಯಯನ ಮಾಡುವ ಮಾನವಿಕ ಶಾಸ್ತ್ರಗಳ್ಳಲಿ ಈ ತರಹದ ವಸ್ತುನಿಷ್ಠತೆಯನ್ನು ಬೆಳೆಸುವುದು ಸಾಧ್ಯವೇ ಎಂಬುದು ಪ್ರಶ್ನೆ. ಪೂರ್ವಾಗ್ರಹ ಎನ್ನುವುದು ಸ್ವಲ್ಪಮಟ್ಟಿಗೆ ಮಾನವ ವ್ಯಕ್ತಿಗಳಲ್ಲಿ ಕ್ರಮೇಣ ಬೆಳೆದು ಭದ್ರವಾಗಿ ಮನೆ ಮಾಡಿಕೊಳ್ಳುವ ಮುನ್ನೊಲವು. ಬಹು ಆತ್ಮವಿಶ್ವಾಸದಿಂದ ಕೂಡಿ ಚರಿತ್ರಲೇಖಕನು "ವಾಸ್ತವಾಂಶವೇನೆಂದರೆ..." ಎಂಬುದಾಗಿ ಆರಂಭಿಸಿದರೂ ಅನೇಕ ವಾಸ್ತವಾಂಶಗಳು ಇವನದೇ ಅವಲೋಕನೆ, ಹೇಳಿಕೆ, ಅಭಿಪ್ರಾಯಗಳಾಗಿರುತ್ತವೆ. ಇತಿಹಾಸಕಾರನಿಗೆ ಬೇಕಾಗಿರುವ ಎಲ್ಲಾ ಘಟನೆಗಳನ್ನು ಕುರಿತ ಎಲ್ಲಾ ವಿವರಗಳನ್ನು ಸಂರಕ್ಷಿಸಿಟ್ಟಿರುವುದಿಲ್ಲ. ಇವನಿಗೆ ಬೇಕಾಗಿರುವ ವಾಸ್ತವಾಂಶಗಳನ್ನು ಒಳಗೊಂಡಿರುವ ಪ್ರಮಾಣಗಳು ಕಾಲದ ಆಕ್ರಮಣ ಅಥವಾ ಮಾನವನ ಅವಿವೇಕದ ಕಾರಣ ಹಾಳಾಗಿ ಹೋಗಿರಬಹುದು, ಅಥವಾ ದಾಖಲೆಗಳನ್ನು ಬರೆದಿರುವವರು ವಿಷಯಗಳನ್ನು ಸರಿಯಾದ ಕ್ರಮದಲ್ಲಿ ವೀಕ್ಷಿಸದೇ ಇರಬಹುದು, ಅಥವಾ ಅವರು ಸರಿಯಾಗಿ ಅವಲೋಕಿಸಿದ್ದರೂ ಅವುಗಳನ್ನು ದಾಖಲು ಮಾಡದೇ ಬಿಟ್ಟಿರಬಹುದು. ಇದರೊಂದಿಗೆ ಚರಿತ್ರ ಲೇಖಕನು ಭಾವನಾತ್ಮಕ ಒಲವು, ರಾಜಕೀಯ ಒತ್ತಡ, ಸಮೂಹ ಮುನ್ನೊಲವು, ರಾಷ್ಟ್ರದ ಪ್ರತಿ ಕಟ್ಟಾಸಕ್ತಿ, ಮತಾಂಧರೆ, ಪಕ್ಷಪಾತಯುಕ್ತ ಮನೋಭಾವ, ಸಂಕುಚಿತ ಸಾಮಾಜಿಕ ಧೋರಣೆ, ಭಾಷಾಪ್ರೇಮ ಇತ್ಯಾದಿಗಳಿಗೆ ತುತ್ತಾಗಿರ–

ಬಹುದು. ಈ ಎಲ್ಲಾ ಕಾರಣಗಳಿಂದ ಐತಿಹಾಸಿಕ ವಸ್ತುನಿಷ್ಠತೆಯನ್ನು ಸಾಧಿಸುವುದು ದುಸ್ಸಾಧ್ಯವಾಗಿರುವಂತೆ ತೋರುತ್ತದೆ.

ಅದೇ ರೀತಿ ಇತಿಹಾಸವು ಒಂದು ವಿಜ್ಞಾನವಾಗಿದೆ ಎಂಬುದಾಗಿ ಸಮರ್ಥಿಸಲು ಹೊರಟಾಗ ಮೌಲ್ಯ ನಿರ್ಣಯದ ಪ್ರಶ್ನೆ ಎದುರಿಗೆ ಬೆಟ್ಟದಂತೆ ನಿಲ್ಲುತ್ತದೆ. ಇದು ಸಂಶೋಧಕನು ಮಾಡುವ ತೀರ್ಮಾನಗಳು ಅವನ ಮೌಲ್ಯ ನಿರ್ಧಾರವನ್ನು ಅವಲಂಬಿಸಿಕೊಂಡಿರಕೂಡದು ಅಥವಾ ಅದನ್ನು ಒಳಗೊಂಡಿರಬಾರದು ಎಂಬ ವಿಜ್ಞಾನದ ಭಾವರೂಪಕ್ಕೆ ಪ್ರತಿಕೂಲವಾಗಿರುತ್ತದೆ.

ಅಧ್ಯಯನ ವಸ್ತು ಹಾಗೂ ಭಾಷೆ ಮಾತ್ರವಲ್ಲದೆ ಇತಿಹಾಸದಲ್ಲಿ ಸಂಶೋಧನೆಗಾಗಿ ಆರಿಸಿಕೊಳ್ಳಲಾಗುವ ಘಟನೆಗಳೂ ಸಹ ಮೌಲ್ಯಗಳಿಂದ ಮುಕ್ತವಾಗಿರುವುದಿಲ್ಲ. ಪ್ರತಿ ಇತಿಹಾಸಕಾರನಿಗೂ ತನ್ನದೇ ಆದ ಪಥ, ಅಭಿರುಚಿ, ಸಹಜ ಪ್ರವೃತ್ತಿ ಹಾಗೂ ಒಲವುಗಳಿರುತ್ತವೆ. ಇವನು ರಾಜಕೀಯ, ಆರ್ಥಿಕ, ಸಾಮಾಜಿಕ, ಕಲೆ ಹೀಗೆ ಯಾವುದೋ ವಿಷಯಗಳಲ್ಲಿ ಒಂದನ್ನು ಆರಿಸಿಕೊಳ್ಳಬಹುದು. ಆ ನಿರ್ದಿಷ್ಟ ವಿಷಯದ ಬಗ್ಗೆ ವಿಶೇಷವಾದ ಒಲವಿರುವುದರಿಂದ ಅದರ ಬಗ್ಗೆ ಪೂರ್ತಿಯಾಗಿ ವಸ್ತುನಿಷ್ಠವಾಗಿ ವೀಕ್ಷಿಸಿ ವಿಚಾರ ಮಾಡುವುದು ಇವನಿಗೆ ಕಷ್ಟಸಾಧ್ಯವಾದ ಕೆಲಸವಾಗುತ್ತದೆ. ಮೌಲ್ಯನಿರ್ಣಯಗಳ ಕಾರಣ ನೀಡುವ ವಿವರಣೆಗಳು ಒಂದೇ ತೆರನಾಗಿರುವುದಿಲ್ಲ. ಉದಾಹರಣೆಗೆ, 1857ರಲ್ಲಿ ಭಾರತದಲ್ಲಿ ಜರುಗಿದ ಕ್ರಾಂತಿಕಾರಿ ಘಟನೆಗಳನ್ನು ಇಂಗ್ಲಿಷ್ ಇತಿಹಾಸಕಾರರು ಸಿಪಾಯಿದಂಗೆ ಎಂಬುದಾಗಿಯೂ ಹಲವಾರು ಭಾರತೀಯ ಇತಿಹಾಸಕಾರರು ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ ಎಂಬುದಾಗಿಯೂ ವಿವರಿಸಿದದಾರೆ. ಆದರೆ ಅಮೆರಿಕ ಅಥವಾ ರಷ್ಯದ ಇತಿಹಾಸಕಾರರು ಈ ಎರಡೂ ಅಭಿಪ್ರಾಯಗಳನ್ನು ಒಪ್ಪದೇ ಹೋಗಬಹುದು. ಕಾರ್ಯಕಾರಣ ಸಂಬಂಧಗಳು ಮೌಲ್ಯನಿರ್ಣಯಕ್ಕೆ ಹಿಂದೆ ಬರುತ್ತವೆ. ಆದರೆ ಇತಿಹಾಸದಲ್ಲಿ ಈ ಕ್ರಮ ತಲೆಕೆಳಗಾಗಿರುತ್ತದೆ. ಬೇರೆ ಮಾತುಗಳಲ್ಲಿ ಹೇಳಬೇಕಾದರೆ ಇತಿಹಾಸಕಾರನು ಕಾರಣದ ಬಗ್ಗೆ ಬೆಳಸಿಕೊಂಡಿರುವ ಕಲ್ಪನೆಯು ಮಾನವೀಯವಾಗಿರುತ್ತದೆ. ಹೀಗೆ ಇತಿಹಾಸದಲ್ಲಿ ಮೌಲ್ಯನಿರ್ಣಯ ಅನಿವಾರ್ಯ ಎಂಬುದಾಗಿ ಅನೇಕರು ಅಭಿಪ್ರಾಯ ಪಡುತ್ತಾರೆ. ಮಾನವ ಸ್ವಭಾವದ ವೈಶಿಷ್ಟ್ಯವನ್ನು ಗಣನೆಗೆ ತೆಗೆದುಕೊಂಡು ಇತಿಹಾಸದಾರ್ಶನಿಕನು ಮೌಲ್ಯನಿರ್ಣಯವು ಇತಿಹಾಸ ಸಂಶೋಧನೆಯ ರಚನೆಯನ್ನು ಪ್ರವೇಶಿಸಿ ಪ್ರಭಾವವನ್ನು ಬೀರುತ್ತದೆಯೇ, ಇಲ್ಲವೆ; ಇತಿಹಾಸಕಾರನಿಗೆ ಯಂತ್ರ ಸದೃಶವಾಗಿರಲು ಅಥವಾ ಒಂದು ತಟಸ್ಥ ದರ್ಪಣದಂತಿರಲು ಸಾಧ್ಯವೇ ಎಂಬುದನ್ನು ಅರಿಯಲು ಪ್ರಯತ್ನಿಸುತ್ತಾನೆ.

ಪ್ರಪಂಚದ ಪ್ರಥಮ ಮಹಾಯುದ್ಧದ ಕಾಲದಿಂದ ಇತಿಹಾಸವಾದ ಎಂಬ ಭಾವರೂಪವನ್ನು ಚರಿತ್ರ ಲೇಖಕರು ಹೆಚ್ಚಾಗಿ ಉಪಯೊಗಿಸುತ್ತಿದ್ದಾರೆ ಮತ್ತು ಸಾಂಸ್ಕೃತಿಕ ಮಾದರಿಗೂ ಮತ್ತು ಐತಿಹಾಸಿಕ ಬದಲಾವಣೆಗೂ ಇರುವ ಸಂಬಂಧದ ವಿಷಯಕ್ಕೆ ತೀವ್ರವಾದ ಗಮನವನ್ನು ಕೊಡಲಾಗುತ್ತಿದೆ. ಇತಿಹಾಸವಾದ ಎಂದರೆ ಐತಿಹಾಸಿಕ ಪರಿವರ್ತನೆಯ ಬೆಳಕಿನಲ್ಲಿ ಎಲ್ಲಾ ಜ್ಞಾನ ಹಾಗೂ ಅನುಭವದ ಎಲ್ಲಾ ಬಗೆಗಳನ್ನು ಪರಿಶೀಲಿಸುವ ಪ್ರವೃತ್ತಿ ಎಂಬರ್ಥ ಎಂದಾಗುತ್ತದೆ. 1924ರಲ್ಲಿ ಇತಿಹಾಸವಾದವನ್ನು ಕುರಿತು ಕಾರ್ಲ್‌ಮ್ಯಾನ್‌ಹಿಂ ಬರೆದ ಪ್ರಬಂಧವು ಮಧ್ಯಯುಗಗಳಲೆಲ್ಲಾ ಜಗತ್ತಿನ ಬಗ್ಗೆ ಪ್ರಚಲಿತವಾಗಿದ್ದ ಮತ್ತು

ಮತಧರ್ಮಶಾಸ್ತ್ರದ ಪ್ರಕಾರ ನಿರ್ಧರಿಸಲಾಗಿದ್ದ ಕಲ್ಪನೆಗೆ ವಿರುದ್ಧವಾಗಿ ಲೌಕಿಕ ದೃಷ್ಟಿಕೋನವನ್ನು ಎತ್ತಿಹಿಡಿಯಿತು. ಇತಿಹಾಸಕಾರರು ಬದಲಾವಣೆ ಅನಿವಾರ್ಯವಾದುದು ಎಂಬುದಾಗಿ ಒತ್ತಿ ಹೇಳಿದರು. ಜಗತ್ತಿನ ಬಗ್ಗೆ ನಮೂದಿಸಲಾದ ಈ ಅಮೂಲಾಗ್ರವಾದ ಲೌಕಿಕ ಅಭಿಪ್ರಾಯವನ್ನು ಇತಿಹಾಸವಾದ ಎಂಬುದಾಗಿ ವರ್ಣಿಸಲಾಗಿದೆ. ಮೊದಲಿನ ದಾರ್ಶನಿಕರು ಸಾರ್ವತ್ರಿಕವಾದ ಹಾಗೂ ಬದಲಾಗದ ಪ್ರಾಕೃತಿಕ ನಿಯಮದಲ್ಲಿ ನಂಬಿಕೆಯನ್ನು ಬೆಳೆಸಿಕೊಂಡಿದ್ದರು. ಆದರೆ ಆಧುನಿಕ ಅಭಿಪ್ರಾಯದ ಪ್ರಕಾರ ಪರಿವರ್ತನೆಯು ಪ್ರಕೃತಿಯ ನಿಯಮವಾಗಿದೆ, ಅದು ಪರಿಣಾಮ ನಿಯಮವನ್ನು ಹೊಂದಿದೆ. ಅಲ್ಲಿ ನಿರಂತರವಾಗಿ ಗ್ರಹಿಕೆ, ನವೀಕರಣ ಹಾಗೂ ವಿಸರ್ಜನೆಯ ಪ್ರಕ್ರಿಯೆ ನಡೆಯುತ್ತಿರುತ್ತದೆ. ಒಟ್ಟಿನಲ್ಲಿ ಅಲ್ಲಿ ಬೆಳವಣಿಗೆ ಇರುತ್ತದೆ.

## 4.4.2 ಚಿಂತನಾತ್ಮಕ ಅಥವಾ ಪರಿಕಲ್ಪಕ ಇತಿಹಾಸ ದರ್ಶನ

**ಇತಿಹಾಸದ ಸಿದ್ಧಾಂತಗಳು**

ಸಾಂಪ್ರದಾಯಿಕವಾಗಿ ಸಮಗ್ರ ಐತಿಹಾಸಿಕ ಪ್ರಕ್ರಿಯೆಯ ಬಗ್ಗೆ ವ್ಯಾಪಕವಾದ ವಿವರಣೆಯನ್ನು ನೀಡುವುದು ಮತ್ತು ಇತಿಹಾಸದ ಅರ್ಥ (ಮಹತ್ತ್ವ, ಉದ್ದೇಶ)ವೇನು ಅಥವಾ ಐತಿಹಾಸಿಕ ಬೆಳವಣಿಗೆ ಹಾಗೂ ಬದಲಾವಣೆಯನ್ನು ನಿಯಂತ್ರಿಸಿ ನಿರ್ದೇಶಿಸುವ ಮೂಲಭೂತ ನಿಯಮಗಳಾವುವು ಎಂಬ ಪ್ರಶ್ನೆಗಳಲ್ಲಿ ಆಸಕ್ತಿ ವಹಿಸಿ ವಿವರಿಸುವುದು ಈ ಶಾಖೆಯ ಮುಖ್ಯ ಕಾರ್ಯ ಎಂಬುದಾಗಿ ಹೇಳಲಾಗುತ್ತದೆ. ನಡೆದ ಘಟನೆ ಎಂಬ ಅರ್ಥದಲ್ಲಿ ಇತಿಹಾಸವನ್ನು ವೀಕ್ಷಿಸುವುದು ಅದರ ಗುರಿ ಎಂಬುದಾಗಿ ಹೇಳಲಾಯಿತು. ಅದರ ಪ್ರಕಾರ, ಇತಿಹಾಸದ ಗತಿಯನ್ನು ಹಾಗೂ ಘಟನೆಗಳನ್ನು ಸಮಗ್ರವಾಗಿ ವಿವರಿಸುವುದರ ಮೂಲಕ ಅವುಗಳಲ್ಲಿ ಒಂದು ಮಾದರಿ, ವಿವೇಚನೆ, ವಿಷಯದ ಐಕ್ಯವನ್ನು ಕಾಣಬಹುದು. ಈ ಅರ್ಥವಿವರಣೆಯು ಸಮಾಜದ ಮುಂದಿನ ಬೆಳವಣಿಗೆಯ ಬಗ್ಗೆ ಭವಿಷ್ಯವಾಣೀಯನ್ನು ನುಡಿಯುವುದಕ್ಕೆ ಸಹಾಯಕವಾಗುತ್ತದೆ. ಮಧ್ಯಯುಗಗಳಲ್ಲಿ ದೇವತಾಶಾಸ್ತ್ರಜ್ಞರು ಇತಿಹಾಸಕ್ಕೆ ಒಂದು ಸ್ಪಷ್ಟವಾದ ಅರ್ಥ ಹಾಗೂ ಪ್ರಾಮುಖ್ಯವನ್ನು ಕೊಡುವುದಕ್ಕೆ ಸಾಕಷ್ಟು ಶ್ರಮಿಸಿದರು. 18ನೆಯ ಶತಮಾನದ ನಂತರ ಅನೇಕ ಲೌಕಿಕ ಹಾಗೂ ವೈಜ್ಞಾನಿಕ ಸಿದ್ಧಾಂತಗಳನ್ನು ಬೆಳೆಸಲಾಯಿತು. ಇತಿಹಾಸಕ್ಕೆ ಸಂಬಂಧಿಸಿದ ಸಮಗ್ರ ಕಾರಣದ ಬಗ್ಗೆ ವಿವರಣೆಯನ್ನು ನೀಡಬೇಕೆಂಬ ಹೆಬ್ಬಯಕೆಯು ವಿಕೋವಿಗೆ ಇದ್ದಿತು. ಹರ್ಡರ್ ಮಾನವ ಸಂಸ್ಕೃತಿಯ ಜೈವಿಕ ಏಕತೆಯನ್ನು ಎತ್ತಿಹಿಡಿದನು. ವಿಶ್ವವ್ಯಾಪಕ ದೃಷ್ಟಿಕೋನದಿಂದ ವಿಶ್ವ ಇತಿಹಾಸವನ್ನು ರಚಿಸಬೇಕೆಂಬ ಕ್ಯಾಂಟನ ಭಾವನೆಯು ಇತಿಹಾಸದಲ್ಲಿ ಪ್ರಗತಿಯ ವಿಚಾರವನ್ನು ಪ್ರಕೃತಿಯ ಒಂದು ಗುಪ್ತ ಯೋಜನೆಗೆ ಸಂಬಂಧಿಸಿದಂತೆ ವಿವರಿಸಲು ಯತ್ನಿಸಿತು. ಈ ರೀತಿ ವಿಚಾರಾತ್ಮಕ ಇತಿಹಾಸ ದರ್ಶನದಲ್ಲಿ ಪ್ರತಿಪಾದಿಸಿರುವ ಸಿದ್ಧಾಂತಗಳು ಒಂದು ಪೂರ್ವ ನಿರ್ಧಾರಿತ ಮಾದರಿಗೆ ತಕ್ಕಂತಿರುವುದಿಲ್ಲ. ಆದ್ದರಿಂದ ಇವುಗಳನ್ನು ಮೂಲ ಸಂಕಲ್ಪನುಸಾರವಾದ ಜಗದ್ವಿಕಾಸವಾದಗಳು ಮತ್ತು ವೈಜ್ಞಾನಿಕ ವ್ಯವಸ್ಥೆಗಳು ಅಥವಾ ಸಿದ್ಧಾಂತಗಳು ಎಂಬುದಾಗಿ ಎರಡು ಭಾಗಗಳಾಗಿ ವರ್ಗೀಕರಿಸಬಹುದು.

### 4.4.2.1 ಪಾರಮಾರ್ಥಿಕ ಸಿದ್ಧಾಂತಗಳು

ಮೂಲಸಂಕಲ್ಪಾನುಸಾರವಾದ ಜಗದ್ವಿಕಾಸವಾದಗಳು ಐತಿಹಾಸಿಕ ಘಟನೆಗಳಲ್ಲಿ ಒಂದು ದೈವಿಕ ಧ್ಯೇಯ ಅಥವಾ ಯೋಜನೆ ಇರುತ್ತದೆ ಎಂಬುದನ್ನು ಸಮರ್ಥಿಸಲು ಪ್ರಯತ್ನಿಸುತ್ತವೆ. ವಿಷಯಾತೀತವಾದ ಕಾರಣಗಳನ್ನು ಭಾವಿಸಿಕೊಳ್ಳುವುದೇ ಬಹು ಸ್ವಾಭಾವಿಕವದ ವಿವರಣಾ ವಿಧಾನವಾಗಿದ್ದಿತು. ಈ ಸಿದ್ಧಾಂತಗಳು ದೈವನಿಯಾಮವು ಭಗವಂತನಿಗೆ ಮಾತ್ರ ತಿಳಿದಿರುವ ಗುರಿಯತ್ತ ಸಮಸ್ತ ಘಟನೆಗಳನ್ನು ನಡೆಸಿಕೊಂಡು ಹೋಗುತ್ತದೆ ಎಂಬುದಾಗಿ ಹೇಳುತ್ತವೆ. ಇತಿಹಾಸವು ಈ ದೈವಿಕ ಪ್ರಕ್ರಿಯೆಯ ಮುಖ್ಯ ಭಾಗವಾಗಿರುತ್ತದೆ. ಯೆಹೂದ್ಯರು ಆಶಾವಾದದ ದರ್ಶನವನ್ನು ಬೆಳೆಸಿದರು. ಕ್ರೈಸ್ತ ಮತವು ದೈವ ಸಂಕಲ್ಪವೇ ಪರಮ ಪ್ರಧಾನವಾದುದು ಎಂಬುದನ್ನು ಎತ್ತಿಹಿಡಿದ ದೇವತಾಶಾಸ್ತ್ರದಿಂದ ಬಹುಮಟ್ಟಿಗೆ ಪ್ರಭಾವಿತವಾಯಿತು. ಅದು ಇತಿಹಾಸವನ್ನು ದೈವಿಕವಾಗಿ ನಿಯೋಜಿಸಲಾದ ಆರಂಭ ಹಾಗೂ ಅಂತ್ಯ ದೃಶ್ಯಗಳಿಂದ ಕೂಡಿರುವ ನಾಟಕ ಎಂಬುದಾಗಿ ವಿವರಿಸಿತು. ಮಾನವನು ದೈವಸಂಕಲ್ಪಕ್ಕೆ ತಲೆಬಾಗಿ ನಡೆದರೆ ಮಾತ್ರ ಅವುಗಳನ್ನು ಸರಿಪಡಿಸಬಹುದು. ಪ್ರಕೃತಿಯಲ್ಲಿ ಕಂಡುಬರುವುದೆಲ್ಲದಕ್ಕೂ ಹಾಗೂ ವಿಶ್ವದಲ್ಲಿರುವ ಪ್ರತಿಯೊಂದಕ್ಕೂ ಮೂಲಕಾರಣ ಅವನೇ; ಸತ್ಯ, ಸೌಂದರ್ಯ, ನ್ಯಾಯ ಮುಂತಾದ ಎಲ್ಲಾ ಅತ್ಯಮೂಲ್ಯ ಮೌಲ್ಯಗಳೆಲ್ಲಾ ದೈವತ್ವದ ಪ್ರತಿಬಿಂಬಗಳೇ. ಇತಿಹಾಸದಲ್ಲಿ ಕಂಡುಬರುವ ಪರಿವರ್ತನೆಗಳೆಲ್ಲವೂ ಸತ್ಯ–ಅಸತ್ಯ, ಪಾಪಪುಣ್ಯಗಳ ನಡುವೆ ನಡೆಯುವ ದ್ವಂದ್ವ ಯುದ್ಧದ ಫಲಗಳೇ. ಸೃಷ್ಟಿಯಿಂದ ಲಯದವರೆಗೆ ನಡೆದುಕೊಂಡು ಬರುವ ಸಮಗ್ರ ನಾಟಕವು ಭಗವಂತನ ಸಂಕಲ್ಪ ಸೃಷ್ಟಿಯ ಅಭಿವ್ಯಕ್ತಿಯಾಗಿರುತ್ತದೆ. ದೈವಸಂಕಲ್ಪವನ್ನು ಒಪ್ಪಿಕೊಳ್ಳದಿದ್ದರೆ ಈ ಜಗತ್ತಿನಲ್ಲಿ ಶಾಂತಿ–ಶಿಸ್ತು, ಸುಖ–ಸಮಾಧಾನ, ವ್ಯವಸ್ಥೆ ಇರುವುದಿಲ್ಲ ಮತ್ತು ಮಾನವನು ತನ್ನ ವಿವೇಚನಾ ಶಕ್ತಿಯನ್ನು ನಂಬಿಕೊಂಡು ಜಂಭ ಪಡುತ್ತಿದ್ದರೆ, ಅನಿಷ್ಟಗಳ ಬೇರುಗಳನ್ನು ಕಿತ್ತು ಹಾಕುವುದು ಸಾಧ್ಯವಿಲ್ಲ ಎಂಬುದಾಗಿ ಅಭಿಪ್ರಾಯಪಟ್ಟನು. ಪರಿಸ್ಥಿತಿಗಳಲ್ಲಿ ಸಮಾನತೆಯ ಕ್ರಮೇಣ ವಿಕಸನವು ದೈವಾಯುತ್ತವಾದ ವಿಷಯ ಮತ್ತು ಇದು ದೈವಿಕ ಕಟ್ಟಳೆಯ ಎಲ್ಲಾ ಲಕ್ಷಣಗಳನ್ನು ಹೊಂದಿರುತ್ತದೆ; ಎಲ್ಲಾ ಘಟನೆಗಳು ಹಾಗೂ ಮಾನವರು ಈ ವಿಕಸನಕ್ಕೆ ನೆರವಾಗುತ್ತಾರೆ ಎಂಬುದಾಗಿ ಟಾಕ್ವೆವಿಲ್ಲಿ ಹೇಳಿದ್ದಾನೆ.

ಪಾರಮಾರ್ಥಿಕ ಅಥವಾ ಚರ್ಚ್ ಸಿದ್ಧಾಂತವು ದೈವಸಂಕಲ್ಪಕ್ಕೆ ಅತಿ ಹೆಚ್ಚಿನ ಪ್ರಾಧಾನ್ಯವನ್ನು ಕೊಟ್ಟಿದ್ದರಿಂದ ಮತ್ತು ಮಾನವನ ವಿವೇಚನಾ ಶಕ್ತಿಯ ಪಾತ್ರವನ್ನು ನಿಕೃಷ್ಟಗೊಳಿಸಿದ್ದರೆ ಫಲವಾಗಿ ವಿಧಿ, ದೈವ, ಘಟನೆ, ಅದೃಷ್ಟ, ನಿಯತಿ ಹಾಗೂ ಮಾನವಾತೀತ ವಿಷಯಗಳಲ್ಲಿ ನಂಬಿಕೆಯು ಅತ್ಯಂತ ಬಲವಾಯಿತು. ಮಾನವಬುದ್ಧಿಶಕ್ತಿ ಹಾಗೂ ಸ್ವಪ್ರಯತ್ನಗಳನ್ನು ಪರದೆಯ ಹಿಂದಕ್ಕೆ ತಳ್ಳಿ ಅತ್ಯಂತ ಅಮುಖ್ಯವನ್ನಾಗಿಸಲಾಯಿತು. ಆದ್ದರಿಂದ ಆಧುನಿಕ ಕಾಲಗಳಲ್ಲಿ ಈ ಸಿದ್ಧಾಂತವನ್ನು ಬಹು ಕಟುವಾಗಿ ಖಂಡಿಸಲಾಗಿದೆ. ಈ ಸಿದ್ಧಾಂತವನ್ನು ಅತ್ಯಂತ ತೀಕ್ಷ್ಣವಾಗಿ ವಿಮರ್ಶಿಸಿದವನು ಪ್ರೌಧಾನ್. ಅವನನ್ನು ಪ್ರಗತಿ ಸಿದ್ಧಾಂತದ ದೇವತಾಶಾಸ್ತ್ರಜ್ಞ ಅಥವಾ ಸೆಯ್ಂಟ್ ಅಗಸ್ಟೀನ್ ಎಂಬುದಾಗಿ ಕರೆಯಲಾಗುತ್ತದೆ. ಅವನ ಪ್ರಕಾರ, ಸಮಾಜವು ಸ್ವಾಭಾವಿಕ ಪ್ರೇರಣೆಗಳ ಆಧಾರದ ಮೇಲೆ ಕಾರ್ಯ ಪ್ರವೃತ್ತವಾಗುತ್ತದೆ; ವಿಧಿ ಪ್ರಾಬಲ್ಯದಲ್ಲಿನ ನಂಬಿಕೆಯು ಒಂದು ಸಾಮಾಜಿಕ ಸಹಜ ಪ್ರವೃತ್ತಿಯಾಗಿದೆ ಎಂಬುದಾಗಿ ತಿಳಿಯುವುದು ಮಾನವನ ವಿಶೇಷ ಹಕ್ಕು; ಮನುಷ್ಯನಿಗೂ ಹಾಗೂ ಅವನ ಸುತ್ತಮುತ್ತಲಿರುವ ಪ್ರಕೃತಿಗೂ ನಿರಂತರವಾಗಿ ಕಾದಾಟ ನಡೆಯುತ್ತಿರುತ್ತದೆ; ಆಧುನಿಕ ವಿಜ್ಞಾನದ ಕಾರಣ

ಇತಿಹಾಸದಲ್ಲಿ ಬದಲಾವಣೆಯಾಗಿದೆ; ಇದರಲ್ಲಿ ದೈವ ಸಂಕಲ್ಪಕ್ಕೆ ಪಾತ್ರವೇನೂ ಇಲ್ಲ. ಅವನ ಅಭಿಪ್ರಾಯದಲ್ಲಿ ದೈವ ಸಂಕಲ್ಪ ಎನ್ನುವುದು ಸಾಮೂಹಿಕ ಸಹಜ ಪ್ರವೃತ್ತಿ ಅಥವಾ ಸಮಾಜ ಜೀವಿಯಾದ ಮಾನವ ವ್ಯಕ್ತಿಯ ಮೂಲಭೂತ ವಿವೇಚನಾ ಶಕ್ತಿಯೇ ಹೊರತು ಮತ್ತೇನಲ್ಲ. ಭಗವಂತನ ಕಲ್ಪನೆಯು ಮನುಷ್ಯನಿಗೆ ರಚನಾತ್ಮಕ ಶಕ್ತಿ ಹಾಗೂ ನಿಷ್ಕೃಷ್ಟತೆ ಇಲ್ಲವಾಗುವಂತೆ ಮಾಡಿರುವುದರಿಂದ ಪರಮಾತ್ಮ ಎಂಬ ಭಾವನೆಯನ್ನು ಹೊರದೂಡಬೇಕು ಎಂದು ಪ್ರೌಧಾನ್ ಅತಿ ವಿಪರೀತವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ. ಈ ರೀತಿ ಇತಿಹಾಸದ ಬಗ್ಗೆ ಕೊಡಲಾಗಿರುವ ವಿಷಯಾತೀತ ಅಥವಾ ಪಾರಮಾರ್ಥಿಕ ವಿವರಣೆಯನ್ನು ಉತ್ಕಟವಾಗಿ ಟೀಕಿಸಲಾಗಿದೆ. ಕಾಂಪ್ಟ್, ಬಗಲ್, ಡಾರ್ವಿನ್, ಮಾರ್ಕ್ಸ್, ಬ್ಯೂರಿ ಮುಂತಾದ ಚಿಂತಕರು ಪ್ರತಿಪಾದಿಸಿದ ನೂತನ ಸಿದ್ಧಾಂತಗಳು ಈ ಪಾರಮಾರ್ಥಿಕವಾದವನ್ನು ಸಂಪೂರ್ಣವಾಗಿ ಖಂಡಿಸಿ ಹಾರಿಸಿಬಿಟ್ಟಿವೆ.

### 4.4.2.2 ವೈಜ್ಞಾನಿಕ ಅಥವಾ ತರ್ಕಸಮ್ಮತವಾದ ಸಿದ್ಧಾಂತಗಳು

**ಆವರ್ತ ಅಥವಾ ಪರಿವರ್ತಿವಾದ**

ಪಾರಮಾರ್ಥಿಕ ಪರಮೋದ್ದೇಶ ಹಾಗೂ ತತ್ತ್ವಗಳನ್ನು ನಿರಾಕರಿಸಿ ಅನುಭವಿಕ ವಾಸ್ತವಾಂಶಗಳ ಆಧಾರದ ಮೇಲೆ ತಮ್ಮ ಸಿದ್ಧಾಂತಗಳನ್ನು ಪ್ರತಿಪಾದಿಸಿದ ಪಂಡಿತರನ್ನು ವೈಜ್ಞಾನಿಕ ಸಿದ್ಧಾಂತಿಗಳೆಂಬುದಾಗಿ ಕರೆಯಬಹುದು. ಅವರು ಅನುಗಮನ ವಿಧಾನಗಳನ್ನು ಅನುಸರಿಸುತ್ತಾರೆ. ಮಾನವ ಕ್ರಿಯೆಯನ್ನು ತರ್ಕದ ಆಧಾರದ ಮೇಲೆ ವಿವರಿಸಲು ಯತ್ನಿಸಿದವರಲ್ಲಿ ಗ್ರೀಕರು ಮೊದಲಿಗರು. ಕ್ರಿಶ್ಚಿಯನ್ ವಿದ್ವಾಂಸರಿಗೆ ಮೊದಲೇ ಗ್ರೀಕರು ಹಾಗೂ ರೋಮ್ ದೇಶದವರು ಇತಿಹಾಸ ಸಿದ್ಧಾಂತದತ್ತ ಗಮನವನ್ನು ಹರಿಸಿದರು. ಮೊದಲ ಗ್ರೀಕರು ಇತಿಹಾಸವನ್ನು ಸದ್ಗುಣಗಳನ್ನು ಬೆಳೆಸುವುದಕ್ಕೆ ಮತ್ತು ಭಾವೋತ್ತೇಜನಕ ಪರಿಣಾಮವನ್ನು ಉಂಟು ಮಾಡುವುದಕ್ಕೆ ಸಹಾಯಕವಾದ ಮಾಧ್ಯಮ ಎಂಬುದಾಗಿ ಎಣಿಸಿದರು; ಆದರೂ ಅವರು ಮಾನವ ತರ್ಕ ಹಾಗೂ ವಿವೇಚನಾ ಶಕ್ತಿಯ ಮೇಲೆ ಆಧಾರಿತವಾಗಿದ್ದಂತಹ ತಮ್ಮದೇ ಆದ ಇತಿಹಾಸ ಸಿದ್ಧಾಂತವನ್ನು ಬೆಳೆಸಿದರು. ಪ್ಲೇಟೋ ತನ್ನ "ದಿ ರಿಪಬ್ಲಿಕ್" ಎಂಬ ಕೃತಿಯಲ್ಲಿ ನಿತ್ಯವಾಗಿರುವ ಆವರ್ತಕ ಘಟನೆಗಳ ಆವೃತಿಯನ್ನು ಕುರಿತು ವಿಚಾರ ಮಾಡಿದ್ದಾನೆ, ಮತ್ತೆ ಮತ್ತೆ ಸಮಾಜವು ಇತರ ಸರ್ಕಾರ ಬಗೆಗಳ ಮೂಲಕ ಹಾದುಬಂದು ಪುನಃ ರಾಜಪ್ರಭುತ್ವ ರಚನೆಗೆ ಹಿಂತಿರುಗುತ್ತದೆ ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾನೆ. ಪಾಲಿಬಿಯಸ್‌ನಿಗೂ ಕೂಡ ಇತಿಹಾಸದ ಈ ತೆರನಾದ ನಿತ್ಯವಾಗಿರುವ ಆವರ್ತಗಳಲ್ಲಿ ನಂಬಿಕೆಯಿದ್ದಿತು. ಈ ಆವರ್ತ ಭಾವನೆಯ ಸೊಬಗು ಅರಿಸ್ಟಾಟಲ್‌ನನ್ನು ಆಕರ್ಷಿಸಿತು. ಅವನ ಪ್ರಕಾರ, ಇತಿಹಾಸವು ಗುರಿಯನ್ನು ಹೊಂದಿರಲಾರದು, ಕಾರಣ ಗುರಿ ಎಂದರೆ ನಿಲುಗಡೆ ಎಂದರ್ಥವಾಗುತ್ತದೆಯೇ ಹೊರತು ಮುಂಬರಿವು ಅಥವಾ ಚಲನೆ ಎಂದಾಗುವುದಿಲ್ಲ. ಆದ್ದರಿಂದ ಇದು ಒಂದು ಕೊನೆಗೆ ಅಥವಾ ಮುಕ್ತಾಯಕ್ಕೆ ಬರಲಾರದು. ಹೀಗೆ ಗ್ರೀಕ್ ವಿಚಾರಧಾರೆಯು ಮುಖ್ಯವಾಗಿ ತರ್ಕಬದ್ಧವಾಗಿದ್ದಿತೇ ಹೊರತು ಅಲೌಕಿಕವಾಗಿರಲಿಲ್ಲ. ಅವರು ಘಟನೆಗಳ ಗತಿಯನ್ನು ನಿರ್ಧರಿಸುವುದರಲ್ಲಿ ಆರ್ಥಿಕ, ಭೌತಿಕ, ಸಾಮಾಜಿಕ ಹಾಗೂ ಪರಿಸರದ ಅಂಶಗಳ ಬೆಲೆಯನ್ನು ಅರ್ಥಮಾಡಿಕೊಂಡಿದ್ದರು. ಅವರು ನಿದರ್ಶನಗಳ ಮೂಲಕ ದರ್ಶನವನ್ನು ಕಲಿಸುವುದೇ ಇತಿಹಾಸ ಎಂಬುದಾಗಿ ಎಣಿಸಿದ್ದರು.

ಪ್ರಾಚೀನ ಭಾರತದ ವಿಚಾರಧಾರೆಯ ಕಾರ್ಯಾತ್ಮಕ ಭಾವರೂಪಗಳು ಬದಲಾಗುವ ಅಸ್ತಿತ್ವ, ಅದರ ವಿಭಿನ್ನ ಬಾಹ್ಯರೂಪ ಹಾಗೂ ಅಭಿವ್ಯಕ್ತಿಗಳ ಭಾವನೆಯ ಮೇಲೆ ಆಧಾರಿತವಾಗಿದ್ದುವು. ಪುರಾಣಗಳಲ್ಲಿ ಸೃಷ್ಟಿ ಹಾಗೂ ಲಯ ಎಂಬ ಆವರ್ತಕ ಕಲ್ಪನೆಯ ವಿವರಣೆಯನ್ನು ನೋಡಬಹುದಾದರೂ ಅದು ಕ್ರೈಸ್ತರಂತೆ ವಿಪರೀತವಾಗಿ ದೈವಸಂಕಲ್ಪವೇ ನಿರ್ಧಾರಕ ಅಂಶ ಎಂಬುದನ್ನು ಹಾಗೂ ಅತೀಂದ್ರಿಯ ತತ್ತ್ವವನ್ನು ಪೂರ್ಣವಾಗಿ ನಂಬುವ ಮಟ್ಟಕ್ಕೆ ಹೋಗಿಲ್ಲ. ಹಿಂದೂಗಳ ಪ್ರಕಾರ, ಐತಿಹಾಸಿಕ ಪ್ರಕ್ರಿಯೆಯ ಸಾಂಪ್ರದಾಯಿಕ ವಿಭಾಗವನ್ನು ಕೃತ, ತ್ರೇತ, ದ್ವಾಪರ ಮತ್ತು ಕಲಿ ಎಂಬ ನಾಲ್ಕು ಯುಗಗಳಾಗಿ ವರ್ಗೀಕರಿಸಲಾಗಿದೆ. ಕೃತಯುಗದಲ್ಲಿ ಧರ್ಮವು ಪರಮ ಪ್ರಧಾನವಾಗಿದ್ದಿತು. ತ್ರೇತಾಯುಗದಲ್ಲಿ ಅದು ಇಳಿಮುಖವಾಯಿತು. ದ್ವಾಪರಯುಗದಲ್ಲಿ ಅದು ಅಪರೂಪವಾಯಿತು ಮತ್ತು ಕಲಿಯುಗದಲ್ಲಿ ಅದು ಕಣ್ಮರೆಯಾಗಿ ಹೋಗುತ್ತದೆ.

ಚೀನಾ ದೇಶದವರ ಅಭಿಪ್ರಾಯದಲ್ಲಿ ಐತಿಹಾಸಿಕ ಬದಲಾವಣೆ ಎಂದರೆ ವ್ಯವಸ್ಥೆ ಹಾಗೂ ಅವ್ಯವಸ್ಥೆಗಳು ಒಂದಾದ ಮೇಲೊಂದು ವರಸೆಯಾಗಿ ಬರುವ ಕ್ರಮ. ಅಂದರೆ ಅವರಿಗೂ ಸಹ ಆವರ್ತ ಸಿದ್ಧಾಂತದಲ್ಲಿ ನಂಬಿಕೆ ಇದ್ದಿತು. ಕಪ್ಪು, ಬಿಳಿ ಹಾಗೂ ಕೆಂಪು ಎಂಬ ಮೂರು ಅನುಕ್ರಮದ ಆವೃತ್ತಿಯು ಮುಖ್ಯವಾದುದು. ಮೊದಲನೆಯದು ಸರಳತೆ, ಸೂಕ್ಷ್ಮಾಭಿರುಚಿ ಹಾಗೂ ಸಂಸ್ಕೃತಿಯ ಯುಗ. ಇಂದಿನ ಯುಗವು ಅವನತಿ ಕಾಲ ಎಂಬ ಭಾವನೆಯು ಅವರ ದರ್ಶನಕ್ಕೆ ಆಧಾರವಾಗಿದ್ದಿತು. ಈ ನಂಬಿಕೆ ಕನ್‌ಫ್ಯೂಶಿಯಸ್, ಟಾವೊ ಹಾಗೂ ಚೀನಿ ಬೌದ್ಧಮತ ಪದ್ಧತಿಗಳ ಮೂಲೆಗಲ್ಲಾಗಿದ್ದಿತು. ಆದರೆ ಕಾಲ ಬದಲಾದಂತೆ ಜನಸಂಖ್ಯೆಯು ದ್ವಿಗುಣವಾಗಿ ಜೀವನಾವಶ್ಯಕ ವಸ್ತುಗಳ ಬೇಡಿಕೆ ಅತೀವ ಹೆಚ್ಚಿ ಭಿನ್ನಾಭಿಪ್ರಾಯ, ವ್ಯಾಜ್ಯ ಮತ್ತು ಜಗಳಗಳು ತಲೆದೋರಿದುವು. ಅವನ ಅಭಿಪ್ರಾಯದಲ್ಲಿ ವ್ಯಕ್ತಿಯು ಗತಕಾಲದ ಬಂದಿಯಾಗಬಾರದು. ಭವ್ಯ ಭವಿಷ್ಯವನ್ನು ಸಾಧಿಸಲು ಹೊರಟ ಯಾತ್ರಿಕನಾಗಬೇಕು. ಈ ಅಂಶವನ್ನು ಸ್ಪಷ್ಟಪಡಿಸಲು ಒಂದು ಕಥೆಯನ್ನು ನಿದರ್ಶನವಾಗಿ ಬಳಸಲಾಯಿತು. ಇದರಿಂದ ಹ್ಯಾನನು ಗತಕಾಲದ ವಿಧಾನಗಳನ್ನು ಬಳಸಿ ಇಂದಿನ ಕಾದು ನಿಂತ ವ್ಯಕ್ತಿ ಮಾಡಿದ ಕಾರ್ಯವನ್ನೇ ಮಾಡುತ್ತಾರೆ ಎಂಬುದಾಗಿ ಅಭಿಪ್ರಾಯ ಪಟ್ಟನು. ಹೀಗೆ ಚೀನಾ ದೇಶದ ಪಂಡಿತರು ಕಾಲದ ಪ್ರಕಾರ ಕಾರ್ಯಕಲಾಪಗಳು ಜರಗುತ್ತವೆ ಮತ್ತು ಅವುಗಳಿಗೆ ಅನುಗುಣವಾಗಿ ಸಿದ್ಧತೆಗಳನ್ನು ಮಾಡಲಾಗುತ್ತದೆ ಎಂಬುದಾಗಿ ಅಭಿಪ್ರಾಯ ಪಟ್ಟರು. ಅವರಿಗೆ ಪ್ರಗತಿ ದರ್ಶನದಲ್ಲೂ ನಂಬಿಕೆ ಇದ್ದಿತು. ಅವರ ಪ್ರಕಾರ, ಜಗತ್ತು ಅವ್ಯವಸ್ಥಿತ ಕಾಲ, ಅಲ್ಪಶಾಂತಿಯ ಕಾಲ ಮತ್ತು ಮಹಾ ಐಕ್ಯತೆಯ ಕಾಲ ಎಂಬ ಮೂರು ಕಾಲಗಳ ಹಂತಗಳ ಮೂಲಕ ಹಾದು ಹೋಗುತ್ತದೆ.

ಇಸ್ಲಾಂ ವಿಚಾರಧಾರೆಯಲ್ಲಿ ಕಂಡುಬರುವ ಪರಿವರ್ತನೆಯ ಭಾವನೆಯು ವಿಭಿನ್ನವಾದುದು. ಇಸ್ಲಾಂ ಪ್ರಕಾರ, ಜಗತ್ತು ಒಂದು ಗವಿ. ಅಲ್ಲಿ ಬೆಳಕಿಗೂ, ಕತ್ತಲೆಗೂ, ಒಳ್ಳೆಯದಕ್ಕೂ ಹಾಗೂ ಕೆಟ್ಟದ್ದಕ್ಕೂ ನಡುವೆ ನಿರಂತರವಾಗಿ ಕಾದಾಟಗಳು ನಡೆಯುತ್ತಿರುತ್ತವೆ. ಈ ಜಗತ್ತಿನ ಗವಿಯಲ್ಲಿ ಕಣ್ಣಿಗೆ ಗೋಚರವಾಗುವ ಎಲ್ಲಾ ಕಾರ್ಯಕಲಾಪಗಳಿಗೆ ಒಂದೇ ಒಂದು ಕಾರಣವಿರುತ್ತದೆ. ಅದೇ ದೇವರು. ಈ ಮೂಲ ಭಾವನೆಗಳನ್ನು ಆಧಾರವಾಗಿಟ್ಟುಕೊಂಡು ಇಸ್ಲಾಂ ಜಗತ್ತಿನ ಆರಂಭ, ಬೆಳವಣಿಗೆ ಹಾಗೂ ಅಂತ್ಯವನ್ನು ಭಗವಂತನ ಲೀಲೆ ಎಂಬುದಾಗಿ ಭಾವಿಸುತ್ತದೆ. ಖುರಾನಿನಲ್ಲಿ ಕಾಲದ ಆರಂಭ, ಜಗತ್ತು, ಸ್ತ್ರೀಪುರುಷ, ವರ್ಗ ಇತ್ಯಾದಿಗಳ ಸೃಷ್ಟಿ, ಪತನದ ಕಾಲ, ಪ್ರವಾದಿಗಳ ಜನನ, ಮತಧರ್ಮಗಳ ಉದಯ ಇತ್ಯಾದಿಗಳನ್ನು ಭಗವತ್ಸಂಕಲ್ಪದಿಂದ

ಉತ್ಪತ್ತಿಯಾದ ವಿಶಿಷ್ಟ ಘಟನೆಗಳೆಂಬುದಾಗಿ ಎಣಿಸಲಾಗಿದೆ. ಒಬ್ಬ ದಾರ್ಶನಿಕರು ಹೇಳಿರುವಂತೆ ಆಳುವ ಸಂತತಿಗಳು ಫಲಗಳಿರುವಂತೆ ಆರಂಭದಲ್ಲಿ ಅವುಗಳು ತಿನ್ನಲು (ಅಂದರೆ, ಸದೆ ಬಡಿಸಲು) ಸಾಧ್ಯವಾಗುವುದಷ್ಟರ ಮಟಟಿಗೆ ಗಟ್ಟಿಯಾಗಿರುತ್ತದೆ. ಅವುಗಳು ಪಕ್ವತೆಯನ್ನು ಪಡೆದಂತೆ ಮಾಧ್ಯಮ ಗುಣದವುಗಳಾಗುತ್ತವೆ. ಅವುಗಳು ಪೂರ್ಣವಾಗಿ ಪಕ್ವವಾದಾಗ ರುಚಿಯಾಗಿರುತ್ತವೆ. ಆದರೆ ಅನಂತರ ಅವುಗಳ ಕ್ಷೀಣಿಸುತ್ತವೆ ಮತ್ತು ಪರಿವರ್ತನೆಗೆ ಒಳಗಾಗಬೇಕಾಗುತ್ತದೆ. ಸರಳತೆ ಹಾಗೂ ಕಷ್ಟಸಹಿಷ್ಣುವಾದ ದೇಹದಾರ್ಢ್ಯ ಹಾಗೂ ದೃಢತೆಯು ಪ್ರಗತಿಯ ಸಂಕೇತಗಳಾದರೆ ಸುಖಭೋಗ ಹಾಗೂ ಕೋಮಲತೆ ಅವನತಿಯ ಚಿಹ್ನೆಗಳಾಗುತ್ತವೆ.

ಈ ಇಸ್ಲಾಂ ಇತಿಹಾಸ ದಾರ್ಶನಿಕರಲ್ಲಿ ಅತಿ ಮುಖ್ಯನಾಗಿದ್ದವನು ಇಬನ್–ಎ–ಕಾಲ್ಡನ್ ಅಥವಾ ಅಬು–ಸೈಯದ್ ಅಬ್ದುಲ್ ರಹಮಾನ್–ಇಬನ್–ಕಾಲ್ಡನ್ ಅವನ ಬರಹಗಳಲ್ಲಿ ಆವರ್ತಕ ಬದಲಾವಣೆಗಳ ದಾಖಲೆಯಾಗಿ ಮಾಡಲಾದ ಇತಿಹಾಸದ ಅಧ್ಯಯನದ ಪರಾಕಾಷ್ಠೆಯನ್ನು ನೋಡಬಹುದು. ಒಂದು ಸಮಾಜವು ಗ್ರಾಮ ಹಾಗೂ ನಗರಗಳೆಂಬ ಎರಡು ಹಂತಗಳ ಮೂಲಕ ಹಾದು ಹೋಗುತ್ತದೆ. ಪ್ರೌಢತೆಯು ತಾರುಣ್ಯವನ್ನು ಅನುಸರಿಸಿ ಬರುವ ರೀತಿಯಲ್ಲಿ ಎರಡನೆಯ ಹಂತವು ಮೊದಲನೆಯದನ್ನು ಅನಿವಾರ್ಯವಾಗಿ ಹಿಂಬಾಲಿಸಿ ಬರುತ್ತದೆ. ಪ್ರಥಮ ಹಂತದಿಂದ ದ್ವಿತೀಯ ಹಂತಕ್ಕೆ ಬಂದಾಗ ಕಲೆ, ಕಸುಬು, ವಿಜ್ಞಾನ, ಉತ್ಪಾದನಾ ಪ್ರಮಾಣ, ಜೀವನಮಟ್ಟ, ಜನರ ಸಭ್ಯತೆ, ಸೌಜನ್ಯ, ನಯವಿನಯ ಹಾಗೂ ಸಂಸ್ಕೃತಿಯ ವಿಚಾರದಲ್ಲಿ ಅದ್ಭುತ ಪ್ರಗತಿ ಕಂಡುಬಂದರೂ ಆಂತರಿಕ ಬಲ ಹಾಗೂ ಸುಸಂಬದ್ಧತೆ ಕುಗ್ಗಿಹೋಗುತ್ತದೆ. ಈ ಕೋಮಲತೆ ಇದ್ದರೆ ಸತ್ಯ, ಕಸುವು ಹಾಗೂ ಪೌರುಷಕ್ಕೆ ಸಂಕೇತವಾಗಿರುವ ದೃಢತೆ ಇರುವುದಿಲ್ಲ. ನಗರದ ಜಡವಾದ ಹಂತದಲ್ಲಿ ಆಳುವ ಪಕ್ಷವು ಅಧಿಕಾರ ಲಾಲಸೆಯನ್ನು ಬೆಳೆಸಿಕೊಂಡು ಎಲ್ಲಾ ಅಧಿಕಾರ ಹಾಗೂ ಸಂಪತ್ತಿನ ಮೇಲೆ ಏಕಸ್ವಾಮ್ಯವನ್ನು ಸ್ಥಾಪಿಸಿಕೊಂಡು ತನ್ನ ಅಸ್ತಿತ್ವ ಉಳಿಯಬೇಕಾದರೆ ಜನಸಾಮಾನ್ಯರ ಬೆಂಬಲ ಹಾಗೂ ಸಹಾಯ ಅಗತ್ಯ ಎನ್ನುವುದನ್ನು ಮರೆತು ಅವರನ್ನು ಪ್ರತ್ಯೇಕಿಸಿಟ್ಟು ಶೋಷಣೆಗೆ ಒಳಪಡಿಸುತ್ತದೆ. ಈ ಕಾರಣ ರಾಜ್ಯದಲ್ಲಿ ಪರಸ್ಪರ ಅವಿಶ್ವಾಸ, ಕಾದಾಟ ಹಾಗೂ ದಂಗೆ–ದೊಂಬಿಗಳು ಹೆಚ್ಚಾಗುತ್ತವೆ. ಆಗ ಆಳುವ ಪಕ್ಷವು ಹೊರಗಿನಿಂದ ಸೈನಿಕ ಸಹಾಯವನ್ನು ಪಡೆಯಬೇಕಾಗುತ್ತದೆ. ಅದಕ್ಕೆ ಅಪಾರ ವೆಚ್ಚ ತಗಲುತ್ತದೆ. ಅದೂ ಅಲ್ಲದೆ ಆಳುವವರಿಗೆ ವಿಲಾಸಭೋಗಗಳಲ್ಲಿ ಇರುವ ಅತ್ಯಾಸಕ್ತಿಯ ಕಾರಣ ರಾಜ್ಯದ ಆರ್ಥಿಕ ಸಂಪತ್ತು ಕ್ಷಯಿಸುತ್ತದೆ. ಅದರೊಂದಿಗೆ ಅದರ ಸತ್ತ್ವವೂ ಕೂಡ ಕುಂದಿಹೋಗುತ್ತದೆ. ಆಡಳಿತವನ್ನು ನಡೆಸುವುದಕ್ಕೆ ಅವಶ್ಯಕವಾದ ಧನವನ್ನು ಪಡೆಯುವುದಕ್ಕಾಗಿ ಅವರು ಹೆಚ್ಚು ತೆರಿಗೆಳನ್ನು ಹೇರಿ ಜನರ ಕಷ್ಟಸಂಕಟಗಳನ್ನು ಹೆಚ್ಚಿಸುತ್ತಾರೆ. ಆವರ್ತಕವು ಪುನಃ ಹೊಸದಾಗಿ ಆರಂಭವಾಗುತ್ತದೆ. ಖಲ್ಡೂನನು ಈ ಆವರ್ತಕ ಸ್ಥಿತಿಗತಿಯಲ್ಲಿ ಯುದ್ಧ, ಆಕ್ರಮಣ ಹಾಗೂ ಸಾಹಸಗಳ ಪ್ರಥಮ ಹಂತ, ನೆಲೆಯಾಗಿ ನಿಲ್ಲುವ ಕ್ರಮ ಹಾಗೂ ನಗರೀಕರಣಗಳ ದ್ವಿತೀಯ ಹಂತ ಮತ್ತು ಅವನತಿ ಹಾಗೂ ನಾಶದ ತೃತೀಯ ಹಂತ ಎಂಬ ಮೂರು ಹಂತಗಳನ್ನು ನೋಡಬಹುದು ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾನೆ.

### 4.4.2.3 ಆಧುನಿಕ ಯುಗ

ಪುನರುಜ್ಜೀವನ ಹಾಗೂ ಮತಸುಧಾರಣಾ ಚಳವಳಿಯ ಕಾಲ ಪದಾರ್ಪಣೆ ಮಾಡಿದಂತೆ ಮಧ್ಯಯುಗಗಳು ಕೊನೆಗೊಂಡು ಜ್ಞಾನೋದಯದ ಶಕೆಯ ಅರುಣೋದಯವಾಯಿತು. ಇತಿಹಾಸವನ್ನು ಮಾನವ ಪ್ರಗತಿಯತ್ತ ಕೊಂಡೊಯ್ಯುವ ಏಕರೇಖಾತ್ಮಕ ಚಲನೆ ಎಂಬುದಾಗಿ ಭಾವಿಸಲಾಯಿತು. ಈ ಯುಗದಲ್ಲೂ ಸಹ ಆವರ್ತ ಸಿದ್ಧಾಂತಗಳನ್ನು ನಿರೂಪಿಸಲಾಯಿತು. ಇಟಲಿಯ ಪ್ರಸಿದ್ಧ ಚಿಂತಕನಾಗಿದ್ದ ವಿಕೊ ಇತಿಹಾಸದ ಆವರ್ತದಲ್ಲಿ (1) ಸಾಮಾಜಿಕ ವಿಚಾರಧಾರೆಯಲ್ಲಿ ದೇವತೆಗಳು ಹಾಗೂ ಪುರಾಣಕಥೆಗಳು ಪ್ರಧಾನವಾಗಿದ್ದ ದೇವರುಗಳ ಯುಗ (2) ವೀರರು ಹಾಗೂ ಅವನ ಪ್ರಾಸಂಗಿಕ ಕಥೆಗಳು ಪ್ರಮುಖವಾಗಿದ್ದ ವೀರರ ಯುಗ (3) ಪ್ರಾಚೀನ ಲ್ಯಾಟಿನ್ ಹಾಗೂ ಗ್ರೀಕ್ ಸಂಸ್ಕೃತಿಯ ಅರುಣೋದಯವಾದ ಮತ್ತು ಕಲ್ಪನೆಗೆ ಬದಲು ಪರ್ಯಾಲೋಚನೆ, ಪದ್ಯಕ್ಕೆ ಬದಲು ಗದ್ಯ, ಕೃಷಿಗೆ ಬದಲು ಕೈಗಾರಿಕೆ, ಯುದ್ಧಕ್ಕೆ ಬದಲು ಶಾಂತಿ ಮುಖ್ಯವಾಗಿದ್ದ ಮಾನವರ ಯುಗ (4) ಚಿಂತನ ಹಾಗೂ ದರ್ಶನಗಳು ಕ್ಲಿಷ್ಟ ಹಾಗೂ ಕೃತಕ ಭೇದ, ಸಾಪೇಕ್ಷ ಮೌಲ್ಯ ಹಾಗೂ ಅನುಪಯುಕ್ತ ಬಾಹ್ಯಾಚರಣೆಗಳೆಂಬ ಜಗುವು ಪ್ರದೇಶದಲ್ಲಿ ಹೂತು ಹೋಗುವಂತೆ ಮಾಡಿದ ನವೀನ ಅಸಂಸ್ಕಾರಿಗಳ ಯುಗ ಎಂಬ ನಾಲ್ಕು ಕಾಲಗಳನ್ನು ನೋಡಬಹುದು ಎಂಬುದಾಗಿ ಹೇಳಿದ್ದಾನೆ. ಮೊದಲು ಒಂದು ರಾಷ್ಟ್ರದ ಇತಿಹಾಸದ ಮಾರ್ಗದರ್ಶಕ ತತ್ತ್ವ ಪಶುಬಲ, ನಂತರ ಧೈರ್ಯ ಅಥವಾ ವೀರೋಚಿತ ಬಲ, ತದನಂತರ ಉಜ್ಜವಲ ಸ್ವಂತಿಕೆ, ಅದಾದನಂತರ ರಚನಾತ್ಮಕ ಪರ್ಯಾಲೋಚನೆ ಮತ್ತು ಕೊನೆಗೆ ಸೃಷ್ಟಿಸಲಾಗಿರುವುದನ್ನೆಲ್ಲಾ ನಾಶಪಡಿಸುವಂತಹ ದುಂದುವೆಚ್ಚ ಮತ್ತು ಪೋಲು ಮಾಡಿ ಸಮೃದ್ಧಿಯನ್ನು ಅಳಿಸಿಹಾಕುವ ಪ್ರವೃತ್ತಿ ಎಂಬ ಸ್ಪಂದನಗಳನ್ನು ಐತಿಹಾಸಿಕ ಸ್ವರ ತರಂಗದಲ್ಲಿ ಕೇಳಬಹುದು. ಜನರ ಸ್ವಭಾವ ಮೊದಲು ಒರಟಾಗಿರುತ್ತದೆ. ನಂತರ ನಿಷ್ಠುರವಾಗಿರುತ್ತದೆ. ತದನಂತರ ಕರುಣೆ ಹಾಗೂ ಅನುಕಂಪಯುಕ್ತವಾಗಿರುತ್ತದೆ. ಅದಾದನಂತರ ಸೂಕ್ಷ್ಮ ಹಾಗೂ ಕೋಮಲವಾಗಿರುತ್ತದೆ. ಕೊನೆಗೆ ವಿಷಯಲಂಪಟ–ತನದಿಂದ ಕೂಡಿರುತ್ತದೆ. ಅದರ ಪ್ರಕಾರ, ಮೊದಲು ಮಾನವರಿಗೆ ಅವಶ್ಯಕತೆಯ ಅನುಭವವಾಗುತ್ತದೆ; ನಂತರ ಅವರು ಐಹಿಕ ಪ್ರಯೋಜನಗಳನ್ನು ಬಯಸಿ, ಅವುಗಳ ನಿರೀಕ್ಷಣೆಯಲ್ಲಿ ಇರುತ್ತಾರೆ. ಅವುಗಳನ್ನು ಪಡೆಯಲು ಪ್ರಯತ್ನಗಳನ್ನು ನಡೆಸುತ್ತಾರೆ; ಹರ್ಡರ್ ಇತಿಹಾಸವನ್ನು ಜೀವಬಗೆಗಳ ಹುಟ್ಟು, ಬೆಳವಣಿಗೆ, ಅವನತಿ ಹಾಗೂ ನಾಶ ಎಂಬ ಆವರ್ತಕ ಅನುಕ್ರಮಕ್ಕೆ ಹೋಲಿಸಿದ್ದಾನೆ. ಸಮಗ್ರ ವಿಶ್ವ, ಸಮಾಜ ಹಾಗೂ ಇತಿಹಾಗಳು ಜೈವಿಕ ತತ್ತ್ವಗಳಿಗನುಸಾರವಾಗಿ ವ್ಯವಸ್ಥಿತಗೊಂಡಿವೆ. ಈ ಆವರ್ತದಲ್ಲಿ ಪದ್ಯಕಾಲ, ಗದ್ಯಕಾಲ ಹಾಗೂ ದರ್ಶನಕಾಲ ಎಂಬ ಮೂರು ಯುಗಗಳನ್ನು ಕಾಣಬಹುದು. ಜರ್ಮನಿಯ ಗಯಟೆಯೂ ಸಹ ಆವರ್ತಕ ಚಲನವಿನ್ಯಾಸದ ಪರಿಭಾಷೆಯನ್ನೇ ಬಳಸಿದ್ದಾನೆ. ಫಿಚೆಯು ಭಾವನೆಗಳನ್ನು ಸಮರ್ಥಿಸಬೇಕಾದ ವಿಷಯ, ಅದರ ವಿರೋಧ ಮತ್ತು ಸಂಯೋಜನೆ ಎಂಬ ಮೂರು ಭಾಗಗಳಾಗಿ ವಿಶ್ಲೇಷಿಸಿ, ಅದನ್ನು ಇತಿಹಾಸಕ್ಕೆ ಅನ್ವಯಿಸಿ, ಹೇಗೆ ನಾಗರಿಕತೆಯ ಅರುಣೋದಯದಲ್ಲಿ ಇದ್ದ ಸ್ವಾಭಾವಿಕ ಸ್ವಾತಂತ್ರ್ಯವು ಅದಕ್ಕೆ ಪ್ರತಿಯಾಗಿರುವ ರಾಜಕೀಯ ದಾಸ್ಯವು ತಲೆದೋರುವಂತೆ ಮಾಡುತ್ತದೆ; ಬದಲಾಗಿ ಅದು ಮಾನವ ವ್ಯಕ್ತಿಗೆ ಪೌರಸ್ವಾತಂತ್ರ್ಯವನ್ನು ತಂದುಕೊಟ್ಟ ಕ್ರಾಂತಿ–ಯನ್ನು ಉಂಟುಮಾಡುತ್ತದೆ; ಇದು ಕಲಾತ್ಮಕ ಸ್ವಾತಂತ್ರ್ಯ ಎಂಬುದಾಗಿ ಕರೆಯಲಾದ ನೂತನ ಸಂಯೋಜನೆಯು ತಲೆದೋರುವಂತೆ ಮಾಡುವುದಕ್ಕೆ ಕಾರಣವಾಗುತ್ತದೆ ಎಂಬುದಾಗಿ ವಿವರಿಸಿದ್ದಾನೆ.

ಐತಿಹಾಸಿಕ ಪ್ರಕ್ರಿಯೆಗಳ ಅತ್ಯಂತ ಸ್ಪಷ್ಟವಾದ ಆಧ್ಯಾತ್ಮಿಕ ವೃತ್ತಾಂತವನ್ನು ರೂಪಿಸಿದ ಕೀರ್ತಿ ಹೆಗಲ್‌ಗೆ ಸಲ್ಲಬೇಕು. ಅವನು ಪರತತ್ತ್ವದ ವಾಸ್ತವಿಕ ವರ್ಣನೆಯೇ ಇತಿಹಾಸದ ವಸ್ತು ಮತ್ತು ಪರಿಮಾಣಾತ್ಮಕ ಹಾಗೂ ಗುಣಾತ್ಮಕವಾಗಿ ಆದ ಮಾನವ ಸ್ವಾತಂತ್ರ್ಯದ ಬೆಳವಣಿಗೆಯೇ ಜಗತ್ತಿನ ಇತಿಹಾಸದ ಅಧ್ಯಯನ–ವಿಷಯ ಎಂಬುದಾಗಿ ಘೋಷಿಸಿದನು. ಸ್ವಾತಂತ್ರ್ಯದ ಗುರಿಯನ್ನು ಸೇರುವುದಕ್ಕಾಗಿ ಕೈಗೊಂಡ ಪ್ರಯಾಣದಲ್ಲಿ ಪ್ರತಿಕಾಲವೂ ಒಂದು ಹೆಜ್ಜೆಯಾಗಿರುತ್ತದೆ. ಆದರೆ ಆದರ್ಶವೊಂದೇ ಘಟನೆಗಳ ಗತಿಯನ್ನು ನಿರ್ಧರಿಸುತ್ತದೆ ಎಂಬುದಾಗಿ ಸಾಧಿಸುವುದು ಸಾಧ್ಯವಿಲ್ಲ. ಕಾರಣ ರಷ್ಯಾ ಹಾಗೂ ಚೀನಾ ದೇಶದವರು ಸಮತಾವಾದದ ಆದರ್ಶವನ್ನೇ ಒಪ್ಪಿಕೊಂಡಿದ್ದರೂ ಅವರ ನಡುವೆ ವೈರವಿದೆ. ಇಸ್ಲಾಂ ಧರ್ಮವು ತನ್ನ ಅನುಯಾಯಿಗಳನ್ನೆಲ್ಲಾ ಒಟ್ಟಾಗಿ ಸೇರಿಸಿದ್ದರೂ, ಬಾಂಗ್ಲಾದೇಶ ಹಾಗೂ ಪಾಕಿಸ್ಥಾನಗಳ ನಡುವೆ ನಡೆದ ಭಯಂಕರ ಕಾದಾಟವನ್ನು ತಪ್ಪಿಸುವುದಕ್ಕೆ ಆಗಲಿಲ್ಲ. ಜರ್ಮನಿಯ ರಾಂಕೆ ಮತ್ತು ಫ್ರಾನ್ಸ್ ದೇಶದ ಕಸನ್ ಮುಂತಾದ ಹೆಗಲನ ಶಿಷ್ಯರೂ ಸಹ ಪ್ರತಿ ಐತಿಹಾಸಿಕ ವಾಸ್ತವಾಂಶವು ಒಂದು ನಿರ್ಣಯಿಸಬಹುದಾದ ಹಾಗೂ ವ್ಯಾಪಕವಾದ ಯೋಜನೆಗೆ ಅನುಗುಣ–ವಾಗಿರುತ್ತದೆ. ಪ್ರತಿ ಸಂಸ್ಥೆಯ ಸ್ಥಾಪನೆಗೆ ಕಾರಣವನ್ನು ಆ ಸಂಸ್ಥೆಯು ಈಡೇರಿಸಬೇಕಾಗಿರುವ ಸಾಮಾಜಿಕ ಅವಶ್ಯಕತೆಯಲ್ಲಿ ಅರಸಬೇಕು ಎಂಬುದಾಗಿ ಅಭಿಪ್ರಾಯ ಪಟ್ಟರು.

18ನೆಯ ಶತಮಾದನಲ್ಲಿ ಭವನಾಸ್ವಾತಂತ್ರ್ಯ ಪಂಥದವರು ಪ್ರಧಾನ ಪಾತ್ರಧಾರಿಗಳಾದರು. ಕಾರ್ಲೈಲ್ ಇತಿಹಾಸವನ್ನು ಮಹಾಪುರುಷರು ಎಂಬ ಸುಪ್ರಸಿದ್ಧ ಸಿದ್ಧಾಂತವನ್ನು ಮಂಡಿಸಿದನು. ಅವನ ಪ್ರಕಾರ, ಇತಿಹಾಸವು ಮಹಾಪುರುಷರ ಜೀವನ ಚರಿತ್ರೆಯಲ್ಲದೆ ಮತ್ತೇನಲ್ಲ. ಅವನು ವೀರ ಮತ್ತು ವೀರರಾರಾಧನೆ ಎಂಬ ಭಾವನೆಯನ್ನು ಬೆಳೆಸಿದನು ಹಾಗೂ ವ್ಯಕ್ತಿಗಳ ಪಾತ್ರಗಳನ್ನು ಉತ್ಪ್ರೇಕ್ಷಿಸಿ ವಿವರಿಸಿದನು. ಈ ಸಿದ್ಧಾಂತದ ಕಾರಣ ವಿಚಾರವಾದವನ್ನು ನಿರ್ಲಕ್ಷಿಸಿ ಒಂದು ಬದಿಗೆ ತಳ್ಳಿಹಾಕಲಾಯಿತು, ಭಾವಪರವಶತೆಗೆ ಹೆಚ್ಚಿನ ಪ್ರಾಮುಖ್ಯವನ್ನು ಕೊಡಲಾಯಿತು. ಪ್ರಾಕೃತ ಸ್ಥಿತಿಯಲ್ಲಿ ಮಾನವನು ಪರಮಾನಂದದ ಅವಸ್ಥೆಯಲ್ಲಿದ್ದನು. ಅವನು ಸ್ವತಂತ್ರವಾಗಿ ಹುಟ್ಟಿದರೂ, ಎಲ್ಲೆಡೆ ಸಂಕೋಲೆಗಳಿಂದ ಬಂಧಿಸಲ್ಪಟ್ಟಿದ್ದಾನೆ ಎಂಬ ರೂಸೋವಿನ ಹೇಳಿಕೆಗಳು ಶುದ್ಧವಾದ ಭಾವನಾ ಸ್ವಾತಂತ್ರ್ಯವಾದ–ವಾಗಿವೆ. ಐತಿಹಾಸಿಕ ಸಾಹಸ ಕಾದಂಬರಿಗಳು ಅಥವಾ ಅದ್ಭುತ ಕತೆ ಹಾಗೂ ರಂಜನ ಕಾವ್ಯಗಳ ಮಾಲೆಗಳು ತಲೆದೋರಿದವು ಮತ್ತು ಇತಿಹಾಸವನ್ನು ಪದ್ಯಾತ್ಮಕ ವಸ್ತು ಹಾಗೂ ಕಲ್ಪನೆಯೇ ಪ್ರಧಾನವಾಗಿದ್ದ ಕಟ್ಟುಕಥೆಯ ಮಟ್ಟಕ್ಕೆ ಇಳಿಸಲಾಯಿತು; ವಿಮರ್ಶಾತ್ಮಕ ಪರ್ಯಾಲೋಚನೆ, ಸತ್ಯಾನ್ವೇಷಣೆ ಹಾಗೂ ವಸ್ತುನಿಷ್ಠತೆ ಎಲ್ಲವನ್ನೂ ಕಡೆಗಣಿಸಲಾಯಿತು; ಎಲ್ಲವನ್ನೂ ಆದರ್ಶ ರೀತಿಯಲ್ಲಿ ವಿವರಿಸುವ ಪ್ರವೃತ್ತಿಯನ್ನು ಪ್ರೋತ್ಸಾಹಿಸಲಾಯಿತು. ಇಲ್ಲಿ ರಸಭಾವ, ಭಾವೋದ್ರೇಕ ಮತ್ತು ಮನೋಭಾವಗಳೇ ಮುಖ್ಯ ಪಾತ್ರವನ್ನು ವಹಿಸಿದುವು. ಆದರೂ ಈ ಭಾವನಾಸ್ವಾತಂತ್ರ್ಯ ಪಂಥವು ಒಂದು ಮುಖ್ಯ ಕೊಡುಗೆಯನ್ನು ಕೊಟ್ಟಿತು. ಯೂರೋಪಿನಲ್ಲಿ ವಿದ್ವಾಂಸರು ಗ್ರೀಕ್ ಹಾಗೂ ರೋಮನ್ ಸಂಸ್ಕೃತಿಗಳ ಜೊತೆಗೆ ಚೀನಿ, ಭಾರತ, ಇಸ್ಲಾಂ ಮುಂತಾದ ಪೌರಸ್ತ್ಯ ಸಂಸ್ಕೃತಿಗಳ ಅಧ್ಯಯನದಲ್ಲೂ ಸಹ ಗಾಢಾಸಕ್ತಿಯನ್ನು ವಹಿಸಲಾರಂಭಿಸಿದರು. ಮತಧರ್ಮ, ದರ್ಶನ, ಕವಿತೆ, ಕಲೆ, ಕಾನೂನು, ನೀತಿ, ವಿಜ್ಞಾನ ಹಾಗೂ ಸಂಸ್ಕೃತಿ ಮುಂತಾದ ವಿಷಯಗಳನ್ನು ಒಳಗೊಳ್ಳುವಷ್ಟು ಇತಿಹಾಸದ ಕ್ಷೇತ್ರವು ಅತ್ಯಂತ ವ್ಯಾಪಕವಾಯಿತು. ರಾಜಕೀಯ, ರಾಜರು, ರಾಜಾಸ್ಥಾನ, ಯುದ್ಧ ಇತ್ಯಾದಿ ವಿಷಯಗಳಿಗೆ ಅಷ್ಟೇನೂ

ಪ್ರಾಮುಖ್ಯ-ವನ್ನು ಕೊಡಲಿಲ್ಲ. ಎಲ್ಲಾ ವಾಸ್ತವಾಂಶಗಳನ್ನು ಕುರಿತು ವಿಚಾರ ಮಾಡಿ, ಕ್ರಮವಾಗಿ ವ್ಯವಸ್ಥಿತಗೊಳಿಸಲಾಯಿತು. ಇದರಿಂದ ಇತಿಹಾಸದ ದೃಷ್ಟಿ ವ್ಯಾಪಕವಾಯಿತು.

19ನೆಯ ಶತಮಾನದಲ್ಲಿ ವಾಸ್ತವಿಕವಾದದ ಪ್ರವಾದಿಯಾಗಿದ್ದ ಕಾಂಪ್ಟನು ಒಂದು ವಿಷಯವನ್ನು ಐತಿಹಾಸಿಕವಾಗಿ ವೀಕ್ಷಿಸಿ ಅರಿತುಕೊಳ್ಳದಿದ್ದರೆ ಅದನ್ನು ದಾರ್ಶನಿಕವಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ ಎಂಬ ಭಾವನೆಯನ್ನು ಬೆಳಸಿ ಇತಿಹಾಸವನ್ನು ವಾಸ್ತವಿಕ ದರ್ಶನ ಎಂಬುದಾಗಿ ಕರೆದನು. ಇದು ಅಲೌಕಿಕತೆಗೆ ಸ್ಥಾನವನ್ನು ಕೊಡದ ವೈಜ್ಞಾನಿಕ ವಿಚಾರಕ್ಕೆ ಇನ್ನೊಂದು ಹೆಸರಾಗಿದ್ದಿತು. ಇತಿಹಾಸಕಾರರು ಕೇವಲ ವ್ಯಕ್ತಿ ಪ್ರತ್ಯೇಕಿಸಲ್ಪಟ್ಟ ಸಂಗತಿ ಮತ್ತು ಅಸಮಾನ ಘಟನೆಗಳ ಅಧ್ಯಯನದಲ್ಲಿ ಮಗ್ನರಾಗಿ ಸಾಮಾನ್ಯ ಜನರು ಸಾಧಾರಣ ವಿಷಯ ಮುಂತಾದ ಚರಿತ್ರೆಯ ಜೀವಾಳವನ್ನು ನಿರ್ಲಕ್ಷಿಸಿದ್ದರಿಂದ ಅವರಿಗೆ ಪ್ರಾಗುಕ್ತಿಗಳನ್ನು ಹೇಳುವುದು ಸಾಧ್ಯವಾಗಲಿಲ್ಲ. ಈ ವಾಸ್ತವಿಕವಾದವು ಇತಿಹಾಸದ ಬಗ್ಗೆ ಕಾರ್ಲ್‌ಮಾರ್ಕ್ಸ್‌ನು ಬೆಳೆಸಿದ ಭೌತಿಕ ಕಲ್ಪನೆಗೆ ಮೂಲ ಕಾರಣವಾಯಿತು. ಸಮಾಜದ ವಿಕಾಸವು ಅದರ ಅಸ್ತಿತ್ವದ ಆರ್ಥಿಕ ಪರಿಸ್ಥಿತಿಗಳಿಂದ ನಿರ್ಧರಿಸಲ್ಪಡುತ್ತದೆ ಎಂಬುದು ಮಾರ್ಕ್ಸ್‌ನ ಅಭಿಪ್ರಾಯವಾಗಿದ್ದಿತು. ಇತಿಹಾಸವನ್ನು ಪ್ರಾಕೃತಿಕ ಶಾಸ್ತ್ರ ಹಾಗೂ ಕೈಗಾರಿಕೆಯಿಂದ ಬೇರ್ಪಡಿಸುವುದು ಆತ್ಮವನ್ನು ಶರೀರದಿಂದ ಪ್ರತ್ಯೇಕಿಸುವಂತಾಗುತ್ತದೆ, ಅವನ ಪ್ರಕಾರ, ಸಾಮಾಜಿಕ ಸಂಬಂಧಗಳು ಉತ್ಪಾದನಾ ಕ್ರಮಗಳನ್ನು ಅವಲಂಬಿಸಿರುತ್ತವೆ. ಆದರೆ ಮಾನವ ಕೇವಲ ಆಹಾರಕ್ಕಾಗಿಯೇ ಬದುಕುವುದಿಲ್ಲ ಹಾಗೂ ಆಹಾರದಿಂದಲೇ ಬಾಳಿನ ಸಾರ್ಥಕತೆಯನ್ನು ಪಡೆಯುವುದಿಲ್ಲ. ಇತಿಹಾಸವು ಕೇವಲ ಆಹಾರ, ವಸನ ಹಾಗೂ ವಸತಿಯನ್ನು ಪಡೆಯುವುದಕ್ಕಾಗಿ ಮಾನವ ಮಾಡಿದ ಪ್ರಯತ್ನಗಳ ದಾಖಲೆ ಮಾತ್ರವಾಗಿಲ್ಲ. ಈ ಮೂರು ಜೀವನಾವಶ್ಯಕತೆಗಳನ್ನು ಉತ್ತಮ ಪ್ರಮಾಣದಲ್ಲಿ ಬಂದೀಖಾನೆಗಳಲ್ಲಿ ಒದಗಿಸಿದರೂ ಯಾರೂ ಅಲ್ಲಿಗೆ ಹೋಗಲು ಸಿದ್ಧರಿರುವುದಿಲ್ಲ. ಇತಿಹಾಸವೆಲ್ಲವೂ ಕೇವಲ ವರ್ಗಕಲಹದ ಚರಿತ್ರೆ ಮಾತ್ರವಾಗಿಲ್ಲ. ಇದು ಮಾನವ ವಿಚಾರ, ಸಾಹಸ, ಅನ್ವೇಷಣೆ, ದರ್ಶನ, ಕಲೆ, ಸಾಹಿತ್ಯ, ಸಂಗೀತ, ವಿಜ್ಞಾನ, ಸಾಮಾಜಿಕ ವರ್ತನೆ, ಸಾಮಾಜಿಕ ಸೇವೆ ಇತ್ಯಾದಿಗಳ ದಾಖಲೆಯೂ ಆಗಿರುತ್ತದೆ.

20ನೆಯ ಶತಮಾನದಲ್ಲಿ ಸ್ಪೆಂಗ್ಲರ್ ಹಾಗೂ ಟಾಯ್ನಬಿಯವರೂ ಸಹ ತಮ್ಮದೇ ಆದ ಸಿದ್ಧಾಂತಗಳನ್ನು ಪ್ರತಿಪಾದಿಸಿದ್ದಾರೆ. ಸ್ಪೆಂಗ್ಲರನ್ನು ಸಂಸ್ಕೃತಿಗಳೂ ಸಹ ವ್ಯಕ್ತಿಗಳಂತೆ ಬೆಳೆಯುತ್ತವೆ, ಅಳಿದುಹೋಗುತ್ತವೆ; ಪ್ರತಿ ಸಂಸ್ಕೃತಿಗೂ ಬಾಲ್ಯ, ಯೌವನ, ಪ್ರೌಢಾವಸ್ಥೆ, ವೃದ್ಧಾಪ್ಯ ಹಾಗೂ ಮೃತ್ಯು ಎಂಬ ಅವಸ್ಥೆಗಳಿರುತ್ತವೆ; ಟಾಯ್ನಬಿಯೂ ಸಹ ಪ್ರತಿ ನಾಗರಿಕತೆಯು ಉಗಮ, ಬೆಳವಣಿಗೆ, ಕುಸಿತ, ಶೈಥಿಲ್ಯ ಹಾಗೂ ಅಳಿವು ಎಂಬ ಹಂತಗಳ ಮೂಲಕ ಹಾದುಬರುತ್ತದೆ ಎಂಬುದಾಗಿ ವಿವರಿಸಿದ್ದಾರೆ. ಇವರುಗಳು ಮಾತ್ರವಲ್ಲದೆ, ವಿಲ್‌ಫ್ರೆಡೋ ಪ್ಯಾರೆಟೋ ಮುಂತಾದವರು ಐತಿಹಾಸಿಕ ಬದಲಾವಣೆಯ ಬಗ್ಗೆ ಜೈವಿಕ ಯಾಂತ್ರಿಕ ವಿವರಣೆಯನ್ನು ನೀಡಿದರು. ಸಾಮಾಜಿಕ ಪರಿವರ್ತನೆಯ ಬಗ್ಗೆ ಆವರ್ತ ಕಲ್ಪನೆಯನ್ನು ಎತ್ತಿಹಿಡಿದರು. ಮತ್ತೆ ಕೆಲವರು ಐತಿಹಾಸಿಕ ಪರಿವರ್ತನೆಗಳನ್ನು ಭೌಗೋಳಿಕ ಪರಿಸರದ ಪರಿಭಾಷೆಯಲ್ಲಿ ವರ್ಣಿಸಲು ಯತ್ನಿಸಿದರು. ಜನಸಂಖ್ಯಾ ಶಾಸ್ತ್ರಜ್ಞರು ಇತಿಹಾಸದಲ್ಲಿ ಕಂಡುಬಂದ ಮಾರ್ಪಾಡು-ಗಳನ್ನು ಜನಸಂಖ್ಯೆಯ ಏರಿಳಿತದ ಆಧಾರದ ಮೇಲೆ ವಿವರಿಸಲು ಪ್ರಯತ್ನಿಸಿದ್ದಾರೆ. ಬುದ್ಧ, ಕ್ರಿಸ್ತ ಮತ್ತು ಗಾಂಧಿಯವರಂತಹ ಮಹಾತ್ಮರು ಇತಿಹಾಸವನ್ನು ಶಾಂತಿ-ಸೌಹಾರ್ದ ಮತ್ತು ಪ್ರೀತಿ ಎಂಬ ಅತ್ಯುತ್ತಮ ಪರಿಭಾಷೆಯಲ್ಲಿ ವಿವರಿಸಿದ್ದಾರೆ.

ಮಾನವ ಇತಿಹಾಸದಲ್ಲಿ ನರಭಕ್ಷಣಾ ಹಂತದಿಂದ ಬೇಟೆಗಾರಿಕೆ ಮತ್ತು ಬೇಟೆಯ ಹಂತದಿಂದ ಕೃಷಿಯ ಹಂತದವರೆಗೆ ಆದ ಈ ಅತ್ಯದ್ಭುತ ಬೆಳವಣಿಗೆಯು ಪ್ರಗತಿಪರ ಅಹಿಂಸಾ ತತ್ತ್ವದ ಸಂಕೇತವಾಗಿದೆ.

## 4.5 ಸಾರಾಂಶ

ಈ ಘಟಕದ ಅಧ್ಯಯನದಿಂದ ನಾವು,

- ದರ್ಶನವು ವಿವೇಚನ, ತರ್ಕ, ಪ್ರಮಾಣ ಮತ್ತು ಆನುಗುಮನ ಕ್ರಮಗಳಣ್ನು ಬಳಸಿ ಅಮೂರ್ತ ಸಮಸ್ಯೆ ಹಾಗೂ ಭಾವರೂಪಗಳನ್ನು ಕುರಿತು ವಿಚಾರ ಮಾಡುತ್ತದೆ ಎನ್ನುವುದನ್ನು ತಿಳಿದುಕೊಂಡೆವು.
- ಇತಿಹಾಸ ದರ್ಶನವು ಎರಡು ವಿಭಿನ್ನವಾಗಿರುವ ಆದರೆ ಪರಸ್ಪರ ಸಂಬಂಧಪಟ್ಟಿರುವ ಶಾಖೆಗಳಲ್ಲಿ ಆಸಕ್ತಿಯನ್ನು ತೋರುತ್ತದೆ ಎನ್ನುವುದನ್ನು ತಿಳಿದುಕೊಂಡೆವು.

## 4.6 ಪ್ರಮುಖ ಪದಗಳು

1. ವ್ಯಾಖ್ಯಾನ: ವಿವರಣಾತ್ಮಕ ವಿಶ್ಲೇಷಣೆ
2. ಮರುಸಮೀಕ್ಷೆ: ಸಂಕ್ಷಿಪ್ತಗೊಳಿಸು

## 4.7 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಇತಿಹಾಸ ದರ್ಶನ ಎಂದರೇನು?
2. ಇತಿಹಾಸ ದರ್ಶನದ ಎರಡು ಶಾಖೆಗಳು ಯಾವುವು ಮತ್ತು ಶಾಖೆಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.

## 4.8 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 4.3 ನೋಡಿ
2. ವಿಭಾಗ 4.4 ನೋಡಿ

## 4.9 ಪರಾಮರ್ಶನ ಗ್ರಂಥಗಳು


1) ಇತಿಹಾಸ ಸಂಶೋಧನಾ ಮಾರ್ಗ : ಡಾ॥ಎ.ವಿ.ವೆಂಕಟರತ್ನಂ, ಡಾ॥ಎಂ.ಬಿ.ಪದ್ಮ
2) Sheik Ali B : History: Its Theory and Method
3) Rajayyan K : History in Theory and Method



**ಪಠ್ಯವನ್ನು ರಚಿಸಿದವರು:**
**ಪ್ರೊ.ಎನ್.ಸರಸ್ವತಿ**

# ಬ್ಲಾಕ್ – 2: ಸಂಶೋಧನ ವಿಧಾನ

## ಘಟಕ – 5 ಸಂಶೋಧಕನಲ್ಲಿ ಇರಬೇಕಾದ ಅತ್ಯಾವಶ್ಯಕ ಗುಣಗಳು ಮತ್ತು ವಿಷಯದ ಆಯ್ಕೆ

ರಚನೆ


**5.0** ಉದ್ದೇಶಗಳು

**5.1** ಪೀಠಿಕೆ

**5.2** ಸಂಶೋಧಕನಲ್ಲಿ ಇರಬೇಕಾದ ಅತ್ಯಾವಶ್ಯಕ ಗುಣಗಳು

**5.3** ಕಾರ್ಯ ಪ್ರಣಾಳಿಕೆ

- **5.3.1** ವಿಷಯದ ಆಯ್ಕೆ
- **5.3.2** ಗ್ರಂಥ ವಿವರಣ ಪಟ್ಟಿ
- **5.3.3** ಒಂದು ರೂಪುರೇಖೆಯನ್ನು ರಚಿಸುವ ಅವಶ್ಯಕತೆ
- **5.3.4** ಮುಖ್ಯ ಮಾಹಿತಿಯನ್ನು ಟಿಪ್ಪಣಿ ಮಾಡುವ ಕ್ರಮ
- **5.3.5** ಪರಾಮರ್ಶನ ಪುಸ್ತಕಗಳ ಬಗೆಗಳು
- **5.3.6** ಮಾಹಿತಿಗಳ ಸಂಗ್ರಹಣೆ ಮತ್ತು ವರ್ಗೀಕರಣ

**5.4** ಸಾರಾಂಶ

**5.5** ಪ್ರಮುಖ ಪದಗಳು

**5.6** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**5.7** ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

**5.8** ಪರಾಮರ್ಶನ ಗ್ರಂಥಗಳು

## 5.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನಾವುಗಳು ಕೆಳಗಿನ ವಿಷಯಗಳನ್ನು ತಿಳಿಯಲಿದ್ದೇವೆ:

- ಸಂಶೋಧಕನಿಗೆ ನಿಜವಾಗಿಯೂ ಇರಬೇಕಾದ ಅರ್ಹತೆಗಳನ್ನು ತಿಳಿದುಕೊಳ್ಳುವುದು.
- ಸಂಶೋಧನೆಗೆ ಮೊದಲು ಸಂಶೋಧನಾ ವಿಷಯದ ಆಯ್ಕೆ ಈ ಆಯ್ಕೆಯಲ್ಲಿ ಅನುಸರಿಸಬೇಕಾದ ಚಿಂತನೆಗಳು ಮುಂತಾದವು.
- ಇದಲ್ಲದೇ ಸಂಶೋಧನಾ ಕಾರ್ಯವನ್ನು ಹೇಗೆ ಮುನ್ನಡೆಸಬೇಕು ಮುಂತಾದ ವಿಷಯಗಳನ್ನು ತಿಳಿಯಬೇಕು.

## 5.1 ಪೀಠಿಕೆ

ಹಿಂದೆ ಗತಿಸಿದ ಘಟನೆಗಳನ್ನು ಸರಿಯಾದ ರೀತಿಯಲ್ಲಿ ಪ್ರಸ್ತುತಪಡಿಸುವ ಕಾರ್ಯದಲ್ಲಿ ಅಳಡಿಸಿಕೊಳ್ಳುವ ಕಾರ್ಯ ವಿಧಾನವನ್ನು ಇತಿಹಾಸದಲ್ಲಿ ಇತಿಹಾಸ ಸಂಶೋಧನಾ ವಿಧಾನವೆಂದು ಕರೆಯಲಾಗುತ್ತದೆ. ಈ ವಿಧಾನವು ಇತಿಹಾಸವನ್ನು ಹೇಗೆ ಬರಬೇಕು ಎಂಬುದನ್ನು ತಿಳಿಸುತ್ತದೆ. ಈ ಬರವಣಿಗೆಯಲ್ಲಿ ವಸ್ತುನಿಷ್ಠತೆಯನ್ನು ಸಂಪೂರ್ಣವಾಗಿ ಕಾಪಾಡಲು ಸಾಧ್ಯವಿಲ್ಲವಾದರೂ ಘಟನೆಗಳು ಹೀಗೆ ನಡೆದವು ಎಂಬುದನ್ನು ಅವುಗಳು ಹೇಗೆ ನಡೆದವೋ ಹಾಗೆಯೇ ಹೇಳುವುದನ್ನು ಗುರಿಯಾಗಿ ಹೊಂದಿರುವುದನ್ನು ಕಾಣುತ್ತೇವೆ. ಈ ಘಟಕದಲ್ಲಿ ಸಂಶೋಧಕನಿಗಿರಬೇಕಾದ ಅರ್ಹತೆಗಳೇನು? ಮತ್ತು ಸಂಶೋಧಕರು ಆಯ್ಕೆ ಮಾಡಿಕೊಳ್ಳಬೇಕಾದ ಸಂಶೋಧನಾ ವಿಷಯದ ಬಗ್ಗೆ ವಿವರವಾಗಿ ತಿಳಿಯಲಾಗುವುದು.

## 5.2 ಸಂಶೋಧಕನಲ್ಲಿ ಇರಬೇಕಾದ ಅತ್ಯಾವಶ್ಯಕ ಗುಣಗಳು

ಹೇಗೆ ಯಾರಾದರೂ ವಕೀಲ ಅಥವ ವೈದ್ಯರಾಗುವುದು ಸಾಧ್ಯವಿಲ್ಲವೋ, ಅದೇ ರೀತಿ ಯಾರು ಬೇಕಾದರೂ ಇತಿಹಾಸಕಾರನಾಗುವುದು ಸಾಧ್ಯವಿಲ್ಲ. ಅದಕ್ಕೆ ಒಂದು ನಿರ್ದಿಷ್ಟ ಬೌದ್ಧಿಕ ತರಬೇತು ಹಾಗೂ ವಿಶೇಷ ಗುಣಗಳು ಅವಶ್ಯಕ. ಒಬ್ಬ ವ್ಯಕ್ತಿಯು ಇತಿಹಾಸ ಕ್ಷೇತ್ರದಲ್ಲಿ ಸರಿಯಾಗಿ ವೈಜ್ಞಾನಿಕ ಸಂಶೋಧನೆಗಳನ್ನು ನಡೆಸಬೇಕಾದರೆ ಅವನಲ್ಲಿ ಕೆಲವು ಅರ್ಹತೆ, ವಿಶೇಷ ಅಭಿರುಚಿ, ಸಹಜ ಪ್ರವೃತ್ತಿ, ಸಾಮರ್ಥ್ಯಗಳು ಇರಬೇಕಾದುದು ಅತ್ಯಾವಶ್ಯಕ.

ಮೊದಲನೆಯದಾಗಿ ಸಂಶೋಧಕನು ವೈಜ್ಞನಿಕ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಅವನು ಆರಿಸಿಕೊಳ್ಳುವ ಸಮಸ್ಯೆ ಅವನ ಯೋಗ್ಯತೆ, ಸಂಶೋಧನೆ ನಡೆಸುವುದಕ್ಕೆ ಇರುವ ಸೌಲಭ್ಯ ಹಾಗೂ ಪರಿಸರಕ್ಕೆ ಅನುಗುಣವಾಗಿರಬೇಕು. ಅವನಿಗೆ ತಾನು ಆರಿಸಿಕೊಂಡಿರುವ ಕ್ಷೇತ್ರದ ಬಗ್ಗೆ ಸಾಕಷ್ಟು ತಿಳಿವಳಿಕೆ ಇರಬೇಕು.

ಇದರಿಂದ ಅವನಿಗೆ ಸಮಂಜಸವಾಗಿರುವ ದತ್ತಾಂಶಗಳನ್ನು ಎಲ್ಲಿ ಅರಸಬೇಕು ಎಂಬುದು ಸರಿಸುಮಾರಾಗಿ ಗೊತ್ತಾಗುತ್ತದೆ. ಅವನು ತಾನು ಆಯ್ಕೆ ಮಾಡಿಕೊಂಡಿರುವ ವಿಷಯದ ಬಗ್ಗೆ ವಸ್ತುನಿಷ್ಠವಾದ ಹಾಗೂ ನಿಷ್ಪಕ್ಷಪಾತವಾದ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕು. ಕೊನೆಯವರೆಗೆ ಅದೇ ದೃಷ್ಟಿಕೋನವಿರಬೇಕು. ಇದು ಮಾತ್ರವಲ್ಲದೆ ಸಂಶೋಧನಾ ತತ್ತ್ವ ಹಾಗೂ ನಿಯಮಗಳ ಬಗ್ಗೆ ಅವನಿಗೆ ಅರಿವಿರಬೇಕು. ಯಾವ ದತ್ತಾಂಶಗಳು ಸರಿಯಾಗಿವೆ, ಯಾವುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಎಂಬುದರ ಬಗ್ಗೆ ವ್ಯಾವಹಾರಿಕ ಅನುಭವವೂ ಸ್ವಲ್ಪಮಟ್ಟಿಗೆ ಇರಬೇಕು.

ಎರಡನೆಯದಾಗಿ ಸಂಶೋಧಕರು ನಡೆಸುವ ಅನ್ವೇಷಣೆಯು ಪ್ರೀತಿಯ ದುಡಿಮೆಯಾಗಬೇಕು. ಅವನಿಗೆ ವಿಷಯದಲ್ಲಿ ಗಾಢಾಸಕ್ತಿ ಹಾಗೂ ಅತೀವ ಪ್ರೇಮವಿರಬೇಕು. ಇತಿಹಾಸ ರಚನೆ ಮೆತ್ತನೆಯ ಹಾಸಿಗೆಯ ಮೇಲೆ ಕುಳಿತು ಬರೆಯುವ ಕೆಲಸವಲ್ಲ. ನಿರಂತರ ದುಡಿಮೆ; ವಿಷಯಗಳಿಗಾಗಿ ತೀವ್ರವಾದ ಅನ್ವೇಷಣೆ ನಡೆಸುವ ಯೋಗ್ಯತೆ; ಖಾಸಗಿ ವ್ಯಕ್ತಿಗಳ ವೈಯಕ್ತಿಕ ಗ್ರಂಥಸಂಗ್ರಹ, ವಿವಿಧ ವಸ್ತುಸಂಗ್ರಹ ಶಾಲೆ, ಅಪರಿಚಿತ ಪ್ರದೇಶ ಹಾಗೂ ದೂರದ ಸ್ಥಳಗಳಲ್ಲಿ ಅಜ್ಞಾತವಾಗಿರುವ ಮೂಲಾಧಾರಗಳನ್ನು ಕಂಡುಹಿಡಿದು ಬಳಸಿಕೊಳ್ಳುವ ಸಾಮರ್ಥ್ಯ ಇತ್ಯಾದಿ ಅವಶ್ಯಕ ಗುಣಗಳನ್ನು ಬೆಳೆಸಿಕೊಳ್ಳುವುದು ಸಾಮಾನ್ಯವಾದ ವಿಷಯವಲ್ಲ. ಭಯಂಕರ ಸುಳಿಗಳಿಗೆ ಅಭಿಮುಖವಾಗಿ ಈಜಿ ದಡವನ್ನು ಸೇರಬೇಕಾದರೆ ಅಸೀಮ ಎದೆಗಾರಿಕೆ, ಕಠೋರ ನಿರ್ಧಾರ, ದೃಢಸಂಕಲ್ಪ ಇರಬೇಕು. ಅವನಿಗೆ ಔಚಿತ್ಯ ಜ್ಞಾನ ಹಾಗೂ ಅದೃಷ್ಟ ಇರಬೇಕು. ಕೆಲವು ಸಲ ಅವನು ತನಗೆ ಬೇಕಾಗಿರುವ ವಿಷಯಗಳಿಗಾಗಿ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲದೆ, ತಮಿಳುನಾಡು, ಕೇರಳ, ಆಂಧ್ರ, ಮಹಾರಾಷ್ಟ್ರ ಮುಂತಾದ ನೆರೆಹೊರೆಯ ರಾಜ್ಯಗಳಲ್ಲೂ, ಇಂಗ್ಲೆಂಡ್, ಫ್ರಾನ್ಸ್, ಹಾಲೆಂಡ್, ಪೋರ್ಚುಗಲ್ ಮುಂತಾದ ಯೂರೋಪಿನ ರಾಷ್ಟ್ರಗಳ ಪತ್ರಾಗಾರಗಳಲ್ಲೂ ಅರಸುತ್ತಾ ಅಲೆದಾಡಬೇಕಾಗುತ್ತದೆ.

ಮೂರನೆಯದಾಗಿ ಬೌದ್ಧಿಕ ಸಾಮರ್ಥ್ಯ ಸಂಶೋಧಕನಿಗೆ ಇರಬೇಕಾದ ಇನ್ನೊಂದು ಗುಣ. ಅವನು ಗುಪ್ತವಾಗಿರುವ ಅಂಶಗಳನ್ನು ಹೊರಕ್ಕೆಳೆದು ಅವುಗಳ ಒಗಟನ್ನು ಬಿಡಿಸುವುದಕ್ಕೆ ಬೇಕಾದ ಚುರುಕುಬುದ್ಧಿ, ರಹಸ್ಯವನ್ನು ಸರಿಯಾಗಿ ಭೇದಿಸುವುದಕ್ಕೆ ಹಾಗೂ ಗೋಜುಗಳನ್ನು ಸರಿಯಾಗಿ ಬಿಡಿಸಿ ಕ್ರಮಪಡಿಸುವುದಕ್ಕೆ ಅವಶ್ಯಕವಾದ ಸೂಕ್ಷ್ಮ ಪರಿಜ್ಞಾನವನ್ನು ಬೆಳೆಸಿಕೊಂಡಿರಬೇಕು. ಅವನು ಪದಗಳ ಒಳಗೆ ಹಾಗೂ ಹಿಂದೆ ಅಡಗಿಕೊಂಡಿರುವ ನಿಜವಾದ ಮೂಲಾರ್ಥಗಳನ್ನು ಕಂಡುಹಿಡಿಯುವುದಕ್ಕೆ ಅಗತ್ಯವಾಗಿರುವ ವಿಮರ್ಶಾತ್ಮಕ ಹಾಗೂ ತೀಕ್ಷ್ಣ ಗ್ರಹಣ ಶಕ್ತಿಯನ್ನು ಹೊಂದಿರಬೇಕು. ಅವನು ಮೇಲಿಂದ ಮೇಲೆ ಯಾವ ತರಹದ ಮೂಲಾಧಾರಗಳು ಬೇಕೆಂಬುದನ್ನು ಕಲ್ಪಿಸಿಕೊಳ್ಳಬೇಕು. ಅವುಗಳು ಸಿಗದಿರಬಹುದು. ದೊರತರೆ ಅವುಗಳ ಅನ್ವೇಷಣೆಯನ್ನು ಕೈಗೊಳ್ಳಬೇಕು. ಒಟ್ಟಿನಲ್ಲಿ ಸಂಶೋಧಕನಿಗೆ ಅಪಾರವಾದ ಸಾಮಾನ್ಯ ಜ್ಞಾನ, ಅಪೂರ್ವ ಕುತೂಹಲ, ಅನ್ವೇಷಣಾ ಸಾಮರ್ಥ್ಯ, ಉಪಕಲ್ಪನೆಗಳನ್ನು ನಿರೂಪಿಸುವ ವೈಜ್ಞಾನಿಕ ಕಲ್ಪನಾಶಕ್ತಿ, ಆ ಉಪಕಲ್ಪನೆಗಳನ್ನು ಪರೀಕ್ಷಿಸುವುದಕ್ಕಾಗಿ ನಿರ್ಣಾಯಕ ಪ್ರಯೋಗಗಳನ್ನು ಯೋಜಿಸುವ ವಿಶ್ಲೇಷಣಾತ್ಮಕ ಸಾಮರ್ಥ್ಯ, ಆ ಪ್ರಯೋಗಗಳನ್ನು ಮುಂದುವರಿಸಲು ಅಗತ್ಯವಾದ ಚುರುಕುಬುದ್ಧಿ, ನಿರ್ವಹಣಾ ಕೌಶಲ್ಯ

ಹಾಗೂ ವಿವೇಚನಾಯುತ ದೃಷ್ಟಿಕೋನ ಮತ್ತು ವಾಸ್ತವಾಂಶಗಳನ್ನು ಅರ್ಥಗರ್ಭಿತವಾದ ರೀತಿಯಲ್ಲಿ ಸಂಯೋಜಿಸುವ ವಿವೇಕ ಅತ್ಯಾವಶ್ಯಕವಾಗಿ ಇರಬೇಕಾದ ಗುಣಗಳು.

ನಾಲ್ಕನೆಯದಾಗಿ ಅವನು ಕೆಲವು ನೈತಿಕ ಅರ್ಹತೆಗಳನ್ನು ಪಡೆದಿರಬೇಕು. ಪ್ರಾಮಾಣಿಕತೆ ಅಥವ ಸತ್ಯಪರತೆ ಅವನ ನೀತಿಯಾಗಿರಬೇಕು. ಸಂಶೋಧಕನು ಅತಿ ನಿರಾಶಾವಾದಿಯೂ ಅಥವಾ ಅತಿ ಆಶಾವಾದಿಯೂ ಆಗಿರಬಾರದು. ಯಾವ ವಿಷಯವನ್ನೇ ಆಗಲಿ ಅತಿಯಾಗಿ ಹೊಗಳಿ ಆಕಾಶಕ್ಕೇರಿಸಬಾರದು ಅಥವಾ ಅತೀವವಾದ ಪಾತಾಳಕ್ಕೆ ಅದುಮಬಾರದು. ಒಂದು ವಿಷಯವನ್ನು ಕಡಿಮೆಯಾಗಿ ಎಣಿಸಬಾರದು ಅಥವಾ ಅತಿಶಯವಾಗಿ ಭಾವಿಸಬಾರದು. ಸಂಶೋಧನೆ ನಿಷ್ಪಕ್ಷಪಾತವಾಗಿರಬೇಕೆ ಹೊರತು ನಿಕೃಷ್ಟವಾಗಬಾರದು. ಇಂಗ್ಲಿಷ್ ಇತಿಹಾಸಕಾರ ಫ್ರೌಢೆಯು ಈ ರೀತಿ ನಿಷ್ಪಕ್ಷಪಾತವಾಗಿಲ್ಲದ ವಿವರಣೆಗಳನ್ನು ನೀಡುವುದರಲ್ಲಿ ಎತ್ತಿದ ಕೈ ಆಗಿದ್ದನು ಎಂದು ಹೇಳಲಾಗುತ್ತದೆ. ಸಂಶೋಧಕನು ಸತ್ಯಸಂಧನಾಗಿರಬೇಕು; ತನ್ನ ಅನ್ವೇಷಣಾ ಯಾನದಲ್ಲಿ ತನ್ನ ಉದ್ದೇಶ ಹಾಗೂ ಮುನ್ನೋಲವಿಗೆ ಅನುಗುಣವಾಗಿರುವ ವಾಸ್ತವಾಂಶಗಳನ್ನು ಮಾತ್ರ ಆರಿಸಿಕೊಂಡು ವಿರುದ್ಧವಾಗಿರುವುದನ್ನು ಬಿಡಬಾರದು. ಅವನು ಅಪ್ರಾಮಾಣಿಕನಾಗದೇ ಇರಬೇಕಾದರೆ, ಪೂರ್ವಾಗ್ರಹಗಳ ಹಿಡಿತದಿಂದ ಮುಕ್ತನಾಗಬೇಕಾದರೆ ಆತ್ಮಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು.

ಐದನೆಯದಾಗಿ ಸ್ತಿಮಿತತೆ, ಸಮತೂಕ, ಅನುದ್ವೇಗ ಹಾಗೂ ಶಾಂತತೆ ಸಂಶೋಧಕನ ಬಂಡವಾಳವಾಗಬೇಕು. ಅವನು ಆತುರಗಾರನಾದರೆ ಅವನ ಪ್ರಯತ್ನವೆಲ್ಲಾ ಮರಳುಗಾಡಿನ ಮೇಲೆ ಬೀಳುವ ಮಳೆಯಂತೆ ವ್ಯರ್ಥವಾಗುತ್ತದೆ. ಸಹನೆ ಎಂಬುದು ಸಂಶೋಧಕನ ಪ್ರಮುಖ ಗುಣವಾಗಿರಬೇಕು. ಒಂದು ಕೆಲಸವನ್ನು ಅತ್ಯಂತ ಅಸಮರ್ಪಕವಾಗಿ ಮಾಡುವುದಕ್ಕೆ ಬದಲು ಮಾಡದೇ ಇರುವುದೇ ಲೇಸು. ಒಬ್ಬ ಇತಿಹಾಸಕಾರ ಹೇಗೆ ಬರೆದಿದ್ದಾನೆಂಬುದು ಮುಖ್ಯ. ಅವನಿಗೆ ಅದಕ್ಕಾಗಿ ಎಷ್ಟು ಸಮಯ ಬೇಕಾಯಿತು ಎಂಬುದು ಗೌಣ. ಕೃತಿಯ ಮಟ್ಟ ಪ್ರಧಾನಾಂಶ. ಆದ್ದರಿಂದ ಸಂಶೋಧನೆಗೆ ಬಿ.ಎ., ಎಂ.ಎ. ಪದವಿಗಳಿರುವಂತೆ ಒಂದು ನಿರ್ದಿಷ್ಟ ವೇಳಾಪಟ್ಟಿ ಇರುವುದಿಲ್ಲ. ಕೆಲವರು ದುಂಬಿಗಳಂತೆ ಒಂದು ವಿಷಯದಿಂದ ಮತ್ತೊಂದಕ್ಕೆ ಹಾರುತ್ತಿರುತ್ತಾರೆ. ಮಣ್ಣನ್ನು ಅತ್ಯಲ್ಪವೇ ಕೆದಕಿ ಬೀಜವನ್ನು ನೆಡುವುದರಿಂದ ಫಲವನ್ನು ಪಡೆಯುವುದು ಅಸಂಭವ. ಒಬ್ಬ ಸಂಶೋಧಕನು ಸುಮ್ಮನೆ ನೋಡಬಾರದು, ಜಾಗರೂಕತೆಯಿಂದ ಅವಲೋಕಿಸಬೇಕು. ಬರಿ ಅವಲೋಕಿಸಿದರೆ ಸಾಲದು, ವಿವರಿಸಬೇಕು; ಬರಿ ವಿವರಿಸಿದರೆ ಸಾಲದು, ಸಂಯೋಜಿಸಬೇಕು. ಆದ್ದರಿಂದ ಅವನು ವಿಷಯಗಳನ್ನು ಬಿಡಿಯಾಗಿ ಹಾಗೂ ಸಮಗ್ರವಾಗಿ ವೀಕ್ಷಿಸಿ ವಿಚಾರ ಮಾಡುವ ಶಕ್ತಿಯನ್ನು, ಸಮಚಿತ್ತವನ್ನು ಹಾಗೂ ಗುರಿಯನ್ನು ಸಾಧಿಸಲು ಪಟ್ಟು ಹಿಡಿದು ಪ್ರಯತ್ನಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡಿರಬೇಕು. ಅವನು ಜೀವಂತವಾದ ಹಾಗೂ ಉತ್ತಮ ಮಟ್ಟದ ಕೃತಿಯ ಕರ್ತೃವಾಗಬೇಕಾದರೆ, ಸವಾಲುಗಳ ಸುಳಿಗಳ ಮಧ್ಯೆ ಬಂಡೆಯಂತೆ ಅಚಲನಾಗಿರಬೇಕು, ಜಾಗರೂಕನಾಗಿರಬೇಕು, ಸಮಾಧಾನ ಚಿತ್ತದಿಂದ ಕೂಡಿರಬೇಕು ಮತ್ತು ಸತ್ಯದ ಸಮರ್ಪಕ ಪ್ರತಿಬಿಂಬಕನಾಗಲು ಪ್ರಯತ್ನಿಸಬೇಕು.

ಕೊನೆಯದಾಗಿ, ಸಂಶೋಧಕನು ಅನ್ವೇಷಣೆ ನಡೆಸುವುದಕ್ಕೆ ಬೇಕಾದ ತನ್ನ ಶಾರೀರಿಕ ಹಾಗೂ ಮಾನಸಿಕ ಶಕ್ತಿ ಹಾಳಾಗದಂತೆ ನೋಡಿಕೊಳ್ಳಬೇಕು. ಕಟುವಾಗಿ ವಿಮರ್ಶಿಸುವ ಮತ್ತು ಯಾವುದನ್ನೂ ಚೆನ್ನಾಗಿ ಅಭ್ಯಾಸ ಮಾಡಿ ತಿಳಿಯದೇ ಎಲ್ಲದಕ್ಕೂ ಕೈ ಹಾಕುವ ಪ್ರವೃತ್ತಿಯನ್ನು ಕೈಬಿಡಬೇಕು. ಅವನು ಬೇರೆಯವರು ತನ್ನ ಕೃತಿಯನ್ನು ವಿಮರ್ಶಿಸಿದರೆ, ಅದರಿಂದ ಬೇಸತ್ತು ಸಂಶೋಧನಾ ಕೆಲಸವನ್ನೇ ಬಿಟ್ಟುಬಿಡಬಾರದು. ನಿರಾಸೆ, ನಿರುತ್ಸಾಹ ಎಂಬ ಪದಗಳಿಗೆ ಅವನ ಶಬ್ದಕೋಶದಲ್ಲಿ ಸ್ಥಳ ಇರಲೇಬಾರದು. ಆಟವಾಡದೆ ಕ್ರೀಡಾರಂಗವನ್ನು ಬಿಟ್ಟು ಓಡುವುದು ಖಂಡನಾರ್ಹವಾದ ಪ್ರವೃತ್ತಿ, ರಣರಂಗದಿಂದ ಹಿಮ್ಮೆಟ್ಟುವುದು ಹೇಡಿತನ. ಅದೇ ರೀತಿ ಅತಿಯಾಗಿ ಟೀಕಿಸುವುದು, ಪ್ರತಿಯೊಂದನ್ನೂ ಬೇಕು ಬೇಕೆಂದೇ ಸಂದೇಹಿಸುವುದು ಹಾಗೂ ಅನುಭವವಿಲ್ಲದೆ ಬೇಕೆಂದೇ ವಿಮರ್ಶೆ ಮಾಡುವುದು ಸಂಶೋಧನಾ ಪಥದಲ್ಲಿ ಅಡ್ಡಿ–ತಡೆಯಾಗಿರುವ ಅಪಾಯಕಾರಿ ಮುಳ್ಳುಗಳು. ಇದೊಂದು ತರಹದ ಬೌದ್ಧಿಕ ಕಸರತ್ತು, ಆದರೆ ಇದು ಫಲಹೀನವಾದುದು.

ಇದರೊಂದಿಗೆ ಪ್ರಾಧ್ಯಾಪಕ ಗಿಬ್ಸನ್ ಸಂಶೋಧಕರನ್ನು ಕೆಲವು ವರ್ಗಗಳನ್ನಾಗಿ ವಿಭಾಗಿಸಿದ್ದಾರೆ. ಮೊದಲನೆಯದು ಯಾವಾಗಲೂ ಹೊಸದಾಗಿರುವುದನ್ನು ನಿರೂಪಿಸುವ ಹಾಗೂ ಸರ್ವವ್ಯಾಪಕವಾದ ಸಿದ್ಧಾಂತವನ್ನು ರೂಪಿಸುವ ಪ್ರೊಮೀತಿಯಾಸಿನಂಥವರ ವರ್ಗ. ಯಾವುದನ್ನೂ ಒಪ್ಪದೆ, ಪ್ರಶ್ನಿಸುವ, ಸಂಕೀರ್ಣ ಸನ್ನಿವೇಶಗಳನ್ನು ಸ್ಪಷ್ಟವಾಗಿ ತಿಳಿಯಲು ವಿಮರ್ಶಾತ್ಮಕ ಧೋರಣೆ ಹೊಂದಿದವರದು ಎರಡನೆಯ ವರ್ಗ. ಮೂರನೆಯದು ಸಾಹಿತ್ಯ ಹಾಗೂ ಪ್ರಯೋಗದಲ್ಲಿ ನಲಿವನ್ನು ಅನುಭವಿಸುವ ವಾಸ್ತವಾಂಶಗಳನ್ನು ಸಂಗ್ರಹಿಸಿ ಅವುಗಳನ್ನು ಕ್ರಮಬದ್ಧವಾಗಿಸಿ ಒಟ್ಟುಗೂಡಿಸುವವರ ವರ್ಗ. ತಾನು ನೋಡಿದುದನ್ನೆಲ್ಲಾ ಜ್ಞಾಪಕದಲ್ಲಿಟ್ಟುಕೊಂಡು ಇತರರಿಗೆ ಸರಿಯಾಗಿ ಅರ್ಥವಾಗುವ ರೀತಿಯಲ್ಲಿ ಅವುಗಳನ್ನು ಸ್ಪಷ್ಟವಾಗಿ ವಿವರಿಸುವ ತರಬೇತನ್ನು ಪಡೆದಿರುವ ಚುರುಕುಬುದ್ಧಿಯ ವೀಕ್ಷಕನ ಮುಖ್ಯ ಲಕ್ಷಣವಾಗಿರುವ, ಒಟ್ಟುಗೂಡಿಸುವ ಶಕ್ತಿ ಹಾಗೂ ವರ್ಣನಾಪ್ರಿಯತೆ ಇರುವವರದು ನಾಲ್ಕನೆಯ ವರ್ಗ. ವ್ಯಾಪಕ ಮಾದರಿ ಹಾಗೂ ಸಾಮಾನ್ಯೀಕರಣಗಳನ್ನು ನೇಯುವುದಕ್ಕಿಂತ ಹೆಚ್ಚಾಗಿ ಅವಲೋಕನಾ ಪ್ರಕ್ರಿಯೆಗಳಲ್ಲಿ ನಿಷ್ಕೃಷ್ಟತೆಯನ್ನು ಹಾಗೂ ವಿವರಣೆಯಲ್ಲಿ ಯಥಾರ್ಥತೆಯನ್ನು ಸಾಧಿಸಲು ಯತ್ನಿಸುವವರು ಐದನೆಯ ವರ್ಗದವರು. ಅತ್ಯಂತ ಶ್ರದ್ಧೆಯಿಂದ ಸಮಸ್ಯೆಯನ್ನು ಕುರಿತು ಅಧ್ಯಯನ ಮಾಡುವ ಪರಿಶ್ರಮ ಹಾಗೂ ಸಾಮಾಜಿಕ ನಿಲುವುಳ್ಳವರು ಕೊನೆಯವರು. ಇದು ಕಟ್ಟುನಿಟ್ಟಾದ ವರ್ಗೀಕರಣವಲ್ಲ. ಇದು ಸಂಶೋಧಕನಲ್ಲಿ ಒಂದಲ್ಲ ಒಂದು ಬಗೆಯ ಲಕ್ಷಣ ಹಾಗೂ ನಿರ್ದಿಷ್ಟ ಕಾರ್ಯಕ್ರಮ ಪ್ರಧಾನವಾಗಿರುತ್ತದೆ ಎಂಬುದನ್ನು ಸೂಚಿಸುತ್ತದೆಯಷ್ಟೆ.

ನಿಜವಾದ ಸಂಶೋಧಕನಲ್ಲಿ ತಾಯಿಯ ಅನುರಕ್ತಿ, ನ್ಯಾಯಾಧೀಶನ ಸಮಚಿತ್ತ, ದಾರ್ಶನಿಕನ ವಸ್ತುನಿಷ್ಠತೆ, ವೀರಯೋಧನ ಎದೆಗಾರಿಕೆ, ಬೀವರ್ ಪ್ರಾಣಿಯ ಪಟ್ಟುಬಿಡದ ಗುಣ ಹಾಗೂ ಸಹನೆ, ದೇಶಪ್ರೇಮಿಯ ಹುರುಪು, ನಿಸ್ವಾರ್ಥ ಬುದ್ಧಿ, ಪ್ರವಾದಿಯ ದೂರದೃಷ್ಟಿ ಅತ್ಯಾವಶ್ಯಕವಾಗಿ ಇರಬೇಕು.

## 5.3 ಕಾರ್ಯ ಪ್ರಣಾಳಿಕೆ

### 5.3.1 ವಿಷಯದ ಆಯ್ಕೆ

ಯುದ್ಧರಂಗಕ್ಕೆ ಕಾಲಿಡುವ ಮೊದಲು ಎಲ್ಲಾ ಅವಶ್ಯಕ ತರಬೇತನ್ನು ಪಡೆದಿರುವ ಸೈನಿಕನಂತೆ, ಸಂಶೋಧಕನು ಅನ್ವೇಷಣೆ ನಡೆಸುವುದಕ್ಕೆ ಬೇಕಾಗಿರುವ ಮುಖ್ಯ ಶಾರೀರಿಕ, ಮಾನಸಿಕ ಹಾಗೂ ನೈತಿಕ ಗುಣಲಕ್ಷಣಗಳನ್ನು ಬೆಳೆಸಿಕೊಂಡು ತಕ್ಕ ತರಬೇತನ್ನು ಪಡೆದ ನಂತರ ಜ್ಞಾನಕ್ಷೇತ್ರದಲ್ಲಿ ನುಗ್ಗಿ, ಅನ್ವೇಷಣೆಯನ್ನು ಕೈಗೊಳ್ಳಬೇಕು. ಈ ಪಯಣದಲ್ಲಿ ಅನೇಕ ಮುಖ್ಯ ಘಟ್ಟಗಳಿರುತ್ತವೆ. ಅದರಲ್ಲಿ ಮೊದಲನೆಯದು ವಿಷಯದ ಆಯ್ಕೆ. ಇದು ಅತ್ಯಂತ ನಿರ್ಣಾಯಕ ಹಂತ. ಸರಿಯಾದ ಜೀವನ ಸಂಗಾತಿಯನ್ನು ಆರಿಸಿಕೊಳ್ಳುವುದು ಎಷ್ಟು ಮುಖ್ಯವೋ ವಿಷಯದ ಆಯ್ಕೆ ಸಂಶೋಧನೆಗೆ ಅಷ್ಟೇ ಮುಖ್ಯವಾಗಿರುತ್ತದೆ. ತಪ್ಪಾಗಿ ಆಯ್ಕೆ ಮಾಡಿಕೊಂಡರೆ ಅದರಿಂದ ಅವನಿಗೆ ಅನಾನುಕೂಲಗಳು ಹೆಚ್ಚು. ಕಷ್ಟ, ಸಂಕಷ್ಟ, ದುಃಖ, ನಿರಾಸೆ ಕಟ್ಟಿಟ್ಟ ಬುತ್ತಿಯಾಗಿರುತ್ತವೆ; ಕಾಲ ಹಾಗೂ ಶಕ್ತಿ–ಸಾಮರ್ಥ್ಯಗಳು ವ್ಯರ್ಥವಾಗುತ್ತವೆ. ಒಂದು ವಿಷಯವನ್ನು ಆರಿಸಿಕೊಳ್ಳುವುದಕ್ಕೆ ಮೊದಲು ಸಂಶೋಧಕನಿಗೆ ತನ್ನ ಭೌದ್ಧಿಕ ಆಸಕ್ತಿ, ಅಭಿರುಚಿ, ಸಾಮರ್ಥ್ಯ ಹಾಗೂ ಸಹಜ ಪ್ರವೃತ್ತಿಗಳ ಬಗ್ಗೆ ಅರಿವಿರಬೇಕು. ಅವನು ಯಾವ ವಿಷಯದ ಬಗ್ಗೆ ಅನ್ವೇಷಣೆ ನಡೆಸಲು ತನಗೆ ಅರ್ಹತೆ ಇದೆ ಎಂಬುದನ್ನು ತಿಳಿದುಕೊಳ್ಳಬೇಕು. ಅವನು ತನಗೆ ರಾಜಕೀಯ, ಸಾಮಾಜಿಕ, ಆರ್ಥಿಕ, ಬೌದ್ಧಿಕ, ಕಲಾತ್ಮಕ ಮುಂತಾದ ಅನೇಕ ವಿಷಯಗಳಲ್ಲಿ ಯಾವುದರಲ್ಲಿ ಆಸಕ್ತಿ ಇದೆ? ಯಾವ ವಿಷಯದ ಬಗ್ಗೆ ಸಮರ್ಪಕವಾಗಿ ಅಧ್ಯಯನ ಮಾಡಿ ವೈಜ್ಞಾನಿಕ ವೃತ್ತಾಂತ ನೀಡಲು ತನಗೆ ಸಾಧ್ಯ? ಈ ವಿಷಯದ ಬಗ್ಗೆ ಸಾಕಷ್ಟು ಮಾಹಿತಿಗಳಿವೆಯೇ? ಅವುಗಳು ಒಂದೇ ಸ್ಥಳದಲ್ಲಿ ಸಿಕ್ಕುತ್ತವೆಯೇ? ಅಥವಾ ಎಲ್ಲೆಲ್ಲೂ ಚೆಲ್ಲಾಪಿಲ್ಲಿಯಾಗಿ ಚೆದರಿ ಹೋಗಿವೆಯೇ? ತನಗೆ ತಿಳಿದಿರುವ ಭಾಷೆಯಲ್ಲಿ ಮಾತ್ರ ಮಾಹಿತಿಗಳಿವೆಯೇ ಅಥವಾ ಬೇರೆ ಭಾಷೆಗಳಲ್ಲೂ ಇವೆಯೇ? ಹಾಗಾದರೆ ಏನು ಮಾಡಬೇಕು? ಮುಂತಾದ ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಕಂಡುಹಿಡಿದುಕೊಳ್ಳಬೇಕು.

ಎರಡನೆಯದಾಗಿ, ಅವನು ಆರಿಸಿಕೊಳ್ಳುವ ವಿಷಯ ಅತ್ಯಂತ ಸೀಮಿತ ವ್ಯಾಪ್ತಿಯುಳ್ಳದ್ದಾಗಿರಬೇಕು. ವಿಷಯ ಸೂಕ್ಷ್ಮ ಪ್ರಮಾಣದಲ್ಲಿದ್ದರೆ ಅದನ್ನು ಅಮೂಲಾಗ್ರವಾಗಿ ಪರಿಶೋಧಿಸಿ ಅದರ ಬಗ್ಗೆ ಎಲ್ಲ ಅಂಶಗಳನ್ನು ಒಳಗೊಂಡಂತಹ ವಿವರಣೆಯನ್ನು ಸಿದ್ಧಪಡಿಸಬಹುದು. ಉದಾಹರಣೆಗೆ, ವಿಜಯನಗರ ಅಥವಾ ಬ್ರಿಟಿಷ್ ಆಳ್ವಿಕೆಯ ಕಾಲವನ್ನು ಸಂಶೋಧನಾ ವಿಷಯವನ್ನಾಗಿ ಆರಿಸಿಕೊಂಡರೆ ಕೊನೆಯಲ್ಲಿ ಸಂಶೋಧಕನು ನೀಡುವ ಕಾಣಿಕೆ ಒಂದು ಪಠ್ಯಪುಸ್ತಕವೇ ಹೊರತು ಸಂಶೋಧನಾ ಕೃತಿಯಲ್ಲ. ಅವನು ಅದರಲ್ಲಿ ಒಂದು ಸೀಮಿತವಾದ ವಿಷಯವನ್ನು ಆರಿಸಿಕೊಳ್ಳಬೇಕು. ಅವನು ಕೃಷ್ಣದೇವರಾಯನ ಆಡಳಿತ ವ್ಯವಸ್ಥೆಯಲ್ಲಿ ಯುದ್ಧವೋ ಅಥವಾ ಒಳಾಡಳಿತ ನೀತಿಯೋ, ಹೀಗೆ ಯಾವುದಾದರೊಂದು ವಿಷಯವನ್ನು ಆರಿಸಿಕೊಂಡು ಆಳವಾಗಿ ಸಂಶೋಧನೆಯನ್ನು ನಡೆಸಬೇಕು. ಅವನಿಗೆ ತನ್ನ ವಿಷಯದ ವ್ಯಾಪ್ತಿ ಹಾಗೂ ಸ್ವರೂಪದ ಬಗ್ಗೆ ಒಂದು ಸೂಕ್ಷ್ಮ ಅರಿವಿರಬೇಕು. ಒಂದು ನಿರ್ದಿಷ್ಟ ಕಾಲದಲ್ಲಿ ಸಂಶೋಧನೆಯನ್ನು ಮುಗಿಸಲು ಅವನಿಗೆ ಸಾಧ್ಯವಾಗಬೇಕು. ಮೂರನೆಯದಾಗಿ, ಸಂಶೋಧಕನು ಆ ವಿಷಯದ ಬಗ್ಗೆ ಬೇರೆ ಯಾರೂ ವಿಚಾರ ಮಾಡಿಲ್ಲ ಎಂಬುದನ್ನು ಖಚಿತಪಡಿಸಿಕೊಂಡು ಅದರ ಬಗ್ಗೆ ಒಂದು ನವೀನವಾದ

ಸ್ವಂತಿಕೆಯಿಂದ ಕೂಡಿರುವ, ಸ್ವಾರಸ್ಯಕರವಾದ ಹಾಗೂ ಉಪಯುಕ್ತವಾದ ವಿವರಣೆಯನ್ನು ನೀಡಬಹುದೆಂಬುದನ್ನು ನಿರ್ಧಾರಪಡಿಸಿಕೊಳ್ಳಬೇಕು. ಅದು ವಾಚಕರಿಗೂ ಆಕರ್ಷಕವಾಗಿರುವ ವಿಷಯವಾಗಿದೆಯೇ ಎಂಬುದನ್ನು ಗೊತ್ತುಮಾಡಿಕೊಳ್ಳಬೇಕು. ನಾಲ್ಕನೆಯದಾಗಿ, ಸಂಶೋಧಕನು ತನ್ನ ಅನ್ವೇಷಣೆಯ ಉದ್ದೇಶವೇನು, ಸಂಶೋಧನೆ ನಡೆಸಿ ಏನನ್ನು ಸಮರ್ಥಿಸುವ ಇಚ್ಛೆ ತನ್ನದು, ತನ್ನ ಗುರಿ ಏನು, ಕೇವಲ ನೂತನ ವಿಷಯಗಳನ್ನು ಕಂಡುಹಿಡಿದು ಸೇರಿಸುವುದೇ ನೂತನ ಅರ್ಥ ವಿವರಣೆ, ವ್ಯಾಖ್ಯಾನವನ್ನು ನೀಡುವುದೇ, ಅಥವಾ ಒಂದು ನೂತನ ಸಿದ್ಧಾಂತವನ್ನು ಮುಂದಿಡುವುದೇ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು.

ಐದನೆಯದಾಗಿ ಅನ್ವೇಷಕನು ತನ್ನ ಬರವಣಿಗೆಯ ಉದ್ದೇಶ ಕೇವಲ ನಿರೂಪಣೆಯೇ, ಚರ್ಚೆಯೇ, ಕಥನವೇ ಅಥವಾ ವರ್ಣನೆಯೇ ಎಂಬುದನ್ನು ನಿರ್ಧರಿಸಿಕೊಳ್ಳಬೇಕು. ನಿರೂಪಣೆ ಎಂದರೆ ವಿಷಯಗಳನ್ನು ತಿಳಿಸುವುದು, ವಾಸ್ತವಿಕ ವಿವರಗಳನ್ನು ಒದಗಿಸುವುದು ಎಂದಾಗುತ್ತದೆ. ಚರ್ಚೆಯು ಬೇರೆಯವರ ಅಭಿಪ್ರಾಯವನ್ನು ಒಪ್ಪದೆ, ನೂತನ ಅಭಿಪ್ರಾಯಗಳನ್ನು ಮಂಡಿಸಿ ಸಮರ್ಥಿಸಲು ಮಾಡುವ ವಿಮರ್ಶಾತ್ಮಕ ಅಧ್ಯಯನ ಕಥನದಲ್ಲಿ ಘಟನೆಗಳನ್ನು ಕಾಲಾನುಕ್ರಮಕ್ಕನುಸಾರವಾಗಿ ವಿವರಿಸಲಾಗುತ್ತದೆ. ಐತಿಹಾಸಿಕ ಬರಹಗಳಲ್ಲಿ ಈ ನಾಲ್ಕು ಬಗೆಗಳಲ್ಲಿ ಒಂದು ಪ್ರಧಾನವಾಗಿರುತ್ತದೆ. ಕೊನೆಯದಾಗಿ, ತಾನು ಸಿದ್ಧಪಡಿಸಲು ಉದ್ದೇಶಿಸಿರುವುದು ದಾಖಲೆಯೋ ಅಥವಾ ಪ್ರೌಢ ಪ್ರಬಂಧವೋ ಎಂಬುದನ್ನು ನಿರ್ಧರಿಸಿಕೊಳ್ಳಬೇಕು. ದಾಖಲೆಯಲ್ಲಿ ಮೂಲಾಧಾರಗಳಲ್ಲಿ ಸಿಗುವ ವಿಷಯಗಳನ್ನು ಕ್ರಮಬದ್ಧವಾದ ರೀತಿಯಲ್ಲಿ ಅಣಿಮಾಡಿಡಲಾಗುತ್ತದೆ. ಉದಾಹರಣೆಗೆ, ಜಾದೂನಾಥ್ ಸರ್ಕಾರ್ ಅವರ "ಫಾಲ್ ಆವ್ ದಿ ಮೊಗಲ್ ಎಂಪೈರ್" ಒಂದು ನಿರ್ದಿಷ್ಟ ಸಿದ್ಧಾಂತವನ್ನು ಪ್ರತಿಪಾದಿಸಿದ ಮಹಾಪ್ರಬಂಧ. ಹೀಗೆ ಸಂಶೋಧಕನು ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ತಕ್ಕ ವಿಷಯವನ್ನು ಆರಿಸಿಕೊಳ್ಳಬೇಕು. ಒಂದು ಸಲ ತನ್ನ ವಿಷಯ ಯಾವುದೆಂಬುದನ್ನು ಖಚಿತಪಡಿಸಿಕೊಂಡ ಮೇಲೆ ಅವನು ಕೊನೆಯವರೆಗೆ ಅದರ ಮೇಲಿಂದ ಕಣ್ಣನ್ನು ತೆಗೆಯಲೇಕೂಡದು.

## 5.3.2 ಗ್ರಂಥ ವಿವರಣ ಪಟ್ಟಿ

ವಿಷಯದ ಆಯ್ಕೆಯಾದ ನಂತರ ಗ್ರಂಥ ವಿವರಣ ಪಟ್ಟಿಯ ಸಿದ್ಧತೆಗೆ ಗಮನವನ್ನು ಕೊಡಬೇಕಾದುದು ಸಂಶೋಧಕನ ಎರಡನೆಯ ಕಾರ್ಯ. ಇದರಿಂದ ಅವನಿಗೆ ತನ್ನ ವಿಷಯಕ್ಕೆ ಸಂಬಮಧಿಸಿರುವ ವಿಷಯ ಸಾಮಗ್ರಿಗಳ ಹರವಿನ ಸ್ಥೂಲ ಪರಿಚಯವಾಗುತ್ತದೆ. ಅವುಗಳನ್ನು ಅವಶಿಷ್ಟಗಳು ಮತ್ತು ದಾಖಲೆಗಳು ಎಂಬುದಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು. ನಾಲ್ಕು ಬಗೆಯ ಅವಶಿಷ್ಟಗಳನ್ನು ಕಾಣಬಹುದು.

(1) ಶಾರೀರಿಕ ಅಥವಾ ಅಸ್ಥಿಪಂಜರಗಳ ಉಳಿಕೆಗಳು ಮೊದಲನೆಯ ರೀತಿಯ ಅವಶಿಷ್ಟಗಳು. ಭೂತಾಯಿಯು ತನ್ನ ವಿಶಿಷ್ಟ ಅಭಿಲೇಖ ರಕ್ಷಾಲಯದಲ್ಲಿ ಇವುಗಳನ್ನು ಸಂರಕ್ಷಿಸಿಟ್ಟಿರುತ್ತಾಳೆ. ಸಮಾಧಿಗಳು ಎಂದೋ ಮೃತ್ಯುವನ್ನಪ್ಪಿದವರ ದೈಹಿಕ ಉಳಿಕೆಗಳನ್ನು ರಕ್ಷಿಸಿ ಬಚ್ಚಿಟ್ಟುಕೊಂಡಿರುತ್ತವೆ. ಈ ಉಳಿಕೆಗಳು

ದೊರಕಿದ ಸ್ಥಳಗಳ ಹಾಗೂ ಅವುಗಳ ಸಂಗಡ ಇರುವ ಮಾನವಕೃತ ವಸ್ತುಗಳ ಆಧಾರದ ಮೇಲೆ ಸಂಶೋಧಕನು ಮಾನವನ ಪ್ರಾಚೀನತೆ ಹಾಗೂ ಅವನ ಸಂಸ್ಕೃತಿಯ ಸ್ವರೂಪವನ್ನು ಅರ್ಥಮಾಡಿಕೊಳ್ಳಬಹುದು. (2) ಮಾನವನು ನಿರ್ಮಿಸಿರುವ ಯುದ್ಧ, ಶಾಂತಿ ಹಾಗೂ ದೈನಂದಿನ ಜೀವನಕ್ಕೆ ಉಪಯುಕ್ತವಾದ ವಸ್ತುಗಳು ಮತ್ತು ಅಲಂಕರಣ ಸಾಮಗ್ರಿಗಳು ಎರಡನೆಯ ತರಹದ ಅವಶಿಷ್ಟಗಳು. ಸಮಾಧಿಗಳಲ್ಲಿ ಗುಪ್ತವಾಗಿದ್ದ ಶಾಸನ, ಚಿತ್ರ, ಪ್ರತಿಮೆ, ಪಾಕಪಾತ್ರೆ, ಗಾಜಿನ ಹೂದಾನಿ, ಚಮಚ, ಬಾಚಣಿಗೆ ಮುಂತಾಗಿ ದಿನನಿತ್ಯದ ಬದುಕಿಗೆ ಅವಶ್ಯಕವಾಗಿದ್ದ ಇತರ ಅನೇಕ ಸೂಕ್ಷ್ಮ ಸಾಧನ ಸಾಮಗ್ರಿಗಳು ತಮ್ಮ ಸೃಷ್ಟಿಕರ್ತ ಜನರು ಎಷ್ಟು ಬುದ್ಧಿಶಾಲಿಗಳಾಗಿದ್ದರು, ಎಂತಹ ಕಲೋಪಾಸಕರಾಗಿದ್ದರು ಎಂಬುದನ್ನು ಎತ್ತಿತೋರಿ ಅವರ ಬಾಳನ್ನು ಕುರಿತ ಸರಿಯಾದ ವಿವರಗಳನ್ನು ಒದಗಿಸುವ ವಿಷಯ ಆಗರವಾಗಿವೆ. ಶಿಲಾಶಾಸನ, ಬರವಣಿಗೆಯ ಹಾಗೂ ಮುದ್ರಣ ಕಲೆ ತಲೆದೋರಿದ್ದರೂ ಅವುಗಳ ಪ್ರಾಮುಖ್ಯತೆ ಕಡಿಮೆಯಾಗಿಲ್ಲ. ವೈವಿಧ್ಯಮಯವಾಗಿರುವ ಈ ಮಾನವ ನಿರ್ಮಿತ ವಸ್ತುಗಳು ಆರ್ಥಿಕ ಹಾಗೂ ಸಾಮಾಜಿಕ ಇತಿಹಾಸದ ಮೇಲೆ ಹೆಚ್ಚು ಬೆಳಕನ್ನು ಬೀರುತ್ತವೆ. ಸಂಶೋಧಕನು ಬುದ್ಧಿಸೂಕ್ಷ್ಮತೆ ಹಾಗೂ ಎಚ್ಚರಿಕೆಯಿಂದ ಈ ಮೂಕ ಸಾಕ್ಷಿಗಳು ನಿಶ್ಯಬ್ಧವಾಗಿ ನೀಡುವ ವಿವರಣೆಗಳನ್ನು ಆಲಿಸಿ, ಅವುಗಳ ಅರ್ಥ ಹಾಗೂ ಮಹತ್ತ್ವವನ್ನು ಅರಿತುಕೊಳ್ಳಲು ಯತ್ನಿಸಬೇಕು. ನಿಶ್ಚಯವಾಗಿ ಮಣ್ಣಿನಿಂದ ಅರಳಿ, ಬೆಳೆದುಬಂದಿದೆ ಮಾನವನ ಇತಿಹಾಸ, (3) ಅತ್ಯಂತ ವಿಶಾಲಾರ್ಥದಲ್ಲಿ ಪ್ರಸಕ್ತ ಬದುಕಿಗೆ ಹಾದುಬಂದಿರುವ ಮಾನವ ಯೋಜಿತ ಸಂಸ್ಥೆ, ಸಂಪ್ರದಾಯ, ಅಭ್ಯಾಸ, ಆಟಪಾಠ, ಆಚಾರಪದ್ಧತಿ, ಮತಧರ್ಮ ಇತ್ಯಾದಿಗಳು ಮೂರನೆಯ ತರಹದ ಅವಶಿಷ್ಟಗಳು. ಅವುಗಳು ಮಾನವ ಜೀವನ ವಾಹಿನಿಯು ನಿರಂತರವಾಗಿ ಹರಿದುಬಂದಿದೆ ಎಂಬುದಕ್ಕೆ ನಿರ್ವಿವಾದವಾಗಿರುವ ನಿದರ್ಶನಗಳು ಮತ್ತು ನಾಗರಿಕತೆ ಎಂಬ ಬಹುದೊಡ್ಡ ನಿಚ್ಚಣಿಗೆಯಲ್ಲಿ ಯಾವ ಹಂತದಲ್ಲಿದ್ದ ಜನರು ಅವುಗಳನ್ನು ಕಟ್ಟು ಬೆಳೆಸಿದರು ಎಂಬುದನ್ನು ತಿಳಿಸುವ ವಿಶ್ವಾಸನೀಯವಾಗಿರುವ ವಿಷಯ ಕೇಂದ್ರಗಳು. (4) ವಾಚಿಕ ಉಳಿಕೆಗಳು ನಾಲ್ಕನೆಯ ಬಗೆಯ ಅವಶಿಷ್ಟಗಳು. ಅವುಗಳು ಲಿಖಿತ ಅಥವಾ ಮುದ್ರಿತ ವಿಷಯಗಳಿಗೆ ವಿರುದ್ಧವಾಗಿ ಬಾಯಿಮಾತುಗಳ ಮೂಲಕವಾಗಿ ಉಳಿದುಕೊಂಡು ಬಂದಿರುವ ವಿವರಗಳು. ಅವುಗಳು ಮುಂಚಿನ ಕಾಲಗಳಿಂದ ಬಾಯಿ ಮಾತಿನ ಮೂಲಕ ಪೀಳಿಗೆಯಿಂದ ಪೀಳಿಗೆಗೆ ರವಾನಿಸಲಾಗಿರುವ ಹಾಗೂ ಐತಿಹಾಸಿಕವಾದುವು ಎಂಬುದಾಗಿ ಸಾಧಾರಣವಾಗಿ ಪರಿಗಣಿಸಲಾಗಿರುವ ಪುರಾಣಕಥೆ, ಆಖ್ಯಾಯಿಕೆ, ಲಾವಣಿ, ಜನಶ್ರುತಿ, ಸಂಪ್ರದಾಯ, ಮೂಢನಂಬಿಕೆ ಮತ್ತು ಯಥಾರ್ಥವಾಗಿಲ್ಲದ ಅಥವಾ ಭಾಗಶಃ ಸತ್ಯವಾಗಿರುವ ಕಥೆಗಳನ್ನು ಒಳಗೊಂಡಿರುತ್ತವೆ. ಬಹಳ ಹಿಂದಿನ ಕಾಲದಿಂದ ಪೀಳಿಗೆಯಿಂದ ಪೀಳಿಗೆಗೆ ರವಾನಿಸುವಾಗ ಅವುಗಳ ವಿವರಗಳಲ್ಲಿ ಎಷ್ಟೋ ಬದಲಾವಣೆಗಳು ಉಂಟಾಗಿರುತ್ತವೆ. ವಿವೇಕಿಯಾಗಿರುವ ಸಂಶೋಧಕನು ಈ ತರಹದ ಅತ್ಯುಕ್ತಿಗಳನ್ನು ಕಡೆಗಣಿಸಿದರೂ ಈ ವಾಚಿಕ ಉಳಿಕೆಗಳನ್ನು ನಿರಾಧಾರವಾದುವುಗಳು ಎಂಬುದಾಗಿ ತಳ್ಳಿಹಾಕುವುದಿಲ್ಲ.

ವಿಷಯಗಳನ್ನು ರವಾನಿಸುವುದಕ್ಕಾಗಿ ಉದ್ದೇಶಪೂರ್ವಕವಾಗಿ ಬರೆದು ಅಥವಾ ಮುದ್ರಿಸಿ ಇಡಲಾಗಿರುವ ದಾಖಲೆಗಳು ಐತಿಹಾಸಿಕ ವಿಷಯ ಸಾಮಗ್ರಿಗಳ ಎರಡನೆಯ ವರ್ಗ. ಅವುಗಳು ಅವಶಿಷ್ಟಗಳಿಗಿಂತ ಇತ್ತೀಚಿನವು. ಉಳಿಕೆಗಳೊಂದಿಗೆ ಹೋಲಿಸಿ ನೋಡಿದರೆ ಅವುಗಳು ಕೇವಲ ನಿನ್ನೆಯ ವಿಷಯಗಳು. ಬರವಣಿಗೆಯ ಕಲೆಯ ಅರುಣೋದಯವಾದಂತೆ, ಐತಿಹಾಸಿಕ ವಿಷಯಗಳನ್ನು ದಾಖಲು

ಮಾಡುವುದಕ್ಕೆ ಅವಶ್ಯಕವಾದ ಆಧಾರ ದೊರಕಿದಂತಾಯಿತು. ಮೂಲತಃ ದಾಖಲೆಗಳನ್ನು ಪ್ರಾಥಮಿಕ ಅಥವಾ ಮೂಲ ಮತ್ತು ಮಾಧ್ಯಮಿಕ ಅಥವಾ ವ್ಯುತ್ಪನ್ನ ಆಧಾರಗಳೆಂಬುದಾಗಿ ಎರಡು ಭಾಗಗಳಾಗಿ ವಿಭಾಗಿಸಲಾಗುತ್ತದೆ.

ಪ್ರಾಥಮಿಕ ಅಥವಾ ಮೂಲಗ್ರಂಥದ ಕರ್ತೃವು ತನ್ನ ಸ್ವಂತ ಜ್ಞಾನದ ಆಧಾರದ ಮೇಲೆ ಸಮರ್ಥನೆಗಳನ್ನು ನೀಡಿರುತ್ತಾನೆ. ಸಾಧಾರಣವಾಗಿ ಮೂಲಕೃತಿಗಳು ಸಮಕಾಲೀನವಾಗಿರುತ್ತವೆ. ಅಂದರೆ, ಅವುಗಳು ವಿವರಿಸ–ಲಾಗಿರುವ ಘಟನೆಗಳ ಕಾಲಕ್ಕೆ ಸೇರಿದವುಗಳಾಗಿರುತ್ತವೆ. ಒಂದು ಮೂಲಕೃತಿಯಲ್ಲಿ ಇರುವ ವಿವರಗಳೆಲ್ಲಾ ಇನ್ನೊಬ್ಬರ ಮೂಲಕವಾಗಿ ಅಲ್ಲದೆ ನೇರವಾಗಿ ಬಂದಿರುವ ವಿಷಯಗಳಾಗಿರುವುದಿಲ್ಲ ಎಂಬುದನ್ನು ಗಮನದಲ್ಲಿಡ–ಬೇಕು. ಕಾರಣ ಅದರ ಕರ್ತೃವು ಅನೇಕ ವೇಳೆ ಕೆಲವು ಅಂಶಗಳ ಬಗ್ಗೆ ಹೇಳಿಕೆಗಳನ್ನು ಇತರ ಬರಹಗಾರರು ಒದಗಿಸುವ ವಿಷಯಗಳ ಆಧಾರದ ಮೇಲೆ ನೀಡಿರುತ್ತನೆಯೇ ಹೊರತು ತನ್ನ ಸ್ವಂತ ಜ್ಞಾನದ ಆಧಾರದ ಮೇಲಲ್ಲ. ಆದ್ದರಿಂದ ಒಂದು ಮೂಲಗ್ರಂಥದ ಕರ್ತೃವಿಗೆ ಸತ್ಯವನ್ನು ತಿಳಿಯುವುದಕ್ಕಿದ್ದ ಅವಕಾಶ ಮತ್ತು ಸತ್ಯವನ್ನು ಹೇಳಲು ಇದ್ದ ಆಸಕ್ತಿ ಹಾಗೂ ಸಂಕಲ್ಪ ಶಕ್ತಿಯ ಆಧಾರದ ಮೇಲೆ ಆ ಕೃತಿಯ ಮೌಲ್ಯವನ್ನು ಅಳೆಯಬಹುದು. ಸಾಧಾರಣವಾಗಿ ಅತ್ಯಂತ ಮುಂಚಿನ ಮೂಲಕೃತಿಗಳು ಅತ್ಯುತ್ತಮವಾದವುಗಳು.

ಪ್ರಾಥಮಿಕ ಆಧಾರಗಳು ಅಸಂಖ್ಯಾತವಾಗಿವೆ. ಅವುಗಳು ವಿವಿಧ ಬಗೆಯವು ಹಾಗೂ ವಿಭಿನ್ನ ಮೌಲ್ಯವುಳ್ಳವುಗಳು. ಕೆಲವು ಲಿಖಿತ ಅಥವಾ ಮುದ್ರಿತ ಮೂಲ ಕೃತಿಗಳು ಆಧಾರ ಪ್ರಮಾಣಗಳಾಗಿರುತ್ತವೆ. ನಿಷ್ಕೃಷ್ಟವಾಗಿ ಹೇಳಬೇಕಾದರೆ, ರಾಜಶಾಸನ, ಸನ್ನದು, ಕರಾರು, ನಿರೂಪ, ಉಯಿಲು, ದಾಖಲೆ ಪುಸ್ತಕ, ದಸ್ತೈವಜು, ಅಧಿಕೃತ ಪತ್ರ ವ್ಯವಹಾರಗಳು ಮುಂತಾದ ಸರ್ಕಾರಿ ಹಾಗೂ ವೈಧಾನಿಕ ಅಥವಾ ಕಾನೂನಿನ ಪತ್ರಗಳು ಇತಿಹಾಸ ಕ್ಷೇತ್ರದಲ್ಲಿ ಪ್ರಮುಖ ಆಧಾರ ಪ್ರಮಾಣಗಳಾಗಿರುತ್ತವೆ. ಅವುಗಳನ್ನು ಪತ್ರಾಗಾರಗಳಲ್ಲಿ ಇಡಲಾಗಿರುತ್ತದೆ. ಎಲ್ಲಾ ದಾಖಲೆಗಳಿಗೂ ಒಂದೇ ಮೌಲ್ಯವಿರುವುದಿಲ್ಲ. ಅನೇಕ ಮೂಲಾಧಾರಗಳು ಐತಿಹಾಸಿಕ ವಸ್ತುಸ್ಥಿತಿಗಳನ್ನು ಕುರಿತ ಸಂಪೂರ್ನವಾದ ಹಾಗೂ ನಿಖರವಾದ ದಾಖಲೆಗಳಾಗಿರುವುದಿಲ್ಲ. ಕೆಲವು ಪ್ರಮುಖ ವಿಷಯಗಳ ಬಗ್ಗೆ ಇರುವ ಮೂಲ ದಾಖಲೆಗಳು, ಕಾಲ ಪ್ರವಾಹಕ್ಕೆ ತುತ್ತಾಗಿ ಕಣ್ಮರೆಯಾಗಿ ಹೋಗಿರುವ ಪ್ರಮಾಣಗಳು ಹಲವಾರು ಎಂಬುದನ್ನು ಮರೆಯಬಾರದು. ಪ್ರಕಟವಾಗದ ಹಿಂದಿನ ಸಮಕಾಲೀನ ದಾಖಲೆ ಹಾಗೂ ನಿಯತಕಾಲಿಕ, ಕರಡು ಲೇಖನ, ಖಾಸಗಿ ಪತ್ರ, ಶಾಸನ, ನಾಣ್ಯ ಹಾಗೂ ಸಾಹಿತ್ಯ ಕೃತಿಗಳನ್ನೂ ಸಹ ಪ್ರಾಥಮಿಕ ಮೂಲಾಧಾರಗಳೆಂಬುದಾಗಿ ಎಣಿಸಬಹುದು.

ಮಾಧ್ಯಮಿಕ ಮೂಲಾಧಾರಗಳು ದಾಖಲೆಗಳ ಎರಡನೆಯ ಪ್ರಧಾನ ವರ್ಗ. ಪ್ರಕಟವಾಗಿರುವ ವಿಷಯ, ಪುಸ್ತಕ, ದಾಖಲೆ, ನಿಯತಕಾಲಿಕ ಹಾಗೂ ನಂತರ ತಲೆದೋರಿದ ಗ್ರಂಥಗಳನ್ನೆಲ್ಲಾ ಮಾಧ್ಯಮಿಕ ಮೂಲಾಧಾರಗಳೆಂಬುದಾಗಿ ಕರೆಯಬಹುದು. ಒಂದು ಮಾಧ್ಯಮಿಕ ಮೂಲಾಧಾರವು ಇತರ ಕೃತಿಗಳು ಒದಗಿಸುವ ಜ್ಞಾನವನ್ನು ಅವಲಂಬಿಸಿಕೊಂಡಿರುತ್ತದೆ. ನಡೆಸಲಾಗಿರುವ ಸಂಶೋಧನೆಯು

ಪರಿಪೂರ್ಣವಾಗಿದೆಯೇ ಮತ್ತು ನೀಡಲಾಗಿರುವ ವಿಮರ್ಶೆಯು ನಿಷ್ಪಕ್ಷಪಾತವಾದುದಾಗಿದೆಯೇ ಎಂಬುದರ ಆಧಾರದ ಮೇಲೆ ಅದರ ಮೌಲ್ಯವನ್ನು ನಿರ್ಧರಿಸಬಹುದು.

ಈ ಆಧಾರಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು:

ಇತಿಹಾಸದ ಪ್ರಮಾಣಗಳು

ದಾಖಲೆಗಳು

ಲಿಖಿತ

(ವಿಷಯಗಳ ಉದ್ದೇಶಪೂರ್ವಕ ಸಂಪ್ರೇಷಕಗಳು)

1) ವೃತ್ತಾಂತಗಳು, ವಾರ್ಷಿಕ ಅಭಿಲೇಖಗಳು, ಜೀವನ ಚರಿತ್ರೆಗಳು, ವಂಶಾವಳಿಗಳು

2) ಆತ್ಮಕಥೆಗಳು, ದಿನಚರಿಗಳು

3) ಕೆಲವು ಬಗೆಯ ಶಾಸನಗಳು

4) ಗೂಢವಾದ ಚರಿತ್ರಾಂಶಗಳು, ಐತಿಹ್ಯಗಳು, ಲಾವಣಿಗಳು, ದಂತಕಥೆಗಳು, ವೀರ ಕಥೆಗಳು

5) ಫೋನೋಗ್ರಾಫ್ ಅಥವಾ ಧ್ವನಿಲೇಖನಗಳು ಮತ್ತು ಟೇಪಿನ ದಾಖಲೆಗಳು

ಕಲಾಕೃತಿಗಳು

6) ಮಾನವ ಅವಶೇಷಗಳು, ಪತ್ರಗಳು, ಸಾಹಿತ್ಯ, ಸಾರ್ವಜನಿಕ ದಸ್ತೈವಜುಗಳು. ವಾಣಿಜ್ಯ ದಾಖಲೆಗಳು ಮತ್ತು ಕೆಲವು ರೀತಿಯ ಶಾಸನಗಳು.

7) ಭಾಷೆ, ಸಂಪ್ರದಾಯಗಳು ಮತ್ತು ಸಂಸ್ಥೆಗಳು.

8) ಉಪಕರಣಗಳು ಮತ್ತು ಇತರ ಮನುಷ್ಯನಿರ್ಮಿತ ವಸ್ತುಗಳು.

ಪ್ರಾರಂಭದ ಹಂತಗಳಲ್ಲಿ ಸಂಶೋಧಕನು ತಾನು ಆರಿಸಿಕೊಂಡಿರುವ ವಿಷಯಕ್ಕೆ ಸಂಬಂಧಿಸಿರುವ ಪ್ರಾಥಮಿಕ ಮತ್ತು ಮಾಧ್ಯಮಿಕ ಕೃತಿಗಳನ್ನು ಜಾಗರೂಕತೆಯಿಂದ ಪರಾಮರ್ಶಿಸಬೇಕು. ಅವನು ಮುದ್ರಿಸಲ್ಪಟ್ಟಿರುವ ವಿಷಯಗಳನ್ನು ಮೊದಲು ಅಧ್ಯಯನ ಮಾಡುವುದು ಒಳ್ಳೆಯದು. ಇದರಿಂದ ಪ್ರಕಟವಾಗದಿರುವ ವಿಷಯಗಳ ಬಗ್ಗೆ ವಿವರಗಳನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಸಂಶೋಧಕನಿಗಿಂತ ಮೊದಲೇ ಇದೇ ವಿಷಯಕ್ಷೇತ್ರಗಳಲ್ಲಿ ಕೆಲಸ ಮಾಡಿರುವ ಅನ್ವೇಷಕರು ಈ ಅನೇಕ ಮೂಲಕೃತಿಗಳನ್ನು ಪರಾಮರ್ಶಿಸಿ ಅವುಗಳ ಬಗ್ಗೆ ಖಚಿತವಾದ ವಿವರಗಳನ್ನು ನೀಡಿರಬಹುದು. ಇದರಿಂದ ಆ ಮೂಲಾಧಾರಗಳು ಎಲ್ಲಿವೆ ಎಂಬುದನ್ನು ಪತ್ತೆಹಚ್ಚುವುದು ಅವನಿಗೆ ಸುಲಭ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅವನು ಅವುಗಳನ್ನು ಕಂಡುಹಿಡಿಯುವುದಕ್ಕಾಗಿ ಅಮೂಲ್ಯವಾದ ಕಾಲವನ್ನು ವ್ಯರ್ಥಮಾಡಿಕೊಳ್ಳಬೇಕಾಗುತ್ತದೆ. ಇತರ ಅನ್ವೇಷಕರು ಅವುಗಳನ್ನು ಭಾಗಶಃ ಬಳಸಿಕೊಂಡಿರಬಹುದು. ಸಂಶೋಧಕನು ಎಷ್ಟರಮಟ್ಟಿಗೆ ಅವರು ಅವುಗಳನ್ನು ಉಪಯೋಗಿಸಿಕೊಂಡಿದ್ದಾರೆ ಎಂಬುದನ್ನು ಅರಿಯುವುದಕ್ಕಾಗಿ ಅವರ ಕೃತಿ ಹಾಗೂ ಆ ಮೂಲಕೃತಿಗಳನ್ನು ಕೂಲಂಕಷವಾಗಿ ಪರಾಮರ್ಶಿಸಬೇಕು. ಇದರಿಂದ ಅವನಿಗೆ ತಾನು ಆಯ್ಕೆ ಮಾಡಿಕೊಂಡಿರುವ ವಿಷಯದ ಬಗ್ಗೆ ಎಷ್ಟು ಕೆಲಸ ನಡೆದಿದೆ, ಮಾಡಬೇಕಾದ ಕೆಲಸವಾವುದು ಎಂಬುದೂ ಸಹ ಸ್ಪಷ್ಟವಾಗುತ್ತದೆ ಮತ್ತು ತನ್ನ ವಿಷಯದ ಮಿತಿಯನ್ನು ಖಚಿತವಾಗಿ ನಿರ್ಧರಿಸಿಕೊಳ್ಳುವುದು ಅವನಿಗೆ

ಸಾಧ್ಯವಾಗುತ್ತದೆ. ಬೆಳಕಿಗೆ ತರಲಾಗಿರುವ ವಾಸ್ತವಾಂಶಗಳಾವುವು, ಇನ್ಯಾವ ವಿಷಯಗಳು ಕತ್ತಲೆಯ ಗರ್ಭದಲ್ಲೇ ಅಡಗಿಕೊಂಡಿವೆ, ಅವುಗಳನ್ನು ಹೇಗೆ ಬೆಳಕಿಗೆ ಎಳೆದು ತಂದು ಸ್ಪಷ್ಟವಾಗಿ ವಿವರಿಸಬೇಕು ಮತ್ತು ನೂತನ ವಿಷಯಗಳನ್ನು ಸೇರಿಸಬೇಕಾದ ಹಾಗೂ ನವೀನ ವಿಷಯಗಳನ್ನು ನೀಡಬೇಕಾದ ಹೊಸ ವಿಷಯಕ್ಷೇತ್ರ ಯಾವುದು ಎಂಬುದನ್ನು ತಿಳಿದುಕೊಳ್ಳಲು ಅವನು ಶಕ್ತನಾಗುತ್ತಾನೆ. ಗ್ರಂಥವಿವರಣ ಪಟ್ಟಿಯನ್ನು ತಯಾರಿಸುವ ಕೆಲಸವು ನಿರಂತರವಾದುದು. ಆ ಪಟ್ಟಿ ಅಪೂರ್ಣವಾಗಿಯೇ ಇರುತ್ತದೆ. ಕಾರಣ ಕಾಲಕಾಲಕ್ಕೆ ತಲೆದೋರುವ ನೂತನ ಕೃತಿಗಳ ಹೆಸರುಗಳನ್ನು ಸೇರಿಸುತ್ತಲೇ ಇರಬೇಕಾಗುತ್ತದೆ. ಸಂಶೋಧನೆಯು ಮುಗಿಯುವವರೆಗೆ ಅನ್ವೇಷಕನು ಪ್ರಕಟವಾಗುತ್ತಿರುವ ಅತ್ಯಂತ ಇತ್ತೀಚಿನ ಸುಸಂಬದ್ಧ ವಿಷಯ ಹಗೂ ಸಂಭವಗಳ ಮೇಲೆ ಒಂದು ಕಣ್ಣನ್ನು ಇಟ್ಟೇ ಇರಬೇಕು. ಉದಾಹರಣೆಗೆ, ಪೂರ್ವೇತಿಹಾಸದ ಅಧ್ಯಯನಕ್ಕೆ ಸಂಬಂಧಪಟ್ಟಿರುವ ಗ್ರಂಥವಿವರಣ ಪಟ್ಟಿಯು ಆಧುನಿಕ ಯುಗಕ್ಕೆ ಸಂಬಂಧಿಸಿರುವ ಅನ್ವೇಷಣೆಗೆ ಹೆಚ್ಚು ಉಪಯುಕ್ತವಾಗುವುದಿಲ್ಲ. ಅದೇ ರೀತಿ ಕಲಾ ಇತಿಹಾಸದ ಗ್ರಂಥ ವಿವರಣ ಪಟ್ಟಿಗೂ, ರಾಜಕೀಯ ಚರಿತ್ರೆಯ ಪಟ್ಟಿಗೂ ಭೇದವಿರುತ್ತದೆ. ಆರಂಭದ ಹಂತಗಳಲ್ಲಿ ಆರಿಸಿಕೊಂಡಿರುವ ವಿಷಯಕ್ಕೆ ಸಂಬಂಧಪಟ್ಟಿರುವ ಹಾಗೂ ದೊರಕುವ ಕೃತಿಗಳ ಬಗ್ಗೆ ಒಂದು ಸೂಕ್ಷ್ಮ ಪರಿಚಯ ಸಂಶೋಧಕನಿಗೆ ಅವಶ್ಯಕವಾಗಿ ಇರಬೇಕು.

### 5.3.3 ಒಂದು ರೂಪುರೇಖೆಯನ್ನು ರಚಿಸುವ ಅವಶ್ಯಕತೆ

ವಿಷಯದ ಆಯ್ಕೆ ಹಾಗೂ ಗ್ರಂಥ ವಿವರಣಾಪಟ್ಟಿಯ ಸಿದ್ಧತೆಯಾದ ಮೇಲೆ ತನ್ನ ಸಮಗ್ರ ಸಂಶೋಧನಾ ಕಾರ್ಯದ ಬಗ್ಗೆ ಒಂದು ರೂಪರೇಖೆಯನ್ನು ತಯಾರಿಸಬೇಕಾದುದು ಸಂಶೋಧಕನ ಕೆಲಸ. ಅದು ಸಮಗ್ರ ಸಂಶೋಧನಾ ವಿನ್ಯಾಸ ಪರಿಕಲ್ಪನೆಯ ಚೌಕಟ್ಟು ಹಾಗೂ ಮುಖ್ಯಾಂಶ ಸೂಚಿಯಾಗಿರುತ್ತದೆ. ಅದು ಸಂಶೋಧನಾ ಕ್ಷೇತ್ರದ ಹೊರಗೆರೆಗಳನ್ನು ಗುರುತಿಸುತ್ತದೆ; ಅವನಿಗೆ ತನ್ನ ಕಾರ್ಯಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಬೇಕಾದ ಒಂದು ವಿನ್ಯಾಸವನ್ನು ಒದಗಿಸುತ್ತದೆ. ಆದರೆ ಸಂಶೋಧನಾ ಕಾರ್ಯ ಮುಗಿಯುವವರೆಗೂ ಆ ರೂಪರೇಖೆ ಅಪೂರ್ಣವಾಗಿರುತ್ತದೆ. ಅದೊಂದು ಕಾರ್ಯೋಪಯೋಗಿ ಯೋಜನೆ ಮಾತ್ರ. ಅದು ಸಮಗ್ರ ಸಂಶೋಧನಾ ಪರಿಕಲ್ಪನೆಯ ಕರಡು ಪ್ರತಿಯಾಗಿರುತ್ತದೆ. ಸಂಶೋಧಕ ತನ್ನ ಕೆಲಸದ ಪ್ರಾರಂಭಕ್ಕೆ ಮುಂಚೆ ವ್ಯವಸ್ಥಿತವಾದ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸುತ್ತಾನೆ. ಅವಶ್ಯಕತೆಗನುಗುಣವಾಗಿ ಅದನ್ನು ಮಾರ್ಪಡಿಸಿಕೊಳ್ಳುವ ಹಕ್ಕುಂಟು. ಅದು ಅವನ ದಿಕ್ಸೂಚಿಯಾಗುವುದರಲ್ಲಿ ಸಂಶಯವಿಲ್ಲ.

ತನ್ನ ಸಂಶೋಧನೆಯ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಅವನು ವಿಷಯಗಳು ಕಂಡುಬಂದಂತೆ ಶೀಘ್ರವಾಗಿ ಗುರುತು ಹಾಕಿಟ್ಟುಕೊಳ್ಳಬೇಕು. ಹಸುವು ಬಯಲಿನಲ್ಲಿ ಬೇಗ ಬೇಗನೆ ಹುಲ್ಲನ್ನು ಮೇಯುತ್ತ ಬಂದು ನಂತರ ಒಂದೆಡೆಯಲ್ಲಿ ಕುಳಿತು ನಿಧಾನವಾಗಿ ಮೆಲುಕುಹಾಕುವ ತರದಲ್ಲಿ ಅವನೂ ವಿಷಯಗಳು ದೊರಕಿದಂತೆ ಕ್ರಮಬದ್ಧತೆಗೆ ಗಮನ ಕೊಡದೆ ತತ್‌ಕ್ಷಣ ಬರೆದಿಟ್ಟುಕೊಳ್ಳಬೇಕು. ಉದಾಹರಣೆಗೆ, 1857ರ ಘಟನೆಗಳ ಬಗ್ಗೆ ನೂತನ ಬೆಳಕು ಎಂಬುದಾಗಿ ವಿಷಯವನ್ನು ಆರಿಸಿಕೊಂಡಿರುವ ಮತ್ತು ಅದೊಂದು ಸಾರ್ವಜನಿಕ ಚಳವಳಿ ಎಂಬುದಾಗಿ ಸಮರ್ಥಿಸುವ ಉದ್ದೇಶವನ್ನು ಹೊಂದಿರುವ ಸಂಶೋಧಕನು ತನ್ನ ಮುಖ್ಯ ವಿಷಯಕ್ಕೆ ಸಂಬಂಧಿಸಿರುವ ಎಲ್ಲಾ ಮಾಹಿತಿಗಳನ್ನು ಬರೆದಿಟ್ಟುಕೊಳ್ಳುತ್ತಾನೆ.

ನಂತರ ಅವನು ಅವುಗಳಲ್ಲಿ ಅಮುಖ್ಯಾಂಶಗಳನ್ನು ಕೈಬಿಟ್ಟು, ಸುಸಂಬದ್ಧವಾದುದನ್ನು ಮಾತ್ರ ಇಟ್ಟುಕೊಂಡು ಅವುಗಳನ್ನೆಲ್ಲಾ ವರ್ಗಗಳಾಗಿ ಅಥವಾ ಶಿರೋನಾಮೆಗಳಾಗಿ ಉಪಯೋಗಿಸಿಟ್ಟುಕೊಳ್ಳುತ್ತಾನೆ. ನಂತರ ಅವುಗಳನ್ನು ತರ್ಕಬದ್ಧವಾದ ಕ್ರಮದಲ್ಲಿ ಪ್ರಧಾನ ಶಿರೋನಾಮೆಗಳಾಗಿ ಬಳಸಿಕೊಳ್ಳುತ್ತಾನೆ. ರೂಪರೇಖೆಯಲ್ಲಿ ಒಂದು ಪೀಠಿಕೆ ಇರಬೇಕು. ಇದರಲ್ಲಿ ಆರಿಸಿಕೊಂಡ ವಿಷಯದ ವ್ಯಾಪ್ತಿ, ಆ ವಿಷಯವನ್ನು ಸರಿಯಾದ ದೃಷ್ಟಿಕೋನದಲ್ಲಿ ವೀಕ್ಷಿಸಿ ವಿಚರ ಮಾಡುವುದಕ್ಕೆ ಅನುಕೂಲವಾಗಲು ಅದರ ಐತಿಹಾಸಿಕ ಹಿನ್ನೆಲೆಯ ವರ್ಣನೆ, ನೂತನವಾಗಿ ಬೆಳಕನ್ನು ಬೀರುವ ಹೊಸ ಅಂಶಗಳು, ಹೆಚ್ಚು ಗಮನಕೊಟ್ಟು ಚರ್ಚಿಸಬೇಕಾದ ವಿವಾದಾಂಶಗಳು ಮತ್ತು ಗುಪ್ತ ವಿಚಾರಗಳು, ವಿಶ್ಲೇಷಿಸಬೇಕಾದ ಸಮಸ್ಯಾಸರಣಿಗಳು ಇತ್ಯಾದಿಗಳ ಸೂಕ್ಷ್ಮ ಪರಿಚಯವನ್ನು ಮಾಡಿಕೊಡಲಾಗುತ್ತದೆ. ಇತರ ಅಧ್ಯಾಯಗಳಲ್ಲಿ ಮೂಲಭೂತವಾದ ಅಂಶಗಳನ್ನೆಲ್ಲಾ ಅನೇಕ ಪ್ರಧಾನ ಹಾಗೂ ಉಪ ಶಿರೋನಾಮೆಗಳ ಕೆಳಗೆ ವ್ಯವಸ್ಥಿತ ಕ್ರಮದಲ್ಲಿ ಚರ್ಚಿಸಲಾಗುತ್ತದೆ. ಕೊನೆಯದೇ ಮುಕ್ತಾಯದ ಅಧ್ಯಾಯ. ಇದರಲ್ಲಿ ಪೂರ್ಣವಾಗಿ ಮಹಾ ಪ್ರೌಢಪ್ರಬಂಧದ ತಿರುಳನ್ನು ಸಮಗ್ರ ಸಂಶೋಧನೆಯ ಫಲದ ಸಾರಾಂಶವನ್ನು ಪೀಠಿಕೆಯಲ್ಲಿ ಪ್ರಸ್ತಾಪಿಸಲಾದ ಪ್ರಶ್ನೆಗಳಿಗೆ ಉತ್ತರವನ್ನು, ವ್ಯಕ್ತಿ ಚಿತ್ರಣವನ್ನು, ವಿಶ್ಲೇಷಿಸಲಾದ ಘಟನೆಗಳ ಮೌಲ್ಯ ನಿರ್ಧಾರವನ್ನು ಕಾಣಬಹುದು.

ಈ ರೂಪರೇಖೆಯನ್ನು ರಚಿಸುವಾಗ ಸಂಶೋಧಕನು ಅದು ಸಮಗ್ರ ವಿಷಯವನ್ನು ಒಳಗೊಂಡಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಸಂಖ್ಯೆ ಹಾಗೂ ವ್ಯಾಖ್ಯೆಯಲ್ಲಿ ಪ್ರಧಾನ ಶಿರೋನಾಮೆಗಳು ಅಥವಾ ಅಧ್ಯಾಯಗಳು ಆರಿಸಿಕೊಂಡ ವಿಷಯದ ಶಿರೋನಾಮೆಗೆ ಅನುಗುಣವಾಗಿರಬೇಕು. ವಾಸ್ತವದಲ್ಲಿ, ರೂಪರೇಖೆಯನ್ನು ರಚಿಸುವುದು ಸಮಗ್ರ ಸಂಶೋಧನಾ ಕಾರ್ಯಕ್ರಮದ ಆರಂಭದಿಂದ ಕೊನೆಯವರೆಗೆ ಮಾಡಬೇಕಾಗಿರುವ ಆಲೊಚನಾ ಪ್ರಕ್ರಿಯೆಯೇ ಆಗಿರುತ್ತದೆ. ಸಂಶೋಧಕನು ರೂಪರೇಖೆಯಲ್ಲಿ ವಿಭಾಗಗಳನ್ನು ತಾರ್ಕಿಕವಾಗಿ ಅಣಿಮಾಡಲಾಗಿದೆಯೇ ಎಂಬುದನ್ನೂ ಸಹ ದೃಢಪಡಿಸಿಕೊಳ್ಳಬೇಕು. ಕಾಲ ಅಥವಾ ದೇಶ ಹಾಗೂ ವಿಷಯಕ್ಕೆ ಅನುಗುಣವಾಗಿ ವ್ಯವಸ್ಥಿತ ಕ್ರಮದ ಪ್ರಕಾರ ಸಂಬಂಧಪಟ್ಟಿರುವ ಮಾಹಿತಿಗಳನ್ನು ಪ್ರಧಾನ ಅಧ್ಯಾಯಗಳಾಗಿ ಅಣಿಮಾಡಬೇಕು. ಹೀಗೆ ರೂಪರೇಖೆಯು ಮಹಾಪ್ರೌಢ ಪ್ರಬಂಧದಲ್ಲಿ ವಿಚಾರ ಮಾಡಬೇಕಾದ ಮೂಲಭೂತ ವಿಷಯಗಳಿಗೆ ಸಂಬಂಧಿಸಿರುವ ಕ್ರಮಬದ್ಧ ಮಾದರಿಯನ್ನು ಅನುಸರಿಸುತ್ತದೆ. ಸಂಶೋಧನೆಯ ಮುಖ್ಯ ಬಿಂದುವನ್ನು ಎತ್ತಿತೋರುತ್ತದೆ ಮತ್ತು ಆರಿಸಿಕೊಂಡ ವಿಷಯದ ವ್ಯಾಪ್ತಿಯನ್ನು ಮತ್ತಷ್ಟು ಸೀಮಿತಗೊಳಿಸಿಕೊಳ್ಳಬೇಕೇ ಅಥವಾ ಬೇಡವೇ ಎಂಬುದನ್ನು ನಿಗದಿಪಡಿಸುತ್ತದೆ.

4) ಮುಖ್ಯ ಮಾಹಿತಿಗಳನ್ನು ಟಿಪ್ಪಣಿ ಮಾಡುವ ಕ್ರಮ

ಮುಂದಿನ ಹಂತ ಮಾಹಿತಿಗಳ ಬೇಟೆ; ಜಾಡನ್ನು ಹಿಡಿದು ಅರಸುವ ಪತ್ತೇದಾರಿ ಕಾರ್ಯ; ಹುಲ್ಲು ಮೆದೆಯಲ್ಲಿ ಸೂಜಿಯನ್ನು ಹುಡುಕುವ ಪ್ರಯತ್ನ; ತಾಳ್ಮೆಯ ಹಾಗೂ ಸ್ಥಿರ ಪ್ರಯತ್ನವನ್ನು ಎಚ್ಚರಿಕೆಯಿಂದ ಮಾಡುವ ಪ್ರವೃತ್ತಿಯುಳ್ಳ ವ್ಯಕ್ತಿಯು ತನ್ನ ಚುರುಕಿನಿಂದ ಅದನ್ನು ಕಂಡುಹಿಡಿಯಬಲ್ಲ. ಅವನು ಸರಿಯಾದ ಗ್ರಂಥ ಅಥವಾ ನಿಯತಕಾಲಿಕ ಎಂಬ ಬಣಬೆಯನ್ನು ಕಂಡುಹಿಡಿದು ತನ್ನ ಬುದ್ಧಿಶಕ್ತಿ ಎಂಬ ಆಯಸ್ಕಾಂತವನ್ನು ಬಳಸಿದರೆ ಸೂಜಿಯಂತಹ ಮಾಹಿತಿಗಳನ್ನು ಈಚೆಗೆ ಎಳೆದು ತಂದು

ಬಳಸಿಕೊಳ್ಳಬಹುದು. ಈ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿರುವ ಮುಂಚಿನ ಕೃತಿಗಳನ್ನು ಪಡೆಯಲು ಹಲವಾರು ಮಾರ್ಗಗಳಿರಬಹುದು. ಆದರೆ ನಮ್ಮ ದಾಖಲಾದ ಜ್ಞಾನ ನಿಧಿಯ ಬಹುಭಾಗಕ್ಕೆ ಗ್ರಂಥಾಲಯವು ಭಂಡಾರವಾಗಿರುತ್ತದೆ ಎಂಬುದು ನಿರ್ವಿವಾದ. ವಿಷಯ ಕ್ಷೇತ್ರಕ್ಕೆ ಹೋಗಿ ನೇರವಾಗಿ ಅವಲೋಕಿಸುವುದರ ಮೂಲಕ ಅಥವಾ ಇತರರೊಡನೆ ಸಂವಾದ ಹಾಗೂ ಚರ್ಚೆಯನ್ನು ನಡೆಸುವುದರ ಮೂಲಕ ಅಥವಾ ಕ್ಷೇತ್ರ ಕಾರ್ಯದ ಮೂಲಕ ಅಥವಾ ವಾಸ್ತವಾಂಶಗಳನ್ನು ಕಂಡುಹಿಡಿದು ಸಂಗ್ರಹಿಸುವುದಕ್ಕೆ ಹತ್ತಿರದ ದಾರಿ ಗ್ರಂಥಾಲಯ. ಸಂಶೋಧಕನು ತನ್ನ ಅನ್ವೇಷಣಾಯಾನದಲ್ಲಿ ಭೇಟಿ ಕೊಡಬೇಕಾದ ಮೊದಲ ರೇವು ಪಟ್ಟಣವೇ ಗ್ರಂಥ ಭಂಡಾರ. ಒಂದು ಗ್ರಂಥಾಲಯ ಹೇಗಿರುತ್ತದೆ ಎಂಬುದರ ಬಗ್ಗೆ ಅವನಿಗೆ ಅರಿವಿರಬೇಕು. ಸುವ್ಯವಸ್ಥಿತ ಗ್ರಂಥ ಭಂಡಾರವನ್ನು ಸಮಗ್ರವಾಗಿ ವಿವರಿಸುವ ಮತ್ತು ಅದರ ಪರಾಮರ್ಶನ ವಿಭಾಗವನ್ನು ಕುರಿತ ಹಲವಾರು ಪುಸ್ತಕಗಳಿವೆ. ಸಂಶೋಧಕನು ಅವುಗಳನ್ನು ಅಧ್ಯಯನ ಮಾಡಿ ಗ್ರಂಥಾಲಯದ ಬಗ್ಗೆ ಒಂದು ಸಾಮಾನ್ಯ ಜ್ಞಾನವನ್ನು ಪಡೆದುಕೊಂಡಿದ್ದರೆ ಒಳ್ಳೆಯದು.

ಆದರೂ ಅಪರಿಚಿತವಾಗಿರುವ ಪುಸ್ತಕ ಭಂಡಾರವನ್ನು ಪ್ರವೇಶಿಸಿದಂತೆ ಅನ್ವೇಷಕನಿಗೆ ತಬ್ಬಿಬ್ಬಾಗಬಹುದು. ಆದಾಗ್ಯೂ ಅವನು ಅಲ್ಲಿರುವ ಅಮೂಲ್ಯ ವಿಷಯ ಸಾಮಗ್ರಿಗಳ ಕೋಟೆಯನ್ನು ಭೇದಿಸಿ, ಒಳಹೊಕ್ಕು, ಆಕ್ರಮಿಸಿಕೊಳ್ಳಬೇಕು. ಅದಕ್ಕೆ ಬೇಕಾಗಿರುವುದು ತಕ್ಕ ಚಾತುರ್ಯ ಮತ್ತು ಸಹನಾತಂತ್ರ, ಕೃತಿ ಹಾಗೂ ಪ್ರಕಾಶಕರ ಹೆಸರುಗಳು ಮತ್ತು ಆ ಗ್ರಂಥ ಪ್ರಟಕವಾದ ವರ್ಷ ಇತ್ಯಾದಿ ವಿಷಯಗಳನ್ನು ಒಳಗೊಂಡಿರುವ ಪಟ್ಟಿಗಳನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ತಿಳಿವಳಿಕೆಯೊಡನೆ ಈ ತಂತ್ರ ಆರಂಭವಾಗುತ್ತದೆ. ಗ್ರಂಥಾಲಯಗಳಲ್ಲಿ ಪುಸ್ತಕಪಟ್ಟಿ, ಕರ್ತೃ ಹಾಗೂ ಕೃತಿಗಳ ಹೆಸರುಗಲನ್ನು ಸೂಚಿಸುವ ಬಿಡಿಯಾದ ಕಾಗದದ ಚೀಟಿಗಳ ಪಟ್ಟಿ ಮತ್ತು ರಟ್ಟು ಕಾಗದಗಳ ಪಟ್ಟಿ ಎಂಬುದಾಗಿ ಮೂರು ಬಗೆಯ ವಿವರ ಪಟ್ಟಿಗಳನ್ನು ಕಾಣಬಹುದು. ಇತ್ತೀಚೆಗೆ ರಟ್ಟು, ಕಾಗದ ಪಟ್ಟಿಗಳನ್ನು ಹೆಚ್ಚಾಗಿ ಬಳಸಲಾಗುತ್ತಿದೆ. ಅವುಗಳು ಅತ್ಯಂತ ಉಪಯುಕ್ತವಾದುವುಗಳು. ಅವುಗಳಲ್ಲಿ ಈ ಕೆಳಕಂಡ ವಿವರಗಳನ್ನು ನೋಡಬಹುದು: –

1) ಆ ಕೃತಿಯ ಕರ್ತೃವಿನ ಲೇಖನಾಮ ಅಥವಾ ಗುಪ್ತನಾಮ
2) ಆ ಕರ್ತೃವಿನ ನಿಜ ನಾಮಧೇಯ
3) ಆ ಕೃತಿಯ ವಿಭಾಗ ಸೂಚಕ ಸಂಖ್ಯೆಗಳು
4) ಪ್ರಸ್ತಾವನೆಯ ಪುಟಗಳ ಸಂಖ್ಯೆ
5) ಆ ಕೃತಿಯ ಪುಟಗಳ ಸಂಖ್ಯೆ
6) ಮೀಟರಿನ ಶತಾಂಶಗಳಲ್ಲಿ ಪುಸ್ತಕದ ಎತ್ತರದ ವಿವರ
7) ಆ ಗ್ರಂಥ ಪ್ರಕಟವಾದ ವರ್ಷ
8) ಪ್ರಕಟನ ಸ್ಥಳದ ಹೆಸರು ಮತ್ತು ಪ್ರಕಾಶಕರ ಹೆಸರು

ಒಂದು ವೇಳೆ ಈ ಪಟ್ಟಿಯು ನೀಡುವ ವಿವರಗಳು ತೃಪ್ತಿಕರವಾಗಿಲ್ಲದೇ ಹೋದರೆ, ಆಗ ಸಂಶೋಧಕನು ವಿಷಯಗಳ ರಟ್ಟು ಕಾಗದ ಸಂಚಿಕೆಗಳತ್ತ ಧಾವಿಸಿ ಹೋಗಬೇಕಾಗುತ್ತದೆ; ಅವನು ಒಂದು ಕೃತಿಯ ಕರ್ತೃ, ಪ್ರಕಾಶಕ ಹಾಗೂ ಪ್ರಕಾಶನ ಸಂಸ್ಥೆಗಳ ಹೆಸರುಗಳು, ವರ್ಷ, ಅದರ ಮರುಮುದ್ರಣ ಮತ್ತು

ಆವೃತ್ತಿಯ ಸಂಖ್ಯೆ ಇತ್ಯಾದಿಗಳ ಆಧಾರದ ಮೇಲೆ ಅದರ ಗುಣಮಟ್ಟದ ಬಗ್ಗೆ ಒಂದು ಅಂದಾಜನ್ನು ಮಾಡಬಹುದು.

ನಂತರ ಅನ್ವೇಷಕನು ಆ ಕೃತಿಯ ಸೂಚಕ ಸಂಖ್ಯೆಯನ್ನು ಗುರುತಿಸಿಟ್ಟುಕೊಂಡು ಅದಕ್ಕನುಗುಣವಾಗಿ ಆಯಾಯ ಪುಸ್ತಕ ವಿಭಾಗಗಳಿಗೆ ಹೋಗಿ ಆಯಾಯ ಪುಸ್ತಕ ಬಡುವುಗಳನ್ನು ಅರಸಬೇಕು. ಅವನು ಆ ಬಡುವುಗಳ ಮೇಲೆ ಅಥವಾ ಅಲಮಾರುಗಳಲ್ಲಿ ತನಗೆ ಬೇಕಾಗಿರುವ ಕೃತಿಯನ್ನಲ್ಲದೆ ಅದಕ್ಕೆ ಸಂಗಾತಿಗಳಾಗಿ ಅಕ್ಕಪಕ್ಕವಿರುವ ಗ್ರಂಥಗಳ ಮೇಲಯೂ ದೃಷ್ಟಿಯನ್ನು ಹಾಯಿಸಬೇಕು. ಕಾರಣ ಪಟ್ಟಿ ಮಾಡುವವರೂ ಸಹ ತಪ್ಪುಗಳನ್ನು ಮಾಡುತ್ತಾರೆ. ಅವರು ಪರಸ್ಪರ ಸಂಬಂಧವೇ ಇಲ್ಲದ ವಿಷಯಗಳನ್ನು ಕುರಿತ ಗ್ರಂಥಗಳನ್ನು ಒಂದೇ ವರ್ಗಕ್ಕೆ ಸೇರಿಸಿ ಒಂದೇ ವಿಭಾಗ ಸಂಖ್ಯೆಗಳನ್ನು ಕೊಟ್ಟಿರಬಹುದು. ಕೃಷಿ ಚರಿತ್ರೆಯ ಕೃತಿ ಅಥವ ನಿಯತಕಾಲಿಕವನ್ನು ಭೂರಸಾಯನ ಶಾಸ್ತ್ರವನ್ನು ಕುರಿತ ಗ್ರಂಥ ಅಥವಾ ನಿಯತಕಾಲಿಕದ ಜೊತೆ ಸೇರಿಸಿಬಿಟ್ಟಿದ್ದರೆ, ಆ ತರಹದ ವರ್ಗೀಕರಣ ಹಾಗೂ ಅದರಿಂದ ಉಂಟಗುವ ಗೊಂದಲ ಕೆಲವು ಸಲ ಸಂಶೋಧಕನ ಮುಖದ ಮೇಲೆ ನಗುವು ಮೂಡುವಂತೆ ಮಾಡಬಹುದು, ಆದರೆ ಹೆಚ್ಚಾಗಿ ಅವನನ್ನು ಸಿಟ್ಟಿಗೆಬ್ಬಿಸಬಹುದು. ಅನೇಕ ಕೃತಿಗಳು ವರ್ಗೀಕರಣಗಳ ಮೇರೆಗಳನ್ನು ಉಲ್ಲಂಘಿಸಿ, ದಾಟಿ, ಎಲ್ಲೆಲ್ಲೋ, ಯಾವ ಯಾವ ಸಂಗಾತಿಗಳೊಡನೆಯೋ ಸೇರಿಕೊಂಡಿರುವ ಸಂಭವ ಇರುವುದರಿಂದ ಅವನು ಅಲಮಾರು ಅಥವಾ ಪುಸ್ತಕಗಳ ಬಡುವುಗಳನ್ನು ನಿಟ್ಟಿಸಿ ನೋಡಿ ವಿವರವಾಗಿ ಪರಿಶೀಲಿಸುವ ಕೌಶಲವನ್ನು ಬೆಳೆಸಿಕೊಂಡರೆ ಅತ್ಯಧಿಕ ಬೌದ್ಧಿಕ ಲಾಭ ಅವನದ್ದಾಗುತ್ತದೆ.

ಇಷ್ಟು ಮಾತ್ರವಲ್ಲದೆ, ಅನ್ವೇಷಕನು ತನ್ನ ವಿಷಯ ಸೆಳೆಯುವ ಕಡೆಗಳಿಗೆಲ್ಲಾ ಹೋಗಬೇಕು. ಅವನಿಗೆ ಬೇಕಾಗುವ ಮಾಹಿತಿಗಳು ಎಲ್ಲಾದರೂ ತಲೆದೋರಬಹುದು. ಆದ್ದರಿಂದ ಅವನು ಅವುಗಳಿಗಾಗಿ ಯಾವ ದಿಕ್ಕಿಗಾದರೂ ಹಾರಲು ಸಿದ್ಧನಾಗಿರಬೇಕು. ಈ ತರಹದ ಸಂದರ್ಭಗಳಲ್ಲಿ ಅವನಿಗೆ ಸಹಾಯಕವಾಗುವ ಕೃತಿಗಳೇ ಪರಾಮರ್ಶನ ಗ್ರಂಥಗಳು. ಗ್ರಂಥಾಲಯದಲ್ಲಿರುವ ಪರಾಮರ್ಶನ ಕೃತಿಗಳ ಅಲಮಾರುಗಳು ಅವನಿಗೆ ನಿಜವಾದ ತರಬೇತನ್ನು ನೀಡುವ ಕೇಂದ್ರಗಳಂತಿರುತ್ತವೆ. ವಿಶ್ವಜ್ಞಾನ ಕೋಶಗಳು; ನಿರ್ದಿಷ್ಟ ವಿಷಯಗಳ ಬೃಹತ್ ಕೋಶಗಳು; ಜೀವನ ಚರಿತ್ರೆ; ವಿಶಿಷ್ಟ ವ್ಯಕ್ತಿ, ಅಪರೂಪ ಕೃತಿ ಹಾಗೂ ಅತ್ಯುತ್ತಮ ಗ್ರಂಥಗಳನ್ನು ಕುರಿತ ಕೋಶಗಳು; ಭೂಪಟಗಳ ಪುಸ್ತಕ ಹಾಗೂ ವಿವರಗಳ ನಿಘಂಟುಗಳು; ಘಟನಕಾಲ ಸೂಚಿಗಳು; ಕೈಪಿಡಿಗಳು ಹಾಗೂ ಆಕರ ಗ್ರಂಥಗಳು; ದೇಶ ವಿಚಾರ ಕೋಶಗಳು; ಚರಿತ್ರೆಗೆ ಹಾಗೂ ನಿರ್ದಿಷ್ಟ ಐತಿಹಾಸಿಕ ಕಾಲ, ದೇಶ, ಪ್ರದೇಶ, ನಗರ, ಮುಖ್ಯ ಚಳವಳಿ ಹಾಗೂ ಘಟನೆ ಮತ್ತು ಅತಿಮುಖ್ಯ ವ್ಯಕ್ತಿಗಳಿಗೆ ಸಂಬಂಧಿಸಿರುವ ಗ್ರಂಥ ವಿವರಣ ಪಟ್ಟಿಗಳು; ನಿಯತಕಾಲಿಕಗಳ ಆಕಾರಾದಿ ಕೋಶಗಳು; ನಿಯತಕಾಲಿಕಗಳಲ್ಲಿ ಕಾಣಬಹುದಾದ ಪುಸ್ತಕ ಪ್ರಕಾಶಕರ ಪಟ್ಟಿಗಳು ಇತ್ಯಾದಿಗಳು ಅವನಿಗೆ ಅವಶ್ಯಕವಾದ ಪರಾಮರ್ಶನ ಕೃತಿಗಳಾಗುತ್ತವೆ. ಶಬ್ಧಕೋಶ ಅವನನಿರಂತರ ಸಂಗಾತಿಯಾಗಿರಬೇಕು ಮತ್ತು ಅವನು ವಿಶಿಷ್ಟ ಪದಗಳ ಅರ್ಥಗಳನ್ನು ಹಾಗೂ ಅವುಗಳಲ್ಲಿ ಆಗಿರುವ ಬದಲಾವಣೆಗಳನ್ನು ಸರಿಯಾಗಿ ತಿಳಿದುಕೊಂಡಿರಬೇಕು. ಉದಾಹರಣೆಗೆ, 20ನೆಯ ಶತಮಾನದಲ್ಲಿ ಮಹಾತ್ಮಗಾಂಧಿಯವರು ನಡೆಸಿದ ಅದ್ವಿತೀಯವಾಗಿದ್ದ ಸತ್ಯಾಗ್ರಹ ಚಳವಳಿಯ ಬಗ್ಗೆ ಅಧ್ಯಯನ ಮಾಡುವಾಗ ಆಗ ಪ್ರಧಾನವಾಗಿ ಬಳಸಲಾಗುತ್ತಿದ್ದ ಸತ್ಯ, ಅಹಿಂಸೆ, ಸತ್ಯಾಘ್ರಹ

ಮುಂತಾದ ಪದಗಳ ಅರ್ಥಗಳನ್ನು ಸರಿಯಾಗಿ ಅರಿತುಕೊಂಡಿರಬೇಕು. ಹಾಗೆಯೇ ಜನಪ್ರಿಯ ಉದ್ಧರಣಗಳು, ಆಕರ್ಷಕ ಪದಗಳು, ಧ್ಯೇಯ ಮಂತ್ರಗಳು, ಅಪ್ರತ್ಯಕ್ಷ ಸೂಚನೆಗಳು ಇತ್ಯಾದಿಗಳು ಆಯಾಯ ಕಾಲಗಳ ಮುಖ್ಯ ಸಂಕೇತಗಳಾಗಿ ಗಮನವನ್ನು ಸೆಳೆಯುತ್ತವೆ. ಅವುಗಳನ್ನೂ ಸಹ ಎಚ್ಚರಿಕೆಯಿಂದ ಪರಿಗಣಿಸಬೇಕಾದುದು ಅವಶ್ಯಕ. ಮುಖ್ಯವಾಗಿರುವ ಪರಾಮರ್ಶನ ಪುಸ್ತಕಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

**ಪರಾಮರ್ಶನ ಪುಸ್ತಕಗಳ ಬಗೆಗಳು**

1) ವಿಶ್ವ ಜ್ಞಾನಕೋಶಗಳು (ಸಾಮಾನ್ಯ, ರಾಷ್ಟ್ರೀಯ, ಧಾರ್ಮಿಕ, ಸಾಮಾಜಿಕ, ವಿಷಯಿಕ, ಇತ್ಯಾದಿ).
2) ಜೀವನ ಚರಿತ್ರೆಗಳ ಕೋಶಗಳು (ರಾಷ್ಟ್ರೀಯ, ಪ್ರಾದೇಶಿಕ, ವಿಷಯಿಕ)
3) ನಿಯತಕಾಲಿಕಗಳ ಸೂಚಿಗಳು.
4) ಉದ್ಧರಣಗಳ ಕೋಶಗಳು, ಮುಖ್ಯ ವಿಷಯಗಳ ಅಕಾರಾದಿ ಸೂಚಿ.
5) ಭೂಪಟಗಳ ಪುಸ್ತಕಗಳು ಹಾಗೂ ದೇಶ ವಿಚಾರ ಕೋಶಗಳು.
6) ಘಟನಕಾಲ ಸೂಚಿಗಳು.
7) ಭಾಷೆಗಳ ಕೋಶಗಳು.
8) ಕೈಪಿಡಿಗಳು ಮತ್ತು ಮೂಲ ಗ್ರಂಥಗಳು (ನಿಘಂಟುಗಳು, ಕವಿತಾ ಸಂಗ್ರಹಗಳು, ಇತ್ಯಾದಿಗಳು)
9) ಗ್ರಂಥ ವಿವರಣ ಪಟ್ಟಿಗಳು

ಅದೂ ಅಲ್ಲದೆ, ಪುಸ್ತಕಗಳಲ್ಲಿರುವ ಅಡಿಟಿಪ್ಪಣಿಗಳೂ ಸಹ ಆಕರಗಳಾಗಿ ಸಹಾಯ ಮಾಡುತ್ತವೆ. ಅವುಗಳನ್ನು ಪಾಂಡಿತ್ಯ ಪ್ರದರ್ಶನಕ್ಕೆ ಅತ್ಯಂತ ಸುಲಭವಾಗಿರುವ ಮಾರ್ಗ ಮತ್ತು ಕೆಳಭಾಗದಿಂದ ಬೊಗಳುವ ನಾಯಿಗಳು ಎಂಬುದಾಗೆಲ್ಲಾ ತೀವ್ರವಾಗಿ ಟೀಕಿಸಲಾಗಿದೆ. ಆದರೂ ಅವುಗಳು ಒಬ್ಬ ಮಾಧ್ಯಮಿಕ ಗ್ರಂಥದ ಕರ್ತೃವು ವಿಷಯಗಳಿಗಾಗಿ ಯಾವ ಆಧಾರಗಳನ್ನು ಅವಲಂಬಿಸಿಕೊಂಡಿದ್ದಾನೆ ಎಂಬುದನ್ನು ತಿಳಿಯುವುದಕ್ಕೆ ಸಹಾಯ ಮಾಡುತ್ತವೆ ಮತ್ತು ಕೆಲವು ಸಲ ಪ್ರಮಾಣ ಗ್ರಂಥಗಳನ್ನು ಮತ್ತು ಒಪ್ಪಿಕೊಳ್ಳಲಾಗಿರುವ ಅಭಿಪ್ರಾಯಗಳನ್ನು ನೀಡಿರುವ ಹಾಗೂ ನಿರ್ದಿಷ್ಟ ವಿಷಯಗಳಲ್ಲಿ ಪ್ರವೀಣನಾಗಿರುವ ಪಂಡಿತನ ಹೆಸರನ್ನು ಸೂಚಿಸುತ್ತವೆ. ಪ್ರವೀಣ ಪಂಡಿತನು ನೀಡಿರುವ ಅಡಿಟಿಪ್ಪಣಿಗಳಿಂದ ಅವನು ಯಾವ ಮೂಲಾಧಾರ ಗ್ರಂಥಗಳನ್ನು ಉಪಯೋಗಿಸಿ–ಕೊಂಡಿದ್ದಾನೆ ಎಂಬುದನ್ನು ತಿಳಿಯುವುದು ಸುಲಭವಾಗುತ್ತದೆ.

ಮತ್ತು ಒಂದೇ ತೆರದ ವಿಷಯಗಳನ್ನು ಬೇರೆ ಬೇರೆ ಹೆಸರುಗಳಿಂದ ಸೂಚಿಸಲಾಗಿರುತ್ತದೆ. ಅವುಗಳನ್ನೆಲ್ಲಾ ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ ಅನ್ವೇಷಕನು ಕೌಶಲ ಹಾಗೂ ಸಹನೆಯನ್ನು ಹೊಂದಿರಬೇಕಲ್ಲದೆ, ಕಲ್ಪನಾಶೀಲನೂ, ಜಾಗರೂಕನೂ, ಚುರುಕು ಬುದ್ಧಿಯುಳ್ಳವನೂ ಆಗಿರಬೇಕು. ಅನನುಭವಿಯಾದ ಸಂಶೋಧಕನು ಮೊದಲು ಪರಾಮರ್ಶನ ಗ್ರಂಥಗಳಲ್ಲಿ ತನಗೆ ಮುಖ್ಯವಾದುವೆಂಬುದಾಗಿ ಕಂಡುಬಂದ ವಿಷಯಗಳನ್ನು ಗುರುತುಹಾಕಿಟ್ಟುಕೊಳ್ಳಬೇಕು. ಒಂದು ನಂಬಲರ್ಹವಾದ ದಾಖಲೆಯನ್ನು

ಅಥವಾ ಕೃತಿಯನ್ನು ಸಿದ್ಧಪಡಿಸಬೇಕಾದರೆ ಸಂಶೋಧಕನು ತಾನು ಆರಿಸಿಕೊಂಡಿರುವ ವಿಷಯಕ್ಕೆ ಸಂಬಂಧಿಸಿರುವ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಲು ಪ್ರಯತ್ನಿಸಬೇಕು ಮತ್ತು ಸಾಧ್ಯವಾದಷ್ಟರ ಮಟ್ಟಿಗೆ ಯಾವ ಸುಸಂಬದ್ಧ ಅಂಶವನ್ನೂ ಬಿಡದೆ ಎಚ್ಚರಿಕೆಯಿಂದ ಎಲ್ಲವನ್ನೂ ಗಮನಿಸಿ ಗುರುತುಹಾಕಿಟ್ಟುಕೊಳ್ಳಬೇಕು. ಪ್ರಮಾಣಗಳ ಅನ್ವೇಷಣೆಯೂ ಸಹ ಒಂದು ಕಲೆಯೇ ಆಗಿರುತ್ತದೆ. ಅನ್ವೇಷಕನು ಗ್ರಂಥಾಲಯವನ್ನು ಅಲಂಕರಿಸಿರುವ ಕೃತಿಗಳಲ್ಲಿ ಅಡಗಿಕೊಂಡಿರುವ ಗತಕಾಲದ ವಿಷಯಗಳನ್ನು ಬೆಳಕಿಗೆ ತರುವ ಸಾಮರ್ಥ್ಯವನ್ನು ಆ ಗ್ರಂಥಗಳು ತಮ್ಮಲ್ಲಿರುವ ಬೌದ್ಧಿಕ ರಹಸ್ಯವನ್ನು ತನಗೆ ಬಿಟ್ಟುಕೊಡುವಂತೆ ಮಾಡುವ ಶಕ್ತಿಯನ್ನು ಹೊಂದಿರಬೇಕು. ಆಗಲೇ ಅವನಿಗೆ ಯಾವುದೋ ಗುಪ್ತವಾಗಿದ್ದ ಹೆಸರು, ತಾರೀಖು ಅಥವಾ ವಿಷಯವು ಸಿಗುವಂತೆ ಮಾಡುವುದಕ್ಕಾಗಿ ಎಷ್ಟು ಜನ ಪಂಡಿತರು ಎಷ್ಟು ಸಹನೆಯಿಂದ ಎಷ್ಟು ದಿನಗಳ ಕಾಲ ಅವಿಶ್ರಾಂತವಾಗಿ ದುಡಿದಿದ್ದಾರೆ ಎಂಬುದು ಅರಿವಾಗುತ್ತದೆ. ಅದರಿಂದ ಅವನಿಗೆ ಅನ್ಯೈಚ್ಛಿಕವಾಗಿ ಅನ್ವೇಷಣೆಯನ್ನು ನಡೆಸಿ ನಿಷ್ಕೃಷ್ಟವಾದ ಜ್ಞಾನವನ್ನು ಆರ್ಜಿಸುವುದಕ್ಕೆ ಸ್ಫೂರ್ತಿ ಉಂಟಾಗುತ್ತದೆ. ಇಂದು ಮೂಲಾಧಾರಗಳ ಹಾಗೂ ಜ್ಞಾನದ ವಿಸ್ತರಣೆಯು ಅತ್ಯಾಶ್ಚರ್ಯಕರವಾಗಿದೆ. ಮೊದಲು ಮರದ ತಿರುಳಿನಿಂದ ತಯಾರಿಸಲಾಗಿದ್ದ ಕಾಗದಗಳನ್ನು ಬಳಸಿ ಅಚ್ಚು ಮಾಡಲಾಗಿದ್ದ ಕೃತಿಗಳನೇಕವು ಭಿನ್ನಭಿನ್ನವಾಗಿ ಪುಡಿಪುಡಿಯಾಗಿ ಉದುರಿಹೋಗಿ ಅವುಗಳ ಅಮೂಲ್ಯ ನಿಧಿ ಸಂಶೋಧಕನ ಕೈಗೆ ಸಿಗದೆ ಮಣ್ಣಾಗಿ ಹೋಗಿರುವ ಸಮಸ್ಯೆ ಮತ್ತಷ್ಟು ತೀವ್ರವಾದುದಾಗಿದೆ. ಗ್ರಂಥವಿವರಣ ಪಟ್ಟಿಗಳು ಕೇವಲ ಹಿಂದೆ ಯಾವಾಗಲೋ ಇದ್ದ ಕೃತಿಗಳ ಪಳಿಯುಳಿಕೆಗಳ ದಾಖಲೆಯಾಗದೇ ಇರಬೇಕಾದರೆ ಅವುಗಳನ್ನು ಪುನಃ ಮುದ್ರಿಸಬೇಕು, ಅಥವ ಸೂಕ್ಷ್ಮ ಪ್ರಮಾಣದಲ್ಲಿ ಸಂರಕ್ಷಿಸಿಡಬೇಕು. ಈ ಸೂಕ್ಷ್ಮ ಪ್ರಮಾಣಗಳು ಒಂದು ಗ್ರಂಥವನ್ನು ಸಂರಕ್ಷಿಸಿಟ್ಟು ಅದರ ಇರುವಿಕೆಯನ್ನು ಎಲ್ಲರಿಗೂ ತಿಳಿಯುವಂತೆ ಎತ್ತಿತೋರುತ್ತವೆ. ಗ್ರಂಥಾಲಯ ಮಾತ್ರವಲ್ಲದೆ, ದಾಖಲೆಗಳ ಕಛೇರಿ, ವಿವಿಧ ವಸ್ತು ಸಂಗ್ರಹ ಶಾಲೆ ಹಾಗೂ ಪತ್ರಾಗಾರಗಳೂ ಸಹ ಸಂಶೋಧನೆಗೆ ಬೇಕಾದ ಮೂಲಾಧಾರಗಳನ್ನು ಒದಗಿಸುವ ಕೇಂದ್ರಗಳಾಗಿವೆ.

### 5.3.6 ಮಾಹಿತಿಗಳ ಸಂಗ್ರಹಣೆ ಮತ್ತು ವರ್ಗೀಕರಣ

ಮುಂದಿನ ಹಂತವೇ ಮಾಹಿತಿಗಳ ಸಂಗ್ರಹಣೆ, ವರ್ಗೀಕರಣ ಮತ್ತು ವ್ಯವಸ್ಥೆ. ಸಂಶೋಧಕನು ಮೊದಮೊದಲು ಮೂಲಕೃತಿಗಳ ಪುಟಗಳನ್ನು ಓದಿ, ತಿರುವಿಹಾಕಿ, ವಿಷಯಗಳನ್ನೆಲ್ಲಾ ತುಂಡು ಕಾಗದಗಳ ಮೇಲೆ ಅವಸರ ಅವಸರವಾಗಿ ಅಸ್ಪಷ್ಟವಾಗಿ ಗೀಚಿಹಾಕಲು ಆರಂಭಿಸಿ ತನ್ನ ಅನ್ವೇಷಣಾ ಕಾರ್ಯವು ಮುಗಿಯಿತೆಂಬ ಅಭಿಪ್ರಾಯ ಮೂಡುವವರೆಗೆ ಇದೇ ರೀತಿ ಟಿಪ್ಪಣಿಗಳನ್ನು ಬರೆಯುತ್ತ ಹೋಗಬಹುದು. ಒಂದು ಕ್ರಮವಿಲ್ಲದೆ ಈ ರೀತಿ ಸಂಗ್ರಹಿಸಲಾಗುವ ವಿಷಯ ಸಾಮಗ್ರಿಗಳು ಹಿಡಿತಕ್ಕೆ ಸಿಕ್ಕುವಂಥಹುದಲ್ಲ. ಅವುಗಳು ಅವ್ಯವಸ್ಥಿತ ಕ್ರಮದಲ್ಲಿ ಗುಡ್ಡೆಮಾಡಿ ಹಾಕಲಾಗಿರುವ ಕಟ್ಟಡದ ಸಾಮಗ್ರಿಗಳಿರುವಂತೆ ಅವುಗಳಿಂದ ಉತ್ತಮ ಐತಿಹಾಸಿಕ ಕೃತಿ ಎಂಬ ಸೌಧವನ್ನು ನಿರ್ಮಿಸುವುದು ಬಹು ಕಷ್ಟಸಾಧ್ಯ. ಕಾರಣ ಅವುಗಳನ್ನು ಸರಿಯಾಗಿ ವಿಂಗಡಿಸಿ, ವರ್ಗೀಕರಿಸಿ ವ್ಯವಸ್ಥಿತಗೊಳಿಸುವುದಕ್ಕೆ ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ. ಆದ್ದರಿಂದ ಅನ್ವೇಷಕನು ಏನನ್ನು ಹೇಗೆ ಬರೆದಿಟ್ಟುಕೊಳ್ಳಬೇಕು ಮತ್ತು ಹೇಗೆ ಬರೆದಿಟ್ಟುಕೊಂಡಿರುವ

ವಿಷಯಗಳನ್ನು ವರ್ಗೀಕರಿಸಿ ವ್ಯವಸ್ಥಿತಗೊಳಿಸಬೇಕು ಎಂಬುದನ್ನು ಸರಿಯಾಗಿ ತಿಳಿದುಕೊಳ್ಳದಿದ್ದರೆ ಅವನ ಅಮೂಲ್ಯ ಕಾಲ ವ್ಯರ್ಥವಾಗಿ ಹೋಗುತ್ತದೆ.

ಎಷ್ಟೇ ಜಾಗರೂಕತೆಯಿಂದ ವಿಷಯಗಳನ್ನು ಅನ್ವೇಷಿಸಿ, ಸಂಗ್ರಹಿಸಲು ಯತ್ನಿಸಿದರೂ, ಜ್ಞಾನ ಸಂಗ್ರಹಣೆಯಲ್ಲಿ ಅನೇಕ ತೆರಪುಗಳಿರುತ್ತವೆ. ಜ್ಞಾನ ಸರಣಿಯಲ್ಲಿ ಹಲವಾರು ಕೊಂಡಿಗಳು ತಪ್ಪಿಹೋಗಿರುತ್ತವೆ. ಸಮರ್ಪಕವಾದ ದಾಖಲೆಯನ್ನು ಸಿದ್ಧಪಡಿಸಬೇಕಾದರೆ ಈ ತೆರಪುಗಳನ್ನು ತುಂಬಬೇಕಾದುದು ಅವಶ್ಯಕ. ಮೊದಲನೆಯದು ಅಜ್ಞಾತವಾದುದನ್ನು ಚತುರತೆಯಿಂದ ಸರಿಯಾಗಿ ಊಹಿಸಿ ತಿಳಿಯುವ ಪ್ರಕ್ರಿಯೆ. ಅಂದರೆ, ವಿಷಯಗಳ ಗೂಢಾರ್ಥವನ್ನು ಗ್ರಹಿಸುವುದು ಮತ್ತು ಅಸಾಧಾರಣ ಸೂಕ್ಷ್ಮ ದೃಷ್ಟಿ ಹಾಗೂ ಸಹಜ ಕೌಶಲದಿಂದ ಊಹೆ ಮಾಡುವುದು ಎಂದರ್ಥವಾಗುತ್ತದೆ. ಇಲ್ಲಿ ಕಲ್ಪನೆಯ ಬೆಂಬಲ ಅವಶ್ಯಕ. ಕಲ್ಪನಾಕ್ರಮವು ವಿಷಯಗಳ ಅನ್ವೇಷಣೆ, ಅರ್ಥವಿವರಣೆ ಹಾಗೂ ಸುಚಿತ್ರಿತ ವರ್ಣನೆಯಲ್ಲಿ ಅತ್ಯಂತ ಸಹಾಯಕವಾಗುತ್ತದೆ. ಅದರ ಮೂಲಕವಾಗಿ ಸಂದುಹೋದ ಶತಮಾನಗಳನ್ನು ಮುಚ್ಚಿರುವ ತೆರೆಯುನ್ನು ಸರಿಸಿ ಆಗಿನ ಜನರನ್ನು ಮುಖಾಮುಖಿಯಾಗಿ ವೀಕ್ಷಿಸಿ ವಿಚಾರ ಮಾಡುವುದು ಸಂಶೋಧಕನಿಗೆ ಸಾಧ್ಯವಾಗುತ್ತದೆ. ಯಾವುದೋ ಒಂದು ಅಲ್ಪವಾಗಿರುವ ಅಂಶವನ್ನು ಹಾಗೂ ತಾತ್ಕಾಲಿಕವಾದ ಸುಳಿವನ್ನು ಗ್ರಹಿಸಿ, ಅದರಿಂದ ಅನೇಕ ಮುಖ್ಯ ವಿಷಯಗಳಲ್ಲಿ ವಾಸ್ತವಾಂಶಗಳಿಗೆ ಅನುಗುಣವಾಗಿರುವಂತಹ ಸಮಗ್ರ ಚಿತ್ರವನ್ನು ಪುನರ್ರಚಿಸುವ ಸಾಮರ್ಥ್ಯವನ್ನು ಕವಿಯಲ್ಲಿ ನಾಟಕಕಾರನಲ್ಲಿ ನೋಡಬಹುದು. ಕಣ್ಮರೆಯಾಗಿ ಹೋಗಿರುವ ಯುಗದ ದೃಶ್ಯ ಹಾಗೂ ಘಟನಾವಳಿಗಳನ್ನು ವೀಕ್ಷಿಸಿ ಅರ್ಥಮಾಡಿಕೊಳ್ಳಬೇಕಾದರೆ ಕಾಲದ ಆವಾರಗಳಲ್ಲಿ ಹಿಂದಕ್ಕೆ ಹೋಗಿ ಆ ಯುಗದ ಜೀವನ ನಾಟಕದಲ್ಲಿ ಪಾತ್ರ ವಹಿಸಿದ್ದವರ ಪ್ರೇರಣೆ ಹಾಗೂ ಉದ್ದೇಶಗಳನ್ನು ಅರಿತುಕೊಳ್ಳಬೇಕಾದರೆ ಮತ್ತು ತನಗೆ ಅದೇ ತರಹದ ಸ್ವಭಾವವಿದ್ದಿದ್ದರೆ ಹಾಗೂ ತಾನು ಅದೇ ರೀತಿಯ ಪರಿಸ್ಥಿತಿಯಲ್ಲಿ ಇದ್ದಿದ್ದರೆ ಯಾವ ಬಗೆಯ ಪರ್ಯಾಲೋಚನೆ ಮಾಡುತ್ತಿದ್ದೆ, ಪರಿಭಾವಿಸುತ್ತಿದ್ದೆ ಎಂಬುದನ್ನು ಕಲ್ಪಿಸಿಕೊಳ್ಳಬೇಕಾದ ಅನ್ವೇಷಕನಿಗೆ ಈ ತೆರನಾದ ಸಾಮರ್ಥ್ಯ ಇರಬೇಕಾದುದು ಅವಶ್ಯಕ. ಆದ್ದರಿಂದಲೇ ಇತಿಹಾಸವನ್ನು ಸಂದುಹೋದ ಶತಮಾನಗಳಲ್ಲಿ ಬಾಳುವ ಕಲೆ ಎಂಬುದಾಗಿ ವಿವರಿಸಲಾಗಿದೆ. ಪ್ರಾಣಿಯು ತನ್ನ ಬೇಟೆಯನ್ನು ಘ್ರಾಣಶಕ್ತಿಯಿಂದ ತಿಳಿಯುವಂತೆ, ಕಲ್ಪನಾಶೀಲನಾದ ಸಂಶೋಧಕನು ತನ್ನ ಸೂಕ್ಷ್ಮಗ್ರಹಣ ಶಕ್ತಿಯಿಂದ ಸತ್ಯವನ್ನು ಅರಿತುಕೊಳ್ಳುತ್ತಾನೆ. ಭೂಪ್ರದೇಶವು ಕಣ್ಣಿಗೆ ಕಾಣುವ ಮೊದಲೇ ಅದರ ಇರುವಿಕೆಯನ್ನು ವಾಸನೆಯಿಂದ ತಿಳಿಯುವ ನಾವಿಕನಂತೆ ಅವನೂ ಸಹ ದೂರದಲ್ಲಿರುವಾಗಲೇ ಸತ್ಯವನ್ನು ಗ್ರಹಿಸುತ್ತಾನೆ. ಆದರೂ ಸೂಕ್ಷ್ಮದೃಷ್ಟಿ ಹಾಗೂ ಕಲ್ಪನಾಕ್ರಮವು ಅನೇಕ ವೇಳೆ ತಪ್ಪಾದ ನಿರ್ಣಯಗಳಿಗೆ ಬರುವಂತೆ ಮಾಡಬಹುದು. ಆದ್ದರಿಂದ ಅತ್ಯಂತ ಜಾಗರೂಕತೆಯಿಂದ ಇರಬೇಕಾದುದು ಅವಶ್ಯಕ ಎಂಬುದನ್ನು ಅವನು ಮರೆಯಬಾರದು.

ಮೂರನೆಯದು ಸಾದೃಶ್ಯ ತೋರುವ ಕ್ರಮ. ಅಂದರೆ, ಒಂದು ಚೆನ್ನಾಗಿ ತಿಳಿದುಬಂದಿರುವ ಹಾಗೂ ಅನುರೂಪವಾಗಿರುವ ಸಂದರ್ಭದಲ್ಲಿ ವಾಸ್ತವವಾಗಿ ನಡೆದ ಘಟನೆಯ ಆಧಾರದ ಮೇಲೆ ಇನ್ನೊಂದು ಸರಿಸಮವಾದ ಸನ್ನಿವೇಶದಲ್ಲಿ ಏನು ಸಂಭವಿಸಿತು ಎಂಬುದನ್ನು ಅನುಮಾನಿಸುವುದು ಎಂದರ್ಥವಾಗುತ್ತದೆ. ಆದರೆ ಇದು ಸಮರ್ಥನೆಯಲ್ಲ. ಈ ಕ್ರಮವು ಬೆಂಕಿಯಂತೆ ಒಳ್ಳೆಯ ಸೇವಕ, ಆದರೆ ಕೆಟ್ಟ ಧಣಿ.

ಉಪಕಲ್ಪನೆಯು ಈ ತೆರಪುಗಳನ್ನು ತುಂಬಲು ಸಹಾಯ ಮಾಡುವ ನಾಲ್ಕನೆಯ ಕ್ರಮ. ಎಚ್ಚರಿಕೆಯಿಂದ ಬಳಸಿದರೆ,ಅದು ಬಹಳ ಉಪಯುಕ್ತವಾಗುತ್ತದೆ. ಕೆಲವು ಸಲ ಸರಿ ಇರಬಹುದು ಎಂದು ತೋರಿಬರುವ ಉಪಕಲ್ಪನೆ-ಗಳನ್ನು ಪರೀಕ್ಷೆ ಮಾಡುವುದರ ಮೂಲಕ ಸಂಭವನೀಯವಾದ ಉಪಕಲ್ಪನೆಯನ್ನು ಕಂಡುಹಿಡಿಯಬಹುದು. ಈ ಪ್ರಕ್ರಿಯೆಯಿಂದ ನೂತನ ಅನ್ವೇಷಣಾ ಮಾರ್ಗಗಳು ಬೆಳಕಿಗೆ ಬರಬಹುದು.

ಆದ್ದರಿಂದ ಯಾವುದೋ ಅಂಶವನ್ನು ಹುಡುಕುವುದಕ್ಕಾಗಿ ಅವ್ಯವಸ್ಥಿತವಾಗಿರುವ ಮೂಲ ವಿಷಯ ಸಾಮಗ್ರಿಗಳ ಕಟ್ಟುಗಳನ್ನು ಬಿಚ್ಚಿ ಆತುರ-ಆತುರವಾಗಿ ಪುಟಗಳನ್ನು ತಿರುವಿಹಾಕಿ, ಕಾಲವನ್ನು ಹಾಳು ಮಾಡಿಕೊಂಡು ಆಶಾಭಂಗ ಹೊಂದಿ, ಸಂಶೋಧನೆಯ ಕೆಲಸವನ್ನು ಕೈಬಿಡುವಷ್ಟರ ಮಟ್ಟಿಗೆ ನಿರುತ್ಸಾಹಿಯಾಗಿ, ನಿಸ್ಸಹಾಯಕವಾಗಿ ನಿಲ್ಲುವ ಪರಿತಾಪಯುಕ್ತ ಪರಿಸ್ಥಿತಿ ಬರದಿರುವ ಹಾಗೆ ಮಾಡಿಕೊಳ್ಳಬೇಕಾದರೆ ಸಂಶೋಧಕನು ಒಂದು ಕ್ರಮಬದ್ಧ ಕಾರ್ಯವಿಧಾನವನ್ನು ಅನುಸರಿಸಬೇಕು. ಅವನು ತನ್ನ ಸಂಶೋಧನಾ ಕಾರ್ಯದ ಮಧ್ಯೆ ಹಿಂದೆ ಯಾವಾಗಲೋ ಗುರುತು ಹಾಕಿಕೊಂಡಿರುವ ಉದ್ಧರಣವನ್ನು ಹೊಸದಾಗಿ ಸಿಕ್ಕಿರುವ ಅದರ ನೂತನ ರೂಪಾಂತರದೊಂದಿಗೆ ಹೋಲಿಸಿ ನೋಡಬೇಕಾಗಬಹುದು, ಅಥವಾ ಅನ್ವೇಷಣೆಯನ್ನು ಮುಂದುವರಿಸುತ್ತಿರುವಾಗ ಅನಿರೀಕ್ಷಿತವಾಗಿ ಸಿಕ್ಕಿದ ತಾರೀಖು ಹಾಗೂ ವರ್ಷವನ್ನು ಬಳಸಿ ಟಿಪ್ಪಣಿಗಳನ್ನು ಬರೆದುಕೊಳ್ಳುವಾಗ ಯಾವುದೋ ಸ್ಥಳದಲ್ಲಿ ಹಾಗೆಯೇ ಬಿಟ್ಟಿದ್ದ ತೆರಪನ್ನು ಭರ್ತಿಮಾಡಲು ಯತ್ನಿಸಬಹುದು. ಕೊನೆಯಲ್ಲಿ ಅವನು ಮೊದಲು ಕರಡು ಪ್ರತಿಯನ್ನು ಬರೆಯುವುದಕ್ಕೆ ಪೂರ್ವಸಿದ್ಧತೆಯಾಗಿ ಮಾಡಿಕೊಂಡಿರುವ ಟಿಪ್ಪಣಿಗಳನ್ನು ನಿರ್ದಿಷ್ಟ ವಿಷಯ ಗುಚ್ಛಗಳಾಗಿ ವಿಂಗಡಿಸಬೇಕಾಗುತ್ತದೆ.

ಈ ಎಲ್ಲಾ ಉದ್ದೇಶ ಸಾಧನೆಗಳಿಗಾಗಿ ಸಂಶೋಧಕನು ವಿಷಯ ಸಾಮಗ್ರಿಗಳನ್ನು ಸಂಗ್ರಹಿಸಿದಂತೆ ಅವುಗಳನ್ನು ಅಷ್ಟೇ ಶೀಘ್ರವಾಗಿ ಪೂರ್ವಭಾವಿಯಾಗಿ ಸಿದ್ಧಮಾಡಿಕೊಂಡಿರುವ ಒಂದು ವ್ಯವಸ್ಥೆಯಲ್ಲಿ ತಕ್ಕ ಸ್ಥಳಗಳಲ್ಲಿ ಸರಿಯಾಗಿ ಹೊಂದಿಸಿಟ್ಟುಕೊಳ್ಳಲು ಒಂದು ಯೋಗ್ಯ ವಿಧಾನವನ್ನು ಅನುಸರಿಸಬೇಕು. ಅದ್ಭುತವಾದ ಜ್ಞಾಪಕಶಕ್ತಿಯ ವರವನ್ನು ಪಡೆದಿರುವವರು ಟಿಪ್ಪಣಿಗಳನ್ನು ಬರೆದಿಟ್ಟುಕೊಳ್ಳದೆ ಪರಾಮರ್ಶಿಸಿದ ಮೂಲಕೃತಿ ಹಾಗೂ ದಾಖಲೆಗಳ ವಿವರಗಳನ್ನು ತಮ್ಮ ಮಸ್ತಿಷ್ಕದ ಸ್ಮರಣಶಕ್ತಿ ಕೇಂದ್ರದಲ್ಲಿ ಶೇಖರಿಸಿಡಲು ಯತ್ನಿಸುತ್ತಾರೆ. ಜ್ಞಾಪಕಶಕ್ತಿಯು ನೆನಪಿನಲ್ಲಿಟ್ಟುಕೊಳ್ಳಲು ಸಾಧಕವಾದ ಒಂದು ಉಪಕರಣವಾದರೂ ಅದಕ್ಕೂ ಕೆಲವು ಮಿತಿಗಳಿವೆ. ಅದು ಸಂಪೂರ್ಣವಾಗಿ ನಿಷ್ಕೃಷ್ಟವಾಗಿಲ್ಲದೆ ಇರುವುದರಿಂದ ವ್ಯಕ್ತಿಯು ಓದಿದ ವಿಷಯಗಳನ್ನೆಲ್ಲಾ ನೆನಪಿನಲ್ಲಿಟ್ಟುಕೊಳ್ಳ-ಬಲ್ಲನು ಎಂಬ ನಂಬಿಕೆಯನ್ನು ಸಮರ್ಥಿಸುವುದು ಸಾಧ್ಯವಿಲ್ಲ ಮತ್ತು ಐತಿಹಾಸಿಕ ವಿಷಯ ಸಾಮಗ್ರಿಗಳು ಅತ್ಯಧಿಕವಾಗಿರುವುದರಿಂದ ಈ ತರಹದ ವಿಧಾನವನ್ನು ಅನುಸರಿಸುವುದು ವಿವೇಕವಲ್ಲ. ಕೆಲವರು ದಪ್ಪದಾಗಿರುವ ಹಾಗೂ ದೊಡ್ಡದಾಗಿರುವ ದಾಖಲೆ ಪುಸ್ತಕದಲ್ಲಿ ತಾವು ಆರಿಸಿಕೊಂಡಿರುವ ಸಂಶೋಧನಾ ವಿಷಯಕ್ಕೆ ಸಂಬಂಧಿಸಿರುವ ಮಾಹಿತಿಗಳನ್ನೆಲ್ಲಾ ಬರೆಯುತ್ತಾ ಹೋಗುತ್ತಾರೆ. ಆದರೆ ಅನಂತರ ಆ ಮಾಹಿತಿಗಳನ್ನೆಲ್ಲಾ ಸರಿಯಾಗಿ ವಿಂಗಡಿಸುವುದು ಅಸಾಧ್ಯ. ಸೈನಿಕ ಅಥವ ರಾಜಕೀಯ ವ್ಯವಹಾರ, ಸಾಮಾಜಿಕ ಸಂಪ್ರದಾಯ, ಆರ್ಥಿಕ ಪರಿಸ್ಥಿತಿ ಇತ್ಯಾದಿಗಳಿಗೆ ಸಂಬಂಧಿಸಿರುವ ಮಾಹಿತಿಗಳನ್ನು ದಾಖಲೆ ಪುಸ್ತಕದಲ್ಲಿ ಅವ್ಯವಸ್ಥಿತವಾಗಿ ಬರೆದಿಡಲಾಗುತ್ತದೆ. ಈ ಕಲಬೆರಕೆಯ ರಾಶಿಯಲ್ಲಿ ಯಾವ ಅಂಶವನ್ನು ಎಲ್ಲಿ ಬರೆದಿಡಲಾಗಿದೆ ಎಂಬುದನ್ನು ಕಂಡುಹಿಡಿಯುವುದು ಸಾಧ್ಯವೇ ಇಲ್ಲ. ಕೆಲವರು

ಟಿಪ್ಪಣಿ ಪುಸ್ತಕಗಳನ್ನು ಬಳಸಿ ಅದರ ಪ್ರತಿ ಪುಟಕ್ಕೂ ಒಂದು ಶಿರೋನಾಮೆಯನ್ನು ಕೊಟ್ಟು ಅದಕ್ಕೆ ಸಂಬಂಧಿಸಿದ ವಿವರಗಳನ್ನು ಆ ಪುಟದಲ್ಲಿ ಬರೆದಿಡುವ ಕ್ರಮವನ್ನು ಅನುಸರಿಸುತ್ತಾರೆ. ಇದರಿಂದ ಒಂದೇ ತೆರನಾಗಿರುವ ವಿವರಗಳು ಒಂದೆಡೆಯೇ ಸಿಗುತ್ತವೆ. ಒಂದು ವಿಚಾರಕ್ಕೆ ಒಂದೇ ರಟ್ಟು ಕಾಗದ ಎಂಬ ಪ್ರಮಾಣದಲ್ಲಿ ಇವುಗಳನ್ನು ಬಳಸಬೇಕು. ಪ್ರತಿಯೊಂದು ಭಾವನೆಯನ್ನು ಒಂದೇ ಘಟಕವಾಗಿ ಎಣಿಸಿ, ಅದನ್ನು ಪ್ರತ್ಯೇಕವಾಗಿ ಗುರುತಿಸಿಟ್ಟುಕೊಳ್ಳಬೇಕು. ಅದನ್ನು ಒಂದು ಪ್ರತ್ಯೇಕ ಪುಸ್ತಕವೋ ಎಂಬಂತೆ ನೋಡಬೇಕು. ಅದನ್ನು ಇನ್ನೊಂದು ವಿಚಾರದೊಂದಿಗೆ ಸೇರಿಸಬಾರದು. ಒಂದೇ ದಾಖಲೆಯಲ್ಲಿ ಅನೇಕ ಮಾಹಿತಿಗಳಿರಬಹುದು. ಪ್ರತಿಯೊಂದು ಮಾಹಿತಿಯನ್ನು ಒಂದು ರಟ್ಟು ಕಾಗದದ ಮೇಲೆ ಬರೆದಿಡಬೇಕು. ಕೆಲವರು ಚಿಕ್ಕದಾದ ಅಥವಾ ದೊಡ್ಡದಾದ ಟಿಪ್ಪಣಿ ಪುಸ್ತಕಗಳನ್ನು ತೆಗೆದುಕೊಂಡು ಮುಖ್ಯವಾದುದೆಂಬುದಾಗಿ ಕಂಡುಬಂದ ಎಲ್ಲಾ ಮಾಹಿತಿ ಅಥವಾ ಉದ್ಧರಣಗಳನ್ನು ಬರೆಯುತ್ತಾ ಹೋಗುತ್ತಾರೆ. ಪ್ರತಿ ಪುಟದಲ್ಲೂ ಗುರುತಿಸಲಾಗಿರುವ ಟಿಪ್ಪಣಿ ಎದುರಾಗಿ ಒಂದು ಕಡೆ ಅಗಲವಾದ ಅಂಚು ಬಿಟ್ಟು, ಅದರಲ್ಲಿ ಈ ಟಿಪ್ಪಣಿಯನ್ನು ಗುರುತಿಸಿ ವರ್ಗೀಕರಿಸುವುದಕ್ಕೆ ಅನುಕೂಲವಾಗುವಂತೆ ಒಂದು ನಿರ್ದಿಷ್ಟ ಮೂಲಪದ ಅಥವಾ ವಾಕ್ಸರಣಿಯನ್ನು ಗುರುತು ಹಾಕಿ ಇಡುತ್ತಾರೆ. ಪ್ರತಿ ಟಿಪ್ಪಣಿಯನ್ನು ಒಂದು ಪುಟದಲ್ಲಿರುವ ನಿರ್ದಿಷ್ಟ ಖಾಲಿ ಸ್ಥಳವನ್ನು ತುಂಬುವಂತಹ ರೀತಿಯಲ್ಲಿ ಬರೆದಿಡಬಹುದು. ನಂತರ ಆ ಟಿಪ್ಪಣಿ ಪುಸ್ತಕದಲ್ಲಿ ಪೂರ್ತಿಯಾಗಿ ಬರೆದ ಮೇಲೆ ಆ ಪುಟಗಳನ್ನು ಒಂದೇ ಪ್ರಮಾಣದಲ್ಲಿ ಕತ್ತರಿಸಿ, ಅವುಗಳನ್ನು ನಿರ್ದಿಷ್ಟ ವರ್ಗಗಳಾಗಿ ವಿಂಗಡಿಸಬಹುದು. ಸುಪ್ರಸಿದ್ಧ ಇಂಗ್ಲಿಷ್ ವೈದ್ಯನಾಗಿದ್ದ ಸರ್ ಕ್ಲಿಫರ್ಡ್ ಆಲ್‌ಬಟ್ ಬ್ಯಾಂಕಿನ ಚೆಕ್ಕಿನ ಪ್ರಮಾಣದ ಕಾಗದದ ಚೀಟಿಗಳನ್ನು ಬಳಸಿ ಅವುಗಳಲ್ಲಿ ಭಾಗಶಃ ವರ್ಗೀಕರಣ ಮಾಡುವುದಕ್ಕೆ ಸಹಾಯಕವಾದ ಮೂಲಪದವನ್ನು ಬರೆದಿಡುವುದಕ್ಕೆ ಮತ್ತು ಭಾಗಶಃ ಅವುಗಳನ್ನು ಒಂದು ಸ್ಪ್ರಿಂಗ್ ಕೊಂಡಿಯಿಂದ ಸೇರಿಸಿಡುವುದಕ್ಕೆ ಅನುಕೂಲವಾಗುವಂತೆ ಅಗಲವಾದ ಅಂಚನ್ನು ಬಿಡಬೇಕೆಂಬುದಾಗಿ ಶಿಫಾರಸು ಮಾಡಿದನು. ಪ್ರತ್ಯೇಕವಾಗಿ ಒಟ್ಟುಗೂಡಿಸಲಾದ ಟಿಪ್ಪಣಿಗಳು ಸಂಶೋಧಕನಿಗೆ ಕಿರು ಹೊತ್ತಿಗೆಗಳಾಗಿ ಸಹಾಯಕವಾಗುತ್ತವೆ. ಸಂಶೋಧಕನು ತಾನು ಆರಿಸಿಕೊಂಡಿರುವ ವಿಷಯ, ತನ್ನ ಅಭಿರುಚಿ, ಸಹಜ ಪ್ರವೃತ್ತಿ, ಚಿತ್ತವೃತ್ತಿ ಇತ್ಯಾದಿಗನುಗುಣವಾಗಿ ಒಂದು ನಿರ್ದಿಷ್ಟ ಕ್ರಮವನ್ನು ಅಳವಡಿಸಿಕೊಂಡು ಅನುಸರಿಸಬೇಕು.

ನಂತರ ಅನ್ವೇಷಕನು ರಟ್ಟುಕಾಗದ ಅಥವಾ ಕಾಗದದ ಚೀಟಿಗಳಲ್ಲಿ ಟಿಪ್ಪಣಿಗಳನ್ನು ಗುರುತಿಸುವಾಗ ಕೆಲವು ಕರಾರುವಕ್ಕಾದ ಹಾಗೂ ಕಟ್ಟುನಿಟ್ಟಾದ ಕಾರ್ಯರೀತಿಗಳನ್ನು ಪರಿಪಾಲಿಸಬೇಕು. (1) ಪ್ರತಿ ರಟ್ಟುಕಾಗದ ಅಥವಾ ಕಾಗದದ ಚೀಟಿಯಲ್ಲಿ ಗುರುತಿಸಲಾಗಿರುವ ಮಾಹಿತಿಗಳು ಯಾವುವು, ಅವುಗಳನ್ನು ಯಾವ ವಿಭಾಗಕ್ಕೆ ಸೇರಿಸಲಾಗಿದೆ ಎನ್ನುವುದನ್ನು ಸೂಚಿಸುವಂತಹ ಶಿರೋನಾಮೆಯನ್ನು ಎಡಗಡೆ ಮೇಲ್ಭಾಗದ ಮೂಲೆಯಲ್ಲಿ ಬರೆದಿರಬೇಕು. ಅದನ್ನು ನೋಡಿದ ಕೂಡಲೆ ಆ ರಟ್ಟುಕಾಗದ ಅಥವಾ ಕಾಗದದ ಚೀಟಿಯಲ್ಲಿ ಇರುವ ವಿಷಯಗಳಾವುವು ಎಂಬುದು ತಿಳಿದುಬರುತ್ತದೆ. (2) ಬಲಗಡೆಯ ಮೇಲ್ಭಾಗದ ಮೂಲೆಯಲ್ಲಿ ಆ ದಾಖಲೆಯ ಅಥವಾ ಮೂಲಕೃತಿಯ ಪ್ರಕಾಶನದ ನಿರ್ದಿಷ್ಟ ವರ್ಷವನ್ನು ನಮೂದಿಸಬೇಕು ನಿರ್ದಿಷ್ಟ ವರ್ಷ ತಿಳಿಯದೇ ಇದ್ದರೆ ಕೊನೇಪಕ್ಷ, ಸರಿಸುಮಾರಾಗಿ ಹೋಲುವ ತಾರೀಖು ಅಥವಾ ತಿಂಗಳು ಅಥವಾ ವರ್ಷ ಅಥವಾ ಶಕೆಯ್ನಾದರೂ ಗುರುತು ಹಾಕಿಕೊಳ್ಳಬೇಕು. ವರ್ಷ ಅಥವಾ ತಾರೀಖನ್ನು ಗುರುತುಹಾಕಿಕೊಳ್ಳದೆ ಇರಬಾರದು. ಒಂದು ದಾಖಲೆಯಲ್ಲಿ ತಾರೀಖನ್ನು ನಮೂದಿಸದೇ ಇದ್ದರೆ ಅದರ ಬೆಲೆ ಕಡಿಮೆಯಾಗಿ

ಬಿಡುತ್ತದೆ. ದಾಖಲೆಯಲ್ಲಿ ನಮೂದಿಸಿರುವ ತಾರೀಖು ನಡೆದ ಘಟನೆಗಳ ಕಾಲಕ್ಕೆ ಹತ್ತಿರವಾಗಿದ್ದರೆ ಆ ದಾಖಲೆ ವಿಶ್ವಾಸಾರ್ಹವಾದುದೆಂಬುದಾಗಿ ಹೇಳಬಹುದು. ಆದ್ದರಿಂದ ದಾಖಲೆಯ ತೇದಿಯನ್ನು ಹೇಗಾದರೂ ನಿರ್ಧರಿಸುವುದಕ್ಕೆ ಎಲ್ಲ ಪ್ರಯತ್ನಗಳನ್ನು ಮಾಡಬೇಕು. ಆ ದಾಖಲೆಯಲ್ಲಿ ಕಂಡುಬರುವ ಅಪ್ರತ್ಯಕ್ಷ ಸೂಚನೆಗಳ ಅಥವಾ ಆ ದಾಖಲೆಯನ್ನು ಇತರ ಸಮಕಾಲೀನ ಬರಹಗಳೊಂದಿಗೆ ಹೋಲಿಸುವುದರ ಮೂಲಕ ತಾರೀಖನ್ನು ನಿರ್ಧರಿಸಬಹುದು. ಸಮಕಾಲೀನ ದಾಖಲೆಗಳು ಹಾಗೂ ಘಟನೆಗಳಲ್ಲಿ ಭಾಗವಹಿಸಿದವರ ಅಭಿಪ್ರಾಯ ಅಮೂಲ್ಯವಾದುವುಗಳು. (3) ವಿಷಯ ಸಾಮಗ್ರಿಗಳನ್ನು ಯಾವ ಮೂಲಗ್ರಂಥಗಳಿಂದ ಸಂಗ್ರಹಿಸಲಾಗಿದೆಯೋ, ಆ ಕೃತಿಯ ಪುಟದ ಸಂಖ್ಯೆ ಅಥವಾ ಒಮ್ಮಡಿಕೆಯ ಹಾಳೆಯ ಸಂಖ್ಯೆಯನ್ನು ಆ ರಟ್ಟುಕಾಗದ ಅಥವಾ ಕಾಗದದ ಚೀಟಿಯಲ್ಲಿ ಎಡಗಡೆ ಬಿಡಲಾಗಿರುವ ಅಂಚಿನಲ್ಲಿ ಬರೆದಿಟ್ಟುಕೊಳ್ಳಬೇಕು; ವಿಷಯಗಳನ್ನು ಮುಂಚಿನ ಪುಟಗಳಿಂದ ಸಂಗ್ರಹಿಸಿಕೊಂಡಿದ್ದರೆ ಆ ಪುಟಗಳ ಸಂಖ್ಯೆಗಳನ್ನು ಗುರುತು ಹಾಕಿಟ್ಟುಕೊಳ್ಳುವುದನ್ನು ಮರೆಯಬಾರದು. (4) ಮಿಕ್ಕ ಸ್ಥಳದಲ್ಲಿ ಒಂದೇ ಭಾವನೆಗೆ ಸಂಬಂಧಿಸಿದ ಮಾಹಿತಿಗಳನ್ನು ಬರೆಯಬೇಕು, ಬೇರೆ ಭಾವನೆಗೆ ಅನ್ವಯಿಸುವ ಮಾಹಿತಿಗಳನ್ನು ಇನ್ನೊಂದು ರಟ್ಟುಕಾಗದದಲ್ಲಿ ಗುರುತು ಹಾಕಿಡಬೇಕು. ಒಂದೇ ಮೂಲಾಧಾರದಲ್ಲಿ ನೂರಾರು ವಿಷಯಗಳಿರಬಹುದು. ಪ್ರತಿ ವಿಷಯಕ್ಕೂ ಒಂದು ಪ್ರತ್ಯೇಕವಾದ ರಟ್ಟು ಕಾಗದವನ್ನು ಉಪಯೋಗಿಸಬೇಕು. ಉದಾಹರಣೆಗೆ, ಸಂಶೋಧಕನಿಗೆ ಬೇಕಗಿರುವ ಮಾಹಿತಿಗಳಿಂದ ಕೂಡಿರುವ ಒಂದು ಖಾಸಗಿ ಪತ್ರ ಅವನಿಗೆ ಸಿಗಬಹುದು. ಅದು ಅಖಂಡವಾಗಿದ್ದರೂ, ಅದರಲ್ಲಿ ನೂರಾರು ಅಭಿಪ್ರಾಯಗಳಿರಬಹುದು. ಅದು ರಾಜಕೀಯ, ಸಾಮಾಜಿಕ, ಆರ್ಥಿಕ, ವ್ಯವಸಾಯ, ಕಂದಾಯ, ಕಲೆ, ಸಂಪ್ರದಾಯ, ಇತ್ಯಾದಿ ವಿಷಯಗಳ ಮೇಲೆ ಬೆಳಕನ್ನು ಚೆಲ್ಲಬಹುದು. ಈ ಪ್ರತಿಯೊಂದು ಅಭಿಪ್ರಾಯವನ್ನೂ ಪ್ರತ್ಯೇಕವಾದ ರಟ್ಟುಕಾಗದದಲ್ಲಿ ಬರೆದಿಡಬೇಕು ಮತ್ತು ಪ್ರತಿಸಲವೂ ಆ ಪತ್ರದ ತಾರೀಖು, ಬರೆದವರ ಹೆಸರು ಇತ್ಯಾದಿಗಳನ್ನು ಗುರುತುಹಾಕಿಕೊಳ್ಳಬೇಕು. (5) ರಟ್ಟುಕಾಗದ ಅಥವಾ ಕಾಗದದ ಚೀಟಿಯ ಕೆಳಭಾಗದಲ್ಲಿ ಲೇಖಕನ ಹೆಸರು, ಕೃತಿ ಹೆಸರು, ಸಂಪುಟದ ಸಂಖ್ಯೆ, ಪ್ರಕಾಶನದ ವರ್ಷ ಮುಂತಾಗಿ ಆ ಗುರುತುಹಾಕಿಕೊಂಡಿರುವ ವಿಷಯಕ್ಕೆ ಅನ್ವಯವಾಗುವ ಅಂಶವನ್ನೆಲ್ಲಾ ನಮೂದಿಸಬೇಕು. ಒಂದು ಉದ್ಧರಣವನ್ನು ಅಥವ ವಾಸ್ತವಾಂಶವನ್ನು ಬರೆದುಕೊಳ್ಳುವಾಗಲೆಲ್ಲಾ ಲೇಖಕನ ಹಾಗೂ ಕೃತಿಯ ಹೆಸರು ಮತ್ತು ಪುಟದ ಸಂಖ್ಯೆಯನ್ನು ತಪ್ಪದೇ ದಾಖಲು ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಬರೆದುಕೊಂಡಿರುವ ವಿಷಯ ಅನುಪಯುಕ್ತವಾಗುತ್ತದೆ. ಕಾರಣ, ಯಾವ ಕೃತಿಯಿಂದ ಆ ನಿರ್ದಿಷ್ಟ ವಿಷಯವನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ಹುಡುಕುವುದು ಅತ್ಯಂತ ತ್ರಾಸದಾಯಕವಾದ, ಬೇಸರವನ್ನುಂಟು ಮಾಡುವಂತಹ ಹಾಗೂ ಸಿಟ್ಟಿಗೆಬ್ಬಿಸುವಂಥ ಕಾರ್ಯವಾಗುತ್ತದೆ. ಅದಕ್ಕಾಗಿ ಅನೇಕ ಗಂಟೆಗಳನ್ನು ಹಾಗೂ ಶಕ್ತಿ ಸಾಮರ್ಥ್ಯಗಳನ್ನು ವ್ಯರ್ಥಮಾಡಿಕೊಳ್ಳಬೇಕಾಗುತ್ತದೆ. ವೃತ್ತಪತ್ರಿಕೆಗಳಲ್ಲಿ ಆರಿಸಿಕೊಂಡಿರುವ ಸಂಶೋಧನಾ ಸಮಸ್ಯೆಗೆ ಅನ್ವಯವಾಗುವ ಮಾಹಿತಿಗಳಿದ್ದರೆ ಆಯಾಯ ಭಾಗಗಳನ್ನು ಕತ್ತರಿಸಿಟ್ಟು ಕೊಳ್ಳುವಾಗ ತಾರೀಖು ಹಾಗೂ ವರ್ಷವನ್ನು ಗುರುತುಹಾಕಿಕೊಳ್ಳಬೇಕು. ಹೀಗೆ ಒಂದೇ ಮೂಲಾಧಾರದಿಂದ ವಿಷಯಗಳನ್ನು ತೆಗೆದುಕೊಂಡು ಪ್ರತ್ಯೇಕವಾಗಿ ಬರೆದುಕೊಳ್ಳುವಾಗ ಪ್ರತಿ ರಟ್ಟು ಕಾಗದ ಅಥವಾ ಕಾಗದದ ಚೀಟಿಯಲ್ಲಿ ಲೇಖಕ ಹಾಗೂ ಕೃತಿಯ ಹೆಸರು, ಪ್ರಕಟವಾದ ವರ್ಷ ಮುಂತಾದ ವಿವರಗಳನ್ನು ಗುರುತು ಹಾಕಿಡುವುದು ಬೇಸರ ಹಿಡಿಸುವ ಕಾರ್ಯವಾದರೂ ಅದು ಅನಿವಾರ್ಯ. ಆದ್ದರಿಂದಲೇ ತಾಳ್ಮೆ, ನಿಷ್ಠೆ ಹಾಗೂ ಸ್ಥಿರತೆಯಿಂದ ಕೂಡಿ ಮಾಡುವ ಪ್ರೀತಿಯ ದುಡಿಮೆ ಉತ್ತಮ ಸಂಶೋಧಕನ ಲಕ್ಷಣ,

ಅದ್ವಿತೀಯ ಪ್ರಮಾಣಾಂಶ ಎಂಬುದಾಗಿ ಹೇಳಲಾಗಿದೆ. ಒಂದೊಂದು ಸಲ ಅನಿರೀಕ್ಷಿತವಾಗಿ ಅವನು ಒಂದು ಲಕೋಟೆಯ ಮೇಲೆ ಆರಿಸಿಕೊಂಡಿರುವ ಸಮಸ್ಯೆಗೆ ಸಂಬಂಧಪಟ್ಟಿರುವ ಒಂದೆರಡು ವಿಷಯವಾಕ್ಯಗಳನ್ನು ಹಾಗೂ ಅವುಗಳ ಮೂಲವನ್ನು ಗುರುತುಹಾಕಿಕೊಳ್ಳಬೇಕಾಗಿ ಬರಬಹುದು.

ಸಂಶೋಧಕನು ಒಂದು ಪುಟದ ಗಡಿಯನ್ನು ಸಮೀಪಿಸಿದಾಗ ಅಥವಾ ಅದನ್ನು ದಾಟಲು ಆರಂಭಿಸಿದಾಗ ತಕ್ಷಣ ತನ್ನ ಲೇಖನಿಯನ್ನು ನಿಲ್ಲಿಸಿ ವಿಷಯಗಳನ್ನು ಪರಿಶೀಲಿಸಬೇಕು. ರಟ್ಟುಕಾಗದ ಅಥವಾ ಕಾಘದದ ಚೀಟಿಗಳು ಮೂಲ ಪುಸ್ತಕಗಳ ಪದಶಃ ಪ್ರತಿಗಳಾಗಿರಬೇಕೇ ಅಥವಾ ಕೇವಲ ಸುಸಂಬದ್ಧವಾಗಿರುವ ಅಂಶಗಳನ್ನು ಮಾತ್ರ ಅವುಗಳಲ್ಲಿ ಸೂಚಿಸಿರಬೇಕೇ ಎಂಬುದು ಪ್ರಶ್ನೆ. ಇದರಿಂದ ಎರಡು ಟಿಪ್ಪಣಿ ಬರೆಯುವ ವಿಧಾನಗಳಿವೆ ಎಂಬುದು ತಿಳಿದುಬರುತ್ತದೆ. ಒಂದು ದಾಖಲೆಯಲ್ಲಿ ಇರುವ ವಿಷಯವನ್ನು ಸವಿಸ್ತರವಾಗಿ ಹಾಗೂ ಯಥಾವತ್ತಾಗಿ ನಕಲು ಮಾಡುವುದು ಎಂದರ್ಥವುಳ್ಳ ಗ್ರಂಥಸಂಗ್ರಹ ವಿಧಾನ ಮೊದಲನೆಯದು. ಎರಡನೆಯ ವಿಧಾನದಲ್ಲಿ ಸಂಶೋಧಕನು ವಿಶ್ಲೇಷಿಸಿ, ಸುಸಂಬದ್ಧವಾಗಿರುವ ಅಂಶಗಳನ್ನು ಮಾತ್ರ ದಾಖಲು ಮಾಡಿಕೊಳ್ಳುತ್ತಾನೆ. ಅನ್ವೇಷಕನು ತಾನು ಆರಿಸಿಕೊಂಡಿರುವ ಸಂಶೋಧನಾ ಸಮಸ್ಯೆಗೆ ಅನುಗುಣವಾಗಿ ಈ ಎರಡು ವಿಧಾನಗಳನ್ನು ಬಳಸಬೇಕಾಗುತ್ತದೆ. ಕೆಲವು ಸಲ ಅವನಿಗೆ ತಾನು ಮಂಡಿಸಿರುವ ವಾದಕ್ಕೆ ಬಂಬಲವಾಗಿ ಒಂದು ಅಂಶವನ್ನು ಉದಾಹರಣೆಯಾಗಿ ಕೊಡುವುದಕ್ಕೆ ಮೂಲ ಗ್ರಂಥಪಾಠ ಸಂಪೂರ್ಣವಾಗಿ ಬೇಕಾಗುತ್ತದೆ. ಕೆಲವು ಸಲ ತಾನು ಪ್ರತಿಪಾದಿಸಿರುವ ಸಿದ್ಧಾಂತವನ್ನು ಕುರಿತು ವಿಮರ್ಶಿಸುವುದಕ್ಕಾಗಿ ಅವನಿಗೆ ವಿಷಯಗಳ ವಿಶ್ಲೇಷಣೆ ಅವಶ್ಯಕವಾಗುತ್ತದೆ. ಆದರೆ ಈ ಎರಡು ವಿಧಾನಗಳಲ್ಲಿ ಅವನು ರೆಜಿಸ್ಟಾ ಕ್ರಮವನ್ನು ಹೆಚ್ಚು ವ್ಯಾಪಕವಾಗಿ ಬಳಸಬೇಕು. ಕಾರಣ ಸುದೀರ್ಘವಾದ ಮೂಲ ಗ್ರಂಥಪಾಠವನ್ನು ಒಂದೇ ರಟ್ಟುಕಾಗದದ ಮೇಲೆ ಪದಶಃ ಹಾಗೆಯೇ ಪ್ರತಿ ಮಾಡುವುದು ಸಾಧ್ಯವಿಲ್ಲ. ಹೆಚ್ಚು ಶ್ರಮ ಹಾಗೂ ಕಾಲ ವ್ಯರ್ಥ. ಇದಕ್ಕೆ ಬದಲಾಗಿ ಈ ಮೂಲ ಗ್ರಂಥಪಾಠಗಳ ಛಾಯಾಚಿತ್ರಗಳನ್ನು ತೆಗೆದಿಟ್ಟುಕೊಳ್ಳುವುದು ಎಷ್ಟೋ ಲಾಭಕರ. ಇತ್ತೀಚಿನ ಕಾಲದಲ್ಲಿ ಸಂಖ್ಯೆಯಲ್ಲಿ ಹಾಗೂ ಪ್ರಮಾಣದಲ್ಲಿ ಅಪಾರವಾಗಿರುವ ಮೂಲ ಕೃತಿಗಳಿಂದ ಎಲ್ಲಾ ವಿವರಗಳನ್ನು ಪದಶಃ ನಕಲು ಮಾಡುವ ಪ್ರಲೋಭನವನ್ನು ಸೀಮಿತಗೊಳಿಸಿ ನಿಯಂತ್ರಿಸುವುದೇ ರಟ್ಟುಕಾಗದ ಕ್ರಮದ ಉದ್ದೇಶ. ಉದಾಹರಣೆಗೆ, ಆಧುನಿಕ ಇತಿಹಾಸದ ಬಗ್ಗೆ ಸಂಶೋಧನೆಯನ್ನು ನಡೆಸಲು ಹೊರಟಿರುವ ವಿದ್ಯಾರ್ಥಿಯು ಅಂಡಿರಿಞ ಕ್ರಮವನ್ನು ಅನುಸರಿಸಿದರೆ, ತನ್ನ ಜೀವಮಾನವೆಲ್ಲಾ ಮೃತ್ಯುವಿನ ಕರೆ ಬರುವವರೆಗೂ ನಿರಂತರವಾಗಿ ನಿಷ್ಠೆಯಿಂದ ಕಾಲವನ್ನು ಕಳೆಯದೇ ಪರಿಶ್ರಮ ಪಟ್ಟರೂ ಅವನಿಗೆ ವಿಷಯ ಸಾಮಗ್ರಿಗಳ ಸಂಗ್ರಹ ಕಾರ್ಯವನ್ನು ಮುಗಿಸುವುದಕ್ಕೆ ಸಾಧ್ಯವಾಗುವುದೇ ಇಲ್ಲ. ಆದ್ದರಿಂದ ಸುಸಂಬದ್ಧವಾದ ವಿಷಯಗಳನ್ನು ಕುರಿತು ಟಿಪ್ಪಣಿಗಳನ್ನು ಬರೆದಿಟ್ಟುಕೊಳ್ಳುವುದಕ್ಕೆ ವಿವೇಚನಾ ಹಾಗೂ ಪ್ರವರಣ ವಿಧಾನಗಳನ್ನು ಅನುಸರಿಸಬೇಕು. ಪ್ರತಿಶೋಧಕನು ತನ್ನ ಸಂಶೋಧನಾ ಪಥದಲ್ಲಿ ಮುಂದುವರಿಯುವಾಗ ರಾಜಮಾರ್ಗದಲ್ಲಿ ಮಾತ್ರವಲ್ಲದೆ, ಅಡ್ಡ ರಸ್ತೆಗಳನ್ನೆಲ್ಲಾ ಹಾದು ಹೋಗಿ ಪೊದರುಗಳಲ್ಲಿ ನುಗ್ಗಿ, ದೊಡ್ಡ ಚಿಕ್ಕ ಹಳ್ಳಗಳನ್ನು ದಾಟಿ ಕಾಲುಹಾದಿಗಳಲ್ಲಿ ಸಾವಧಾನವಾಗಿ ನಡೆಸು ಸುಸಂಬದ್ಧ ವಿಷಯ ಸಾಮಗ್ರಿಗಳನ್ನು ಅರಸಿ ಆರಿಸಿಕೊಳ್ಳಬೇಕು ಮತ್ತು ತಾನು ವಿಷಯ ಸಾಮಗ್ರಿಗಳೆಂಬ ಪ್ರತಿ ಬಂಡೆಯನ್ನು ಕುಟ್ಟಿ ನೋಡುವಾಗ ಸಿಗುವುದು ಸುಸಂಬದ್ಧ ಮಾಹಿತಿಗಳೆಂಬ ಕಣಗಳು ಅಥವಾ ಪದರಗಳು ಮಾತ್ರ ಎಂಬುದನ್ನು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಂಡಿರಬೇಕು.

"1860 ರಿಂದ 70ರ ಒಳಗಿನ ವರ್ಷಗಳು ಗ್ಯಾರಿಬಾಲ್ಡಿಯು ಅತ್ಯಂತ ಪ್ರಚಾರದಲ್ಲಿದ್ದ ಹಾಗೂ ಪ್ರಸಿದ್ಧನಾಗಿದ್ದ ಕಾಲ..." ಸಂಯುಕ್ತ ಸಂಸ್ಥಾನದ ಮಂತ್ರಿಯಾಗಿದ್ದ ಮಾರ್ಷನು 1861ರಲ್ಲಿ ತನ್ನ ಸರ್ಕಾರಕ್ಕೆ ಬರೆಯುವಾಗ, ಗ್ಯಾರಿಬಾಲ್ಡಿಯು ಏಕಾಂಗಿಯಾದ ಸಾಮಾನ್ಯ ವ್ಯಕ್ತಿಯಾಗಿದ್ದರೂ, ತತ್ಕಾಲದಲ್ಲಿ ಅವನೇ ಜಗತ್ತಿನ ಪ್ರಬಲ ಶಕ್ತಿಗಳಲ್ಲಿ ಒಂದಾಗಿದ್ದಾನೆ ಎಂಬುದಾಗಿ ಹೇಳಿದನು." ಎಂಬ ಭಾಗವನ್ನು ನೋಡಬಹುದು. ಅವನು "1859 ರಿಂದ 79ರ ರೊಳಗಿನ ವರ್ಷಗಳಲ್ಲಿ ಗ್ಯಾರಿಬಾಲ್ಡಿಯು ಪ್ರಸಿದ್ಧನಾಗಿದ್ದ ಕಾಲ, ಸಂಯುಕ್ತ ಸಂಸ್ಥಾನದ ಮಂತ್ರಿ ಮಾರ್ಷ್ (1861ರಲ್ಲಿ) ಗ್ಯಾರಿಬಾಲ್ಡಿ ಜಗತ್ತಿನ ಪ್ರಬಲ ಶಕ್ತಿಗಳಲ್ಲಿ ಒಬ್ಬನಾಗಿದ್ದನು ಎಂಬುದಾಗಿ ಸ್ವದೇಶಕ್ಕೆ ಬರೆದು ತಿಳಿಸಿದನು." ಎಂಬುದಾಗಿ ಅನ್ಯಮನಸ್ಕನಾಗಿ ಸಂಪೂರ್ಣ ಅರ್ಥಬರುವಂತೆ ಜೋಡಿಸಲಾಗಿರುವ ಪದಗಳನ್ನು ಬಿಟ್ಟು ಎರಡು ವಾಕ್ಯಗಳ ತಂತೀ ವರ್ತಮಾನ ಮಾಡಿಕೊಂಡರೆ ಅದು ಸ್ಮರಣ ಶಕ್ತಿಯಲ್ಲಿ ಉಳಿಯದೇ ಕೊನೆಯಲ್ಲಿ ಬರುವಾಗ ಈ ತೆರನಾದ ಟಿಪ್ಪಣಿಗಳು ಅವನಿಗೆ ಪರಕೀಯ ವ್ಯಕ್ತಿಯು ಮಾಡಿಕೊಂಡ ಟಿಪ್ಪಣಿಗಳಂತೆ ತೋರಿ ಆಶ್ಚರ್ಯವನ್ನುಂಟುಮಾಡುತ್ತವೆ. ಇದಕ್ಕೆ ಬದಲಾಗಿ ಅವನು "1859 ರಿಂದ 70ರ ಒಳಗಿನ ವರ್ಷಗಳು ಗ್ಯಾರಿಬಾಲ್ಡಿಯ ಪ್ರಖ್ಯಾತಿಯ ಪರಕಾಷ್ಠೆಯ ಕಾಲ, ಅಮೆರಿಕಾದ ಮಂತ್ರಿ... ಮಾರ್ಷ್ ತಾನು 1861ರಲ್ಲಿ ಬರೆದು ಕಳುಹಿಸಿದ ಸರ್ಕಾರಿ ಪತ್ರದಲ್ಲಿ ಅವನನ್ನು ಜಗತ್ತಿನ ಪ್ರಬಲ ಶಕ್ತಿಗಳಲ್ಲಿ ಒಬ್ಬನು ಎಂಬುದಾಗಿ ಕರೆದನು" ಎಂಬುದಾಗಿ ಟಿಪ್ಪಣಿ ಬರೆದರೆ ಅವನು ಯೋಚನೆ ಮಾಡಲು ಯತ್ನಿಸಿದಂತಾಗಿ ಆ ವಿಷಯ ಅವನ ನೆನಪಿನಲ್ಲಿ ಉಳಿಯುತ್ತದೆ; ಆ ವಾಕ್ಯ ಸಮುದಾಯದ ಸರಳಾನುವಾದವನ್ನು ಮಾಡಿ ಬರೆಯುವ ಕಲೆಯನ್ನು ಅಭ್ಯಾಸ ಮಾಡಿದಂತಾಗುತ್ತದೆ. ಇದು ಮೊದಲ ಕರಡುಪ್ರತಿ ಸಿದ್ಧತೆಗೆ ಪ್ರಥಮ ಹೆಜ್ಜೆಯಾಗುತ್ತದೆ. ಕಾರಣ ಇಲ್ಲಿ ಅವನ ಸ್ವಂತ ಪದಗಳಿರುತ್ತವೆ. ಹೀಗೆ ಅವನು ಮೂರು ಕೆಲಸಗಳನ್ನು ಸಾಧಿಸಿದಂತಾಗುತ್ತದೆ. ಮಂತ್ರಿ ಹಾಗೂ ಮಾರ್ಷ್ ಎಂಬ ಪದಗಳ ಮಧ್ಯೆ ಬಿಟ್ಟಿರುವ ತೆರಪು, ಮಾರ್ಷ್‌ನ ಪೂರ್ತಿ ಹೆಸರು ಹಾಗೂ ಇಟಲಿಯಲ್ಲಿ ಅವನ ಸೇವಾಕಾಲದ ವಿವರಗಳನ್ನು ಪರಿಶೀಲಿಸಬೇಕು ಎಂಬುದನ್ನು ಅವನಿಗೆ ಜ್ಞಾಪಿಸುತ್ತದೆ. ಅವನು ಸುದೀರ್ಘವಾದ ಉದ್ಧರಣಗಳನ್ನು ಓದುವಾಗ, ಅದರಲ್ಲಿ ವಿಷಯಗಳು ಎಲ್ಲೆಲ್ಲಿ ಚೆದುರಿಹೋಗಿವೆ ಹಾಗೂ ಅದರಲ್ಲಿರುವ ವಿವರಗಳೆಲ್ಲಾ ತನ್ನ ಸಂಶೋಧನಾ ಸಮಸ್ಯೆಗೆ ಬೇಕಾಗುತ್ತವೆಯೇ ಎಂಬುದನ್ನು ಪರಿಶೀಲಿಸಿ, ಅದರ ಆಧಾರದ ಮೇಲೆ ಅವುಗಳನ್ನು ಒಂದೆರಡು ವಾಕ್ಯಗಳಲ್ಲೇ ಸಂಗ್ರಹಿಸಿ ಬರೆದುಕೊಳ್ಳಬಹುದು. ಉದಾಹರಣೆಗೆ, ಮೇಲೆ ಉದ್ಧರಿಸಿರುವ ಗ್ರಂಥವು ಗ್ಯಾರಿಬಾಲ್ಡಿಯ ಜೀವನ ಚರಿತ್ರೆ. ಅಮೇರಿಕಾದ ಪರರಾಷ್ಟ್ರ ನೀತಿಯ ಬಗ್ಗೆ ಸಂಶೋಧನೆ ನಡೆಸುತ್ತಿರುವ ಅನ್ವೇಷಕನು ಅದರಲ್ಲಿ ಸುಸಂಬದ್ಧವಾಗಿರುವ ಕೆಲವು ಅಂಶಗಳನ್ನು ಗುರುತು ಹಾಕಿಕೊಳ್ಳುತ್ತಾನೆ. ಅವನು ಆ ಸರ್ಕಾರಿ ಪತ್ರದಲ್ಲಿ ಕಂಡುಬರುವ ಮೇಲಿನ ಉದ್ಧೃತ ಭಾಗವನ್ನು ಕುರಿತ ವಿಶದೀಕರಣವನ್ನೆಲ್ಲಾ ಬರೆದಿಟ್ಟುಕೊಳ್ಳಬೇಕಾಗಿಲ್ಲ.

ಒಂದೆರಡು ಗ್ರಂಥಗಳಿಂದ ಬೇಕಾದ ಟಿಪ್ಪಣಿಗಳನ್ನು ಮಾಡಿಕೊಂಡ ನಂತರ ಸಂಶೋಧಕನು ತನ್ನ ಸಂಶೋಧನಾ ಸಮಸ್ಯೆಯನ್ನು ಪ್ರಧಾನ ಅಧ್ಯಾಯಗಳಾಗಿ ವಿಭಾಗಿಸುವುದಕ್ಕೆ ಹಾಗೂ ತಕ್ಕ ಶಿರೋನಾಮೆಯನ್ನು ಕೊಡುವುದಕ್ಕೆ ಮತ್ತು ಸಂಗ್ರಹಿಸಲಾದ ಟಿಪ್ಪಣಿಗಳನ್ನು ಅಕಾರಾದಿಯಾಗಿ ಅಣಿ ಮಾಡುವುದಕ್ಕೆ ಗಮನವನ್ನು ಕೊಡಬೇಕು. ಬರೆಯುವ ಕಥನವು ದೊಡ್ಡದಾದರೆ, ಪ್ರಧಾನ ಅಧ್ಯಾಯಗಳನ್ನು ಉಪವಿಭಾಗಗಳಾಗಿ ವಿಂಗಡಿಸಿ,

ಪ್ರತಿಯೊಂದನ್ನೂ ಒಂದು ತಾತ್ಕಾಲಿಕ ಹೆಸರಿನಿಂದ ಅಥವಾ ರೋಮನ್ ಅಂಕಿಗಳಿಂದ ಸೂಚಿಸಬೇಕು. ಈ ಶಿರೋನಾಮೆ ಅಥವಾ ರೋಮನ್ ಅಂಕಿಗಳು ಮುಖ್ಯಾಭಿಪ್ರಾಯಗಳ ಸೂಚಿಗಳಾಗುತ್ತವೆ. ಉದಾಹರನೆಗೆ, ಒಂದು ಜೀವನಚರಿತ್ರೆಯಲ್ಲಿ ಜೀವನ ಮತ್ತು ಬಾಲ್ಯ, ವಿದ್ಯಾಭ್ಯಾಸ ಮತ್ತು ವಿವಾಹ, ವೃತ್ತಿರಂಗ, ಸಾರ್ವಜನಿಕ ಜೀವನ, ರಾಜಕೀಯ ಕ್ಷೇತ್ರ, ಸಂಕಟಗಳ ಸುಳಿ, ಅಂತ್ಯಕಾಲ, ವ್ಯಕ್ತಿಚಿತ್ರಣ ಮುಂತಾದ ಅಧ್ಯಾಯಗಳಿರಬಹುದು ಮತ್ತು ಅದರಲ್ಲಿ ಒಂದೇ ಮಾಹಿತಿಯು ಎರಡು ಅಥವಾ ಮೂರು ಅಧ್ಯಾಯಗಳಿಗೆ ಉಪಯುಕ್ತವಾಗಬಹುದು. ಉದಾಹರಣೆಗೆ, ಸಾರ್ವಜನಿಕ ಜೀವನ ಎಂಬ ಅಧ್ಯಾಯಕ್ಕೆ ಸಂಬಂಧಿಸಿರುವ ಮಾಹಿತಿಯು ವ್ಯಕ್ತಿಚಿತ್ರಣ ಎಂಬ ಅಥವ ಮೊದಲು ಎರಡು ಅಧ್ಯಾಯಗಳಿಗೂ ಅನ್ವಯವಾಗಬಹುದು. ಕೇವಲ ಈ ತರಹದ ಟಿಪ್ಪಣಿಗಳನ್ನು ವರ್ಗೀಕರಿಸುವುದರಿಂದ ಸವಿಸ್ತರವಾದ ಹಾಗೂ ವ್ಯವಸ್ಥಿತವಾದ ಅನುಕ್ರಮ ಸಿಕ್ಕಿದಂತಾಗುವುದಿಲ್ಲ. ಆದರೆ ಇದರಿಂದ ಯಾವ ವಿಭಾಗದಲ್ಲಿ ಏನು ಕಡಿಮೆಯಾಗಿದೆ ಎಂಬ ಅಂಶ ಸ್ಪಷ್ಟವಾಗುತ್ತದೆ. ಮೇಲೆ ನೀಡಿರುವ ಉದಾಹರಣೆಗಳಲ್ಲಿ ರಾಜಕೀಯ ಕ್ಷೇತ್ರ ಎಂಬ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಅಸಂಖ್ಯಾತ ಟಿಪ್ಪಣಿಗಳನ್ನು ಬರೆದಿಟ್ಟಿರಬಹುದು. ಆದರೆ ವಿದ್ಯಾಭ್ಯಾಸ ಹಾಗೂ ವಿವಾಹ ಎಂಬ ಅಧ್ಯಾಯಕ್ಕೆ ಸಂಬಂಧಿಸಿರುವ ಟಿಪ್ಪಣಿಗಳು ಅತ್ಯಲ್ಪವಾಗಿರಬಹುದು. ಇದರಿಂದ ಸಂಶೋಧಕನು ನಿರುತ್ಸಾಹಿಯಾಗಬೇಕಾದುದಿಲ್ಲ. ಕಾರಣ ಬೆಳೆಯುತ್ತಿರುವ ಗ್ರಂಥ ವಿವರಣ ಪಟ್ಟಿಯು ಈ ಮಾರ್ಗದರ್ಶಕ ಸೂಚಿಯು ಸೂಚಿಸಿರುವ ವಿಷಯಗಳ ಅಭಾವವನ್ನು ತುಂಬಿಕೊಳ್ಳಬಹುದೆಂಬ ಭರವಸೆಯನ್ನು ಅವನಲ್ಲಿ ಮೂಡಿಸುತ್ತದೆ.

ಹೀಗೆ ಸಂಶೋಧಕನು ತನ್ನ ಅನ್ವೇಷಣಾಯಾನವನ್ನು ಕೈಗೊಳ್ಳುವುದಕ್ಕೆ ಪೂರ್ವಸಿದ್ಧತೆಯಾಗಿ ಸಂಶೋಧನೆ ಎಂದರೇನು, ಅದರ ಹಂತಗಳಾವುವು, ಐತಿಹಾಸಿಕ ಅನ್ವೇಷಣೆ ಎಂದರೇನು, ಸಂಶೋಧಕನಲ್ಲಿ ಬೆಳಸಿಕೊಳ್ಳಬೇಕಾದ ಅತ್ಯಾವಶ್ಯಕ ಗುಣ ಹಾಗೂ ಅರ್ಹತೆಗಳಾವುವು, ವಿಷಯವನ್ನು ಹೇಗೆ ಆರಿಸಿಕೊಳ್ಳಬೇಕು, ಗ್ರಂಥವಿವರಣ ಪಟ್ಟಿಯನ್ನು ಹಾಗೂ ರೂಪರೇಖೆಯನ್ನು ಹೇಗೆ ರಚಿಸಬೇಕು, ಮುಖ್ಯ ಮಾಹಿತಿಗಳನ್ನು ಹೇಗೆ ಪತ್ತೆಹಚ್ಚಿ ಸಂಗ್ರಹಿಸಿ, ಟಿಪ್ಪಣಿ ಮಾಡಬೇಕು, ಹೇಗೆ ಅವುಗಳನ್ನು ವರ್ಗೀಕರಿಸಬೇಕು, ಯಾವ ಯಾವ ಬಗೆಯ ಉಪಕರಣಗಳನ್ನು ಬಳಸಬೇಕು ಮುಂತಾದ ವಿಷಯಗಳನ್ನೆಲ್ಲಾ ಚೆನ್ನಾಗಿ ಅರ್ಥಮಾಡಿಕೊಂಡಿರಬೇಕು. ಸಂಶೋಧನಾ ಸಮಸ್ಯೆಯ ಆಯ್ಕೆಯಿಂದ ಹಿಡಿದು ಮುಕ್ತಾಯದ ಹಂತದವರೆಗೆ ಅನ್ವೇಷಕನು ಎದುರಿಸಬೇಕಾದ ಸವಾಲುಗಳು ಹಲವಾರು. ಆದ್ದರಿಂದ ಅವನು ಉತ್ತಮ ಇತಿಹಾಸವನ್ನು ರಚಿಸುವ ಸ್ಪರ್ಧೆಯಲ್ಲಿ ಭಾಗವಹಿಸಿ ಗೆಲ್ಲುವುದಕ್ಕೆ ಅತ್ಯಾವಶ್ಯಕವಾಗಿರುವ ಕೌಶಲಗಳನ್ನೆಲ್ಲಾ ಸಂಪೂರ್ಣವಾಗಿ ಬೆಳೆಸಿಕೊಂಡಿರಬೇಕು.

## 5.4 ಸಾರಾಂಶ

ಈ ಘಟಕದಲ್ಲಿ ಸಂಶೋಧನೆಗಾಗಿ ಸಂಶೋಧಕನು ತನ್ನನ್ನು ತಾನು ತೊಡಗಿಸಿಕೊಂಡಾಗ ಆತನಿಗೆ ಗೀಳ್ಮೆ, ಸಹನೆ ಹಾಗೂ ಮಾಹಿತಿ ಸಂಗ್ರಹಿಸುವ ಮತ್ತು ಗ್ರಂಥಾಲಯಗಳಲ್ಲಿ ಪುಸ್ತಕಗಳನ್ನು ಹುಡುಕುವ ನೈಪುಣ್ಯತೆಯ ಬಗ್ಗೆ ಅರಿವಿನ ಬಗ್ಗೆ ತಿಳಿದುಕೊಂಡಿದೆ.

ಈ ಘಟಕದ ಅಧ್ಯಯನದ ನಂತರ ನಾವು ಈ ಪ್ರಮುಖ ಅಂಶಗಳನ್ನು ಅರ್ಥಮಾಡಿಕೊಂಡೆವು.

- ನಿಜ ಸಂಶೋಧಕನಿಗೆ ಇರಬೇಕಾದ ಅರ್ಹತೆಯ ಬಗ್ಗೆ ತಿಳಿದುಕೊಂಡೆವು.
- ಸೂಕ್ಷ್ಮ ವಿಷಯಗಳನ್ನು ಹೇಗೆ ಹೊರತೆಗೆಯುವುದರ ಬಗ್ಗೆ ಅರಿತುಕೊಂಡೆವು.
- ಸಂಶೋಧಕನ ಅರ್ಹತೆಗಳು ಯಾವುವು? ಮತ್ತು ಅವುಗಳನ್ನು ಅವನು ಹೇಗೆ ಪಡೆಯಬಲ್ಲ ಎಂಬುದು.
- ಸಂಶೋಧನಾ ವಿಷಯವನ್ನು ಆಯ್ಕೆ ಮಾಡುವಲ್ಲಿ ಸಂಶೋಧಕನು ಪಾಲಿಸಬೇಕಾದ ನಿಯಮಗಳು ಯಾವುವು ಎಂಬುದು.
- ಸಂಶೋಧನಾ ಕಾರ್ಯದಲ್ಲಿ ಸಂಶೋಧಕನು ಹೇಗೆ ಮುಂದುವರೆಯಬೇಕು ಎಂಬುದೆಲ್ಲವನ್ನು ತಿಳಿದುಕೊಳ್ಳಬೇಕು.

## 5.5 ಪ್ರಮುಖ ಪದಗಳು

1. ಅತ್ಯಗತ್ಯ: ನಿರ್ದಿಷ್ಟ ಗುರಿ ಸಾಧಿಸಲು ಅಗತ್ಯ ಸಂಗತಿ
2. ಸಮಚಿತ್ತತೆ: ಅಳೆಯಬಹುದಾದ ಮಟ್ಟ ಇಲ್ಲದಂತಹ ಸ್ಥಿತಿ

## 5.6 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಸಂಶೋಧನಾಕಾರನಿಗೆ ಇರಬೇಕಾದ ಪ್ರಮುಖ ಅರ್ಹತೆಗಳನ್ನು ಚರ್ಚಿಸಿ?
2. ಸಂಶೋಧಕನು ಸಂಶೋಧನಾ ವಿಷಯವನ್ನು ಆಯ್ಕೆ ಮಾಡಿಕೊಳ್ಳುವಾಗ ಎದುರಿಸುವ ಸಮಸ್ಯೆಗಳನ್ನು ಪರಿಶೀಲಿಸಿ.

## 5.7 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 5.2 ನೋಡಿ
2. ವಿಭಾಗ 5.3 ನೋಡಿ

## 5.8 ಪರಾಮರ್ಶನ ಗ್ರಂಥಗಳು

1. ಇತಿಹಾಸ ಸಂಶೋಧನಾ ಮಾರ್ಗ – ಆರ್.ಸಿ.ಮುಜಮ್‌ದಾರ್, ಆರ್.ಕೆ.ಭಾರದ್ವಾಜ್, ಆರ್.ಸಿ.ಚೌಧುರಿ

2. Elors G.R. - The Practice of History

3. ವೆಂಕಟರತ್ನಂ ಮತ್ತು ಪದ್ಮ – ಇತಿಹಾಸ ಸಂಶೋಧನಾ ಮಾರ್ಗ

4. Rajayyan K - History in Theory and Method

5. ಹಿಸ್ಟರಿ: ಇಟ್ಸ್ ಥಿಯರಿ ಅಂಡ್ ಮೆಥಾಡ್ – ಪ್ರೊ. ಬಿ. ಷೇಕ್ ಆಲಿ

6. ದಿ ಐಡಿಯಾ ಆಫ್ ಹಿಸ್ಟರಿ – ಕಾಲಿಂಗ್ ಹುಡ್

7. ವಾಟ್ ಈಸ್ ಹಿಸ್ಟರಿ – ಇ.ಎಚ್.ಕಾರ್

8. ದಿ ಸ್ಪಿರಿಟ್ ಆಫ್ ಹಿಸ್ಟರಿ – ಆರ್ನಾಲ್ಡ್ ಟಾಯ್ನಬಿ

---

**ಪಠ್ಯವನ್ನು ರಚಿಸಿದವರು:**
**ಪ್ರೊ.ಎನ್.ಸರಸ್ವತಿ**

# ಘಟಕ –6 ಸಂಯೋಜನಾ ಕಾರ್ಯಗಳು

## ರಚನೆ


6.0 ಉದ್ದೇಶಗಳು

6.1 ಪೀಠಿಕೆ

6.2 ಸಂಯೋಜನಾ ಕಾರ್ಯಗಳು

6.2.1 ಸಂಶೋಧನಾ ಪ್ರಬಂಧದ ಯೋಜನೆ

6.2.2 ರಚನಾತ್ಮಕ ಸಮರ್ಥನೆ

6.2.3 ಸಮಂಜಸ ಸಾಮಾನ್ಯೀಕರಣ

6.3 ಸಾರಾಂಶ

6.4 ಪ್ರಮುಖ ಪದಗಳು

6.5 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

6.6 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

6.6 ಪರಾಮರ್ಶನ ಗ್ರಂಥಗಳು

## 6.0 ಉದ್ದೇಶಗಳು

ಈ ಘಟಕದ ಉದ್ದೇಶವೆಂದರೆ, ಸಂಶೋಧನೆಯಲ್ಲಿ ವಿಮರ್ಶೆಯ ನಂತರ ಸಂಯೋಜನಾ ಕಾರ್ಯಗಳಿಂದ ಪ್ರಬಂಧದ ಯೋಜನೆ, ರಚನಾತ್ಮಕ ಸಮರ್ಥನೆ ಮತ್ತು ಸಮಂಜಸ ಸಾಮಾನ್ಯೀಕರಣದ ಕಾರ್ಯಗಳನ್ನು ಸಂಶೋಧಕನು ವಿಷಯಕ್ಕೆ ಮತ್ತು ಮಾಹಿತಿಯ ಉದ್ದೇಶಕ್ಕೆ ಯಾವುದೇ ಚ್ಯುತಿ ಬರದೆ ಇರುವ ರೀತಿಯಲ್ಲಿ ಮಾಡುವಂತಹ ವಿಷಯವನ್ನು ಇಲ್ಲಿ ಅಧ್ಯಯನ ಮಾಡುತ್ತೇವೆ.

## 6.1 ಪೀಠಿಕೆ

ಈ ಘಟಕದಲ್ಲಿ ಇತಿಹಾಸ ಸಂಶೋಧನೆಯ ಪ್ರಮುಖವಾದ ಕಾರ್ಯವಾದ ಸಂಶೋಧನಾ ಕಾರ್ಯಗಳನ್ನು ಮಾಡಲಾಗುವುದು. ಈ ಕಾರ್ಯದಲ್ಲಿ ಸಂಶೋಧಕನು ತಾನು ಸಂಯೋಜನಾ ಕಾರ್ಯಗಳಲ್ಲಿ ಪ್ರಮುಖವಾಗಿ ಪ್ರಬಂಧವನ್ನು ಸಿದ್ಧಪಡಿಸಲು ಒಂದು ಯೋಜನೆಯನ್ನು ತಯಾರಿಸಿ ಆ ಯೋಜನೆಯಲ್ಲಿ ಕಾಣಬರುವ ಮಾಹಿತಿಗಳಿಗೆ ರಚನಾತ್ಮಕ ಸಮರ್ಥನೆಯನ್ನು ತಿಳಿಸಬೇಕು ಮತ್ತು ತಾನು ನಡೆಸಿದ ಸಂಶೋಧನೆಯಿಂದ ಹೊರಬಂದ ವಿಷಯಗಳನ್ನು ಎಲ್ಲರೂ ಒಪ್ಪುವ ರೀತಿಯಲ್ಲಿ ಸಮಂಜಸ ಸಾಮಾನ್ಯೀಕರಣ ವಿಷಯವನ್ನು ತಿಳಿಸಬೇಕಾಗಿದೆ. ಈ ಕಾರ್ಯವನ್ನು ಸಂಶೋಧಕನು ಹೇಗೆ ನಿರ್ವಹಿಸುತ್ತಾನೆ ಎಂಬುದನ್ನು ಇಲ್ಲಿ ತಿಳಿಯೋಣ.

## 6.2 ಸಂಯೋಜನಾ ಕಾರ್ಯಗಳು

ಹಿಂದಿನ ಘಟನೆಗಳ ಐತಿಹಾಸಿಕ ಪುನರ್ರಚನೆಯಲ್ಲಿ ಎರಡು ವಿಧವಾದ ಕಾರ್ಯಕ್ರಮಗಳಿವೆ. ಇವು ವಿಭಜನಾಕಾರ್ಯ ಮತ್ತು ಸಂಯೋಜನ ಕಾರ್ಯಗಳು ವಿಭಜನಾಕಾರ್ಯದಲ್ಲಿ ಸಂಗ್ರಹಣೆ, ಪರಿಶೀಲನೆ ದತ್ತಾಂಶದ ನೈಜತ್ವ ಪರೀಕ್ಷೆ ಮುಂತಾದ ಕಾರ್ಯಗಳಿದ್ದರೆ ಸಂಯೋಜನಾಕಾರ್ಯದಲ್ಲಿ ಒಗ್ಗೂಡಿಸುವುದು, ಕ್ರಮವಾಗಿ ಜೋಡಿಸುವುದು, ವಿವರಣೆ ಮತ್ತು ದತ್ತಾಂಶದ ವಿವರಗಳನ್ನು ಅರ್ಥಪೂರ್ಣವಾಗಿಯೂ, ಸ್ವಾರಸ್ಯಕರವಾಗಿಯೂ ಆಗುವಂತೆ ನಿರೂಪಣೆ ಮಾಡುವುದು ಮುಂತಾದ ಕಾರ್ಯಗಳಿವೆ.

ಸಂಯೋಜನಾ ಕಾರ್ಯದಲ್ಲಿ ದೊರಕಿದ ಐತಿಹಾಸಿಕಗಳನ್ನು ಆದಷ್ಟು ಚಿಕ್ಕದಾಗಿ ಭೇದಿಸಿ, ಪ್ರತಿ ಸಣ್ಣ ಭಾಗವನ್ನು, ಕಲ್ಪನೆಯನ್ನು ಪರೀಕ್ಷಿಸಿ ಅದು ಅಸಲಿಯೋ, ನಕಲಿಯೋ, ಸತ್ಯವೋ, ಅಸತ್ಯವೋ, ನಂಬಿಕೆಗೆ ಅರ್ಹವಾದುದ್ದೋ, ನಂಬಿಕೆಗೆ ಅನರ್ಹವಾದುದ್ದೋ ಎಂಬುದನ್ನು ತಿಳಿಯುವ ಒಂದು ವಿಧಾನವಾಗಿದೆ. ಇದನ್ನು ಸರಿಯಾಗಿ ಮಾಡದಿದ್ದರೆ ನಿಜಾಂಶ ದೊರಕದೆ ಇತಿಹಾಸ ಪುನರ್ರಚನೆಯ 'ಆಕಾಶದಲ್ಲಿ ಮೀನು ಹಿಡಿಯುವ ಪ್ರಯತ್ನದ ಹಾಗೆ' ನಿರರ್ಥಕವಾಗುತ್ತದೆ. ಸರಿಯಾದ ಪ್ರಯತ್ನದಿಂದ ಎಚ್ಚರಿಕೆಯ ಫಲವಾಗಿ ಪ್ರತಿ ವಿಷಯವನ್ನು ಉಪಯೋಗಿಸಿ, ಪ್ರತಿಯೊಂದು ಇಟ್ಟಿಗೆಯ ಸರಿಯಾದ ಜೋಡಣೆಯಿಂದ ಕಟ್ಟಡ ನಿರ್ಮಾಣವಾಗುವಂತೆ, ಇತಿಹಾಸ ನಿರ್ಮಾಣ ಮಾಡಬೇಕು. ಹೀಗೆ ಮೊದಲನೆಯ ಕರ್ತವ್ಯವೆಂದರೆ

ವಿಜ್ಞಾನಿಯು ಎಲ್ಲ ತಂತ್ರಗಳನ್ನು ಉಪಯೋಗಿಸಿ ದತ್ತಾಂಶಗಳನ್ನು ಪರೀಕ್ಷಿಸಿ ನಿರ್ಧಾರಕ್ಕೆ ಬರುವಂತೆ ಇತಿಹಾಸಕಾರನೂ ಮಾಡಬೇಕು. ಎರಡನೆಯದಾಗಿ ಕಲಾಕಾರನು ಸ್ವಚ್ಛಂದವಾಗಿ ವರ್ತಿಸಿ ಸುಂದರ ಕಲಾಕೃತಿಯನ್ನು ಸೃಷ್ಟಿಸುವಂತೆ ಇತಿಹಾಸಕಾರನು ದೊರೆತ ದತ್ತಾಂಶದಿಂದ ಉತ್ತಮ ಸಾಹಿತ್ಯ ರಚಿಸಬೇಕು. ಹೀಗೆ ಐತಿಹಾಸಿಕ ಸಂಯೋಜನೆಯು ಒಂದು ಅಪೂರ್ವ ಕಾರ್ಯವಾಗಿದೆ.

ಐತಿಹಾಸಿಕ ವಿಭಾಗದಲ್ಲಿ ಸಂಯೋಜನಾ ಕಾರ್ಯವೇ ಎರಡನೆಯ ಮುಖ್ಯ ಹಂತ. ಇತಿಹಾಸದ ಮೂಲವಸ್ತುಗಳು ನಾನಾ ಕಾರಣಗಳಿಂದ ಹತ್ತಾರು ಕಡೆ ಅವ್ಯವಸ್ಥಿತವಾಗಿ ಹಂಚಿ ಹರಡಿವೆ. ಇಂಥ ಸರಕುಗಳನ್ನು ಪ್ರಥಮತಃ ಒಂದು ಕಡೆ ಕೂಡಿಸಿ ಉಪಯುಕ್ತ ಮತ್ತು ಸಂಬಂಧಿಸಿದ ವಿಷಯಗಳನ್ನು ಮಾತ್ರ ತನ್ನ ಗಮನದಲ್ಲಿಟ್ಟು, ಅವುಗಳನ್ನು ಐತಿಹಾಸಿಕ ದತ್ತಾಂಶಗಳಿಗನುಸಾರವಾಗಿ ವ್ಯವಸ್ಥಿತವಾಗಿ ವಿಂಗಡಿಸಿ, ಗಮನದಲ್ಲಿಟ್ಟು, ಅವುಗಳನ್ನು ಐತಿಹಾಸಿಕ ದತ್ತಾಂಶಗಳಿಗನುಸಾರವಾಗಿ ವ್ಯವಸ್ಥಿತವಾಗಿ ವಿಂಗಡಿಸಿ, ಅವುಗಳನ್ನು ಒಂದು ಸಾಮಾನ್ಯೀಕರಿಸಬೇಕು. ಉದಾಹರಣೆಗೆ ಶಿವಾಜಿಯ ಅಥವಾ ಅಕ್ಬರನ ವಿಷಯವಾಗಿ ಆ ಕಾಲದಲ್ಲಿ ಬರೆದ ಬೇರೆ ಬೇರೆ ಲೇಖಕರು ಒಂದೇ ವಿಷಯದ ಬಗ್ಗೆ ಬೇರೆ ಬೇರೆಯಾದ ವಿಭಿನ್ನವಾದ ಅಭಿಪ್ರಾಯಗಳನ್ನು ಸೂಚಿಸಿರುವುದುಂಟು. ಆ ಕಾಲದಲ್ಲಿ ಭೇಟಿ ಮಾಡಿದ ಪ್ರವಾಸಿಗರು ಬರೆದ ವಿಷಯಗಳು ಬೇರೆಯಾಗಿಯೇ ತದ್ವಿರುದ್ಧವಾಗಿಯೋ ಕಾಣಿಸಿರಬಹುದು. ಇಂಥ ಸಂದರ್ಭದಲ್ಲಿ ಇತಿಹಾಸಕಾರನು ತನ್ನ ಸಂಯೋಜನೆಯಲ್ಲಿ ಸಾಧ್ಯವಾದಷ್ಟು ಭಿನ್ನತೆಗಳನ್ನು ಕಡಿಮೆ ಮಾಡಿ, ಅಭಿಪ್ರಾಯಗಳನ್ನು ಸಾಮಾನ್ಯವಾಗಿ ಒಪ್ಪಬಹುದಾದ ರೀತಿಯಲ್ಲಿ ತನ್ನ ಕಾರ್ಯ ಜರುಗಿಸಬೇಕು.

ಇತಿಹಾಸ ಸಂಶೋಧಕನು ಮತ್ತೆ ಕೆಲವು ವಿಷಯಗಳನ್ನೂ ಗಮನದಲ್ಲಿಟ್ಟಿರಬೇಕು. ಪ್ರತಿಯೊಂದು ಇತಿಹಾಸ ಘಟನೆಗೂ ಒಂದು ಸ್ಥಳ, ಒಂದು ಕಾಲ, ಮತ್ತು ಒಂದು ಪ್ರದೇಶದ ಹಿನ್ನಲೆ ಇದೆ. ಇವುಗಳ ಕಾರಣ ಪರಿಣಾಮ ಸಂಬಂಧಗಳು ಇವೆ. ಇತಿಹಾಸಕಾರನಿಗೆ ದೊರಕುವ ಸಂಗತಿಗಳನ್ನು ಈ ಕೆಳಗೆ ಕಾಣಿಸಿರುವ ಮೂರು ಮೂಲಗಳಿಂದ ಒದಗುತ್ತವೆ. (1) ವಸ್ತು ವಿಶೇಷಗಳಾದ ಸ್ಮಾರಕ, ಭೌತ ಸ್ಥಿತಿಗಳು, ಕಲೆ ಮತ್ತು ಉದ್ಯೋಗಗಳ ಉತ್ಪನ್ನಗಳು, (2) ಮನುಷ್ಯರ ಚಟುವಟಿಕೆಗಳು, ಅವರ ಕೆಲಸಗಳು, ಸಾಧನಗಳು ಮತ್ತು ವೈಫಲ್ಯಗಳು ಮತ್ತು (3) ಚಲನ ಪ್ರೇರಕಗಳು, ಕಲ್ಪನೆಗಳು ಮುಂತಾದ ಭಾವನಾ ರೂಪ, ವಿಷಯಗಳು, ಇವುಗಳಲ್ಲಿ ಮೂರನೆಯದರಲ್ಲಿ ಮನಸ್ಸಿಗೆ ಸಂಬಂಧಪಟ್ಟ ಕಾರ್ಯಾಚರಣೆಗಳೆ ಇವೆ. ಈ ಮನಸ್ಸಿನ ವ್ಯಾಪಾರವನ್ನು ಪುನಃ ಮೂರು ಭಾಗ ಮಾಡಬಹುದು: (1) ರಚನಾಕಾರನ ಮನಸ್ಸಿನ ಕಲ್ಪನೆಗಳು ಮತ್ತು ಅದನ್ನು ಹೇಳುವುದು. (2) ಗ್ರಂಥಕರ್ತರು ತಮ್ಮ ಸಮಕಾಲೀನ ಇತರ ಗ್ರಂಥಕರ್ತರಲ್ಲಿ ಕಂಡುಬಂತೆಂದು ಹೇಳಲಾದ ವಿಷಯಗಳು ಮತ್ತು (3) ದಾಖಲದ ವಿಷಯಗಳಿಗೆ ಸಂಬಂಧಪಟ್ಟ ಚಟುವಟಿಕೆಗಳಿಗೆ ಕಾರಣವಾದ ಪ್ರಚೋದನೆಗಳು. ಹೀಗೆ ಕಣ್ಣಿಗೆ ಕಾಣುವ ವಸ್ತುಗಳು, ಮನುಷ್ಯ ಚಟುವಟಿಕೆ ಮತ್ತು ಮನೋವ್ಯಾಪಾರಿಗಳು ಇತಿಹಾಸ ತಿಳುವಳಿಕೆಗೆ ವಸ್ತುಗಳಾಗಿವೆ. ಇವುಗಳೆಲ್ಲವನ್ನೂ ನೇರವಾಗಿ (ಪ್ರತ್ಯಕ್ಷ) ತಾನೇ ಕಾಣಲಾಗದಿದ್ದರೂ, ಇತರರು ಕಂಡ ವಿಷಯಗಳನ್ನು ಮತ್ತು ಊಹಿಸಿ ತೀರ್ಮಾನಿಸಿದ ವಿಷಯಗಳನ್ನು ಇಲ್ಲಿ ಸೇರಿಸಲಾಗಿದೆ.

ಈ ವಿಷಯಗಳು ವ್ಯಕ್ತಿಗತವಾದರೂ ಅಸತ್ಯವೇನಲ್ಲ. ಮಾನವ ಸ್ವಭಾವಗಳು ಈಗಲೂ ಹಿಂದಿನ ಕಾಲದಲ್ಲಿದ್ದಂತೆಯೇ ಇವೆ. ಆದರೆ ಇವು ಸಂಭವನೀಯವೆಂದು ಪರಿಗಣಿಸಲಾಗುವುದಿಲ್ಲ. ಉದಾಹರಣೆಗೆ ಬುದ್ಧ, ಅಶೋಕ, ಗಾಂಧೀಜಿಯಂತವರು ಈಗ ಇಲ್ಲ ಮತ್ತು ಅವರಂತೆ ಮನಸ್ಸನ್ನು ಹೊಂದಿರುವುದಾಗಲಿ, ಆ ಅನುಭವಗಳನ್ನು ಪಡೆಯುವುದಾಗಲಿ ಸಾಧ್ಯವಿಲ್ಲ. ಇಂಥವು ಕೇವಲ ದಾಖಲೆಗಳನ್ನು ನೋಡುವುದರಿಂದ ಒದಗಲಾರವು. ಇತಿಹಾಸಕಾರನು ಸಂಗತಿಗಳನ್ನು ವಿಮರ್ಶಿಸಿ ತಪ್ಪುಗಳನ್ನು ಸರಿಪಡಿಸಿ ಈಗಿನ ಸಂದರ್ಭದಲ್ಲಿ ನಡೆಯುತ್ತಿರುವ ಘಟನೆಗಳಿಗೆ ಹೋಲಿಸಿ, ಬೇಕಾದಲ್ಲಿ ಮನಃಶಾಸ್ತ್ರ, ಸಮಾಜಶಾಸ್ತ್ರ ಮತ್ತು ಇತರ ವಿಜ್ಞಾನಗಳ ವಿಷಯಗಳ ಜ್ಞಾನವನ್ನು ಹೊಂದಿಸಿ ನಿರ್ಧರಿಸಬಹುದು. ಹೀಗಾಗಿ ಸಂಯೋಜನ ಕಾರ್ಯವು ಇವುಗಳ ಪ್ರಾಥಮಿಕ ತಂತ್ರಜ್ಞಾನವನ್ನು ಒಳಗೊಂಡಿರುತ್ತದೆ.

### 6.2.1 ಸಂಶೋಧನಾ ಪ್ರಬಂಧದ ಯೋಜನೆ

ಮುಂದಿನ ಹಂತದಲ್ಲಿ ಸಂಗತಿಗಳನ್ನು ಒಂದು ನಿರ್ದಿಷ್ಟ ಪ್ರಕಾರ ವರ್ಗೀಕರಿಸಿಕೊಳ್ಳಬೇಕು. ಇವುಗಳಲ್ಲಿ ಕಾಲ, ಪ್ರದೇಶ, ಮತ್ತು ವ್ಯಕ್ತಿ ದೇಶಗಳಿಗೆ ಸಂಬಂಧಪಟ್ಟ ಹಾಗೆ ವಿಂಗಡಿಸಿಕೊಳ್ಳಬಹುದು. ಇವು ಕಾಲ ಕ್ರಮಪಟ್ಟಿ (ಕ್ರಾನಾಲಜಿ) ಮತ್ತು ಸಂಬಂಧಪಟ್ಟ ಸ್ವರೂಪ (ಜಿಯಾಗ್ರಫಿಕಲ್) ಗಳೂ ಆಗಿರುತ್ತವೆ. ಹಿಂದೆ ಈ ರೀತಿ ವಿಂಗಡನೆಗೆ ಯಾವ ವ್ಯವಸ್ಥಿತ ಮಾರ್ಗವೂ ಇರಲಿಲ್ಲ. ಹಾಗಾಗಿ ಪುರಾತನ ಇತಿಹಾಸಕಾರರಾದ ಲೀವಿ ಮತ್ತು ಟಾಸಿಟಸ್‌ರು ಪ್ರವಾಹ, ಸಾಂಕ್ರಾಮಿಕ ರೋಗ ಹಬ್ಬುವಿಕೆಯನ್ನು ಯುದ್ಧ ಸೈನ್ಯ ದಾಳಿಗಳೊಡನೆ ಸೇರಿಸಿದ್ದರು. ಈ ಅವೈಜ್ಞಾನಿಕ ವಿಂಗಡನೆಯನ್ನು ವಿರೋಧಿಸಿ 19ನೇ ಶತಮಾನದಲ್ಲಿ ಇತರ ಶಾಸ್ತ್ರಗಳಾದ ಭಾಷೆ, ಸಾಹಿತ್ಯ, ಕಲೆ, ನ್ಯಾಯಶಾಸ್ತ್ರ, ರಾಜಕೀಯ, ಆರ್ಥಿಕ ಮತಧರ್ಮಗಳು ಉಂಟಾದಂತೆ ಇತಿಹಾಸವೂ ಅನುಸರಿಸಿತು. ಒಂದೇ ವಿಧವಾದ ಜಾತಿಗೆ (ಸ್ಪೀಷೀಸ್) ಸೇರಿದ ವಿಷಯಗಳನ್ನು ಒಂದೇ ವರ್ಗದ ಅಡಿಯಲ್ಲಿ ತರುವುದಾಗಿದ್ದಿತು. ಅದರ ಒಂದು ಮಾದರಿಯನ್ನು ಇಲ್ಲಿ ಕಾಣಿಸಲಾಗಿದೆ.

1) ವಸ್ತುಗಳ ಸ್ಥಿತಿ: ಇದರಲ್ಲಿ ಮನುಷ್ಯ ವಿಜ್ಞನ (ಆನ್‌ಥ್ರೋಪಾಲಜಿ), ಪ್ರಜಾಸಂಖ್ಯಾಶಾಸ್ತ್ರ (ಡೆಮೋಗ್ರಫಿ), ಸಮುದಾಯ (ನಂಬರ್) ಲಿಂಗ (ಸೆಕ್ಸ್) ವಯಸ್ಸು, ಹುಟ್ಟು, ಸಾವು, ರೋಗಗಳು ಮತ್ತು ಪರಿಸರ (ಎನ್‌ವಿರಾನ್‌ಮೆಂಟ್) ಮತ್ತು ಇತರ ಸಜಾತೀಯ ವಿಷಯಗಳು.

2) ಬೌದ್ಧಿಕ ಚಟುವಟಿಕೆಗಳು: ಭಾಷೆಗಳು, ಕಲೆ, ವಿಜ್ಞಾನ, ಸಂಗೀತ, ತತ್ವ ಮತ್ತು ಧರ್ಮ, ನೀತಿ ಇತ್ಯಾದಿ.

3) ಸಮಾಜ ಸಂಸ್ಥೆಗಳು: ಕುಟುಂಬ, ಸಂಪ್ರದಾಯಗಳು, ನಡವಳಿಕೆ, ಸಮಾಜಧರ್ಮಗಳು, ಅಮೋದಗಳು, ಹಬ್ಬ, ಉತ್ಸವಗಳು, ಕಾಲ ಕಳೆಯುವ ಕಾರ್ಯಗಳು, ಆಹಾರ, ಬಟ್ಟೆ, ವಸತಿ, ಗ್ರಹೋಪಕರಣಗಳು, ಆಂತರಿಕ ಜೀವನ.

4) ಆರ್ಥಿಕ ಸ್ಥಿತಿಗಳು: ಉತ್ಪಾದನೆ, ವಸ್ತು ಉಪಯೋಗ, ಹಂಚಿಕೆ, ಸಂಚಾರ ವ್ಯವಸ್ಥೆ, ವಾಣಿಜ್ಯ, ಹಣಕಾಸು ವ್ಯವಹಾರ, ಉದ್ಯೋಗ, ಕಂದಾಯ ಉತ್ಪನ್ನಗಳ ಮೂಲ ವೆಚ್ಚ ಇತ್ಯಾದಿ.

5) ಸಾರ್ವಜನಿಕ ಸಂಸ್ಥೆಗಳು: ರಾಜಕೀಯ ಸಂಸ್ಥೆಗಳು, ಆಡಳಿತ ವ್ಯವಸ್ಥೆ, ರಾಜ್ಯಾಂಗ ವಿಚಾರಗಳು, ಶಾಸನ ಸಂಬಂಧ ಸುಧಾರಣೆಗಳು, ರಾಜಕೀಯ ಇತ್ಯರ್ಥಗಳು, ಅವುಗಳ ಪ್ರಭಾವ, ಮತದಾನ ಪದ್ಧತಿ, ರಾಜದೂತ

ವ್ಯವಹಾರ, ಯುದ್ಧ, ಶಾಂತಿ, ಅಂತರರಾಷ್ಟ್ರೀಯ ಸಮಸ್ಯೆಗಳು, ಇತ್ಯಾದಿ.

ಇವುಗಳು ಪೂರ್ಣವೆಂದು ಹೇಳಲಾಗುವುದಿಲ್ಲ. ಇತಿಹಾಸದ ಇವುಗಳನ್ನು ಸುವ್ಯವಸ್ಥಿತವಾಗಿ ಅಭ್ಯಾಸ ಮಾಡಿ ಮೂಲ ವಿಷಯಗಳೊಡನೆ ಸಂಯೋಜಿಸಬೇಕು. ವಿಷಯಗಳನ್ನು ಕಾಲಾನುಕ್ರಮವಾಗಿ ಅಥವಾ ಪರದೇಶ ವಿಂಗಡನೆಯ ಪದ್ಧತಿಯಂತೆಯೂ ಉಪವಿಭಾಗಗಳಾದ ಕಾಲ, ದೇಶ ಮತ್ತು ರಾಷ್ಟ್ರಗಳ ಸಂಬಂಧ ಉಪವಿಂಗಡನೆ ಮಾಡಬಹುದು. ಇವುಗಳನ್ನು ತರ್ಕಬದ್ಧವಾಗಿ, ನಾನು ವಿಷಯಗಳ ವಿಂಗಡನೆಯಾಗಿ ಪರಿಗಣಿಸಬಹುದು. ಯಾವುದೇ ಒಂದು ಮಾರ್ಗವನ್ನು ಕಡ್ಡಾಯ ಮಾಡಲು ಸಾಧ್ಯವಿಲ್ಲ. ಅವುಗಳು ರಚನಾಕಾರನ ಒಲವು, ಓದುಗಾರರ ರುಚಿಯನ್ನನುಸರಿಸಿ ಭಿನ್ನವಾಗಿರುತ್ತವೆ.

ಕೆಲವು ಸಂದರ್ಭಗಳಲ್ಲಿ ಮುಖ್ಯವಾಗಿ ವ್ಯಕ್ತಿಗಳ ಚಟುವಟಿಕೆಗೆ ಸಂಬಂಧಪಟ್ಟಂತೆ ವಿಷಯಗಳನ್ನು ಸಂಯೋಜಿಸಲು ಕಷ್ಟವಾಗುತ್ತದೆ. ಕೆಲವು ವಿಷಯಗಳು ವ್ಯಕ್ತಿಗಳು ತಾತ್ಕಾಲಿಕ ಪ್ರಾಮುಖ್ಯತೆ ವಹಿಸಿದ್ದರೆ ಕೆಲವು ವಿಷಯಗಳು ಕೆಲವು ವ್ಯಕ್ತಿಗಳ ಕೆಲಸ ದೀರ್ಘಕಾಲದ ಸಾಮುದಾಯಿಕ ಪ್ರಭಾವ ಉಳ್ಳವಾಗಿರುತ್ತವೆ. ಜರ್ಮನಿಯ ಇತಿಹಾಸಕಾರರಲ್ಲಿ ಒಂದು ಪಂಗಡ ನಾಗರೀಕತೆಯ ಬೆಂಬಲಿಗರಾಗಿದ್ದಾರೆ. ಮತ್ತೊಂದು ಗುಂಪು ಸಂಪ್ರದಾಯಗಳನ್ನು ಬೆಂಬಲಿಸುತ್ತದೆ. ಫ್ರಾನ್ಸ್‌ನಲ್ಲಿ ಒಂದು ಕಡೆ ಸಂಸ್ಥೆಗಳ ಇತಿಹಾಸ ನಡವಳಿಕೆ ಭಾವನೆಗಳು ಮುಂದಾಗಿದ್ದರೆ ಕೆಲವರಿಗೆ ಇತಿಹಾಸದ ಕಾಳಗಗಳ ವಿಷಯವೇ ಹೆಚ್ಚು ಗ್ರಾಹ್ಯವಾಗಿದೆ. ನ್ಯಾಯವಾಗಿ ಅಂಥ ಭಿನ್ನಾಭಿಪ್ರಾಯಗಳಿಗೆ ಯಾವ ಅವಶ್ಯಕತೆಯೂ ಇಲ್ಲ. ಇತಿಹಾಸದಲ್ಲಿ ಸಾಮಾನ್ಯ ವಿಷಯಗಳು, ಸಾಹಸ ಕಾರ್ಯಗಳ ವಿವರಗಳೂ ಮಿಶ್ರವಾಗಿ ಇದ್ದೇ ಇರುತ್ತದೆ. ಇದರಿಂದಾಗಿಯೇ ಇತಿಹಾಸವು ಕಲೆಯೇ ವಿಜ್ಞಾನವೇ ಎಂಬ ಜಿಜ್ಞಾಸೆ ಉಂಟಾಗಿದ್ದರೂ ಅದು ಎರಡು ವಿಷಯಗಳ ನಿಯಮಗಳನ್ನು ಅನುಸರಿಸುತ್ತದೆ ಎಂಬ ಸಮಾಧಾನವಿದೆ.

ಉದಾಹರಣೆಗೆ ಒಂದು ಗುಂಪಿನ ನಡವಳಿಕೆಯನ್ನು ತೀರ್ಮಾನ ಮಾಡಬೇಕಾದ ಪ್ರಸಂಗ ಬಂದಿತೆನ್ನೋಣ. ಆಗ ಮೊದಲಲ್ಲೇ ನಾವು ಪ್ರತಿ ಸಮುದಾಯವು ಜೀವಶಾಸ್ತ್ರದ ವಿಂಗಡನೆಯಂತೆ ಒಂದೇ ಭಾಷೆ, ಒಂದೇ ಸಂಪ್ರದಾಯ ನಡವಳಿಕೆ ಹೊಂದಿವೆ ಎಂದು ತಿಳಿದು ಮುಂದುವರಿಯುತ್ತೇವೆ. ಆದರೆ ಆಳವಾದ ಅಭ್ಯಾಸ ಮಾಡತೊಡಗಿದಾಗ ಇದರ ವಿಸ್ತಾರ, ತೊಡಕುಗಳು ಕಂಡುಬರುತ್ತವೆ. ಇಂಗ್ಲೀಷ್ ಜನಾಂಗವೆಂದರೆ ಅದರಲ್ಲಿ ಇಂಗ್ಲೆಂಡಿನ ಸ್ಕಾಟ್‌ಲೆಂಡ್‌ನ ವೇಲ್ಸ್ ನು ಐರ್‌ಲೆಂಡಿನ ಸ್ವಲ್ಪ ಜನ ಹೇಗೆ ಒಳಗುಂಪುಗಳಾಗಿರುತ್ತವೆ. ಭಾರತೀಯರೆಂದರೆ ಅದರಲ್ಲಿ ನಾನಾ ಭಾಷೆಯ, ನಾನಾ ಪ್ರದೇಶದ, ನಾನಾ ಮತಧರ್ಮಗಳ, ಒಳಜಾತಿಗಳ, ನಾನಾ ವರ್ಣಸಂಕರದ (ರೇಸಸರ್–ಇಂಡೋ ಆರ್ಯನ್, ಮಂಗೋಲಾಯ್ಡ್ ಇಂಡೊ ಟರ್ಕಿಷ್) ಜನಗಳಿದ್ದಾರೆ. ಕೆನಡಾ ರಾಷ್ಟ್ರೀಯನು ಫ್ರೆಂಚ್ ಭಾಷೆಯ ಫ್ರಾನ್ಸ್ ಸಂಪ್ರದಾಯಗಳ ಪಂಗಡದವನಾಗಿದ್ದರೂ ಬ್ರಿಟಿಷ್ ಚಕ್ರಾಧಿಪತ್ಯ ಸಮುದಾಯಕ್ಕೆ ಸೇರಿದವನಾಗಿರುತ್ತಾನೆ. ಹೀಗೆ ಒಂದು ಮತ್ತೊಂದರ ಗುಣಗಳನ್ನು ಹೊಂದಿಕೊಂಡಿರುತ್ತದೆ. ಇಂಥವು ವಿಶ್ಲೇಷಣೆಯೂ ಹೌದು ಸಂಯೋಜನೆಯೂ ಹೌದು ಎನಿಸುತ್ತವೆ. ಕನ್ನಡನಾಡಿನ ಪ್ರದೇಶದಲ್ಲಿ ಎಷ್ಟು ಉಪಭಾಷೆಯ, ನಾನಾ ರೀತಿಯ ಉಚ್ಚಾರವುಳ್ಳ ಜನರಿಲ್ಲ, ಇವು ಏಕೆ, ಹೇಗೆ, ಯಾವಾಗ ಉಂಟಾದುವು ಎಂಬ ಪ್ರಶ್ನೆಗಳನ್ನೇಳಿಸಿ

ಕುತೂಹಲಪಡಿಸುತ್ತವೆ. ಇದಲ್ಲದೆ ಒಂದು ಸಮುದಾಯ ಎಲ್ಲ ಜನರೂ, ಎಲ್ಲ ಸಂದರ್ಭಗಳಲ್ಲೂ ಏಕ ರೀತಿಯ ಭಾವನೆ, ಏಕ ರೀತಿ ಚಟುವಟಿಕೆಗಳನ್ನು ಹೊಂದಿರುವುದಿಲ್ಲ. ಆದರೂ ಒಬ್ಬರ ಚಟುವಟಿಕೆ ಮತ್ತೊಬ್ಬರನ್ನು ಪ್ರಭಾವಗೊಳಿಸುತ್ತದೆ. ಇವೆಲ್ಲ ಹೇಗೆ ಹುಟ್ಟಿಕೊಂಡವು ಎಂಬುದೇ ಪ್ರಶ್ನೆ. ಇದರ ಹುಟ್ಟಿನಲ್ಲಿ ಕಾಲ, ಪ್ರದೇಶ, ಇದರ ನಾನಾ ಹಂತಗಳು ಮತ್ತು ಇದನ್ನು ಪತ್ತೆ ಮಾಡಲು ಮಾಡಿದ ಪ್ರಯತ್ನಗಳಾವುವು ಎಂಬುದನ್ನು ನಾವು ಅಭ್ಯಸಿಸಬೇಕು.

ಇತಿಹಾಸಕಾರನು ದತ್ತಾಂಶಗಳನ್ನು ಸಂಕೀರ್ಣವಾಗಿ ಆಸಕ್ತಿಯನ್ನು ಹುಟ್ಟಿಸುವಂತೆ, ಒಂದನ್ನೊಂದು ಸಕಾರಣವಾಗಿ ಹಿಂಬಾಲಿಸುವಂತೆ ಜೋಡಿಸಬೇಕು. ಇದರಲ್ಲಿ ಇದು ದೊಡ್ಡ ವಿಷಯ (ಮಹತ್ತರ), ಇದು ಅಲ್ಪ ಎಂಬ ವಿಂಗಡನೆಗೆ ಹೋಗಬಾರದು ಪ್ರತಿಯೊಂದು ಘಟನೆಯೂ ಒಂದು ಬೀಜದಂತೆ ನಿಗೂಢವಾಗಿದ್ದು ಸಂದರ್ಭ ದೊರೆತಾಗ ಬೆಳೆದು ಮಹತ್ತರವಾಗುತ್ತದೆ. ಎಂಟನೆ ಹೆನ್ರಿಯು ತನ್ನ ಮೂರನೆ ಮದುವೆಗೆ ಆನಿಬೋನಳನ್ನು ಚುನಾಯಿಸಿದ್ದು ಒಂದು ಮಾಮೂಲು ವಿಷಯವಾಗಿತ್ತಾದರೂ ಅದರಿಂದ ಇಂಗ್ಲೆಂಡಿನ ಇತಿಹಾಸದಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಯಿತು. ಇಂಗ್ಲೆಂಡಿನಲ್ಲಿ ಮತ ಸುಧಾರಣಾ ಕ್ರಮದಿಂದ ಪ್ರಾಟಿಸ್ಟೆಂಟ್ ಮತ್ತು ಪ್ರಾಬಲ್ಯಕ್ಕೆ ಬರಲು ಕಾರಣವಾಯಿತು. ಗಾಂಧೀಜಿಯವರು ದಂಡಿಯಲ್ಲಿ ಸರ್ಕಾರದ ಆಜ್ಞೆ ವಿರೋಧಿಸಿ ಉಪ್ಪಿನ ಸತ್ಯಾಗ್ರಹ ನಡೆಸಿದ್ದು ಭಾರತದ ಇತಿಹಾಸವನ್ನು ಬದಲಾಯಿಸುವ ದೊಡ್ಡ ಘಟನೆಯಾಯಿತು. ಹೀಗೆ ಯೂರೋಪಿನ ಕಲಾಮಾದರಿಯಲ್ಲಿ ರ್‍ಯಾಫೇಲ್ ಮೈಕಲ್ ಎಂಜಿಲೋಗಳ ಸ್ವಪ್ರಯತ್ನ, ಮತ್ತು ತಂದ ಬದಲಾವಣೆಯಿಂದ ಕಲಾ ಪರಂಪರೆಯಲ್ಲಿ ಭಾರಿ ಬದಲಾವಣೆಗಳಾದವು. ಅಕ್ಬರ್, ಬಾಬರ್, ಮಾರ್ಟಿನ್ ಲೂಥರ್, ನಾನಕ್, ಶಿವಾಜಿ, ನಿಪೋಲಿಯನ್, ಚರ್ಚಿಲ್ಲರ ಆಡಳಿತ ಪದ್ಧತಿಗಳು, ಸೇನಾ ಚಾತುರ್ಯ, ದಿಟ್ಟತನಗಳು ಮನುಷ್ಯ ಸಮುದಾಯದಲ್ಲಿ ಮುಖ್ಯ ಘಟನೆಗಳನ್ನು ತಂದವು. ಹೀಗೆ ಸಂಯೋಜನಾ ಕಾರ್ಯದಲ್ಲಿ ಬಹಳ ಚುರುಕಾದ ಮತ್ತು ಬುದ್ಧಿವಂತಿಕೆಯಿಂದ ತಿಳಿದ ವಿಷಯಗಳನ್ನು ಸೇರಿಸಿಕೊಳ್ಳಬೇಕಾಗುತ್ತದೆ. ತಿಳಿದ ವಿಷಯಗಳ ಪರಸ್ಪರ ಸಂಬಂಧವನ್ನು ಅವಲೋಕಿಸಬೇಕಾಗುತ್ತದೆ. ಈ ಕ್ರಮದಲ್ಲಿ 'ನಿಂತು ಹೊರಡಿ' ಎಂಬ ಘೋಷಣೆ ಬಹಳ ಸಹಾಯಕವಾಗುತ್ತದೆ. ಇದರಿಂದ ಪ್ರತಿ ಹಂತದಲ್ಲೂ 'ಘಟ್ಟಿತನ' ಬರುತ್ತದೆ. ಇತಿಹಾಸದ ಬೆಳವಣಿಗೆ 'ಒಂದು ತಾಳಬದ್ಧವಾದ ನಡವಳಿಕೆ' ಎಂಬ ಉಕ್ತಿಯಿದೆ. ಇತಿಹಾಸಕಾರನು ಈ ತಾಳಬದ್ಧತೆ ಎಲ್ಲಿ ಹೇಗೆ ಆಯಿತೆಂದು ಪತ್ತೆ ಮಾಡಬೇಕು. ಇದನ್ನು ಸಂಯೋಜನಾತ್ಮಕವಾಗಿರಬೇಕು. ಹೀಗೆ ದಾಖಲೆಗಳಲ್ಲಿಯೇ ಇವುಗಳ ಮೂಲವನ್ನು ಪತ್ತೆಹಚ್ಚಿ ಅದರ ಸತ್ಯ ಅಥವಾ ಭದ್ರತೆಯನ್ನು ತೀರ್ಮಾನಿಸಿ ಅದನ್ನು ಯೋಗ್ಯ ಸ್ಥಳದಲ್ಲಿ ಸ್ಥಾಪಿಸಬೇಕು. ಆದರೆ ಇವೆಲ್ಲವೂ ಮನಸ್ಸಿನ ಕ್ರಿಯೆಗಳು ಆದರೆ ಸುಸಂಗತಿಗಳ ಬುದ್ಧಿವಂತ ಜೋಡಣೆ ಇದಾಗಿದೆ.

ಹೀಗೆ ಇತಿಹಾಸಿಕ ನಿಬಂಧನೆಯ ತಯಾರಿಕೆಯಲ್ಲಿ ಕ್ರಮಬದ್ಧವಾಗಿ ಮುಂದುವರೆಯಲು, ಸರಿಯಾದ ವಿಷಯ ಚುನಾಯಿಸುವುದು. ಈಗ ದೊರಕಿರುವ ವಿಷಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಮುಂದೆ ನಡೆಯಬೇಕಾದ ವಿಷಯದ ಬಗ್ಗೆ ಯೋಚಿಸಿ, ರೂಪುರೇಷೆಗಳನ್ನು ತಯಾರಿಸಿ, ನಡೆದ ಕಾಲದ ಘಟನೆಗಳನ್ನು ಆ ಕಾಲದ ರಚನೆಗಳಿಂದ ತಿಳಿದು, ಕಣ್ಣಾರೆ ಕಂಡವರ ದಾಖಲೆಗಳನ್ನು ಓದಿ, ಅಲ್ಲಲ್ಲಿ ಬರುವ 'ಖೋಟಾ' ವಿಷಯಗಳನ್ನು ತೆಗೆದುಹಾಕಿ, ಅಸತ್ಯಗಳನ್ನು ತ್ಯಜಿಸಿ, ತನ್ನ ನಿಬಂಧನೆಯನ್ನು ರೂಪಿಸಬೇಕು.

ಇದನ್ನು ಆಂತರಿಕ ಮತ್ತು ಬಾಹ್ಯ ವಿಮರ್ಶೆಗೆ ಗುರಿಪಡಿಸಿ ಸತ್ಯ ಸ್ಥಾಪಿಸಬೇಕು. ಹೀಗೆ ಸಂಯೋಜನೆಯ ಕಾರ್ಯ ಮುಗಿಯುತ್ತದೆ. ಇದು ಸತ್ಯಾನ್ವೇಷಣೆಯ ಪ್ರಥಮ ಘಟ್ಟ ಇದಾದ ನಂತರವೇ ಇದರ ಮತ್ತೆರಡು ಮುಖಗಳಾದ ರಚನಾತ್ಮಕ ವಿಚಾರಶೀಲತೆ ಮತ್ತು ಸಮಂಜಸ ಸಾಮಾನ್ಯೀಕರಣದ ಕಾರ್ಯರಂಭವಾಗುತ್ತವೆ. ಹೀಗೆ ಸಂಯೋಜನಾ ಕಾರ್ಯವೇ ಇತರ ಕಾರ್ಯಗಳ ಬುನಾದಿಯಾಗಿದೆ.

## 6.2.2 ರಚನಾತ್ಮಕ ಸಮರ್ಥನೆ

ರಚನಾತ್ಮಕ ವಿಚಾರಶೀಲತೆಯು ಸಂಯೋಜನಾ ಕಾರ್ಯದ ಒಂದು ಮುಖ್ಯ ಭಾಗವಾಗಿದೆ. ಸಂಶೋಧನಾ ಕಾರ್ಯದಲ್ಲಿ ಬಿಟ್ಟು ಹೋಗಿರುವ ಖಾಲಿ ಜಾಗಗಳನ್ನು ಭರ್ತಿ ಮಾಡುವುದೇ ಇದರ ಮುಖ್ಯ ಉದ್ದೇಶವಾಗಿದೆ. ಇತಿಹಾಸ ಸಂಶೋಧನೆಯಲ್ಲಿ ನಾನಾ ಮೂಲಗಳಿಂದ ವಿಷಯ ಸಂಗ್ರಹವಾಗುತ್ತಿರುವಾಗ ಅವುಗಳಲ್ಲಿ ಕೆಲವೆಡೆ ಅಪೂರ್ಣತೆ ಉಂಟಾದಾಗ ಇಂಥ ಕೊರತೆಗಳಾಗುವುದು ತೀರ ಸಹಜವಾಗಿದೆ. ಇತಿಹಾಸದಲ್ಲಿ ಎಷ್ಟೊ ಘಟನೆಗಳ ಕಾರಣಗಳು ರಹಸ್ಯವಾಗುಳಿಯುತ್ತವೆ. ನಮ್ಮ ಎದುರಿಗೆ ನಡೆದ ಘಟನೆಗಳ ವಿಚಾರದಲ್ಲಿ ಇಂಥ ಅಪೂರ್ಣತೆ ಇರುವಾಗ ಹಿಂದಿನ ಎಷ್ಟೋ ನೂರಾರು, ಸಾವಿರಾರು ವರ್ಷಗಳ ಹಿಂದೆ ನಡೆದ ಘಟನೆಗಳ ಬಗ್ಗೆ ಇಂಥ ನ್ಯೂನತೆಗಳಿರುವುದು ವಾಸ್ತವ, ವಿಜ್ಞಾನದಲ್ಲಿ ಈ ರೀತಿಯಾದಿಲ್ಲ ಪುನಃ ಪ್ರಯೋಗ ಮಾಡಿ ಸಮಸ್ಯೆಯ ಪರಿಹಾರ ಮಾಡಿಕೊಳ್ಳಬಹುದಾಗಿದೆ. ಇತಿಹಾಸದಲ್ಲಿ ಇದು ಸಾಧ್ಯವಿಲ್ಲವಾದ್ದರಿಂದ ಅದಕ್ಕೆ ಉಳಿದಿರುವ ಮಾರ್ಗವೆಂದರೆ ರಚನಾತ್ಮಕ ವಿಚಾರಶೀಲತೆ.

ಈ ರಚನಾತ್ಮಕ ವಿಚಾರಶೀಲತೆಯ ವ್ಯವಧಾನದಲ್ಲಿ, ಬೇರೆಲ್ಲ ಮಾರ್ಗಗಳಿಂದ ವಿಷಯದ ಬಗೆ ಹರಿಯದಿದ್ದಾಗ ತರ್ಕಶಾಸ್ತ್ರ ಒಪ್ಪಲ್ಪಟ್ಟಿರುವ ಕಾರಣ ಪೂರ್ವ ಊಹೆ ಮಾಡಬೇಕಾಗಿದೆ. ತಿಳಿದುಬಂದಿರುವ ಎಲ್ಲ ವಿಷಯಗಳನ್ನು ದಾಖಲೆಗಳ ಮೂಲಕ ಸಂಗ್ರಹಿಸಿ ನಂತರ ಸರಿಯಾದ ತೀರ್ಮಾನಕ್ಕೆ ಬಂದು, ಕೊನೆಯದಾಗಿ ಹೊಸ ವಿಷಯಗಳ ಕಡೆ ಗಮನವಿಡುತ್ತಾನೆ. ಈ ಹಂತದಲ್ಲಿ ತರ್ಕದ ಊಹಾ ಪದ್ಧತಿಗಳನ್ನು ಉಪಯೋಗಿಸುತ್ತಾನೆ. ಊಹೆಯ ಸರಿಯಾಗಿ ನಡೆದಿದ್ದಲ್ಲಿ ತೀರ್ಮಾನಗಳೂ ಸರಿಯಾಗಿರುತ್ತವೆ. ಕಾರಣಪೂರ್ವ ಊಹೆಗಳ ಪರಿಣಾಮವಾಗಿ ತರ್ಕದಲ್ಲಿ ಬರುವ "ಮತ್ತೊಂದನ್ನು ಅನುಮಾನಿಸುವುದಕ್ಕೆ ಹಿಂದಿನ ಆಧಾರ ವಚನ" (ಪ್ರಿಮೈಸೆಸ್) ಗಳನ್ನು ಅವಲಂಬಿಸಬೇಕಾಗುತ್ತದೆ. ಮೊದಲ ಆಧಾರವನ್ನು ಸರ್ವಸಮ್ಮತ ಸರ್ವಕಾಲಿಕವಾದ ವಿಷಯಗಳನ್ನೊಳಗೊಂಡಿರು-ವಂತೆ ಎರಡನೆಯದನ್ನು ಈ ಕೊರತೆಯ ಸಂದರ್ಭಕ್ಕೆ ಆದಷ್ಟು ಸಹಾಯಕವಾಗುವಂತೆ ಊಹೆಗಳನ್ನು ಮಾಡಿಕೊಳ್ಳಬೇಕು. ಈ ತರ್ಕಬದ್ಧ ಊಹೆಗಳಲ್ಲಿ ಯಾವುದೇ ದಾಖಲೆ ರಹಿತವಾಗಿರುವುದರಿಂದ ಅವುಗಳನ್ನು ಆದಷ್ಟು ಮಟ್ಟಿಗೆ ಮನುಷ್ಯ ಸ್ವಭಾವದ ಚೌಕಟ್ಟಿನಲ್ಲಿರುವಂತೆ ಸೂಚಿಸಬೇಕು. ಮುಂದಾಗುವ ತಪ್ಪುಗಳನ್ನು ತಪ್ಪಿಸಲು ಕೆಲವು ಮುಂಜಾಗ್ರತಾ ಕ್ರಮಗಳಣ್ನು ಅನುಸರಿಸಬೇಕು.

(1) ಇವುಗಳಲ್ಲಿ ವಿಶ್ಲೇಷಣೆಯ (ಅನಾಲಿಸಸ್) ನಿಯಮಗಳಾದ ವಿಮರ್ಶೆ, ಪರೀಕ್ಷೆ, ಉದಾಹರಣೆ, ದೃಗೋಚರದಿಂದ ಮಾಡುವ ತೀರ್ಮಾನಗಳು ಮುಂತಾದ ಮಾರ್ಗಗಳನ್ನು ಬಿಟ್ಟು ಯೋಜನಾಬದ್ಧವಾದ

ವಿಚಾರಲಹರಿ, ತರ್ಕ, ಇತರ ವಿಷಯಗಳಿಂದ ಎರವಲು ಪಡೆಯುವುದು. ಮುಂತಾದ ಮಾರ್ಗಗಳನ್ನು ಅನುಸರಿಸಬೇಕು. (2) ರಚನಾಕಾರನು ಹೇಳದಿರುವುದನ್ನು ಸೇರಿಸಬಾರದು, ಅಥವಾ ದಾಖಲೆಗಳಿಂದ ಊಹಿಸಬೇಕೆ ಹೊರತು ಆದ್ದರಿಂದ ಬಾಹ್ಯವಾದ ವಿಚಾರಗಳನ್ನು ಸೇರಿಸಬಾರದು ಅಥವಾ ಹೇಳಿರುವ ವಿಷಯವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ತಿರುಚಬಾರದು ಅಥವಾ ಪಠ್ಯದ ವಿಷಯದಲ್ಲಿನ ಕೊರತೆಗಳನ್ನು ವಿಸ್ತರಿಸಬಾರದು. (3) ದಾಖಲೆಗಳ ನೆರವಾದ ಪರೀಕ್ಷೆಗಳಿಂದ ದೊರಕುವ ವಿಷಯಗಳನ್ನು ವಿಚಾರ ಸೇರಿಸಬೇಕಾಗಿ ಬಂದಾಗ ಅದು ಹೇಗೆ ಸೇರ್ಪಡೆಯಾಯಿತೆಂದು ತಿಳಿಸಬೇಕು. (4) ಯೋಚಿಸಲಸಾಧ್ಯವಾದ ತೀರ್ಮಾನಗಳನ್ನು ಮಾಡಬಾರದು. (5) ಅನುಮಾನಗಳಿದ್ದಾಗ ತೀರ್ಮಾನಗಳನ್ನೂ ಬಿಡಬೇಕು. (6) ಊಹೆಗಳಿಂದಲೇ ದಾಖಲೆಯ ತುಂಬಿದ್ದರೆ ರಚನಾತ್ಮಕ ವಿಚಾರಶೀಲತೆಯ ಮಾರ್ಗವನ್ನು ಉಪಯೋಗಿಸಲೇಬಾರದು. ಅನುಮಾನಗಳಿದ್ದ ಕಡೆ ತಮ್ಮ ಅಭಿಪ್ರಾಯಗಳನ್ನು ನಿರ್ಧಾರದಲ್ಲಿ ತುರುಕಬಾರದು.

ವಿಚಾರಶೀಲತೆಯಲ್ಲೇ ಎರಡು ಮಾರ್ಗಗಳಿವೆ. ಮೊದಲನೆಯದು ನಕಾರಾತ್ಮಕ ವಿವೇಚನೆ (ನೆಗೇಟಿವ್ ರೀಸನಿಂಗ್) ಎರಡನೆಯದು ವಾಸ್ತವಾಂಶ ವಿವೇಚನೆ (ಪಾಸಿಟಿವ್ ರೀಸನಿಂಗ್) ನಕಾರಾತ್ಮಕ ವಿವೇಚನೆಯನ್ನು "ಮೌನದಿಂದ ತರ್ಕ" (ಆರ್ಗ್ಯೂಮೆಂಟ್ ಫ್ರಮ್ ಸೈಲೆನ್ಸ್) ಎಂದೂ ಕರೆಯಲಾಗುತ್ತದೆ. ದಾಖಲೆಯಲ್ಲಿಲ್ಲದ ಯಾವುದೋ ಒಂದು ವಿಷಯದ ಬಗ್ಗೆ ನಾವು ತರ್ಕಬದ್ಧವಾಗಿ ಊಹೆ ಮಾಡುತ್ತೇವೆ. ಈ ಕಾರ್ಯ ಮನುಷ್ಯನ ಸ್ವಭಾವವನ್ನನುಸರಿಸುವುದಾಗಿದೆ. ಎಷ್ಟೋ ಜೀವನದ ಎಷ್ಟೋ ಸಂದರ್ಭಗಳಲ್ಲಿ ಮೌನವು ಸಮ್ಮತಿಯನ್ನು ಸೂಚಿಸುವಂತೆ ಇತಿಹಾಸದ ದಾಖಲೆಗಳಲ್ಲಿ ಹೇಳಿರದ ವಿಷಯಗಳು, ಘಟನೆಗಳೂ ಇದ್ದರಿಲಾರವು ಇದಕ್ಕೂ ಕಾರಣಗಳಿರುತ್ತವೆ. ಕಾಲದ ಹಾವಳಿ, ಧ್ವಂಸ ಪರಿಣಾಮವಾಗಿ ನಮಗೆ ದಾಖಲೆಗಳು ನಾಪತ್ತೆಯಾಗಿರಬಾರದು ಅಥವಾ ಗಮನಕ್ಕೆ ಬಾರದಿರಬಹುದು ಅಥವಾ ಅಜಾಗರೂಕತೆಯಿಂದಲೋ ಉದಾಸೀನತೆಯಿಂದಲೋ ದಾಖಲೆಗಾರನು ಬಿಟ್ಟಿರಲೂಬಹುದು. ಅಥವ ದಾಖಲೆಗಾರನು ಅದನ್ನು ಬಿಡಬೇಕೆಂಬ ಒತ್ತಾಯವೂ ಇರಬಹುದು. ಇದರಿಂದ ಸ್ಥೂಲವಾಗಿ ಹೇಳಬಹುದಾದರೆ ಪುರಾತನ ಅಥವಾ ಮಧ್ಯಕಾಲದ ಇತಿಹಾಸದಲ್ಲಿ ಈ ರಚನಾತ್ಮಕ ವಿಚಾರಶೀಲತೆ ಹೆಚ್ಚು ಪ್ರಯೋಜನವಾಗಲಾರದು ಮತ್ತು ಆಧುನಿಕ ಕಾಲದ ಇತಿಹಾಸದಲ್ಲಿ ಇದರಿಂದ ಸ್ವಲ್ಪ ಉಪಯೋಗವಾಗಬಹುದು. ಇತಿಹಾಸದ ಬಹುಪಾಲಿನ ವಿಷಯಗಳಾದ ಕಾಳಗಗಳು, ಯುದ್ಧಗಳು, ಸೈನ್ಯ ಕಾರ್ಯಾಚರಣೆ, ಕ್ರಾಂತಿ ಮತ್ತು ಸುಧಾರಣೆ ಮುಂತಾದ ದೀರ್ಘಕಾಲದ ಘಟನೆಯನ್ನು ಬಚ್ಚಿಡಲು ಸಾಧ್ಯವಿಲ್ಲ. ಇಂಥ ವಿಷಯಗಳಲ್ಲಿ ಬಿಟ್ಟುಹೋಗಿರಬಹುದಾದ ವಿಷಯಗಳನ್ನು ನಕಾರಾತ್ಮಕ ವಿಧಾನಗಳಿಂದ ಭರ್ತಿ ಮಾಡಲು ಸಾಧ್ಯತೆಗಳಿವೆ. ಆದರೆ ಸರ್ಕಾರದ ಕೆಲವು ರಹಸ್ಯ ದಾಖಲೆಗಳು, ಪತ್ರಗಳು, ಸೂಚನೆಗಳು ರಹಸ್ಯಗಳಾಗಿಯೇ ಇರುತ್ತವೆ. ಆದ್ದರಿಂದ ಅವುಗಳಿರಲಿಲ್ಲವೆಂದೇ ಸಾಧಿಸಲಾಗದ್ದು ಇನ್ನೂ ಕೆಲವು ಕಾರಣಗಳಿಗಾಗಿ ಅನಪೇಕ್ಷಿತವಾಗಿ ಕೆಲವು ದಾಖಲೆಗಳಿರುವುದಿಲ್ಲ. ಸರ್ಕಾರದ ಆದೇಶವೇ ಹಾಗಿರಬಹುದು ಮತ್ತು ರಕ್ಷಣಾ ವ್ಯವಸ್ಥೆ, ಪರದೇಶ ವ್ಯವಹಾರಗಳು ಸಾರ್ವಜನಿಕವಾಗುವುದಿಲ್ಲ. ಇದೇ ರೀತಿ ಸಾರ್ವಜನಿಕರು ಸರ್ಕಾರದ ಬಗ್ಗೆ ಮಾಡಿದ ಟೀಕೆಗಳು, ದೂರುಗಳು, ಸರ್ಕಾರದ ತಪ್ಪುಗಳು, ಕೊರತೆಗಳು, ಬೆಳಕು ಕಾಣುವುದಿಲ್ಲ. ಇಲ್ಲಿ ಇತಿಹಾಸಕಾರನು ಶ್ರಮ ವಹಿಸದೆ ಯೋಚಿಸದೇ ಇದ್ದು, ಆದೇಶದ ಆಡಳಿತವು ಉತ್ತಮ ಸ್ಥಿತಿಯಲ್ಲಿತ್ತೆಂದು ದಾಖಲಿಸಬಹುದು.

ಇಂಥ ತೀರ್ಮಾನಗಳಿಂದ ಇತಿಹಾಸದ ಸತ್ಯತೆಗೆ ಧಕ್ಕೆ ಬರುತ್ತದೆ. ರಚನಾತ್ಮಕ ವಿಚಾರಶೀಲತೆಯ ನಕಾರಾತ್ಮಕ ತರ್ಕ ಇಂದ ಸಂದರ್ಭಗಳಲ್ಲಿ ಉಪಯೋಗಕ್ಕೆ ಬರುತ್ತದೆ.

ವಾಸ್ತವಾಂಶ ವಿವೇಚನೆಯು ಎರಡನೇ ಮಾರ್ಗವಾಗಿದೆ. ಇದು ಹೆಚ್ಚು ಪ್ರಯೋಜನಕಾರಿಯಾಗಿ ಕಂಡುಬಂದಿದೆ. ಅನೇಕ ವಿಷಯಗಳು ದಾಖಲೆಯಿಂದ ತಿಳಿದುಬರುತ್ತದೆ. ಅದರಲ್ಲಿ ಕಂಡು ಬರೆದಿರುವ ಅನೇಕ ವಿಷಯಗಳನ್ನು ಊಹೆ ಮಾಡಬೇಕಾಗಿ ತಿಳಿಯಬೇಕಾಗಿದೆ. ಈ ಸಮದರ್ಭದಲ್ಲಿ ವಾಸ್ತವಾಂಶ ವಿವೇಚನೆ ಸಹಾಯಕ್ಕೆ ಬರುತ್ತದೆ. ಇತಿಹಾಸದ ಮೂಲಕ ನಿಯಮವನ್ನನುಸರಿಸಿ ಹೋಲಿಕೆ (ಸಾದೃಶ್ಯ)ಯು ಇಂದಿನ ಮತ್ತು ಹಿಂದಿನ ವಿಷಯಗಳನ್ನು ವಶದಪಡಿಸುತ್ತದೆ. ಉದಾಹರಣೆಗೆ ಹಿಂದಿನ ಒಂದು ಅಭಿವೃದ್ಧಿ ಹೊಂದಿದ ಸಮಾಜದಲ್ಲಿ ಅದರ ನಾನಾ ಮುಖ್ಯ ಕಾರ್ಯಕ್ರಮಗಳ ಪರಿಚಯ, ಆರ್ಥಿಕ, ಔದ್ಯೋಗಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ವಿಚಾರಗಳ ಬಗ್ಗೆ ಸಾಕಷ್ಟು ಪುರಾವೆಗಳಿದ್ದು, ಮತ ಧರ್ಮಾಚರಣೆ ಮತ್ತು ಸಹನೆಗಳ ಬಗ್ಗೆ ಏನೂ ತಿಳಿಯದಿದ್ದರೂ, ಅವು ಸಹ ಸುವ್ಯವಸ್ಥಿತವಾಗಿತ್ತೆಂದು ಊಹಿಸಬೇಕಾಗಿದೆ. ಏಕೆಂದರೆ ಅವು ಇಲ್ಲದೆ ಶಾಂತಿ ಅಭಿವೃದ್ಧಿಗಳು ಸಾಧ್ಯವಾಗಿರಲಾರವು. ಹೀಗೆ ಕಾರಣ ಪರಿಣಾಮಗಳು ಒಂದನ್ನೊಂದು ಹೊಂದಿಕೊಂಡಿರುತ್ತೆಯಾದ್ದರಿಂದ ಊಹೆಯು ತಪ್ಪಾಗಲಾರದು. ಒಂದು ವರ್ಗದ ಪರಿಚಯದಿಂದ ಮತ್ತೊಂದು ವರ್ಗದ ಪರಿಚಯವನ್ನು ವಾಸ್ತವಾಂಶ ವಿವೇಚನೆಯಿಂದ ಅರಿಯಬಹುದಾಗಿದೆ. ಇದರಲ್ಲೂ ಕೆಲವು ಎಚ್ಚರಿಕೆಗಲನ್ನು ಗಮನದಲ್ಲಿಟ್ಟಿರಬೇಕು. ಮೊದಲನೆಯದಾಗಿ ಎಲ್ಲವೂ ಮಾನವನ ಅನುಭವದ ಮಟ್ಟಕ್ಕೊಳಪಟ್ಟಿರಬೇಕು. ಒಂದು ನೈಜವಾದ ಒಪ್ಪಲಾದ, ದಾಖಲಾದ ವಿಷಯದಿಂದ ಮತ್ತೊಂದು ಅದೇ ರೀತಿಯ ವಿಷಯವನ್ನು ಸಕಾರಣವಾಗಿ ಊಹಿಸಬಹುದಾಗಿದೆ. ಆದರೆ ಮೂಲದ ವಿಷಯವೇ ಅಸಾಧುವಾಗಿ, ಅಸತ್ಯವಾಗಿದ್ದರೆ ಅದನ್ನು ಹೋಲಿಸಿ ಹೊರಗೆಡುವ ಊಹೆಯೂ ನಿಜವಾಗಿರುವುದಿಲ್ಲ. ಮೂಲವು ಮತ್ತು ಊಹೆ ಮಾಡಿರುವ ವಿಷಯವೂ ಯಾವುದಾದರೊಂದು ರೀತಿಯಲ್ಲಿ ಸಂಬಂಧಪಟ್ಟಿರಬೇಕು, ನಿಜಕ್ಕೆ ನಿಜ ಬೆಸೆಯಬಹುದೇ ಹೊರತು ಸುಳ್ಳು ಸೇರಲಾರದು. ಎರಡನೆಯದಾಗಿ ಯಾವುದಾದರೊಂದು ವಿಷಯದ ಮೇಲೆ ಸಂಪೂರ್ಣ ಮಾಹಿತಿ ಸಿಕ್ಕಿದ ನಂತರವೇ ಯಾವುದೊಂದು ಉದ್ದಿಶ್ಯ ವಿಷಯದ ಮೇಲೆ ವಾಸ್ತವಾಂಶ ವಿವೇಚನೆ ಆರಂಭಿಸಬೇಕು ಯಾವ ಒಂದು ವಿಷಯದ ಮೇಲೆ ಪೂರ್ಣ ವಿಷಯ ತಿಳಿಯದೆ, ಮುಂದಿನ ಊಹೆಗೆ ತೊಡಗಬಾರದು. ಉದಾಹರಣೆಗೆ ಜಾರ್ಜ್, ಟೌನ್, ವೆಲ್ಲಿಂಗ್‌ಟನ್ ಐರ್ಲೆಂಡ್ ಎಂಬ ಹೆಸರನ್ನು ಕೇಳಿದಾಕ್ಷಣ ಅವು ಇಂಗ್ಲೆಂಡಿನಲ್ಲೋ ಅಮೆರಿಕಾದಲ್ಲೋ ಇವೆ ಎಂಬ ಆತುರದ ನಿರ್ಣಯಕ್ಕೆ ಬರಬಾರದಷ್ಟೆ. ಇವು ಊಹೆಗಳಾಗಬಹುದಲ್ಲದೆ ಸತ್ಯಾಂಶಗಳಾಗಿರಲಾರವು. ಊಹೆಗಳು ಒಂದು ಕತ್ತಿಯ ಎರಡು ಹರಿತಬಾಯಿಗಳಿದ್ದಂತೆ ಇರುವುದರಿಂದ ಜಾಗರೂಕತೆಯಿಂದ ಉಪಯೋಗಿಸಬೇಕು. ಇತಿಹಾಸದ ಪುನರ್ರಚನೆಯಲ್ಲಿ ಅಲ್ಲಲ್ಲಿ ಬಿಟ್ಟು ಹೋಗಿರುವ ಘಟನೆ, ಸಂದರ್ಭಗಳನ್ನು ಯೋಗ್ಯವಾದ ಊಹೆಗಳಿಂದ ಭರ್ತಿಮಾಡಬಹುದಾಗಿದೆ. ಇದು ರಚನಾತ್ಮಕ ವಿಚಾರ ಶೀಲತೆಯಿಂದ ಸಾಧ್ಯ.

### 6.2.3 ಸಮಂಜಸ ಸಾಮಾನ್ಯೀಕರಣ

ಸಂಯೋಜನಾ ಕಾರ್ಯದಲ್ಲಿ ಮೂರನೆ ಮುಖ್ಯವಾದ ಚಟುವಟಿಕೆ ಎಂದರೆ ಸಮಂಜಸ ಸಾಮಾನ್ಯೀಕರಣ, ಇದನ್ನೇ ತರ್ಕಬದ್ಧ ಅಥವಾ ಸೂತ್ರವನ್ನು ನಿಯಗೊಳಿಸುವ ಕಾರ್ಯವೆನ್ನಬಹುದು. ಇದು

ಬಹಳ ತ್ರಾಸದಾಯಕವಾದರೂ ಬಹಳ ಮುಖ್ಯವಾದದ್ದಾಗಿದೆ. ಇದೇ ಸಂಶೋಧನಾ ಕಾರ್ಯದ ಮುಕುಟ. ಇತರ ಎಲ್ಲ ಕಾರ್ಯಗಳನ್ನೂ ಸಂಯೋಜಿಸಿ ಮುಖ್ಯ ಫಲಿತಾಂಶವನ್ನೊದಗಿಸುವುದಾಗಿದೆ. ಇದು ನಿಬಂಧ ಅಥವಾ ವಿಷಯ ಪ್ರತಿಪಾದನೆಯನ್ನು ಸಕಾರಣವಾಗಿ, ಖಂಡಿತವಾಗಿ ಒಂದು ಪ್ಯಾರಾದಲ್ಲಿ ಹೇಳುವುದಾಗಿದೆ. ಇದನ್ನೇ ಉಪಸಂಹಾರ, ಮುಕ್ತಾಯ, ಇಡೀ ಕಾರ್ಯದ ಸಾರ ಅಥವಾ ಪ್ರಶಂಸೆ ಎನ್ನಬಹುದು. ಇಂಥ ಸೂತ್ರಗಳಿಂದಲೇ ವಿಜ್ಞಾನವು ಇತಿಹಾಸದ ಸರಿಸಮಾನವಾಗಿ ಪ್ರತಿಷ್ಠಿತವಾಗಿ ನಿಲ್ಲಲು ಅವಕಾಶವಾಗಿದೆ.

ಇತಿಹಾಸವು ವಿಜ್ಞಾನದ ಪಂಕ್ತಿಯಲ್ಲಿರಲು ತನಗೆ ದೊರಕುವ ಎಲ್ಲ ಅಸಿದ್ಧ ಸಂಗತಿಗಳನ್ನು ಕೂಡಿಸಿ, ಪರಿಷ್ಕರಿಸಿ ಸಣ್ಣ ವಿಭಾಗಗಳಾಗಿ ವಿಂಗಡಿಸಿ ಸೂತ್ರಗಳಾಗಿ ಪರಿವರ್ತನೆಗಳಾಗಲು ಸಿದ್ಧಪಡಿಸಬೇಕು. ಹೀಗೆ ತಯಾರಾದ ವಿಷಯವು ಕಾರ್ಯಾಚರಣೆಗೆ ಸಿದ್ಧವಾಗುತ್ತದೆ. ಇದು ತತ್ವಗಳ ಸಾರದಂತೆ ಪರಿವರ್ತನೆಯಾಗುತ್ತದೆ. ತನಗೆ ದೊರಕಿರುವ ವಿಫುಲ ಸಾಮಗ್ರಿಗಳ ಆಂತರಿಕ ಸಂಬಂಧವನ್ನು ತಿಳಿಸಬೇಕು. ಇತರ ವಿಜ್ಞಾನಗಳಂತೆ ತನ್ನಲ್ಲಿ ಕಂಡುಬಂದ ಅಸಾಧಾರಣ ವಿಷಯಗಳನ್ನು ಒಂದು ಸೂತ್ರಕ್ಕೆ ಒಳಪಡಿಸಬೇಕು.

ಈ ಸೂತ್ರವು ಅತಿ ಸೂಕ್ಷ್ಮವೂ ಅತಿ ಸ್ಥೂಲವೂ ಆಗಿರದೆ, ಯಾವ ಅನಾವಶ್ಯಕವನ್ನೂ ಸೇರಿಸದೇ ಯಾವ ಮುಖ್ಯವಾದದ್ದನ್ನೂ ಬಿಡದೆ, ಯಾವ ಅನುಮಾನಗಳಿಗೂ ಒಳಪಡದೆ ಸ್ಪಷ್ಟವಾಗಿರಬೇಕು. ಇಂಥ ಸೂತ್ರವನ್ನು ಹೇಗೆ ಸಿದ್ಧಪಡಿಸಬೇಕೆಂಬುದು ಮುಂದಿನ ಸಮಸ್ಯೆಯಾಗಿದೆ. ಇತಿಹಾಸದಲ್ಲಿ ಇದನ್ನು ರೂಪಿಸಬೇಕಾದರೆ ಎಲ್ಲ ಸಾಧಾರಣ ವಿಷಯಗಳನ್ನು ಅಪರೂಪದ ವಿಷಯಗಳನ್ನು ಸಂಗ್ರಹಿಸಿ ಪುನರುಕ್ತಿಗಳನ್ನು ಅಸಂಭವಗಳನ್ನು ತೆಗೆದುಹಾಕಿ, ವ್ಯಕ್ತಿಗತವಾದ ವಿಷಯಗಳನ್ನು ಪರಿಷ್ಕರಿಸಿ ಅವುಗಳಲ್ಲಿ ಸಾಧಾರಣವಾದ, ನಿರ್ವಿವಾದ, ವಿಷಯಗಳನ್ನು ಮಾತ್ರ ಸೇರಿಸಬೇಕು. ಇದು ಯಾವ ಪ್ರದೇಶ, ಯಾವ ಕಾಲದಲ್ಲಿ, ಎಷ್ಟು ಕಾಲದಲ್ಲಿ ಆಯಿತೆಂದೂ, ಇವುಗಳಿಂದ ಸಮುದಾಯಕ್ಕೂ, ಸಂಘಗಳಿಗೂ ಹೇಗೆ ಉಪಯುಕ್ತವಾಯಿತೆಂದು ತಿಳಿಸಬೇಕು. ಉದಾಹರಣೆಗೆ ಯಾವುದೋ ಒಂದು ಅಭ್ಯಾಸ ಹೇಗೆ ಬೆಳೆಯಿತ್ತೆಂದು ಪರಿಚಯ ಮಾಡಿಕೊಳ್ಳಬೇಕಾಗಿದೆ. ಇದರಿಂದ ಸಾಧಾರಣವಾಗಿ ಅಭ್ಯಾಸಗಳು ಹೇಗೆ ಉದ್ಭವವಾಗುತ್ತವೆ ಎಂದು ತಿಳಿಯಬೇಕು. ಅಭ್ಯಾಸವು ಇದ್ದಕ್ಕಿದ್ದಂತೆ ಪ್ರಾರಂಭವಾಗಿ, ಸಾಧಾರಣವಾಗಿ ಎಲ್ಲರಲ್ಲೂ ಹರಡಿ ಅನುಕರಣದಿಂದ ಸಾಮಾನು ಉಪಯೋಗಕ್ಕೆ ಬರುತ್ತದೆ. ಇವು ಸಾಂಪ್ರದಾಯಿಕವಾಗಿ, ವಂಶಪಾರಂಪರ್ಯವಾಗಿಯೂ ಹರಡಿ ಖಾಯಂ ಆಗಿ ಸಮಾಜದಲ್ಲಿ ಸ್ಥಾನ ಪಡೆಯುತ್ತವೆ. (ಉದಾ: ಸತಿಪದ್ಧತಿ, ಬೀಡಿ, ಸಿಗರೇಟ್ ಸೇದುವುದು, ಹೆಂಡ, ಕಾಫಿ ಸೇವನೆ ಇತ್ಯಾದಿ ಅಥವಾ ರಾಜಪರಂಪರೆ, ಮಂತ್ರಿ ಪರಂಪರೆ ಇತ್ಯಾದಿ) ಇವುಗಳಲ್ಲಿ ಕೆಲವು ಸಮಾಜಕ್ಕೆ ಹಾನಿ ತರಬಹುದು. ಸರ್ಕಾರದ ಈ ಬಗೆಯ ನಿರೋಧ ಕಾನೂನುಗಳೂ ನಿರುಪಯೋಗವಾಗುತ್ತವೆ. ಇದರ ಬಗ್ಗೆ ಕೆಲವು ನಾಗರೀಕರು ಸರ್ಕಾರವನ್ನು ಬಲವಾಗಿ ಟೀಕಿಸಬಹುದು. ಹೀಗೆ ಮುಂದೆ ಸುಧಾರಣೆಗಳೂ, ತಡೆಗಳೂ ಬರಬಹುದು. ಹೀಗೆ ಒಂದು ಅಭ್ಯಾಸದ ಹುಟ್ಟು, ಬೆಳವಣಿಗೆ, ಪ್ರಸಾರ, ವಿರೋಧ, ಬದಲಾವಣೆ, ಸುಧಾರಣೆ ನಿರ್ಮೂಲನವಾಗುತ್ತದೆ. ಇತಿಹಾಸಕಾರನು ಈ ಹಂತಗಳನ್ನು ಗುರ್ತಿಸುತ್ತಾನೆ. ಅವುಗಳ ಸ್ವಭಾವ ತಿಳಿಯುತ್ತಾನೆ ಮತ್ತು ಅವುಗಳನ್ನು ತಕ್ಕ ಪದಗಳಲ್ಲಿ ವಿವರಿಸುತ್ತಾನೆ. ಇವು ಸಾಧಾರಣ ವಿಷಯಗಳಾಗಿ ಎಲ್ಲ ಕಾಲದಲ್ಲಿ ಎಲ್ಲ ಪ್ರದೇಶಗಳಿಗೂ ಅನ್ವಯಿಸುತ್ತವೆ.

ಇದೇ ಸೂತ್ರಗಳನ್ನು ಅಪರೂಪದ ವಿಷಯಗಳಿಗೆ ವ್ಯಕ್ತಿಗಳಿಗೆ ಹೊಂದಿಸಲು ಕಷ್ಟವಾಗುತ್ತದೆ. ಇಂಥ ಸಂದರ್ಭದಲ್ಲಿ ವಿಷಯಗಳು ಅಥವಾ ವ್ಯಕ್ತಿಗಳು ಸಮಾಜದ ಉನ್ನತಿ, ಬದಲಾವಣೆಗೆ ಕಾರಣರಾಗಿದ್ದರೆ ಅಂಥವರು ವಿಷಯ ತಿಳಿಯಬಹುದು. ಅಂಥವರಲ್ಲಿ ಕಲಾಕಾರರು, ವಿಜ್ಞಾನಿಗಳು, ಸೇನಾನಿಗಳು, ಮತ ಪ್ರವರ್ತಕರು, ನಾಯಕರು, ರಾಜಕಾರಣ ಧುರೀಣರು, ದಾರ್ಶನಿಕರು ಮುಂತಾದವರಿರುತ್ತಾರೆ. ಅಂಥವರ ಜೀವನವನ್ನು ಅಧ್ಯಯನವಾಗಿ ಚುನಾಯಿಸಕೊಳ್ಳಬಹುದು. ಒಂದು ಸೂತ್ರ ಸಿದ್ಧವಾಗಬೇಕದರೆ ಅವರ ಜೀವನ ಮತ್ತು ಗುಣಗಳನ್ನು ವೀಕ್ಷಿಸಬೇಕು. ಇವುಗಳು ಅವನ ವ್ಯಕ್ತಿ ಚಿತ್ರಣಕ್ಕೆ ಅಥವಾ ಅವನ ಮನಸ್ಸು ತಿಳಿಯಲು ಸಹಾಯವಾಗುತ್ತದೆ. ಆದರೂ ಯಾವನೊಬ್ಬ ಮನುಷ್ಯ ಜೀವನವನ್ನು ತಿಳಿಯಲು ಬಹಳ ಕಷ್ಟವಾಗುತ್ತದೆ. ಉದಾಹರಣೆಗೆ ಅಲೆಕ್ಸಾಂಡರ್‌ನ ಜೀವನದ ಬಗ್ಗೆ ಭಿನ್ನವಾದ ವಿಷಯಗಳಿವೆ. ಅಪರೂಪದ ಘಟನೆ ಅಥವಾ ಅಪರೂಪದ ಮನುಷ್ಯನ ವಿಚಾರ ತಿಳಿಯುವುದೂ ಅವಶ್ಯಕ. ಆ ಸಂದರ್ಭದಲ್ಲಿ ಸೂತ್ರ ಮಾಡುವುದೂ ಅವಶ್ಯಕ.

ಒಂದು ಅಸಾಧಾರಣ ಲಕ್ಷಣ (ವ್ಯಕ್ತಿ ಸಂಗತಿ)ವನ್ನು ಕುರಿತು ಮಾಡುವ ಸಾಮಾನ್ಯೀಕರಣದಲ್ಲಿ ನಾವು ನಮಗೆದುರಾಗುವ ಸಮಸ್ಯೆಗಳ ವಿಷಯದಲ್ಲಿ ಎರಡು ವಿಧವಾದ ಸ್ವಾಭಾವಿಕ ಪ್ರಲೋಭನೆಗಳಿಗೆ ಒಳಗಾಗದಂತೆ ಎಚ್ಚರವಹಿಸಬೇಕು. ವ್ಯಕ್ತಿಯ ವಿಚಾರದಲ್ಲಾದರೆ ಅವನು ಪ್ರಖ್ಯಾತನಾಗಿದ್ದರೆ, ಅವನ ಆತ್ಮ ಪ್ರಶಂಸೆಯನ್ನು, ಉನ್ನತ ಹೇಳಿಕೆಗಳನ್ನು ಸುಲಭವಾಗಿ ಒಪ್ಪಬಾರದು. ಅದಲ್ಲದೆ ಅಂಥವನನ್ನು ಇತರ ಊಹಾಮಹಾಪುರುಷರೊಡನೆ ಹೋಲಿಸಿ, ಗಡಿಬಿಡಿ ಮಾಡಿಕೊಳ್ಳಬಾರದು. ಘಟನೆಗಳ ಬಗ್ಗೆ ಸೂತ್ರ ನಿರೂಪಣೆ ಬೇರೆ ರೀತಿಯದ್ದಾಗಿರುತ್ತದೆ. ಅನೇಕ ಸಣ್ಣ ಸಂಗತಿಗಳೂ ಸೇರಿ ಒಂದು ಸಾಮಾನ್ಯ ನಿರ್ಣಯಕ್ಕೆ ಬರಬೇಕು. ಸಂಗತಿಗಳನ್ನು ಸಂಯೋಜಿಸಿ ಅನುಪಯುಕ್ತವಾದದ್ದನ್ನು ತ್ಯಜಿಸಿ, ಉಳಿದವನ್ನು ಸಂಘಟಿಸಿ ಅವುಗಳ ಸ್ವರೂಪ, ವಿಸ್ತಾರಗಳನ್ನನುಸರಿಸಿ ಹ್ರಸ್ವ ಮಾಡಿ ಸಾಮಾನ್ಯೀಕರಣದ ಸೂತ್ರ ತಯಾರಿಸಬೇಕು. ಅಶೋಕನ ಧೋರಣೆಗಳನ್ನು ತಿಳಿಯುವಾಗ ಅವನ ಬುದ್ಧಿವಂತಿಕೆ, ಅವನ ಜ್ಞಾನ ಪ್ರಸಾರದ ಇಂಗಿತ, ಅವು ಹೇಗೆ ಅಪರೂಪದವೂ ಸ್ವಯಂಕಲ್ಪಿತವಾದವು. ಅವು ಹೇಗೆ ಬುದ್ಧ ಧರ್ಮದಿಂದ ಪ್ರೇರಿತವಾದವೆಂದು ತಿಳಿಯಬೇಕು. ಅವುಗಳಿಂದ ಮೌರ್ಯ ಚಕ್ರಾಧಿಪತ್ಯಯ ಮತ್ತು ಪರದೇಶಗಳಲ್ಲಿ ಜನಗಳ ಮೇಲೆ ಬಲವಾದ ಪ್ರಭಾವ ಬೀರಿದವೆಂಬುದನ್ನು ಕಾಣಿಸಬೇಕು. ಇಲ್ಲಿ ವ್ಯಕ್ತಿಯ ಮನಸ್ಸು, ಅಭಿಪ್ರಾಯ, ನಡವಳಿಕೆ, ಕಾರ್ಯ ತತ್ಪರತೆಗಳನ್ನು ಗಮನಿಸಿ ಸೂತ್ರಗಳನ್ನು ರೂಪಿಸಬೇಕು. ಘಟನೆಗಳ ವಿಷಯದಲ್ಲಿ ಮತ್ತಷ್ಟು ಹುಷಾರಾಗಿ ಅದರ ಹಿಂದಿರುವ ವ್ಯಕ್ತಿಗಳು ಉದ್ದೇಶ, ಅದರ ಬಗ್ಗೆ ಅವರದೇ ಅಭಿಪ್ರಾಯ, ಅದನ್ನು ಕಂಡ ಇತರರ ಅಭಿಪ್ರಾಯ ಮುಂತಾದ ಸಮಸ್ಯೆಗಳನ್ನು ತಿಳಿಯಲು ಸೂತ್ರ ನಿರೂಪಣೆಗೆ ತೊಡಗಬೇಕು.

ಒಂದು ಸೂತ್ರವನ್ನು ಅನುಸರಿಸಬೇಕಾದಾಗ ಅದರ ಪ್ರಮಾಣ (ಗಾತ್ರ) ಮತ್ತು ಗುಣವನ್ನೂ ತಿಳಿಯಬೇಕು. ಇದನ್ನು ತಿಳಿಯಲು ಸಹಾಯಕ ಅಂಶಗಳು:

1) ತಪಸೀಲಾದ ಅಳತೆಗಳು (ಮೆಶರ್‌ಮೆಂಟ್): ಇವು ಸಾಧಾರಣವಲ್ಲದೆ ಮನೋವಿಜ್ಞಾನಕ್ಕೆ ಸಂಬಂಧಪಟ್ಟ ಸಂಗತಿ ತಿಳಿಯಲು ಸಹಾಯಕವಾಗುತ್ತದೆ.

2) ಎಣಿಕೆ (ಗಣನೆ, ಎನ್ಯೂಮರೇಷನ್): ಇದು ಸಂಖ್ಯಾಶಾಸ್ತ್ರಕ್ಕೆ ಸೇರಿದೆ. ಇದನ್ನು ಸಂಗತಿಗಳ ವಿಷಯ ತಿಳಿಯಲೂ ಸಹಾಯಕವಾಗುತ್ತದೆ. ಇದರಲ್ಲಿ ಸಂಖ್ಯಾಬಲ ಮುಖ್ಯವಲ್ಲ. ಸಂಗತಿಗಳಿಗೆ ದೊರಕಿದ ಗಣನೆ ಮುಖ್ಯ.

3) ಮೌಲ್ಯನಿರ್ಣಯ (ವ್ಯಾಲ್ಯೂಯೇಷನ್): ಇದು ಒಂದು ಎಣಿಕೆಗೆ ಸಂಬಂಧಿಸಿದ ಕಾರ್ಯ. ಇತಿಹಾಸದ ದಾಖಲೆಗಳು ಹೇರಳವಾಗಿದ್ದು, ಫಲಿತಾಂಶವು ಅನುಮಾನವೆನಿಸಿದಾಗ ಇತಿಹಾಸಕಾರನು ಮನಸ್ಸಿನಲ್ಲಿ ಒಂದು ಚಿತ್ರ ಕಲ್ಪಿಸಿಕೊಂಡು ಅದರ ಮೌಲ್ಯನಿರ್ಣಯ ಮಾಡುತ್ತಾನೆ. ಸಂಗತಿಗಳು ಕೇವಲ ಭಾವನಾರೂಪದ (ಅಬ್‌ಸ್ಟ್ರಾಕ್ಟ್) ಆಗಿರುವಾಗ ಇದರ ಉಪಯೋಗ ಹೆಚ್ಚು.

4) ಮಾದರಿ ಪರೀಕ್ಷೆ (ಸ್ಯಾಂಪಲಿಂಗ್): ಇದು ಸಹ ಎಣಿಕೆಯ ಒಂದು ವಿಭಾಗ. ಒಂದೇ ರೀತಿಯ ಅನೇಕ ವಿಷಯಗಳು ಸೇರಿದಾಗ ಇದು ಪರಿಶೀಲನೆಗೆ ಬರುತ್ತದೆ. ಅವುಗಳನ್ನು ಚುನಾಯಿಸುವಾಗ ಅದನ್ನು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿರುವಂತೆ ಗಮನ ವಹಿಸಬೇಕು.

ಸಾಮಾನ್ಯೀಕರಣವೆಂದರೆ ಅದನ್ನು ಆದಷ್ಟು ಸುಲಭವನ್ನಾಗಿ ಮಾಡುವ ಸಾಧನ. ಆದರೆ ಒಂದೆರಡು ಮಾದಿ ಪರೀಕ್ಷೆಗಳಿಂದ ಸಾಮಾನ್ಯೀಕರಣ ತಪ್ಪಾಗುತ್ತವೆ. ಇದಕ್ಕಾಗಿ ಮಾದರಿ ಪರೀಕ್ಷೆಯನ್ನು ಅಚ್ಚುಕಟ್ಟಾಗಿ ಮಾಡಬೇಕು. ಇದನ್ನು ನಿರ್ಧಾರಿತವನ್ನಾಗಿ ಮಾಡಲು ಒಂದು ನಾನಾ ವಿಧವಾದ ಸೀಮಿತಗಳನ್ನು ಕಲ್ಪಿಸಿಕೊಂಡಿರಬೇಕು. ಈ ಮಿತಿಗಳಲ್ಲಿ ಇವು ಸೇರಿವೆ. (1) ಸಾಮಾನ್ಯೀಕರಣ ಮಿತಿಯನ್ನು ನಿರ್ಧರಿಸಬೇಕು. ಇದರಲ್ಲಿ ದೇಶ, ಪಂಗಡ, ವರ್ಗ, ಕಾಲ ಇವು ಸೇರಿವೆ. ತೀರವ ವಿಸ್ತಾರವಾದ ಕ್ಷೇತ್ರವನ್ನು ಸಾಮಾನ್ಯೀಕರಣಕ್ಕೆ ಸೇರಿಸಬಾರದು. (2) ಎಲ್ಲ ಸಂಗತಿಗಳೂ ಒಂದನ್ನೊಂದು ಬಹುಮಟ್ಟಿಗೆ ಹೋಲುವಂತಿರಬೇಕು. ತೀರ ಅಸಹಜವಾದುದನ್ನು ಈ ಗುಂಪಿಗೆ ಸೇರಿಸಬಾರದು. (3) ಮಾದರಿ ಪರೀಕ್ಷೆ ಸಂಗತಿಗಳು ಸರಿಯಾದ ಪ್ರಾತಿನಿಧ್ಯ ಹೊಂದಿರಬೇಕು. (4) ಮಾದರಿ ಪರೀಕ್ಷೆಗೆ ಚುನಾಯಿಸಿರುವ ಸಂಗತಿಗಳು ಸಾಮಾನ್ಯೀಕರಣದ ವ್ಯಾಪ್ತಿಗೆ ಒಳಪಟ್ಟು ಮಿತಿಯುಳ್ಳದ್ದಾಗಿರಬೇಕು. ಹೀಗೆ ಒಂದು ಸಮಗ್ರ ವಿಷಯಕ್ಕೆ ಸಂಬಂಧಿಸಿದ ಒಂದು ಸೂಕ್ತಿಯನ್ನು, ನಿಯಮವನ್ನು ರಚಿಸಬೇಕು. ಈ ಸಂದರ್ಭದಲ್ಲಿ ಆ ವಿಷಯಕ್ಕೆ ಸಂಬಂಧ ಪಡದವುಗಳನ್ನು ಬಿಟ್ಟು, ಏಕ ರೂಪತೆಯನ್ನು ಹೊಂದುವಂತೆ ಮಾಡಬೇಕು. ಹೀಗೆ ಆ ಸಂಗತಿ, ಭಾಷೆ, ಮತ, ಧರ್ಮ, ಕಲೆ, ಆರ್ಥಿಕ ಅವ್ಯವಸ್ಥೆ, ಸಮಾಜ ಮತ್ತು ಸರ್ಕಾರ – ಒಂದು ವ್ಯವಸ್ಥೆಯ ನಾನಾ ಮುಖಗಳನ್ನು ಸೇರಿಸುತ್ತದೆ.

ಸಂಬಂಧ ಪಡೆಯದ ನಿಯಮಗಳಿಂದ ಏನೂ ತೀರ್ಮಾನ ಮಾಡಲು ಸಾಧ್ಯ. ಆದ್ದರಿಂದ ವಿಷಯಗಳನ್ನು ಸಂಬಂಧಿಸಿದ ಇತರ ವಿಷಯಗಳೊಡನೆ ಹೋಲಿಸಿ ಇತ್ಯರ್ಥ ಮಾಡಬೇಕು. ಆದರೆ ಪ್ರಾಣಿಶಾಸ್ತ್ರದ ನಿಯಮಗಳನ್ನು ಇಲ್ಲಿ ಯಥಾ ಒಪ್ಪುವುದು ಸಾಧ್ಯವಿಲ್ಲ. ಇತಿಹಾಸದಲ್ಲಿ ಮನುಷ್ಯನೇ ಮುಖ್ಯವಸ್ತು. ಮನುಷ್ಯರಲ್ಲಿ ನಾವು ಕಾಣುವುದು ವಿಭನ್ನತೆಗಳೇ. ಒಬ್ಬನಂತೆ ಮತ್ತೊಬ್ಬನಿಲ್ಲ, ಒಂದು ಸಮಾಜದಂತೆ ಮತ್ತೊಂದಿಲ್ಲ ಇತ್ಯಾದಿ. ಆದರೂ ಈ ವಿಭಿನ್ನತೆಯಲ್ಲಿ ಒಂದು ಏಕತೆ ಕಾಣಬಹುದಾಗಿದೆ. ನಾನಾ ಸಮುದಾಯಗಳ ವೀಕ್ಷಣೆ ಮಾಡಿ, ಅದರಲ್ಲಿ ಯಾವುದಾದರೊಂದು ವಿಭಾಗವನ್ನು ಚುನಾಯಿಸಿ, ಉದಾಹರಣೆಗೆ ಅಲ್ಲಿಯ ಮತಧರ್ಮ ಅಥವಾ ಸರ್ಕಾರ ಇತ್ಯಾದಿ ಇವು ಎಲ್ಲಿ ಸಮವಾಗಿದೆ ಎಲ್ಲಿ

ಭಿನ್ನವಾಗಿದೆ ಎಂದು ಹೇಳಲು ಸಾಧ್ಯ. ಇದರಿಂದ ಸ್ವಾನುಭವಸಿದ್ಧ ವಿಷಯಗಳು ಕಂಡುಬರುತ್ತವೆ. ಹೀಗೆ ಇಲ್ಲಿ ಇತಿಹಾಸ ತತ್ವವೊಂದನ್ನು ಖಾಯಂ ಆಗಿ ಸಿದ್ಧಪಡಿಸಬಹುದು.

ಕೆಲವರು ಭೌತಾತೀತ ವಿದ್ಯೆಗನುಗುಣವಾಗಿ (ಮೆಟಫಿಸಿಕಲ್) ಮಾನವನ ಚಟುವಟಿಕೆಗಳು ವಿಷಯಾತೀತ, (ಟ್ರಾನ್ಸ್‌ಡೆಂಟಲ್) ಎಂದೂ, ದೈವಾಯುತ್ತ ಅಥವಾ ದೈವಿಕ (ಪ್ರಾವಿಡೆನ್‌ಷಿಯಲ್) ಎಂದೂ ತಿಳಿದಿರುತ್ತಾರೆ. ಹೀಗೆ 19ನೇ ಶತಮಾನದಲ್ಲಿ ಹೆಗಲ್, ಮಾರ್ಕ್ಸ್, ಕಾಂಟೆ, ಬಕಲ್ ಈ ತತ್ವಗಳನ್ನು ನಂಬಿದವರಾದ್ದರಿಂದ ಇತಿಹಾಸ ಸೃಷ್ಟಿಯಲ್ಲೂ ಇದನ್ನು ಸೇರಿಸಿದರು. ಕ್ಯಾಂಟಿನ ತತ್ವಶಾಸ್ತ್ರ ಇದನ್ನು ಅನುಭವದಲ್ಲಿ ಸೇರಿರುವ ಮತ್ತು ಅನುಭವಕ್ಕೆ ಅವಶ್ಯಕವಾದ ಆದರೆ ಅನುಭವ ಜನ್ಯವಲ್ಲದ ವಿಷಯ ಎಂದು ವಿಶದಪಡಿಸಿದನು. ಇದರಿಂದ ಎಲ್ಲ ಘಟನೆಗಳು ದೈವಜ್ಞಾನದ ಪರಿಧಿಯಲ್ಲಿವೆ ಎಂದು ತಿಳಿದಿದ್ದರು. ಹೀಗೆ ಇತಿಹಾಸವು ವಿಚಾರ ಅಥವಾ ವಿವೇಚನೆ ಮಾಡುವ (ರ‍್ಯಾಷನಲ್) ಬುದ್ಧಿಶಕ್ತಿಗೆ ಗೋಚರವಾಗುವ ವಿಷಯವೆಂದು ಗ್ರಹಿಸಲಾಯಿತು. ಪ್ರತಿಯೊಂದು ಸಂಸ್ಥೆಯಂತೆ ಕಾರಣವನ್ನು ಸಮಾಜದ ನಡವಳಿಕೆಯಲ್ಲೇ ಇದೆ ಎಂದು ತಿಳಿಯಲಾಯಿತು. ಇದೇ ಹೆಗಲನ ಮುಖ್ಯತತ್ವ. ಇದನ್ನು ಅವನ ಅನುಯಾಯಿಗಳಾದ ರ‍್ಯಾಂಕೆ, ಮಾಮಸನ್, ಡಾಯ್‌ಸೆನ್ ಮುಂತಾದ ಜರ್ಮನರು, ಟೇನ್, ಮಿಷೆ ಮುಂತಾದ ಫ್ರೆಂಚರೂ ಒಪ್ಪಿದರು. ಇದು ಸಾಮಾನ್ಯ ಮನುಷ್ಯರು ಹಳೆಯ ದೈವಜ್ಞರ (ಥಿಯಾಲಜಿಕಲ್ ಥಿಯರಿ) ಅಭಿಪ್ರಾಯವನ್ನು ಮನ್ನಿಸಿದಂತೆಯೇ ಆಯಿತು. ಇದು ಸಮಾಧಾನಕರವೆಂದು ತೋರಿಸಿದರೂ ಅವೈಜ್ಞಾನಿಕವಾದು–ದಾಗಿದೆ. ಏಕೆಂದರೆ ನಮ್ಮ ವಿಚಾರ ಶಕ್ತಿ ಅಥವಾ ಧಾರೆಯಂತೆ ಜಗತ್ತಿನಲ್ಲಿ ಎಲ್ಲವೂ ನಡೆದಿಲ್ಲ. ಇವೆಲ್ಲವೂ 'ಮಾನವನ ಪ್ರಗತಿ' ಎಂಬ ಮಾತಿಗೆ ಪುರಸ್ಕಾರ ನೀಡಲಾರವು. ಹೀಗೆ ಅನೇಕ ವಿಚಾರ ಪಂಥಗಳು ವಿದ್ವಾಂಸರಿಂದ ಹೇಳಲ್ಪಟ್ಟಿವೆ. ಅವುಗಳ ಇತಿಹಾಸ ಸಂಯೋಜನೆಯ ಉತ್ಪನ್ನಗಳೇ ಆಗಿವೆ. ಇವೆಲ್ಲವು ಇತಿಹಾಸವನ್ನು ವಿಜ್ಞಾನದ ಸಮೀಪಕ್ಕೆ ತಂದಿವೆ ಮತ್ತು ಮನುಷ್ಯನ ಅನುಭವಗಳನ್ನು ಬಹಳ ಸಂಗ್ರಹವಾಗಿ, ಸಾರವತ್ತಾಗಿ ತಿಳಿಸಿವೆ. ಹೀಗೆ ಎಲ್ಲ ಕಾರಣಗಳ ಕಾರ್ಯ ಸಂಬಂಧವನ್ನು ಎಲ್ಲರಿಗೂ ಒಪ್ಪಿಗೆಯಾಗುವಂತೆ ಮಾಡುವುದೇ ಮುಂದಿನ ಕರ್ತವ್ಯವಾದ ಕ್ರಮಬದ್ಧತೆಯ ಮುಖ್ಯ ಕೆಲಸವಾಗಿದೆ.

## 6.3 ಸಾರಾಂಶ

ಈ ಘಟಕದ ಅಧ್ಯಯನದ ನಂತರ ನಾವು

- ಸಂಯೋಜನಾ ಕಾರ್ಯಗಳು ಇತಿಹಾಸ ಸಂಶೋಧನೆಯಲ್ಲಿ ಯಾವ ಮಹತ್ವವನ್ನು ಹೊಂದಿದೆ ಎಂಬುದನ್ನು ತಿಳಿದುಕೊಂಡೆವು.
- ಈ ಕಾರ್ಯಗಳಲ್ಲಿ ಪ್ರಾಥಮಿಕ ಕಾರ್ಯವಾದ ಸಂಶೋಧನಾ ಪ್ರಬಂಧವನ್ನು ಹೇಗೆ ಬರೆಯಬೇಕು ಎಂಬುದರ ಬಗ್ಗೆ ಒಂದು ಯೋಜನೆಯನ್ನು ತಿಳಿದೆವು.
- ಸಂಶೋಧಕನಿಗೆ ದೊರೆತ ಮಾಹಿತಿಯನ್ನು ಅನುಸರಿಸಿ ರಚನಾತ್ಮಕ ಸಮರ್ಥನೆಯನ್ನು ಹೇಗೆ ಅವನು ಮಾಡುತ್ತಾನೆ ಎಂಬುದನ್ನು ಸಹ ತಿಳಿದುಕೊಂಡೆವು.

- ಎಲ್ಲ ಕಾರ್ಯಗಳೂ ಮುಗಿದ ನಂತರ ಸಂಶೋಧನೆಯಲ್ಲಿ ಹೊರತಂದ ವಿಷಯಗಳನ್ನು ಹೇಗೆ ಸಮಂಜಸವಾಗಿ ಸಾಮಾನ್ಯೀಕರಣ ಮಾಡುವ ಎಂಬುದು ನಮಗೆ ತಿಳಿದುಬರುತ್ತದೆ.

## 6.4 ಪ್ರಮುಖ ಪದಗಳು

1. ಎಂ.ಎಲ್.ಎ.: ಮಾಡರ್ನ್ ಲ್ಯಾಂಗ್ವೇಜ್ ಅಸೋಸಿಯೇಷನ್
2. ಎನ್.ಯು.ಸಿ.ಎಂ.ಸಿ: ನ್ಯಾಷನಲ್ ಯೂನಿಯನ್ ಕ್ಯಾಟಲಾಗ್ ಆಫ್ ಮ್ಯಾನುಸ್ಕ್ರಿಪ್ಟ್ ಕಲೆಕ್ಷನ್ಸ್

## 6.5 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಸಂಯೋಜನಾ ಕಾರ್ಯಗಳ ಬಗ್ಗೆ ಚರ್ಚಿಸಿ.
2. ಸಮಂಜಸ ಸಾಮಾನ್ಯೀಕರಣ ಎಂದರಾನು?

## 6.6. ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 6.2 ನೋಡಿ
2. ವಿಭಾಗ 6.3 ನೋಡಿ

## 6.7 ಪರಾಮರ್ಶನ ಗ್ರಂಥಗಳು


| | | |
|---|---|---|
| 1. ಇತಿಹಾಸ ಸಂಶೋಧನಾ ಮಾರ್ಗ | : | ಡಾ॥ಎ.ವಿ.ವೆಂಕಟರತ್ನಂ, ಡಾ॥ಎಂ.ಬಿ.ಪದ್ಮ |
| 2. Sheik Ali B | : | History: Its Theory and Method |
| 3. Rajayyan K | : | History in Theory and Method |



**ಪಠ್ಯವನ್ನು ರಚಿಸಿದವರು:**

**ಪ್ರೊ.ಎನ್.ಸರಸ್ವತಿ**

# ಘಟಕ –7 ಬಾಹ್ಯ ಮತ್ತು ಆಂತರಿಕ ವಿಮರ್ಶೆ

**ರಚನೆ**

**7.0** ಉದ್ದೇಶಗಳು

**7.1** ಪೀಠಿಕೆ

**7.2** ಬಾಹ್ಯ ವಿಮರ್ಶೆ

**7.3** ಆಂತರಿಕ ವಿಮರ್ಶೆ

**7.4** ಆಂತರಿಕ ವಿಮರ್ಶೆಯ ದ್ವಿಬಗೆಯ ಕಾರ್ಯ ರೀತಿಗಳು

**7.4.1** ನಿಶ್ಚಯಾತ್ಮಕ ಅರ್ಥನಿರ್ಣಯ ವಿಮರ್ಶೆ

**7.4.2** ನಿರಾಕರಣಾತ್ಮಕ ಅರ್ಥವಿವರಣ ವಿಮರ್ಶೆ

**7.4.2.1** ಕರ್ತೃವಿನ ಸತ್ಯನಿಷ್ಠತೆಯನ್ನು ಸಂದೇಹಿಸುವಂತೆ ಮಾಡುವ ದೋಷಗಳು

**7.4.2.2** ಯಥಾರ್ಥತೆಗೆ ಅಡ್ಡಿಯಾಗುವ ತಪ್ಪುಗಳು

**7.5** ಸಾರಾಂಶ

**7.6** ಪ್ರಮುಖ ಪದಗಳು

**7.7** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**7.8** ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

**7.9** ಪರಾಮರ್ಶನ ಗ್ರಂಥಗಳು

## 7.0 ಉದ್ದೇಶಗಳು

ಈ ಘಟಕ 7ರಲ್ಲಿ ಹಲವು ವಿಷಯಗಳನ್ನು ತಿಳಿಯುತ್ತೀರಿ, ಅವುಗಳು;

- ಇತಿಹಾಸದಲ್ಲಿ ವಿಮರ್ಶೆಯ ಮಹತ್ವ ಮತ್ತು ಕಾರ್ಯ
- ವಿಮರ್ಶೆಯಲ್ಲಿ ಪ್ರಾಥಮಿಕವಾಗಿ ಬಾಹ್ಯ ವಿಮರ್ಶೆಯ ವಿಧಾನಗಳನ್ನು ಹೇಗೆ ಅಳವಡಿಸಿಕೊಳ್ಳುತ್ತೇವೆ.
- ಇತಿಹಾಸ ಬರವಣಿಗೆಯಲ್ಲಿ ಆಂತರಿಕ ವಿಮರ್ಶೆಯ ಮಹತ್ವ ಮತ್ತು ಆಂತರಿಕ ವಿಮರ್ಶೆಯ ಪ್ರಮುಖ ಕಾರ್ಯಗಳ ವಿಧಾನವನ್ನು ತಿಳಿಯುತ್ತೇವೆ.

## 7.1 ಪೀಠಿಕೆ

ಇತಿಹಾಸ ಸಂಶೋಧನೆಯಲ್ಲಿ ವಿಷಯದ ಆಯ್ಕೆ, ಸಂಶೋಧಕನ ಅರ್ಹತೆಗಳನ್ನು ತಿಳಿದ ನಂತರ ಬಹಳ ಪ್ರಮುಖವಾದ ಕಾರ್ಯವೆಂದರೆ ವಿಮರ್ಶೆ. ಈ ವಿಮರ್ಶೆಯಲ್ಲಿ ಎರಡು ವಿಧಗಳಿದ್ದು ಅವುಗಳನ್ನು ಬಾಹ್ಯ ಮತ್ತು ಆಂತರಿಕ ವಿಮರ್ಶೆ ಎನ್ನುತ್ತೇವೆ. ಬಾಹ್ಯ ವಿಮರ್ಶೆಯಲ್ಲಿ ಕತೃ, ಗ್ರಂಥದ ಕಾಲ ಮತ್ತು ಗ್ರಂಥದ ಸ್ಥಳ ಇವುಗಳನ್ನು ಪರಿಶೀಲಿಸಲಾಗುವುದು. ಇನ್ನು ಆಂತರಿಕ ವಿಮರ್ಶೆಯಲ್ಲಿ ಗ್ರಂಥ ಕರ್ತೃವು ಗ್ರಂಥಗಳಲ್ಲಿ ತಿಳಿಸಿರುವ ವಿಷಯಗಳು ಸತ್ಯವೋ ಅಲ್ಲವೋ ಎಂಬುದನ್ನು ತಿಳಿಯಲಾಗುವುದು. ಈ ಎರಡೂ ವಿಮರ್ಶೆಯ ನಂತರ ಸಂಶೋಧನೆಯಿಂದ ಹೊರಬಂದ ತೀರ್ಮಾನವನ್ನು ಪ್ರಕಟಿಸುವುದನ್ನು ಇಲ್ಲಿ ಅಧ್ಯಯನ ಮಾಡಲಾಗುವುದು.

## 7.2 ಬಾಹ್ಯ ವಿಮರ್ಶೆ

ಕೈಗೆ ಸಿಕ್ಕಿರುವ ದಾಖಲೆಯ ವಿಶ್ವಾಸಾರ್ಹತೆ ಅಥವಾ ಪ್ರಾಮಾಣ್ಯವನ್ನು ಕಂಡುಹಿಡಿಯುವುದಕ್ಕಾಗಿ ಬಾಹ್ಯ ವಿಮರ್ಶಾ ಕ್ರಮವನ್ನು ಉಪಯೋಗಿಸಲಾಗುತ್ತದೆ. ಒಂದು ದಾಖಲೆಯ ವಿಷಯಗಳನ್ನು ಪರಿಶೀಲಿಸುವುದಕ್ಕೆ ಮೊದಲು ಸಂಶೋಧಕನು ಅದು ಯಥಾರ್ಥವಾದುದೇ ಅಥವಾ ಅಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಇಲ್ಲೂ ಸಹ ಅವನು ಪ್ರಶ್ನೆಗಳೊಂದಿಗೆ ಕಾರ್ಯವನ್ನು ಪ್ರಾರಂಭಿಸಬೇಕು. ಈ ದಾಖಲೆಯು ತನಗೆ ಬೇಕಾಗಿರುವ ದಾಖಲೆಯೇ ಆಗಿದೆಯೇ? ಇದು ತನಗೆ ಅವಶ್ಯಕವಾಗಿರುವ ಅದೇ ಲೇಖಕನ ಕೃತಿಯೇ? ಇದು ತಾನು ಎದುರು ನೋಡಿದ ಸ್ಥಳದಿಂದಲೇ ಬಂದಿದ್ದುದೇ? ಅಥವ ಇದು ಆ ಸ್ಥಳಕ್ಕೆ ಸೇರಿದ್ದುದೇ? ಇದು ತಾನು ಸಂಶೋಧನೆಗೆ ಆರಿಸಿಕೊಂಡಿರುವ ಕಾಲಕ್ಕೆ ಅನ್ವಯವಾಗುವಂತಹುದೇ? ಅವನು ಈ ತರಹದ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ಕಂಡುಹಿಡಿದುಕೊಳ್ಳಬೇಕು. ಹೊಸ ಸುದ್ದಿ ಅಥವಾ ಹೊಸ ದಾಖಲೆ ಅಥವಾ ಹೊಸ ಮಾಹಿತಿಗಳ ಕುರುಹು ಗಮನಕ್ಕೆ ಬಂದ ಕೂಡಲೇ ಅವನು ಇದೇ ತೆರನಾದ ಪ್ರಶ್ನೆಗಳನ್ನು ಹಾಕಿಕೊಂಡು ಸಮರ್ಪಕವಾದ ಸಮಾಧಾನಗಳನ್ನು ಪತ್ತೆಹಚ್ಚುವುದಕ್ಕೆ ಪ್ರಯತ್ನಿಸಬೇಕು. ಈ ಪ್ರಶ್ನೆಗಳಿಗೆ ಕ್ರಮಬದ್ಧವಾಗಿ ಸರಿಯಾದ ಉತ್ತರಗಳನ್ನು ಪತ್ತೆಹಚ್ಚಿಬಿಟ್ಟರೆ ಈ ನಿರ್ದಿಷ್ಟ ದಾಖಲೆ ಅಥವಾ

ಮಾಹಿತಿಗಳ ವಿಶ್ವಾಸಾರ್ಹತೆಯನ್ನು ಕುರಿತ ಸಮಸ್ಯೆಯನ್ನು ಬಗೆಹರಿಸಿದಂತಾಗುತ್ತದೆ. ಈ ಪ್ರಕ್ರಿಯೆಯನ್ನು ಬಾಹ್ಯ ವಿಮರ್ಶೆ ಎಂಬುದಾಗಿ ಕರೆಯಲಾಗಿದೆ. ಇದು ಒಂದು ದಾಖಲೆಯ ಬಾಹ್ಯ ಲಕ್ಷಣಗಳ ಪರೀಕ್ಷೆಯಲ್ಲಿ ಆಸಕ್ತಿ ವಹಿಸುವುದರಿಂದ ಈ ಹೆಸರು ಅನ್ವರ್ಥವಾಗಿದೆ. ಮೇಲ್ಮಟ್ಟದ ವಿಮರ್ಶಾ ಕಾರ್ಯಕ್ಕೆ ಬೇಕಾದ ರಂಗಸಿದ್ಧತೆಯನ್ನು ಮಾಡಿಕೊಡುವುದೇ ಇದರ ಪ್ರಧಾನ ಕೆಲಸ.

ಬಾಹ್ಯ ವಿಮರ್ಶೆಯ ಸ್ವರೂಪವನ್ನು ಕುರಿತು ವಿಚಾರ ಮಾಡುವ ಮೊದಲು ವಿಮರ್ಶೆ ಎಂದರೇನು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದುದು ಅಗತ್ಯ. ಇಲ್ಲಿ ವಿಮರ್ಶೆ ಎಂಬ ಪದವನ್ನು ತಪ್ಪನ್ನೇ ಹುಡುಕುವುದು, ದೂಷಿಸುವುದು, ತೆಗಳುವುದು, ಇಲ್ಲ ಅಸಮ್ಮತಿಯನ್ನು ವ್ಯಕ್ತಪಡಿಸುವುದು ಎಂಬ ಸಾಧಾರಣ ಅರ್ಥಗಳಲ್ಲಿ ಬಳಸುವುದಿಲ್ಲ. ಇದು ಅಕ್ಕಿಯನ್ನು ಬಿಳಿಕಲ್ಲುಗಳಿಂದ ಬೇರ್ಪಡಿಸುವಂತೆ, ಒಪ್ಪದಾದುದನ್ನು ತಪ್ಪಾಗಿರುವ ಅಂಶಗಳಿಂದ ಪ್ರತ್ಯೇಕಿಸುವ ವಿಧಾನ; ಕೈಯ ಹಿಡಿತಕ್ಕೆ ಸಿಕ್ಕಿರುವ ದಾಖಲೆಯು ಎಷ್ಟರಮಟ್ಟಿಗೆ ಯಥಾರ್ಥವಾಗಿದೆ, ಅದರಲ್ಲಿರುವ ಸತ್ಯಾಂಶವಾವುವು ಎಂಬುದನ್ನು ಸಿದ್ಧಪಡಿಸಿ ತೋರುವ ಒರೆಗಲ್ಲು. ಇದು ತಪ್ಪುಗಳನ್ನು ತೆಗೆದುಹಾಕಿ, ದೋಷಗಳನ್ನು ದೂರ ಮಾಡಿ, ಸತ್ಯತೆ ಅಥವಾ ಸಪ್ರಮಣತೆಯನ್ನು ನಿರ್ಧರಿಸಲು ಪಂಡಿತರಿಗೆ ಸಹಾಯ ಮಾಡುವ ಉಪಕರಣ ಮತ್ತು ದಾಖಲೆಯು ಸರಿಯಾದುದೇ, ನೆಚ್ಚಿಕೆಯಾದುದೇ ಅಥವಾ ಇಲ್ಲವೇ ಎಂಬುದಾಗಿ ಖಾತರಿಯಾಗಿ ಹೇಳಲು ವಾಯುಭಾರಮಾಪಕ ಯಂತ್ರದಂತೆ ಕಾರ್ಯ ಮಾಡುವ ಸಾಧನವಾಗಿದೆ.

'ಬಾಹ್ಯ ವಿಮರ್ಶಾಕ್ರಮ'ವು ಐದು ಮುಖ್ಯ ವಿಷಯಗಳನ್ನು ಕುರಿತು ವಿಚಾರ ಮಾಡುತ್ತದೆ. ಮೊದಲನೆಯದಾಗಿ, ಇದು ದಾಖಲೆಯ ಬಾಹ್ಯ ಲಕ್ಷಣಗಳ ಪರಿಶೀಲನತೆಯ ಆಧಾರದ ಮೇಲೆ ಅದು ಯಥಾರ್ಥವಾದುದೇ, ಅನಂತರ ಹಾದುಬಂದ ವರ್ಷಗಳಲ್ಲಿ ಸಂಬಂಧಪಡದ ಅಂಶಗಳನ್ನು ಅದಕ್ಕೆ ಸೇರಿಸಲಾಯಿತೇ ಅಥವಾ ಅದರಿಂದ ಕೆಲವು ವಿವರಗಳನ್ನು ತೆಗೆದುಹಾಕಲಾಯಿತೇ ಎಂಬುದನ್ನು ಪತ್ತೆಹಚ್ಚಲು ಪ್ರಯತ್ನಿಸುತ್ತದೆ. ಹೊಸದಾಗಿ ನೇಮಕಗೊಂಡ ರಾಯಭಾರಿಯು ತನ್ನ ನೇಮಕವು ಸದುದ್ದೇಶದಿಂದ ಕೂಡಿರುವುದು ಹಾಗೂ ಪ್ರಾಮಾಣಿಕವಾದುದು ಎಂಬುದನ್ನು ಸ್ಪಷ್ಟಪಡಿಸುವುದಕ್ಕಾಗಿ ಹಾಜರು ಪಡಿಸಿರುವ ತನ್ನ ಸರ್ಕಾರವು ನೀಡಿರುವ ಪರಿಚಯ, ರುಜುವಾತು ಹಾಗೂ ನಂಬಿಕೆಯ ಪತ್ರಗಳನ್ನು ಇನ್ನೊಂದು ರಾಷ್ಟ್ರವು ಪರಿಶೀಲಿಸುವಂತೆ, ಸಂಶೋಧಕನೂ ಸಹ ಬಾಹ್ಯ ವಿಮರ್ಶಾ ಕ್ರಮದ ಮೂಲಕ ಒಂದು ದಾಖಲೆಯ ವಿಶ್ವಾಸಾರ್ಹತೆಯನ್ನು ಪರೀಕ್ಷಿಸುತ್ತಾನೆ. ತನಗೆ ದೊರಕಿರುವ ದಾಖಲೆಯು ಖೋಟಾ ಅಥವಾ ಕೃತ್ರಿಮವಾದುದೇ ಅಥವಾ ಸರಿಯಾದುದೇ ಎಂಬುದನ್ನು ನಿಗದಿಪಡಿಸಿಕೊಳ್ಳುತ್ತಾನೆ. ಹೀಗೆ ಬಾಹ್ಯ ವಿಮಶೆಯನ್ನು ನಡೆಸುವಾಗ ಸಂಶೋಧಕನು ಯಥಾರ್ಥತೆಗೆ ಇರುವ ಒಂದೇ ಪರ್ಯಾಯವೆಂದರೆ, ಆಧಾರವಿಲ್ಲದೆ ಕಲ್ಪಿಸಿದ ವರದಿ ಅಥವಾ ಖೊಟಾ ದಸ್ತೈವಜದ ಸೃಷ್ಟಿ ಎಂಬುದನ್ನು ಮರೆಯದಿರಬೇಕು. ಉದಾಹರಣೆಗೆ, ವಿಭಿನ್ನ ಸಂಸ್ಥೆ, ವ್ಯಕ್ತಿ, ಕುಟುಂಬ, ಅಥವಾ ದೇವಾಲಯಗಳಿಗೆ ಕೊಡಲಾದ ಅಸಂಖ್ಯಾತ ಭೂದತ್ತಿಗಳ ಬಗ್ಗೆ ಇರುವ ದಾಖಲೆಗಳಲ್ಲಿ ನೀಡಲಾಗಿದ್ದ ಜಮೀನುಗಳಿಗೆ ಮತ್ತಷ್ಟು ಜಮೀನುಗಳನ್ನು ಸೇರಿಸಿಕೊಳ್ಳುವುದಕ್ಕಾಗಿ ಅಥವಾ ದತ್ತಿಯ ಕಾಲಾವಧಿಯನ್ನು ವಿಸ್ತರಿಸುವುದಕ್ಕಾಗಿ ಮತ್ತು ಇನ್ನಿತರ ಭೌತಿಕ ಲಾಭಗಳಿಗಾಗಿ ದಾನ ಪಡೆದವರು ಅಥವಾ ಅವರ ಸಂತತಿಯವರು ಅಕ್ರಮವಾಗಿ ತಿದ್ದುಪಡಿಗಳನ್ನು

ಮಾಡಿರಬಹುದು. ಒಣ ಹೆಮ್ಮೆ, ಪ್ರತಿಷ್ಠೆ, ಡಂಭಾಚಾರ, ಅನುಕಂಪ, ರೂಢವೈರ, ವೈಯಕ್ತಿಕ ವೈಮನಸ್ಯ, ರಾಜಕೀಯ ಭಿನ್ನಾಭಿಪ್ರಾಯ, ಸಾಮಾಜಿ ಭೇದ, ಧಾರ್ಮಿಕ ವಿವಾದ, ಮತಾಂಧತೆ, ದೇಶಪ್ರೇಮೋದ್ರೇಕ ಇತ್ಯಾದಿ ವಿಭಿನ್ನ ಕಾರಣಗಳಿಂದಾಗಿಯೂ ಸಹ ಮೂಲ ದಾಖಲೆಗಳ ವಿವರಗಳನ್ನು ಸ್ವಹಿತಾರ್ಥ ಸಾಧನೆಗೆ ಅನುಕೂಲವಾಗುವಂತೆ ಅಕ್ರಮವಾಗಿ ತಿರುಚಿ, ತಿದ್ದಿ ಬರೆದಿರಬಹುದು. ಸರ್ಕಾರದ ನಿಯಂತ್ರಣದ ಕಡಿವಾಣವು ಬಲವಾಗಿರುವಾಗಲೂ, ಖೋಟಾ ನಾಣ್ಯ ಹಾಗೂ ಕಾಗದದ ಹಣದ ಉತ್ಪಾದನೆ ಮತ್ತು ಚಲಾವಣೆ ಸಾಧ್ಯವಾಗಿರುವಾಗ ಹಿಂದೆ ಹಳೆಯ ದಾಖಲೆಗಳನ್ನೂ ಸ್ವಹಿತಕ್ಕೆ ತಕ್ಕಂತೆ ಅಕ್ರಮವಾಗಿ ತಿದ್ದಿ ಬರೆಯುವುದರಿಂದ ಅಪಾರ ಲಾಭ ಪಡೆಯುವ ಅವಕಾಶ ಅಧಿಕವಾಗಿದ್ದರಿಂದ ಗುಟ್ಟು ಬಯಲಾಗುವ ಸಂಭವ ಕಡಿಮೆ ಇದ್ದಿದ್ದರಿಂದ ಹಾಗೂ ಅಸಲಿನಂತೆಯೇ ತೋರುವ ಹಾಗೆ ಸುಳ್ಳು ದಾಖಲೆಯನ್ನು ಸೃಷ್ಟಿಸಿ ಕಳ್ಳ ರುಜುವನ್ನು ಹಾಕುವುದು ಸುಲಭವಾಗಿದ್ದರಿಂದ ಐತಿಹಾಸಿಕ ದಾಖಲೆಗಳನ್ನು ಬೇಕಾದಂತೆ ತಿದ್ದುವ ಪ್ರವೃತ್ತಿ ಪ್ರಬಲವಾಗಿದ್ದಿರಬೇಕು.

ಆದ್ದರಿಂದ ಸುಳ್ಳು ಪಾಠಾಂತರಗಳಿಂದ ಕೂಡಿರುವ ದಸ್ತೈವಜನ್ನು ಕಂಡುಹಿಡಿಯುವುದು ಹೇಗೆ ಎಂಬುದು ಮುಂದಿನ ಪ್ರಶ್ನೆ. ಇಲ್ಲಿ ಪ್ರಾಚೀನ ಲಿಪಿಶಾಸ್ತ್ರವು ಸಂಶೋಧಕನಿಗೆ ಬಹು ಸಹಾಯ ಮಾಡುತ್ತದೆ. ಬರವಣಿಗೆಯ ಶೈಲಿ ಹಾಗೂ ಲಿಪಿಗಳು ಕಾಲಕಾಲಕ್ಕೆ ಮಾರ್ಪಡುತ್ತಲೇ ಇರುತ್ತವೆ. ಒಂದು ಸುಳ್ಳು ದಾಖಲೆ ಅಥವಾ ಶಾಸನದಲ್ಲಿ ಇರುವ ವರ್ಣಮಾಲೆಗಳು ಅದರಲ್ಲಿ ನಮೂದಿಸಿರುವ ಕಾಲದಲ್ಲಿದ್ದ ವರ್ಣಮಾಲೆಗಳಿಗೆ ಅನುಗುಣವಾಗಿಲ್ಲದೇ ಹೋದರೆ, ಆಗ ಆ ದಾಖಲೆ ಅಥವಾ ಶಾಸನವು ಕೃತ್ರಿಮವಾದುದು ಎಂಬುದಾಗಿ ಎಣಿಸಬಹುದು. ಅದೇ ರೀತಿ ಕೈಬರಹ, ಅಕ್ಷರ ಜೋಡಣೆ, ಪದ ಪ್ರಯೋಗ, ವಾಕ್ಸರಣಿ, ಶೈಲಿ ಮತ್ತು ಇತರ ಲಕ್ಷಣಗಳೂ ಸಹ ದಾಖಲೆಗಳನ್ನು ಅಕ್ರಮವಾದ ರೀತಿಯಲ್ಲಿ ತಿದ್ದಿ ಬಿಡಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿಯುವುದಕ್ಕೆ ಸೂಕ್ಷ್ಮ ಸೂಚನೆಯನ್ನು ಕೊಡುತ್ತವೆ. ಇನ್ನೊಬ್ಬ ಗ್ರಂಥಕರ್ತನ ಭಾವ, ಬರಹ, ಕಲ್ಪನೆ ಇತ್ಯಾದಿಗಳನ್ನು ಕದ್ದು, ಬಳಸಿ, ರಚಿಸಲಾಗಿರುವ ಕೃತಿಯನ್ನು ಮೂಲಗ್ರಂಥದೊಂದಿಗೆ ಹೋಲಿಸಿ ನೋಡಿದರೆ, ಕೃತಿ ಚೌರ್ಯವನ್ನು ಪತ್ತೆ ಹಚ್ಚುವುದು ಸಾಧ್ಯವಾಗುತ್ತದೆ. ಅನೇಕ ವೇಳೆ ಅನಿರೀಕ್ಷಿತವಾಗಿ ಕೃತಿ ಚೌರ್ಯವು ಬೆಳಕಿಗೆ ಬಂದುಬಿಡುತ್ತದೆ. ಆದ್ದರಿಂದ ಬಾಹ್ಯ ವಿಮರ್ಶೆಯನ್ನು ನಿಜವಾದುದೆಂಬುದಾಗಿ ಹೇಳಲಾಗಿರುವ ಮಾಹಿತಿಯನ್ನು ಸೃಷ್ಟನೆಯೇ ಅಥವಾ ಇಲ್ಲವೇ ಎಂಬುದನ್ನು ಖಚಿತ ಪಡಿಸುವ ಕ್ರಮ ಎಂಬುದಾಗಿ ವರ್ಣಿಸಬಹುದು. ಹೀಗೆ ದಾಖಲೆಗಳನ್ನು ಪರಿಶೋಧಿಸಿ, ಪರಿಶೀಲಿಸಿ ಅವುಗಳ ಯಥಾರ್ಥತೆ ಅಥವಾ ಕ್ರತಿಮತೆಯನ್ನು ಕಂಡುಹಿಡಿಯಲು ಮಾಡುವ ಪ್ರಯತ್ನವೂ ಸಹ ಒಂದು ಸಂಶೋಧನಾ ಕಾರ್ಯವೇ ಆಗುತ್ತದೆ.

ಎರಡನೆಯದಾಗಿ ಈ ಕ್ರಮವು ದಾಖಲೆಯ ಕರ್ತೃತ್ವವನ್ನು ನಿರ್ಧರಿಸಲು ಮತ್ತು ಆ ದಾಖಲೆಯನ್ನು ಬರೆಯುವುದಕ್ಕೆ ಯಾರು ಕಾರಣಕರ್ತರು ಎಂಬುದನ್ನು ಖಚಿತಪಡಿಸಲು ಯತ್ನಿಸುತ್ತದೆ. ಗತಕಾಲದಲ್ಲಿದ್ದ ಒಬ್ಬ ಲೇಖಕನು ಅವಲೋಕನೆ ಮಾಡಿ ಸಿದ್ಧಪಡಿಸಿದ ದಾಖಲೆಯು ಐತಿಹಾಸಿಕ ಮಾಹಿತಿಗಳನ್ನು ಒದಗಿಸುವುದರಿಂದ ಆ ಲೇಖಕನಾರು, ಅವನೆಂತಹ ವ್ಯಕ್ತಿಯಾಗಿದ್ದನು ಮತ್ತು ಅವನ ಮನಃಪ್ರವೃತ್ತಿ ಹೇಗಿದ್ದಿತು ಎಂಬುದನ್ನು ಅರಿಯಬೇಕಾದುದು ಅವಶ್ಯಕ. ಒಂದು ದಾಖಲೆ ಕಣ್ಣಿಗೆ ಬಿದ್ದ ತಕ್ಷಣ ತೀವ್ರವಾಗಿ

ಪ್ರಯತ್ನಿಸಿ ಅದರಲ್ಲಿ ಹೆಸರಿಸಲಾಗಿರುವ ಲೇಖಕನೇ ನಿಜವಾಗಿ ಅದನ್ನು ಬರೆದವನೇ ಎಂಬುದನ್ನು ಅಥವಾ ಲೇಖಕನ ಹೆಸರಿಲ್ಲದೇ ಹೋದರೆ, ಅವನ್ಯಾರೆಂಬುದನ್ನು ಪತ್ತೆಹಚ್ಚಲು ಮತ್ತು ಅವನ ಪ್ರೇರಣೆ, ಆಲೋಚನೆ, ಭಾವ, ಒಲವು, ಶೀಲಸ್ವಭಾವ, ಅಭಿರುಚಿ, ತರಬೇತು, ಸ್ಥಾನಮಾನ ಇತ್ಯಾದಿಗಳನ್ನು ಖಚಿತವಾಗಿ ತಿಳಿದುಕೊಳ್ಳಲು ತೀವ್ರವಾಗಿ ಪ್ರಯತ್ನಿಸಬೇಕಾದುದು ಅತ್ಯಾವಶ್ಯಕ. ತಾನು ಯಾರೆಂಬುದನ್ನು ಗುಪ್ತವಾಗಿಡುವುದಕ್ಕೆ ಎಲ್ಲಾ ಎಚ್ಚರಿಕೆಯನ್ನು ವಹಿಸಿದ್ದರೂ, ಅವನು ಅನುದ್ದಿಷ್ಟವಾಗಿ ನೀಡಿರುವ ಹೇಳಿಕೆಗಳು; ತನ್ನ ವೃತ್ತಿ ಹಾಗೂ ಸಾಮಾಜಿಕ ಸ್ಥಾನ, ತಾನು ಕೈಗೊಂಡ ಪಯಣ ಅಥವಾ ತಾನು ವ್ಯವಹಾರ ಇಟ್ಟುಕೊಂಡಿದ್ದ ವ್ಯಕ್ತಿಗಳ ಬಗ್ಗೆ ಕೊಟ್ಟಿರುವ ವಿವರಗಳು; ಅವನ ವಿಶಿಷ್ಟ ಕೈಬರಹ, ಭಾಷೆ, ಶೈಲಿ ಹಾಗೂ ಅಭಿರುಚಿಗಳು ಅವನ್ಯಾರೆಂಬುದನ್ನು ಬಯಲುಪಡಿಸುತ್ತವೆ. ಕೆಲವು ಸಲ ಒಂದು ದಾಖಲೆಯ ಮೂಲ ಕರ್ತೃವಿನ ಹೆಸರಿಗೆ ಬದಲಾಗಿ ತಪ್ಪಾದ ಹೆಸರನ್ನು ಸೇರಿಸಲಾಗಿರುತ್ತದೆ. ಆ ಕಾರಣಕ್ಕಾಗಿ ಅದನ್ನು ಅನುಪಯುಕ್ತವಾದುದೆಂಬುದಾಗಿ ನಿರ್ಣಯಿಸಬಾರದು. ಕರ್ತೃವಿನ ನಿಜನಾಮಧೇಯವನ್ನು ತಿಳಿಯುವುದಕ್ಕೆ ಸಾಧ್ಯವಾಗದಿದ್ದರೂ ಸಂಶೋಧಕನು ಆ ಕರ್ತೃವು ಎಲ್ಲಿ ಹಾಗೂ ಯಾವಾಗ ಇದ್ದನು ಹಾಗೂ ದಾಖಲೆಯನ್ನು ಸಿದ್ಧಪಡಿಸಿದನು ಮತ್ತು ಅವನಿಗೂ ಹಾಗೂ ತಾನು ವಿಮರ್ಶಿಸುತ್ತಿರುವ ಐತಿಹಾಸಿಕ ವಾಸ್ತವಾಂಶಗಳಿಗೂ ಇದ್ದ ಸಂಬಂಧವಾವುದು ಎಂಬುದನ್ನು ಅರಿತುಕೊಳ್ಳಬಹುದು. ಕೆಲವು ಸಲ ಅನಾಮಧೇಯ ಬರಹವನ್ನು ಇತರ ದಾಖಲೆಗಳೊಂದಿಗೆ ಹೋಲಿಸಿ ನೋಡಿದಾಗ ಅದರ ಕರ್ತೃವು ಯಾರೆಂಬುದನ್ನು ಪರೋಕ್ಷವಾಗಿ ತಿಳಿಸುವ ಸುಳಿವು ಕಂಡುಬರಬಹುದು. ಲೇಖಕನು ವಿಶ್ವಾಸಾರ್ಹವಾಗಿಲ್ಲದೇ ಹೋದರೆ ಅವನ ಬರಹವೂ ನಂಬಲರ್ಹವಾಗಿರುವುದಿಲ್ಲ. ಅವನ ಹೆಸರಿಗಿಂತ ಅವನ ವೈಯಕ್ತಿಕ ಲಕ್ಷಣಗಳು ಅವನು ವಿಶ್ವಾಸಾರ್ಹ ಅಥವಾ ಇಲ್ಲವೇ ಎಂಬುದನ್ನು ಹೆಚ್ಚು ಸ್ಪಷ್ಟಪಡಿಸುತ್ತವೆ.

ಮೂರನೆಯದಾಗಿ, ಈ ಕ್ರಮದ ಸಹಾಯದಿಂದ ವಿಷಯ ಸಂಗ್ರಹಣೆಗಾಗಿ ಕರ್ತೃವು ಉಪಯೊಗಿಸಿಕೊಂಡಿರುವ ಮೂಲಾಧಾರಗಳಾವುವು ಎಂಬುದನ್ನು ತಿಳಿದುಕೊಳ್ಳಬೇಕು; ಅವನ ಹೇಳಿಕೆಗಳಿಗೆ ಆಧಾರಗಳಾವುವು ಅಥವಾ ಅವುಗಳು ಕೇವಲ ಅವನ ಕಲ್ಪನೆಗಳೇ ಎಂಬುದನ್ನು ಪತ್ತೆ ಹಚ್ಚಬೇಕು; ಅವನು ವಿವರಿಸುವ ಘಟನೆಗಳನ್ನು ಅವನೇ ನೇರವಾಗಿ ಅವಲೋಕಿಸಿ ವಿವರಿಸಿರುವನೇ ಅಥವಾ ಹಿಂದಿನ ಬರಹಗಾರರ ಕೃತಿಗಳಿಂದ ವಿವರಗಳನ್ನು ತೆಗೆದುಕೊಂಡಿರುವನೇ ಎಂಬುದನ್ನು ನಿರ್ಧರಿಸಿ ಅವನೇ ಸ್ವಂತವಾಗಿ ವೀಕ್ಷಿಸಿ, ನೀಡಿರುವ ವಿವರಣೆಗಳನ್ನು ಇತರರಿಂದ ತೆಗೆದುಕೊಂಡಿರುವ ವಿಷಯಗಳಿಂದ ಬೇರ್ಪಡಿಸಬೇಕು. ತಾನು ಅಧ್ಯಯನ ಮಾಡುತ್ತಿರುವ ದಾಖಲೆಯು ಮೂಲಕೃತಿಯಾದರೆ ಆಗ ಸಂಶೋಧಕನು ಆ ಲೇಖಕನು ವಿವರಿಸಲಾಗಿರುವ ಘಟನೆಗಳ ಪ್ರತ್ಯಕ್ಷದರ್ಶಿಯಾಗಿದ್ದನೇ ಅಥವಾ ಪರೋಕ್ಷವಾಗಿ ಅವುಗಳ ಬಗ್ಗೆ ಮಾಹಿತಿಗಳನ್ನು ಪಡೆದಿದ್ದನೇ ಅಥವಾ ಮಾಹಿತಿಗಳನ್ನು ಒದಗಿಸಿದ್ದ ಪ್ರತ್ಯಕ್ಷದರ್ಶಿಗಳಾರು ಹಾಗೂ ಅವರುಗಳು ತಪ್ಪುಗಳನ್ನು ಮಾಡಿರುವ ಸಾಧ್ಯತೆ ಇರಲಿಲ್ಲವೇ ಮತ್ತು ಲೇಖಕನು ಮಾಹಿತಿಗಳಿಗಾಗಿ ಕೇವಲ ಸಂಪ್ರದಾಯವನ್ನು ಅವಲಂಬಿಸಿದ್ದನೇ ಎಂಬ ವಿಚಾರಗಳಿಗೆ ಗಮನ ಕೊಡಬೇಕಾಗುತ್ತದೆ. ಯಾವಾಗಲೂ ಪ್ರತ್ಯಕ್ಷದರ್ಶಿ ನೀಡಿರುವ ವಿವರಣೆಗಳು ಇತರರ ನಿರೂಪಣೆಗಳಿಗಿಂತ ಹೆಚ್ಚು ನಂಬಲರ್ಹವಾಗಿರುತ್ತವೆ. ಘಟನೆಗಳ ಸಮಕಾಲೀನ ಲೇಖಕನು ಕೊಟ್ಟಿರುವ ಸ್ಪಷ್ಟೀಕರಣಗಳು ಅನಂತರದ ಕಾಲಗಳಲ್ಲಿ ಬಂದ ಕರ್ತೃವು ನೀಡಿರುವ ವಿವರಗಳಿಗಿಂತ ಹೆಚ್ಚು ವಿಶ್ವಾಸಾರ್ಹವಾಗಿರುತ್ತವೆ ಎಂಬುದನ್ನು ಜ್ಞಾಪಕದಲ್ಲಿಡಬೇಕು. ಆದರೆ ಆ

ದಾಖಲೆಯು ಕೇವಲ ಒಂದು ನಕಲಾಗಿದ್ದರೆ ಅದು ಮೂಲಕೃತಿಯ ಪ್ರತಿಯೇ ಅಥವಾ ಇನ್ನೊಂದು ನಕಲಿನ ಪ್ರತಿಲಿಪಿಯೇ ಎಂಬುದನ್ನು ಕಂಡುಹಿಡಿಯಬೇಕು. ಅನೇಕ ಪ್ರತಿಗಳಲ್ಲಿ ಒಂದೇ ರೀತಿಯ ವಿವರಗಳಿದ್ದರೆ ಅವುಗಳ ಮೂಲ ಒಂದೇ ಆಗಿರಬೇಕು. ಅಥವಾ ವಿಭಿನ್ನವಾಗಿರುವ ಹಾಗೂ ವಿರೋಧಾತ್ಮಕವಾಗಿರುವ ವಿವರಣೆಗಳಿದ್ದರೆ ಅವುಗಳನ್ನು ಕಾಲಕ್ರಮಾನುಸಾರವಾಗಿ ಅಧ್ಯಯನ ಮಾಡಿ ಅವುಗಳಲ್ಲಿ ಅತ್ಯಂತ ಹಿಂದಿನ ದಾಖಲೆಯನ್ನು ಮೂಲಗ್ರಂಥಕ್ಕೆ ಅತ್ಯಂತ ಸಮೀಪವಾದುದೆಂಬುದಾಗಿ ನಿರ್ಧರಿಸಬಹುದು.

ನಾಲ್ಕನೆಯದಾಗಿ ಈ ಕಾರ್ಯ ರಈತಿಯ ಮೂಲಕ ಸಂಶೋಧಕನು ದಾಖಲೆಯು ಎಲ್ಲಿ ಸಿಕ್ಕಿತೆಂಬುದನ್ನು ಹಾಗೂ ಅದನ್ನು ಯಾವ ಸ್ಥಳದಲ್ಲಿ ಸಿದ್ಧಪಡಿಸಲಾಯಿತು ಎಂಬುದನ್ನು ತಿಳಿದುಕೊಳ್ಳಬೇಕು. ದಾಖಲೆಯ ಮೌಲ್ಯವನ್ನು ನಿರ್ಧರಿಸುವುದಕ್ಕೆ ಈ ತಿಳಿವಳಿಕೆ ಬೇಕೇ ಬೇಕಾಗುತ್ತದೆ. ಒಂದು ಸ್ಥಳದಲ್ಲಿ ಸಂಭವಿಸಿದ್ದ ಸಂಗತಿಯನ್ನು ಕುರಿತ ದಾಖಲೆಯನ್ನು ಮತ್ತೊಂದು ಸ್ಥಳದಲ್ಲಿ ಸಿದ್ಧಪಡಿಸಲಾಗಿದ್ದರೆ ಆಗ ಅದಕ್ಕೆ ಅಷ್ಟೇನು ಬೆಲೆ ಇರುವುದಿಲ್ಲ. ದಾಖಲೆಯನ್ನು ಯಾವ ಪರಿಸ್ಥಿತಿ ಹಾಗೂ ಪರಿಸರದಲ್ಲಿ ತಯಾರಿಸಲಾಯಿತು ಎಂಬುದನ್ನು ಅರಿತುಕೊಳ್ಳಬೇಕು. ದಾಖಲೆಯ ಸ್ಥಳಕ್ಕೆ ಸಂಬಂಧಿಸಿರುವ ತಿಳಿವಳಿಕೆಯಿಂದ ಅದರ ಕರ್ತೃವಾರು ಹಾಗೂ ಅವನ ಪರಿಸರ ಹೇಗಿದ್ದಿತು ಎಂಬುದನ್ನು ಅರ್ಥಮಾಡಿಕೊಳ್ಳುವುದು ಸುಲಭವಾಗುತ್ತದೆ.

ಐದನೆಯದಾಗಿ ಈ ಕ್ರಮವನ್ನು ಬಳಸಿ ಸಂಶೋಧಕನು ದಾಖಲೆಯ ಕಾಲವನ್ನೂ ಸಹ ಗೊತ್ತು ಮಾಡಿಕೊಳ್ಳಬೇಕು. ಇಂದಿನ ಗ್ರಂಥಗಳಲ್ಲಿ ಪ್ರಕಟಣೆಯ ವರ್ಷ, ಪ್ರಕಾಶಕರ ಹೆಸರು ಮುಂತಾದ ಖಚಿತವಾಗಿರುವ ಸೂಚನೆಗಳು ಸ್ಪಷ್ಟವಾಗಿರುವುದನ್ನು ಕಾಣಬಹುದು. ಆದರೆ ಹಿಂದಿನ ದಾಖಲೆಗಳಲ್ಲಿ ಈ ಎಲ್ಲಾ ನಿರ್ದಿಷ್ಟ ವಿವರಗಳು ಇಲ್ಲದಿರಬಹುದು. ಅಗ ಅನ್ವೇಷಕನು ಅದರಲ್ಲಿ ಬಳಸಲಾಗಿರುವ ಭಾಷೆ, ವಿವರಿಸಲಾಗಿರುವ ಘಟನೆ ಇತ್ಯಾದಿ ಅಂಶಗಳ ಆಧಾರದ ಮೇಲೆ ಸಾಧ್ಯವಾದಷ್ಟರ ಮಟ್ಟಿಗೆ ಅದನ್ನು ಬರೆದ ದಿನ, ತಿಂಗಳು ಹಾಗೂ ವರ್ಷವನ್ನು ನಿಖರವಾಗಿ ತಿಳಿದುಕೊಳ್ಳಲು ಯತ್ನಿಸಬೇಕು. ಘಟನೆಯು ಸಂಭವಿಸಿದ್ದ ಸ್ಥಳ ಹಾಗೂ ಕಾಲದಲ್ಲಿದ್ದು ಅದರಲ್ಲಿ ಭಾಗವಹಿಸಿದ್ದ ವ್ಯಕ್ತಿಯು ರಚಿಸಿರುವ ಸಮಕಾಲೀನ ದಾಖಲೆಯಲ್ಲಿ ಶ್ರೇಷ್ಠ ವಿಷಯ ಸಾಮಗ್ರಿಗಳನ್ನು ನೋಡಬಹುದು.

ಆದ್ದರಿಂದ ಒಂದು ದಾಖಲೆಯ ಸಾಮಾನ್ಯ ವಿಷಯಗಳ ಆಧಾರದ ಮೇಲೆ ಅದರ ನಿರ್ದಿಷ್ಟ ಕಾಲವನ್ನು ನಿರ್ಧರಿಸುವುದಕ್ಕೆ ಪ್ರಯತ್ನಿಸಬೇಕು. ನಡೆದ ಯಾವುದಾದರೂ ಪ್ರಸಿದ್ಧ ಘಟನೆಯ ಬಗ್ಗೆ ಅದರಲ್ಲಿ ಉಲ್ಲೇಖವಿದ್ದರೆ ಅದನ್ನು ಆ ಘಟನೆಯು ಸಂಭವಿಸಿದ ನಂತರ ಬರೆದಿರಬೇಕು ಎಂಬುದಾಗಿ ಅದರ ಉಲ್ಲೆಖವಿಲ್ಲದಿದ್ದರೆ ಅದನ್ನು ಆ ಸಂಭವಕ್ಕೆ ಮೊದಲು ಸಿದ್ಧಪಡಿಸಿದ್ದಿರಬೇಕು ಎಂಬುದಾಗಿ ಊಹಿಸಬಹುದು. ಆದರೆ ಈ ರೀತಿಯ ಊಹೆಗಳು ಯಾವಾಗಲೂ ನಂಬಲರ್ಹವಾಗಿರುವುದಿಲ್ಲ. ಕಾರಣ ಆ ದಾಖಲೆಯ ಕರ್ತೃವು ಆ ಘಟನೆಯನ್ನು ಉಲ್ಲೇಖಿಸಬೇಕಾಗಿರಲಿಲ್ಲ ಅಥವ ಅದನ್ನು ಬೇಕು ಬೇಕೆಂದೇ ಬಿಟ್ಟಿರಬಹುದು. ಕೆಲವು ಸಲ ಎಷ್ಟೇ ಪ್ರಯತ್ನಿಸಿದರೂ ಒಂದು ಸಂಗತಿಯು ಎರಡು ನಿರ್ದಿಷ್ಟ ಕಾಲಗಳ ನಡುವಿನ ಸಮಯದಲ್ಲಿ ಯಾವಾಗಲೋ ಸಂಭವಿಸಿದ್ದಿರಬೇಕು ಎಂಬುದಾಗಿ ಮಾತ್ರ ಅನುಮಾನಿಸಬಹುದು. ಆದರೂ ಒಂದು ನಿರ್ದಿಷ್ಟ ಘಟನೆಯ ಕಾಲವನ್ನು ಖಚಿತವಾಗಿ ನಿಶ್ಚಯಿಸಲು ಸರ್ವ ಪ್ರಯತ್ನಗಳನ್ನು ಮಾಡಬೇಕು.

ರಿನನ್ ಒಂದು ದಾಖಲೆಯ ಕಾಲವನ್ನು ನಿಖರವಾಗಿ ನಿರ್ಧರಿಸಬೇಕಾದರೆ ಬಾಹ್ಯಸೂಚಿಗಳನ್ನು ಅಂದರೆ ಬೇರೆಡೆಯಲ್ಲಿರುವ ಅದರ ಉದ್ಧರಣಗಳನ್ನು ಮತ್ತು ಆಂತರಿಕ ಸೂಚಿಗಳನ್ನು ಅಂದರೆ ಅದರ ವಿಷಯ ಹಾಗೂ ಸ್ವರೂಪ, ಶೈಲಿ ಇತ್ಯಾದಿಗಳಿಗಿರುವ ಪರಸ್ಪರ ಸಂಬಂಧಗಳನ್ನು ಬಹಳ ಎಚ್ಚರಿಕೆಯಿಂದ ಅಧ್ಯಯನ ಮಾಡಬೇಕು ಎಂಬುದಾಗಿ ಹೇಳಿದನು. ಒಂದು ಐತಿಹಾಸಿಕ ಘಟನೆಗೆ ಸಂಬಂಧಿಸಿಂತೆ ಮೂರು ಕಾಲಬಿಂದುಗಳನ್ನು ಗುರುತಿಸಬಹುದು.

ಅಂದರೆ, ಮೊದಲು ಹೇಗೆ ಆ ದಾಖಲೆಯನ್ನು ಸಿದ್ಧಪಡಿಸಲಾಯಿತು ಎಂಬುದನ್ನು ತಿಳಿದುಕೊಳ್ಳಬೇಕು. ಅದನ್ನು ಬರೆಯುವುದಕ್ಕಾಗಿ ಲೇಖಕನು ಬಳಸಿಕೊಂಡಿದ್ದ ಮೂಲಾಧಾರಗಳ ಬಗ್ಗೆ ಅನ್ವೇಷಣೆ ನಡೆಸುವುದರ ಮೂಲಕ ಇದನ್ನು ಅರಿತುಕೊಳ್ಳುವುದು ಸಾಧ್ಯವಾಗುತ್ತದೆ. ಎರಡನೆಯದಾಗಿ, ಆ ದಾಖಲೆಯ ಸ್ವರೂಪ ಎಂತಹುದು, ಅದು ಮೂಲಕೃತಿಯೇ ಅಥವಾ ಕೇವಲ ಅದರ ಒಂದು ನಕಲೇ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಯಥಾರ್ಥವಾಗಿರುವಂತೆ ದಾಖಲೆಯಲ್ಲೂ ಸಹ ಸುಳ್ಳು ಪಾಠಾಂತರಗಳಿರಬಹುದು. ಅವುಗಳು ಸಂಶೋಧಕನು ಅಡ್ಡದಾರಿಯನ್ನು ಹಿಡಿಯುವಂತೆ ಮಾಡಬಹುದು. ಆದ್ದರಿಂದ ಅವನು ಅವುಗಳನ್ನು ತೆಗೆದುಹಾಕಿ ಯಥಾರ್ಥವಾದ ಮೂಲ ಪಾಠಾಂತರಗಳನ್ನು ಅರಿತುಕೊಳ್ಳಬೇಕು. ಇದು ಗ್ರಂಥಪಾಠದ ವಿಮರ್ಶೆಯಿಂದ ಸಾಧ್ಯ. ಇದು ಎಂತಹ ಜಟಿಲವಾದ ಪ್ರಕ್ರಿಯೆಯಾಗಿದೆ ಎಂದರೆ ಇತಿಹಾಸದ ಕೆಲವು ಕ್ಷೇತ್ರಗಳಲ್ಲಿ ಪ್ರವೀಣರು ತಲೆಯೆತ್ತಿಕೊಂಡಿದ್ದಾರೆ ಮತ್ತು ಅನ್ವೇಷಕರಿಗೆ ಯಥಾರ್ಥವಾದ ದಾಖಲೆ ಹಾಗೂ ಶುದ್ಧ ಪಾಠಾಂತರಗಳನ್ನು ಒದಗಿಸುವುದೇ ಅವರ ಕಾರ್ಯ. ಆದರೂ ಸಂಶೋಧಕನು ತಾನೇ ಗ್ರಂಥಪಾಠಗಳನ್ನು ಅರ್ಥಮಾಡಿಕೊಂಡು ವಿಮರ್ಶೆ ಮಾಡಬೇಕು ಹಾಗೂ ಸದಾ ಜಾಗರೂಕನಾಗಿರಬೇಕು. ಮೂಲ ದಾಖಲೆಯನ್ನು ಎಚ್ಚರಿಕೆಯಿಲ್ಲದೆ ನಕಲು ಮಾಡುವಾಗ ಅನೇಕ ತಪ್ಪುಗಳು ಉಂಟಾಗುವ ಸಾಧ್ಯತೆ ಉಂಟು. ಆಗ ಅನ್ವೇಷಕನು ತಾನು ಬಳಸುತ್ತಿರುವ ಪ್ರತಿಯನ್ನು ಮೂಲಕೃತಿಯೊಂದಿಗೆ ಹೋಲಿಸಿ ನೋಡಲು ಯತ್ನಿಸಬೇಕು. ಅದೇ ಸುರಕ್ಷಿತವಾದ ತುಲನಾಕ್ರಮ (Collation).

ಕೆಲವು ಸಲ ಮೂಲ ಒಂದೇ ಆಗಿದ್ದರೂ ಒಂದೇ ರೀತಿಯಲ್ಲಿರದ ನಕಲುಗಳು ಸಿಕ್ಕಬಹುದು. ಆಗ ಸಂಶೋಧಕನು ವಿಭಿನ್ನವಾಗಿರುವ ವಿವರಗಳನ್ನು ಒಳಗೊಂಡಿರುವ ಪ್ರತಿಗಳಿಗಿರುವ ಪರಸ್ಪರ ಸಂಬಂಧವನ್ನು ನಿರ್ಧರಿಸುವುದಕ್ಕೆ ಯತ್ನಿಸಬೇಕು. 'ಕ' ಎಂಬುದು ಕಳೆದುಹೋಗಿರುವ ಮೂಲಕೃತಿಯಾಗಿದ್ದರೆ, 'ಖ' ಮತ್ತು 'ಗ' ಎಂಬುವು ಅದರ ಸ್ವತಂತ್ರವಾದ ಪ್ರತಿಗಳಾಗಿರಬಹುದು ಮತ್ತು 'ಘ' ಎಂಬುದು 'ಖ'ದ ನಕಲಾಗಿರಬಹುದು ಅಥವಾ ಅದು ಭಾಗಶಃ 'ಕ' ದ ಮತ್ತು ಭಾಗಶಃ 'ಗ'ದ ಪ್ರತಿಯಾಗಿರಬಹುದು. ಅದರಲ್ಲಿ 'ಗ' ನಲ್ಲಿರುವ ದೋಷಗಳಲ್ಲದೆ ಹೊಸ ತಪ್ಪುಗಳೂ ಇರಬಹುದು. ಆಗ ಅನ್ವೇಷಕನು ಸರ್ವಸಮವಾಗಿರುವ ಪ್ರತಿಗಳಲ್ಲಿ ಒಂದನ್ನು ಇಟ್ಟುಕೊಂಡು ಮಿಕ್ಕವುಗಳನ್ನು ತೆಗೆದುಹಾಕಬೇಕು. ಈ ತರಹದ ವರ್ಜನಾ ಪ್ರಕ್ರಿಯೆಯನ್ನು ಮುಂದುವರಿಸಿ ಸ್ವತಂತ್ರವಾದ ಪ್ರತಿಗಳನ್ನು ಪತ್ತೆ ಹಚ್ಚಿ, ಅವುಗಳ ವಿಭಿನ್ನ ಪಾಠಾಂತರಗಳನ್ನು ಹೋಲಿಸಿ, ಪರಿಶೀಲಿಸಿ, ಮೂಲ ಪಾಠಾಂತರವನ್ನು ಕಂಡುಹಿಡಿದು ಕೊಳ್ಳಬೇಕು. ವಿಭಿನ್ನ ಪಾಠಾಂತರಗಳಿಲ್ಲದೆ ಇರುವ ಒಂದೇ ಪಾಠಾಂತರವೂ ಸಂದೇಹಾಸ್ಪದವಾಗಿದ್ದಾಗ ಅನ್ವೇಷಕನು ಊಹಾತ್ಮಕ ತಿದ್ದುಪಡಿ ಕ್ರಮವನ್ನು

ಬಳಸಿ ಅರ್ಥಹೀನ ಪದಗಳನ್ನು ಬಿಟ್ಟು ಸಂದರ್ಭಾನುಸಾರವಾಗಿ ತಿದ್ದುಪಡಿಗಳನ್ನು ಮಾಡಬಹುದು. ಆಗ ಅವನು ಬಹು ಎಚ್ಚರಿಕೆಯಿಂದ ನಿಧಾನವಾಗಿ ಮುಂದುವರಿಯಬೇಕು ಮತ್ತು ತಾನು ಮಾಡುವ ಪರಿಷ್ಕರಣಗಳನ್ನು ಕಂಸದಲ್ಲಿಡುವುದು ಒಳ್ಳೆಯದು.

ಬಾಹ್ಯ ವಿಮರ್ಶೆಯಲ್ಲಿ ವಸ್ತುನಿಷ್ಠ ಹಾಗೂ ವ್ಯಕ್ತಿನಿಷ್ಠವಾದ ಎರಡು ರೀತಿಯ ಅಪಾಯಗಳಿರುತ್ತವೆ. ಪೂರ್ಣವಾದ ಅಥವಾ ಆಂಶಿಕವಾದ ಸುಳ್ಳು ನಿರೂಪಣೆಯೇ ವಸ್ತುನಿಷ್ಠ ಅಪಾಯ. ಪೂರ್ಣವಾಗಿರುವ ಸುಳ್ಳು ನಿರೂಪಣೆ ಎಂದರೆ ಕೃತಿಯನ್ನು ಬರೆಯದೇ ಇರುವವನನ್ನೇ ಒಂದು ಗ್ರಂಥದ ಕರ್ತೃ ಎಂಬುದಾಗಿ ಸೂಚಿಸುವುದು ಎಂದರ್ಥ. ಆಗ ಸಂಶೋಧಕನು ಆ ಕೃತಿಯ ಬಾಹ್ಯ ಲಕ್ಷಣಗಳನ್ನು ನಂತರ ಅದರ ವಿಷಯಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು. ಕಾರಣ ಅನೇಕ ಸಲ ಬರಹಗಾರರು ಅನಭಿಜ್ಞತೆಯಿಂದ ಅನಂತರದ ಕಾಲಗಳಲ್ಲಿ ತಲೆದೋರಿದ್ದ ವ್ಯಕ್ತಿ ಹಾಗೂ ಘಟನೆಗಳನ್ನು ವಿವರಿಸಿರುತ್ತಾರೆ. ಇದರಿಂದ ಅವರ ಕೃತಿಯು ಸುಳ್ಳು ಸೃಷ್ಟನೆಯಾಗಿದೆ ಎಂಬ ಗುಟ್ಟು ರಟ್ಟಾಗುತ್ತದೆ. ನಂತರ ಅದನ್ನು ಅದೇ ಕಾಲ ಹಾಗೂ ಸ್ಥಳಕ್ಕೆ ಸಂಬಂಧಿಸಿರುವ ಇತರ ದಾಖಲೆಗಳೊಂದಿಗೆ ಹೋಲಿಸಿ ಅವುಗಳಲ್ಲಿರುವ ವಿಷಯಗಳಲ್ಲಿ ಸಾಮ್ಯವಿದೆಯೇ ಎಂಬುದನ್ನು ಪರೀಕ್ಷಿಸಬೇಕು. ಆಂಶಿಕ ಸುಳ್ಳು ನಿರೂಪಣೆ ಎಂದರೆ ಹೊಸ ವಿಷಯಗಳನ್ನು ಮಧ್ಯೆ ಸೇರಿಸಿಬಿಡುವುದು ಅಥವಾ ಇರುವ ವಿಚಾರಗಳನ್ನು ಬದಲಾಯಿಸುವುದು ಅಥವಾ ಬಿಟ್ಟುಬಿಡುವುದು ಎಂದಾಗುತ್ತದೆ. ಇದು ಹೆಚ್ಚು ಅಪಾಯಕಾರಿಯಾದುದು. ಒಂದು ಹೊಳೆಯ ನೀರಿನ ಬಣ್ಣ ಮಂಕಾಗಿರುವುದಕ್ಕೆ ಕಾರಣ ಅದರ ತಳದಲ್ಲಿರುವ ಮಣ್ಣಲ್ಲ, ನೀರಿನಲ್ಲಿರುವ ಮಾಲಿನ್ಯ. ಅದೇ ರೀತಿ ಒಂದು ಕೃತಿಯು ಖೋಟಾ ಎನಿಸುವುದಕ್ಕೆ ಕಾರಣ ಆಂಶಿಕ ಸುಳ್ಳು ನಿರೂಪಣೆಯೇ.

ಮಧ್ಯಯುಗಗಳಲ್ಲಿ ದಾಖಲೆಗಳನ್ನು ಪ್ರತಿ ಮಾಡುತ್ತಿದ್ದವರು ಮೂಲಕೃತಿಗಳಲ್ಲಿ ಅಂಚಿನಲ್ಲಿ ಬರೆಯಲಾಗಿದ್ದ ವ್ಯಾಖ್ಯಾನಗಳನ್ನೂ ಸಹ ಪ್ರಧಾನ ಗ್ರಂಥಪಾಠಗಳಿವೆ ಸೇರಿಸಿ ನಕಲು ಮಾಡುತ್ತಿದ್ದರು. ಅನೇಕ ಪುರಾತನ ದಾಖಲೆಗಳ ಮೂಲ ಪ್ರತಿಗಳು ಹಾಳಾಗಿಹೋಗಿವೆ; ಅವುಗಳ ಪ್ರತಿಗಳು ಮಾತ್ರ ಇವೆ ಮತ್ತು ಪ್ರತಿಗಳನ್ನು ಪುನಃ ಪುನಃ ನಕಲು ಮಾಡಲಾಗಿದೆ. ಮೇಲಿಂದ ಮೇಲೆ ನಕಲು ಮಾಡುವಾಗ ತಪ್ಪಾದ ಅಕ್ಷರ ಅಂಯೋಜನೆ, ಕೆಟ್ಟ ಪದ ಪ್ರಯೋಗ ಮುಂತಾಗಿ ಅನೇಕ ತಪ್ಪುಗಳಾಗುವ ಸಾಧ್ಯತೆ ಹೆಚ್ಚು. ಪಾಠಗ್ರಂಥದ ತಪ್ಪುಗಳನ್ನು ಕಂಡುಹಿಡಿಯಬೇಕಾದರೆ ಸಂಶೋಧಕನಿಗೆ ಭಾಷಾಶಾಸ್ತ್ರಜ್ಞನ ಸಹಾಯ ಹಾಗೂ ಮಾರ್ಗದರ್ಶನ ಅವಶ್ಯಕವಾಗುತ್ತದೆ.

ಸಂಕ್ಷೇಪದಲ್ಲಿ ಬಾಹ್ಯ ವಿಮರ್ಶಾಕ್ರಮವು ಲೇಖಕನು ವಿಷಯಗಳನ್ನು ಸರಿಯಾಗಿ ತಿಳಿದುಕೊಂಡಿದ್ದನೇ ಎಂಬುದನ್ನು ಕಂಡುಹಿಡಿಯುವುದಕ್ಕೆ ಮತ್ತು ಯಥಾರ್ಥತೆಯನ್ನು ನಿರ್ಧರಿಸುವ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಂಶೋಧಕನಿಗೆ ನೆರವಾಗುತ್ತದೆ. ಈ ಹಂತದಲ್ಲಿ ದಾಖಲೆಯ ಲೇಖಕ, ಅವನು ಬಳಸಿಕೊಂಡಿದ್ದ ಮೂಲಾಧಾರ. ಈ ಕೃತಿಯ ಸ್ಥಳ ಹಾಗೂ ಕಾಲಕ್ಕೆ ಸಂಬಂಧಿಸಿರುವ ವಿವರಗಳನ್ನು ಪರೀಕ್ಷಿಸಲಾಗುತ್ತದೆ. ಬೇರೆ ಮಾತುಗಳಲ್ಲಿ ಹೇಳಬೇಕಾದರೆ ಇದು ವಿಷಯ ಸಾಮಗ್ರಿಗಳನ್ನು ಅರಸಿಯಾದ ಮೇಲೆ ಅವುಗಳ ಬಗ್ಗೆ ಕೆಲವು ಮುಖ್ಯವಾಗಿರುವ ವಿವರಗಳನ್ನು ತಿಳಿದುಕೊಳ್ಳುವುದಕ್ಕಾಗಿ ಮಾಡಲಾಗುವ

ಆರಂಭದ ಅಧ್ಯಯನ. ಒಂದು ಅಂಚೆ ಲಕೋಟೆಯು ನಮ್ಮ ಕೈಗೆ ಬಂದರೆ ಅದನ್ನು ಎಲ್ಲಿಂದ ಹಾಗೂ ಯಾವಾಗ ಕಳುಹಿಸಲಾಗಿದೆ ಎಂಬುದನ್ನು ತಿಳಿಯುವುದಕ್ಕಾಗಿ ಅದರ ಬಾಹ್ಯ ಅಂಶಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತೇವೆ. ಸಂಶೋಧಕನು ದಾಖಲೆಯಲ್ಲಿರುವ ಸಮಗ್ರವಾಗಿರುವ ಅಥವಾ ಆಂಶಿಕವಾಗಿರುವ ಸುಳ್ಳು ನಿರೂಪಣೆ ಹಾಗೂ ತಪ್ಪುಗಳ ಅಪಾಯವನ್ನು ಗುರುತಿಸಿ ಎಚ್ಚರಿಕೆಯನ್ನು ವಹಿಸಬೇಕು. ಮೋಸದ ವೇಷ ಹಾಗೂ ತಪ್ಪು ವಿವರಣೆಗಳನ್ನು ತೊಡೆದುಹಾಕಿ ಮಾನಸಿಕವಾಗಿ ಗ್ರಂಥಕರ್ತನನ್ನು ಮುಖಾಮುಖಿ ಭೇಟಿ ಮಾಡಿ, ಅವನು ದಾಖಲು ಮಾಡಿರುವ ಘಟನೆಗಳಿಗೆ ಸಮಕಾಲೀನನಾಗಿದ್ದನೇ ಅಥವಾ ಬರೆದಿರುವ ವಿಷಯಗಳನ್ನು ಪ್ರತ್ಯಕ್ಷದರ್ಶಿಯಾಗಿ ವೀಕ್ಷಿಸಿ ಅರ್ಥಮಾಡಿಕೊಂಡಿದ್ದನೇ, ಅಥವ ಬೇರೆಯವರಿಂದ ತಿಳಿದುಬಂದಿದ್ದ ಸಂಗತಿಗಳನ್ನು ಮಾತ್ರ ವಿವರಿಸಿರುವನೇ ಎಂಬುದನ್ನು ಸ್ಪಷ್ಟವಾಗಿ ಅರಿತುಕೊಳ್ಳಲು ಪ್ರಯತ್ನಿಸಬೇಕು. ಬಾಹ್ಯವಿಮರ್ಶಾ ಕ್ರಮವನ್ನು ಬಳಸುವಾಗ ಅವನಿಗೆ ಕಾಲ ಗಣನಶಾಸತ್ರ, ಪುರಾತತ್ತ್ವ ವಿಜ್ಞಾನ, ಪ್ರಾಚೀನ ಲಿಪಿಶಾಸ್ತ್ರ, ಶಾಸನ ವಿಜ್ಞಾನ ಇತ್ಯಾದಿಗಳ ಸಹಾಯ ಅಗತ್ಯ.

ಅವಶ್ಯಕ ಸಾಮಾನುಗಳನ್ನು ತಂದುಹಾಕಿ ಬಿಟ್ಟಾಕ್ಷಣ ಅವುಗಳೆಲ್ಲಾ ತಮ್ಮಷ್ಟಕ್ಕೆ ತಾವೇ ಪ್ರಯತ್ನವಿಲ್ಲದೆ ಒಂದು ಕಟ್ಟಡವಾಗಿ ರೂಪುಗೊಳ್ಳುವುದಿಲ್ಲ. ಅದೇ ರೀತಿ ಗತಕಾಲದ ಕಥೆಯನ್ನು ಯಥಾರ್ಥವಾಗಿ ಹೇಳುವುದಕ್ಕಾಗಿ ವಾಸ್ತವಾಂಶಗಳು ತಮ್ಮಷ್ಟಕ್ಕೆ ತಾವೇ ಕ್ರಮಬದ್ಧವಾದ ರೀತಿಯಲ್ಲಿ ಸಂಯೋಜಿತವಾಗಿ ಇತಿಹಾಸವಾಗಿ ರೂಪುಗೊಳ್ಳುವುದಿಲ್ಲ. ಅದೇ ರೀತಿ ಗತಕಾಲದ ಕಥೆಯನ್ನು ಯಥಾರ್ಥವಾಗಿ ಹೇಳುವುದಕ್ಕಾಗಿ ವಾಸ್ತವಾಂಶಗಳು ತಮ್ಮಷ್ಟಕ್ಕೆ ತಾವೇ ಕ್ರಮಬದ್ಧವಾದ ರೀತಿಯಲ್ಲಿ ಸಂಯೋಜಿತವಾಗಿ ಇತಿಹಾಸವಾಗಿ ರೂಪುಗೊಳ್ಳುವುದಿಲ್ಲ. ಕಥನವು ಅರ್ಥಗರ್ಭಿತವಾಗಬೇಕಾದರೆ ಬಹಳವಾಗಿ ಪರ್ಯಾಲೋಚನೆ ಮಾಡಬೇಕಾದುದು ಮತ್ತು ಅರ್ಥ ವಿವರಣ ಸಾಮರ್ಥ್ಯಗಳನ್ನು ಬೆಳೆಸಿಕೊಂಡು ಸರಿಯಾಗಿ ಬಳಸಬೇಕಾದುದು ಅವಶ್ಯಕ. ಆದ್ದರಿಂದ ಬಾಹ್ಯವಿಮರ್ಶೆಯು ಒಂದು ಬಹು ಉಪಯುಕ್ತವಾದ ಸಾಧನವಾಗಿದೆ.

ನಂತರ ಒಬ್ಬ ಲೇಖಕನು ಯಾವ ಉದ್ದೇಶ ಹಾಗೂ ಪ್ರೇರಣೆಗಳ ಕಾರಣ ಆ ದಾಖಲೆಯನ್ನು ಸಿದ್ಧಪಡಿಸಲು ಪ್ರಯತ್ನಿಸಿದನು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಗ್ರಂಥಾಲಯಕ್ಕೆ ಹೋದಾಗ ನಾವು ಅನೇಕ ಸಲ ಬೇರೆಬೇರೆ ಕೃತಿಗಳ ಲೇಖಕರು, ಶಿರೋನಾಮೆಗಳು, ಪ್ರಕಾಶನದ ಹೆಸರು, ಪ್ರಕಟವಾದ ಸ್ಥಳ ಹಾಗೂ ವರ್ಷ ಇತ್ಯಾದಿ ವಿಷಯಗಳನ್ನು ತಿಳಿದುಕೊಳ್ಳುವುದಕ್ಕಾಗಿ ಅವುಗಳ ರಕ್ಷಾವರಣ ಪುಟಗಳ ಮೇಲೆ ಕಣ್ಣೋಡಿಸುತ್ತೇವೆ. ಇದರಿಂದ ನಮಗೆ ಅವುಗಳ ಉಪಯುಕ್ತತೆಯ ಬಗ್ಗೆ ಸ್ಥೂಲವಾಗಿ ತಿಳಿದುಕೊಳ್ಳುವುದು ಸಾಧ್ಯವಾಗುತ್ತದೆ. ನಾವು ಪುಸ್ತಕಗಳನ್ನು ಗ್ರಂಥಭಂಡಾರದಿಂದ ಎರವು ತೆಗೆದುಕೊಂಡು ಬಂದಾಗ ಅವುಗಳನ್ನು ಬಹು ಗಮನವಿಟ್ಟು ಸೂಕ್ಷ್ಮವಾದ ರೀತಿಯಲ್ಲಿ ಹಾಗೂ ಕೂಲಂಕುಷವಾಗಿ ಓದಿ ಪರಾಮರ್ಶಿಸುತ್ತೇವೆ. ಹೀಗೆ ಮೇಲ್ಮಟ್ಟದ ವಿಮರ್ಶೆಯ ಕಾರ್ಯ ಆರಂಭವಾಗುತ್ತದೆ.

## 7.3 ಆಂತರಿಕ ವಿಮರ್ಶೆ

ಬಾಹ್ಯ ವಿಮರ್ಶೆಯು ಆಂತರಿಕ ವಿಮರ್ಶೆಗೆ ಹಾದಿಯನ್ನು ಸುಗಮಪಡಿಸಿಕೊಡುತ್ತದೆ. ಬಾಹ್ಯ ವಿಮರ್ಶೆಯಿಂದ ತಿಳಿದುಬಂದ ವಿವರಗಳ ಬೆಂಬಲದಲ್ಲಿ ದಾಖಲೆಯಲ್ಲಿರುವ ಹೇಳಿಕೆಗಳ ಅರ್ಥ ಹಾಗೂ ವಿಶ್ವಾಸಾರ್ಹತೆಯನ್ನು ನಿರ್ಧರಿಸಲು ಸಂಶೋಧಕನು ಈ ಕ್ರಮವನ್ನು ಬಳಸುತ್ತಾನೆ. ಆದ್ದರಿಂದ ಇಲ್ಲಿ ದಾಖಲೆಗೆ ಬದಲಾಗಿ ಅದರಲ್ಲಿರುವ ಹೇಳಿಕೆಗಳ ಪರಿಶೀಲನೆ ಮುಖ್ಯವಾಗುತ್ತದೆ. ವ್ಯಕ್ತಿಯು ಒಂದು ಅಂಚೆ ಪತ್ರ ತನ್ನ ಕೈಸೇರಿದ ತಕ್ಷಣ ಅದನ್ನು ಯಾರು, ಎಲ್ಲಿಂದ, ಯಾವಾಗ ಕಳುಹಿಸಿದ್ದಾರೆ ಎಂಬ ಬಾಹ್ಯ ವಿಷಯಗಳನ್ನು ತಿಳಿದ ನಂತರ ಅಷ್ಟಕ್ಕೇ ತೃಪ್ತನಾಗದೆ, ಕುತೂಹಲದಿಂದ ಕೂಡಿ, ಲಕೋಟೆಯನ್ನು ತೆರೆದು ಅದರಲ್ಲಿರುವ ವಿಷಯಗಳನ್ನು ಆಸಕ್ತಿಯಿಂದ ಓದುವ ರೀತಿಯಲ್ಲಿ, ಸಂಶೋಧಕನೂ ಸಹ ದಾಖಲೆಯ ಬಾಹ್ಯ ಲಕ್ಷಣಗಳನ್ನು ಪರಿಶೀಲಿಸಿದ ನಂತರ ಅದಲ್ಲಿರುವ ವಿಷಯಗಳು ನಂಬಲರ್ಹವಾದುವೇ ಅಥವಾ ಇಲ್ಲವೇ ಎಂಬುದನ್ನು ತಿಳಿದುಕೊಳ್ಳುವ ಕಾರ್ಯದತ್ತ ಗಮನವನ್ನು ಹರಿಸುತ್ತಾನೆ. ನಮ್ಮ ಶರೀರದ ಯಾವ ಭಾಗದಲ್ಲಾದರೂ ಸ್ವಲ್ಪ ನೋವಾದರೆ ನಾವು ಆ ಭಾಗಕ್ಕೆ ವೇದನಹಾರಿ ಮುಲಾಮನ್ನು ಹಚ್ಚುತ್ತೇವೆ. ಆದರೆ ದೇಹದ ಒಳಭಾಗಗಳಲ್ಲಿ ಏನಾದರೂ ತೊಂದರೆಯಾಗಿ ಶಾರೀರಿಕ ಸಮತೂಕ ತಪ್ಪುವಂತಾದರೆ ನಾವು ತಕ್ಷಣ ಗಾಬರಿಯಿಂದ ನುರಿತ ವೈದ್ಯರತ್ತ ಧಾವಿಸಿ ಹೋಗುತ್ತೇವೆ ಮತ್ತು ಅವರು ನೀಡುವ ಸಲಹೆಗಳನ್ನು ಜಾಗರೂಕತೆಯಿಂದ ಚಾಚೂ ತಪ್ಪದಂತೆ ಅನುಸರಿಸುತ್ತೇವೆ. ನಂಬಿಕೆಗೆ ಅನರ್ಹವಾಗಿರುವುದು ಎಷ್ಟು ಎಂಬುದನ್ನು ತಿಳಿಯುವ ಉದ್ದೇಶದಿಂದ ಆ ವಿಷಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವಾಗ ಅತ್ಯಂತ ಎಚ್ಚರಿಕೆಯನ್ನು ವಹಿಸಬೇಕು. ಅದಕ್ಕಾಗಿ ಅವನು ಈ ಸಂಶೋಧನಾ ಕಾರ್ಯರೀತಿಯನ್ನು ಬಳಸಿಕೊಳ್ಳಬೇಕಾಗುತ್ತದೆ. ಇದನ್ನು ಅರ್ಥ ವಿವರಣ ವಿಮರ್ಶೆ ಎಂಬುದಾಗಿಯೂ ಸಹ ಕರೆಯಲಾಗುತ್ತದೆ. ಕಾರಣ ಒಂದು ದಾಖಲೆಯಲ್ಲಿರುವ ವಿಷಯಗಳು ಸತ್ಯವಾದುವು ಎಂಬುದಾಗಿ ಒಪ್ಪಿಕೊಳ್ಳಬಹುದೇ ಅಥವಾ ಅಸತ್ಯ–ವಾದುವು ಎಂಬುದಾಗಿ ನಿರಾಕರಿಸಬಹುದೇ ಎಂಬುದನ್ನು ಕಂಡುಹಿಡಿದು ನಿರ್ಧರಿಸುವುದೇ ಇದರ ಪ್ರಧಾನ ಕಾರ್ಯ. ಈ ಪರಿಶೀಲನಾ ಕೆಲಸವು ಮೂಲಭೂತವಾದುದು ಹಾಗೂ ಮಹತ್ವಪೂರಿತವಾದುದು ಆಗಿರುವುದರಿಮದ ಇದನ್ನು ಮೇಲ್ಮಟ್ಟದ ವಿಮರ್ಶೆ ಎಂಬುದಾಗಿ ವಿವರಿಸಲಾಗಿದೆ. ಇದರ ಫಲವಾಗಿ ಬರುವ ಅರಿವಿನ ಆಧಾರದ ಮೇಲೆ ಐತಿಹಾಸಿಕ ಕಥನವನ್ನು ಪುನರ್ರಚಿಸಲಾಗುತ್ತದೆಯಾದ್ದರಿಂದ ಇದು ಸಮಗ್ರ ಐತಿಹಾಸಿಕ ವಿಧಾನದ ಆಧಾರಸ್ತಂಭವಾಗಿದೆ, ಅಂದರೆ ಪ್ರಧಾನಾಂಶವಾಗಿದೆ.

ಹೆಸರೇ ಸೂಚಿಸುವಂತೆ, ಆಂತರಿಕ ವಿಮರ್ಶೆಯಲ್ಲಿ ಮುಖ್ಯವಾಗಿರುವುದು ವಿಮರ್ಶಾತ್ಮಕ ದೃಷ್ಟಿಕೋನ. ಇದರ ಆಧಾರದ ಮೇಲೆ ಸಂಶೋಧಕನು ತಾನು ವಿಚಾರ ಮಾಡುತ್ತಿರುವ ದಾಖಲೆಯಲ್ಲಿ ಯಾರ ಭಾವನೆಗಳನ್ನು ತಪ್ಪಾಗಿ ವಿವರಿಸಲಾಗಿದೆ ಎಂಬುದನ್ನು ವಿಶ್ಲೇಷಿಸುತ್ತಾನೆ. ವಿಮರ್ಶೆ ಮತ್ತು ಅರ್ಥ ವಿವರಣೆಗೆ ಮೂಲ ಬೇರು ವಿಶ್ಲೇಷಣೆ. ವಾಸ್ತವದಲ್ಲಿ ವಿಮರ್ಶೆ ಆರಂಭವಾಗುವುದು ವಿಶ್ಲೇಷಣೆಯಿಂದಲೇ, ವಿಶ್ಲೇಷಣಾ ತಂತ್ರವು ಸಮಗ್ರ ದಾಖಲೆಯನ್ನು ನಿರ್ದಿಷ್ಟ ಭಾಗಗಳಾಗಿ ವಿಂಗಡಿಸಿ, ವಿಭಿನ್ನ ಭಾವನೆಗಳನ್ನು ಪ್ರತ್ಯೇಕಿಸಿ, ಪ್ರತಿಭಾವನೆಯನ್ನು ಪ್ರತ್ಯೇಕವಾಗಿ ವಿಶ್ಲೇಷಿಸಿ, ವಿಮರ್ಶೆ ಎಂಬ ಮೂಸೆಯಲ್ಲಿ ಹಾಕಿ ಅಥವಾ ಒರೆಗಲ್ಲಿಗೆ ಹಚ್ಚಿ, ಅದು ಸತ್ಯದ ಪ್ರತಿಬಿಂಬವಾಗಿದೆಯೇ ಅಥವಾ ಅಸತ್ಯದ ಪ್ರತಿರೂಪವಾಗಿದೆಯೇ ಎಂಬುದನ್ನು ಪತ್ತೆಹಚ್ಚಲು

ಸಂಶೋಧಕನಿಗೆ ಬಹುವಾಗಿ ನೆರವಾಗುತ್ತದೆ. ವಿಶ್ಲೇಷಣೆ ಹಾಗೂ ವಿಮರ್ಶೆ ಎಂಬ ತಂತ್ರಗಳ ಸಹಾಯದಿಂದ ಅವನು ಪ್ರತಿಭಾವನೆಯ ಆಳವನ್ನು ಹೊಕ್ಕು, ಅದರ ನಿಜವಾದ ಸ್ವರೂಪ ಹಾಗೂ ಜಟಿಲವಾದ ಮುಖಗಳನ್ನೆಲ್ಲಾ ಸರಿಯಾಗಿ ಅರ್ಥಮಾಡಿ–ಕೊಂಡು ಅದರ ಬೆಲೆಯನ್ನು ನಿಷ್ಕೃಷ್ಟವಾಗಿ ತಿಳಿದು ಯಥಾರ್ಥವಾಗಿ ವಿಶದೀಕರಿಸಲು ಶಕ್ತನಾಗುತ್ತಾನೆ.

ಹರವಿನಲ್ಲಿ ಆಂತರಿಕ ವಿಮರ್ಶೆಯು ಬಾಹ್ಯ ವಿಮರ್ಶೆಗಿಂತ ಹೆಚ್ಚು ವ್ಯಾಪಕವೂ, ಸಂಕೀರ್ಣವೂ ಹಾಗೂ ವೈವಿಧ್ಯಮಯವೂ ಮತ್ತು ತಂತ್ರದಲ್ಲಿ ಹೆಚ್ಚು ಜಟಿಲವೂ ಆಗಿರುತ್ತದೆ. ಅನ್ವೇಷಣೆಯ ಅಪರಿಚಿತವಾದ ಕತ್ತಲು ಹಾದಿಯಲ್ಲಿ ಎಡವಿ ಬೀಳದೆ ಮುಂದುವರಿಯಬೇಕಾದರೆ ಸಂಶೋಧಕನಿಗೆ ಈ ಆಂತರಿಕ ವಿಮರ್ಶೆಯ ಕೈದೀಪ ಅತ್ಯಾವಶ್ಯಕ. ಕಾರಣ ಅವನು ಮಾಹಿತಿಗಳಿಗಾಗಿ ಗತಕಾಲದ ದಾಖಲೆಗಳನ್ನು ಅವಲಂಬಿಸಬೇಕಾಗುತ್ತದೆ. ಅವುಗಳಲ್ಲಿ ಕೆಲವನ್ನು ಯಾರೋ ಲೇಖಕರು ತಮ್ಮ ಅವಲೋಕನೆ ಅಥವಾ ಇತರರ ಅನುಭವದ ಆಧಾರದ ಮೇಲೆ ನಿಜವನ್ನು ತಿಳಿಯದೇ ರಚಿಸಿರಬಹುದು. ಉದಾಹರಣೆಗೆ, ಗತಕಾಲದಲ್ಲಿ ರಾಜಾಸ್ಥಾನಗಳನ್ನು ಅಲಂಕರಿಸಿದ್ದ ಚರಿತ್ರ ಲೇಖಕರು ಬರೆದಿರುವ ವೃತ್ತಾಂತಗಳಲ್ಲಿ ಅವರವರ ದೊರೆಗಳನ್ನು ಅತೀವವಾಗಿ ಪ್ರಶಂಸಿಸಿ ಮುಗಿಲೆತ್ತರಕ್ಕೇರಿಸಿರುವುದನ್ನು ನೋಡಬಹುದು. ಕೆಲವರು ತಮ್ಮ ತಮ್ಮ ಪ್ರಭುಗಳ ವಿಶೇಷ ಗುಣ ಹಾಗೂ ಸಾದನೆಗಳನ್ನು ಮೆಚ್ಚಿ ನೀಡಿರುವ ಕಥನಗಳು ಅತ್ಯುಕ್ತಿಗಳಿಂದ ತುಂಬಿ ತುಳುಕುತ್ತಿರಬಹುದು. ಈ ಅತಿಶಯೋಕ್ತಿಗಳೆಂಬ ದಟ್ಟವಾಗಿರುವ ಮುಳ್ಳಿನ ಪೊದರುಗಳಲ್ಲಿ ನುಗ್ಗಿ ಅಲ್ಲಲ್ಲಿ ಅಡಗಿಕೊಂಡಿರುವ ಸತ್ಯ ಎಂಬ ಸುಂದರ–ಸುಮಧುರ ಸುಮಗಳನ್ನು ಪತ್ತೆಹಚ್ಚಿ ಪಡೆಯಲು ಪ್ರಯತ್ನಿಸಬೇಕಾಗುತ್ತದೆ. ರಾಜಾಸ್ಥಾನಗಳ ಇತಿಹಾಸಕಾರರು ಬರೆದಿರುವ ರಾಜರುಗಳ ಜೀವನಚರಿತ್ರೆಗಳಲ್ಲಿ ಎಷ್ಟರಮಟ್ಟಿಗೆ ಅವರವರ ವೈಯಕ್ತಿಕ ಮುನ್ನೊಲವುಗಳು ಸತ್ಯಾಂಶಗಳನ್ನು ಮರೆಮಾಚಿವೆ ಎಂಬುದನ್ನು ಪರೀಕ್ಷಿಸಿ ತಿಳಿದುಕೊಳ್ಳಬೇಕಾಗುತ್ತದೆ. ವಿದೇಶಿ ಯಾತ್ರಿಕರು ಹಾಗೂ ಪ್ರಯಾಣಿಕರು ಬರೆದಿರುವ ಪ್ರವಾಸ ಕಥನಗಳು ಸತ್ಯಾಂಶಗಳನ್ನು ಕಂಡುಹಿಡಿಯುವುದಕ್ಕಾಗಿ ಮಾಡಲಾಗುವ ಪ್ರಾಮಾಣಿಕ ಪ್ರಯತ್ನ ಅಥವಾ ವೈಯಕ್ತಿಕ ಅನುಭವಗಳಿಗಿಂತ ಹೆಚ್ಚಾಗಿ ಜನರ ಆಡಿಕೆ ಹಾಗೂ ಗಾಳಿಸುದ್ದಿಗಳ ಮೇಲೆ ಆಧಾರಿತವಾಗಿರುವುದರಿಂದ ಅವುಗಳನ್ನು ಬಳಸುವಾಗ ಹೆಚ್ಚು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಅದೇ ರೀತಿ ಭಾರತದ ಬಗ್ಗೆ ಇತಿಹಾಸಗಳನ್ನು ರಚಿಸುವಾಗ ಬ್ರಿಟಿಷ್ ಆಡಳಿತಗಾರರು, ಕಂಪನಿಯ ಅಧಿಕಾರಿಗಳು, ಸೇನಾಧಿಕಾರಿಗಳು ಪ್ರತ್ಯೇಕವಾದ ದೃಷ್ಟಿಕೋನವನ್ನು ಅಳವಡಿಸಿಕೊಂಡಿರುವುದರಿಂದ ಅವರ ಬರಹಗಳು ಪೂರ್ಣವಾಗಿ ನಿಷ್ಪಕ್ಷಪಾತವಾಗಿರುವ ಸಂಭವ ಕಡಿಮೆ. ಹೀಗೆ ಪ್ರತಿ ದಾಖಲೆಯಲ್ಲೂ ಅಸತ್ಯಾಂಶಗಳೆಂಬ ಮಣ್ಣು ಸತ್ಯಾಂಶಗಳೆಂಬ ಚಿನ್ನದ ಕಣಗಳೂ ಇರುತ್ತವೆಯಾದ್ದರಿಂದ ಅವುಗಳನ್ನು ಸರಿಯಾಗಿ ಜರಡಿಯಾಡಿ ಕಸವನ್ನೆಲ್ಲಾ ತೂರಿಬಿಟ್ಟು ಚಿನ್ನದ ಕಣಗಳನ್ನು ಮಾತ್ರ ಎಚ್ಚರಿಕೆಯಿಂದ ಸಂಗ್ರಹಿಸಿ ಬಳಸಿಕೊಳ್ಳಬೇಕು. ಈ ಕಷ್ಟಸಾಧ್ಯವಾದ ಕೆಲಸವನ್ನು ನಿರ್ವಹಿಸಬೇಕಾದರೆ ಸಂಶೋಧಕನಿಗೆ ಆಂತರಿಕ ವಿಮರ್ಶಾ ಕ್ರಮ ಅತ್ಯಾವಶ್ಯಕ.

ಈ ಕ್ರಮದಲ್ಲಿಅನ್ವೇಷಕನು ಮೊಟ್ಟಮೊದಲ ಕಾರ್ಯದಲ್ಲಿ ಮೂರು ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಮೊದಲು ಅವನು ತಾನು ಬಳಸುತ್ತಿರುವ ದಾಖಲೆಯು ಸತ್ಯವಾದುದೇ ಹಾಗೂ ಅದರ ಬೆಲೆ ಏನು ಎಂಬುದನ್ನು ತಿಳಿದುಕೊಳ್ಳಬೇಕು. ದಾಖಲೆಯ ಸತ್ಯಾಸತ್ಯತೆಗಳನ್ನು ಅರಿತುಕೊಳ್ಳಬೇಕಾದರೆ

ಮೊದಲು ಆ ಬರವಣಿಗೆಯ ಸ್ವರೂಪ, ಅಂದರೆ ಅದು ಗದ್ಯರೂಪದಲ್ಲಿದೆಯೇ ಅಥವಾ ಪದ್ಯಾತ್ಮಕವಾಗಿದೆಯೇ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಎರಡನೆಯದಾಗಿ, ಅದರ ಉದ್ದೇಶವೇನೆಂಬುದನ್ನು ಪತ್ತೆ ಹಚ್ಚಬೇಕು. ಆ ಲೇಖಕನ ಗುರಿಯು ವಿಜ್ಞಾನಿಯಂತೆ ವಾಸ್ತವಾಂಶಗಳನ್ನು ಖಚಿತವಾಗಿ ದಾಖಲು ಮಾಡುವುದೇ ಅಥವಾ ಮನದಲ್ಲಿ ಇದ್ದ ಅಭಿಪ್ರಾಯವನ್ನು ಸಮರ್ಥಿಸುವುದೇ ಎಂಬುದನ್ನು ತಿಳಿದುಕೊಳ್ಳಬೇಕು. ಉದಾಹರಣೆಗೆ, ಟ್ಯಾಸಿಟಸ್ ದೊಡ್ಡ ಇತಿಹಾಸಕಾರನಾಗಿದ್ದರೂ ಅವನು ರಾಜಕಾರಣಿಯ ಉದ್ದೇಶವನ್ನು ಹೊಂದಿದ್ದನು. ಅನೇಕರ ಸ್ವಂತ ಜೀವನ ಚರಿತ್ರೆಗಳಲ್ಲಿ ವಿಷಯಗಳನ್ನು ನಿಷ್ಪಕ್ಷಪಾತವಾದ ರೀತಿಯಲ್ಲಿ ತಿಳಿಸುವ ಉದ್ದೇಶ ಪ್ರಧಾನವಾಗಿರುವುದಿಲ್ಲ. ಆದ್ದರಿಂದ ಒಂದು ದಾಖಲೆಯನ್ನು ವಿಷಯಗಳ ಆಧಾರಗಳಾಗಿ ಸರಿಯಾಗಿ ಹಾಗೂ ಸಮರ್ಪಕವಾಗಿ ಬಳಸಿಕೊಳ್ಳಬೇಕಾದರೆ ಆ ಬರಹದ ಉದ್ದೇಶವನ್ನು ಸರಿಯಾಗಿ ಅರ್ಥಮಾಡಿಕೊಂಡಿರಬೇಕು. ಮೂರನೆಯದಾಗಿ, ಅದರ ಸ್ವರೂಪವನ್ನು ಅರಿತುಕೊಳ್ಳಬೇಕು. ಅದಕ್ಕಾಗಿ ಅದರಲ್ಲಿ ಲೇಖಕನು ಪದ, ವಾಕ್ಯ, ವಿರಾಮ, ಚಿಹ್ನೆ ಇತ್ಯಾದಿಗಳನ್ನು ಯಾವ ಅರ್ಥದಲ್ಲಿ ಉಪಯೋಗಿಸಿದ್ದಾನೆ ಎಂಬುದನ್ನು ತಿಳಿದುಕೊಳ್ಳಬೇಕು.

ಆ ದಾಖಲೆಯ ವೈಶಿಷ್ಟ್ಯವನ್ನು ಕಂಡುಹಿಡಿದುಕೊಳ್ಳಬೇಕಾದುದು ಸಂಶೋಧಕನು ಮಾಡಬೇಕಾದ ಮೂರನೆಯ ಕಾರ್ಯ. ಅಂದರೆ, ಹೇಗೆ ಅದು ಕಾಲ, ಸ್ಥಳ, ಲೇಖಕ ಹಾಗೂ ಬಳಸಲಾದ ಮೂಲಾಧಾರಗಳ ಪ್ರಭಾವಕ್ಕೆ ಒಳಗಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಒಂದು ಐತಿಹಾಸಿಕ ದಾಖಲೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ, ಅದರ ಕಾಲದ ಪ್ರಚಲಿತ ಗತಿಯ ಬಗ್ಗೆ ಅರಿವಿರಬೇಕು. ಕೆಲವು ಇತಿಹಾಸಕಾರರು ತಮ್ಮ ಕಾಲದ ಶಿಶುಗಳು, ಪ್ರವಕ್ತರು ಹಾಗೂ ಅನಭಿಜ್ಞ ಅಧಿವಕ್ತಾರರೂ ಆಗಿರುತ್ತಾರೆ. ಅವರ ಸಮಸ್ಯೆಗಳೂ ಹಾಗೂ ಅವರ ಸಮಾಜದ ಸಮಸ್ಯೆಗಳೂ ಒಂದೇ ಆಗಿರುತ್ತವೆ. ಆದರೆ ಕೆಲವು ಚರಿತ್ರಲೇಖಕರು ವಿಶೇಷ ಮನೋಭಾವ ಹಾಗೂ ವೈಲಕ್ಷಣದ ಕಾರಣ ತಮ್ಮ ಕಾಲಕ್ಕಿಂತ ವಿಭಿನ್ನರಾಗಿರಬಹುದು. ಆದ್ದರಿಂದ ಒಂದು ದಾಖಲೆಯ ವಿಶ್ವಾಸಾರ್ಹತೆಯನ್ನು ಗಮನಿಸುವಾಗ ಕಾಲದ ಪ್ರಭಾವ ಮಾತ್ರವಲ್ಲದೆ, ಮೊದಲಿನಿಂದ ಮಾನವಸ್ವರೂಪ ಒಂದೇ ಬಗೆಯಾಗಿದೆ ಎಂಬುದನ್ನು ಸತ್ಯ ಎಂಬುದಾಗಿ ಭಾವಿಸಿಕೊಳ್ಳ ಬೇಕಾಗುತ್ತದೆ. ನಂತರ ಅದು ಹೇಗೆ ಸ್ಥಳದಿಂದ ಪ್ರಭಾವಿತವಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಲೇಖಕನಿಗೆ ತಾನು ಇರುವ ಸ್ಥಳ ಹಾಗೂ ಪರಿಸರದ ಪ್ರಭಾವದಿಂದ ಒಳಗಾಗದಂತೆ ತನ್ನ ಆಲೋಚನೆ ಹಾಗೂ ಭಾವನೆಗಳನ್ನು ಪ್ರತ್ಯೇಕಿಸಿಟ್ಟುಕೊಳ್ಳುವುದು ಸಾಧ್ಯವಿಲ್ಲ. ಆಮೇಲೆ ಆ ದಾಖಲೆಯ ಮೇಲೆ ಲೇಖಕನ ಮಾನಸಿಕ ಸ್ಥಿತಿಯ ಪ್ರಭಾವ ಎಂತಹುದು ಎಂಬುದನ್ನು ಅರಿಯಲು ಯತ್ನಿಸಬೇಕು. ಕಾರಣ ಅದು ಯಾಂತ್ರಿಕವಾಗಿರುವ ಅಥವಾ ದೇವತೆಗಳು ಬರೆದಿರುವ ರಚನೆಯಲ್ಲ, ಅದನ್ನು ಬರೆದಿರುವವರು ಪೂರ್ವಾಗ್ರಹ ಹಾಗೂ ಮನೋವಿಕಾರಗಳಿಂದ ಕೂಡಿರುವ ತಪ್ಪು ಮಾಡುವ ವ್ಯಕ್ತಿಗಳೇ. ಕೆಲವು ಕೃತಿಗಳಲ್ಲಿ ಪಕ್ಷಪಾತ ದೃಷ್ಟಿ ಹಾಗೂ ಮನೋಭಾವ ಸ್ಪಷ್ಟವಾಗಿರುತ್ತವೆ. ಇನ್ನು ಕೆಲವು ಗ್ರಂಥಗಳಲ್ಲಿ ಪೂರ್ವಾಗ್ರಹಗಳು ಅತ್ಯಂತ ಸೂಕ್ಷ್ಮವಾಗಿರುತ್ತವೆ, ಗೋಚರಕ್ಕೆ ಬರುವುದಿಲ್ಲ. ರೆನನ್ ಹೇಳುವಂತೆ, "ಸತ್ಯ ನೆರಳಿನಲ್ಲಿರುತ್ತದೆ, ಅತ್ಯಂತ ಸೂಕ್ಷ್ಮವಾದ ವರ್ಣ ಛಾಯಾಂತರ ಹಾಗೂ ಸತ್ಯದ ಸೂಕ್ಷ್ಮ ಸರಹದ್ದುಗಳು ಅನಿಯತ ವಾಚಕನ ಕಣ್ಣಿಗೆ ಬೀಳುವುದೇ ಇಲ್ಲ", ಇಷ್ಟು ಮಾತ್ರವಲ್ಲದೆ, ಒಂದು ದಾಖಲೆಯು ಲೇಖಕನ ಶಾರೀರಿಕ, ಬೌದ್ಧಿಕ ಹಾಗೂ ಭಾವಾತ್ಮಕ ಸಿದ್ಧತೆ ಮತ್ತು ಜನಾಂಗ ಲಕ್ಷಣಗಳ ಪ್ರಭಾವಕ್ಕೆ ಒಳಗಾಗಿರುತ್ತದೆ. ಅದರ ಮೇಲೆ ಅವನ ವ್ಯಕ್ತಿ ವೈಲಕ್ಷ್ಯಣದ ಪ್ರಭಾವವೂ

ಇರುತ್ತದೆ. ರಹಸ್ಯ ವಿಚಾರಗಳಲ್ಲೆಲ್ಲಾ ವ್ಯಕ್ತಿತ್ವವು ದುರ್ಭೇದ್ಯವಾದುದು. ಅದು ವಿಜ್ಞಾನಿಗಳ ಅಳತೆಯ ಸಾಧನೋಪಕರಣಗಳಿಗೆ ಸಿಲುಕದ ಪಾದರಸ, ಲೇಖಕ ಬರೆದಿರುವ ಪ್ರತಿ ಪುಟದಲ್ಲೂ ಅವನ ವ್ಯಕ್ತಿತ್ವದ ಪ್ರತಿಬಿಂಬವನ್ನು ಕಾಣಬಹುದು. ಹೀಗೆ ಸಂಶೋಧಕನು ಲೇಖಕನ ಮನೋಧರ್ಮಕ್ಕೆ ಹೆಚ್ಚು ಗಮನವನ್ನು ಕೊಡಬೇಕಾಗುತ್ತದೆ. ಕಾರಣ ಅದು ಅವನ ಯೋಚನೆ, ಭಾವನೆ, ಮಾನಸಿಕ ಸ್ಥಿತಿ, ಕನಸು ಇತ್ಯಾದಿಗಳನ್ನು ನಿರ್ಧರಿಸುತ್ತದೆ. ಆಲ್ಬರ್ಟ್ ಎಫ್. ಪೋಲಾರ್ಡ್ ಹೇಳುವಂತೆ, ಘಟನೆಗಳು ಸಂಭವಿಸಿರುವ ರೀತಿಗೂ ಹಾಗೂ ಅವುಗಳನ್ನು ದಾಖಲು ಮಾಡಿರುವ ಕ್ರಮಕ್ಕೂ ಬಹು ವ್ಯತ್ಯಾಸವಿರುತ್ತದೆ. ಸಂಶೋಧಕನು ಎಲ್ಲಾ ಪ್ರಮಾಣಗಳನ್ನು ಸಂಗ್ರಹಿಸಿ, ಕ್ರಮವಾಗಿ ಜೋಡಿಸಿ, ಶೋಧಿಸಿ, ಪ್ರತ್ಯೇಕಿಸಿ ಅಣಿಮಾಡಿಟ್ಟ ಮೇಲೂ, ಆ ಮೂಲ ಲೇಖನದ ಹಿಂದಿರುವ ಮಾನವ ಬುದ್ಧಿ ಹಾಗೂ ಮನಸ್ಸಿನ ಕಾರ್ಯಾಚರಣೆಗಳನ್ನು ತಿಳಿದುಕೊಳ್ಳಲು ಅವನಿಗೆ ಅಂತರ್ದೃಷ್ಟಿ ಹಾಗೂ ಕಲ್ಪನೆ ಬೇಕಾಗುತ್ತದೆ.

ಪತ್ತೇದಾರನು ವ್ಯಕ್ತಿಗಳ ಮುಖಚಹರೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಿ ಜ್ಞಾಪಕದಲ್ಲಿಟ್ಟು ಕೊಳ್ಳುತ್ತಾನೆ. ಇತರರಿಗೆ ಗೊತ್ತಾಗದ ಪರಿಸರದ ಪರಿವರ್ತನೆಗಳು ನಾವಿಕನಿಗೆ ಗೋಚರವಾಗುತ್ತವೆ. ಅವನಿಗೆ ಸಮುದ್ರ ಸತ್ಯವಾದುದು. ಭೂಪ್ರದೇಶ ಒಂದು ಛಾಯೆ ಮಾತ್ರ. ವೈದ್ಯನು ಇತರರಿಗೆ ಆರೋಗ್ಯಕರವಾಗಿ ಕಾಣುವ ಮುಖ ಹಾಗೂ ಕಣ್ಣುಗಳಲ್ಲಿ ಕಾಯಿಲೆಯ ಚಿಹ್ನೆಗಳನ್ನು ಕಾಣುತ್ತಾನೆ. ಸಾಮಾನ್ಯ ವ್ಯಕ್ತಿಗೆ ಕಾಣದ ಬಣ್ಣ ಹಾಗೂ ಆಕಾರಗಳನ್ನು ಕಲೆಗಾರ ನೋಡುತ್ತಾನೆ. ಸಂಶೋಧಕನು ಅದೇ ರೀತಿಯ ಸಾಮರ್ಥ್ಯವನ್ನು ಹೊಂದಿರಬೇಕು.

ಲೇಖಕನ ಸ್ಥಾನಕ್ಕಿಂತ ಹೆಚ್ಚಾಗಿ ಒಂದು ದಾಖಲೆಗೆ ಬಣ್ಣ ಕೊಡುವ ಬಹು ಬಲವಾದ ಅಂಶವೆಂದರೆ ಅವನ ಮೇಲೆ ವಿಚಾರಪಕ್ಷಗಳಿಗಿರುವ ಹಿಡಿತ. ಉದಾರವಾದ, ಸಂಪ್ರದಾಯವಾದ, ಪ್ರಜಾಪ್ರಭುತ್ವವಾದ, ಸಮಾಜವಾದ, ರಾಜಪ್ರಭುತ್ವವಾದ, ಕ್ಯಾಥೋಲಿಕ್, ಪ್ರಾಟೆಸ್ಟೆಂಟ್ ಮುಂತಾದ ಸಿದ್ಧಾಂತ ಹಾಗೂ ಪಕ್ಷಗಳು ತಮ್ಮ ವಿಚಾರಗಳನ್ನು ಪ್ರತಿಪಾದಿಸಿ ಎತ್ತಿಹಿಡಿಯಲು ವಿಶೇಷ ಲೇಖಕ ಹಾಗೂ ವಕ್ತಾರರನ್ನು ಹೊಂದಿರುತ್ತವೆ. ಅವರು ತಮ್ಮ ಕಣ್ಣುಗಳಿಗೆ ಬಟ್ಟೆಯನ್ನು ಕಟ್ಟಿಕೊಂಡು ಕುರುಡರಾಗಿ ಪಕ್ಷ ಎಂಬ ಜೈಲುಖಾನೆಯ ಸಮವಸ್ತ್ರವನ್ನು ಧರಿಸಿ ಸತ್ಯಾಂಶಗಳೊಂದಿಗೆ ಚೆಲ್ಲಾಟವಾಡಿ ಇತಿಹಾಸವನ್ನೇ ಬದಲಾಯಿಸುತ್ತಾರೆ. ಇತಿಹಾಸವು ಮಗುವಿನ ಅಕ್ಷರಗಳ ಪೆಟ್ಟಿಗೆಯಿದ್ದಂತೆ ತೋರುತ್ತದೆ. ಅದರಿಂದ ನಮಗೆ ಬೇಕಾದ ಅಕ್ಷರಗಳನ್ನು ಮಾತ್ರ ಆರಿಸಿಕೊಂಡು ತಮ್ಮ ಉದ್ದೇಶಕ್ಕೆ ಅನುಗುಣವಾಗಿ ಅವುಗಳನ್ನು ಜೋಡಿಸಿಕೊಳ್ಳಬಹುದು, ನಮ್ಮ ಧ್ಯೇಯಕ್ಕೆ ಪ್ರತಿಕೂಲವಾಗಿರುವುದನ್ನು ಉಪೇಕ್ಷಿಸಬಹುದು ಎಂಬುದಾಗಿ ಪ್ರೌಢೆ ಅಭಿಪ್ರಾಯಪಡುತ್ತಾರೆ. ಆದ್ದರಿಂದ ಸಂಶೋಧಕನು ಇತಿಹಾಸದಲ್ಲಿ ಮಾತ್ಸರ್ಯ ಹಾಗೂ ಪಕ್ಷಗಳ ಪ್ರತಿ ಅವೈಚಾರಿಕ ನಿಷ್ಠೆ ಇತ್ಯಾದಿ ಅನಪೇಕ್ಷಣೀಯ ಅಂಶಗಳು ಮುಖ್ಯವಾದ, ಅನೇಕ ವೇಳೆ ತನಗೆ ಕಷ್ಟವನ್ನುಂಟು ಮಾಡುವ ಪಾತ್ರವನ್ನು ವಹಿಸಿವೆ ಎಂಬುದನ್ನು ಮರೆಯಬಾರದು.

ಇದರೊಂದಿಗೆ ಸಂಶೋಧಕನು ವಿಷಯಗಳನ್ನು ಸರಿಯಾಗಿ ವೀಕ್ಷಿಸಿ ಯಥಾರ್ಥ ನಿರೂಪಣೆ ನೀಡುವ ಯೋಗ್ಯತೆ ಲೇಖಕನಿಗಿದ್ದಿತೇ ಎಂಬುದನ್ನು ಕಂಡುಹಿಡಿಯಬೇಕು. ಕೆಲವರಿಗೆ ಸತ್ಯವನ್ನೇ ಹೇಳುವ ಬಯಕೆ

ಇದ್ದರೂ ಅದನ್ನು ನೋಡುವ ಹಾಗೂ ಯಥಾರ್ಥವಾಗಿ ದಾಖಲು ಮಾಡುವ ಶಕ್ತಿ ಇರುವುದಿಲ್ಲ. ಕೆಲವರು ಸತ್ಯನಿಷ್ಠರಾಗಿದ್ದರೂ, ನಿಷ್ಪಕ್ಷವಾಗಿ ನಿರೂಪಿಸುವುದಕ್ಕೆ ಅಸಮರ್ಥರಾಗಿರುತ್ತಾರೆ. ಐತಿಹಾಸಿಕ ಲೇಖನಗಳಲ್ಲಿ ಕೆಲವು ಸಲ ವಾಸ್ತವಿಕ ಸತ್ಯ ಎಂಬುದಾಗಿ ಪ್ರತಿಪಾದಿಸಲಾಗಿರುವ ಆಧಾರವಿಲ್ಲದ ಭಾವನೆಗಳನ್ನು ನೋಡಬಹುದು. ಇಷ್ಟು ಮಾತ್ರವಲ್ಲದೆ, ಅನ್ವೇಷಕನು ಸತ್ಯವನ್ನು ನುಡಿಯುವ ಸ್ವಾತಂತ್ರ್ಯ ಲೇಖನಿಗಿದ್ದಿತೇ ಅಥವಾ ಅವನು ಹೆದರಿದ್ದನೇ ಅಥವಾ ಅಧಿಕಾರ ಬಲದ ಒತ್ತಯಕ್ಕೆ ತಲೆಬಾಗಿದ್ದನೇ ಎಂಬುದನ್ನೂ ಸಹ ತಿಳಿದುಕೊಳ್ಳಬೇಕು. ನಿರ್ಬಂಧದ ಅನೇಕ ನಿದರ್ಶನಗಳನ್ನು ಇತಿಹಾಸದಲ್ಲಿ ನೋಡಬಹುದು. ಇಂದು ವಿಭಿನ್ನ ಅಭಿಪ್ರಾಯಗಳನ್ನು ಬೆಳೆಸಿಕೊಂಡಿರುವವರನ್ನು ಸುಡುಗಂಭಕ್ಕೆ ಕಟ್ಟಿ ಜೀವಸಹಿತ ಸುಟ್ಟುಹಾಕುವುದಿಲ್ಲ ಎಂಬುದು ನಿಜ. ಆದರೂ ಕೆಲವರನ್ನು ಉಪೇಕ್ಷಿಸಲಾಗುತ್ತದೆ. ಅವರಿಗೆ ಉದ್ಯೋಗವನ್ನು ನಿರಾಕರಿಸಲಾಗುತ್ತದೆ. ಬಡತಿಯನ್ನು ತಡೆಹಿಡಿಯಲಾಗುತ್ತದೆ, ಕೆಲವು ಸಲ ಅವರನ್ನು ಕೆಲಸದಿಂದ ವಜಾ ಮಾಡಲಾಗುತ್ತದೆ. ಕೆಲವು ಧರ್ಮಾಂಧ ಪ್ರೌಢ ವಿದ್ಯಾಸಂಸ್ಥೆಗಳು ತಮ್ಮ ಸಿದ್ಧಾಂತಗಳನ್ನು ಒಪ್ಪಿ ಎತ್ತಿಹಿಡಿಯುವ ಅಧ್ಯಾಪಕರನ್ನೇ ಆಹ್ವಾನಿಸಿ ನೇಮಿಸಿಕೊಳ್ಳುತ್ತವೆ. ಆದ್ದರಿಂದ ಹಲವು ಲೇಖಕರು ಸ್ವಾರ್ಥದ ಬಲಿಪೀಠದಲ್ಲಿ ಸತ್ಯವನ್ನೇ ಬಲಿಕೊಡಲು ಹಿಂಜರಿಯುವುದಿಲ್ಲ. ವಿಷಯವನ್ನು ಸರಿಯಾಗಿ ತಿಳಿಸದೆ ನಿರ್ಬಂಧಕ್ಕೆ ಒಳಗಾಗಿ ತಲೆಬಾಗುವ ಮತ್ತು ಭಯದಿಂದ ಸತ್ಯವನ್ನು ಹೇಳದೆ ಮೌನವಾಗಿರುವ ಪ್ರವೃತ್ತಿಯಿಂದ ಒಬ್ಬ ಲೇಖಕನ ಅಥವಾ ಅವನ ಕೃತಿಯ ನೈತಿಕ ಶಕ್ತಿ ಕುಂದಿ ಅದಕ್ಕೆ ಮೌಲ್ಯವಿಲ್ಲವಾಗುತ್ತದೆ. ಇದರೊಂದಿಗೆ ಎಷ್ಟರಮಟ್ಟಿಗೆ ಬಳಸಲಾಗಿದ್ದ ಮೂಲಾಧಾರಗಳು ಲೇಖಕ ಹಾಗೂ ದಾಖಲೆಯ ಮೇಲೆ ಪ್ರಭಾವ ಬೀರಿವೆ ಎಂಬುದನ್ನು ಅನ್ವೇಷಕನು ಅರಿತುಕೊಳ್ಳಬೇಕು ಮತ್ತು ಅನೇಕ ಸಲ ಪೂರ್ವಾಗ್ರಹಪೀಡಿತ ಅಭಿಪ್ರಾಯಗಳಲ್ಲೂ, ಪಕ್ಷಪಾತಯುಕ್ತ ಹಾಗೂ ವಿವಾದಾತ್ಮಕ ಬರಹಗಳಲ್ಲೂ ಸತ್ಯದ ಬೆಳಕು ಗೋಚರವಾಗುತ್ತದೆ.

ನಂತರ ಸಂಶೋಧಕನು ತನ್ನ ಮುನ್ನೊಲವು ಹಾಗೂ ಲೇಖಕರ ಪೂರ್ವಾಗ್ರಹಗಳೆಂಬ ಅಲೆಗಳ ಕಾರಣ ಇತ್ತಿಂದತ್ತ ಹೊಯ್ದಾಡಬೇಕಾದಾಗ ಅವನ ಮುಂದೆ ನಿಲ್ಲುವುದು ಸತ್ಯವನ್ನು ಗುರುತಿಸುವುದು ಹೇಗೆ, ಅದಕ್ಕೆ ಸಹಾಯಕವಾದ ನಿಯಮಗಳಿವೆಯೇ ಎಂಬ ಪ್ರಶ್ನೆ. ಕೆಲವರ ಪ್ರಕಾರ, ಅವನು ಪ್ರತಿ ದಾಖಲೆಯ ಬಗ್ಗೆ ಕ್ರಮಬದ್ಧವಾದ ಅಪನಂಬಿಕೆಯನ್ನು ತೋರಬೇಕು. ಚರ್ಚೆ ಮಾಡದೆ ಒಂದು ದಾಖಲೆಯ ವಿಷಯಗಳನ್ನು ಒಪ್ಪಿಕೊಳ್ಳುವ ಪ್ರವೃತ್ತಿಯನ್ನು ನಿರೋಧಿಸಬೇಕು. ಅವನು ಸತ್ಯವನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ, ಲೇಖಕನನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕು. ಅದಕ್ಕಾಗಿ ಅವನಿಗೆ ಬೇಕಾಗಿರುವುದು ಅಪನಂಬಿಕೆಯನ್ನು ತೋರುವ ಪ್ರವೃತ್ತಿಯಲ್ಲ. ಅನುವೇದನೆ ಅಥವಾ ಸಹಾನುಭೂತಿ.

ಅನುವೇದನೆ ಎಂದರೆ ಇನ್ನೊಬ್ಬ ವ್ಯಕ್ತಿಯ ಸ್ಥಾನದಲ್ಲಿ ನಿಂತು, ಅವನು ಹೇಗೆ ಬಾಳಿದ ಎಂಬುದನ್ನು ತಿಳಿಯುವ ಅವನ ಕಷ್ಟಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಸಾಮಾನ್ಯ ಮಾನವಸ್ವರೂಪ ಹಾಗೂ ಅವಶ್ಯಕತೆಗಳನ್ನು ಅರಿಯುವ ಸಾಮರ್ಥ್ಯ ಎಂದಾಗುತ್ತದೆ. ಬುದ್ಧಿಶಕ್ತಿಯೊಂದಿಗೆ ಸಹಾನುಭೂತಿ ಹಾಗೂ ಕಲ್ಪನಾಯುಕ್ತ ಸೂಕ್ಷ್ಮಪರಿಜ್ಞಾನ ಸಂಘಟಿತವಾಗಬೇಕು. ಆಗಲೇ ಸಂಶೋಧಕನು ಸರಿದು ಹೋಗಿರುವ ಶತಮಾನಗಳಿಗೆ ಹೋಗಿ ಅಲ್ಲಿ ಬಾಳಿದ್ದ ತನಗಿಂತ ವಿಭಿನ್ನರಾಗಿದ್ದ ಜನರ ಜೀವನವನ್ನು ಅವರ ಪರಿಸ್ಥಿತಿ ಹಾಗೂ ಆದರ್ಶದ ಬೆಳಕಿನಲ್ಲಿ ಅರಿತುಕೊಳ್ಳಲು ಮತ್ತು ಅವರ ಕ್ರಿಯೆಗಳಿಗೆ ಪ್ರೇರಕವಾಗಿದ್ದ ಅಂಶ, ಅವರ

ಭಾವೋದ್ರೇಕ ಅವರ ಉತ್ಸಾಹ, ಅವರ ಹತಾಶೆ ಹಾಗೂ ಪರವಶತೆ ಇತ್ಯಾದಿಗಳನ್ನು ಅರ್ಥಮಾಡಿಕೊಳ್ಳಲು ಸಮರ್ಥನಾಗುತ್ತಾನೆ. ಒಟ್ಟಿನಲ್ಲಿ ಅನುವೇದನೆಯು ಐತಿಹಾಸಿಕ ದಾಖಲೆಯ ವಿಮರ್ಶೆಗೆ ಅತ್ಯಾವಶ್ಯಕ. ಅದು ಅರಿವಿಗೆ ಕೀಲಿ ಮತ್ತು ಜ್ಞಾನಸಾಗರದ ವಿರುದ್ಧ ಮಾನವ ವ್ಯಕ್ತಿಗಳು ನಿರ್ಮಿಸಿಕೊಂಡಿರುವ ಸಂಕುಚಿತ ಮಾನಸಿಕ ಹೊನಲಿನ ಬಾಗಿಲುಗಳನ್ನು ತೆರೆಯುವ ಬೀಗದ ಕೈ.

## 7.4 ಆಂತರಿಕ ವಿಮರ್ಶೆಯ ದ್ವಿಬಗೆಯ ಕಾರ್ಯ ರೀತಿಗಳು

ಆಂತರಿಕ ವಿಮರ್ಶೆಯಲ್ಲಿ ನಿಶ್ಚಯಾತ್ಮಕ ಅರ್ಥನಿರ್ಣಯ ವಿಮರ್ಶೆ ಮತ್ತು ನಿರಾಕರಣಾರ್ಥಕ ಅರ್ಥವಿವರಣ ವಿಮರ್ಶೆ ಎಂಬ ಎರಡು ರೀತಿಯ ಕಾರ್ಯ ರೀತಿಗಳು ಮುಖ್ಯವಾಗಿವೆ. ಒಂದು ದಾಖಲೆಯಲ್ಲಿ ತಾನು ಉಪಯೋಗಿಸಲು ಉದ್ದೇಶಿಸಿರುವ ಪ್ರತಿ ಹೇಳಿಕೆಯು ತನಗೆ ಸರಿಯಾಗಿ ಅರ್ಥವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕಾದುದು ಸಂಶೋಧಕನ ಕರ್ತವ್ಯ. ಈ ವಿಮರ್ಶಾ ಕ್ರಮವನ್ನು ನಿಶ್ಚಯಾತ್ಮಕ ಅರ್ಥನಿರ್ಣಯ ವಿಮರ್ಶೆ ಎಂಬುದಾಗಿ ಕರೆಯಬಹುದು. ಇದು ದಾಖಲೆಯ ವಿಶ್ಲೇಷಣೆಯಾಗಿರುತ್ತದೆ. ಲೇಖಕನ ಹೇಳಿಕೆಗಳ ಪದಶಃ ಹಾಗೂ ನಿಜವಾದ ಅರ್ಥಗಳನ್ನು ಕಂಡುಹಿಡಿದು ಅರಿಯುವುದೇ ಇದರ ಉದ್ದೇಶವಾಗಿರುತ್ತದೆ. ಯಾವ ಪರಿಸ್ಥಿತಿಗಳಲ್ಲಿ ಆ ದಾಖಲೆಯನ್ನು ತಯಾರಿಸಲಾಯಿತು ಎಂಬ ಸಮಸ್ಯೆಯ ವಿಶ್ಲೇಷಣೆಯು ನಿರಾಕರಣಾರ್ಥಕ ಅರ್ಥವಿವರಣ ವಿಮರ್ಶೆಯಾಗುತ್ತದೆ ಮತ್ತು ಲೇಖಕನು ನೀಡಿರುವ ಹೇಳಿಕೆಗಳು ನಿಜವಾಗಿ ಸಂಭವಿಸಿದ ಸಂಗತಿಗಳಿಗೆ ಅನುಗುಣವಾಗಿವೆಯೇ ಎಂಬುದನ್ನು ಪರೀಕ್ಷಿಸುವುದು, ಅಥವಾ ಬೇರೆ ಪದಗಳಲ್ಲಿ ಹೇಳುವುದಾದರೆ ಬರಹಗಾರನು ಕೊಟ್ಟಿರುವ ಹೇಳಿಕೆಗಳಲ್ಲಿ ಇರುವ ತಪ್ಪುಗಳನ್ನು ತೆಗೆದುಬಿಡುವುದೇ ಇದರ ಧ್ಯೇಯ.

### 7.4.1 ನಿಶ್ಚಯಾತ್ಮಕ ಅರ್ಥನಿರ್ಣಯ ವಿಮರ್ಶೆ

ದಾಖಲೆಯ ವಿಷಯಗಳ ಅಕ್ಷರಶಃ ಹಾಗೂ ನಿಜವಾದ ಅರ್ಥಗಳನ್ನು ತಿಳಿದುಕೊಳ್ಳುವುದೇ ನಿಶ್ಚಯಾತ್ಮಕ ಅರ್ಥನಿರ್ಣಯ ವಿಮರ್ಶೆಯ ಗುರಿಯಾಗಿರುವುದರಿಂದ ಮೊದಲು ಈ ಮೂಲಪಾಠದ ಸಾಮಾನ್ಯ ಅರ್ಥವನ್ನು ಅರಿಯುವುದಕ್ಕೆ ದಾಖಲೆಯನ್ನು ಅಧ್ಯಯನ ಮಾಡಲಾಗುತ್ತದೆ. ಹೆಚ್ಚಾಗಿ ಇತಿಹಾಸವು ಅಧ್ಯಯನಕ್ಕೆ ಆರಿಸಿಕೊಳ್ಳಲಾದ ದೇಶ ಅಥವಾ ಕಾಲದಲ್ಲಿ ಮುಖ್ಯವಾಗಿದ್ದ ಪದ ಹಾಗೂ ವಾಕ್ಸರಣಿಗಳ ಸರಿಯಾದ ಅರ್ಥಗ್ರಹಿಕೆ ಮತ್ತು ಸಂಪ್ರದಾಯ, ಕಾನೂನು ಹಾಗೂ ಸಂಸ್ಥೆಗಳ ಬಗ್ಗೆ ವ್ಯಾಪಕ ಜ್ಞಾನಸಂಪಾದನೆಯ ಮೇಲೆ ಆಧಾರಿತವಾಗಿರುತ್ತದೆ. ಕಾಲಕಾಲಕ್ಕೆ ಇವುಗಳಿಗೆ ನೂತನ ಅರ್ಥಗಳನ್ನು ಕೊಟ್ಟಿರಬಹುದು. ಆಗ ಮೂಲಾರ್ಥಗಳನ್ನು ತಿಳಿಯುವುದು ಬಹುಕಷ್ಟವಾಗುತ್ತದೆ. ಜೊತೆ ಕಾಲಕಾಲಕ್ಕೆ ಕಂಡುಬಂದಿರುವ ಪದಸಂಯೋಜನಾ ಭೇದಗಳೂ ಸಹ ಗಾಬರಿಯನ್ನುಂಟು ಮಾಡುತ್ತವೆ. ಪರಕೀಯ ಭಾಷೆಯನ್ನು ಅಥವಾ ಅಪರಿಚಿತ ಪದಗಳನ್ನು ಅಥವಾ ಪರಿಚಿತ ಪದಗಳಿಗೆ ಅಸಾಮಾನ್ಯರ್ಥಗಳನ್ನು ಕೊಟ್ಟು ಬಳಸಿ ಹೇಳಿಕೆಗಳನ್ನು ನೀಡಿರಬಹುದು. ಆದ್ದರಿಂದ ಮೂಲ ಗ್ರಂಥಪಾಠವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ ಭಾಷೆಯ ಪರಿಚಯವಿರಬೇಕು. ಐತಿಹಾಸಿಕ ವಿಷಯ ಸಾಮಗ್ರಿಗಳು ವಿವಿಧ ಭಾಷೆಗಳಲ್ಲಿ ಚೆದರಿ ಹೋಗಿರುವುದರಿಂದ ಭಾಷೆಯ ಬಗ್ಗೆ ಸಾಮಾನ್ಯವಾದ ತಿಳಿವಳಿಕೆ ಇದ್ದರೆ ಮಾತ್ರ

ಸಾಲದು. ಕಾರಣ ಪ್ರತಿ ಭಾಷೆಗೂ ತನ್ನದೇ ಆದ ಸೊಬಗು ಹಾಗೂ ಅರ್ಥಗಳ ಸೊಗಸಾದ ಛಾಯೆಗಳಿರುತ್ತವೆ. ಆದ್ದರಿಂದ ಈ ತಂತ್ರವನ್ನು ಬಳಸಿ ದಾಖಲೆಗಳ ಅಕ್ಷರಶಃ ಹಾಗೂ ನಿಜವಾದ ಅರ್ಥಗಳನ್ನು ಸರಿಯಾಗಿ ಗೊತ್ತುಮಾಡಿಕೊಳ್ಳಬೇಕಾದರೆ ಸಂಶೋಧಕನು ಆ ಭಾಷೆಯಲ್ಲಿ ನುರಿತವನಾಗಿರಬೇಕು. ಉದಾಹರಣೆಗೆ, ಭಾರತದ 18 ಪುರಾಣಗಳು ಪ್ರತಿ ವಿಷಯಗಳನ್ನು ಒಳಗೊಂಡಿರುವ ಜನಪ್ರಿಯ ವಿಶ್ವಕೋಶಗಳೇ ಆಗಿವೆ. ಅವುಗಳಲ್ಲಿರುವ ಅತ್ಯಮೂಲ್ಯ ವಿಷಯ ಸಾಮಗ್ರಿಗಳನ್ನು ಪೂರ್ಣವಾಗಿ ಬಳಸಿಕೊಳ್ಳಬೇಕಾದರೆ ಸಂಶೋಧಕನಿಗೆ ಸಂಸ್ಕೃತ ಭಾಷೆಯ ಬಗ್ಗೆ ಅಲ್ಪಜ್ಞಾನವಿದ್ದರೆ ಸಾಲದು, ಅವನಿಗೆ ಅದರ ಮೇಲೆ ಪ್ರಭುತ್ವವೇ ಇರಬೇಕು. ಹೇಳಿಕೆಗಳ ಪದಶಃ ಅರ್ಥವನ್ನು ತಿಳಿಯಲು ಯತ್ನಿಸುವಾಗ ಅವನು ಕೆಲವು ಸಾಮಾನ್ಯ ಅಂಶಗಳನ್ನು ಜ್ಞಾಪಕದಲ್ಲಿಟ್ಟು– ಕೊಳ್ಳಬೇಕು.

ಮೊದಲನೆಯದಾಗಿ ಅನ್ವೇಷಕನು ಎಲ್ಲಾ ಭಾಷೆಗಳೂ ಒಂದು ನಿರಂತರವಾದ ವಿಕಾಸಾತ್ಮಕ ಪ್ರಕ್ರಿಯೆಯ ಕಾರಣ ಬದಲಾವಣೆಗೆ ಒಳಗಾಗಿರುತ್ತವೆ ಎಂಬುದನ್ನು ತಿಳಿದಿರಬೇಕು. ಪ್ರತಿ ಶಕೆಯಲ್ಲಿ ನಿರ್ದಿಷ್ಟವಾದ ಭಾಷೆಯನ್ನು ಬಳಸಲಾಗಿರುವುದನ್ನು ನೋಡಬಹುದು. ಉದಾಹರಣೆಗೆ, ಕರ್ನಾಟಕದಲ್ಲಿ 10 ಅಥವಾ 11ನೆಯ ಶತಮಾನದಲ್ಲಿ ಉಪಯೋಗಿಸಲಾಗುತ್ತಿದ್ದ ನಿರ್ದಿಷ್ಟ ಭಾಷೆ ಹಳೆಗನ್ನಡ, ಆ ಕಾಲಕ್ಕೆ ಸೇರಿದ್ದ ದಾಖಲೆಯನ್ನು ಓದಿ ಸರಿಯಾದ ಅರ್ಥವನ್ನು ತಿಳಿದುಕೊಳ್ಳಬೇಕಾದರೆ ಹಳೆಗನ್ನಡ ಚೆನ್ನಾಗಿ ಗೊತ್ತಿರಬೇಕು.

ಎರಡನೆಯದಾಗಿ, ಸಂಶೋಧಕನು ಭಾಷಾ ಪ್ರಯೋಗಗಳು ಮತ್ತು ಪದಗಳ ಅರ್ಥಗಳು ದೇಶದಿಮದ ದೇಶಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ, ಸಾಮಾಜಿಕ ವರ್ಗದಿಂದ ಸಾಮಾಜಿಕ ವರ್ಗಕ್ಕೆ ವಿಭಿನ್ನವಾಗಿರುತ್ತವೆ ಎಂಬುದನ್ನು ಅರ್ಥಮಾಡಿಕೊಂಡಿರಬೇಕು. ಉದಾಹರಣೆಗೆ, ಕನ್ನಡ ಭಾಷೆ ಕನ್ನಡಿಗರ ಮಾತೃಭಾಷೆಯಾದರೂ ಮೈಸೂರು ಹಾಗೂ ಬೆಂಗಳೂರಿನಲ್ಲಿ ಬಳಸುವ ಕನ್ನಡ ಭಾಷಾ ಪ್ರಯೋಗಗಳಿಗೂ, ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಪಯೋಗಿಸುವ ಕನ್ನಡ ಭಾಷಾ ಪ್ರಯೋಗಗಳಿಗೂ ಬಹಳ ವ್ಯತ್ಯಾಸಗಳು ಕಂಡುಬರುತ್ತವೆ. ಉದಾಹರಣೆಗೆ ಉತ್ತರ ಕರ್ನಾಟಕದಲ್ಲಿ "ಕಷ್ಟ" ಎಂದರೆ ತಲೆ ಕ್ಷೌರ ಎಂದರ್ಥವಾದರೆ ದಕ್ಷಿಣ ಕರ್ನಾಟಕದಲ್ಲಿ "ತೊಂದರೆ" ಎಂದರ್ಥವಾಗುತ್ತದೆ. ಇಂಗ್ಲೆಂಡಿನಲ್ಲಿ ಆಕ್ಸ್‌ಫರ್ಡ್ ಅಥವಾ ಕೇಂಬ್ರಿಡ್ಜ್‌ನಲ್ಲಿ ಉಪಯೋಗಿಸುವ ಇಂಗ್ಲಿಷ್ ಭಾಷೆಗೂ ಮತ್ತು ಸ್ಕಾಟ್ಲೆಂಟ್ ಅಥವಾ ವೇಲ್ಸ್‌ನಲ್ಲಿ ಬಳಸುವ ಇಂಗ್ಲಿಷ್ ಭಾಷೆಗೂ ಭೇದವಿದೆ. ಆಧುನಿಕ ನಾಗರಿಕತೆಯ ಮರೀಚಿಕೆಯಂತಹ ಥಳಥಳಿಕೆಗೆ ಮಾರುಹೋಗಿ ಕೃತಕ ಜೀವನವನ್ನು ನಡೆಸುವ ನಗರವಾಸಿಯ ಭಾಷೆಯು ಗ್ರಾಮದಲ್ಲಿರುವ ರೈತನ ಭಾಷೆಗಿಂತ ವಿಭಿನ್ನವಾಗಿರುತ್ತದೆ. ಅದೇ ರೀತಿ ಮೋಟಾರು ಬಂಡಿ ಮತ್ತು ಅದರಲ್ಲಿ ಬಳಸುವ ಶುದ್ಧಿ ಮಾಡಿದ ಕಲ್ಲೆಣ್ಣೆಯನ್ನು ಸೂಚಿಸಲು ಕ್ರಮವಾಗಿ ಇಂಗ್ಲೆಂಡಿನಲ್ಲಿ ಮೋಟಾರ್‌ಕಾರ್ ಹಾಗೂ ಪೆಟ್ರಾಲ್ ಎಂಬ ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಆಟೊಮೋಬಿಲ್ ಮತ್ತು ಗ್ಯಾಸ್ ಎಂಬ ಪದಗಳನ್ನು ಉಪಯೋಗಿಸಲಾಗುತ್ತದೆ.

ಮೂರನೆಯದಾಗಿ, ಪ್ರತಿ ಲೇಖಕನೂ ತನ್ನದೇ ಆದ ಬರವಣಿಗೆಯ ಶೈಲಿಯನ್ನು ಬೆಳಸಿಕೊಂಡಿರುತ್ತಾನೆ. ಕೆಲವರದು ಸರಳಶೈಲಿಯಾದರೆ, ಇನ್ನು ಕೆಲವರದು ಅಲಂಕಾರಿಕವದ

ಶೈಲಿಯಾಗಿರುತ್ತದೆ. ಪ್ರತಿ ಲೇಖಕನ ಶೈಲಿಯ ಸ್ವರೂಪ ಹಾಗೂ ಸೊಗಸನ್ನು ಅರ್ಥಮಾಡಿಕೊಳ್ಳದೇ ಇದ್ದರೆ ತಪ್ಪುಗಳು ತಲೆದೋರುವ ಸಾಧ್ಯತೆ ಅಧಿಕವಾಗಿರುತ್ತದೆ ಎಂಬುದನ್ನು ಅನ್ವೇಷಕನು ಅರಿತಿರಬೇಕು. ಕೊನೆಯದಾಗಿ, ಗ್ರಂಥಗಳಲ್ಲಿ ಭಾಗದಿಂದ ಭಾಗಕ್ಕೆ ಪದಗಳ ಹಾಗೂ ಭಾಷಾಭಿವ್ಯಕ್ತಿಗಳ ಅರ್ಥಗಳು ಬದಲಾಗುತ್ತಿರುವುದರಿಂದ ಸಂದರ್ಭಗಳ ಆಧಾರದ ಮೇಲೆ ಅವುಗಳ ಅಕ್ಷರಶಃ ಅರ್ಥಗಳನ್ನು ಅರಿತುಕೊಳ್ಳಲು ಪ್ರಯತ್ನಿಸಬೇಕಾಗುತ್ತದೆ. ಹೀಗೆ ಹೇಳಿಕೆಗಳ ಪದಶಃ ಅರ್ಥಗಳನ್ನು ಆ ಕಾಲದ ಭಾಷೆ, ಕರ್ತೃವಿನ ಶೈಲಿ ಹಾಗೂ ಸರಿಯಾದ ಸಂದರ್ಭಗಳ ಅನುಸಾರವಾಗಿ ನಿರ್ಧರಿಸಬೇಕು.

ದಾಖಲೆಯ ಅಕ್ಷರಶಃ ಅರ್ಥವನ್ನು ಅರಿಯುವುದು ನಿಶ್ಚಯಾತ್ಮಕ ಅರ್ಥನಿರ್ಣಯ ವಿಮರ್ಶೆಯ ಮೊದಲನೆಯ ಹಂತವಾದರೆ, ಅದರ ನಿಜವಾದ ಅರ್ಥವನ್ನು ತಿಳಿಯುವುದು ಎರಡನೆಯ ಹಂತವಾಗುತ್ತದೆ. ಕರ್ತೃವು ನಿಜವಾದ ಅರ್ಥವನ್ನು ಅಣಕ, ಅರ್ಥಾಂತರೋಕ್ತಿ, ಅಪ್ರತ್ಯಕ್ಷ ಸೂಚನೆ, ಸಾದೃಶ್ಯ, ಪರಿಹಾಸ್ಯ, ಅತ್ಯುಕ್ತಿ, ರೂಪಕಾಲಂಕಾರ, ಉಪಮಾಲಂಕಾರ ಮುಂತಾದ ಸಂಕೇತಗಳೆಂಬ ಹೊದಿಕೆಯನ್ನು ಹೊದಿಸಿ ಮರೆಮಾಡಿಟ್ಟಿರುತ್ತಾನೆ. ಅಲಂಕಾರಿಕ ಭಾಷೆಯನ್ನು ಯಾವ ಅರ್ಥದಲ್ಲಿ ಬಳಸಲಾಗಿದೆ ಎಂಬುದನ್ನು ಖಚಿತವಾಗಿ ನಿರ್ಧರಿಸುವುದು, ಮತ್ತೆ ಕೆಲವು ಸಲ ರೂಪಕಗಳನ್ನು ಗುರುತಿಸುವುದೂ ಬಹು ಕಷ್ಟವಾಗುತ್ತದೆ.

## 7.5 ಸಾರಾಂಶ

ಈ ಘಟಕ 7ರಲ್ಲಿ ಕೆಳಗಿನ ವಿಷಯಗಳನ್ನು ಅರಿತೆವು.

- ಇತಿಹಾಸ ಸಂಶೋಧನೆಯಲ್ಲಿ ವಿಮರ್ಶೆಯ ಪ್ರಾಮುಖ್ಯತೆ ಹಾಗೂ ಅವುಗಳ ಅಳವಡಿಕೆ
- ವಿಮರ್ಶೆಯ ಪ್ರಥಮ ವಿಭಾಗವಾದ ಬಾಹ್ಯ ವಿಮರ್ಶೆಯಲ್ಲಿ ಗ್ರಂಥ ಕರ್ತೃ, ಕಾಲ ಮತ್ತು ಪ್ರದೇಶ ಇವುಗಳ ಬಗ್ಗೆ
- ವಿಮರ್ಶೆಯ ಎರಡನೆಯ ಪ್ರಮುಖ ವಿಭಾಗದಿಂದ ಆಂತರಿಕ ವಿಮರ್ಶೆಯಲ್ಲಿ ಗ್ರಂಥಕರ್ತೃ ತಿಳಿಸಿರುವ ವಿಷಯಗಳು ಸರಿಯಾಗಿಯೋ, ಸತ್ಯವೋ ಅಥವಾ ಇಲ್ಲವೋ ಎಂಬುದನ್ನು ಪರಿಶೀಲಿಸಿದೆವು.

## 7.6 ಪ್ರಮುಖ ಪದಗಳು

1. ಸ್ವಯಂ ಅನ್ವೇಷಣೆ: ಬಾಹ್ಯ ಟೀಕೆ
2. ನಾಣ್ಯ ಶಾಸ್ತ್ರ: ನಾಣ್ಯಗಳ ಅಧ್ಯಯನ

## 7.7 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ದಾಖಲೆಗಳ ನಿಶ್ಚಯಾತ್ಮಕ ಅರ್ಥನಿರ್ಣಯ ವಿಧಾನಗಳನ್ನು ವಿವರವಾಗಿ ಚರ್ಚಿಸಿ.
2. ನಿರಾಕರಣಾತ್ಮಕ ವಿವರಣಾತ್ಮಕ ವಿಮರ್ಶೆ ಮತ್ತು ಅದರ ಕಾರ್ಯಗಳನ್ನು ತಿಳಿಸಿ.

## 7.8 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 7.4.1 ನೋಡಿ
2. ವಿಭಾಗ 7.4.2 ನೋಡಿ

## 7.9 ಪರಾಮರ್ಶನ ಗ್ರಂಥಗಳು


1) Sheik Ali B : History: Its Theory and Method
2) ವೆಂಕಟರತ್ನಂ ಎ.ವಿ ಮತ್ತು ಪದ್ಮ ಎಂ.ಬಿ.: ಇತಿಹಾಸ ಸಂಶೋಧನಾ ಮಾರ್ಗ.



**ಪಠ್ಯವನ್ನು ರಚಿಸಿದವರು:**
**ಪ್ರೊ.ಎನ್. ಸರಸ್ವತಿ**

# ಘಟಕ– 8 ಐತಿಹಾಸಿಕ ಸಂಶೋಧನೆಯಲ್ಲಿ ಪರಿಕಲ್ಪನೆಗಳು – ವಸ್ತುನಿಷ್ಠತೆ ಹಾಗೂ ಕಾರ್ಯಕಾರಣ ಸಂಬಂಧಗಳು

**ರಚನೆ**

**8.0** ಉದ್ದೇಶಗಳು

**8.1** ಪೀಠಿಕೆ

**8.2** ಐತಿಹಾಸಿಕ ಸಂಶೋಧನೆಯಲ್ಲಿ ವಸ್ತುನಿಷ್ಠತೆ

**8.3** ಐತಿಹಾಸಿಕ ಸಂಶೋಧನೆಯಲ್ಲಿ ಪೂರ್ವಾಗ್ರಹಗಳು

**8.4** ಐತಿಹಾಸಿಕ ಸಂಶೋಧನೆಯಲ್ಲಿ ಕಾರ್ಯಕಾರಣ ಸಂಬಂಧ

**8.5** ಐತಿಹಾಸಿಕ ಸಂಶೋಧನೆಯಲ್ಲಿ ಕಾರ್ಯಕಾರಣವಾದದ ಉಪಯೋಗಗಳು

**8.6** ಸಾರಾಂಶ

**8.7** ಪ್ರಮುಖ ಪದಗಳು

**8.8** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**8.9** ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

**8.10** ಪರಾಮರ್ಶನ ಗ್ರಂಥಗಳು

## 8.0 ಉದ್ದೇಶಗಳು

19ನೇ ಶತಮಾನದಲ್ಲಿ ವೃತ್ತಿನಿರತ ಇತಿಹಾಸಕಾರರು ವಿಜ್ಞಾನವನ್ನು ತಿಳುವಿನ ಅಥವಾ ಅರಿವಿನ ಮಾದರಿಯಾಗಿ ಪರಿಗಣಿಸಿ, ಪ್ರಾಕೃತಿಕ ವಿಜ್ಞಾನಿ ಹಾಗೂ ಇತಿಹಾಸಕಾರನ ಕಾರ್ಯವಿದಾನಗಳಿಗಿರುವ ಹೋಲಿಕೆಯಿಂದ ಇತಿಹಾಸವೂ ವಿಜ್ಞಾನ ಎಂಬ ನಿರ್ಣಯಕ್ಕೆ ಬಂದರು. ಇದರ ಪರಿಣಾಮವಾಗಿ ವಿಚಾರಸರಣಿ ಮತ್ತು ಭಾವನಾ ಸಮುಚ್ಚಯ ಉದಯಿಸಿ ಇತಿಹಾಸದ ಅಧ್ಯಯನವನ್ನು ವಿವರಿಸಲು ಮತ್ತು ಪ್ರತಿಪಾದಿಸಲು ನೆರವಾಯಿತು. ಈ ವಿಚಾರ ಸರಣಿಗೆ ಎರಡು ಸ್ತಂಭಗಳು ಆಧಾರವಾಗಿದ್ದವು; ಒಂದು, ಸಂಗತಿಗಳು ಅಸ್ತಿತ್ವದಲ್ಲಿರುವುದು; ಮತ್ತು ಎರಡು ವೈಜ್ಞಾನಿಕವಾಗಿ ಅವುಗಳೊಂದಿಗೆ ವ್ಯವಹರಿಸಲು ಸಮರ್ಥವಾದ ಒಂದು ವಿಧಾನವಿದೆಯೆಂಬುದು. ಭೂಗರ್ಭಶಾಸ್ತ್ರಜ್ಞಾನ ನಿಷ್ಕರ್ಷೆಯಂತೆ, ಇತಿಹಾಸದ ವಿಧಾನದಿಂದ ಸಂಗತಿಗಳನ್ನು ಸಂಗ್ರಹಿಸಲು ಇತಿಹಾಸಕಾರನಿಗೆ ಸಾಧ್ಯವಾಗುತ್ತದೆ. ಸಂಗತಿಗಳು ಅಸ್ತಿತ್ವದಲ್ಲಿದ್ದು ಶೋಧನೆಯ ನಿರೀಕ್ಷೆಯಲ್ಲಿರುತ್ತವೆ. ಟೈನ್ ಹೇಳಿರುವಂತೆ, ಸಂಗತಿಗಳನ್ನು ಸಂಗ್ರಹಿಸಿದ ನಂತರ ಕಾರಣಗಳ ಅನ್ವೇಷಣೆ ಪ್ರಾರಂಭವಾಗುತ್ತದೆ; ಆದ್ದರಿಂದ ಸಂಗತಿಗಳು ಸಂಗ್ರಹಿಸಬಲ್ಲ ಕಂಡುಹಿಡಿಯಬಲ್ಲ, ಜೋಡಿಸಬಲ್ಲ, ಅನಂತರ ವಿಚಾರಣೆ ಮಾಡಿ ವಿವರಿಸಬಲ್ಲ ವಸ್ತುಗಳ ಧೃಡತೆಯನ್ನು ಹೊಂದಿರುತ್ತವೆ. ಈ ಬೆಳವಣಿಗೆಯ ಪರಿಣಾಮವಾಗಿ, ಸಂಗತಿಗಳ ವಸ್ತುನಿಷ್ಠತೆ ನಿರೂಪಣೆ ಇತಿಹಾಸ ರಚನೆಗೆ ಮಾರ್ಗದರ್ಶನ ಆದೇಶವಾಯಿತು. ಸಂಗತಿಗಳನ್ನು ಶೋಧಿಸಿ ಕ್ರಮಪಡಿಸುವುದು ಇತಿಹಾಸಕಾರನ ಉದ್ದೇಶ ಎಂದು ಕ್ರೈಗ್‌ಟನ್ ಬರೆದರು. ಸಮಾಜ ಜೀವಿಗಳಾಗಿ ಮಾನವನ ಚಟುವಟಿಕೆಗಳ ಬೆಳವಣಿಗೆಯನ್ನು ಮತ್ತು ಅವುಗಳ ಕಾರ್ಯಕಾರಣ ಸಂಬಂಧಗಳನ್ನು ಶೋಧಿಸಿ ವಿಮರ್ಶಿಸುವ ವಿಜ್ಞಾನವೇ ಇತಿಹಾಸ ವಿಜ್ಞಾನ ಎಂದು ಅರ್ನೆಸ್ಟ್ ಬರ್ನಿಹಿಮ್ ಘೋಷಿಸಿದರು.

ಶಿಸ್ತಿನಿಂದ ಕೂಡಿದ ಸಂಶೋಧನೆಯ ಒಂದು ಮಾದರಿ ಇತಿಹಾಸ. ಇದು ಮಾನವ ಜ್ಞಾನ ಸಂಪತ್ತಿನ ಒಂದು ಪ್ರಮುಖ ಅಂಗವೂ ಹೌದು. ಇತಿಹಾಸದ ಕ್ರಿಯೆ ತಿಳುವಳಿಕೆಯ ಮೇಲೆ ಆಧಾರಿತವಾಗಿದೆ. ಆದರೆ ಈ ಕ್ರಿಯೆಯು ಸೀಮಿತವಾಗಿದ್ದು, ಮುಖ್ಯವೂ ಹಾಗೂ ಅಗತ್ಯವಾದ ಕಥೆಯನ್ನು ಸಮಂಜಸವಾಗಿ ಹೇಳುವುದಕ್ಕೆ ಮಾತ್ರ ಅನ್ವಯಿಸುತ್ತದೆ. ಸಾಮಾಜಿಕ ಪ್ರತಿನಿಧಿಯಾಗಿರುವ ಇತಿಹಾಸಕಾರನ ಶಿಸ್ತು ಇತರ ಮಾನಸಿಕ ಶಿಸ್ತುಗಳ ಹಾಗೂ ಪ್ರಕೃತಿ ವಿಜ್ಞಾನಿಗಳಿಗಿಂತ ವಿಭಿನ್ನವಾಗಿದೆ. ಮಾತ್ರವಲ್ಲ, ಇತಿಹಾಸಕಾರರನು ಎದುರಿಸಬೇಕಾಗಿರುವ ಸಮಸ್ಯೆಗಳು, ಮುಖ್ಯವಾಗಿ ಪರಿವಿಡಿಗೆ ಸಂಬಂಧಿಸಿದ, ನೈತಿಕ ಹಾಗೂ ಸಾಮಾಜಿಕ ಸಮಸ್ಯೆಗಳು ಇತರ ಬೌದ್ಧಿಕ ಚಟುವಟಿಕೆಗಳಲ್ಲಿ ಕಂಡುಬರುವುದಿಲ್ಲ.

## 8.1 ಪೀಠಿಕೆ

ಇತಿಹಾಸದ ರಚನೆಯಲ್ಲಿ ವಸ್ತುನಿಷ್ಠತೆಯನ್ನು ಸಾಧಿಸಬಹುದೇ? ಎಂಬ ಪ್ರಶ್ನೆ ಇತ್ತೀಚಿನದೇನಲ್ಲ. ಈ ಪ್ರಶ್ನೆ ಹಲವಾರು ದಶಕಗಳಿಂದ, ಇತಿಹಾಸ ಲೇಖನಶಾಸ್ತ್ರ ಬೆಳೆದಂತೆ, ಇತಿಹಾಸಕಾರ ಹಾಗೂ ಸಂಶೋಧಕನಗ ಎದುರಾಗುತ್ತಿದೆ. ಈ ಕುರಿತು ಪರ ಹಾಗೂ ವಿರೋಧ ಅಭಿಪ್ರಾಯಗಳು ವ್ಯಕ್ತವಾಗಿದ್ದು, ಇಂದಿಗೂ ಜೀವಂತ

ಚರ್ಚಾ ವಿಷಯವಾಗಿದೆಯಲ್ಲದೆ, ಇತಿಹಾಸವು ಪೊಳ್ಳು ಮಾತು ಅಥವಾ ಬೂಟಾಟಿಕೆ ಎಂಬ ಅಪವಾದಕ್ಕೂ ಗುರಿಯಾಗಿದೆ. ಈ ವಿಷಯದ ಬಗ್ಗೆ ಚರ್ಚೆ ಅಗತ್ಯ.

ಇತಿಹಾಸ ರಚನೆಯಲ್ಲಿ ಇತಿಹಾಸಕಾರನ ನಿಶ್ಚಿತ ಪಾತ್ರದ ಬಗ್ಗೆ ಇತಿಹಾಸ ವಿಮರ್ಶಕರಲ್ಲಿ ಒಮ್ಮತವಿಲ್ಲ. ಘಟನೆ ಅಥವಾ ಕಥೆ ಜರುಗಿದಂತೆಯೇ ಅದನ್ನು ವಿವರಿಸುವುದು ಇತಿಹಾಸಕಾರನ ಕರ್ತವ್ಯ ಎಂಬುದು ಕೆಲವರ ಅಭಿಪ್ರಾಯ. ಈ ಕಥನದಲ್ಲಿ ಇತಿಹಾಸಕಾರ ತನಗೆ ಇಷ್ಟವಾದ ಘಟನೆಗಳನ್ನು ಆಯ್ದುಕೊಳ್ಳುವುದಾಗಲೀ, ಅವುಗಳಿಗೆ ಬೇರೆ ಏನಾದರೂ ಸೇರಿಸುವುದಾಗಲೀ ಮತ್ತು ಮೂಲಾಧಾರದಲ್ಲಿಲ್ಲದ ಮಾತುಗಳನ್ನು ತನ್ನ ಹಂಚಿಕೆಗೆ ಅನುಗುಣವಾಗಿ ಸೇರಿಸುವುದಾಗಲೀ ಸಲ್ಲದು. ಸಂಗತಿಗಳು ಅಥವಾ ಘಟನೆಗಳು ತಮ್ಮ ಕಥೆಯನ್ನು ಸ್ವತಂತ್ರವಾಗಿ ಹೇಳಲು ಇತಿಹಾಸಕಾರನು ಮದ್ಯ ಪ್ರವೇಶಿಸದೆ, ಅವಕಾಶವನ್ನು ಕಲ್ಪಿಸಬೇಕು. ಯಾವ ಕಾರಣದಿಂದಲೂ ಇತಿಹಾಸಕಾರನು ತನ್ನ ವಿಷಯ ವಸ್ತುವಿನಲ್ಲಿ ಅನಗತ್ಯವಾಗಿ ಪ್ರವೇಶಿಸಬಾರದು. ಸಂಭವಿಸಿದ ಘಟನೆಗಳನ್ನು ಯಥಾರ್ಥವಾಗಿ ಹಾಗೂ ವಿಶ್ವಾಸನೀಯವಾಗಿ ಪುನರ್‌ರಚಿಸಬೇಕು. ಇತಿಹಾಸಕಾರನು ಈ ಕ್ರಮಗಳನ್ನು ಅನುಸರಿಸಿ ಗತಕಾಲದ ಕಥನವನ್ನು ಪಕ್ಷಪಾತವಿಲ್ಲದೆ ರಚಿಸುವುದಕ್ಕೆ ಐತಿಹಾಸಿಕ ವಾಸ್ತವತೆ ಅಥವಾ ವಸ್ತುನಿಷ್ಠತೆ ಎಂದು ಕರೆಯುತ್ತೇವೆ.

ಈ ನಿಲುವಿಗೆ ಅಮೆರಿಕಾದ ಇತಿಹಾಸಕಾರರಾದ ಚಾರಲ್ಸ್ ಬಿಯರ್ಡ್ ಮತ್ತು ಕಾರ್ಲ್ ಬೇಕರ್ ಅವರಿಂದ ಕಟುವಾದ ವಿರೋಧ ವ್ಯಕ್ತವಾಗಿದೆ. ಅವರ ವಾದದ ಸಾರಾಂಶ ಇಂತಿದೆ; ಇತಿಹಾಸದ ಸಾಪಾಕ್ಷೆತೆಯು ನಿರಾಧಾರವಾದುದು. ಇತಿಹಾಸಕಾರನ ಚಟುವಟಿಕೆ ಅನ್ಯವಿವೇಚನೆಗೆ ಛೇದ್ಯವಾಗಿರುತ್ತದೆ. ಇತಿಹಾಸದ ಸಂಗತಿಗಳು ವಿಭಿನ್ನವಾಗಿರುವುದರಿಂದ ಅವುಗಳನ್ನು ಪ್ರಾಕೃತಿಕ ವಿಜ್ಞಾನಗಳ ಸಂಗತಿಗಳಂತೆ ನಿಷ್ಕರ್ಷೆಯಿಂದ ದೃಢಪಡಿಸಲಾಗುವುದಿಲ್ಲ, ಮಾತ್ರವಲ್ಲ, ಇತಿಹಾಸಕಾರನಿಗೆ ಅವಶ್ಯಕವಾದ ಸಂಗತಿಗಳನ್ನು ಗೊತ್ತುಪಡಿಸಿದ ಮತ್ತು ಸಾರ್ವತ್ತಿಕವಾಗಿ ಅಂಗೀಕರಿಸಿದ ವಿಧಾನಗಳಿಂದ ವಿಶ್ಲೇಷಿಸಲಾಗುವುದಿಲ್ಲ. ಇತಿಹಾಸಕಾರನ ಚಿತ್ರದ ಚೌಕಟ್ಟು ಶಿಥಿಲವಾಗಿದ್ದು ಬೇಕಾದ ಹಾಗೆ ಹೊಂದಿಸಬಹುದಾಗಿದೆ. ಸಂಗತಿಗಳ ಅಸ್ತಿತ್ವವೇ ಸಮಸ್ಯಾತ್ಮಕವಾಗದೆ, ಕೊನೆಯದಾಗಿ, ಇತಿಹಾಸಕಾರ ಮಾನವ ಜೀವಿಗಳೊಂದಿಗೆ ವ್ಯವಹರಿಸುವುದರಿಂದ ಹಾಗೂ ಆತನ ಮೌಲ್ಯಗಳೇ ಒಳಗೊಂಡಿರುವುದರಿಂದ ಆತನು ಅವುಗಳನ್ನು ಅನುಮೋದಿಸುತ್ತಾನೆ ಅಥವಾ ನಿರಾಕರಿಸುತ್ತಾನೆ ನೈತಿಕ ವ್ಯಕ್ತಿಯಾಗಿ, ರಾಜಕೀಯ ನಡವಳಿಕೆಗಳ ಬಗ್ಗೆ ಆತನ ಮನೋವೃತ್ತಿಯು ಭೂಗರ್ಭ ಶಾಸ್ತ್ರಜ್ಞನ ಅಲಿಪ್ತತೆಯನ್ನು ಹೊಂದಿರುವುದಿಲ್ಲ.

## 8.2 ಐತಿಹಾಸಿಕ ಸಂಶೋಧನೆಯಲ್ಲಿ ವಸ್ತುನಿಷ್ಠತೆ

ಇತಿಹಾಸವು ವಿಷಯದ ಜ್ಞಾನ ಅಥವಾ ಅರಿವಿನ ಅಸರೆಯುಳ್ಳ ಕ್ರಿಯೆ. ಆದರೆ ಐತಿಹಾಸಿಕವಾದ ಈ ಕ್ರಿಯೆಯು ಮುಖ್ಯವೂ ಮತ್ತು ಅಗತ್ಯವೂ ಆದ ಕಥೆಯನ್ನು ಸಮಂಜಸವಾಗಿ ಹೇಳುವುದಕ್ಕೆ ಸೀಮಿತವಾಗಿದೆ. ಇತಿಹಾಸಕಾರನು ಸಮಾಜದ ಪ್ರತಿನಿಧಿ, ಆತನ ಶಿಸ್ತು ಇತರ ಮಾನವಿಕ ಶಿಸ್ತುಗಳ ಹಾಗೆ ಪ್ರಕೃತಿ ವಿಜ್ಞಾನಗಳಿಗಿಂತ ವಿಭಿನ್ನವಾಗಿದೆ. ವಿವೇಚನಾಪರ ಕಾರ್ಯಕರ್ತರಿಗೆ ಹೋಲಿಸಿದಾಗ ಇತಿಹಾಸಕಾರನ

ಪರಿಸ್ಥಿತಿ ಅಸಾಧಾರಣವಾದುದು. ಏಕೆಂದರೆ ಆತನು ಎದುರಿಸಬೇಕಾಗಿರುವ ಕ್ರಮಬದ್ಧ ವರ್ಗೀಕರಣ, ನೈತಿಕ ಹಾಗೂ ಸಾಮಾಜಿಕ ಸಮಸ್ಯೆಗಳು ಇತರ ಬೌದ್ಧಿಕ ಚಟುವಟಿಕೆಗಳಲ್ಲಿ ಉದ್ಭವಿಸುವುದಿಲ್ಲ. ಮಾತ್ರವಲ್ಲ, ಈ ಸಮಸ್ಯೆ ಆತನ ಕಥನ ಘಟನೆಗಳಿಗೆ ಮಾತ್ರ ಸಂಬಂಧಿಸಿರದೆ ಸಾಮಾನ್ಯ ಸೂತ್ರ ನಿರೂಪಣೆ, ಸ್ಪಷ್ಟೀಕರಣ ಮತ್ತು ಆದರೆ ಸಂಬಂಧಿಸಿದ ಇತರ ಘಟಕಾಂಶಗಳನ್ನು ಒಳಗೊಂಡಿರುತ್ತದೆ.

ಇತಿಹಾಸವನ್ನು ರಚಿಸುವಾಗ ಅಥವಾ ತನ್ನ ಕಥನವನ್ನು ನಿರೂಪಿಸುವುವಾಗ ಇತಿಹಾಸಕಾರ ನಿಷ್ಪಕ್ಷಪಾತಿಯಾಗಿರಬೇಕೆ? ಇಲ್ಲಿ ಒಂದು ನಿಜವಾದ ಸಮಸ್ಯೆ ಎದುರಾಗುತ್ತದೆ. ಇತಿಹಾಸಕಾರನ ನಿಶ್ಚಿತ ಪಾತ್ರದ ಬಗ್ಗೆ ಇತಿಹಾಸ ಸಂಶೋಧನಾ ವಿಧಾನದ ಪರಿಣಿತರು ಮತ್ತು ಜವಾಬ್ದಾರಿಯುತ ಇತಿಹಾಸಕಾರರಲ್ಲಿ ಒಮ್ಮತ ಕಂಡುಬರುವುದಿಲ್ಲ. ಕಥೆಯು ಜರುಗಿದಂತೆಯೇ ಅದನ್ನು ವಿವರಿಸುವುದು ಇತಿಹಾಸಕಾರನ ಕರ್ತವ್ಯವೆಂದು ಕೆಲವರು ಅಭಿಪ್ರಾಯ ಪಡುತ್ತಾರೆ, ಇತಿಹಾಸಕಾರನು ತನ್ನ ರಚನೆಯಲ್ಲಿ ತನಗೆ ಇಷ್ಟವಾದ ಘಟನೆಗಳನ್ನು ಆರಿಸಿಕೊಳ್ಳುವುದಾಗಲೀ, ಅವುಗಳಿಗೆ ಬೇರೆ ಬೇರೆ ಏನಾದರೂ ಸೇರಿಸುವುದಾಗಲಿ ಮತ್ತು ಮೂಲ ಆದಾರಗಳಲ್ಲಿ ಕಂಡುಬರದ ಮಾತುಗಳನ್ನು ತನ್ನ ಹಂಚಿಕೆಗೆ ಅನುಗುಣವಾಗಿ ಅಳವಡಿಸಿಕೊಂಡು ರಚಿಸುವುದಾಗಲೀ ಮಾಡಬಾರದು. ಸಂಗತಿಗಳು ಅಥವಾ ಘಟನೆಗಳೂ ತಮ್ಮ ಕಥೆಯನ್ನು ಸ್ವತಂತ್ರ್ಯವಾಗಿ ಹೇಳಲು, ಇತಿಹಾಸಕಾರನು ಮಧ್ಯಪ್ರವೇಶಿಸದೆ, ಅವಕಾಶವನ್ನು ಕಲ್ಪಿಸಬೇಕು. ಯಾವ ಕಾರಣದಿಂದಲೂ ಇತಿಹಾಸಕಾರನು ತನ್ನ ವಿಷಯ ವಸ್ತುವಿನಲ್ಲಿ ಅನಗತ್ಯವಾಗಿ ಪ್ರವೇಶಿಸಬಾರದು. ಸಂಭವಿಸಿದ ಘಟನೆಗಳನ್ನು ಯಥಾರ್ಥವಾಗಿ ಹಾಗೂ ವಿಶ್ವಾಸನೀಯವಾಗಿ ಪುನರ್ರಚಿಸಬೇಕು. ಇತಿಹಾಸಕಾರನು ಈ ಕ್ರಮಗಳನ್ನು ಅನುಸರಿಸಿ ಗತಕಾಲದ ಕಥನವನ್ನು ಪಕ್ಷಪಾತವಿಲ್ಲದೆ ರಚಿಸುವುದಕ್ಕೆ ಐತಿಹಾಸಿಕ ವಸ್ತುನಿಷ್ಠತೆ ಅಥವಾ ವಾಸ್ತವತೆ ಎಂದು ಕರೆಯುತ್ತೇವೆ. ಇಲ್ಲಿ ಒಂದು ಸ್ಪಷ್ಟನೆ ಅಗತ್ಯವಾಗುತ್ತದೆ. ಪಕ್ಷಪಾತವಿಲ್ಲದಿರುವುದು ಎಂಬ ಮಾತ್ರಕ್ಕೆ ಅದು ನಿಶ್ಯಂಕೆಯ ಜ್ಞಾನ ಅಥವಾ ಅರಿವು ಎಂದು ಅರ್ಥಬರುವುದಿಲ್ಲ. ಅವರೆಡೂ ಒಂದೇ ಎಂದು ಭಾವಿಸುವುದು ತಪ್ಪಾಗುತ್ತದೆ. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ, ಗತಕಾಲದ ಒಂದು ಭಾಗ ಅಥವ ಪರಿಚ್ಛೇದ ಕುರಿತ ಇತಿಹಾಸಕಾರನ ಕಥನ ವಿಶ್ವಾಸನೀಯವೂ, ನಿಷ್ಠೆಯುಳ್ಳದ್ದೂ ಮತ್ತು ಪೂರ್ಣವಾದ ಪುನರ್ರಚನೆಯಾಗಿರುವ ಸಾಧ್ಯತೆ ಕಡಿಮೆ. ಈ ವಿಷಯವನ್ನು ಸಂಶೋಧಕರು ಅರಿತಿರುವುದು ಅಗತ್ಯ.

ವಸ್ತುನಿಷ್ಠತೆ ಸಾಧಿಸುವ ಪ್ರಯತ್ನದಲ್ಲಿ 19ನೇ ಶತಮಾನದಲ್ಲಿ ಕೆಲವು ಬೆಳವಣಿಗೆಗಳನ್ನು ಕಾಣುತ್ತೇವೆ. ಈ ಶತಮಾನದಲ್ಲಿ ವೃತ್ತಿನಿರತ ಇತಿಹಾಸಕಾರರು ವಿಜ್ಞಾನವನ್ನು ತಿಳುವಿನ ಮಾದರಿಯನ್ನಾಗಿ ತೆಗೆದುಕೊಂಡರು. ಪ್ರಾಕೃತಿಕ ವಿಜ್ಞಾನಿ ಹಾಗೂ ಇತಿಹಾಸಕಾರನ ಕಾರ್ಯವಿಧಾನಗಳಿಗಿರುವ ಸಾದೃಶ್ಯಗಳಿಂದ ಚಕಿತರಾಗಿ ಇತಿಹಾಸವೂ ವಿಜ್ಞಾನವೆಂಬ ನಿರ್ಣಯಕ್ಕೆ ಬಂದರು. ಈ ವೃತ್ತಿನಿರತ ಇತಿಹಾಸಕಾರರ ವೈಜ್ಞಾನಿಕ ಸ್ವರೂಪದ ವಿಚಾರಣಾ ಬಾವನೆಯಿಂದ ಪೂರ್ಣವಾದ ಬೆಳೆದ ವಿಚಾರಸರಣಿ ಮತ್ತು ಭಾವನಾ ಸಮುಚ್ಚಯವು ಬೆಳಕಿಗೆ ಬಂದಿತು. ಈ ವಿಧದ ಬರವಣಿಗೆಯು ಇತಿಹಾಸದ ಅಧ್ಯಯನವನ್ನು ವಿವರಿಸಲು ಮತ್ತು ಪ್ರತಿಪಾದಿಸಲು ನೆರವಾಯಿತು. ಈ ವಿಚಾರಸರಣಿಯು ಎರಡು ಸ್ತಂಭಗಳ ಮೇಲೆ ಆಧಾರಿತವಾಗಿತ್ತು. ಒಂದು, ಸಂಗತಿಗಳು ಅಸ್ತಿತ್ವದಲ್ಲಿರುವುದು; ಎರಡು, ವೈಜ್ಞಾನಿಕವಾಗಿ ಅವುಗಳೊಂದಿಗೆ ವ್ಯವಹರಿಸಲು

ಸಮರ್ಥವಾದ ಒಂದು ವಿಧಾನವಿದೆಯೆಂಬುದು. ಮುಂದುವರಿದು ಈ ನಿಲುವಿನ ಇತಿಹಸಕಾರರು ಸಂಗತಿಗಳ ವಾಸ್ತವಿಕ ಅಥವಾ ವಸ್ತುನಿಷ್ಟತೆಯ ನಿರೂಪಣೆಯನ್ನು ಮಾರ್ಗದರ್ಶಕ ಆದರ್ಶವಾಗಿ ಘೋಷಿಸಿದರು. ಸಂಗತಿಗಳನ್ನು ಶೋಧಿಸಿ ಕ್ರಮಪಡಿಸಿರುವುದು ಇತಿಹಾಸಕಾನ ಉದ್ದೇಶ ಎಂದು ವರ್ಣಿಸಿದರು.

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಪ್ರೊ.ಬ್ಯೂರಿ ಅವರು ವೈಜ್ಞಾನಿಕ ಇತಿಹಾಸದ ಪ್ರಮಾಣಭೂತ ಸೂತ್ರವೊಂದನ್ನು ನಿರೂಪಿಸಿದರು. ಸಂಗತಿಗಳು ಬ್ಯೂರಿ ಅವರ ವಿಚಾರಸರಣಿಯ ತಳಹದಿಯಾಗಿದೆ. ವೈಜ್ಞಾನಿಕ ಮೂಲ ಸಿದ್ಧಾಂತಗಳಂತೆ ಇತಿಹಾಸದ ಸಂಗತಿಗಳೂ ಸಿದ್ಧವಾಗಿ ದೊರೆಯುತ್ತವೆ. ವಸ್ತುನಿಷ್ಠತೆಯಿಂದ ಅವುಗಳನ್ನು ವ್ಯವಸ್ಥೆಗೊಳಿಸಿದಲ್ಲಿ ನೈತಿಕವಾದ ಕಥನವಾಗುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಸಂಗತಿಗಳನ್ನು ಕ್ರಮವಾಗಿ ಒಂದುಗೂಡಿಸಿದಾಗ ಅವುಗಳು ತಮ್ಮ ಪಾರೂಪತ್ವವನ್ನು ಉಳಿಸಿಕೊಳ್ಳುತ್ತವೆ. ಆದರೆ ಸಂಗತಿಗಳ ಪ್ರಾಮಾಣಿಕತೆಯನ್ನು ಕಾಪಾಡಿಕೊಂಡು ಬರಬೇಕು. ಬ್ಯೂರಿ ಅವರು ಇಷ್ಟು ಮಾತ್ರ ಹೇಳಿದರೇ ವಿನ: ಸಂಗತಿಗಳೇ ತಮ್ಮ ಕಥೆಯನ್ನು ಬಿಚ್ಚಿಡುತ್ತವೆ ಅಥವಾ ಸಂಗತಿಗಳನ್ನು ಸಮಂಜಸವಾಗಿ ನಿಷ್ಕರ್ಷಿಸುವುದರಲ್ಲಿ ಮಾತ್ರ ತೃಪ್ತಿಪಟ್ಟುಕೊಳ್ಳಬೇಕೆಂದು ಹೇಳಲಿಲ್ಲ. ಸಂಗತಿಗಳಿಗೆ ಸಲ್ಲಿಸಬೇಕಾದ ಗೌರವವನ್ನು ತೋರಿದಲ್ಲಿ ಅವು ಇತಿಹಾಸಕಾರನನ್ನು ತನ್ನ ಗುರಿಯ ಸಮೀಪಕ್ಕೆ ಕರೆದೊಯ್ಯುತ್ತದೆಂಬುದು ಬ್ಯೂರಿ ಅವರ ಭಾವನೆ. ಈ ಭಾವನೆಯನ್ನು ಅನೇಕ ಇತಿಹಾಸಕಾರರು ಸಮರ್ಥಿಸಿದ್ದಾರೆ. ಲ್ಯಾಂಗ್‌ಲಾಯ್ಸ್ ಮತ್ತು ಸೈನಭೋಸ್ ಅವರೂ ಸಹ ಇತಿಹಾಸದ ವೈಜ್ಞಾನಿಕ ಸ್ವಭಾವವು ಸಿಂಧುವೆಂದು ಸಾರಿದ್ದಾರೆ.

ಇತಿಹಾಸದ ಈ ವೈಜ್ಞಾನಿಕ ಸ್ವಭಾವ ಅಥವಾ ಸ್ವರೂಪವನ್ನು ಕಟುವಾಗಿ ವಿರೋಧಿಸಿದ ಅಮೆರಿಕಾದ ಇತಿಹಾಸಕಾರರಾದ ಚಾರಲ್ಸ್ ಬಿಯರ್ಡ್ ಮತ್ತು ಕಾರ್ಲ್ ಬೇಕರೆ ಅವರು ಮೊದಲಿಗೆ ಸಂಬಂಧ ಹೊಂದಿದ ಕಲ್ಪನೆಗಳತ್ತ ವಾಲಿ ಅಂತ್ಯದಲ್ಲಿ ಸಪ್ರಮಾಣವಾದಿಗಳಾಗಿ ಪರಿಣಮಿಸಿದರು. ಅವರ ಪ್ರಕಾರ, ಇತಿಹಾಸದ ಸಾಪೇಕ್ಷತೆಯು ನಿರಾಧಾರವಾದುದು. ಇತಿಹಾಸಕಾರರ ಚಟುವಟಿಕೆ ಅನ್ಯವಿವೇಚನೆಗೆ ಖೇದ್ಯವಾಗಿರುತ್ತದೆ. ಇತಿಹಾಸದ ಸಂಗತಿಗಳು ವಿಭಿನ್ನವಾಗಿರುವುದರಿಂದ ಅವುಗಳನ್ನು ಪ್ರಾಕೃತಿಕ ವಿಜ್ಞಾನಗಳ ಸಂಗತಿಗಳಷ್ಟು ನಿಷ್ಕರ್ಷೆಯಿಂದ ಸ್ಥಾಪಿಸಲು ಸಾಧ್ಯವಾಗುವುದಿಲ್ಲ. ಮಿಗಿಲಾಗಿ, ಇತಿಹಾಸಕಾರನಿಗೆ ಅವಶ್ಯಕವಾದ ಸಂಗತಿಗಳನ್ನು ಗೊತ್ತುಪಡಿಸಿದ ಮತ್ತು ಸಾರ್ವತ್ರಿಕವಾಗಿ ಅಂಗೀಕರಿಸಿದ ವಿಧಾನಗಳಿಂದ ವಿಶ್ಲೇಷಿಸಲಾಗುವುದಿಲ್ಲ, ಮಾತ್ರವಲ್ಲ, ಇತಿಹಾಸಕಾರನ ಚಿತ್ರದ ಚೌಕಟ್ಟು ಶಿಥಿಲವಾಗಿದ್ದು ಬೇಕಾದ ಹಾಗೆ ಹೊಂದಿಸಲಾಗುವಂತಿರುತ್ತದೆ. ಸಂಗತಿಗಳ ಅಸ್ತಿತ್ವವೇ ಸಮಸ್ಯಾತ್ಮಕವಾಗಿರುತ್ತದೆ. ಕಡೆಯದಾಗಿ, ಇತಿಹಾಸಕಾರ ಮಾನವ ಜೀವಿಗಳೊಂದಿಗೆ ವ್ಯವಹರಿಸುವುದರಿಂದ ಮತ್ತು ಆತನ ಮೌಲ್ಯಗಳೇ ಇಲ್ಲಿ ಒಳಗೊಂಡಿರುತ್ತದೆ. ಸಂಗತಿಗಳ ಅಸ್ತಿತ್ವವೇ ಸಮಸ್ಯಾತ್ಮಕವಾಗಿರುತ್ತವೆ. ಕಡೆಯದಾಗಿ, ಇತಿಹಾಸಕಾರ ಮಾನವ ಜೀವಿಗಳೊಂದಿಗೆ ವ್ಯವಹರಿಸುವುದರಿಂದ ಮತ್ತು ಆತನ ಮೌಲ್ಯಗಳೇ ಇಲ್ಲಿ ಒಳಗೊಂಡಿರುವುದರಿಂದ, ಆತನು ಅವುಗಳನ್ನು ಅನುಮೋದಿಸುತ್ತಾನೆ. ಅಥವಾ ನಿರಾಕರಿಸುತ್ತಾನೆ. ನೈತಿಕ ವ್ಯಕ್ತಿಯಾಗಿ ರಾಜಕೀಯ ನಡವಳಿಕೆಗಳ ಬಗ್ಗೆ ಆತನ ಮನೋವೃತ್ತಿಯು ಭೂಗರ್ಭಶಾಸ್ತ್ರಜ್ಞನ ಅಲಿಪ್ತತೆಯನ್ನು ಹೊಂದಿರುವುದಿಲ್ಲ.

ಇದು ಇತಿಹಾಸದ ವಸ್ತುನಿಷ್ಠತೆ ಕುರಿತಾದ ವಾದವಿವಾದಗಳು. ಈ ವಾದವಿವಾದಗಳು ವ್ಯಕ್ತಿಯ ಮನೋಗತದ ಮೇಲೆ ಕೇಂದ್ರೀಕೃತವಾಗಿವೆ. ಆದರೆ ಇಂದು ವ್ಯಕ್ತಿಮನೋಗತ ಎಂಬ ಪದವು ದಿಗಿಲು ಹುಟ್ಟಿಸುವುದಿಲ್ಲ. ತಿಳುವಳಿಕೆಯುಳ್ಳ ಮೌಲ್ಯಗಳು ಮತ್ತು ಅನುಭವಗಳು ಯಶಸ್ವಿಯಾಗಿ ಗೆಲ್ಲಲಾಗದಂತಹ ಸ್ವನಿಷ್ಠವಾದ ಆತಂಕಗಳೇನಲ್ಲ. ಮಾತ್ರವಲ್ಲ, ಅವು ಗತಕಾಲದ ಅಧ್ಯಯನಕ್ಕೆ ಅವಶ್ಯಕ ಉಪಕರಣಗಳಾಗಿವೆ. ಕ್ರೋಚ್ ಅವರ ಮಾತಿನಲ್ಲಿ ಹೇಳುವುದಾದರೆ, ನಾವು ಇತಿಹಾಸ ವಿಚಾರಣೆಯ ವ್ಯಕ್ತಿ ಮನೋಗತದ ವಾಸ್ತವಿಕ ಸ್ವಭಾವವನ್ನು ಪರಿಗಣಿಸುತ್ತೇವೆ. ಪಕ್ಷಪಾತದ ಅಪಾಯವನ್ನು ನಿರಾಕರಿಸಲಾಗದಿದ್ದರೂ, ಗತಕಾಲವನ್ನು ಅರ್ಥಮಾಡಿಕೊಳ್ಳಲು ಇತಿಹಾಸಕಾರನು ತನ್ನ ಮನಸ್ಸು ಮತ್ತು ಚೈತನ್ಯಗಳ ಸಾಮರ್ಥ್ಯಗಳನ್ನು ಉಪಯೋಗಿಸಿಕೊಳ್ಳಬೇಕು. ತನ್ನ ಸ್ವಂತ ಅನುಭವಗಳನ್ನು ವಿಷಯದ ಮೇಲೆ ಹೊರಿಸುವುದರಿಂದ ನಿರೂಪಣೆಯು ಭ್ರಷ್ಟವಾಗಲು ಅಥವಾ ದೋಷಿತಗೊಳ್ಳಲು ತಾನೇ ಕಾರಣನಾಗುತ್ತಾನೆ. ಇತಿಹಸಕಾರನ ಸನ್ನಿವೇಶದ ಚೌಕಟ್ಟಿನಲ್ಲಿ ಈ ಅಪಾಯವು ಅಡಗಿರುವುದರಿಂದ ಆತನು ಎಚ್ಚರಿಕೆಯಿಂದ ಇರುವುದು ಅಗತ್ಯ.

ಇತಿಹಾಸಕಾರನು ತನ್ನ ಯುಗದ ಮಾನವನಾಗಿರುವುದರಿಂದ ತನ್ನದೇ ಆದ ನೈತಿಕ ಮತ್ತು ರಾಜಕೀಯ ನಂಬಿಕೆಗಳನ್ನು ಹೊಂದಿದ್ದು ತನ್ನ ಸಮಕಾಲೀನರು ಅವುಗಳನ್ನು ಅಂಗೀಕರಿಸುವಂತೆ ಪ್ರೇರೇಪಿಸುತ್ತಾನೆಂಬ ವಾದವನ್ನು ಸುಲಭವಾಗಿ ವಿರೋಧಿಸಬಹುದು. ಅಲಿಪ್ತತೆ ಮತ್ತು ವಸ್ತುನಿಷ್ಠತೆಯಲ್ಲಿ ಇತಿಹಾಸಕಾರನ ತರಬೇತಿ, ಐತಿಹಾಸಿಕ ಕಲ್ಪನಾಶಕ್ತಿಯ ಅಭ್ಯಾಸದಿಂದ ಆತನ ಕಣ್ಣುಮುಂದೆ ಹಾಯುವ ವಿವಿಧ ನೈತಿಕ ಅಭಿಪ್ರಾಯಗಳು ಮತ್ತು ಪಕ್ಷಪಾತ ಸಾಧ್ಯತೆಯ ವಿಮರ್ಶಾತ್ಮಕ ಅರಿವು ಈ ಪ್ರೇರಣೆಗಳನ್ನು ದೂರೀಕರಿಸಲು ನೆರವಾಗುತ್ತವೆ, ಇದಕ್ಕಿರುವ ಏಕಮಾತ್ರ ರಕ್ಷಣೆ ಎಂದರೆ ಶಿಸ್ತಿನಿಂದ ಕೂಡಿದ ಸಂಶೋಧನೆಯ ಸಂಪ್ರದಾಯ, ವಸ್ತುನಿಷ್ಠತೆ ಮತ್ತು ಅಲಿಪ್ತತೆಯಿಂದ ಕೂಡಿದ ಇತಿಹಾಸವು ಮುಖ್ಯವಾದ ಪ್ರಬಾವವನ್ನು ಬೀರಬಲ್ಲದೆಂಬ ನಿರೀಕ್ಷೆ. ಪ್ರತಿಯುಗದ ಮನೋಧರ್ಮಕ್ಕೆ ಅನುಗುಣವಾಗಿ ಇತಿಹಾಸವನ್ನು ಪುನರ್ರಚಿಸುವುದು ಉಪಯುಕ್ತ ಮತ್ತು ಅಗತ್ಯ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಇಂತಹ ಪುನರ್ರಚನೆಯಲ್ಲಿ, ಪಕ್ಷಪಾತದ ಅರಿವಿನಿಂದ, ಈ ಯುಗವು ಏಕಕಾಲ ಮತ್ತು ವರ್ತಮಾನದ ಬಗ್ಗೆ ವಿಮರ್ಶಾತ್ಮಕವಾದ ಸ್ವಯವುಳ್ಳದ್ದಾಗಿರುತ್ತದೆ.

ಇತಿಹಾಸಕಾರನ ವಸ್ತುಸ್ಥಿತಿಯಲ್ಲಿ ಕೆಲವು ಸ್ಪಷ್ಟವಾದ ಮೂಲಾಂಶಗಳಿವೆ. ಈ ಅಂಶಗಳು ಇತಿಹಾಸಕಾರನ ಸಾಧುವಾದ ಐತಿಹಾಸಿಕ ಜ್ಞಾನ, ಆತನ ಸಮಸ್ಯೆಯ ಅರಿವು, ಸತ್ಯಕ್ಕಾಗಿ ಆತನ ಬದ್ಧ ಸ್ಥಿತಿ, ವಿಮರ್ಶಾತ್ಮಕ ವಿಚಾರ ಸರಣಿ ಹಾಗೂ ವಿಶ್ಲೇಷಣೆಗೆ ಆತನ ಸಾಮರ್ಥ್ಯ ಮೊದಲಾದುವುಗಳನ್ನು ಸಾಧ್ಯವಾಗಿಸುತ್ತವೆ. ಇತಿಹಾಸವು ತನ್ನ ವಿಷಯ ವಸ್ತುವಿಗೆ ಸಂಬಂಧಿಸಿದಂತೆ ವಸ್ತುನಿಷ್ಠಿತವಾಗಿರುತ್ತದೆ. ವಿಮರ್ಶೆಯನ್ನು ಎದುರಿಸಲು ಇತಿಹಾಸ ಸಿದ್ಧವಿರುವಾಗ ಮತ್ತು ಎರಡು ವರದಿಗಳಲ್ಲಿ ಯಾವುದಾದರೂ ಒಂದನ್ನು ಮಾತ್ರ ಆಯ್ದುಕೊಳ್ಳಬಹುದಾದ ಅವಕಾಶವನ್ನು ಹೊಂದಿ, ಪರಿಣಾಮಕಾರಿಯಾಗಿ ಸ್ಪರ್ಧಿಸಬಹುದಿರುವಾಗ, ಮತ್ತು ಗತಕಾಲವನ್ನು ಅದು ಯಥಾರ್ಥವಾಗಿ ನೋಡುವ ಒಂದು ಶುದ್ಧ ಪ್ರಯತ್ನವಾಗಿದ್ದರೆ ಇತಿಹಾಸಕಾರನು ತನ್ನ ಕೃತಿಯು ವಸ್ತುನಿಷ್ಠತೆಯಿಂದ ಕೂಡಿದ್ದೆಂದು ಖಂಡಿತವಾಗಿ ಪ್ರತಿಪಾದಿಸಬಹುದಾಗಿದೆ.

## 8.3 ಐತಿಹಾಸಿಕ ಸಂಶೋಧನೆಯಲ್ಲಿ ಪೂರ್ವಾಗ್ರಹಗಳು

ಪಕ್ಷಪಾತ ಮತ್ತು ಪೂರ್ವಾಗ್ರಹ ಈ ಪದಗಳನ್ನು ಸಮಾನಾರ್ಥಕವೆಂದು ಪರ್ಯಾಯ ಕ್ರಮದಲ್ಲಿ ಬಳಸುವುದು ವಾಡಿಕೆ. ಆದರೆ ಅವು ಸಮಾನಾರ್ಥವನ್ನು ಸೂಚಿಸುವುದಿಲ್ಲ. ಇತಿಹಾಸಕಾರನು ತನ್ನ ವೈಯಕ್ತಿಕ ಮೌಲ್ಯಗಳನ್ನು ಇತಿಹಾಸದ ವ್ಯಕ್ತಿಗಳಲ್ಲಿ ಅರಸುವುದು ಅಥವಾ ಐತಿಹಾಸಿಕ ಘಟನೆಗಳನ್ನು ತನ್ನ ವೈಯಕ್ತಿಕ ಮೌಲ್ಯಗಳಿಂದ ಅರ್ಥೈಸುವುದು ಪೂರ್ವಾಗ್ರಹವಾಗುತ್ತದೆ. ಅನೇಕ ಮೌಲ್ಯಗಳನ್ನು ಇತರರೊಂದಿಗೆ ಹಂಚಿಕೊಂಡಿರುವುದರಿಂದ, ಗುಂಪುಗಳಲ್ಲಿ ಸರ್ವಸಮ್ಮತವಾದ ಆಸಕ್ತಿಗಳಿದ್ದು ಕೆಲವು ಪ್ರಚೋದನೆಗಳಿಗೆ ಒಂದೇ ವಿಧದ ಪ್ರತಿಕ್ರಿಯೆಗಳು ಕಂಡುಬರುವುದು ಸಹಜ. ಆದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವನದ ಗತಿಯಲ್ಲಿ ತನ್ನದೇ ಆದ ನೈಜ ಜಗತ್ತನ್ನು ವಿಕಸಿತಗೊಂಡಿರುತ್ತಾನೆ. ಇದು ಮನೊಕೂಲದ ಮಾತೃಕೆಯಾಗಿದ್ದು ಇದರಿಂದ ಆತನ ಉದ್ದೇಶಪೂರ್ವಕ ನಡವಳಿ ಜನಿಸುತ್ತದೆ.

ಪುರಾವೆಗಳನ್ನು ಪೂರ್ಣವಾಗಿ ಪರ್ಯಾಲೋಚಿಸದೆ ಅಥವಾ ಪರೀಕ್ಷಿಸದೆ ನಿರ್ಣಯಿಸುವುದೇ ಪಕ್ಷಪಾತ ಮಾತ್ರವಲ್ಲ, ಇಂದು ನಿರ್ದಿಷ್ಟ ಮನೋಭಾವ ಅಥವ ದೃಷ್ಟಿಯನ್ನು ಹೊಂದಿರುವುದು ಅಥವಾ ಯಾವ ಸಂಶಯಕ್ಕೂ ಅವಕಾಶವೇ ಇಲ್ಲದಂತೆ ಒಂದು ಕಾರಣವನ್ನು ಪ್ರಬಲವಾಗಿ ಪರಿಗಣನೆಗೆ ತೆಗೆದುಕೊಳ್ಳುವುದು, ತನ್ನ ನಿಲುವಿಗೆ ವಿರುದ್ಧವಾದ ಪುರಾವೆಗಳು ಮತ್ತು ಆ ನಿಲುವನ್ನು ವಿರೋಧಿಸುವ ಅಭಿಪ್ರಾಯಗಳ ಅರಿವಿದ್ದೂ ಅವುಗಳನ್ನು ಪರಿಗಣಿಸದಿರುವುದು ಪಕ್ಷಪಾತವಾಗುತ್ತದೆ. ತಾವು ಪಕ್ಷಪಾತದಿಂದ ವಿಮುಕ್ತವಾಗಿದ್ದೇವೆಂದು ಹೇಳಿಕೊಳ್ಳುವ ವಿದ್ವಾಂಶರ ಸಂಖ್ಯೆ ವಿರಳ ಮತ್ತು ಹಾಗೆ ಹೇಳಿಕೊಳ್ಳುವುದು ನ್ಯಾಯಯುತವೂ ಆಗುವುದಿಲ್ಲ. ಪಕ್ಷಪಾತಗಳನ್ನು ಬೇರುಮಟ್ಟ ಕಿತ್ತುಹಾಕುವುದು ನಮಗೆ ಸಾಧ್ಯವಾಗುವುದಿಲ್ಲ. ಆದರೆ ಅದರ ಪ್ರಮಾಣವನ್ನು ಆದಷ್ಟು ಕಡಿಮೆ ಮಾಡಬಹುದಾಗಿದೆ. ಇತಿಹಾಸ ರಚನೆಯಲ್ಲಿ ಪಕ್ಷಪಾತದ ವಿರುದ್ಧವಿರುವ ರಕ್ಷಣೋಪಾಯವೆಂದರೆ ಅನುಪಯುಕ್ತ ನಿರ್ಣಯಗಳನ್ನು ಸ್ವೇಚ್ಛೆಯಿಂದ ಮಾಡುವುದರಿಂದ ದೂರವಿರುವುದರಿಂದಲ್ಲ; ಬದಲಿಗೆ ಒಬ್ಬ ವ್ಯಕ್ತಿಯ ಪೂರ್ವಭಾವನೆಗಳನ್ನು ಒಳಹೊಕ್ಕು ಪರಿಶೋಧಿಸುವುದರಿಂದ ಅವುಗಳನ್ನು ಮುಚ್ಚುಮರೆಯಿಲ್ಲದೆ ವ್ಯಕ್ತಪಡಿಸುವುದರಿಂದ ಮತ್ತು ಅವುಗಳಲ್ಲಿ ಯಾವುದಾದರೂ ಒಂದು ಮಾತ್ರ ಆಯ್ದುಕೊಳ್ಳಬಹುದಾದ ಅವಕಾಶವನ್ನು ಪರಿಗಣಿಸುವುದರಿಂದ. ಈ ರಕ್ಷಣೋಪಾಯದಿಂದ ಚರಿತ್ರೆಕಾರನು ಪಕ್ಷಪಾತದಿಂದ ವಿಮುಕ್ತನಾಗಬಹುದು.

ತನ್ನ ಉದ್ದೇಶ ಸಾಧನೆಗಾಗಿ ಅಥವಾ ಒಬ್ಬ ವ್ಯಕ್ತಿಯನ್ನು ಅತಿಶಯಿಸುವ ಅಥವಾ ತೆಗಳುವ ಉದ್ದೇಶದಿಂದ ರಚಿಸುವ ಕೃತಿ ಪೂರ್ವಾಗ್ರಹದಿಂದ ಕೂಡಿರುತ್ತದೆ. ಉದಾಹರಣೆಗೆ, ಮೊದಲನೆಯ ಜಾಗತಿಕ ಯುದ್ಧದಲ್ಲಿ ಅಮೆರಿಕಾ ನಡುವೆ ಪ್ರವೇಶಿಸಿದಾಗ ಅಂದಿನ ಆ ದೇಶದ ಅಧ್ಯಕ್ಷ ವುಡ್ರೋವಿಲ್ಸನ್, ಮಾಡಿದ್ದನೆಂಬ ಹೇಳಿಕೆ. ಅದೇನೆಂದರೆ, ಒಂದು ಸಾರಿ ಈ ಜನರನ್ನು ಯುದ್ಧದಲ್ಲಿ ತೊಡಗಿಸಿಕೊಂಡು ಹೋದಮೇಲೆ ತಾಳ್ಮೆ ಅಥವ ಸಹನೆ ಇತ್ತೆಂಬುದನ್ನು ಮರೆಯುತ್ತಾರೆ. ಹೋರಾಡಲು ನೀವು ಕ್ರೂರಿ ಮತ್ತು ನಿರ್ದಯಿಗಳಾಗಿರಬೇಕು. ಈ ಕ್ರೂರ ನಿಷ್ಕರುಣೆ ಅಥವ ತಾಳ್ಮೆಯ ಪ್ರಜಕೃತಿ ನಮ್ಮ ರಾಷ್ಟ್ರೀಯ ಜೀವನವನ್ನು ಪ್ರವೇಶಿಸಿ, ನಮ್ಮ ಕಾಂಗ್ರೆಸ್, ನ್ಯಾಯಾಲಯಗಳು, ಗಸ್ತುತಿರುಗುವ ಪೇದೆ, ರಸ್ತೆಯಲ್ಲಿರುವ ಜನ ಎಲ್ಲರನ್ನೂ

ಕಲಷಿತಗೊಳಿಸುತ್ತೆ. ಅಧ್ಯಕ್ಷ ವುಡ್ರೋವಿಲ್ಸನ್ ಕುರಿತಾದ ಕೃತಿಗಳಲ್ಲಿ ಹಾಗೂ ಮೊದಲನೆಯ ಜಾಗತಿಕ ಯುದ್ಧದಲ್ಲಿ ಅಮೆರಿಕಾದ ಮಧ್ಯಪ್ರವೇಶ ಕುರಿತಾದ ಕೃತಿಗಳಲ್ಲಿ ಪ್ರತಿಯೊಬ್ಬ ಪ್ರಸಿದ್ಧ ಇತಿಹಾಸಕಾರನು ಈ ಹೇಳಿಕೆಯು ವಿಲ್ಸನ್ ಮಾಡಿದ್ದೆಂದು ಉಲ್ಲೇಖಿಸಿದ್ದಾರೆ. ಇತ್ತೀಚಿನ ಸಂಶೋಧನೆಗಳಿಂದ ಅಧ್ಯಕ್ಷ ವಿಲ್ಸನ್ ಆ ಹೇಳಿಕಯನ್ನು ಮಾಡಿರಲಿಲ್ಲವೆಂಬುದು ವ್ಯಕ್ತವಾಗುತ್ತದೆ. ಮಾತ್ರವಲ್ಲ, ಅಲ್ಲಿನ ಶಾಂತಿ ಪ್ರತಿಪಾದಕರಾದ ಮ್ಯಾಕ್ಸ್‌ವೆಲ್ ಅಂಡರ್‌ಸನ್ ಮತ್ತು ಲಾರೆನ್ಸ್ ಸ್ಟಾಲಿಂಗ್ಸ್ ಯುದ್ಧದ ಪರಿಣಾಮಗಳ ಬಗ್ಗೆ ವಿಲ್ಸನ್ ಭವಿಷ್ಯ ಜ್ಞಾನವುಳ್ಳವನಾಗಿದ್ದನೆಂದು ತೋರಿಸುವ ಸಲುವಾಗಿ ಸೃಷ್ಟಿಸಿದ್ದಾಗಿದೆ ಎಂಬುದನ್ನು ಈ ಸಂಶೋಧನೆಗಳು ದೃಢಪಡಿಸಿವೆ. ಅಂತೆಯೇ, ಬಿಲ್ಹಣನ ವಿಕ್ರಮಾಂಕದೇವ ಚರಿತ ಮತ್ತು ಅಬುಲ್ ಫಸಲ್‌ನ ಐನ್–ಇ–ಅಕ್ಬರಿ ಮತ್ತು ಅಕ್ಬರ್‌ನಾಮ ತಮ್ಮ ಆಶ್ರಯದಾತನನ್ನು ಪ್ರಶಂಸಿಸುವ ಪೂರ್ವಾಗ್ರಹದಿಂದ ಪೀಡಿತವಾಗಿದ್ದರೆ ಬದೌನಿಯ ಮುಂತಕಬ್–ವುಲ್–ತವಾರಿಕ್ ತನ್ನ ಪೋಷಕನ ನ್ಯೂನತೆಗಳನ್ನು ಎತ್ತಿ ತೋರಿಸುವುದಕ್ಕೆ ಮೀಸಲಾಗಿದೆ.

ಇತಿಹಾಸ ರಚನೆಯಲ್ಲಿ ಆಯ್ಕೆಯ ನಿಯಮವು ತೊಡಕುಂಟು ಮಾಡುತ್ತದೆ. ಇತಿಹಾಸಕಾರನು ತಾನು ಸೇರಿಸಲು ಇಷ್ಟಪಡುವ ಸಂಗತಿಗಳನ್ನಲ್ಲದೆ ತಾನು ಘಟನೆಗಳಿಗೆ ಕೊಡಲಿರುವ ಕಾರಣಗಳನ್ನೂ ಸಹ ಎಲ್ಲರಿಗೂ ತಿಳಿದ ಸಂಗತಿ. ಈ ಪ್ರವೃತ್ತಿ, ಇತಿಹಾಸಕಾರರು ತಮ್ಮ ವಿಚಿತ್ರ ಭಾವನೆ ಮತ್ತು ಪೂರ್ವಗ್ರಹಕ್ಕೆ ಅನುಗುಣವಾಗಿ ನಿರ್ಮಿಸುವುದೇ ಇತಿಹಾಸ ವಿರೋಧಿಗಳ ಅಭಿಪ್ರಾಯವನ್ನು ಸಮರ್ಥಿಸಿದಂತಾಗುತ್ತದೆ. ಆದರೆ ನಿಷ್ಕಪಟ ಅಥವ ಪ್ರಾಮಾಣಿಕತೆಯುಳ್ಳ ಇತಿಹಾಸಕಾರನು ತನಗೆ ಸಾಧ್ಯವಾದಷ್ಟು ಎಚ್ಚರಿಕೆಯಿಂದಿರುವುದು ಅಗತ್ತಯ. ತಾನು ಒಂದು ಘಟನೆಯನ್ನು ಚಿತ್ರಿಸುವ ಕ್ರಿಯೆಯಲ್ಲಿ ತೊಡಗಿರುವವನೆಂಬುದನ್ನು ನೆನಪಿಸಿಕೊಂಡು ತನ್ನ ಪೂರ್ವಗ್ರಹಗಳು ಮತ್ತು ವೈಯಕ್ತಿಕ ಅಭಿಪ್ರಾಯಗಳನ್ನು ಮೆಟ್ಟಿ ನಿಲ್ಲಲು ಪ್ರಯತ್ನಿಸಬೇಕು. ಒಂದು ವಿಷಯವನ್ನು ವಿಚಾರಮಾಡುವಲ್ಲಿ ಅದರ ತಥ್ಯಾಂಶವು ಹೀಗಿರಬಹುದೆಂದು ಊಹಿಸಿದ ಮೇಲೆ ಅಥವ ನಿಷ್ಕರ್ಷೆ ಮಾಡಿದ ಮೇಲೆ, ಅದನ್ನು ಕಠಿಣಕರ ಪರೀಕ್ಷೆಗೆ ಹಾಗೂ ಅದನ್ನು ಬೆಂಬಲಿಸುವ ಅಥವಾ ವಿರೋಧಿಸುವ ಪುರಾವೆಗಳನ್ನು ಪರಿಶೀಲಿಸಲು ಪ್ರಯತ್ನಿಸಬೇಕು.

ಮಿಗಿಲಾಗಿ, ಚರಿತ್ರೆಕಾರನು ತನ್ನ ವೈಯಕ್ತಿಕ ಮೌಲ್ಯಗಳು ತನ್ನ ಕಥನದಲ್ಲಿ ಒಳಸೇರದಂತೆ ನೋಡಿಕೊಂಡು, ಎಲ್ಲ ಮಹತ್ವದ ಮತ್ತು ಸುಸಂಬದ್ಧವುಳ್ಳ ಪುರಾವೆಗಳ ಸಮಗ್ರ ವಿಷಯ ಕಥನವನ್ನು ಮಂಡಿಸಿದಾಗ ಪೂರ್ವಾಗ್ರಹ ದೋಷದಿಂದ ಪಾರಾಗಬಹುದು. ತನ್ನ ಚಿತ್ತವೃತ್ತಿ, ಮೌಲ್ಯ ನಿರ್ಣಯ, ಭಾವನಾತ್ಮಕ ಒಲವು, ರಾಜಕೀಯ ಒತ್ತಡ, ಸಮೂಹ ಮುನ್ನೊಲವು, ಸಂಕುಚಿತ ಸಾಮಾಜಿಕ ಧೋರಣೆ ಮುಂತಾದ ಪ್ರಲೋಭನೆಗಳಿಗೆ ಒಳಗಾಗದೆ ಹಗೂ ಜಾತಿ, ವರ್ಗ, ಮತ, ಪಂಥ, ಭಾಷೆ ಮುಂತಾದ ಉದ್ರೇಕಗಳಿಗೆ ಒಳಗಾಗದೆ, ಇತಿಹಾಸಕಾರನು ಯತಾರ್ಥವಾದ ಕಥನ ನಿರೂಪಣೆಯತ್ತ ತನ್ನ ಗಮನವನ್ನು ಕೇಂದ್ರೀಕರಿಸಿವುದು ಅವಶ್ಯಕ.

## 8.4 ಐತಿಹಾಸಿಕ ಸಂಶೋಧನೆಯಲ್ಲಿ ಕಾರ್ಯಕಾರಣ ಸಂಬಂಧ

ಇತಿಹಾಸ ದೃಷ್ಟಿಯಿಂದ ವಿವೇಚಿಸಿದಾಗ ಕಾರ್ಯ ಎಂಬ ಪದವಿನ್ನು ಪರಿಣಾಮ, ಗತಿಸಿದ ಘಟನೆ, ನಡೆದದ್ದು, ಸಂಭವಿಸಿದ್ದು ಮುಂತಾಗಿ ಅರ್ಥೈಸಬಹುದು. ಕೆಲವು ಘಟನೆಗಳು ಪರಸ್ಪರ ಸಂಬಂಧವನ್ನು ಹೊಂದಿರುತ್ತವೆ. ಈ ವಿಶೇಷ ಸಂಬಂಧ ಸೂಚಕವನ್ನು ಕಾರಣತಾವಾದ ಎಂದು ಕರೆಯಲಾಗಿದೆ. ಕಾರಣವು ಒಂದು ಸಮರ್ಥ ಒತ್ತಾಯ ಅಥವಾ ಅಪೇಕ್ಷೆ ಎಂದು ಭಾವಿಸಲಾಗಿದೆ. ಕಾರಣ ಎಂಬ ಪದವು ಕಾಸ ಎಂಬ ಲ್ಯಾಟಿನ್ ಭಾಷೆಯ ಪದದಿಂದ ಬಂದಿದ್ದು ಸಾಮಾಜಿಕ ಅಥವಾ ನ್ಯಾಯ ಸೂಚಕ ಪದವಾಗಿ ಬಳಸಲಾಗುತ್ತಿತ್ತು. ಈಗಲೂ ಸಹ ಈ ಪದವನ್ನು ಅದರ ಮೂಲ ಅರ್ಥದಲ್ಲಿಯೇ ಬಳಕೆಯಾಗುತ್ತಿರುವುದನ್ನು ಗಮನಿಸಬಹುದಾಗಿದೆ.

ಇತಿಹಾಸದ ವಿಧಾನಗಳನ್ನು ಕುರಿತಾದ ಜಿಜ್ಞಾಸೆಗಳಿಂದ ಕಾರಣತಾವಾದಕ್ಕೆ ಇತಿಹಾಸದಲ್ಲಿ ಪ್ರಮುಖವಾದ ಸ್ಥಾನವನ್ನು ನೀಡಲಾಗಿದೆ. ಮಾನವನ ವ್ಯವಹಾರಗಳು ವಿಶಿಷ್ಠವಾದ ಘಟಕಾಂಶಗಳನ್ನು ಹೊಂದಿರುವುದರಿಂದ ಕಾರಣ ಸಂಬಂಧವೂ ವೈಶಿಷ್ಟ್ಯದಿಂದ ಕೂಡಿರುತ್ತದೆ. ವಿವರಗಳಿಗೆ ಹೆಚ್ಚು ಮಹತ್ವವಿರುವುದರಿಂದ, ಕಾಲಕ್ರಮೇಣದಲ್ಲಿ ವಿವರಣಾತ್ಮಕವಲ್ಲದ, ಆಸಕ್ತಪೂರ್ಣವಲ್ಲದ ಹಲವಾರು ಘಟಕಾಂಶಗಳು ಇತಿಹಾಸದ ಒಳಹೊಕ್ಕವು. ಇತಿಹಾಸವು ನಾಗರಿಕ ಸಮಾಜಗಳಲ್ಲಿ ಜೀವಿಸುವ ವ್ಯಕ್ತಿಗಳ ಅನುಭವಗಳಿಂದ ಕಥನವಾಗಿರುವುದರಿಂದ, ಸಮಾಜದ ಬಯಕೆ ಇದಕ್ಕಿಂತ ಭಿನ್ನವಾಗಿತ್ತು. ವಿವರಣೆಗಿಂತ ಮಿಗಿಲಾಗಿ, ಗತಕಾಲ ಮತ್ತು ವರ್ತಮಾನ ಕಾಲಗಳ ಅನುಭವಗಳ ತುಲನಾತ್ಮಕ ಅಧ್ಯಯನವನ್ನು ಸಮಾಜವು ಅಪೇಕ್ಷಿಸಿತು. ಈ ಕಾರಣದಿಂದ ಇತಿಹಾಸಕಾರನು ತನ್ನ ಪೂರ್ವ ನಿಲುವನ್ನು ಬದಲಾಯಿಸಿ ಸಮಾಜ ಅಪೇಕ್ಷಿಸಿದ ಇತಿಹಾಸದ ಅಧ್ಯಯನವನ್ನು ಪ್ರಾರಂಭಿಸಿದನು. ಸಮಾಜದ ಬೇಡಿಕೆಗಳಿಗೆ ಸ್ಪಂದಿಸುವುದು ಇತಿಹಾಸಕಾರನ ಆದ್ಯ ಕರ್ತವ್ಯವೂ ಹೌದು.

ಸಮಾಜದ ಈ ಅಪೇಕ್ಷೆಯು ಇತಿಹಾಸ ರಚನೆಗೆ ಒಂದು ಹೊಸ ಚೈತನ್ಯವನ್ನು ನೀಡಿತು. ಇತಿಹಾಸ ಕೇವಲ ವಿವರಣೆಯನ್ನೇ ತನ್ನ ಪ್ರಮುಖ ಧ್ಯೇಯವನ್ನಾಗಿಟ್ಟುಕೊಳ್ಳದೆ, ವಿವರಣೆಗೆ ಯೋಗ್ಯವಲ್ಲದ, ಅಥವ ಅವಶ್ಯಕವಲ್ಲದ ಅಥವಾ ಪರಿಣಾಮಕಾರವಲ್ಲದ ಘಟನೆಗಳನ್ನು ದೂರೀಕರಿಸಿ, ಉಪಯುಕ್ತವಾದ ಅಥವ ಪರಿಣಾಮಕಾರಿಯಾದ, ಸಮಾಜದ ವಿಭಿನ್ನ ಬೆಳವಣಿಗೆಗೆ ಕಾರಣವಾದ ಘಟನೆಗಳನ್ನು ಗುರುತಿಸಿ, ಆ ಘಟನೆಗೆ ಕಾರಣ, ಅದರ ಉದ್ದೇಶ ಮತ್ತು ಅದರ ಪರಿಣಾಮಗಳನ್ನು ಕಂಡುಹಿಡಿಯುವ ಸಫಲ ಪ್ರಯತ್ನವನ್ನು ಮಾಡಿತ್ತು. ಘಟನೆಗೆ ಕಾರಣವಿರುತ್ತದೆಂಬುದು ಸಾಮಾನ್ಯ ವಿಷಯ. ಕಾರಣವಿಲ್ಲದೆ ಘಟನೆಗಳು ಸಂಭವಿಸಲು ಸಾಧ್ಯವಿಲ್ಲ. ಇತಿಹಾಸದ ಯಾವ ಘಟನೆಯನ್ನೂ ಅಂತ್ಯ ಕಾಣದ ಕಾಲದಿಂದ ಬೇರ್ಪಡಿಸಲಾಗುವುದಿಲ್ಲ. ಆದ್ದರಿಂದ ಸಂದರ್ಭವು ಘಟನೆಯ ಗುಣವನ್ನು ನಿರ್ಧರಿಸುತತದೆ.

ಘಟನೆ ಹಾಗೂ ಕಾರಣಕ್ಕೆ ಸಂಬಂಧವಿದೆ ಎಂಬ ಹೇಳಿಕೆಯನ್ನು ಪ್ರತಿಯೊಬ್ಬ ಚರಿತ್ರೆಕಾರನೂ ಒಪ್ಪಿಕೊಂಡಿದ್ದಾನೆ. ಘಟನೆಗೆ ಕಾರಣವನ್ನು ಅನ್ವೇಷಿಸುವುದು ಇತಿಹಾಸಕಾರನ ಆದ್ಯ ಕರ್ತವ್ಯವಾಗಿದೆ. ಪ್ರತಿ

ಪೂರ್ವದ ಸಂಗತಿಗಳನ್ನು ಅನುಷಂಗಿಕವು ಅನುಸರಿಸುತ್ತದೆ. ಅಂತೆಯೇ ಇತಿಹಾಸಕಾರ ತನ್ನ ಕಥನ ನಿರೂಪಣೆಯಲ್ಲಿ 'ಆದಕಾರಣ' ಅಥವ 'ಏಕೆಂದರೆ', 'ಅದರ ಪ್ರಯುಕ್ತ' 'ಅದರ ಪರಿಣಾಮವಾಗಿ' ಮುಂತಾದ ಪದಗಳನ್ನು ಪದೇ ಪದೇ ಉಪಯೋಗಿಸುವುದು ಸಾಮಾನ್ಯ ಸಂಗತಿ. ಈ ಪದಗಳು 'ನಂತರ', 'ತರುವಾಯ', 'ಅನಂತರ', 'ಈ ನಡುವೆ', ಮುಂತಾದ ಪದಗಳಷ್ಟೇ ಅನಿವಾರ್ಯ ಹೀಗಿದ್ದಲ್ಲಿ ಹಾಗೆ ಆಗುತ್ತದೆ ಎಂಬುದು ಕಾಕತಾಳೀಯ ನ್ಯಾಯವಲ್ಲ. ಇವೆರಡಕ್ಕೆ ಸಂಬಂಧ ಕಲ್ಪಿಸಲು ಸಾಕಷ್ಟು ಪುರಾವೆಗಳು ಇಲ್ಲದಿರಬಹುದು. ಈ ಸಂಬಂಧವನ್ನು ಗುರುತಿಸಿ ತಿಳಿಯಪಡಿಸುವುದೇ ಕಾರಣತಾವಾದದ ಸಾರಭೂತ ಅರ್ಥವಾಗಿದೆ. ಆದ್ದರಿಂದ ಕಾರಣತಾವಾದವು ಇತಿಹಾಸಕಾರನ ಪರಿಚಿತವಾದ ಉಪಕರಣವಾಗಿದೆ ಮತ್ತು ಚಾರಿತ್ರಿಕ ಶಿಸ್ತಿನ ಒಂದು ಸಾರಭೂತ ವೈಶಿಷ್ಟ್ಯವಾಗಿದೆ. ಒಂದು ರೀತಿಯ ಘಟನೆಗಳನ್ನು ಅವಲೋಕಿಸಿದಾಗಲೂ ಅವುಗಳಿಗೆ ಸಂಬಂಧಿಸಿದ ಕಾರಣಗಳನ್ನು ಊಹಿಸುತ್ತೇವೆ. ಈ ಊಹೆ ತಾರ್ಕಿಕವಾಗಿ ಪರಿಣಾಮಕ್ಕೆ ಕಾರಣವಾದ ಘಟನೆಗಿಂತ ವಿಭಿನ್ನವಾಗಿರಲು ಸಾಧ್ಯವುಂಟು.

ಇತಿಹಾಸವು ಸೂಕ್ಷ್ಮವಾದ ಘಟನಾವಳಿಗಳಿಂದ ಕೂಡಿದ್ದು, ಅವು ಕಾಲ ಮತ್ತು ಅವಧಿಯ ನಿರರ್ಥಕ ಅಂತರದಿಂದ ಪ್ರತ್ಯೇಕಿಸಲ್ಪಟ್ಟಿರುತ್ತವೆ. ಇತಿಹಾಸವು ನಿರಂತರವಾಗಿ ಸಾಗುವುದರಿಂದ ಅದರಲ್ಲಿ ಅಂತರಗಳಿಗೆ ಅವಕಾಶವಿಲ್ಲ. ಇತಿಹಾಸವು ತುಂಡಿಲ್ಲದ ಸರಪಣಿಯಿಂದ್ದಂತೆ. ಗತಕಾಲವು ವರ್ತಮಾನ ಕಾಲದಲ್ಲಿ ಮುಂದುವರಿಯುತ್ತದೆ. ಭವಿಷ್ಯಕಾಲವು ವರ್ತಮಾನದ ಶಿಶು. ಪ್ರಾಚೀನ ಭಾವನೆಗಳು, ಕಲ್ಪನೆಗಳು, ಆಚಾರ ವಿಚಾರಗಳು, ಅಭ್ಯಾಸಗಳು, ಮೂಢನಂಬಿಕೆಗಳು, ನಾಯಕತ್ವ ಮುಂತಾದುವುಗಳು ಪ್ರಚಲಿತ ಜನ ಜೀವನದಲ್ಲಿ ಬೇರೂರಿರುವುದು ಮೇಲಿನ ಹೇಳಿಕೆಗೆ ಸಾದೃಶ್ಯವಾಗಿದೆ. ಹೀಗೆ ಪ್ರತಿಯೊಂದು ಘಟನೆಯೂ ಇತಿಹಾಸದ ವಿಶಾಲ ಕ್ಷೇತ್ರದ ಒಂದು ಅವಿಭಾಜ್ಯ ಅಂಗ. ಆದ್ದರಿಂದ ಕಾರ್ಯಕಾರಣ ಅಥವಾ ಕಾರಣ ಪರಿಣಾಮಗಳ ಸಂಬಂಧವನ್ನು ಗುರುತಿಸುವುದು ಮೂಲತ: ಘಟನೆಯನ್ನು ಗುರುತಿಸುವುದೇ ಆಗಿದೆ. ಇತಿಹಾಸಕಾರನು ಈ ಕ್ರಿಯೆಯಿಂದ ಮುಕ್ತನಾಗುವಂತಿಲ್ಲ. ಮಾತ್ರವಲ್ಲ, ಈ ಸಂಬಂಧಗಳನ್ನು ಗುರುತಿಸದೆ ಸಂಭವಿಸಿದ ವಿಪ್ಲವಗಳು ಅಥವ ಕ್ರಾಂತಿಗಳು, ಯುದ್ಧಗಳು ಮುಂತಾದವು ಇತಿಹಾಸದ ಗತಿಯನ್ನು ಒಂದು ರೀತಿಯಲ್ಲಿ ಬದಲಿಸಿದ ಪ್ರಸಿದ್ಧ ಘಟನೆಗಳ ಯಥಾರ್ಥವಾದ ಅರಿವು ನಮಗುಂಟಾಗುವುದಿಲ್ಲ. ಕಾರಣತಾವಾದದ ಸಮಸ್ಯೆಯೆಂದರೆ ಸಂಬಂಧಗಳನ್ನು ವ್ಯಕ್ತಿಶ:ಗೊಳಿಸುವುದಾಗಿದೆ. ಕಾರಣತಾವಾದವು ತನ್ನ ಚೈತನ್ಯರೂಪದಲ್ಲಿ ಘಟನೆಗೆ ಅಗತ್ಯವಾದ ಪರಿಸ್ಥಿತಿ ಅಥವ ಸನ್ನಿವೇಶಗಳನ್ನು ತೋರ್ಪಡಿಸುತ್ತದೆ.

ಒಂದು ಸಂದರ್ಭದಿಂದ ಘಟನೆಯು ಜರುಗಿದ್ದಲ್ಲಿ, ಆ ಸಂದರ್ಭವು ಕಾರಣವಾಗಲಾರದು. ಅಂತೆಯೇ ಜನಪರಿಯ ಉಪನ್ಯಾಸಗಳು ಮತ್ತು ಚಿಂತನೆಗಳು ಈ ಕಾರಣದ ವ್ಯಾಪ್ತಿಗೆ ಒಳಪಡುವುದಿಲ್ಲ. ಇದರಿಂದ ವ್ಯಕ್ತವಾಗುವುದೆಂದರೆ ಘಟನೆಗೆ ಅನೇಕ ಕಾರಣಗಳಿರಬಹುದೆಂಬ ಅಂಶ. ಇದು ತಪ್ಪು ಕಲ್ಪನೆ, ಯಥಾರ್ಥವಾದ ಕಾರಣಗಳನ್ನು ಗೊತ್ತುಪಡಿಸಲು ವಿಫಲಗೊಂಡಾಗ ಒಂದು ಘಟನೆಗೆ ಒಂದಕ್ಕಿಂತ ಹೆಚ್ಚು ಕಾರಣಗಳನ್ನು ಕೊಡಲು ಯತ್ನಿಸುತ್ತೇವೆ. ಇತಿಹಾಸದ ಒಂದು ದೊಡ್ಡ ಸಮಸ್ಯೆ ಎಂದರೆ ಗೊತ್ತಿರುವುದರಿಂದ ಗೊತ್ತಿಲ್ಲದ್ದನ್ನು ಕಂಡುಹಿಡಿಯುವುದು ಅಥವಾ ಪರಿಣಾಮದಿಂದ ಕಾರಣವನ್ನು ಅನ್ವೇಷಿಸುವುದು.

ಹೀಗಾಗಿ ಇತಿಹಾಸಕಾರನು ಸಮರ್ಪಕವಾದ ನಿರೂಪಣೆಯನ್ನು ಕೊಡಬೇಕಾಗಿರುವುದರಿಂದ ಕಾರಣತಾವದದಲ್ಲಿ ಬಿಗಿ ನಿಲುವು ತಾಳದೆ ಕಾಋಣಗಳುಳ್ಳಂತೆ ಕಂಡುಬರುವ ಕೆಲವು ಸಂದರ್ಭಗಳನ್ನು ಕಾರಣಗಳೆಂದೇ ಭಾವಿಸುವುದುಂಟು. ಈ ವಿಧಾನವು ಅವಶ್ಯಕವಾಗಿ ಕಂಡುಬಂದರೂ ಕೂಡ ಮಾನವನ ಮೌಲ್ಯಗಳಿಗೆ ಅನುಗುಣವಾಗಿ ತನ್ನ ವಿಧಾನವನ್ನು ಬದಲಿಸಿ ಯಥಾರ್ಥವಾದ ಕಾರಣವನ್ನು ಶೋಧಿಸುವ ದಿಸೆಯಲ್ಲಿ ಮುಂದಡಿಯಿಡಬೇಕು. ಆದರೆ ಕಾಋಣವನ್ನು ಶೋಧಿಸುವ ಕಾರ್ಯವನ್ನು ಕೈಬಿಡಬಾರದು. ಈ ಕ್ರಿಯೆಯನ್ನು ತೊರೆದಾಗ ಐತಿಹಾಸಿಕ ಸಾಹಿತ್ಯವು ರೂಪ ಹಾಗೂ ಅರ್ಥವಿಲ್ಲದ್ದಾಗಿ ಪರಿಣಮಿಸುತ್ತದೆ. ಹೀಗಾಗಿ, ಇತಿಹಾಸಕಾರನ ವೃತ್ತಿಗೆ ಕಾರಣದ ಶೋಧನೆ ಒಂದು ಮಹತ್ವದ ಭಾವನಾತ್ಮಕ ಮತ್ತು ತಾಂತ್ರಿಕ ಪ್ರತಿಭಟನೆಗಳನ್ನು ಒಡ್ಡುತ್ತವೆಂಬುದನ್ನು ನಾವು ಒಪ್ಪಬೇಕಾಗಿದೆ.

## 8.5 ಐತಿಹಾಸಿಕ ಸಂಶೋಧನೆಯಲ್ಲಿ ಕಾರ್ಯಕಾರಣವಾದದ ಉಪಯೋಗಗಳು

ಏನು ಸಂಭವಿಸಿತು ಅಥವಾ ನಡೆಯಿತು? ಎಂಬುದು ಒಂದು ಸುಲಭವಾದ ಅಥವ ಮೂಲರೂಪದ ಪ್ರಶ್ನೆ. ಅದು ಏಕೆ ಸಂಭವಿಸಿತು? ಎಂಬುದು ಒಂದು ಕ್ಷ್ಟಕರವಾದ ಮತ್ತು ಸಾಕ್ಷೇಪ ಪ್ರಶ್ನೆ. ವಿಷಯ ನಿರೂಪಣೆಗೆ ಇತಿಹಾಸಕಾರನು ವರ್ತಮಾನದಿಂದ ಗತಕಾಲದ ವಿಷಯಗಳ ಅನ್ವೇಷಣೆಯಲ್ಲಿ ತೊಡಗಿದಾಗ, ಗತಕಾಲದಲ್ಲಿ ಘಟನೆಗಳು ಹೇಗೆ ಸಂಭವಿಸಿದವು ಎಂಬುದನ್ನು ಸಮರ್ಪಕವಾಗಿ ವಿವರಿಸುವಾಗ ಇತಿಹಾಸಕ್ಕೂ ಮತ್ತು ಕಲ್ಪನಾ ಕಥೆಗಳಿಗೂ ಇರುವ ವ್ಯತ್ಯಾಸ ಬೆಳಕಿಗೆ ಬರುತ್ತದೆ. ಕ್ಲೀಯೋಪಾತ್ರಾಳ ಮೂಗು ಉದ್ದವಾಗಿದ್ದರೆ ಇಡೀ ಜಗತ್ತಿನ ಇತಿಹಾಸ ವಿಭಿನ್ನವಾಗಿರುತ್ತಿತ್ತು ಎಂಬುದು ಹಾಸ್ಯಾಸ್ಪದವಾಗುತ್ತದೆ. ಒಂದು ಪ್ರತಿಷ್ಠಿತ ಘಟನೆಗೆ ಕಾರಣವನ್ನು ಕೊಡಲು ಯತ್ನಿಸುವುದು ಊಹೆಯ ಬೆನ್ನಟ್ಟಿದಂತಾಗುತ್ತದೆ. ಒಬ್ಬ ಪ್ರತಿಭಾವಂತ ವ್ಯಕ್ತಿ ಹಿಂದೆ ಯಾರೊ ಸಾಧಿಸಿದ ಕಾರ್ಯವನ್ನು ಹೇಗೆ ಸಾಧಿಸಿದ? ಎಂಬ ಪ್ರಶ್ನೆಗೆ ಯಥಾರ್ಥವಾದ ಉತ್ತರವನ್ನು ಕೊಡುವುದು ಇತಿಹಾಸಕಾರನಿಗಾಗಲಿ ಅಥವ ಸಮಾಜಶಾಸ್ತ್ರ ವಿಜ್ಞಾನಿಗಾಗಲಿ ಸಾಧ್ಯವಾಗುವುದಿಲ್ಲ.

ಮಾನವ ಇತಿಹಾಸದ ಘಟನೆಗಳನ್ನು ಕೆಲವು ತತ್ವ ಅಥವ ನಿಯಮಗಳಿಗೆ ಅನುಸಾರವಾಗಿ ಸಂಬಂಧಿಸಲು ಸಾಧ್ಯವಿಲ್ಲವೆಂದು ಹೇಳುವುದಕ್ಕೆ ಆಗದಿದ್ದರೂ, ಈ ನಿಯಮಗಳು ಭೌತಶಾಸ್ತ್ರ ಮುಂತಾದ ಭೌತಿಕ ವಿಜ್ಞಾನಗಳ ತತ್ವಗಳಂತೆ ಸಾಮಾನ್ಯವಾಗಿರುತ್ತದೆ ಎಂಬ ಅಭಿಪ್ರಾಯಕ್ಕೆ ಬರಲಾಗುವುದಿಲ್ಲ. ನಾಗರೀಕತೆ ಲೋಕೋತ್ತರ ಘಟನೆಯಾಗಿದ್ದು ಬಹು ತೊಡಕಾಗುತ್ತದೆ. ಆದ್ದರಿಂದ ಇತಿಹಾಸದಲ್ಲಿ ಒಂದು ತತ್ವವನ್ನು ಅನ್ವೇಷಿಸುವಾಗ ಸಮಾಜ ಜೀವನದಲ್ಲಿನ ದೈಹಿಕ, ಮಾನಸಿಕ ಮತ್ತು ಜೀವ ವೈಜ್ಞಾನಿಕ ಈ ಮೂರು ಹಂತಗಳನ್ನೂ ಪರಿಗಣಿಸಬೇಕು. ಸಮಾಜ ಜೀವನದಲ್ಲಿ ಮಾನವನ ಚಿಂತನೆ ಮತ್ತು ಭಾವನೆಗಳಲ್ಲಿ ಸೂಕ್ಷ್ಮ ವ್ಯತ್ಯಾಸಗಳು ಈ ಪರಿಗಣನೆಯಿಂದ ವ್ಯಕ್ತವಾಗುತ್ತದೆ. ಈ ಅಂಶಗಳು ಇತಿಹಾಸ ರಚನೆಗೆ ಅತಿ ಮುಖ್ಯವೂ ಹೌದು.

ಇತಿಹಾಸವು ಒಂದು ಮುಂದುವರಿಯುತ್ತಿರುವ ಕಥನವೆಂದು ಪರಿಗಣಿಸಿ, ಇಲ್ಲಿನ ಘಟನೆಗಳನ್ನು ಕೆಲವು ತತ್ವಗಳಿಂದ ನಿರ್ಣಯಿಸಲಾಗುವುದಿಲ್ಲ. ಕೆಲವು ತತ್ವಗಳ ಆಧಾರದ ಮೇಲೆ ಗ್ರಹಣಗಳನ್ನು ನಿರ್ಣಯಿಸಬಹುದು. ಇದರಲ್ಲಿ ವಿಶಿಷ್ಟವೇನೂ ಕಂಡುಬರುವುದಿಲ್ಲ. ಇತಿಹಾಸದಲ್ಲಿಯೂ ಕೂಡ ಘಟನೆಗಳು ಪುನರಾವರ್ತಿತವಾಗುತ್ತವೆ ಎಂಬುದನ್ನು ನಿರಾಕರಿಸಲಾಗದಿದ್ದರೂ ಇಲ್ಲಿ ನಿರೇಂದ್ರೀಯ ಭೌತಶಾಸ್ತ್ರದಂತಹ ಸಾಮಾನ್ಯವಾದ ನಮೂನೆಯನ್ನು ಹೊಂದಿರುವುದಿಲ್ಲವೆಂಬುದನ್ನು ಗಮನಿಸುವುದು ಅವಶ್ಯಕ. ಇತಿಹಾಸದ ತತ್ವಗಳು ಜೀವಶಾಸ್ತ್ರದಲ್ಲಿ ಕಂಡುಬರುವಂತೆ ಅನೇಕ ಹಂತಗಳ ಬೆಳವಣಿಗೆ ಉಳ್ಳದ್ದಾಗಿದೆ. ಆದರೆ ಈ ಹಂತಗಳನ್ನು ಯಥಾರ್ಥವಾಗಿ ಗುರುತಿಸಿ ಅವುಗಳನ್ನು ಸ್ವೀಕರಿಸುವುದು ಸುಲಭವಲ್ಲ. ಉದಾಹರಣೆಗೆ, ಎರಡನೇ ಜಾಗತಿಕ ಯುದ್ಧ ಸೆಪ್ಟಂಬರ್, 1939 ರಲ್ಲಿ ತಲೆದೋರಿತು ಎಂಬ ಪ್ರಶ್ನೆಗೆ ಹಿಟ್ಲರ್ ಜರ್ಮನ್ ಸೇನೆಯನ್ನು ಪೋಲೆಂಡ್ ಗಡಿಗೆ ಅಡ್ಡಲಾಗಿ ಕಳುಹಿಸಿದ್ದರಿಂದ ಎಂಬ ಸಾಮಾನ್ಯ ಉತ್ತರವು ಸಮಂಜಸವಾಗುವುದಿಲ್ಲ. ಏಕೆಂದರೆ ಇದಕ್ಕೆ ಮುಂಚಿನ ತಿಂಗಳುಗಳಲ್ಲಿ ಆತನು ಜರ್ಮನ್ ಸೇನೆಯನ್ನು ಆಸ್ಟ್ರೀಯ ಮತ್ತು ಜಕಾಸ್ಲೋವೇಕಿಯ ದೇಶಗಳ ಮೇಲೆ ಕಳುಹಿಸಿದ್ದ, ಆದರೆ ಅದು ಯುದ್ಧದಲ್ಲಿ ಪರಿಣಮಿಸಲಿಲ್ಲ. ಈ ಎರಡು ಘಟನೆಗಳ ನಡುವೆ ಕಂಡು ಬರುವ ವ್ಯತ್ಯಾಸಗಳೇನು? ಈ ವ್ಯತ್ಯಾಸವೆಂದರೆ, ಪೋಲೆಂಡ್ ಜರ್ಮನ್ ಧಾಳಿಯನ್ನು ಪ್ರತಿಭಟಿಸಿದ್ದು, ಮತ್ತು ಫ್ರಾನ್ಸ್ ಮತ್ತು ಬ್ರಿಟನ್ ಪೋಲೆಂಡ್ ಜೊತೆ ಕೈ ಜೋಡಿಸಲು ತೀರ್ಮಾನಿಸಿದ್ದು. ಈ ಉತ್ತರಗಳು ಮತ್ತೆ ಕೆಲವು ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತವೆ. ಪೋಲೆಂಡ್ ವಿರುದ್ಧವಾಗಿ ಜರ್ಮನ್ ಸೇನೆಯನ್ನು ಕಳುಹಿಸಲು ತೀರ್ಮಾನಿಸಿದ್ದೇಕೆ? ಬ್ರಿಟೀಷ್ ಮತ್ತು ಫ್ರೆಂಚ್ ನಾಯಕರೂ ಜರ್ಮನಿಯ ವಿಸ್ತರಣೆಯನ್ನು ತಡೆಯಲು ನಿರ್ಧರಿಸಿದ್ದೇಕೆ? ಹೀಗೆ ವಿಭಿನ್ನ ಮಜಲುಗಳನ್ನು ಗುರುತಿಸುವುದು ಅವಶ್ಯಕವಾಗುತ್ತದೆ.

ಮಾನವ ಇತಿಹಾಸದಲ್ಲಿ ಕಾರಣತಾವಾದವನ್ನು ಪ್ರಯೋಗಿಸಲು ಅಡ್ಡ ಬರುವ ಮತ್ತೊಂದು ತೊಡಕೆಂದರೆ ಭವಿಷ್ಯವನ್ನು ನಿರ್ಣಯಿಸಲು ಇತಿಹಾಸಕ್ಕೆ ಸಾಧ್ಯವಿಲ್ಲದಿರುವುದು. ಇತಿಹಾಸದ ವಿಷಯ ವಸ್ತುವು ಮಾನವನನ್ನು ಕುರಿತದ್ದಾಗಿದೆ. ಮಾನವನ ವಿಚಾರಗಳಲ್ಲಿ ಕೆಲವು ಸಂಧರ್ಭಗಳು ಅಸ್ಥಿತ್ವದಲ್ಲಿದ್ದಲ್ಲಿ ಹೀಗೆಯೇ ನಡೆಯುತ್ತದೆ. ಎಂದು ನಿರ್ಧರಿಸಲಾಗುವುದಿಲ್ಲ. ಏಕೆಂದರೆ ಮಾನವನು ತನ್ನ ತಪ್ಪುಗಳನ್ನು ಅರಿತು ಸುಧಾರಿಸಿಕೊಂಡು, ನಮ್ಮ ಹೇಳಿಕೆಯನ್ನು ಸುಳ್ಳಾಗಿಸಬಹುದು. ಮಾನವನ ವ್ಯವಹಾರಗಳು ಆತನ ಆಸೆ ಅಥವ ಬಯಕೆಯನ್ನು ಅವಲಂಭಿಸಿರುತ್ತದೆ. ಆತನ ಬಯಕೆಯೂ ಕಾಲಕಾಲಕ್ಕೆ ಬದಲಾಗುತ್ತಿರುವುದರಿಂದ ಆ ಬಯಕೆ ಹೇಗಿರುತ್ತದೆಂಬುದನ್ನು ಖಚಿತವಾಗಿ ನಿರ್ಧರಿಸುವುದು ಕಷ್ಟವಾಗುತ್ತದೆ. ಮಾತ್ರವಲ್ಲ, ಒಂದು ಸನ್ನಿವೇಶದಲ್ಲಿ ಒಬ್ಬ ಏಕೆ ಒಂದು ವಿಚಿತ್ರವಾದ ರೀತಿಯಲ್ಲಿ ವರ್ತಿಸಿದನೆಂಬುದು ಆತನಿಗೇ ತಿಳಿಯದಿರುವಾಗ ಅದನ್ನು ಗೊತ್ತುಪಡಿಸುವುದು ಇತಿಹಾಸಕಾರನಿಗೆ ಸಾಧ್ಯವಾಗದು.

ಸಂಸ್ಕೃತಿಯ ಅನುಗ್ರಹವನ್ನು ಪಡೆಯಲು ಮಾನವನು ನಡೆಸಿದ ಹೋರಾಟವೇ ಇತಿಹಾಸ ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಈ ವಾದವು ನಿಜವಾಗಿದ್ದಲ್ಲಿ, ಅದರಲ್ಲಿ ಅವರ ಸೋಲು, ಗೆಲುವು ಮತ್ತು ಜಿಗುಪ್ಸೆಗಳು ಸೇರಿರಬೇಕು. ಜಯ ಮತ್ತು ಅಪಜಯ ಇವುಗಳೆರಡನ್ನೂ ಇತಿಹಾಸಕಾರನು ಸರಿದೂಗಿಸಬೇಕು. ಇಲ್ಲದ ಭಾಗದಲ್ಲಿ ಆತನ ಹಾಗೂ ಇತಿಹಾಸದ ಧ್ಯೇಯವನ್ನು ಸಾಧಿಸಿದಂತಾಗುವುದಿಲ್ಲ.

ಈ ದಿಸೆಯಲ್ಲಿ ಕಂಡು ಬರುವ ಕೊರತೆ ಎಂದರೆ ಮಾನವನಲ್ಲಿ ಬೇರೂರಿರುವ ಜಡತೆ. ಈ ಜಡತೆಯಿಂದಾಗಿ ಸ್ವೇಚ್ಛೆಯಿಂದ ಕಾರಣವನ್ನು ನಿರ್ಧರಿಸಲಿಕ್ಕೂ ಸಾಧ್ಯ.

ಒಟ್ಟಿನಲ್ಲಿ ಯಾವುದಾದರೊಂದು ಅಸ್ಥಿತ್ವದಲ್ಲಿರುವುದು ಅಥವ ತನ್ನದೇ ಆದ ರೀತಿಯಲ್ಲಿ ಅಸ್ಥಿತ್ವದಲ್ಲಿರುವುದು ಅಥವ ಅದು ಇರುವ ಸ್ಥಿತಿಗೆ ಬರುವಂತೆ ಮಾಡಿದುದು, ಈ ಪ್ರಭಾವಗಳಿಗೆ ಕಾರಣವೆಂದು ಹೇಳಬಹುದು. ಯಾವುದಾದರೊಂದು ಮತ್ತೊಂದರ ಮೇಲೆ ಬೀರುವ ಪ್ರಭಾವಕ್ಕೆ ಕಾರಣವೆಂದು ಹೆಸರಿಸಬಹುದು. ಒಂದು ಸನ್ನಿವೇಶವು ಕಾರಣದ ಕ್ರಿಯೆಗೆ ನೆರವಾಗುತ್ತದೆ. ಆದರೆ ಯಾವ ವಸ್ತು ಅಥವ ವಿಷಯ ಅದು ಇರುವ ಸ್ಥಿತಿಗೆ ಕಾರಣವಾಗುವುದಿಲ್ಲ. ಪ್ರಾಚೀನ ಹಾಗೂ ಆಧುನಿಕ ಇತಿಹಾಸಕಾರರು ಕಾರಣತಾವಾದದ ಕಲ್ಪನೆಯನ್ನು ಒಪ್ಪಿಕೊಂಡಿದ್ದಾರೆ. ಆದರೆ ಕಾರಣ ಪರಿಣಾಮಗಳ ಕಲ್ಪನೆಯನ್ನು ಕ್ರಮಾನುಗತಿ ಅಥವ ಅನುಕ್ರಮ ಎಂಬ ಕಲ್ಪನೆಯಿಂದ ಸ್ಥಳಾಂತರಗೊಳಿಸುವ ಪ್ರಯತ್ನವು ಅನಗತ್ಯವಾಗಿದೆ. ಘಟನೆಗಳ ಕ್ರಮಾನುಗತಿಯನ್ನು ನೆಲೆಗೊಳಿಸುವುದು ಮಾನವನ ಮನಸ್ಥಿತಿಗೆ ತೃಪ್ತಿ ನೀಡುವುದಿಲ್ಲ. ಏಕೆಂದರೆ ಮುಂದಿನ ಪ್ರಶ್ನೆ ನಮ್ಮ ಮನಸ್ಸಿನಲ್ಲಿ ಏಳುತ್ತದೆ. ಈ ಕ್ರಮಾನುಗತಿಯೇ ಏಕೆ? ಬೇರೆಯದಾಗದೇ? ಇತ್ಯಾದಿ. ಒಂದೇ ರೀತಿಯ ಕಾರಣಗಳು ಒಂದೇ ರೀತಿಯ ಪರಿಣಾಮಗಳನ್ನು ಉಂಟು ಮಾಡುತ್ತವೆ ಎಂಬ ತತ್ವದ ಆಧಾರದ ಮೇಲೆ ಘಟನೆಗಳನ್ನು ಮುನ್ಸೂಚಿಸಲು ತರ್ಕ ಸಮ್ಮತವಾದ ನೆಲೆ ಈ ಕ್ರಮಾನುಗತಿಯಲ್ಲಿ ಕಂಡುಬರುವುದಿಲ್ಲ. ಒಂದು ಶಿಸ್ತಾಗಿ ಮತ್ತು ಒಂದು ಮಾರ್ಗದರ್ಶಿಯಾಗಿ ಕಾರಣತಾವಾದವು ಇತಿಹಾಸಕ್ಕೆ ಮೌಲ್ಯವನ್ನು ಗಳಿಸಿಕೊಡುತ್ತದೆ. ದೈನಂದಿನ ಜೀವನದಲ್ಲಿಯಂತೆ, ಇತಿಹಾಸದಲ್ಲಿಯೂ ಕೂಡ ಕಾರಣದ ಕಾರ್ಯಶಕ್ತಿ ತತ್ವವನ್ನು ಅನುಸರಿಸದಿದ್ದರೆ ಯಾವ ಗುರಿಯನ್ನು ಸಾಧಿಸಲಾಗುವುದಿಲ್ಲ.

## 8.6 ಸಾರಾಂಶ

ಪುರಾವೆಗಳ ಆಧಾರದ ಮೇಲೆ ಗತಕಾಲದ ಮಹತ್ವದ ವಿಷಯ ವಸ್ತುವನ್ನು ಶೋಧಿಸುವ ಪ್ರಯತ್ನವೇ ಇತಿಹಾಸ ಎಂದು ಅರ್ಥೈಸುವುದು ಸಮಂಜಸವಾಗಿ ಕಾಣುತ್ತದೆ. ಈ ಪುರಾವೆಗಳು ಅವಲೋಕನಕಾರರು ದಾಖಲಿಸಿರುವ ಅಭಿಪ್ರಾಯಗಳಾಗಿರುವದರಿಂದ, ಅವು ಅವಶ್ಯಕವಾದ ಕಚ್ಚಾವಸ್ತುಗಳಾಗಿದ್ದು, ಅವುಗಳ ಶೋಧನಕಾರ್ಯವನ್ನು ಇತಿಹಾಸಕಾರ ನಿರ್ವಹಿಸಬೇಕಾಗುತ್ತದೆ. ಒಬ್ಬ ವಿಮರ್ಶಕ ಅಭಿಪ್ರಾಯ ಪಟ್ಟಿರುವಂತೆ, ಸರ್ಕಾರದ ಅಧಿಕೃತ ದಾಖಲೆಗಳಲ್ಲಿಯೂ ಸಹ, ಪ್ರೇಮ ಪತ್ರದಲ್ಲಿ ಕಂಡುಬರುವಂತೆ, ಸುಳ್ಳಿನ ಸರಮಾಲೆಇರುತ್ತದೆ. ಆದ್ದರಿಂದ ಈ ದಾಖಲೆಗಳನ್ನು ಪರಿಶೋಧಿಸಿ ಅವುಗಳ ಪ್ರಾಮಾಣ್ಯವನ್ನು ಇತಿಹಾಸಕಾರರು ಸ್ಥಿರಪಡಿಸಬೇಕಾಗುತ್ತದೆ. ಮಾತ್ರವಲ್ಲ, ಘಟನೆಗಳ ಕಾರ್ಯಕಾರಣ ಸಂಬಂಧ, ಘಟನೆಗಳ ವಸ್ತುನಿಷ್ಠವಾದ ನಿರೂಪಣೆ ಮುಂತಾದ ವಿಷಯಗಳನ್ನು ವಿವರಿಸಲಾಗಿದೆ.

ಇಂದಿನ ಓದುಗರು ಪ್ರಾಜ್ಞರೂ, ಜಾಗ್ರತರೂ, ವಿಮರ್ಶಾತ್ಮಕ ದೃಷ್ಟಿಕೋನ ಹೊಂದಿದವರೂ ಆಗಿದ್ದಾರೆ. ತನ್ನ ಕೃತಿ ಈ ಓದುಗರ ಅವಕೃಪೆಗೆ ಒಳಗಾಗದಿರಲೆಂಬ ಅರಿವು ಇತಿಹಾಸಕಾರನನ್ನು

ಸರಿದಾರಿಯಲ್ಲಿ ಕರೆದೊಯ್ಯುತ್ತದೆ. ಇತಿಹಾಸಕಾರನ ಸಾಧುವಾದ ಐತಿಹಾಸಿಕ ಜ್ಞಾನ, ಸಮಸ್ಯೆಯ ಅರಿವು, ಸತ್ಯಕ್ಕಾಗಿ ಆತನ ಬದ್ಧಸ್ಥಿತಿ, ವಮರ್ಶಾತ್ಮಕ ವಿಚಾರ ಸರಣಿ, ಎಲ್ಲಕ್ಕಿಂತ ಮಿಗಿಲಾಗಿ ಆತನ ವಿಶ್ಲೇಷಣಾಸಾಮರ್ಥ್ಯ ಹಾಗೂ ಕಳೆದ ಕಾಲವನ್ನು ಯಥಾರ್ಥತ್ತಾಗಿ ನೋಡುವ ಒಂದು ಶುದ್ಧ ಪ್ರಯತ್ನದಿಂದ ಇತಿಹಾಸದಲ್ಲಿ ವಸ್ತುನಿಷ್ಠತೆಯನ್ನು ಸಾಧಿಸಬಹುದು.

## 8.7 ಪ್ರಮುಖ ಪದಗಳು

1. ಕಾರ್ಯಕಾರಣ: ಘಟನೆಗಳ ನಡುವೆ ಸಂಪರ್ಕಶೀಲತೆಯ ಸಂಬಂಧ
2. ಪಾಲಿಬಿಯಸ್: ಇತಿಹಾಸದಲ್ಲಿ ಬದಲಾವಣೆಯ ಪಾತ್ರದ ಬಗ್ಗೆ ಮೊದಲು ಆಗ್ರಹಿಸಿದ ಇತಿಹಾಸಕಾರ

## 8.8 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಐತಿಹಾಸಿಕ ನಿಜಾಂಶಗಳ ಸಮಸ್ಯೆಗಳನ್ನು ಚರ್ಚಿಸಿ.
2. ಇತಿಹಾಸದಲ್ಲಿ ವ್ಯಕ್ತಿನಿಷ್ಠತೆ ಮತ್ತು ಕಾರ್ಯಕಾರಣವನ್ನು ವಿವರಿಸಿ.

## 8.9 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 8.2 ನೋಡಿ
1. ವಿಭಾಗ 8.5 ಮತ್ತು 8.6 ನೋಡಿ

## 8.10 ಪರಾಮರ್ಶನ ಗ್ರಂಥಗಳು

1. ಗೋಪಾಲ ಬಾ.ರಾ, ಇತಿಹಾಸಶಾಸ್ತ್ರ ಮತ್ತು ಸಿದ್ಧಾಂತ, ಮೈಸೂರು,1996.
2. ಶ್ರೀನಿವಾಸಮೂರ್ತಿ.ಎಚ್.ವಿ, ಇತಿಹಾಸ ಸಂಶೋಧನಾ ಸಮೀಕ್ಷೆ, ಬೆಂಗಳೂರು, 2000.
3. ವೆಂಕಟರತ್ನಂ.ಎ.ವಿ, ಪದ್ಮ.ಎಂ.ಬಿ, ಇತಿಹಾಸ ಸಂಶೋಧನಾ ಮಾರ್ಗ, ಬೆಂಗಳೂರು, 1985.
4. ರಾಜಯ್ಯನ್.ಕೆ, ಹಿಸ್ಟರಿ–ಥಿಯರಿ ಆಂಡ್ ಮೆತಡ್, ಮಧುರೈ, 1976.
5. ಷೇಕ್ ಅಲಿ.ಬಿ, ಹಿಸ್ಟರಿ ಇಟ್ಸ್‌ಥಿಯರಿ ಆಂಡ್ ಮೆಥಡ್, ನ್ಯೂಡೆಲ್ಲಿ, 2001.
6. ಶ್ರೀಧರನ್.ಇ, ಎ ಟೆಕ್ಸ್ಟ್‌ಬುಕ್ ಆಫ್ ಹಿಸ್ಟರಿಯಾಗ್ರಫಿ, ನ್ಯೂಡೆಲ್ಲಿ, 2000.
7. ಕಾಲಿಂಗ್‌ವುಡ್.ಆರ್.ಜಿ, ದಿ ಐಡಿಯಾ ಆಫ್ ಹಿಸ್ಟರಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1961.
8. ಕಾರ್.ಇ.ಎಚ್, ವಾಟ್ ಇಸ್ ಇಸ್ಟರಿ, ಪೆಲಿಕನ್ ಪಬ್ಲಿಷರ್ಸ್, 1964.

9. ಹೊಮರ್ ಸಿ. ಹಾಕೆಟ್, ದಿ ಕ್ರಿಟಿಕಲ್ ಮೆಥಡ್ ಇನ್ ಹಿಸ್ಟಾರಿಕಲ್ ರಿಸರ್ಚ ಅಂಡ್ ರೈಟಿಂಗ್, ನ್ಯೂಯಾರ್ಕ,1955.

---

**ಪಠ್ಯವನ್ನು ರಚಿಸಿದವರು:**
**ಡಾ .ವೈ.ಹೆಚ್. ನಾಯಕವಾಡಿ**

# ಘಟಕ– 9 ಸಂಶೋಧನ ವಿಧಾನ–ಪ್ರಾಥಮಿಕ ವಿಶ್ಲೇಷಣೆ ಹಾಗೂ ವಿವರಣಾತ್ಮಕ ವಿಶ್ಲೇಷಣೆ

**ರಚನೆ**


**9.0** ಉದ್ದೇಶಗಳು

**91** ಪೀಠಿಕೆ

**9.2** ಆಕರ ವಿಶ್ಲೇಷಣೆ

**9.3** ಪ್ರಾಥಮಿಕ ವಿಶ್ಲೇಷಣೆ

**9.4** ವಿವರಣಾತ್ಮಕ ವಿಶ್ಲೇಷಣೆ

**9.5** ಸಾರಾಂಶ

**9.6** ಪ್ರಮುಖ ಪದಗಳು

**9.7** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**9.8** ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

**9.9** ಪರಾಮರ್ಶನ ಗ್ರಂಥಗಳು

## 9.0 ಉದ್ದೇಶಗಳು

ಸಂಶೋಧನೆಯ ಮೂಲಾರ್ಥವನ್ನು ಗ್ರಹಿಸಿದಾಗ ಸಂಶೋಧನೆಯ ಉದ್ದೇಶ ತಾನಾಗಿಯೇ ವ್ಯಕ್ತವಾಗುತ್ತದೆ. ಇತಿಹಾಸದ ಮುಖ್ಯ ಉದ್ದೇಶವೆಂದರೆ ಸಮಾಜವು ಅಪೇಕ್ಷಿಸಿದ ಕಥೆಯನ್ನು ಯಥಾರ್ಥವಾಗಿ ನಿರೂಪಿಸುವದಾಗಿದೆ. ಈ ಕಥನ ಸಾಧ್ಯವಾದಷ್ಟು ಮಟ್ಟಿಗೆ ಯಥಾರ್ಥವಾಗಿರಬೇಕು. ಈ ಸಾಪೇಕ್ಷ ಯಥಾರ್ಥತೆಯನ್ನು ಇತಿಹಾಸದ ವಿಧಾನಗಳ ಪರಿಜ್ಞಾನದಿಂದ ಪಡೆಯಬಹುದು. ಅಲ್ಲದೆ ಸಮಾಜವು ನಿರ್ಣಯಿಸಿ ಮುಂದಿಡುವ ಪ್ರಶ್ನೆಗಳಿಗೆ ಇತಿಹಾಸಕಾರ ವಿಭಿನ್ನ ದೃಷ್ಟಿಕೋನಗಳಿಂದ ಕಥನವನ್ನು ನಿರೂಪಿಸಬೇಕು. ಮಾತ್ರವಲ್ಲ, ಸಮಾಜದ ಅಪೇಕ್ಷೆಯಂತೆ ಕಥನವನ್ನು ನಿರೂಪಿಸಲು ಸಂಗತಿಗಳನ್ನು ಇತಿಹಾಸಕಾರ ಇತಿಹಾಸ ವಿಧಾನಗಳಿಂದ ಸಂಗ್ರಹಿಸುತ್ತಾನೆ. ಈ ಪೂರ್ವಭಾವಿಯಾದ ಪರಿಕ್ಷೆಗೆ ಇತಿಹಾಸ ಸಂಶೋಧನೆ ಎಂದು ಹೆಸರಿಸಲಾಗಿದೆ.

ಸಂಶೋಧನೆಯು ಇತಿಹಾಸಕಾರನಿಗೆ ವಿಧಿಸಿದ ಕೆಲಸವನ್ನು ನಿರ್ವಹಿಸಲು ಕಡೆಗಣಿಸಲಾಗುವುದಿಲ್ಲವಲ್ಲದೆ ತಮ್ಮ ಅಸ್ಥಿತ್ವಕ್ಕೆ ಸಮರ್ಪಿಸುವ ಕೆಲವು ಸತ್ಯಗಳೊಂದಿಗೆ ಚೇತನಗೊಳಿಸುವ ಸಂಬಂಧವನ್ನು ಸಂಶೋಧಕನಿಗೆ ಕಲ್ಪಿಸಿಕೊಡುತ್ತದೆ. ಆತನು ತನ್ನ ಕಥನಕ್ಕೆ ಸಂಬಂಧಿಸಿದ ದಾಖಲೆಗಳು ಮತ್ತು ಅವಶೇಷಗಳ ಮೇಲೆ ಕೈ ಆಡಿಸುತ್ತಾನೆ. ಆತನು ವ್ಯವಹರಿಸುವ ವ್ಯಕ್ತಿಗಳಲ್ಲಿ ಕೆಲವರ ಕೈಬರಹಗಳನ್ನು ನೋಡುತ್ತಾನೆ, ಅವರ ಪತ್ರಗಳನ್ನು ಓದುತ್ತಾನೆ, ಅವರ ಜೀವನವನ್ನು ಹೆಚ್ಚೂ ಕಡಿಮೆ ಸಾಕ್ಷಾತ್ತಾಗಿ ಜೀವಿಸುತ್ತಾನೆ. ಮಿಗಿಲಾಗಿ, ಈ ಹಿಂದೆ ಸೂಚಿಸಿರುವಂತೆ, ಹೆಚ್ಚಿನ ಸಂಶೋಧಕರಲ್ಲಿ ಜೀವಂತವಾಗಿರುವ ಸಂಗ್ರಹಣಕಾರರ ಸಹಜ ಪ್ರವೃತ್ತಿಗೆ ಅರ್ಹವಾದ ತೃಪ್ತಿಯನ್ನು ಸಂಶೋಧನೆ ಕಲ್ಪಿಸಿಕೊಡುತ್ತದೆ. ಒಂದು ಮಾತಿನಲ್ಲಿ ಹೇಳುವುದಾದರೆ, ಖಂಡಿತವಾಗಿಯೂ ಸಂಶೋಧನೆ ಒಬ್ಬನನ್ನು ಉತ್ತಮ ಇತಿಹಾಸಕಾರನನ್ನಾಗಿ ಮಾರ್ಪಡಿಸುತ್ತದೆ; ಬಹುಶಃ ಅದು ಒಬ್ಬ ವ್ಯಕ್ತಿಯನ್ನು ವಿವೇಕಯುಕ್ತನನ್ನಾಗಿ ಮಾಡುತ್ತದೆ.

ಸಂಶೋಧನೆಯ ಉದ್ದೇಶ ಕುರಿತಂತೆ ಇತಿಹಾಸ ಜಗತ್ತಿನಲ್ಲಿ ಒಮ್ಮತ ಕಂಡುಬರುವದಿಲ್ಲ. ಇತಿಹಾಸ ಜಗತ್ತಿನ ಕೆಲವು ನೆಲಸಿಗರ ಪ್ರಕಾರ ಇತಿಹಾಸದಲ್ಲಿ ನಿಜವಾದ ಗಣ್ಯವಾದದ್ದಾಗಿರುವುದೆಂದರೆ ಸಂಶೋಧನೆ ಮುಂದುವರಿದು ಅವರು ವಿದ್ವಾಂಸ ಎಂಬ ಪದಕ್ಕೆ ಹೆಚ್ಚಿನ ಒಲವು ತೋರಿ,ವಿದ್ವತ್ತು ಎಂದರೆ ಶ್ರೇಷ್ಠಮಟ್ಟದ ಸಂಶೋಧನೆ ಎಂದಿದ್ದಾರೆ. ಆದರೆ ವಿದ್ವತ್ತು ಶ್ರೇಷ್ಠಮಟ್ಟದ ಸಂಶೋಧನೆಗಿಂತ ಅಪರಿಮಿತವಾದುದನ್ನು ಸೂಚಿಸುತ್ತದೆ. ವಿದ್ವಾಂಸ ಎಂದರೆ ಒಂದು ಅರ್ಹ ವಿಷಯವನ್ನು ಆಯ್ದುಕೊಂಡು ಅದಕ್ಕೆ ಸಂಬಂಧಿಸಿದ ಎಲ್ಲಾ ಸಂಗತಿಗಳು ಹಾಗೂ ನೆರೆಹೊರೆಯ ವಿಷಯಗಳ ಪ್ರಮುಖವಾದ ಸಂಗತಿಗಳಲ್ಲಿ ಪಾರಂಗತನಾಗಿರುವವನು ಎಂದು.

ಹೀಗೆ ಸುಮಾರು ನಾಲ್ಕು ಅಥವಾ ಐದು ದಶಕಗಳ ಮುಂಚೆ ಸಂಶೋಧನೆ ಮತ್ತು ಅದರ ಉದ್ದೇಶಕ್ಕೆ ಸೀಮಿತವಾದ ಅರ್ಥವನ್ನು ಕಲ್ಪಿಸಲಾಗಿತ್ತು. ಹೊರ ಸಂಗತಿಗಳನ್ನು ಹಾಗೂ ಅಲ್ಲಿಯವರೆಗೂ ಯಾರೂ ಉಪಯೋಗಿಸದ ಆಧಾರ ಅಥವಾ ಆಧಾರಗಳನ್ನು ಕಂಡುಹಿಯುವದು; ಆ ಸಂಗತಿಗಳ ಆಧಾರಗಳ

ನೆರವಿನಿಂದ ಪ್ರಚಲಿತದಲ್ಲಿದ್ದ ವಿವರಣೆಗಳ ಮೇಲೆ ವಿಸ್ತೃತವಾದ ಬೆಳಕು ಚೆಲ್ಲುವುದು ಮತ್ತು ಅವುಗಳ ಆಧಾರದ ಮೇಲೆ ಹಿಂದಿನ ಹೇಳಿಕೆಗಳು, ತೀರ್ಮಾನಗಳು ಮತ್ತು ಅಭಿಪ್ರಾಯಗಳನ್ನು ಪ್ರಶ್ನಿಸುವುದಕ್ಕೆ ಸೀಮಿತವಾಗಿತ್ತು. ಆಧಾರಗಳ ಕೊರತೆಯಿಂದಾಗಿ ಹೆಚ್ಚಿನ ಕಥನಗಳು ವಿವರಣಾತ್ಮಕವಾಗಿರಲು ಸಾಧ್ಯವಿಲ್ಲದೆ ಅಲ್ಲಲ್ಲಿ ಅಂತರಗಳು ಕಂಡುಬರುತ್ತಿತ್ತು. ಈ ಕಾರಣಗಳಿಂದಾಗಿ ಸಂಗತಿಗಳ ಸಂಗ್ರಹಣಕ್ಕೆ ಮಹತ್ವ ನೀಡಲಾಗಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ವಿಧಾನ ದೃಷ್ಟಿಕೋನದಲ್ಲಿಯೂ ಬದಲಾವಣೆ ಉಂಟಾಗಿದೆ. ಮೇರೆಯನ್ನು ಸೇರಲು ಸಂಶೋಧನೆ ಕೇವಲ ಒಂದು ಮಾರ್ಗ, ಕೇವಲ ಪೂರ್ವಭಾವಿ ಕಾರ್ಯಾಚರಣೆ.

## 9.1 ಪೀಠಿಕೆ

ಇತಿಹಾಸಕಾರ ಬರೆದದ್ದೆಲ್ಲಾ ಇತಿಹಾಸವಲ್ಲ. ಸಂಶೋಧನೆ ಒಂದು ಹೊಸ ಒಳನೋಟವನ್ನು ಕೊಡುವಂತಿರಬೇಕು. ವಸ್ತುನಿಷ್ಠವಾಗಿರಬೇಕು. ಪಾರದರ್ಶಕ ಮಾದರಿಯಲ್ಲಿ ಇರಬೇಕು. ಇತಿಹಾಸ ಗತಕಾಲವೆಂಬ ಭೂಮಿಯನ್ನು ಅಗೆದು ಆಕರವೆಂಬ ಮಣ್ಣನ್ನು ಸಂಗ್ರಹಿಸಿ ಆಕರ ವಿಶ್ಲೇಷಣೆ ಎಂಬ ವೈಜ್ಞಾನಿಕ ಪ್ರಕ್ರಿಯೆಯಲ್ಲಿ ಉತ್ಪಾದಿಸಲ್ಪಟ್ಟ ಚಿನ್ನವಾಗಬೇಕು. ಗತಕಾಲ ದಂತಕಥೆಗಳಿಂದ ಪುರಾಣಗಳಿಂದ, ಪೂರ್ವಾಗ್ರಹಗಳಿಂದ ಅತಿರಂಜಿತ ಕಥೆಗಳಿಂದ ಸುಳ್ಳು ಮಾಹಿತಿಗಳಿಂದ ತುಂಬಿದೆ. ಇಂತಹ ಗೊಂಡಾರಣ್ಯದಲ್ಲಿ ಸಂಶೋಧಕ 'ಐತಿಹಾಸಿಕ ಸತ್ಯ'ವೆಂಬ ವಸ್ತುವನ್ನು ಹುಡುಕಬೇಕು. ಹೆಜ್ಜೆ ಹೆಜ್ಜೆಗೆ ಹಾದಿ ತಪ್ಪುವ ಎಲ್ಲಾ ಸಂದರ್ಭಗಳು ಸಂಶೋಧಕನಿಗಿದೆ. ಇಂತಹ ಸಂದರ್ಭಗಳನ್ನೆಲ್ಲಾ ಜಯಿಸಿದರಷ್ಟೇ ಸಾಲದು ಸ್ವಾರ್ಥ, ಪೂರ್ವಾಗ್ರಹಗಳು, ಸಿದ್ಧಾಂತಗಳು, ಬೇಕು–ಬೇಡಗಳೆಂಬ ತನ್ನೊಳಗಿರುವ ಅಪಾಯಕಾರಿ ಪ್ರವೃತ್ತಿಯಿಂದಲೂ ಸಂಶೋಧಕ ಹೊರಬರಬೇಕು. ಆಗ ಮಾತ್ರ ಇತಿಹಾಸದ ಸತ್ಯಗಳು ನಮಗೆದುರಾಗುತ್ತವೆ. ಇತಿಹಾಸದ ಸತ್ಯಗಳನ್ನು ಹುಡುಕುವ ಪ್ರಕ್ರಿಯೆ ಪ್ರಧಾನ ಅಂಶಗಳೇ ಆಕರಗಳ ಸಂಗ್ರಹ ಮತ್ತು ಆಕರಗಳ ವಿಶ್ಲೇಷಣೆ.

ನಾವು, ಸಂಗ್ರಹಿಸಿದ ಆಕರಗಳನ್ನು ಅವುಗಳ ಸತ್ಯಾಸತ್ಯತೆಗೆ ಒಳಪಡಿಸುವುದು ಅಂದರೆ ನಾವು ಆಕರವನ್ನು ಯಾವುದಕ್ಕೆ ಸಂಬಂಧಿಸಿದ್ದೆಂದು ತಿಳಿದಿದ್ದೇವೊ ಅದು ನಿಜವಾಗಿಯೂ ಅದೇ ಆಕರವೆ? ಅಥವಾ ನಕಲಿಯೆ? ಎಂಬುದನ್ನು ತಿಳಿಯುವುದು ಅಗತ್ಯ. ಹಾಗೆಯೇ ಆ ಆಕರವನ್ನು ಕೇವಲ ಒಬ್ಬ ಬರಹಗಾರ ಬರೆದಿರುವನೆ? ಅಥವಾ ಹಲವು ವ್ಯಕ್ತಿಗಳ ಕೈ ಆ ಬರಹದಲ್ಲಿದೆಯೇ? ಎಂಬುದು ಬಹಳ ಪ್ರಾಮುಖ್ಯವಾಗುತ್ತದೆ. ಇದೇ ರೀತಿ ಆಕರ ಸೃಷ್ಟಯಾದ ಕಾಲ ಯಾವುದು ಇಡೀ ಆಕರದಲ್ಲಿರುವ ಮಾಹಿತಿ ಒಂದೇ ಕಾಲಕ್ಕೆ ಸಂಬಂಧಿಸಿದ್ದ ಅಥವಾ ಬೇರೆ ಬೇರೆ ಕಾಲದಲ್ಲಿ ಬರೆಯಲ್ ಪಟ್ಟಿದೆಯೆ? ಎಂಬುದು ಕೂಡ ತಿಳಿಯಬೇಕಾಗುತ್ತದೆ. ಕೆಲವು ಪ್ರಾಚೀನ ಕೃತಿಗಳು ಒಬ್ಬನಿಂದ ರಚಿತವಾಗಿವೆ ಎಂದು ಹೇಳಿಕೊಳುತ್ತದ್ದರೂ ಅವು ಹಲವಾರು ಶತಮಾನಗಳಲ್ಲಿ ಬೆಳೆಯುತ್ತಾ ಬಂದಿರುವುದನ್ನು ನಾವು ನೋಡಬಹುದು. ಆಕರಗಳ ಸತ್ಯಾಸತ್ಯತೆಯನ್ನು ಪ್ರಮಾಣಿಕರಿಸಲು ಹಲವಾರು ವೈಜ್ಞಾನಿಕ ವಿಧಾನಗಳನ್ನು ನಮ್ಮ ಸಂಶೋಧಕರು ಬಳಸುತ್ತಾರೆ.

ಹೀಗೆ ಕಂಡುಹಿಡಿದ ವಸ್ತುಗಳಿಗೆ ಅಥವಾ ಆಧಾರಗಳಿಗೆ ಒಂದು ರೂಪ ಕೊಡದಿದ್ದರೆ ಇತಿಹಾಸದಲ್ಲಿ ಇರುವ ಸತ್ಯ ಮತ್ತು ಶ್ರೇಷ್ಠತೆಯನ್ನು ಸಾದಿಸಲಾಗುವದಿಲ್ಲ. ವಿಮರ್ಶೆಯ ಏಕಮಾತ್ರುದ್ದೇಶ ಸಂಗತಿಗಳನ್ನು ಕಂಡುಹಿಡಿಯುವುದು. ಸಂಗತಿಗಳನ್ನು ಚಲನೆಯಲ್ಲಿಡುವದಾಗಲೀ, ಒಂದಕ್ಕೊಂದರ ಕಾರಣ ಸಂಬಂಧಗಳನ್ನು ನೆಲೆಗೊಳಿಸುವದಾಗಲಿ ಹಾಗೂ ಗತಕಾಲದ ಜೀವಂತ ಅಸ್ತಿತ್ವವನ್ನು ಪುನರ್ರಚಿಸುವುದಾಗಲೀ ವಿಮರ್ಶೆಯ ಕೆಲಸವಲ್ಲ. ಅದೇನಿದ್ದರೂ ಇತಿಹಾಸಕ್ಕೆ, ಇತಿಹಾಸ ಕಥನಕ್ಕೆ ಸಾಮಗ್ರಿಗಳನ್ನು ಒದಗಿಸಿಕೊಡುವದಾಗಿದೆ. ಗ್ರಂಥಗಳ ಪ್ರಾಮಾಣ್ಯ ನೆಲೆಗೊಂಡ ಮೇಲೆ, ಆಧಾರಗಳನ್ನು ವಿಮರ್ಶಿಸಿದ ಮೇಲೆ, ಕಾಲಗಣನೆಯನ್ನು ನಿರ್ಧರಿಸಿದ ಮೇಲೆಯೂ ಕೂಡ ಇತಿಹಾಸ ರಚನಾಕಾರ್ಯ ಉಳಿದಿರುತ್ತದೆ. ಇದು ಸಂಶೋಧಕನ ಜವಾಬ್ದಾರಿಯೂ ಹೌದು.

## 9.2 ಆಕರ ವಿಶ್ಲೇಷಣೆ

ಇತಿಹಾಸ ಸತ್ಯವನ್ನು ನಿರ್ದಾಕ್ಷಿಣ್ಯವಾಗಿ ಹೇಳುತ್ತದೆ. ಇತಿಹಾಸವನ್ನು ಬದಲಾಯಿಸಲು ಸಾಧ್ಯವಿಲ್ಲ. ಇತಿಹಾಸ ಒಂದು ನಿದಿಷ್ಟ ಜ್ಞಾನ ಎಂಬ ಅಭಿಪ್ರಾಯ ಹೊಂದಿದವನು ಸುಖಜೀವಿ. ಆದರೆ ಇಲ್ಲಿ ಮುಂದಿನ ಸಂಶೋಧನೆಗೆ ಅವಕಾಶವಿಲ್ಲ. ಈ ಅಭಿಪ್ರಾಯದಂತೆ ಇತಿಹಾಸವನ್ನು ಸ್ವಾಭಾವಿಕವಾಗಿ ಸಮಾಜ ರಕ್ಷಿಸಿಕೊಂಡು ಬಂದಿದೆ ಎಂಬ ತಿಳಿವು ಇದೆ. ಇದಕ್ಕೆ ಬದಲಾಗಿ ಇತಿಹಾಸವು ಹಿಂದಿನ ಘಟನೆಗಳ ಕುರಿತಾಗಿ ನಡೆಸುವ ಒಂದು ಪರದಾಟ. ಇತಿಹಾಸಕಾರನ ಕೈಯಲ್ಲಿರುವ ಟಾರ್ಚ್ ಭೂತಕಾಲವನ್ನು ಅವಲೋಕಿಸುವ ಕತ್ತಲನ್ನು ಸಂಪೂರ್ಣವಾಗಿ ನಿವಾರಿಸಲಾರದು. ಆಗ ರೂಢಿಸಿಕೊಂಡ ಚಿತ್ರಗಳು ಅಸ್ಪಷ್ಟ. ಇತಿಹಾಸಕಾರನಿಗೆ ಪ್ರಶ್ನೆಗಳು ಉದ್ಭವಿಸುತ್ತಲೇ ಇರಬೇಕು. ಪ್ರಶ್ನೆಗಳಿಗೆ ಉತ್ತರ ದೊರಕಿದಾಗ ಇನ್ನಷ್ಟು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಇತಿಹಾಸ ಮತ್ತು ನಮಗಿರುವ ಇತಿಹಾಸದ ಜ್ಞಾನ ಎರಡೂ ಸಮಾನ ಅಲ್ಲ. ಇತಿಹಾಸದ ಜ್ಞಾನ ಇತಿಹಾಸಕಾರನ ಸೃಷ್ಟಿ. ಅದು ಸಹಜವಾಗಿ ಸಮಾಜದಲ್ಲಿ ಹುದುಗಿರುವುದಿಲ್ಲ. ಹೇಗೆ ಚಿನ್ನ ಭೂಮಿಯಲ್ಲಿದ್ದರೂ ಸಹಜವಾಗಿ ದೊರಕಲಾರದೋ, ವಿಭಿನ್ನ ಹಂತಗಳಲ್ಲಿ ಶುದ್ದೀಕರಣಕ್ಕೊಳಪಟ್ಟಾಗ ಅದು ನಮಗೆ ಕಾಣುತ್ತದೋ ಹಾಗೆ ನಮ್ಮ ಸಮಾಜದ ಗತಕಾಲದ ಕುರುಹುಗಳನ್ನು ಇತಿಹಾಸಕಾರ ವಿಭಿನ್ನ ವೈಜ್ಞಾನಿಕ ಸಂಶೋಧನಾ ಪ್ರಕ್ರಿಯೆಗಳ ಮೂಲಕ ರಚಿಸುತ್ತಾನೆ. ಇಷ್ಟಾದರೂ ಇತಿಹಾಸಕಾರನಿಗಾದ ದರ್ಶನ ಅವಿಚ್ಛಿನ್ನ ಕೃತ್ಯವಲ್ಲ. ಸತ್ಯ ಏಕರೂಪಿಯಲ್ಲ ಸತ್ಯ ಅನೇಕ ರೂಪವುಳ್ಳದ್ದು ಎಂಬ ಅರಿವು ನಮಗಿರಬೇಕು. ಒಬ್ಬ ಸಂಶೋಧಕ ನೋಡದ ಸತ್ಯವನ್ನು ಇನ್ನೊಬ್ಬ ನೋಡಬಲ್ಲ ಎಂಬ ಜ್ಞಾನ ನಮಗಿರಬೇಕು.

ಇತಿಹಾಸದಲ್ಲಿ ಪ್ರಮುಖವಾದ ಪ್ರಶ್ನೆ ಈಗಾಗಲೇ, ಗತಿಸಿಹೋದ ಗತಕಾಲವನ್ನು ಅರಿಯಬಹುದೆ ಎಂಬುದು. ಇದಕ್ಕೆ ಉತ್ತರ ಇಲ್ಲ ಎನ್ನುವುದಾದರೆ ಇತಿಹಾಸ ಇಲ್ಲ. ಇದಕ್ಕೆ ಉತ್ತರ ಇದೆ ಎನ್ನುವುದಾದರೆ ಗತಕಾಲವನ್ನು ಅರಿಯುವ ಬಗೆ ಎಂತು ಮಾನವನ ಸ್ಮರಣಶಕ್ತಿ ಸೀಮಿತ. ಕಾಲಕಳೆದಂತೆ ಅದು ಅಸ್ಪಷ್ಟವಾಗುತ್ತಾ ಹೋಗುತ್ತದೆ. ಅಥವಾ ತನಗೆ ಅಗತ್ಯವೆಂದುಕೊಂಡು ಬಂದ ಘಟನೆಗಳನ್ನು ಮಾತ್ರ ನೆನಪಿನಲ್ಲಿಡುತ್ತದೆ. ಹಾಗಾದರೆ ಸಾವಿರಾರು ವರ್ಷಗಳ ಇತಿಹಾಸವನ್ನು ಪುನಃರಚಿಸುವುದು ಸಾಧ್ಯವೇ? ಸಾಧ್ಯ ಎನ್ನುತ್ತದೆ ಇತಿಹಾಸ. ಇದಕ್ಕೆ ಮೂಲಾಧಾರವೇ ಆಕರಗಳು. ಭೂತಕಾಲ ಯಾವಾಗಲೂ ತನ್ನ ಕುರುಹು

ವರ್ತಮಾನಕ್ಕೆ ಬಿಟ್ಟು ಹೋಗುತ್ತದೆ. ಈ ಕುರುಹುಗಳನ್ನಾದರಿಸಿ ಭೂತಕಾಲದ ದರ್ಶನ ಸಾಧ್ಯ ಎನ್ನುವುದರ ಮೇಲೆ ಇತಿಹಾಸ ನಿಂತಿದೆ. ಹಾಗಾದರೆ ಈ ಕೆಲಸ ಸುಲಭವೇ? ಯಾರು ಬೇಕಾದರು ಮಾಡಬಹುದೇ ಇಲ್ಲ. ತನ್ನೆಲ್ಲಾ ಕುರುಹುಗಳನ್ನು ವರ್ತಮಾನಕ್ಕೆ ಬಿಟ್ಟು ಹೋಗಿದ್ದಾರೆ ಈ ಕೆಲಸ ಅಷ್ಟೇನೂ ಕಷ್ಟವಲ್ಲ. ಆದರೆ ಭೂತಕಾಲ ತನ್ನೆಲ್ಲಾ ಕುರುಹುಗಳನ್ನು ಬಿಟ್ಟು ಹೋಗುವುದಿಲ್ಲ. ಬಿಟ್ಟು ಹೋದ ಕುರುಹುಗಳೆಲ್ಲಾ ದೀರ್ಘಾವಗ ಉಳಿಯುವದಿಲ್ಲ. ಉಳಿದ ಕುರುಹುಗಳೆಲ್ಲಾ ಸಂಶೋಧಕನಿಗೆ ದೊರಕದಿರಬಹುದು. ದೊರಕಿದ ಆಕರಗಳನ್ನು ಅರ್ಥೈಸಲು ಇತಿಹಾಸಕಾರ ವಿಫಲನಾಗಬಹುದು. ಸಿಕ್ಕಿದ ಆಕರಗಳಲ್ಲಿ ವಿದ್ಯೆ, ವೈಭವಿಕರಣ, ಪೂರ್ವಾಗ್ರಹಗಳು, ಏಕಮುಖಿ ಸತ್ಯ ತುಂಬಿರಬಹುದು. ಈಗ ಹೇಳಿ ಇತಿಹಾಸ ಸಂಶೋಧಕನ ಕೆಲಸ ಅಥವಾ ಇತಿಹಾಸ ಪುನಃರಚನೆ ಸುಲಭವೋ ಅಥವಾ ಕಷ್ಟವೋ ಎಂದು ಇತಿಹಾಸಕಾರನಿಗೆ ಒಬ್ಬ ಕವಿಯಂತೆ ಕೇವಲ ಸೃಜನಶೀಲ ಮನಸ್ಸಿದ್ದರೆ ಸಾಲದು. ಅವನಿಗೆ ಮೂಲ ಆಕರಗಳಿಲ್ಲದೆ ಏನೂ ಬರೆಯಲು ಸಾಧ್ಯವಿಲ್ಲ. ಬರೆದರೆ ಅದು ಇತಿಹಾಸವಾಗಲಾರದು.

ಆಕರಗಳ ಸಂಗ್ರಹಣೆ ಮತ್ತು ವಿಶ್ಲೇಷಣೆ ಪ್ರಕ್ರಿಯೆಯಲ್ಲಿ ಇತಿಹಾಸದ ಪುನಃರಚನೆಯ ಸೃಷ್ಟಿಯಾಗುತ್ತದೆ. ಗತಕಾಲ ಬಿಟ್ಟು ಹೋದ ಕುರುಹುಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ, ವರ್ಗೀಕರಿಸಿದಾಗ ನಮಗೆ ಮೂಲ ಆಕರಗಳು ದೊರಕುತ್ತವೆ. ಇದು ಒಬ್ಬ ಕಟ್ಟಡ ನಿರ್ಮಾಪಕ ಕಟ್ಟಡಕ್ಕೆ ಬೇಕಾದ, ಇಟ್ಟಿಗೆ, ಕಲ್ಲು, ಸಿಮೆಂಟು, ಮರಗಳು ಮುಂತಾದ ವಸ್ತುಗಳನ್ನು ಸಂಗ್ರಹಿಸುವ ಹಂತದಂತೆ, ಆಕರಗಳು ಬಹು ಲಿಖಿತ ಸಾಹಿತ್ಯ, ಅಲಿಖಿತ ಸಾಹಿತ್ಯ, ಶಾಸನಗಳು, ನಾಣ್ಯಗಳು, ಸ್ಮಾರಕಗಳು, ಉತ್ಖನನ ಸಾಮಗ್ರಿಗಳು ಇತ್ಯಾದಿ. ಇವುಗಳನ್ನು ಮುಖ್ಯವಾಗಿ ಪ್ರಾಥಮಿಕ ಆಕರಗಳು ಮತ್ತು ದ್ವಿತೀಯ ಆಕರಗಳು ಎಂದು ವರ್ಗೀಕರಿಸುತ್ತಾರೆ.

ಘಟನೆಯ ಕಾಲಕ್ಕೆ ಘಟನೆಗೆ ನೇರವಾಗಿ ಸಂಬಂಧಿಸಿದ ದಾಖಲೆಯನ್ನು ಪ್ರಾಥಮಿಕ ಆಕರಗಳು ಎನ್ನಬಹುದು. ಇತಿಹಾಸ ಸಂಶೋಧಕನ ಮುಖ್ಯ ಆಧಾರಗಳೇ ಪ್ರಾಥಮಿಕ ಆಕರಗಳು. ಪ್ರಾಥಮಿಕ ಆಕರಗಳನ್ನು ಬಳಸಿ ಮಾಡಿದ ಸಂಶೋಧನೆಗೆ ಹೆಚ್ಚು ಮಹತ್ವ, ಯಾಕೆಂದರೆ ಈ ಆಕರಗಳು ಹೆಚ್ಚು ವಿಶ್ವಾಸಾರ್ಹವಾದವುಗಳು. ನೇರವಾಗಿ ಭೂತಕಾಲದ ಘಟನೆಗೆ ಸಂಬಂಧಿಸಿದವುಗಳು. ಅದೇ ಕಾಲದಲ್ಲಿ ಸೃಷ್ಟಿಯಾದವುಗಳು. ಈ ಕಾರಣಕ್ಕಾಗಿ ಪ್ರಾಥಮಿಕ ಆಕರಗಳೇ ಸಂಶೋಧನೆಯಲ್ಲಿ ಪ್ರಧಾನವಾದವು. ದ್ವಿತಿಯ ದರ್ಜೆಯ ಆಕರ ಎಂದರೆ ಇತಿಹಾಸಕಾರರು ಪ್ರಾಥಮಿಕ ಆಕರಗಳನ್ನು ಬಳಸಿಕೊಂಡು ತಮ್ಮ ವಿಶ್ಲೇಷಣೆ ಹಾಗೂ ನಿರೂಪಣೆಯೊಂದಿಗೆ ಜನರಿಗೆ ನೀಡಿದ ಬರವಣಿಗೆಗಳು. ಇವುಗಳನ್ನು ಆಧರಿಸಿ ಸಂಶೋಧಿಸಿ, ಉತ್ತಮ ಸಂಶೋಧನೆ ಮಾಡಿದ ಸಂಶೋಧನೆ ಸಂಶೋಧಕರಿದ್ದಾರೆ. ಆದರೆ ಅದು ಅಪರೂಪ. ಈ ತರಹದ ಸಂಶೋಧನೆಗಳಲ್ಲಿ ತನಗಿಂತ ಹಿಂದಿನ ಸಂಶೋಧನ ಅಭಿಪ್ರಾಯಗಳು ಸೇರಿಕೊಂಡಿರುತವೆ. ದ್ವಿತಿಯ ದರ್ಜೆಯ ಆಕರಗಳನ್ನು ನಾವು ಕಡೆಗಣಿಸುವಂತಿಲ್ಲ. ಇಂದು ಸಂಶೋಧನೆಗೆ ಹೊರಟ ಹೊಸ ಇತಿಹಾಸಕಾರ ತನಗಿಂತ ಹಿಂದೆ ತನ್ನ ಸಂಶೋಧನಾ ಕ್ಷೇತ್ರದಲ್ಲಿ ಎಷ್ಟೆಲ್ಲಾ ಕೆಲಸಗಳಾಗಿವೆ ಏನಾಗಬೇಕಿದೆ ಎಂಬುದನ್ನು ತಿಳಿದುಕೋಳ್ಳಲು ದ್ವಿತಿಯ ದರ್ಜೆಯ ಆಕರಗಳು ಸಹಕಾರಿಯಾಗುತ್ತವೆ.

ಪ್ರಾಥಮಿಕ ಆಕರಗಳನ್ನು ಇತಿಹಾಸವನ್ನಾಗಿ ಮಾರ್ಪಡಿಸುವ ಕೆಲಸ ಗಂಭೀರವಾದದ್ದು. ಆಕರಗಳ ವಿಶ್ಲೇಷಣೆಯ ಪ್ರಾಮುಖ್ಯತೆ ಬರುವುದು ಇಲ್ಲಿ. ಆಕರಗಳೇನೋ ಮಾಹಿತಿಯನ್ನು ತುಂಬಿಕೊಂಡಿವೆ. ಚದುರಿಹೋದ ಮಾಹಿತಿ ಸಂಗ್ರಹಣೆ ಮಾತ್ರ ಸಂಶೋಧಕನ ಕೆಲಸವೇ. ಇರುವೆಗಳು ಆಹಾರವನ್ನು ಸಂಗ್ರಹಿಸುತ್ತವೆ. ಆದರೆ ಸಂಸ್ಕರಿಸುವದಿಲ್ಲ. ಸಂಶೋಧಕ ಇರುವೆಗಳ ಕೆಲಸ ಮಾಡಿದರೆ ಸಾಲದು. ಜೇನು ನೊಣಗಳು ಮಕರಂದವನ್ನು ಸಂಗ್ರಹಿಸಿ, ನಂತರ ಪರಿಷ್ಕರಿಸಿ, ಸಂಸ್ಕರಿಸಿ ಸಿಹಿಯಾದ ಜೇನು ತುಪ್ಪ ತಯಾರಿಸಿದಂತೆ ಮಾಹಿತಿಯನ್ನು ಕಲೆ ಹಾಕಿ ಪರಿಷ್ಕರಿಸಿ ವಿಶ್ಲೇಷಿಸಿ ಜನರಿಗರ್ಥವಾಗದ ಒಳ್ಳೆಯ ಒಳನೋಟಗಳನ್ನು ನೀಡುವ ಇತಿಹಾಸವನ್ನು ಪುನಃ ರಚಿಸುವುದು ಇತಿಹಾಸಕಾರನ ಕೆಲಸ.

ಪ್ರಾಥಮಿಕ ಆಕರಗಳು ಗತಕಾಲದ ಮೂಲ ದಾಖಲೆಗಿರುವುದರಿಂದ ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಅಗತ್ಯತೆ ಏನು ಎಂಬ ಪ್ರಶ್ನೆ ಸಹಜ. ಮೊದಲೇ ಹೇಳಿದಂತೆ ಇತಿಹಾಸದ ಜ್ಞಾನ ಇತಿಹಾಸಕಾರನ ಸೃಷ್ಟಿ. ಈ ಸೃಷ್ಟಿಕ್ರಿಯೆಯಲ್ಲಿ ಮೂಲ ಆಕರಗಳು ಪ್ರಧಾನವೇ ಹೊರತು ಅಂತಿಮವಲ್ಲ. ಏಕೆಂದರೆ ಈ ಆಕರಗಳು ನಿಜವಿರಬಹುದು. ನಕಲಿ ಇರಬುದು. ಅಪೂರ್ಣವಿರಬಹುದು, ಅಮೂರ್ತ ಕಲ್ಪನೆಗಳಿಂದ ಮಾಡಿರಬಹುದು. ಸಾಂಕೇತಿಕ, ಪಾರಿಭಾಷಿಕ ಶಬ್ದಗಳಿಂದ ಕೂಡಿರಬಹುದು. ಯಥಾವತ್ತಾಗಿ ಅವುಗಳನ್ನು ಸ್ವೀಕರಿಸಿದರೆ ನಮ್ಮ ತೀರ್ಮಾನಗಳು ತಪ್ಪಾಗಬಹುದು.

ಆಕರಗಳ ವೈಜ್ಞಾನಿಕ ವಿಶ್ಲೇಷಣೆ ಮಾಡದಿದ್ದರೆ ಅವುಗಳು ಹೊಂದಿರುವ ಪೂರ್ವಗ್ರಹಗಳು, ಅತಿರೇಕಗಳು ಹೊಗಳಿಕೆಗಳು, ಏಕಮುಖಿ ಸತ್ಯಗಳು, ಅತಿಶಯೋಕ್ತಿಗಳನ್ನು ನಾವು ನಿಜವೆಂದು ಭಾವಿಸಿ ಸ್ವೀಕರಿಸಬೇಕಾಗುತ್ತದೆ. ಆಗ ಗತಕಾಲವನ್ನು ಅರ್ಥೈಸುವ ನಮ್ಮ ಪ್ರಯತ್ನ ವಿಫಲವಾಗುತ್ತದೆ. ಈ ಕಾರಣಕ್ಕಾಗಿಯೇ, ಆಕರಗಳ ವಿಶ್ಲೇಷಣೆ ಬಹು ಪ್ರಾಮುಖ್ಯತೆಯನ್ನು ಹೊಂದಿದೆ. ಇಲ್ಲಿ ಇನ್ನೊಂದು ಬಹು ಮುಖ್ಯ ಪ್ರಶ್ನೆ ಆಕರ ವಿಶ್ಲೇಷಣೆ ಮಾಡುವಾಗ ಸಂಶೋಧಕ ತನ್ನ ಪೂರ್ವಗ್ರಹಗಳನ್ನು ಮೀರಿ ವಸ್ತುನಿಷ್ಠತೆ ಕಾಪಾಡಿಕೊಳ್ಳುವುದು ಸಾಧ್ಯವೇ? ಇತಿಹಾಸದ ವಸ್ತು ಮಾನವ ಸಮಾಜ ಸಂಶೋಧಕನೂ ಮಾನವ ಸಮಾಜದ ಭಾಗವಾದ್ದರಿಂದ ಆತನ ಮನಸ್ಸು ಮುಕ್ತವಾಗಿರಲು ಸಾಧ್ಯವೇ? ತನ್ನ ಕುತೂಹಲ, ಆಸೆ, ಆಸಕ್ತಿಗಳನ್ನು ಇತಿಹಾಸ ಅರಿಯುವಂತೆ ಮಾಡುತ್ತವಲ್ಲವೇ? ಗತಕಾಲದ ಕುರುಹುಗಳು ಸಾಕ್ಷಿಯಾಗಿ ರೂಪುಗೊಳ್ಳುವುದು ಅಧ್ಯಯನ ಪ್ರಕ್ರಿಯೆಯಲ್ಲಿ.

ಆದರೆ ಇವು ಕೇವಲ ಮೂಕ ಸಾಕ್ಷಿಗಳು. ಇತಿಹಾಸಕಾರ ಅವುಗಳನ್ನು ವಾಚಾಳಿಗಳನ್ನಾಗಿಸುತ್ತಾನೆ. ಅವುಗಳಿಗೆ ಹೊಸ ಹೊಸ ಪ್ರಶ್ನೆಗಳನ್ನು ಕೇಳುತ್ತಾನೆ. ಆದರೆ ಅವನು ಕೇಳುವ ಹೊಸ ಪ್ರಶ್ನೆಗಳು ಸ್ಫುರಿಸುವುದು ಅವನ ನಂಬಿಕೆ, ಸಿದ್ಧಾಂತ, ಆಸಕ್ತಿ ಒಲವು ಮುಂತಾದವುಗಳಿಂದ. ಹಾಗಾದರೆ ಅವನ ಪ್ರಶ್ನೆಗಳು ಮತ್ತು ಉತ್ತರಗಳು ವಸ್ತುನಿಷ್ಠವಾಗಲು ಸಾಧ್ಯವೇ ಎನಿಸುವದು ಸಹಜ. ಸತ್ಯ ಏನೆಂದರೆ ಇತಿಹಾಸ, ಇತಿಹಾಸ ಅಧ್ಯನದಲ್ಲಿ ಸಂಪೂರ್ಣ ವಸ್ತುನಿಷ್ಠತೆ ಸಾಧ್ಯವಿಲ್ಲ. ಇಲ್ಲಿ ವಸ್ತುನಿಷ್ಠತೆ ಎಂದರೆ ಪ್ರಾಮಾಣಿಕತೆ ಮತ್ತು ಪಾರದರ್ಶಕತೆ. ಇತಿಹಾಸದ ಆಕರಗಳನ್ನು ಮುಕ್ತ ಮನಸ್ಸಿನಿಂದ ಕೂಲಂಕುಷವಾಗಿ ಹುಡುಕಿ ಅಧ್ಯಯನ ಮಾಡಿ ಅರ್ಥೈಸಿ ವ್ಯಾಖ್ಯಾನಿಸಿದ್ದು ಎಂದಷ್ಟೇ. ಸಾಕ್ಷಿಗಳನ್ನು ತಿರುಚಿ, ವಿಕೃತಗೊಳಿಸಿ ಅವುಗಳನ್ನು ಹಾಜರು

ಪಡಿಸದಿರುವ ಮತ್ತು ಅವುಗಳ ಬಾಯಿ ಮುಚ್ಚಿಸುವ ಕೆಲಸ ಮಾಡದಿರುವುದೇ ವಸ್ತುನಿಷ್ಠತೆ ಎನ್ನಬಹುದು. ಆಕರಗಳನ್ನು ವಿಮರ್ಶೆಗೊಳಪಡಿಸುವಾಗ ಗತ ಹೇಗಿತ್ತು ಎಂಬ ಕುತುಹಲವಿರಬೇಕೇ ಹೊರತು ಹೇಗಿರಬೇಕಿತ್ತು ಎಂಬ ಚಿಂತನೆ ಅಪಾಯಕಾರಿ. ಹಾಗೆಯೇ, ನಮ್ಮ ವರ್ತಮಾನವನ್ನೇ, ಭೂತಕಾಲದಲ್ಲಿ ಕಾಣಿಸುವುದು ಕೂಡ ಸರಿಯಲ್ಲ.

ಇತ್ತೀಚೆಗಿನ ಇತಿಹಾಸ ಸಂಶೋಧಕರಿಗೆ ಹಲವು ಸೌಲಭ್ಯಗಳಿವೆ. ಆಕರಗಳು ಸುಲಭವಾಗಿ ದೊರಕುತ್ತವೆ. ಮಾಹಿತಿಯನ್ನು ಬಹುಬೇಗ ಕಲೆ ಹಾಕಬಹುದು. ಹಿಂದಿನ ಸಂಶೋಧಕರು ನಡೆದ ದಾರಿ .ಇದೆ. ಆದರೆ ಒಂದು ಬಹು ದೊಡ್ಡ ಅಪಾಯವೂ ಇದೆ. ಅದೇನೆಂದರೆ ಹಿಂದಿನ ಇತಿಹಾಸಕಾರರು ತಮ್ಮ ಪಠ್ಯಗಳಲ್ಲಿ ಬರೆದದ್ದನ್ನು ಸಮಾಜ 'ಸತ್ಯ'ವೆಂದು ಸ್ವೀಕರಿಸಿದೆ. ಶಾಲಾ ಪುಸ್ತಕಗಳಲ್ಲಿ ನಾವು ಬಾಲ್ಯದಲ್ಲಿ ಕೆಲವು ಇತಿಹಾಸ ಪಠ್ಯಗಳನ್ನು ಅಂತರ್ಗತ ಮಾಡಿಕೊಂಡಿರುತ್ತೇವೆ. ಈ ಅಭಿಪ್ರಾಯಗಳನ್ನು ಸುಲಭವಾಗಿ ಒಡೆಯುವುದು ನಮ್ಮ ಮನಸ್ಸಿಗೆ ಸಾಧ್ಯವಾಗುವುದಿಲ್ಲ. ಸಂಶೋಧಕನಿಗೆ ಹೊಸ ದೃಷ್ಟಿಕೋನ ಹೊಸ ಪ್ರಶ್ನೆಗಳು ಬಾರದಂತೆ ನಮ್ಮ ಮನಸ್ಸಿನಲ್ಲಿರುವ ಧನಿಕೃತ ಅಭಿಪ್ರಾಯಗಳು ತಡೆಯುತ್ತವೆ. ಸಂಶೋಧಕ ಮುಕ್ತ ಅಂದರೆ ಮೊದಲು ತನ್ನ ಮನಸ್ಸಿನಲ್ಲಿ ಗಟ್ಟಿಯಾಗಿರುವ ವಿಚಾರಗಳನ್ನು ಮೀರಿ ಬೆಳೆಯಬೇಕಾಗುತ್ತದೆ. ಹೆಚ್ಚಿನ ಸಂಶೋಧನೆಗಳಲ್ಲಿ ಅದೇ ಹಳೆಯ ವಿಚಾರಗಳ ಚರ್ವಿತ ಚರ್ವನ ಆಗುವುದನ್ನು ನಾವು ನೋಡುತ್ತೇವೆ. ಇದಕ್ಕೆ ಸಂಶೋಧಕನಲ್ಲಿ ಹೊಸ ಪ್ರಶ್ನೆಗಳು ಉದ್ಭವಿಸದಿರುವುದೇ ಕಾರಣ.

## 9.3 ಪ್ರಾಥಮಿಕ ವಿಶ್ಲೇಷಣೆ

ಇತಿಹಾಸ ರಚನೆಯಲ್ಲಿ ಅರ್ಥ ಪ್ರಕಾಶಿಕೆ ಕೊನೆಯ ಅಥವಾ ಆಖ್ಯೆರು ಕಾರ್ಯಕ್ರಮ. ಆದ್ದರಿಂದ ಹಿಂದಿನ ಎಲ್ಲ ಕಾರ್ಯಕ್ರಮಗಳು ವ್ಯವಸ್ಥಿತವಾಗಿ ನಡೆದಿವೆ ಎಂಬುದನ್ನು ಖಚಿತಪಡಿಸಿಕೊಳ್ಳುತ್ತದೆ. ಇದು ಕಲಾತ್ಮಕವಾಗಿ ಸಾಹಿತ್ಯಾತ್ಮಕವಾಗಿ ಸಿದ್ದಗೊಳ್ಳಬೇಕು. ಇತಿಹಾಸಕಾರನು ಪ್ರತಿ ವಿಷಯವನ್ನು ಅಥವಾ ನಿರ್ಬಂಧವನ್ನು ಬೇರೆ ಬೇರೆಯಾಗಿ ಹೇಳಬಹುದಾಗಿದ್ದರಿಂದ ಅವನೇ ಯಾವ ಮಾರ್ಗವು ಸಂಗತಿಗೆ ಹೊಂದಿಕೊಳ್ಳುತ್ತೆಂಬುದನ್ನು ನಿರ್ಧರಿಸಬೇಕು. ಪ್ರತಿ ವಿದ್ವಾಂಸನ ಮುಖ್ಯ ಉದ್ದೇಶವೆಂದರೆ ಬಹು ಎಚ್ಚರಿಕೆಯ ಅನ್ವೇಷಣೆ. ಇದರ ಪರಿಣಾಮವಾಗಿ ಯಾವುದೋ ಒಂದು ಹೊಸದೂ, ವಿಶೇಷವೂ, ಅದ್ವಿತೀಯವೂ ಆದ ವಿಷಯವನ್ನು ಪ್ರಸಿದ್ಧಪಡಿಸಿ ಅದರ ಮೂಲಕ ಇತಿಹಾಸದ ದಿಗಂತವನ್ನು ವಿಸ್ತರಿಸುವದೇ ಆಗಿರುತ್ತದೆ. ಮೊದಲನೆಯದಾಗಿ ಯಾವುದೇ ಅಪ್ರಕಟಿತ ವಿಷಯದ ಮೇಲೆ ಬೆಳಕು ಚೆಲ್ಲಿ ಹೊಸ ಅಂಶ ಈವರೆಗೂ ಪತ್ತೆಯಾಗದಿದ್ದ ಯುದ್ಧ, ಸೈನ್ಯಾಚರಣೆ, ಗೊತ್ತಿಲ್ಲದ ವ್ಯಕ್ತಿ ಪರಿಚಯ, ಇತ್ಯಾದಿ ವಿಷಯಗಳನ್ನು ಸಾಹಿತ್ಯಸಾಸ್ತ್ರ ಪ್ರಾಕ್ತನ ಸಂಶೋಧನೆಗಳ ಆಧಾರದಿಂದ ಸಾದರ ಪಡಿಸುವುದು. ಎರಡನೆಯದಾಗಿ ಈವರೆಗೆ ಪತ್ತೆಯಾಗಿರುವ ವಿಷಯಗಳ ಬಗ್ಗೆ ಪುನರ್ ಪರಿಶೀಲನೆಗೆ ಸಾಧ್ಯವಾಗುವಂಥ ವಿಷಯಗಳನ್ನು ಬದಲಾಯಿಸಲು, ಮತ್ತಷ್ಟು ಹೆಚ್ಚಿಸಲು ಅವಕಾಶವಿದ್ದಡೆ ಹೊಸ ಸಿದ್ಧಾಂತಗಳನ್ನು ರೂಪಿಸುವುದು. ಹೀಗೆ ನಮಗೆ ಸಿಂಧೂ ನಾಗರಿಕತೆ ಚೋಳರು, ಗಂಗರು, ಸೇವುಣರು, ಮುಂತಾದವರ ಬಗ್ಗೆ ಹೆಚ್ಚು ವಿಷಯಗಳನ್ನು ಸಂಶೋಧಕರು ಪ್ರಕಡಿಸಿದ್ದಾರೆ. ಮೂರನೆಯದಾಗಿ ಪ್ರತಿಷ್ಠಿತ ವಿದ್ವಾಂಸರು ಶ್ರಮದ ಫಲವಾಗಿ ದತ್ತಾಂಶದ ಬಗ್ಗೆ ಒಂದು ಹೊಸ

ದಾರ್ಶನಿಕ ತತ್ವವೇ ರೂಪುಗೊಳ್ಳುತ್ತದೆ. ಇವು ಮೂಲಭೂತವಾಗಿಯೂ ಸರ್ವಕಾಲಿಕಯೂ ಇದು, ಇತಿಹಾಸಕ್ಕೆ ಕೀರ್ತ ತರುತ್ತದೆ.

ಹೀಗೆ ಸಂಶೋಧಕನು ತಾನು ಮೇಲ್ಕಾಣಿಸಿರುವ ಯಾವ ಬಗೆಯ ಅನ್ವೇಷಣೆಯನ್ನು ನಡೆಸುತ್ತಿರುವನೆಂದು ತೀರ್ಮಾನಿಸಿ ಅದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿಕೊಳ್ಳಬೇಕು. ಮೊದಲನೆಯದಾಗಿ ಈವರೆಗೂ ಪ್ರಕಟವಾಗಿಲ್ಲದ ವಿಷಯದ ಬಗ್ಗೆ ಹೊಸ ವಿಷಯಗಳು ಪ್ರಾಪ್ತವಾಗುವ ಬಗ್ಗೆ ಆದರೆ ತನ್ನ ಕಾರ್ಯವನ್ನು ಈ ರೀತಿ ರೂಪಿಸಿಕೊಳ್ಳಬೇಕು. ಉದಾಹರಣೆಗೆ ಕರ್ನಾಟಕದ ರಾಜ ಟಿಪ್ಪು ಸುಲ್ತಾನನ ಬಗ್ಗೆ ಎಂದು ತಿಳಿಯೋಣ. ಅವನು ಪರದೇಶಗಳೊಡನೆ ನಾನಾ ರೀತಿಯ ವ್ಯಾಪಾರ, ರಾಜಕೀಯ, ಸಾಮಾಜಿಕ ಇತ್ಯಾದಿ ಸಂಪರ್ಕ ಹೊಂದಿದ್ದನೆಂದು ತಿಳಿದಿದೆ. ಆ ಬಗ್ಗೆ ಹೆಚ್ಚು ತಿಳಿಯಬೇಕಾದರೆ ಆ ಕಾಲದ ರಾಜರು ಆಡಳಿತಗಾರರು, ವ್ಯಾಪಾರ ಸಂಘ ಸಂಸ್ಥೆಗಳು, ಕ್ರಿಶ್ಚಿಯನ್ ಮತ ಪ್ರಚಾರಕರು, ತಂತ್ರಜ್ಞರು ಮುಂತಾದವರೊಡನೆ ಅವರು ಕಾಗದ ಪತ್ರ ಬರೆದಿರುತ್ತಾನೆ. ಅಂಥವು ಇಂಗ್ಲೆಂಡಿನ, ಫ್ರಾನ್ಸಿನ, ಪೋರ್ಚುಗಲ್, ಹಾಲೆಂಡ್, ತುರ್ಕಿ, ಇರಾನ್, ರಾಷ್ಟ್ರಗಳ ಸರ್ಕಾರಿ ಗ್ರಂಥಾಲಯ, ವ್ಯಕ್ತಿ ಸಂಸ್ಥೆಗಳ ಭಂಡಾರಗಳಲ್ಲಿಯೂ ಇವೆ. ಅವುಗಳನ್ನು ಅಲ್ಲಿಯ ಸಂಸ್ಥೆಗಳು ತಯಾರಿಸಿರುವ ಕ್ಯಾಟಲಾಗ್ ಪಟ್ಟಿಗಳಲ್ಲೂ ಕಾಣಬಹುದಾಗಿದೆ. ಅವು ನಾನಾ ಭಾಷೆಗಳಲ್ಲಿಯೂ ಇವೆ. ಆ ರಾಜ್ಯಗಳಿಗೆ ಭೇಟಿ ಕೊಡಬೇಕಾದ ಅವಶ್ಯಕತೆ ಇಲ್ಲ. ಅವುಗಳ ಮೈಕ್ರೋ ಫಿಲಂ, ಫೋಟೋಸ್ಟಾಟ್ ನಕಲುಗಳನ್ನು ಪಡೆದೋ ಪುಸ್ತಕಗಳನ್ನೇ ಎರವಲು ಪಡೆದೋ ಸಂಶೋಧನೆ ಮಾಡಬಹುದು.

## 9.4 ವಿವರಣಾತ್ಮಕ ವಿಶ್ಲೇಷಣೆ

ಸಂಶೋಧಕನಿಗೆ ತನಗೆ ಬೇಕಾದ ಎಲ್ಲಾ ಸಾಮಾಗ್ರಿಗಳು ಸಿಕ್ಕುವುದು ಕಷ್ಟವಲ್ಲ. ಉತ್ಸಾಹ, ಮನಸ್ಸಿದ್ದರೆ ಎಲ್ಲಾ ರೀತಿಯ ಆಕರಗಳು ದೊರಕಿ ಸಂಶೋಧನೆ, ಯಶಸ್ವಿಯಾಗಬಲ್ಲದು, ಎರಡನೇ ರೀತಿಯ ಅನ್ವೇಷಣೆಯಲ್ಲಿ ದೈಹಿಕ ಶ್ರಮಕ್ಕಿಂತ ಮಾನಸಿಕ ಕಸರತ್ತೇ ಹೆಚ್ಚು. ಹಳೆಯ ವಿಷಯಗಳನ್ನು ಹೊಸ ಸಂಶೋಧನೆಗಳ ಮೂಲಕ ವಿಸ್ತರಿಸಿ, ಮೆರಗು ಕೊಟ್ಟು, ಹೊಸ ನಿರೂಪಣೆ ಕೊಡುವುದು ಸಾಧ್ಯ. ಮೂರನೇ ಅನ್ವೇಷಕ ಪದ್ಧತಿಯಲ್ಲಿ ಹೊಸ ದಾರ್ಶನಿಕ ಅಥವಾ ತತ್ವ ನಿರೂಪಣೆ ಮಾಡುವುದೇ ಕಾರ್ಯವಾದರೂ ಇದು ಬಹಳ ತ್ರಾಸದಾಯಕವೂ, ಕುಶಾಗ್ರಬುದ್ಧಿ ಕೆಲಸವೂ ಆಗಿದೆ. ಇದು ಹೊಸ ಸಂಶೋಧನೆಯಲ್ಲ, ನಿರೂಪಣೆಯೂ ಅಲ್ಲ. ಯಾವುದಾದರೊಂದು ಸಾಧಾರಣ ಘಟನೆಯನ್ನು ಅದರ ಕಾರಣಗಳ ಮೂಲಕ ವಿವರಿಸಿ ಅದರ ಆಂತರಿಕ ಕಾರಣಗಳನ್ನು ತಿಳಿದು ಹೊಂದಿಸಿ, ಎಲ್ಲವನ್ನು ಒಂದು ಸೂತ್ರದ ರೂಪದಲ್ಲಿ ಹೇಳಬೇಕಷ್ಟೆ. ಇದು ಸರ್ವಸಮ್ಮತವಾಗಿ ಎಲ್ಲ ಕಾಲ ದೇಶಗಳಲ್ಲಿ ಆಗಿರುವ, ಆಗಬಹುದಾದ ನಿಯಮವಾಗಬೇಕು. ಕಾರ್ಲೈಲನು ಮಹನೀಯರ ಬಗ್ಗೆ ಹೇಳಿರುವ ಸೂತ್ರ ಮಾರ್ಕ್ಸ್‌ನ ಆರ್ಥಿಕ ತೀರ್ಮಾನ ಪದ್ಧತಿ, ಹೆಗಲನ ಆದರ್ಶವಾದಿತ್ವ, ಸ್ಪೆಂಗ್ಲರನ ಆವರ್ತ ಪದ್ಧತಿ, ಟಾಯ್ನಬಿ ಅವರ ಸವಾಲು–ಜವಾಬು ಇಂಥ ಸಾಮಾನ್ಯ ನಿಯಮಗಳಾಗಿವೆ.

ಇತಿಹಾಸದ ಪುನರ್ರಚನೆಯಲ್ಲಿ ಬುದ್ಧಿಯ ಕೆಲಸ ಬಹಳ ಹೆಚ್ಚು. ಅದಕ್ಕಾಗಿ ಏಕಾಗ್ರತೆ ಇರಲೇಬೆಕು. ಇದು ಹಿಂದಿನ ಕೆಲಸಗಳಿಗಿಂತ ಹೆಚ್ಚು ಪಟ್ಟು ಉತ್ತಮವಾದದ್ದೆಂದು ಸಾದಿಸುವ ಯತ್ನದಲ್ಲಿ ಅವಶ್ಯಕವೆನಿಸಿದೆ. ಇದು ಬರವಣಿಗೆಯ ರೂಪದಲ್ಲಿ ಬಂದಾಗ ವಿಷಯವು ಅತ್ಯಂತ ಸರಳವಾಗಿ, ಸುಲಭವಾದ ಭಾಷೆಯಲ್ಲಿರಬೇಕು. ಅದು ಸ್ವಾರಸ್ಯವಾಗಿ ಎಲ್ಲರ ಗಮನ ಸೆಳೆಯಲು ಕಲಾತ್ಮಕವಾಗಿಯೂ ಸೊಗಸಾದ ಸಾಹಿತ್ಯದ ನಿರೂಪಣಾ ಮಾರ್ಗವನ್ನು ಅನುಸರಿಸಬೇಕು. ಇದು ಒಂದು ಕಾದಂಬರಿಯ ಸ್ವಾರಸ್ಯವಾದ ಶೈಲಿಯನ್ನು ಹೊದಿರಬೇಕು. ಈ ರೀತಿಯ ಬರವಣಿಗೆಗೆ ಗಿಬ್ಬನ್, ಮೆಕಾಲೆ ಮುಂತಾದವರು ಪ್ರಖ್ಯಾತರಾಗಿದಾರೆ. ಇತಿಹಾಸದ ಘಟನೆಗಳು ಒಂದರ ಹಿಂದೆ ಒಂದರಂತೆ ಬಂದು ಅದ್ಭುತವಾದ ಮೆರವಣಿಗೆಯು ಕಣ್ಮುಂದೆ ಹಾದು ಹೋದಂತೆ ಮಾಡಲು ಸಾಧ್ಯ. ಹಾಗಾಗಲು ಪ್ರಯತ್ನಿಸಬೇಕು. ಇದು ಒಂದು ಉತ್ತಮ ನಾಟಕದ ಆಕ್ಟ್ ಸೀನ್‌ಗಳಂತೆ ಒಂದನ್ನೊಂದು ಹೊಂದಿಕೊಂಡು, ಬಿಗಿಯಾಗಿದ್ದರೂ ಹಾಸ್ಯದ ಹೊನಲುಗಳನ್ನು ಒಳಗೊಂಡಿರಬೇಕು.

ಇತಿಹಾಸಕಾರನು ತನಗೆ ಬೇಕಾದ ಸಮಸ್ತ ವಿಷಯಗಳನ್ನು ಸಂಗ್ರಹಿಸಿ ಬರೆಯಲು ಪ್ರಾರಂಭಿಸಿದಾಗ ತಾನೇ ಈ ವಿಚಾರಗಳಲ್ಲಿ ಅತ್ಯಂತ ಹೆಚ್ಚಿನ ಪಾಂಡಿತ್ಯ ಪಡೆದಿರುವನೆಂದೂ, ಬಹಳ ಅಚ್ಚುಕಟ್ಟಾಗಿ ನಿರೂಪಣೆ ಮಾಡುತ್ತಿರುವನೆಂದೂ ಹೆಮ್ಮೆಯಿಂದ, ಆತ್ಮವಿಶ್ವಾಸದಿಂದ ಮುಂದುವರೆಯಬೇಕು. ಭಾರತದ ಅಖಂಡ ಇತಿಹಾಸವನ್ನು ಪ್ರಪ್ರಥಮವಾಗಿ ಬರೆದ ವಿನ್ಸೆಂಟ್‌ಸ್ಮಿತ್‌ರವರು ಬರೆದ 'ಆಕ್ಸ್‌ಫರ್ಡ್ ಹಿಸ್ಟರಿ ಆಫ್ ಇಂಡಿಯಾ'ದಲ್ಲಿ ಇಂಥ ಆತ್ಮಾಭಿಮಾನ ಕಂಡು ಬರುತ್ತದೆ. ನಿಯಮಗಳನ್ನು ಅವಶ್ಯಕವಾಗಿ ಅನುಸರಿಸಬೇಕು. ಹೊಸ ವಿಷಯಗಳನ್ನು ಹೇಳುವಾಗ ಆ ಅಭಿಪ್ರಾಯಗಳನ್ನು ಮೂಲಗಳೊಡನೆ ತಿಳಿಸಬೇಕು. ತನ್ನ ಸ್ವಂತ ಅಭಿಪ್ರಾಯ, ತೀರ್ಮಾನಗಳನ್ನು ಹಾಗೆಂದೇ ಖಚಿತವಾಗಿ ತಿಳಿಸಬೇಕು. ಇಂಥ ಮತ್ತು ಇಂಥದೇ ವಿಷಯ ಹೇಳುವಾಗ ಆ ಅಭಿಪ್ರಾಯಗಳನ್ನು ಮೂಲಗಳೊಡನೆ ತಿಳಿಸಬೇಕು. ತನ್ನ ಸ್ವಂತ ಅಭಿಪ್ರಾಯ, ತೀರ್ಮಾನಗಳನ್ನು ಹಾಗೆಂದೇ ಖಚಿತವಾಗಿ ತಿಳಿಸಬೇಕು. ಇಂಥ ಮತ್ತು ಇಂಥದೇ ವಿಷಯ ಹೇಳುವಾಗ ಅವುಗಳನ್ನು ಅಡಿ ಟಪ್ಪಣಿಗಳಲ್ಲಿ ಅವುಗಳ ಗ್ರಂಥ ಕರ್ತ, ಗ್ರಂಥದ ಹೆಸರು, ಸಂಪುಟ ಅಥವಾ ಭಾಗ, ಪುಟದ ಸಂಖ್ಯೆಗಳನ್ನು ಅನೇಕ ಆವೃತ್ತಿ ಅಚ್ಚಾಗಿದ್ದರೆ ಉಪಯೋಗಿಸಿದ ಗ್ರಂಥ, ಅಚ್ಚಾದ ವರ್ಷ ಇವುಗಳನ್ನು ದಾಖಲಿಸಬೇಕು. ಇಂಥ ಅಡಿ ಟಿಪ್ಪಣಿಗಳ ಸಂಖ್ಯೆ, ಮುಂತಾದವು ತೀರಾ ಹೆಚ್ಚಾಗದೇ, ಬೇಸರ ತರಿಸದಂತೆ ಒಂದು ಇತಿಮಿತಿಗೆ ಒಳಪಟ್ಟಿರಬೇಕು.

ಕೊನೆಯದಾಗಿ ಒಂದು ಉತ್ತಮ ಸಮತೋಲನದ ಆಧಾರ ಮತ್ತು ಸಹಾಯಕ ಗ್ರಂಥಗಳ ಪಟ್ಟಿಯನ್ನು ಕಾಣಿಸಬೇಕು. ಕೆಲವು ಅಚ್ಚಾಗದ ದಾಖಲೆಗಳನ್ನು ಉಪಯೊಗಿಸಿದ್ದರೆ ಅವುಗಳನ್ನು ಇಂಥ ಪಟ್ಟಿಯ ಮೊದಲಲ್ಲೇ ಕಾಣಿಸಬೇಕು. ಕಣ್ಣಾರೆ ಕಂಡವರ, ಪ್ರವಾಸಿಗಳ ದಿನಚರಿಗಳ, ಸಮಕಾಲೀನ ದಾಖಲೆಗಳ, ಸರ್ಕಾರದ ಕಾಗದ ಪತ್ರಗಳ ದಾಖಲೆಗಳು ಮುಂತಾದ ಸಾಹಿತ್ಯ ಪ್ರಕಾರಗಳು ಪ್ರಥಮ ದಾಖಲೆಗಳೆನಿಸಿಕೊಳ್ಳುತ್ತವೆ. ಶಾಸನಗಳು, ನಾಣ್ಯಗಳು, ಮುದ್ರೆಗಳು, ಅಗೆತದಲ್ಲಿ ದೊರೆತ ವಸ್ತುಗಳು ಪ್ರಾಕ್ತನ ಶಾಖಾಮೂಲಗಳು, ಕೈ ಬರಹ ದಾಖಲೆಗಳು ನಾನಾ ಭಾಷೆಗಳಲ್ಲಿರುತ್ತವೆ. ದ್ವಿತಿಯ ದರ್ಜೆಯ ಮೂಲಗಳೆಂದರೆ ಆ ಕಾಲದಲ್ಲಿ ಸೃಷ್ಟಿಸಲ್ಪಟ್ಟ ಸಾಹಿತ್ಯ ಮತ್ತು ಇತರ ಈ ರೀತಿ ಬರವಣಿಗೆಗಳು, ಅವುಗಳನ್ನು

ಸಾಧರಣವಾಗಿ ಗ್ರಂಥಕರ್ತನ ಆಕಾರಾದಿಯಾಗಿ ಜೋಡಿಸುವುದು ಪದ್ಧತಿ. ಒಳ್ಳೆಯ ಸಂಶೋಧಕನು ತಾನು ಉಪಯೋಗಿಸಿದ ಮುಖ್ಯ ಹಸ್ತ ಪ್ರತಿ ಮತ್ತು ಮೂಲ ವಸ್ತುಗಳನ್ನು ಒಂದು ಸಂಕ್ಷಿಪ್ತವಾಗಿ ತಿಳಿಸುತ್ತಾನೆ. ಮುಖ್ಯ ಮೂಲಗಳ ಬಗ್ಗೆ ವಿಮರ್ಶಾತ್ಮಕವಾದ ಸಂಕ್ಷಿಪ್ತ ಬರವಣಿಗೆ ಮೂಲಕ ಕಾಣಿಸುತ್ತಾನೆ. ಇಂಥ ಮೂಲಗಳು ಹೇಗೆ ಆ ಬಗ್ಗೆ ಉತ್ಕೃಷ್ಟವಾದವು ಎಂಬುದನ್ನು ಕಾಣಿಸಬೇಕು. ದಾಖಲೆಯ ಕೊನೆಯಲ್ಲಿ ಉಪಯೋಗಿಸಿದ ನಕ್ಷೆಗಳು, ಸಂಖ್ಯಾಪಟ್ಟಿ, ಚಿತ್ರಗಳು, ಮುಂತಾದುವನ್ನು ಕಾಣಿಸಬೇಕು. ಹೆಚ್ಚಿನ ಸೇರ್ಪಡೆ (ಅನುಬಂಧ]ಯಲ್ಲಿ ಇತರ ದತ್ತಾಂಶ ಹೇಚ್ಚಾಗಿ ತಿಳಿದಿರುವ ವಿಷಯಗಳು, ಇತರ ವ್ಯತಿರಿಕ್ತ ವಿಷಯಗಲನ್ನು ಕಾಣಿಸಬೇಕು. ಕೊನೆಯದಾಗಿ, ಗ್ರಂಥ, ವಿಷಯ, ಆಕಾರಾದಿ, ಸೂಚಿಯಲ್ಲಿ ಮುಖ್ಯ ವಿಷಯಗಳನ್ನು ಮೂಲ ಗ್ರಂಥದಲ್ಲಿ ಕಾಣಿಸಿರುವ ಪುಟ, ಮುಖ್ಯ ಘಟನೆಗಳು, ವ್ಯಕ್ತಿಗಳು, ಸ್ಥಳಗಳು ಮುಂತಾದವನ್ನು ಥೀಸಿಸ್‌ನಲ್ಲಿ ಕಾಣಿಸಬೇಕು. ಈ ಸಂಶೋಧನಾ ಗ್ರಂಥದ ಪ್ರಾರಂಭದಲ್ಲಿ ಪ್ರಸ್ತುತ ವ್ಯಾಪ್ತಿ ತಿಳಿಸುವ ಮುನ್ನುಡಿ, ಗ್ರಂಥ ಕರ್ತನಲ್ಲದೆ ಇತರರ ಮುನ್ನುಡಿ ಇರಬೇಕಾಗುತ್ತದೆ.

ಇತಿಹಾಸದ ಸಂಶೋಧನೆಯಲ್ಲಿ ತಯಾರು ಮಾಡುವಾಗ ಕೆಲವು ಸಾಧಾರಣ ಉಪಯೋಗಿಸುವ ಸಂಕೇತಾಕ್ಷರಗಳು ಮತ್ತು ಅವುಗಳ ವಿಸ್ತರಣ ಮತ್ತು ಒಂದು ಪೀಠಿಕೆ ಸಹ ಇರಬೇಕು. ಮುನ್ನುಡಿಯಲ್ಲಿ ಈ ಕಾರ್ಯದ ಅವಶ್ಯಕತೆ ಏನಿತ್ತು ಮತ್ತು ಯಾರ್‍ಯಾರ ನೆನೆಯಲಿ ಎಂಬುದಿರಬೇಕು. ಪ್ರಸ್ತಾವನೆಯಲ್ಲಿ ಈ ಕಾರ್ಯದ ಹಿನ್ನೆಲೆ ಮತ್ತು ಸಮಸ್ಯೆಗಳೇನೆಂಬುದನ್ನು ಕಾಣಿಸಬೇಕು. ಇದರಲ್ಲಿ ಸಮಸ್ಯೆಗಳಿಗೆ ಹೇಗೆ ಉತ್ತರ ಕಾಣಿಸಲು ಯತ್ನಿಸಲಾಗಿದೆ ಎಂದು ದಾಖಲಿಸಬೇಕು. ಈ ಪ್ರಸ್ತಾವನೆಯೇ ಸವಾಲಾಗಿ ಥೀಸಿಸ್ ದಾಖಲೆ– ಪ್ರಬಂಧವೇ– ಉತ್ತರವಾಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ಮೊದಲಲ್ಲಿ ಇದರ ತಿರುಳು (ಸಾರಾಂಶ) ಸಂಗ್ರಹವಾಗಿ ಕೊಡುವುದೂ ಸಂಪ್ರದಾಯ ಇಂಥವು ಸಂಕ್ಷಿಪ್ತವಾಗಿ ಮುನ್ನೂರು ನಾಲ್ಕುನೂರು ಪದಗಳನ್ನೊಳಗೊಂಡಿದ್ದರೆ ಸಾಕು. ಇಲ್ಲಿಗೆ ಸಂಶೋಧನೆಯು ಸಂಪೂರ್ಣವಾಯಿತು. ಮುನ್ನುಡಿಯನ್ನು ಆಯಾ ಭಾಗದ ವಿದ್ವಾಂಸರು ಬರೆದು ಅದರಲ್ಲಿರುವ ಮುಖ್ಯಾಂಶಗಳನ್ನು ಓದುಗರ ಗಮನಕ್ಕೆ ತಂದು ವಿಷಯಗಳ ಪ್ರಾಮುಖ್ಯತೆಯನ್ನು ಸಂಕ್ಷಿಪ್ತವಾಗಿ ತಿಳಿಸಿಕೊಡುತ್ತಾರೆ. ಇದೇ ಇಡೀ ಸಂಶೋಧಕನಿಗೆ ಕಿರೀಟವಿದ್ದಂತೆ.

## 9.5 ಸಾರಾಂಶ

ಇತಿಹಾಸ ಸಂಶೋಧನೆಯಲ್ಲಿ ವಿವರಣೆಗಳಿಗೆ ಏನು ಪ್ರಾಮುಖ್ಯತೆಯಿದೆ ಮತ್ತು ವಿವರಣೆಯನ್ನು ಸಂಶೋಧಕನು ಯಾವ ರೀತಿಯಲ್ಲಿ ನೀಡುತ್ತಾನೆ ಮತ್ತು ಯಾವುದೇ ರೀತಿಯ ಆಮಿಶಕ್ಕೆ ಒಳಪಡದೇ ನೀಡುತ್ತಾನೆ ಹಾಗೂ ಸಂಶೋಧನೆಯಿಂದ ಹೊರಬಂದ ಪ್ರಮುಖ ಅಂಶಗಳನ್ನು ಯಾವ ರೀತಿಯಲ್ಲಿ ಜೋಡಣೆ ಮಾಡಿ ಸಮಾಜಕ್ಕೆ ತಿಳಿಸುತ್ತಾನೆ ಎಂಬುದನ್ನು ನಮಗೆ ತಿಳಿಯಲು ಈ ಘಟಕವು ಅನುವು ಮಾಡಿಕೊಡುತ್ತದೆ.

ಹೀಗೆ ಅರ್ಥಪ್ರಕಾಶಿಕೆಯೂ ಬಹಳ ಶ್ರಮದಾಯಕ ಕ್ಲಿಷ್ಟಕರವಾದ ಕಾರ್ಯ. ಇದರಲ್ಲಿ ಬುದ್ಧಿವಂತಿಕೆಯ ಪಾತ್ರ ಹೆಚ್ಚು. ಇಲ್ಲಿ ವಿಷಯಗಳನ್ನು ಅಚ್ಚುಕಟ್ಟಾಗಿ ಸಿದ್ಧಪಡಿಸುವುದೇ ಮುಖ್ಯ. ಕಷ್ಟಪಟ್ಟು ಸಿದ್ಧಪಡಿಸಿದ

ವಸ್ತುಗಳನ್ನು ಸೊಗಸಾಗಿ ಆಕರ್ಷಕವಾಗಿ ತೋರುವಂತೆ ಮಾಡುವ ಕಲೆಯೇ ಇದು. ಅಂಗಡಿಯವರು ಗಾಜಿನ ಒಳಹಲಗೆಗಳಲ್ಲಿ ವಸ್ತುಗಳನ್ನಿಟ್ಟು ಗಿರಾಕಿಯನ್ನಾಕರ್ಷಿಸುವಂತೆ ಸಂಶೋಧಕನ ಕಾರ್ಯ ಸೊಗಸಾದ ಸಾಹಿತ್ಯವಾಗಿ ಓದುಗರ ಮನಸ್ಸನ್ನು ಆಕರ್ಷಿಸಿ, ಅದನ್ನು ಅವರು ಸ್ವಾಧೀನ ಪಡಿಸಿಕೊಳ್ಳಬೇಕೆಂಬ ಆಸೆಯನ್ನು ಹುಟ್ಟಿಸುವಂತದಾಗಿರಬೇಕು. ಒಂದು ಸಂಶೋಧನೆಯು ಒಂದು ಸೂಜಿಗಲ್ಲು ತನ್ನತ್ತ ಎಲ್ಲ ಪದಾರ್ಥಗಳನ್ನು ಸೆಳೆದಿಟ್ಟುಕೊಳ್ಳುವಂತೆ ಎಲ್ಲರ ಗಮನವನ್ನು ತನ್ನತ್ತ ಆಕರ್ಷಿಸಬೇಕು. ಇದೇ ಆ ಮಹಾ ಬುದ್ಧಿವಂತಿಕೆಯ ಕಾರ್ಯದ ಫಲಿತಾಂಶ ಫಲ.

## 9.6 ಪ್ರಮುಖ ಪದಗಳು

1. ದೃಢಪ್ರಯತ್ನದ: ಗಮನ ಸೆಳೆಯುವಂಥದ್ದನ್ನು ಸಾಧಿಸಲು ಸತತ ಪ್ರಯತ್ನದಲ್ಲಿರುವ
2. ವಿಸ್ತರಿಸುವುದು: ಸರಳವಾದ ಮಾಹಿತಿಗೆ ಹೆಚ್ಚಿನ ಅಂಶಗಳನ್ನು ಸೇರಿಸುವ ಪ್ರಕ್ರಿಯೆ

## 9.7 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಇತಿಹಾಸ ಸಂಶೋಧನೆಯಲ್ಲಿ ಪ್ರಾಥಮಿಕ ಕಾರ್ಯಾಚರಣೆಗಳ ಬಗ್ಗೆ ವಿವರಿಸಿ.
2.ಇತಿಹಾಸ ಸಂಶೋಧನೆಯಲ್ಲಿ ವಿಶ್ಲೇಷಣಾತ್ಮಕ ಕಾರ್ಯಾಚರಣೆಗಳ ಬಗ್ಗೆ ವಿವರಿಸಿ.

## 9.8 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 9.2 ನೋಡಿ
2. ವಿಭಾಗ 9.4 ನೋಡಿ

## 9.9 ಪರಾಮರ್ಶನ ಗ್ರಂಥಗಳು

1. ಗೋಪಾಲ ಬಾ.ರಾ, ಇತಿಹಾಸಶಾಸ್ತ್ರ ಮತ್ತು ಸಿದ್ಧಾಂತ, ಮೈಸೂರು,1996.
2. ಶ್ರೀನಿವಾಸಮೂರ್ತಿ.ಎಚ್.ವಿ, ಇತಿಹಾಸ ಸಂಶೋಧನಾ ಸಮೀಕ್ಷೆ, ಬೆಂಗಳೂರು, 2000.
3. ವೆಂಕಟರತ್ನಂ.ಎ.ವಿ, ಪದ್ಮ.ಎಂ.ಬಿ, ಇತಿಹಾಸ ಸಂಶೋಧನಾ ಮಾರ್ಗ, ಬೆಂಗಳೂರು, 1985.
4. ರಾಜಯ್ಯನ್.ಕೆ, ಹಿಸ್ಟರಿ–ಥಿಯರಿ ಆಂಡ್ ಮೆತಡ್, ಮಧುರೈ, 1976.
5. ಷೇಕ್ ಅಲಿ.ಬಿ, ಹಿಸ್ಟರಿ ಇಟ್ಸ್‌ಥಿಯರಿ ಆಂಡ್ ಮೆಥಡ್, ನ್ಯೂಡೆಲ್ಲಿ, 2001.
6. ಶ್ರೀಧರನ್.ಇ, ಎ ಟೆಕ್ಸ್ಟ್‌ಬುಕ್ ಆಫ್ ಹಿಸ್ಟರಿಯಾಗ್ರಫಿ, ನ್ಯೂಡೆಲ್ಲಿ, 2000.
7. ಕಾಲಿಂಗ್‌ವುಡ್.ಆರ್.ಜಿ, ದಿ ಐಡಿಯಾ ಆಫ್ ಹಿಸ್ಟರಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರಸ್, 1961.

8. ಕಾರ್.ಇ.ಎಚ್, ವಾಟ್ ಇಸ್ ಇಸ್ಟರಿ, ಪೆಲಿಕನ್ ಪಬ್ಲಿಷರ್ಸ್, 1964.
9. ಹೊಮರ್ ಸಿ. ಹಾಕೆಟ್, ದಿ ಕ್ರಿಟಿಕಲ್ ಮೆಥಡ್ ಇನ್ ಹಿಸ್ಟಾರಿಕಲ್ ರಿಸರ್ಚ ಅಂಡ್ ರೈಟಿಂಗ್, ನ್ಯೂಯಾರ್ಕ,1955.

---

**ಪಠ್ಯವನ್ನು ರಚಿಸಿದವರು:**
**ಡಾ.ವೈ.ಹೆಚ್.ನಾಯಕವಾಡಿ**

# ಘಟಕ–10 ಸಂಯೋಜನಾತ್ಮಕ ಅಥವಾ ಸಾಂಶ್ಲೇಷಿಕ ಕಾರ್ಯ ರೀತಿಗಳು ಮತ್ತು ಅಂತಿಮ ಕಾರ್ಯನೀತಿಗಳು

**ರಚನೆ**


**10.0** ಉದ್ದೇಶಗಳು

**10.1** ಪೀಠಿಕೆ

**10.2** ಸಂಯೋಜನಾತ್ಮಕ ಅಥವಾ ಸಾಂಶ್ಲೇಷಿಕ ಅಥವಾ ಸಂಶ್ಲಿಷ್ಟ ಕಾರ್ಯ ರೀತಿಗಳು

- **10.2.1** ಐತಿಹಾಸಿಕ ವಸ್ತುನಿಷ್ಠತೆ
- **10.2.2** ವಾಸ್ತವಾಂಶಗಳ ಸಂಕಲನ
- **10.2.3** ರಚನಾತ್ಮಕ ತರ್ಕ
- **10.2.4** ತರ್ಕ ಕ್ರಮದ ಬಗೆಗಳು

**10.3** ಅಂತಿಮ ಕಾರ್ಯರೀತಿಗಳು

- **10.3.1** ಮೊದಲನೆಯ ಹಂತವೇ ಸಾಮಾನ್ಯೀಕರಣ ನಿರೂಪಣೆ ಅಥವಾ ಸೂತ್ರ ರಚನೆ
- **10.3.2** ಅಂತಿಮ ಕಾರ್ಯ ರೀತಿಯಲ್ಲಿ ದ್ವಿತೀಯ ಹಂತವೇ ವಿವರಣೆ ಅಥವಾ ಸ್ಪಷ್ಟೀಕರಣ

**10.4** ಸಾರಾಂಶ

**10.5** ಪ್ರಮುಖ ಪದಗಳು

**10.6** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**10.7** ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

**10.8** ಪರಾಮರ್ಶನ ಗ್ರಂಥಗಳು

## 10.0 ಉದ್ದೇಶಗಳು

ಈ ಘಟಕದ ಉದ್ದೇಶವೆನೆಂದರೆ,

- ಸಂಶೋಧನೆಯಲ್ಲಿ ವಿಮರ್ಶೆಯ ನಂತರ ಸಂಯೋಜನಾ ಕಾರ್ಯಗಳಿಂದ ಪ್ರಬಂಧದ ಯೋಜನೆ, ರಚನಾತ್ಮಕ ಸಮರ್ಥನೆ, ಸಾಮಾನ್ಯೀಕರಣ ಕಾರ್ಯಗಳನ್ನು ಸಂಶೋಧಕನು ವಿಷಯಕ್ಕೆ ಮತ್ತು ಮಾಹಿತಿಯ ಉದ್ದೇಶಕ್ಕೆ ಯಾವುದೇ ಚ್ಯುತಿ ಬರದೇ ಇರುವ ರೀತಿಯಲ್ಲಿ ಮಾಡುವಂತಹ ವಿಷಯವನ್ನು ಇಲ್ಲಿ ಅಧ್ಯಯನ ಮಾಡುತ್ತೇವೆ.
- ಅಂತಿಮ ಕಾರ್ಯ ನೀತಿಯಲ್ಲಿ ಸಾಮಾನ್ಯೀಕರಣ ನಿರೂಪಣೆ ಮತ್ತು ವಿವರಣೆಗಳ ಸ್ಪಷ್ಟೀಕರಣದ ಬಗ್ಗೆ ತಿಳಿದುಕೊಳ್ಳಬೇಕು.

## 10.1 ಪೀಠಿಕೆ

ಈ ಘಟಕದಲ್ಲಿ ಇತಿಹಾಸ ಸಂಶೋಧನೆಯ ಪ್ರಮುಖ ಕಾರ್ಯವಾದ ಸಂಶೋಧನಾ ಕಾರ್ಯಗಳನ್ನು ಮಾಡಲಾಗುವುದು. ಈ ಕಾರ್ಯದಲ್ಲಿ ಸಂಶೊಧಕನು ತಾನು ಸಂಯೋಜನಾ ಕಾರ್ಯಗಳಲ್ಲಿ ಪ್ರಮುಖವಾಗಿ ಪ್ರಬಂಧವನ್ನು ಸಿದ್ಧಪಡಿಸಲು ಒಂದು ಯೋಜನೆಯನ್ನು ತಯಾರಿಸಿ ಆಯೋಜನೆಯಲ್ಲಿ ಕಾಣಬರುವ ಮಾಹಿತಿಗಳಿಗೆ ರಚನಾತ್ಮಕ ಸಮರ್ಥನೆಯನ್ನು ತಿಳಿಸಬೇಕು. ನಂತರ ಪ್ರಮುಖವಾಗಿ ಮಾಡಬೇಕಾದ ಕೆಲಸವೆಂದರೆ ಮುಕ್ತಾಯದ ಪರಿಷ್ಕರಣೆ ಸಂಶೋಧನೆಯ ಫಲಿತಾಂಶವನ್ನು ಅತ್ಯಂತ ಸ್ವಾರಸ್ಯಕರವಾದ ರೀತಿಯಲ್ಲಿ ರೂಪಿಸಬೇಕು.

## 10.2 ಸಂಯೋಜನಾತ್ಮಕ ಅಥವಾ ಸಾಂಶ್ಲೇಷಿಕ ಅಥವಾ ಸಂಶ್ಲಿಷ್ಟ ಕಾರ್ಯರೀತಿಗಳು

ಸಂಶೋಧನೆಯಲ್ಲಿ ಮತ್ತೊಂದು ಗಣನೀಯವಾಗಿರುವ ಘಟ್ಟವೆಂದರೆ ಸಾಂಶ್ಲೇಷಿಕ ಕಾರ್ಯರೀತಿ. ಮಾಹಿತಿಗಳನ್ನು ಸಂಗ್ರಹಿಸಿ, ಸೂಕ್ಷ್ಮವಾಗಿ ಪರಿಶೋಧಿಸಿ, ಸೋಸಿನೋಡಿ, ಪರಿಶೀಲಿಸಿ, ಅವುಗಳ ಸಪ್ರಮಾಣತೆಯನ್ನು ಪರೀಕ್ಷಿಸುವುದು ವಿಶ್ಲೇಷಣಾತ್ಮಕ ಕಾರ್ಯ ರೀತಿಯ ಮುಖ್ಯೋದ್ದೇಶವಾದರೆ ಕಥನವನ್ನು ಅರ್ಥಗರ್ಭಿತ ಹಾಗೂ ಸ್ವಾರಸ್ಯಕರವನ್ನಾಗಿಸುವುದಕ್ಕಾಗಿ ಪರೀಕ್ಷಿಸಲಾಗಿರುವ ಈ ಮಾಹಿತಿಗಳನ್ನು ಜೋಡಿಸಿ, ವರ್ಗೀಕರಿಸಿ, ಕ್ರಮಪಡಿಸಿ, ನಿರೂಪಿಸಿ, ಅರ್ಥವಿವರಣೆಯನ್ನು ನೀಡುವುದು ಸಾಂಶ್ಲೇಷಿಕ ಕಾರ್ಯ ರೀತಿಯ ಗುರಿಯಾಗಿರುತ್ತದೆ. ವಿಶ್ಲೇಷಣಾತ್ಮಕ ಕಾರ್ಯ ರೀತಿಯು ಐತಿಹಾಸಿಕ ಮಾಹಿತಿಗಳು ಪ್ರಮಾಣಬದ್ಧವಾದುವೇ ಅಥವಾ ಇಲ್ಲವೇ, ವಿಶ್ವಾಸಾರ್ಹವಾದುವೇ ಅಥವಾ ಇಲ್ಲವೇ ಎಂಬುದನ್ನು ಪರೀಕ್ಷಿಸಿ ನಿರ್ಣಯಿಸುವುದಕ್ಕಾಗಿ ಅವುಗಳನ್ನು ಅತ್ಯಂತ ಚಿಕ್ಕದಾದ ಘಟಕಗಳಾಗಿ ಕತ್ತರಿಸಿ, ಪರಿಶೀಲಿಸುವ ಪ್ರಕ್ರಿಯೆಯಾಗಿರುತ್ತದೆ. ಈ ಕಾರ್ಯರೀತಿಯನ್ನು ಸರಿಯಾಗಿ ಅನುಸರಿಸಿ ಸಾಧಾರಣವಾದ ಹಾಗೂ ನಂಬಲರ್ಹವಾದ ಮಾಹಿತಿಗಳನ್ನು ಸಂಗ್ರಹಿಸಿದಿದ್ದರೆ ಇತಿಹಾಸ ಪುನರ್ರಚನಾ ಕಾರ್ಯವು ನಿರರ್ಥಕ ಬಿಸುಲ್ಗುದುರೆಯ ಬೇಟೆಯಂತಾಗುತ್ತದೆ.

ಸಾಂಶ್ಲೇಷಿಕ ಕಾರ್ಯ ರೀತಿಯು ಈ ರೀತಿಯಾಗಿ ಬಹು ಜಾಗರೂಕತೆಯಿಂದ ಪರೀಕ್ಷಿಸಿ, ಆರಿಸಲಾದ ವಿಷಯ ಸಾಮಗ್ರಿಗಳಿಂದ ಸುಂದರವಾದ ಐತಿಹಾಸಿಕ ಸೌಧೌನ್ನು ನಿರ್ಮಿಸುವ ಪ್ರಕ್ರಿಯೆಯಾಗಿರುತ್ತದೆ. ವಿಶ್ಲೇಷಣಾತ್ಮಕ ಕಾರ್ಯ ರೀತಿಯ ವೈಜ್ಞಾನಿಕವಾದುದು, ಆದರೆ ಸಾಂಶ್ಲೇಷಿಕ ಕಾರ್ಯ ರೀತಿಯು ಕಥನವನ್ನು ಒಂದು ಕಲಾತ್ಮಕ ಸಾಹಿತ್ಯವನ್ನಾಗಿಸಲು ಇತಿಹಾಸಕಾರನಿಗಿರುವ ವಿವೇಚನಾಶಕ್ತಿಗೆ ಹೆಚ್ಚಿಗೆ ಸಂಬಂಧಪಟ್ಟಿರುತ್ತದೆ. ವಿಮರ್ಶೆಯ ಮೂಸೆಯಲ್ಲಿ ಹಾಕಿ ಅತ್ಯಂತ ಎಚ್ಚರಿಕೆಯಿಂದ ಪ್ರತಿ ಸೂಕ್ಷ್ಮ ವಿವರಕ್ಕೂ ಗಮನ ಕೊಟ್ಟು ಪರೀಕ್ಷಿಸಲಾದ ಮತ್ತು ಪ್ರತ್ಯೇಕವಾಗಿರುವ ವಾಸ್ತವಾಂಶಗಳನ್ನು ವ್ಯವಸ್ಥಿತಿಗೊಳಿಸುವುದೇ ಸಾಂಶ್ಲೇಷಿಕ ಕಾರ್ಯ ರೀತಿಯ ಪ್ರಧಾನ ಹೊಣೆಗಾರಿಕೆ. ವಿಷಯಗಳನ್ನು ವ್ಯವಸ್ಥಿತಗೊಳಿಸುವ ಸಾಮರ್ಥ್ಯದ ವಿಚಾರದಲ್ಲಿ ವ್ಯಕ್ತಿಗಳಲ್ಲಿ ವ್ಯತ್ಯಾಸವಿರುತ್ತದೆ. ಸಂಶೋಧಕರು ಅನೇಕರಿದ್ದಾರೆ. ಆದರೆ ವಿಷಯಗಳನ್ನು ಕಲಾತ್ಮಕವಾಗಿ ಹಾಗೂ ತಾರ್ಕಿಕವಾಗಿ ದಾಖಲು ಮಾಡುವ ಮತ್ತು ಚೆದರಿ ಹೋಗಿರುವ ಹಾಗೂ ಪ್ರತ್ಯೇಕವಾಗಿರುವ ಮಾಹಿತಿಗಳನ್ನು ಚಿತ್ತಾಕರ್ಷಕವಾದ ರೀತಿಯಲ್ಲಿ ಒಟ್ಟುಗೂಡಿಸಿ ನಿರೂಪಿಸುವ ಶಕ್ತಿಯನ್ನು ಪಡೆದಿರುವವರ ಸಂಖ್ಯೆ ಕಡಿಮೆ. ಹಾಗಿದ್ದರೂ ಅವರೆಲ್ಲರ ಗುರಿ ಒಂದೇ ಆಗಿರುತ್ತದೆ. ಅಂದರೆ, ವಾಸ್ತವಾಂಶಗಳನ್ನು ಸರ್ವಗ್ರಾಹ್ಯವಾಗುವ ರೀತಿಯಲ್ಲಿ ಅತ್ಯಂತ ಸ್ವಾರಸ್ಯಕರವಾಗಿ ನಿರೂಪಿಸಬೇಕೆಂಬುದೇ ಆ ಗುರಿ.

ನಿರ್ದಿಷ್ಟ ವಿವರಗಳನ್ನು ಹೊಂದಿಸಿ ಒಂದು ಸರ್ವ ಸಮ್ಮಿಳಿತ ಸಮಷ್ಟಿಯಾಗಿ ಮಾರ್ಪಡಿಸುವುದು ಮತ್ತು ಭಾಗಗಳನ್ನು ಒಂದು ನೂತನ ಬಗೆಯ ರಚನಾ ಚೌಕಟ್ಟಿಗೆ ಒಳಪಡಿಸುವುದು ಸಾಂಶ್ಲೇಷಿಕ ಕಾರ್ಯ ರೀತಿಯಲ್ಲಿ ಪ್ರಧಾನವಾಗಿರುತ್ತವೆ. ಇದು ನವೀನವಾದುದೊಂದನ್ನು ನಿರ್ಮಿಸುವುದಕ್ಕಾಗಿ ವಿವಿಧ ವಿಷಯಗಳನ್ನು ಒಟ್ಟುಗೂಡಿಸಿ ಐಕ್ಯ ಮಾಡುವ ಶಕ್ತಿ, ಕ್ರಮ, ವಿಜ್ಞಾನದಲ್ಲಿ ಅನೇಕ ಮೂಲವಸ್ತುಗಳನ್ನು ಸರಿಯಾದ ಪ್ರಮಾಣದಲ್ಲಿ ಒಗ್ಗೂಡಿಸಿ ಸಂಯುಕ್ತ ವಸ್ತುಗಳನ್ನು ರೂಪಿಸುವ ರೀತಿಯಲ್ಲೇ ಈ ಪ್ರಕ್ರಿಯೆಯಲ್ಲೂ ಸಹ ಅನೇಕ ಭಾವನೆಗಳನ್ನು ಸಹಜವಾದ ಬಗೆಯಲ್ಲಿ ಒಟ್ಟು ಸೇರಿಸಿ ವ್ಯವಸ್ಥಿತಗೊಳಿಸಲಾಗುತ್ತದೆ. ಹೀಗೆ ಇದು ಸಮರ್ಪಕವಾಗಿರುವ ಎಲ್ಲಾ ವಾಸ್ತವಾಂಶಗಳನ್ನು ಒಂದು ಸಂಬಮಧಿತ ಸಮಷ್ಟಿಯನ್ನಾಗಿ ಸಂಯೋಜಿಸುವ ಮತ್ತು ಪ್ರತ್ಯೇಕವಾಗಿರುವ ಎಲ್ಲಾ ವಿಷಯ ಸಾಮಗ್ರಿಗಳನ್ನು ಒಂದು ರಮಣೀಯವಾದ ರಚನೆಯನ್ನಾಗಿ ವ್ಯವಸ್ಥಿತಗೊಳಿಸುವ ಬೌದ್ಧಿಕ ಹಾಗೂ ಭೌತಿಕ ಚಟುವಟಿಕೆಯಾಗಿದೆ.

ಸಾಂಶ್ಲೇಷಿಕ ಕಾರ್ಯ ರೀತಿಯು ಒಂದು ಪರಿಪೂರ್ಣವಾದ ಯಂತ್ರವನ್ನು ಮಾಡುವುದಕ್ಕಾಗಿ ಹಲವಾರು ಬಿಡಿಬಿಡಿ ಭಾಗಗಳನ್ನು ಒಟ್ಟಾಗಿ ಸೇರಿಸುವ ಯಂತ್ರಕರ್ಮಿಯ ಕೆಲಸಕ್ಕೆ ಸಮವಾಗಿರುತ್ತದೆ. ಇದು ಒಬ್ಬ ಚಿಲ್ಲರೆ ವ್ಯಾಪಾರಿಯು ಮಾರಾಟದ ಸಾಮಾನುಗಳನ್ನು ಕೊಂಡುಕೊಂಡ ಮೇಲೆ ಅವುಗಳನ್ನು ತನ್ನ ಗಿರಾಕಿಗಳಿಗೆ ಮಾರುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಅಣಿಮಾಡಿಟ್ಟುಕೊಳ್ಳುವ ಕೆಲಸಕ್ಕೆ ಸಮಾನವಾಗಿರುತ್ತದೆ. ವಿಶ್ಲೇಷಣಾತ್ಮಕ ಕಾರ್ಯ ರೀತಿಯಂತೆ ಇದೂ ಸಹ ಐತಿಹಾಸಿಕ ವಿಧಾನದ ತಿರುಳೇ ಆಗಿದೆ.

### 10.2.1 ಐತಿಹಾಸಿಕ ವಸ್ತುನಿಷ್ಠತೆ

ಈ ಎರಡು ಕಾರ್ಯ ವಿಧಿಗಳನ್ನು ಸಮರ್ಪಕವಾಗಿ ಅನುಸರಿಸಬೇಕಾದರೆ ಸಂಶೋಧಕನು ಅತ್ಯಾವಶ್ಯಕವಾಗಿ ಬೆಳೆಸಿಕೊಳ್ಳಬೇಕಾದ ಗುಣ ವಸ್ತುನಿಷ್ಠತೆ. ಹಿಂದಿನ ಅಧ್ಯಾಯದಲ್ಲಿ ಪ್ರಸ್ತಾಪಿಸಲಾದ ಈ ವಿಷಯವನ್ನು ಮುಂದುವರಿಸಿ ಐತಿಹಾಸಿಕ ವಸ್ತುನಿಷ್ಠತೆ ಎಂದರೆ ವೈಜ್ಞಾನಿಕ ಹಾಗೂ ನಿಷ್ಪಕ್ಷಪಾತವಾದ ರೀತಿಯಲ್ಲಿ ಹಿಂದೆ ನಡೆದ ಘಟನೆಗಳನ್ನು ಸಂಭವಿಸಿದ ರೀತಿಯಲ್ಲೇ ಪುನರ್ರಚಿಸುವುದು ಎಂಬುದಾಗಿ ಅರ್ಥೈಸಬಹುದು. ಇತಿಹಾಸಕಾರರು ಎಲ್ಲಾ ಏಕಪಕ್ಷೀಯವಾದ ಅಭಿಪ್ರಾಯಗಳನ್ನು ಗಾಳಿಗೆ ತೂರಿಬಿಟ್ಟು ಸರಿಯಾಗಿ ಹಾಗೂ ಸೂಕ್ಷ್ಮವಾಗಿ ಪರಿಶೀಲಿಸಲಾದ ಮಾಹಿತಿಗಳ ಆಧಾರದ ಮೇಲೆ ವಸ್ತುಸ್ಥಿತಿಯನ್ನು ಪಕ್ಷಪಾತವಿಲ್ಲದೆ ಪರೀಕ್ಷಿಸಿ, ವಿವೇಚನೆ ಹಾಗೂ ಸತ್ಯಕ್ಕೆ ಅನುಗುಣವಾಗಿ ಯಾವ ಆಗ್ರಹ ಹಾಗೂ ಅನುಗ್ರಹಗಳಿಗೆ ಲಕ್ಷ್ಯ ಕೊಡದೆ ತೀರ್ಪನ್ನು ನೀಡುವ ನ್ಯಾಯಾಧಿಪತಿಯಂತಿರಬೇಕು.

ಆದರೆ ವಸ್ತುನಿಷ್ಠತೆಯನ್ನು ಸಾಧಿಸುವುದು ಅಷ್ಟು ಸುಲಭವಲ್ಲ. ಸಂಶೋಧಕನು ಪ್ರಜ್ಞಾಪೂರ್ವಕವಾಗಿ ಪರಿಶ್ರಮ ಪಟ್ಟರೂ ಅವನಲ್ಲಿ ಮನೆಮಾಡಿಕೊಂಡಿರುವ ಪೂರ್ವಾಗ್ರಹಗಳು ಅವನ ಜ್ಞಾನಚಕ್ಷುಗಳ ಮೇಲೆ ಮಂಜು ಕವಿಯುವಂತೆ ಮಾಡಿ ಅವನು ಕಲ್ಪನಾ ಕ್ಷೇತ್ರದ ಮೇಲೆ ಜಾರಿ ಬೀಳುವಂತೆ ಮಾಡುತ್ತವೆ. ಅವನ ವೈಯಕ್ತಿಕ ಇಚ್ಛಾನಿಚ್ಛೆಗಳು, ಕ್ರಿಯಾಸ್ವಾತಂತ್ರ್ಯಕ್ಕೆ ಅವಕಾಶವಿಲ್ಲದ ರಾಜಕೀಯ ಸಿಕ್ಕುಪಾಡು, ಸ್ವಕುಲ ದುರಭಿಮಾನ, ಅನ್ಯಾಕ್ರಮಣಶೀಲವಾದ ಸ್ವದೇಶಾಭಿಮಾನ, ಸಂಕುಚಿತವಾದ ಪ್ರಾಂತೀಯ ಪ್ರೇಮ, ಭಾಷಾ ಅಥವಾ ಧಾರ್ಮಿಕ ಅಂದಾಭಿಮಾನ, ತನ್ನ ಸಂಸ್ಕೃತಿಯೇ ಅತ್ಯುತ್ಕೃಷ್ಟವಾದುದು, ಮಿಕ್ಕ ಸಂಸ್ಕೃತಿಗಳೆಲ್ಲಾ ಅತ್ಯಂತ ಕೀಳಾದುವು ಎಂಬ ಅಹಂಕಾರಯುಕ್ತವಾದ ಅಸತ್ಯಾಭಿಪ್ರಾಯಗಳೆಂಬ ದಟ್ಟವಾದ ಮಂಜಿನ ತೆರೆಗಳು ಅವನು ವೈಜ್ಞಾನಿಕ ಸಂಶೋಧನಾ ರಾಜಮಾರ್ಗವನ್ನು ತ್ಯಜಿಸಿ ಅಡ್ಡಮಾರ್ಗಗಳನ್ನು ಹಿಡಿದು ದಾರಿ ತಪ್ಪಿಹೋಗುವಂತೆ ಮಾಡುತ್ತವೆ. ಈ ಮಂಜಿನ ತೆರೆಗಳನ್ನು ಸಂಪೂರ್ಣವಾಗಿ ತಳ್ಳಿಹಾಕಿ, ಸರಿಯಾದ ಹಾದಿಯನ್ನು ಹಿಡಿಯಬೇಕಾದರೆ ಅವನಿಗೆ ವಸ್ತುನಿಷ್ಠತೆಯ ಅರಿವು ಅವಶ್ಯಕ.

ಅನೇಕ ವೇಳೆ ಅತ್ಯಾವಶ್ಯಕವಾಗಿರುವ ಮೂಲಾಧಾರಗಳು ದೊರಕುವುದು ದುರ್ಲಭವಾಗಬಹುದು ಅಥವಾ ಸಿಕ್ಕಿರುವ ಸುಸಂಬದ್ಧ ಮಾಹಿತಿಗಳನ್ನು ಅಧ್ಯಯನ ಮಾಡಿ ಅವುಗಳಲ್ಲಿ ವ್ಯಕ್ತವಾಗದಿರುವ ಅರ್ಥಗಳನ್ನು ಅರಸಿ ಕಂಡುಹಿಡಿಯಲು ಸಂಶೋಧಕನು ಅಸಮರ್ಥವಾಗಬಹುದು. ಅಸಂಬದ್ಧ ಅಧ್ಯಯನದಿಂದ ಸಮಸ್ಯಾ ಪರಿಹಾರ ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಅವನು ಅನೇಕ ಪ್ರಮುಖ ವಿಷಯಗಳ ಬಗ್ಗೆ ಅಜ್ಞಾನಿಯಗಿರಬೇಕಾಗಿರುತ್ತದೆ. ಅದೂ ಅಲ್ಲದೆ, ಗತಕಾಲಕ್ಕೆ ಸಂಬಂಧಿಸಿರುವ ದಾಖಲೆಗಳಲ್ಲಿ ಎಲ್ಲಾ ವಿಷಯಗಳು ಅಡಕವಾಗಿಲ್ಲದೇ ಇರಬಹುದು. ಅವುಗಳನ್ನು ಸಿದ್ಧಪಡಿಸಿದವರು ಸಂಶೋಧಕನಿಗೆ ಅಗತ್ಯವಾಗಿರುವ ಮುಖ್ಯಾಂಶಗಳನ್ನು ಬಿಟ್ಟು ತಮ್ಮನ್ನು ಆಕರ್ಷಿಸಿದ್ದ ವಿಷಯಗಳನ್ನು ಮಾತ್ರ ಆರಿಸಿ ಬರೆದಿಟ್ಟಿರಬಹುದು. ಇದರಿಂದ ಅವನು ಈ ಆಯ್ದ ಮೂಲಾಧಾರಗಳಿಂದ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಕೆಲವು ಸಲ ಅವನು ತನಗೆ ಇಷ್ಟವಾದ ವಿಷಯಗಳನ್ನು ಅಥವಾ ತನ್ನ ಅಭಿಪ್ರಾಯಗಳಿಗೆ ಅನುಗುಣವಾಗಿರುವಂತಹ ಮುಖ್ಯಾಂಶಗಳನ್ನು ಮಾತ್ರ ಆರಿಸಿಕೊಳ್ಳಬಹುದು. ಒಂದು

ನಿರ್ದಿಷ್ಟ ಸಾಮಾಜಿಕ ಅಥವಾ ರಾಜಕೀಯ ಅಥವಾ ಆರ್ಥಿಕ ಸಿದ್ಧಾಂತವೇ ಶ್ರೇಷ್ಠವಾದುದೆಂಬುದಾಗಿ ಎತ್ತಿ ಹಿಡಿಯಲು ಮತ್ತು ಇತರ ರಾಷ್ಟ್ರಗಳೆಲ್ಲಾ ಕೀಳಾದುವು ಮತ್ತು ತಮ್ಮ ರಾಷ್ಟ್ರದ ಅವಗುಣಗಳನ್ನೆಲ್ಲಾ ಮರೆತು ಅದೇ ಉತ್ಕೃಷ್ಟವಾದುದು ಎಂಬುದನ್ನು ಸಾರುವುದಕ್ಕಾಗಿ ಇತಿಹಾಸವನ್ನು ಒಂದು ಪ್ರಚಾರದ ಮಾಧ್ಯಮವಾಗಿ ಬಳಸಿಕೊಳ್ಳಬಹುದು. ಇದು ಅತ್ಯಂತ ಅಪಾಯಕರವಾದ ಪ್ರವೃತ್ತಿ. ಉದಾಹರಣೆಗೆ, ಹಿಟ್ಲರನ ನಾಸಿ ಪಕ್ಷ ಮಾಡಿದ ಅಪಪ್ರಚಾರದ ಫಲವಾಗಿ ಜಗತ್ತು ಭಯಂಕರ ಯುದ್ಧವೆಂಬ ಭಯಾನಕ ದಳ್ಳುರಿಗೆ ಸಿಕ್ಕಿಕೊಂಡು ಬೆಂದು ನರಳಾಡಬೇಕಾಯಿತು. ಹಲವು ಬ್ರಿಟಿಷ್ ಸಾಮ್ರಾಜ್ಯವಾದಿಗಳು ಅತ್ಯಹಂಕಾರದಿಂದ ಈ ಭೂಮಿಯ ಮೇಲೆ ಇರುವ ಶ್ರೇಷ್ಠ ಜನರೆಂದರೆ ಬ್ರಿಟಿಷರು, ಆದ್ದರಿಂದ ಇತರ ಜನರನ್ನೆಲ್ಲಾ ಸುಸಂಸ್ಕೃತರಾನ್ನಾಗಿಸುವುದು ಅವರಿಗೆ ಸಾಧ್ಯ. ಅದು ದೈವ ನಿಯಮಿತ ಕಾರ್ಯ ಎಂಬುದಾಗಿ ಸತ್ಯಕ್ಕೆ ದೂರವಾಗಿದ್ದ ಅಭಿಪ್ರಾಯಗಳನ್ನು ಬೆಳೆಸಿಕೊಂಡಿದ್ದರು. ಅಮೆರಿಕಾ ದೇಶದವರೂ ಸಹ ತಾವೇ ಸಂಸ್ಕೃತಿಯ ಮುಂದಾಳುಗಳು. ಆದ್ದರಿಂದ ಇತರರನ್ನೆಲ್ಲಾ ಕಾಪಾಡುವ ಹೊಣೆಗಾರಿಕೆ ತಮ್ಮದೆಂಬುದಾಗಿ ಎಣಿಸಿಕೊಂಡಿದ್ದರು. ಈ ತರಹದ ಅಸತ್ಯಾಭಿಪ್ರಾಯಗಳು ವಸ್ತುನಿಷ್ಠ ಯೋಚನಾ ಸರಣಿಯನ್ನು ಕತ್ತರಿಸಿ ಹಾಕಿ ವ್ಯಕ್ತಿನಿಷ್ಠತೆಯನ್ನು ಪೋಷಿಸಿ, ಪ್ರೋತ್ಸಾಹಿಸಿ, ಬೆಳೆಸಿಕೊಂಡು ಬರುತ್ತವೆ ಮತ್ತು ಸಂಶೋಧಕನು ಸತ್ಯಾಂಶಗಳನ್ನು ತನ್ನ ಅಭಿಪ್ರಾಯ ಹಾಗೂ ಇಚ್ಛಾನಿಚ್ಛೆಗಳಿಗೆ ಅನುಸಾರವಾಗಿ ತಿರಿಚಿ ತನಗೆ ಸರಿಹೋಗುವ ರೀತಿಯಲ್ಲಿ ಪ್ರತಿಪಾದಿಸಲು ಪ್ರಯತ್ನಿಸುವಂತೆ ಮಾಡುತ್ತವೆ. ಇದು ಸತ್ಯಾನ್ವೇಷಣೆಯಾಗುವುದಿಲ್ಲ, ಸತ್ಯಕ್ಕೆ ಮಾಡುವ ಮಹಾಪಚಾರವಾಗುತ್ತದೆ.

ಅನೇಕ ಅಲ ಅಸಮರ್ಪಕವಾದ ರೀತಿಯಲ್ಲಿ ಸಂಶೋಧನಾ ವಿನ್ಯಾಸವನ್ನು ಯೋಜಿಸುವುದು; ಮಾಹಿತಿಗಳನ್ನು ಸರಿಯಾಗಿ ಪರಿಶೀಲಿಸದೆ, ಜ್ಞಾಪಕಶಕ್ತಿಯನ್ನೇ ನಂಬಿಕೊಂಡು ವಿಷಯಗಳ ಸರಪಳಿಗಳಲ್ಲಿ ತಪ್ಪಿಹೋಗಿವು ಕೊಂಡಿಗಳನ್ನು ಕಲ್ಪನಾ ಸಾಮರ್ಥ್ಯದ ಬಲದಿಂದ ಊಹಿಸಿ, ತಪ್ಪೋ, ಸರಿಯೋ ಎಂಬುದನ್ನು ಪರಿಶೀಲಿಸದೆ ಜೋಡಿಸಿಡುವುದು; ತಪ್ಪಾದ ಕ್ರಮದಲ್ಲಿ ಪ್ರಶ್ನೆಗಳನ್ನು ರಚಿಸಿ, ಉತ್ತರಿಸಿ, ವಾದಿಸಿ, ವಿವರಿಸಿ, ಸಾಮಾನ್ಯೀಕರಣಗಳನ್ನು ನಿರೂಪಿಸುವುದು; ಪ್ರಾಚೀನ ಸಂಸ್ಥೆ ಹಾಗೂ ವ್ಯಕ್ತಿಗಳಿಗೆ ಆಧುನಿಕ ಅಭಿಪ್ರಾಯ, ಪ್ರೇರಣೆ ಇತ್ಯಾದಿಗಳನ್ನು ಅನ್ವಯಿಸಿ ಅವರನ್ನು ಆಧುನಿಕ ದೃಷ್ಟಿಕೋನದಿಂದ ವೀಕ್ಷಿಸಿ, ಅಳೆದು ಅವರ ಯೋಗ್ಯತೆಯನ್ನು ನಿರ್ಣಯಿಸುವುದು ಮುಂತಾದ ದೋಷಯುಕ್ತ ಕ್ರಮಗಳನ್ನು ಅನುಸರಿಸುವುದರಿಂದ ಸಂಶೋಧಕನು ಅಶುದ್ಧವಾದ ನಿರ್ಣಯಗಳಿಗೆ ಬರುತ್ತಾನೆ. ಋಜುಮಾರ್ಗವನ್ನು ಬಿಟ್ಟು ಅಡ್ಡದಾರಿಯನ್ನು ಹಿಡಿಯುವ ಪ್ರಯಾಣಿಕನು ಸರಿಯಾದ ಗಮ್ಯಸ್ಥಾನವನ್ನು ತಲುಪುವುದಿಲ್ಲ. ಬದಲಾಗಿ ಅವನು ಹಾದಿಯ ಅಂಚಿಗೆ ಬಂದು ಕೊನೆಗೆ ಪ್ರಪಾತಕ್ಕೆ ಬೀಳಬಹುದು. ಈ ಐತಿಹಾಸಿಕ ದೋಷಗಳು ಅನ್ವೇಷಕನು ವಸ್ತುನಿಷ್ಠತೆಯನ್ನು ಬೆಳೆಸಿಕೊಳ್ಳದಂತೆ ತಡೆಯುತ್ತವೆ.

ಕೆಲವು ಅನ್ವೇಷಕರು ಅತ್ಯಂತ ಸ್ವಾರಸ್ಯಕರವಾದ ಹಾಗೂ ಪರಿಣಾಮಕಾರಿಯಾದ ರೀತಿಯಲ್ಲಿ ವಿಷಯಗಳನ್ನು ನಿರುಪಿಸುವುದಕ್ಕಾಗಿ ಸ್ವಲ್ಪಮಟ್ಟಿಗೆ ಪಕ್ಷಪಾತ ದೃಷ್ಟಿಯನ್ನು ಮತ್ತು ಕೃತಕತೆ, ಡಾಂಭಿಕತೆ ಹಾಗೂ ಉತ್ಪ್ರೇಕ್ಷೆಗಳಿಂದ ಕೂಡಿರುವ ಮನೋರಂಜಕ ಹಾಗೂ ಚಿತ್ತಾಕರ್ಷಕ ಭಾಷೆ ಹಾಗೂ ಶೈಲಿಯನ್ನು ಬಳಸುತ್ತಾರೆ. ಈ ಮನೋಭಾವವೂ ಸಹ ಐತಿಹಾಸಿಕ ವಸ್ತುನಿಷ್ಠ ದೃಷ್ಟಿಗೆ ಅಪಾಯಕಾರಿಯಾದ ಮುಳ್ಳಾಗುತ್ತದೆ. ಸಂಕ್ಷೇಪದಲ್ಲಿ ಪೂರ್ವಾಗ್ರಹಗಳು, ವೈಯಕ್ತಿಕ ಇಚ್ಛಾನಿಚ್ಛೆಗಳು, ಸಂಕುಚಿತ ಸ್ವದೇಶಾಭಿಮಾನ, ಐತಿಹಾಸಿಕ

ದೋಷಗಳು, ಐತಿಹಾಸಿಕ ವಿಷಯಗಳನ್ನು ಸ್ವಇಚ್ಛೆ ಹಾಗೂ ಅಭಿರುಚಿಗೆ ತಕ್ಕಂತೆ ವಿವರಿಸುವ ಆಸೆ ಹಾಗೂ ಪ್ರಲೋಭನೆ, ತಮ್ಮ ಭಾವಾತ್ಮಕ ಒಲವು ಹಾಗೂ ಪಕ್ಷಪಾತಗಳು ತಿಳಿಯದಿರುವಂತೆ ವಿಷಯಗಳನ್ನು ಕಲಾತ್ಮಕವಾಗಿ ಅಲಂಕಾರಿಕ ಭಾಷೆಯಲ್ಲಿ ವಿವರಿಸುವ ಪ್ರವೃತ್ತಿ ಮುಂತಾದ ಅಂಶಗಳು ಐತಿಹಾಸಿಕ ವಸ್ತುನಿಷ್ಠತೆಯನ್ನು ಬೆಳೆಸಿಕೊಳ್ಳಬೇಕೆಂದು ಪ್ರಯತ್ನಿಸುವ ಸಂಶೋಧಕನ ಹಾದಿಯಲ್ಲಿ ಅಪಾಯಕಾರಿಯಾದ ಕಂದಕಗಳಂತಿರುತ್ತವೆ.

ಆದ್ದರಿಂದ ಇತಿಹಾಸ ಅನ್ವೇಷಕನು ಸಾಧ್ಯವಾದಷ್ಟರ ಮಟ್ಟಿಗೆ ವಸ್ತುನಿಷ್ಠ ದೃಷ್ಟಿಯನ್ನು ಬೆಳೆಸಿಕೊಂಡು ನಿಷ್ಠೆಯಿಂದ ವಿಷಯಗಳನ್ನು ಯಥಾರ್ಥವಾಗಿ ನಿರೂಪಿಸಬೇಕು. ಈ ಕಷ್ಟಕರವಾದ ಪರ್ವತಾರೋಹಣದ ಕಾರ್ಯದಲ್ಲಿ ಅವನಿಗೆ ಅತ್ಯಂತ ಅವಶ್ಯಕವಾಗಿರುವ ಊರುಗೋಲುಗಳು ವಿಶಾಲವಾದ ಹಾಗೂ ಸಂಪೂರ್ಣ ದೃಷ್ಟಿ, ವಿಶ್ಲೇಷಣೆ, ವಿಮರ್ಶೆ ಹಾಗೂ ವಿಷಯಗಳ ನಿರಂತರ ಪರಿಶೀಲನೆ, ಕೇವಲ ಕೆಲವೇ ಮೂಲಾಧಾರಗಳನ್ನು ಅವಲಂಬಿಸಿಕೊಂಡಿದ್ದರೆ ಅವನು ವ್ಯಕ್ತಿನಿಷ್ಠತೆ ಎಂಬ ಕಾಮಾಲೆಗೆ ತುತ್ತಾಗಬೇಕಾಗುತ್ತದೆ. ಇದರಿಂದ ತಪ್ಪಿಸಿಕೊಳ್ಳಬೇಕಾದರೆ ಮಾಹಿತಿಗಳ ಕ್ಷೇತ್ರದ ದಿಗಂತ ವಿಸ್ತಾರವಾಗಿರಬೇಕು. ಪ್ರಾಚ್ಯ ವಸ್ತುಗಳು, ಶಾಸನಗಳು ಹಾಗೂ ಸಾಹಿತ್ಯ ಕೃತಿಗಳು ಇತ್ಯಾದಿಗಳು ಐತಿಹಾಸಿಕ ವಿಷಯ ವಾಹಿನಿಗಳ ಮೂಲ ಉಗಮ ಸ್ಥಾನಗಳಾಗಿವೆ. ಈ ವಿಷಯಗಳು ವಿಭಿನ್ನ ಸ್ಥಳಗಳಲ್ಲಿ ಹಂಚಿ ಹೋಗಿರುತ್ತವೆ ಮತ್ತು ವಿವಿಧ ಭಾಷೆಗಳ ಬೇಳಿಗಳೊಳಗೆ ಅಡಗಿಕೊಂಡಿರುತ್ತವೆ. ಅವುಗಳನ್ನೆಲ್ಲಾ ಪತ್ತೆಹಚ್ಚುವ ಹಾಗೂ ನೂತನ ವಿಷಯಗಳಿಗಾಗಿ ಅನವರತ ಅನ್ವೇಷಣೆಯನ್ನು ನಡೆಸುವ ಸಾಮರ್ಥ್ಯ, ಅವುಗಳನ್ನೆಲ್ಲಾ ಮೈಯೆಲ್ಲಾ ಕಣ್ಣಾಗಿ ಬಹು ಎಚ್ಚರಿಕೆಯಿಂದ ಬಳಸಿಕೊಳ್ಳುವ ಚಾತುರ್ಯ, ಸೀಮಾತೀತವಾದ ಸಹನೆ ಹಾಗೂ ಅವಿಶ್ರಾಂತವಾಗಿ ಪರಿಶ್ರಮ ಪಡುವ ಶಕ್ತಿ ಸಂಶೋಧಕನಲ್ಲಿ ಇರಬೇಕು.

ಅನೇಕ ಸಲ ಸೋಮಾರಿತನವೂ ಸಹ ವ್ಯಕ್ತಿನಿಷ್ಠತೆಗೆ ಕಾರಣವಾಗುತ್ತದೆ. ಈ ಅಸಮ ದೃಷ್ಟಿ ಹಾಗೂ ಪಕ್ಷಪಾತವೆಂಬ ಸಂಕೋಲೆಗೆ ಸಿಕ್ಕಿಹಾಕಿಕೊಳ್ಳದಿರಬೇಕಾದರೆ ಪ್ರೀತಿಯ ದುಡಿಮೆ, ನಿರಂತರ ಕಾರ್ಯ ಚಟುವಟಿಕೆ, ಸಪ್ರಮಾಣವಾಗಿ ಸಮರ್ಥಿಸಲ್ಪಡುವವರೆಗೆ ಪ್ರತಿ ವಿಷಯವನ್ನು ಸಂದೇಹಿಸುವ ಪ್ರವೃತ್ತಿ ಮತ್ತು ಸಹಾನುಭೂತಿಯುತ ವ್ಯಾಪಕ ದೃಷ್ಟಿ ಅವಶ್ಯಕ. ಅನ್ವೇಷಕನು ಎಲ್ಲ ವಿಷಯವನ್ನು ತಿಳಿಯಬೇಕೆಂಬ ಕುತೂಹಲ ಹಾಗೂ ವಿಮರ್ಶಿಸುವ ಮನೋಭಾವ ಮತ್ತು ಐತಿಹಾಸಿಕ ಪ್ರಜ್ಞೆಯನ್ನು ಬೆಳೆಸಿಕೊಂಡು ಗತಕಾಲದ ಘಟನೆಗಳಲ್ಲಿ ಭಾಗವಹಿಸಿದ್ದ ಪ್ರತಿ ಪಾತ್ರಧಾರಿ ಹಾಗೂ ಅವನ ಪ್ರವೃತ್ತಿಯನ್ನು ಯಥಾರ್ಥವಾದ ಹಿನ್ನೆಲೆಯಲ್ಲಿ ನೋಡಿ ಅವುಗಳ ಒಳಹೊಕ್ಕು ಆಳವಾಗಿ ಪರಿಶೀಲಿಸುವ ಸಾಮರ್ಥ್ಯವನ್ನು ಮತ್ತು ಅವುಗಳನ್ನು ಸರಿಯಾದ ದೃಷ್ಟಿಕೋನದಿಂದ ಪರೀಕ್ಷಿಸಿ ಒಂದು ಸಮರ್ಪಕ ನಿರ್ಣಯಕ್ಕೆ ಬರುವ ಯೋಗ್ಯತೆಯನ್ನು ಪಡೆದಿರಬೇಕು. ಅವನು ಒಂದು ಭಾವವನ್ನು ಮರೆಮಾಡುವುದಕ್ಕಾಗಿ ಕೊಡಲಾಗಿರುವ ಹಾಗೂ ಸತ್ಯದಂತೆ ಭಾಸವಾಗುವ ವಿವರಣೆಗಳಿಗಿಂತ ಆಂತರಿಕ ಪ್ರೇರಣೆ, ಉದ್ದೇಶ ಹಾಗೂ ಭಾವಗಳು ಬಹು ಮುಖ್ಯವಾದುವುಗಳೆಂಬುದನ್ನು ಮನದಟ್ಟು ಮಾಡಿಕೊಂಡಿರಬೇಕು. ಅವನು ಪ್ರತಿ ವಾಸ್ತವಾಂಶ, ಘಟನೆ ಹಾಗೂ ಸನ್ನಿವೇಶವನ್ನು ಬಹು ಎಚ್ಚರಿಕೆಯಿಂದ ಪರಿಶೀಲಿಸಿ, ಗುಣಗಳ ಆಧಾರದ ಮೇಲೆ ಅವುಗಳ ಮೌಲ್ಯವನ್ನು ನಿರ್ಧರಿಸಬೇಕು. ಅವನು ತನ್ನ ಸಾಮಾನ್ಯ ಪ್ರಜ್ಞೆಯ ಸಹಾಯದಿಂದ ಯಾವ ವಿವರಣೆ ಅಸಂಗತವಾದುದು ಹಾಗೂ

ಹಾಸ್ಯಾಸ್ಪದವಾದುದು ಎಂಬುದನ್ನು ಅರಿತು, ಅದನ್ನು ವರ್ಜಿಸಿ, ಸುಸಂಬದ್ಧ-ವಾದುದನ್ನು ತೆಗೆದುಕೊಂಡು ಅದನ್ನು ಸಮಗ್ರವಾಗಿ ಗ್ರಹಿಸಬೇಕು ಮತ್ತು ವಿಚಾರಪೂರ್ಣ ದೃಷ್ಟಿಕೋನದಿಂದ ಸುಸಂಬದ್ಧ ಮಾಹಿತಿಗಳ ಆಧಾರದ ಮೇಲೆ ತಕ್ಕ ಸಾಮಾನ್ಯೀಕರಣ ಹಾಗೂ ನಿರ್ಣಯಗಳನ್ನು ನಿರೂಪಿಸಬೇಕು. ಒಂದು ಸಮುದಾಯದಲ್ಲಿ ಹಲವರು ದುಷ್ಟರಿದ್ದ ಮಾತ್ರಕ್ಕೆ ಆ ಸಮುದಾಯವೇ ಕೆಟ್ಟದೆಂಬುದಾಗಿ ಅಥವಾ ಅದರಲ್ಲಿ ಕೆಲವು ಧನಿಕರಿರುವುದನ್ನು ಕಂಡು ಅದು ಸಂಪತ್ಸಮೃದ್ಧವಾದುದೆಂಬುದಾಗಿ ತೀರ್ಮಾನಿಸಿದರೆ ಅದು ದೊಡ್ಡ ತಪ್ಪಾದೀತು. ಬೆಳೆಯುತ್ತಿರುವ ಗಿಡದ ಕಾಂಡದ ಸುತ್ತಲೂ ಬಲವಾಗಿರುವ ಕಬ್ಬಿಣದ ಸುತ್ತುಪಟ್ಟಿಯನ್ನು ಭದ್ರವಾಗಿ ಹಾಕಿಬಿಟ್ಟರೆ ಅದರ ಬೆಳವಣಿಗೆ ಕುಂಠಿತವಾಗಿ ಕೊನೆಗೆ ಅದು ನಾಶವಾಗಿಯೇ ಹೋಗಬಹುದು. ಅದಕ್ಕೆ ಬಲವಾಗಿ ಪ್ರಾಣದಾಯಕ ತೊಗಟೆಯ ರಕ್ಷಣೆ ಆ ಗಿಡಕ್ಕೆ ಇದ್ದರೆ ಅದು ಕ್ರಮವಾಗಿ ಬೆಳೆದು ಎಲ್ಲರನ್ನೂ ಆಕರ್ಷಿಸಿ ಸಂತಸಪಡಿಸುವ ಪುಷ್ಪಫಲಗಳಿಂದ ಕೂಡಿರುವ ಭವ್ಯ ವೃಕ್ಷವಾಗಿ ವಿಕಾಸ ಹೊಂದಬಲ್ಲದು. ಅದೇ ರೀತಿ ಸಂಶೋಧಕನು ತುಕ್ಕುಹಿಡಿದ ಕಬ್ಬಿಣದಂತೆ ಅನಮ್ಯವಾಗಿರಬಾರದು, ಗಡುಸಾದ ಮನೋಭಾವಕ್ಕೆ ಅವಕಾಶ ಕೊಡಬಾರದು. ಅದಕ್ಕೆ ಬದಲಾಗಿ ಅವನು ಹೊಸ ಹೊಸ ವಿಷಯಗಳು ಬೆಲಕಿಗೆ ಬಂದಂತೆ, ಅವುಗಳಿಗೆ ತಕ್ಕಂತೆ ತನ್ನದೃಷ್ಟಿ ಹಾಗೂ ಅಭಿಪ್ರಾಯಗಳನ್ನು ಬದಲಾಯಿಸಿಕೊಂಡು ಸರಿಹೊಂದಿಕೊಳ್ಳುವ ಚಿತ್ತವೃತ್ತಿಯನ್ನು ಹೊಂದಿ ಬೆಳೆಯಬೇಕು, ಸತ್ಯನಿಷ್ಠತೆಯಿಂದ ಕೂಡಿ ವಿಷಯಗಳನ್ನು ಇರುವಮತೆಯೇ ವಿವರಿಸಬೇಕು ಮತ್ತು ಮೆಚ್ಚಿಗೆ ಗಳಿಸುವುದಕ್ಕಾಗಿ ಅಥವಾ ಇತರರ ಮೇಲೆ ಪ್ರಭಾವ ಬೀರುವುದಕ್ಕಾಗಿ ಸತ್ಯವನ್ನು ಬಲಿ ಕೊಡಬಾರದು. ಅದಕ್ಕಾಗಿ ಅವನಲ್ಲಿ ಸತ್ಯಶೀಲತೆ, ನ್ಯಾಯನಿಷ್ಠೆ ಮತ್ತು ನೈತಿಕ ಸತ್ವ ಇರಬೇಕಾದುದು ಅತ್ಯಾವಶ್ಯಕ. ಉತ್ತಮ ತರಬೇತು ಅವನಿಗೆ ಅಗತ್ಯ.

ಆದರೂ ವಸ್ತುನಿಷ್ಠತೆಯನ್ನು ಸಂಪೂರ್ಣವಾಗಿ ಸಾಧಿಸುವುದು ಅಸಾಧ್ಯವೇ. ಕಾರಣ ಒಂದು ಬೃಹತ್ ವಿಷಯವು ಒಂದು ಮಹಾಪರ್ವತವಿದ್ದ ಹಾಗೆ. ಅದನ್ನು ಯಾವ ವೀಕ್ಷಕನೂ ಸಮಗ್ರವಾಗಿ ನೊಡಲಾರನು. ಅವನು ಅದನ್ನು ಹತ್ತಿನೋಡಿದರೆ, ಅದರ ಕೆಲವೇ ಆಯ್ದ ಮುಖಗಳು ಅವನ ಕಣ್ಣುಗಳಿಗೆ ಗೋಚರವಾಗುತ್ತವೆ. ಅವನು ದೂರ ನಿಂತು ನೋಡಿದರೆ, ಒಂದೇ ಪಾರ್ಶ್ವದಿಂದ ಆ ಮಹಾಪರ್ವತದ ಸಮತಲದ ಹೊರರೇಖೆ ಮಾತ್ರ ಅವನಿಗೆ ಕಂಡುಬರುತ್ತದೆ. ಅವನು ವಿಮಾನದಲ್ಲಿ ಕುಳಿತು ಅದರ ಮೇಲೆ ಹಾರಾಡಿ ವೀಕ್ಷಿಸಿದರೆ ಅದು ಚಪ್ಪಟೆಯಾಗಿರುವಂತೆ ಕಾಣುತ್ತದೆ. ಮುಂಚಿನ ಇತಿಹಾಸಕಾರನು ವೀರಶೈವ ಚಳವಳಿಯನ್ನು ಒಂದು ಈಶ್ವರಜ್ಞಾನ ಸಂಬಂಧಿ ಘಟನೆ ಎಂಬುದಾಗಿ ಎಣಿಸಿದ್ದರೆ, ನಂತರ ಹಾದುಬಂದ ಶತಮಾನಗಳಲ್ಲಿ ಈ ಚಳವಳಿಯನ್ನು ಕುರಿತು ವಿಚಾರ ಮಾಡಿದ ಚರಿತ್ರಲೇಖಕರ ದೃಷ್ಟಿಯಲ್ಲಿ ಇದು ಸಾಮಾಜಿಕವಾಗಿ ಮಹತ್ತ್ವಪೂರಿತವಾಗಿದ್ದ ಧಾರ್ಮಿಕ ಚಳವಳಿಯಾದರೆ, 20ನೆಯ ಶತಮಾನದಲ್ಲಿ ಇದನ್ನು ಧಾರ್ಮಿಕ ಹಾಗೂ ರಾಜಕೀಯ ಪರಿಣಾಮಗಳನ್ನು ಒಳಗೊಂಡಿರುವ ಸಾಮಾಜಿಕ ಹಾಗೂ ಆರ್ಥಿಕ ಚಳವಳಿ ಎಂಬುದಾಗಿ ಎಣಿಸಲಾಗುತ್ತಿದೆ. ಅದೇ ರೀತಿ ಮೊದಲಿನ ಇತಿಹಾಸಕಾರನು ಪ್ರಾಟೆಸ್ಟೆಂಟ್ ಚಳವಳಿಯನ್ನು ಪ್ರಧಾನವಾಗಿ ಒಂದು ಆಧ್ಯಾತ್ಮಿಕ ಘಟನೆಯನ್ನಾಗಿ ವರ್ಣಿಸಿದರೆ, 18ನೆಯ ಶತಮಾನದ ಪಂಡಿತರ ದೃಷ್ಟಿಯಲ್ಲಿ ಅದು ಯೂರೋಪಿನ ಭೂಪಟವನ್ನು ಪುನಃ ರೂಪಿಸಿದ ತಲೆದೋರುತ್ತಿದ್ದ ರಾಜ್ಯಗಳನ್ನು ಬಲಗೊಳಿಸಿದ ಮತ್ತು ಬೌದ್ಧಿಕ ಸ್ವಾತಂತ್ರ್ಯವನ್ನು ಹೆಚ್ಚಿಸಿದ ಚಳವಳಿಯಾಗಿದ್ದಿತು. 19ನೆಯ ಶತಮಾನದಲ್ಲಿ ಆ ಚಳವಳಿಯು ಗಾಢವಾಗಿದ್ದ ಸಾಮಾಜಿಕ ಅರ್ಥಗಳಿಂದ ಕೂಡಿದ್ದ ಧಾರ್ಮಿಕ ಚಳವಳಿಯಾಗಿ ಕಂಡುಬಂದರೆ 20ನೆಯ

ಶತಮಾನದಲ್ಲಿ ಅದನ್ನು ಪ್ರಾಸಂಗಿಕವಾದ ಧಾರ್ಮಿಕ ಹಾಗೂ ರಾಜಕೀಯ ಪರಿಣಾಮಗಳನ್ನು ಬೀರಿರುವ ಸಾಮಾಜಿಕ ಹಾಗೂ ಆರ್ಥಿಕ ಕ್ರಾಂತಿ ಎಂಬುದಾಗಿ ಎಣಿಸಲಾಗುತ್ತಿದೆ. ಪಕ್ಕಾ ಸಂಶೋಧಕರ ದೃಷ್ಟಿಯಲ್ಲಿ ವೀರಶೈವ ಅಥವಾ ಇತರ ಮತ ಸುಧಾರಣಾ ಚಳವಳಿಗಳು ಪರ್ವತದ ಬದಲಾಗುವ ಪಾರ್ಶ್ವ ಹಾಗೂ ಆಕಾರಗಳಂತೆ ಮೇಲೆ ವಿವರಿಸಿರುವುದೆಲ್ಲವೂ ಆಗಿರುತ್ತವೆ. ಆದ್ದರಿಂದ ಒಬ್ಬ ಲೇಖಕನ ಮತ, ಧರ್ಮ, ಜಾತಿ ಅಥವಾ ದೇಶ ಅಥವಾ ಅವನ ಬಗ್ಗೆ ಇರುವ ವೈಯಕ್ತಿಕ ದ್ವೇಷಕ್ಕಾಗಿ ಅವನ ಕೃತಿಯನ್ನು ನಿಂದಿಸುವುದು ಅವಿವೇಕ. ಒಂದು ಕೃತಿಯನ್ನು ತನ್ನ ಅತೀವ ಅಪನಂಬಿಕೆ ಎಂಬ ಸರಪಳಿಯನ್ನು ತೂಗುಹಾಕುವುದಕ್ಕೆ ಬೇಕಾದ ಬೆಣೆಯಾಗಿ ಬಳಸುವ ಉದ್ದೇಶದಿಂದ ಓದುವುದಕ್ಕಿಂತ, ಆ ರೀತಿ ಓದದೆ ಇರುವುದು ಒಳ್ಳೆಯದು. ಜ್ಞಾನಾಭಿವೃದ್ಧಿಯೇ ಅಧ್ಯಯನದ ಗುರಿಯಾಗಿರಬೇಕು. ಅದಕ್ಕಾಗಿ ಸಂಶೋಧಕನು ಒಂದು ತರಹದ ತ್ರಿಕೋನ ಮಾನವನ್ನು ಉಪಯೋಗಿಸಿ ಮುಂದುವರಿಯಬೇಕು. ಅಂದರೆ, ಒಂದು ಕಡೆ ಅನ್ವೇಷಕ, ಅವನ ಬಲಗಡೆ ಅಥವಾ ಎಡಗಡೆಯಲ್ಲಿ ಮೆಕಾಲೆ ಮತ್ತು ಮೇಲೆ ಮೆಕಾಲೆ ವಿವರಿಸುವ ಘಟನೆಗಳ ದಾಖಲೆ ಇರುವ ಹಾಗೆ ಒಂದು ತ್ರಿಕೋಣವನ್ನು ಕಲ್ಪಿಸಿಕೊಂಡು ಅವನು ತನಗೆ ಸಂಬಂಧಿಸಿದಂತೆ ಮೆಕಾಲೆಯ ಸ್ಥಾನವನ್ನು ಅರಿತು, ವಸ್ತುನಿಷ್ಠ ದೃಷ್ಟಿಕೋನವನ್ನು ಬೆಳೆಸಿಕೊಂಡು ಆ ಘಟನೆಗಳನ್ನು ವೀಕ್ಷಿಸಬೇಕು. ಇದು ಅವನು ಪ್ರತ್ಯೇಕವಾಗಿ ತನ್ನ ಅಥವಾ ಮೆಕಾಲೆಯ ದೃಷ್ಟಿಕೋನದಿಂದ ಮಾತ್ರ ಆ ಘಟನೆಗಳನ್ನು ನೋಡಿ ವಿಚಾರ ಮಾಡಿದ್ದರೆ ಸಾಧ್ಯವಾಗುತ್ತಿರಲಿಲ್ಲ.

ಸಂಶೋಧಕನು ತಾನು ಸುಸಂಬದ್ಧವಾಗಿರುವ ಮಾಹಿತಿಗಳ ಸಮಗ್ರ ಕ್ಷೇತ್ರವನ್ನು ಸಂಪೂರ್ಣವಾಗಿ ಅನ್ವೇಷಿಸಿರುವುದನ್ನು ಹಾಗೂ ತಿಳಿಯಬೇಕಾದುದು ಇನ್ನೇನೂ ಇಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಮಾಹಿತಿಗಳು ಎಲ್ಲೇ ಇರಲಿ ಅವುಗಳನ್ನು (1) ಸ್ಮಾರಕಗಳಂತಹ ಭೌತ ವಸ್ತುಗಳು, ಭೌತಿಕಪರಿಸ್ಥಿತಿಗಳು, ವ್ಯಕ್ತಿಗಳ ಕಲಾಕೃತಿಗಳು ಹಾಗೂ ಕೈಗಾರಿಕಾ ಸಾಧನೆಗಳು ಹಾಗೂ ಅವರು ಅನುಭವಿಸಿದ ಅಪಜಯಗಳು ಮತ್ತು (2) ಅವರ ಪ್ರೇರಣೆ, ಉದ್ದೇಶ ಹಾಗೂ ಕಲ್ಪನೆಗಳು ಎಂಬುದಾಗಿ ವ್ಯಾಪಕವಾಗಿ ವರ್ಗೀಕರಿಸಬಹುದು. ಪ್ರೇರಣೆ ಹಾಗೂ ಉದ್ದೇಶಗಳು ಒಂದು ಕ್ರಿಯೆಯನ್ನು ನಡೆಸುವುದಕ್ಕೆ ಮತ್ತು ಆ ಕಾರ್ಯವನ್ನು ಮಾಡಿದ ವ್ಯಕ್ತಿಯ ಮನಸ್ಸಿನಲ್ಲಿ ಆ ಕ್ಷಣದಲ್ಲಿ ರೂಪಿತವಾಗಿದ್ದ ಕ್ರಿಯೆಯನ್ನು ಪ್ರತಿರೂಪಿಸುವುದಕ್ಕೆ ಬೇಕಾದ ಉದ್ದೀಪನವನ್ನು ಸೂಚಿಸುತ್ತವೆ. ಈ ಮಾನಸಿಕ ಭಾವನೆಗಳನ್ನು (1) ಲೇಖಕರ ಮನಸ್ಸಿನಲ್ಲಿದ್ದ ಹಾಗೂ ಅವರು ವಯಕ್ತಪಡಿಸಿರುವ ಉದ್ದೇಶ ಹಾಗೂ ಕಲ್ಪನೆಗಳು (2) ತಮ್ಮ ಸಮಕಾಲೀನರ ಕ್ರಿಯೆಗಳನ್ನು ಅವಲೋಕಿಸಿದ್ದ ಲೇಖಕರು ಅವರುಗಳಿಗೆ ಆರೋಪಿಸಿರುವ ಉದ್ದೇಶ ಹಾಗೂ ಅಭಿಪ್ರಾಯಗಳು ಮತ್ತು (3) ದಾಖಲೆಗಳಲ್ಲಿ ವಿವರಿಸಲಾಗಿರುವ ಕ್ರಿಯೆಗಳ ಮೇಲೆ ಪ್ರಭಾವ ಬೀರಿದುದಾಗಿ ಎಣಿಸಲಾಗಿರುವ ಪ್ರೇರಣೆ ಹಾಗೂ ಉದ್ದೇಶಗಳು ಎಂಬುದಾಗಿ ಮೂರು ವರ್ಗಗಳಾಗಿ ವಿಭಾಗಿಸಲಾಗುತ್ತದೆ. ಸಂಶೋಧಕನು ಹಿಂದೆ ಜೀವಿಸಿದ್ದ ಜನರ ಜೀವನ ಹಾಗೂ ಭಾವನೆಗಳನ್ನು ಅರಿಯಲು ಯತ್ನಿಸುವುದರಿಂದ ಅವನ ಮನೋಪಟಲದಲ್ಲಿ ಮೂಡಿಇರುವುದು ಅದೃಶ್ಯವಾಗಿ ಹೋಗಿರುವ ವಸ್ತುಸ್ಥಿತಿಯ ಪ್ರತಿರೂಪ ಮಾತ್ರ. ಅವನು ಕಣ್ಮರೆಯಾಗಿ ಹೋಗಿರುವ ಹಿಂದಿನ ವಸ್ತುಸ್ಥಿತಿಗಳು ಇಂದಿನ ವಸ್ತುಸ್ಥಿತಿಗಳಂತಿದ್ದುವು ಎಂಬುದಾಗಿ ಭಾವಿಸಿಕೊಳ್ಳುತ್ತಾನೆ. ಆದರೆ ಈ ಆಧಾರ ಪ್ರತಿಜ್ಞೆಯು ಸಂಪೂರ್ಣವಾಗಿ ಸರಿಯಾಗಿರುವುದಿಲ್ಲ. ಗತಕಾಲದಲ್ಲಿ ಸಂಭವಿಸಿದ್ದ ಘಟನೆಗಳು ಇಂದು ಕಂಡುಬರುತ್ತಿರುವ ಸಂಗತಿಗಳಿಗೆ ಸರ್ವಸಮನಾಗಿರುವುದಿಲ್ಲ. ಇಂದು

ಬುದ್ಧ, ಅಶೋಕ, ಶಂಕರಾಚಾರ್ಯ, ಏಸುಕ್ರಿಸ್ತ ಮುಂತಾದವರಂತಹ ಭವ್ಯ ವ್ಯಕ್ತಿಗಳನ್ನು ಕಾಣುವುದು ಸಾಧ್ಯವಿಲ್ಲ. ಚರಿತ್ರ ಲೇಖಕನು ದಾಖಲೆಗಳಿಂದ ಲಭ್ಯವಾಗಿರುವ ಮಾಹಿತಿಗಳ ಆಧಾರದ ಮೇಲೆ ಕಣ್ಮರೆಯಾಗಿ ಹೋಗಿರುವ ಘಟನೆ ಅಥವಾ ವ್ಯಕ್ತಿಗಳನ್ನು ತಾನೇ ಸ್ವತಃ ನೋಡಿದ್ದರೆ ಹೇಗೆ ಚಿತ್ರಿಸಿಕೊಳ್ಳುತ್ತಿದ್ದನೋ ಅದೇ ರೀತಿ ತನ್ನ ಕಲ್ಪನಾ ಶಕ್ತಿಯನ್ನು ಬಳಸಿ ತನ್ನ ಮನೋಪಟಲದಲ್ಲಿ ಅವರ ಬಗ್ಗೆ ಒಂದು ಚಿತ್ರವನ್ನು ರೂಪಿಸಿಕೊಳ್ಳುತ್ತಾನೆ. ಆರಂಭದಲ್ಲಿ ಈ ಚಿತ್ರ ಅತ್ಯಂತ ಮಸುಕಾಗಿರುತ್ತದೆ, ಯಥಾರ್ಥವಾಗಿರುವುದಿಲ್ಲ. ಅದರಲ್ಲಿರುವ ತಪ್ಪಾದ ಅಂಶಗಳನ್ನು ತೆಗೆದುಹಾಕಿ ಸತ್ಯವಾದುದನ್ನು ಸರಿಯಾದ ಸ್ಥಳದಲ್ಲಿ ಸೇರಿಸಿ ಆ ಚಿತ್ರವನ್ನು ಪರಿಪೂರ್ಣಗೊಳಿಸ–ಬೇಕಾದುದು ಸಂಶೋಧಕರ ಕಾರ್ಯ. ಅಮೃತಶಿಲೆಯ ಒಳಗೆ ಮೂರ್ತಿ ಅಡಗಿಕೊಂಡಂತಿರುತ್ತದೆ. ಅದನ್ನು ಬೆಳಕಿಗೆ ತರಬೇಕಾದರೆ ಶಿಲ್ಪಿಯು ಹೆಚ್ಚಾಗಿರುವ ಅಮೃತಶಿಲೆಯನ್ನು ಕೆತ್ತಿ ತೆಗೆಯಬೇಕು. ಪರೀಕ್ಷಿಸಲಾಗದ ಹಾಗೂ ಪರೀಕ್ಷಿಸಬೇಕಾಗಿರುವ ಮಾಹಿತಿಗಳ ಬೆಟ್ಟವನ್ನೇ ಮುಂದಿಟ್ಟುಕೊಂಡಿರುವ ಇತಿಹಾಸ ಸಂಶೋಧಕನು ಇಲ್ಲಿ ಒಂದು ಸಹಾಯಕ ಮಾದರಿಯನ್ನು ಕಾಣಬಹುದು. ಅವನು ಅಸ್ಪಷ್ಟವಾಗಿರುವ ಅಂಶಗಳನ್ನು ಬಿಟ್ಟು ತನ್ನ ವಿಷಯಕ್ಕೆ ಸುಸಂಬದ್ಧವಾಗಿರುವ ಮಾಹಿತಿಗಳನ್ನು ಮಾತ್ರ ಬಳಸಿಕೊಳ್ಳಬೇಕು. ಅವನು ಹಿಂದೆ ಘಟನೆಗಳು ಯಾವ ಪರಿಸ್ಥಿತಿಯಲ್ಲಿ ಸಂಭವಿಸಿದುವು ಎಂಬುದನ್ನು ಹಾಗೂ ಅವುಗಳ ಯಥಾರ್ಥ ಸ್ವರೂಪ ಎಂತಹುದಾಗಿದ್ದಿತು ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಅದಕ್ಕಾಗಿ ಅವನು ಹಿಂದಿನ ಮಾನವ ಕುಲವನ್ನು ಸೂಕ್ಷ್ಮವಾಗಿ, ಎಚ್ಚರಿಕೆಯಿಂದ ಸಮಗ್ರವಾಗಿ ಅವಲೋಕಿಸಬೇಕು ಮತ್ತು ಸರಿಸಮವಾಗಿದ್ದ ಘಟನೆಗಳು ಯಾವ ಪರಿಸ್ಥಿತಿಯಲ್ಲಿ ಜರುಗಿದವು ಎಂಬುದನ್ನು ಕಂಡುಹಿಡಿದುಕೊಳ್ಳಬೇಕು. ಆದ್ದರಿಂದ ಸಾಂಶ್ಲೇಷಿಕ ಕಾರ್ಯ ರೀತಿಯಲ್ಲಿ ಪ್ರಾರಂಭದ ಕ್ರಮವಾಗಿ ವರ್ಣನಾತ್ಮಕ ತಂತ್ರಗಳನ್ನು ಮತ್ತು ವರ್ಣನಾತ್ಮಕ ಮನೋವಿಜ್ಞಾನ, ಸಮಾಜಶಾಸ್ತ್ರ ಮತ್ತು ಇತರ ವಿಜ್ಞಾನಗಳು ಒದಗಿಸುವ ಜ್ಞಾನವನ್ನು ಬಳಸಿಕೊಳ್ಳಬೇಕಾಗುತ್ತದೆ.

### 10.2.2 ವಾಸ್ತವಾಂಶಗಳ ಸಂಕಲನ

ಐತಿಹಾಸಿಕ ವಾಸ್ತವಾಂಶಗಳ ಸ್ವರೂಪವನ್ನು ಅರಿತ ನಂತರ ಸಾಂಶ್ಲೇಷಿಕ ಕಾರ್ಯ ರೀತಿಯ ಮುಖ್ಯವಾದ ಕೆಲಸವೆಂದರೆ ವ್ಯಾವಹಾರಿಕ ಅಂಶಗಳ ಆಧಾರದ ಮೇಲೆ ಯೋಜಿಸಲಾದ ಒಂದು ನಿರ್ದಿಷ್ಟ ವರ್ಗೀಕರಣದ ವಿನ್ಯಾಸಕ್ಕೆ ಅನುಗುಣವಾಗಿ ವಾಸ್ತವಾಂಶಗಳನ್ನು ಒಟ್ಟುಗೂಡಿಸುವುದು. ಈ ಕ್ರಮದಲ್ಲೂ ಸಹ ಅನ್ವೇಷಕನು ಸಮರ್ಪಕವಾದ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕಾದುದು ಅವಶ್ಯಕ. ಕೇವಲ ಹಸ್ತಪ್ರತಿ ಅಥವಾ ದಾಖಲೆಗಳು ಒದಗಿಸುವ ವಿವರಗಳ ಆಧಾರದ ಮೇಲೆಯೇ ಇತಿಹಾಸವನ್ನು ರಚಿಸುವುದು ಸಾಧ್ಯವಿಲ್ಲ. ಅದಕ್ಕೆ ಆಳವಾದ ಆಲೋಚನೆ ಹಾಗೂ ಯೋಗ್ಯ ಯೋಜನೆ ಅವಶ್ಯಕವಾಗುತ್ತದೆ ಮತ್ತು ಮಾಹಿತಿಗಳನ್ನು ಎಚ್ಚರಿಕೆಯಿಂದ ಆಯ್ಕೆ ಮಾಡಿ, ವ್ಯವಸ್ಥಿತಗೊಳಿಸಿ, ಒಂದು ನಿರ್ದಿಷ್ಟ ಹಂಚಿಕೆಗೆ ಅನುಸಾರವಾಗಿ ಅವುಗಳನ್ನು ವಿವಿಧ ಶಿರೋನಾಮೆ ಹಾಗೂ ಉಪಶಿರೋನಾಮೆ, ವಿಭಾಗ ಹಾಗೂ ಉಪವಿಭಾಗಗಳ ಕೆಳಗೆ ಒಟ್ಟುಗೂಡಿಸಬೇಕು. ಅನ್ವೇಷಕನು ವಾಸ್ತವಾಂಶಗಳ ವಿಭಾಗ ಹಾಗೂ ಉಪವಿಭಾಗಗಳನ್ನು ಕ್ರಮಬದ್ಧವಾದ ರೀತಿಯಲ್ಲಿ ಅಣಿಮಾಡಿಟ್ಟುಕೊಳ್ಳಬೇಕು ಮತ್ತು ವಾಸ್ತವಾಂಶಗಳನ್ನು ಆರಿಸಿ, ಒಟ್ಟುಗೂಡಿಸಿ, ವ್ಯವಸ್ಥಿತಗೊಳಿಸುವುದಕ್ಕೆ ಬೇಕಾದ ಮಾರ್ಗದರ್ಶಕ ತತ್ತ್ವವನ್ನು ಕಂಡುಕೊಳ್ಳಬೇಕು. ಕಾಲ, ದೇಶ, ವ್ಯಕ್ತಿ

ಹಾಗೂ ಇತರ ಬಾಹ್ಯ ಪರಿಸ್ಥಿತಿಗಳ ಆಧಾರದ ಮೇಲೆ ವರ್ಗೀಕರಿಸುವ ಕ್ರಮ ಅತ್ಯಂತ ಸರಳವಾದುದು ಹಾಗೂ ಸುಲಭವಾದುದು. ಅದರ ಪ್ರಕಾರ, ಒಂದು ಕಾಲ, ಅಥವಾ ಸ್ಥಳ, ಅಥವಾ ರಾಷ್ಟ್ರ ಅಥವಾ ವ್ಯಕ್ತಿಯನ್ನು ಕುರಿತ ಚರಿತ್ರೆಯನ್ನು ಕಾಣಬಹುದು. ಈ ಸಾಮಾನ್ಯ ಚೌಕಟ್ಟಿನಲ್ಲಿ ವಾಸ್ತವಾಂಶಗಳನ್ನು ಕಾಲಾನುಕ್ರಮವಾಗಿ ಹಾಗೂ ಭೌಗೋಳಿಕವಾಗಿ ವ್ಯವಸ್ಥಿತಗೊಳಿಸಲಾಗುತ್ತದೆ. ಈ ವಿನ್ಯಾಸದಲ್ಲಿ ವ್ಯವಸ್ಥಿತಗೊಳಿಸ–ಬೇಕಾದ ವಾಸ್ತವಾಂಶಗಳನ್ನು ಆರಿಸಿಕೊಳ್ಳುವುದಕ್ಕೆ ಬಹಳ ದಿನಗಳವರೆಗೆ ಒಂದು ನಿರ್ದಿಷ್ಟ ಸಹಾಯಕ ತತ್ತ್ವವಿರಲಿಲ್ಲ. ಲಿವಿ, ಟ್ಯಾಸಿಟಸ್ ಮುಂತಾದ ಪಂಡಿತರು ಪ್ರವಾಹ ಹಾಗೂ ಸೋಂಕು ರೋಗಗಳಿಗೆ ಸಂಬಂಧಿಸಿದ್ದ ವೃತ್ತಾಂತಗಳೊಂದಿಗೆ ದಾಳಿ ಹಾಗೂ ಯುದ್ಧಗಳ ವಿವರಗಳನ್ನು ಸೇರಿಸಿಬಿಡುತ್ತಿದ್ದರು. ಈ ದೃಷ್ಟಿಕೋನ ಉಪಯುಕ್ತ–ವಾದುದಲ್ಲ. ಇದನ್ನು ವೈಜ್ಞಾನಿಕವಾದುದೆಂಬುದಾಗಿ ಎಣಿಸಲಾಗುವುದಿಲ್ಲ. 19ನೆಯ ಶತಮಾನದ ತರುವಾಯ ಇತಿಹಾಸ ಕ್ಷೇತ್ರದಲ್ಲೂ ವರ್ಗೀಕರಣ ಕ್ರಮ ಹಾಗೂ ಇತರ ವೈಜ್ಞಾನಿಕ ಅಧ್ಯಯನ ವಿಧಾನಗಳನ್ನು ಬಳಸುವುದು ಆರಂಭವಾಯಿತು. ಈ ವರ್ಗೀಕರಣ ಕ್ರಮವನ್ನು ಮೊದಲು ಭಾಷೆ, ಸಾಹಿತ್ಯ, ಕಲೆ, ಕಾನೂನು, ರಾಜಕೀಯ, ಅರ್ಥವ್ಯವಸ್ಥೆ, ಮತಧರ್ಮ ಮುಂತಾದ ಜ್ಞಾನ ಶಾಖೆಗಳಲ್ಲಿ ಉಪಯೋಗಿಸಲಾಯಿತು. ನಂತರ ಇತಿಹಾಸ ರಂಗಕ್ಕೆ ಅನ್ವಯಿಸಲಾಯಿತು. ಆ ತತ್ತ್ವದ ಪ್ರಕಾರ ಒಂದೇ ಬಗೆಯ ಕ್ರಿಯೆ ಹಾಗೂ ವಿಷಯಗಳಿಗೆ ಸಂಬಂಧಪಟ್ಟಿರುವ ವಾಸ್ತವಾಂಶಗಳನ್ನೆಲ್ಲಾ ಒಂದು ನಿರ್ದಿಷ್ಟ ರಚನಾ ಕ್ರಮಕ್ಕೆ ಅನುಗುಣವಾಗಿ ಒಂದೇ ಕಡೆ ಒಂದುಗೂಡಿಸಿ ವರ್ಗೀಕರಿಸಬೇಕು. ಉದಾಹರಣೆಗೆ, ಸಂಶೋಧಕನು ಅನ್ವೇಷಣೆ ಮಾಡುವುದಕ್ಕೆ ಹೊಯ್ಸಳ ಸಂಸ್ಕೃತಿಯ ಮುಖ್ಯ ಲಕ್ಷಣಗಳೆಂಬ ವಿಷಯವನ್ನು ಆರಿಸಿಕೊಂಡು ಆ ವಿಚಾರಕ್ಕೆ ಸಂಬಂಧಿಸಿರುವ ಎಲ್ಲಾ ಮಾಹಿತಿಗಳನ್ನು ಎಲ್ಲಾ ಕಡೆ ಅರಸಿ ಸಂಗ್ರಹಿಸಿಕೊಂಡ ಮೇಲೆ ಅವುಗಳನ್ನು ಈ ಕೆಳಗೆ ಸೂಚಿಸಿರುವಂತೆ ನಿರ್ದಿಷ್ಟ ಶಿರೋನಾಮೆಗಳ ಕೆಳಗೆ ವರ್ಗೀಕರಿಸಬೇಕಾಗುತ್ತದೆ.

**(1) ಭೌತಿಕ ಪರಿಸ್ಥಿತಿಗಳು:** ಪರಿಸರ, ವಾತಾವರಣ, ವಾಯುಗುಣ, ಭೌತಿಕ ಲಕ್ಷಣ, ಲೋಹ ಸಂಪತ್ತು, ನದಿ, ಪರ್ವತ, ಜನಸಂಖ್ಯಾ ಪ್ರಮಾಣ, ಜನನ–ಮರಣ, ವ್ಯಾಧಿ ಮುಂತಾದ ವಿಷಯಗಳು ಮತ್ತು ಭೌತಿಕ ಜೀವನ ಹಾಗೂ ಸಂಸ್ಕೃತಿಗೆ ಸಂಬಂಧಪಟ್ಟಿರುವ ಎಲ್ಲಾ ಅಂಶಗಳನ್ನು ಈ ಶಿರೋನಾಮೆ ಅಡಿಯಲ್ಲಿ ಒಟ್ಟುಗೂಡಿಸಬೇಕು.

**(2) ಬೌದ್ಧಿಕ ಅಭ್ಯಾಸಗಳು:** ಭಾಷೆ, ಕಲೆ, ವಿಜ್ಞಾನ, ಸಂಗೀತ, ದರ್ಶನ, ಮತಧರ್ಮ, ನೈತಿಕ ಸದಾಚಾರಕ್ಕೆ ಸಂಬಂಧಪಟ್ಟಿರುವ ಎಲ್ಲಾ ವಿಷಯಗಳು ಮತ್ತು ಮಾನವನ ಮನಸ್ಸು, ಬುದ್ಧಿಶಕ್ತಿ, ಭಾವನೆ, ಶಿಕ್ಷಣ ಹಾಗೂ ಪರ್ಯಾಲೋಚನೆಯ ವಿಕಾಸ ಮುಂತಾದ ವಿಚಾರಗಳನ್ನೆಲ್ಲಾ ಇಲ್ಲಿ ಕ್ರಮಬದ್ಧವಾಗಿ ಅಣಿಮಾಡಿಟ್ಟುಕೊಳ್ಳಬೇಕು.

**(3) ಸಾಮಾಜಿಕ ಸಂಸ್ಥೆಗಳು:** ಕುಟುಂಬ, ಆಚಾರ ಪದ್ಧತಿ, ಶಿಷ್ಟಾಚಾರಗಳು, ಸಾಮಾಜಿಕ ವರ್ಗಗಳು, ಧಾರ್ಮಿಕ ಕ್ರಮಾಚರಣೆಗಳು, ಮನೋವಿನೋದಗಳು, ಸಂತೋಷ ಸಮಾರಂಭಗಳು, ಹಬ್ಬಗಳು, ಖಾಸಗಿ ಜೀವನ, ವಿರಾಮ ಕಾಲವನ್ನು ಕಳೆಯುವ ರೀತಿ, ಪಥ್ಯವಿಧಿ, ಉಡಿಗೆ–ತೊಡಿಗೆಗಳು, ವಸತಿ,

ಪೀಠೋಪಕರಣಗಳು ಮುಂತಾದ ಸುಸಂಬದ್ಧ ವಿವರಗಳನ್ನೆಲ್ಲಾ ಈ ಶಿರೋನಾಮೆಯ ಕೆಳಗೆ ವರ್ಗೀಕರಿಸಬೇಕು.

**(4) ಆರ್ಥಿಕ ಪರಿಸ್ಥಿತಿಗಳು:** ಇಲ್ಲಿ ಉತ್ಪಾದನೆ, ಅನುಭೋಗ, ವಿತರಣೆ, ಸಾರಿಗೆ, ವ್ಯಾಪಾರ, ಆಮದು–ರಫ್ತು, ಕೃಷಿ, ಹಣಕಾಸು, ಕೈಗಾರಿಕೆ, ಭೂಗಂದಾಯ, ದೇಶದ ಆದಾಯ ಹಾಗೂ ಖರ್ಚಿನ ಮೂಲಾಧಾರಗಳು, ಕಸಬುಗಳು ಮುಂತಾಗಿ ಜನರ ಆರ್ಥಿಕ ಜೀವನಕ್ಕೆ ಸಂಬಂಧಪಟ್ಟಿರುವ ಎಲ್ಲಾ ವಿವರಗಳಿರಬೇಕು.

**(5) ಸಾರ್ವಜನಿಕ ಸಂಸ್ಥೆಗಳು:** ರಾಜಕೀಯ ಸಂಸ್ಥೆಗಳು, ಸುಧಾರಣೆಗಳು ಹಾಗೂ ನಿರ್ಣಯಗಳು, ಆಡಳಿತ ಯಂತ್ರ, ಸಂವಿಧಾನಾತ್ಮಕ ಅಂಶಗಳು ಮತ್ತು ಅವುಗಳ ಪ್ರಭಾವ, ರಾಯಭಾರ ನಿರ್ವಹಣ ಕೌಶಲ, ಯುದ್ಧ, ಶಾಂತಿ, ಅಂತರರಾಷ್ಟ್ರೀಯ ಸಂಬಂಧ ಮುಂತಾದ ರಾಜಕೀಯ ಪರಿಸ್ಥಿತಿಗಳಿಗೆ ಸಂಬಂಧಿಸಿರುವ ಎಲ್ಲಾ ವಿವರಗಳನ್ನು ಇಲ್ಲಿ ಒಟ್ಟು ಸೇರಿಸಬೇಕು.

ಇದು ವರ್ಗೀಕರಿಸಬಹುದಾದ ಶಿರೋನಾಮೆಗಳ ಸರ್ವಗ್ರಾಹಿ ಸಮೀಕ್ಷೆಯಲ್ಲ. ಇದು ಕೇವಲ ಈ ತರಹದ ಒಂದು ವ್ಯವಸ್ಥಿತ ಕಾರ್ಯ ಪ್ರಣಾಳಿಕೆಯನ್ನು ಅನುಸರಿಸಬೇಕೆಂಬುದನ್ನು ತೋರುವ ಮಾದರಿ ಮಾತ್ರವಾಗಿರುತ್ತದೆ. ಒಂದು ಕಟ್ಟನಿಟ್ಟಾದ ವರ್ಗೀಕರಣ ಯೋಜನೆಯನ್ನು ಅನುಸರಿಸುವುದು ಸಾಧ್ಯವಿಲ್ಲ. ಮಾಹಿತಿಗಳ ಸ್ವರೂಪಕ್ಕೆ ಅನುಗುಣವಾಗಿ ಅಲ್ಲದೆ ಕಾಲ ಹಾಗೂ ದೇಶಕ್ಕೆ ಅನುಸಾರವಾಗಿಯೂ ಸಹ ಮಾಹಿತಿಗಳನ್ನು ಒಟ್ಟುಗೂಡಿಸಿ ವರ್ಗೀಕರಿಸಬಹುದು. ಹೀಗೆ ವಾಸ್ತವಾಂಶಗಳನ್ನು ಕಲಾನುಕ್ರಮ, ಅಥವಾ ಭೌಗೋಳಿಕ ಅಥವಾ ವಿಷಯ ಸಂಬಂಧ ವಿಧಾನಗಳನ್ನು ಅನುಸರಿಸಿ ವ್ಯವಸ್ಥಿತಗೊಳಿಸಬಹುದು. ಕಾಲಗಣನಾ ವಿಧಾನವನ್ನು ಬಳಸಿದಾಗ ಎಲ್ಲಾ ಮಾಹಿತಿಗಳನ್ನು ಸಮಯದ ಕ್ರಮಾನುಗತಿಗೆ ಅನುಗುಣವಾಗಿ ವಿಚಾರ ಮಾಡಿ ವರ್ಗೀಕರಿಸಲಾಗುತ್ತದೆ. ಭೌಗೋಳಿಕ ವಿಧಾನವನ್ನು ಉಪಯೋಗಿಸಿದಾಗ ಎಲ್ಲಾ ವಾಸ್ತವಾಂಶಗಳನ್ನು ನಿರ್ದಿಷ್ಟ ಸ್ಥಳಗಳಿಗೆ ಅನ್ವಯಿಸಿ ಅಧ್ಯಯನ ಮಾಡಿ ವ್ಯವಸ್ಥಿತಗೊಳಿಸಲಾಗುತ್ತದೆ. ವಿಷಯ ಸಂಬಂಧಿ ವಿಧಾನವನ್ನು ಅನುಸರಿಸಿದಾಗ ನಿರ್ದಿಷ್ಟವಾಗಿ ಅಂಗೀಕೃತವಾದ ವಿಷಯಗಳನ್ನು ಕುರಿತು ವಿಚಾರ ಮಾಡಿ ಒಟ್ಟುಗೂಡಿಸಲಾಗುತ್ತದೆ. ಉದಾಹರಣೆಗೆ, ಭಾರತದ ಇತಿಹಾಸದಲ್ಲಿ ಈ ವಿಧಾನಗಳ ಅನುಸಾರವಾಗಿ ಪ್ರಾಚೀನ ಭಾರತ, ಮಧ್ಯಕಾಲೀನ ಭಾರತ ಮತ್ತು ಆಧುನಿಕ ಭಾರತದ ಚರಿತ್ರೆಗಳು ಎಂಬುದಾಗಿ ಕರ್ನಾಟಕದ ಇತಿಹಾಸ, ತಮಿಳುನಾಡಿನ ಚರಿತ್ರೆ, ದಕ್ಷಿಣ ಭಾರತದ ಇತಿಹಾಸ ಇತ್ಯಾದಿ ಎಂಬುದಾಗಿ ಮತ್ತು ಭಾರತ ಸಂವಿಧಾನದ ಚರಿತ್ರೆ ಅಥವ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಎಂಬುದಾಗಿ ವಿಭಾಗಗಳನ್ನು ಮಾಡಬಹುದು.

ಮಾಹಿತಿಗಳ ಸಂಕಲನದಲ್ಲಿ ಹಲವಾರು ಸಮಸ್ಯೆಗಳು ತಲೆದೋರುತ್ತವೆ. ಕೆಲವು ವ್ಯಕ್ತಿಗಳು ನಡೆಸಿದ ಕ್ರಿಯೆಗಳನ್ನು ಸಮರ್ಪಕವಾಗಿ ವ್ಯವಸ್ಥಿತಗೊಳಿಸುವುದು ಅಷ್ಟು ಸುಲಭವಲ್ಲ. ಅವುಗಳು ಸಾಮಾಜಿಕ ಕಾರ್ಯಗಳಾಗಿರುವಂತೆ ತೋರುತ್ತವೆ. ಆದರೆ ವಾಸ್ತವದಲ್ಲಿ ಅವುಗಳು ಸಾಂಸ್ಕೃತಿಕ ವಿಷಯಗಳಾಗಿರುತ್ತವೆ. ಪ್ರತಿ ಸಮಾಜದ ಇತಿಹಾಸದಲ್ಲೂ ಪ್ರಧಾನ ಪಾತ್ರಧಾರಿಗಳಾಗಿದ್ದ ಪ್ರಮುಖ ವ್ಯಕ್ತಿಗಳನ್ನು ಅವರ ವೈಯಕ್ತಿಕ ವೈಲಕ್ಷಣ

ಹಾಗೂ ಸಾಧನೆ, ತಾತ್ಕಾಲಿಕವಾಗಿದ್ದ ಇತರ ವಿಷಯಗಳು ಇತ್ಯಾದಿಗಳನ್ನು ಮತ್ತು ಸಾಮಾನ್ಯ ಘಟನೆ, ಸಾಮೂಹಿಕ ಕ್ರಿಯೆ ಹಾಗೂ ಅಭ್ಯಾಸಗಳು, ದಾರ್ಶನಿಕ ಕಲ್ಪನೆ, ಬೌದ್ಧಿಕ ಹವ್ಯಾಸ, ಅನೇಕ ಖಾಯಂ ಆಗಿದ್ದ ಅಂಶಗಳು ಮುಂತಾದವುಗಳನ್ನು ನೋಡಬಹುದು. ಆದ್ದರಿಂದ ಪ್ರತಿ ಚರಿತ್ರೆಯೂ ಗತಕಾಲದಲ್ಲಿ ಬಾಳಿ ಹೋದ ವ್ಯಕ್ತಿಗಳ ಜೀವನದಲ್ಲಿ ಜರುಗಿದ ಸಂಗತಿಗಳ ನಿರಂತರ ಕಥನವೂ ಮತ್ತು ಮಾನವ ಕುಲದ ಎಡೆಬಿಡದ ಅಭ್ಯಾಸಗಳ ಚಿತ್ರಣವೂ ಆಗಿರುತ್ತದೆ.

ಮತ್ತೆ ಕೆಲವು ಪಂಡಿತರು ಜರುಗಿದ ಘಟನೆಗಳಲ್ಲಿ ಯಾವುದಾದರೂ ಒಂದನ್ನು ಎತ್ತಿ ಹಿಡಿದಿರುತ್ತಾರೆ. ಉದಾಹರಣೆಗೆ, ಜರ್ಮನಿಯ ಇತಿಹಾಸಕಾರರಲ್ಲಿ ಒಂದು ವರ್ಗದವರು ನಾಗರಿಕತೆಯ ಚರಿತ್ರೆಯ ಮತ್ತು ಇನ್ನೊಂದು ವರ್ಗದವರು ಸಂಪ್ರದಾಯಗಳ ಇತಿಹಾಸ ಪಕ್ಷವರ್ತಿಗಳಾಗಿದ್ದರು. ಫ್ರಾನ್ಸ್ ದೇಶದಲ್ಲಿ ಒಂದು ಕಡೆ ಸಂಸ್ಥೆಗಳ ಶಿಷ್ಟಾಚಾರ ಹಾಗೂ ಭಾವನೆಗಳ ಇತಿಹಾಸದ ಪಕ್ಷದವರಿಗೂ ಮತ್ತೊಂದು ಕಡೆ 'ಯುದ್ಧಚರಿತ್ರೆ' ಎಂಬುದಾಗಿ ಕರೆಯಲಾದ ರಾಜಕೀಯ ಇತಿಹಾಸ ಪಕ್ಷದವರಿಗೂ ನಡುವೆ ವಿವಾದಗಳು ನಡೆಯುತ್ತಿದ್ದುವು. ಆದರೆ ಈ ತೆರನಾದ ವಾಗ್ಯುದ್ಧಗಳನ್ನು ಮಾಡಬೇಕಾದ ಅವಶ್ಯಕತೆ ಇಲ್ಲ. ಕಾರಣ ಸಾಮಾನ್ಯವಾದ ಹಾಗೂ ನಿರ್ದಿಷ್ಟವಾದ ವಾಸ್ತವಾಂಶಗಳನ್ನು ಕುರಿತು ವಿಚಾರ ಮಾಡಬೇಕಾದುದು ಇತಿಹಾಸದ ಅವಶ್ಯ ಕರ್ತವ್ಯ.

ಒಂದು ವೇಳೆ ಒಂದು ನಿರ್ದಿಷ್ಟ ಜನಸಮುದಾಯದ ಅಭ್ಯಾಸಗಳನ್ನು ಅಧ್ಯಯನ ಮಾಡುವುದು ಸಂಶೋಧಕನ ಗುರಿಯಾದರೆ ಅವನು ತನ್ನ ಈ ವಿಷಯವನ್ನು ವರ್ಗೀಕರಿಸುವುದಕ್ಕೆ ಯಾವ ರೀತಿ ಅನ್ವೇಷಣಾ ಪಥದಲ್ಲಿ ಮುಂದುವರಿಯಬೇಕು ಎಂಬುದು ಪ್ರಶ್ನೆ. ಯಾವ ಸಮೂಹದಲ್ಲಿ ಈ ಅಭ್ಯಾಸಗಳನ್ನು ಅನುಸರಿಸಲಾಗುತ್ತಿದ್ದಿತು ಎಂಬುದನ್ನು ಮೊದಲು ನಿರ್ಧರಿಸಿಕೊಳ್ಳಬೇಕು. ಇಲ್ಲಿ ಅವನು ಒಂದು ವಿಚಾರದಲ್ಲಿ ಅತ್ಯಂತ ಜಾಗರೂಕನಾಗಿರಬೇಕು: – ಪ್ರಾಣಿ ಜಾತಿಯ ಮಾದರಿಯ ಮೇರೆಗೆ ಮಾನವ ಸಮೂಹವನ್ನು ಪರಸ್ಪರ ಹೋಲುವ ವ್ಯಕ್ತಿಗಳಿಂದ ಕೂಡಿದೆ ಎಂಬುದಾಗಿ ಕಲ್ಪಿಸಿಕೊಳ್ಳುವುದು ಸ್ವಾಭಾವಿಕ ಪ್ರವೃತ್ತಿಯಾಗಿರುತ್ತದೆ; ಒಂದು ರಾಷ್ಟ್ರವು ಒಂದೇ ಭಾಷೆಯನ್ನು ಆಡುವ ಮತ್ತು ಒಂದೇ ಸಂಪ್ರದಾಯ ಹಾಗೂ ಅಭ್ಯಾಸಗಳನ್ನು ಹೊಂದಿರುವ ಜನರನ್ನು ಒಳಗೊಂಡಿರುತ್ತದೆ ಎಂಬುದಾಗಿ ಎಣಿಸಲಾಗುತ್ತದೆ; ಆದರೆ ಯಾವ ಸಮಾಜವೂ ಸಮರೂಪವಾಗಿರುವ ಸಮಷ್ಟಿಯಾಗಿರುವುದಿಲ್ಲ ಎಂಬುದೇ ಆ ವಿಚಾರ. ಕಾರಣ ಭಾಷೆ, ಕಲೆ, ವಿಜ್ಞಾನ, ಮತಧರ್ಮ, ಆರ್ಥಿಕ ಹಿತಾರ್ಥ ಮುಂತಾದ ಅನೇಕ ಮಾನವ ಚಟುವಟಿಕೆಗಳು ಸದಾ ಬದಲಾಯಿಸುತ್ತಲೇ ಇರುತ್ತವೆ.

ಈ ರೀತಿಯಲ್ಲಿ ವಾಸ್ತವಾಂಶಗಳ ಸಂಕಲನ ಅತ್ಯಂತ ತೊಡಕಾದ ಕಾರ್ಯ. ಸಂಶೋಧಕನು ಪ್ರಮಾಣಬದ್ಧವಾದ ಮಾಹಿತಿಗಳನ್ನು ಸರಿಯಾದ ಕ್ರಮದಲ್ಲಿ ವರ್ಗೀಕರಿಸಿ ವ್ಯವಸ್ಥಿತಗೊಳಿಸಡಬೇಕು. ಅವುಗಳನ್ನು ಒಂದು ಸಂಕೀರ್ಣವಾದ, ಅದ್ವಿತೀಯವಾದ ಹಾಗೂ ಆಕರ್ಷಕವಾದ ಮಾದರಿಯಾಗಿ ಕ್ರಮಪಡಿಸಬೇಕಾದುದು ಅವನ ಕರ್ತವ್ಯ. ಈ ಮಾದರಿಯಲ್ಲಿ ಎಲ್ಲಾ ಭಾಗಗಳನ್ನು ಪರಸ್ಪರ ಕಾರ್ಯಕಾರಣ ಸಂಬಂಧವಿರುವ ರೀತಿಯಲ್ಲಿ ವ್ಯವಸ್ಥಿತಗೊಳಿಸಿಡಬೇಕು. ಚರಿತ್ರೆಯ ರಚನೆಗೆ ಒಂದು ಮಾದರಿ ಅವಶ್ಯಕ. ಕಥನಕ್ಕೆ ಒಂದು ಆಕಾರವಿರಬೇಕು. ಕಾರಣ ಆಕಾರವಿಲ್ಲದ ಯಾವ ವಿಷಯವೂ ಮಾನವ ಮನಸ್ಸನ್ನು

ಆಕರ್ಷಿಸಲಾರದು. ಅದು ಆಕಾರವೇ ಇಲ್ಲದಿರುವ ವಿಷಯಗಳಿಗೂ ಒಂದು ಆಕೃತಿಯನ್ನು ಆರೋಪಿಸುತ್ತದೆ. ಉದಾಹರಣೆಗೆ, ಒಂದು ಮೇಜಿನ ಮೇಲೆ ಚೆಲ್ಲಾಪಿಲ್ಲಿಯಾಗಿ ಹರಡಿರುವ ಕಾಗದದ ಚೂರುಗಳನ್ನು ನೋಡುವ ವ್ಯಕ್ತಿಯ ಕಣ್ಣುಗಳಿಗೆ ಒಂದು ಮೂಲೆಯಲ್ಲಿ ತ್ರಿಕೋಣಾಕಾರ, ಇನ್ನೊಂದು ಕಡೆ ಚೌಕಾಕಾರ, ಮಧ್ಯದಲ್ಲಿ ಗುಲಾಬಿಯಾಕಾರದ ಗೋಚರವಾಗುತ್ತವೆ. ಮಾನವ ಬುದ್ಧಿಯು ಗಗನದಲ್ಲಿ ತೇಲುತ್ತಿರುವ ಬಿಳಿಮೋಡಗಳಲ್ಲೂ ಸಹ ವಿಭಿನ್ನ ಆಕಾರಗಳನ್ನು ಕಲ್ಪಿಸಿಕೊಳ್ಳುತ್ತದೆ. ವಿಷಯವನ್ನು ಗ್ರಹಿಸಲು ಈ ರೀತಿಯಲ್ಲಿ ಸಂಕಲನ ಮಾಡುವುದು ಅವಶ್ಯಕ. ಆದ್ದರಿಂದ ಇತಿಹಾಸ ಸಂಶೋಧಕನು ನೀಡುವ ಘಟನೆಗಳ ವಿವರಣೆಯು ಚಲನಚಿತ್ರದಂತೆ ಒಂದಾದ ಮೇಲೊಂದರಂತೆ ಬರುವ ಕ್ರಮಬದ್ಧವಾದ ರೀತಿಯಲ್ಲಿ ಪರಸ್ಪರ ಸಂಬಂಧಪಟ್ಟಿರುವ ವಿಷಯಗುಚ್ಛಗಳ ಕಥನವಾಗಿರಬೇಕು. ಆದ್ದರಿಂದಲೇ ಮೆಕಾಲೆಯು 1685 ರಿಂದ 1701 ರವರೆಗಿನ ಅತ್ಯಂತ ಪರಿಣಾಮಕಾರಿಯಾಗಿದ್ದ ವರ್ಷಗಳಲ್ಲಿ ಸಂಭವಿಸಿದ ಘಟನೆಗಳ ವ್ಯಾಪಕ ದೃಶ್ಯಪರಂಪರೆಯನ್ನು ಕುರಿತ ತನ್ನ ಹಿಸ್ಟೊರಿ ಕೃತಿ ರಚನೆಯಲ್ಲಿ ವಿಷಯಗಳ ವ್ಯವಸ್ಥೆಗೆ ಅತೀವ ಗಮನವನ್ನು ಕೊಟ್ಟನು ಮತ್ತು ತನ್ನ ಬರಹವನ್ನು ತನ್ನ ಅತ್ಯಂತ ಮೆಚ್ಚಿನ ಇತಿಹಾಸಕಾರನಾಗಿದ್ದ ಥೂಸಿಡೈಡಸನ ಕೃತಿಯೊಂದಿಗೆ ಹೋಲಿಸಿ ನೋಡಿ ತಾನು ಆ ಮಹಾಚರಿತ್ರ ಲೇಖಕನನ್ನು ಬಹುವಾಗಿ ಮೆಚ್ಚುವುದಾಗಿಯೂ ಆದರೆ ಅವನ ಕೃತಿಯಲ್ಲಿ ವಿಷಯಗಳ ವ್ಯವಸ್ಥೆ ಅತೃಪ್ತಿಕರವಾಗಿದೆ ಮತ್ತು ತನ್ನ ವ್ಯವಸ್ಥೆ ಅವನದಕ್ಕಿಂತ ಬಹು ಉತ್ತಮವಾಗಿದೆ ಎಂಬುದಾಗಿ ಹೇಳಿಕೊಂಡಿದ್ದಾನೆ.

ಸಂಕಲನ ಮಾಡುವಾಗ ಸಂಶೋಧಕನು ಹಿಂದಿನ ಪಂಡಿತರು ಸಿದ್ಧಪಡಿಸಿರುವ ಮಾದರಿಗಳನ್ನು ಮಾರ್ಗದರ್ಶಕ ನಮೂನೆಗಳಾಗಿ ತೆಗೆದುಕೊಳ್ಳಬೇಕು. ಆದರೆ ಉದಾಹರಣೆಗೆ ಹೊಯ್ಸಳ ಕಲಾಪಂಥ, ಪುನರುಜ್ಜೀವನ, ಗಾತಿಕ್ ಶೈಲಿ, ಇತ್ಯಾದಿಗಳನ್ನು ಕ್ರಮಬದ್ಧವಾಗಿ ಸಂಕಲನ ಮಾಡುವಾಗ ಅನ್ವೇಷಕನೇ ಹೊಣೆಗಾರಿಕೆಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಅವನು ಯಥಾರ್ಥವಾಗಿ ವಾಸ್ತವಾಂಶಗಳನ್ನೆಲ್ಲಾ ಅಧ್ಯಯನ ಮಾಡಲು ಇಚ್ಛಿಸಿ ಯತ್ನಿಸುತ್ತಾನೆ. ಆದರೆ ರತ್ನಾಭರಣಗಳನ್ನು ಆಯ್ಕೆ ಮಾಡಲು ಬಯಸುವ ಗಿರಾಕಿಯ ಮುಂದೆ ಜವಾಹಿರಿ ಅಂಗಡಿಯಲ್ಲಿ ಮೇಜಿನ ಮೇಲೆ ಆಭರಣಗಳನ್ನು ಪ್ರದರ್ಶಿಸುವ ರೀತಿಯಲ್ಲಿ ವಾಸ್ತವಾಂಶಗಳು ಅವನ ಮುಂದೆ ಸಂಪೂರ್ಣವಾಗಿ ಬಂದು ನಿಲ್ಲುವುದಿಲ್ಲ. ಅವನು ಮೊದಲು ವಿಷಯದ ಬಗ್ಗೆ ಏನೂ ತಿಳಿಯದ ಅಥವಾ ಅತ್ಯಲ್ಪ ಜ್ಞಾನವನ್ನು ಪಡೆದಿರುವ ಹಂತದಿಂದ ಅನ್ವೇಷಣಾ ಯಾನವನ್ನು ಆರಂಭಿಸುತ್ತಾನೆ. ನಂತರ ಕ್ರಮೇಣ ತನ್ನ ಜ್ಞಾನಚಕ್ಷು ಹಾಗೂ ಜ್ಞಾಪಕಶಕ್ತಿಗೆ ಮೀರಿರುವಂತಹ ಅಪಾರ ವಿಷಯಸಾಮಗ್ರಿಗಳನ್ನು ಸಂಗ್ರಹಿಸಿಕೊಳ್ಳುತ್ತಾನೆ. ಅನಂತರ ಅಅವನು ಅವುಗಳಲ್ಲಿ ಸಮರ್ಪಕವಾದುದನ್ನು ಆರಿಸಿಕೊಳ್ಳುತ್ತಾನೆ. ಹೀಗೆ ಅವನು ಸಾಮಗ್ರಿಗಳನ್ನು ಸಮಗ್ರವಾಗಿ ನೋಡಿ ಆರಿಸುವ ಗಿರಾಕಿಯಂತಿರುವುದಿಲ್ಲ; ನೂತನ ಪ್ರದೇಶವನ್ನು ಪರಿಶೋಧಿಸುವ ಪ್ರಯಾಣಿಕ-ನಂತಿರುತ್ತಾನೆ. ಅವನು ಸಂಶೋಧನಾ ಮಾರ್ಗದಲ್ಲಿ ಮುಂದುವರಿದಂತೆ ನಿರ್ದಿಷ್ಟ ಅಭಿಪ್ರಾಯಗಳನ್ನು ಬೆಳೆಸಿಕೊಳ್ಳುತ್ತಾನೆ ಮತ್ತು ಅವನ ಜ್ಞಾನವೃದ್ಧಿಯಾದಂತೆ ಈ ಅಭಿಪ್ರಾಯಗಳೂ ಸಹ ಬದಲಾಗುತ್ತಾ ಬರುತ್ತವೆ. ನಂತರ ಒಂದು ನಿರ್ದಿಷ್ಟ ಘಟ್ಟವನ್ನು ತಲುಪಿದಾಗ ಒಂದು ನಿರ್ಣಯಕ್ಕೆ ಬರುವುದಕ್ಕಾಗಿ ಅವನು ಈ ಎಲ್ಲಾ ವಿಷಯ ಸಾಮಗ್ರಿಗಳನ್ನು ಒಂದು ವಿಶಿಷ್ಟ ಮಾದರಿಗೆ ಅನುಗುಣವಾಗಿ ಸಂಕಲನ ಮಾಡುತ್ತಾನೆ.

ಉದಾಹರಣೆಗೆ, ಮಹಾಯಂತ್ರಶಿಲ್ಪಿ ವಿಶ್ವೇಶ್ವರಯ್ಯನವರ ಅದ್ಭುತ ಯೋಜನೆಗಳ ಕಾರಣ ಕರ್ಣಾಟಕದ ಆರ್ಥಿಕ ವಲಯದಲ್ಲಿ ಪ್ರಗತಿಪರವಾಗಿದ್ದ ಮಹಾತೆರೆಗಳು ಕಂಡುಬಂದವು. ರಾಬರ್ಟ್ ಕ್ಲೈವನು ಆರ್ಕಾಟ್ ಕೋಟೆಯು ಶತ್ರುಗಳ ವಶವಾಗದಂತೆ ನೋಡಿಕೊಂಡು ಮಾಡಿದ ರಕ್ಷಣೆಯ ಕಾರಣ ಇತಿಹಾಸದ ಗತಿಯೇ ಸಂಪೂರ್ಣವಾಗಿ ಬದಲಾಗಿ ಹೋಯಿತು. 16ನೆಯ ಶತಮಾನದಲ್ಲಿ ಇಂಗ್ಲೆಂಡ್ ತನ್ನ ಪ್ರಭುಗಳಾಗಿದ್ದ 8ನೆಯ ಹೆನ್ರಿ, 6ನೆಯ ಎಡ್ವರ್ಡ್ ಹಾಗೂ ಮೇರಿ ಮೃತ್ಯುವಶರಾದಂತೆ ಮೂರು ಸಲ ತನ್ನ ಮತಧರ್ಮವನ್ನು ಬದಲಾಯಿಸಿಕೊಂಡಿತು. ಈ ಮಹಾ ಪರಿವರ್ತನೆಗೆ ಕಾರಣ ಆಳಿದ ದೊರೆಗಿದ್ದ ಖಾಯಿಲೆಯೇ ಹೊರತು ಮತ್ತೇನಲ್ಲ. ಸಂಶೋಧಕನು ಒಬ್ಬ ನಿರ್ದಿಷ್ಟ ವ್ಯಕ್ತಿಯು ತನ್ನ ಪ್ರಭಾವ ಬಲವಾಗಿ ಬೇರೂರುವಂತೆ ಮಾಡುವಂತಹ ಸ್ಥಾನವನ್ನು ಅಲಂಕರಿಸಿದ್ದನೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಬೇಕು ಮತ್ತು ಎರಡು ಸಂದರ್ಭಗಳಲ್ಲಿ ಆಳವಾದ ಪ್ರಭಾವ ಬೀರುವ ಸಾಮರ್ಥ್ಯ ಅವನಿಗಿದೆ ಎಂಬುದಾಗಿ ಭಾವಿಸಿಕೊಳ್ಳಬಹುದು. ಮೊದಲನೆಯದಾಗಿ ಒಬ್ಬ ವ್ಯಕ್ತಿ ನಿರ್ವಹಿಸಿದ ಕಾರ್ಯ ಮತ್ತು ಗಳಿಸಿದ ಸಾಧನೆಗಳು ಅನೇಕ ವ್ಯಕ್ತಿಗಳಿಗೆ ದೃಷ್ಟಾಂತವಾಗಿ ಒಂದು ಸತ್ಸಂಪ್ರದಾಯದ ಸೃಷ್ಟಿಗೆ ಕಾರಣವಾಗುತ್ತವೆ; ಉದಾಹರಣೆಗೆ, ಕಲೆ, ವಿಜ್ಞಾನ, ಮತಧರ್ಮ ಹಾಗೂ ಔದ್ಯೋಗಿಕ ವಿಚಾರಗಳಲ್ಲಿ ಈ ತರಹದ ಪರಂಪರೆಗಳನ್ನು ಪದೇ ಪದೇ ಕಾಣಬಹುದು. ಜಕಣಾಚಾರ್ಯ, ಆರ್ಯಭಟ, ರಾಫೇಎಲ್ ಮುಂತಾದವರು ತಮ್ಮದೇ ಆದ ಅದ್ವಿತೀಯ ವಿಜ್ಞಾನ ಹಾಗೂ ಕಲಾ ಪರಂಪರೆಯನ್ನು ಸೃಷ್ಟಿಸಿ ಮುಂದಿನ ಪೀಳಿಗೆಗಳಿಗೆ ಅತ್ಯಮೂಲ್ಯ ಕಾಣಿಕೆಯಾಗಿ ಬಿಟ್ಟುಹೋಗಿದ್ದಾರೆ. ಎರಡನೆಯದಾಗಿ, ವ್ಯಕ್ತಿಗೆ ಜನರಿಗೆ ಅಪ್ಪಣೆಗಳನ್ನು ವಿಧಿಸಿ, ಅವರ ಕಾರ್ಯಗಳನ್ನೆಲ್ಲಾ ನಿರ್ದೇಶಿಸುವ ಅಧಿಕಾರವಿದ್ದಾಗ ಅವನ ಪ್ರಭಾವ ಬಲವಾಗಿರುತ್ತದೆ. ಉದಾಹರಣೆಗೆ, ರಾಜ್ಯ, ಸೇನೆ ಅಥವಾ ಚರ್ಚ್‌ನ ಮುಖ್ಯಸ್ಥನಿಗೆ ಈ ಅಧಿಕಾರವಿರುತ್ತದೆ. ಹೀಗೆ ಒಬ್ಬ ಮಾನವ ವ್ಯಕ್ತಿಯ ಜೀವನದಲ್ಲಿ ನಡೆದ ಘಟನೆಗಳು ಬಹು ಮುಖ್ಯವಾದ ಮಾಹಿತಿಗಳಾಗುತ್ತವೆ. ಸಂಕ್ಷೇಪದಲ್ಲಿ, ಸಾಂಶ್ಲೇಷಿಕ ಕಾರ್ಯ ರೀತಿಯಲ್ಲಿ ಒಂದಾಗಿರುವ ವಾಸ್ತವಾಂಶಗಳ ಸಂಕಲನದ ಕೆಲಸವು ಕ್ರಮಬದ್ಧವಾಗಿ ಸಂಬಂಧಪಟ್ಟಿರುವ ದತ್ತಾಂಶಗಳನ್ನು ಒಟ್ಟುಗೂಡಿಸಿ ಅತ್ಯಂತ ಮುಖ್ಯವಾದ ಚಟುವಟಿಕೆಯಾಗಿರುವ ಮಾಹಿತಿಗಳ ಅರ್ಥವಿವರಣಾ ಕಾರ್ಯವನ್ನು ಸುಲಭಗೊಳಿಸುತ್ತದೆ.

### 10.2.3 ರಚನಾತ್ಮಕ ತರ್ಕ

ವಾಸ್ತವಾಂಶಗಳ ಸಂಕಲನದ ನಂತರ ಸಾಂಶ್ಲೇಷಿಕ ಕಾರ್ಯ ರೀತಿಯಲ್ಲಿ ಅವಶ್ಯಕವಾದ ಅನುಸರಿಸಬೇಕಾದ ಕಾರ್ಯಕ್ರಮವೇ ರಚನಾತ್ಮಕ ತರ್ಕ. ಸಂಶೋಧನಾ ಪಥದಲ್ಲಿ ತಲೆದೋರುವ ತೆರಪುಗಳನ್ನು ತುಂಬಿ, ಕಂದಕಗಳನ್ನು ದಾಟಿ ಮುಂದುವರಿಯಲು ಸಹಾಯ ಮಾಡುವುದೇ ಇದರ ಪ್ರಧಾನ ಗುರಿ. ವಿಭಿನ್ನ ಮೂಲಾಧಾರಗಳಲ್ಲಿ ಸಿಗುವ ಐತಿಹಾಸಿಕ ವಿಷಯ ಸಾಮಗ್ರಿಗಳೆಂಬ ನಿಧಿಗಳು ಎಲ್ಲಾ ಅಂಶಗಳನ್ನು ಸರಿಯಾಗಿ ವಿವರಿಸುವುದಕ್ಕೆ ಸಾಕಾಗುವುದಿಲ್ಲ. ಅನ್ವೇಷಕನು ತಾನೇ ಪ್ರತ್ಯಕ್ಷದರ್ಶಿಯಾಗಿದ್ದರೂ ತನ್ನ ಕಣ್ಣುಗಳ ಎದುರಿಗೆ ನಡೆದ ಘಟನೆಗಳನ್ನು ಸಂಪೂರ್ಣವಾಗಿ ವರ್ಣಿಸುವುದಕ್ಕೆ ಬೇಕಾಗಿರುವ ಎಲ್ಲಾ ಮಾಹಿತಿಗಳು ತನ್ನ ಕೈಯಲ್ಲಿವೆ ಎಂದು ಖಚಿತವಾಗಿ ಹೇಳಲಾರನು. ಒಂದು ಖೂನಿಯಾದಾಗ ಅಥವಾ ಗಾಂಧಿಯವರಂಥ ಮಹಾತ್ಮರ ಹತ್ಯೆ ಅಥವಾ ಜಾನ್ ಎಫ್ ಕೆನಡಿಯವರಂತಹ ಮಹಾವ್ಯಕ್ತಿಗಳ ಕೊಲೆಯಾದಾಗ ಅತ್ಯಂತ

ಪ್ರಬಲವಾಗಿರುವ ನ್ಯಾಯಾಂಗ ಆಯೋಗಕ್ಕೂ ಈ ತರಹದ ಮಹಾದುರ್ಘಟನೆಗೆ ಸಂಬಂಧಪಟ್ಟಿರುವ ಎಲ್ಲಾ ಮಾಹಿತಿಗಳನ್ನು ಪತ್ತೆಹಚ್ಚಿ ನಿರ್ಣಯಿಸುವುದು ಅತ್ಯಂತ ಕಷ್ಟವಾಗುತ್ತದೆ. ಆ ಅತ್ಯಂತ ದುರದೃಷ್ಟಕರ ಘಟನೆಯ ಅನೇಕ ಮುಖಗಳು ರಹಸ್ಯದ ಮುಸುಕಿನಲ್ಲಿ ಮುಚ್ಚಿಹೋಗಿರುತ್ತವೆ. ಆ ಕತ್ತಲೆಯನ್ನು ಭೇದಿಸಿ, ಅವುಗಳನ್ನೆಲ್ಲಾ ಬೆಳಕಿಗೆ ಎಳೆದು ತರುವುದು ಅತ್ಯಂತ ದುಷ್ಕರವಾದ ಕಾರ್ಯ. ಇತ್ತೀಚೆಗೆ ನಡೆದ ಘಟನೆಯ ಬಗ್ಗೆ ಸಂಪೂರ್ಣವಾಗಿ ಸಂಶೋಧನೆ ನಡೆಸುವುದು ಇಷ್ಟೊಂದು ಕಷ್ಟಕರವಾದ ಕೆಲಸವಾದರೆ ಹಿಂದೆ ಯಾವಾಗಲೋ ಸಂಭವಿಸಿದ ಸಂಗತಿಗಳ ಬಗ್ಗೆ ಪರಿಶೀಲನೆ ಮಾಡುವುದು ಇನ್ನೆಷ್ಟು ದುಷ್ಕರವಾದ ಕಾರ್ಯ ಎಂಬುದನ್ನು ಯಾರದರೂ ಊಹಿಸಿಕೊಳ್ಳಬಹುದು. ಕಾಲದ ಅಂತರ ಹೆಚ್ಚಿದಂತೆ ಸಮಸ್ಯೆ ಇನ್ನೂ ಸಂಕೀರ್ಣವಾಗಿ ದಾರಿ ಕಾಣದಂತೆ ತೊಂದರೆಪಡಿಸುವ ಸಂದೇಹಗಳ ಮಂಜನ್ನು ಸಂಪೂರ್ಣವಾಗಿ ಹೊಡೆದೋಡಿಸುವ ಜ್ಞಾನದ ಬೆಳಕನ್ನು ಮತ್ತು ಮಿದುಳಿನಲ್ಲಿ ಅಲೆಗಳಂತೆ ಮೇಲೆ ಮೇಲೆ ಎದ್ದುಬಂದು ಸತಾಯಿಸುವ ಪ್ರಶ್ನೆಗಳ ದಾಳಿಯನ್ನು ನಿವಾರಿಸುವ ಉತ್ತರಗಳನ್ನು ಪಡೆಯುವುದು ಅಸಾಧ್ಯವಾಗುತ್ತದೆ. ಎಷ್ಟೇ ನಿಷ್ಠೆಯಿಂದ ನಿರಂತರವಾಗಿ ಪರಿಶ್ರಮವನ್ನು ಮಾಡಿದರೂ ಅನೇಕ ಸಲ ಆ ಸಮಸ್ಯೆಯ ಮೇಲೆ ಬೆಳಕನ್ನು ಚೆಲ್ಲುವಂತಹ ವಿಷಯ ಸಾಮಗ್ರಿಗಳನ್ನು ಪಡೆಯುವುದು ಬಹಳ ಕಷ್ಟವಾಗುತ್ತದೆ. ಇತರ ವಿಜ್ಞಾನಗಳಲ್ಲಿ ಈ ತರಹದ ಕ್ಲಿಷ್ಟ ಸಮಸ್ಯೆ ತಲೆದೋರಿದಾಗ ಪ್ರಯೋಗಗಳನ್ನು ಪುನರಾವೃತ್ತಿ ಮಾಡುವುದರ ಮೂಲಕ ಹಾಗೂ ನೂತನ ಪರಿಶೀಲನೆಯ ಮೂಲಕ ಇದನ್ನು ಪರಿಹರಿಸಲು ಸಾಧ್ಯವಾಗುತ್ತದೆ. ಆದರೆ ಐತಿಹಾಸಿಕ ವಾಸ್ತವಾಂಶಗಳ ಸ್ವರೂಪ ಸಂಪೂರ್ಣವಾಗಿ ವಿಭಿನ್ನವಾಗಿರುವುದರಿಂದ ಚರಿತ್ರೆಯಲ್ಲಿ ಈ ಕ್ರಮವನ್ನು ಅನುಸರಿಸುವುದು ಸಾಧ್ಯವಿಲ್ಲ. ಆದರೆ ಈ ತೆರನಾದ ತುರ್ತು ಪರಿಸ್ಥಿತಿಗೆ ಸಂಕಟ ಸಮಯಕ್ಕೆ ಒಂದು ಸಹಾಯಕ ಊರುಗೋಲಿದೆ; ಈ ಸಮಸ್ಯೆಗೆ ಒಂದು ಅನುಕೂಲಕರವಾದ ಪರಿಹಾರ ಕ್ರಮವಿದೆ; ಅದೇ ರಚನಾತ್ಮಕ ತರ್ಕ ಕ್ರಮ.

ರಚನಾತ್ಮಕ ತರ್ಕ ಎಂದರೆ ಸಂಶೋಧಕನು ಲಭ್ಯವಿರುವ ಎಲ್ಲಾ ಮೂಲಾಧಾರಗಳನ್ನು ಆದ್ಯಮತವಾಗಿ ಪರಿಶೀಲಿಸಿದ ನಂತರವೂ ತಿಳಿಯದೇ ಅಜ್ಞಾತವಾಗಿರುವ ಹಲವಾರು ವಿಷಯಗಳನ್ನು ಅರ್ಥಮಾಡಿಕೊಳ್ಳಲು ಅವನಿಗೆ ಸಹಾಯ ಮಾಡುವ ಪ್ರಕ್ರಿಯೆ ಎಂದು ಹೇಳಬಹುದು. ಇಲ್ಲಿ ಅವನು ತನ್ನ ಹಿಡಿತಕ್ಕೆ ಸಿಕ್ಕದೆ ಕತ್ತಲಿನಲ್ಲಿ ಅಡಗಿಕೊಂಡಿರುವ ಅಂಶಗಳನ್ನು ಬೆಳಕಿಗೆ ತರುವುದಕ್ಕಾಗಿ ನಿಗಮನ ತರ್ಕ ಪದ್ಧತಿಯನ್ನು ಸಹಾಯಕ ಸಾಧನವಾಗಿ ಬಳಸಿಕೊಳ್ಳುತ್ತಾನೆ. ಇನ್ನಾವ ಕ್ರಮದಿಂದಲೂ ಅವುಗಳನ್ನು ಪ್ರಕಾಶಪಡಿಸುವುದು ಅಷ್ಟು ಸುಲಭಸಾಧ್ಯವಾಗುವುದಿಲ್ಲ. ಅವನು ದಾಖಲೆಗಳ ಮೂಲಕ ತನಗೆ ಚೆನ್ನಾಗಿ ತಿಳಿದುಬಂದಿರುವ ಮಾಹಿತಿಗಳಿಂದ ಆರಂಭಿಸಿ ಮುಂದುವರಿದು ಅವುಗಳಿಂದ ಪ್ರಮಾಣಬದ್ಧವಾದ ತೀರ್ಮಾನಗಳಿಗೆ ಬರುತ್ತಾನೆ ಮತ್ತು ಕೊನೆಯಲ್ಲಿ ಹೊಸ ವಾಸ್ತವಾಂಶಗಳನ್ನು ಕಂಡುಹಿಡಿಯುತ್ತಾನೆ. ಇತರ ಎಲ್ಲಾ ವಿಧಾನಗಳ ಬಳಕೆಯಿಂದ ಸಹಾಯವಾಗದೇ ಹೋದಾಗ ಅವನು ಸಪ್ರಮಾಣವಾಗಿರುವ ತರ್ಕಸಿದ್ಧ ಕ್ರಮವನ್ನು ಬಳಸುತ್ತಾನೆ. ಅವನ ತರ್ಕ ಸಮಂಜಸವಾಗಿದ್ದರೆ, ಅವನು ಗಳಿಸುವ ಜ್ಞಾನವೂ ಸಪ್ರಮಾಣವಾಗಿರುತ್ತದೆ ಮತ್ತು ಅವನು ಉಪಯೋಗಿಸುವ ವಿಧಾನವೂ ಯುಕ್ತವಾದುದಾಗಿರುತ್ತದೆ. ಈ ತರ್ಕವು ತರ್ಕಶಾಸ್ತ್ರಜ್ಞನು ಬಳಸುವ ಕ್ರಮಕ್ಕೆ ಸರಿಸಮವಾಗಿರುತ್ತದೆ ಮತ್ತು ಆ ಶಾಸ್ತ್ರಜ್ಞನು ಉಪಯೋಗಿಸುವ ಅಧ್ಯಯನ ಕಾರ್ಯ ರೀತಿಯನ್ನೇ ಅನುಸರಿಸಲಾಗುತ್ತದೆ. ಬೇರೆ ಮಾತುಗಳಲ್ಲಿ ಹೇಳಬೇಕಾದರೆ ಇದು ನಿಗಮನ

ವಿಧಾನ; ಇದರ ಮೂಲಕ ಎರಡು ಸಮಂಜಸವಾದ ಆಧಾರ ಪ್ರತಿಜ್ಞೆಗಳಿಂದ ಸಪ್ರಮಾಣವಾದ ಊಹೆಯನ್ನು ಮಾಡಲಾಗುತ್ತದೆ. ಇದರಲ್ಲಿ ಒಂದು ಆಧಾರ ಪ್ರತಿಜ್ಞೆಯು ಸಾಮಾನ್ಯ ಸ್ವರೂಪದಿಂದ ಕೂಡಿ ಸಾರ್ವತ್ರಿಕವಾಗಿ ಸತ್ಯವಾಗಿರುತ್ತದೆ ಹಾಗೂ ಆರಿಸಿಕೊಂಡಿರುವ ವಿಷಯಕ್ಕೆ ಸುಸಂಬದ್ಧವಾಗಿರುತ್ತದೆ. ಇನ್ನೊಂದು ಆಧಾರ ಪ್ರತಿಜ್ಞೆಯು ವಿಶಿಷ್ಟ ತರ್ಕ ಪ್ರಮೇಯವಾಗಿರುತ್ತದೆ. ಸಾರ್ವತ್ರಿಕವಾದ ಹಾಗೂ ವಿಶಿಷ್ಟವಾಗಿರುವ ತರ್ಕಪ್ರಮೇಯಗಳ ನಡುವೆ ಆಪ್ತವಾದ ಹಾಗೂ ಬೇರ್ಪಡಿಸಲಾಗದ ಸಂಬಂಧವಿರುತ್ತದೆ. ಇದರಿಂದ ತಾರ್ಕಿಕ ಆಧಾರಗಳ ಮೇಲೆ ಸಪ್ರಮಾಣವಾದ ನಿರ್ಣಯಗಳಿಗೆ ಬರುವುದು ಸಾಧ್ಯ.

ಮೊದಲನೆಯದಾಗಿ, ತರ್ಕವನ್ನು ಒಂದು ದಾಖಲೆಯ ವಿಶ್ಲೇಷಣೆಯೊಂದಿಗೆ ಸೇರಿಸಬಾರದು. ವಿಶ್ಲೇಷಣೆಯು ತರ್ಕಕ್ಕಿಂತ ಸಂಪೂರ್ಣವಾಗಿ ವಿಭಿನ್ನವಾದುದು ಮತ್ತು ಈ ಎರಡು ಕ್ರಮಗಳನ್ನು ಪ್ರತ್ಯೇಕಿಸಲಾಗದಂತೆ ಕಲಸು ಮೆಲಸು ಮಾಡಬಾರದು. ಕಾರಣ ವಿಶ್ಲೇಷಣೆಯು ತೊಡಕಾಗಿರುವ ಎಲ್ಲಾ ವಿವಾದಾಂಶಗಳನ್ನು ಸಂಪೂರ್ಣವಾಗಿ ಚರ್ಚಿಸಿ ಅವುಗಳ ಮೇಲೆ ಬೆಳಕನ್ನು ಬೀರುವ ರೀತಿಯಲ್ಲಿ ಒಂದು ನಿರ್ದಿಷ್ಟ ಘಟನೆಯ ಬಗ್ಗೆ ಸ್ವಚ್ಛ ಹಾಗೂ ತಾರ್ಕಿಕವಾದ ಬಗೆಯಲ್ಲಿ ಅರ್ಥವಿವರಣೆಯನ್ನು ನೀಡುವ ಕ್ರಮವಾಗಿರುತ್ತದೆ. ಈ ಕ್ರಮದಲ್ಲಿ, ಪ್ರಕಾಶಪಡಿಸಲಾದ ಭಾವನೆಗಳ ಸಪ್ರಮಾಣತೆಗೆ ಅನುಬಂಧವಾಗಿ ಸೇರಿಸುವುದಕ್ಕೆ ಯಾವ ಬಾಹ್ಯ ಅಭಿಕರಣದ ಸಹಾಯವನ್ನೂ ಕೋರುವುದಿಲ್ಲ. ಇದು ಕೇವಲ ಒಂದು ನಿರ್ದಿಷ್ಟ ತರ್ಕ ಪ್ರಮೇಯವನ್ನು ಪರೀಕ್ಷಿಸಿ, ವ್ಯಾಖ್ಯೆ ಮಾಡಿ, ಗುಣದೋಷಗಳನ್ನು ವಿಮರ್ಶಿಸಿ, ವಿವರಿಸಿ, ಅದರ ಮೌಲ್ಯವನ್ನು ನಿರ್ಣಯಿಸುವ ಸಾಮರ್ಥ್ಯ ಮಾತ್ರವಾಗಿರುತ್ತದೆ ಅಷ್ಟೇ; ನೂತನ ಜ್ಞಾನವನ್ನು ಅಥವಾ ವಾಸ್ತವಾಂಶಗಳನ್ನು ಪಡೆಯುವ ಪ್ರಯತ್ನವಾಗಿರುವುದಿಲ್ಲ. ಇಲ್ಲಿ ಸಮಗ್ರ ಚರ್ಚೆಯು ತಿಳಿದಿರುವ ವಾಸ್ತವಾಂಶಘಳ ಮೇಲೆ ಆಧಾರಿತವಾಗಿರುತ್ತದೆ. ಅವುಗಳ ಸುತ್ತ ಸುತ್ತುತ್ತಿರುತ್ತದೆ ಮತ್ತು ಸಂಶೋಧಕನಲ್ಲಿ ಸುಪ್ತವಾಗಿರುವ ಅವಲೋಕನಾ ಶಕ್ತಿ ಮತ್ತು ವಿಶದೀಕರಿಸುವ ಹಾಗೂ ಸೂಕ್ಷ್ಮವಾಗಿ ನಿರೂಪಿಸುವ ಸಾಮರ್ಥ್ಯವನ್ನು ಸಂಪೂರ್ಣವಾಗಿ ಪ್ರಕಾಶಕ್ಕೆ ತಂದು ಬೆಳೆಸಲು ಅನುವು ಮಾಡಿಕೊಡಲಾಗುತ್ತದೆ. ಆದರೆ ತರ್ಕ ಕ್ರಮದಲ್ಲಿ ಸಂಪೂರ್ಣವಾಗಿ ಬೇರೆಯಾಗಿರುವ ಕಾರ್ಯ ರೀತಿಯನ್ನು ಅನುಸರಿಸಲಾಗುತ್ತದೆ. ಇಲ್ಲಿ ಸಂಶೋಧಕನು ತನ್ನಮಹಾಪ್ರಬಂಧವೆಂಬ ರಚನೆಗೆ ಹೊಸ ರಕ್ತವನ್ನು ಇತರ ಮೂಲಾಧಾರಗಳಿಂದ ತೆಗೆದು ಒಳಹೋಗಿಸುತ್ತಾನೆ; ತನ್ನ ದಾಖಲೆಗಳ ವಲಯಕ್ಕೆ ಸಂಬಂಧಪಡದೆ ಪರಕೀಯವಾಗಿರುವ ಮೂಲಾಧಾರಗಳ ಬೆಳಕಿನಲ್ಲಿ ಚರ್ಚಿಸಿ, ಅನುಮಾನಿಸಲು ಯತ್ನಿಸುತ್ತಾನೆ ಮತ್ತು ತನ್ನಲ್ಲಿ ಇರದೇ ಇರುವ ವಿಷಯಗಲನ್ನು ಇತರರಿಂದ ಎರವಲಾಗಿ ಪಡೆಯುತ್ತಾನೆ. ಹೀಗೆ ವಿಶ್ಲೇಷಣೆ ಹಾಗೂ ತರ್ಕ ಕ್ರಮಗಳ ನಡುವೆ ಸ್ಪಷ್ಟವಾಗಿರುವ ಭೇದವಿದೆ.

ಎರಡನೆಯದಾಗಿ, ಅನ್ವೇಷಕನು ಒಂದು ಗ್ರಂಥದ ಕರ್ತೃವು ಹೇಳದೆ ಇರುವ ವಿಷಯಗಳನ್ನು ಪಾಠಗ್ರಂಥಕ್ಕೆ ಸೇರಿಸಬಾರದು. ಅವನು ತರ್ಕಕ್ರಮದಲ್ಲಿ ದಾಖಲೆಗಳಲ್ಲಿ ಸ್ಪಷ್ಟವಾಗಿ ನಿರೂಪಿಸಲಾಗಿರುವ ಸಾಮಾನ್ಯ ತತ್ತ್ವವನ್ನು ಬಳಸಬೇಕೆಂಬುದನ್ನು ಒಪ್ಪಿಕೊಂಡರೂ ತಾನು ಯಾವ ನಿರ್ದಿಷ್ಟ ತರ್ಕ ಪ್ರಮೇಯದ ಮೇಲೆ ಬೆಳಕನ್ನು ಬೀರಲು ಯತ್ನಿಸುತ್ತಿರುವನೋ ಅದು ತನ್ನ ಪಾಠಗ್ರಂಥಗಳ ಎಲ್ಲೆಗಳೊಳಗೆ ಇರುವಂತಹುದೇ ಎಂಬುದನ್ನು ಗಮನಿಸಬೇಕು ಮತ್ತು ಪಾಠಗ್ರಂಥಗಳಲ್ಲಿ ವಿವರಿಸುವ ವಿಷಯಗಳನ್ನು ತನ್ನ

ಅನುಕೂಲಕ್ಕೆ ತಕ್ಕಂತೆ ತಿರಿಚಿ, ಮಾರ್ಪಡಿಸಿ, ನಿರೂಪಿಸಬಾರದು.

ಮೂರನೆಯದಾಗಿ, ದಾಖಲೆಯ ನೇರ ಪರಿಶೀಲನೆಯಿಂದ ಪಡೆಯಲಾದ ಮಾಹಿತಿಗಳನ್ನು ತರ್ಕ ಕ್ರಮದ ಕಾರಣ ಬಂದ ಪರಿಣಾಮಗಳೊಂದಿಗೆ ಕಲಸು ಮೆಲಸು ಮಾಡಿ ಅವ್ಯವಸ್ಥಿತಗೊಳಿಸಬಾರದು. ಹೇಗೆ ತರ್ಕಕ್ರಮ ಹಾಗೂ ವಿಶ್ಲೇಷಣಾ ವಿಧಾನವನ್ನು ಮಿಶ್ರ ಮಾಡಕೂಡದೋ ಹಾಗೆಯೇ ಮೂಲಾಧಾರ ಕೃತಿಗಳಲ್ಲಿಂದ ಬರುವ ವಿಷಯವಾಹಿನಿಗಳನ್ನು ತರ್ಕ ಕ್ರಮದಿಂದ ಕಂಡುಹಿಡಿಯಲಾದ ವಿಚಾರಗಳೆಂಬುದಾಗಿ ಎಣಿಸಬಾರದು. ತರ್ಕಕ್ರಮದ ಮೂಲಕ ಒಂದು ವಿಷಯವನ್ನು ಸಮರ್ಥಿಸಿದಾಗ ಬಳಸಲಾದ ವಿಧಾನವನ್ನು ಪ್ರಕಾಶಗೊಳಿಸಬೇಕು.

ನಾಲ್ಕನೆಯದಾಗಿ ಅನಭಿಜ್ಞ ಅಥವಾ ಅಜಾಗ್ರತ ತರ್ಕಕ್ರಮವನ್ನು ಉಪಯೋಗಿಸಬಾರದು. ಕಾರಣ ಅದರಲ್ಲಿ ತಪ್ಪುಗಳಾಗುವ ಸಂಭವಗಳು ಅಧಿಕವಾಗಿರುತ್ತವೆ. ತರ್ಕವು ಕೊನೆಯ ಅಸ್ತ್ರ; ಪ್ರಜ್ಞಾಪೂರ್ವಕವಾಗಿ ಎಲ್ಲಾ ಶಿಷ್ಟಾಚಾರದ ನಿಶ್ಚಯ ನಿಯಮ ಹಾಗೂ ಆಟದ ನಿಯಮಗಳನ್ನು ಅನುಸರಿಸಿ ನಡೆಸಬೇಕಾದ ಅಂತಿಮ ಯುದ್ಧ. ತಾರತಮ್ಯವಿಲ್ಲದೆ ಬಳಸಿದರೆ ಇದು ಸ್ಪಷ್ಟವಾಗಿ ವಿವರಿಸಬೇಕಾದ ಪ್ರತಿ ಅಂಶವನ್ನೂ ನಿರೂಪಿಸುವ ಸುಲಭ ವಿಧಾನವಾಗಿ ಹೋಗಿ ಅದಕ್ಕೆ ಬೆಲೆ ಇಲ್ಲದೆ ಹೋಗುತ್ತದೆ. ಎಲ್ಲಾ ದಾಖಲೆಗಳನ್ನು ಆಳವಾಗಿ ಅನ್ವೇಷಿಸಿದರೂ, ಉಂಟಾಗಿರುವ ಸಂದೇಹವನ್ನು ನಿವಾರಿಸುವುದು ಮತ್ತು ತಲೆ ಎತ್ತಿಕೊಂಡಿರುವ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕೊಡುವುದು ಸಾಧ್ಯವಾಗದೇ ಹೋದಾಗ ಸಂಶೋಧಕನು ಈ ಕ್ರಮವನ್ನು ಅನುಸರಿಸಿ ಪ್ರತಿವಾದವನ್ನು ತಾರ್ಕಿಕ ರೂಪದಲ್ಲಿ ನಿರೂಪಿಸಬೇಕು.

ಐದನೆಯದಾಗಿ, ತರ್ಕಕ್ರಮವನ್ನು ಅನುಸರಿಸಿ ವಿಚಾರ ಮಾಡುವಾಗ ಸಂದೇಹವೇನಾದರೂ ನಿವಾರಣೆಯಾಗದೆ ಉಳಿದರೆ, ಸಂಶೋಧಕನು ಯಾವ ನಿರ್ಣಯಕ್ಕೂ ಬರಬಾರದು. ಒಂದು ನ್ಯಾಯಾಲಯದಲ್ಲಿ ನ್ಯಾಯಾಧಿಪತಿಯು ಒಬ್ಬ ಖೈದಿಗೆ ಮರಣದಂಡನೆಯನ್ನು ವಿಧಿಸುವ ಮೊದಲು ವಹಿಸುವ ಮುನ್ನೆಚ್ಚರಿಕೆಯನ್ನೇ ಇವನೂ ವಹಿಸಬೇಕು. ಆ ಖೈದಿಯು ನಿರಪರಾಧಿಯಾಗಿರಬಹುದು ಎಂಬುದಾಗಿ ಸ್ವಲ್ಪ ಸಂದೇಹದ ಸುಳಿಯು ನ್ಯಾಯಾಧೀಶನ ಮನಸ್ಸಿನಲ್ಲಿ ಸುಳಿದರೂ ಸಾಕು, ಅವನು ಆ ತಪ್ಪಿತಸ್ಥನಿಗೆ ಆ ಸಂದೇಹದ ಲಾಭ ಸಿಗುವಂತೆ ಮಾಡಿ ಅವನ್ನನು ಖುಲಾಸೆ ಮಾಡುತ್ತಾನೆ. ಅದೇ ರೀತಿ ಸಂಶೋಧಕನ ಮನಸ್ಸಿನಲ್ಲಿ ತನ್ನ ತರ್ಕ ಸರಿಯಾಗಿಲ್ಲದಿರಬಹುದು ಎಂಬ ಅತ್ಯಲ್ಪ ಶಂಕೆ ಉಂಟಾದರೂ ಅವನು ಆ ತರಹದ ಸನ್ನಿವೇಶದಲ್ಲಿ ಯಾವ ತೀರ್ಮಾನಕ್ಕೂ ಬರಬಾರದು.

ಆರನೆಯದಾಗಿ, ಸಂಶೋಧಕನು ಕೇವಲ ಬುಡವಿಲ್ಲದ ಕಲ್ಪನೆಯೇ ತನ್ನ ತರ್ಕ ಪ್ರಮೇಯಕ್ಕೆ ಆಧಾರವಾಗಿದ್ದರೆ ಯಾವ ತರ್ಕವನ್ನೂ ಮಾಡಬಾರದು ಮತ್ತು ಅಸ್ತಿತ್ವದಲ್ಲಿಲ್ಲದೇ ಇರುವುದನ್ನು ಹುಟ್ಟಿಸಿ ಹೇಳಬಾರದು. ತರ್ಕಕ್ಕೆ ಆಧಾರವಾಗಿರುವ ಸಾಮಾನ್ಯ ತತ್ತ್ವವು ನಿರ್ವಿವಾದವಾಗಿ ಸತ್ಯವಾಗಿರಬೇಕು. ಅನ್ವೇಷಕನು ಮನಃಕಲ್ಪನೆಯ ಹೇಳಿಕೆಯನ್ನು ಅವಲಂಬಿಸಬಾರದು. ತೊಂದರೆಯು ಎದುರಾದಾಗ, ಅವನು ತನ್ನ ಆಧಾರವಿಲ್ಲದ ಕಲ್ಪನೆಯನ್ನೇ ಅವಲಂಬಿಸಿ ವಾದಸರಣಿಯನ್ನು ಮಂಡಿಸಬಹುದು, ಆದರೆ ಈ ತರಹದ

ಆಕರ್ಷಕವಾಗಿರುವ ಆದರೆ ಅಪಾಯಕಾರಿಯಾಗಿರುವ ಪ್ರಲೋಭನಕ್ಕೆ ಒಳಗಾಗದೆ ಅದನ್ನು ತಡೆಗಟ್ಟಿ ಅಳಿಸಿಹಾಕಬೇಕು ಮತ್ತು ವಿಚಾರಕ್ಕೆಡೆಗೊಡದ ನಂಬಿಕೆಗಳನ್ನು ನಿಸ್ಸಂದೇಹವಾದ ವಿಷಯವಾಗಿರುವಂತೆ ಬದಲಾಯಿಸಿ ಪ್ರತಿಪಾದಿಸಲು ಪ್ರಯತ್ನಿಸಬಾರದು. ಆಧಾರವಿಲ್ಲದ ಕಲ್ಪನೆಯ ಬಗ್ಗೆ ನಿರಂತರವಾಗಿ ಪರ್ಯಾಲೋಚಿಸುತ್ತಿದ್ದರೆ ಅವುಗಳ ಬಗ್ಗೆ ಸರಿಯಾಗಿ ತಿಳಿದು, ಹೇಗೆ ಅವುಗಳು ಮನಸ್ಸಿನಲ್ಲಿ ಬಲವಾಗಿ ಬೇರೂರುವ ಪೂರ್ವಾಗ್ರಹಗಳಾಗುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ಸಂಶೋಧನಾ ಪಥದಲ್ಲಿ ತುಂಬಾ ಮುಂದುವರಿದ ಹಂತದಲ್ಲಿ ಈ ದೋಷವನ್ನು ಬೇರುಸಹಿತ ಕಿತ್ತುಹಾಕುವುದು ಅತ್ಯಂತ ಕಷ್ಟವಾಗುವುದರಿಂದ ಅನ್ವೇಷಕನು ಆರಂಭದಲ್ಲೇ ಈ ಮುನ್ನೆಚ್ಚರಿಕೆಯನ್ನು ವಹಿಸಬೇಕು. ಅಂದರೆ ಸಮರ್ಥಿಸಬೇಕಾಗಿರುವ ವಿಷಯವು ಅವನ ಉಪಮಾನಸದಲ್ಲಿ ಮೊದಲೇ ಉಪಸ್ಥಿತವಾಗಿರಬಾರದು. ಕೆಲವೇ ಮೂಲಾಧಾರಗಳ ಬಗ್ಗೆ ದೀರ್ಘವಾಗಿ ಚಿಂತನೆ ನಡೆಸುವವರು ಈ ಆಪತ್ತನ್ನು ಪದೇ ಪದೇ ಎದುರಿಸಬೇಕಾಗುತ್ತದೆ. ಆದ್ದರಿಂದ ಸಾಧ್ಯವಾದಷ್ಟರ ಮಟ್ಟಿಗೆ ಸಂಶೋಧಕನ ಅನ್ವೇಷಣೆಗೆ ಅಗತ್ಯವಾಗಿರುವ ಮೂಲಾಧಾರ ಕೃತಿಗಳ ಹರವು ಅತ್ಯಂತ ವಿಶಾಲವಾಗಿರಬೇಕಾದುದು ಅತ್ಯಾವಶ್ಯಕ. ಇದಕ್ಕಾಗಿ ಅವನು ದಾಖಲೆಗಳ ಅತ್ಯಂತ ವ್ಯಾಪಕ ಕ್ಷೇತ್ರದ ಒಳಹೊಕ್ಕು ಪರಿಶೋಧನೆಗಳನ್ನು ನಡೆಸಲು ಪ್ರಜ್ಞಾಪೂರ್ವಕವಾಗಿ ಹಾಗೂ ಪ್ರಾಮಾಣಿಕವಾಗಿ ಪ್ರಯತ್ನಗಳನ್ನು ಮಾಡಬೇಕು.

### 10.2.4 ತರ್ಕ ಕ್ರಮದ ಬಗೆಗಳು

*1) ನಕಾರಾತ್ಮಕ ತರ್ಕ*

ತರ್ಕ ಕ್ರಮದಲ್ಲಿ ನಕಾರಾತ್ಮಕ ತರ್ಕ ಮತ್ತು ನಿಶ್ಚಯಾತ್ಮಕ ತರ್ಕ ಎಂಬ ಎರಡು ಬಗೆಗಳಿವೆ. ತುಲನಾತ್ಮಕವಾಗಿ ಮೌನವಾಗಿ ವಾದಿಸುವುದು ಎಂಬುದಾಗಿ ಸಹ ಕರೆಯಲಾದ ನಕಾರಾತ್ಮಕ ತರ್ಕವು ನಿಶ್ಚಯಾತ್ಮಕ ತರ್ಕಕ್ಕಿಂತ ಹೆಚ್ಚು ಸರಳವಾದ ಪ್ರಕ್ರಿಯೆಯಾಗಿದೆ. ಇಲ್ಲಿ ಸಂಶೋಧಕನು ಒಂದು ಘಟನೆ ಅಥವಾ ವಿಷಯಗಳನ್ನು ಯಾವ ದಾಖಲೆಗಳಲ್ಲೂ ಪ್ರಸ್ತಾಪಿಸಿದೇ ಇದ್ದರೆ, ಅವುಗಳ ಬಗ್ಗೆ ಯಾವ ಸೂಚನೆಯೂ ಇಲ್ಲದೇ ಹೋದರೆ ಆ ತರಹದ ಘಟನೆ ಸಂಭವಿಸಲೇ ಇಲ್ಲ ಅಥವ ಆ ಬಗೆಯ ವಿಷಯಗಳು ಇರಲೇ ಇಲ್ಲ ಎಂಬುದಾಗಿ ಊಹಿಸುತ್ತಾನೆ. ಅನ್ವೇಷಣಾಯಾನದಲ್ಲಿ ಅವನಿಗೆ ಕೆಲವು ನಿರ್ದಿಷ್ಟ ಪರಿಸ್ಥಿತಿಗಳು ಎದುರಾದಾಗ ಅವನು ಒಂದು ಸಂಗತಿಯು ಯಾವ ದಾಖಲೆಯಲ್ಲೂ ಎಲ್ಲೂ ಪ್ರಸ್ತಾಪಿತವಾಗದೇ ಇರುವುದರಿಂದ ಅದು ಅಸ್ತಿತ್ವದಲ್ಲಿರಲಿಲ್ಲ, ನಡೆಯಿತೆಂಬುದಾಗಿ ಹೇಳಲಾದ ಘಟನೆಯು ನಿಜವಾಗಿ ಸಂಭವಿಸಿದ್ದರೆ ಅದರ ಬಗ್ಗೆ ಉಲ್ಲೇಖಗಳನ್ನು ಒಳಗೊಂಡಿದ್ದಂತಹ ಯಾವುದಾದರೂ ದಾಖಲೆ ಇದ್ದೇ ಇರುತ್ತಿದ್ದಿತು ಎಂಬುದಾಗಿ ತರ್ಕಿಸುತ್ತಾನೆ. ಇದು ಒಂದು ನಿರ್ದಿಷ್ಟ ರಸ್ತೆಯಲ್ಲಿ ಅನಿರೀಕ್ಷಿತವಾಗಿ ಬೆಂಕಿ ಹತ್ತಿಕೊಂಡಿದ್ದರೆ ಅಲ್ಲೇ ವಾಸ ಮಾಡುತ್ತಿರುವ ವ್ಯಕ್ತಿಯು ಅದನ್ನು ನೋಡಿಯೇ ಇರುತ್ತಾನೆ. ಅದರ ಬಗ್ಗೆ ಅವನಿಗೆ ಗೊತ್ತಿರುತ್ತದೆ. ಆದರೆ ಅವನು ಬೆಂಕಿ ಹತ್ತಿಕೊಂಡಿತೆಂಬುದಾಗಿ ಹೇಳಲಾದ ಸಮಯದಲ್ಲಿ ಅಲ್ಲೇ ಇದ್ದರೂ ಅದರ ಬಗ್ಗೆ ಅವನಿಗೆ ಏನೇನೂ ತಿಳಿಯದೇ ಇರುವುದರಿಂದ ಈ ಸುದ್ದಿಯು ಸತ್ಯದ ಆಧಾರವೇ ಇಲ್ಲದ ದುರುದ್ದೇಶದಿಂದ ಕೂಡಿರುವ ಅಪಪ್ರಚಾರವಾಗಿದೆ ಎಂಬ ವಾದಕ್ಕೆ ಸರಿಸಮವಾಗಿರುತ್ತದೆ.

ಈ ನಕಾರಾತ್ಮಕ ತರ್ಕಕ್ರಮವನ್ನು ಬಳಸುವಾಗ ಎರಡು ನಿಯಮಗಳನ್ನು ಅನುಸರಿಸಬೇಕು. ಮೊದಲನೆಯದಾಗಿ, ಅನ್ವೇಷಕನು ತಾನು ಸಮರ್ಥಿಸಬೇಕೆಂಬುದಾಗಿ ಬಯಸುವ ಪ್ರತಿ ವಾಸ್ತವಾಂಶವನ್ನು (1) ಅವಲೋಕಿಸಿ, (2) ದಾಖಲು ಮಾಡಿ (3) ಸಂರಕ್ಷಿಸಿಡಲಾಗಿದ್ದಿತು ಎಂಬ ಮೂರು ಅಂಶಗಳನ್ನು ಸಂಪೂರ್ಣವಾಗಿ ತಿಳಿದು ಮನದಟ್ಟುಮಾಡಿಕೊಳ್ಳಬೇಕು. ಅವನು ಮೌನವಾಗಿರುವ ವಾಸ್ತವಾಂಶವನ್ನು ಬಳಸುತ್ತಿರುವುದರಿಂದ, ನಿಜವೆಂಬುದಾಗಿ ನಿರೂಪಿಸಲಾಗಿರುವ ವಿಷಯವನ್ನು ಯಾರೂ ಅವಲೋಕಿಸಿ ಪರೀಕ್ಷಿಸಿರಲಿಲ್ಲ ಎಂಬುದನ್ನು ಒಂದು ವೇಳೆ ಯಾರಾದರೂ ಅದನ್ನು ಅವಲೋಕಿಸಿದ್ದಿದ್ದರೆ ಅದನ್ನು ಖಂಡಿತ ದಾಖಲು ಮಾಡುತ್ತಲೇ ಇರುತ್ತಿದ್ದರು. ಕಾರಣ ಈ ತರಹದ ಸ್ವತಸ್ಸಿದ್ಧ, ಸಂಶಯಾತೀತ ಹಾಗೂ ಗಮನಾರ್ಹವಾಗಿರುವ ಅಂಶವನ್ನು ದಾಖಲೆಗಳಲ್ಲಿ ಉಲ್ಲೇಖಿಸದೇ ಇರುತ್ತಿರಲಿಲ್ಲ. ಖಂಡಿತ ಕಡೆಗಣಿಸುತ್ತಿರಲಿಲ್ಲ ಎಂಬುದನ್ನು; ಮತ್ತು ಅದನ್ನು ಅವಲೋಕಿಸಿ, ದಾಖಲು ಮಾಡಿದ್ದರೆ ನಿಶ್ಚಯವಾಗಿ ಸಂರಕ್ಷಿಸಿಡಲಾಗುತ್ತಿದ್ದಿತು. ಕಾರಣ ನಿಸ್ಸಂದೇಹವಾಗಿ ಅದರ ಸಂರಕ್ಷಣೆಗೆ ಬೇಕಾಗಿದ್ದ ಆದರ್ಶ ಪರಿಸ್ಥಿತಿಗಳಿದ್ದುವು. ಆದ್ದರಿಂದ ಅದು ನಾಶವಾಗಿ ಹೋಗುವ ಸಾಧ್ಯತೆ ಇರಲಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಅನೇಕ ವೇಳೆ ಈ ಎಲ್ಲಾ ಷರತ್ತುಗಳನ್ನು ಸರಿಯಾಗಿ ಪರಿಪಾಲಿಸುವುದು ಬಹಳ ಕಷ್ಟವಾಗುತ್ತದೆ. ಕಾಲವೆಂಬ ನಿಷ್ಠುರ ನಿರಂಕುಶಾಧಿಕಾರಿ ನಡೆಸಿದ ವಿನಾಶಕಾರಕ ಕಾರ್ಯಗಳ ಫಲವಾಗಿ ಹಿಂದೆ ಇದ್ದ ದಾಖಲೆಗಳು ಹಾಳಾಗಿ ಹೋಗಿರಬಹುದು, ಅವಿಚಾರಿಗಳಾಗಿದ್ದ ಅವಲೋಕನಾಕಾರರು ಅಸಡ್ಡೆಯಿಂದ ವಾಸ್ತವಾಂಶಘಳನ್ನು ದಾಖಲು ಮಾಡದೇ ಬಿಟ್ಟಿರಬಹುದು ಮತ್ತು ಅವರು ಸರಿಯಾಗಿ ಅವಲೋಕಿಸದಿರುವಂತೆ ಅವರನ್ನು ನಿರ್ಬಂಧಪಡಿಸಿದ್ದಿರಬಹುದು. ಆದ್ದರಿಂದ ಸಂಶೋಧಕನು ಈ ಬಗೆಯ ತರ್ಕಕ್ರಮವನ್ನು ಬಳಸುವಾಗ ಬಹು ಜಾಗರೂಕತೆಯಿಂದಿರಬೇಕು. ದಾಖಲೆಗಳು ಕಳೆದುಹೋಗಿದ್ದರೆ ಅಥವಾ ಹಾಳಾಗಿ ಹೋಗಿದ್ದರೆ ಅವನು ಯಾವ ತೀರ್ಮಾನಕ್ಕೂ ಬರಲಾರನು. ಈ ರೀತಿಯ ತರ್ಕವು ಪ್ರಾಚೀನ ಅಥವಾ ಮಧ್ಯಕಾಲೀನ ಇತಿಹಾಸದ ಅಧ್ಯಯನದಲ್ಲಿ ಅಷ್ಟು ಉಪಯುಕ್ತವಾಗಿರುವುದಿಲ್ಲ. ಆದರೆ ಆಧುನಿಕ ಚರಿತ್ರೆಯನ್ನು ಕುರಿತು ವಿಚಾರ ಮಾಡುವಾಗ ಇದರಿಂದ ಸ್ವಲ್ಪಮಟ್ಟಿಗೆ ಪ್ರಯೋಜನವಾಗಬಹುದು.

ಎರಡನೆಯದಾಗಿ, ಸತ್ಯವೆಂಬುದಾಗಿ ನಿರೂಪಿಸಲಾಗಿರುವ ವಿಷಯವು ಎಲ್ಲರ ಗಮನವನ್ನು ಸೆಳೆಯುವಂತಹ ಸ್ವರೂಪದ್ದಾಗಿದ್ದರಿಂದ ಅದನ್ನು ಅವಲೋಕಿಸಿ ದಾಖಲು ಮಾಡದೇ ಇರುತ್ತಿರಲಿಲ್ಲ. ಇದರಿಂದ ವಿಷಯದ ಸ್ವರೂಪವು ಈ ನಕಾರಾತ್ಮಕ ತರ್ಕಕ್ರಮದಲ್ಲಿ ಅತ್ಯಂತ ಮುಖ್ಯವಾದ ನಿರ್ಧಾರಕ ಅಂಶವಾಗಿರುತ್ತದೆ. ಸಂಶೋಧಕನು ಆ ಘಟನೆಯು ಸಂಭವಿಸಿದ್ದಿದ್ದರೆ ಅದು ಯಾರ ಕಣ್ಣುಗಳಿಗೂ ಬೀಳದೆ ತಪ್ಪಿಹೋಗುತ್ತರಲಿಲ್ಲ. ಯಾರಾದರೂ ಅದನ್ನು ಗಮನಿಸುತ್ತಲೇ ಇರುತ್ತಿದ್ದರು ಎಂಬುದನ್ನು ದೃಢಪಡಿಸಿಕೊಳ್ಳಬೇಕು. ಉದಾಹರಣೆಗೆ, ಒಂದು ಕದನ ಅಥವಾ ದಂಡಯಾತ್ರೆಯ ವಿಚಾರದಲ್ಲಿ ಸಂಶಯ ಉಂಟಾದಾಗ ಸಾಮಾನ್ಯ ಯೋಗ್ಯತೆಯಿಂದ ಕೂಡಿದ್ದ ವ್ಯಕ್ತಿಯೂ ಸಹ ಅದನ್ನು ಗಮನಿಸದೇ ಇರುತ್ತಿರಲಿಲ್ಲ, ಆ ಘಟನೆಯಲ್ಲಿ ಅಂತಹ ಸೆಳೆತವಿದ್ದಿತು ಎಂಬುದನ್ನು ಪರಿಶೀಲಿಸಿದರೆ, ಕವಿದಿರುವ ಸಂದೇಹದ ಮಂಜಿನ ಮಬ್ಬು ಕರಗಿಹೋಗುತ್ತದೆ. ಆ ವಿದಯ್ಲುಲಿ ಬಹುಬೇಗನೆ, ಬಹು ವ್ಯಾಪಕವಾಗಿ ಹರಡಿ, ಸರ್ವವಿದಿತವಾಗುವಂತಹ ಶಕ್ತಿ ಇದ್ದಿದ್ದರಿಂದ ಅದನ್ನು ರಹಸ್ಯವಾಗಿ ಇಡುವುದು ಸಾಧ್ಯವಾಗುತ್ತಿರಲಿಲ್ಲ ಎಂಬುದನ್ನು ಮನದಟ್ಟುಮಾಡಿಕೊಳ್ಳಬೇಕು. ಅದೇ ರೀತಿ ಒಂದು ನಿರ್ದಿಷ್ಟ ವರ್ಷಗದಲ್ಲಿ ಒಂದು ನಾಡಿನ

ಹಲವಾರು ಪ್ರದೇಶಗಳು ಭಯಂಕರ ಹಾವಳಿಗೆ ತುತ್ತಾಗಿ ಹಾಳಾಗಿ ಹೋಗಿದ್ದರೆ ಆ ವಿಚಾರ ಪ್ರತಿಯೊಬ್ಬರಿಗೂ ತಿಳಿದೇ ಇರುತ್ತಿದ್ದಿತು. ಒಮದು ದೇಶದ ಒಂದು ನಿರ್ದಿಷ್ಟ ವರ್ಷದ ದಾಖಲೆಗಳಲ್ಲಿ ಅದಕ್ಕೆ ಅಪಾರ ನಷ್ಟವನ್ನುಂಟು ಮಾಡಿದ ಅಪಾಯಕಾರಿ ನೆರೆಯ ಬಗ್ಗೆ ಉಲ್ಲೇಖವಿಲ್ಲದೇ ಇದ್ದರೆ ಆ ವರ್ಷ ಆ ದೇಶವು ಜಲಪ್ರಳಯಕ್ಕೆ ಬಲಿಯಾಗದೆ ಕ್ಷೇಮವಾಗಿ ಇದ್ದಿತು ಎಂಬುದಾಗಿ ಊಹಿಸಬಹುದು. ಆದ್ದರಿಂದ ಬಹು ಸ್ಪಷ್ಟವಾಗಿರುವ ಸ್ವತಸ್ಸಿದ್ಧವಾಗಿರುವ, ನಿಸ್ಸಂಶಯವಾಗಿರುವ, ಸಾಮಾನ್ಯವಾಗಿರುವ, ಸುದೀರ್ಘವಾಗಿರುವ ಮತ್ತು ಕಾಲವನ್ನು ವ್ಯರ್ಥಗೊಳಿಸುವ ಸರ್ವನಾಶಕಾರಕವಾದ ಯುದ್ಧ, ದಂಡಯಾತ್ರೆ, ಘರ್ಷಣೆ, ಕ್ರಾಂತಿ, ಸುಳಿಗಾಳಿ, ಕೊಲೆ, ಅನಾಹುತ ಹಾಗೂ ಸರ್ವಾನ್ವಯವಾದ ಅಭ್ಯಾಸ, ಸಂಪ್ರದಾಯ, ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆ ಮುಂತಾದ ಘಟನೆಗಳು ಯಾರಿಗೂ ತಿಳಿಯದಂತೆ ಗುಪ್ತವಾಗಿರುವುದು ಸಾಧ್ಯವಿಲ್ಲ. ಅದೇ ರೀತಿ ಮಧ್ಯಯುಗದಲ್ಲಿ ಇಂಗ್ಲೆಂಡಿನಂತೆ ಫ್ರಾನ್ಸ್ ದೇಶದಲ್ಲೂ ಸಹ ನಿಯತವಾಗಿದ್ದ ವ್ಯವಸ್ಥಿತ ಜನಪ್ರಿಯ ಸಾರ್ವಜನಿಕ ಸಭೆಗಳು ಅಸ್ತಿತ್ವದಲ್ಲಿ ಇದ್ದಿದ್ದರೆ, ಆ ಕಾಲದ ಸೂಕ್ಷ್ಮದರ್ಶಿಯೂ ಹಾಗೂ ಅತ್ಯಂತ ವಿವೇಕಿಯೂ ಆಗಿದ್ದ ಫ್ರೆಂಚ್ ಚರಿತ್ರಲೇಖಕ ಗ್ರೆಗರಿ ಡಿಟರ್ಸ್ ಅವುಗಳ ಬಗ್ಗೆ ಪ್ರಸ್ತಾಪಿಸಿದೆ, ಫ್ರಾಂಕ್ ದೊರೆಗಳ ಜೀವನವನ್ನು ಕಲ್ಪಿಸಿ ವರ್ಣಿಸುತ್ತಿರಲಿಲ್ಲ. ಅವನು ಆ ವಿಚಾರದಲ್ಲಿ ಏನೂ ಹೇಳದೆ ಮೌನವಾಗಿರುವುದರಿಂದ ಮಧ್ಯಕಾಲದ ಫ್ರಾನ್ಸ್ ದೇಶದಲ್ಲಿ ಆ ತಹದ ಜನಸಾಮಾನ್ಯರ ಸಭೆಗಳಿರಲಿಲ್ಲ ಮತ್ತು ಸಂವಿಧಾನಾತ್ಮಕ ಬೆಳವಣಿಗೆ ಹಾಗೂ ರಾಜಕೀಯ ರಚನೆಯ ವಿಚಾರದಲ್ಲಿ ಅದು ಇಂಗ್ಲೆಂಡಿಗಿಂತ ಸಂಪೂರ್ಣವಾಗಿ ವಿಭಿನ್ನವಾಗಿದ್ದಿತು ಎಂಬುದಾಗಿ ಅನುಮಾನಿಸಬಹುದು. ನಕಾರಾತ್ಮಕ ತರ್ಕಕ್ರಮವನ್ನು ಈ ತರಹದ ವಿಷಯಗಳನ್ನು ಕುರಿತು ವಿಚಾರ ಮಾಡುವಾಗ ಮಾತ್ರ ಉಪಯೋಗಿಸಬೇಕು. ಗುಪ್ತವಾಗಿ ಇಡುವುದಕ್ಕೆ ಸಾಧ್ಯವಾಗಿರುವ ಸಂಗತಿಗಳ ಅಧ್ಯಯನದಲ್ಲಿ ಈ ಕ್ರಮದಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಹೀಗೆ ಈ ಕ್ರಮವು ಕೆಲವು ಬಹು ಸ್ಪಷ್ಟವಾಗಿ ನಿರ್ಧರಿಸಲಾಗಿರುವ ವಿಷಯಕ್ಷೇತ್ರಗಳ ಅಧ್ಯಯನಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಇದನ್ನು ಬಳಸುವ ಮೊದಲು ಸಂಶೋಧಕನು ಒಂದು ವಿಶಿಷ್ಟ ದಾಖಲೆಯ ಕರ್ತೃವು ಎಲ್ಲಾ ಮಾಹಿತಿಗಳನ್ನು ಕ್ರಮಬದ್ಧವಾಗಿ ದಾಖಲು ಮಾಡಿರುವನೇ ಹಾಗೂ ಆ ಎಲ್ಲಾ ಮಾಹಿತಿಗಳು ಅವನಿಗೆ ಚೆನ್ನಾಗಿ ಅರ್ಥವಾಗಿದ್ದವೇ ಎಂಬುದನ್ನು ಮತ್ತು ಅವುಗಳು ಅವನ ಗಮನಕ್ಕೆ ಬಾರದೇ ಹೋಗಲು ಸಾಧ್ಯವಿರಲಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

*2) ನಿಶ್ಚಯಾತ್ಮಕ ತರ್ಕಕ್ರಮ*

ಇದು ಹೆಚ್ಚು ಸಂಕೀರ್ಣವೂ ಹಾಗೂ ಇತಿಹಾಸ ಸಂಶೋಧಕನಿಗೆ ಹೆಚ್ಚು ಉಪಯುಕ್ತವೂ ಆದ ಮತ್ತು ಇಂದಿನ ಹಾಗೂ ಹಿಂದಿನ ಮಾನವ ಕುಲಗಳಿಗಿರುವ ಅನುರೂಪತೆ ಎಂಬ ಮೂಲಭೂತ ತತ್ತ್ವವನ್ನು ಇತಿಹಾಸಕ್ಕೆ ಅನ್ವಯಿಸುವ ಕ್ರಮವಾಗಿದೆ. ಇದು ದಾಖಲೆಗಳಲ್ಲಿ ವಿವರಿಸಲಾಗಿರುವ ವಿಷಯಗಳಿಂದ ಆರಂಬಿಸಿ ಅವುಗಳಲ್ಲಿ ಉಲ್ಲೇಖಿಸದೇ ಇರುವ ವಿಚಾರಗಳನ್ನು ಊಹಿಸುವ ವಿಧಾನವಾಗಿದೆ. ಇಂದು ಮಾನವ ಕುಲಕ್ಕೆ ಸಂಬಂಧಿಸಿರುವ ವಾಸ್ತವಾಂಶಗಳೆಲ್ಲಾ ಪರಸ್ಪರ ಸಂಬಂಧಪಟ್ಟಿವೆ ಎಂಬುದು ಅಂಗೀಕೃತವಾದ ವಿಷಯ. ಆದರೆ ಈ ಸತ್ಯ ಇಂದಿನ ಅನ್ವೇಷಣೆಯಲ್ಲ. ಇದು ಥೂಸಿಡಿಡಿಸನ ಕಾಲದಷ್ಟು ಹಳೆಯದು. ಕಾರಣ ಅವನು ಐತಿಹಾಸಿಕ ಸತ್ಯಾಂಶಗಳೆಲ್ಲಾ ವ್ಯವಸ್ಥಿತವಾದ ಹಾಗೂ ಖಾಯಂ ಆದ ಕ್ರಮದಲ್ಲಿ ಸಂಬಂಧಪಟ್ಟಿವೆ ಎಂಬುದಾಗಿ ಹೇಳಿದನು. ಇದು ವಸ್ತುಸ್ಥಿತಿ–ಯಾದರೆ, ನಿರ್ದಿಷ್ಟ ಸೀಮಾಗೆರೆಗಳೊಳಗೆ ಅಖಂಡ

ಸರಪಳಿಯಂತಿರುವ ವಾಸ್ತವಾಂಶಗಳ ಒಂದು ವರ್ಗದಿಂದ ಮತ್ತೊಂದಕ್ಕೆ ಹಾರಿ ವಿಚಾರಮಾಡುವುದು ಸಾಧ್ಯವಾಗುತ್ತದೆ. ಉದಾಹರಣೆಗೆ, ದಾಖಲೆಗಳು ಒಂದು ಸಂಸ್ಕೃತಿಯ ಬಗ್ಗೆ ಅಪಾರ ವಿಷಯ ಸಂಪತ್ತನ್ನು ಮತ್ತು ಜನಜೀವನದ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮುಂತಾಗಿ ಕಲ್ಪಿಸಬಹುದಾದ ಪ್ರತಿ ಮುಖವನ್ನು ಕುರಿತಂತೆ ಸಮಗ್ರ ವಿವರಗಳನ್ನು ಒದಗಿಸಿ, ಧಾರ್ಮಿಕ ಸಹಿಷ್ಣುತೆಯ ಬಗ್ಗೆ ಏನು ಹೇಳದೆ ಮೌನವನ್ನು ವಹಿಸಿದ್ದರೆ, ಆಗ ಸಂಶೋಧಕನು ಉದಾರವಾಗಿದ್ದ ಧಾರ್ಮಿಕ ಸಹಿಷ್ಣುತೆ ಇಲ್ಲದೇ ಹೋಗಿದ್ದಿದ್ದರೆ ಆ ಸಂಸ್ಕೃತಿಯು ಸಂಪತ್ಸಮೃದ್ಧಿ ಮತ್ತು ಶಾಂತಿ–ಸೌಖ್ಯ–ನೆಮ್ಮದಿಗಳ ತವರ್ಮನೆಯಾಗಿರುತ್ತಿರಲಿಲ್ಲ ಮತ್ತು ಧಾರ್ಮಿಕ ಸಹಿಷ್ಣುತೆ, ಹೃದಯ ವೈಶಾಲ್ಯ, ತೆರೆದ ಬುದ್ಧಿ ಹಾಗೂ ಉದಾರ ದೃಷ್ಟಿ ಇಲ್ಲದೆ ಹೋಗಿದ್ದಿದ್ದರೆ ಆರ್ಥಿಕ, ಸಾಮಾಜಿಕ, ರಾಜಕೀಯ, ಒಟ್ಟಿನಲ್ಲಿ ಸಮಗ್ರ ಸಂಸ್ಕೃತಿಯ ಪ್ರಗತಿಪರ ವಿಕಾಸವಾಗುತ್ತಿರಲಿಲ್ಲ ಎಂಬುದಾಗಿ ತರ್ಕಿಸಬಹುದು. ಕಲೆ, ಮತಧರ್ಮ, ಸಾಮೂಹಿಕ ಅಭ್ಯಾಸ ಅಥವಾ ಸಂಪ್ರದಾಯ, ರಾಜಕೀಯ ವ್ಯವಸ್ಥೆ ಮುಂತಾದ ಜೀವನದ ಎಲ್ಲಾ ಮುಖಗಳಿಗೆ ಸಂಬಂಧಿಸಿರುವ ಸರ್ವ ವಿಷಯಗಳು ಪುಷ್ಪಮಾಲೆಯಂತೆ ಪರಸ್ಪರ ಸಂಬಂಧಪಟ್ಟಿರುತ್ತವೆ. ಆದ್ದರಿಂದ ಒಂದು ಬಗೆಯ ವಾಸ್ತವಾಂಶಗಳಿಂದ ಮತ್ತೊಂದು ತರಹದ ವಾಸ್ತವಾಂಶಗಳನ್ನು ಊಹಿಸಬಹುದು. ಅನೇಕ ಸಲ ಬೇಕು ಬೇಕೆಂದೇ ಅಥವಾ ತಿಳಿಯದೆಯೇ ಹಲವಾರು ಸತ್ಯಾಂಶಗಳನ್ನು ದಾಖಲು ಮಾಡಿಟ್ಟಿರುವುದಿಲ್ಲ. ಉದಾಹರಣೆಗೆ, ಸರ್ಕಾರದ ರಹಸ್ಯಕಾರ್ಯಗಳು, ದೇಶರಕ್ಷಣೆ ಹಾಗೂ ಪರರಾಷ್ಟ್ರೀಯ ವಿಷಯಗಳಿಗೆ ಸಂಬಂಧಿಸಿದ ನೀತಿಗಳು, ಆಡಳಿತ ವ್ಯವಸ್ಥೆಯ ಕುಂದುಕೊರತೆ, ಆಳುವ ಪಕ್ಷದಿಂದ ಆಗುತ್ತಿರುವ ಅಧಿಕಾರದ ದುರುಪಯೋಗ, ಆಳುವ ಪಕ್ಷದ ಸ್ವಾರ್ಥಿಗಳ ದುಷ್ಕಾರ್ಯ, ರಾಜಕೀಯ ಭ್ರಷ್ಟತೆ ಮುಂತಾದ ವಿಷಯಗಳನ್ನು ಯಾವ ದಾಖಲೆಯಲ್ಲೂ ಪ್ರಸ್ತಾಪಿಸಿರುವುದಿಲಲ. ಆದ್ದರಿಂದ ಆ ವಿಚಾರಗಳು ಅಸ್ತಿತ್ವದಲ್ಲಿ ಇರಲೇ ಇಲ್ಲ ಎಂಬುದಾಗಿ ಹೇಳಿ, ಆ ಪಕ್ಷದ ಆಳ್ವಿಕೆಯ ಸಮಯದಲ್ಲಿ ಜನರು ಸುಖ–ಶಾಂತಿಯಿಂದ ಬಾಳುತ್ತಿದ್ದರು ಎಂಬುದಾಗಿ ನಿರ್ಣಯಿಸಿದರೆ ದೊಡ್ಡ ತಪ್ಪಾಗುತ್ತದೆ. ಅವುಗಳನ್ನು ತಿಳಿದಿರುವ ಇತರ ವಿಷಯಗಳ ಆಧಾರದ ಮೇಲೆ ಊಹಿಸಬೇಕಾಗುತ್ತದೆ. ಒಂದು ನಿರ್ದಿಷ್ಟ ವಾಸ್ತವಾಂಶವನ್ನು ಹಿಂಬಾಲಿಸಿ ಮತ್ತೊಂದು ಬರುತ್ತದೆ. ಏಕೆಂದರೆ ಮೊದಲನೆಯ ಸತ್ಯಾಂಶವು ಎರಡನೆಯ ವಾಸ್ತವಾಂಶಕ್ಕೆ ಅಥವಾ ಎರಡನೆಯದು ಮೊದಲನೆಯದಕ್ಕೆ ಕಾರಣವಾಗಿರುತ್ತದೆ ಅಥವಾ ಅವು ಎರಡೂ ಒಂದು ಸಾಮಾನ್ಯ ಕಾರಣದಿಂದ ಬಂದ ಫಲಗಳಾಗಿರುತ್ತವೆ. ಈ ತರಹದ ತರ್ಕವನ್ನು ಎಲ್ಲಾ ಬಗೆಯ ಸಾಮೂಹಿಕ ಸತ್ಯಾಂಶ, ರೂಢಿ, ಬದಲಾವಣೆ ಹಾಗೂ ವಿಶಿಷ್ಟ ಘಟನೆಗಳಿಗೆ ಅನ್ವಯಿಸಬಹುದು. ಹೀಗೆ ನಿಶ್ಚಯಾತ್ಮಕ ತರ್ಕಕ್ರಮವು ಸಂಶೋಧನಾ ಕ್ಷೇತ್ರದಲ್ಲಿ ಅಜ್ಞಾತವಾಗಿರುವ ಮೂಲೆಗಳ ಮೇಲೆ ಶೋಧನ ದೀಪವನ್ನು ಬೀರಿ ಅವುಗಳಲ್ಲಿ ಅಡಕವಾಗಿರುವ ಅಂಶಗಳನ್ನೆಲ್ಲಾ ಬೆಳಕಿಗೆ ತಂದು, ತಿಳಿದಿರುವ ಸತ್ಯಾಂಶಗಳ ಸಹಾಯದಿಂದ ಹಿಂದೆ ತುಂಬಲಾಗದೇ ಇಡಲಾಗಿದ್ದ ತೆರಪುಗಳನ್ನು ಸರಿಯಾಗಿ ಭರ್ತಿ ಮಾಡಲು ಸಹಾಯಕವಾಗುವ ಅತ್ಯಂತ ಯುಕ್ತವಾದ ಉಪಕರಣವಾಗುತ್ತದೆ.

ಸಂಶೋಧಕನು ತಪ್ಪಾದ ಆರಂಭ ಬಿಂದುವಿನಿಂದ ತನ್ನ ಅನ್ವೇಷಣಾ ಯಾನವನ್ನು ಪ್ರಾರಂಭಿಸಿದರೆ, ಗಮ್ಯಸ್ಥಾನವನ್ನು ತಲುಪಲಾರನು. ಅವನು ಒಂದೇ ನಿದರ್ಶನದ ಆಧಾರದ ಮೇಲೆ ತರ್ಕಿಸಲು ಯತ್ನಿಸಿದರೆ ಅದು ಬಹು ದೊಡ್ಡ ತಪ್ಪಾಗುತ್ತದೆ. ಉದಾಹರಣೆಗೆ, ಅವನು ಆಕ್ರಮಣದಿಂದಲೇ ಏಕನಾಯಕಾಧಿಪತ್ಯವು

ಉದಯಿಸುತ್ತದೆ ಎಂಬುದಾಗಿ ತರ್ಕಿಸಿ, ತೀರ್ಮಾನಿಸಿ, ಅದನ್ನು ಸಾಮಾನ್ಯ ತರ್ಕಪ್ರಮೇಯವಾಗಿ ಬಳಸಿದರೆ ಇತಿಹಾಸದ ಅನೇಕ ಪುಟಗಳು ಇದು ಎಷ್ಟು ಅಸತ್ಯವಾದುದು ಎಂಬುದನ್ನು ಸಮರ್ಥಿಸಲು ಅನೇಕ ಸಾಕ್ಷ್ಯಗಳನ್ನು ಒದಗಿಸುತ್ತವೆ. ಅವನು ಪ್ರತ್ಯೇಕವಾಗಿರುವ ವಾಸ್ತವಾಂಶಗಳಿಂದ ತೀರ್ಮಾನಗಳನ್ನು ಮಾಡುವ ಸ್ವಾಭಾವಿಕವಾದ ಹಠಾತ್ತಾದ ಪ್ರವೃತ್ತಿಗಳನ್ನು ಎದುರಿಸಿ ನಿಯಂತ್ರಿಸಬೇಕು. ಇದರಿಂದ ಬರುವುದು ಬರಿಯ ಪೂರ್ವಭಾವನೆಗಳೇ ಹೊರತು ನಿಸ್ಸಂಶಯವಾದ ವಿಷಯಗಳಲ್ಲ. ಅವನು ತರ್ಕ ಕ್ರಮದ ಸಹಾಯದಿಂದ ತನ್ನ ಪುನರ್ರಚನಾ ಕಾರ್ಯದಲ್ಲಿ ತಲೆದೋರುವ ಅನೇಕ ಸಂದುಗೊಂದುಗಳನ್ನು, ತಿರುವುಗಳನ್ನು ಸಮರ್ಪಕವಾಗಿ ಹಾದು ಭರ್ತಿಮಾಡಿ, ಹಲವಾರು ವಿವಾದಗಳನ್ನು ಪರಿಹರಿಸಿ, ತನ್ನ ಕೆಲಸವನ್ನು ಸೊಗಸಾಗಿ ನಿರ್ವಹಿಸಬಲ್ಲನು. ಹೀಗೆ ರಚನಾತ್ಮಕ ತರ್ಕಕ್ರಮ ಅತ್ಯಮೂಲ್ಯವಾದುದಾಗಿದೆ. ಆದರೆ ಇದನ್ನು ಬಹು ಜಾಗರೂಕತೆಯಿಂದ ಉಪಯೋಗಿಸಬೇಕು. ಕಾರನ ಇದು ಎರಡು ಏಣುಗಳುಳ್ಳ ಅತ್ಯಂತ ಹರಿತವಾದ ಕತ್ತಿ ಇದ್ದ ಹಾಗೆ. ಎಚ್ಚರಿಕೆಯಿಂದ ಬಳಸಿದರೆ ಸಂಶೋಧಕನಿಗೆ ವೈರಿಗಳಂತಿರುವ ಪೊದರುಗಳನ್ನು ಕತ್ತರಿಸಿ, ಸರಿಸಿ, ಗುಪ್ತವಾಗಿರುವ ಸತ್ಯಾಂಶಗಳ ದರ್ಶನ ಮಾಡಲು ಸಾಧ್ಯ. ಅಜಾಗರೂಕತೆಯಿಂದ ಉಪಯೋಗಿಸಿದರೆ ಅವನ ಕೈಯೇ ಕತ್ತರಿಸಿಹೋಗುವ ಅಪಾಯವಿರುತ್ತದೆ. ಹೀಗೆ ಸಾಂಶ್ಲೇಷಿಕ ಕಾರ್ಯ ರೀತಿಯ ಮೂಲಕ ಸೂಕ್ಷ್ಮವಾಗಿ ಪರಿಶೀಲಿಸಲಾದ ವಿಷಯಗಳನ್ನು ಒಂದು ಪರಸ್ಪರ ಸಮನ್ವಿತವಾದ, ಕ್ರಮಬದ್ಧವಾದ ಕಥನವಾಗಿ ಸುಸಂಘಟಿಸಲಾಗುತ್ತದೆ.

## 10.3 ಅಂತಿಮ ಕಾರ್ಯರೀತಿಗಳು

ಇತಿಹಾಸ ಸೌಧ ರಚನಾಕಾರ್ಯದಲ್ಲಿ ವಿವಿಧ ಕಾರ್ಯರೀತಿಗಳನ್ನು ಅನುಸರಿಸಿ ಸಮರ್ಪಕವಾಗಿರುವ ವಿಷಯಗಳನ್ನು ಸಂಗ್ರಹಿಸಿ, ವೈಚಾರಿಕ ಕ್ರಮದಲ್ಲಿ ವಿಶ್ಲೇಷಿಸಿ, ವಿಮರ್ಶಿಸಿ, ಸುವ್ಯವಸ್ಥಿತವಾದ ರೀತಿಯಲ್ಲಿ ಅಣಿಮಾಡಿಟ್ಟ ಮೇಲೆ, ಮಾಡಬೇಕಾದ ಕೆಲಸ ಮುಕ್ತಾಯದ ಪರಿಷ್ಕರಣ, ಸರಿಯಾದ ಬಣ್ಣಗಳನ್ನು ಕೊಟ್ಟು ಆಕರ್ಷಕವಾದ ಬಗೆಯಲ್ಲಿ ಬಹು ಸೊಗಸಾಗಿ ಅಲಂಕರಿಸುವ ಕಾರ್ಯ. ಇದೇ ಸಂಶೋಧನೆಯ ಕೊನೆಯ ಹಂತವಾಗಿರುವ 'ಅಂತಿಮ ಕಾರ್ಯರೀರಿ'ಯ ಉದ್ದೇಶ. ಸಂಶೋಧನೆಯ ಫಲಿತಾಂಶವನ್ನು ಅತ್ಯಂತ ಸ್ವಾರಸ್ಯಕರವಾದ ರೀತಿಯಲ್ಲಿ ರೂಪಿಸುವುದು ಮತ್ತು ಸಮಗ್ರ ಸಂಶೋಧನಾ ಕಾರ್ಯದ ತಿರುಳು ಅಥವಾ ಮುಖ್ಯಾಂಶವನ್ನು, ನಿರ್ಣಯಗಳನ್ನು ಎತ್ತಿ ತೋರುವುದು ಇದರ ಗುರಿ.

ಈ ಕಾರ್ಯ ರೀತಿಯಲ್ಲಿ ಎರಡು ಪ್ರಧಾನ ಹಂತಗಳನ್ನು ನೋಡಬಹುದು:

### 10.3.1 ಮೊದಲನೆಯ ಹಂತವೇ ಸಾಮಾನ್ಯೀಕರಣದ ನಿರೂಪಣೆ ಅಥವಾ ಸೂತ್ರ ರಚನೆ

ಇಲ್ಲಿ ಸಮಗ್ರ ಸಂಶೋಧನೆಯ ಫಲಿತಾಂಶಗಳನ್ನು ಕೆಲವು ಸುಸಂಬದ್ಧವಾದ, ಮುಖ್ಯವಾದ ಮತ್ತು ಸುವ್ಯವಸ್ಥಿತವಾದ ಸಪ್ರಮಾಣಕ ಭಾಗಗಳಾಗಿ ಸಂಗ್ರಹಿಸಿ ನಿರೂಪಿಸಲಾಗುತ್ತದೆ. ಇದು ಸಾಮಾನ್ಯ ಪದಗಳನ್ನು ಬಳಸುವ, ವ್ಯಾಪಕ ತತ್ತ್ವಗಳನ್ನು ಕುರಿತು ವಿಚಾರ ಮಾಡುವ ಮತ್ತು ಮೌಲ್ಯ ನಿರ್ಣಯ ಕಾರ್ಯಗಳಿಗೆ

ಸಂಬಂಧಿಸಿರುವ ಮೇಲ್ಮಟ್ಟದ ವಿಶ್ಲೇಷಣಾತ್ಮಕ ಕ್ರಮ. ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಐತಿಹಾಸಿಕ ಮಾಹಿತಿಗಳನ್ನು ಅತ್ಯಂತ ಜಾಗರೂಕತೆಯಿಂದ ಸಂಗ್ರಹಿಸಿ, ತರ್ಕಬದ್ಧವಾಗಿ ಪರೀಕ್ಷಿಸಿ, ಒಟ್ಟುಗೂಡಿಸಿ, ವ್ಯವಸ್ಥಿತಗೊಳಿಸಿ ವಿಶದೀಕರಿಸಿದ ನಂತರ ಆ ವಿವರಗಳ ಮಹತ್ತ್ವವನ್ನು ಸಾಮಾನ್ಯ ಪದಗಳಲ್ಲಿ ವಿವರಿಸಲಾಗುತ್ತದೆ. ಅಂದರೆ ಸೂತ್ರ ರೂಪದಲ್ಲಿ ನಿರೂಪಿಸಲಾಗುತ್ತದೆ, ಘಟನೆಗಳನ್ನು ವಿವರಿಸುವುದಕ್ಕಾಗಿ ಅವುಗಳಿಗೆ ಸಂಬಂಧಿಸಿರುವ ವಿಷಯ ಸಾಮಗ್ರಿಗಳನ್ನು ವಿಶದೀಕರಿಸಿ, ನಂತರ ವರ್ಣನಾತ್ಮಕವಾದ ಸೂತ್ರವನ್ನು ರೂಪಿಸುವುದಕ್ಕಾಗಿ ಅವುಗಳನ್ನು ಕೆಲವೇ ಪದಗಳಲ್ಲಿ ಸಂಕ್ಷೇಪಿಸಲಾಗುತ್ತದೆ. ವಾಸ್ತವಾಂಶಗಳಿಗಿರುವ ಸಂಬಂಧಗಳ ಅನ್ವೇಷಣೆಯೇ ಇದರ ಪ್ರಧಾನ ಕಾರ್ಯ. ಇವುಗಳೇ ಪ್ರತಿ ವಿಜ್ಞಾನದಲ್ಲಿಯೂ ಅಂತಿಮ ನಿರ್ಣಯವಾಗುತ್ತವೆ. ಇತರ ವಿಜ್ಞಾನಗಳಂತೆ ಇತಿಹಾಸಕ್ಕೂ ಸಹ ಘಟನೆಗಳ ಸ್ವರೂಪ ಹಾಗೂ ಸಂಬಂಧಗಳನ್ನು ವಿವರಿಸುವುದಕ್ಕೆ ಒಂದು ವರ್ಣನಾತ್ಮಕ ಸೂತ್ರ ಅವಶ್ಯಕ. ಇದರಿಂದ ಚರಿತ್ರೆಯ ಪ್ರತಿಷ್ಠೆ–ಗೌರವ ಹೆಚ್ಚಾಗುತ್ತದೆ ಮತ್ತು ಇದು ವಿಜ್ಞಾನಗಳ ಸಾಲಿನಲ್ಲಿ ಹೆಮ್ಮೆಯ ಸ್ಥಾನವನ್ನು ಅಲಂಕರಿಸಲು ಸಮರ್ಥವಾಗುತ್ತದೆ.

ಸೂತ್ರ ರಚನೆ ಬಹು ಸಂಕೀರ್ಣವಾದ ಪ್ರಕ್ರಿಯೆ. ಇಲ್ಲಿ ಅನೇಕ ವಾಸ್ತವಾಂಶಗಳನ್ನು ಕೆಲವು ಸರ್ವಸಾಮಾನ್ಯ ಹೇಳಿಕೆಗಳಾಗಿ ಅಡಕ ಮಾಡಿ, ಏಕಪ್ರಕಾರತೆಯನ್ನು ಸಾಧಿಸಲು ಯತ್ನಿಸಲಾಗುತ್ತದೆ. ಸರಳವಾದ, ನಿಷ್ಕೃಷ್ಟವಾದ ಹಾಗೂ ಸ್ಪಷ್ಟವಾದ ಭಾಷೆಯನ್ನು ಹಾಗೂ ವರ್ಣನಾತ್ಮಕ ಪದಗಳನ್ನೇ ಬಳಸಲಾಗುತ್ತದೆ. ಸೂತ್ರವನ್ನು ನಿರೂಪಿಸುವುದಕ್ಕೆ ಮೊದಲು ಸಾಮಾನ್ಯವಾದ ಹಾಗೂ ಅದ್ವಿತೀಯವಾದ ವಾಸ್ತವಾಂಶಗಳಿಗಿರುವ ಭೇದವನ್ನು ಗುರುತಿಸಬೇಕು. ಪದೇ ಪದೇ ಪುನರಾವೃತ್ತಿಯಾಗುವ ಮತ್ತು ಅನೇಕರಿಗೆ ಸಾಮಾನ್ಯವಾಗಿರುವ ಘಟನೆಗಳು ಸಾಮಾನ್ಯ ವಾಸ್ತವಾಂಶಗಳಾಗುತ್ತವೆ. ಉದಾಹರಣೆಗೆ, ಕ್ರಾಂತಿಗಳು ಏಕೆ ಉಂಟಾಗುತ್ತವೆ ಎಂಬುದನ್ನು ಕಂಡುಹಿಡಿಯುವುದು ಸಂಶೋಧಕನ ಉದ್ದೇಶವಾದಾಗ, ಅವನು ದಾಖಲೆಗಳಲ್ಲಿ ವರ್ಣಿಸಲಾಗಿರುವ ಕ್ರಾಂತಿಕಾರಕ ಘಟನೆಗಳ ಹಿನ್ನೆಲೆಯನ್ನು ಎಚ್ಚರಿಕೆಯಿಂದ ಪರಿಶೀಲಿಸುತ್ತಾನೆ ಮತ್ತು ಎಲ್ಲಾ ವರ್ಗಗಳಲ್ಲಿ ಅತೃಪ್ತಿ ಇದ್ದಿತು ಎಂಬ ಸಾಮಾನ್ಯಾಂಶ ಕಂಡುಬಂದರೆ ಅವನು ಆ ಅಮಶದ ಆಧಾರದ ಮೇಲೆ ಸೂತ್ರವನ್ನು ರಚಿಸುತ್ತಾನೆ. ಅದೇ ರೀತಿ ಅವನು ಯುದ್ಧಕ್ಕೆ ಕಾರಣವಾದ ಅಂಶಗಳನ್ನು ತಿಳಿದುಕೊಳ್ಳಲು ಬಯಸಿದಾಗ ಮಾನವ ಪ್ರೇರಣೆ, ಉದ್ದೇಶ, ಮಹತ್ವಾಕಾಂಕ್ಷೆ, ದುರಾಶೆ, ಸ್ವಲಾಭ ಸಂವೃದ್ಧಿ ಹಾಗೂ ಸ್ವಪ್ರತಿಷ್ಠೆ ಮುಂತಾದ ಅಂಶಗಳನ್ನು ವಿವರವಾಗಿ ಪರೀಕ್ಷಿಸುತ್ತಾನೆ. ಒಂದು ವೇಳೆ ಕೆಲವು ಅಂಶಗಳು ಘರ್ಷಣೆಯನ್ನು ಉಂಟು ಮಾಡಿದ ಪ್ರತಿ ಸನ್ನಿವೇಶದಲ್ಲೂ ಪ್ರಧಾನವಾಗಿದ್ದುದು ಕಂಡುಬಂದರೆ ಅವನು ಅವುಗಳೇ ಆ ಸಮಗ್ರ ಸಮಸ್ಯೆಗೆ ಮೂಲ ಕಾರಣವಾಗಿರುವಂತಹವು ಎಂಬುದಾಗಿ ತೀರ್ಮಾನಿಸಿ ಸೂತ್ರವನ್ನು ರಚಿಸುತ್ತಾನೆ.

ಅದ್ವಿತೀಯ ಅಂಶಗಳ ಬಗ್ಗೆ ಸಾಮಾನ್ಯ ಸೂತ್ರವನ್ನು ರಚಿಸುವುದು ಅಷ್ಟು ಸುಲಭವಲ್ಲ. ಸಾಮಾನ್ಯವಾಗಿ ಅವುಗಳು ಒಂದೇ ಸಲ ತಲೆದೋರುವುದರಿಂದ ಅವುಗಳನ್ನು ಒಂದು ಸೂತ್ರ ರೂಪಕ್ಕೆ ಇಳಿಸುವುದು ಕಷ್ಟ. ಆದ್ದರಿಂದ ಸಂಶೋಧಕನು ಕೆಲವೇ ವಾಸ್ತವಾಂಶಗಳನ್ನು ಆರಿಸಿಕೊಂಡು ಅವುಗಳ ಬಗ್ಗೆ ಆಳವಾಗಿ ವಿಚಾರ ಮಾಡಬೇಕು. ಇಲ್ಲಿ ಅವನಿಗಿರುವುದು ಇದೊಂದೇ ದಾರಿ. ಅವನು ಸಮಾಜದ ಮೇಲೆ

ಆಳವಾದ ಪ್ರಭಾವವನ್ನು ಬೀರಿದ ಅಥವಾ ಅದನ್ನು ಬದಲಾಯಿಸುವುದಕ್ಕೆ ಕಾರಣವಾದ ವ್ಯಕ್ತಿಗಲನ್ನು ಅಥವಾ ಘಟನೆಗಳನ್ನು ಮಾತ್ರ ಆರಿಸಿಕೊಳ್ಳಬೇಕು. ಸಮಾಜದ ಮೇಲೆ ಪ್ರಬಲವಾದ ಪ್ರಭಾವವನ್ನು ಬೀರಿದ ಕಲೆಗಾರ, ವಿಜ್ಞಾನಿ, ಸೇನಾಧಿಕಾರಿ, ರಾಜಕಾರಿಣಿ, ದಾರ್ಶನಿಕ ಹಾಗೂ ವಿಚಾರವಾದಿಗಳ ಬಗ್ಗೆ ವಿಚಾರ ಮಾಡುವಾಗ, ಅವರ ಜೀವನ ಚರಿತ್ರೆಗಳಿಂದ ಅವರ ಶೀಲ ಸ್ವಭಾವ, ಜೀವನ ವೃತ್ತಿ, ಸಾಧನೆ ಹಾಗೂ ಅಭ್ಯಾಸಗಳನ್ನು ಸ್ಪಷ್ಟಪಡಿಸುವ ವಿವರಗಳನ್ನು ತೆಗೆದುಕೊಳ್ಳಬೇಕು; ಇತಿಹಾಸದಲ್ಲಿ ಅವರು ವಹಿಸಿದ ಪಾತ್ರದ ಮೌಲ್ಯವನ್ನು ನಿರ್ಧರಿಸಬೇಕು; ನಂತರ ಅದರ ಬಗ್ಗೆ ಒಂದು ಸಾಮಾನ್ಯ ಸೂತ್ರವನ್ನು ನಿರೂಪಿಸಬಹುದು.

ಒಬ್ಬ ಮಹಾವ್ಯಕ್ತಿಯ ವ್ಯಕ್ತಿತ್ವ ಹಾಗೂ ಶೀಲಸ್ವಭಾವವನ್ನು ವರ್ಣಿಸುವಂತಹ ಸೂತ್ರವನ್ನು ನಿರೂಪಿಸುವಾಗ, ಅನ್ವೇಷಕನು ಎರಡು ಸ್ವಾಭಾವಿಕ ಪ್ರಲೋಭನೆಗಳಿಗೆ ತುತ್ತಾಗದಂತೆ ಎಚ್ಚರಿಕೆಯನ್ನು ವಹಿಸಬೇಕು. ಒಬ್ಬ ವ್ಯಕ್ತಿಯು ಸ್ವಸಾಮರ್ಥ್ಯದ ವಿಷಯದಲ್ಲಿ ಅತಿಶಯ ಅಭಿಮಾನದಿಂದ ಕೂಡಿ, ಅಹಂಕಾರದಿಂದ ತನ್ನ ಬಗ್ಗೆ ನೀಡಿರುವ ವಿವರಗಳ ಹಾಗೂ ಮಾಡಿಕೊಂಡಿರುವ ಸ್ವಪ್ರಶಂಸೆಯ ಆಧಾರದ ಮೇಲೆ ಸೂತ್ರವನ್ನು ನಿರೂಪಿಸುವ ಪ್ರಯತ್ನ ಮೊದಲನೆಯ ಅಪಾಯ. ಒಬ್ಬ ವ್ಯಕ್ತಿ ಆತ್ಮಪ್ರಶಂಸೆಗೆ ತೊಡಗಿದಾಗ ಸಂಶೋಧಕನು ಬಹು ಜಾಗರೂಕನಾಗಿರಬೇಕು. ಇತಿಹಾಸ ಪ್ರಸಿದ್ಧ ನಾಯಕರ ಬಗ್ಗೆ ಅಧ್ಯಯನ ಮಾಡುವಾಗ ಅವರನ್ನು ರಾಮ, ಕೃಷ್ಣ, ಹರಿಶ್ಚಂದ್ರ ಮುಂತಾದ ಪುರಾಣ ಪ್ರಸಿದ್ಧ ದೈವಿಕ ವ್ಯಕ್ತಿಗಳೊಂದಿಗೆ ಹೋಲಿಸುವ ಪ್ರವೃತ್ತಿಯು ಎರಡನೆಯ ಅಪಾಯ, ಒಬ್ಬ ವ್ಯಕ್ತಿಯ ವಿಶೇಷ ಗುಣವನ್ನು ವಿವರಿಸುವುದಕ್ಕಾಗಿ ಈ ತರಹ ತುಲನೆ ಮಾಡಿ, ಉತ್ಪ್ರೇಕ್ಷಿಸಿ ಒಂದು ಸೂತ್ರವನ್ನು ನಿರೂಪಿಸಿದರೆ ಅದು ವಾಚಕರನ್ನು ದಾರಿ ತಪ್ಪಿಸುವ ತಪ್ಪಾದ ಸಂಕೇತವಾಗುತ್ತದೆ. ಒಂದು ಘಟನೆಯ ಬಗ್ಗೆ ಸೂತ್ರವನ್ನು ನಿರೂಪಿಸುವಾಗ ಅದಕ್ಕೆ ಸಂಬಂಧಪಟ್ಟಿರುವ ಹಾಗೂ ಸಾಮಾನ್ಯ ಲಕ್ಷಣಗಳಿಂದ ಕೂಡಿರುವ ಅನೇಕ ಸೂಕ್ಷ್ಮವಾದ ವಾಸ್ತವಾಂಶಗಳನ್ನು ಅವುಗಳ ಮಹತ್ತ್ವಕ್ಕೆ ಅನುಗುಣವಾಗಿ ಒಂದುಗೂಡಿಸಿ, ಅವುಗಳ ವಿಶೇಷ ಲಕ್ಷಣ ಹಾಗೂ ವೈಶಾಲ್ಯವನ್ನು ಗಮನದಲ್ಲಿಟ್ಟುಕೊಂಡು ವರ್ಣನಾತ್ಮಕ ಸೂತ್ರವನ್ನು ರಚಿಸಬೇಕು. ಈ ತರಹದ ಸೂತ್ರ ಹೆಚ್ಚಾಗಿ ಗುಣಾತ್ಮಕವಾಗಿರುತ್ತದೆ. ಗುಣವನ್ನು ಮಾತ್ರವಲ್ಲದೆ ಪ್ರಮಾಣವನ್ನೂ ಸಹ ಸೂಚಿಸಬೇಕು. ಇಲ್ಲಿ ಮಾಪನ, ಗಣನೆ, ಮೌಲ್ಯ ನಿರ್ಣಯ ಹಾಗೂ ಮಾದರಿ ಕ್ರಮಗಳ ಬಳಕೆಯಿಂದ ಸಂಶೋಧಕನಿಗೆ ಹೆಚ್ಚು ಸಹಾಯವಾಗುತ್ತದೆ.

ಸಂಶೋಧಕನು ನಿರ್ದಿಷ್ಟ ಸಮಾಜಗಳಲ್ಲಿ ಕಂಡುಬಂದ ಒಂದೆರಡು ಸಾಮಾನ್ಯ ನಿದರ್ಶನಗಳ ಆಧಾರದ ಮೇಲೆ ಸಾಮಾನ್ಯ ಸೂತ್ರವನ್ನು ನಿರೂಪಿಸಬಾರದು. ಉದಾಹರಣೆಗೆ, ಕೀಟ್ಸ್, ಚಾಪ್‌ಮ್ಯಾನ್ ಮುಂತಾದವರ ಜೀವನಚರಿತ್ರೆಯನ್ನು ಪರಿಶೀಲಿಸಿದ ನಂತರ ಸಂಶೋಧಕನು ರೊಮ್ಯಾಂಟಿಕ್ ಕಲೆಗಾರನು ಕ್ಷಯರೋಗದಿಂದ ತಾರುಣ್ಯದಲ್ಲಿಯೇ ಮೃತ್ಯುವಿನ ಅತಿಥಿಯಾಗುತ್ತಾನೆ ಎಂಬುದಾಗಿ ತೀರ್ಮಾನಿಸಿದರೆ, 80 ವರ್ಷಗಳಿಗೂ ಮೇಲೆ ದೀರ್ಘಾಯುಗಳಾಗಿ ಬಾಳಿದ ವರ್ಡ್ಸ್‌ವರ್ತ್, ಹ್ಯೂಗೊ, ಲ್ಯಾಂಡರ್, ಗಯಟೆ ಮುಂತಾದವರು ಇದು ಎಷ್ಟು ಅಸತ್ಯವಾದುದು ಎಂಬುದನ್ನು ಎತ್ತಿ ತೋರುತ್ತಾರೆ. ಈ ಕಲ್ಪನಾತ್ಮಕವಾದ ನಿರ್ಣಯವನ್ನು ಬುಡಸಮೇತ ಉರುಳಿಸಲು ಈ ನಾಲ್ವರ ನಿದರ್ಶನಗಳೇ ಸಾಕು. ಪಥಿಕನೊಬ್ಬನು ದಾರಿಯ ಪಕ್ಕದ ಭೋಜನ ಶಾಲೆಯಲ್ಲಿ ಕುಳಿತು ಹೊರಗೆ ನೋಡುತ್ತಿದ್ದಾಗ, ಕೆಂಪಾದ ಕೂದಲಿನಿಂದ ಕೂಡಿರುವ

ಒಂದಿಬ್ಬರು ಹುಡುಗಿಯರು ಕಣ್ಣಿಗೆ ಬಿದ್ದ ಕೂಡಲೇ, ಆ ನಾಡಿನಲ್ಲಿ ಎಲ್ಲಾ ಹುಡುಗಿಯರಿಗೆ ಕೆಂಪು ಕೂದಲಿದೆ ಎಂಬುದಾಗಿ ಒಂದೆರಡು ನಿದರ್ಶನಗಳ ಆಧಾರದ ಮೇಲೆ ಸಾಮಾನ್ಯ ನಿರ್ಣಯವನ್ನು ಮಾಡಿದರೆ ಅವನೆಂತಹ ಅನನುಭವಿ, ಅವನ ತೀರ್ಮಾನವೆಲ್ಲಾ ಮರಳಿನ ಆಧಾರದ ಮೇಲೆ ದೊಡ್ಡ ಸೌಧವನ್ನು ಕಟ್ಟುವ ಪ್ರಯತ್ನದಂತೆ ನಿಷ್ಫಲವಾದುದು ಎಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ವಿವಿಧ ಸಮಾಜಗಳಲ್ಲಿ ಸಂಭವಿಸಿದ್ದ ಸಾಮಾನ್ಯ ಘಟನೆಗಳಲ್ಲಿ ಒಂದೆರಡು ಅಂಶಗಳು ಸಾಮಾನ್ಯವಾಗಿರುವುದು ಸ್ಪಷ್ಟವಾಗಿದ್ದರೂ, ಅವುಗಳಿಗೆ ಅಪವಾದವಿರುತ್ತದೆ ಎಂಬುದನ್ನು ಮರೆಯಬಾರದು. ಉದಾಹರಣೆಗೆ, ಅನೇಕ ಕ್ರಾಂತಿಗಳ ಮಹಾಜ್ವಾಲೆ ಉರಿಯುವುದಕ್ಕೆ ಮೊದಲು ಅತೃಪ್ತಿ ಎಂಬ ದಟ್ಟವಾದ ಹೊಗೆ ಇದ್ದಿತು ಎಂಬುದು ನಿಜವಾದರೂ ಅನೇಕ ಸಮಾಜಗಳಲ್ಲಿ ವ್ಯಕ್ತಿಗಳು ವರ್ಣನಾತೀತವಾದ ಸಂಕಟಗಳ ಸುಳಿಗೆ ಸಿಕ್ಕಿಹಾಕಿಕೊಂಡು ಬಡತನದ ಬೇಗೆಯಲ್ಲಿ ಬೆಂದು ಬಸವಳಿದು ಬಳಲುತ್ತಿದ್ದರೂ ಅವರು ಕ್ರಾಂತಿಯ ಮಾರ್ಗವನ್ನು ಅನುಸರಿಸದೇ ಇದ್ದ ಅನೇಕ ದೃಷ್ಟಾಂತಗಳಿವೆ. ಆದ್ದರಿಂದ ಅನ್ವೇಷಕನು ತಾನು ಮಾಡುವ ನಿರ್ಣಯ ಅಥವಾ ನಿರೂಪಿಸುವ ಸಾಮಾನ್ಯೀಕರಣ ನಿರುಪಾಧಿಕವಾಗಿರುವುದಕ್ಕಿಂತ ಹೆಚ್ಚಾಗಿ ಕಲ್ಪನಾತ್ಮಕವಾಗಿರುತ್ತದೆ ಎಂಬುದನ್ನು ಜ್ಞಾಪಕದಲ್ಲಿಟ್ಟು–ಕೊಳ್ಳಬೇಕು.

ಆದರೂ ವಾಸ್ತವಾಂಶಗಳ ಕಾರಣಗಳ ಆಧಾರದ ಮೇಲೆ ಅವುಗಳನ್ನು ವಿವರಿಸುವ ಹಾಗೂ ಸಾಮಾನ್ಯ ಸೂತ್ರಗಳನ್ನು ನಿರೂಪಿಸುವ ಅವಶ್ಯಕತೆಯು ಎಲ್ಲಾ ವಿಜ್ಞಾನಗಳ ವಿಕಾಸಕ್ಕೆ ಮೂಲವಾಗಿದೆ. ಇದು ಐತಿಹಾಸಿಕ ನಿಯಮ, ಕಾರಣ ಹಾಗೂ ಸಾಮಾನ್ಯೀಕರಣಗಳನ್ನು ನಿರೂಪಿಸುವ ಕಾರ್ಯವನ್ನು ಸುಗಮಪಡಿಸಿದೆ. 19ನೆಯ ಶತಮಾನದಲ್ಲಿ ಇತಿಹಾಸಕಾರರು ಈ ತೆರನಾದ ಸಾಮಾನ್ಯೀಕರಣ ಹಾಗೂ ನಿಯಮಗಳ ನಿರೂಪಣೆಯಲ್ಲಿ ಮತ್ತು ಆದರ್ಶವಾದ, ಭೌತಿಕವಾದ, ದೃಷ್ಟಪ್ರಮಾಣವಾದ ಮುಂತಾದ ಸಿದ್ಧಾಂತಗಳನ್ನು ಪ್ರತಿಪಾದಿಸುವುದರಲ್ಲಿ ಗಾಢಾಸಕ್ತಿಯನ್ನು ವಹಿಸಿದರು. ಮಾನವ ಅನುಭವದ ಸರ್ವಸಾರವನ್ನು ಸಂಕ್ಷಿಪ್ತ ರೂಪದಲ್ಲಿ ನೀಡುವ ಸಾಮಾನ್ಯೀಕರಣಗಳು ಇತಿಹಾಸವೂ ವಿಜ್ಞಾನವಾಗಿದೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಆದ್ದರಿಂದ ಅವುಗಳಿಗೆ ಈ ಕ್ಷೇತ್ರದಲ್ಲಿ ಮುಖ್ಯವಾದ ಸ್ಥಾನವಿದೆ.

## 10.3.2 ಅಂತಿಮ ಕಾರ್ಯ ರೀತಿಯಲ್ಲಿ ದ್ವಿತೀಯ ಹಂತವೇ ವಿವರಣೆ ಅಥವಾ ಸ್ಪಷ್ಟೀಕರಣ

ಅಂದರೆ ಐತಿಹಾಸಿಕ ವಿಷಯಗಳನ್ನು ಅತ್ಯಂತ ಆಕರ್ಷಕ ಹಾಗೂ ಸ್ವಾರಸ್ಯಕರವಾದ ರೀತಿಯಲ್ಲಿ ಪ್ರತಿಪಾದಿಸುವುದು ಎಂದಾಗುತ್ತದೆ. ಇಲ್ಲಿ ಹಿಂದಿನ ಎಲ್ಲಾ ಸಂಶೋಧನಾ ಕಾರ್ಯ ರೀತಿಗಳನ್ನು ಸರಿಯಾಗಿ ಅನುಸರಿಸಲಾಗಿದೆಯೇ ಮತ್ತು ಸಮಗ್ರ ಬರಹವು ಒಂದು ಸಾಹಿತ್ಯ ಕೃತಿಯನ್ನಾಗಿಸುವ ತೆರದಲ್ಲಿ ಎಲ್ಲಾ ವಾಸ್ತವಾಂಶಗಳನ್ನು ಅಣಿಮಾಡಿಡಲಾಗಿದೆಯೇ ಎಂಬುದನ್ನು ಪರಿಶೀಲಿಸಲಾಗುತ್ತದೆ. ಇದು ಇತಿಹಾಸ ರಚನೆಯ ಕೊನೆಯ ಹಂತವಾಗಿರುವುದರಿಂದ ಇಲ್ಲಿ ಸಂಶೋಧಕನು ಬಹು ಎಚ್ಚರಿಕೆಯಿಂದ ಕೂಡಿ ಕಾರ್ಯವನ್ನು ನಿರ್ವಹಿಸಬೇಕು. ಇದು ಶುದ್ಧವಾಗಿ ಕಲೆಯ ಕಾರ್ಯವೇ ಹೊರತು, ವಿಜ್ಞಾನದ್ದಲ್ಲ. ಅಂದರೆ, ಈ ಸ್ಪಷ್ಟೀಕರಣದ ಹಂತಕ್ಕೆ ಬಂದಾಗ ಇತಿಹಾಸವು ಕಲೆಯಾಗಿಬಿಡುತ್ತದೆ. ಪ್ರತಿ ಸಂಶೋಧನಾ ವಿಷಯವನ್ನು ವಿವರಿಸುವಾಗ ಒಂದು ವಿಶಿಷ್ಟ ರೀತಿಯ ನಿರೂಪಣಾ ಕ್ರಮವನ್ನು ಅನುಸರಿಸಬೇಕಾಗುತ್ತದೆ. ಸರಿಯಾದ

ರೀತಿಯಲ್ಲಿ ಒಂದು ನಿರ್ಣಯಕ್ಕೆ ಬಂದು ಅತ್ಯಂತ ಪರಿಣಾಮಕಾರಿಯಾಗಿರುವ ಕ್ರಮವನ್ನು ಬಳಸಿ ವಿವರಣೆಯನ್ನು ನೀಡುವ ಸ್ವಾತಂತ್ರ್ಯವನ್ನು ಆಯಾಯ ಸಂಶೋಧಕನ ಸ್ವಂತ ವಿವೇಚನೆಗೆ ಬಿಟ್ಟುಬಿಡಬೇಕಾಗುತ್ತದೆ.

ಈ ಕಾರ್ಯ ರೀತಿಯನ್ನು ಅನುಸರಿಸುವುದಕ್ಕೆ ಮೊದಲು ಸಂಶೋಧಕನು ತನ್ನ ಅನ್ವೇಷಣೆಯ ಉದ್ದೇಶ ಹಾಗೂ ಆ ಉದ್ದೇಶ ಸಾಧನೆಯಲ್ಲಿ ಎಷ್ಟರಮಟ್ಟಿನ ಸಫಲತೆಯನ್ನು ಸಾಧಿಸಲಾಗಿದೆ ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಂಡಿರಬೇಕು. ವಾಸ್ತವದಲ್ಲಿ ಪ್ರತಿ ಅನ್ವೇಷಣೆಯು ಜ್ಞಾನದ ಮೇರೆಗಳು ಇನ್ನೂ ಹೆಚ್ಚು ವಿಸ್ತರಿಸುವಂತೆ ಮಾಡುವ ನೂತನ, ಅದ್ವಿತೀಯ ಹಾಗೂ ಅಪೂರ್ವವಾದ ವಿಷಯಗಳ ಸ್ಪಷ್ಟೀಕರಣವಾಗಿರುತ್ತದೆ. ಹಿಂದೆ ವಿವರಿಸಿರುವಂತೆ, ಸಂಶೋಧನೆಯು ಮೂರು ಬಗೆಯದ್ದಾಗಿರುತ್ತದೆ. ಮೊದಲನೆಯ ಬಗೆಯ ಸಂಶೋಧನೆಯಲ್ಲಿ ಹೊಸ ಹೊಸ ಅಂಶಗಳಿಗಾಗಿ ತೀವ್ರವಾಗಿ ಅನ್ವೇಷಣೆಯನ್ನು ನಡೆಸಿ, ನೂತನ ವಿಷಯಗಳನ್ನು ಸೇರಿಸಿ ನವೀನವಾದ ವಿವರಗಳನ್ನು ಬೆಳಕಿಗೆ ತರಲಾಗುತ್ತದೆ. ಎರಡನೆಯ ರೀತಿಯ ಅನ್ವೇಷಣೆಯಲ್ಲಿ ನೂತನ ಅರ್ಥವಿವರಣೆ ಅಥವಾ ಸ್ಪಷ್ಟೀಕರಣವನ್ನು ನೀಡಲಾಗುತ್ತದೆ. ಇಲ್ಲಿ ನೂತನ ವಿಷಯಗಳನ್ನು ಸೇರಿಸುವುದು ಮುಖ್ಯವಲ್ಲ; ಒಂದು ಹೊಸದಾದ ದೃಷ್ಟಿಕೋನವನ್ನು ಅಳವಡಿಸಿಕೊಂಡು, ವಿಷಯಗಳನ್ನು ಪ್ರತಿಪಾದಿಸಲಾಗುತ್ತದೆ. ಮೂರನೆಯ ರೀತಿಯ ಸಂಶೋಧನೆಯು ಉತ್ತಮ ಮಟ್ಟದ್ದಾಗಿರುತ್ತದೆ. ಇಲ್ಲಿ ಅನ್ವೇಷಕನು ನೂತನ ಅಂಶಗಳನ್ನು ಸೇರಿಸುವುದಕ್ಕೆ ಅಥವಾ ನೂತನ ಅರ್ಥವಿವರಣೆಯನ್ನು ನೀಡುವುದಕ್ಕೆ ಪ್ರಯತ್ನಿಸುವುದಿಲ್ಲ. ಇಲ್ಲಿ ಮಾಹಿತಿಯನ್ನು ಉತ್ತಮ ಮಟ್ಟದ ದಾರ್ಶನಿಕ ಪರೀಕ್ಷೆಗೆ ಒಳಪಡಿಸಿ ಐತಿಹಾಸಿಕ ಸಂಯೋಜನೆಯನ್ನು ಮಾಡಿ ಒಂದು ನೂತನ ಸಿದ್ಧಾಂತ ಅಥವ ವಾದವನ್ನು ಪ್ರತಿಪಾದಿಸಲಾಗುತ್ತದೆ. ಇದು ಅತ್ಯಂತ ಕಷ್ಟಕರವಾದ ಕಾರ್ಯ.

ಮೊದಲು ಸಂಶೋಧಕನು ತನ್ನ ಅನ್ವೇಷಣೆಯು ಈ ಮೇಲೆ ವಿವರಿಸಿರುವ ಯಾವ ವರ್ಗಕ್ಕೆ ಸೇರುವಂತಹುದು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಅದು ಮೊದಲನೆಯ ವರ್ಗಕ್ಕೆ ಸೇರಿಸಬಹುದಾದ ಅನ್ವೇಷಣೆಯಾದರೆ ಆಗ ಸಂಶೋಧಕನು ಹೊಸ ವಿಷಯಗಳನ್ನು ಕಂಡುಹಿಡಿಯಬೇಕು ಹಾಗೂ ಎಷ್ಟರಮಟ್ಟಿಗೆ ತನ್ನ ಅನ್ವೇಷಣಾಕಾರ್ಯ ಅನುಕರಣಾತ್ಮಕವಾಗಿದೆ, ಸ್ವಕಪೋಲ ಕಲ್ಪಿತವಾಗಿದೆ ಎಂಬುದನ್ನು ಪರಿಶೀಲಿಸಬೇಕು. ಇಲ್ಲಿ ಸ್ವಂತಿಕೆಯನ್ನು ತೋರಬೇಕಾದರೆ ಅವನು ಎಲ್ಲಾ ಮೂಲಾಧಾರಗಳನ್ನೂ ಎಚ್ಚರಿಕೆಯಿಂದ ವ್ಯಾಪಕವಾಗಿ ಪರಿಶೀಲಿಸಬೇಕು ಮತ್ತು ತಾನು ಯಾವ ಮೂಲಾಧಾರಗಳನ್ನೂ ಪರೀಕ್ಷಿಸದೆ ಬಿಟ್ಟಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಅವನಿಗೆ ಬೇಕಾಗಿರುವ ಐತಿಹಾಸಿಕ ವಿಷಯ ಸಾಮಗ್ರಿಗಳು ವಿವಿಧ ಸ್ಥಳಗಳಲ್ಲಿ ಹಾಗೂ ವಿಭಿನ್ನ ರಾಷ್ಟ್ರಗಳಲ್ಲಿ ಇರಬಹುದು. ಉದಾಹರಣೆಗೆ, ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿರುವ ಅತ್ಯಂತ ಉಪಯುಕ್ತವಾಗಿರುವ ಅನೇಕ ವಿಷಯಸಾಮಗ್ರಿಗಳನ್ನು ಇಂಗ್ಲೆಂಡ್, ಫ್ರಾನ್ಸ್, ಹಾಲೆಂಡ್ ಮುಂತಾದ ದೇಶಗಳ ಪತ್ರಾಗಾರಗಳಲ್ಲಿ ಕಾಣಬಹುದು. ಆಧುನಿಕ ಕಾಲದಲ್ಲಿ ಅವಶ್ಯವಾಗಿರುವ ಎಲ್ಲಾ ಮೂಲಾಧಾರಗಳನ್ನು ಸುಲಭವಾಗಿ ತಿಳಿದುಕೊಳ್ಳಬಹುದು. ಕಾರಣ ಜಗತ್ತಿನ ವಿವಿಧ ರಾಷ್ಟ್ರಗಳ ಗ್ರಂಥಾಲಯ, ಪತ್ರಾಗಾರ, ದಾಖಲೆ ಕಛೇರಿ ಇತ್ಯಾದಿಗಳಲ್ಲಿ ಇರುವ ಎಲ್ಲಾ ಗ್ರಂಥ ಹಾಗೂ ಹಸ್ತಪ್ರತಿಗಳ ಮುದ್ರಿತ ಪಟ್ಟಿಗಳು ಈಗ ದೊರಕುತ್ತವೆ. ಅದೂ ಅಲ್ಲದೆ, ಸಂಶೋಧಕನಿಗೆ ಇನ್ನೊಂದು ರಾಷ್ಟ್ರಕ್ಕೆ ಹೋಗಿ

ಅಲ್ಲಿರುವ ಮೂಲಕೃತಿಗಳನ್ನು ಪರಾಮರ್ಶಿಸುವುದು ಸಾಧ್ಯವಿಲ್ಲದೇ ಹೋದರೂ ಅವನು ಅವುಗಳ ಸೂಕ್ಷ್ಮ ಛಾಯಾಚಿತ್ರ ಪ್ರತಿಗಳನ್ನು ಪಡೆದು ಬಳಸಿಕೊಳ್ಳಬಲ್ಲನು. ಎರಡನೆಯ ಬಗೆಯ ಅನ್ವೇಷಣೆಯಲ್ಲಿ ಸ್ವಂತಿಕೆಯನ್ನು ತೋರಲು ಸಂಶೋಧಕನಿಗೆ ಇಷ್ಟು ಶಾರೀರಿಕ ಶ್ರಮ ಅನಾವಶ್ಯಕ. ಇಲ್ಲಿಬೇಕಾಗುವುದು ಮಾನಸಿಕ ಸಾಮರ್ಥ್ಯ. ನಿಸ್ಸಂದೇಹವಾಗಿ ಇಲ್ಲೂ ಸಹ ಸಂಶೋಧಕನು ಲಭ್ಯವಿರುವ ಎಲ್ಲಾ ಮಾಹಿತಿಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲಾಗಿದೆಯೇ ಮತ್ತು ನೂತನ ಬೆಳಕನ್ನು ಬೀರುವ ಹೊಸ ವಿಷಯಗಳೇನಾದರೂ ದೊರಕಿದ್ದರೆ, ಅವುಗಳನ್ನು ಬಿಡದೆ ಉಪಯೋಗಿಸಿಕೊಳ್ಳಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ದೃಢಪಡಿಸಿಕೊಳ್ಳಬೇಕು. ಆದರೆ ಇಲ್ಲಿ ಮುಖ್ಯವಾಗಿರುವುದು ಅರ್ಥವಿವರಣೆ, ಅದಕ್ಕೆ ವಿಷಯಗಳನ್ನು ಬುದ್ಧಿವಂತಿಕೆಯಿಂದ ಬಳಸಿಕೊಳ್ಳಬೇಕಾದುದು ಅವಶ್ಯಕ. ಕೊನೆಯದಾಗಿ, ಇತಿಹಾಸವನ್ನು ತಾತ್ತ್ವಿಕ ದೃಷ್ಟಿಯಿಮದ ನೋಡಿ ಸಿದ್ಧಾಂತಗಳನ್ನು ನಿರ್ಮಿಸಬೇಕಾದರೆ ಹೆಚ್ಚಿನ ಮಟ್ಟದ ಪ್ರೌಢತೆ, ಆಳವಾದ ಪರಿಪೂರ್ಣ ಜ್ಞಾನ ಹಾಗೂ ಸೂಕ್ಷ್ಮ ಪರಿಜ್ಞಾನ ಅವಶ್ಯಕ. ಉದಾಹರಣೆಗೆ, ಕಾರ್ಲೈಲನ ಮಹಾಪುರುಷರ ಸಿದ್ಧಾಂತ, ಮಾರ್ಕ್ಸ್‌ನ ಆರ್ಥಿಕ ನಿಯತಿವಾದ, ಹೆಗಲನ ಆದರ್ಶವಾದ, ಟಾಯ್ನಬಿಯ ಪ್ರತಿಭಟನೆ ಹಾಗೂ ಪ್ರತಿಕ್ರಿಯೆಯ ಸಿದ್ಧಾಂತ ಇತ್ಯಾದಿಗಳು ಅಸಂಖ್ಯಾತ ವಿವರಗಳನ್ನು ಒಂದು ಸಾಮಾನ್ಯ ನಿಯಮಕ್ಕೆ ಇಳಿಸುವ ಪ್ರಯತ್ನಗಳ ಫಲಗಳಾಗಿವೆ. ಕೆಲವು ಸಂದರ್ಭಗಳಲ್ಲಿ ಹಲವು ಚರಿತ್ರ ಲೇಖಕರು ಪೂರ್ವಭಾವಿಯಾಗಿಯೇ ಕೆಲವು ಅಭಿಪ್ರಾಯಗಳನ್ನು ಬೆಳೆಸಿಕೊಂಡಿರುತ್ತಾರೆ ಮತ್ತು ಅವುಗಳನ್ನು ಸಮರ್ಥಿಸುವುದಕ್ಕಾಗಿ ಐತಿಹಾಸಿಕ ವಿಷಯಗಳ ರಾಜ್ಯಕ್ಕೆ ಕಾಲಿಟ್ಟು ಅಲ್ಲಿ ತಾವು ಮೊದಲೇ ನಿರೂಪಿಸಿಕೊಂಡಿರುವ ಸಿದ್ಧಾಂತಕ್ಕೆ ಸರಿಹೊಂದುವಂತಹ ಮಾಹಿತಿಗಳನ್ನು ಮಾತ್ರ ಆರಿಸಿಕೊಳ್ಳುತ್ತಾರೆ ಮತ್ತು ಅವರು ತಮ್ಮ ಪ್ರತಿಪಾದನೆ ಭಾಗಶಃ ಸತ್ಯವಾಗಿದ್ದರೂ ಅದು ಸಂಪೂರ್ಣವಾಗಿ ಸತ್ಯವಾಗಿದೆ ಎಂಬುದಾಗಿ ಸಾಧಿಸುವುದಕ್ಕೆ ಶ್ರಮಿಸುತ್ತಾರೆ. ಆದರೂ ಅವರು ಒಂದು ಬಗೆಯ ಸಿದ್ಧಾಂತವನ್ನು ನಿರ್ಮಾಣ ಮಾಡುವುದರ ಮೂಲಕ ಒಂದು ಕಾಲದ ಸಾಮಾಜಿಕ ಅವಶ್ಯಕತೆಯನ್ನು ಪೂರೈಸುತ್ತಾರೆ ಎಂಬುದಾಗಿ ಹೇಳಬಹುದು.

ಸಂಶೋಧಕನು ತನ್ನ ಅನ್ವೇಷಣೆ ಯಾವ ಬಗೆಯದು ಹಾಗೂ ತನ್ನ ಸಂಶೋಧನಾ ಕಾರ್ಯ ಎಷ್ಟು ಸಮರ್ಪಕವಾಗಿದೆ ಎಂಬುದನ್ನು ಪರಿಪೂರ್ಣವಾಗಿ ಪರೀಕ್ಷಿಸಿ ದೃಢಪಡಿಸಿಕೊಳ್ಳಬೇಕು. ಅವನು ಸ್ವಂತಿಕೆಯನ್ನು ಸಾಧಿಸಿ ತೋರಬೇಕಾದರೆ ಮೂಲಾಧಾರಗಳನ್ನು ಜಾಗರೂಕತೆಯಿಂದ ಪರಿಪೂರ್ಣವಾಗಿ ಪರಿಶೀಲಿಸದರೆ ಮಾತ್ರ ಸಾಲದು, ವಿಷಯಗಳ ನಿರೂಪಣೆ ಸ್ಪಷ್ಟವಾಗಿರಬೇಕು ಹಾಗೂ ವಾದಸರಣಿಯು ಸ್ವಚ್ಛವಾಗಿರಬೇಕು. ಅವನು ಲಭ್ಯವಿರುವ ಎಲ್ಲಾ ಆಧಾರಗಳನ್ನು ಸಂಗ್ರಹಿಸಿ ಆಳವಾಗಿ ವಿಚಾರ ಮಾಡಿ ಅವುಗಳ ವಿಷಯಗಳನ್ನು ಆದ್ಯಂತವಾಗಿ ವಿಶ್ಲೇಷಿಸಿ ಪೂರ್ಣವಾಗಿ ಅರ್ಥಮಾಡಿಕೊಂಡಾಗ ಮಾತ್ರ ವಿಚಾರಗಳನ್ನು ಸ್ಪಷ್ಟವಾಗಿ ನಿರೂಪಿಸುವುದು ಅವನಿಗೆ ಸುಲಭವಾಗುತ್ತದೆ. ಸರಿಯಾಗಿ ಜೀರ್ಣವಾಗದ ವಿಷಯಸಾಮಗ್ರಿಗಳಿಂದ ಯಾವಾಗಲೂ ಅವ್ಯವಸ್ಥೆ ಉಂಟಾಗುತ್ತದೆ. ಅವನಿಗೆ ವಿಷಯಗಳು ಸ್ಪಷ್ಟವಾಗಿ ತಿಳಿಯದೇ ಇದ್ದಾಗ ಅವನು ವಾಚಕರಿಗೆ ಅವುಗಳನ್ನು ಹೇಗೆ ತಾನೆ ಸ್ಪಷ್ಟಪಡಿಸಬಲ್ಲನು? ಅದು ಒಬ್ಬ ಕುರುಡನು ಮತ್ತೊಬ್ಬ ಅಂಧನಿಗೆ ದಾರಿ ತೋರಲು ಮಾಡುವ ಪ್ರಯತ್ನದಂತಾಗುತ್ತದೆ.

ಸಂಶೋಧಕನು ಗಮನಿಸಬೇಕಾದ ಇನ್ನೊಂದು ಬಹು ಮುಖ್ಯವಾದ ಅಂಶವೆಂದರೆ ಸೂಕ್ತವಾದ ಹಾಗೂ ಸರಳವಾದ ಪದ ಹಾಗೂ ವಾಕ್ಸರಣಿಗಳ ಆಯ್ಕೆ. ತನ್ನ ಬರವಣಿಗೆಗೆ ಒಂದು ನಿರ್ದಿಷ್ಟ ಉದ್ದೇಶವಿದೆ ಮತ್ತು ಬರವಣಿಗೆ ಎನ್ನುವುದು ಒಂದು ಪವಿತ್ರವಾದ ಸಾಮಾಜಿಕ ಕಾರ್ಯ. ಅದರಲ್ಲಿ ಆತ್ಮಸಂಯಮ ಬಹು ಅಗತ್ಯ ಮತ್ತು ಪರಸ್ಪರ ಅರಿವು ಹಾಗೂ ವಿಚಾರವಿನಿಮಯಕ್ಕಾಗಿ ಸಾಮಾನ್ಯಾರ್ಥಗಳಿಂದ ಕೂಡಿರುವ, ಎಲ್ಲರಿಗೂ ಪರಿಚಿತವಾಗಿರುವ ಸರಳ ಪದ ಹಾಗೂ ಪ್ರಯೋಗಗಳನ್ನು ಬಳಸಬೇಕು ಎಂಬುದನ್ನು ಅವನು ಮರೆಯಬಾರದು. ತಾನು ಸರಿಯಾಗಿ ಬರೆಯಬೇಕು ಮತ್ತು ತಾನು ಬರೆಯುವುದನ್ನು ಇತರರು ಆಸಕ್ತಿಯಿಂದ ಓದಬೇಕು ಎಂಬ ಅವನ ಬಯಕೆ ಈಡೇರಬೇಕಾದರೆ ಅವನು ಎಲ್ಲಾ ಸಮಯದಲ್ಲೂ ಎಲ್ಲಾ ಪದಗಳಿಗೂ ಲಕ್ಷ್ಯ ಕೊಡುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ಚಿತ್ರಕಲಾ ವಿದ್ಯಾರ್ಥಿಯು ಕಲಾರೂಪ ಹಾಗೂ ವರ್ಣಕ್ಕೆ ಮತ್ತು ಸಂಗೀತಗಾರನು ನಾದ ಹಾಗೂ ಸ್ವರ ತರಂಗಗಳಿಗೆ ಸದಾ ಗಮನ ಕೊಡಬೇಕಾದುದು ತಮ್ಮ ಕರ್ತವ್ಯವಲ್ಲ ಎಂಬುದಾಗಿ ಯಾವಾಗಲೂ ಎಣಿಸುವುದಿಲ್ಲ. ಪದಗಳ ಬೆಲೆಯನ್ನು ತಿಳಿದು ಬಳಸುವುದರಲ್ಲಿ ಸಂಶೋಧಕನು ಕೌಶಲವನ್ನು ತೋರಬೇಕು. ಅವನು ಪದಗಳ ಬಗ್ಗೆ ಜಾಗರೂಕತೆಯಿಂದ ಇದ್ದು ಅವುಗಳನ್ನು ತಕ್ಷಣ ಗುರುತಿಸಿ ಅವುಗಳನ್ನು ತೂಗಿ ನೋಡಿ ಅವುಗಳ ವಿಭಿನ್ನ ಅರ್ಥಗಳ ಇಂದ್ರಜಾಲವನ್ನು ಸುಲಭವಾಗಿ ಭೇದಿಸಲು ಶಕ್ತನಾಗಿರಬೇಕು. ಸೂಕ್ತವಾದ ಪದಗಳು ಸರಿಯಾದ ಸ್ಥಳಗಳಲ್ಲಿ ಇರಬೇಕು; ಪದಗಳ ಅರ್ಥಗಳನ್ನು ಪರಿಪೂರ್ಣವಾಗಿ ತಿಳಿದುಕೊಳ್ಳಲು ಸದಾ ಅವನು ನಿಘಂಟನ್ನು ಬಳಸುತ್ತಲೇ ಇರಬೇಕು. 'ಆದಾಗ್ಯೂ', 'ಸಹ', 'ಆದರೂ', 'ಏಕೆಂದರೆ' ಮುಂತಾದ ಸಂಬಂಧಾವ್ಯಯಗಳ ಬಳಕೆಯ ಬಗ್ಗೆ ಬಹು ಎಚ್ಚರಿಕೆಯಿಂದಿರಬೇಕು. ಕಾರಣ ಅವುಗಳು ಅರ್ಥದ ದಿಕ್ಕನ್ನೇ ಬದಲಾಯಿಸಿಬಿಡಬಹುದು. ಇಷ್ಟು ಮಾತ್ರವಲ್ಲದೆ, ಕೆಲವು ಅರ್ಥವಾಗುವ ಪದಗಳು ಹಾಗೂ ಪಾರಿಭಾಷಿಕ ಆಡಂಬರ ಶಬ್ಧಗಳೂ ಸಂಶೋಧಕನನ್ನು ಆಕರ್ಷಿಸಿ ಅವನ ಬರಹ ಅನಾಕರ್ಷಕವಾಗುವಂತೆ ಮಾಡುತ್ತವೆ. ಬಡಗಿ, ನಾವಿಕ ವೃತ್ತಿ ಮುಂತಾಗಿ ವಿವಿಧ ವೃತ್ತಿಗಳಲ್ಲಿ ಕೆಲವು ಪಾರಿಭಾಷಿಕ ಶಬ್ಧಗಳನ್ನು ಬಳಸಲಗುತ್ತದೆ. ಅವುಗಳು ಸೂಚಿಸುವ ವಿಷಯಗಳಿಗೆ ಬೇರಾವ ಪದಗಳೂ ಇಲ್ಲದಿರುವುದರಿಂದ ಅವುಗಳು ಅನಿವಾರ್ಯವಾಗಿರುತ್ತವೆ. ಉದಾಹರಣೆಗೆ, ನಾವಿಕನ ಭಾಷೆಯಲ್ಲಿ 'ಮೇನ್ ಷೀಟ್' ಎಂದರೆ ಹಗ್ಗವೇ ಹೊರತು ನೌಕಾಪಟವಲ್ಲ. ಆ ವೃತ್ತಿಯ ಬಗ್ಗೆ ಬರೆಯುವಾಗ ಆ ಪಾರಿಭಾಷಿಕ ಪದದ ಅರ್ಥವನ್ನು ತಿಳಿದು ಸರಿಯಾಗಿ ಬಳಸಬೇಕಾಗುತ್ತದೆ. ಆದರೆ ಇನ್ನೊಂದು ಪಾರಿಭಾಷಿಕ ಆಡಂಬರ ಪದಗಳಿರುತ್ತವೆ. ಅವುಗಳು ಕೃತಕವಾದುವು, ಅವುಗಳನ್ನು ವೈಜ್ಞಾನಿಕವಾದ ಪಾರಿಭಾಷಿಕ ಪದಗಳಂತೆ ಉಪಯೋಗಿಸಲಾಗುತ್ತದೆ. ಆದರೆ ಅವುಗಳು ಪಾರಿಭಾಷಿಕ ಶಬ್ಧಗಳಾಗಿರುವುದಿಲ್ಲ. ಕಾರಣ ಅವುಗಳಿಗೆ ನಿಶ್ಚಿತವಾದ ಹಾಗೂ ಸ್ಥಿರೀಕರಿಸಲಾದ ಅರ್ಥವಿರುವುದಿಲ್ಲ ಮತ್ತು ಅವುಗಳ ಬಳಕೆ ಅನಿವಾರ್ಯವಾಗಿರುವುದಿಲ್ಲ. ಆದರೆ ಹೊಸತನದ ಕಾರಣ ಅವುಗಳು ಜನಪ್ರಿಯವಾಗುತ್ತವೆ. ಇವುಗಳೊಂದಿಗೆ ವಿವಿಧಾರ್ಥವುಳ್ಳ ಪದಗಳು, ಲಂಬೋಕ್ತಿಗಳು ಅಥವಾ ಬಳಸು ಮಾತುಗಳು ಸಂಶೋಧಕನಿಗೆ ದೊಡ್ಡ ತಲೆನೋವನ್ನುಂಟು ಮಾಡುತ್ತವೆ.

ಹಾಗೆಯೇ ಒಂದು ಘಟನೆಯನ್ನು ವಿವರಿಸುವಾಗ ಅದರಲ್ಲಿ ಮುಖ್ಯವಾಗಿದ್ದವರ ಅಥವಾ ಸಮೂಹದ ಹೆಸರನ್ನು ನೇರವಾಗಿ ತಿಳಿಸಬೇಕೇ ಹೊರತು ಅದನ್ನು ಒಂದು ಮಹಾಡಂಬರದ ಪದದ ಹಿಂದೆ ಅಡಗಿಸಿಡಬಾರದು. ಉದಾಹರಣೆಗೆ, 'ಕಡಲ ಸಂಬಂಧವಾದ ಅಂಶಗಳು ಅಸಮಾಧಾನಗೊಂಡಿದ್ದುವು'

ಎಂಬುದಾಗಿ ಹೇಳುವುದಕ್ಕೆ ಬದಲಾಗಿ ನಾವಿಕರು ಅಸಮಾಧಾನಗೊಂಡಿದ್ದರು ಎಂಬುದಾಗಿ ಹೇಳಿದರೆ, ಅಥವಾ ಇನ್ನೂ ವ್ಯಾಪಕವಾಗಿ ಹೇಳಬೇಕಾದರೆ, ನಾವಿಕರು ಹಾಗೂ ಅವರ ಕುಟುಂಬದವರು ಅಥವಾ ಹಿತೈಷಿಗಳು ಅಥವಾ ಆಶ್ರಿತರು, ಅದಕ್ಕಿಂತ ಹೆಚ್ಚಾಗಿ ಕಡಲತೀರವಾಸಿಗಳು ಎಂಬ ವಾಕ್ಸರಣಿಗಳನ್ನು ಬಳಸಿದರೆ ಅರ್ಥ ಹೆಚ್ಚು ಸ್ಪಷ್ಟವಾಗುತ್ತದೆ. ಇವುಗಳಲ್ಲದೆ ಕೆಲವು ಗುಣವಾಚಕಗಳ ಬಳಕೆಯ ವಿಚಾರದಲ್ಲೂ ಸಂಶೋಧಕನು ಜಾಗರೂಕನಾಗಿರಬೇಕು. ಅನೇಕ ಪಠ್ಯಪುಸ್ತಕಗಳಲ್ಲಿ ಅವುಗಳ ಬಳಕೆ ಸರ್ವೇಸಾಮಾನ್ಯವಾಗಿರುತ್ತದೆ. ಉದಾಹರಣೆಗೆ, ತಲೆ ಎತ್ತಲಾರದಂತಹ ಅಪಜಯ, ವ್ಯವಹಾರ ನಿಪುಣತೆಯುಳ್ಳ ರಾಯಭಾರಿ ಇತ್ಯಾದಿ. ಈ ತರಹದ ಪ್ರಮಾಣಭೂತ ವಿಶೇಷ ಪದಗಳಿಗೆ ವಿಶ್ರಾಂತಿಯನ್ನು ಕೊಡಬೇಕು. ಇವುಗಳೊಂದಿಗೆ ಇನ್ನೊಂದು ಬಗೆಯ ಅರ್ಥವಿಲ್ಲದ ಅನಾವಶ್ಯಕ ಪದಗಳಿವೆ. ಅವುಗಳನ್ನು ಗೋವರ್ಸ್‌ನು 'ಕ್ರಿಯಾ ವಿಶೇಷಣ ಮೇಲಂಗಿಗಳು' ಎಂಬುದಾಗಿ ಸ್ವಾರಸ್ಯಕರವಾದ ರೀತಿಯಲ್ಲಿ ಹೆಸರಿಸಿದ್ದಾನೆ. ಅವನು ಪೂರ್ತಿಯಾಗಿ ಅಸಮರ್ಥನೀಯವಾದ ಹಾಗೂ ಸಂಪೂರ್ನವಾಗಿ ತಪ್ಪಾಗಿ ಅರ್ಥೈಸಲಾದ ಯುಗಳ ಪದಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಲೇಖಕನು ಪರಿಸ್ಫುಟವಾದ ಪದಗಳನ್ನು ಬಳಸುವುದಕ್ಕೆ ಸಂಕೋಚಪಟ್ಟು ಅದನ್ನು ಕ್ರಿಯಾವಿಶೇಷಣದಿಂದ ಮುಚ್ಚಿಡುವುದಕ್ಕೆ ಪ್ರಯತ್ನಿಸುತ್ತಾನೆ. ಆದ್ದರಿಂದ 'ಕ್ರಿಯಾವಿಶೇಷಣ ಸಂಬಂಧದ ಮೇಲಂಗಿ' ಎಂಬುದಾಗಿ ಕರೆಯಬಹುದು ಎಂಬುದಾಗಿ ಅಭಿಪ್ರಾಯ ಪಡುತ್ತಾನೆ. ಪ್ರಧಾನ ಪದದ ಮುಸುಕನ್ನು ತೆಗೆದುಹಾಕಿದರೆ ಸಾಕು, ಹೇಳಿಕೆ ಎಷ್ಟು ಪರಿಣಾಮಕಾರಿಯಾಗುತ್ತದೆ! ಉದಾಹರಣೆಗೆ, 'ಅವನ ಕ್ರಿಯೆ ಅಸಮರ್ಥನೀಯವಾಗಿದ್ದಿತು' ಎಂಬ ವಾಕ್ಯವು, 'ಅವನ ಕ್ರಿಯೆ ಪೂರ್ತಿಯಾಗಿ ಅಸಮರ್ಥನೀಯವಾಗಿದ್ದಿತು' ಎಂಬುದಕ್ಕಿಂತ ಹೆಚ್ಚು ಬಲವಾಗಿದೆ. ಕಾರಣ ಮೊದಲ ಹೇಳಿಕೆಯಲ್ಲಿ ನಿರ್ದಿಷ್ಟ ತೀರ್ಮಾನಕ್ಕೆ ಬಂದಾಗಿದೆ, ಸೇರಿಸುವುದಕ್ಕೆ ಏನೂ ಇಲ್ಲ; ಆದರೆ ಎರಡನೆಯ ಹೇಳಿಕೆಯಲ್ಲಿ ಕ್ರಿಯಾವಿಶೇಷಣದ ಸಹಾಯದಿಂದ ಲೇಖಕನು ಸಮರ್ಥಿಸಲು ಪರಿಶ್ರಮ ಪಡುತ್ತಿರುವುದು ತಿಳಿದುಬರುತ್ತದೆ.

ಅರ್ಥವಿಲ್ಲದ ಪದಗಳು, ಚರ್ವಿತ ಚರ್ವಣ ನುಡಿಗಳು, ಮಹದಾಡಂಬರದ ಶಬ್ಧಗಳು ಕೇವಲ ನಿರ್ದಿಷ್ಟ ಪದಗುಚ್ಛಗಳು ಮಾತ್ರವಲ್ಲ, ಅಥವಾ ಬರವಣಿಗೆಯಲ್ಲಿ ತೋರುವ ತಪ್ಪುಗಳು ಮಾತ್ರವಲ್ಲ, ಅವುಗಳು ಲೇಖಕನು ಪಾರಾಗಿ ಹೋಗಲು ಅನುಸರಿಸುವ ಕ್ರಮಗಳೂ ಆಗಿರುತ್ತವೆ. ಅವುಗಳು ಲೇಖಕನಲ್ಲಿ ಇರುವ ಒಂದು ಭಾವನಾತ್ಮಕ ದೌರ್ಬಲ್ಯ, ಒಂದು ನಿರ್ದಿಷ್ಟ ತೀರ್ಮಾನಕ್ಕೆ ಬಂದು ವಿಶಿಷ್ಟ ಹೇಳಿಕೆಯನ್ನು ನೀಡಲು ಬೇಕಾದ ದಿಟ್ಟತನದ ಅಭಾವ ಇತ್ಯಾದಿಯನ್ನು ಎತ್ತಿತೋರುತ್ತವೆ. ಕೊಲೆ ನಡೆದ ಸ್ಥಳದಲ್ಲಿ ಕೈ ಬೆರಳುಗಳ ಗುರುತುಗಳು ಮೂಡಿರುವಂತೆ, ಈ ಹೇಡಿತನ ಹಾಳೆಗಳ ಮೇಲೆ ಸ್ಪಷ್ಟವಾಗಿ ಕಂಡುಬರುತ್ತದೆ. ಇಷ್ಟು ಮಾತ್ರವಲ್ಲದೆ, ಹೆಚ್.ಡಬ್ಲ್ಯೂ.ಫೌಲರ್ 'ಎರಕ ಹೊಯ್ದ ಕಬ್ಬಿಣ' ಎಂಬುದಾಗಿ ವಿವರಿಸಿರುವ ಒಂದು ಭಾಷೆಯ ವಿಶಿಷ್ಟವಗಿರುವ ನುಡಿಗಟ್ಟುಗಳಿವೆ. ಇವುಗಳನ್ನು ಸರಿಯಾಗಿ ಅರ್ಥಮಾಡಿಕೊಮಡು ತಪ್ಪಿಲ್ಲದಂತೆ ಬಳಸಬೇಕು. ಪದಗಳ ಒಳಾರ್ಥಗಳನ್ನು ಅಥವಾ ಗೌಣ ಅರ್ಥಗಳನ್ನು ತಿಳಿದುಕೊಳ್ಳುವುದು ಅಷ್ಟು ಸುಲಭವಲ್ಲ. ಉದಾಹರಣೆಗೆ, ವ್ಯಕ್ತಿಯು ಕುದುರೆಸವಾರಿ ಮಾಡುತ್ತಾನೆ ಮತ್ತು ಮೋಟಾರುಬಂಡಿಯನ್ನು ನಡೆಸುತ್ತಾನೆ. ಭಾಷಾ ಪ್ರಭುತ್ವವನ್ನು ಪಡೆಯಬೇಕಾದರೆ ಸಂಶೋಧಕನು ಈ ತರಹದ ಪ್ರಯೋಗಗಳನ್ನು ಸಂಪೂರ್ಣವಾಗಿ ಅರಿತುಕೊಂಡಿರಬೇಕು ಮತ್ತು ಅವನು ಪದಗಳ ಬಗ್ಗೆ ಸತತವಾಗಿ ಅಧ್ಯಯನ ಮಾಡುತ್ತಲೇ ಇರಬೇಕಾಗುತ್ತದೆ. ಈ ತೆರನಾದ ನಿರಂತರವಾದ ಶಿಸ್ತಿನಿಂದ ಕೂಡಿರುವ ಸ್ವಯಂಶಿಕ್ಷಣದಲ್ಲಿ ಅವನ ಕಣ್ಣು,

ಕಿವಿ, ಬುದ್ಧಿ ಹಾಗೂ ಜ್ಞಾಪಕಶಕ್ತಿ ಸಮಾನವಾಗಿ ಭಾಗವಹಿಸಬೇಕು. ಕಿವಿಗಳ ಬೆಂಬಲದಲ್ಲಿ ಕಣ್ಣುಗಳು ಅಕ್ಷರ ಸಂಯೋಜನೆಯನ್ನು ಹಾಗೂ ನುಡಿಗಟ್ಟುಗಳನ್ನು ಗುರುತಿಸುತ್ತವೆ; ಬುದ್ಧಿ ಶಕ್ತಿಯು ಪರ್ಯಾಯ ಪದಗಳಿಗಿರುವ ಭೇದಗಳನ್ನು ಎಚ್ಚರಿಕೆಯಿಂದ ಪರೀಕ್ಷಿಸುತ್ತದೆ; ಎಲ್ಲವನ್ನೂ ಜ್ಞಾಪಕಶಕ್ತಿ ಕೇಂದ್ರವು ಕೂಡಿಟ್ಟು, ಒಳಾರ್ಥ ಅಥವಾ ಗೌಣ ಅರ್ಥಗಳಿಂದ ಕೂಡಿರುವ ಪದಗಳನ್ನು ಸಕಾಲಕ್ಕೆ ಒದಗಿಸುತ್ತದೆ.

ಆದ್ದರಿಂದ ವಾಕ್ಯರಚನೆಯಲ್ಲಿ ಭಾಗಗಳ ಜೋಡಣೆ ಬಹು ಮುಖ್ಯವಾದುದು. ಅಂದರೆ, ಸಂಬಂಧಪಟ್ಟಿರುವ ಭಾಗಗಳನ್ನು ಬೇರ್ಪಡಿಸಬಾರದು ಮತ್ತು ದೂರದೂರವಿರುವ ಅಂಶಗಳನ್ನು ಕೃತಕವಾಗಿ ಸೇರಿಸಿಡಬಾರದು; ಸರಿಯಾದ ಸ್ವರಭಾರವನ್ನು ಕೊಡಬೇಕು. ಸ್ವರಭಾರ ಸಮರ್ಪಕವಾಗಿದ್ದರೆ ಛಂದೋಗತಿಯು ಸರಿಯಾಗಿರುತ್ತದೆ. ವಾಕ್ಸರಣಿಯು ಸಮಗ್ರ ಬರವಣಿಗೆಯ ಧಾಟಿಗೆ ಅನುಗುಣವಾಗಿರಬೇಕು. ಇದು ಭಾಗಶಃ ಪದವಿನ್ಯಾಸಕ್ಕೆ ಮತ್ತು ಭಾಗಶಃ ರಚನಾಕ್ರಮಕ್ಕೆ ಸಂಬಂಧಿಸಿರುತ್ತದೆ. ಬರವಣಿಗೆಗೆ ಇರಬೇಕಾದ ನಿರ್ದಿಷ್ಟ ಧ್ವನಿಯನ್ನು ಈ ಎರಡು ಅಂಶಗಳು ನಿರ್ಧರಿಸುತ್ತವೆ. ಕೆಲವು ಸಲ ಸೂಕ್ಷ್ಮ ಅಲ್ಪವಿರಾಮ ಚಿಹ್ನೆಯನ್ನು ಬಳಸುವುದರಿಂದ ಅರ್ಥವನ್ನು ಸ್ಪಷ್ಟಪಡಿಸಬಹುದಾದರೂ, ನ್ಯೂನವಾಕ್ಯವನ್ನು ಈ ಚಿಹ್ನೆಯಿಮದ ಸರಿಪಡಿಸುವುದು ಸಾಧ್ಯವಿಲ್ಲ. ತೊಡಕಾಗಿರುವ ಸಂಯುಕ್ತ ವಾಕ್ಯಗಳನ್ನು ರಚಿಸಬಾರದು ಮತ್ತು ಎರಡು ಅಥವಾ ಮೂರು ರೀತಿಯಲ್ಲಿ ಅರ್ಥೈಸಬಹುದಾದ ವಾಕ್ಸರಣಿಗಳನ್ನು ಬಳಸಬಾರದು. ಒಂದು ಜಟಿಲವಾಗಿರುವ ಸಂಯುಕ್ತ ವಾಕ್ಯದಲ್ಲಿ ಮೊದಲು ನಾಲ್ಕೈದು ಏಕವಚನದ ನಾಮಪದಗಳನ್ನು ಬಳಸಿ ಕೊನೆಯಲ್ಲಿ ಅದು ಎಂಬ ಸರ್ವನಾಮವನ್ನು ಪ್ರಯೋಗಿಸಿದರೆ, ಆ 'ಅದು' ಮೇಲಿನ ಯಾವ ನಾಮಪದಕ್ಕೆ ಅನ್ವಯವಾಗುತ್ತದೆ ಎಂಬುದು ಸ್ಪಷ್ಟವಾಗದೆ ವಾಚಕನಿಗೆ ಗೊಂದಲ ಉಂಟಾಗುತ್ತದೆ. ಅವನು ಆ ಬರಹವನ್ನು ಓದುವುದನ್ನು ನಿಲ್ಲಿಸುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಅವನು ಸಂಶೋಧಕನಿಂದ ಎದುರು ನೋಡುವುದು ಸರಳವಾದ ಹಾಗೂ ನೇರವಾದ ಗದ್ಯವನ್ನು. ಸುರೂಪಿತ ವಾಕ್ಯಗಳನ್ನು ರಚಿಸುವ ಕಾರ್ಯವು ಜಾಹೀರಾತುಗಳಂತೆ ಆಕರ್ಷಣೀಯವಾಗಿರಬೇಕು. ರಾಜಕೀಯ ಚುನಾವಣಾ ಮನವಿಗಳು ಪರಿಣಾಮ–ಕಾರಿಯಾಗಿರುತ್ತವೆ. ಉದಾಹರಣೆಗೆ, "ಕನ್ನಡಿಗರಿಗೆ ಬೇಕು ಒಳ್ಳೆಯ ಅನುಭವಿ, ವಿಚಾರವಂತ ಮತ್ತು ಹೃದಯವುಳ್ಳ ಹೋರಾಡುವ ಶಾಸನಸಭಾ ಸದಸ್ಯ" ಎಂಬ ವಾಕ್ಯದಲ್ಲಿ ರಾಜ್ಯದ ಪ್ರತಿ ಮತದಾರರನ್ನು ಸಂಬೋಧಿಸುವ ಆರಂಭದ ಪದವು ಎಷ್ಟು ಬೇಗ ಗಮನ ಸೆಳೆಯುತ್ತದೆ ಮತ್ತು ಹೋರಾಡುವ ಎಂಬ ಗುಣವಾಚಕ ಎಷ್ಟು ಬಲವಾದ ಪದ! ಹೀಗೆ ಸಂಶೋಧಕನು ವಾಕ್ಯರಚನೆಯಲ್ಲಿ ಸರಳತೆ, ಸ್ಪಷ್ಟತೆ, ಧಾರ್ಷ್ಟ್ಯ, ಲಾಲಿತ್ಯ ಮುಂತಾದ ಲಕ್ಷಣಗಳನ್ನು ಬೆಳೆಸಿಕೊಳ್ಳಲು ಯತ್ನಿಸಬೇಕು.

ನಂತರ ಅನ್ವೇಷಕನು ಎದುರಿಸಬೇಕಾದ ಮುಖ್ಯ ಪ್ರಶ್ನೆ ಎಂದರೆ ಹೇಗೆ ಆರಂಭಿಸಬೇಕು ಎಂಬುದು. ವಾಚಕರ ಆಸಕ್ತಿಯನ್ನು ಕೆರಳಿಸಬೇಕಾದರೆ ಗಾಳದಲ್ಲಿ ರುಚಿಕರವಾದ ಆಹಾರವನ್ನಿಡಬೇಕು. ಆದ್ದರಿಂದ ಒಳ್ಳೆಯ ಲೇಖಕನು ಆರಂಭದ ವಾಕ್ಯವನ್ನು ರಚಿಸುವುದರಲ್ಲಿ ಅತ್ಯಂತ ಹೆಚ್ಚಿನ ಎಚ್ಚರಿಕೆಯನ್ನು ಹಾಗೂ ಶ್ರಮವನ್ನು ವಹಿಸುತ್ತಾನೆ. ಅವನು ಜೇನ್ ಆಸ್ಟಿನ್‌ಳ 'ಪ್ರೈಡ್ ಆ್ಯಂಡ್ ಪ್ರೆಜುಡಿಸ್' ಕೃತಿಯ ಮೊದಲ ವಾಕ್ಯವನ್ನು ಮಾದರಿಯಾಗಿ ತೆಗೆದುಕೊಳ್ಳಬಹುದು. ಅನಂತರ ಅವನು ವಿಷಯಗಳನ್ನು ವ್ಯವಸ್ಥಿತಗೊಳಿಸುವ ಕಾರ್ಯಕ್ಕೆ ಗಮನ ಕೊಡಬೇಕು. ಕೆಲವು ವಿಷಯಗಳು ಒಂದು ಕಡೆ ಅವುಗಳಿಗೆ ಸಂಬಂಧಿಸಿರುವ ನಿರ್ಣಯಗಳು

ಇನ್ನೆಲ್ಲೋ ಮತ್ತು ಕೊನೆಯಲ್ಲಿ ಮೊದಲೇ ವರ್ಣಿಸಿದ ಘಟನೆಗಳನ್ನು ಕುರಿತ ಹೆಚ್ಚಿನ ವಿವರಗಳು ಇದ್ದರೆ ಆ ರೀತಿಯ ಬರಹದಿಂದ ವಾಚಕನಿಗೆ ಉಂಟಾಗುವ ಕೋಪ, ಅಸಮಾಧಾನ ಮತ್ತ್ಯಾವುದರಿಂದಲೂ ಉಂಟಾಗಲಾರದು. ಪದಗಳು ಪರಿಣಾಮಕಾರಿಯಾಗಬೇಕಾದರೆ, ಅವುಗಳಿಗೆ ಸಮರ್ಪಕ ಆಹಾರವನ್ನು ಕೊಡಬೇಕು, ವಾಸ್ತವಾಂಶಗಳನ್ನು ನಿರ್ದಿಷ್ಟ ವಿಷಯ ಹಾಗೂ ಕಾಲಗಣನೆಗೆ ತಕ್ಕಂತೆ ಸಮರ್ಪಕವಾದ ಭಾಗ, ಅಧ್ಯಾಯ ಹಾಗೂ ಪರಿಚ್ಛೇದಗಳಾಗಿ ವ್ಯವಸ್ಥಿತಗೊಳಿಸಬೇಕು, ವಿಷಯ ಹಾಗೂ ಕಾಲದ ಸಂಯೋಜನೆಗೆ ಕೌಶಲ ಬೇಕು. ಅಂದರೆ, ಈ ಕಲೆಯ ರೂಪಗಳಾದ ಪದ, ವಾಕ್ಯ, ಪರಿಚ್ಛೇದ, ಭಾಗ ಹಾಗೂ ಅಧ್ಯಾಯಗಳು ವಾಚಕನನ್ನು ಕೈಹಿಡಿದು ನಡೆಸಿ ಸರಿಯಾದ ಮಾರ್ಗದಲ್ಲಿ ಮುಂದುವರಿಯುವಂತೆ ಮಾಡುತ್ತವೆ. ಏಕತೆ, ಕಾಲಗಣನೆ ಮತ್ತು ಸುಸಂಬದ್ಧತೆ ಮುಖ್ಯ, ತನ್ನ ವಿಷಯಗಳು ಅಸಂಬದ್ಧವಾದಾಗ, ಸಂಶೋಧಕನು ಅವುಗಳಿಗೆ ಸಂಕೇತಗಳನ್ನು ನೀಡಿ ತಾನು ಎಲ್ಲಿ ತಪ್ಪು ದಾರಿಯನ್ನು ಹಿಡಿದಿರುವನೆಂಬುದನ್ನು ಪತ್ತೆಹಚ್ಚಬಹುದು. ಆಗ ಅವನು ಅಲ್ಲೇ ನಿಂತು ಪರೀಕ್ಷಿಸಬೇಕು. ಅವನಿಗಿರುವ ಪರಿಹಾರ ಕ್ರಮವೆಂದರೆ ಮಧ್ಯೆ ತಲೆಹಾಕುವ ಭಾವನೆಗಳನ್ನು ಕತ್ತರಿಸಿಹಾಕಬೇಕು. ಪ್ರಕರಣವನ್ನು ಬರೆದಿರುವ ರೀತಿ ಚೆನ್ನಾಗಿದ್ದರೆ ಅದನ್ನು ಒಂದು ಕಡೆ ಇಟ್ಟುಕೊಳ್ಳಬೇಕು. ಪುನಃ ವಿಷಯವನ್ನು ಪ್ರಸ್ತಾಪಿಸುವುದರಲ್ಲಿ ಏನಾದರೂ ಪ್ರಯೋಜನವಿದೆಯೇ ಎಂಬುದನ್ನು ತಿಳಿದು ಅದನ್ನು ಮೊದಲಿನ ವಿಷಯಕ್ಕೆ ಸಂಬಂಧಿಸಿಡಲು ಯತ್ನಿಸಬೇಕು. ತಪ್ಪಾದ ಎಲ್ಲಾ ತಿರುವು ಮುರುವುಗಳನ್ನು ತೆಗೆದುಹಾಕಬೇಕು ಮತ್ತು ಈ ಶಸ್ತ್ರಚಿಕಿತ್ಸೆಯಿಂದ ಉಂಟಾದ ಗಾಯಗಳನ್ನು ಹೊಲಿಯುವುದಕ್ಕಾಗಿ ಹೊಸದಾಗಿ ಸಂಬಂಧಪಟ್ಟ ವಿಷಯಗಳನ್ನು ಸೇರಿಸಿ ಬರೆಯಬೇಕು. ಒಂದು ವಿಷಯಕ್ಕೆ ನಾಲ್ಕೈದು ಸುಸಂಬದ್ಧ ಶಾಖೆಗಳಿರಬಹುದು, ಅವುಗಳನ್ನು ಕುರಿತು ವ್ಯವಸ್ಥಿತ ರೀತಿಯಲ್ಲಿ ಬರೆದರೆ ಆ ವಿಷಯದ ಏಕತೆಯನ್ನು ಸಾಧಿಸಿದಂತಾಗುತ್ತದೆ. ಆದರೆ ಆ ಪ್ರತಿ ಶಾಖೆಯಲ್ಲೂ ಸಂಶೋಧಕನು ಕೇಂದ್ರಬಿಂದುವಾಗಿರುವ ಮುಖ್ಯ ವಿಷಯದಿಂದ ಬಹು ದೂರ ಹೋಗಿಬಿಡುವ ಅಪಾಯವಿರುತ್ತದೆ. ಸಂಶೋಧಕನು ಶಾಖೆಯಲ್ಲಿ ಬಹುದೂರ ಹೋಗಿಬಿಟ್ಟರೆ ಬರುವುದು ಕಷ್ಟವಾಗಿ ಅವನ ಬರಹದಲ್ಲಿ ಹಲವು ತೆರಪು ಹಾಗೂ ಕಂದಕಗಳು ಉಂಟಾಗಬಹುದು. ಅದಕ್ಕೆ ಬದಲಾಗಿ ಸ್ವಲ್ಪ ಚಾತುರ್ಯ ಹಾಗೂ ಜಾಗರೂಕತೆಯಿದ್ದರೆ ಸಾಕು. ಅವನು ತಿರುಳನ್ನು ಗಮನದಲ್ಲಿಟ್ಟುಕೊಂಡು ಶಾಖೆಯಲ್ಲಿ ಸರಿಯಾಗಿ ಮುಂದುವರಿದು ಶಾಕೆಗೆ ಸುಲಭವಾಗಿ ಹೋಗಬಲ್ಲನು. ಈ ಕ್ರಮದಿಂದ ಪರಿಚ್ಛೇದ, ಅಧ್ಯಾಯ ಹಾಗೂ ಅಧ್ಯಾಯದ ಭಾಗಗಳನ್ನು ಸಮರ್ಪಕವಾಗಿ ಪರಸ್ಪರ ಸಂಬಂಧಪಡುವಂತೆ ಮಾಡುವುದು ಸುಲಭವಾಗುತ್ತದೆ. ವಿವಿಧ ಭಾವರೂಪ ಹಾಗೂ ವಿಷಯಗಳನ್ನು ಸ್ಪಷ್ಟವಾಗುವ ರೀತಿಯಲ್ಲಿ ಪರಿಚ್ಛೇದ ಹಾಗೂ ಅಧ್ಯಾಯಗಳಾಗಿ ವ್ಯವಸ್ಥಿತಗೊಳಿಸಬೇಕು. ಒಂದು ಪ್ರಧಾನ ಪದ ಅಥವಾ ಮುಖ್ಯ ಭಾವರೂಪವು ಪರಿಚ್ಛೇದದ ಆರಂಬದ ಬಿಂದುವಾದರೆ ಮುಂದಿನ ಪರಿಚ್ಛೇದವನ್ನು ಪ್ರಾರಂಭಿಸುವುದಕ್ಕೆ ಸಹಾಯಕವಾಗುವ ಸಾರಾಂಶ ಅಥವಾ ಟೀಕೆಯು ಅದರ ಕೊನೆಯಾಗಬೇಕು. ಈ ರೀತಿ ವಿಷಯಗಳನ್ನು ಒಂದರೊಳಗೊಂದರಂತೆ ಪರಸ್ಪರ ತೊಡಗಿಸಿ ವಿವರಿಸುವುದರಿಂದ ಒಂದು ಬಿಗಿಯಾದ ಪುಸ್ತಕವನ್ನು ರಚಿಸಬಹುದು. ಆದರೆ ಎಲ್ಲಾ ಸಂದರ್ಭಗಳಲ್ಲಿ ಇದೇ ಕ್ರಮವನ್ನು ಅನುಸರಿಸುವುದು ಸಾಧ್ಯವಾಗುವುದಿಲ್ಲ. ಕೆಲವು ಸಲ ಮುಂಬರುವ ವಿಷಯಗಳನ್ನು ಸ್ಪಷ್ಟಪಡಿಸುವುದಕ್ಕಾಗಿ ನೂತನ ಅಧ್ಯಾಯದಲ್ಲಿ ಹಿಂದಿನ ಘಟನೆಯೊಂದನ್ನು ಪುನಃ ಪ್ರಸ್ತಾಪಿಸಬೇಕಾಗುತ್ತದೆ. ಈ ಹಿಮ್ಮುಖವಾದ ಹಾರಿಕೆಯಿಂದ ವೈವಿಧ್ಯ ಉಂಟಾಗಿ ಕಥನ ಮತ್ತಷ್ಟು ಸ್ವಾರಸ್ಯಕರವಾಗಬಹುದು. ಪುಸ್ತಕದಲ್ಲಿ ದಾರಿ ನೇರವಾಗಿರುವಾಗ ವಾಚಕನು ಮೆತುವಾಗಿ ಅನೇಕ

ಪರಿಚ್ಛೇದಗಳನ್ನು ದಾಟಿ ಬರಲು ಉತ್ಸುಕನಾಗಿರುತ್ತಾನೆ. ಆದರೆ ದಾರಿ ಕ್ರಮೇಣ ವಕ್ರವಾಗಿ ತಿರುಗಿದಾಗ ಅಥವಾ ಒಂದು ದೊಡ್ಡ ತಿರುವು ಬಂದಾಗ ಸಂಶೋಧಕನು ಅವನಿಗೆ ಎಚ್ಚರಿಕೆಯನ್ನು ಕೊಟ್ಟು ಮಾರ್ಗದರ್ಶನವನ್ನು ನೀಡಬೇಕು.

ಇಷ್ಟು ಮಾತ್ರವಲ್ಲದೆ, ಅನ್ವೇಷಕನು ಪರಕೀಯ ಮೂಲಾಧಾರಗಳನ್ನು ಬಳಸುವಾಗ ಹಾಗೂ ಉದ್ಧರಣಗಳನ್ನು ಕೊಡುವಾಗ ಅನುವಾದ ಮಾಡುವ ಕಲೆಗಳನ್ನು ಚೆನ್ನಾಗಿ ಅರಿತಿರಬೇಕು. ಉದ್ಧರಣಗಳನ್ನು ನೀಡುವುದು ಮತ್ತು ವಿಷಯವನ್ನು ಸಮರ್ಥನೆ ಮಾಡುವುದಕ್ಕಾಗಿ ಗ್ರಂಥಕರ್ತ, ಪುಸ್ತಕ, ಪಂಕ್ತಿ, ಪುಟದ ಸಂಖ್ಯೆ ಇತ್ಯಾದಿಗಳನ್ನು ಆಧಾರ ಅಥವಾ ಉದಾಹರಣೆಯಾಗಿ ಕೊಡುವುದು ಇಂದು ಬಹು ಸಾಮಾನ್ಯವಾಗಿದೆ. ಸಂಶೋಧಕನ ವಿಷಯ ಸ್ಥಳೀಯವಾಗಿಲ್ಲದೆ ಹೋದಾಗ ಪರಕೀಯ ಭಾಷೆಯಲ್ಲಿರುವ ಆಧಾರಗ್ರಂಥವನ್ನು ಬಳಸಬೇಕಗಿ ಬಂದಾಗ ಅವನು ಅನುವಾದಕನೂ ಆಗಬೇಕಾಗುತ್ತದೆ.

ಅನ್ವೇಷಕನು ಉದ್ಧರಣಗಳನ್ನು ಕೊಡುವಾಗ ಕೆಲವು ನಿಯಮಗಳನ್ನು ಅನುಸರಿಸಬೇಕು:

1) ಅವನು ಬಳಸುವ ಉದ್ಧರಣಗಳು ಚಿಕ್ಕದಾಗಿರಬೇಕು ಮತ್ತು ಸಾಧ್ಯವಾದಷ್ಟರ ಮಟ್ಟಿಗೆ ಅವುಗಳನ್ನು ತನ್ನ ಬರಹದಲ್ಲಿ ಅಂತರ್ಗತವಾಗುವಂತೆ ಮಾಡಬೇಕು. "ಆ ಲೇಖಕನು ಈ ಕೆಳಕಂಡಂತೆ ಹೇಳಿದ್ದಾನೆ" ಎಂದು ನೀರಸವಾಗಿ ವಿವರಿಸುವುದಕ್ಕೆ ಬದಲು, ಮಧ್ಯೆ–ಮಧ್ಯೆ ತನ್ನದೇ ಕಥನ ಹಾಗೂ ವ್ಯಾಖ್ಯಾನವನ್ನು ನೀಡಿದರೆ ವಾಚಕನಿಗೆ ಬೇಸರವಾಗದೆ, ಅವನ ಆಸಕ್ತಿ ಮತ್ತಷ್ಟು ಹೆಚ್ಚಬಹುದು.

2) ಉದ್ಧೃತ ವಾಕ್ಯ, ಪದ, ವಾಕ್ಸರಣಿ ಇತ್ಯಾದಿಗಳನ್ನು ತೋರಿಸಲು ಅವುಗಳ ಮೊದಲಲ್ಲೂ ಹಾಗೂ ಕೊನೆಯಲ್ಲೂ ಎರಡೆರಡು ಉದ್ಧರಣ ಚಿಹ್ನೆಗಲನ್ನು ಮತ್ತು ಉದ್ಧರಣದ ಒಳಗೆ ಮತ್ತೊಂದು ಉದ್ಧರಣವನ್ನು ಬಳಸಿದರೆ ಈ ಎರಡನೆಯ ಉದ್ಧರಣದ ಮೊದಲು ಹಾಗೂ ಕೊನೆಯಲ್ಲಿ ಒಂದೊಂದು ಉದ್ಧರಣ ಚಿಹ್ನೆಗಳನ್ನು ಹಾಕಬೇಕು.

3) ಉದ್ಧೃತ ಭಾಗದಲ್ಲಿ ಒಂದು ಪದ, ಅಥವಾ ವಾಕ್ಸರಣಿ, ಅಥವಾ ವಾಕ್ಯವನ್ನು ಬಿಟ್ಟುಬಿಟ್ಟರೆ, ಆ ವರ್ಜ್ಯವನ್ನು ಮೂರು ಸಣ್ಣ ಚುಕ್ಕೆಗಳನ್ನು ಹಾಕುವುದರ ಮೂಲಕ ಸೂಚಿಸಬೇಕು.

4) ಉದ್ಧರಣಗಳ ಅರ್ಥವನ್ನು ಸ್ಪಷ್ಟಪಡಿಸುವುದಕ್ಕಾಗಿ ಸಂಶೋಧಕನು ಯಾವುದಾದರೂ ಹೊಸ ಪದ, ಅಥವಾ ವಾಕ್ಸರಣಿಯನ್ನು ಸೇರಿಸಿದರೆ ಅದನ್ನು ಚಚ್ಚೌಕವಾದ ಕಂಸದಲ್ಲಿಡಬೇಕು.

5) ಉದ್ಧೃತ ಭಾಗದಲ್ಲಿರುವ ಪದಸಂಯೋಜನೆ, ಆದ್ಯಕ್ಷರ ಪ್ರಯೋಗ, ಆದ್ಯಕ್ಷರ ಹಾಗೂ ವಿರಾಮ ಚಿಹ್ನೆಗಳನ್ನು ಬದಲಾಯಿಸದೇ ಹಾಗೆಯೇ ಇಡಬೇಕು. ಅದರಲ್ಲಿ ಇರುವ ತಪ್ಪುಗಳನ್ನು ತಿದ್ದಿದ್ದರೆ, ಮಾಡಿರುವ ಬದಲಾವಣೆಯನ್ನು ಅಡಿಟಿಪ್ಪಣಿಯಲ್ಲಿ ವಿವರಿಸಬೇಕು. ಮೂಲದಲ್ಲಿರುವ ತಪ್ಪನ್ನು ತಿದ್ದದೆ, ಅದನ್ನು ವಾಚಕನ ಗಮನಕ್ಕೆ ತರಲು ಇಚ್ಛಿಸಿದರೆ ಆಗ ಸಂಶೋಧಕನು ಆ ತಪ್ಪಾದ ಪದದ ನಂತರ (ಸಿಕ್) ಎಂಬುದಾಗಿ ಕಂಸದಲ್ಲಿ ಬರೆಯಬೇಕು.

6) ಕೆಲವು ಸಲ ಉದ್ಧರಣಗಳ ಅಥವಾ ಅವುಗಳ ಕೆಲವು ಭಾಗಗಳ ಪ್ರಾಮುಖ್ಯತೆ ಅಥವಾ ವಿಶೇಷತೆಯನ್ನು ತೋರಿಸಬೇಕಾದರೆ ಅವುಗಳನ್ನು ಓರೆ ಮುದ್ರಣಾಕ್ಷರಗಳಲ್ಲಿ ಇಡಬೇಕು.

ಮುಂದಾಲೋಚನೆಯಿಂದ ತಕ್ಕ ಉದ್ಧರಣಗಳನ್ನು ಆರಿಸಿ, ಯುಕ್ತ ಟೀಕೆಗಳಿಂದ ನಮೂದಿಸಿದರೆ ಅಡಿಗೆರೆಗಳನ್ನು ಹಾಕುವ ಅವಶ್ಯಕತೆ ಉಂಟಾಗುವುದಿಲ್ಲ.

7) ಒಬ್ಬ ಲೇಖಕನನ್ನು ಕುರಿತು ಬರೆಯುವಾಗ ಅವನ ಕೃತಿಯ ಹೆಸರನ್ನು ಉಲ್ಲೇಖಿಸುವಾಗ ಅನಾವಶ್ಯಕವಾದ ಷಷ್ಠೀ ವಿಭಕ್ತಿ ಸರ್ವನಾಮಗಳನ್ನು ಕೈಬಿಡುವುದು ಒಳ್ಳೆಯದು. ಅದೇ ರೀತಿ ಕೃತಿ ನಾಮಗಳಲ್ಲಿ ಬಳಸಲಾಗಿರುವ ನಿರ್ದೇಶಕ ಅಥವಾ ಅನಿರ್ದೇಶಕ ಗುಣವಾಚಕಗಳನ್ನು ಬಿಡುವಾಗ ಹೆಚ್ಚು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ.

8) ಅನೇಕ ವೇಳೆ ಉದ್ಧರಣಗಳನ್ನು ಬಳಸುವುದಕ್ಕೆ ಮೊದಲು ಗ್ರಂಥಸ್ವಾಮ್ಯ ಹೊಂದಿರುವವರ ಅನುಮತಿಯನ್ನು ಪಡೆಯುವುದು ಅವಶ್ಯಕವಾಗುತ್ತದೆ. ಅದಕ್ಕಾಗಿ ಸಂಶೋಧಕನಿಗೆ ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ. ಅವನು 5–6 ಪದಗಳಿಗೆ ಅನುಮತಿಯನ್ನು ಪಡೆಯಬೇಕಾಗಿಲ್ಲ. ಹಾಗೆಯೇ ವಿಶ್ವವಿಖ್ಯಾತವಾಗಿರುವ ಸಣ್ಣಸಣ್ಣ ಉದ್ಧರಣಗಳನ್ನು ನೀಡುವಾಗ ಅವುಗಳ ಕರ್ತೃಗಳ ಹೆಸರುಗಳನ್ನು ಸೂಚಿಸಬೇಕಾಗಿಲ್ಲ.

ನಂತರ, ಸಂಶೋಧಕನು ಸಿದ್ಧಪಡಿಸುವ ದಾಖಲೆಯು ಪ್ರಮಾಣ ಹಾಗೂ ರುಜುವಾತುಗಳಿಂದ ಕೂಡಿರಬೇಕು. ಅವನು ಸರ್ವವಿದಿತವಾಗಿರುವ ಹೇಳಿಕೆಗಳನ್ನು ಬಿಟ್ಟು ಮಿಕ್ಕ ತನ್ನ ಎಲ್ಲಾ ವಿಶ್ಲೇಷಣೆ, ಟೀಕೆ, ಅನುಮಾನ, ಮೌಲ್ಯನಿರ್ಣಯ, ವಿಮರ್ಶೆ, ನೂತನ ಅರ್ಥವಿವರಣೆ ಹಾಗೂ ಭಾವನೆಗಳಿಗೆ ತಕ್ಕ ಪ್ರಮಾಣಗಳನ್ನು ನೀಡಬೇಕು. ಅದಕ್ಕಾಗಿ ಅವನು ಅಡಿಟಿಪ್ಪಣಿಯ ಕಲೆಯನ್ನು ಕರಗತಮಾಡಿಕೊಳ್ಳಬೇಕು. ಅಡಿಟಿಪ್ಪಣಿಗಳು ಸಂಶೋಧಕನ ನಿಷ್ಠೆ, ಪ್ರೀತಿಯ ದುಡಿಮೆ, ಪ್ರತಿಭೆ ಇತ್ಯಾದಿಗಳನ್ನು ಅಳೆದು ಎತ್ತಿತೋರುವ ವಾಯುಭಾರ ಮಾಪಕದಂತಿರುತ್ತವೆ. ಅವುಗಳು ಎರಡು ಬಗೆಯಾಗಿರುತ್ತವೆ. ಮೊದಲನೆಯ ತೆರದ ಅಡಿಟಿಪ್ಪಣಿಗಳಲ್ಲಿ ಓದಿರುವ ವಿಷಯ ಹಾಗೂ ಗಚ್ಛದ್ ವ್ಯಾಖ್ಯಾನಗಳಿರುತ್ತವೆ. ಒಂದು ಮುಖ್ಯಾಂಶದ ಬಗ್ಗೆ ಚರ್ಚಿಸುವಾಗ ಅದನ್ನು ಸ್ಪಷ್ಟಪಡಿಸುವುದಕ್ಕಾಗಿ ತಕ್ಕ ವಿವರಣೆ ಹಾಗೂ ಅರ್ಥವಿವರಣೆಗಳನ್ನು ಅಥವಾ ಒಂದು ಹೇಳಿಕೆಯ ವಿಶದೀಕರಣವನ್ನು ನೀಡುವುದು ಅವಶ್ಯಕವಾಗಬಹುದು. ಆದರೆ ಅದರಿಂದ ಸುಲಲಿತವಾಗಿ ಸಾಗುತ್ತಿರುವ ಕಥನಕ್ಕೆ ಅಡ್ಡಿ ಉಂಟಾದರೆ ಅಥವಾ ವಾಚಕನ ಗಮನ ಹಾಗೂ ಆಸಕ್ತಿ ಬೇರೆ ಕಡೆ ತಿರುಗುವಂತಾದರೆ, ಆ ವಿವರಣೆಗಳನ್ನು ನೀಡುವುದಕ್ಕಾಗಿ ಈ ತರಹದ ಅಡಿಟಿಪ್ಪಣಿಗಳನ್ನು ಬಳಸಬೇಕಾಗುತ್ತದೆ. ಇದರಿಂದ ಸಂಶೋಧಕನು ಪ್ರಧಾನ ಪ್ರಬಮಧದಲ್ಲಿ ವಿವರಿಸಿರುವ ವಿಷಯಗಳಿಗಿಂತ ಇನ್ನೂ ಹೆಚ್ಚು ತನಗೆ ತಿಳಿದಿದೆ. ವಾಚಕನು ಸ್ವಲ್ಪ ಈಚೆಗೆ ಬಂದರೆ, ಇನ್ನೂ ಹೆಚ್ಚು ವಿಶದೀಕರಣಗಳನ್ನು ನೀಡಲು ತನಗೆ ಯೋಗ್ಯತೆ ಇದೆ ಎಂಬುದನ್ನು ಸ್ಪಷ್ಟಪಡಿಸಬಲ್ಲನು. ಕೆಲವು ಸಲ ಈ ರೀತಿಯ ಅಡಿಟಿಪ್ಪಣಿಯ ಟೀಕೆ ಹಾಗೂ ಪ್ರಾಸಂಗಿಕ ಹೇಳಿಕೆಗಳು ಪ್ರಬಂಧದ ಹೇಳಿಕೆಗಳಿಗಿಂತ ಹೆಚ್ಚು ಸ್ಥಳವನ್ನು ಆಕ್ರಮಿಸಿಕೊಳ್ಳಬಹುದು. ಅವಶ್ಯಕವಾಗಿರುವ ಈ ವಿವರಣೆಗಳನ್ನು ಪ್ರಧಾನ ಪ್ರಬಂಧದಲ್ಲಿ ಬಳಸಿದರೆ, ಅವುಗಳು ಪ್ರತಿಬಂಧಕವಾಗಬಹುದು. ಆದ್ದರಿಂದ ಈ ಬಗೆಯ ಅಡಿಟಿಪ್ಪಣಿಗಳನ್ನು ಎಚ್ಚರಿಕೆಯಿಂದ ಹಾಗೂ ಚಾತುರ್ಯದಿಂದ ಬಳಸಿದರೆ, ಆ ಅತ್ಯಾವಶ್ಯಕವಾಗಿರುವ ವಿವರಣೆಗಳನ್ನು ಸರಿಯಾದ ಸ್ಥಳದಲ್ಲಿ ನೀಡಿ ಕಥನವನ್ನು ಹೆಚ್ಚು ಸ್ವಾರಸ್ಯಕರವನ್ನಾಗಿಸಬಹುದು, ಶ್ರೀಮಂತಗೊಳಿಸಬಹುದು ಮತ್ತು ವಿಚಾರಪರ ವಾಚಕರ ಬುದ್ಧಿಗೆ ಹೆಚ್ಚು ಆಹಾರವನ್ನು ಒದಗಿಸಬಹುದು. ಕೆಲವರ ಪ್ರಕಾರ, ಪಠ್ಯಪುಸ್ತಕಗಳಲ್ಲಿ ಅಡಿಟಿಪ್ಪಣಿಗಳು

ಅನಾವಶ್ಯಕ. ಆದರೂ ಪರಕೀಯ ನಾಣ್ಯಪದ್ಧತಿ ಅತವ ಭೂಮಾಪನ ಕ್ರಮ ಅಥವಾ ಮೂಲ ಪದಗಳ ಅರ್ಥ ಇತ್ಯಾದಿಗಳನ್ನು ವಿವರಿಸಬೇಕಾದಾಗ ಅಡಿಟಿಪ್ಪಣಿ ಬೇಕೇ ಬೇಕಾಗುತ್ತದೆ. ಅಡಿಟಿಪ್ಪಣಿ ಸುದೀರ್ಘವಾದಾಗ ಅದನ್ನು ಅನುಬಂಧದಲ್ಲಿ ಕೊಡಬಹುದು. ಅಲ್ಲಿ ಎಷ್ಟು ಸ್ಥಳ ಬೇಕೋ, ಅಷ್ಟನ್ನೂ ಬಳಸಿಕೊಂಡು ವಾಚಕನಿಗೆ ಸಾಕಷ್ಟು ವಿವರಗಳನ್ನು ಒದಗಿಸಬಹುದು.

ಆಕರ ಸೂಚನೆಗಾಗಿ ಎರಡನೆಯ ಬಗೆಯ ಅಡಿಟಿಪ್ಪಣಿಗಳನ್ನು ಬಳಸಲಾಗುತ್ತಿದೆ. ಅಲ್ಲಿ ಮೇಲೆ ಪ್ರಬಂಧದಲ್ಲಿ ನೀಡಲಾಗಿರುವ ಹೇಳಿಕೆಯ ಮತ್ತು ನೇರವಾದ ಹಾಗೂ ಪರೋಕ್ಷವಾದ ಉದ್ಧರಣಗಳ ಮೂಲ ಅಥವಾ ಪ್ರಮಾಣವನ್ನು ಸ್ಪಷ್ಟವಾಗಿ ಸೂಚಿಸಲಾಗುತ್ತದೆ ಮತ್ತು ಅಲ್ಲಿ ಲೇಖಕನ ಕೃತಿಯ ಮತ್ತು ಪ್ರಕಾಶಕನ ಹೆಸರು, ಪ್ರಕಾಶನದ ವರ್ಷ ಹಾಗೂ ಪುಟದ ಸಂಖ್ಯೆಯನ್ನೂ ಕೊಡಲಾಗಿರುತ್ತದೆ. ಅದರಿಂದ ಯಾರಾದರೂ ಸಂಶೋಧಕನ ಹೇಳಿಕೆಯನ್ನು ಪರಿಶೀಲಿಸಬಹುದು ಮತ್ತು ಅವನ ಬೌದ್ಧಿಕ ಪ್ರಾಮಾಣಿಕತೆಯನ್ನು ಅರಿತುಕೊಳ್ಳಬಹುದು. ಅವನು ಹಸ್ತಪ್ರತಿ, ಪ್ರಕಟವಾಗಿರುವ ಲೇಖನ, ವರ್ತಮಾನ ಪತ್ರಿಕೆ, ಪತ್ರಗುಚ್ಛ, ಪುಸ್ತಕ ಮುಂತಾದ ವಿಭಿನ್ನ ಮೂಲಾಧಾರಗಳನ್ನು ಅಡಿಟಿಪ್ಪಣಿಯಲ್ಲಿ ಈ ಮುಂದೆ ಕಂಡಂತೆ ತೋರಿಸಬೇಕು: –

ಒಂದು ಹಸ್ತಪ್ರತಿಯಿಂದ ಉದ್ಧರಣವನ್ನು ನೀಡಿದ್ದರೆ, ಆಗ ಅಡಿಟಿಪ್ಪಣಿಯಲ್ಲಿ ಏಕವಚನದಲ್ಲಿ MS ಮತ್ತು ಬಹುವಚನದಲ್ಲಿ MSS ಎಂಬುದಾಗಿ ಬರೆಯಬೇಕು. ಉದಾ: ಎಡ್‌ಮಂಡ್ ರಫೀನ್ ದಿನಚರಿ ಹಸ್ತಪ್ರತಿ, ಫೆಬ್ರವರಿ 17, 1857 MS Diary of Edmund Ruffin, ed. Feb.

ತಿರುಮಲಾರ್ಯ: ಚಿಕ್ಕದೇವರಾಜ ವಂಶಾವಳಿ

ಕೆಲವು ಸಲ ಪಾಠಗ್ರಂಥದಲ್ಲಿ ಒಂದು ಕೃತಿಯನ್ನು ಹಾಗೂ ಅದರ ಲೇಖಕನ ನಾಮವನ್ನು ಸೂಚಿಸಿದರೆ, ಸಂಬಂಧಪಟ್ಟ ಅಡಿಟಿಪ್ಪಣಿಯಲ್ಲಿ ಆ ಕೃತಿಯು ಪ್ರಕಟವಾದ ವರ್ಷ ಹಾಗೂ ಸ್ಥಳ ಮತ್ತು ಸಂಚಿಕೆಯ ಸಂಖ್ಯೆಯನ್ನು ಕೊಟ್ಟರೆ ಸಾಕು. ಇದಕ್ಕೆ ವಿಚ್ಛಿನ್ನ ಅಡಿಟಿಪ್ಪಣಿ ಎಂಬುದಾಗಿ ಕರೆಯಲಾಗುತ್ತದೆ. ಉದಾಹರಣೆಗೆ, ಪಾಠಗ್ರಂಥದಲ್ಲಿ ರಾಮಶರ್ಮ, ಮೈ.ಹ., ರಣಧೀರ ರಾಮನಾಥ ಎಂಬುದಾಗಿ ಬಳಸಿದ್ದರೆ, ಸಂಬಂಧಪಟ್ಟ ಅಡಿಟಿಪ್ಪಣಿಯಲ್ಲಿ ಪುನಃ ಅದೇ ವಿವರಗಳನ್ನು ಕೊಡಬೇಕಾಗಿಲ್ಲ. ಆ ಕೃತಿ ಪ್ರಕಟವಾದ ಸ್ಥಳ ಹಾಗೂ ವರ್ಷವನ್ನು ನೀಡಿದರೆ ಸಾಕು (ಉದಾ: ಮೈಸೂರು, 1960).

ಅದೇ ರೀತಿ ಸುಪ್ರಸಿದ್ಧ ಪ್ರಾಚೀನ ಲೇಖಕರ ಕೃತಿಗಳಿಂದ ಉದ್ಧರಣಗಳನ್ನು ತೆಗೆದುಕೊಂಡಾಗ, ಅಡಿಟಿಪ್ಪಣಿಯಲ್ಲಿ ಕೇವಲ ಅವರ ಹೆಸರು ಮತ್ತು ಆ ಕೃತಿಯ ಸಂಚಿಕೆ ಹಾಗೂ ಅಧ್ಯಾಯ ಅಥವಾ ಪರಿಚ್ಛೇದವನ್ನು ಸೂಚಿಸಲು ಎರಡು ಸಂಖ್ಯೆಗಳನ್ನು ಬಳಸಿದರೆ ಸಾಕು.

ಉದಾಹರನೆಗೆ ಹೆರೊಡೋಟಸ್, 3, 14; ಪಂಪಭಾರತ, 9, 84.

ಅಂತಿಮ ಕಾರ್ಯರೀತಿಯಲ್ಲಿ ಮುಖ್ಯವಾಗಿರುವ ಇನ್ನೊಂದು ವಿಷಯ ಗ್ರಂಥವಿವರಣ ಪಟ್ಟಿ. ಅಂದರೆ, ಗ್ರಂಥಗಳನ್ನು ಕುರಿತ ವಿವರಣೆ. ಈ ಪದವನ್ನು ಉಚ್ಚರಿಸಿದಾಗ ಅಥವಾ ಓದಿದಾಗ ಪಾಠಗ್ರಂಥದ

ಅನಂತರ ಮತ್ತು ಅಕಾರಾದಿ ಸೂಚಿಗೆ ಮೊದಲು ಅಧ್ಯಾಯ ಅಥವಾ ಸಂಚಿಕೆಯ ಕೊನೆಯಲ್ಲಿ ಒಟ್ಟಾಗಿ ಸೇರಿಸಲಾಗಿರುವ ಗ್ರಂಥಗಳ ಪಟ್ಟಿ ಎಂಬುದು ಮನಸ್ಸಿನಲ್ಲಿ ಮೂಡುವ ಚಿತ್ರ. ಇದು ಈ ಪದಕ್ಕೆ ಕೊಡಲಾಗಿರುವ ಬಹು ಸಾಮಾನ್ಯವಾಗಿರುವ ಅರ್ಥ.

ಈ ಅರ್ಥದಲ್ಲಿ ಗ್ರಂಥವಿವರಣ ಪಟ್ಟಿಯಲ್ಲಿ ಅನೇಕ ಗ್ರಂಥಗಳನ್ನು ಉದ್ಧರಿಸುವುದರಿಂದ ಅದನ್ನು ಪಾಠಗ್ರಂಥ ಹಾಗೂ ನಿರ್ದಿಷ್ಟ ಪುಟಗಳ ಉಲ್ಲೇಖಗಳಿಲ್ಲದ ಅಡಿಟಿಪ್ಪಣಿಗಳ ಸಂಗ್ರಹವೆಂಬುದಾಗಿ ಎಣಿಸಬಹುದು. ಕೆಲವು ವಿದ್ವಾಂಸರು ತಮ್ಮ ಅಡಿಟಿಪ್ಪಣಿಗಳಿಂದ ಗ್ರಂಥಗಳ ಹೆಸರುಗಳನ್ನು ತೆಗೆದುಕೊಂಡು ಗ್ರಂಥವಿವರಣ ಪಟ್ಟಿಯನ್ನು ತಯಾರಿಸುತ್ತಾರೆ. ಅನಾವಶ್ಯಕವಾದ ವಿವರಗಳನ್ನು ತುಂಬಿ ಈ ಪಟ್ಟಿಯನ್ನು ಸುದೀರ್ಘವನ್ನಾಗಿಸುವುದು ಗ್ರಂಥಕರ್ತನ ಉದ್ದೇಶವಾಗಿಲ್ಲದಿರಬಹುದು. ಆದಾಗ್ಯೂ ಈ ಪಟ್ಟಿಯಲ್ಲೂ ಹೆಚ್ಚು–ಕಡಿಮೆ ಪರಾಮರ್ಶಕ ಟಿಪ್ಪಣಿಗಳಲ್ಲಿರುವ ವಿವರಗಳನ್ನು ನೋಡಬಹುದಾದರೂ ಅವುಗಳನ್ನು ವಿಭಿನ್ನ ಉದ್ದೇಶಕ್ಕಾಗಿ ಬೇರೆ ಬಗೆಯಲ್ಲಿ ಅಣಿ ಮಾಡಿಡಲಾಗುತ್ತದೆ. ಈ ಎರಡು ಬಗೆಗಳನ್ನು ಅಕ್ಕ–ಪಕ್ಕದಲ್ಲಿ ಇಟ್ಟು ನೋಡಿದರೆ, ಈ ಭೇದ ಸ್ಪಷ್ಟವಾಗುತ್ತದೆ. ಉದಾಹರಣೆಗೆ,

ಬೆಟಗೇರಿ ಕೃಷ್ಣಶರ್ಮ, ಕರ್ನಾಟಕದ ಜನಜೀವನ, ಧಾರವಾಡ, 1963, 16.

ಕೃಷ್ಣಶರ್ಮ, ಬೇಟಗೇರಿ, ಕರ್ನಾಟಕದ ಜನಜೀವನ, ಸಮಾಜ ಪುಸ್ತಕಾಲಯ, ಧಾರವಾಡ, 1939/1963.

ಮೊದಲನೆಯದು ಅಡಿಟಿಪ್ಪಣಿಯಾದರೆ, ಎರಡನೆಯದು ಗ್ರಂಥವಿವರಣ ಪಟ್ಟಿಯ ದಾಖಲೆ ಮತ್ತು ಇಲ್ಲಿ ಅಕಾರಾದಿ ಸೂಚಿಗಾಗಿ ನಿಜನಾಮವನ್ನು ಮೊದಲು ಬರೆದು, ನಂತರ ಸ್ಥಳ ಅಥವಾ ಮನೆತನದ ಹೆಸರು ಮುಂತಾದ ಉಪನಾಮವನ್ನು ಸೂಚಿಸಲಾಗುತ್ತದೆ ಹಾಗೂ ಪುಟಗಳ ಸಂಖ್ಯೆ ಇರುವುದಿಲ್ಲ. ಕೊಟ್ಟಿರುವ ಎರಡು ವರ್ಷಗಳು ಮೊದಲ ಹಾಗೂ ದ್ವಿತೀಯ ಮುದ್ರಣವನ್ನು ಸೂಚಿಸುತ್ತವೆ. ಕೆಲವು ಬರಹಗಾರರು ಕೃತಿಯ ಒಟ್ಟು ಪುಟಗಳ ಸಂಖ್ಯೆಯನ್ನು ಕೊಡುತ್ತಾರೆ. ಇದು ಉಪಯುಕ್ತವಾದರೂ, ಕಡ್ಡಾಯವಾದುದಲ್ಲ.

ಗ್ರಂಥವಿವರಣ ಪಟ್ಟಿಯನ್ನು ನೀಡುವಾಗ ಯಾವ ವರ್ಗೀಕರಣ ಕ್ರಮವನ್ನು ಬಳಸಬೇಕೆಂಬುದನ್ನು ಸಂಶೋಧಕನೇ ನಿರ್ಧರಿಸಿಕೊಳ್ಳಬೇಕು. ಅದು ಅವನು ಆರಿಸಿಕೊಂಡಿರುವ ವಿಷಯವನ್ನು ಅವಲಂಬಿಸಿರಬೇಕು. ಸಾಮಾನ್ಯವಾಗಿ ಮೂರು ಬಗೆಯ ಗ್ರಂಥವಿವರಣ ಪಟ್ಟಿಗಳನ್ನು ಪರಿಗಣಿಸಲಾಗಿದೆ. ಸಾಮಾನ್ಯ ವಾಚಕ ವರ್ಗ ಓದುವ ಪುಸ್ತಕಗಳಲ್ಲಿ ಹೆಚ್ಚಾಗಿ ಕಾಣಲಾಗುವ ಮತ್ತು ವರ್ಣಾನುಕ್ರಮದಲ್ಲಿ ಲೇಖಕರ ಹೆಸರುಗಳನ್ನು ಹಾಗೂ ಅವುಗಳಿಗೆ ಎದುರಾಗಿ ಅವರ ಕೃತಿಗಳ ಶಿರೋನಾಮೆಗಳನ್ನು ಒಳಗೊಂಡಿರುವ ಏಕಪಟ್ಟಿ ಮೊದಲನೆಯ ಬಗೆಯ ಗ್ರಂಥವಿವರಣ ಪಟ್ಟಿ, ಲೇಖನ, ಕೈಪಿಡಿ, ವಿಮರ್ಶಾತ್ಮಕ ಕೃತಿ, ವರ್ತಮಾನಪತ್ರಿಕೆ, ವಿಶ್ವಕೋಶ ಮುಂತಾಗಿ ವಿವರಿಸಿರುವ ವಿಷಯಕ್ಕೆ ಸಂಬಂಧ ಪಟ್ಟಿರುವ ಪ್ರತಿಕೃತಿಯನ್ನು ಅದರಲ್ಲಿ ನೋಡಬಹುದು. ಅಚ್ಚಿನಲ್ಲಿ ಈ ತರಹದ ಪ್ರದರ್ಶನ ಒಂದು ಅನುಪಯುಕ್ತ ವ್ಯಾಯಾಮ ಮಾತ್ರ. ಲೇಖಕನು ತಾನು ನಿಯತವಾಗಿ ಬಳಸಿಕೊಂಡ ಕೃತಿಗಳನ್ನಲ್ಲದೆ, ಅನಿಯತವಾಗಿ ಹಾಗೂ

ಅನಿರ್ದಿಷ್ಟವಾಗಿ ಓದಿದ್ದ ಗ್ರಂಥಗಳನ್ನೂ ಸಹ ತಾರತಮ್ಯ ಜ್ಞಾನವಿಲ್ಲದೆ ಪಟ್ಟಿ ಮಾಡಿಕೊಟ್ಟರೆ, ಅದು ಕೇವಲ ತನಗೆ ಆಳವಾದ ಪಾಂಡಿತ್ಯವಿದೆ ಎಂಬ ಅಭಿಪ್ರಾಯವನ್ನು ವಾಚಕರಲ್ಲಿ ಮೂಡಿಸುವುದಕ್ಕಾಗಿ ಅವನು ಮಾಡುವ ಆಡಂಬರ ಪ್ರದರ್ಶನವಾಗುತ್ತದೆಯೇ ಹೊರತು, ನಿಜವಾದ ಜ್ಞಾನದ ತಿರುಳಾಗುವುದಿಲ್ಲ. ಆಯ್ದ ಗ್ರಂಥ ವಿವರಣ ಪಟ್ಟಿಯು ಹೆಚ್ಚು ಅಪೇಕ್ಷಣೀಯವಾದುದು. ಕಾರಣ ಅದರಲ್ಲಿ ಉಪಯುಕ್ತವಾದ ಹಾಗೂ ಮೌಲ್ಯಗಳ ಗ್ರಂಥಗಳನ್ನು ಪಟ್ಟಿ ಮಾಡಲಾಗಿರುತ್ತದೆ ಮತ್ತು ಅದು ಆಳವಾಗಿ ಚಿಂತನೆ ಮಾಡಿದ ನಂತರ ಮಾಡುವ ಆಯ್ದ ಪುಸ್ತಕಗಳ ಪಟ್ಟಿಯಾಗಿರುತ್ತದೆ.

ಎರಡನೆಯ ಬಗೆಯ ಗ್ರಂಥವಿವರಣ ಪಟ್ಟಿಯನ್ನು ಉಪಯೋಗಿಸಿಕೊಳ್ಳಲಾಗಿರುವ ಮೂಲ ವಿಷಯಸಾಮಗ್ರಿಗಳಿಗೆ ಅನುಗುಣವಾಗಿ ವ್ಯವಸ್ಥಿತಗೊಳಿಸಲಾಗುತ್ತದೆ ಮತ್ತು ಅದನ್ನು ವರ್ಗೀಕೃತ ಗ್ರಂಥವಿವರಣ ಪಟ್ಟಿ ಎಂಬುದಾಗಿ ಕರೆಯಬಹುದು. ಇಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಾಧಾರಗಳು, ಹಸ್ತಪ್ರತಿಗಳು ಮತ್ತು ಮುದ್ರಿತ ಕೃತಿಗಳು, ಪುಸ್ತಕಗಳು ಮತ್ತು ನಿಯತಕಾಲಿಕಗಳು ಎಂಬುದಾಗಿ ವರ್ಗೀಕರಣ ಮಾಡಬಹುದು. ಜೀವನ ಚರಿತ್ರೆಯ ಗ್ರಂಥವಿವರಣ ಪಟ್ಟಿಯಲ್ಲಿ –

1) ಖಾಸಗಿ ಪತ್ರ ಹಾಗೂ ಹಸ್ತಪ್ರತಿಗಳ ಸಂಕಲನಗಳು.

2) ಪತ್ರಿಕೆಗಳು ಮತ್ತು ನಿಯತಕಾಲಿಕಗಳು.

3) ಆ ಜೀವನಚರಿತ್ರೆಯ ನಾಯಕನ ಬರಹಗಳೂ, ಪತ್ರಗುಚ್ಛಗಳು ಮತ್ತು ಪ್ರಕಟವಾದ ಕೃತಿಗಳು.

4) ಆ ವ್ಯಕ್ತಿಯು ಸಂಪಾದಿಸಿದ ಪತ್ರಿಕೆ ಮತ್ತು ನಿಯತಕಾಲಿಕಗಳು.

5) ಆತ್ಮಚರಿತ್ರೆ, ಬಖೈರು, ಜೀವನಸ್ಮೃತಿಗಳು ಮತ್ತು ಮುದ್ರಿತ ಪತ್ರವ್ಯವಹಾರಗಳು.

6) ಜೀವನ ಚರಿತ್ರೆಗಳು ಮತ್ತು ಜೀವನ ಚರಿತ್ರೆಯ ವಿಷಯಗಳಿಗೆ ಸಂಬಂಧಿಸಿರುವ ನಿರ್ದಿಷ್ಟ ಲೇಖನಗಳು.

7) ಸಮಕಾಲೀನರ ಬರಹಗಳು.

8) ಆ ವ್ಯಕ್ತಿಗಳನ್ನು ಕುರಿತ ವಿಶೇಷ ಅಧ್ಯಯನಗಳು, ಏಕವಿಷಯಕ ಪ್ರಬಂಧಗಳು ಮತ್ತು ಲೇಖನಗಳು ಮತ್ತು

9) ಪ್ರಕಟವಾದ ಲೇಖನಗಳು, ಎಂಬ ವಿಭಾಗಗಳನ್ನು ನೋಡಬಹುದು. ಒಬ್ಬ ಮಹಾವ್ಯಕ್ತಿಯ ನಿರ್ದಿಷ್ಟವಾದ ಹಾಗೂ ಭವ್ಯವಾದ ವಿಚಾರಧಾರೆಯ ವಿಕಾಸವನ್ನು ಗುರುತಿಸುವಾಗ ಕಾಲಗಣನೆಯ ಆಧಾರದ ಮೇಲೆ ಕೃತಿಗಳನ್ನು ಪಟ್ಟಿ ಮಾಡಲಾಗುತ್ತದೆ.

ಮೂರನೆಯ ಬಗೆಯ ಗ್ರಂಥವಿವರಣ ಪಟ್ಟಿಯು ವಿಮರ್ಶಾತ್ಮಕವಾಗಿರುತ್ತದೆ. ಇದು ಒಂದು ಟಿಪ್ಪಣಿಯುಕ್ತವಾದ ಪಟ್ಟಿ. ಅದು ಪುಟ್ಟ ಪ್ರಬಂಧದ ರೂಪದಲ್ಲಿರಬಹುದು. ಅದರಲ್ಲಿ ಪ್ರತಿ ಪುಸ್ತಕವನ್ನು ಕುರಿತ ವಿಮರ್ಶಾಥ್ಮಕ ಟೀಕೆಗಳನ್ನು ಕಾಣಬಹುದು. ಅವುಗಳು ಸಾಹಿತ್ಯ ಕೃತಿಗಳನ್ನು ಪರಿಶೀಲಿಸಿ, ವಿವೇಚನೆಯಿಂದ ಉಪಯುಕ್ತವಾದ ಹಾಗೂ ಸಮರ್ಪಕವಾದ ಗ್ರಂಥಗಳನ್ನು ಆರಿಸಿ, ಎಚ್ಚರಿಕೆಯಿಂದ ಆಳವಾಗಿ ವಿಚಾರ ಮಾಡಿದ ಚಿಂತನಶೀಲ ವಿದ್ವಾಂಸನ ವಿವೇಕಯುಕ್ತ ಅಭಿಪ್ರಾಯವಾಗಿರುತ್ತವೆ. ಕೃತಿಯಲ್ಲಿ ವರ್ಗಾನುಕ್ರಮದಲ್ಲಿ ಅನುಬಂಧವಾಗಿ ಸೇರಿಸಿರುವ ವಿಮರ್ಶೆಗಳು ಸಂಕ್ಷಿಪ್ತವಾಗಿರಬೇಕು ಹಾಗೂ ಪರಿಣಾಮಕಾರಿಯಾಗಬೇಕು.

ಇದರಿಂದ ಇತರ ಸಂಶೋಧಕರಿಗೆ ಬಹು ಸಹಾಯವಾಗುತ್ತದೆ. ಇತ್ತೀಚೆಗೆ ಕೆಲವು ಸಲ ವಿಮರ್ಶಾತ್ಮಕ ಗ್ರಂಥವಿವರಣ ಪಟ್ಟಿಯ ಪ್ರಬಂಧ ರೂಪವನ್ನು ಅಡಿಟಿಪ್ಪಣಿಗಳಿಗೆ ಬದಲಿಯಾಗಿ ಬಳಸುವ ಪ್ರಯತ್ನವನ್ನು ಮಾಡಲಾಗುತ್ತದೆ. ಒಂದು ಮುದ್ರಿತ ಕೃತಿಯಲ್ಲಿರುವ ವಿಮರ್ಶಾಥ್ಮಕ ಗ್ರಂಥವಿವರಣ ಪಟ್ಟಿಯು ಲೇಖಕನನ್ನು ವಾಚಕನ ಅತ್ಯಂತ ಸಹಾಯಕ ಸಹೋದ್ಯೋಗಿಯನ್ನಾಗಿಸುತ್ತದೆ.

ಒಟ್ಟಿನಲ್ಲಿ, ಸಂಶೋಧಕನು ಕೃತಿಗಳೆಂಬ ಸಮುದ್ರದಿಂದ ಮೇಲಕ್ಕೆ ತಂದು ತನ್ನದ್ದನ್ನಾಗಿಸಿಕೊಂಡಿರುವ ಮತ್ತು ನೂತನ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನಾಗಿ ಪುನಃ ರೂಪಿಸಿರುವ ಲಿಖಿತ ದಾಖಲೆಗಳ ವಿಷಯಗಳಿಗೂ ಹಾಗೂ ಅವನಿಗೂ ಇರುವ ಸಂಬಂಧವನ್ನು ಅಡಿಟಿಪ್ಪಣಿಗಳು ಮತ್ತು ಗ್ರಂಥವಿವರಣ ಪಟ್ಟಿಯು ಸ್ಪಷ್ಟವಾಗಿ ಸೂಚಿಸುತ್ತವೆ.

ನಂತರ ಸಂಶೋಧನಾ ಕೃತಿಯ ಕೊನೆಯಲ್ಲಿ ನಿರೂಪಣ ಪಟ, ನಕ್ಷೆ, ಕೋಷ್ಟಕಗಳು ಮತ್ತು ಪರಿಶಿಷ್ಟಗಳು ಇರುತ್ತವೆ. ಬಹಳ ಉಪಯುಕ್ತವಾದ ವಿಷಯ. ಅಪ್ರಸ್ತುತ ಪ್ರಸ್ತಾಪ, ಪ್ರಾಸಂಗಿಕ ಸೂಚನೆ ಹಾಗೂ ಹೆಚ್ಚಿನ ವಿವರಗಳನ್ನು ಪರಿಶಿಷ್ಟ–ಅ, ಪರಿಶಿಷ್ಟ–ಆ ಎಂಬುದಾಗಿ ವರ್ಗೀಕರಿಸಲಾದ ಅನುಬಂಧಗಳಲ್ಲಿ ಕೊಡಬೇಕು. ಕಟ್ಟಕಡೆಯಲ್ಲಿ ಪಾಠಗ್ರಂಥದಲ್ಲಿ ವಿವರಿಸಿರುವ ಮುಖ್ಯವಾದ ಅಂಶ, ವ್ಯಕ್ತಿತ್ವ, ಘಟನೆ, ಸ್ಥಳ, ಸಂಗತಿ ಮತ್ತು ಇತರ ವಿಷಯಗಳ ಪುಟಸಂಖ್ಯೆಯನ್ನು ಸೂಚಿಸುವ ಅಕಾರಾದಿ ಸೂಚಿ ಇರಬೇಕು. ಇಲ್ಲಿ ಸಂಬಂಧಪಟ್ಟಿರುವ ವಿಷಯಗಳನ್ನು ಒಂದು ನಿರ್ದಿಷ್ಟ ಶಿರೋನಾಮೆಯ ಅಡಿಯಲ್ಲಿ ವರ್ಗೀಕರಿಸಬೇಕು. ಉದಾಹರಣೆಗೆ, ವಿಷ್ಣುವರ್ಧನ ಎಂಬ ಶಿರೋನಾಮೆಯ ಅಡಿಯಲ್ಲಿ ಅವನ ಆಡಳಿತ–ಧಾರ್ಮಿಕ–ರಾಜಕೀಯ–ಸಾಮಾಜಿಕ ನೀತಿ, ದಿಗ್ವಿಜಯ ಯಾತ್ರೆ, ವೈಯಕ್ತಿಕ ಲಕ್ಷಣ ಇತ್ಯಾದಿಗಳನ್ನು ವರ್ಗೀಕರಿಸಿಡಬೇಕು. ಸಂಶೋಧನಾ ಕೃತಿಯ ಮೊದಲಲ್ಲಿ ಪ್ರಸ್ತಾವನೆ, ಮುನ್ನುಡಿ, ವಿಷಯಾನುಕ್ರಮಣಿಕೆ ಅಥವಾ ಒಳಪಟ್ಟಿ ಮತ್ತು ಪೀಠಿಕೆ ಇರಬೇಕು. ಪ್ರಸ್ತಾವನೆಯಲ್ಲಿ ಸಂಶೋಧಕನೆಯ ಉದ್ದೇಶ ಮತ್ತು ವಿವಿಧ ರೀತಿಯಲ್ಲಿ ನೆರವಾದವರಿಗೆಲ್ಲಾ ಕೃತಜ್ಞತೆಗಳನ್ನು ಸೂಚಿಸಿರಬೇಕು. ಪೀಠಿಕೆಯಲ್ಲಿ ಆರಿಸಿಕೊಂಡ ವಿಷಯದ ಹಿನ್ನೆಲೆಯನ್ನು ಅಥವಾ ನೂತನ ಸಮಸ್ಯೆಗಳನ್ನು ವಿವರಿಸಬೇಕು. ಪೀಠಿಕೆಯಲ್ಲಿ ಹಾಕಲಾಗುವ ಪ್ರಶ್ನೆಗಳಿಗೆ ಪ್ರಬಂಧದಲ್ಲಿ ಸಮರ್ಪಕವಾದ ಉತ್ತರಗಳನ್ನು ಕೊಟ್ಟಿರಬೇಕು. ಪೀಠಿಕೆ ಸವಾಲಾದರೆ ಪ್ರಬಂಧ ಅದಕ್ಕೆ ತಕ್ಕ ಪ್ರತ್ಯುತ್ತರವಾಗಿರಬೇಕು. ಕೆಲವು ಕೃತಿಗಳಲ್ಲಿ ಮಾಡಿದ ಸಂಶೋಧನೆಯ ಸಾರಾಂಶವನ್ನು ನೋಡಬಹುದು. ಪ್ರಬಂಧದ ತಿರುಳನ್ನು 300 ಅಥವಾ 400 ಪದಗಳಲ್ಲಿ ಕೊಡಲಾಗಿರುತ್ತದೆ. ಸಾಧಾರಣವಾಗಿ ಮುನ್ನುಡಿಯನ್ನು ಆ ವಿಷಯದಲ್ಲಿ ಪರಿಣತರಾಗಿರುವ ವಿದ್ವಾಂಸರು ಬರೆಯುತ್ತಾರೆ. ಅವರು ಆ ಸಮಗ್ರ ಕೃತಿಯನ್ನು ವಿಮರ್ಶಿಸಿ, ಅದರ ಪ್ರಧಾನ ಲಕ್ಷಣಗಳನ್ನು ಸ್ಪಷ್ಟಪಡಿಸುತ್ತಾರೆ. ಇದು ಗ್ರಂಥಕರ್ತರಿಗೆ ಹೆಮ್ಮೆ ಪಡಬಹುದಾದ ಅಥವಾ ಅಭಿಮಾನದ ವಿಷಯ. ಒಂದು ಕೃತಿಯಲ್ಲಿ ವಿಷಯಗಳು ಈ ಕೆಳಕಂಡ ಕ್ರಮದಲ್ಲಿರಬೇಕು–

1) ಖಾಲಿ ಹಾಳೆ
2) ಕೃತಿಯ ಶಿರೋನಾಮೆ
3) ಅರ್ಪಣೆ
4) ಮುನ್ನುಡಿ

5) ಪ್ರಸ್ತಾವನೆ
6) ಕೃತಜ್ಞತೆಗಳು
7) ಸಂಕ್ಷೇಪಗಳು
8) ಪರಿವಿಡಿ–ಅಧ್ಯಾಯಗಳ ವಿವರಗಳು
9) ನಿರೂಪಣ ಪಟ ಹಾಗೂ ನಕ್ಷೆಗಳ ವಿವರಗಳ ಪಟ್ಟಿಗಳು
10) ಗ್ರಂಥಸೂಚಿ
11) ಪರಿಶಿಷ್ಟಗಳು
12) ರೇಖಾ ಹಾಗೂ ಛಾಯಾಚಿತ್ರಗಳು ಮತ್ತು ವಿವರಗಳು
13) ಶಬ್ಧಸೂಚಿ ಅಥವಾ ಅಕಾರಾದಿ ಸೂಚಿ

ಈ ರೀತಿಯಲ್ಲಿ ವಿವರಣೆ ಅಥವಾ ಸ್ಪಷ್ಟೀಕರಣ ಅತ್ಯಂತ ಶ್ರಮಸಾಧ್ಯವಾದ ಕೆಲಸ. ಇದು ಸ್ವಂತ ಆಲೋಚನಾ ಕಾರ್ಯಕ್ಕಿಂತ ಹೆಚ್ಚಾಗಿ ವಾಸ್ತವಾಂಶಗಳ ವಿವೇಚನಾಯುಕ್ತ ವ್ಯವಸ್ಥೆಗೆ ಸಂಬಂಧಿಸಿರುತ್ತದೆ. ಇದು ಹೆಚ್ಚಾಗಿ ಒಂದು ಕಲೆ. ಜವಳಿ ಅಂಗಡಿಯಲ್ಲಿ ಜನ ಸಂಚಾರ ಬಹು ಹೆಚ್ಚಾಗಿರುವ ಕಡೆಗೆ ಇರುವ ಕಿಟಕಿಯಲ್ಲಿ ಗಾಜಿನ ಮೂಲಕ ಹೆಚ್ಚು ಸ್ಪಷ್ಟವಾಗಿ ಕಾಣುವ ರೀತಿಯಲ್ಲಿ ಅತ್ಯುತ್ತಮವಾದ ಸರಕುಗಳನ್ನು ಪ್ರದರ್ಶಿಸುವಂತೆ ಇದೂ ಸಹ ಬೌದ್ಧಿಕ ಸಾಮಗ್ರಿಗಳ ಕಿಟಕಿ ಪ್ರದರ್ಶನ ಕಲೆ, ಅಂದರೆ ಗ್ರಂಥಕರ್ತನು ತನ್ನ ವಿಷಯಸಾಮಗ್ರಿಗಳನ್ನು ಅತ್ಯಂತ ಆಕರ್ಷಕವಾದ ರೀತಿಯಲ್ಲಿ ನಿರೂಪಿಸುವ ಕಲೆಯಾಗಿರುತ್ತದೆ. ಕೃತಿಯು ಓದಿಸಿಕೊಂಡು ಹೋಗಬೇಕು. ಇಲ್ಲದಿದ್ದರೆ ಅದು ಯಾವುದೋ ಪುಸ್ತಕದಂಗಡಿಯ ನೆಲಮಾಳಿಗೆಯಲ್ಲಿ ಅಥವಾ ಗ್ರಂಥಾಲಯದ ಯಾವುದೋ ಮೂಲೆಯಲ್ಲಿ ಧೂಳಿನಿಂದಾವೃತವಾಗಿ ಬಿದ್ದಿರಬೇಕಾಗುತ್ತದೆ. ಆದ್ದರಿಂದ ಸ್ಪಷ್ಟೀಕರಣ ಎನ್ನುವುದು ಚತುರವಾದ ಕರ್ತೃವು ತನ್ನ ಗ್ರಂಥವನ್ನು ಓದಲು ಆಸಕ್ತಿ ಇಲ್ಲದ ವ್ಯಕ್ತಿಯನ್ನೂ ಸಹ ಆಕರ್ಷಿಸಿ ಓದುವಂತೆ ಮಾಡುವ ಅಯಸ್ಕಾಂತವನ್ನಾಗಿ ಮಾರ್ಪಡಿಸುವುದಕ್ಕೆ ಬಳಸುವ ತಂತ್ರ ಹಾಗೂ ಕಲೆ ಎಂಬುದಾಗಿ ಹೇಳಬಹುದು.

ಸಂಕ್ಷೇಪದಲ್ಲಿ ಇತಿಹಾಸ ಸಂಶೋಧನಾ ವಿಧಾನಗಳನ್ನು ಅಧ್ಯಯನ ಸೌಕರ್ಯಕ್ಕಾಗಿ ಪೂರ್ವಸಿದ್ಧತೆಯ, ವಿಶ್ಲೇಷಣಾತ್ಮಕ, ಸಾಂಶ್ಲೇಷಿಕ ಹಾಗೂ ಅಂತಿಮ ಕಾರ್ಯರೀತಿಗಳೆಂಬುದಾಗಿ ವಿಭಾಗಿಸಬಹುದು. ಅವುಗಳ ಪ್ರಧಾನ ಅಂಶಗಳನ್ನು ಮುಂದೆ ಕಾಣುವ ನಕ್ಷೆಯ ರೂಪದಲ್ಲಿ ಸಂಗ್ರಹಿಸಿ ವಿವರಿಸಬಹುದು.

## 10.4 ಸಾರಾಂಶ

ಈ ಘಟಕದ ಅಧ್ಯಯನದ ನಂತರ ನಾವು

- ಸಂಯೋಜನಾ ಕಾರ್ಯಗಳು ಇತಿಹಾಸ ಸಂಶೋಧನೆಯಲ್ಲಿ ಯಾವ ಮಹತ್ವವನ್ನು ಹೊಂದಿದೆ ಎಂಬುದನ್ನು ತಿಳಿದುಕೊಂಡೆವು.

- ಈ ಕಾರ್ಯದಲ್ಲಿ ಪ್ರಾಥಮಿಕ ಕಾರ್ಯವಾದ ಸಂಶೋಧನಾ ಪ್ರಬಂಧವನ್ನು ಹೇಗೆ ಬರೆಯಬೇಕು ಎಂಬುದರ ಬಗ್ಗೆ ಒಂದು ಯೋಜನೆಯನ್ನು ತಿಳಿದೆವು.
- ಸಂಶೋಧಕನಿಗೆ ದೊರೆತ ಮಾಹಿತಿಯನ್ನು ಅನುಸರಿಸಿ ರಚನಾತ್ಮಕ ಸಮರ್ಥನೆಯನ್ನು ಹೇಗೆ ಅವನು ಮಾಡುತ್ತಾನೆ ಎಂಬುದನ್ನು ಸಹ ತಿಳಿದುಕೊಂಡೆವು.
- ಎಲ್ಲಾ ಕಾರ್ಯಗಳೂ ಮುಗಿದ ನಂತರ ಸಂಶೋಧನೆಯಲ್ಲಿ ಹೊರತಂದ ವಿಷಯಗಳನ್ನು ಹೇಗೆ ಸಮಂಜಸವಾಗಿ ಸಾಮಾನ್ಯೀಕರಣ ಮಾಡುವ ಎಂಬುದು ನಮಗೆ ತಿಳಿದುಬರುತ್ತದೆ.
- ಸ್ಪಷ್ಟೀಕರಣದ ಹಂತದಲ್ಲಿ ವಿಷಯಗಳನ್ನು ಯಾವ ರೀತಿಯಲ್ಲಿ ಪ್ರತಿಪಾದಿಸುವುದು ಎಂಬುದಕ್ಕೆ ತಿಳಿದುಕೊಳ್ಳಬಹುದು.

## 10.5 ಪ್ರಮುಖ ಪದಗಳು

1. ಐತಿಹಾಸಿಕ ಸಂಶ್ಲೇಷಣೆ: ಮಾಹಿತಿಯನ್ನು ವ್ಯಾಖ್ಯಾನಿಸುವುದು,ಹೊಂದಿಸುವುದು, ವಿವರಿಸುವುದು, ಸೇರಿಸುವುದು, ವಿಭಾಗಿಸುವುದು
2. ತರ್ಕ: ಮನಶ್ಯಾಸ್ತ್ರದ ಅಧ್ಯಯನದ ಮೂಲ

## 10.6 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಸಂಶ್ಲೇಷಣೆಯ ಅರ್ಥ ಮತ್ತು ಅಂಗಳನ್ನು ವಿವರಿಸಿ.
2. ಸಂಶ್ಲೇಷಣೆಯಲ್ಲಿ ವಾಸ್ತಾವಾಂಶಗಳ ಪ್ರಾಮುಖ್ಯತೆಯನ್ನು ವಿವರಿಸಿ.
3. ಇತಿಹಾಸದ ಬಗ್ಗೆ ಬರವಣಿಗೆಗಾಗಿ ಅಧ್ಯಯನ ಸಾಮಗ್ರಿಗಳನ್ನು ವ್ಯವಸ್ಥೆ ಮಾಡಿಕೊಳ್ಳುವ ವಿಧಾನಗಳಾವುವು?
4. ಸಂಶೋಧನಾ ವರದಿಯನ್ನು ಅಂತಮಗೊಳಿಸುವ ತಂತ್ರಗಳನ್ನು ಚರ್ಚಿಸಿ.

## 10.7 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 10.1 ಮತ್ತು 10.2 ನೋಡಿ
2. ವಿಭಾಗ 10.2 ನೋಡಿ
3. ವಿಭಾಗ 10.3 ನೋಡಿ
4. ವಿಭಾಗ 10.4 ನೋಡಿ

## 10.8 ಪರಾಮರ್ಶನ ಗ್ರಂಥಗಳು

1. Rajayyan K : History in Theory and Method
2. ಡಾ॥ ಎ.ವಿ.ವೆಂಕಟರತ್ನಂ ಡಾ॥ ಎಂ.ಬಿ.ಪದ್ಮ :ಇತಿಹಾಸ ಅಧ್ಯಯನ ಮಾರ್ಗ

**ಪಠ್ಯವನ್ನು ರಚಿಸಿದವರು:**
**ಡಾ ॥ ಜಿ.ಟಿ.ಸೋಮಶೇಖರ್**

## ಬ್ಲಾಕ್ – 3: ಇತಿಹಾಸ ಲೇಖನಕಲೆ

# ಘಟಕ – 11 ಪ್ರಾಚೀನ ಮತ್ತು ಮಧ್ಯಕಾಲೀನ ಇತಿಹಾಸ ಲೇಖನ ಕಲೆ ಗ್ರೀಕ್, ರೋಮನ್, ಚೀನಾ, ಕ್ರಿಶ್ಚಿಯನ್ ಮತ್ತು ಪಶ್ಚಿಮ ಏಷ್ಯಾ

**ರಚನೆ**


**11.0** ಉದ್ದೇಶಗಳು

**11.1** ಪೀಠಿಕೆ

**11.2** ಗ್ರೀಕ್ ಇತಿಹಾಸ ಲೇಖನ ಕಲೆ

**11.2.1** ಹೆರೊಡೋಟಸ್

**11.2.2** ಥೊಸಿಡ್ಡಿಡ್ಡೀಸ್

**11.2.3** ಜಿನೋಫನ್ ಹಾಗೂ ಪಾಲಿಬಿಯಾಸ್

**11.2.4** ಉಪಸಂಹಾರ

**11.3** ರೋಮಿನ ಇತಿಹಾಸ ಲೇಖನ ಕಲೆ

**11.3.1** ಸೆನ್ಸಾರ್ ಕ್ಯಾಟೋ

**11.3.2** ಲಿವಿ

**11.3.3** ಕಾರ್ನಿಲಿಯೆಸ್ ಟ್ಯಾಸಿಟಸ್

**11.3.4** ಉಪಸಂಹಾರ

**11.4** ಚೀನಾ ಇತಿಹಾಸ ಲೇಖನ ಕಲೆ

**11.4.1** ಕನ್‌ಫ್ಯೂಶಿಯಸ್

**11.4.2** ಘೂಮಾ ಚುಯಾನ್

**11.5** ಕ್ರೈಸ್ತ ಇತಿಹಾಸ ಲೇಖನ ಕಲೆ

**11.5.1** ಕ್ರೈಸ್ತ ಇತಿಹಾಸ ಲೇಖನ ಕಲೆಯ ಪ್ರಮುಖ ಲಕ್ಷಣಗಳು

**11.5.2** ಸೆಯಂಟ್ ಆಗಸ್ಟಿಸ್

**11.5.3** ಉಪಸಂಹಾರ

**11.6** ಪಶ್ಚಿಮ ಏಷ್ಯಾ

**11.6.1** ಅರಬ್ ಇತಿಹಾಸ ಲೇಖನ ಕಲೆ

**11.6.2** ಇಬ್ನಾ–ಖಲ್ದೂನ್ ಕೊಡುಗೆಗಳು

**11.7** ಸಾರಾಂಶ

**11.8** ಪ್ರಮುಖ ಪದಗಳು

**11.9** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**11.10 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು**

**11.11 ಪರಾಮರ್ಶನ ಗ್ರಂಥಗಳು**

## 11.0 ಉದ್ದೇಶಗಳು

ಗತಕಾಲದ  ಇತಿಹಾಸ ಲೇಖನ ಕಲೆತಯನ್ನು ಮತ್ತು ಮಧ್ಯಕಾಲೀನ ಇತಿಹಾಸ ಲೇಖನ ಕಲೆಯನ್ನು ನಿಮಗೆ ಪರಿಚಯಿಸುವುದು ಈ ಘಟಕದ ಉದ್ದೇಶವಾಗಿದೆ. ಈ ಘಟಕವನ್ನು ಅಧ್ಯಯನ ಮಾಡಿದ ನಂತರ ಈ ಕೆಳಗಿನ ಅಂಶಗಳನ್ನು ನೀವು ತಿಳಿಯುವಿರಿ.

- ಗ್ರೀಕ್ ಇತಿಹಾಸಕಾರರ ಕೊಡುಗೆಗಳು
- ರೋಮಿನ ಇತಿಹಾಸಕಾರರ ಕೊಡುಗೆಗಳು
- ಚೀನಾ ಇತಿಹಾಸಕಾರರ ಕೊಡುಗೆಗಳು
- ಕ್ರೈಸ್ತ ಇತಿಹಾಸಕಾರರ ಕೊಡುಗೆಗಳು
- ಪಶ್ಚಿಮ ಏಷ್ಯಾದ ಇತಿಹಾಸಕಾರರ ಕೊಡುಗೆಗಳು..

## 11.1 ಪೀಠಿಕೆ

ಇತಿಹಾಸ ಲೇಖನದ ಪ್ರಾರಂಭವಾದದ್ದು ಗ್ರೀಕರ ಪ್ರಜ್ಞೆಯಿಂದ ಎನ್ನುವುದು ಸ್ಥಿರಪಟ್ಟಿರುವ ವಿಷಯವಾಗಿದೆ. ಇತರ ಎಲ್ಲಾ ಸ್ವಾಭಾವಿಕ ಶಾಸ್ತ್ರಗಳು ಗ್ರೀಕರ ಮನ ಸೆಳೆದಂತೆ ಇತಿಹಾಸ ಲೇಖನವೂ ಗ್ರೀಕರ ಗಮನವನ್ನು ಸೆಳೆಯಿತು. ಈ ಕಾರಣದಿಂದ ಗ್ರೀಕರು ಇತಿಹಾಸ ಲೇಖನದ ಬೆಳವಣಿಗೆಯಲ್ಲಿ ಮೂಲ ಕರ್ತೃಗಳೆನಿಸಿದರು. ಕ್ರಿ.ಪೂ.6ನೇ ಶತಮಾನಕ್ಕಿಂತ ಮೊದಲು ಗ್ರೀಕ್‌ನಲ್ಲಿಯೂ ಗತಕಾಲದ ಘಟನೆಗಳನ್ನು ದಾಖಲಿಸುವ ಅಭ್ಯಾಸವಿರಲಿಲ್ಲ. ಕ್ರಿ.ಪೂ.6ನೇ ಶತಮಾನದಲ್ಲಿ ಉಂಟಾದ ಪದ್ಯ ಹಾಗೂ ಭಾಷಣ ಕಲೆಯ ಸಂಯೋಗದಿಂದ ಇತಿಹಾಸ ಲೇಖನ ಉತ್ಪನ್ನವಾಯಿತು. ಗ್ರೀಕರು ಇತಿಹಾಸ ರಚನೆಯನ್ನು ಒಂದು ಪ್ರಜ್ಞಾಪೂರ್ವಕವಾದ ಕಲೆಯಾಗಿ ಬೆಳೆಸಿ, ಇತಿಹಾಸ ಲೇಖನದಲ್ಲಿಯೂ ಮೊದಲಿಗರೆನಿಸಿದರು. ಸಮಕಾಲೀನ ಸಮಾಜದ ಪರಿಸ್ಥಿತಿಗಳನ್ನು ಕುರಿತು ಲಾವಣಿ ಅಥವಾ ಲಘು ಕಾವ್ಯಗಳನ್ನು ಹಾಡುತ್ತಿದ್ದ ಹಾಡು ಕವಿಗಳು ಪ್ರಾರಂಭದ ಇತಿಹಾಸ ಲೇಖಕರಾಗಿದ್ದರು. ಹೆರೋಡಟಸ್‌ನ ಕಾಲದಿಂದ ಗ್ರೀಕರು ಘಟಿಸಿದ ಘಟನೆಗಳನ್ನು ಸರಳ ಗದ್ಯದ ರೂಪದಲ್ಲಿ, ವಿವರಿಸಲು ಪ್ರಾರಂಭಿಸಿದರು. ಅದು ಪದ್ಯದ ಪ್ರಭಾವದಿಂದ ಸಂಪೂರ್ಣವಾಗಿ ಹೊರತಾಗಿದ್ದು, ಸಾಹಸ ಗಾಥಗಳಷ್ಟೇ ಆಸಕ್ತಿಯನ್ನು ಹುಟ್ಟಿಸುವಂತಿದ್ದವು. ಪ್ರಾರಂಭದ ಬರಹಗಾರರು ತಮ್ಮ ಸರಳ ಗದ್ಯಗಳಲ್ಲಿ ಪಟ್ಟಣಗಳ ಮೂಲ, ಜನತೆ, ರಾಜಕುಮಾರರು ಮತ್ತು ದೇವಾಲಯಗಳಿಗೆ ಸಂಬಂಧಿಸಿದಂತೆ ಅನೇಕ ಐತಿಹ್ಯಗಳನ್ನು ಮತ್ತು ಸಂಪ್ರದಾಯಗಳನ್ನು ಚಿತ್ರಿಸಿದರು. ಕ್ರಿ.ಪೂ.6ನೇ ಶತಮಾನದಿಂದ ಐತಿಹಾಸಿಕ ಬರಹಗಳನ್ನು ರಚಿಸಲು ಪ್ರಾರಂಭವಾಯಿತು. ಹೀಗೆ ಐತಿಹಾಸಿಕ ಬರಹ ಪ್ರಾರಂಭವಾದದ್ದು ಮೊದಲಿಗೆ ಐಯೋನಿಯದಲ್ಲಿ. ಇದು ಗ್ರೀಕರ ಮಹಾಕಾವ್ಯದ ಜನ್ಮ ಸ್ಥಳವಾಗಿತ್ತು ಹಾಗೂ ಪ್ರಪಂಚದ ಮೊಟ್ಟ ಮೊದಲ ಇತಿಹಾಸದ ತೌರು ಮನೆಯಾಗಿತ್ತು.

## 11.2 ಗ್ರೀಕ್ ಇತಿಹಾಸ ಲೇಖನ ಕಲೆ

ಸ್ವಾಭಾವಿಕ ಶಾಸ್ತ್ರಗಳ ಎಲ್ಲಾ ಶಾಖೆಗಳಿಗೆ ಅಸ್ತಿಭಾರ ಹಾಕಿದ ಆದಿ ಪರಿಶೋಧಕರಾಗಿದ್ದ ಗ್ರೀಕರು, ಇತಿಹಾಸ ರಚನೆಯನ್ನು ಒಂದು ಪ್ರಜ್ಞಾಪೂರ್ವಕವಾದ ಕಲೆಯಾಗಿ ಬೆಳೆಸಿ, ಈ ಕ್ಷೇತ್ರದಲ್ಲೂ ಮೂಲಕರ್ತರಾದರು. ಸಾಹಿತ್ಯ ಹಾಗೂ ದರ್ಶನದಂತೆ ಇತಿಹಾಸ ಲೇಖನ ಕಲೆಯನ್ನು ಒಂದು ಪ್ರಬಲ ಶಾಖೆಯಾಗಿ ಬೆಳೆಸಿದ ಕೀರ್ತಿ ಅವರಿಗೇ ಸಲ್ಲಬೇಕು. ಗ್ರೀಸಿನಲ್ಲೂ ಸಹ ಕ್ರಿ.ಪೂ.5 ಅಥವಾ 6ನೆಯ ಶತಮಾನಗಳವರೆಗೆ ಈ ಶಾಖೆಯು ಬೆಳಕಿಗೆ ಬಂದಿರಲಿಲ್ಲ. ಕಾರಣ ಗ್ರೀಕರಲ್ಲಿ ಗತಕಾಲದ ದಾಖಲೆಗಳನ್ನು ಸಂರಕ್ಷಿಸಿಡುವ ಅಭ್ಯಾಸ ಇನ್ನೂ ಬೆಳೆದುಬಂದಿರಲಿಲ್ಲ. ಕ್ರಿ.ಪೂ.6ನೆಯ ಶತಮಾನದಿಂದ ಪದ್ಯ ಹಾಗೂ ಭಾಷಣ ಕಲೆಯ ಸಂಯೋಗದಿಂದ ಈ ಶಾಖೆಯ ಉದಯವಾಯಿತು. ಸಮಕಾಲೀನ ಸಮಾಜದ ಪರಿಸ್ಥಿತಿಗಳನ್ನು ಕುರಿತು ಲಾವಣಿ ಅಥವಾ ಲಘು ಕಾವ್ಯಗಳನ್ನು ಹಾಡುತ್ತಿದ್ದ ಹಾಡುಕವಿಗಳು ಅತ್ಯಂತ ಮುಂಚಿನ ಇತಿಹಾಸ ಲೇಖಕರಾಗಿದ್ದರು. ಲಾವಣಿ ಅಥವಾ ಲಘು ಕಾವ್ಯಗಳು ಇತಿಹಾಸ ಸಾಹಿತ್ಯದ ಉದಯಕ್ಕೆ ಮೊದಲ ಹೆಜ್ಜೆಗಳಾದುವು. ಈ ಇತಿಹಾಸ ಲೇಖಕರು, ಅಥವಾ ಗದ್ಯಾತ್ಮಕ ಚರಿತ್ರೆ ಅಥವಾ ಭಾಷಣ–ಲೇಖಕರು ಸ್ಥಳೀಯ ಇತಿಹಾಸವನ್ನೇ ತಮ್ಮ ವಿಶೇಷ ವಿಷಯವನ್ನಾಗಿ ಆರಿಸಿಕೊಂಡಿದ್ದರು. ಅವರು ತಮ್ಮ ಸ್ಥಳದಲ್ಲೇ ಸಂಭವಿಸಿದ್ದ ಸಮಕಾಲೀನ ಘಟನೆಗಳನ್ನು ಕುರಿತು ವಿವರಿಸುತ್ತಿದ್ದರಿಂದ ಆ ಸಂಭವಗಳನ್ನು ವಸ್ತುನಿಷ್ಠವಾಗಿ ವೀಕ್ಷಿಸುವುದಕ್ಕೆ ಹೆಚ್ಚಿನ ಅವಕಾಶ ಅವರಿಗಿದ್ದಿತು. ಶ್ರೋತೃಗಳಿಗೆ ಹೆಚ್ಚಿನ ಸಂತೋಷವನ್ನು ಉಂಟು ಮಾಡುವ ರೀತಿಯಲ್ಲಿ ರಚನೆಗಳನ್ನು ಸಿದ್ಧಪಡಿಸುವುದರ ಮೂಲಕ ಅವರು ಇತಿಹಾಸವನ್ನು ಒಂದು ಆನಂದದಾಯಕ ಶಾಸ್ತ್ರವನ್ನಾಗಿಸಿದರು. ಅವರ ಸಾಹಿತ್ಯ ಶೈಲಿ ಜನರನ್ನು ಪುಳಕಿತಗೊಳಿಸುತ್ತಿದ್ದಿತು, ಭಾವಪರವಶರಾಗುವಂತೆ ಮಾಡುತ್ತಿದ್ದಿತು. ಅವರು ಪ್ರಚಲಿತ ವಿಷಯಗಳ ಬಗ್ಗೆ ನೀಡುತ್ತಿದ್ದ ವಿವರಗಳು ಜನರ ಜ್ಞಾನವೃದ್ಧಿಗೆ ಸಹಾಯಕ–ವಾಗುತ್ತಿದ್ದುವು. ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಅವರು ದಿನನಿತ್ಯ ಜೀವನದ ಪ್ರಚಲಿತ ಘಟನೆಗಳ ಬಗ್ಗೆ ಮಾತುಗಳಲ್ಲಿ ಹೇಳಬೇಕಾದರೆ, ಅವರು ದಿನನಿತ್ಯ ಜೀವನದ ಪ್ರಚಲಿತ ಘಟನೆಗಳ ಬಗ್ಗೆ ದಾಖಲೆಗಳನ್ನು ಸಿದ್ಧಪಡಿಸುವುದರ ಮೂಲಕ ಆ ಕಾಲದ ಒಂದು ಸಾಮಾಜಿಕ ಅವಶ್ಯಕತೆಯನ್ನು ಈಡೇರಿಸಿದರು. ಅದರ ಮೂಲಕವಾಗಿ ಜನರ ಅಭಿರುಚಿಗೆ ತಕ್ಕಂತೆ ಅವರನ್ನು ವಿನೋದಪಡಿಸುತ್ತಿದ್ದರು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅವರ ರಚನೆಗಳು ಮುಂದಿನ ಪೀಳಿಗೆಯವರಿಗೆ ಹಿಂದೆ ಏನು ನಡೆಯಿತು ಎಂಬುದನ್ನು ಅರಿಯುವುದಕ್ಕೆ ಸಹಾಯಕವಾದ ಬೌದ್ಧಿಕ ಸಾಮಗ್ರಿಗಳ ಭಂಡಾರವೇ ಆದುವು. ಗ್ರೀಕ್ ಇತಿಹಾಸ ಲೇಖಕರಲ್ಲಿ ಕಲ್ಪನಾ ಶಕ್ತಿ, ವಿಷಯಗಳನ್ನು ಸರಿಯಾಗಿ ತಿಳಿಸುವ ಆಸೆ ಹಾಗೂ ಕುತೂಹಲ, ವಿಮರ್ಶಾತ್ಮಕ ಬುದ್ಧಿ ಮತ್ತು ಸತ್ಯನಿಷ್ಠೆ ಪ್ರಧಾನವಾಗಿದ್ದುವು. ಸಾಹಿತ್ಯವು ಅದನ್ನು ಆಕರ್ಷಕ ಕಥನವನ್ನಾಗಿಸಿದರೆ, ದರ್ಶನವು ಅದನ್ನು ಗಾಢ ಹಾಗೂ ಘನವಾಗಿದ್ದ ಶಾಸ್ತ್ರವನ್ನಾಗಿಸಿತು. ಸಂಕ್ಷೇಪದಲ್ಲಿ ಗ್ರೀಕರು ಇತಿಹಾಸ ರಚನಾ ಕಲೆಯಲ್ಲಿ ಮೊದಲಿಗರಾಗಿದ್ದರು. ಯಥಾರ್ಥವಾದ ಐತಿಹಾಸಿಕ ಬರವಣಿಗೆ ಆರಂಭವಾಗಿದ್ದುದು ಅವರಿಂದಲೇ. ಅವರು ಪುರಾಣ ಸಾಹಿತ್ಯ ಹಾಗೂ ಅಸಾಮಾನ್ಯ ಹಾಗೂ ಅಲೌಕಿಕ ವೃತ್ತಾಂತಗಳಿಗೆ ಬದಲಾಗಿ ಸಂಭವಿಸಿದ್ದ ಘಟನೆಗಳನ್ನು ಉತ್ಪ್ರೇಕ್ಷೆ ಇಲ್ಲದೆ ವಸ್ತುನಿಷ್ಠವಾಗಿ ಮತ್ತು ವಿಮರ್ಶಾತ್ಮಕವಾಗಿ ವಿವರಿಸಲು ಯತ್ನಿಸಿದರು. ಗ್ರೀಕ್ ಇತಿಹಾಸಕಾರರು ಮೂಲಾಧಾರಗಳನ್ನು ಪರಿಶೀಲಿಸಿ, ಮೂಲ ಗ್ರಂಥಪಾಠಗಳನ್ನು ಪರಾಮರ್ಶಿಸಿ, ವಿಷಯಗಳನ್ನು ಹೋಲಿಸಿ ಸರಿದೂಗಿಸಿದ ಬಹುಶ್ರುತ ಪಂಡಿತನು ಮಾತ್ರವಾಗಿರಲಿಲ್ಲ. ಅವನು ತಾನು ರಚಿಸಿದ

ಕೃತಿಯಲ್ಲಿ ಬಹುಭಾಗವನ್ನು ತಾನೇ ಭಾಗವಹಿಸಿದ್ದ ಘಟನೆಗಳ ವರ್ಣನೆಗೆ ಮೀಸಲಾಗಿರಿಸಿದ್ದ. ಕಾರ್ಯದೃಷ್ಟಿಯಿಂದ ಕೂಡಿದ್ದ ಮತ್ತು ಲೌಕಿಕ ವ್ಯವಹಾರ ಬಲ್ಲ ವ್ಯಕ್ತಿಯೂ ಆಗಿದ್ದನು. ಅಯೋನಿಯಾ ನಗರದ ವೃತ್ತಾಂತ ಲೇಖಕರ ಗದ್ಯಸಾಹಿತ್ಯ ಕೃತಿಗಳೊಂದಿಗೆ ಮತ್ತು ಮಿಲಿಟಸಿನ ಹೆಕಾಟಯಿಸಿನ ಗ್ರಂಥದೊಂದಿಗೆ ಆರಂಭವಾದ ಗ್ರೀಕ್ ಇತಿಹಾಸಲೇಖನ ಕಲೆಯು ಹೆರೊಡೋಟಸ್‌ನ ಹಾಗೂ ಥೂಸಿಡಿಡಿಸನ ಕೃತಿಗಳಲ್ಲಿ ಅರಳಿ, ಫಲವಂತವಾಯಿತು. ಹೀಗೆ ಗ್ರೀಕ್ ಸಮಾಜದಲ್ಲಿ ತಲೆದೋರಿದ ಇತಿಹಾಸಲೇಖಕರಲ್ಲಿ ಹೆಚ್ಚು ಉಜ್ವಲವಾಗಿ ಪ್ರಕಾಶಿಸಿದ ಪ್ರಧಾನರು ಹೆರೊಡೋಟಸ್ ಹಾಗೂ ಥೂಸಿಡಿಡಿಸ್.

### 11.2.1 ಹೆರೊಡೋಟಸ್

ಪ್ರಾಚೀನ ಕಾಲದ ಕವಿಗಳಲ್ಲಿ ಹೋಮರ್ ಮತ್ತು ವಾಗ್ಮಿಗಳಲ್ಲಿ ಡೆಮಾಸ್ತೆನೀಸ್ ಹೇಗೆ ಪ್ರಧಾನರಾಗಿದ್ದರೋ, ಹಾಗೆಯೇ ಇತಿಹಾಸ ಲೇಖಕರಲ್ಲಿ ಹೆರೊಡೋಟಸ್ ಪ್ರಮುಖನಾಗಿದ್ದನು. ಸಂಭವಿಸಿದ ಘಟನೆಗಳು ಕಾಲಗರ್ಭದಲ್ಲಿ ಕಣ್ಮರೆಯಾಗಿ ಹೋಗದಿರಬೇಕು ಮತ್ತು ಗ್ರೀಕರು ಹಾಗೂ ಗ್ರೀಕೇತರರು ಮಾಡಿದ್ದ ಆಶ್ಚರ್ಯಕರ ಕೆಲಸಗಳು ಹಾಗೂ ಗಳಿಸಿದ್ದ ಸಾಧನೆಗಳು ಎಲ್ಲರಿಗೂ ತಿಳಿಯುವಂತೆ ಮಾಡಬೇಕು ಎಂಬ ಉದ್ದೇಶದಿಂದ ಮೊಟ್ಟಮೊದಲ ಯೂರೋಪಿನ ಇತಿಹಾಸವನ್ನು ಹಾಗೂ ಜಗತ್ತಿನಲ್ಲಿ ಅತ್ಯಂತ ಗಮನಾರ್ಹವಾಗಿದ್ದ ಸಾಹಿತ್ಯ ಕೃತಿಯನ್ನು ಆರಂಭಿಸಿದ್ದ ಮತ್ತು ತನ್ನ ಕಾಲದ ಜಗತ್ತಿನಲ್ಲಿ ನಡೆದ ಸಂಭವ, ಕಥೆ ಹಾಗೂ ಐತಿಹ್ಯಗಳು ಅಳಿಸಿಹೋಗದೆ ಮುಂದಿನ ಪೀಳಿಗೆಯವರಿಗೆ ಸಿಗಬೇಕೆಂಬ ಉದ್ದೇಶದಿಂದ ಅವುಗಳನ್ನು ದಾಖಲು ಮಾಡಿದ್ದ ಹೆರೊಡೋಟಸ್‌ನ ವೈಯಕ್ತಿಕ ವಿಷಯಗಳ ಬಗ್ಗೆ ತಿಳಿದುಬಂದಿರುವುದು ಅತ್ಯಲ್ಪ ಮತ್ತು ಇತಿಹಾಸದ ಜನಕನ ಜೀವನ ಚರಿತ್ರೆಯು ಚರಿತ್ರಲೇಖಕರ ಹಿಡಿತಕ್ಕೆ ಸಿಗದೆ ಇರುವುದು ಒಂದು ವಿಡಂಬನೆಯೇ ಆಗಿದೆ.

ಹೆರೊಡೋಟಸ್ ಸುಮಾರು ಕ್ರಿ.ಪೂ.484ರಲ್ಲಿ ಏಷ್ಯಾ ಮೈನರ್‌ಗೆ ನೈರುತ್ಯಕ್ಕಿದ್ದ ಕಾರಿಯಾ ಎಂಬ ಪ್ರದೇಶದ ಹೆಲಿಕಾರ್ನಸಸ್ ಎಂಬ ನಗರದಲ್ಲಿ ಜನ್ಮ ತಾಳಿದನು. ಆ ಸಮಯದಲ್ಲಿ ಯುದ್ಧಪ್ರಿಯ ರಾಣಿ ಅರ್ಟಿಮಿಸ್ ಆ ನಗರದ ಮುಖ್ಯಸ್ಥಳಾಗಿದ್ದಳು. ಅವಳ ಮೊಮ್ಮಗನಾಗಿದ್ದ ಲಿಗ್‌ಡಾಮೀಸನು ನಿರಂಕುಶಾಧಿಕಾರಿಯಾಗಿದ್ದನು. ಹೆರೊಡೋಟಸ್ ಈ ಸರ್ವಾಧಿಕಾರಿಯ ಅಸಹನೀಯ ಪ್ರಭುತ್ವವನ್ನು ಅಳಿಸಿಹಾಕಬೇಕೆಂಬ ಉದ್ದೇಶವನ್ನು ಹೊಂದಿದ್ದ ಕ್ರಾಂತಿಕಾರಿ ಪಕ್ಷಕ್ಕೆ ಸೇರಿದನು. ಆದರೆ ಆ ಪಕ್ಷ ನಾಯಕನಾಗಿದ್ದ ಅವನ ಮಾವನನ್ನು ನಿರಂಕುಶಾಧಿಕಾರಿಯು ಸೆರೆಹಿಡಿದು ಕೊಂದು ಹಾಕಿದಾಗ ಅವನು ತನ್ನ ಜನ್ಮಭೂಮಿಯನ್ನು ಬಿಟ್ಟು ಸಮೋಸಗೆ ಓಡಿಹೋದನು. ಅಲ್ಲಿ ಮುಂದಿನ 7–8 ವರ್ಷಗಳಲ್ಲಿ ಅಯೋನಿಯಾದ ಭಾಷೆಯನ್ನು ಕಲಿತು, ತನ್ನ ಸುಪ್ರಸಿದ್ಧ ಹಿಸ್ಟೋರೀಸನ್ನು ರಚಿಸಿದನು.

ಹೆರೊಡೋಟಸನು ಪರ್ಷಿಯಾದ ಕದನವನ್ನು ತನ್ನ ವಿಷಯವನ್ನಾಗಿ ಆರಿಸಿಕೊಂಡನು ಮತ್ತು ಅದನ್ನು ಎಷ್ಟು ವಿಶದವಾಗಿ ವಿವರಿಸಿದನೆಂದರೆ ಅದು ಕೇವಲ ಒಂದು ಯುದ್ಧದ ಕಥನವಾಗದೆ, ಒಂದು ಯುಗದ ಚರಿತ್ರೆಯೇ ಆಯಿತು. ಗ್ರೀಕರಿಗೂ ಹಾಗೂ ಪರ್ಷಿಯನ್ನರಿಗೂ ನಡುವೆ ನಡೆದ ಯುದ್ಧವನ್ನು

ಅವನು ಎಷ್ಟು ವಿವರವಾಗಿ ವರ್ಣಿಸಿದನೆಂದರೆ, ಅವನ ರಚನೆಯು ಗ್ರೀಸ್ ಹಾಗೂ ಪರ್ಷಿಯಾದ ವ್ಯಾಪಕ ಇತಿಹಾಸವೇ ಆಯಿತು. ಅವನ ಕೃತಿಯು ಕೇವಲ ಕದನದ ರೋಮಾಂಚಕಾರಿಯಾಗಿದ್ದ ಕಥನ ಮಾತ್ರವಾಗಿರಲಿಲ್ಲ. ಅದು ರಾಜಕೀಯವಾಗಿಯೂ ಹಾಗೂ ಆಧ್ಯಾತ್ಮಿಕವಾಗಿಯೂ ಮುಖ್ಯವಾಗಿದ್ದಿತು ಮತ್ತು ಅವನ ಭವ್ಯವ್ಯಕ್ತಿತ್ವದ ಪ್ರತಿಬಿಂಬವೂ ಆಗಿದ್ದಿತು. ಅವನು ತನ್ನ ಹಿಸ್ಟೋರೀಸನ್ನು ಒಂಭತ್ತು ಭಾಗಗಳಾಗಿ ರಚಿಸಿದನು ಮತ್ತು ಪ್ರತಿಯೊಂದಕ್ಕೂ ಗ್ರೀಕ್ ಕಲಾಭಿಮಾನಿ ಸ್ತ್ರೀದೇವತೆಯ ಹೆಸರನ್ನಿಟ್ಟನು. ಅವನು ಚರಿತ್ರೆಯ ಅಧಿದೇವತೆಯಾದ ಕ್ಲಯೋವಿಗೆ ಪ್ರಥಮ ಹಾಗೂ ಪ್ರಧಾನ ಸ್ಥಾನವನ್ನು ನೀಡಿದನು ಮತ್ತು ಗತಕಾಲದ ಗ್ರೀಕ್ ಜಗತ್ತಿನ ಸಂಪ್ರದಾಯ, ಹಾಡು ಹಾಗೂ ಕಥೆಗಳನ್ನು ಹೆಣೆದು ತನ್ನ ಇತಿಹಾಸವನ್ನು ರಚಿಸಿದನು.

ಅರಬ್ ಚರಿತ್ರಲೇಖಕರಂತೆ ಹೆರೊಡೋಟಸನು ನೇರವಾಗಿ ವಿಷಯಗಳನ್ನು ಸಂಗ್ರಹಿಸುವುದಕ್ಕಾಗಿ ಸ್ಥಳದಿಂದ ಸ್ಥಳಕ್ಕೆ ಕೈಗೊಂಡ ಪ್ರಯಾಣಗಳು ಅವನ ಬರಹಗಳಲ್ಲಿ ಗಮನಾರ್ಹವಾಗಿದ್ದ ಲಕ್ಷಣಗಳಾಗಿದ್ದುವು. ಆದ್ದರಿಂದ ಅವನೇ ಸ್ವತಃ ಘಟನೆಗಳನ್ನು ಅವಲೋಕಿಸಿ ಬರೆಯುವುದು ಸುಲಭವಾಯಿತು. ಅವನು ಸಮಕಾಲೀನ ಸಂಭವಗಳನ್ನು ತನ್ನ ಅಧ್ಯಯನ ವಿಷಯವನ್ನಾಗಿಸಿಕೊಂಡಿದ್ದರಿಂದ ಅವುಗಳ ಬಗ್ಗೆ ಸಾಕಷ್ಟು ಯಥಾರ್ಥವಾಗಿದ್ದ ವಿವರಣೆಗಳನ್ನು ನೀಡುವುದು ಅವನಿಗೆ ಸಾಧ್ಯವಾಯಿತು. ಅವನ ಬರಹಗಳಲ್ಲಿ ಕಂಡುಬರುವ ಏಕತೆ ಇನ್ನೊಂದು ಮುಖ್ಯ ಲಕ್ಷಣ. ಅವನ ಸಮಗ್ರ ಕೃತಿಯಲ್ಲಿ ಸಾಮಂಜಸ್ಯ ಹಾಗೂ ಅವಿಚ್ಛಿನ್ನತೆ ಎದ್ದು ಕಾಣುತ್ತವೆ. ಬೇರ್ಪಡಿಸಲಾಗದ ರೀತಿಯಲ್ಲಿ ಭಾವನೆಗಳನ್ನು ಪರಸ್ಪರ ಸಂಬಂಧಪಡಿಸಿ ನೀಡಿರುವ ವಿವರಣೆ ಅತ್ಯಂತ ಕುತೂಹಲಕಾರಕವಾಗಿದೆ. ಅವನು ಬಳಸಿರುವ ಕಲಾತ್ಮಕ ಶೈಲಿ ಇನ್ನೊಂದು ಪ್ರಧಾನ ಲಕ್ಷಣ. ಅವನಲ್ಲಿ ಕವಿಯ ಕಲ್ಪನಾಶಕ್ತಿ, ಸಹಜತೆ ಹಾಗೂ ಸೂಕ್ಷ್ಮಗ್ರಹಣಶಕ್ತಿ ಮತ್ತು ಇತಿಹಾಸಕಾರನ ಲಕ್ಷಣಗಳಾದ ತಿಳಿದುಕೊಳ್ಳುವ ಕುತೂಹಲ, ಅನ್ವೇಷಣಾಶೀಲ ಗುಣ, ತೀಕ್ಷ್ಣಬುದ್ಧಿ ಮತ್ತು ಸರಿಯಾಗಿ ಅರ್ಥ ವಿವರಿಸುವ ಶಕ್ತಿ ಇತ್ಯಾದಿಗಳು ಮನೆ ಮಾಡಿಕೊಂಡಿದ್ದುವು. ಅವನ ಶೈಲಿ ಸುಲಭ, ಸರಳ, ಸರ್ವಪರಿಚಿತ ಹಾಗೂ ಚಿತ್ತಾಕರ್ಷಕವಾದುದಾಗಿದ್ದಿತು. ಅವನ ಬರಹದಲ್ಲಿ ಸುಸಂಘಟನೆ, ಸುಂದರ ತರಂಗಧಾಟಿ, ಸಾಮರಸ್ಯ ಮತ್ತು ಸುಲಲಿತ ಹರಿವು ಇದೆ. ಆದ್ದರಿಂದ ಕಥನ ಅತ್ಯಂತ ಸ್ವಾರಸ್ಯಕರವಾಗಿದೆ ಹಾಗೂ ಆರಂಭದಿಂದ ಅಂತ್ಯದವರೆಗೆ ಅತ್ಯಂತ ಆಸಕ್ತಿ ಪ್ರಚೋದಕವಾಗಿದೆ. ಹಿಂದೆ ಇದ್ದ ಮತ್ತ್ಯಾವ ಲೇಖಕರು ಅವನಂತೆ ಅಸ್ತವ್ಯಸ್ತವಾಗಿದ್ದ ಅಪಾರ ವಾಸ್ತವಾಂಶಗಳನ್ನು ಸಮರ್ಪಕವಾಗಿ ಸಂಯೋಜಿಸಿ, ಸ್ಪಷ್ಟವಾಗಿ ವಿವರಿಸಲಿಲ್ಲ. ಕಥೆ ಹೇಳುವುದರಲ್ಲಿ ಅವನಿಗಿದ್ದ ಅಸಮಾನ ಚಾತುರ್ಯ ಇನ್ನೊಂದು ಲಕ್ಷಣವಾಗಿದ್ದಿತು. ಕಥೆಗಾರ ಹೆರೊಡೋಟಸ್‌ನನ್ನು ಮೀರಿಸಿದವರಾರೂ ಇರಲಿಲ್ಲ. ಓದುಗರ ಆಸಕ್ತಿಯನ್ನು ಕೆರಳಿಸಿ, ಅವರಿಗೆ ಉಲ್ಲಾಸ ಉಂಟಾಗುವ ರೀತಿಯಲ್ಲಿ ವಿಷಯಗಳನ್ನು ತಿಳಿಸುವುದೇ ಇತಿಹಾಸದ ಉದ್ದೇಶವಾದರೆ, ಈ ಅಂಶದಲ್ಲಿ ಅವನಿಗಿಂತ ಮೇಲಾಗಿದ್ದವರು ಯಾರೂ ಇರಲಿಲ್ಲ.

ಆದರೂ ಹೆರೊಡೋಟಸ್‌ನ ಬರಹಗಳು ಟೀಕೆಗಳಿಗೆ ಗುರಿಯಾಗಿವೆ. ಅವನು ಇತರ ಜನರ ಭಾಷೆಯನ್ನು ಕಲಿತಿರಲಿಲ್ಲವಾದ್ದರಿಂದ ಅವರ ಬಗ್ಗೆ ಸರಿಯಾಗಿದ್ದ ಜ್ಞಾನವನ್ನು ಪಡೆಯಲಾರದೆ ಹೋದನು ಎಂಬುದಾಗಿ ಕೆಲವರು ಟೀಕಿಸಿದ್ದಾರೆ. ಆದರೆ ಈ ಸ್ಖಾಲಿತ್ಯವು ಕ್ಷಮಾರ್ಹವಾದುದು. ಕಾರಣ ಆ ಕಾಲದಲ್ಲಿ ಪರ್ಷಿಯಾ ಅಥವಾ ಈಜಿಪ್ಟಿನ ಭಾಷೆಗಳನ್ನು ಕಲಿಯುವುದು ಸುಲಭವಾಗಿರಲಿಲ್ಲ. ಇತಿಹಾಸಕಾರರು

ಹಲವಾರು ಭಾಷೆಗಳನ್ನು ಕಲಿಯುವ ಅವಶ್ಯಕತೆ ಹಾಗೂ ಪ್ರಾಮುಖ್ಯತೆಯನ್ನು ಎತ್ತಿಹಿಡಿದರೂ, ಇಂದೂ ಸಹ ಅದು ಆದರ್ಶವಾಗಿಯೇ ಇದೆ. ಎರಡನೆಯದಾಗಿ, ಅವನಲ್ಲಿ ಕಿವಿಗಳಿಂದ ಕೇಳಿದ್ದೆಲ್ಲವನ್ನು ನಂಬುವ ದೌರ್ಬಲ್ಯವಿದ್ದಿತು ಎಂಬುದಾಗಿ ಅವನನ್ನು ಆಕ್ಷೇಪಿಸಲಾಗಿದೆ. ಅವನಿಗೆ ಒಂದು ಒಳ್ಳೆಯ ಕಥೆಯ ಪರಿಚಯವಾದಾಗ, ಅದರ ಸರಿತಪ್ಪುಗಳ ಬಗ್ಗೆ ವಿಚಾರಿಸದೆ ಅದನ್ನು ಪುನಃ ಹೇಳುವ ಒಂದು ಚಾಪಲ್ಯವಿದ್ದಿತಾದರೂ, ಅವನು ಹೇಳಿರುವ ಅನೇಕ ಕತೆಗಳು ಹಾಗೂ ನೀಡಿರುವ ವರ್ಣನೆಗಳು ಅವನ ಸ್ವಂತ ಅನುಭವದ ಮೇಲೆ ಆಧಾರಿತವಾಗಿದ್ದುವು ಮತ್ತು ಕೇಳಿದ್ದ ವಿಷಯಗಳನ್ನು ಕಣ್ಣಿಗೆ ಕಟ್ಟುವಂತೆ ಸುಸ್ಪಷ್ಟವಾಗಿ ವರ್ಣಿಸುವುದರಲ್ಲಿ ನಿಷ್ಣಾತನಾಗಿದ್ದನು ಎಂಬುದು ಗಮನಿಸಬೇಕಾದ ಅಂಶ. ಮುರನೆಯದಾಗಿ, ತನ್ನ ಬರಹದಲ್ಲಿ ಮನೋಹರವಾಗಿದ್ದ ಶೈಲಿಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದನೆಂದರೆ ತಾನು ಬಳಸಿದ್ದ ವಾಸ್ತವಾಂಶಗಳು ಎಷ್ಟರಮಟ್ಟಿಗೆ ನಿಷ್ಕೃಷ್ಟವಾಗಿದ್ದುವು ಎಂಬುದನ್ನು ಪರಿಶೀಲಿಸಲು ಮತ್ತು ಜನರನ್ನು ಹಾಗೂ ಸಂಭವಿಸಿದ ಘಟನೆಗಳನ್ನು ವಸ್ತುನಿಷ್ಠವಾಗಿ ವೀಕ್ಷಿಸಿ ವಿವರಿಸಲು ಅವನಿಗೆ ಸಾಧ್ಯವಾಗಲಿಲ್ಲ ಎಂಬುದು ಅವನ ಬಗ್ಗೆ ಇರುವ ಇನ್ನೊಂದು ಟೀಕೆ. ಆದರೆ ಅವನು ತನ್ನದೇ ಆಗಿದ್ದ ವಿಶಿಷ್ಟ ಅವಲೋಕನಾ ವಿಧಾನ ಹಾಗೂ ತಕ್ಕ ನಿರ್ಣಯವನ್ನು ನೀಡುವ ಕ್ರಮವನ್ನು ಬಳಸಿದ್ದ ಮತ್ತು ಚೆನ್ನಾಗಿ ಓದಿ ಪಾರಂಗತನಾಗಿದದ ಅಸೀಮ ಬುದ್ಧಿವಂತ ಹಾಗೂ ಮಹಾವ್ಯಕ್ತಿಯಾಗಿದ್ದನು ಎಂಬುದರಲ್ಲಿ ಸಂಶಯವಿಲ್ಲ. ತನ್ನ ದ್ವಿತೀಯ ಕೃತಿಯಲ್ಲಿ ಅವನು ಒಂದೇ ಒಂದು ವಾಸ್ತವಾಂಶದ ಸತ್ಯಾಸತ್ಯವನ್ನು ತಿಳಿಯುವುದಕ್ಕಾಗಿ ತಆನು ಸಮುದ್ರಪ್ರಯಾಣ ಮಾಡಿ ಟೈರ್‌ಗೆ ಹೋದನೆಂಬುದಾಗಿ ಹೇಳಿಕೊಂಡಿರುವುದು ಬಹು ಗಮನಾರ್ಹವಾದ ಅಂಶ. ಆದ್ದರಿಂದ ನಿಶ್ಚಯವಾಗಿ ಅವನೂ ಸಹ ವೈಜ್ಞಾನಿಕ ಇತಿಹಾಸಕಾರನ ಮನೋಭಾವವನ್ನು ಹೊಂದಿದ್ದನು ಹಾಗೂ ಆ ವಿಧಾನವನ್ನು ಬಳಸಿದ್ದನು ಎಂಬುದಾಗಿ ಹೇಳಬಹುದು. ಅವನು ಹಿತಕರವಾಗಿದ್ದ ಘಟನೆಗಳು ಸಂಭವಿಸುವುದಕ್ಕೆ ದೈವಿಕ ಶಕ್ತಿಯೇ ನೇರವಾಗಿ ಕಾರಣವಾಗಿದೆ ಎಂಬುದಾಗಿ ನೀಡಿರುವ ಹೇಳಿಕೆಯನ್ನು ಕೆಲವರು ಖಂಡಿಸಿದ್ದಾರೆ. ಆದರೆ ದೈವಿಕ ಶಕ್ತಿಯಲ್ಲಿ ನಂಬಿಕೆ ಪ್ರಬಲವಾಗಿದ್ದ ಆ ಕಾಲದಲ್ಲಿ ಅವನಿಗೆ ಅವಶ್ಯಕವಾಗಿದ್ದ ಸಾರ್ವಜನಿಕ ಬೆಂಬಲ ಪಡೆಯಲು ಈ ತರಹದ ವಿವರಣೆಯನ್ನು ನೀಡಬೇಕಾಗಿದ್ದುದು ಅನಿವಾರ್ಯವಾಗಿದ್ದಿತು ಎಂಬುದನ್ನು ಮರೆಯಬಾರದು.

ಒಟ್ಟಿನಲ್ಲಿ ಹೆರೊಡೋಟಸನು ಅತ್ಯಂತ ಸಹಾನುಭೂತಿಯಿಂದ ಕೂಡಿದ್ದ ವ್ಯಾಪಕ ದೃಷ್ಟಿಕೋನದಿಂದ ಸತ್ಯವನ್ನು ಕಂಡು, ಅರಿತು, ಪ್ರತಿಪಾದಿಸಿದನು. ಅವನು ಪರ್ಷಿಯಾ ಕದನಗಳು ನಡೆದ ಭಾಗ, ಕಾದಾಡಿಸ ರಾಷ್ಟ್ರಗಳು ಮತ್ತು ಅವುಗಳ ಸಂಪ್ರದಾಯ, ರಾಜಕೀಯ ಹಾಗೂ ಸಾಮಾಜಿಕ ಭಾವನೆ ಇತ್ಯಾದಿಗಳ ಬಗ್ಗೆ ಮಾಡಿರುವ ಸಮೀಕ್ಷೆಯು ಕಥೆ ಹೇಳುವ ಅತ್ಯದ್ಭುತ ಕಲೆಯಾಗಿದೆ ಮತ್ತು ವ್ಯಾಪ್ತಿ ಹಾಗೂ ಸತ್ಯ ಪ್ರತಿಪಾದನೆಯಲ್ಲಿ ಅವನ ಬರಹವು ಸಾಮಾಜಿಕ ಚರಿತ್ರಲೇಖಕ, ಮಾನವ ಶಾಸ್ತ್ರಜ್ಞ ಮತ್ತು ಮಾನವ ಹಿತಾಸಕ್ತರಿಗೆ ಅತ್ಯಮೂಲ್ಯವಾಗಿದೆ. ಅವನಿಗೆ ರಾಜಕೀಯ ಹಾಗೂ ಸಾಮಾಜಿಕ ವಿಷಯಗಳಲ್ಲೂ ಆಸಕ್ತಿ ಇದ್ದಿತು. ವಾಯುಗುಣ, ಪಥ್ಯವಿಧಿ, ಉಡುಪಿನ ವೈಖರಿ ಹಾಗೂ ವೈವಿಧ್ಯ, ಆದಿವಾಸಿ ಸಂಪ್ರದಾಯ, ಧಾರ್ಮಿಕ ನಂಬಿಕೆ ಮುಂತಾಗಿ ಎಲ್ಲಾ ವಿಷಯಗಳು ಅವನ ಬರಹದ ವ್ಯಾಪ್ತಿಗೆ ಒಳಗಾಗಿದ್ದುವು. ಆದ್ದರಿಂದ ಅವನನ್ನು ಸಮಾಜವಿಜ್ಞಾನಿ, ಮಾನವಶಾಸ್ತ್ರಜ್ಞ ಮತ್ತು ಜನಸಂಖ್ಯಾ ಶಾಸ್ತ್ರಜ್ಞ ಎಂಬುದಾಗಿ ಕರೆಯಲಾಗುತ್ತದೆ. ಅವನು ಪುಟ್ಟ ಮಗುವು ಯಾವ ಭಾಷೆಯನ್ನು ಆಡುತ್ತದೆ ಎಂಬುದನ್ನು ತಿಳಿಯುವುದಕ್ಕಾಗಿ ಮಾಡಲಾದ

ಪ್ರಯೋಗವನ್ನು ದಾಖಲು ಮಾಡಿರುವುದರಿಂದ ಅವನನ್ನು ಮನಶಾಸ್ತ್ರಜ್ಞ ಎಂಬುದಾಗಿ ಸಹ ಕರೆಯಬಹುದು. ಆದ್ದರಿಂದ ಅವನು ಅದ್ವಿತೀಯವಾಗಿದ್ದ ರೀತಿಯಲ್ಲಿ ಬರೆದಿಟ್ಟ ಚರಿತ್ರೆಯ ಕಥೆಯು ಮುಂದೆ ಹಾದುಬಂದ ಶತಮಾನಗಳಲ್ಲಿ ಅಪೂರ್ವ ಖ್ಯಾತಿಯನ್ನು ಪಡೆಯಿತು. ಅದು ಇತಿಹಾಸಗಳಲ್ಲಿ ಪ್ರಪ್ರಥಮವಾಗಿದ್ದಿತು ಮತ್ತು ಎಲ್ಲಾ ಗದ್ಯ ರಚನೆಗಳಿಗೆ ಮೂಲವಾಯಿತು. ಅಷ್ಟು ಮಾತ್ರವಲ್ಲದೆ, ಅದು ಪ್ರಚೋದಿಸಿದ ನೈಜ ಆಸಕ್ತಿ ಮತ್ತು ಅದನ್ನು ಹೇಳಿದ ರೀತಿಯಲ್ಲಿ ಕಂಡುಬಂದ ಅನುಪಮ ಸೊಬಗೂ ಸಹ ಅತಿ ಮುಖ್ಯವಾಗಿದ್ದಿತು. ಅವನು ಎರಡು ಬಗೆಯ ಐತಿಹಾಸಿಕ ಅನ್ವೇಷಣೆಯನ್ನು ನಡೆಸಿದನು. ಅವನು ಹಿಂದೆ ಸಂಭವಿಸಿದ ಪರ್ಷಿಯಾ ಕದನದ ಬಗ್ಗೆ ವಿಚಾರ ಮಾಡಿದನು ಮತ್ತು ಪ್ರಾಚ್ಯ ದೇಶಗಳ ಪ್ರಚಲಿತ ಪರಿಸ್ಥಿತಿ ಹಾಗೂ ಗತಕಾಲದ ಘಟನೆಗಳ ಬಗ್ಗೆ ವಿಷಯಗಳನ್ನು ಸಂಗ್ರಹಿಸುವುದಕ್ಕಾಗಿ ಆ ನಾಡುಗಳಲ್ಲಿ ಸಂಚರಿಸಿದನು. ಯಾವ ಕಾಲದಲ್ಲೂ ಈ ತರಹದ ಎರಡು ಕಾರ್ಯಗಳನ್ನು ಒಟ್ಟಾಗಿ ಮಾಡುವುದು ಯಾರಿಗೂ ಸುಲಭಸಾಧ್ಯವಾಗುವುದಿಲ್ಲ. ಇಂದು ಪ್ರಾಚೀನ ಶೋಧನ ಶಾಸ್ತ್ರ ಹಾಗೂ ವಿವಿಧ ಭಷೆಗಳ ಅರಿವಿನ ಆಧಾರದ ಮೇಲೆ ಪ್ರಾಚ್ಯ ಸಾಹಿತ್ಯ ಸಂಸ್ಕೃತಿಯ ಪಂಡಿತರು ಹೆರೊಡೋಟಸ್ ತಾನು ಕಂಡಿದ್ದನು ಹಾಗೂ ಕೇಳಿದ್ದನ್ನು ಯಥಾರ್ಥವಾಗಿ ದಾಖಲು ಮಾಡಿದ್ದಾನೆ ಎಂಬುದಾಗಿ ಸಮರ್ಥಿಸಿದ್ದಾರೆ. ಸ್ಕಾಲಿಗರ್ ಅವನನ್ನು ಪ್ರಾಚೀನ ಕಾಲಗಣನಾ–ಶಾಸ್ತ್ರದ ಪ್ರಮುಖರಲ್ಲಿ ಒಬ್ಬನಾಗಿದ್ದಾನೆ ಎಂಬುದಾಗಿ ಹೊಗಳಿದ್ದಾನೆ. ಅವನ ಅತ್ಯಂತ ರಮ್ಯವಾದ ಶೈಲಿ, ಪ್ರಾಚ್ಯ ಪ್ರದೇಶಗಳ ಬಗ್ಗೆ ಅವನು ನೀಡಿರುವ ವಿವರಗಳು, ಈಜಿಪ್ಟ್ ಹಾಗೂ ಬ್ಯಾಬಿಲೋನಿಯಾದ ಬಗ್ಗೆ ರಚಿಸಿರುವ ಪ್ರಮಾಣ ಗ್ರಂಥ, ಗ್ರೀಸಿನ ಗತಕಾಲಕ್ಕೆ ಸಂಬಂಧಿಸಿದ ಅಪೂರ್ವ ದಾಖಲೆಯಾಗಿರುವ ಪರ್ಷಿಯಾ ಕದನವನ್ನು ಕುರಿತ ಮಹಾಕವ್ಯ, ಹೆಣೆದಿರುವ ಕಥೆ, ಪ್ರಾಚೀನ ಗ್ರೀಕ್ ಹಾಗೂ ಪ್ರಾಚ್ಯ ಇತಿಹಾಸದ ವಿಚಾರದಲ್ಲಿ ಅವನಿಗಿದ್ದ ಪ್ರಾವೀಣ್ಯತೆ, ದೇಶಸಂಚಾರ ಕೈಗೊಂಡು ವಾಚಿಕ ಸಂಪ್ರದಾಯಗಳನ್ನು ವಿಶ್ಲೇಷಿಸುವುದರಲ್ಲಿ ಅವನು ಸಾಧಿಸಿದ ಯಶಸ್ಸು, ಯುದ್ಧವನ್ನು ಇತಿಹಾಸ ಲೇಖನದ ಪ್ರಧಾನ ವಿಷಯವನ್ನಾಗಿಸಿದ್ದುದು ಮುಂತಾದ ಸಾಧನೆಗಳಿಗಾಗಿ ಅವನನ್ನು ಮಹಾ ಶ್ರೇಷ್ಠ ಗ್ರಂಥಕರ್ತ, ಅತ್ಯುತ್ತಮ ಪಂಡಿತ ಹಾಗೂ ಚರಿತ್ರಲೇಖಕ ಎಂಬುದಾಗಿ ಧಾರಾಳವಾಗಿ ಕರೆಯಬಹುದು. ಅವನ ಅನ್ವೇಷಣೆಗಳಿಗೆ ವಾಚಿಕ ಸಂಪ್ರದಾಯಗಳು ಆಧಾರವಾಗಿದ್ದುವು ಮತ್ತು ಅವನು ವಿವಿಧ ಸ್ಥಳಗಳ ಪ್ರೇಕ್ಷಣೆ ಹಾಗೂ ವಾಚಿಕ ಸಂಪ್ರದಾಯಗಳ ಸಹಾಯದಿಂದ ಸರ್ವವಿಧದಲ್ಲೂ ಗೌರವಾರ್ಹವಾಗಿದ್ದ ಇತಿಹಾಸವನ್ನು ರಚಿಸಿದನು. 15–16ನೆಯ ಶತಮಾನಗಳಲ್ಲಿ ಭೂ ಅನ್ವೇಷಣೆಗಳ ಫಲವಾಗಿ ಅಜ್ಞಾತವಾಗಿದ್ದ ವಿವಿಧ ಭೂಪ್ರದೇಶಗಳು ಬೆಳಕಿಗೆ ಬಂದಾಗ ಅಲ್ಲಿಗೆಲ್ಲಾ ಹೋಗಿ ಅಲ್ಲಿಯ ನಿವಾಸಿಗಳ ಬಗ್ಗೆ ಕಥನಗಳನ್ನು ಸಿದ್ಧಪಡಿಸಿದ ಪಾದ್ರಿ, ವ್ಯಾಪಾರಿ, ಅನ್ವೇಷಕರಿಗೆ ಮತ್ತು ಇಂದು ಆದಿವಾಸಿಗಳ ಬಗ್ಗೆ ಸಂಶೋಧನೆಗಳನ್ನು ನಡೆಸುತ್ತಿರುವ ಮಾನವಶಾಸ್ತ್ರಜ್ಞ ಸಮಾಜವಿಜ್ಞಾನಿ ಹಾಗೂ ಸಾಹಿತ್ಯದ ವಿದ್ಯಾರ್ಥಿಗಳಿಗೆ ವಾಚಿಕ ಸಂಪ್ರದಾಯಗಳು ಮೂಲಾಧಾರಗಳು. ಅವರೆಲ್ಲರೂ ಹೆರೊಡೋಟಸ್‌ನ ಅಧ್ಯಯನ ಕ್ರಮ, ಮೂಲಾಧಾರಗಳು ಇತ್ಯಾದಿಗಳು ವೈಜ್ಞಾನಿಕವಾದುವು. ಸಮರ್ಪಕವಾದುವು ಎಂಬುದನ್ನು ಸಮರ್ಥಿಸಿದ್ದಾರೆ. ಆದ್ದರಿಂದ ನಿಜಕ್ಕೂ ಹೆರೊಡೋಟಸ್ ಆಧುನಿಕ ಕಾಲದಲ್ಲಿ ನಿಷ್ಕೃಷ್ಟವಾಗಿ ಇತಿಹಾಸದ ಜನಕನಾದನು ಎಂಬುದು ಆಶ್ಚರ್ಯಕರವಾದ ವಿಲಕ್ಷಣ ಸತ್ಯಸಂಗತಿ ಎಂಬುದಾಗಿ ಹೇಳಬಹುದು.

## 11.2.2 ಥೂಸಿಡ್ಡಿಡೀಸ್

ಹೆರೊಡೋಟಸ್‌ನ ಅತ್ಯುತ್ತಮ ಉತ್ತರಾಧಿಕಾರಿಯಾಗಿ ಗ್ರೀಕ್ ಇತಿಹಾಸಲ್ಲಿ ಕಂಗೊಳಿಸಿದವನೇ ಥೂಸಿಡಿಡ್ಡೀಸ್. ಗ್ರೀಕ್ ಇತಿಹಾಸ ಲೇಖಕರು ಯಥಾರ್ಥವಾಗಿದ್ದ ಹೇಳಿಕೆಗಳನ್ನು, ನಿರ್ಣಯಗಳನ್ನು ನೀಡಲು ಯತ್ನಿಸಿದರೇ ಎಂಬುದನ್ನು ತಿಳಿಯಬೇಕಾದರೆ ಥೂಸಿಡ್ಡಿಡೀಸನತ್ತ ಗಮನವನ್ನು ಹರಿಸಬೇಕಾಗುತ್ತದೆ. ಅಪೂರ್ಣವಾದ 'ಹಿಸ್ಟೊರಿ ಆವ್ ದಿ ಪೆಲೆಪೇನೇಷಿಯನ್ ವಾರ್' ಎಂಬ ಮಹಾಕ್ರತಿಯ ಶ್ರೇಷ್ಠ ಕರ್ತೃವಾಗಿದ್ದ ಅವನು ಅತ್ಯುತ್ತಮ ಗ್ರೀಕ್ ಚರಿತ್ರಲೇಖಕನಾಗಿದ್ದನು. ತನ್ನ ಕಥನದ ಮಧ್ಯೆ-ಮಧ್ಯೆ, ಅಲ್ಲಲ್ಲಿ ತನ್ನ ಬಗ್ಗೆ ನೀಡಿರುವ ವಿವರಗಳ ಆಧಾರದ ಮೇಲೆ ಅವನು ಅಥೆನ್ಸ್ ನಗರದವನು, ಅವನ ತಂದೆಯಹೆಸರು ಓಲರಸ್ ಮತ್ತು ಅವನು ಯುದ್ಧ ಆರಂಭವಾಗುವ ಹೊತ್ತಿಗೆ ಅದರ ಬಗ್ಗೆ ವಿಚಾರ ಮಾಡುವಷ್ಟು ದೊಡ್ಡವನಾಗಿದ್ದರಿಂದ ಬಹುಶಃ ಅವನು ಕ್ರಿ.ಪೂ.460ಕ್ಕೂ ಮೊದಲೇ ಜನ್ಮ ತಾಳಿರಬೇಕು ಎಂಬುದಾಗಿ ಹೇಳಬಹುದು. ಥ್ರೇಸ್‌ನಲ್ಲಿ ಅವನಿಗೆ ಸಾಕಷ್ಟು ಆಸ್ತಿ ಇದ್ದಿತು ಮತ್ತು ಅವನು ಅತ್ಯಂತ ಪ್ರಭಾವಶಾಲಿ ವ್ಯಕ್ತಿಯಾಗಿದ್ದನು. ಅಥೆನ್ಸಿನಲ್ಲಿ ಮಾರಕವಾಗಿದ್ದ ಅಂಟುರೋಗ ಹರಡಿದಾಗ ಇತರರಂತೆ ಅವನೂ ಸಹ ಜಾಡ್ಯಕ್ಕೆ ತುತ್ತಾಗಿ ಅತೀವ ಸಂಕಟವನ್ನು ಅನುಭವಿಸಿದನು ಮತ್ತು ಕ್ರಿ.ಪೂ.424ರಲ್ಲಿ ಹತ್ತು ಮಂದಿ ಸೇನಾನಾಯಕ ಮಂಡಲಿಯವರಲ್ಲಿ ಒಬ್ಬನಾಗಿ ಚುನಾಯಿತ-ನಾಗಿದ್ದನು. ಅವನಿಗಿದ್ದ ಪ್ರಭಾವದ ಕಾರಣ ಅವನನ್ನು ಒಂದು ನೌಕಾಪಡೆಯ ಮುಖ್ಯಸ್ಥನನ್ನಾಗಿ ಮಾಡಲಾಯಿತು. ಆದರೆ ಅವನು ಮುಖ್ಯ ನಗರವಾಗಿದ್ದ ಯ್ಯಾಂಪಿಪಾಲಿಸ್ ಮೇಲೆ ನಡೆದ ಆಕ್ರಮಣವನ್ನು ತಡೆಯಲು ಅಸಮರ್ಥನಾಗಿದ್ದರಿಂದ ಅವನನ್ನು ಹಿಂದಕ್ಕೆ ಕರೆಯಿಸಿ, ವಿಚಾರಣೆಗೆ ಗುರಿಪಡಿಸಿ ಅವನಿಗೆ ಗಡೀಪಾರು ಶಿಕ್ಷೆಯನ್ನು ವಿಧಿಸಲಾಯಿತು.

ಈ ಶಿಕ್ಷೆ ಥೂಸಿಡ್ಡಿಡೀಸನಿಗೆ ವರವೇ ಆಯಿತು. ಕಾರಣ ಇತಿಹಾಸವನ್ನು ರಚಿಸುವುದಕ್ಕಾಗಿ ಏಕಾಗ್ರತೆಯಿಂದ ಅಧ್ಯಯನವನ್ನು ನಡೆಸುವುದಕ್ಕೆ, ವಿಷಯ ಸಂಗ್ರಹಣೆಗಾಗಿ ದೇಶ ಸಂಚಾರವನ್ನು ಕೈಗೊಳ್ಳುವುದಕ್ಕೆ ಮತ್ತು ಇತರರರೊಂದಿಗೆ, ಮುಖ್ಯವಾಗಿ ಪೆಲೆಪೇನೇಷಿಯಾದವರೊಡನೆ, ಹೆಚ್ಚಿನ ಸಂಪರ್ಕಗಳನ್ನು ಬೆಳೆಸಿಕೊಳ್ಳುವುದಕ್ಕೆ ಅವನಿಗೆ ಸದವಕಾಶ ಲಭಿಸಿತು. ಅವನು ಬಹುಶಃ ಕಿ.ಪೂ.464ರ ಅನಂತರ ಆ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ದುರ್ಮರಣ ಹೊಂದಿದ್ದಿರಬೇಕು. ಕಾರಣ ಅವನ ಇತಿಹಾಸ ಎಂಬ ಮಹಾಕೃತಿಯು ಅಲ್ಲಿಗೆ ಏಕಾಏಕಿ ಅಂತ್ಯಗೊಂಡು ಅಪೂರ್ಣವಾಗಿ ನಿಂತಿದೆ.

ಥೂಸಿಡ್ಡಿಸೀಸನ ಈ ಸುಪ್ರಸಿದ್ಧ ಗ್ರಂಥವನ್ನು ಎಂಟು ಪ್ರಧಾನ ಭಾಗಗಳಾಗಿ ವಿಭಾಗಿಸಲಾಗಿದೆ. ಅವನ ಕೃತಿ-ರಚನೆಯಲ್ಲಿ ಮೂರು ಮುಖ್ಯ ಹಂತಗಳನ್ನು ಗುರುತಿಸಬಹುದು. ಮೊದಲನೆಯ ಹಂತದಲ್ಲಿ ಅವನು ಘಟನೆಗಳು ಸಂಭವಿಸಿದಂತೆ, ಅವುಗಳ ಬಗ್ಗೆ ಟಿಪ್ಪಣಿಗಳನ್ನು ಸಿದ್ಧಪಡಿಸಿದನು ಮತ್ತು ಹೊಸ ಅನ್ವೇಷಣೆಗಳನ್ನು ನಡೆಸಿ, ಹೆಚ್ಚಿನ ವಿಷಯಗಳನ್ನು ಅನುಬಂಧವಾಗಿ ಸೇರಿಸಿದನು. ಎರಡನೆಯ ಹಂತದಲ್ಲಿ ಈ ಟಿಪ್ಪಣಿಗಳನ್ನು ಕ್ರಮಬದ್ಧವಾಗಿ ವರ್ಗೀಕರಿಸಿ, ಅನುಕ್ರಮಿಕ ಕಥನವನ್ನು ಸಿದ್ಧಪಡಿಸಿದನು. ಆದರೆ ಅದು ಮೊದಲೇ ಉದ್ದೇಶಿಸಿದ ಅಂತಿಮ ದಾಖಲೆಯಾಗಿರಲಿಲ್ಲ. ಮೂರನೆಯ ಹಂತದಲ್ಲಿ ಅವನು ಕೊನೆಯ ವಿಶದೀಕೃತ ವೃತ್ತಾಂತವನ್ನು ರಚಿಸಿದನು.

ಮುಂದಿನ ಪೀಳಿಗೆಯ ಉಪಯೋಗಕ್ಕಾಗಿ ಯೋಗ್ಯ ಇತಿಹಾಸವನ್ನು ಸಿದ್ಧಪಡಿಸುವುದೇ ಅವನ ಉದ್ದೇಶವಾಗಿದ್ದರಿಂದ ಅವನು ಆತುರಾತುರವಾಗಿ ತನ್ನ ಬರವಣಿಗೆಯ ಕಾರ್ಯವನ್ನು ಮುಗಿಸಲು ಇಚ್ಛಿಸಲಿಲ್ಲ. ಅವನು ಅನ್ವೇಷಣೆಯನ್ನು ನಿಲ್ಲಿಸದೆ ಮುಂದುವರಿಸಿ, ಹೊಸ ಹೊಸ ವಿಷಯಗಳನ್ನು ಅವಲೋಕಿಸಿ, ಸಂಗ್ರಹಿಸಿ ವಿಚಾರ ಮಾಡುತ್ತಿದ್ದನು. ಟಿಪ್ಪಣಿಗಳನ್ನು ಬರೆದಿಟ್ಟುಕೊಳ್ಳುತ್ತಿದ್ದನು ಮತ್ತು ತಾನು ಮೊದಲು ಸಿದ್ಧಪಡಿಸಿದ್ದ ದಾಖಲೆಗೆ ಹೊಸ ವಿವರಗಳನ್ನ ಸೇರಿಸುವ ಅಥವಾ ಅದನ್ನು ಬದಲಾಯಿಸುವ ಕಾರ್ಯಕ್ರಮವನ್ನು ಸತತವಾಗಿ ಮುಂದುವರಿಸಿದನು. ಅಥೆನ್ಸಿನ ಅಪೂರ್ವ ಬೌದ್ಧಿಕ ಚಳವಳಿಯ ಅಮೂಲ್ಯ ರತ್ನವಾಗಿದ್ದ ಮತ್ತು ಭವ್ಯವಾಗಿದ್ದ ವಿಶಿಷ್ಟ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದ ಈ ಅಪೂರ್ವ ಬುದ್ಧಿಶಾಲಿಯು ಬಳಸಿರುವ ಶೈಲಿಯು ಅವನು ಸೊಫೋಕ್ಲಿಸ್, ಯೂರಿಪ್ಪಿಡೀಸ್ ಮುಂತಾದ ಸಮಕಾಲೀನ ಘನಪಂಡಿತರ ಸಹವಾಸದಲ್ಲಿ ಬೆಳೆದುಬಂದವನು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅವನು ಬರೆದಿದ್ದುದೆಲ್ಲವೂ ಓದುಗರಿಗಾಗಿಯೇ, ಒಟ್ಟಿನಲ್ಲಿ, ಅವನು ಸಮಕಾಲೀನ ರಾಜಕೀಯ ಚರಿತ್ರೆಯೇ ಘನವಾದ, ಮುಖ್ಯವಾದ ಇತಿಹಾಸ ಎಂಬುದಾಗಿ ಒತ್ತಿ ಹೇಳಿದನು.

ಇದರೊಂದಿಗೆ ಥೂಸಿಡ್ಡಿಡೀಸನೂ ಸಹ ಇತಿಹಾಸವು ಚೆನ್ನಾಗಿ ವಾಚಿಕ ಸಂಪ್ರದಾಯಗಳನ್ನು ಅವಲಂಬಿಸಿದೆ ಎಂಬ ಹೆರೊಡೋಟಸನ ಅಭಿಪ್ರಾಯವನ್ನು ಒಪ್ಪಿಕೊಂಡರೂ, ಅವನು ಅವುಗಳನ್ನು ಅಧ್ಯಯನ ಮಾಡುವಾಗ ಅತ್ಯಂತ ನಿಷ್ಕೃಷ್ಟವಾಗಿದ್ದ ಪ್ರಮಾಣವನ್ನು ಅಳವಡಿಸಿಕೊಂಡನು. ಇತಿಹಾಸ ಲೇಖಕನು ತಾನು ವಿವರಿಸುತ್ತಿರುವ ಘಟನೆಗಳ ಪ್ರತ್ಯಕ್ಷದರ್ಶಿಯಾಗಿರಬೇಕು ಅಥವ ಆ ಸಂಭವಗಳನ್ನು ನೇರವಾಗಿ ನೋಡಿದ್ದವರು ನೀಡಿದ್ದ ದಾಖಲೆಗಳನ್ನು ಬಳಸಬೇಕು ಎಂಭುದು ಅವನ ಅಭಿಪ್ರಾಯವಾಗಿದ್ದಿತು. ಅವನು ಆದ್ಯಂತವಾಗಿ ಪರೀಕ್ಷಿಸದೇ, ಸುಮ್ಮನೆ ವಾಚಿಕ ಸಂಪ್ರದಾಯಗಳನ್ನು ಸಂಗ್ರಹಿಸಿ ಬಳಸುವ ಪ್ರವೃತ್ತಿಯನ್ನು ಮೊಳಕೆಯಲ್ಲೇ ಚಿವುಟಿ ಹಾಕಿಬಿಡಬೇಕೆಂಬುದಾಗಿ ಸಲಹೆ ಮಾಡಿದನು. ಅವನ ಸತ್ಯಪ್ರಿಯತೆ ಎಷ್ಟು ಗಾಢವಾಗಿದ್ದಿತ್ತೆಂದರೆ ಅವನ ವಿವರಣೆಯಲ್ಲಿ ಶತ್ರುಗಳನ್ನು ಕುರಿತಂತೆ ಯಾವ ತರಹದ ಪೂರ್ವಾಗ್ರಹಪೀಡಿತ ವರ್ಣನೆಯೂ ಇಲ್ಲ. ಅದಕ್ಕೆ ಬದಲಾಗಿ ವಿವರ ಹಾಗೂ ಕ್ರಮದಲ್ಲಿ ಘಟನೆಗಳ ವಿವರಣೆ ಬಹು ಯಥಾರ್ಥವಾಗಿರುವುದನ್ನು ಕಾಣಬಹುದು. ಉದಾಹರಣೆಗೆ, ಅವನು ಎಲ್ಲೂ ತಾನೂ ಮುಂದಾಳಾಗಿ ನಡೆಸಿದ ದಾಳಿಯ ಬಗ್ಗೆ ಹಾಗೂ ತನ್ನ ಬಗ್ಗೆ ಉತ್ಪ್ರೇಕ್ಷಿಸಿ ಹೇಳಿಕೊಂಡಿಲ್ಲ, ಅಥವಾ ಉಂಟಾಗಿದ್ದ ಅಪಜಯಕ್ಕೆ ತಾನು ಕಾರಣನಾಗಿರಲಿಲ್ಲ ಎಂಬುದಾಗಿ ಎಲ್ಲೂ ಸಮರ್ಥಿಸಿಕೊಂಡಿಲ್ಲ. ಅವನು ವೈಚಾರಿಕವಾದ ಹಾಗೂ ಕ್ರಮಬದ್ಧವಾದ ಬಗೆಯಲ್ಲಿ ಪರಸ್ಪರ ಸಂಬಂಧಿಸಿರುವ ವಾಸ್ತವಾಂಶಗಳಾದ ಘಟನೆಗಳನ್ನು ಅಧ್ಯಯನ ಮಾಡುವ ಶಾಸ್ತ್ರವೇ ಇತಿಹಾಸ ಎಂಬ ಪ್ರಥಮ ಮೂಲಭೂತ ಸತ್ಯವನ್ನು ಎತ್ತಿತೋರಿದನು. ಈ ಮೂಲಭಾವವು ಆಧುನಿಕ ಕಾಲದಲ್ಲಿ ಇತಿಹಾಸದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಉಂಟು ಮಾಡಿತು. ಅದು ಐತಿಹಾಸಿಕ ಸಾಪೇಕ್ಷವಾದಕ್ಕೆ ಮೂಲವಾಯಿತು ಮತ್ತು ಚರಿತ್ರೆಯಲ್ಲಿ ವಿಷಯಗಳು ಸಾಪೇಕ್ಷವಾಗಿರುತ್ತವೆ, ವಾಸ್ತುವಾಂಶಗಳಿಗಿರುವ ಸಂಬಂಧ ಜೈವಿಕವಾಗಿರುತ್ತವೆ. ಅಂದರೆ ಸಂಘಟಿತವಾಗಿರುತ್ತವೆ. ಆದ್ದರಿಂದ ಒಂದು ಬಗೆಯ ವಾಸ್ತವಾಂಶಗಳಿಂದ ಇನ್ನೊಂದನ್ನು ಅನುಮಾನಿಸಬಹುದು ಎಂಬ ಸತ್ಯವನ್ನು ಸ್ಪಷ್ಟಪಡಿಸಿತು. ಅದರ ಆಧಾರದ ಮೇಲೆಯೇ ಮುಂದೆ ಅಗಸ್ಟ್ ಕಾಂಪ್ಟ್‌ನು ದೃಷ್ಟ (ಪ್ರತ್ಯಕ್ಷ) ಪ್ರಮಾಣವಾದ ಎಂಬ ತನ್ನ ಸುಪ್ರಸಿದ್ಧ ಸಿದ್ಧಾಂತವನ್ನು ಬೆಳೆಸಿದನು.

ಅವನು ತಾನು ನೀಡಿರುವ ಹೇಳಿಕೆ ಹಾಗೂ ನಿರ್ಣಯಗಳಿಗೆ ತಾನೇ ಪೂರ್ಣ ಜವಾಬ್ದಾರನೆಂಬುದಾಗಿ ಸೂಚಿಸಿದ್ದಾನೆ. ಆದ್ದರಿಂದ ಅವನು ನಮ್ಮ ಮುಂದೆ ಇಟ್ಟಿರುವುದು ಪೂರ್ಣವಾಗಿರುವ ಕೃತಿಯ ಕಟ್ಟಡವನ್ನೇ ಹೊರತು, ಅದರ ಯೋಜನೆ, ಆಧಾರಕಟ್ಟು ಇತ್ಯಾದಿ ಮೂಲಭೂತ ವಿಷಯಗಳನ್ನಲ್ಲ. ಆದರೂ ಅವನ ವಿವರಣೆ ಸಂಪೂರ್ಣವಾಗಿ ಯಥಾರ್ಥವಾದುದು ಎಂಬುದನ್ನು ಸಮಕಾಲೀನ ವಿವರಗಳು, ಶಿಲೆಗಳ ಮೇಲೆ ದಾಖಲಾದ ಪ್ರಮಾಣಗಳು, ಅವನ ಬರಹವನ್ನು ಪರಿಷ್ಕರಿಸುವುದಕ್ಕೆ ಹೋಗದೆ, ಅವನು ನಿಲ್ಲಿಸಿದ ಕಾಲದಿಂದ ಮುಂದಕ್ಕೆ ಇತಿಹಾಸ ರಚನೆಯನ್ನು ಮುಂದುವರಿಸಿದ ಕ್ರೇಟಿಫಸ್, ಜೆನೋಫನ್ ಮತ್ತು ಥಿಯೇಪಾಂಪಸ್ ಎಂಬ ಮೂವರು ಚರಿತ್ರಲೇಖಕರು ನೀಡಿರುವ ಮೂಕಸಾಕ್ಷ್ಯ ಮತ್ತು ಅವನು ನೀಡಿದ ಯುದ್ಧದ ವರ್ಣನೆಯು ಎಷ್ಟು ನಂಬಲರ್ಹವಾದುದು ಎಂಬುದನ್ನು ರುಜುವಾತುಪಡಿಸಿದ ಸಿರಾಕ್ಯೂಸಿನ ಚರಿತ್ರಲೇಖಕ ಫಿಲಿಸ್ಟಸನ ಹರ್ಷನಾಟಕ ಮುಂತಾದವು ಸಮರ್ಥಿಸಿವೆ.

ಇತಿಹಾಸ ರಚನಾ ತಂತ್ರರಂಗದಲ್ಲಿ ಥೂಸಿಡ್ಡಿಸೀಟನ ಸಾಧನೆ ಇನ್ನೊಂದು ಬೆಲೆಬಾಳುವ ಕೊಡುಗೆಯಾಗಿದೆ. ವಾಸ್ತವಿಕ ಮೂಲಾಧಾರಗಳು ಸಿಗದೇ ಇರುವಾಗ ಅವನು ಸಾರ್ವತ್ರಿಕ ವಿಚಾರಕ್ರಮವನ್ನು ಅಳವಡಿಸಿಕೊಂಡು, ಒಂದು ಘಟನೆಯು ಸಂಭವಿಸುವುದಕ್ಕೆ ಬಹುಮಟ್ಟಿಗೆ ಕಾರಣವಾದ ಅಂಶ ಅಥವಾ ಅಂಶಗಳನ್ನು ತಿಳಿಯಲು ತಿಳಿದಿರುವ ವಿಷಯದಿಂದ ವಾದವನ್ನು ಆರಂಭಿಸಿ, ಹಿಂದಡಿ ಇಟ್ಟು ಅಜ್ಞಾತವಾದುದನ್ನು ಪತ್ತೆಹಚ್ಚಿ ಅರಿಯಲು ಪ್ರಯತ್ನಿಸಿದನು. ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಅವನು ವಿಷಯ ಸೌಧದ ಕತ್ತಲಾದ ಮೂಲೆಗಳ ಮೇಲೆ ಬೆಳಕನ್ನು ಬೀರಲು ಮತ್ತು ಬಿಟ್ಟಿರುವ ಸ್ಥಳಗಳನ್ನು ಭರ್ತಿಮಾಡಲು ಸಹಾಯಕವಾದ ಆಧುನಿಕ ರಚನಾತ್ಮಕ ವಿಚಾರಕ್ರಮವನ್ನು ಬೆಳೆಸಿ ಬಳಸಿದವನು.

ಸಂಕ್ಷೇಪದಲ್ಲಿ, ಥೂಸಿಡ್ಡಿಡೀಸನು ಇತಿಹಾಸ ರಚನಾ ಕೌಶಲದಲ್ಲಿ ಅತ್ಯುನ್ನತ ಶಿಖರವನ್ನು ಮುಟ್ಟಿದನು. ವಿಮರ್ಶಾತ್ಮಕ ವಿಶ್ಲೇಷಣೆ ಮತ್ತು ವಿಷಯಗಳ ಸುಸ್ಪಷ್ಟ ನಿರೂಪಣೆಯಲ್ಲಿ ಅವನು ಹೆರೊಡೋಟಸನನ್ನೇ ಮೀರಿಸಿದ್ದನು ಎಂಬುದಾಗಿ ಹೇಳಬಹುದು. ಹೆರೊಡೋಟಸನು ಕಥೆ ಹೇಳುವುದರಲ್ಲಿ ನಿಸ್ಸೀಮ ಮತ್ತು ಕಲ್ಪನಾ ಕೌಶಲವನ್ನು ಬಳಸುವುದರಲ್ಲಿ ಅತ್ಯಾಸಕ್ತ. ಅವನು ಆರಿಸಿಕೊಂಡ ವಿಷಯದ ವ್ಯಾಪ್ತಿ ಬಹಳ ವಿಶಾಲ. ಥೂಸಿಡ್ಡಿಡೀಸ್ ಅತಿ ಜಾಗರೂಕತೆಯಿಂದ ಮೂಲಾಧಾರಗಳ ಸತ್ಯಾಸತ್ಯತೆಯ ಪರಿಶೀಲನೆ, ವಸ್ತುನಿಷ್ಠ ವಿಶ್ಲೇಷಣೆ ಮತ್ತು ಯಥಾರ್ಥ ನಿರೂಪಣೆ ಮಾಡುವುದರಲ್ಲಿ ಪ್ರವೀಣ. ಅವನು ಹೆರೊಡೋಟಸನಂತೆ ಗತಕಾಲ ಹಾಗೂ ಪರರಾಷ್ಟ್ರಗಳ ಹೆಬ್ಬಾಗಿಲುಗಳನ್ನು ದಾಟಿ ಹೋಗಿ ವ್ಯಾಪಕವಾಗಿ ಐತಿಹಾಸಿಕ ಸಂಶೋಧನೆಯನ್ನು ಕೈಗೊಳ್ಳಲು ಬಯಸಿದವನಲ್ಲ. ಹೆರೊಡೋಟಸನ ಜಗತ್ತು ಮುಕ್ತಸಮಾಜವಾದರೆ, ಥೂಸಿಡ್ಡಿಡೀಸನದು ಮುಚ್ಚಿದ ಮಾರುಕಟ್ಟೆ. ಹೆರೊಡೋಟಸ್ 'ಏನು' ಎಂಬ ಪ್ರಶ್ನೆಯನ್ನು ಉತ್ತರಿಸುವುದರಲ್ಲಿ ಮಾತ್ರ ಆಸಕ್ತನಾಗಿದ್ದರೆ, ಥೂಸಿಡ್ಡಿಡೀಸ್ 'ಹೇಗೆ' ಮತ್ತು 'ಏಕೆ' ಎಂಬ ಪ್ರಶ್ನೆಗಳಿಗೂ ಸಮರ್ಪಕ ಉತ್ತರಗಳನ್ನು ಕಂಡುಹಿಡಿಯುವುದರಲ್ಲಿ ಅತ್ಯಾಸಕ್ತಿಯನ್ನು ತೋರಿದನು. ಅವನು ಹೆರೊಡೋಟಸನಿಗಿಂತ ಹೆಚ್ಚು ಸ್ಪಷ್ಟವಾಗಿ ಯುದ್ಧದ ನಿರೂಪಣೆಯನ್ನು ನೀಡಲು ಶಕ್ತನಾದರೂ, ಅವನಂತೆ ಯುದ್ಧದ ಮೂಲವನ್ನು ಬಹಳ ಹಿಂದಿನಿಂದ ಗುರುತಿಸುವುದರಲ್ಲಿ ಅಷ್ಟೇನೂ ಆಸಕ್ತಿ ವಹಿಸಲಿಲ್ಲ; ಯುದ್ಧದಲ್ಲಿ ಮುಖ್ಯವಾಗಿದ್ದ ಸಂಪ್ರದಾಯ, ಹಿತಾರ್ಥ ಇತ್ಯಾದಿಗಳಿಗಿಂತ ಹೆಚ್ಚಾಗಿ ಕಾದಾಡುತ್ತಿದ್ದವರ ಮನೋವೃತ್ತಿಯನ್ನು ಅರಿಯುವುದಕ್ಕೆ ಯತ್ನಿಸಿದನು.

ಅವನು ಬರೆಯುವಾಗ ಪ್ರಕೃತ ವಿಷಯವನ್ನು ಬಿಟ್ಟು ಹೋಗುತ್ತಿರಲಿಲ್ಲ. ಐತಿಹಾಸಿಕ ವಿಧಾನಗಳನ್ನು ಬಳಸುವ ವಿಚಾರದಲ್ಲಿ ಅವರಿಬ್ಬರಿಗೆ ಧ್ರುವಗಳ ಅಂತರವಿರುವಂತೆ ಕಂಡುಬರುತ್ತದೆ. ಹೆರೊಡೋಟಸನ ಶೈಲಿಯು ಹೆಚ್ಚು ವರ್ಣನಾತ್ಮಕವೂ ಹಾಗೂ ಚಿತ್ತಾಕರ್ಷಕವೂ ಆಗಿದ್ದರೆ, ಥೂಸಿಡ್ಡಿಡೀಸನದು ಸಂಕ್ಷಿಪ್ತವಾದುದು, ಸ್ಫುಟವಾದುದು ಹಾಗೂ ವೀರ್ಯವತ್ತಾದುದು. ಹೆರೊಡೋಟಸನ ನಿರೂಪಣಾ ಸೊಗಸು ಹಾಗೂ ಮಾತುಗಳ ಸೊಬಗು ದೇದೀಪ್ಯಮಾನವಾದುದಾದರೆ,

## 11.2.3 ಜಿನೋಫನ್ ಹಾಗೂ ಪಾಲಿಬಿಯಾಸ್

ಜಿನೋಫನ್ ಹಾಗೂ ಪಾಲಿಬಿಯಾಸ್ ಇತರ ಮುಖ್ಯ ಗ್ರೀಕ್ ಚರಿತ್ರಲೇಖಕರು. ಅವರಿಬ್ಬರೂ ಹೆರೊಡೋಟಸ್ ಹಾಗೂ ಥೂಸಿಡ್ಡಿಡೀಸನ ಎತ್ತರಕ್ಕೆ ಏರಿದವರಲ್ಲ. ಜೆನೋಫನ್ ಬುದ್ಧಿಶಾಲಿಯೂ, ನಿಷ್ಠಾವಂತನೂ, ಸ್ಪಷ್ಟವಾಗಿ ನಿರೂಪಣೆ ನೀಡುವ ಸಾಮರ್ಥ್ಯವನ್ನು ಹಾಗೂ ಬಹುಮುಖ ಪ್ರತಿಭೆಯನ್ನು ಹೊಂದಿದವನೂ ಆಗಿದ್ದರೂ, ಅವರಿಗೆ ಸರಿಸಮವೆನಿಸಲಿಲ್ಲ. ಏಳು ಪ್ರಧಾನ ಭಾಗಗಳಿಂದ ಕೂಡಿದ್ದ **'ಹೆಲೆನಿಕಾ'** ಎಂಬ ತನ್ನ ಇತಿಹಾಸ ಗ್ರಂಥದ ಮೂಲಕ ಅವನು ಥೂಸಿಡ್ಡಿಡೀಸನ ಮಹಾಕೃತಿಯನ್ನು ಮುಂದುವರಿಸಿದನು. ಆದರೆ ಅದರ ಶೈಲಿ ಬಹು ಬಿಗಿಯಾಗಿದ್ದಿತು. ಯಥಾರ್ಥತೆ ಹಾಗೂ ವಸ್ತುನಿಷ್ಠತೆಯ ವಿಷಯದಲ್ಲಿ ಅದು ಅಷ್ಟೇನು ಸಮರ್ಪಕವಾಗಿರಲಿಲ್ಲ. ಪಾಲಿಬಿಯಾಸ್ ಸ್ವಲ್ಪ ಉತ್ತಮ ಮಟ್ಟದ ಇತಿಹಾಸ ಲೇಖಕನಾಗಿದ್ದನು. ಅವನ ಇತಿಹಾಸದಲ್ಲಿ ಮೂಲಾಧಾರವಾಗಿ ಸರ್ಕಾರಿ ದಾಖಲೆಗಳ ಬಳಕೆ, ಉಲ್ಲೇಖಿಸಿರುವ ಪ್ರದೇಶಗಳ ಲಕ್ಷಣಗಳ ವರ್ಣನೆ ಮತ್ತು ಬೋಧಕವಲ್ಲದಿದ್ದರೂ ಸ್ವಾರಸ್ಯಕರವಾದ ಕ್ರಮದಲ್ಲಿ ಸಮಕಾಲೀನ ಜಗತ್ತಿನ ರಾಜಕೀಯ ವ್ಯವಹಾರಗಳ ಆದ್ಯಂತ ಚರ್ಚೆ ಇತ್ಯಾದಿ ಲಕ್ಷಣಗಳು ಮುಖ್ಯವಾಗಿದ್ದುವು. ಅವನು ಘಟನೆಗಳ ಕಾರಣಗಳನ್ನು ತಿಳಿಸಿರುವುದರಿಂದ ಅವನ ಕಥನ ಪ್ರಯೋಜನಕರವಾಗಿದೆ. ಅವನ ದೃಷ್ಟಿಯಲ್ಲಿ ಮೂಲಾಧಾರಗಳ ವಿಶ್ವಾಸಾರ್ಹತೆ ಅತ್ಯಂತ ಮುಖ್ಯವಾದ ಅಂಶ, ಕೆಲವು ಗ್ರೀಕ್ ಇತಿಹಾಸ ಲೇಖಕರು ಜೀವನಚರಿತ್ರೆಯನ್ನು ಇತಿಹಾಸದ ಮಾಧ್ಯಮವಾಗಿ ಬೆಳೆಸಿದರು ಬಳಸಿದರು. ಉದಾಹರಣೆಗೆ, ಪ್ಲೂಟಾರ್ಕನ ಪ್ಯಾರಲೆಲ್ ಲೈವ್ಸ್ ಇಂದೂ ಸಹ ಐತಿಹಾಸಿಕ ಜೀವನಚರಿತ್ರೆಯನ್ನು ಕುರಿತು ಅತ್ಯುತ್ತಮವಾದ ಗ್ರಂಥವಾಗಿದೆ. ಸಂಕ್ಷೇಪದಲ್ಲಿ, ನಿಜವಾದ ಅರ್ಥದಲ್ಲಿ ಇತಿಹಾಸ ಲೇಖಕನ ಕಲೆಯ ಆದಿಪ್ರವರ್ತಕರಾದ ಗ್ರೀಕರಿಗೆ ಜಗತ್ತು ಋಣಬದ್ಧವಾಗಿದೆ. ಗ್ರೀಸಿನ ಮಹಾ ಪ್ರತಿಭಾವಂತ ಹಾಗೂ ಪ್ರಭಾವಶಾಲಿ ಇತಿಹಾಸ ಲೇಖಕರಾಗಿದ್ದ ಹೆರೊಡೋಟಸ್ ಹಾಗೂ ಥೂಸಿಡ್ಡಿಡೀಸ್ ಅಮರರಾಗಿದ್ದಾರೆ. ಇಂದೂ ಸಹ ಸಮಗ್ರ ಜಗತ್ತು ಅವರನ್ನು ಅತ್ಯಂತ ಪ್ರೀತ್ಯಾದರಗಳಿಂದ ಸ್ತುತಿಸುತ್ತಿದೆ.

## 11.2.4 ಉಪಸಂಹಾರ

ಇತಿಹಾಸ ಲೇಖನ ಕಲೆ ಗ್ರೀಕರಿಂದ ಆದ ಬೆಳವಣಿಗೆ ಎನ್ನುವುದು ಸರ್ವವಿದಿತವಾದದ್ದು. ಈ ಕಲೆ ಕ್ರಿ.ಪೂ.5ನೇ ಶತಮಾನದಲ್ಲಿ ಹೆರೋಡೋಟಸ್‌ನಿಂದ ಮೊದಲಾಯಿತು. ಇವನಿಗಿಂತ ಪೂರ್ವದಲ್ಲಿ ಭಾಷಣ ಲೇಖಕರು ಸಮಕಾಲೀನ ಘಟನೆಗಳನ್ನು ದಾಖಲಿಸುತ್ತಿದ್ದರು. ನಂತರ ಪ್ರಾರಂಭದ ಕಥನಕಾರರಾದ

ಹೋಮರ್, ಡೆಯೋನಿಷಿಯಸ್, ಚರಾನ್ ಎಂಬುವವರನ್ನು ಕಾಣುತ್ತೇವೆ. ಆದರೆ ಹೆರೋಡೋಟಸ್ ಅತ್ಯಂತ ಉತ್ತಮ ಇತಿಹಾಸಕಾರನೆಂಬುದರಲ್ಲಿ ಸಂದೇಹವಿಲ್ಲ. ಅಲ್ಲದೆ, ಈತನನ್ನು ಇತಿಹಾಸದ ಜನಕನೆಂದೂ ಕರೆಯಲಾಗಿದೆ. ಈತನ ಕೃತಿ 'ಹಿಸ್ಟರಿ' ಕೇಂದ್ರ ವಿಷಯ ಗ್ರೀಕ್ ಮತ್ತು ಪರ್ಶಿಯನ್ನರ ನಡುವೆ ನಡೆದ ಯುದ್ಧ. ಈ ಕಾಲದ ಮತ್ತೊಬ್ಬ ಪ್ರಸಿದ್ಧ ಇತಿಹಾಸಕಾರ ಥೂಸಿಡೈಡಿಸ್. ಈತನೂ ಗ್ರೀಕ್ ದೇಶದವನಾಗಿದ್ದು, ಪೆಲೊಪೋನೀಷಿಯನ್ ಯುದ್ಧದ ಇತಿಹಾಸ ಎಂಬುದು ಈತನ ಪ್ರಸಿದ್ಧ ಕೃತಿಯಾಗಿದೆ. ಥೂಸಿಡೈಡಿಸ್‌ನು ನಿಖರತೆ, ಸ್ಪಷ್ಟತೆ, ವಸ್ತು ನಿಷ್ಪತೆಗಳಿಗೆ ಹೆಸರಾಗಿದ್ದಾನೆ. ಗ್ರೀಸ್ ದೇಶವು ಸೃಷ್ಟಿಸಿದ ಇತಿಹಾಸಕಾರರಲ್ಲಿ ಥೂಸಿಡೈಡಿಸ್‌ನು ಧ್ರುವತಾರೆಯಂತೆ ಪ್ರಜ್ವಲಿಸಿದ್ದಾನೆ. ಇಂತಹ ಶ್ರೇಷ್ಠ ಇತಿಹಾಸಕಾರರನ್ನಲ್ಲದೆ, ಗ್ರೀಸ್ ಜಿನೋಫನ್ ಮತ್ತು ಪಾಲಿಬಿಯಸ್ ನಂತಹ ಇತಿಹಾಸಕಾರರನ್ನು ಸೃಷ್ಟಿಸಿತು. ಆದರೆ ಇವರು ಹೆರೋಡೊಟಸ್ ಮತ್ತು ಥೂಸಿಡೈಡಸ್‌ರ ಎತ್ತರಕ್ಕೆ ಏರಲಾಗಲಿಲ್ಲ. ಇತಿಹಾಸ ಲೇಖನ ಕಲೆಯ ಮೂಲ ಪುರುಷರು ಗ್ರೀಕರು ಎಂಬುದನ್ನು ಪ್ರಪಂಚ ಮರೆಯುವಂತಿಲ್ಲ. ಈ ದಿಶೆಯಲ್ಲಿ, ಹೆರೋಡೊಟಸ್ ಮತ್ತು ಥೂಸಿಡೈಡಿಸ್‌ನಂತಹ ಮಹಾ ಇತಿಹಾಸಕಾರರನ್ನು ಜಗತ್ತಿಗೆ ನೀಡಿದ ಗ್ರೀಸ್ ದೇಶಕ್ಕೆ ಇತಿಹಾಸಕಾರರು ಚಿರಋಣಿಗಳಾಗಿರಬೇಕಾಗಿದೆ ಹಾಗೂ ಗ್ರೀಸ್ ಅಪೂರ್ವ ಗೌರವನ್ನು ಪಡೆದಿದೆ.

## 11.3 ರೋಮಿನ ಇತಿಹಾಸ ಲೇಖನಕಲೆ

ದ್ವಿತೀಯ ಪ್ಯೂನಿಕ್ ಸಮರ ಕೊನೆಗಾಣುವವರೆಗೆ ರೋಮ್ ಇತಿಹಾಸ ರಚನೆಗೆ ಗಮನವನ್ನು ಕೊಡಲಿಲ್ಲ. ಅದು ಇತರ ದೇಶಗಳ ಮೇಲೆ ದಾಳಿ ಮಾಡಿ ಚಕ್ರಾಧಿಪತ್ಯವನ್ನು ಕಟ್ಟುವ ಹಾಗೂ ರಾಜಕೀಯ ಸಂಸ್ಥೆಗಳನ್ನು ಸೃಷ್ಟಿಸುವ ಕಾರ್ಯದಲ್ಲಿ ನಿರತವಾಗಿದ್ದಿತು. ಈ ಕಾರಣದಿಂದ ಸುಮಾರು ಐನೂರು ವರ್ಷಗಳವರೆಗೆ ರೋಮನ್ ಮಹಾಸಾಮ್ರಾಜ್ಯದಲ್ಲಿ ಒಬ್ಬ ಗಮನಾರ್ಹನಾಗಿದ್ದ ಚರಿತ್ರಲೇಖಕ–ನಾದರೂ ಇರಲಿಲ್ಲ. ರಾಜಕೀಯ ರಂಗವನ್ನು ಬಿಟ್ಟರೆ, ಬೌದ್ಧಿಕ ಕ್ಷೇತ್ರ ಹಾಗೂ ಜೀವನದ ಇತರ ವಲಯಗಳಿಗೆ ಈ ಕಾಲದಲ್ಲಿ ಅದು ನೀಡಿದ ಕೊಡುಗೆ ಅತ್ಯಲ್ಪವಾಗಿದ್ದಿತು. ಅನಿರೀಕ್ಷಿತವಾಗಿ ರೋಮ್ ಜನರಲ್ಲಿ ಇತಿಹಾಸ ಪ್ರಜ್ಞೆ ಮೂಡಿಬಂದಿತು ಮತ್ತು ತಮ್ಮ ಇತಿಹಾಸವನ್ನು ರಚಿಸಬೇಕೆಂಬ ಅತ್ಯುತ್ಸಾಹ ಉಂಟಾಯಿತು. ಆ ಕೂಡಲೇ ಅವರು ಗ್ರೀಕ್ ಭಾಷೆಯನ್ನು ಸೇರಿದಂತೆ ಗ್ರೀಕರು ಬೆಳೆಸಿದ ಇತಿಹಾಸ ರಚನಾ ತಂತ್ರಗಳನ್ನು ಪರಿಪೂರ್ಣವಾಗಿ ಅನುಕರಿಸಲಾರಂಭಿಸಿದರು: ಒಟ್ಟಿನಲ್ಲಿ, ರೋಮಿಗೆ ಸಂಬಂಧಿಸಿದ ಸಂಭವ ಹಾಗೂ ಸಾಧನೆಗಳನ್ನು ಗ್ರೀಕ್ ಚೌಕಟ್ಟಿನಲ್ಲಿಟ್ಟು ವಿವರಿಸಿದರು.

### 11.3.1 ಸೆನ್ಸರ್ ಕ್ಯಾಟೋ

ಫ್ಯಾಬಿಯಸ್ ಪಿಕ್ಟರ್ ಮೊಟ್ಟಮೊದಲ ರೋಮನ್ ಚರಿತ್ರಲೇಖಕನಾಗಿದ್ದರೂ, ರೋಮ್‌ನ ಚರಿತ್ರಲೇಖಕನ ಕಲೆಯ ಸ್ವರೂಪ ಹಾಗೂ ರಂಗು ಬದಲಾದುದು ಹಿರಿಯ ಅಥವಾ ಸೆನ್ಸರ್ ಕ್ಯಾಟೋವಿನ (ಕ್ರಿ.ಪೂ.234–149) ಸಮಯದಿಂದ. ಅವನ ಕಾಲದಿಂದ ವಿಷಯ ವಿಧಾನ, ವಿಷಯದ ನಿರೂಪಣೆ, ಶೈಲಿ, ಇತ್ಯಾದಿಗಳು ವಿಭಿನ್ನವಾಗಿದ್ದರಿಂದ ಅವನನ್ನು ರೋಮನ್ ಇತಿಹಾಸ ಲೇಖನ ಕಲೆಯ ಜನಕ ಎಂಬುದಾಗಿ ಕರೆಯಬಹುದು. ಅವನು ಒಂದು ನೂತನ ವಿಚಾರ ಪಂಥವನ್ನು ಆರಂಭಿಸಿದನಲ್ಲದೆ, ಲ್ಯಾಟಿನ್

ಇತಿಹಾಸಲೇಖನ ಕಲೆಯನ್ನು ಪರಿಪೂರ್ಣವಾಗಿ ಪುನಃ ಪರಿಷ್ಕರಿಸಿದನು. ಅತ್ಯಂತ ಸಾಮಾನ್ಯ ರೈತ ಕುಟುಂಬಕ್ಕೆ ಸೇರಿದ್ದ ಅವನು ಸ್ವಪ್ರತಿಭೆ ಹಾಗೂ ಪರಿಶ್ರಮಗಳ ಫಲವಾಗಿ ಕೋಶಾಧ್ಯಕ್ಷ, ಸಾರ್ವಜನಿಕ ಕಟ್ಟಡ ಹಾಗೂ ನಗರ ರಕ್ಷಕರ ಮೇಲ್ವಿಚಾರಕ ನ್ಯಾಯಾಧಿಕಾರಿ (ಈಡ್ಕೈಲ್), ಸೇನಾ ನಾಯಕತ್ವವನ್ನು ಹೊಂದಿದ್ದ ಪ್ರಧಾನ ದಂಡಾಧಿಕಾರಿ (ಪ್ರೀಟರ್), ಪರಮಾಧಿಕಾರಿಯಾಗಿದ್ದ ದಂಡಾಧಿಕಾರಿ (ಕಾನ್ಸಲ್), ಪ್ರಾಂತಾಧಿಪತಿ (ಪ್ರೋಕಾನ್ಸಲ್), ಜನಗಣತಿ ಹಾಗೂ ಜನರ ರೀತಿನೀತಿಗಳ ಮೇಲ್ವಿಚಾರಕ ಅಧಿಕಾರಿ (ಸೆನ್ಸರ್) ಮುಂತಾದ ದೊಡ್ಡ ದೊಡ್ಡ ಪದವಿಗಳನ್ನು ಅಲಂಕರಿಸಿದನು. ಲೇಖನಿಗೆ ವಿಶ್ರಾಂತಿ ಕೊಡದೆ ಬಳಸಿ ಬರೆಯುತ್ತಿದ್ದ ಅವನು ಹೆರೊಡೋಟಸನಂತೆ ಪ್ರಥಮ ಲ್ಯಾಟಿನ್ ಗದ್ಯ ಲೇಖಕನಾಗಿದ್ದನು. ಕೃಷಿಯನ್ನು ಕುರಿತ ಅವನ ದಿ ಅಗ್ರಿಕಲ್ಚರ್ ಎಂಬ ಕೃತಿಯು ರೈತನೊಬ್ಬ ರಚಿಸಿದ ಉತ್ತಮ ಪ್ರಯೋಗ ಪುಸ್ತಕವಾಗಿದ್ದಿತು ಮತ್ತು ಪ್ರಾಚೀನ ಜಗತ್ತಿನ ಆರ್ಥಿಕ ಇತಿಹಾಸವನ್ನು ಅರಿಯುವುದಕ್ಕೆ ಉಪಯುಕ್ತವಾಗಿದ್ದಿತು. ಅವನು ಲ್ಯಾಟಿನ್ ಭಾಷೆಯಲ್ಲಿ ಆರಿಜಿನಿಲ್ ಎಂಬ ಪ್ರಪ್ರಥಮ ಗದ್ಯ ಚರಿತ್ರೆಯನ್ನು ರಚಿಸಿದನು. ಅದು ಹಾಗೂ ಅವನ ಭಾಷಣಗಳು ಹಾಳಾಗಿಹೋಗಿವೆ. ಇತರ ವಿದ್ವಾಂಸರ ಕೃತಿಗಳಲ್ಲಿ ಅವುಗಳ ಉದ್ಧರಣಗಳನ್ನು ಮಾತ್ರ ಕಾಣಬಹುದು. ಅವನು ತನ್ನ ಬರಹಗಳಲ್ಲಿ ಎಲ್ಲೂ ಯಾವ ವ್ಯಕ್ತಿಯ ಹೆಸರನ್ನೂ, ಯಾವ ಪ್ರಸಿದ್ಧ ಪಾತ್ರಧಾರಿಯ ನಿಜನಾಮವನ್ನೂ ಉಲ್ಲೇಖಿಸಿಲ್ಲ. ಇದು ಅವನ ಬರವಣಿಗೆಯ ವಿಶಿಷ್ಟ ಲಕ್ಷಣ. ಅವನು ಅಂಕಿತನಾಮಗಳಿಗೆ ಬದಲಾಗಿ ವ್ಯಕ್ತಿಗಳ ಹುದ್ದೆಗಳ ಹೆಸರುಗಳನ್ನು ಬಳಸುತ್ತಿದ್ದನು.ಹ್ಯಾನಿಬಾಲ್ ರೋಮ್‌ನ ವಿರುದ್ಧ ಸತತವಾಗಿ ಹೋರಾಡಿದನು ಎಂಬುದಾಗಿ ಬರೆಯುವುದಕ್ಕೆ ಬದಲಾಗಿ ಕಾರ್ಥೆಜಿನ ಸೇನಾಧಿಪತಿಯು ರೋಮ್‌ನ ವಿರುದ್ಧ ನಿರಂತರವಾಗಿ ಯುದ್ಧವನ್ನು ನಡೆಸಿದನು ಎಂಬುದಾಗಿ ಹೇಳಿದ್ದಾನೆ. ಅದೇ ರೀತಿ ರೋಮನ್ ಸೇನೆಯ ಮುಖ್ಯಾಧಿಕಾರಿಯನ್ನು ಹೆಸರಿಸದೆ, ರೋಮನ್ ಸೇನಾಧಿಪತಿ ಅಥವಾ ಇಂಪರೇಟರ್ ಆ ಹೋರಾಟದಲ್ಲಿ ಜಯಗಳಿಸಿದನು ಎಂಬುದಾಗಿ ಸೂಚಿಸಿದ್ದಾನೆ. ಕಟ್ಟುನಿಟ್ಟಾದ ಶಿಸ್ತಿನಿಂದ ಕೂಡಿದ್ದ ಕೆಚ್ಚೆದೆಯ ಅಸೀಮ ಸಾಹಸಿಗಳಾಗಿದ್ದ ರೋಮ್‌ನ ಸಾಧಾರಣ ಸೈನಿಕರು ವೀರಾವೇಶದಿಂದ ಕಾದಾಡಿದ ರೀತಿ, ಚೆಲ್ಲಿದ ರಕ್ತ ಹಾಗೂ ತೆತ್ತ ಅಮೂಲ್ಯ ಪ್ರಾಣ ಈ ವಿಜಯಕ್ಕೆ ಕಾರಣವಾಗಿರುವಾಗ, ನಿಜವಾದ ಕೀರ್ತಿಗೆ ಅವರೇ ಅರ್ಹರು, ಆದ್ದರಿಂದ ಕೇವಲ ಒಬ್ಬ ಸೇನಾಧಿಕಾರಿಗೆ ಏಕೆ ಆ ಗೌರವವನ್ನು ನೀಡಬೇಕು ಎಂಬ ಪ್ರಜಾಸತ್ತಾತ್ಮಕ ಅಭಿಪ್ರಾಯವನ್ನು ಬೆಳೆಸಿಕೊಂಡಿದ್ದರಿಂದ, ಅವನು ಈ ತರಹದ ಬರವಣಿಗೆಯ ಕ್ರಮವನ್ನು ಅಳವಡಿಸಿಕೊಂಡನು. ಸಾಮಾನ್ಯ ಸೈನಿಕರ ಕಾರಣ ಜಯ ಲಭ್ಯವಾಗಿರುವಾಗ, ಕೇವಲ ಒಬ್ಬ ನಿರ್ದಿಷ್ಟ ಸೇನಾಧಿಕಾರಿಯ ಹೆಸರನ್ನು ಉಲ್ಲೇಖಿಸಿ ಅವನೇ ಆ ವಿಜಯಕ್ಕೆ ಕಾರಣ ಎಂಬುದಾಗಿ ಹೇಳುವುದು ಅತ್ಯಂತ ಅನ್ಯಾಯಕರವಾದುದು ಎಂಬುದು ಅವನ ವಿಚಾರವಾಗಿದ್ದಿತು. ಸಂಕ್ಷೇಪದಲ್ಲಿ, ಕ್ಯಾಟೋ ರೋಮಿನ ಪ್ರಥಮ ಮಹಾಶ್ರೇಷ್ಠ ಚರಿತ್ರಲೇಖಕನಾಗಿದ್ದನು.

### 11.3.2 ಲಿವಿ (ಟಿಟಸ್ ಲಿವಿಯಸ್) – (ಕ್ರಿ.ಪೂ.59–ಕ್ರಿ.ಶ.17)

ಕ್ರಿ.ಪೂ.59ರಲ್ಲಿ ಪೊಡುವ ಎಂಬಲ್ಲಿ ಜನ್ಮಿಸಿದ ಲಿವಿ ಕ್ರಿ.ಶ.17ರಲ್ಲಿ ಮೃತ್ಯುವಶವಾದನಾದ್ದರಿಂದ ರೋಮನ್ ಪ್ರಜಾಪ್ರತಿನಿಧಿ ಪ್ರಭುತ್ವದ ಪತನ, ರೋಮನ್ ಸಾಮ್ರಾಜ್ಯದ ಉದಯ ಮತ್ತು ಅಗಸ್ಟಸನ ವೈಭವಯುತ ಆಳ್ವಿಕೆಯ ಮಧ್ಯಭಾಗವನ್ನು ಪ್ರತ್ಯಕ್ಷವಾಗಿ ವೀಕ್ಷಿಸಲು ಅವನಿಗೆ ಸಾಧ್ಯವಾಯಿತು. ಅವನು ತನ್ನ

ಜೀವಿತವನ್ನೆಲ್ಲಾ ರೋಮ್‌ನಲ್ಲೇ ಕಳೆದನು. ಯಾವ ಸಾರ್ವಜನಿಕ ಇಲಾಖೆಯಲ್ಲೂ ಯಾವ ತೆರದ ಉದ್ಯೋಗವನ್ನು ಮಾಡಲು ಬಯಸದ ಅವನು ತನ್ನ ಸಮಯವನ್ನೆಲ್ಲಾ ವ್ಯಾಸಂಗಕ್ಕಾಗಿಯೇ ವಿನಿಯೋಗಿಸಿದನು. ವರ್ಜಿಲ್ ಹಾಗೂ ಹೊರೇಸ್‌ರವರಂತೆ ಅವನೂ ಸಹ ಸುಪ್ರಸಿದ್ಧ ಸಾಮ್ರಾಟ್ ಅಗಸ್ಟಸ್‌ನ ಮಿತ್ರನಾಗಿದ್ದನು. ಅವನ ದಾರ್ಶಜನಿಕ ಹಾಗೂ ಅಲಂಕಾರ ಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳು ಇಲ್ಲವಾಗಿವೆ. ಅವನು ದಿ ಹಿಸ್ಟೊರಿ ಆವ್ ರೋಮ್ ಎಂಬ ತನ್ನ ಪ್ರಮುಖ ಗ್ರಂಥವನ್ನು 142 ಸಂಪುಟಗಳಲ್ಲಿ ರಚಿಸಿದನು. ಅದರಲ್ಲಿ ನಗರದ ಮೂಲದಿಂದ ಹಿಡಿದು ಕ್ರಿ.ಪೂ.9ರಲ್ಲಿ ಸಂಭವಿಸಿದ ಡ್ರಾಸಸ್‌ನ ಮರಣದವರೆಗೆ ಸಂಭವಿಸಿದ ಘಟನೆಗಳನ್ನು ವಿವರಿಸಿದ್ದಾನಬೆ. ಈಗ ಕಾಲದ ದಾಳಿಗೆ ಸಿಕ್ಕಿದರೂ ಅಳಿದುಹೋಗದೆ ಉಳಿದು ಬಂದಿರುವುದು ಕೇವಲ 35 ಸಂಪುಟಗಳು ಮತ್ರ. ಇಂತಹ ಅಮೂಲ್ಯ ಬೌದ್ಧಿಕ ಭಂಡಾರವು ಮುಂದಿನ ಪೀಳಿಗೆಯವರ ಕೈಗೆ ಸಿಕ್ಕದೆ ಹೋಗಿರುವುದು ಅತ್ಯಂತ ದುರದೃಷ್ಟಕರ. ಲಿವಿ ಮೊದಲ 10 ಸಂಪುಟಗಳಲ್ಲಿ ಕ್ರಿ.ಪೂ.293ರಲ್ಲಿ ನಡೆದ ತೃತೀಯ ಸಮ್ನೈಟ್ ಕದನದ ಮುಕ್ತಾಯದವರೆಗಿನಘಟನೆಗಳನ್ನು ವಿವರಿಸಿದರೆ 21 ರಿಂದ 45 ಸಂಪುಟಗಳಲ್ಲಿ ಕ್ರಿ.ಪೂ.218 ರಿಂದ ಹಿಡಿದು ಕ್ರಿ.ಪೂ.167 ರವರೆಗೆ ಅಂದರೆ ದ್ವಿತೀಯ ಪ್ಯೂನಿಕ್ ಕಾಳಗದ ಆರಂಭದಿಂದ ಹಿಡಿದು ಮ್ಯಾಸಿಡೋನಿಯಾದ ಯುದ್ಧದ ಅಂತ್ಯದವರೆಗೆ ತಲೆದೋರಿದ ಸಂಭವಗಳನ್ನು ಕುರಿತು ವಿಚಾರ ಮಾಡಿದ್ದಾನೆ.

ಅವನ ಯೋಗ್ಯತೆ ಹಾಗೂ ಶ್ರೇಷ್ಠತೆ ಕಂಡುಬರುವುದು ಅವನ ಕುತೂಹಲಕಾರಕ ಕಥನದಲ್ಲಿ, ಕಣ್ಣಿಗೆ ಕಟ್ಟುವಂಥ ಸುಸ್ಪಷ್ಟ ನಿರೂಪಣೆಯಲ್ಲಿ ಹಾಗೂ ಗಮನ ಸೆಳೆಯುವ ಶೈಲಿಯಲ್ಲಿ. ವಿವರಣಪ್ರಿಯತೆ ಹಾಗೂ ಸುಚಿತ್ರಿತ ವರ್ಣನೆ ಇತಿಹಾಸ ಲೇಖಕ ಲಿವಿಯ ಬರಹಗಳ ಪ್ರಧಾನ ಲಕ್ಷಣಗಳು. ಅವುಗಳ ಕಾರಣ ಅವನ ಕೃತಿ ರೋಮ್‌ನ ವೈಭವವನ್ನು ಕುರಿತ ಮಹಾಕಾವ್ಯದಂತಿದೆ; ಜೊತೆಗೆ ಆ ಕಾಲದ ಪತನದ ಬಗ್ಗೆ ಭಾವೋದ್ರೇಕವನ್ನು ಹಾಗೂ ಗಾಬರಿಯನ್ನು ಉಂಟು ಮಾಡುವಂತಹ ವಿವರಣೆ ಇರುವುದರಿಂದ ಅವನ ಬರಹ ಮತ್ತಷ್ಟು ಪರಿಣಾಮಕಾರಿಯಾಗಿದೆ. ಪ್ರಾಚೀನ ಕಾಲದಲ್ಲಿ ಅವನು ಬಹು ಪ್ರಖ್ಯಾತನಾಗಿದ್ದನು. ಮಧ್ಯಯುಗಗಳಲ್ಲಿ ಡಾಂಟೆ "ತಪ್ಪೇ ಮಾಡದ ಲಿವಿ" ಎಂಬುದಾಗಿ ಪ್ರಶಂಸಿದನು. ಆಧುನಿಕ ಕಾಲದಲ್ಲಿ ಅವನ ಹೇಳಿಕೆಗಳ ಯಥಾರ್ಥತೆಯ ಬಗ್ಗೆ ವಾದವಿವಾದಗಳು ತಲೆದೋರಿ, ಅವುಗಳನ್ನು ಕಟುವಾದ ವಿಮರ್ಶೆಗೆ ಗುರಿಪಡಿಸಲಾಗಿದೆ. ಆದರೂ ಅವನ ಕೃತಿಯು ಪ್ರಾಚೀನ ರೋಮ್‌ನ ಇತಿಹಾಸಕ್ಕೆ ಮುಖ್ಯವಾಗಿರುವ ಮೂಲಾಧಾರವಾಗಿದೆ ಮತ್ತು ಪುರಾತನ ಯುಗಗಳಲ್ಲಿ ರೋಂ ಎಂತಹ ಗೌರವ, ಖ್ಯಾತಿ, ಅಧಿಕಾರ ಶಕ್ತಿ ಹಾಗೂ ಮಹಾವೈಭವವನ್ನು ಹೊಂದಿದ್ದಿತು ಎಂಬುದಕ್ಕೆ ಸಾಕ್ಷೀಭೂತವಾಗಿದೆ.

### 11.3.3 ಕಾರ್ನಿಲಿಯೆಸ್ ಟ್ಯಾಸಿಟಸ್

ರೋಮ್‌ನ ಇತಿಹಾಸ ಲೇಖನ ಕಲಾ ಕ್ಷೇತ್ರದಲ್ಲಿ ಅತ್ಯಂತ ಪ್ರಮುಖ ಪಂಡಿತನಾಗಿ ಪ್ರಕಾಶಿಸಿದವನು ಟ್ಯಾಸಿಟಸ್. ಅವರ ಜೀವನದ ಬಗ್ಗೆ ತಿಳಿದುಬಂದಿರುವ ಮುಖ್ಯ ವಿವರಗಳೆಲ್ಲಾ ಊಹಾತ್ಮಕವಾಗಿದೆ. ಬಹುಶಃ ಅವನು ಶ್ರೀಮಂತ ಕುಟುಂಬಕ್ಕೆ ಸೇರಿದ್ದವನು ಮತ್ತು ಶಾಸನ ಸಭೆಯ ಸದಸ್ಯನಾಗಿದ್ದವನು. ಅವನು 88ರಲ್ಲಿ ಪ್ರಧಾನ ದಂಡಾಧಿಕಾರಿಯಾಗಿ (ಪ್ರೀಟರ್), 97ರಲ್ಲಿ ಕಾನ್ಸಲ್ ಆಗಿ ಮತ್ತು 112–116ರಲ್ಲಿ ಏಷ್ಯಾದಲ್ಲಿ

ಪ್ರಾಂತಾಧಿಪತಿ (ಪ್ರೋಕಾನ್ಸಲ್) ಆಗಿ ಸೇವೆಯನ್ನು ಸಲ್ಲಿಸಿದನು. ಆದರೆ ಅವನು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಕೃಷಿ ಕಾರ್ಯ ಅಮೋಘವಾಗಿದ್ದಿತು. ದಿ ಡೈಯಲಾಗ್ ಆನ್ ಆರೇಟರಿ ಎಂಬುದು ಅವನು ಬರೆದ ಪ್ರಥಮ ಪ್ರಬಂಧ. ಡಾಮಿಷಿಯಾ ಚಕ್ರವರ್ತಿಯು ಕುಲೀನ ವರ್ಗದ ಮೇಲೆ ನಡೆಸಿದ ದಬ್ಬಾಳಿಕೆ ಹಾಗೂ ಅದರಿಂದ ಅವನ ಕುಟುಂಬಕ್ಕೆ ಉಂಟಾದ ತೊಂದರೆ ಅವನ ಐತಿಹಾಸಿಕ ಬರಹದ ಮೇಲೆ ಗಾಢವಾಗಿದ್ದ ಪ್ರಭಾವವನ್ನು ಬೀರಿತು. 97 ಅಥವಾ 98ರಲ್ಲಿ ಅವನು ತನ್ನ ಹೆಂಡತಿಯ ತಂದೆ ಜೂಲಿಯಸ್ ಅಗ್ರಿಕೋಲವಿನ ಸ್ಮರಣಾರ್ಥಕವಾಗಿ ಲೈಫ್ ಆವ್ ಅಗ್ರಿಕೋಲ ಎಂಬ ಅಭಿಲೇಖನವನ್ನು ಬರೆದನು. ಅವನು 98ರಲ್ಲಿ ಜರ್ಮನಿ ಹಾಗೂ ಅದರ ನಿವಾಸಿಗಳನ್ನು ಕುರಿತ ತನ್ನ ಗ್ರಂಥದಲ್ಲಿ ಅವರ ಜೀವನದ ಪ್ರತಿಮುಖದ ಬಗ್ಗೆ ವಿಚಾರ ಮಾಡಿದನು. ಇತಿಹಾಸದ ದೃಷ್ಟಿಕೋನದಿಂದ ಅಧ್ಯಯನವನ್ನು ನಡೆಸಿದ್ದರೂ, ಅವನೂ ಸಹ ಮೊದಲಿನ ಬರಹಗಾರರಂತೆ ಸ್ವಲ್ಪ ಮಟ್ಟಿಗೆ ರೋಮನೇತರ ಅನಾಗರಿಕರನ್ನು ಆದರ್ಶಾತ್ಮಕವಾಗಿ ವಿವರಿಸಿದ್ದಾನೆ ಮತ್ತು ಅವರ ಸ್ವಾತಂತ್ರ್ಯ, ಸರಳತೆ ಹಾಗೂ ಪರಿಶುದ್ಧ ಕೌಟುಂಬಿಕ ಜೀವನವನ್ನು ರೋಮನರ ಪರಿಸ್ಥಿತಿಯೊಂದಿಗೆ ಹೋಲಿಸಿದ್ದಾನೆ. ಅವನ ಪ್ರಧಾನ ಕೃತಿಗಳಾಗಿರುವ ಹಿಸ್ಟೋರೀಸ್ ಮತ್ತು ಆ್ಯನಲ್ಸ್ ವಿಶ್ಲೇಷಣಾತ್ಮಕವಾಗಿವೆ. ಹಿಸ್ಟೋರೀಸ್‌ನಲ್ಲಿ 69ರಲ್ಲಿ ಉಂಟಾಗಿದ್ದ ರಾಜಕೀಯ ಸಂದಿಗ್ಧ ಸಮಯದಿಂದ ರೋಮ್‌ನ ಇತಿಹಾಸವನ್ನು ಆರಂಭಿಸಿ, ಸ್ಲಾವ್‌ಜನ ಕುಲದವರ ಕಥೆಯನ್ನು ವಿಸ್ತಾರವಾಗಿ ವರ್ಣಿಸಲಾಗಿದೆ ಮತ್ತು ಆ್ಯನಲ್ಸ್‌ನಲ್ಲಿ ಅಗಸ್ಟಸ್‌ನ ಮರಣಕ್ಕೆ ಮುಂಚಿನ ಕಾಲವನ್ನು ಕುರಿತು ವಿಚಾರ ಮಾಡಲಾಗಿದೆ. ಅವುಗಳಲ್ಲಿ ರೋಮ್‌ನ ವಿಶೇಷ ನೈತಿಕ ಹಾಗೂ ಬೋಧನಾತ್ಮಕ ಉದ್ದೇಶಗಳು ಪ್ರಮುಖವಾಗಿದ್ದವು. ಟ್ಯಾಸಿಟಸನು ಪ್ರಾಂತೀಯ ವ್ಯವಹಾರಗಳು, ಸಾರ್ವಜನಿಕ ಆಡಳಿತ, ಸಾಮಾಜಿಕ ಹಾಗೂ ಆರ್ಥಿಕ ವಿಷಯಗಳು ಮುಂತಾದ ಅನೇಕ ವಿಚಾರಗಳನ್ನು ಸ್ಥೂಲವಾಗಿ ಪ್ರಸ್ತಾಪಿಸಿದ್ದಾನೆ. ಆದರೂ ಪ್ರಧಾನ ವ್ಯಕ್ತಿಗಳಿಗೆ ಸಂಬಂಧಿಸಿದ ಘಟನೆಗಳ ಬಗ್ಗೆ ಅವನು ಬೆಳೆಸಿಕೊಂಡಿದ್ದ ಕಲ್ಪನೆ, ನಾಟಕದ ಪ್ರತಿ ಅವನಿಗಿದ್ದ ಒಲವು. ಅವನ ನೀತಿಪರ ಉದ್ದೇಶ ಹಾಗೂ ಸಾಮಾಜಿಕ ಹಿನ್ನೆಲೆ ಇತ್ಯಾದಿಗಳ ಕಾರಣ, ಅವನು ಚಕ್ರವರ್ತಿಗಳು ಹಾಗೂ ಕುಲೀನ ವರ್ಗದವರೊಂದಿಗೆ ಅವರಿಗಿದ್ದ ಸಂಬಂಧಗಳ ವಿಷಯಕ್ಕೆ ಹೆಚ್ಚಿನ ಗಮನವನ್ನು ಕೊಟ್ಟನು. ಆದ್ದರಿಂದ ರಾಜಕೀಯ ವಿಚಾರಗಳ ಚರ್ಚೆಯಲ್ಲಿ ಅವನು ಇತರರನ್ನು ಅತಿಶಯಿಸಿದ್ದರೂ, ಅವನ ಪಕ್ಷಪಾತಯುಕ್ತ ದೃಷ್ಟಿ, ಏಕಪಕ್ಷೀಯ ಒಲವು ಮತ್ತು ಕಪ್ಪು ಕನ್ನಡಕವನ್ನು ಹಾಕಿಕೊಂಡು ಹೆಚ್ಚು ಕಡಿಮೆ ಎಲ್ಲಾ ಚಕ್ರವರ್ತಿಗಳನ್ನು ತಪ್ಪಾಗಿ ಚಿತ್ರಿಸಿರುವ ರೀತಿಯ ಕಾರಣ ಅವನು ನೀಡಿರುವ ಚಕ್ರಾಧಿಪತ್ಯದ ಚಿತ್ರಣ ಸೊಟ್ಟಗನ್ನಡಿಯಲ್ಲಿ ಕಾಣುವ ವಿಕೃತ ಬಿಂಬದಂತಿದೆ.

ಟ್ಯಾಸಿಟಸ್ ಪತ್ರಾಗಾರಗಳಲ್ಲಿ ತಾನೇ ಸಂಶೋಧನೆ ನಡೆಸಿ ಅಪಾರ ವಿಷಯಸಾಮಗ್ರಿಗಳನ್ನು ಸಂಗ್ರಹಿಸಿದನು ಎಂಬುದು ಕೆಲವರ ಅಭಿಪ್ರಾಯ. ಆದರೆ ಮತ್ತೆ ಕೆಲವರು ಅದನ್ನು ಒಪ್ಪದೆ, ಪತ್ರಾಗಾರಗಳಲ್ಲಿ ಧೂಳಿನಿಂದಾವೃತವಾಗಿ ಕಣ್ಣಿಗೆ ಬೀಳದಿದ್ದ, ನೀರಸ ಹಾಗೂ ನಿರಾನಂದಕರವಾಗಿದ್ದ ಸರ್ಕಾರಿ ಪತ್ರಗಳನ್ನು ಅತ್ಯಂತ ಪರಿಶ್ರಮದಿಂದ ಹುಡುಕಿ ಕಂಡುಹಿಡಿದು, ದೂಳು ಕೊಡವಿ, ಓದುವಂತಹ ಅನಾಕರ್ಷಕ ದುಡಿಮೆಯನ್ನು ಕೈಗೊಳ್ಳುವುದು ಆ ಕಲೋಪಾಸಕನಗಿದ್ದ ಟ್ಯಾಸಿಟಸನಿಗೆ ಅಸಾಧ್ಯವಾಗಿದ್ದ ವಿಷಯವಾಗಿದ್ದಿತು ಎಂಬುದಾಗಿ ವಾದಿಸುತ್ತಾರೆ. ಹೀಗೆ ವೈಯಕ್ತಿಕ ಪರಿಶ್ರಮ ಹಾಗೂ ಪ್ರತಿಭೆಯಿಂದ ಗಳಿಸಿದ ಜ್ಞಾನ ಮತ್ತು ಅನುಭವ, ಬಾಯಿ ಮಾತಿನ ಮುಲಕ ಪಡೆದ ವಿಷಯ ಸಾಮಗ್ರಿ, ಸಾರ್ವಜನಿಕ ಹಾಗೂ ವೈಯಕ್ತಿಕ ದಾಖಲೆ

ಪತ್ರ ಮತ್ತು ಗೌಣವಾಗಿದ್ದ ಸಾಹಿತ್ಯ ಕೃತಿಗಳನ್ನು ವಿವೇಚನೆಯಿಂದ ಮೂಲಾಧಾರಗಳಾಗಿ ಬಳಸಿಕೊಂಡು ಅವನು ವಿಷಯಗಳನ್ನು ವಿಮರ್ಶೆ ಮಾಡುವುದರಲ್ಲಿ ಗಮನಾರ್ಹವಾಗಿದ್ದ ಮಟ್ಟವನ್ನು ತಲುಪಿದ್ದನು.

ಆದರೆ ಟ್ಯಾಸಿಟಸನಿಗಿದ್ದ ದೌರ್ಬಲ್ಯವೆಂದರೆ ಸೋಮಾರಿತನ. ವಿಷಯಗಳನ್ನು ಪರಿಶೋಧಿಸಿ, ಸೂಕ್ಷ್ಮವಾಗಿ ಪರೀಕ್ಷಿಸುವ ಮತ್ತು ಇತರರು ನೀಡಿದ್ದ ಹೇಳಿಕೆಗಳ ಸತ್ಯಾಸತ್ಯತೆಗಳನ್ನು ಪರಿಶೀಲಿಸಿ ಪರಿಪೂರ್ಣವಾಗಿ ತಿಳಿಯುವ ತವಕ ಹಾಗೂ ತಾಳ್ಮೆ ಅವನಲ್ಲಿ ಇರಲಿಲ್ಲ. ಅದಕ್ಕಾಗಿ ಸ್ಥಿರಪ್ರಯತ್ನ ನಡೆಸುವ ಪ್ರವೃತ್ತಿಯೂ ಇರಲಿಲ್ಲ. ಅವನ ಕಥನವು ಸಾಹಸ ಕಾದಂಬರಿ ಹಾಗೂ ರಂಜನ ಕಾವ್ಯದಂತಿದೆ; ಅವನು ಅಪೂರ್ವ ಕಲ್ಪನೆ ಮತ್ತು ಪರ್ಯಾಲೋಚಕ ವಿಚಾರಗಳಲ್ಲಿ ಮುಗಿಲೆತ್ತರಕ್ಕೇರಿದ್ದಾನೆ.

### 11.3.4 ಉಪಸಂಹಾರ

ಸಂಕ್ಷೇಪದಲ್ಲಿ ಯೂರೋಪಿನಲ್ಲಿ ಪ್ರಾಚೀನ ಇತಿಹಾಸ ಲೇಖನ ಕಲೆಯ ವಿಚಾರದಲ್ಲಿ ಗ್ರೀಕ್ ಹಾಗೂ ರೋಮನ್ ಚರಿತ್ರ ಲೇಖಕರ ನಡುವೆ ಅಗಾಧವಾಗಿದ್ದ ಅಂತರವಿದ್ದಿತು. ಇತಿಹಾಸ ವಿಚಾರಧಾರಾ ಕ್ಷೇತ್ರದಲ್ಲಿ ನಿಸ್ಸಂದೇಹವಾಗಿ ಗ್ರೀಕರು ರೋಮ್‌ನವರಿಗಿಂತ ಶ್ರೇಷ್ಠರಾಗಿದ್ದರು. ರೋಮನ್ ಬರಹಗಾರರಲ್ಲಿ ಯಾರೂ ಹೆರೊಡೋಟಸ್ ಅಥವಾ ಥೂಸಿಡ್ಡಿಡೀಸನ ಮಟ್ಟಕ್ಕೆ ಬರಲಿಲ್ಲ. ಇದಕ್ಕೆ ಕಾರಣ ರೋಮ್ ಸುಮಾರು 500 ವರ್ಷಗಳವರೆಗೆ ಚರಿತ್ರೆ ಬರೆಯುವ ಕಾರ್ಯವನ್ನು ಬದಿಗೊತ್ತಿ ಇತಿಹಾಸವನ್ನು ಕಟ್ಟುವ ಕೆಲಸದಲ್ಲಿ ನಿರತವಾಗಿದ್ದಿತು. ಐತಿಹಾಸಿಕ ಪ್ರಜ್ಞೆ ಮೂಡಿ, ಪ್ರಬಲವಾಗಿ, ರೋಮ್‌ನ ಇತಿಹಾಸವನ್ನು ರಚಿಸಬೇಕೆಂಬ ಆಸೆ ರೋಮ್‌ನವರಲ್ಲಿ ಉತ್ಕಟವಾಗುವ ವೇಳೆಗೆ ರೋಮ್‌ನ ಅತ್ಯಂತ ಪ್ರಬಲ ಸಾಮ್ರಾಜ್ಯವನ್ನು ನಿರ್ಮಿಸುವ ಕಾರ್ಯ ಇನ್ನೇನು ಮುಗಿಯುವ ಹಂತದಲ್ಲಿದ್ದಿತು. ಉದ್ರಿಕ್ತಗೊಳಿಸುವಂತಿದ್ದ ಘಟನೆಗಳು, ಗ್ರೀಸಿನಿಂದ ಹರಿದು ಬಂದ ವಿಚಾರವಾಹಿನಿ ಮತ್ತು ಇತಿಹಾಸವನ್ನು ರಚಿಸುವ ಅವಶ್ಯಕತೆಯ ಬಗ್ಗೆ ಅರಿವು ಇತ್ಯಾದಿಗಳು ಬೃಹತ್ ಸಂಪುಟಗಳಲ್ಲಿ ರೋಮ್‌ನ ಇತಿಹಾಸವನ್ನು ಬರೆಯುವಂತೆ ರೋಮ್‌ನವರನ್ನು ಪ್ರಚೋದಿಸಿದುವು. ಆದರೆ ಅವರು ಗಾತ್ರಕ್ಕೆ ಹೆಚ್ಚಿನ ಗಮನ ಕೊಡುವುದರಲ್ಲಿ ನಿರತರಾಗಿ ಗುಣಮಟ್ಟವನ್ನು ಮರೆತರು. ಅವರು ಬರೆದಿದ್ದೆಲ್ಲವನ್ನೂ ಇತಿಹಾಸ ಎಂಬುದಾಗಿ ಒಪ್ಪಿಕೊಳ್ಳಲಾಯಿತು. ರೋಮ್‌ನ ರಾಜಕೀಯ ಹಿನ್ನೆಲೆ ಭವ್ಯವಾಗಿದ್ದಿತು ಮತ್ತು ದಿನನಿತ್ಯವೂ ಅದು ಇತಿಹಾಸಯೋಗ್ಯ ಘಟನೆಗಳನ್ನು ಉಂಟುಮಾಡುತ್ತಿದ್ದರಿಂದ ಅಲ್ಲಿ ಅಪರಿಮಿತ ವಿಷಯಸಾಮಗ್ರಿ ಇದ್ದಿತು. ಈ ಅಪೂರ್ವ ವೈಭವದ ಉಜ್ವಲ ಪ್ರಕಾಶದಲ್ಲಿ ಬರಿ ತೋರ್ಕೆಯ ಅಂಶ ಹಾಗೂ ಬಾಹ್ಯ ನಿರೂಪಣಾ ಕ್ರಮಗಳು ರೋಮನ್ ಇತಿಹಾಸಲೇಖನ ಕಲಾಕ್ಷೇತ್ರದ ಒಳಹೊಕ್ಕುವು.

ಇಷ್ಟು ಮಾತ್ರವಲ್ಲದೆ, ರೋಮ್‌ನ ಬರಹಗಾರರು ಘಟನೆಗಳಿಗೆ ಹಿಂದಿದ್ದ ಕಾರಣಗಳನ್ನು ಕುರಿತು ಚಿಂತಿಸಲಿಲ್ಲ ಮತ್ತು ದಿವ್ಯವಾಣಿ ಸ್ಥಾನದಿಂದ ಬಂದ ಉತ್ತರ, ದುಃಸ್ವಪ್ನ ಶಕುನ, ಭವಿಷ್ಯವಾಣಿ ಇತ್ಯಾದಿಗಳಲ್ಲಿದ್ದ ನಂಬಿಕೆ ಮತ್ತು ಇತರ ಮೂಢನಂಬಿಕೆಗಳನ್ನು ಪರಿಶೀಲಿಸಿದೆ ಒಪ್ಪಿಕೊಂಡಿದ್ದರು; ವಾದಾಸ್ಪದ ವಿಷಯ ಹಾಗೂ ಸಮರ್ಪಕ ಸಂದೇಶಗಳನ್ನು ಉಪೇಕ್ಷಿಸಿ, ಶೀತಕ ಯಂತ್ರದೊಳಗೆ ತಳ್ಳಿಹಾಕಿಟ್ಟುಬಿಟ್ಟರು. ಮುಂದಿನ ಪೀಳಿಗೆಯವರಿಗಾಗಿ ಸಮಾಜದಲ್ಲಿದ್ದ ಮೇಲ್ಮಟ್ಟದ ವ್ಯಕ್ತಿಗಳಿಗೆ ಮುಖ್ಯವಾಗಿ ಸಂಬಂಧಿಸಿದ್ದ ಪ್ರಖ್ಯಾತ ಘಟನೆ

ಹಾಗೂ ಸಾಧನೆಗಳನ್ನು ಮಾತ್ರ ಉತ್ಪ್ರೇಕ್ಷಿಸಿ, ವರ್ಣಿಸಿ ದಾಖಲೆಯನ್ನು ಸಿದ್ಧಪಡಿಸುವುದೇ ಅವರ ಕರ್ತವ್ಯ ಎಂಬುದಾಗಿ ನಿಗದಿಪಡಿಸಲಾಯಿತು. ಯುದ್ಧ ಚರಿತ್ರೆಯ ರಚನೆಯಲ್ಲಿ ಮುಳುಗಿಹೋಗಿದ್ದರಿಂದ ಅವರಿಗೆ ಬದುಕಿನ ಮೂಲಭೂತ ಸಮಸ್ಯೆಗಳ ಬಗ್ಗೆ ವಿಚಾರ ಮಾಡುವುದಕ್ಕೆ ವ್ಯವಧಾನವೇ ಇರಲಿಲ್ಲ. ಅವರ ದೃಷ್ಟಿ ರಾಜಕೀಯ ಅಥವ ಮಿಲಿಟರಿ ನಿರ್ಧಾರಗಳನ್ನು ಕೈಗೊಳ್ಳಲು ಸೇರುತ್ತಿದ್ದ ಮಂತ್ರಾಲೋಚನ ಸಭೆಯ ಪರಿಮಿತ ಕೋಣೆಗೆ ಮಾತ್ರ ಸೀಮಿತವಾಗಿದ್ದಿತು. ಹೀಗೆ ರೋಮನ್ ಬರಹಗಾರರು ವರ್ಣರಂಜಿತವಾಗಿದ್ದ ಕನ್ನಡಕವನ್ನು ಹಾಕಿಕೊಂಡು ಒಂದು ಸಂಕುಚಿತವಾಗಿದ್ದ ವಾತಾಯನದ ಮೂಲಕ ಸೀಮಿತ ಜೀವನಮಟ್ಟವನ್ನು ವೀಕ್ಷಿಸುತ್ತಿದ್ದರಿಂದ ಅವರಿಗೆ ಬದುಕಿನ ಯಥಾರ್ಥ ಹಾಗೂ ಭವ್ಯವಾಗಿದ್ದ ಚಿತ್ರಣ ದೊರಕಲಿಲ್ಲ. ಅವರ ಬರಹಗಳು ವರ್ಣನಾತ್ಮಕ, ಅನುಕರಣಾತ್ಮಕ ಮತ್ತು ವ್ಯಾವಹಾರಿಕವಾಗಿದ್ದುವು. ಅವುಗಳು ರಾಜಕೀಯ ಹಾಗೂ ಪ್ರಯೋಜನಾತ್ಮಕ ಉದ್ದೇಶವನ್ನು ಹೊಂದಿದ್ದುವು. ರೋಮನರಿಗೆ ಇತಿಹಾಸವು ಒಂದು ಕಲೆಯಾಗಿದ್ದಿತು, ಮನಸ್ಸಿಗೆ ಆಹ್ಲಾದವನ್ನುಂಟು ಮಾಡುವ ರೀತಿಯಲ್ಲಿ ಹಾಗೂ ಸಂತೋಷವನ್ನುಂಟು ಮಾಡುವ ಕ್ರಮದಲ್ಲಿ ನಿರೂಪಿಸಲಾಗಿದ್ದ ಕಥನವಾಗಿದ್ದಿತು ಮತ್ತು ಸುಂದರ ಪದಗಳೆಂಬ ಚಿತ್ರಗಳ ಮೂಲಕ ಮಹಾನಾಯಕರನ್ನು ಚಿತ್ರಿಸಿದ್ದ ಸಾಹಿತ್ಯ-ದೃಶ್ಯ ಪರಂಪರೆಯಾಗಿದ್ದಿತು.

## 11.4 ಚೀನಾ ಇತಿಹಾಸ ಲೇಖನ ಕಲೆ

**ಚೀನೀಯರ ಕಾಲ**

**ಪೀಠಿಕೆ**

ಚೀನೀಯರ ಇತಿಹಾಸ ಲೇಖನವು ಎಲ್ಲಾ ಬಾಹ್ಯ ಪ್ರಭಾವಗಳಿಂದ ಮುಕ್ತವಾಗಿ ಬೆಳೆಯಿತು. ಕೆಲವು ಸನ್ನಿವೇಶಗಳು ಚೀನೀಯರ ಮನೋಭಾವವನ್ನು ರೂಪಿಸಲು ಮತ್ತು ಅದನ್ನು ಇತಿಹಾಸದ ಅಭ್ಯಾಸದ ಕಡೆಗೆ ನಡೆಸಲು ಬಹಳಷ್ಟು ಮಾಡಿದವು. ಬಹಳ ಮೊದಲಿನಿಂದಲೂ, ಗತಕಾಲದ ಘಟನೆಗಳನ್ನು ದಾಖಲಿಸುವುದು. ಅದನ್ನು ಬರೆಯುವಷ್ಟೇ ಮುಖ್ಯವೆಂದು ಪರಿಗಣಿಸಿದುದು ೦ಭನೀಯರು ಅದನ್ನು ದೈವಿಕ ಕ್ರಮದೊಂದಿಗೆ ಸಂವಹಿಸುವ ಒಂದು ರೀತಿಯೆಂದು ಯೋಚಿಸಿರುವಂತೆ ತೋರುತ್ತದೆ. ಪ್ರತಿಯೊಂದು ದೇವಾಲಯವೂ ದಾಖಲೆ ಪಟ್ಟಿಗಳು, ವಂಶವೃಕ್ಷಗಳು, ಒಪ್ಪಂದದ ದಾಖಲೆಗಳು ಮತ್ತು ಪ್ರಮಾಣವಚನಗಳ ತೀರ್ಮಾನಗಳಂತಹ ದಾಖಲೆಗಳನ್ನು ನೋಡಿಕೊಳ್ಳುತ್ತಿದ್ದ ಓರ್ವ ಪತ್ರಗಾರನನ್ನು ಹೊಂದಿರುತ್ತಿತ್ತು. ರಾಜರ ಅರಮನೆಗಳು ಅದೇ ರೀತಿಯಾಗಿ ಅಧಿಕಾರಿಗಳನ್ನಿಟ್ಟಿರುತ್ತಿದ್ದವು. ಒಪ್ಪಂದಗಳನ್ನು ಬರೆಯುವುದು, ಶಾಸನಗಳನ್ನು ದಾಖಲಿಸುವುದು, ಕಡತಗಳನ್ನು ಬರೆಯುವುದು, ದೈವಿಕ ಮತ್ತು ಪ್ರಯಾಣವನ್ನು ಮಾಡಲು ಒಂದು ಸಮಾರಂಭವನ್ನು ನಡೆಸಲು ಅಥವಾ ಯುದ್ಧವನ್ನು ಪ್ರಾರಂಭಿಸುವ ದಿನವನ್ನು ತೀರ್ಮಾನಿಸುವುದು ಅವರ ಕರ್ತವ್ಯವಾಗಿತ್ತು. ಪತ್ರಗಾರ ಜ್ಯೋತಿಷಿಯು ರಾಜನ ಆಸ್ಥಾನದಲ್ಲಿ ತುಂಬಾ ಪ್ರಾಭಾವವನ್ನು ಗಳಿಸಿದ್ದನು. ಮತ್ತು ಚಕ್ರವರ್ತಿ ಓರ್ವ ಕಾರ್ಯದರ್ಶಿಯಾಗಿ ಅಥವಾ ರಾಯಭಾರ ಪ್ರಯತ್ನಗಳಲ್ಲಿ ಅವನ ಬೇಹುಗಾರನಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಸುಝುಮೊ-ಚೀನ್‌ನ ನಂತರ, ಇತಿಹಾಸ ಲೇಖಕನ ಪಾತ್ರವು, ಚೀನಾ ದೇಶದ ನಾಗರೀಕ ಸೇವೆಯ ಒಂದು ಭಾಗವಾಗಿ, ಮಾನ್ಯತೆ ಪಡೆಯಿತು. ಏಳನೇಯ ಶತಮಾನದ ಮೊದಲಿನಿಂದಲೂ ತುಂಗ್ ವಂಶದ ಅಡಿಯಲ್ಲಿ, ಸರಕಾರದ ಒಂದು ಅಂಗವಾಗಿದ್ದ ಇತಿಹಾಸದ

ಕಛೇರಿಯೆಂದು ತೆರೆಯಿತು. ಮತ್ತು ಇತಿಹಾಸವು ಪೌರಸೇವಾ ಪರೀಕ್ಷೆಯಲ್ಲಿ ಒಂದು ಮುಖ್ಯ ವಿಷಯವಾಯಿತು. ಹೀಗೆ ಸಂಕ್ಷಿಪ್ತವಾಗಿ ಈ ಅಂಶಗಳು ಚೀನಾದಲ್ಲಿ ಇತಿಹಾಸವನ್ನು ಸಾಹಿತ್ಯದ ಅತ್ಯಂತ ಜನಪ್ರಿಯ ಮತ್ತು ಗೌರಾನ್ವಿತ ಭಾಗವನ್ನಾಗಿ ಮಾಡಿದವು.

### 11.4.1 ಕನ್‌ಫ್ಯೂಶಿಯಸ್

ಕನ್‌ಫ್ಯೂಶಿಯಸ್ ವಿಶೇಷವಾಗಿ ಗತಕಾಲಕ್ಕೆ ಗೌರವವನ್ನು ಸೂಚಿಸಲು ಮತ್ತು ಪೂರ್ವಿಕರು ಹಾಕಿಕೊಟ್ಟ ಉದಾಹರಣೆ ಉದಾಹರಣೆಗಳಿಗೆ, ಆದರವನ್ನು ವ್ಯಕ್ತಪಡಿಸುವುದರಲ್ಲಿ, ಇತಿಹಾಸದ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದನು. ಅವನ ಶಿಷ್ಯರಿಗೆ, ಪಠ್ಯಕ್ರಮವನ್ನೊಳಗೊಂಡ ಮೂರು ಮುಖ್ಯ ವಿಷಯಗಳೆಂದರೆ, ಇತಿಹಾಸ, ಕಾವ್ಯ ಮತ್ತು ಸನ್ನಡತೆಯ ನಿಯಮಗಳು ಸುವರ್ಣಯುಗದ ಉಳಿದಿರುವ ಪಠ್ಯದ ಪ್ರತಿಬಿಂಬವನ್ನೊಳಗೊಂಡಿದೆಯೆಂದು, ಪರಿಗಣಿಸಲ್ಪಟ್ಟಿರುವ ಐದು ಚಿಂಗ್ ಅಥವಾ ಶಾಸ್ತ್ರೀಯ ಗ್ರಂಥಗಳನ್ನು, ಸ್ಪಷ್ಟವಾಗಿ ತನ್ನ ಕೈಯಿಂದಲೇ ಬರೆಯಲ್ಪಟ್ಟು ಮತ್ತು ಸಂಕಲಿತವಾಗಿರುವ ಈ ಕೃತಿಗಳನ್ನು ತನ್ನ ಹಿಂದುಗಡೆಯೇ ಬಿಟ್ಟು ಹೋಗಿದ್ದಾನೆ. ಈ ಗ್ರಂಥಗಳಲ್ಲಿ ಎರಡು, ನಾಲ್ಕನೇಯದು ಮತ್ತು ಐದನೇಯದು. ಐತಿಹಾಸಿಕ ಗ್ರಂಥಗಳು. ನಾಲ್ಕನೇಯದು ಚುನ್-ಚಿಯು ಅಥವಾ ವಸುತ ಮತ್ತು ಶರದೃರುಗಳು ವಾರ್ಷಿಕ ವೃತ್ತಾಂತಗಳು ಕ್ರಿ.ಪೂ.722 ರಿಂದ 484 ರವರೆಗೆ. ಕಾನ್‌ಫ್ಯೂಷಿಯಸ್‌ನ ಸ್ವಂತ ರಾಜ್ಯ 'ಲೂ'ನ ಹನ್ನೆರಡು ರಾಜರ ಆಳ್ವಿಕೆಯ ಒಂದು ಸಂಕ್ಷಿಪ್ತ ಕಾಲಾನುಕ್ರಮದ ಇತಿಹಾಸ, ವಾರ್ಷಿಕ ವರದಿಗಳು, ವೃತ್ತಾಂತಗಳು, ನೈತಿಕ ನಡೆಗೆ ಒಂದು ಮಾರ್ಗದಶ್ಜಿಟರ ಆಗಿತ್ತು. ಐದನೇಯದರಲ್ಲಿ ಶು-ಚಿಂಗ್ ಅಥವಾ ಇತಿಹಾಸದ ಗ್ರಂಥ ಅಥವಾ ದಾಖಲೆಗಳ ಪುಸ್ತಕ, ರಾಜನ ಭಾಷಣಗಳು, ಶಾಸನಗಳು, ಸ್ಮಾರಕಗಳು, ಪಾಳೇಯಗಾರರ ದಾಖಲೆಗಳು. ಇವೇ ಮೊದಲಾದವುಗಳ ಸಂಗ್ರಹವಿದು. ಮಹಾನ್ ಗುರುವು ಇದರಿಂದ ತನ್ನ ಶಿಷ್ಯರಲ್ಲಿ ಮೊದಲ ಆಳ್ವಿಕೆಗಳ ಅತ್ಯಂತ ಮುಖ್ಯ ಮತ್ತು ಉನ್ನತ ಘಟನೆಗಳಿಂದ ಸ್ಫೂರ್ತಿ ತುಂಬಿ, ಜ್ಞಾನ ವೃದ್ಧಿಗೊಳಿಸಲು ಪ್ರಯತ್ನಿಸಿದನು. ಕನ್‌ಫ್ಯೂಷಿಯಸ್‌ನ ಪ್ರಕಾರ ಒಂದು ನೂರು ವರುಷಗಳ ಕಾಲ ಆಳಿದ ಒಳ್ಳೆಯ ರಾಜನಾದ ಯಾವೋರಂತಹ ಧೀರ ಮತ್ತು ನಿಸ್ವಾರ್ಥ ನಾಯಕರಿಂದ ಒಗ್ಗೂಡಿಸಲ್ಪಟ್ಟಿದ್ದ ಮತ್ತು ನಾಗರೀಕವಾಗಿದ್ದ ಚೀನಾಕ್ಕೆ ಅದೊಂದು ಕಾಲ. ಆದರೆ ಕನ್‌ಫ್ಯೂಶಿಯಸ್‌ನನ್ನು ಗತಕಾಲದ ಒಂದು ನಿಷ್ಪಕ್ಷಪಾತ ವರದಿಯನ್ನು ನಮಗೆ ಕೊಡುತ್ತಿರುವ ಅಂತಹ, ಅಷ್ಟೊಂದು ಓರ್ವ ಇತಿಹಾಸಕಾರನೆಂದು ಪರಿಗಣಿಸುವುದು ಸಾಧ್ಯವಿಲ್ಲ. ಕಾರಣ, ಅವನು ನೈತಿಕತೆ ಮತ್ತು ಬೌದ್ಧಿಕತೆಗಳನ್ನು ತುಂಬಲು, ತನ್ನ ದಾಖಲೆಗೆ, ಕಾಲ್ಪನಿಕ ಭಾಷಣಗಳನ್ನು ಮತ್ತು ಕಥೆಗಳನ್ನು ಸೇರಿಸಿದ್ದಾನೆ. ಪುರಾಣೇತಿಹಾಸಗಳಿಂದ ಉದ್ದಿಶ್ಯಪೂರ್ವಕವಾಗಿ ಆಯ್ದ ಕಥೆಗಳಿಂದ ತನ್ನ ಕಿರಿಯ ಶಿಷ್ಯರನ್ನು ರೂಪಿಸಲು ಮತ್ತು ಸ್ಫೂರ್ತಿ ತುಂಬಲು ತನ್ನ ದೇಶದ ಗತಕಾಲವನ್ನು ಆದರ್ಶಕ್ಕೊಯ್ದಿದ್ದ ಅವನೋರ್ವ ಗುರು. ಆದರೆ ಇತಿಹಾಸದ ಅಧ್ಯಯನ ಮತ್ತು ಬರಹವನ್ನು ಅದಕ್ಕೆ ಅದರ ಗೌರವವನ್ನು ಸೇರಿಸಿ, ಪ್ರೋತ್ಸಾಹಿಸಿದನು. ಈ ಕಾಲದ ಎರಡು ಕೃತಿಗಳನ್ನು ಇಲ್ಲಿ ತಿಳಿಸಬಹುದು. ಮೊದಲನೆಯದು, ಟ್ಸೊ-ಚ್ಯಾನ್ – ಕನ್‌ಫ್ಯೂಶಿಯಸ್‌ನ ಮರಣದ ಸುಮಾರು ಒಂದು ಶತಮಾನದ ನಂತರ ಅವನ ಇತಿಹಾಸದ ಪುಸ್ತಕವನ್ನು ನಿರೂಪಿಸಲು ಮತ್ತು ಮರುಜೀವ ತುಂಬಲು ಬರೆದ

ಟಿಪ್ಪಣಿ, ವ್ಯಾಖ್ಯಾನ. ಮತ್ತು ಎರಡನೇಯದು ವಾರ್ಷಿಕ ವರದಿಗಳು 'ವೀ'ಯ ಓರ್ವ ರಾಜನ ಗೋರಿಯಲ್ಲಿ ಕಂಡುಬಂದ ಬ್ಯಾಂಬೂ ಪುಸ್ತಕಗಳ ವಾರ್ಷಿಕ ವರದಿಗಳು.

### 11.4.2 ಸ್‌ಝುಮಾ ಚೀನ್ (ಕ್ರಿ.ಪೂ. 145–85)

ಗತಕಾಲದ ಸತ್ಯಾಂಶ / ವಾಸ್ತವೀಕತೆಯನ್ನು ತಾನು ಆಧರಿಸಲು ಪ್ರಯತ್ನಿಸಿದ, ಇತಿಹಾಸ ಲೇಖನದ ಪಿತನೆನಿಸಿಕೊಂಡಿದ್ದಾನೆ. ಚೀನ್ ಹ್ಯಾನ್ ಚಕ್ರವರ್ತಿ 'ವು'ನ ಆಸ್ಥಾನದಲ್ಲಿ ಮಹಾನ್ ಇತಿಹಾಸಕಾರ ಜ್ಯೋತಿಷಿಯಾಗಿದ್ದ ಸ್‌ಝುಮ ಟ್ಯಾನ್‌ನ ಮಗನಾಗಿದ್ದನು. ತರುಣ ಸ್‌ಝುಮನು ಪೌರಸೇವೆಗೆ ಸೇರುವ ಮೊದಲು ವ್ಯಾಪಕವಾಗಿ ಪ್ರಯಾಣ ಮಾಡಿದ್ದನು. ಮಹಾನ್ ಇತಿಹಾಸಕಾರ ಜ್ಯೋತಿಷಿಯಾಗಿ ಅವನು ತನ್ನ ತಂದೆಯ ಉತ್ತರಾಧಿಕಾರಿಯಾದನು. ತಾನು ಪ್ರಾರಂಭಿಸಿದ್ದ ಚಾರಿತ್ರಿಕ ದಾಖಲೆಯನ್ನು ತನ್ನ ಮಗನು ಪೂರ್ಣಗೊಳಿಸಬೇಕೆನ್ನುವುದು, ಈ ಇತಿಹಾಸಕಾರನ ಅಂತಿಮ ಆಸೆಯಾಗಿತ್ತು. ಆದರೆ ಸೋತ ಸೇನಾನಿಯೋರ್ವನ ನೆರವಿಗೆ ಹೋಗಿ, ಅವನು ತನಗೆ ತಾನೇ ಚಕ್ರವರ್ತಿ 'ವು' ನ ಕೊಪಕ್ಕೆ ತುತ್ತಾದನು. ಹೀಗೆ ವಿಪತ್ತು ಬಂದೊದಗಿತ್ತು. ಸ್‌ಝುಮನಿಗೆ ಅತ್ಯಂತ ಕೆಟ್ಟ ಶಿಕ್ಷೆಗೊಳಗಾಗಬೇಕಾಗಿತ್ತು. ಮರಣಕ್ಕೆ ಸಮನಾಗಿ ಅವನ ವೀರ್ಯವನ್ನು ಕುಂದಿಸಲಾಯಿತು. ಇದರಿಂದ 'ಶಿ–ಚಿ'ಯನ್ನು ಪೂರೈಸಲು ಬದುಕಿರಬಹುದೆಂದು ಹೀಗೆ ಮಾಡಲಾಯಿತು. ಅವನು ಮೊದಲು ಪಂಚಾಂಗವನ್ನು ಸುಧಾರಿಸಿದನು. ನಂತರ ತನ್ನ ತಂದೆಯು ತನ್ನ ಮೇಲೆ ಹೊರಿಸಿದ್ದ ಕೆಲಸಕ್ಕೆ ತನ್ನ ಜೀವನವನ್ನು ಅರ್ಪಿಸಿದನು. ಸಹನೆಯಿಂದ ಬೊಂಬಿನ ಫಲಕಗಳ ಮೇಲೆ ಬರೆಯಲಾಗಿರುವ ಇವನ ಅತ್ಯುತ್ತಮ ಕೆಲಸ ಶೀ–ಚೀ–(ಚಾರಿತ್ರಿಕ ದಾಖಲೆಯು) 526000 ಚೀನೀ ಪಾತ್ರಗಳ ಮೇಲೆ ಹರಿದಾಡಿದೆ.

## 11.5 ಕ್ರೈಸ್ತ ಇತಿಹಾಸ ಲೇಖನ ಕಲೆ

ಕ್ರೈಸ್ತಮತ ಉದಯದೊಂದಿಗೆ ಚರ್ಚ್ ಇತಿಹಾಸವು ಹುಟ್ಟಿ ಬೆಳೆಯಲಿಲ್ಲ. ಕಾರಣ ಕ್ರೈಸ್ತಮತ ಲೇಖಕರಲ್ಲಿ ಐತಿಹಾಸಿಕ ಪ್ರಜ್ಞೆ ಮೂಡಿ ವಿಕಾಸ ಹೊಂದಬೇಕಾದರೆ ಸುಮಾರು ಮೂರು ಶತಮಾನಗಳು ಬೇಕಾದುವು. ಅವರು ಭಗವಂತನಲ್ಲಿ ಐಕ್ಯಗೊಳ್ಳುವುದು ಮತ್ತು ಆತ್ಮಸಾಕ್ಷಾತ್ಕಾರ ಹಾಗೂ ಪಾಪ ವಿಮೋಚನೆ ಜೀವನದ ಇತರ ಎಲ್ಲಾ ಉದ್ದೇಶಗಳಿಗಿಂತ ಉತ್ಕೃಷ್ಟವಾದುದೆಂಬುದಾಗಿ ಎಣಿಸಿದರು. ಇಂದಿನ ಬದುಕಿಗಿಂತ ಮುಂದಿನ ಬಾಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದರು ಮತ್ತು ನಿಸ್ಸಂಗತ್ವ, ಏಕಂತವಾಸ, ಐಹಿಕ ಸುಖತ್ಯಾಗ ಹಾಗೂ ವೈರಾಗ್ಯವನ್ನು ಎತ್ತಿಹಿಡಿದು, ಐಹಿಕ ಜೀವನ ವ್ಯಾಪಾರಗಳಲ್ಲಿ ಆಸಕ್ತಿ ವಹಿಸುವ ಪ್ರವೃತ್ತಿಯನ್ನು ಖಂಡಿಸಿದರು. ಯೇಸುಕ್ರಿಸ್ತನು ಪುನಃ ಈ ಭೂಮಿಗೆ ಬಂದು ತನ್ನ ಆಧ್ಯಾತ್ಮಿಕ ಅಧಿಕಾರವನ್ನು ಸ್ಥಾಪಿಸುವನು ಎಂಬುದಾಗಿ ಅವರು ಬೆಳೆಸಿಕೊಂಡಿದ್ದ ನಂಬಿಕೆಯು ಸಾರ್ವಜನಿಕ ಹಿತದ ಬಗ್ಗೆ ಇದ್ದ ಔದಾಸೀನ್ಯವನ್ನು ತೀವ್ರಗೊಳಿಸಿತು. ಬೇರೆ ಮಾತುಗಳಲ್ಲಿ ಹೇಳಬೇಕಾದರೆ ಚರ್ಚು ಗತಕಾಲವನ್ನು ಕುರಿತು ಪರಿಶೋಧಿಸುವುದನ್ನು ತಡೆಗಟ್ಟಿತಲ್ಲದೆ, ಭವಿಷ್ಯದ ಬದುಕಿಗೆ ಸಂಬಂಧಿಸಿದಂತೆ ವೈಚಾರಿಕವಾಗಿ ಸಮರ್ಥಿಸಲು ಸಾಧ್ಯವಾಗದಂತಹ ಒಂದು ಗುರಿಯನ್ನು ಎತ್ತಿಹಿಡಿಯಿತು. ಅದು ಕ್ರೈಸ್ತರು ಗತಕಾಲದತ್ತ ಹಿಂತಿರುಗಿ

ನೋಡಬೇಕಾಗಿಲ್ಲ. ಅದರ ಬಗ್ಗೆ ಚಿಂತಿಸಬೇಕಾಗಿಲ್ಲ. ಅವರು ಭವಿಷ್ಯದ ಕಡೆಗೆ ದೃಷ್ಟಿಹಾಯಿಸಿ ಮುಂದಿನ ಬಾಳ್ವೆಯ ಮೇಲೆ ದೃಷ್ಟಿನೆಟ್ಟಿರಬೇಕು ಎಂಬುದಾಗಿ ನಿರ್ದೇಶಿಸಿತು. ಆದರೆ ಅದು ಭವಿಷ್ಯದ ಬಗ್ಗೆ ಮೂಡಿಸಿದ ಭರವಸೆಯು ತಾರ್ಕಿಕವಾಗಿರಲಿಲ್ಲ, ಅದಕ್ಕೆ ಐತಿಹಾಸಿಕ ಹಿನ್ನೆಲೆ ಇರಲಿಲ್ಲ. ಕಾರಣ ವಿವೇಚನೆ ಹಾಗೂ ಪರ್ಯಾಲೋಚನೆಯ ಕ್ರಮವನ್ನು ಬಳಸಿ ಅದನ್ನು ಪರಿಶೀಲಿಸುವುದು ಸಾಧ್ಯವಾಗಲಿಲ್ಲ. ಅದರ ಫಲವಾಗಿ ಕುತೂಹಲ, ಸಂಶೋಧನೆ, ಪರಿಶೋಧನೆ, ಸತ್ಯಾನ್ವೇಷಣೆ ಮುಂತಾಗಿ ಇತಿಹಾಸದ ಪ್ರಧಾನ ಲಕ್ಷಣ ಹಾಗೂ ತಿರುಳಿಗೆ ಅಸ್ತಿತ್ವವೇ ಇಲ್ಲವಾಯಿತು. ಚರ್ಚ್ ಸಂಸ್ಥೆಯು ಈ ಜಗತ್ತನ್ನೇ ಒಂದು ಸನ್ಯಾಸಿ ಮಠವನ್ನಾಗಿ ಪರಿವರ್ತಿಸಲು ಪ್ರತಿಯೊಬ್ಬ ವ್ಯಕ್ತಿಯನ್ನು ದಾಖಲು ಮಾಡಲು ಯೋಗ್ಯವಾದ ವಿಶೇಷ ಘಟನೆಗಳಿಂದ ಕೂಡಿದ ಸ್ವಾರಸ್ಯಕರವಾಗಿದ್ದ ಜೀವನವನ್ನು ನಡೆಸದ, ವಿರಕ್ತನಾಗಿದ್ದ ಸಂನ್ಯಾಸಿಯನ್ನಾಗಿಸಲು ಬಯಸಿತು. ಅದು ಈ ಗುರಿಯನ್ನು ಸಾಧಿಸಿಬಿಟ್ಟಿದ್ದಿದ್ದರೆ, ಮಾನವ ಬಾಳಿನ ಸ್ವಾರಸ್ಯವೇ ಅಳಿದುಹೋಗುತ್ತಿದ್ದಿತು. ಕಾರಣ ವಿರಕ್ತಿ ಹಾಗೂ ಐಹಿಕ ಜೀವನ ತ್ಯಾಗವು ಕುತೂಹಲಕರವಾದ ಐತಿಹಾಸಿಕ ಘಟನೆಗಳ ಮೂಲಾಧಾರವನ್ನೇ ಅಳಿಸಿಹಾಕಿಬಿಡುತ್ತವೆ.

ಈ ಯುಗದಲ್ಲಿ ಪಾರಮಾರ್ಥಿಕತೆ ಹಾಗೂ ಅತೀಂದ್ರಿಯತೆ ಮುಂತಾದ ಭಾವನೆಗಳ ಪುನರಾಗಮನವಾಗಿ ಅವುಗಳು ಅತ್ಯಂತ ಪ್ರಬಲ ಕಲ್ಪನೆಗಳಾದುವು ಮತ್ತು ಅಲೌಕಿಕ ವಿಷಯಗಳನ್ನು ಕುರಿತ ಅದ್ಭುತ ಕಲ್ಪನಾ ಕಥೆಗಳನ್ನು ಪವಿತ್ರ ಎಂಬುದಾಗಿ ಒಪ್ಪಿ ಗೌರವಿಸಲಾಯಿತು. ಅಲೌಕಿಕ ಶಕ್ತಿಗಳಲ್ಲಿ ಬಲವಾದ ನಂಬಿಕೆಯನ್ನು ಬೆಳೆಸುವುದೇ ಪರಮಗುರಿಯಾಯಿತು. ಹೀಗೆ ಇತಿಹಾಸ ಲೇಖನ ಕಲೆಯಲ್ಲಿ ಪುರಾಣಕಥೆ, ಪವಾಡ ಇತ್ಯಾದಿಗಳ ಬಳಕೆ ಅತಿ ಮುಖ್ಯವಾಯಿತು. ಚರಿತ್ರೆಯನ್ನು ಮಾನವ ಸೃಷ್ಟಿಯಿಂದ ಆರಂಭಿಸಿ, ಅಂತಿಮ ವಿಮೋಚನೆಯ ವಿಷಯದೊಂದಿಗೆ ಮುಗಿಸಲು ಯತ್ನಿಸಲಾಯಿತು.

### 11.5.1 ಕ್ರೈಸ್ತ ಇತಿಹಾಸ ಲೇಖನ ಕಲೆಯ ಪ್ರಮುಖ ಲಕ್ಷಣಗಳು

ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಕ್ರೈಸ್ತ ಇತಿಹಾಸ ಲೇಖನ ಕಲೆಯಲ್ಲಿ ಒಂದು ರೀತಿಯ ಇತಿಹಾಸ ನಾಟಕವನ್ನು ಪ್ರದರ್ಶಿಸಲಾಗಿದೆ. ಆದಿಪುರುಷ ಆ್ಯಡಮ್‌ನ ಪತನ, ತತ್ಪರಿಣಾಮವಾಗಿ ಅವನ ಸಂತತಿಯವರು ಭಗವಂತನಿಂದ ದೂರವಾಗಿ ಮುಂದುವರಿಸಿದ ಪಾಪಕಾರ್ಯಗಳು ಪ್ರಥಮ ಅಂಕದ ವಿಷಯ. ದ್ವಿತೀಯ ಅಂಕದಲ್ಲಿ ಮಾನವತಾರ ಕಳೆದು ಯೇಸುಕ್ರಿಸ್ತನ ರೂಪದಲ್ಲಿ ಇತಿಹಾಸ ರಂಗಕ್ಕೆ ಆದ ಪರಮಾತ್ಮನ ಪ್ರವೇಶವನ್ನು ವಿವರಿಸಲಾಗಿದೆ. ಇದರಲ್ಲಿ (1) ಕ್ರಿಸ್ತನು ತನ್ನ ಭವ್ಯ ವೈಯಕ್ತಿಕ ಪ್ರಭಾವ, ಪವಿತ್ರ ಜೀವನ ಕ್ರಮ ಮತ್ತು ಅತ್ಯುತ್ತಮ ಉಪದೇಶಗಳ ಮೂಲಕ ಅನುಯಾಯಿಗಳನ್ನು ಆಕರ್ಷಿಸಿ ಕ್ರಿಸ್ತಮತವನ್ನು ಸ್ಥಾಪಿಸಿ ಬೆಳೆಸಿದ್ದುದು, (2) ಶಿಲುಬೆಯ ಮೇಲೆ ಪ್ರಾಣಾರ್ಪಣೆ ಮಾಡುವುದರ ಮೂಲಕ ಅವನು ಮಾನವಕುಲವನ್ನೇ ಪಾಪ ಹಾಗೂ ಅನಂತ ನರಕದಿಂದ ವಿಮೋಚನೆ ಮಾಡಿ ಉದ್ಧರಿಸಿದ ರೀತಿ ಮತ್ತು (3) ಗೋರಿಯಿಂದ ಯೇಸುಕ್ರಿಸ್ತನ ಪುನರುತ್ಥಾನವಾಗಿ ಅವನು ಎಲ್ಲರಿಗೂ ಅಮರತ್ವದ ಭರವಸೆಯನ್ನು ನೀಡಿ ಸ್ವರ್ಗಾರೋಹಣ ಮಾಡಿದ ಘಟನೆ ಸಹ ಇದರ ಮುಖ್ಯ ವಸ್ತುಗಳಾಗಿವೆ. ಮುರನೆಯ ಅಂಕದಲ್ಲಿ ಕ್ರೈಸ್ತ ಚರ್ಚು ವ್ಯಾಪಕವಾಗಿ ಬೆಳೆದು ಸಮಗ್ರ ಜಗತ್ತಿನಲ್ಲಿ ಸುವಾರ್ತೆಯನ್ನು ಬೋಧಿಸಿ ಎಲ್ಲರನ್ನು ಈ ಮತಕ್ಕೆ ಒಲಿಸಿ ಸೇರಿಸಿಕೊಳ್ಳುವ

ಕಾರ್ಯಕ್ರಮದ ವಿಷಯ ಮುಖ್ಯವಾಗಿದೆ. ಯೇಸುಕ್ರಿಸ್ತನ ದ್ವಿತೀಯ ಆಗಮನ, ದೇವರು ಕೊನೆಯಲ್ಲಿ ನಡೆಸುವ ಅಂತಿಮ ಮಹಾವಿಚಾರಣೆ ಮತ್ತು ಸಂಪೂರ್ಣ ದಿವ್ಯಾನಂದದಿಂದ ಕೂಡಿದ ದೇವರಾಜ್ಯದ ಉದ್ಘಾಟನೆ ನಾಲ್ಕನೆಯ ಹಾಗೂ ಅಂತಿಮ ಅಂಕದ ಮುಖ್ಯ ವಿಚಾರ. ಇಲ್ಲಿ ಭಗವಂತನನ್ನು ಚರಿತ್ರೆಯಲ್ಲಿ ತಂದೆ, ಮಗ, ಹಾಗೂ ಪವಿತ್ರಾತ್ಮ ಎಂಬ ತ್ರಿಮೂರ್ತಿಯಾಗಿ ಕಲ್ಪಿಸಲಾಗಿದೆ. ತಂದೆಯಾಗಿ ಭಗವಂತನು ಜಗತ್ತು ಹಾಗೂ ಜನರನ್ನು ಸೃಷ್ಟಿಸಿ ಇತಿಹಾಸ ತಲೆದೋರುವುದು ಸಾಧ್ಯವಾಗುವಂತೆ ಮಾಡಿದನು. ಮಗನಾಗಿ ಅವನು ಇತಿಹಾಸ ದೈವಿಕ ಗುರಿಯನ್ನು ಮುಟ್ಟುವಂತೆ ಮಾಡಿದ ಪಾಪವಿಮೋಚಕ ಹಾಗೂ ಉದ್ಧಾರಕನಾದನು ಮತ್ತು ಪವಿತ್ರಾತ್ಮನಾಗಿ ಅವನ ಇತಿಹಾಸದ ಪ್ರಕ್ರಿಯೆಯಲ್ಲಿ ಮಾನವಕುಲವನ್ನು ಪವಿತ್ರೀಕರಿಸಿದನು ಎಂಬುದಾಗಿ ಎಣಿಸಲಾಯಿತು. ಆ್ಯಡಮ್‌ನ ಕಾರಣ ಉಂಟಾದ ಪಾಪದ ಫಲವಾಗಿ ಅಪವಿತ್ರರಾದ ತಮಗೆ ವಿಮೋಚನೆಯನ್ನು ಪ್ರಸಾದಿಸುವುದಕ್ಕಾಗಿ ಭಗವಂತನು ಇತಿಹಾಸರಂಗದಲ್ಲಿ ಮಾನವನಾಗಿ ಅವತರಿಸ–ಬೇಕಾದುದು ಅವಶ್ಯಕವಾಯಿತೆಂಬ ನಂಬಿಕೆಯು ಸಂಪ್ರದಾಯವಾದಿ ಕ್ರೈಸ್ತರಿಗೆ ಮೂಲಭೂತ–ವಾಯಿತು. ಮೊದಲ ಕ್ರೈಸ್ತರಿಗೆ ಯೇಸುಕ್ರಿಸ್ತನು ನಿರೀಕ್ಷಿತ ಉದ್ಧಾರಕನಾಗಿ ಕಂಡುಬಂದಿರಬಹುದು. ಆದರೆ ಅನಂತರದ ಕಾಲಗಳಲ್ಲಿ ಪ್ರಮುಖರಾಗಿದ್ದ ಕೆಲವು ಚಿಂತಕರ ಪ್ರಕಾರ ಯೆಹೂದಿ, ಗ್ರೀಕ್ ಹಾಗೂ ರೋಮ್‌ನ ಗತ ಚರಿತ್ರೆಗಳು ಯೇಸುಕ್ರಿಸ್ತನ ಆಗಮನ ಹಾಗೂ ಚರ್ಚ್‌ನ ಸ್ಥಾಪನೆಗೆ ಬೇಕಾಗಿದ್ದ ಪೂರ್ವಸಿದ್ಧತೆಗಳಾದುವು ಮತ್ತು ಕ್ರಿಸ್ತನ ಅವತಾರ, ಕ್ರೂಶಾರೋಹಣ, ಪುನರುತ್ಥಾನ ಹಾಗೂ ಸ್ವರ್ಗಾರೋಹಣ ಘಟನೆಗಳನ್ನು ಇತಿಹಾಸದ ಪ್ರಧಾನ ವಿಷಯಗಳೆಂಬುದಾಗಿ ಎಣಿಸಲಾಯಿತು. ಇತಿಹಾಸದ ಪ್ರತಿ ಕ್ರೈಸ್ತರ ದೃಷ್ಟಿಯು ಪ್ರಮುಖವಾಗಿ ಧಾರ್ಮಿಕವಾಗಿದೆ ಮತ್ತು ಎರಡನೆಯದಾಗಿ ನೈತಿಕವಾಗಿದೆ.

ಕ್ರಿ.ಶ.313ರಲ್ಲಿ ಕಾಂಸ್ಟಂಟೈನ್ ಕ್ರೈಸ್ತಮತವನ್ನು ಒಪ್ಪಿ ಮಾನ್ಯತೆಯನ್ನು ನೀಡಿದಾಗ, ಚರ್ಚು ಇತಿಹಾಸ ಲೇಖನ ಕಲಾಕ್ಷೇತ್ರದತ್ತ ಗಮನ ಹರಿಯಿಸಿ, ಅದರಲ್ಲಿ ಆಸಕ್ತಿ ತೋರಲಾರಂಭಿಸಿತು ಮತ್ತು ಚರ್ಚ್‌ನ ಚರಿತ್ರಲೇಖಕರು ತಲೆದೋರುವುದಕ್ಕೆ ಆ ಕಾಲ ತಕ್ಕುದಾಗಿದ್ದಿತು. ಕ್ರೈಸ್ತರು ವಿಶ್ವವ್ಯಾಪಿ ಚರಿತ್ರೆಯ ಕಲ್ಪನೆಯನ್ನು ಪರಿಣಾಮಕಾರಿಯಾಗಿ ಬೆಳೆಸಲು ಆರಂಭಿಸಿದರು. ಸಮರ್ಥ ಸೈನಿಕನೂ ಹಾಗೂ ನಿಷ್ಠಾವಂತ ಕ್ರೈಸ್ತನೂ ಆಗಿದ್ದ ಸೆಕ್ಸ್‌ಟಸ್ ಜೂಲಿಯಸ್ ಆಫ್ರಿಕನಸನು 3ನೆಯ ಶತಮಾನದ ಆದಿಯಲ್ಲಿ ಒಂದು ವಿಶ್ವವ್ಯಾಪಿ ಇತಿಹಾಸವನ್ನು ರಚಿಸಿದನು. ಅವನು ಮಾನವ ಇತಿಹಾಸದ ಕಾಲ ಸುಮಾರು 6000 ವರ್ಷಗಳೆಂದು ತಿಳಿಸಿ, ಜಗತ್ತಿನ ಸೃಷ್ಟಿಯಿಂದ ಆರಂಭಿಸಿ, ಯೇಸುಕ್ರಿಸ್ತನ ಜನನ 5500 ವರ್ಷದಲ್ಲಿ ಆಯಿತೆಂಬುದಾಗಿ ಲೆಕ್ಕಹಾಕಿದನು. ಆಗ ಅವನೇ ಮುಖ್ಯನಾಗಿದ್ದ ಪ್ರಪ್ರಥಮ ಕ್ರೈಸ್ತ ಚಾರಿತ್ರಿಕ ವೃತ್ತಾಂತ ಲೇಖಕನಾಗಿದ್ದರೂ, ನಿಜವಾದ ಅರ್ಥದಲ್ಲಿ ಮೊಟ್ಟಮೊದಲ ಇತಿಹಾಸಕಾರ–ನಾಗಿದ್ದವನು ಘನಪಂಡಿತನೂ ಹಾಗೂ ಅಸಂಖ್ಯಾತ ಬರಹಗಳ ಲೇಖಕನೂ ಆಗಿದ್ದ ಲೂಸಿಬಿಯಸ್. ಅವನ ಕೃತಿಗಳಲ್ಲೂ ಸಹ ಮತೀಯ ಅಂಧಶ್ರದ್ಧೆಯಿಂದ ಕೂಡಿದ್ದ ಕಟ್ಟುಕಥೆ ಹಾಗೂ ಅಮೂಲ್ಯ ವಿವರಗಳ ಮಿಶ್ರಣವನ್ನು ನೋಡಬಹುದು. ಪುರಾತನ ಚರಿತ್ರ ಲೇಖಕರಿಗೆ ವಿರುದ್ಧವಾಗಿ ಅವನು ತಾನು ಬಳಸಿದ ಮೂಲಾಧಾರಗಳನ್ನು ನಿರ್ದಿಷ್ಟವಾಗಿ ತಿಳಿಸಿದ್ದಾನಲ್ಲದೆ ಅವುಗಳನ್ನು ವಿಮರ್ಶಾತ್ಮಕವಾಗಿ ನೋಡಿ ಉಪಯೋಗಿಸಲು ಯತ್ನಿಸಿದ್ದಾನೆ.

**ಸೆಂಟ್ ಆಗಸ್ಟಿನ್ (ಕ್ರಿ.ಶ.354–430)**

ಈ ಚರ್ಚ್ ಇತಿಹಾಸ ಲೇಖಕರಲ್ಲಿ ಪ್ರಧಾನವಾಗಿದ್ದವನೆಂದರೆ ದೇವತಾಶಾಸ್ತ್ರಜ್ಞನೂ, ದಾರ್ಶನಿಕನೂ, ಉಪದೇಶಕನೂ, ಗುರುವೂ, ಕವಿಯೂ, ಘನಪಂಡಿತನೂ ಮತ್ತು ರಾಜಕೀಯ ಚಿಂತಕನೂ ಆಗಿದ್ದ ಸೆಯ್ಂಟ್ ಆಗಸ್ಟಿನ್, ಅವನ ಆತ್ಮಚರಿತ್ರೆಯಾಗಿರುವ 'ಕನ್‌ಫೆಷನ್ಸ್' ಪ್ರಕಾರ, ಅವನು ಕ್ರಿ.ಶ.354ರ ನವೆಂಬರ್ ತಿಂಗಳು 13ನೆಯ ತಾರೀಖು ಉತ್ತರ ಆಫ್ರಿಕಾದ ಟಗಸ್ಟೆ ಎಂಭ ಗ್ರಾಮದಲ್ಲಿದ್ದ ಒಂದು ಮಧ್ಯಮ ವರ್ಗದ ಕುಟುಂಬದಲ್ಲಿ ಪೆಟ್ರಿಸಿಯನ್ ಮತ್ತು ಧರ್ಮನಿಷ್ಠ ಮೊನ್ನಿಕಾ ಎಂಬ ದಂಪತಿಗಳ ಮಗನಾಗಿ ಜನಿಸಿದನು. ಅವನು ತನ್ನ 75 ವರ್ಷಗಳ ಕಾಲದ ಸುದೀರ್ಘ ಹಾಗೂ ಭವ್ಯ ಜೀವನವನ್ನು ಟಗಸ್ಟೆ, ಮಡೌರ, ಕಾರ್ಥೆಜ್, ರೋಮ್, ಮಿಲಾನ್ ಮತ್ತು ಹಿಪ್ಪೋ ಎಂಬ ಆರು ಪ್ರಧಾನ ನಗರಗಳಲ್ಲಿ ನಡೆಸಿದನು. ಅವನ ಜನ್ಮದಾತೃಗಳು ಅವನಿಗೆ ಒಳ್ಳೆಯ ಶಿಕ್ಷಣವನ್ನು ಒದಗಿಸಿಕೊಡಲು ಬಯಸಿ ಯತ್ನಿಸಿದರು ಮತ್ತು ಅವನನ್ನು 11ನೆಯ ವರ್ಷದಲ್ಲಿ ಅತ್ಯುತ್ತಮ ಶಾಲೆಗಳಿದ್ದ ಮಡೌರಕ್ಕೆ ಕಳುಹಿಸಿದರು. ಅಲ್ಲಿ ಅವನು ಲ್ಯಾಟಿನ್ ವ್ಯಾಕರಣವನ್ನು ಚೆನ್ನಾಗಿ ಅರಗಿಸಿಕೊಂಡನು. ಅವನು ತನ್ನ 16ನೆಯ ವರ್ಷದಲ್ಲಿ ಹಣದ ಅಭಾವದ ಕಾರಣ ಶಿಕ್ಷಣವನ್ನು ನಿಲ್ಲಿಸಿ ಮನೆಯಲ್ಲಿರಬೇಕಾಯಿತು. ನಂತರ ಟಗಸ್ಟೆಯ ಧನಿಕನೊಬ್ಬನ ಸಹಾಯದಿಂದ ಕಾರ್ಥೆಜ್‌ಗೆ ಹೋಗಿ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಿದನು. ಅದೇ ಸಮಯದಲ್ಲಿ ಅವನಲ್ಲಿ ಒಂದು ಪ್ರಕ್ಷುಬ್ಧತೆ ತಲೆದೋರಿ, ಅವನಿಗೆ ಭಗವಂತನನ್ನು ಕಾಣುವಾಸೆ ಉಂಟಾಯಿತು;

ಏತನ್ಮಧ್ಯೆ ಆಗಸ್ಟಿನ್ ಟಗಸ್ಟೆಯಲ್ಲಿ 1 ವರ್ಷ ಮತ್ತು ಕಾರ್ಥೆಜ್‌ನಲ್ಲಿ 8 ವರ್ಷಗಳ ಕಾಲ ಉಪಾಧ್ಯಾಯನಾಗಿ ಸೇವೆ ಸಲ್ಲಿಸಿದನು. ಆದರೆ ತನ್ನ ಕಾರ್ಥೆಜ್‌ನ ವಿದ್ಯಾರ್ಥಿಗಳ ಪುಂಡತನದಿಂದ ಹೆದರಿದ ಅವನು ಮಧ್ಯರಾತ್ರಿಯ ಕಗ್ಗತ್ತಲೆಯಲ್ಲಿ ರಹಸ್ಯವಾಗಿ ರೋಮ್‌ಗೆ ಓಡಿಹೋದನು. ರೋಮ್‌ನಲ್ಲೂ ಸಹ ಅವನಿಗೆ ತನ್ನ ಶಿಷ್ಯರ ವರ್ತನೆ ಅಷ್ಟೇನು ತೃಪಿಯನ್ನು ನೀಡಲಿಲ್ಲ. ಆದ್ದರಿಂದ ಅವನು ಮಿಲಾನಿಗೆ ಹೋಗಿ ಅಲ್ಲಿ ವಾಗ್ಮಿಕಲೆಯ ಅಧ್ಯಾಪಕನಾಗಿ ನೇಮಕಗೊಂಡನು. ಅದು ಅವನ ಜೀವನದಲ್ಲಿ ಒಂದು ತಿರುವು ಉಂಟಾಗುವಂತೆ ಮಾಡಿತು. ಕಾರಣ ಅಲ್ಲೇ ಆಗಸ್ಟಿನ್ ಬಿಷಪ್ ಅಂಬ್ರೋಸ್‌ನನ್ನು ಭೇಟಿಯಾದನು ಮತ್ತು ಅವನ ಅದ್ಭುತ ಭಾಷಣ ಚಾತುರ್ಯ ಮತ್ತು ಚರ್ಚ್‌ನ ಅಧಿಕಾರ ಹಾಗೂ ಹಳೆಯ ಒಡಂಬಡಿಕೆಯ ದೈವಿಕ ಸ್ಫೂರ್ತಿಯ ಬಗ್ಗೆ ಅವನು ನೀಡಿದ ವಿವೇಚನಾಪೂರ್ಣ ವಿವರಣೆ ಅವನ ಮೇಲೆ ಗಾಢವಾಗಿದ್ದ ಪ್ರಭಾವವನ್ನು ಬೀರಿದುವು. ಅವನು ಕ್ರೈಸ್ತ ಪವಿತ್ರ ಗ್ರಂಥಗಳನ್ನು ಅಧ್ಯಯನ ಮಾಡಲಾರಂಭಿಸಿದನು ಮತ್ತು ಕ್ರೈಸ್ತಮತಾವಲಂಬಿಯಾದನು. ನಂತರ ರೋಮ್‌ಗೆ ಬಂದು ಅಲ್ಲಿ ವರ್ಷಕಾಲ ನೆಲಸಿ, ಮನ್ನಿಕೀ ಪಂಥದ ತತ್ತ್ವವನ್ನು ನಿರಾಕರಿಸಿ, ಕ್ರೈಸ್ತ ಜೀವನ ಕ್ರಮವು ಶ್ರೇಷ್ಠವಾದುದೆಂಬುದನ್ನು ಒತ್ತಿಹೇಳಲು ಎರಡು ಕೃತಿಗಳನ್ನು ರಚಿಸಿದನು. ಕ್ರಿ.ಶ.391ರಲ್ಲಿ ಅವನು ಹಿಪ್ಪೋರೇಗಿಸ್‌ಗೆ ಹೋಗಬೇಕಾಗಿ ಬಂದಾಗ ಅವನು ಅಲ್ಲಿನ ಜನರ ಹಾಗೂ ಬಿಷಪ್ ವ್ಯಾಲೆರಸನ ಒತ್ತಾಯಕ್ಕೆ ಮಣಿದು ಪಾದಿಯಾಗಿ ಕರ್ತವ್ಯಗಳನ್ನು ನಿರ್ವಹಿಸಬೇಕಾಯಿತು. ಬಿಡುವಿಲ್ಲದೆ ಇಷ್ಟು ಗುರುತರವಾಗಿದ್ದ ಜವಾಬ್ದಾರಿಗಳನ್ನು ಹೊತ್ತುಕೊಂಡು ನಿರ್ವಹಿಸುತ್ತಿದ್ದಾಗಲೂ, ಅವನು ತನ್ನನ್ನು ಅಮರನನ್ನಾಗಿಸಿದ ಮತ್ತು 13 ಪ್ರಧಾನ ಭಾಗಗಳಲ್ಲಿ ಸುದೀರ್ಘ ದೇವತಾ ಪ್ರಾರ್ಥನೆಯಾಗಿದ್ದ ಕನ್‌ಫೆಷನ್, 15 ಪ್ರಧಾನ ಭಾಗಗಳನ್ನು ಒಳಗೊಂಡಿದ್ದ ಅದ್ಭುತ ಪ್ರಕರಣ ಗ್ರಂಥವಾಗಿದ್ದ ಆನ್ ದಿ ಟ್ರಿನಿಟಿ

ಮತ್ತು 22 ಪ್ರಧಾನ ಭಾಗಗಳನ್ನು ಹೊಂದಿದ್ದ ದಿ ಸಿಟಿ ಆವ್ ಗಾಡ್ ಎಂಬ ಮೇರು ಕೃತಿಗಳನ್ನು ರಚಿಸಿದನು. ಹೀಗೆ ತುಂಬು ಜೀವನವನ್ನು ನಡೆಸಿ ಅವನು ಕ್ರಿ.ಶ.430 ಆಗಸ್ಟ್ 28 ರಂದು ಮೃತ್ಯುವಿನ ಅತಿಥಿಯಾದನು.

ಆದರೂ ಇತಿಹಾಸದಲ್ಲಿ ದೇವರ ನಿಯಮಾಕವೂ ಪರಮ ಪ್ರಧಾನವಾಗಿರುತ್ತದೆ. ಇತಿಹಾಸವು ದೈವಿಕವಾಗಿ ನಿಯೋಜಿಸಲಾದ ಶಿಕ್ಷಣಶಾಸ್ತ್ರ, ಮಾನವ ಜೀವನದ ಪರಮ ಮೌಲ್ಯವಾಗಿರುವ ಭಗವಂತನ ಪ್ರತಿ ಪ್ರೇಮದಿಂದ ಸಿಗುವ ಪರಮ ತೃಪ್ತಿ ಮತ್ತ್ಯಾವುದರಿಂದಲೂ ಸಿಗಲಾರದು. ಅದೇ ಈ ಭೂಮಿಯ ಮೇಲೆ ಹಾಗೂ ಅದರಾಚೆ ಇರುವ ಮಾನವ ಇತಿಹಾಸದ ಮೂಲಭೂತ ಅರ್ಥ. ಆಧ್ಯಾತ್ಮಿಕ ಗುರಿಯನ್ನು ಹೊಂದಿರುವ ದೇವನಗರವು ಜನರ ಭೌತ ಅವಶ್ಯಕತೆಗಳನ್ನು ಪೂರೈಸುತ್ತದೆ. ರಾಜಕೀಯ ರಂಗದಲ್ಲಿ ದೇವಪ್ರಭುತ್ವವನ್ನು ಸ್ಥಾಪಿಸುವುದೇ ಅದರ ಉದ್ದೇಶ. ಅಲ್ಲಿ ದೈವಿಕ ಕಟ್ಟಳೆಗಳನ್ನು ಜಾರಿಗೆ ತರಲಾಗುತ್ತದೆ. ಆ ಕಟ್ಟಳೆಯನ್ನು ಎಲ್ಲರೂ ಅನುಸರಿಸುವಂತೆ ಮಾಡುವ ಅಭಿಕರಣವೇ ಚರ್ಚು ಮತ್ತು ಈ ಭೂಮಿಯ ಮೇಲೆ ದೇವರಾಜ್ಯವನ್ನು ಸ್ಥಾಪಿಸುವುದೇ ಆ ಕಟ್ಟಳೆಯ ಗುರಿ. ಈ ಭೂಲೋಕದಲ್ಲಿ ಚರ್ಚು ದೇವರಾಜ್ಯದ ಪ್ರತಿನಿಧಿಯಾಗಿರುತ್ತದೆ. ಹೀಗೆ ಚರಿತ್ರೆಯಲ್ಲಿ ಭಗವಂತನನ್ನು ಎತ್ತಿ ಹಿಡಿದು ಸಮರ್ಥಿಸುವುದೇ ಆಗಸ್ಟಿನನ ಸಮಗ್ರ ಸಾಹಿತ್ಯ ಯೋಜನೆಯ ಮೂಲಭೂತ ಗುರಿ. ಈ ದೇವತಾ ಶಾಸ್ತ್ರೀಯ ಚೌಕಟ್ಟಿನ ಆಧಾರದ ಮೇಲೆ ಅವನು ಪರಮಾತ್ಮನು ಆರು ದಿನಗಳಲ್ಲಿ ಮಾಡಿದ ಜಗತ್ತಿನ ಸೃಷ್ಟಿ ಹಾಗೂ ಸಬ್ಬತನ್ನು ಅವಲಂಬಿಸಿ ಇತಿಹಾಸವನ್ನು 7 ಯುಗಗಳಾಗಿ ವಿಭಾಗಿಸಿದನು:

1) ಆ್ಯಡಮ್‌ನಿಂದ ಹಿಡಿದು ನೋವ ಎಂಬಾತನ ಕಾಲದ ಮಹಾಪ್ರಳಯದವರೆಗೆ–ಪ್ರಥಮ ಯುಗ;

2) ಆ ಮಹಾ ಪ್ರಳಯದಿಂದ ಹಿಡಿದು ಅಬ್ರಹಾಂನ ಕಾಲದವರೆಗೆ–ದ್ವಿತೀಯ ಯುಗ;

3) ಅಬ್ರಹಾಂನ ಸಮಯದಿಂದ ಹಿಡಿದು ಡೇವಿಡನ ಕಾಲದವರೆಗೆ–ತ್ರತೀಯ ಯುಗ;

4) ಡೇವಿಡನ ಕಾಲದಿಂದ ಹಿಡಿದು ಬ್ಯಾಬಿಲನ್ನಿನಲ್ಲಿ ಯೆಹೂದ್ಯರ ಗಡೀಪಾರಿನವರೆಗೆ–ಚತುರ್ಥ ಯುಗ;

5) ಆ ಬಂಧನದ ಸಮಯದಿಂದ ಹಿಡಿದು ಕ್ರಿಸ್ತನ ಜನನದವರೆಗೆ–ಪಂಚಮ ಯುಗ;

6) ಮತ್ತು ಕ್ರಿಸ್ತನ ಪ್ರಥಮ ಹಾಗೂ ದ್ವಿತೀಯ ಆಗಮನದ ಷಷ್ಠ ಹಾಗೂ ಸಪ್ತಮ ಯುಗಗಳು, ಈ ಸಾಂಪ್ರದಯಿಕ ವಿಭಜನೆಯಲ್ಲಿ ಕ್ರೈಸ್ತಯುಗದ ಕಾಲಾವಧಿಯು ಅನಿರ್ದಿಷ್ಟವಾದುದು, ಅಪರಿಮಿತವಾದುದು. ಈ ಏಳು ಯುಗಗಳಲ್ಲದೆ ಇತಿಹಾಸದ ಆಧ್ಯಾತ್ಮಿಕ ಪ್ರಗತಿಗನುಗುಣವಾಗಿ ಇನ್ನೂ ಮೂರು ಯುಗಗಳನ್ನು ಗುರುತಿಸಬಹುದು.

ನಾಗರಿಕತೆ ಬೆಳೆದಂತೆ, ಕಾಲಕ್ರಮಣಿಯು ನಿಜವಾಗಿದ್ದ ಇತಿಹಾಸವಾಯಿತು. ಕ್ರಿ.ಶ.1110ರ ವೇಳೆಗೆ ವಾಸ್ತವವಾಗಿ ಪುನರುಜ್ಜೀವನ ಉಂಟಾಗಿ ಧರ್ಮಯುದ್ಧಗಳ ಪ್ರಭಾವ, ಜ್ಞಾನಕ್ಷೇತ್ರದಲ್ಲಿ ಉಂಟಾದ ವಿಕಾಸ, ರಾಜಕೀಯ ಹಾಗೂ ಧಾರ್ಮಿಕವಾದ ವಿವಾದಗಳ ಪರಿಣಾಮ ಮುಂತಾದುವು ಐತಿಹಾಸಿಕ ಬರಹಗಳಲ್ಲಿ ಪ್ರಮುಖ ವಿಷಯಗಳಾದುವು. ಲೇಖಕರು ಮೂಲಾಧಾರಗಳನ್ನು ವಿವೇಚನೆಯಿಂದ ಬಳಸಲಾರಂಭಿಸಿದರು ಮತ್ತು ರಾಜಕೀಯ ಘಟನೆ ಹಾಗೂ ಚಳವಳಿಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ವೀಕ್ಷಿಸಲಾರಂಭಿಸಿದರು. ಇಂಗ್ಲೆಂಡಿನಲ್ಲಿ ತಲೆದೋರಿದಷ್ಟು ವೃತ್ತಾಂತ ಲೇಖಕರು ಮತ್ತೆಲ್ಲೂ ಕಂಡುಬರಲಿಲ್ಲ. ಮಾಮ್ಸ್‌ಬರಿಯ

ವಿಲಿಯಂ, ಅವನ ಸಮಕಾಲೀನನಾಗಿದ್ದ ಹೆನ್ರಿ, ನ್ಯೂಬರ್ಗ್‌ಯ ವಿಲಿಯಂ ಪ್ರಮುಖರಾಗಿದ್ದರು. ಯೂರೋಪಿನ ಇತರ ದೇಶಗಳಲ್ಲಿ ಧರ್ಮಯುದ್ಧಗಳ ಪ್ರತ್ಯಕ್ಷ ದರ್ಶಿಗಳು ಕಾಲಾನುಕ್ರಮಣಿಗಳನ್ನು ಸಿದ್ಧಪಡಿಸಿದರು. ಬಿಷಪ್ ಆಟ್ಟೋ ಅತ್ಯುತ್ತಮ ಬರಹಗಾರ–ನಾಗಿದ್ದನು ಮತ್ತು ಟೆಯರ್‌ನ ಪ್ರಧಾನ ಕ್ರೈಸ್ತ ಮಠಾಧಿಪತಿಯಾಗಿದ್ದ ವಿಲಿಯಂನು ತನ್ನ ಹಿಂದಿನವರು ನೀಡಿದ ದಾಖಲೆಗಳನ್ನು ವಿಮರ್ಶಾತ್ಮಕವಾಗಿ ಹಾಗೂ ವಿವೇಚನೆಯಿಂದ ಬಳಸಿ ರಚಿಸಿದ ಧರ್ಮಯುದ್ಧಗಳ ಸಾಮಾನ್ಯ ಕಥಾವೃತ್ತಾಂತವು ಆಧುನಿಕ ಇತಿಹಾಸ ಲೇಖನ ಕಲೆಯ ಹಾದಿಯಲ್ಲಿ ನಿರ್ಣಾಯಕ ಹೆಜ್ಜೆಯಾಯಿತು.

ಒಟ್ಟಿನಲ್ಲಿ ಕ್ರೈಸ್ತ ಇತಿಹಾಸ ಲೇಖನ ಕಲೆಯು ಕೇವಲ ಭಗವಂತನ ವಿಧಾನಗಳನ್ನು ಮಾನವನಿಗೆ ವಿವರಿಸಿ ಹೇಳುವುದರಲ್ಲಿ ಆಸಕ್ತಿಯನ್ನು ವಹಿಸಿದ್ದರಿಂದ ಅದರಲ್ಲಿ ಲೌಕಿಕ ವಿಷಯಗಳಿಗೆ ಸ್ಥಾನವಿರಲಿಲ್ಲ. ಎರಡನೆಯದಾಗಿ, ಆ ಲೇಖಕರ ದೃಷ್ಟಿಕೋನ ವ್ಯಕ್ತಿನಿಷ್ಠವಾಗಿದ್ದಿತೇ ವಿನಹ ವಸ್ತುನಿಷ್ಠವಾಗಿರಲಿಲ್ಲ. ಅವರು ತರ್ಕಕ್ರಮ ಹಾಗೂ ವೈಜ್ಞಾನಿಕ ವಿಧಾನವನ್ನು ಬದಿಗೊತ್ತಿ ನಂಬಿಕೆಯನ್ನು ಎತ್ತಿಹಿಡಿದರು. ಬೇರೆ ಮಾತುಗಳಲ್ಲಿ ಹೇಳಬೇಕಾದರೆ ಅವರ ಬರಹಗಳು ನಂಬಿಕೆಯ ಮೇಲೆ ಆಧಾರವಾಗಿದ್ದುವೇ ವಿನಹ ತರ್ಕದ ಮೇಲಲ್ಲ; ಅವರು ತಲೆಬಾಗಿ ಒಪ್ಪಿಕೊಂಡಿದ್ದುದು ತರ್ಕಶಾಸ್ತ್ರ ರೀತ್ಯಾ ವಿವರಿಸಲಾದ ನಿಯಮವನ್ನಲ್ಲ. ಆದರೆ ಒಂದು ಸ್ಥಿರೀಕೃತ ಕ್ರಿಯಾಗತಿಯನ್ನು ಹೊಂದಿದ್ದ ಮತ್ತು ಭಗವಂತನಿಗೆ ಮಾತ್ರ ತಿಳಿದಿದ್ದಂತಹ ನಿಯತಿಯನ್ನು ಪಡೆದಿದ್ದ ದೈವಿಕ ನಿಯಮವನ್ನು ಭಗವಂತನ ಸಂಕಲ್ಪ ಹಾಗೂ ಕೃಪೆಯು ಚರಿತ್ರೆಯ ಪ್ರೇರಕ ಶಕ್ತಿ, ಸೃಷ್ಟಿಯಿಂದ ಆರಂಭಿಸಿ ಪ್ರಳಯ ಹಾಗೂ ಯೇಸುಕ್ರಿಸ್ತನ ಆಗಮನದೊಂದಿಗೆ ಅಂತ್ಯವಾಗುವ ಸಮಗ್ರ ಇತಿಹಾಸ ನಾಟಕವು 'ರಕ್ಷಕ', 'ಸೃಷ್ಟಿಕರ್ತ', 'ಪರಮ ಪ್ರಭು', 'ದೈವಿಕ ನಿಯಮ', ಮುಂತಾಗಿ ವಿವಿಧ ರೂಪಗಳಲ್ಲಿ ಕಲ್ಪಿಸಲಾಗಿದ್ದ ದೈವಿಕ ಸಂಕಲ್ಪದ ಅಭಿವ್ಯಕ್ತಿ ಮಾತ್ರ ಮತ್ತು ಪ್ರತಿಯೊಂದು ಅಂಶವು ದೈವಿಕ ಯೋಜನೆಯ ಸುದೀರ್ಘ ಸರಪಳಿಯ ಕೊಂಡಿಯಾಗಿರುತ್ತದೆ ಎಂಬುದಾಗಿ ಅಭಿಪ್ರಾಯ ಪಟ್ಟರು. ಐತಿಹಾಸಿಕ ಬದಲಾವಣೆಯು ಏಕ ರೇಖಾಯುಕ್ತವಾದುದು. ಸಾರ್ವತ್ರಿಕ ಹಾಗೂ ಅವೈಯಕ್ತಿಕವಾದುದು ಎಂಬುದು ಕ್ರೈಸ್ತ ಇತಿಹಾಸಕಾರರ ಮತವಾಗಿದ್ದಿತು. ಆದ್ದರಿಂದ ಅತ್ಯದ್ಭುತ ಘಟನೆ ಜರುಗಿದಾಗಲೆಲ್ಲಾ, ಅದಕ್ಕೆ ಕಾರಣ ದೈವಿಕ ಸಂಕಲ್ಪವೇ ಎಂಬುದಾಗಿ ವಿವರಣೆಗಳನ್ನು ಕೊಡಲಾಗುತ್ತಿದ್ದಿತೇ ವಿನಹ, ಕಾರಣ ಹಾಗೂ ಪರಿಣಾಮ ನಿಯಮದ ಆಧಾರದ ಮೇಲೆ ಆ ಘಟನೆಯ ವಿಶ್ಲೇಷಣೆ ನಡೆಯುತ್ತಿರಲಿಲ್ಲ. ಕ್ರೈಸ್ತ ಧಾರ್ಮಿಕ ಕಥೆಗಳನ್ನು ವಿಮರ್ಶಾತ್ಮಕ ಕ್ರಮವನ್ನು ಬಳಸಿ ಪರೀಕ್ಷಿಸುವುದಕ್ಕೆ ಅವಕಾಶವೇ ಬರಲಿಲ್ಲ. ಅದಕ್ಕೆ ಬದಲಾಗಿ ಅವುಗಳು ದೇವನಗರದಿಂದ ಹರಿದುಬಂದ ಕಥಾವಾಹಿನಿಗಳಾಗಿದ್ದರಿಂದ ಅವುಗಳನ್ನು ಸಂಪೂರ್ಣವಾಗಿ ನಂಬಬೇಕಾಗಿದ್ದಿತು. ಚರ್ಚ್ ಇತಿಹಾಸಕಾರರು ತಮಗೆ ಯಾವ ಪರೀಕ್ಷೆಗೂ ಒಳಪಡಿಸಲಾಗದಂತಹ ಧಾರ್ಮಿಕ ಅಧಿಕಾರವಿದೆ ಎಂಬುದಾಗಿ ತಪ್ಪಾಗಿ ಭಾವಿಸಿ ವರ್ತಿಸಿದ್ದರಿಂದ ಅವರ ಬರಹಗಳಿಗೆ ಆಧಾರವಾಗಿದ್ದ ಮೂಲಾಧಾರಗಳನ್ನಾಗಲಿ ಅಥವಾ ಅವರು ನೀಡಿದ ವಿವರಣೆಯನ್ನಾಗಲೀ ನಿಷ್ಪಕ್ಷಪಾತವಾಗಿದ್ದ ರೀತಿಯಲ್ಲಿ ವೀಕ್ಷಿಸಿ ವಿಚಾರ ಮಾಡುವುದು ಸಾಧ್ಯವಾಗಲಿಲ್ಲ. ವಿಮರ್ಶಾತ್ಮಕ ಸಂಶೋಧನೆಗೆ ದೂರವಾಗಿದ್ದ ಏಕಮಾತ್ರ ಇತಿಹಾಸ ಶಾಖೆ ಎಂದರೆ ಚರ್ಚ್ ಚರಿತ್ರೆ ಎಂಬುದಾಗಿ ಹೇಳಬಹುದು.

ಆದರೆ ಅಂತರ್ದೃಷ್ಟಿ ಹಾಗೂ ಅಂತರ್ಜ್ಞಾನದ ಮೂಲಕ ಗಳಿಸುವ ಜ್ಞಾನವನ್ನು ಐತಿಹಾಸಿಕವಾದುದು ಎಂಬುದಾಗಿ ಹೇಳಲು ಸಾಧ್ಯವಿಲ್ಲ. ಕಾರಣ ಅದು ಇತಿಹಾಸಕಾರನ ಮನಸ್ಸಿನಲ್ಲಿ ಪುನಃ ಪ್ರತಿಬಿಂಬಿತವಾಗುವುದು ಸಾಧ್ಯವಿಲ್ಲ. ಆದ್ದರಿಂದ ಅಂತರ್ಜ್ಞಾನ ಕ್ರಮವು ದರ್ಶನ ಹಾಗೂ ಮತಧರ್ಮ ಕ್ಷೇತ್ರಗಳಲ್ಲಿ ಮುಖ್ಯವಾಗಿರುವ ವಿಧಾನವಾದರೂ, ಅದು ಇತಿಹಾಸದ ವ್ಯಾಪ್ತಿಗೆ ಹೊರತಾದುದು.

### 11.5.3 ಉಪಸಂಹಾರ

ಸಂಕ್ಷೇಪದಲ್ಲಿ, ಈ ಮಧ್ಯಯುಗದ ಇತಿಹಾಸ ಲೇಖನ ಕಲೆಯಲ್ಲಿ ವಿಚಾರಕ್ಕೆಡೆಗೊಡದ ಮತ ತತ್ತ್ವಾತ್ಮಕ ವಿವರಣೆ, ಒರಟು ಶೈಲಿ ಮತ್ತು ಪಕ್ಷಪಾತಯುಕ್ತವಾಗಿದ್ದ ಹಾಗೂ ವ್ಯಕ್ತಿನಿಷ್ಠವಾಗಿದ್ದ ದೃಷ್ಟಿಕೋನ ಪ್ರಧಾನ ಲಕ್ಷಣಗಳಾಗಿದ್ದುವು. ಸಂಕುಚಿತ ದೃಷ್ಟಿಯಿಂದ ಇತಿಹಾಸವನ್ನು ರಚಿಸಿದ ಪಾದ್ರಿಗಳು ಮುಂತಾದವರು ಚರ್ಚ್‌ನ ಹಿತಾಸಕ್ತಿಗಳನ್ನು ಸಾಧಿಸುವುದಕ್ಕಾಗಿ ಮತ್ತು ಹೇಗೆ ದೈವಿಕ ನಿಯಮವನ್ನು ಅನುಸರಿಸದೇ ಇದ್ದ ರಾಷ್ಟ್ರಗಳು ಸಂಕಟಗಳ ಸುಳಿಗೆ ತುತ್ತಾದುವು ಎಂಬುದನ್ನು ಎತ್ತಿ ತೋರುವುದರ ಮೂಲಕ ಕ್ರೈಸ್ತ ಧರ್ಮದ ಪ್ರಚಾರ ಮಾಡುವುದಕ್ಕಾಗಿ ಚರಿತ್ರೆಯನ್ನು ಒಂದು ಪ್ರಬಲ ಮಾಧ್ಯಮವನ್ನಾಗಿ ಬಳಸಿಕೊಂಡರು. ಆದರೂ ಮಧ್ಯಯುಗಗಳ ಕೊನೆಕೊನೆಗೆ ಲೌಕಿಕ ಇತಿಹಾಸ ಲೇಖನ ಕಲೆ ಬೆಳೆಯಿತು. ಪುನರುಜ್ಜೀವನದ ಸಮಯದವರೆಗೆ ಪಾದ್ರಿಗಳೇ ಧಾರ್ಮಿಕ ಹಾಗೂ ಲೌಕಿಕ ಚರಿತ್ರೆಗಳ ಕರ್ತೃಗಳಾಗಿದ್ದರೂ ಕ್ರಮೇಣ ಅಲೌಕಿಕ ಹಾಗು ಅತ್ಯದ್ಭುತ ವಿಷಯಗಳಿಗೆ ಗಮನವನ್ನು ಕೊಡುವುದು ಕಡಿಮೆಯಾಯಿತು. ಒಟ್ಟಿನಲ್ಲಿ ಮಧ್ಯಯುಗದ ಇತಿಹಾಸ ಲೇಖನ ಕಲೆಯು ಆ ಸಮಾಜದ ದರ್ಪಣವಾಗಿದ್ದಿತು.

## 11.6 ಪಶ್ಚಿಮ ಏಷ್ಯಾ

### 11.6.1 ಅರಬ್ ಇತಿಹಾಸ ಲೇಖನ ಕಲೆ

ಒಂದು ಕಡೆ ಗ್ರೀಕ್–ರೋಮನ್, ಮತ್ತೊಂದು ಕಡೆ ಆಧುನಿಕ ಇತಿಹಾಸ ಲೇಖನಗಳಿಗೆ ಮಧ್ಯೆ ಕೊಂಡಿಯಾಗಿ ನಿಂತು ಚರಿತ್ರ ರಚನೆಯನ್ನು ಮುಂದುವರಿಸಿದವರು ಅರೇಬಿಯಾ ದೇಶಸ್ಥರಾಗಿದ್ದ ಅರಬ್ಬಿಯವರು. ಕ್ರೈಸ್ತಮತೀಯ ಪಂಡಿತರಂತೆ ಅವರೂ ಸಹ ದೈವಿಕ ಸಂಕಲ್ಪ ಶಕ್ತಿಯನ್ನು ನಂಬಿದರೂ, ಅವರಿಬ್ಬರ ಇತಿಹಾಸ ಲೇಖನ ಕಲೆಯಲ್ಲಿ ಭೇದವಿದೆ. ಇಸ್ಲಾಂ ಧರ್ಮಕ್ಕೆ ವ್ಯವಸ್ಥಿತ ಚರ್ಚ್ ಇಲ್ಲ; ಅದು ಬ್ರಹ್ಮಚರ್ಯೆ ಹಾಗೂ ಐಹಿಕ ಜೀವನ ತ್ಯಾಗವನ್ನು ಎತ್ತಿಹಿಡಿಯುವುದಿಲ್ಲ. ಅದರ ಪ್ರಕಾರ, ಮನುಷ್ಯನಿಗೂ ಹಾಗೂ ಭಗವಂತನಿಗೂ ಸಂಬಂಧವನ್ನು ಕಲ್ಪಿಸುವ ಮಾಧ್ಯಮವೆಂದರೆ ಧರ್ಮನಿಷ್ಠೆ, ಕೆಲವು ಕೆಲಸಗಳು ಒಳ್ಳೆಯದಾಗುವುದರಿಂದ ಅವುಗಳನ್ನು ಮಾಡಲೇಬೇಕು ಎಂಬ ತತ್ತ್ವವನ್ನು ಅರಿತು, ಒಪ್ಪಿ, ಅನುಸರಿಸುವುದರಿಂದ ಒಬ್ಬ ಮುಸ್ಲಿಮನಿಗೆ ವಿಮೋಚನೆ ಸಿಗುತ್ತದೆ. ಈ ಮೂಲಭೂತ ಜೀವನ ದರ್ಶನವು ಅರಬ್ಬಿಯವರ ಇತಿಹಾಸ ಲೇಖನ ಕಲೆಯ ಬಗೆಯನ್ನು ನಿರ್ಧರಿಸಿತು. ಅವರು ವೈಚಾರಿಕತೆಯ ಮೇಲೆ ಆಧಾರಿತವಾಗಿದ್ದ ಗ್ರೀಕ್ ಸಂಪ್ರದಾಯಗಳ ಕಡೆಗೆ ಹೆಚ್ಚು ಒಲವನ್ನು ತೋರಿದರು.

ಇತಿಹಾಸಲೇಖನ ಕಲೆಯು ಅರಬ್ಬಿಯವರು ಬೆಳೆಸಿದ ಮೊಟ್ಟಮೊದಲ ಶಾಸ್ತ್ರಗಳಲ್ಲಿ ಒಂದಾಗಿದ್ದಿತು. ಇಸ್ಲಾಂಗೆ ಪೂರ್ವದ ಕಾಲದಲ್ಲಿನ ಸಾಧು ಸಂತರ ಜೀವನ ಕಥಾಸಂಗ್ರಹ, ಪುರಾಣ ಕಥೆ ಮತ್ತು ಐತಿಹ್ಯಗಳಲ್ಲಿ ಮತ್ತು ಆದಿವಾಸಿ ತಂಡಗಳ ನಡುವೆ ನಡೆಯುತ್ತಿದ್ದ ಯುದ್ಧಗಳು ಹಾಘೂ ಹೊಸ ಯುಗಾರಂಭ ಘಟನೆಗಳಲ್ಲಿ ಅರಬ್ಬಿಯವರಿಗಿದ್ದ ಆಸಕ್ತಿ, ಕಲೀಫರಿಗಿದ್ದ ಹಿಂದಿನ ಪ್ರಭುಗಳ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಬಯಕೆ, ಮಹಮ್ಮದ್ ಪೈಗಂಬರ್ ಹಾಗೂ ಅವನ ಅನುಯಾಯಿಗಳಿಗೆ ಸಂಬಂಧಿಸಿದ ಸಂಪ್ರದಾಯಗಳನ್ನು ಸಂಗ್ರಹಿಸುವುದರಲ್ಲಿ ಇಸ್ಲಾಂ ಧರ್ಮದ ಅನುಯಾಯಿಗಳಿಗಿದ್ದ ಅತ್ಯಾಸಕ್ತಿ, ರಾಜ್ಯದ ಕೋಶಾಗಾರದಿಂದ ಪ್ರತಿ ಅರಬ್ಬಿಯವನಿಗೂ ಕೊಡಬೇಕಾಗಿದ್ದ ವೇತನವನ್ನು ನಿಗದಿಪಡಿಸುವುದಕ್ಕಾಗಿ ಅವನ ವಂಶವೃಕ್ಷವನ್ನು ಮತ್ತು ಪೈಗಂಬರ್‌ನೊಂದಿಗೆ ಅವನಿಗಿದ್ದ ಸಂಬಂಧವನ್ನು ನಿರ್ಧರಿಸುವ ಅವಶ್ಯಕತೆ, ಅರಬ್ಬಿ ಪದ್ಯಗಳ ಉದ್ಧೃತ ಭಾಗಗಳಲ್ಲಿ ನೀಡಲಾಗಿರುವ ಸ್ಪಷ್ಟೀಕರಣ, ಧಾರ್ಮಿಕ ಗ್ರಂಥಗಳಲ್ಲಿ ಸೂಚಿಸಲಾದ ವ್ಯಕ್ತಿ ಹಾಗೂ ಸ್ಥಳಗಳನ್ನು ಗುರುತಿಸುವುದರಲ್ಲಿನ ಆಸಕ್ತಿ ಮುಂತಾದ ಅಂಶಗಳು ಐತಿಹಾಸಿಕ ಸಂಶೋಧನೆ ಹಾಗೂ ರಚನೆಗೆ ಹಾದಿಯನ್ನು ಸುಗಮಪಡಿಸಿದುವು. ಈ ಇತಿಹಾಸ ಲೇಖನ ಕಲೆಗೆ ವಾಚಿಕವಾಗಿ ವರ್ಗಾಯಿಸಲಾದ ಇಸ್ಲಾಂ ಪೂರ್ವ ಕಾಲದ ಕಥೆಗಳು, ಮಹಮ್ಮದ್ ಪೈಗಂಬರ್ ಹಾಗೂ ಅವನ ಸಹಪಾಠಿಗಳ ಜೀವನ ಹಾಗೂ ಹೋರಾಟಗಳಿಗೆ ಸಂಬಂಧಿಸಿದ ವಾಚಿಕ ಸಂಪ್ರದಾಯಗಳು, ಸೇನೆಯ ಹೆಸರುಪಟ್ಟಿಗಳಾಗಿ ಬಳಸಲಾದ ವಂಶಾವಳಿಯ ಪಟ್ಟಿಗಳು, ಲಾವಣಿಗಳು ಮುಂತಾದ ಪದ್ಯ ರಚನೆಗಳು, ಕೊರಾನು ಮತ್ತು ಇತರ ದೇವತಾಶಾಸ್ತ್ರೀಯ ಗ್ರಂಥಗಳು ಇತ್ಯಾದಿಗಳು ಮೂಲಾಧಾರವಾಗಿದ್ದುವು.

8ನೆಯ ಶತಮಾನದ ಕೊನೆಯ ಭಾಗ ಮತ್ತು 9ನೆಯ ಶತಮಾನದ ಆದಿಭಾಗವು ಅಬ್ಬಾಸಿಡ್ ಇತಿಹಾಸಲೇಖನ ಕಲೆಯ ಉಜ್ವಲ ಯುಗವಾಗಿದ್ದುವು. ಪರ್ಷಿಯಾದವನಾಗಿದ್ದ ಅಲ್‌ಬದೂರಿ ಅನೇಕ ನಗರಗಳ ಮೇಲೆ ಆಗಿದ್ದ ವಿವಿಧ ಬಗೆಯ ಆಕ್ರಮಣಗಳನ್ನು ಕುರಿತ ಕಥೆಗಳನ್ನು ಸಂಯೋಜಿಸಿದನು. ಇಸ್ಲಾಂ ಸಿರಿಯಾ, ಮೆಸಪಟೋಮಿಯ, ಆರ್ಮಿನಿಯಾ, ಈಜಿಪ್ಟ್, ಸಿಪ್ರಸ್, ಆಫ್ರಿಕಾ, ಸ್ಪೆಯ್ನ್ ಮುಂತಾದ ದೇಶಗಳ ಮೇಲೆ ಆಕ್ರಮಣ ನಡೆಸಿ ವಿಶಾಲ ಪ್ರದೇಶವನ್ನು ಆಕ್ರಮಿಸಿಕೊಂಡ ವಿಷಯವನ್ನು ವಿಶದಪಡಿಸಿದ ಇನ್ನೊಬ್ಬ ಪ್ರಸಿದ್ಧ ಚರಿತ್ರಲೇಖಕ ಅಲ್‌ಮದೈನಿ. ತಬರಿಯ ಕಾಲದ ವೇಳೆಗೆ ಸನ್ನಿವೇಶವು ಕ್ರಮಬದ್ಧವಾಗಿದ್ದ ಐತಿಹಾಸಿಕ ರಚನೆಗೆ ಸೂಕ್ತವಗಿದ್ದಿತು. ಕಾಲಾನುಕ್ರಮದಲ್ಲಿ ಘಟನೆಗಳನ್ನು ಒಟ್ಟಿಗೆ ಸೇರಿಸಿಡುವ ಭಾವನೆಯು ಸಂಪೂರ್ಣವಾದ ಬಖೈರುಗಳ ಮಾಲೆಯನ್ನು ತಯಾರಿಸುವ ಯೋಜನೆಯಾಗಿ ಬೆಳೆಯಿತು. ಪಹಲ್ವಿ ಖುದೈ–ನಾಮ (ರಾಜರುಗಳ ಗ್ರಂಥ)ವು ಅದಕ್ಕೆ ಬೇಕಾಗಿದ್ದ ಮಾದರಿಯನ್ನು ಒದಗಿಸಿತು. ಮುಸ್ಲಿಂ ಶಕೆಗೆ ಸೇರಿದ ವರ್ಷಗಳಲ್ಲಿ ಸಂಭವಿಸಿದ್ದ ಘಟನೆಗಳನ್ನು ಕಾಲಾನುಕ್ರಮವಾಗಿ ಪಟ್ಟಿ ಮಾಡಿರುವ ತಬರಿಯು ರಚಿಸಿದ ತಾರೀಖ್ ಎಂಬ ಬಖೈರು ಮೊಟ್ಟಮೊದಲ ಸಾರ್ವತ್ರಿಕ ಚರಿತ್ರೆಯಾಯಿತು. ಇದೇ ಲೇಖನ ವಿಧಾನವನ್ನು ಇತರರು ಅನುಸರಿಸಿದರು. ಹೀಗೆ ಸಂಪ್ರದಾಯವಾದಿಯಾಗಿದ್ದ ಮುಸ್ಲಿಂ ಚರಿತ್ರಲೇಖಕರು ಐತಿಹಾಸಿಕ ಅಧಿಲೇಖನಗಳ ತಯಾರಕನಾದನು. ಅಲ್‌ಮಸೂದಿಯು ನೂತನ ವಿಧಾನವನ್ನು ಜಾರಿಗೆ ತಂದನು. ಅವನು ಘಟನೆಗಳನ್ನು ವರ್ಷಗಳಿಗೆ ಅನುಗುಣವಾಗಿ ಒಂದುಗೂಡಿಸುವುದಕ್ಕೆ ಬದಲಾಗಿ ದೊರೆಗಳು, ಆಳುವ ಸಂತತಿಗಳು ಹಾಗೂ ವಿಷಯಗಳಿಗೆ ತಕ್ಕದಾಗಿ ವರ್ಗೀಕರಿಸಲು ಯತ್ನಿಸಿದನು. ಎಲ್ಲಾ ಅರಬ್ಬೀ ಇತಿಹಾಸಲೇಖಕರಿಗೆ ರಾಜಕೀಯ ಚರಿತ್ರೆಯು ಎಲ್ಲಕ್ಕಿಂತ ಮೇಲಾಗಿದ್ದಿತು. ಆದ್ದರಿಂದ ಅವರು ಪ್ರಾಸಂಗಿಕವಾಗಿ

ಜೀವನದ ಆರ್ಥಿಕ ಹಾಗೂ ಸಾಮಾಜಿಕ ಮುಖಗಳನ್ನು ಕುರಿತು ಸ್ವಲ್ಪ ಮಾತ್ರ ಪ್ರಸ್ತಾಪಿಸಿದರು. ಅಲ್ಲಾ ನಿರಂತರವಾಗಿ ಹಸ್ತಕ್ಷೇಪ ಮಾಡುತ್ತಲೇ ಇರುವುದರಿಂದ ಐತಿಹಾಸಿಕ ಘಟನೆಗಳ ಕಾರಣ ಹಾಗೂ ಪರಿಣಾಮ ದೈವಾಧೀನವಾದುವು ಎಂಬುದಾಗಿ ಅವರು ನಂಬಿದ್ದರು. ಜಗದ್ವಿಖ್ಯಾತ ಚರಿತ್ರಲೇಖಕ ಆಲ್ಬರೂನಿ ಪ್ರಾಚೀನ ಪೂರ್ವದೇಶಗಳ ಪುರಾತನ ಸಂಪ್ರದಾಯ ಹಾಗೂ ನಡೆನುಡಿಗಳ ಬಗ್ಗೆ ಐತಿಹಾಸಿಕ ವಿಮರ್ಶಾ ದೃಷ್ಟಿಯಿಂದ ಅನ್ವೇಷಣೆ ನಡೆಸಿದನು.ವಿಷಯ ಹಾಗೂ ವಿಧಾನದ ವಿಚಾರದಲ್ಲಿ ಅವನ ತಹಕೀಕಿ–ಹಿಂದ್ ಕೃತಿಯು ಅರಬ್ಬೀ ಸಾಹಿತ್ಯದಲ್ಲೇ ಅಸಮಾನವಾದುದು. ಮುಸ್ಲಿಮರು ಸ್ಪೇಯ್ನ್ ದೇಶವನ್ನು ಆಕ್ರಮಿಸಿಕೊಂಡಾಗ, ಕಾರ್ಡೊವಾದಲ್ಲಿ ಸ್ಪಾನಿಷ್–ಅರಬ್ ಚರಿತ್ರಲೇಖಕರ ಪಂಥವೊಂದು ತಲೆಎತ್ತಿಕೊಂಡಿತು. ಅರಬ್ಬಿಯವರು ತಯಾರಿಸಿದ ಅತ್ಯಂತ ಗಮನಾರ್ಹ ರಚನೆ ಎಂದರೆ ಪ್ರವಾಸಿ ಸಾಹಿತ್ಯ. ಅವರು ಮಧ್ಯ ಆಫ್ರಿಕಾದ ಒಳಹೊಕ್ಕು ರಚಿಸಿದ ನೀಗ್ರೋಗಳ ಇತಿಹಾಸ ಅವರ ಮಹತ್ಸಾಧನೆ.

ಈ ಇತಿಹಾಸಲೇಖನ ಕಲಾಕ್ಷೇತ್ರಕ್ಕೆ ಕೊಡುಗೆಯನ್ನು ನೀಡಿದ ವಿದ್ವಾಂಸರನ್ನು ರಾಜಾಸ್ಥಾನದ ಚರಿತ್ರ ಲೇಖಕರು ಮತ್ತು ಹವ್ಯಾಸಿ ಹಾಗೂ ವೃತ್ತಿಪರ ಇತಿಹಾಸಕಾರರು ಎಂಬುದಾಗಿ ವರ್ಗೀಕರಿಸ–ಬಹುದು. ಸರ್ಕಾರಿ ಅಧಿಕಾರಿಗಳಾಗಿದ್ದ ಮಿಸ್ಕೌತ್ ಹಾಗೂ ಹಿಲಾಲಸ್ ಸಾಬಿ 10ನೆಯ ಶತಮಾನದ ಇತಿಹಾಸಕಾರರಾಗಿದ್ದರು ಮತ್ತು ಉನ್ನತ ಅಧಿಕಾರಿಯಾಗಿದ್ದ ಇಮಾದ್–ಅನ್‌ದಿನ್ ಅಲ್–ಇಸಾಫಹಾಸಾನ ಕೃತಿಯು ದಾಖಲೆ ಹಾಗೂ ದಿನಚರಿ ಪುಸ್ತಕಗಳನ್ನು ಪರಾಮರ್ಶಿಸಿ ಸಿದ್ಧಪಡಿಸಿದ ಐತಿಹಾಸಿಕ ಬಖೈರುಗಳಿಗೆ ಪ್ರಮುಖವಾಗಿದ್ದ ಉದಾಹರಣೆಯಾಯಿತು. ಐತಿಹಾಸಿಕ ಕೃತಿಗಳನ್ನು ಹಾಗೂ ಬಖೈರುಗಳನ್ನು ಬರೆದ ದೊರೆಗಳನ್ನು ಹವ್ಯಾಸಿ ಚರಿತ್ರಲೇಖಕರೆಂಬುದಾಗಿ ಕರೆಯಬಹುದು. ಅಲ್–ಮಸೂದಿ ಹಾಗೂ ಅಲ್–ಮಕ್ರಿಜೀ ಮುಂತಾದವರು ಐತಿಹಾಸಿಕ ಕೃತಿಗಳ ರಚನೆಗಾಗಿ ತಮ್ಮ ಜೀವನ್ನೇ ಮುಡಿಪಾಗಿಟ್ಟರು.

ಒಟ್ಟಿನಲ್ಲಿ ಅರಬ್ಬಿಯವರು ಇತಿಹಾಸಲೇಖನ ಕಲೆಗೆ ಗಣನೀಯವಾಗಿದ್ದ ಕೊಡುಗೆಗಳನ್ನು ಕೊಟ್ಟರು. ಯೆಹೂದ್ಯರಂತೆ ಅವರಲ್ಲೂ ಸಹ ಇತಿಹಾಸ ಪ್ರಜ್ಞೆ ಪ್ರಬಲವಾಗಿದ್ದಿತು. ರೋಮನ್ ಜನರಂತೆ ಅವರೂ ಸಹ ಏಷ್ಯಾ, ಯೂರೋಪು ಹಾಗೂ ಆಫ್ರಿಕಾ ಖಂಡಗಳಲ್ಲಿ ಹರಡಿದ್ದ ವಿಸ್ತಾರವಾದ ಚಕ್ರಾಧಿಪತ್ಯವನ್ನು ಕಟ್ಟಿದರು. ಆದ್ದರಿಂದ ಅವರೂ ಸಹ ಇತಿಹಾಸ ರಚನೆಗೆ ಮೊದಲೇ ಚರಿತ್ರಾರ್ಹ ಸಾಧನೆಳನ್ನು ಗಳಿಸಿದ್ದರು. ಅವರು ವಿವಿಧ ಪ್ರಮಾಣಗಳ ಸರಣಿಯ ಮೂಲಕ ಮೊದಲಿನಿಂದ ಹರಿದು ಬಂದ ವಿಚಾರವಾಹಿನಿಗಳನ್ನು ಬಳಸಿ ತಾವು ಉಪಯೋಗಿಸಿದ ಮೂಲಾಧಾರಗಳ ಸತ್ಯಾಸತ್ಯತೆಗಳನ್ನು ಪರಿಶೀಲಿಸುತ್ತಿದ್ದರು; ನಿರ್ದಿಷ್ಟ ಘಟನೆಗಳನ್ನು ವಿವರಿಸುವಾಗ ಮೂಲಪ್ರತ್ಯಕ್ಷದರ್ಶಿ ವೃತ್ತಾಂತದೊಂದಿಗೆ ಸೇರಿಸಲಾಗಿದ್ದ ಮಧ್ಯದ ಎಲ್ಲಾ ಪ್ರಮಾಣಗಳನ್ನೂ ಅತ್ಯಂತ ಜಾಗರೂಕತೆಯಿಂದ ಪರೀಕ್ಷಿಸುತ್ತಿದ್ದರು. ಆದರೂ ಅನಂತರದ ಕಾಲಗಳಲ್ಲಿ ಪತ್ರಾಗಾರಗಳ ಕಾಗದ ಪತ್ರಗಳ ಪರಿಶೀಲನೆ, ಶಾಸನ, ನಾಣ್ಯ ಮತ್ತಿತರ ಐತಿಹಾಸಿಕ ಪ್ರಮಾಣಗಳ ಅಧ್ಯಯನ ಮುಂತಾದ ವಿಧಾನಗಳನ್ನು ವಿರಳವಾಗಿ ಅನುಸರಿಸಲಾಗುತ್ತಿದ್ದಿತು. ಪರ್ಷಿಯಾದ ಪಂಡಿತ ಮಹಮ್ಮದ್ ಬಿನ್ ಇಹ್ರಾಹಿನಲೀಜೀ ಮಧ್ಯಕಾಲದ ಮುಸ್ಲಿಂ ಇತಿಹಾಸ ಲೇಖನ ಕಲೆಯ ವಿಧಾನಗಳನ್ನು ಕುರಿತು ತಾನು ಅರಬ್ಬೀ ಭಾಷೆಯಲ್ಲಿ ರಚಿಸಿದ ಕೃತಿಯಲ್ಲಿ ಚರ್ಚಿಸಿದ್ದಾನೆ. ಈಜಿಪ್ಟಿನಲ್ಲಿ ಆಲ್ ಕಾಪಿಯಾಜೀ ಮತ್ತು ಆನ್ ಸಖವಿ ಇಸ್ಲಾಮಿನ ಲೇಖನ ಕಲೆಯ ವಿಧಾನ, ಸಮಸ್ಯೆ ಹಾಗೂ ಚರಿತ್ರೆಯ ಬಗ್ಗೆ ದೊಡ್ಡ ಕೃತಿಗಳನ್ನು ರಚಿಸಿದರು.

ಮುಸ್ಲಿಂ ಇತಿಹಾಸ ಲೇಖಕರು ಹಿಂದಿನಿಂದ ಬಂದಿದ್ದ ಕ್ರಮಗಳನ್ನೇ ಅನುಸರಿಸಿ ಕೃತಿಗಳನ್ನು ರಚಿಸುತ್ತಾ ಬಂದರು. ಮ್ಯಾಮೆಲೂಕ್ ಕಾಲದಲ್ಲಿದ್ದ ಇಬ್ನೆ–ತಗರಿ–ಬರ್ದಿ ಮುಂತಾದ ಚರಿತ್ರ ಲೇಖಕರೂ ಸಹ ಸಾಂಪ್ರದಯಿಕ ವಿಧಾನಗಳನ್ನೇ ಬಳಸಿದರು. ಆದರೂ ಕೆಲವು ಇತಿಹಾಸಕಾರರು ಇದಕ್ಕೆ ಅಪವಾದವಾಗಿದ್ದರು. ಕಾರಣ ಅವರು ಹಿಂದಿನವರು ತುಳಿದಿದ್ದ ಹಾದಿಯನ್ನು ಬಿಟ್ಟು ಅಂದರೆ ಹಳೆಯ ಸಾಂಪ್ರದಾಯಿಕ ಕ್ರಮಗಳನ್ನು ತ್ಯಜಿಸಿ, ವಿಷಯಗಳನ್ನು ಹೊಸ ರೀತಿಯಲ್ಲಿ ಮತ್ತು ವ್ಯಾಪಕವಾಗಿದ್ದ ಹಾಗೂ ವಸ್ತುನಿಷ್ಠವಾಗಿದ್ದ ಕ್ರಮದಲ್ಲಿ ವೀಕ್ಷಿಸಿ, ನೂತನ ವಿವರಣೆಗಳನ್ನು ನೀಡಿದರು. ಅವನು ಇಸ್ಲಾಮಿನ ದೇವತಾಶಾಸ್ತ್ರೀಯ ವಿವರಗಳ ಸಪ್ರಮಾಣತೆಯನ್ನು ಒಪ್ಪಿಕೊಂಡರೂ, ಇತಿಹಾಸವನ್ನು ಶುದ್ಧಾಂಗವಾಗಿ ಮಾನವನಿಗೆ ಸಂಬಂಧಿಸಿದ ಹಾಗೂ ಸಾಮಾಜಿಕವಾದ ವಿಷಯವಾಗಿ ಎಣಿಸಿದರು. ಅಲ್ ಮುಕ್ರಿಜಿಹೌಕಲ್, ಕೈರೋ ಪ್ರದಶದ ಸ್ವಾಭಾವಿಕ ಲಕ್ಷಣಗಳನ್ನು ವರ್ಣಿಸಿದನು ಮತ್ತು ಹಳೆಯ ನಡೆನುಡಿಗಳನ್ನು ವಿಶ್ಲೇಷಿಸಿದನು. ಮಿಸ್ಕೌತ್ ಇತಿಹಾಸದಲ್ಲಿ ಅಲೌಕಿಕ ಶಕ್ತಿಗಳ ಹಸ್ತಕ್ಷೇಪದ ಕಾರಣ ಉಂಟಾದ ಘಟನೆಗಳು ಎಂಬುದಾಗಿ ಹೇಳಲಾಗಿದ್ದ ಸಂಗತಿಗಳ ಅಧ್ಯಯನದಿಂದ ವಿದ್ಯಾರ್ಥಿಗೆ ಉಪಯುಕ್ತವಾಗಿದ್ದ ಅನುಭವ ಸಿಗುತ್ತದೆ ಎಂಬುದನ್ನು ಒಪ್ಪಲಿಲ್ಲ. ಈ ತರಹದ ನೂತನ ದೃಷ್ಟಿಕೋನದಿಂದ ವಿಚಾರ ಮಾಡಿದ ವಿದ್ವಾಂಸರಲ್ಲಿ ಮತ್ತು ಮೊಸೂದಿ, ಇಬ್ನೆ–ಹಕ್ಕಲ್, ಇಬ್ನೆ–ಬತೂಕ ಮುಂತಾದ ಮುಖ್ಯ ಇತಿಹಾಸಕಾರರ ಪಂಕ್ತಿಯಲ್ಲಿ ಅತ್ಯುನ್ನತ ಆಸನವನ್ನು ಅಲಂಕರಿಸಿದ್ದವನು ಇಬ್ನೆ–ಖಲ್ದೂನ್.

## 11.6.2 ಇಬ್ನೆ–ಖಲ್ದೂನನ ಕೊಡುಗೆಗಳು

ಇಬ್ನೆ–ಖಲ್ದೂನನ ಜಗತ್ತಿನ ಇತಿಹಾಸದ ಪ್ರಥಮ ಭಾಗದಲ್ಲಿ ಇಸ್ಲಾಮಿಗೆ ಹಿಂದಿನ ಸಾರ್ವತ್ರಿಕ ಚರಿತ್ರೆಯ ರೂಪುರೇಖೆಯನ್ನು ಮತ್ತು ಅವನ ಕಾಲದವರೆಗಿನ ಮುಸ್ಲಿಂ ಆಳುವ ಸಂತತಿಗಳ ಇತಿಹಾಸದ ನಿರೂಪಣೆಯನ್ನು ಕಾಣಬಹುದು. ಮಾನವನ ಮೇಲೆ ನಾಗರಿಕತೆಯ ಪ್ರಭಾವವನ್ನು ಕುರಿತು ವಿಚಾರ ಮಾಡುವುದರ ಮೂಲಕ ಅವನು ಸುಮಾರು ಶತಮಾನಗಳ ಮೊದಲೇ ಬಕೆಲನ ವಿಚಾರಧಾರೆಯನ್ನು ಮುಂಭಾವಿಸಿದನು. ಆ ಭಾಗದಲ್ಲಿ ಬರ್‌ಬರರ ಇತಿಹಾಸ ಮುಖ್ಯವಾದುದು. ಕಾರಣ ಆ ಕೃತಿಯೇ ಉತ್ತರ ಆಫ್ರಿಕಾದ ಮುಸ್ಲಿಮರ ಬಗ್ಗೆ ನಂಬಲರ್ಹವಾದ ಜ್ಞಾನವನ್ನು ಒದಗಿಸುವ ಏಕೈಕ ಮೂಲಾಧಾರವಾಗಿದೆ. ಅದು ಸಂಪೂರ್ಣವಾಗಿ ಘಟನೆಗಳ ನೀರಸವೃತ್ತಾಂತವಾದ ರಾಜಕೀಯ ಇತಿಹಾಸವಾಗಿದ್ದರೂ, ಅಲ್ಲಿ ಅಳವಡಿಸಲಾಗಿರುವ ವಿಮರ್ಶಾತ್ಮಕ ದೃಷ್ಟಿಕೋನ ಮತ್ತು ಸಾಂಪ್ರದಾಯಿಕವಾಗಿದ್ದ ಕಾಲಾನುಕ್ರಮ ವಿಧಾನವನ್ನು ಬಿಟ್ಟು ಇತಿಹಾಸವನ್ನು ರಾಷ್ಟ್ರ ಹಾಗೂ ಆಳುವ ಸಂತತಿಗಳಿಗೆ ಅನುಸಾರವಾಗಿ ವಿಭಾಗಿಸಿ ವಿವರಿಸುವ ಕ್ರಮ ಅತ್ಯಂತ ಗಣನೀಯವಾದುದಾಗಿದೆ.

ಇಬ್ನೆ–ಖಲ್ದೂನನ ಕೃತಿಯಲ್ಲಿ ಅತ್ಯಂತ ಗಮನಾರ್ಹವಾಗಿರುವ ವಿಭಾಗವೆಂದರೆ ಮುಖದ್ದಿಮಾ ಎಂಬುದಾಗಿ ಕರೆಯಲಾದ ಪೀಠಿಕೆ. ಅದರಲ್ಲಿ ಅವನು ಅತ್ಯದ್ಭುತವಾಗಿದ್ದ ಸ್ವಂತಿಕೆ ಹಾಗೂ ಸೂಕ್ಷ್ಮ ಪರಿಜ್ಞಾನದಿಂದ ಇತಿಹಾಸ ಮಾದರಿಯನ್ನು ಸ್ಪಷ್ಟಪಡಿಸಲು ಪ್ರಯತ್ನಿಸಿದ್ದಾನೆ: ಅತ್ಯಂತ ವಿಮರ್ಶಾತ್ಮಕವಾಗಿದ್ದ ರೀತಿಯಲ್ಲಿ ಐತಿಹಾಸಿಕ ವಾಸ್ತವಾಂಶಗಳ ಸ್ವರೂಪ, ಅವುಗಳ ಪರಸ್ಪರ ಸಂಬಂಧಗಳು, ಪ್ರವೃತ್ತಿ ಹಾಗೂ

ಸಮಸ್ಯೆ, ಅವುಗಳ ನಿಯತತೆ ಹಾಗೂ ಪರಿವರ್ತನೆಗಳನ್ನು ವಿವರಿಸಿದ್ದಾನೆ; ಹೇಗೆ ಜನರು ಜೀವನವನ್ನು ನಡೆಸುತ್ತಾರೆ; ಅವರ ಆಸೆ, ಹಾರೈಕೆ ಹಾಗೂ ಬಯಕೆಗಳಾವುವು; ಮತ್ತು ಹೇಗೆ ಸಮಾಜಗಳು ತಲೆ ಎತ್ತಿಕೊಂಡು ಬೆಳೆಯುತ್ತವೆ ಮತ್ತು ಅವನತಿಯನ್ನು ಹೊಂದುತ್ತವೆ ಎಂಬುದನ್ನು ಚರ್ಚಿಸಿದ್ದಾನೆ ಮತ್ತು ಸಾಮಾಜಿಕ ಸಂಘಟನೆ ಹಾಗೂ ಅದರ ಆಧಾರ, ಸಮೂಹದ ಸ್ವರೂಪ ಹಾಗೂ ವ್ಯಕ್ತಿಗಳ ಸ್ವಭಾವದ ಮೇಲೆ ವಾಯುಗುಣ ಹಾಗೂ ವ್ಯಕ್ತಿಗಳ ಪ್ರಭಾವ, ಸಾಮಾಜಿಕ ಬದಲಾವಣೆಯ ನಿಯಮ, ರಾಜಕೀಯ ಭದ್ರತೆ, ಆರ್ಥಿಕ ಹಾಗೂ ಸಾಮಾಜಿಕ ಪ್ರಭಾವ ಇತ್ಯಾದಿ ವಿಷಯಗಳನ್ನು ಪರಿಶೀಲಿಸಿದ್ದಾನೆ. ವೈಜ್ಞಾನಿಕ ದೃಷ್ಟಿಕೋನದಿಂದ ಮಾನವ ಸಮಾಜಗಳ ಉದಯಾಸ್ತಮಗಳ ಬಗ್ಗೆ ವಿಚಾರ ಮಾಡಿ ಅವನು ಈ ವಿಷಯಗಳು ಕೆಲವು ನಿಯಮಗಳಿಗನುಸಾರವಾಗಿ ಮುಂದುವರಿಯುತ್ತವೆ ಮತ್ತು ಅನುಭವಾತ್ಮಕ ಕ್ರಮದಲ್ಲಿ ಆ ನಿಯಮಗಳನ್ನು ಕಂಡುಹಿಡಿಯಬಹುದು ಎಂಬುದಾಗಿ ವಾದಿಸಿದನು.

ವಾಸ್ತವದಲ್ಲಿ ಇಬ್ನೆ–ಖಲ್ದೂನನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದನು. ಅವನು ಸಮಾಜದ ಸ್ವರೂಪ ಹಾಗೂ ಸಾಮಾಜಿಕ ಬದಲಾವಣೆಯ ಬಗ್ಗೆ ನಡೆಸಿದ ಅಧ್ಯಯನವು ಅವನು ನೂತನ ವಿಜ್ಞಾನವೊಂದನ್ನು ಬೆಳೆಸುವಂತೆ ಪ್ರೋತ್ಸಾಹಿಸಿತು. ಮಾನವ ಸಮಾಜವೇ ಅದರ ಅಧ್ಯಯನ ವಿಷಯ ಮತ್ತು ಸಮಾಜದಲ್ಲಿ ಒಂದರ ಹಿಂದೆ ಮತ್ತೊಂದರಂತೆ ಅನುಸರಿಸಿ ಬರುವ ಸಾಮಾಜಿಕ ಪರಿವರ್ತನೆಗಳೇ ಅದರ ಸಮಸ್ಯೆಗಳು. ಇತಿಹಾಸವನ್ನು ಸಮರ್ಪಕವಾಗಿ ರಚಿಸಬೇಕಾದರೆ, ಐತಿಹಾಸಿಕ ಘಟನೆಗಳ ಸ್ವರೂಪ ಹಾಗೂ ಕಾರಣಗಳು, ಅವುಗಳ ಸ್ಥಿರತೆ ಹಾಗೂ ಪರಿವರ್ತನೆ ಅವುಗಳ ಸಮರೂಪತೆ ಹಾಗೂ ವೈವಿಧ್ಯದ ಬಗ್ಗೆ ಸರಿಯಾದ ಅರಿವಿರಬೇಕು ಎಂಬುದನ್ನು ಸ್ಪಷ್ಟಪಡಿಸುವುದೇ ಅವನ ಉದ್ದೇಶ. ಪಕ್ಷಾಭಿಮಾನ, ಮೂಲಾಧಾರಗಳಲ್ಲಿ ಅಧಿಕ ವಿಶ್ವಾಸ, ದಾಖಲೆಗಳ ಮೂಲೋದ್ದೇಶಗಳನ್ನು ಮತ್ತು ಸರಿಯಾದ ಸಂದರ್ಭಕ್ಕೆ ಅನುಸಾರವಾಗಿ ಘಟನೆಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಬೇಕಾದ ಸಾಮರ್ಥ್ಯದ ಅಭಾವ, ವಿಚಾರಕ್ಕೆಡೆಗೊಡದ ಅತಿ ನಂಬಿಕೆ, ಪ್ರಬಲ ಹಾಗೂ ಪ್ರಭಾವಶಾಲಿ ವ್ಯಕ್ತಿಗಳನ್ನು ಸಂತಸಪಡಿಸಿ ಅವರ ವಿಶ್ವಾಸವನ್ನು ಗಳಿಸಬೇಕೆಂಬ ಆಸಕ್ತಿ ಮುಂತಾದ ಕಾರಣಗಳಿಂದ ಐತಿಹಾಸಿಕ ವೃತ್ತಾಂತಗಳಲ್ಲಿ ಹೆಚ್ಚಾಗಿ ದೋಷಗಳು ಉಂಟಾಗುತ್ತವೆ. ಸಂಸ್ಕೃತಿಯ ಸ್ವರೂಪ ಹಾಗೂ ಕ್ರಮಗಳ ಬಗ್ಗೆ ಇರುವ ಅಜ್ಞಾನವು ತಪ್ಪುಗಳನ್ನು ಉಂಟು ಮಾಡುವ ಅಂಶಗಳಲ್ಲಿ ಎಲ್ಲಕ್ಕಿಂತ ಅತ್ಯಂತ ಮುಖ್ಯವಾದುದು.

ಸಾಮಾನ್ಯ ಮಾನವಸಂಸ್ಕೃತಿಯನ್ನು ಕುರಿತ ವಿಭಾಗದಲ್ಲಿ ಇಬ್ನೆ–ಖಲ್ದೂನನು (1) ಮಾನವ ವ್ಯಕ್ತಿಗಳಿಗಿರುವ ಸಹವಾಸಿಗಳ ಒಡನಾಟದ ಅವಶ್ಯಕತೆ (2) ಭೂಮಿಯ ಮೇಲೆ ಸಂಸ್ಕೃತಿಯ ಪ್ರಸಾರ (3) ಸಂಸ್ಕೃತಿಗೆ ಭೌತಿಕ–ಭೌಗೋಳಿಕ ಆಧಾರ, ಸಮಶೀತೋಷ್ಣ ಹಾಗೂ ಅಸಮಶೀತೋಷ್ಣ ವಲಯಗಳು ಮತ್ತು ಮಾನವರ ಶಾರೀರಿಕ ಲಕ್ಷಣಗಳ ಮೇಲೆ ವಾಯುಗುಣದ ಪ್ರಭಾವ (4) ಮಾನವನ ನೈತಿಕ ಅಭ್ಯಾಸಗಳ ಮೇಲೆ ವಾಯುಗುಣದ ಪರಿಣಾಮ; (5) ಮಾನವ ವ್ಯಕ್ತಿಗಲ ಶರೀರ ಹಾಗೂ ಅಭ್ಯಾಸಗಳ ಮೇಲೆ ಆಹಾರದ ಸಮೃದ್ಧಿ ಹಾಗೂ ಅಭಾವದ ಕಾರಣ ಉಂಟಾಗುವ ಪ್ರಭಾದ ಮತ್ತು (6) ಸ್ವಾಭಾವಿಕ ಪ್ರವೃತ್ತಿ ಅಥವಾ ಸ್ವಪ್ರಯತ್ನದ ಕಾರಣ ಅಗೋಚರವಾದುದನ್ನು ವೀಕ್ಷಿಸಲು ಶಕ್ತರಾದ ವ್ಯಕ್ತಿಗಳ ವರ್ಗಗಳು ಎಂಬ ಆರು ತತ್ವಗಳನ್ನು ನಿರೂಪಿಸಿದ್ದಾನೆ ಅವನು ಈ ನೂತನ ವಿಜ್ಞಾನದ ಪ್ರಧಾನ ಅಧ್ಯಯನ ವಿಷಯವನ್ನು 5

ವಿಭಾಗಗಳಾಗಿ ವಿಂಗಡಿಸಿದ್ದಾನೆ: (1) ಆದಿವಾಸಿ ಸಂಸ್ಕೃತಿ ಮತ್ತು ಆ ಮಟ್ಟದಿಂದ ನಾಗರಿಕ ಸಂಸ್ಕೃತಿಯ ಹಂತಕ್ಕೆ ಆಗುವ ಪರಿವರ್ತನೆ (2) ರಾಜ್ಯ (3) ನಗರ (4) ವ್ಯಾವಹಾರಿಕ ಕಲೆಗಳು ಹಾಗೂ ಕಸಬುಗಳು ಮತ್ತು (5) ವಿಜ್ಞಾನಗಳು. ಅವನು ಈ ವಿಷಯಗಳನ್ನು ಉತ್ಪತ್ತಿಶಾಸ್ತ್ರ ಹಾಗೂ ಮೂಲ ಸಂಕಲ್ಪವಾದಾನುಸಾರವಾಗಿ ವಿಶ್ಲೇಷಣಾತ್ಮಕವಾಗಿ ಪರಿಶೀಲಿಸಿದನು. ಅವನು ತನ್ನ ಮುಖದ್ದಿಮಾದ ಪ್ರಥಮ ಪ್ರಧಾನ ಭಾಗದಲ್ಲಿ ಸಾಮಾನ್ಯ ಸಮಾಜಶಾಸ್ತ್ರ; ದ್ವಿತೀಯ ಹಾಗೂ ತೃತೀಯ ಪ್ರಧಾನ ಭಾಗಗಳಲ್ಲಿ ರಾಜ್ಯ ನೀತಿಯನ್ನು ಕುರಿತ ಸಮಾಜ ವಿಜ್ಞಾನ; ನಾಲ್ಕನೆಯ ಪ್ರಧಾನ ಭಾಗದಲ್ಲಿ ನಗರ ಜೀವನವನ್ನು ಕುರಿತು ಸಮಾಜಶಾಸ್ತ್ರ; ಐದನೆಯ ಪ್ರಧಾನ ಭಾಗದಲ್ಲಿ ಆರ್ಥಿಕ ಸಮಾಜ ವಿಜ್ಞಾನ ಮತ್ತು ಆರನೆಯ ಪ್ರಧಾನ ಭಾಗದಲ್ಲಿ ಜ್ಞಾನವನ್ನು ಕುರಿತ ಸಮಾಜಶಾಸ್ತ್ರದ ಸ್ಥೂಲ ನಿರೂಪಣೆಯನ್ನು ನೀಡಿದ್ದಾನೆ.

## 11.7 ಸಾರಾಂಶ

ಹೀಗೆ ಮಧ್ಯಯುಗದ ಇತಿಹಾಸ ಲೇಖನ ಕಲಾಕ್ಷೇತ್ರವು ಬೆಂಗಾಡಾಗಿರಲಿಲ್ಲ. ಸೇಯ್ಂಟ್ ಆಗಸ್ಟಿನ್ ಹಾಗೂ ಇಬ್ನೆ–ಖಲ್ದೂನನು ಇತಿಹಾಸಕ್ಷೇತ್ರಕ್ಕೆ ನೂತನ ಪರಿಣಾಮಗಳನ್ನು ಸೇರಿಸಿದರು ಮತ್ತು ಭಾವನಾರಂಗದಲ್ಲಿ ಉಂಟಾದ ಈ ಪರಿವರ್ತನೆಗಳು ಆಧುನಿಕ ಯುಗದ ಉದಯವನ್ನು ಘೋಷಿಸಿದುವು.

## 11.8 ಪ್ರಮುಖ ಪದಗಳು

1. ಹೆರೋಡೋಟಸ್: ಗ್ರೀಕ್ ಇತಿಹಾಸಕಾರ
2. ಕ್ಯಾಟೋ: ರೋಮನ್ ಇತಿಹಾಸ ಲೇಖಕರ ಪಿತಾಮಹ ಎಂದೇ ಖ್ಯಾತಿ

## 11.9 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಪ್ರಾಚೀನ ಗ್ರೀಸ್‌ನಲ್ಲಿ ಇತಿಹಾಸ ಲೇಖನ ಕಲೆಯ ಬೆಳವಣಿಗೆಯನ್ನು ಕುರಿತು ಬರೆಯಿರಿ.
2. ಇತಿಹಾಸ ಲೇಖನ ಕಲೆಯ ಬೆಳವಣಿಗೆಗೆ ಹೆರೋಡೊಟಸ್ ಮತ್ತು ಥೂಸಿಡೈಡಿಸರ ಕೊಡುಗೆ–ಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.
3. ಇತಿಹಾಸ ಲೇಖನ ಕಲೆಯ ಬೆಳವಣಿಗೆಗೆ ರೋಮಿನ ಇತಿಹಾಸಕಾರರ ಕೊಡುಗೆಗಳನ್ನು ವಿವರಿಸಿ.
4. ಇತಿಹಾಸ ಲೇಖನ ಕಲೆಯ ಬೆಳವಣಿಗೆಗೆ ಚೀನಾ ಮತ್ತು ಕ್ರೈಸ್ತ ಇತಿಹಾಕಾರರ ಕೊಡುಗೆಯನ್ನು ವಿವರಿಸಿ.
5. ಪಶ್ಚಿಮ ಏಷ್ಯಾದ ಇತಿಹಾಸಕಾರರಾದ ಇಬ್ನ್–ಖಲ್ದೂನ್‌ನ ಕೊಡುಗೆಗಳನ್ನು ವಿವರಿಸಿ.

## 11.10 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 11.2 ನೋಡಿ
2. ವಿಭಾಗ 11.2.1 11.2.2 ನೋಡಿ
3. ವಿಭಾಗ 11.3 ನೋಡಿ
4. ವಿಭಾಗ 11.4 ಮತ್ತು 11.5 ನೋಡಿ
5. ವಿಭಾಗ 11.6.2 ನೋಡಿ

## 11.11 ಪರಾಮರ್ಶನ ಗ್ರಂಥಗಳು


1. History in Theory and Method - K.Rajayyan
2. History: Its Theory and Method - Prof.B.Sheik Ali
3. A Textbook of Histriography - E.Sreedharan
4. Historiography Ancient, Medieval - Ernst Breisach and Modern



**ಪಠ್ಯವನ್ನು ರಚಿಸಿದವರು:**
**ಪ್ರೊ.ಎನ್.ಸರಸ್ವತಿ**

# ಘಟಕ–12 19ನೆಯ ಶತಮಾನದ ಆಧುನಿಕ ಇತಿಹಾಸ ರಚನೆ

**ರಚನೆ**

**12.0** ಉದ್ದೇಶಗಳು

**12.1** ಪೀಠಿಕೆ

**12.2** ಜ್ಞಾನ ಪುನರುಜ್ಜೀವನದ ಯುಗ

**12.2.1** ವಾಲ್ಟೇರ್ (1694–1778)

**12.2.2** ಜೀನ್ ಜಾಕ್ಸಿನ್ ರೂಸೋ (1712–1778)

**12.2.3** ಎಡ್‌ವರ್ಡ್ ಗಿಬ್ಬನ್ (1737–1794)

**12.3** ರಮ್ಯತೆಯ ಯುಗ

**12.3.1** ಥಾಮಸ್ ಕಾರ್‌ಲೈಲ್ (1795–1881)

**12.3.2** ಲಿಯೋಪೋಲ್ಡ್ ವಾನ್ ರಾಂಕೆ (1795–1886)

**12.4** ದೃಷ್ಟ ಇಥ್ಯಾತ್ಮಕ ಯುಗ (1798–1886)

**12.4.1** ಆಗಸ್ಟ್ ಕಾಮ್ಟೆ (1798–1857)

**12.4.2** ಕಾರ್ಲ್‌ಮಾರ್ಕ್ಸ್ (1818–1883)

**12.5** ಸಾರಾಂಶ

**12.6** ಪ್ರಮುಖ ಪದಗಳು

**12.7** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**12.8** ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

**12.9** ಪರಾಮರ್ಶನ ಗ್ರಂಥಗಳು

## 12.0 ಉದ್ದೇಶಗಳು

ಈ ಪಾಠವನ್ನು ಅಭ್ಯಸಿಸಿದ ನಂತರ ನೀವು 18 ಮತ್ತು 19ನೆಯ ಶತಮಾನಗಳ ಆಧುನಿಕ ಇತಿಹಾಸ ರಚನೆಯನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುವಿರಿ.

ಈ ಅಧ್ಯಯನದ ಉದ್ದೇಶವು 14 ರಿಂದ 16ನೇ ಶತಮಾನಗಳ ಇತಿಹಾಸ ರಚನೆಯ ಜ್ಞಾನ ಪುನರುಜ್ಜೀವನ ಮತ್ತು ಸುಧಾರಣೆಗಳ ಕಾಲದ ಸ್ವಭಾವವನ್ನು ನಿಮಗೆ ಪರಿಚಯಿಸುವುದೇ ಆಗಿದೆ. ಅದು ನಿಮಗೆ ಜ್ಞಾನ ಪುನರುಜ್ಜೀವನದ ಅರ್ಥವನ್ನು ಅದರ ಪ್ರಭಾವವನ್ನು ಮತ್ತು ಪೆಟ್ರಾರ್ಚ್, ಮೆಕ್ಕೀವಲ್ಲಿ, ಬೇಕನ್ ಮತ್ತು ವೀಸೋ ತರಹದ ಜ್ಞಾನ ಪುನರುಜ್ಜೀವನದ ಇತಿಹಾಸಕಾರರನ್ನು ಪರಿಚಯಿಸುತ್ತದೆ.

ಈ ಅಧ್ಯಯನದ ಉದ್ದೇಶಗಳು ನಿಮಗೆ 19ನೆಯ ಶತಮಾನದ ಜ್ಞಾನೋದಯವನ್ನೂ ಮತ್ತು ಇತಿಹಾಸ ರಚನೆಯಮೇಲೆ ಅದರ ಪ್ರಭಾವವನ್ನೂ ಪರಿಚಯಿಸುವುದೇ ಆಗಿವೆ. ಅದು ಮಾಂಟೆಸ್ಕ್ಯೂ, ವಾಲ್ಟೇರ್, ಡೇವಿಡ್ ಹ್ಯೂಂ, ವಿಲಿಯಂ ರಾಬರ್ಟ್‌ಸನ್, ಎಡ್‌ವರ್ಡ್ ಗಿಬ್ಬನ್, ಮತ್ತು ರೂಸೋ ರಂತಹ ಜ್ಞಾನೋದಯದ ಇತಿಹಾಸಕಾರರ ಬಗ್ಗೆ ಮಾಹಿತಿಯನ್ನೂ ಕೊಡುತ್ತದೆ.

ಈ ಘಟಕದ ಗುರಿ ಮತ್ತು ಉದ್ದೇಶಗಳು ರಾಷ್ಟ್ರೀಯತೆಯ ಬಗ್ಗೆ ರಮ್ಯತೆಯ ಪ್ರತಿಕ್ರಿಯೆಯನ್ನೂ ಮತ್ತು ರಾಷ್ಟ್ರೀಯ ಸಾಹಿತ್ಯಕ ಕೃತಿಗಳು ಮತ್ತು ಇತಿಹಾಸ ರಚನೆಯ ಬಗ್ಗೆ ರಮ್ಯತೆ/ನವ್ಯತೆಯ ಪ್ರತಿಕ್ರಿಯೆಯನ್ನೂ ನಿಮಗೆ ತಿಳಿಸುವುದೇ ಆಗಿದೆ. ಅಲ್ಲದೆ, ಹಾರ್ಡರ್, ಹೆಗೆಲ್, ಕಾರ್‌ಲೈಲ್, ಮೆಕಾಲೆ, ನೀಬ್ಹರ್ ರಂತಹ ರಮ್ಯತೆಯ ಕಾಲದ ಇತಿಹಾಸಕಾರರ ಬಗ್ಗೆಯೂ ತಿಳಿಸುತ್ತದೆ.

ಈ ಘಟಕದ ಉದ್ದೇಶವೂ ಯೂರೋಪಿನ ಆಧುನಿಕ ಇತಿಹಾಸ ರಚನೆಯಲ್ಲಿ ಯಥಾರ್ಥತೆಯ ಬಗ್ಗೆ ನಿಮಗೆ ಪರಿಚಯಿಸುವುದೇ ಆಗಿದೆ. ಅದು ಆಗಸ್ಟ್ ಕಾಮ್ಟೆ, ಹೆನ್ರಿ, ಥಾಮಸ್ ಬಕಲ್, ರಾಂಕೆ, ಕಾರ್ಲ್‌ಮಾರ್ಕ್ಸ್ ಮೊದಲಾದವರ ಯಥಾರ್ಥ ಇತಿಹಾಸಕಾರರ ಬಗ್ಗೆಯೂ ಮಾಹಿತಿ ನೀಡುತ್ತದೆ.

## 12.1 ಪೀಠಿಕೆ

ಕ್ರಿ.ಶ.ಹದಿನಾಲ್ಕನೆಯ ಶತಮಾನದಲ್ಲಿ ಪೆಟ್ರಾರ್ಚನ ಕಾಲದಿಂದಲೂ (ಕ್ರಿ.ಶ.1305–74) ಯೂರಪಿನ ಮನಸ್ಸು ದೊಡ್ಡ ಪ್ರಮಾಣದ ಬದಲಾವಣೆಗಳನ್ನು ಅನುಭವಿಸಲಾರಂಭಿಸಿತು. ಆಡಂಬರದ ಶಿಕ್ಷಣವು ಮಧ್ಯಯುಗದ ಶಿಕ್ಷಣಕ್ಕೆ ಕೊಟ್ಟ ಒಂದು ಸಾಮಾನ್ಯ ಹೆಸರು. ನಿಧಾನವಾಗಿ ಪ್ರಶ್ನಿಸುವ ಮನೋಭಾವದ ಸಂಕೇತವುಳ್ಳ ಒಂದು ನವೀನ ರೀತಿಯ ಕಲಿಯುವಿಕೆಗೆ ದಾರಿ ಮಾಡಿಕೊಟ್ಟಿತು. ಈ ಮನೋಭೂಮಿಕೆಯು ಮಾನವನ ಆಲೋಚನೆ ಮತ್ತು ಚಟುವಟಿಕೆಯ ಪ್ರತಿ ಅಂಶದಲ್ಲೂ ಪ್ರಭಾವ ಬೀರಿತು. ಅದು ಕರೆಯಲ್ಪಟ್ಟಂತೆ

ಈ ನವೀನ ಕಲಿಯುವಿಕೆಯ ಒಂದು ಮುಖ್ಯಾಂಶವು ಪ್ರಾಚೀನ ಗ್ರೀಕ್ ಮತ್ತು ರೋಮನ್ನರ ಗ್ರಂಥಗಳಿಗಾಗಿ ಕಾತರದ ಹುಟುಕಾಟ ಮತ್ತು ಅವುಗಳ ಒಂದು ಉತ್ಸಾಹಭರಿತ ಅಧ್ಯಯನವೇ ಆಗಿತ್ತು.

ಅವರು ದೇವರಿಗಿಂತ ಮಾನವನ ಬಗ್ಗೆ ಇಲ್ಲಿಯ ನಂತರದ ಜೀವನದ ಸಮಸ್ಯೆಗಳಿಗಿಂತ ಇಲ್ಲಿ ಪೃಥ್ವಿಯ ಮೇಲೆ ಜೀವದ ಸುಧಾರಣೆಯ ಬಗ್ಗೆ ಹೆಚ್ಚು ಕಾಳಜಿ ವಹಿಸಿದ್ದರು. ಈ ಮಾನವತಾ ಚಳುವಳಿಯು ಹದಿನೈದನೆಯ ಶತಮಾನದಲ್ಲಿ ಪರಾಕಾಷ್ಠೆಯನ್ನು ಮುಟ್ಟಿತು. ಪಾಶ್ಚಿಮಾತ್ಯ ವಿಚಾರವನ್ನು ಮಧ್ಯಯುಗದ ಕ್ರೈಸ್ತ ಧರ್ಮದ ಸಂಕೋಲೆಗಳಿಂದ ಸ್ವತಂತ್ರಗೊಳಿಸಿದ/ಬಿಡುಗಡೆಗೊಳಿಸಿದ ಒಂದು ಸೃಜನಾತ್ಮಕ ಚಳುವಳಿಯಾದ ನವೋದಯವನ್ನೂ ತಂದಿತು.

ಈ ನವೋದಯದ ಸ್ಫೂರ್ತಿಯು ಇತಿಹಾಸ ರಚನೆಯ ಮೇಲೆ ಬಹಳ ಪ್ರಭಾವವನ್ನು ಬೀರಿತು. ಇತಿಹಾಸದ ಮಾನವೀಯ ದೃಷ್ಟಿಕೋನಕ್ಕೆ ಹಿಂದಿರುಗುವಿಕೆ ಓರ್ವ ಸಾಮಾನ್ಯ ಇತಿಹಾಸಕಾರರ ಆವೀರ್ಭಾವ, ಗತಕಾಲದ ಶೇಷಗಳಲ್ಲಿ ಒಂದು ಹೊಸ ಆಸಕ್ತಿ ಚಾರಿತ್ರಿಕ ವಿಮರ್ಶೆಯಲ್ಲಿ ಒಂದು ಮುನ್ನಡೆ ಮತ್ತು ಮೆಕೈವಲಿ ಮತ್ತು ಗ್ಯೂಸಿ ಆರ್ಡಿನಿರಂತಹ ಮಾನವೀಯ ಇತಿಹಾಸಕಾರರ ಒಂದು ನವೀನ ವಿಚಾರಧಾರೆಯ ಬೆಳವಣಿಗೆ ಇವುಗಳಲ್ಲಿ ಇದನ್ನು ಕಾಣಬಹುದಾಗಿದೆ.

ಹದಿನೆಂಟನೆಯ ಶತಮಾನದ ಜ್ಞಾನೋದಯವು ಆ್ಯಡಂಸ್ಮಿತ್, ಸೀಸರ್ ಬಕರತ್, ಇಮ್ಯೂನುಯಲ್–ಕಾಂಟ್, ವಾಲ್ಟೇರ್, ಹ್ಯೂಮ್, ಲೆಸ್ಸಿಂಗ್, ಗಿಬ್ಬನ್, ಮಾಂಟೆಸ್ಕ್ಯೂ, ಟರ್‌ಗಾಟ್, ಕಂಡೋರ್‌ಸೆಟ್, ಡಿಡೆರಟ್, ರೂಸೋ, ಹೋಲ್ಡ್‌ಬ್ಯಾಕ್, ಆ್ಯಲಂಬರ್ಟ್‌ರಂತಹ ಜನಪ್ರಿಯ ತತ್ವಜ್ಞಾನಿಗಳು ಮತ್ತು ಬರಹಗಾರರ ಒಂದು ಸ್ವತಂತ್ರ ಜಾತ್ಯಾತೀತ ವರ್ಗದ ಉದಯಕ್ಕೆ ನಾಂದಿ ಹಾಡಿತು. ಒಮ್ಮೆ ಚರ್ಚಿನ ಅಧಿಪತ್ಯದಲ್ಲಿದ್ದ ಜ್ಞಾನದ ಕ್ಷೇತ್ರಗಳ ಮೇಲೆ ಇವರ ವ್ಯಾಪ್ತಿ ಇತ್ತು ಮತ್ತು ಜಗತ್ತಿನ ಸಮಾಜದ ಮನುಷ್ಯನ ಸ್ವಭಾವದ ಧರ್ಮ ಮತ್ತು ಇತಿಹಾಸಗಳ ಒಂದು ವಿಭಿನ್ನ ದೃಷ್ಟಿಕೋನವನ್ನು ಸಾದರಪಡಿಸಿದರು. ಫ್ರಾನ್ಸಿನಲ್ಲಿ ಅಂತಹ ಬುದ್ಧಿಜೀವಿಗಳನ್ನು ತತ್ವಜ್ಞಾನಿಗಳೆಂದು ಕರೆಯುತ್ತಿದ್ದರು. ಅವರು ಪ್ರಯತ್ನ ಪೂರ್ವಕವಾಗಿಯೇ ಮಾನವ ಜನಾಂಗದ ಮೂಲಭೂತ ನಂಬಿಕೆಗಳಲ್ಲಿ ಒಂದು ಕ್ರಾಂತಿಯನ್ನೆಬ್ಬಿಸಿದರು. ಜರ್ಮನಿಯ ತತ್ವಜ್ಞಾನಿಯಾದ ಕೆಂಟ್‌ನು 1784ರಲ್ಲಿ "ಜ್ಞಾನೋದಯವು ತಾನೇ ಹೇರಿಕೊಂಡ ಅಲ್ಪಸಂಖ್ಯಾತತೆಯಿಂದ ಮಾನವನ ಬಿಡುಗಡೆ/ಮುಕ್ತಿ" ಎಂದು ಬರೆದನು.

ಜ್ಞಾನೋದಯದ ತತ್ವಜ್ಞಾನಿಗಳು ಮಧ್ಯಯುಗದಂತಹ ಗತಕಾಲದ ಕೆಲವು ಯುಗಗಳನ್ನು ಆದಿಕಾಲ ಮತ್ತು ಮೃಗೀಯವೆಂದು ಮತ್ತು ಆದುದರಿಂದ ಗಂಭೀರ ಐತಿಹಾಸಿಕ ಶೋಧನೆಗೆ ಅನರ್ಹವೆಂದು ಪರಿಗಣಿಸಿದ್ದರು. ಅವರು ಮಾನವನ ಸ್ವಭಾವದ ಬಗ್ಗೆ ಅದು ಸ್ವಲ್ಪ ಒಂದೇ ರೀತಿ ಮತ್ತು ಬದಲಾಗದು ಎಂಬ ವಿಚಾರವನ್ನೂ ಸಹ ಹೊಂದಿದ್ದರು. ಈ ಎರಡೂ ಪ್ರವೃತ್ತಿಗಳ ವಿರುದ್ಧ ಹೋರಾಡ ಬೇಕಾಗಿದ್ದಿತು ಮತ್ತು ಯಾವುದೇ ಮುಂದಿನ ಐತಿಹಾಸಿಕ ವಿಚಾರದಲ್ಲಿ ಪ್ರಗತಿ ಸಾಧಿಸುವ ಮೊದಲು ಇತಿಹಾಸದ

ದಿಗಂತ/ವಿಸ್ತಾರವನ್ನೂ ವಿಸ್ತರಿಸಬೇಕಾಗಿದ್ದಿತು. ಈ ದಿಕ್ಕುಗಳಲ್ಲಿ ಸಾಕಷ್ಟು ಮುನ್ನಡೆ ಸಾಧಿಸಿದ ಇಬ್ಬರು ಚಿಂತಕಗಳೆಂದರೆ ರೂಸೋ ಮತ್ತು ಹರ್ಡರ್.

ಯಥಾರ್ಥತೆಯು ಇತಿಹಾಸದಲ್ಲಿ ರಮ್ಯತೆಗೊಂದು ಪ್ರತಿಕ್ರಿಯೆಯಾಗಿತ್ತು. ರಮ್ಯತೆಯು ಚಾರಿತ್ರಿಕ ಗ್ರಂಥಗಳನ್ನು ಹೆಚ್ಚು ಕಾಲ್ಪನಿಕವಾಗಿ ಮಾಡಿದರೆ, ವಾಸ್ತವಿಕವಾದವು ಗತಕಾಲದ ವಿಷಯ ಮತ್ತು ಘಟನೆಗಳನ್ನು ಅವುಗಳ ವಿಕಾಸದ ಕ್ರಮದಲ್ಲಿ ನೋಡಿತು. ರಮ್ಯತೆಯು ವ್ಯಕ್ತಿಗಳನ್ನು ಆಕರ್ಷಣೆಯ ಕೇಂದ್ರವನ್ನಾಗಿ ಮಾಡಿತು. ವ್ಯಕ್ತಿಗಳ ಸಂಬಂಧಗಳನ್ನು ಯೋಚಿಸಿತು ಮತ್ತು ಸ್ವಾತಂತ್ರ್ಯ ಮತ್ತು ಪ್ರಗತಿಯ ವಿಚಾರಗಳನ್ನು ಅಧ್ಯಯನ ಮಾಡಿತು. ಯಥಾರ್ಥವಾದವು ವ್ಯಕ್ತಿವಾದವನ್ನು ತಿರಸ್ಕರಿಸಿತು. ಸಾಮಾನ್ಯ ಜನರು ಜನಾಂಗಗಳು, ಸಮಾಜ ಮತ್ತು ಪ್ರವೃತ್ತಿಗಳ ಬಗ್ಗೆ ಮಾತಾಡಿತು. ರಮ್ಯತೆಯು ಬೋಧನಾಪರ, ನೀತಿಪರ ಮತ್ತು ಸೇವಾಪರ ಇತಿಹಾಸವನ್ನು ಪರಾಭವಗೊಳಿಸಿತ್ತು/ ಕಿತ್ತೆಸೆಯಿತು. ವಾಸ್ತವವಾದವು/ಯಥಾರ್ಥತೆಯು ಸಾಮಾಜಿಕ ಅಂಶಗಳ ಪರಸ್ಪರಾವಂಬನೆಗೆ ಒತ್ತು ನೀಡಿತು. ಯಥಾರ್ಥವಾದವು ಅದು ಇತಿಹಾಸವನ್ನು ಒಂದು ವಿಜ್ಞಾನವನ್ನಾಗಿ ಮಾಡಿದುದಾಗಿ ಕೊಚ್ಚಿಕೊಂಡಿತು.

## 12.2 ಜ್ಞಾನೋದಯದ ಕಾಲ

ನವೋದಯ ಮತ್ತು ಸುಧಾರಣೆಯಿಂದ ಒಂದು ಹೊಸ ರೀತಿಯ ಇತಿಹಾಸ ರಚನೆಯು ಉದಯಿಸಿತು. ಇದು ಮೊದಲ ಮತ್ತು ನಂತರದ ಚರ್ಚಿನ ಇತಿಹಾಸ ರಚನೆಗೆ ವಿರೋಧವಾಗಿ ನಿಂತಿತು. ಅದು ತನ್ನನ್ನು ಜ್ಞಾನೋದಯ ಯುಗದ ಇತಿಹಾಸ ರಚನೆ ಎಂದು ಕರೆದುಕೊಂಡಿತು. ಇದು ಸ್ವತಂತ್ರ ಚಿಂತನೆಗೆ/ವಿಚಾರಗಳಿಗೆ, ನಿಬಂಧನೆಗಳನ್ನು ವಿಧಿಸಿದ್ದ ಹಿಂದಿನ ಯುಗದ ಕತ್ತಲೆಯನ್ನು ಓಡಿಸುವುದೆಂದೇ ಇದರ ಅರ್ಥವಾಗಿತ್ತು. ವಾಸ್ತವವಾಗಿ, ಈ ಕಾಲದ ಪ್ರಗತಿಯು ಅಭಿವೃದ್ಧಿಯಿಂದ ಹೊರತಾಗಿತ್ತು. ಜ್ಞಾನೋದಯಗಳ ಚಾರಿತ್ರಿಕ ಪ್ರತಿನಿಧಿಗಳಲ್ಲಿ ಉತ್ತಮರೆಂದರೆ ವಾಲ್ಟೇರ್ ಮತ್ತು ಕಂಡಾರ್‌ಸೆಟ್ ಇವರು ಆ ತುಮುಲಗಳ ನಡುವೆಯೂ ಸಂತೋಷವಾಗಿದ್ದರು ಮತ್ತು ಭವಿಷ್ಯದ ಬಗ್ಗೆ ಭರವಸೆಯಿಂದಿದ್ದರು ಮತ್ತು ಆಗಿನ ವರ್ತಮಾನವನ್ನು ತಂದಿದ್ದ ಗತಕಾಲದ ಬಗ್ಗೆ ತಿರಸ್ಕಾರ ಭಾವವನ್ನು ಹೊಂದಿದ್ದರು.

### 12.2.1 ವಾಲ್ಟೇರ್ (1694–1778)

ವಿಜ್ಞಾನ ಮತ್ತು ವೈಚಾರಿಕತೆಯನ್ನು ನಂಬಿದ್ದ ಇತಿಹಾಸಕಾರರ ವಿಚಾರವಾದೀ ಪಂಥದ ಸ್ಥಾಪಕನಾಗಿದ್ದನು. ಇವರ ಪಂಥದ ಪ್ರಕಾರ ಸಂಸ್ಕೃತಿಯ ಮುನ್ನಡೆಗೆ ಹೆಚ್ಚು ಕಾಣಿಕೆ ಸಲ್ಲಿಸಿದ ಮಧ್ಯಯುಗದಲ್ಲಿ ಸಾಮಾನ್ಯವಾಗಿ ಇವರಿಗೆ ಅವಿಶ್ವಾಸವಿತ್ತು. ವಾಲ್ಟೇರನು ವಿಡಂಬನೆ ಮತ್ತು ವಿನೋದಗಳನ್ನು ಪೂರ್ಣವಾಗಿ ಹೊಂದಿದ್ದ ತನ್ನದೇ ಆದ ಶೈಲಿಯ ಓರ್ವ ನಿರ್ಭಯ ವಿಮರ್ಶಕನಾಗಿದ್ದನು. ಅವನು ಯೋಚಿಸಿದಂತೆ ಹಿಂದಿರುಗಲಾರದ ಮಟ್ಟಕ್ಕೆ ಪತನ ಹೊಂದಿರುವ/ ಕುಸಿದಿರುವ ಚರ್ಚಿನ ಮೇಲೆ ನಿರ್ದಯವಾಗಿ ದಾಳಿ ಮಾಡಿದನು. ವಾಲ್ಟೇರ್‌ನಿಂದ ಪ್ರಾರಂಭವಾದ ಈ ನವೋದಯದ/ಜ್ಞಾನೋದಯದ

ಯುಗವು ಡೇವಿಡ್ ಹ್ಯೂಂ, ವಿಲಿಯಂ ರಾಬರ್ಟ್‌ಸನ್, ಮತ್ತು ಎಡ್ವರ್ಡ್ ಗಿಬ್ಬನ್‌ರಂತಹ ಅನೇಕ ಪ್ರತಿಭಾವನ್ವಿತರ ಪರಂಪರೆಯನ್ನೇ/ಸರಣಿಯನ್ನೇ ಪ್ರಜ್ವಲಿಸುವಂತೆ ಮಾಡಿತು.

### 12.2.2 ಜೀನ್ ಜ್ಯಾಕ್ಯೂಸ್ ರೂಸೋ (1712–1778)

ಪ್ರಾಚೀನ ಯುಗದ ಪೊಳ್ಳುತನವನ್ನು ವಾಲ್ಟೇರ್‌ನೊಂದಿಗೇ ಅಭಿವ್ಯಕ್ತಿಗೊಳಿಸಿದ ಜ್ಞಾನೋದಯ ಯುಗದ ಇನ್ನೂ ಮತ್ತೊಂದು ಉಜ್ವಲ ತಾರೆ (ನಕ್ಷತ್ರ)ವೆಂದರೆ ಜೀನ್ ಜ್ಯಾಕ್ಯೂಸ್ ರೂಸೋ (1712–1778). ವಾಲ್ಟೇರನು ಭಾವನೆಗಳ ಕುದುರೆಗಳನ್ನು ಬಿಡುಗಡೆಗೊಳಿಸಿದರೆ ರೂಸೋ ವಿಚಾರದ ಕುದುರೆಗಳನ್ನು ಮುಕ್ತಗೊಳಿಸಿದನು. ಇದರಿಂದ ಪ್ರಾಚೀನತೆಯನ್ನು ಅಳಿಸಿ ಹಾಕಿ ಹೊಸ ವಿನ್ಯಾಸದ ಸಮಾಜವನ್ನು ಕಟ್ಟಲು ಪ್ರಯತ್ನಿಸಿದನು. ಅವನ ಸಾಮಾನಿಕ ಒಪ್ಪಂದ ಒಂದು ಶ್ರೇಷ್ಠಕೃತಿಯಾಗಿದ್ದು ಅದು ಕ್ರಾಂತಿಯನ್ನು ಹುಟ್ಟುಹಾಕಿತು. ಇತಿಹಾಸದ ಧಾರ್ಮಿಕ ದೃಷ್ಟಿಕೋನವನ್ನು ಖಂಡಿಸಿದ ಇವನೂ ಸಹ ಜ್ಞಾನೋದಯ ಯುಗದ ಸತ್ಯವಾದ ಪ್ರತಿನಿಧಿ. ವಿಶೇಷ ಸವಲತ್ತು ಪಡೆದ ವರ್ಗಗಳನ್ನು ಬಲವಾಗಿ ಟೀಕಿಸಿದನು ಮತ್ತು ಕ್ರಾಂತಿಯ ಮೂರು ಮುಖ್ಯ ಬಲವಾದ ಕರೆಗಳಾದ ಸ್ವಾತಂತ್ರ್ಯತೆ, ಸಮಾನತೆ ಮತ್ತು ಸಹೋದರತೆಯ ಭಾವನೆಗಳನ್ನು ಪ್ರತಿಪಾದಿಸಿದನು/ಘೋಷಿಸಿದನು.

### 12.2.3 ಎಡ್‌ವರ್ಡ್ ಗಿಬ್ಬನ್ (1737–1794)

ಎಡ್‌ವರ್ಡ್ ಗಿಬ್ಬನ್ನನು ಹದಿನೆಂಟನೆಯ ಶತಮಾನದ ಮಹಾನ್ ಇತಿಹಾಸಕಾರನಾಗಿದ್ದನು. ಅವನು ಪೂರ್ಣ ವಿದ್ವತ್ ಮತ್ತು ವಿಶಾಲವಾದ ತಾತ್ವಿಕ ವ್ಯಾಪ್ತಿ ಎರಡನ್ನೂ ಸಾಧಿಸಿದ ಪ್ರಥಮ ಇತಿಹಾಸವನ್ನು ಆಂಗ್ಲಭಾಷೆಯಲ್ಲಿ ಹುಟ್ಟು ಹಾಕಲು ಬಹಳಷ್ಟು ನಾಶವನ್ನು ಜ್ಞಾನೋದಯದ ತಾತ್ವಿಕ ಆದರ್ಶಗಳೊಂದಿಗೆ ಸಂಯೋಜಿಸಿದನು. "ರೋಮನ್ ಸಾಮ್ರಾಜ್ಯದ ಕ್ಷೀಣಪತಿ ಮತ್ತು ಪತನದ ಇತಿಹಾಸ"ವು ಕ್ರಿ.ಶ. ಎರಡನಯ ಶತಮಾನದಿಂದ ಕ್ರಿ.ಶ.1453ರ ಕಾನ್‌ಸ್ಟಾಂಟಿನೋಪಲ್'ನ ಪತನದವರೆಗೆ ನಿರಂತರ ವರ್ಣನೆಯ ಚಿತ್ರಣವನ್ನು ನಮಗೆ ಕೊಡುತ್ತದೆ. ಈ ಕೃತಿಯು ಗದ್ಯ ಶೈಲಿಯಲ್ಲಿ ಅತ್ಯುನ್ನತವಾಗಿದ್ದು ಅದು ಪ್ರಾಚೀನ ಮತ್ತು ಮಧ್ಯಯುಗದ ಮನುಷ್ಯರ ತೀರ್ಪಿನ ಮೇಲೆ ಪ್ರಭಾವ ಬೀರುತ್ತಾ ಬಂದಿದೆ. ಗಿಬ್ಬನ್ನನು ಪುಟ್ನೆಯಲ್ಲಿ 27ರ ಏಪ್ರಿಲ್ 1737ರಲ್ಲಿ ಜನಿಸಿದನು. ಏಳು ಮಕ್ಕಳಲ್ಲ ಉಳಿದವರಲ್ಲಿ ಇವನೊಬ್ಬನೇ ಹಿರಿಯನು. ಉಳಿದವರು ಬಾಲ್ಯದಲ್ಲಿಯೇ ಅಸುನೀಗಿದರು. ಅವನು ತನ್ನ ತಂದೆಯಿಂದ ಮತ್ತು ತಾತನಿಂದ ಸಾಕಷ್ಟು ಆಸ್ತಿಯನ್ನು ಪಡೆದು ಆರಾಮ ಜೀವನವನ್ನು ನಡೆಸಿದನು.

ಕ್ರೈಸ್ತಧರ್ಮದ ಉದಯದಲ್ಲಿ ಅವನು ಬಹಳಷ್ಟು ವ್ಯಂಗ್ಯವಾಡಿದ ಕೊನೆಯ ಎರಡು ಅಧ್ಯಾಯಗಳ ಹೊರತು ಫೆಬ್ರವರಿ 1776ರಲ್ಲಿ ಪ್ರಕಟವಾದ ಅವನ ಇತಿಹಾಸದ ಮೊದಲ ಸಂಪುಟವು ಜಯವನ್ನು ಗಳಿಸಿತು/ಯಶಸ್ಸನ್ನು ಪಡೆಯಿತು/ಯಶಸ್ವಿಯಾಯಿತು. ಗಿಬ್ಬನ್ನನ ಕ್ರೈಸ್ತಧರ್ಮದ ಅಭಿಪ್ರಾಯದ ಬಗ್ಗೆ ಪ್ರತಿಕ್ರಿಯೆಗಳು ಹಲವಾರು ರೀತಿಗಳಲ್ಲಿ ಹೊರಬಂದವು. ಇವನ ವಿಮರ್ಶೆಯು ಇರುವ ವ್ಯವಸ್ಥೆಯನ್ನು

ಅಸ್ಥಿರಗೊಳಿಸುವುದೆಂಬ ಭಯವಿದ್ದುದರಿಂದ ಅವನು ಆಕ್ರಮಣಕ್ಕೊಳಗಾದನು ಮತ್ತು ನಿಂಧಿಸಲ್ಪಟ್ಟನು. ಅವನಿಗೆ ದೇವವಾಣಿಯ ಬಗ್ಗೆ ನಂಬಿಕೆ ಇರಲಿಲ್ಲ ಮತ್ತು ಅಂತಹ ನಂಬಿಕೆಯುಳ್ಳವರ ಬಗ್ಗೆ ಸಹಾನುಭೂತಿಯೂ ಇರಲಿಲ್ಲ. ಮತಧರ್ಮಗಳು, ಮಾನವನ ಅನುಭವದ ಒಂದು ಅಂಶವಾಗಿ ಪರಿಗಣಿಸಲ್ಪಡಬೇಕೆಂಬ ತತ್ವವನ್ನು ಸ್ಥಾಪಿಸುವುದು ಅವನ ಮುಖ್ಯ ಉದ್ದೇಶವಾಗಿದ್ದಿತು. ಗಿಬ್ಬನ್ನನ ಕ್ರೈಸ್ತಧರ್ಮದ ತಿಳಿದುದರಲ್ಲಿ ಉತ್ತಮವಾದ ವಿಚಾರಗಳು, ಮುಖ್ಯವಾಗಿ 15 ಮತ್ತು 16ನೆಯ ಅಧ್ಯಾಯಗಳಲ್ಲಿ ಕಂಡುಬರುವುದಾದರೂ ಅವನು ಧರ್ಮದ ಮತ್ತು ಧರ್ಮೋಪದೇಶದ ಬೆಳವಣಿಗೆಗಳನ್ನು ಸಾಮ್ರಾಜ್ಯದ ಛಿದ್ರತೆಗೆ/ಅವನತಿಗೆ ಸಂಬಂಧಿಸಿದಂತೆ ಗುರುತಿಸಿದ್ದರಿಂದ ನಂತರದ ಅಧ್ಯಾಯಗಳು ಅಷ್ಟು ಮುಖ್ಯವೆನಿಸುವುದಿಲ್ಲ.

ಗಿಬ್ಬನ್ನನು ನಂತರದ ಸಂಪುಟಗಳನ್ನು ತಯಾರಿಸಲು ನಡೆದನು. ಬಹಳ ಮಟ್ಟಿಗೆ ಅವನು ತನ್ನ ಟೀಕಾಕಾರರನ್ನು ಲೆಕ್ಕಿಸದೆ ಹೋದುದರಿಂದ ಅನೇಕರಿಂದ ದಾಳಿಗೊಳಪಟ್ಟನು ಮತ್ತು ಗೇಲಿಗೊಳಗಾದನು. ಡೇವಿಡ್ ಹ್ಯೂಂ ಮತ್ತು ವಿಲಿಯಂ ರಾಬರ್ಟ್ಸನ್‌ನಂತಹ ಇತಿಹಾಸಕಾರರು ಅವನನ್ನು ತಮ್ಮ ಸಮಾನನೆಂದು ಗುರುತಿಸಿದರು. 1779ರಲ್ಲಿ ಗಿಬ್ಬನ್ನನು ವ್ಯಾಪಾರ ಮತ್ತು ತೋಟಗಳ ದಲ್ಲಾಳಿಯ ರೂಪದಲ್ಲಿ ಬೆಲೆಬಾಳುವ ಲಾಭದಾಯಕ ಹುದ್ದೆಯನ್ನು ಪಡೆದನು. ಅದರ ಸ್ವಲ್ಪ ಸಮಯದ ನಂತರ ಅಮೆರಿಕದಲ್ಲಿ ಬ್ರಿಟಿಷ್ ಸರಕಾರದ ನೀತಿಯ ಯೂರೋಪಿನ ವಿಮರ್ಶೆಗೆ ಉತ್ತರವಾಗಿ ಅವನು "ಮೆಮೊರಿ ಜಸ್ಟಿಫಿಕ್ಯಾಟಿಲ್" ಎಂಬ ವಿದ್ವತ್‌ಪೂರ್ಣ ಲೇಖನವನ್ನು/ಪ್ರಬಂಧವನ್ನು ಬರೆದನು. 1781ರಲ್ಲಿ ಪಶ್ಚಿಮದಲ್ಲಿ ಸಾಮ್ರಾಜ್ಯದ ಅಂತ್ಯದ ವಿವರಣೆಯನ್ನು ಕೊಡುತ್ತಾ ಅವನ ಇತಿಹಾಸ ಎರಡನೆಯ ಮತ್ತು ಮೂರನೆಯ ಗ್ರಂಥಗಳನ್ನು ಪ್ರಕಟಿಸಿದನು. 1782ರಲ್ಲಿ ನಾರ್ತ್‌ನ ಸರಕಾರವು ಪತನ ಹೊಂದಿತು ಮತ್ತು ಶೀಘ್ರವೇ ಗಬ್ಬನನ್ನ ದಲ್ಲಾಳಿಯು ನಿಷೇಧಿಸಲ್ಪಟ್ಟಿತು. ಇದು ಆದಾಯದಲ್ಲಿ ಗಂಭೀರ ನಷ್ಟವಾಗಿತ್ತು. ಮಿತವ್ಯಯಗೊಳಿಸಲು ಅವನು ಇಂಗ್ಲೆಂಡನ್ನು ಬಿಟ್ಟನು ಮತ್ತು ಲಾಸನ್ನೆಯಲ್ಲಿ ಒಂದು ಮನೆ ಡೇವರ್‌ಡುನ್‌ನ್ನು ಸೇರಿದನು. ಅಲ್ಲಿ ಅವನು ಗದ್ದಲವಿಲ್ಲದೆ ಅವನ ಇತಿಹಾಸವನ್ನು ಮತ್ತೆ ಮೂರು ಗ್ರಂಥಗಳಲ್ಲಿ ಪೂರೈಸಿದನು ಮತ್ತು ಅದನ್ನು 1787ರಲ್ಲಿ ಮುಗಿಸಿದನು. ನಂತರ ತನ್ನ ಗ್ರಂಥಗಳ ಹಸ್ತಪ್ರತಿಗಳೊಂದಿಗೆ ಇಂಗ್ಲೆಂಡಿಗೆ ಹಿಂದಿರುಗಿದನು ಮತ್ತು ಅವು 1788ರಲ್ಲಿ ಪ್ರಕಟವಾದುವು. ಈ ಗ್ರಂಥದ ಪೂರೈಕೆಯು ಎಲ್ಲಾ ಕಡೆಗಳಿಂದಲೂ ಪ್ರಶಂಸೆಗೆ ಪಾತ್ರವಾಯಿತು/ಮನ್ನಣೆ ಗಳಿಸಿತು.

ಹೀಗೆ ಜ್ಞಾನೋದಯದ ಕಾಲವು ಇತಿಹಾಸದ ಚದುರಂಗದ ಫಲಕದ ಮೇಲೆ ಕೆಲವೊಮ್ಮೆ ಎಂದಿನ ದೃಷ್ಟಿಕೋನಗಳನ್ನು ತಲೆಕೆಳಗು ಮಾಡಿದ ಅನೇಕ ಹೊಸ ವಿಚಾರಗಳನ್ನು ಎಸೆಯಿತು ಮತ್ತು ಆಧುನಿಕ ಕಾಲದಲ್ಲಲ್ಲ ಅಥವಾ ಸಮೀಪದ ಅಥವಾ ದೂರದ ಭವಿಷ್ಯದಲ್ಲಲ್ಲ. ಆದರೆ ಗತಕಾಲದಲ್ಲಿ ಇತಿಹಾಸ ಪೂರ್ವದ ಗತಕಾಲದಲ್ಲಿ ಮತ್ತು ಬದಲಿಸಿದ ಪಥದಲ್ಲಿ ಇತಿಹಾಸವು ಪ್ರತಿನಿಧಿಸಿದ ಸ್ವಭಾವದ ಸ್ಥಿತಿಯಲ್ಲಿ ವಿಚರಕ್ಕೆ ಎಡೆಮಾಡಿಕೊಟ್ಟಿತು. ಆದರೆ ಈ ಸಿದ್ಧಾಂತದಲ್ಲಿ ತಪ್ಪಿಲ್ಲದಿಲ್ಲ. ಏಕೆಂದರೆ ವಾಸ್ತವವಾಗಿ ಸ್ವಭಾವದ/ಪ್ರಕೃತಿಯ ಸ್ಥಿತಿಯು ಅಸ್ಥಿತ್ವದಲ್ಲಿರುವುದೇ ಇಲ್ಲ. ಆದರೆ ಆಧುನಿಕ ಯುಗದಲ್ಲಿ ಸಾಧಿಸಬೇಕಾದ ಒಂದು ಆದರ್ಶವೆಂದು ವ್ಯಕ್ತಪಡಿಸಿತು. ಜಗತ್ತಿನ ಈ ಎಲ್ಲಾ ಹೊಸ ಕಲ್ಪನೆಯ ಧಾರ್ಮಿಕ ಪಾತ್ರವು ಯಾರಿಗೇ

ಆದರೂ ಅಸ್ಪಷ್ಟವಾಗಿರುವುದು ಸಾಧ್ಯವಿಲ್ಲ. ಏಕೆಂದರೆ ಅದು ಕ್ರೈಸ್ತಧರ್ಮದ ದೇವರ ಕಲ್ಪನೆಯನ್ನು ಸತ್ಯ ಮತ್ತು ನ್ಯಾಯವೆಂದು ಪುನರಾವರ್ತಿಸುತ್ತದೆ ಮತ್ತು ಕ್ರೈಸ್ತ ಧರ್ಮವು ಅದನ್ನು ಖಂಡಿಸಲು ಇಡೀ ಪೂರ್ವೇತಿಹಾಸವನ್ನು ತನಗೆ ವಿರೋಧವಾಗಿಯೇ ಸಿದ್ಧಪಡಿಸುತ್ತದೆ. ಎಲ್ಲಾ ಮೌನವು ಮುರಿದಾಗ ಅದು ಅತಿ ಕ್ರೂರ ಪೆಟ್ಟುಗಳಿಗೆ ಮತ್ತು ಟೀಕೆಗೆ ಗುರಿಯಾಯಿತು ಮತ್ತು ಜನರು ಮತಾಂಧ ಯುದ್ಧಕ್ಕಾಗಿ ಬೀದಿಗಿಳಿದರು.

## 12.3 ರಮ್ಯತೆಯ ಕಾಲ

19ನೆಯ ಶತಮಾನವು ಅನೇಕ ವಿಚಾರಗಳ ರಚನೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳಿಗೆ ಸಾಕ್ಷಿಯಾಯಿತು. ಅವುಗಳಲ್ಲಿ ಕೆಲವು ದೇಶಗಳ ರಾಜಕೀಯ ರಚನೆಯ ಮೇಲೂ ಪ್ರಭಾವ ಬೀರುವಷ್ಟು ಪೂರ್ಣವಾಗಿದ್ದವು. ತತ್‌ಕ್ಷಣ ರಾಷ್ಟ್ರೀಯ ಮತ್ತು ಆಧ್ಯಾತ್ಮಿಕ ವಿಚಾರಗಳಿಗೆ ಒತ್ತು ನೀಡಿದ ನವೋದಯ ಕಾಲದ ಘರ್ಷಣೆಗೊಳಗಾದ ವಿಚಾರಗಳು ಸಹಜವಾಗಿಯೇ ಬಹಳ ಕಾಲ ಮುಂದುವರೆಯಲಾಗಲಿಲ್ಲಾ. ಫ್ರಾನ್ಸಿನ ಕ್ರಾಂತಿಯ ತಕ್ಷಣವೇ ಇತಿಹಾಸದ ಪ್ರಾತಿನಿಧ್ಯದ ಎರಡು ರೂಪುಗಳು ಹುಟ್ಟಿಕೊಂಡವು. ಇದನ್ನೇ ರಮ್ಯತೆಯ ಕಾಲವೆಂದು ಕರೆಯಲಾಗಿದೆ. ಅವು ಗತಕಾಲದ ಹಂಬಲದ ಇತಿಹಾಸ ರಚನೆ ಮತ್ತು ಪುನಃ ಸ್ಥಾಪನೆಯ ಇತಿಹಾಸ ರಚನೆ, ಇತಿಹಾಸದ ಎರಡು ವಿಧಗಳೂ, ಮಧ್ಯಯುಗದಿಂದ ಸ್ಫೂರ್ತಿಯನ್ನು ಪಡೆದವು. ಜ್ಞಾನೋದಯ ಕಾಲದ ವೈಚಾರಿಕತೆಯ ಪ್ರವೃತ್ತಿಯನ್ನು ತ್ಯಜಿಸಿ ಹೊಸ ಪಂಥವು ಮತ್ತೆ ತಾನು ಹಳೆಯ ಧರ್ಮ, ಹಳೆಯ ರಾಷ್ಟ್ರೀಯ ಪದ್ಧತಿಗಳು ಮತ್ತು ಧರ್ಮ ಮತ್ತು ಸ್ಥಳೀಯ ಭಾವನೆಗಳು ಮತ್ತು ನಡತೆಗಳನ್ನು ಕೈಗೆತ್ತಿಕೊಂಡಿತು.

ಈ ಚಳುವಳಿ ಅಥವಾ ಪಂಥವು 19ನೆಯ ಶತಮಾನದಲ್ಲಿ ಉದಯಿಸಿತು ಮತ್ತು ಅದು ವೈಚಾರಿಕ ಅಥವಾ ಶಾಸ್ತ್ರೀಯ ಕಾಲದ ಸರಳತೆ, ಸಾಮರಸ್ಯ, ಏಕತೆ ಮತ್ತು ಸ್ಥಿರತೆಗಳಿಗಾಗಿ ಬದಲಿಸಿತು. ಅದು ಮಧ್ಯಯುಗದ ಒಂದು ಗೂಢ, ಸಂಯಮಹೀನ, ಸ್ವತಂತ್ರ ಮನೋಭಾವದ, ಚಪಲಚಿತ್ತತೆಗಳ ಮಟ್ಟವನ್ನು ಪ್ರತಿಪಾದಿಸಿತು. ಫ್ರಾನ್ಸಿನಲ್ಲಿ ಮೊದಲು ರೂಸೋವಿನಿಂದ ಪ್ರಾರಂಭವಾದ ಅವನ 'ಸ್ವಭಾವದ/ಪ್ರಕೃತಿಯ ಸ್ಥಿತಿ' ನಿಜವಾಗಿಯೂ ಒಂದು ರಮ್ಯ ಕಲ್ಪನೆ ಜರ್ಮನಿಯಲ್ಲಿ ಶೆಲ್‌ಗೆಲ್, ಮತ್ತು ಲೆಸ್ಸಿಂಗ್ ರಂತಹ ಬರಹಗಾರರು ಇದನ್ನು ಬೆಳೆಸಿದರು ಮತ್ತು ಇಂಗ್ಲೆಂಡಿನಲ್ಲಿ ಗ್ರೇ, ಕಾಪರ್, ಬರ್ನ್ಸ್, ಕಾಲರಿಡ್ಜ್, ಸೌತೆ, ಬೈರನ್, ಶೆಲ್ಲಿ, ಕೀಟ್ಸ್, ರೋಸ್ಸೆಟ್ಟಿ ಮತ್ತು ಕಾರ್ಲೈಲ್, ಮುಂತಾದ ಲೇಖಕರು ಈ ಪಂಥದ ಉತ್ತಮ ಪ್ರತಿನಿಧಿಗಳೆನಿಸಿದರು. ಅವರು ರಚಿಸಿದ ರಮ್ಯವಾದ ಮಧ್ಯಯುಗದ ಕೃತಿಗಳು ಮಧ್ಯಯುಗದ ಬಗ್ಗೆ ಇದ್ದ ನವೋದಯ ಕಾಲದ ದುರಾಗ್ರಹವನ್ನು ಪರಿಣಾಮಕಾರಿಯಾಗಿ ದೂರ ಮಾಡುವುದರಲ್ಲಿ ಸ್ವಲ್ಪಮಟ್ಟಿನ ಸೇವೆಯನ್ನು ಸಲ್ಲಿಸಿದುವು.

ಆದಾಗ್ಯೂ ರಮ್ಯತೆಯ ಪ್ರಭಾವವನ್ನು ತಾವೇ ಬಣ್ಣ, ಮೋಜು, ಸರಳತೆ, ಸಾಮರಸ್ಯ ಮತ್ತು ಏಕತೆಗಳಿಗೆ ನೀಡಿದ ವಿಷಯಗಳ ಆಯ್ಕೆಯಲ್ಲಿ ನೋಡಬೇಕಾಗಿದೆ. ಜೊತೆಗೆ ಅದು ಸಾಹಸ, ಶೌರ್ಯ, ಪ್ರೇಮ, ಧರ್ಮಯುದ್ಧಗಳು ಮತ್ತು ಮನೆ ಮತ್ತು ಚರ್ಚುಗಳಲ್ಲಿ ಅಲೆದಾಟ ಇಂತಹ ಮಧ್ಯಯುಗದ ವಿಚಾರಗಳ ಬಗ್ಗೆ ಅತಿಯಾದ ಪ್ರೇಮವನ್ನು ಪ್ರತಿಪಾದಿಸಿತು. ಇದು ಜ್ಞನೋದಯ ಕಾಲದ ವೈಚಾರಿಕ ದೃಷ್ಟಿಗೆ ಒಂದು

ಪ್ರತಿಕ್ರಿಯೆಯಾಗಿತ್ತು. ತಮ್ಮದೇ ಆದ ತತ್ತ್ವಶಾಸ್ತ್ರ ಪದ್ಧತಿಯನ್ನು ಪ್ರತಿಪಾದಿಸಿದ ಕಾರ್ಲೈಲ್ ಮತ್ತು ರ್‍ಯಾಂಕೆ ರಂತಹ ಚಿಂತಕರನ್ನು ಹುಟ್ಟುಹಾಕಿತು. ಇದು ಯಾವುದೇ ಸರ್ವಮಾನ್ಯತೆಯನ್ನು ಪಡೆದಿರುವುದಾಗಿ ಹೇಳಿಕೊಳ್ಳಲಾಗದಿದ್ದರೂ ಅತ್ಯಂತ ರೋಚಕವಾಗಿದ್ದಿತು. ಬಹಳ ಬೇಗನೆ ಈ ಇತಿಹಾಸ ರಚನೆಯು ಚಾರಿತ್ರಿಕ ಸಂಗತಿಗಳನ್ನು ಕಾನೂನುಗಳು ಮತ್ತು ತತ್ವಗಳಿಗನುಗುಣವಾಗಿ ವಿವರಿಸಲು ಪ್ರಯತ್ನಿಸಿದ ಒಂದು ವಿಭಿನ್ನ ರೀತಿಯ ಇತಿಹಾಸ ರಚನೆಗೆ ದಾರಿ ಮಾಡಿಕೊಟ್ಟಿತು.

## 12.3.1 ಥಾಮಸ್ ಕಾರ್ಲೈಲ್ (1795–1881)

19ನೆಯ ಶತಮಾನದ ಒಂದು ಮಹಾನ್ ಶಕ್ತಿಯಾಗಿದ್ದನು. ಸಾಕಷ್ಟು ಬಹಳ ಕಾಲದವರೆಗೂ ರೊಚ್ಚಿಗೆಬ್ಬಿಸಿದ ಇವನ ವಿಚಾರಗಳು ಒಂದು ವಿವಾದವನ್ನೇ ಸೃಷ್ಟಿಸಿದುವು. ಇವನು ಸ್ಕಾಟ್ಲೆಂಡಿನವನಾಗಿದ್ದನು. ಯಾವುದನ್ನೂ ಒಪ್ಪದ ವಿಚಾರಗಳಲ್ಲಿ ದೃಢ ಮತ್ತು ಸ್ವತಂತ್ರ ಮನೋಭಾವದ ವ್ಯಕ್ತಿಯಾಗಿದ್ದನು. ಇತಿಹಾಸವು ಮಹಾಪುರುಷರ ಜೀವನ ಚರಿತ್ರೆಯಲ್ಲದೆ ಬೇರೇನೂ ಅಲ್ಲ ಎನ್ನುವ ತನ್ನ ಪ್ರಸಿದ್ಧ ಸಿದ್ಧಾಂತವನ್ನು ನಿರೂಪಿಸಿದನು. ಇತಿಹಾಸದ ಚಕ್ರಗಳು ಚಲಿಸಲು ನಿಜವಾಗಿಯೂ ಜವಾಬ್ದಾರರಾದ ಮಹಾಪುರುಷರ ಪಾತ್ರಕ್ಕೆ ಇತಿಹಾಸದಲ್ಲಿ ಹೆಚ್ಚು ಒತ್ತುಕೊಟ್ಟನು. ಓರ್ವ ಅಲೆಕ್ಸಾಂಡರ್, ಓರ್ವ ಜೂಲಿಯಸ್ ಸೀಸರ್, ಓರ್ವ ಏಸು, ಓರ್ವ ಫ್ರೆಡರಿಕ್, ಅಥವಾ ಓರ್ವ ನೆಪೋಲಿಯನ್ ಇಂದಿನ ಇತಿಹಾಸದ ಅನೇಕ ಪುಟಗಳನ್ನು ತುಂಬುವಷ್ಟು ಸಮರ್ಥರು ಮಾತ್ರವಲ್ಲ. ಮುಂದಿನ ಪೀಳಿಗೆಯ ಮೇಲೂ ಅಷ್ಟೇ ಬಲವಾದ ಪ್ರಭಾವವನ್ನು ಬೀರಲು ಕಾರಣರಾಗುತ್ತಾರೆ. ಅವನು ಬರೆದ ಗ್ರಂಥಗಳೆಲ್ಲೆಲ್ಲಾ ಧೀರರ ಮೇಲೆ ಆಲೋಚನೆಗಳಲ್ಲಿ ಏಕರೂಪತ್, ಧೀಕರ ಆರಾಧನೆ, ಮತ್ತು ಇತಿಹಾಸದುದ್ದಕ್ಕೂ ಶೌರ್ಯವೇ ಪ್ರಧಾನವಾಗಿರುತ್ತದೆ. ಅವನ ಫ್ರೆಡರಿಕ್ ಮಹಾಶಯ, ನಾರ್ವೆಯ ಮೊದಲ ಅರಸರು, ಆಲಿವರ್ ಕ್ರಾಮ್‌ವೆಲ್ಲದ ಪತ್ರಗಳು ಮತ್ತು ಭಾಷಣಗಳು, ಜಾನ್ ಸ್ಟರ್ಲಿಂಗ್‌ನ ಜೀವನ ಮತ್ತು ಇತರ ಅನೇಕರು ಇತಿಹಾಸವು ಎಲ್ಲವೂ ವ್ಯಕ್ತಿತ್ವಗಳ ಮೇಲೆ ಬರೆಯಲ್ಪಟ್ಟಿವೆ.

## 12.3.2. ಲಿಯೋಪೋಲ್ಡ್‌ವನ್ ರಾಂಕೆ (1795–1886)

ಇವನು 19ನೆಯ ಶತಮಾನದ ಪ್ರಮುಖ ಜರ್ಮನ್ ಇತಿಹಾಸಕಾರರಲ್ಲಿ ಒಬ್ಬನಾಗಿದ್ದನು. ಅವನನ್ನು "ಆಧುನಿಕ ಇತಿಹಾಸ ರಚನೆ"ಯ ಪಿತಾಮಹನೆಂದು ಕರೆಯಲಾಗಿದೆ. ಲಕ್ಷ್ಯಪೂರ್ವಕ ಮತ್ತು ಕ್ರಮಬದ್ಧವಾದ ಸಂಶೋಧನೆಗೆ ಅವನು ನೀಡಿದ ಪ್ರಾಮುಖ್ಯತೆ, ವಸ್ತುನಿಷ್ಠೆಯ ಬಗ್ಗೆ ಅವನ ಶ್ರದ್ಧೆ ಮತ್ತು ಚಾರಿತ್ರಿಕ ಅಧ್ಯಯನಗಳ ವಿಶಿಷ್ಟ ಪ್ರಾಮುಖ್ಯತೆಯಲ್ಲಿ ಅವನ ನಂಬಿಕೆ/ನಿಷ್ಠೆ. 19 ಮತ್ತು 20ನೆಯ ಶತಮಾನಗಳ ಇತಿಹಾಸ ರಚನೆಯಲ್ಲಿ ಪೂರ್ಣ ಪ್ರಭಾವವನ್ನು ಬೀರಿದ್ದುವು.

ರಾಂಕೆಯು 1795ರ ಡಿಸೆಂಬರ್ 21 ರಂದು ಜನಿಸಿದನು. ಒಂದು ಪ್ರಾಟೆಸ್ಟೆಂಟ್ ವಸತಿ ಶಾಲೆಯಲ್ಲಿ ಮೊದಲ ಶಿಕ್ಷಣ ಪೂರೈಸಿದ ನಂತರ ಲೀಪ್‌ಜಿಗ್‌ನ ವಿಶ್ವವಿದ್ಯಾಲಯವನ್ನು ಪ್ರವೇಶಿಸಿದನು. ಅವನು ಧರ್ಮಶಾಸ್ತ್ರ ಮತ್ತು ಶ್ರೇಷ್ಠ ಸಾಹಿತ್ಯಗಳ ಅಧ್ಯಯನ ಮಾಡಿದನು ಮತ್ತು ತತ್ವಶಾಸ್ತ್ರಗಳ ಗ್ರಂಥಗಳು ಮತ್ತು

ಪಠ್ಯಗಳ ಅನುವಾದ ಮತ್ತು ಪ್ರಚಾರಗಳ ಬಗ್ಗೆ ಹೆಚ್ಚು ಗಮನ ಹರಿಸಿದನು. ಈ ಮಾರ್ಗವನ್ನು ನಂತರ ಅವನು ತತ್ವಶಾಸ್ತ್ರದ ಮತ್ತು ಚಾರಿತ್ರಿಕ ಪಠ್ಯಗಳ ವಿಮರ್ಶೆಯ ಉನ್ನತ ಪ್ರಭಾವಶಾಲಿಯಾದ ತಂತ್ರವನ್ನಾಗಿ ಬೆಳೆಸಿದನು. ಪ್ರಾಚೀನ ಬರಹಗಾರರ ಅಧ್ಯಯನದಿಂದ ಇತಿಹಾಸದಲ್ಲಿ ಅವನಿಗೆ ಆಸಕ್ತಿಯುಂಟಾಯಿತು. ಚಾರಿತ್ರಿಕ ಪಾತ್ರದಲ್ಲಿ ಲೂಥರನಲ್ಲಿ ಅವನು ಬಹಳ ಆಸಕ್ತಿಯನ್ನು ಬೆಳೆಸಿಕೊಂಡನು. ಜರ್ಮನಿಯ ಇತಿಹಾಸಕ್ಕಾಗಿ ಸಮಕಾಲೀನ ದೇಶಭಕ್ತಿಯ ಉತ್ಸಾಹವಲ್ಲದೆ ಬಾರ್ತ್‌ಹೋಲ್ಡ್ ಜಾರ್ಜ್ ನೀಬ್ಹರ್ಸ್‌ನ ರೋಮಿನ ಇತಿಹಾಸ ಮಧ್ಯಯುಗದ ಇತಿಹಾಸ ರಚನೆಕಾರರು ಮತ್ತು ಸರ್ ವಾಲ್ಟರ್ ಸ್ಕೂಟ್‌ನ ಚಾರತ್ರಿಕ ಕಾದಂಬರಿಗಳು ಹಾಗೆಯೇ ಇತಿಹಾಸವನ್ನು ಮಾನವ ಪ್ರಗತಿಯ ಕ್ರಮಾಗತ ದಾಖಲೆ ಎಂದು ಭಾವಿಸಿದ ಜರ್ಮನಿಯ ರಮ್ಯಕವಿ ಮತ್ತು ತತ್ವಜ್ಞಾನಿ ಜೊಹಾನ್ ಗಾಟ್‌ಫ್ರೀಡ್ ವಾನ್‌ಹರ್ಡರ್ ಇವರಿಂದ ಹೆಚ್ಚು ಪ್ರಭಾವಿತನಾದನು.

1824ರಲ್ಲಿ ತನ್ನ ಪ್ರಥಮ ಕೃತಿ "ಲ್ಯಾಟಿನ್ ಮತ್ತು ಟ್ಯೂಟಾನಿಕ್ ರಾಷ್ಟ್ರಗಳ ಚರಿತ್ರೆ 1494 ರಿಂದ 1514"ಯನ್ನೂ ಪ್ರಕಟಿಸಿದನು. ಇದು ಇಟಲಿಗಾಗಿ ಫ್ರೆಂಚ್ ಮತ್ತು ಹ್ಯಾಪ್ಸ್‌ಬರ್ಗ್ ನಡುವೆ ನಡೆದ ಹೋರಾಟವನ್ನು ಹೊಸಯುಗದಲ್ಲಿ ಸೇರದ/ಪಾಲಿಲ್ಲದ ಹಂತವೆಂದು ಪರಿಗಣಿಸುತ್ತದೆ. ಅವನ ಮುಂದಿನ ಪುಸ್ತಕದಲ್ಲಿ ರಾಂಕೆಯು ವೆನಿಷಿಯನ್ ರಾಯಭಾರಿಗಳ ಬಹಳ ಮುಖ್ಯವಾದ ವರದಿಗಳನ್ನು ಬಳಸಿಕೊಳ್ಳುತ್ತಾ ಮೆಡಿಟರೇನಿಯನ್‌ನಲ್ಲಿ ಆಟ್ಟೋಮನ್ ಸಾಮ್ರಾಜ್ಯ ಮತ್ತು ಸ್ಪೇಯಿನ್‌ನ ನಡುವಣ ಶತ್ರುತ್ವದ ಬಗ್ಗೆ ಬರೆದಿದ್ದಾನೆ. 1834 ರಿಂದ 1836 ರವರೆಗೆ ಪೋಪರ ಅಧಿಕಾರದ ಬಗ್ಗೆ ಒಂದು ಗ್ರಂಥವನ್ನು ಪ್ರಕಟಿಸಿದನು. ಇತಿಹಾಸದ ನಿರೂಪಣೆಯಲ್ಲಿ ಅದು ಇಂದಿಗೂ ಅನನ್ಯವೆಂದು ಪರಿಗಣಿಸಲ್ಪಟ್ಟಿದೆ. ಧಾರ್ಮಿಕ ಪಕ್ಷಪಾತವಿಲ್ಲದೆ ರಾಂಕೆಯು ಈ ಗ್ರಂಥದಲ್ಲಿ ಪೋಪರ ಅಧಿಕಾರವನ್ನು ಬರಿದೇ ಧರ್ಮೋಪದೇಶ ಮಾಡುವ ಸಂಸ್ಥೆ ಅಷ್ಟೇ ಅಲ್ಲ, ಎಲ್ಲದಕ್ಕಿಂತ ಹೆಚ್ಚಾಗಿ ಒಂದು ಜಾಗತಿಕ ಶಕ್ತಿ ಎಂದು ವರ್ಣಿಸುತ್ತಾನೆ.

ರಾಂಕೆಯು ತನ್ನ ಗ್ರಂಥದಲ್ಲಿ ಯಾವುದೇ ಅಧಿಕಾರವನ್ನಾಗಲೀ ಅಥವಾ ವ್ಯಕ್ತಿಯನ್ನಾಗಲೀ ಸಂತೋಷಗೊಳಿಸುವ ಉದ್ದೇಶ ಹೊಂದಿರಲಿಲ್ಲ. ಅವನು ತನ್ನ ಗ್ರಂಥದಲ್ಲಿ ಇತಿಹಾಸ ರಚನೆಯಲ್ಲಿ ಪಕ್ಷಪಾತಾತೀತನಾಗಿರಬೇಕೆಂಬ ತನ್ನ ಆದರ್ಶವನ್ನು ಗಳಿಸಬೇಕೆನ್ನುವುದೇ ಅವನ ಇಚ್ಛೆಯಾಗಿತ್ತು. ಅವನ ಗ್ರಂಥದಲ್ಲಿ "ಜರ್ಮನಿಯಲ್ಲಿ ಸುಧಾರಣೆಯ ಇತಿಹಾಸ"ವು ಆ ಯುಗದ ಮೊದಲ ವಿದ್ವತ್‌ಪೂರ್ಣ ಬರಹವಾಗಿ ಕಾಣಿಸಿಕೊಂಡಿತು. ನಂತರ ಅವನ ಇತರ ಗ್ರಂಥಗಳು ಹೊರಬಂದವು. "ಮೆಮೋಯರ್ಸ್ ಆಫ್ ದಿ ಹೌಸ್ ಬ್ರಾಂಡನ್‌ಬರ್ಗ್" ಮತ್ತು "ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ಪ್ರಷ್ಯಾದ ಚರಿತ್ರೆ" ನಂತರ ಹನ್ನೆರಡು ಗ್ರಂಥಗಳಲ್ಲಿ ವಿಸ್ತರಿಸಿತು. "ಫ್ರಾನ್ಸಿನಲ್ಲಿ ಹದಿನಾರನೇ ಮತ್ತು ಹದಿನೇಳನೇ ಶತಮಾನಗಳಲ್ಲಿ ಅಂತಃಕಲಹಗಳು ಮತ್ತು ರಾಜತನ" ಫ್ರಾನ್ಸಿನ ಒಂದು ಇತಿಹಾಸವು ಮುಖ್ಯವಾಗಿ ಆ ಕಾಲದಲ್ಲಿ ಪ್ರತಿಯೊಂದು ಅನೇಕ ಕಲಮ್ಮುಗಳನ್ನು ಹೊಂದಿರುತ್ತ ನಂತರದ ಸಂಶೋಧನೆಯಿಂದ ಅವು ಅಪ್ರಸ್ತುತ ಎಂದೆನಿಸಿದರೂ ಅವುಗಳ ಸುಂದರವಾದ ನಿರೂಪಣಾ ಕೌಶಲದಿಂದ ಇಂದಿಗೂ ಓದಲು ಯೋಗ್ಯವಾಗಿದೆ. "ಹದಿನೆಂಟನೆಯ ಶತಮಾನದ ಉತ್ತರಾರ್ಧದ ಮತ್ತು 19ನೇ ಶತಮಾನದ ಪೂರ್ವಾರ್ಧದ ಮೇಲಿನ ಗ್ರಂಥಗಳು ಮತ್ತಿತರ

ಗ್ರಂಥಗಳು ಜಟಿಲ ರಾಜಕೀಯ ಘಟನೆಗಳ ವರದಿಗಳಾಗಿವೆ. ಆದರೆ ಬದಲಿಸುತ್ತಿರುವ ಕಾಲದ ಕೇಂದ್ರೀಯ ಸಮಸ್ಯೆಗಳನ್ನು ಪರೋಕ್ಷವಾಗಿ ತಮ್ಮಲ್ಲಿ ತಾವು ಮಾತ್ರ ಸಂಬೋಧಿಸಿಕೊಳ್ಳುತ್ತವೆ.

ಹೀಗೆ ರಾಂಕೆಯು ಇತಿಹಾಸಕಾರರಿಗೆ ಓದುಗರ ಮೇಲೆ ಅನಾವಶ್ಯಕವಾಗಿ ಒತ್ತಾಯ ತರಬಹುದಾದ ವಿಚಾರಗಳನ್ನು ಪ್ರತಿಪಾದಿಸುವ ತತ್ತ್ವಜ್ಞಾನಿಗಳ ವ್ಯಾಪಾರಕ್ಕೆ ಬೀಳದಿರಲು ಎಚ್ಚರಿಕೆ ಕೊಟ್ಟನು. ಅವನು ತನ್ನ ದೀರ್ಘವಾದ ಮತ್ತು ಬಹಳ ಫಲಪ್ರದವಾದ ಶ್ರಮವನ್ನು ಸರ್ವಮಾನ್ಯ ರಚನೆಯನ್ನು ತಪ್ಪಿಸಿ ಏಕಲೇಖನದ ರೂಪದಲ್ಲಿ ಪೂರೈಸಿದನು. ಫ್ರಾನ್ಸಿನ ಇತಿಹಾಸವನ್ನು ಫ್ರೆಂಚರನ್ನು ಅಸಂತೋಷಗೊಳಿಸದ ರೀತಿಯಲ್ಲಿ ಬರೆದುದೇ ಅವನ ಅತಿ ದೊಡ್ಡ ಸಾಧನೆಯಾಗಿತ್ತು. ಸಂಗತಿಗಳು ನಿಜವಾಗಿಯೂ ಹೇಗೆ ಸಂಭವಿಸಿದುವೆಂಬುದನ್ನು ಬಹಿರಂಗಗೊಳಿಸುವುದೇ ಅವನ ನಿಜವಾದ ಕೆಲಸವಾಗಿದ್ದಿತು. ಇದು ಬಹಳ ಪ್ರಶಂಸನೀಯವೇ ಸರಿ. ಏಕೆಂದರೆ ಓರ್ವ ಜರ್ಮನ್ನನಿಗೆ ಫ್ರಾನ್ಸಿನ ಇತಿಹಾಸವನ್ನು ಬರೆದರೂ ಪಕ್ಷಪಾತಿ ಎಂಬ ಟೀಕೆಯಿಂದ ತಪ್ಪಿಸಿಕೊಳ್ಳುವುದು ಸಾಮಾನ್ಯ ಸಾಧನೆ ಏನಲ್ಲ. ಹಾಗೆಯೇ ರಷ್ಯನ್ನರು ಅಮೇರಿಕಾದ ನೀತಿಗಳನ್ನು ಅಮೇರಿಕನ್ನರಿಂದ ತಮ್ಮ ಪರವೇ ಪ್ರತಿಕ್ರಿಯೆಯನ್ನು ಪಡೆಯುವ ರೀತಿಯಲ್ಲಿ ಟೀಕಿಸುವುದಾದರೆ ಯಾರಾದರೂ ಚಾರಿತ್ರಿಕ ಪಕ್ಷಪಾತರಹಿತ ದೃಷ್ಟಿಯು ಸಂಪೂರ್ಣವಾಗಿ ಮರೆತಿಲ್ಲವೆಂದೇ ಹೇಳಬಹುದು. ಎಲ್ಲಿ ಯಾವುದೇ ರೀತಿಯ ರಾಷ್ಟ್ರೀಯ ಅಥವಾ ಧಾರ್ಮಿಕ ಅಥವಾ ಪಂಥೀಯ ಅಥವಾ ಜನಾಂಗೀಯ ಅಸಹನೆಗಳಿಗೆ ಸ್ಥಳ ಇಲ್ಲದಿರುವಂತೆ ಮತ್ತು ಇತಿಹಾಸವು ಒಂದು ವಿಜ್ಞಾನವೆನ್ನುವ ಮಟ್ಟಕ್ಕೆ ಬರಲೇಬೇಕು. ಕಡಿಮೆಯೂ ಇಲ್ಲ, ಹೆಚ್ಚಿಗೆಯೂ ಇಲ್ಲವೆನ್ನುವ ಭಾವದ ಇಂತಹ ಇತಿಹಾಸದ ಬರವಣಿಗೆಯನ್ನು ಪ್ರಾರಂಭಿಸಿದವನೇ ರಾಂಕೆ. ಅವನು ತನ್ನದೇ ದೇಶದ ವಿದ್ವಾಂಸರಿಗೂ ಮತ್ತು ಇತರರೆಲ್ಲರಿಗೂ ಇಬ್ಬರಿಗೂ ಒಬ್ಬ ಆದರ್ಶ ಇತಿಹಾಸಕಾರನಾಗಿದ್ದನು.

## 12.4 ದೃಷ್ಟ ಇಥ್ಯಾತ್ಮಕ ಯುಗ (1798–1886)

### 12.4.1 ಆಗಸ್ಟ್ ಕಾಮ್ಟೆ (1798–1857)

ಆಗಸ್ಟ್ ಕಾಮ್ಟೆಯ ಅಂತಿಮ ಉದ್ದೇಶವು ಮಾನವ ಸಮಾಜದ ರಾಜಕೀಯ ಪುನಃ ಸಂಘಟನೆಯೇ ಆಗಿದ್ದಿತು. ಅಂತಹ ಪುನಃ ಸಂಘಟನೆಯು ಸಮಾಜದ ಆಧ್ಯಾತ್ಮಿಕ ಮತ್ತು ನೈತಿಕ ಏಕತೆಯನ್ನು ಆಧರಿಸಬೇಕೆಂಬುದು ಅವನ ಮೂಲಭೂತ ನಂಬಿಕೆಯಾಗಿತ್ತು. ಮಾನವ ಮನಸ್ಸಿನ ವಿಕಾಸವು ನಿಶ್ಚಿತ ನಿಯಮಗಳಿಗನುಗುಣವಾಗಿ ಮುಂದುವರೆಯುವುದೆಂದು ನಂಬುತ್ತಲೇ ಅವುಗಳನ್ನು ಚರಿತ್ರಿಕ ಪ್ರಮಾಣಗಳ ನೆರವಿನೊಂದಿಗೆ ವೈಜ್ಞನಿಕ ವಿಧಾನದಿಂದ ಬೇರ್ಪಡಿಸುವುದು ಮತ್ತು ಪ್ರತ್ಯಕ್ಷೀಕರಿಸುವುದನ್ನು ತನ್ನ ಮೊದಲ ಕೆಲಸವೆಂದು ಪರಿಗಣಿಸಿದನು.

ಸಂತ ಸೈಮನ್ನನ ಕಾರ್ಯದರ್ಶಿಯಾಗಿ ಆಗಸ್ಟ್‌ಕಾಮ್ಟೆ ಯಥಾರ್ಥಯುಗ ಉನ್ನತ ಪಾದ್ರಿಯಾದನು. ಮಾಂಟ್‌ಪೆಲ್ಲಿಯರ್‌ನಲ್ಲಿ ಹುಟ್ಟಿ ಕಾಮ್ಟೆಯು ವಯಸ್ಸಿನ ಮುನ್ನವೇ ವಿರೋಧಿಯಾದನು/ದಂಗೆಕೋರ

ಎನಿಸಿಕೊಂಡನು. ಕೆಲವು ಕಾಲ ಉಪಾಧ್ಯಾಯನಾಗಿ ಕೆಲಸ ಮಾಡಿ ಸಂತ ಸೈಮನ್ನನಿಗೆ ಕಾರ್ಯದರ್ಶಿಯಾದನು. ಏಳು ವರುಷಗಳ ನಂತರ ಅಮತೂ ಅವನ ಸ್ವತಂತ್ರ ಪ್ರವೃತ್ತಿಯು ದಂಗೆ ಎದ್ದಿತು. ಒಂದು ಅಧಿಯಾರಯುತ ಧಾರ್ಮಿಕ ಒತ್ತಡದಲ್ಲಿ ಅವನು ತನ್ನನ್ನು ತಾನು ಮಾನವೀಯತೆಯ ಉನ್ನತ ಪಾದ್ರಿ ಎಂದು ಘೋಷಿಸಿಕೊಂಡನು.

ಕಾಮ್ಟೆಯು ತನ್ನ ತತ್ವಶಾಸ್ತ್ರದ ತತ್ವಗಳನ್ನು ಮತ್ತು ಗುರಿಗಳನ್ನು ಎರಡು ಗ್ರಂಥಗಳಲ್ಲಿ ವಿವರಿಸಿದನು. "ದಿ ಕೋರ್ಸ್ ಆಫ್ ಪಾಸಿಟಿವಿಸ್ಟ್ ಫಿಲಾಸಫಿ (1830–42) 6 ಗ್ರಂಥಗಳಲ್ಲಿ ಮತ್ತು 'ದಿ ಸಿಸ್ಟಂ ಆಫ್ ಪಾಸಿಟಿವಿಸ್ಟ್ ಪಾಲಿಟಿಕ್ಸ್ (1851–54) ನಾಲಕ್ಕು ಗ್ರಂಥಗಳಲ್ಲಿ ಈ ಗ್ರಂಥಗಳಲ್ಲಿ ಸಾದರಪಡಿಸಿರುವ ಮೂಲ ದೃಷ್ಟಿಕೋನವೆಂದರೆ "ಎಲ್ಲ ಸಂಗತಿಗಳು ವ್ಯತ್ಯಾಸ ಹೊಂದದ ಪ್ರಾಕೃತಿಕ ನಿಯಮಗಳಿಗೆ ಬದ್ಧವಾಗಿರುವುದರಿಂದ ಅವುಗಳ ಖಚಿತ ಶೋಧನೆ ಮತ್ತು ಸಾಧ್ಯವಾದಷ್ಟು ಅತ್ಯಂತ ಸಣ್ಣ ಸಂಖ್ಯೆಗೆ ಇಳಿಸುವುದು ನಮ್ಮೆಲ್ಲ ಪ್ರಯತ್ನದ ಉದ್ದೇಶವಾಗಿದೆ". ಕಾಮ್ಟೆಯ ವಾದವನ್ನು ಯಥಾರ್ಥವಾದವೆಂದು ಕರೆಯಲಾಗಿದೆ. ನಿರ್ದಿಷ್ಟ ಸ್ಫುಟವಾದ ಪೂರ್ಣವಾದ ಗುಣಗಳ ಕಾರಣದಿಂದ ಅದರ ಹೆಸರಿನಲ್ಲೇ ತಿಳಿಸಲಾಗಿದೆ. ಆ ಗುಣಗಳೇ ಭೌತಿಕ ವಿಜ್ಞಾನಗಳಲ್ಲಿಯೂ ನಿಯಮಗಳನ್ನು ಗುರುತಿಸುವಂತಹವು. ಫ್ರೆಂಚ್ ತತ್ವಜ್ಞಾನಿಯು ತನ್ನ ಯಥಾರ್ಥವಾದಕ್ಕೆ ಎರಡು ವಿಷಯಗಳನ್ನು ಮುಂದಿಟ್ಟನು. ಮೊದಲಿಗೆ ವಿಜ್ಞಾನಿಗಳು ಪ್ರಾಕೃತಿಕ ಅಂಶಗಳ ಅಧ್ಯಯನ ಮಾಡುವ ರೀತಿಯಲ್ಲಿಯೇ ಸಮಾಜದಲ್ಲಿ ಮನುಷ್ಯನ ಅಧ್ಯಯನ ಮಾಡುವುದೂ ಸಾಧ್ಯ ಮತ್ತು ಎರಡನೆಯದಾಗಿ ಚಾರಿತ್ರಿಕ ಮತ್ತು ಸಾಮಾಜಿಕ ನಡವಳಿಕೆಯ ನಿರ್ದಿಷ್ಟ ನಿಯಮಗಳನ್ನು ಕಂಡುಹಿಡಿಯುವುದೂ ಸಾಧ್ಯ. ವಿಜಯೋತ್ಸಾಹದಲ್ಲಿ ಕಾಮ್ಟೆ ಮೂರು ಹಂತಗಳ ತನ್ನ ನಿಯಮಗಳನ್ನು ರೂಪಿಸಿದನು. ಎಲ್ಲಾ ಮಾನವ ಸಮಾಜಗಳ ಇತಿಹಾಸವು ಮತ್ತು ಅನುಭವಗಳ ಶಾಖೆಗಳು ಮೂರು ಹಂತಗಳನ್ನು ಪ್ರತಿಯೊಂದು ಅದಕ್ಕೆ ಸಂಬಂಧಪಟ್ಟ ಚಾರಿತ್ರಿಕ ಯುಗಾರಂಭದೊಂದಿಗೆ ದಾಟಬೇಕು". ಧಾರ್ಮಿಕ ಸೈನಿಕ (ಪ್ರಾಚೀನ) ಆಧ್ಯಾತ್ಮಿಕತೆ ಕಾನೂನುಬದ್ಧತೆ (ಮಧ್ಯಯುಗ) ಮತ್ತು ಯಥಾರ್ಥ ವೈಜ್ಞಾನಿಕ, ಕೈಗಾರಿಕಾ (ಆಧುನಿಕ) ಮಾನವ ಮನಸ್ಸಿನ ಪ್ರಗತಿಯ ಅಧ್ಯಯನದ ಮೂಲಕ ಮಾನವ ಸಮಾಜದ ನಿಯಮಗಳನ್ನು ಕಂಡುಹಿಡಿಯುವುದು ಸಾಧ್ಯವೆಂದು ಕಾಮ್ಟೆ ಯೋಚಿಸಿದನು.

ಕಾಮ್ಟೆಯ ಇತಿಹಾಸದ ವಿದ್ವತ್‌ಪೂರ್ಣ ವಿಶ್ಲೇಷಣೆ ಮತ್ತು ಮೂಲ ವಿವರಣೆ, ಸಾಮಾನ್ಯವಾಗಿ ಇತಿಹಾಸಕಾರರಿಗೆ ಹಿಡಿಸದೇ ಹೋದರೂ ಅವನ ಪ್ರಭಾವವು ಗಣನೀಯವಾಗಿತ್ತು. ಎಲ್ಲಾ ಸಾಮಾಜಿಕ ವಿಚಾರಗಳು ಇಡೀಯಾಗಿ ಪರಸ್ಪರ ಸಂಬಂಧಿತವೆನ್ನುವ ಅವನ ದೃಷ್ಟಿಕೋನವು ಅನೇಕ ಸಮಾಜ ವಿಜ್ಞಾನಗಳ ನಂತರದ ಬೆಳವಣಿಗೆಯ ಮೇಲೆ ಪೂರ್ಣ ಪ್ರಭಾವವನ್ನು ಬೀರಿತ್ತು. ಈಮೈಲ್ ಫ್ಲೇಗ್‌ಟ್‌ಗೆ ಆಗಸ್ಟ್ ಕಾಮ್ಟೆಯು ಬೀಜಗಳ ಅತ್ಯಂತ ಶಕ್ತಿಶಾಲಿಯಾದ ಧಾರೆ ಮತ್ತು ಬೌದ್ಧಿಕ ಪ್ರಚೋದಕ, ಡೆಸ್ಕಾರ್ಟ್ಸ್‌ನ ನಂತರ ಫ್ರಾನ್ಸ್ ಕಂಡ ಮಹಾನ್ ಚಿಂತಕ ಎನಿಸಿದ್ದಾನೆ.

## 12.4.2. ಕಾರ್ಲ್‌ಮಾರ್ಕ್ಸ್ (1818–1883)

ಇತಿಹಾಸಕ್ಕೆ ಒಂದು ಮಾರ್ಗವನ್ನು ಬೆಳೆಸುವುದರಲ್ಲಿ ಇತರರನ್ನೆಲ್ಲಾ ಮೀರಿಸಿದವನೇ ಕಾರ್ಲ್‌ಮಾರ್ಕ್ಸ್. ಸಾಮಾನ್ಯ ನಿಯಮಗಳನ್ನು ಮತ್ತು ವಿಶಾಲ ಮಾದರಿಗಳನ್ನು ಒಪ್ಪುವಂತೆ ಮಾಡಿದ ಮಾರ್ಗವೊಂದನ್ನು ಇತಿಹಾಸಕ್ಕೆ ಹಾಕಿಕೊಡುವುದರಲ್ಲಿ ಇತರರನ್ನೆಲ್ಲಾ ಹಿಂದೆ ಹಾಕಿ ಮುನ್ನಡೆದವನೇ ಕಾರ್ಲ್‌ಮಾರ್ಕ್ಸ್. ಕಾರ್ಲ್‌ಮಾರ್ಕ್ಸ್‌ನು ಇತಿಹಾಸದಲ್ಲಿ ಯಥಾರ್ಥವಾದವನ್ನು ಉನ್ನತ ತಾತ್ವಿಕ ಮಟ್ಟ, ಚಾರಿತ್ರಿಕ, ಭೌತಿಕವಾದಕ್ಕೆ ಬೆಳೆಸಿದನು. ಮಾರ್ಕ್ಸ್‌ನು ಜರ್ಮನಿಯಲ್ಲಿ ರೈನ್‌ಲ್ಯಾಂಡಿನಲ್ಲಿ ಓರ್ವ ವಕೀಲನ ಮಗನಾಗಿ ಜನಿಸಿದನು. ಇವನು ಕಾನೂನು ಮತ್ತು ನ್ಯಾಯಶಾಸ್ತ್ರವನ್ನು ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸ ಮಾಡಿದನು. ಆದರೆ ಇತಿಹಾದಲ್ಲಿ ಮತ್ತು ತತ್ವಶಾಸ್ತ್ರದಲ್ಲಿ ತೀವ್ರ ಆಸಕ್ತಿ ಬೆಳೆಸಿಕೊಂಡನು. 1841ರಲ್ಲಿ ವಿಶ್ವವಿದ್ಯಾನಿಲಯವನ್ನು ಬಿಟ್ಟು ಅಂದಿನ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ತೀವ್ರವಾಗಿ ಟೀಕಿಸಿದನು ಮತ್ತು ಬಹಳ ಬೇಗನೆ ತಾನು ಹುಟ್ಟಿದ ನಾಡನ್ನು ತ್ಯಜಿಸಬೇಕಾಯಿತು. ತದನಂತರ ಅಲ್ಲಿಂದ ಫ್ರಾನ್ಸಿಗೆ ನಂತರ ಬೆಲ್ಜಿಯಂಗೆ ಮತ್ತು ಕೊನೆಯದಾಗಿ ಇಂಗ್ಲೆಂಡಿಗೆ ತೆರಳಬೇಕಾಯಿತು.

ಪ್ರಥಮ ಅಂತರಾಷ್ಟ್ರೀಯ (1864) ವನ್ನು ರೂಪಿಸಿದವರಲ್ಲಿ ಇವನು ಒಬ್ಬನಾಗಿದ್ದನು ಮತ್ತು ತದನಂತರ ಸಮಾಜವಾದೀ ಚಳುವಳೀಯ ಪ್ರಧಾನ ವ್ಯಕ್ತಿಯಾಗಿ ಉಳಿದನು. ಅವನ ಪರವಾಗಿದ್ದ ಎರಡು ಅತ್ಯುತ್ತಮ ಸನ್ನಿವೇಶಗಳು ಇಲ್ಲದಿದ್ದಲ್ಲಿ ಕಠಿಣ ಮತ್ತು ಪ್ರತಿರೋಧವಾಗಿರುತ್ತಿದ್ದ ಅವನ ಜೀವನದಲ್ಲಿ ಆ ಎರಡು ಸನ್ನಿವೇಶಗಳು ಜೆನ್ನಿವನ್ ವೆಸ್ಟ್ ಫಾಲಿಯಳೊಂದಿಗೆ 1843ರಲ್ಲಿ ಇವನ ವಿವಾಹ ಮತ್ತು ಅದೇ ವರುಷದಲ್ಲಿ ಪ್ರೆಡರಿಚ್ ಈಜಿಪ್ಟ್ ಜೊತೆ ಅವನ ಪರಿಚಯ. ಜೆನ್ನಿಯು ಓರ್ವ ಅರ್ಪಣಾಭಾವದ ಪತ್ನಿಯಾಗಿದ್ದಳು ಮತ್ತು ಅವನ ಕೆಲಸದಲ್ಲಿ ಅರ್ಪಣಾಭಾವದಿಂದ ಸಹಾಯಕಿಯಾದಳು. ಮಾರ್ಕ್ಸ್‌ನು ಏಂಜಲ್ಸ್ ಜೊತೆಗಿನ ತನ್ನ ಸ್ನೇಹವನ್ನು ತನ್ನ ಜೀವನದಲ್ಲಿ ಮತ್ತು ಹೋರಾಟದಲ್ಲಿ ಅಮೂಲ್ಯವಾದುದೆಂದು ಮನಗಂಡನು. ಅವರದು ಇತಿಹಾಸದಲ್ಲಿ ಅತ್ಯಂತ ರಚನಾತ್ಮಕ ಸಹಯೋಗದ ಸಾಹಸವಾಗಿತ್ತು.

ಜೀವನ ಮತ್ತು ಚರಿತ್ರೆಯ ಭೌತಿಕವಾದವನ್ನು ಮಂಡಿಸಿದ ಮೊದಲ ಗ್ರಂಥಗಳು 'ದಿ ಹೋಲಿ ಫ್ಯಾಮಿಲಿ (1845) ಮತ್ತು ದಿ ಜರ್ಮನ್ ಐಡಿಯಾಲಜಿ (1846). ಈ ಎರಡೂ ಗ್ರಂಥಗಳನ್ನು ಮಾರ್ಕ್ಸ್‌ನು ಏಂಜಲ್ಸಲ್‌ನ ಜೊತೆಯಲ್ಲಿಯೇ ಬರೆದನು. ಮಾರ್ಕ್ಸ್ ತತ್ವದ ಮೂಲಭೂತ ತತ್ವಗಳ ಪ್ರಥಮ ಸಮನ್ವಿತ ಮತ್ತು ಸ್ಫುಟವಾದ ವಿವರಣೆಯಾದ ಕಮ್ಯುನಿಸ್ಟ್ ಮ್ಯಾನಿಫೆಸ್ಟೊ 1848ರಲ್ಲಿ ಪ್ರಕಟವಾಯಿತು. ಮತ್ತೆ ಇದೂ ಮಾರ್ಕ್ಸ್ ಮತ್ತು ಏಂಜಲ್ಸ್‌ರ ಸಹಯೋಗದಲ್ಲಿಯೇ ರಚಿತವಾಗಿತ್ತು. ಮಾರ್ಕ್ಸ್‌ನ "ದಿ ಕ್ರಿಟಿಕ್ ಆಫ್ ಪೊಲಿಟಿಕಲ್ ಎಕಾನಮಿ (1858) ಒಂದು ಅದ್ಭುತ ಗ್ರಂಥವಾಗಿತ್ತು. ಇದರ ಬಗ್ಗೆ ಏಂಜಲ್ಸ್‌ನು ಹೀಗೆ ಬರೆದಿದ್ದನೆ. "ಡಾರ್ವಿನನ್ನು ಮಾನವ ಚರಿತ್ರೆಯ ಪ್ರಗತಿಯ ನಿಯಮವನ್ನು ಕಂಡುಹಿಡಿದ ಹಾಗೆಯೇ ಇದು ದಾಸ್ ಕ್ಯಾಪಿಟಲ್ (1867–94) ಒಂದು ಜೀವಿತ ಕಾಲದ ಗ್ರಂಥವಾಗಿತ್ತು ಮತ್ತು ವೈಜ್ಞಾನಿಕ ಕಮ್ಯುನಿಸ್ಟ್ ತತ್ವದ ಪ್ರಧಾನ ಪಠ್ಯವೆನಿಸಿದೆ. ಮಾರ್ಕ್ಸ್‌ನು ನಿಧನ ಹೊಂದಿದಾಗ ಏಂಜಲ್ಸ್ 'ಮಾನವ ಕುಲವು ಒಂದು ತಲೆಯಿಂದ

ಚಿಕ್ಕದಾಯಿತು/ ಕುಬ್ಜವಾಯಿತು ಮತ್ತು ನಮ್ಮ ಕಾಲದ ಅತ್ಯುನ್ನತ ತಲೆಯಿಂದ ಕಿರಿದಾಯಿತು" ಎಂದು ಹೇಳಿದನು.

ಭೌತಿಕ ಉತ್ಪಾದನೆಯ ರೀತಿಗಳು ಮಾನವ ಜೀವನದ ಇತರ ಎಲ್ಲಾ ಅಂಶಗಳ ಮೇಲೂ ಪರಿಣಾಮ ಬೀರುತ್ತವೆ ಎಂದು ಹೇಳುತ್ತ ಮಾರ್ಕ್ಸ್‌ನ ತತ್ವವು ಒಂದು ಸಂಘಟಿತ ತತ್ವವನ್ನು ನೀಡಿದೆ ಮತ್ತು ಈಗ ಕರೆದಿರುವಂತೆ "ಪೂರ್ಣಚರಿತ್ರೆ" ಎಂದು ಅದನ್ನು ತಿಳಿಯಬಹುದಾಗಿದೆ. "ಪೂರ್ಣಚರಿತ್ರೆ" ಎಂದರೆ ಕಲೆ, ವಿಚಾರಗಳು, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರ ಇವುಗಳ ನಡುವೆ ಅಂತರ ಸಂಬಂಧದ ಮೇಲೆ ಹೆಚ್ಚು ಒತ್ತು ನೀಡಲಾಗಿರುವುದನ್ನೇ ಇತಿಹಾಸ ಎಂದು ತಿಳಿಯಬಹುದು. ಹೆನ್ರಿಬೆರ್ (1863–1954) ಫ್ರಾನ್ಸಿನಲ್ಲಿ 1900ರಲ್ಲಿ ತಾನು ಸ್ಥಾಪಿಸಿದ ಪತ್ರಿಕೆ, "ರಿವ್ಯೂ ಆಪ್ ಹಿಸ್ಟಾರಿಕಲ್ ಸಿಂಥಸಿಸ್"ನಲ್ಲಿ ಸಮಾಜದಲ್ಲಿ ಮನುಷ್ಯನ ಎಲ್ಲಾ ಚಟುವಟಿಕೆಗಳನ್ನು ಒಂದು ದೊಡ್ಡ ಸಮನ್ವಯದಲ್ಲಿ ಒಟ್ಟಿಗೆ ತರಲು ಪ್ರಯತ್ನಿಸಿದನು. ಫ್ರಾನ್ಸಿನಲ್ಲಿ ಮತ್ತೆ ಲೂಸಿನ್ ಫೆಬ್‌ವರ್ ಮತ್ತು ಮಾರ್ಕ್ ಬ್ಲಾಕ್, ತಮ್ಮ ಪತ್ರಿಕೆ ಅನ್ನಿಲೇಸ್ ಮೂಲಕ ಒಂದು ಇತಿಹಾಸವನ್ನು ಹೆಚ್ಚು ಸ್ಪಷ್ಟ ಮತ್ತು ಹೆಚ್ಚು ಮಾನವೀಯವಾಗಿ ತೆರೆದಿಡುವ ಭರವಸೆ ಹೊಂದಿದ್ದನು.

## 12.5 ಸಾರಾಂಶ

18ನೆಯ ಮತ್ತು 19ನೆಯ ಶತಮಾನಗಳು ಮಹಾನ್ ವಿದ್ವಾಂಸರು ಮತ್ತು ಜ್ಞಾನ ಪುನರುಜ್ಜೀವನ ನವೋದಯ ಯುಗದ, ರಮ್ಯತೆಯ ಕಾಲ, ಯಥಾರ್ಥತೆಯ ಕಾಲ ಮೊದಲಾದ ಅನೇಕ ತತ್ವಗಳಿಗೂ ಮತ್ತು ಆಧುನಿಕ ವೈಜ್ಞಾನಿಕ ಇತಿಹಾಸಕ್ಕೂ ಸಾಕ್ಷಿಯಾದವು. ಇವುಗಳಲ್ಲಿ ನವೋದಯ ಯುಗ, ರಮ್ಯತೆಯ ಯುಗ, ಮತ್ತು ಯಥಾರ್ಥತೆಯ ಯುಗಗಳು ಬಹಳ ಮುಖ್ಯವಾದುವು. ನವೋದಯ ಕಾಲದಲ್ಲಿ ಡೇವಿಡ್ ಹ್ಯೂಂ ಮತ್ತು ಎಡ್ವರ್ಡ್ ಗಬ್ಬನ್ ಯೂರೋಪಿನಲ್ಲಿ ಬಹುಮುಖ್ಯ ಪಾತ್ರ ವಹಿಸಿದರು. ಹತ್ತೊಂಭತ್ತನೆಯ ಶತಮಾನದಲ್ಲಿ ಕಾರ್ಲ್‌ಮಾರ್ಕ್ಸ್ ಮತ್ತು ಮಾರ್ಕ್ಸ್ ತತ್ವಗೂ ಬಹು ಜನಪ್ರಿಯವೆಂದು ಹೇಳಲಾಗಿದೆ. ಕಾರ್ಲ್‌ಮಾರ್ಕ್ಸ್‌ನು ಮಾರ್ಕ್ಸ್‌ನ ತತ್ವಶಾಸ್ತ್ರ, ಆರ್ಥಿಕ ನಿಯತವಾದ (ಪೂರ್ವ ನಿರ್ಧರಿತ)ದ ಸಿದ್ಧಾಂತವನ್ನು ಬಿಟ್ಟು ಹೋದುದಲ್ಲದೆ ಇತಿಹಾಸದ ತತ್ವಶಾಸ್ತ್ರಕ್ಕೂ ಬಹಳವೇ ಕಾಣಿಕೆ ಸಲಸಲಿಸಿದ್ದಾನೆ. 19ನೇ ಶತಮಾನದ ಉತ್ತರಾರ್ಧದಲ್ಲಿ ರಾಂಕೆಯು ಹೇಗೆ ತನ್ನ ವೈಜ್ಞಾನಿಕ ಬರಹಗಳಲ್ಲಿ ಜನಪ್ರಿಯನಾದನೆಂದು ಮತ್ತು ಇತಿಹಾಸ ರಚನೆಯಲ್ಲಿ ಅವನ ಇತಿಹಾಸ ತತ್ವವು ಹೇಗೆ ಪ್ರಸಿದ್ಧವಾಯಿತೆಂಬುದನ್ನು ನಾವು ತಿಳಿಯುವವರಿದ್ದೇವೆ.

ವಿಮರ್ಶಾತ್ಮಕ ಇತಿಹಾಸ ರಚನೆಯು ಲಿಯೋಪಾಲ್ಡ್–ವಾನ್–ರಾಂಕೆಯಿಂದ ಪ್ರಾರಂಭವಾಯಿತು. ಅವನು ಆಧುನಿಕ ಇತಿಹಾಸಕ್ಕೆ ನೀ ಬಹರ್‌ನ ತತ್ವಗಳನ್ನು ಅಳವಡಿಸಿದ್ದಾನೆ. ಅವನು ಘಟನೆಗೆ ಅತ್ಯಂತ ಸಮೀಪದ ಸಾಕ್ಷಿಯು ಅತ್ಯುತ್ತಮ ಮೂಲವೆಂದು ಮತ್ತು ನಟರ ಅಕ್ಷರಗಳು ಕಾಲಾನುಕ್ರಮ ಇತಿಹಾಸದ ಕಥೆಗಳಿಗಿಂತ ಹೆಚ್ಚು ಮೌಲ್ಯವುಳ್ಳವೆಂಬ ಸೂತ್ರವನ್ನು ಅನುಸರಿಸಿದನು. ಅವನು ಲೇಖಕನ ವ್ಯಕ್ತಿತ್ವದ ಬಗ್ಗೆ ಅಭ್ಯಾಸ ಮಾಡುತ್ತ ಲಿಖಿತ ದಾಖಲೆಯ ಮೌಲ್ಯವನ್ನು ನಿರ್ಧರಿಸುವ ಮತ್ತು ಘಟನೆಗಳು ಇರುವ ಹಾಗೆಯೇ ಅವನ ಮಾಹಿತಿಯು ಎಲ್ಲಿಂದ ಲಭ್ಯವಾಯಿತೆನ್ನುವ ಪ್ರಶ್ನೆಯೊಳಗಣ ತನಿಖೆಗಳ ವಿಧಾನಗಳನ್ನು

ಕಂಡುಹಿಡಿದನು. ಇದುವರೆವಿಗೂ ಬಹಳ ಮೌಲ್ಯವುಳ್ಳದ್ದೆಂದು ಭಾವಿಸಲಾಗಿದ್ದ ಈ ವಿಧಾನಗಳ ಕಾರ್ಯರೂಪತೆಯಿಂದ ಅವು ಸಾಕಷ್ಟು ನಂಬಲರ್ಹವಾಗಿದ್ದವು. ಅದು ಹೇಗಾದರೂ ಇರಲಿ ಬೇರೆ ಯಾರಿಗಿಂತಲೂ ರಾಂಕೆಯು ಇತಿಹಾಸವನ್ನು ಒಂದು ಸ್ವಾಯತ್ತತೆಯ ಮತ್ತು ವೈಜ್ಞಾನಿಕ ಜ್ಞಾನದ ಶಾಖೆ ಎಂದು ಮಾಡುವುದರಲ್ಲಿ ಜವಾಬ್ದಾರನಾಗಿದ್ದಾನೆ. ಅವನೋರ್ವ ಅದ್ಭುತ/ಯಶಸ್ವಿ ಸಂಶೋಧಕ; ಜಗತ್ತಿನ ಇತಿಹಾಸದ ಮೇಲೆ ಎಲ್ಲಾ ರೀತಿಯ ಜೀವನ ಚರಿತ್ರೆಗಳ ಇತಿಹಾಸಗಳಿಂದ ಗ್ರಂಥಗಳವರೆಗೆ ಬರೆದಿದ್ದಾನೆ. ಅವನ ಐವತ್ತನಾಲ್ಕನೇ ಗ್ರಂಥಗಳ ಕಾಣಿಕೆಯು ಅವನಿಗೆ ಅಂತಸ್ತು ಮತ್ತು ಜನಪ್ರಿಯತೆ ಮತ್ತು ಒಳ್ಳೆಯ ಹೆಸರನ್ನು ತಂದುಕೊಟ್ಟಿವೆ.

## 12.6 ಪ್ರಮುಖ ಪದಗಳು

1. ವಾಲ್ಟೈರ್: ಇತಿಹಾಸಕಾರರ ವಿಚಾರವಾದಿ ಅಧ್ಯಯನ ಕೇಂದ್ರದ ಸಂಸ್ಥಾಪಕ
2. ದೇವತಾ ಶಾಸ್ತ್ರ: ಧಾರ್ಮಿಕ ಕಲ್ಪನೆಗಳ ಸ್ವರೂಪ ಮತ್ತು ದೇವರ ಪರಿಕಲ್ಪನೆಗಳ ಬಗೆಗಿನ ಶಾಸ್ತ್ರೀಯ ಮತ್ತು ವಿಚಾರವಾದಿ ಅಧ್ಯಯನ

## 12.7 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

2. ಜ್ಞಾನೋದಯ ಕಾಲದ ಬೆಳವಣಿಗೆಯಲ್ಲಿ ವಾಲ್ಟೇರ್ ಮತ್ತು ರೂಸೋವಿನ ಪಾತ್ರವನ್ನು ವಿವರಿಸಿ.
4. ರಮ್ಯತೆಯ ಇತಿಹಾಸ ರಚನೆಯ ನವ್ಯ ತತ್ವಶಾಸ್ತ್ರವನ್ನು ಮತ್ತು ಅದರ ಪ್ರಾಮುಖ್ಯತೆಯ ಮೌಲ್ಯಮಾಪನ ಮಾಡಿ.

## 12.8 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 12.2 ನೋಡಿ
2. ವಿಭಾಗ 12.3 ನೋಡಿ

## 12.9 ಪರಾಮರ್ಶನ ಗ್ರಂಥಗಳು

1. Bajaj, Satish K – Recent Tredns in Historiography – New Delhi, 1989.
2. Carr, E.H, "What is History" London-Macmillan, 1983.
3. Collingwood, R.G. "The Idea of History" Oxford University Press, Oxford, 1946.

4. Eyans, J, Richard “In Defense of History”, London, 1997.
5. Fred N. Kerlinger, “Foundations of behavioural Research”, Delhi, 1983.
6. Majumdar R.C. “Historiography in Modern India”, Bombay, 1967.
7. Rajayyan K, “History in Theory and Method”, Madras, 1996.
8. Sheik Ali B, “History- Its Theory and Method, Bangalore, 1999.
9. Sridhavan E, “A Textbook of Histiography, 500 B.C. to A.D. 2000”, Delhi, 2009.
10. Spengler, Oswald, “The Decline of the Hust”, London, 1961.
11) Toynbee, Arnold Joseph, “A Study of History”, 2 vols, Newyork, 1965.

---

**ಪಠ್ಯವನ್ನು ರಚಿಸಿದವರು:**
**ವೈ.ಎಚ್.ನಾಯಕವಾಡಿ**

.

## ಘಟಕ – 13 20ನೇ ಶತಮಾನದ ಇತಿಹಾಸ ಲೇಖನ ಕಲೆ

ರಚನೆ


13.0 ಉದ್ದೇಶಗಳು

13.1 ಪೀಠಿಕೆ

13.2 ಜರ್ಮನಿಯ ಇತಿಹಾಸ ವಿಚಾರ ಪಂಥ

13.2.1 ಜಾರ್ಜ್ ವಿಲ್‌ಹೆಲ್ಮ್ ಫ್ರೆಡರಿಕ್ ಹೆಗಲ್

13.2.1.1 ಹೆಗಲ ವಿಚಾರಧಾರೆ

13.2.2 ಕಾರ್ಲ್‌ಮಾರ್ಕ್ಸ್

13.2.2.1 ಇತಿಹಾಸವನ್ನು ಕುರಿತು ಮಾರ್ಕ್‌ನ ವಿಚಾರಧಾರೆ

13.2.3 ಲಿಯೋಪಾಲ್ಡ್ ವ್ಯಾನ್ ರಾಂಕೆ

13.2.3.1 ರಾಂಕೆಯ ವಿಚಾರ ಧಾರೆ

13.2.4 ಆಸ್ವಾಲ್ಡ್ ಸ್ಪೆಂಗ್ಲರ್

13.2.4.1 ಸ್ಪೆಂಗ್ಲರ್‌ನ ವಿಚಾರಧಾರೆ

13.3 ಫ್ರಾನ್ಸಿನ ವಿಚಾರ ಪಂಥ – ವಾಲ್ಟೇರ್

13.3.1 ವಾಲ್ಟೇರನ ಕೊಡುಗೆ

13.3.2 ಆಗಸ್ಟ್ ಕಾಮ್ಟೆ

13.4 ಗಿಯಾಂಬಟ್ಟಿಸ್ಟ ವಿಕೋ

13.4.1 ವಿಕೋ ಕೊಡುಗೆ

13.5 ಬೆನಡೆಟ್ಟೇ ಕ್ರೋಚೆ

13.5.1 ಕ್ರೋಚೆ ಕೊಡುಗೆಗಳು

13.6 ಸಾರಾಂಶ

13.7 ಪ್ರಮುಖ ಪದಗಳು

13.8 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

13.9 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

13.10 ಪರಾಮರ್ಶನ ಗ್ರಂಥಗಳು

## 13.0 ಉದ್ದೇಶಗಳು

ಈ ಘಟಕದ ಅಧ್ಯಯನದಲ್ಲಿ ನಾವು ಜರ್ಮನಿ, ಫ್ರಾನ್ಸ್ ಹಾಗೂ ಇಟಲಿ ದೇಶಗಳಲ್ಲಿ ಪ್ರಸಿದ್ಧರಾಗಿದ್ದ ಕೆಲವು ಇತಿಹಾಸ ಲೇಖಕರು ನೀಡಿದ ಬೌದ್ಧಿಕ ಕೊಡುಗೆಗಳ ಬಗ್ಗೆ ಅಧ್ಯಯನ ನಡೆಸುತ್ತೇವೆ. ಜರ್ಮನಿಯ ಫ್ರೆಡರಿಕ್ ಹೆಗಲ್, ಕಾರ್ಲ್‌ಮಾರ್ಕ್ಸ್, ರಾಂಕೆ, ಆಸ್ವಾಲ್ಡ್ ಸೆಂಗ್ಲರ್ ರವರ ಚಿಂತನೆ ಮತ್ತು ವಿಚಾರಧಾರೆಗಳ ಬಗ್ಗೆ ತಿಳಿದುಕೊಳ್ಳುತ್ತೇನೆ. ಫ್ರೆಂಚ್ ಬರಹಗಾರರಾದ ವಾಲ್ಟೇರ್ ಆಗಸ್ಟ್ ಕಾಂಪ್ಟ್ ರವರ ಬೌದ್ಧಿಕ ಕೊಡುಗೆಗಳ ಬಗ್ಗೆ ಅಧ್ಯಯನ ಮಾಡಲಾಗುತ್ತದೆ. ಅಲ್ಲದೇ ಗಿಯಾಂಬಟ್ಟಿಸ್ವ ವಿಕೋ ಹಾಗೂ ಕ್ರೊಚೆರವರು ಇತಿಹಾಸ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಗಳನ್ನು ಕೊಟ್ಟು ಬೆಳೆಯುವುದಕ್ಕೆ ಹೇಗೆ ಸಹಕಾರಿಯಾದರೂ ಎಂಬುದರ ಬಗ್ಗೆ ತಿಳಿದು ಇಲ್ಲಿ ತಿಳಿಯಲಾಗುವುದು.

## 13.1 ಪೀಠಿಕೆ

ಹಿಂದಿನ ಅಧ್ಯಾಯದಲ್ಲಿ ಪುನರುಜ್ಜೀವನ, ಜ್ಞಾನೋದಯ, ಭಾವನಾಸ್ವಾತಂತ್ರ್ಯ ಪಂಥ ಮತ್ತು ದೃಷ್ಟಪ್ರಮಾಣವಾದದ ಯುಗಗಳಲ್ಲಿ ಕಂಡುಬಂದ ಇತಿಹಾಸಲೇಖನ ಕಲೆಯ ಸ್ವರೂಪ ಹಾಗೂ ಲಕ್ಷಣಗಳನ್ನು ಹಾಗೂ ಇಂಗ್ಲೆಂಡಿನ ಈ ವಿಚಾರ ಪಂಥಗಳ ಪ್ರತಿನಿಧಿಗಳಾಗಿ ತಲೆದೋರಿದ ಶ್ರೇಷ್ಠ ಇತಿಹಸಕಾರರ ವಿಚಾರಧಾರೆಯನ್ನು ಕುರಿತು ವಿಚಾರ ಮಾಡಿದೆವು. ಅದೇ ಮಾದರಿಯಲ್ಲಿ ಈ ಅಧ್ಯಾಯದಲ್ಲಿ ಜರ್ಮನಿ, ಫ್ರಾನ್ಸ್, ಹಾಗೂ ಇಟಲಿ ದೇಶಗಳಲ್ಲಿ ಅಗ್ರಗಣ್ಯರಾಗಿದ್ದ ಕೆಲವು ಇತಿಹಾಸ ಲೇಖಕರು ನೀಡಿದ ಬೌದ್ಧಿಕ ಕೊಡುಗೆಗಳ ಬಗ್ಗೆ ಅಧ್ಯಯನ ಮಾಡಲಾಗುತ್ತದೆ.

## 13.2 ಜರ್ಮನಿಯ ಇತಿಹಾಸ ವಿಚಾರ ಪಂಥ

ಆಧುನಿಕ ದರ್ಶನಕ್ಕೆ ತವರುಮನೆಯಾಗಿದ್ದ ಜರ್ಮನಿಯು ಇತಿಹಾಸ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅತ್ಯಮೂಲ್ಯವಾದುದು. ಅದು ಐತಿಹಾಸಿಕ ಸಂಯೋಜನೆಯ ತತ್ತ್ವವನ್ನು ಪ್ರತಿಪಾದಿಸಿದ ಹೆಗಲ್ ಇತಿಹಾಸವನ್ನು ಕುರಿತು "ಭೌತಿಕವಾದೀಯ ವಿವರಣೆ" ಎಂಬ ಕೌತುಕಕಾರಿ ಸಿದ್ಧಾಂತವನ್ನು ಬೆಳಸಿದ ಕಾರ್ಲ್‌ಮಾರ್ಕ್ಸ್, ವಿಮರ್ಶಾತ್ಮಕ ಇತಿಹಾಸದ ವಿಧಾನವನ್ನು ಬಳಸಿ ಆಧುನಿಕ ಇತಿಹಾಸದ ಜನಕನೆಂದೆನಿಸಿಕೊಂಡ ರಾಂಕೆ ಮತ್ತು ಒಂದು ಶಕೆಯ ಅಂತ್ಯವನ್ನು ಮತ್ತು ಇನ್ನೊಂದರ ಆರಂಭವನ್ನು ಪೋಷಿಸಿದ ಆಸ್ವಾಲ್ಡ್ ಸ್ಪೆಂಗ್ಲರ್ ಎಂಬ ಶ್ರೇಷ್ಠ ಚರಿತ್ರಲೇಖಕರ ಜನ್ಮಭೂಮಿಯಾಗಿದ್ದಿತು.

### 13.2.1 ಜಾರ್ಜ್ ವಿಲ್‌ಹೆಲ್ಮ್ ಫ್ರೆಡರಿಕ್ ಹೆಗಲ್ (1770–1831)

ಅಸ್ತಿತ್ವವಾದ ಮಾರ್ಕ್ಸ್‌ವಾದ ದೃಷ್ಟಪ್ರಮಾಣವಾದ ಮತ್ತು ವಿಶ್ಲೇಷಣಾತ್ಮಕ ದರ್ಶನದ ಬೆಳವಣಿಗೆಯ ಮೇಲೆ ಪ್ರಭಾವವನ್ನು ಬೀರಿದಂತಹ ದಾರ್ಶನಿಕ ವ್ಯವಸ್ಥೆಯನ್ನು ನೀಡಿದ ಹಾಗೂ ಆಧುನಿಕ ಜಗತ್ತಿನ ಉತ್ಕೃಷ್ಟ

ಚಿಂತಕರಲ್ಲಿ ಒಬ್ಬನಾಗಿದ್ದ ಹೆಗಲ್ 1770ರ ಆಗಸ್ಟ್ 27 ರಂದು ದ್ರವ್ಯಶಾಖೆಗೆ ಸೇರಿದ್ದ ಕಂದಾಯದ ಅಧಿಕಾರಿಗೆ ಮಗನಾಗಿ ಸ್ಟಟ್‌ಗಾರ್ಟ್‌ನಲ್ಲಿ ಜನಿಸಿದನು. ಅವನು ಶಾಲೆಗೆ ಸೇರುವ ಮೊದಲೇ ತನ್ನ ತಾಯಿಯಿಂದ ಲ್ಯಾಟಿನ್ ಭಾಷೆಯ ಮೂಲಪಾಠಗಳನ್ನು ಕಲಿತುಕೊಂಡನು. ಅವನು ತನ್ನ 18 ವರ್ಷ ವಯಸ್ಸಿನವರೆಗೆ ತನ್ನ ಊರಿನ ಲ್ಯಾಟಿನ್ ಕಲಿಸುತ್ತಿದ್ದ ಶಾಲೆಯ ವಿದ್ಯಾರ್ಥಿಯಾಗಿದ್ದನು. ಆಗ ಅವನು ಪ್ರಾಚೀನ ಗ್ರೀಕ್ ಹಾಗೂ ಲ್ಯಾಟಿನ್ ಗ್ರಂಥಕಾರರ ಬರಹಗಳ ಟೀಕೆ–ಟಿಪ್ಪಣಿ, ವರ್ತಮಾನ ಪತ್ರಿಕೆಗಳ ಉದ್ಧೃತ ಭಗ, ನೀತಿ ಹಾಗೂ ಗಣಿತಶಾಸ್ತ್ರದ ಪ್ರಕರಣ ಗ್ರಂಥಗಳ ಕೃತಿಗಳಿಂದ ಉದ್ಧರಣಗಳನ್ನು ಸಂಗ್ರಹಿಸಿ, ಅವುಗಳನ್ನು ವರ್ಣಾನುಕ್ರಮದಲ್ಲಿ ಅಣಿಮಾಡಿಕೊಂಡನು ಹಾಗೂ ದೊಡ್ಡ ದೊಡ್ಡ ಉದ್ಧೃತ ಭಾಗಗಳನ್ನು ನಕಲು ಮಾಡಿಕೊಂಡನು. 1788ರಲ್ಲಿ ಅವನು ತನ್ನ ತಂದೆ ತಾಯಿಗಳ ಇಚ್ಛೆಯಿಂದ ದೀಕ್ಷೆ ಪಡೆಯುವುದಕ್ಕಾಗಿ ಟೂಬಿನ್‌ಜೆನ್‌ಗೆ ಹೋಗಿ ಅಲ್ಲಿ ಎರಡು ವರ್ಷಗಳ ಕಾಲ ದರ್ಶನ ಮತ್ತು ಪುರಾತನ ಗ್ರೀಕ್ ಹಾಗೂ ಲ್ಯಾಟಿನ್ ಸಾಹಿತ್ಯವನ್ನು ಅಧ್ಯಯನ ಮಾಡಿ 1790ರಲ್ಲಿ ಪಿಹೆಚ್.ಡಿ. ಪದವಿಯನ್ನು ಪಡೆದನು. ನಂತರ ದೇವತಾಶಾಸ್ತ್ರದ ವ್ಯಾಸಂಗವನ್ನು ಕೈಗೊಂಡಾಗ ಅವನಿಗೆ ತನ್ನ ಅಧ್ಯಾಪಕರ ಸಂಪ್ರದಾಯಪ್ರಿಯತೆ ಇಷ್ಟವಾಗಲಿಲ್ಲ. ಆ ಸಮಯದಲ್ಲಿ ಅವನು ಕವಿಯಾಗಿದ್ದ ಜೆ.ಸಿ.ಎಫ್. ಹೋಲ್ಡರ್ ಮತ್ತು ದಾರ್ಶನಿಕನಾಗಿದ್ದ ಎಫ್.ಡಬ್ಲ್ಯೂ.ಜೆ. ಷಿಲ್ಲಿಂಗ್‌ನ ಜೊತೆ ಸೇರಿಕೊಂಡು ಗ್ರೀಕ್ ರುದ್ರನಾಟಕಕಾರರ ಕೃತಿಗಳನ್ನು ಅಧ್ಯಯನ ಮಾಡಿದನು. ಫ್ರೆಂಚ್ ಮಹಾಕ್ರಾಂತಿಯನ್ನು ಬಲವಾಗಿ ಸಮರ್ಥಿಸಿದನು ಮತ್ತು ಒಂದು ದಿನ ಬೆಳಗ್ಗೆ ಮಾರುಕಟ್ಟೆಯ ಚೌಕದಲ್ಲಿ ಸಂಕೇತಾರ್ಥಕವಾಗಿ ಸ್ವಾತಂತ್ರ್ಯ ಸಸಿಯನ್ನು ನೆಟ್ಟನು. ಅವನು 1793ರಲ್ಲಿ ದೀಕ್ಷೆ ಪಡೆಯಲು ಅರ್ಹನಾಗಿದ್ದರೂ ಪಾದ್ರಿ ವರ್ಗವನ್ನು ಸೇರದೆ, ದರ್ಶನ ಹಾಗೂ ಗ್ರೀಕ್ ಸಾಹಿತ್ಯ ಅಧ್ಯಯನವನ್ನು ಮುಂದುವರಿಸಲು ಬಯಸಿದನು ಹಾಗೂ ಖಾಸಗಿ ಅಧ್ಯಾಪಕನಾಗಿ ಕಾರ್ಯವನ್ನು ಆರಂಭಿಸಿದನು. ಬರ್ನೆದಲ್ಲಿ ಕಳೆದ ಮೂರು ವರ್ಷಗಳಲ್ಲಿ ಅವನು ಅಲ್ಲಿದ್ದ ಗ್ರಂಥಾಲಯವನ್ನು ಚೆನ್ನಾಗಿ ಬಳಸಿಕೊಂಡು ಗಿಬನ್, ಮಾಂಟೆಸ್ಕ್ಯೂ ಮತ್ತು ಪುರಾತನ ಗ್ರೀಕ್ ಹಾಗೂ ಲ್ಯಾಟಿನ್ ಕೃತಿಗಳನ್ನು ಅಧ್ಯಯನ ಮಾಡಿದನು. ಗ್ರೀಕ್ ಕೃತಿಗಳ ಅಧ್ಯಯನದ ಕಾರಣ ಅವನಿಗೆ ಅಥೆನ್ಸಿನ ಸಂಸ್ಕೃತಿಯ ಬಗ್ಗೆ ಹೆಚ್ಚಿನ ಪ್ರೀತಿ ಉಂಟಾಯಿತು. ಸ್ವಲ್ಪ ಕಾಲದವರೆಗೆ ಅವನು ಕೈಸ್ತ ಮತಕ್ಕಿಂತ ಹೆಚ್ಚಾಗಿ ಗ್ರೀಸಿನ ಮತಧರ್ಮದ ಬಗ್ಗೆ ಒಲವನ್ನು ತೋರಿದನು. ನಂತರ ಕಾಂಟನ ಮತಧರ್ಮವನ್ನು ಕುರಿತ ಪ್ರಬಂಧದಿಂದ ಪ್ರಭಾವಿತನಾಗಿ ಅವನು ಜೀಸಸನ ಜೀವನಚರಿತ್ರೆಯ ಬಗ್ಗೆ ಮತ್ತು ಜೀಸಸನ ಉಪದೇಶಗಳು ತರ್ಕಯುಕ್ತವೂ ಹಾಘೂ ವಿಚಾರ ಪೂರ್ಣವೂ ಆಗಿರುವಾಗ ಹೇಗೆ ಕ್ರೈಸ್ತಧರ್ಮವು ಸರ್ವಾಧಿಕಾರವನ್ನು ಚಲಾಯಿಸುವ ಮತವಾಯಿತು ಎಂಬ ಪ್ರಶ್ನೆಯನ್ನು ಕುರಿತು ಎರಡು ಪ್ರಬಂಧಗಳನ್ನು ರಚಿಸಿದನು. ಮೊದಮೊದಲು ಅವನು ಕ್ರೈಸ್ತಮತ ಹಾಗೂ ಚರ್ಚ್‌ಗಳ ಬಗ್ಗೆ ಕಟುವಾಗಿ ಬರೆದಿದ್ದನು. ಅವನ ಟೀಕೆಗೆ ಗುರಿಯಾಗಿದ್ದುದು ಸಂಪ್ರದಾಯಬದ್ಧತೆಯೇ ಹೊರತು ದೇವತಾಶಾಸ್ತ್ರವಲ್ಲ. ಅವನು ಪವಿತ್ರಾತ್ಮದ ಸಿದ್ಧಾಂತದಿಂದ ಸ್ಫೂರ್ತಿಗೊಂಡು ಮಾನವನ ಚೇತನ ಅವನ ವಿಚೇಚನಾಶಕ್ತಿ ಹಾಗೂ ಸಹಜ ಪ್ರಜ್ಞೆಯು ಭಗವಂತನ ಮೋಂಬತ್ತಿ ಎಂಬುದಾಗಿ ಎಣಿಸಿದನು. ಧಾರ್ಮಿಕ ಆಧಾರದಿಂದ ಕೂಡಿದ್ದ ಈ ನಂಬಿಕೆಯು ಇಲ್ಲಿಂದ ಮುಂದೆ ಅವನು ರಚಿಸಿದ ಎಲ್ಲಾ ಬರಹಗಳಿಗೆ ಮೂಲಪ್ರೇರಕವಾಯಿತು. ಅವನು ಎಲ್ಲಾ ವಿಷಯಗಳನ್ನು ಇತಿಹಾಸಕಾರನ ದೃಷ್ಟಿಕೋನದಿಂದ ವೀಕ್ಷಿಸಲಾರಂಭಿಸಿದನು. ಆದ್ದರಿಂದ ಮುಂದೆ ಅವನು ಬರೆದ ಪ್ರಧಾನ ಕೃತಿಗಳೆಲ್ಲಾ ಚರಿತ್ರೆಯೇ ಆದುವು. ಇದು ಅವನ ಜೀವನದಲ್ಲಿ ಸಂಧಿಕಾಲವೇ ಆಯಿತು. ಕಾರಣ ಯೂರೋಪು ವಿವಿಧ ರಾಷ್ಟ್ರಗಳಾಗಿ ಹರಿದು

ಹಂಚಿಹೋಗುತ್ತಿದ್ದ ಸಮಯದಲ್ಲಿ ಅವನು ತನ್ನೆಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಒಟ್ಟಾಗಿಸಿಕೊಂಡು ಬೆಳೆಯಲಾರಂಭಿಸಿದನು; ತನ್ನ ಹಿಂದಿನ ಪ್ರಬಂಧಗಳನ್ನು ಇತಿಹಾಸಕಾರನ ದೃಷ್ಟಿಯಿಂದ ನೋಡಿ ತಾನು ಜೀಸಸನ ಜೀವನ ಹಾಗೂ ಉಪದೇಶಗಳನ್ನು ಮತ್ತು ಕ್ರೈಸ್ತ ಚರ್ಚಿನ ಚರಿತ್ರೆಯನ್ನು ತಪ್ಪಾಗಿ ನಿರೂಪಿಸಿದ್ದುದ್ದನ್ನು ಅರಿತುಕೊಂಡನು. ಈ ನೂತನ ಪರಿಜ್ಞಾನದ ಫಲವಾಗಿ ಅವನು "ದಿ ಸ್ಪಿರಿಟ್ ಆವ್ ಕ್ರಿಶ್ಚಿಯ್ಯಾನಿಟಿ" ಎಂಬ ಕೃತಿಯನ್ನು ಬರೆದನು. ಅದರಲ್ಲಿ ಅವನ ದರ್ಶನ ವ್ಯವಸ್ಥೆಯ ಪ್ರಧಾನ ಭಾವನೆಗಳ ಮೂಲವನ್ನು ಕಾಣಬಹುದು.

1799ರಲ್ಲಿ ಹೆಗಲನ ತಂದೆ ಕಾಲವಾಗಿದ್ದರಿಂದ ಅವನಿಗೆ ಸ್ವಲ್ಪ ಆಸ್ತಿ ಕೈಸೇರಿತು. ಆದ್ದರಿಂದ ವಿದ್ಯಾಸಂಸ್ಥೆಯಲ್ಲಿ ಸೇವೆಯನ್ನು ಮಾಡಬೇಕೆಂಬ ಆಸೆ ನೆರವೇರಲು ಸಾಧ್ಯವಾಗಿ ಅವನು ತನ್ನ ಮಿತ್ರ ಷಿಲ್ಲಿಂಗನ ಸಲಹೆ ಮೇರೆಗೆ 1801ರ ಜನವರಿಯಲ್ಲಿ ಜಿನ್‌ಗೆ ಬಂದು ಅಲ್ಲಿ 1803ರಲ್ಲಿ ವಿಶ್ವವಿದ್ಯಾಲಯದಲ್ಲಿ ಉಪಾಧ್ಯಾಯನಾದನು, ಅಲ್ಲಿ ತರ್ಕಶಾಸ್ತ್ರ, ಆಧ್ಯಾತ್ಮ ವಿಜ್ಞಾನ, ದರ್ಶನ ಹಾಗೂ ಒಂದು ಸಲ ಗಣಿತಶಾಸ್ತ್ರದ ವಿಷಯಗಳ ಮೇಲೆ ಉಪನ್ಯಾಸಗಳನ್ನು ನೀಡಿದನು. ಮಹಾಗ್ರಂಥಗಳಿಂದ ಬೇಕಾಗಿದ್ದ ವಿಷಯ ಭಾಗಗಳನ್ನು ಸಂಗ್ರಹಿಸಿದನು, ವಿಜ್ಞಾನಗಳನ್ನು ಜೊತೆಜೊತೆಯಲ್ಲೇ ಅಧ್ಯಯನದಲ್ಲಿ ತೊಡಗಿದನು, ವೈಮರನ ಶರೀರ ವಿಜ್ಞಾನವನ್ನು ಕುರಿತು ಉಪನ್ಯಾಸಗಳನ್ನು ಕೇಳಿದನು, ಹಲವಾರು ಮಾನವಿಕ ವಿಜ್ಞಾನಗಳನ್ನು ಜೊತೆಜೊತೆಯಾಗಿ ಅಧ್ಯಯನ ಮಾಡತೊಡಗಿದನು ಮತ್ತು ವೈಮರನ ಡ್ಯೂಕನನ್ನು ಕೋರಿಕೊಂಡು 1805ರ ಫೆಬ್ರವರಿಯಲ್ಲಿ ಜಿನಾವದಲ್ಲಿ ಮಹಾಪ್ರಾಧ್ಯಾಪಕನಾಗಿ ನೇಮಕ ಗೊಂಡನು. ಅದೇ ಸಮಯದಲ್ಲಿ ಅವನು ದಿ ಫಿನಾಮೆನೋಲೊಜಿ ಆವ್ ಮೈಂಡ್ ಎಂಬ ಮೊದಲ ಮಹಾಕೃತಿಯನ್ನು ಬರೆದು ಮುಗಿಸಿ ಪ್ರಕಟಿಸಿದನು. ನ್ಯೂರೆನ್‌ಬರ್ಗಿನಲ್ಲಿ ಮೇಲುದರ್ಜೆಯ ವಿದ್ಯಾಶಾಖೆಯ ಮುಖ್ಯಸ್ಥನಾಗಿ 1808ರ ಡಿಸೆಂಬರ್‌ನಿಂದ 1816ರ ಆಗಸ್ಟ್‌ವರೆಗೆ ಕೆಲಸವನ್ನು ನಿರ್ವಹಿಸಿದನು. 1811ರಲ್ಲಿ ಅವನು ತನಗಿಂತ 22 ವರ್ಷ ಚಿಕ್ಕವಳಾಗಿದ್ದ ಮೇರಿವ್ಯಾನ್ ಟ್ಯೂಚರಳನ್ನು ವಿವಾಹವಾದನು. ಸುಪ್ರಸಿದ್ಧ ಚರಿತ್ರಲೇಖಕ ಕಾರ್ಲ್ಸ್, ದೇವತಾಶಾಸ್ತ್ರೀಯ ವಿಚಾರಗಳಲ್ಲಿ ಆಸಕ್ತಿ ವಹಿಸಿದ್ದ ಇಮಾನ್ಯುಅಲ್ ಮತ್ತು ಲುಡ್‌ವಿಗ್ ಅವನ ಪುತ್ರರಾಗಿದ್ದರು. ಅವನ ಸೈಎನ್ಸ್ ಆವ್ ಲಾಜಿಕ್ ಕೃತಿಯ ಪ್ರಥಮ ಭಾಗವು 1812ರಲ್ಲಿ ಮತ್ತು ದ್ವಿತೀಯ ಭಾಗವು 1816ರಲ್ಲಿ ಬೆಳಕಿಗೆ ಬಂದುವು. ಈ ಗ್ರಂಥ ಅವನನ್ನು ಸುಪ್ರಸಿದ್ಧನನ್ನಾಗಿಸಿತು. ಆದ್ದರಿಂದ ಅವನನ್ನು ಎರ್‌ಲಾಂಜನ್, ಬರ್ಲಿನ್ ಹಾಗೂ ಹೈಡಲ್‌ಬರ್ಗಿನ ವಿಶ್ವವಿದ್ಯಾನಿಲಯಗಳು ಪ್ರಾಧ್ಯಾಪಕನಾಗಿ ಬರಬೇಕೆಂದು ಆಹ್ವಾನಿಸಿದಾಗ ಅವನು ಹೈಡಲ್‌ಬರ್ಗಿನ ಆಹ್ವಾನವನ್ನು ಮನ್ನಿಸಿ ಅಲ್ಲಿ ಪ್ರಾಧ್ಯಾಪಕನಾದನು. ಅಲ್ಲಿ 1817ರಲ್ಲಿ ಅವನು ತನ್ನ ಎನ್‌ಸೈಕ್ಲೊಪೀಡಿಯ ಆವ್ ದಿ ಫಿಲೊಸಾಫಿಕಲ್ ಸೈಎನ್ಸಸ್ ಎಂಬ ಮಹಾಗ್ರಂಥವನ್ನು ಬರೆದು ತನ್ನ ಸಮಗ್ರ ದರ್ಶನದ ನಿರೂಪಣೆಯನ್ನು ನೀಡಿದನು; 1818ರಲ್ಲಿ ದರ್ಶನದ ಅಧಿಕಾರ ಪೀಠವನ್ನು ಅಲಂಕರಿಸಬೇಕೆಂಬುದಾಗಿ ಬರ್ಲಿನ್ ವಿಶ್ವವಿದ್ಯಾನಿಲಯದಿಂದ ಪುನಃ ಬಂದ ಆಹ್ವಾನವನ್ನು ಒಪ್ಪಿಕೊಂಡನು. ಗಟೆಯು ಸಾಹಿತ್ಯ ಜಗತ್ತನ್ನು ಆಳಿದಂತೆ, ಹೆಗಲನೂ ಸಹ ಬರ್ಲಿನ್ ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಿದಂದಿನಿಂದ ಹಿಡಿದು ತನ್ನ ಅಂತ್ಯದವರೆಗೆ ದಾರ್ಶನಿಕ ಪ್ರಪಂಚದ ಮೇಲೆ ಅನಿರ್ಬಂಧಿತವಾಗಿದ್ದ ಪ್ರಭುತ್ವವನ್ನು ನಡೆಸಿದನು. ಸರ್ಕಾರಿ ಪದವಿಯನ್ನು ಅಲಂಕರಿಸಬೇಕೆಂಬ ಅವನ ಆಸೆ ನೆರವೇರದಿದ್ದರೂ ಪ್ರಾಧ್ಯಾಪಕನಾಗಿ ಅವನು ವಿದ್ಯಾರ್ಥಿಗಳ ಮೇಲೆ ರೈಟ್ ಎಂಬ ಕೃತಿಯನ್ನು ಪ್ರಕಟಿಸಿದ ನಂತರ ಅವನು

ಹೆಚ್ಚಾಗಿ ಉಪನ್ಯಾಸ ನೀಡುವ ಕಾರ್ಯಕ್ಕೆ ತನ್ನೆಲ್ಲಾ ಗಮನವನ್ನು ನೀಡಿದನು. ಅವನು ಅಥವಾ ಅವನ ಶಿಷ್ಯರು ಸಿದ್ಧಪಡಿಸಿದ ಟಿಪ್ಪಣಿಗಳ ಆಧಾರದ ಮೇಲೆ ಮುಂದೆ 'ಈಸ್ಥೆಟಿಕ್ಸ್', 'ಫಿಲಾಸೊಫಿ ಆವ್ ರಿಲಿಜನ್', 'ಫಿಲಾಸೊಫಿ ಆವ್ ಹಿಸ್ಟೊರಿ', ಮತ್ತು "ಹಿಸ್ಟೊರಿ ಆಫ್ ಫಿಲಾಸೊಫಿ" ಪ್ರಕಟವಾದುವು. ಹೀಗೆ ಕೇವಲ ಫಿನಾಮಿನೊಲೊಜಿ ಹಾಗೂ ಲಾಜಿಕ್ ಅವನೇ ಸ್ವತಃ ಬರೆದ ಕೃತಿಗಳಾಗಿದ್ದರೆ, ಇತರ ಬರಹಗಳೆಲ್ಲಾ ಅವನ ಉಪನ್ಯಾಸ–ಟಿಪ್ಪಣಿಗಳಿಂದ ಅಥವಾ ಅವನ ಉಪನ್ಯಾಸವನ್ನು ಕೇಳಿ ಅವನ ಶಿಷ್ಯರು ಬರೆದುಕೊಂಡ ಟಿಪ್ಪಣಿಗಳಿಂದ ಕೂಡಿದ್ದುವು. 1830ರಲ್ಲಿ ಅವನು ವಿಶ್ವವಿದ್ಯಾನಿಲಯದ ಡೈರೆಕ್ಟರ್ ಆದನು. ಅದೇ ವರ್ಷ ಸಂಭವಿಸಿದ ಕ್ರಾಂತಿ ಅವನನ್ನು ಪ್ರಕ್ಷುಬ್ಧಗೊಳಿಸಿತು. 1831ರಲ್ಲಿ ಅವನು ಇಂಗ್ಲಿಷ್ ಸುಧಾರಣಾ ಮಸೂದೆಯನ್ನು ಕುರಿತು ಪ್ರಬಂಧವೊಂದನ್ನು ರಚಿಸಿದನು. ಅದೇ ವರ್ಷ 3ನೆಯ ಫ್ರೆಡರಿಕ್ ವಿಲಿಯಂನಿಂದ ಗೌರವಾನ್ವಿತ ಬಿರುದಿನ ಪದಕವನ್ನು ಪಡೆದನು ಮತ್ತು ದುರದೃಷ್ಟವಶಾತ್ ಅದೇ ವರ್ಷ ಜರ್ಮನಿಯ ಮೇಲೆ ದಾಳಿ ಮಾಡಿದ ಕಾಲರಾ ಕಾಯಿಲೆಗೆ ಬಲಿಬಿದ್ದನು. ಕಾಲರಾ ಒಂದೇ ಒಂದು ದಿನ ಅವನ ಮೇಲೆ ಆಕ್ರಮಣ ಮಾಡಿ ನವೆಂಬರ್ 14 ರಂದು ಅವನನ್ನು ಆಹುತಿ ತೆಗೆದುಕೊಂಡಿತು.

### 13.2.1.1 ಹೆಗಲನ ವಿಚಾರಧಾರೆ

ಹೆಗಲ್ ಬೆಳಸಿರುವ ಇತಿಹಾಸದರ್ಶನ ಸುಪ್ರಸಿದ್ಧವಾದುದು. ಅವನ ಮರಣಾನಂತರ ಪ್ರಕಟವಾದ ಲೆಕ್ಚರ್ಸ್ ಆನ್ ದಿ ಫಿಲಾಸೊಫಿ ಆವ್ ಹಿಸ್ಟೊರಿಯಲ್ಲಿ ನೀಡಿರುವ ಇತಿಹಾಸದ ನಿರೂಪಣೆಯಲ್ಲಿ ಅವನು ತಾರ್ಕಿಕ ವಿಚಾರಕ್ರಮದ ಮೂಲಕ ಬೆಲೆಸಿದ ಸಾಮಾನ್ಯ ದರ್ಶನದ ತತ್ತ್ವ ಹಾಗೂ ವಿಚಾರಗಳನ್ನು ಬಳಸಿರುವುದು ಕಂಡುಬರುತ್ತದೆ. ಅವನು ತನ್ನ ಲಾಜಿಕ್ ಎಂಬ ಕೃತಿಯಲ್ಲಿ ತರ್ಕಕ್ರಮದಲ್ಲಿ ಬಳಸಲಾಗುವ ಭಾವರೂಪಗಳನ್ನು ವಿಶ್ಲೇಷಿಸುವಾಗ ಸಂಬಂಧ ಎಂಬ ಭಾವರೂಪವು ಎಲ್ಲಕ್ಕಿಂತ ವ್ಯಾಪಕವಾದುದು ಎಂಬುದನ್ನು ತೋರಿದ್ದಾನೆ. ಪ್ರತಿ ಭಾವನೆಯೂ ಪರಸ್ಪರ ಸಂಬಂಧಿಸಿರುವ ಅಂಶಗಳ ಸಮೂಹವಾಗಿರುತ್ತದೆ. ಒಂದು ಅಂಶವನ್ನು ಇತರ ಅಂಶಗಳೊಂದಿಗೆ ಸಂಬಂಧಿಸಿ ನೋಡಿ, ಅವುಗಳ ಸಾಮ್ಯ ಹಾಗೂ ಭೇದಗಳನ್ನು ಗುರುತಿಸಿದಾಗ ಮಾತ್ರ ನಮಗೆ ಅದು ಅರ್ಥವಾಗುತ್ತದೆ. ಎಲ್ಲಾ ಸಂಬಂಧಗಳಲ್ಲಿ ವೈದೃಶ್ಯ ಅಥವಾ ಪರಸ್ಪರ ಭಿನ್ನತೆ ಹೆಚ್ಚು ಸಾರ್ವತ್ರಿಕವಾದುದು, ಪ್ರತಿ ಆಲೋಚನೆಯು ಅಥವಾ ವಸ್ತುವಿನ ಪರಿಸ್ಥಿತಿಯು ಅಂದರೆ ಜಗತ್ತಿನಲ್ಲಿ ಪ್ರತಿ ಭಾವನೆ ಹಾಗೂ ಪ್ರತಿ ಸನ್ನಿವೇಶವು ತನಗೆ ವಿರುದ್ಧವಾಗಿರುವ ಭಾವನೆ ಹಾಗೂ ಸನ್ನಿವೇಶಕ್ಕೆ ದಾರಿ ಮಾಡಿಕೊಡುತ್ತದೆ. ನಂತರ ಅದರೊಂದಿಗೆ ಸೇರಿ ಇನ್ನೂ ಉತ್ತಮ ಹಾಗೂ ಸಂಕೀರ್ಣವಾದ ಸಮಷ್ಟಿಯಾಗುತ್ತದೆ. ತರ್ಕ, ಪ್ರಕೃತಿ ಮತ್ತು ಬುದ್ಧಿ ಅಥವಾ ಚೈತನ್ಯಗಳ ನಡುವೆ ಇರುವ ಸಂಬಂಧ ತಾರ್ಕಿಕವಾದುದು. ಮೂಲದಲ್ಲಿ ಡೈಅಲೆಕ್ಟಿಕಲ್ ಎಂಬಪದಕ್ಕೆ ಚರ್ಚೆ ಎಂಬರ್ಥವಿದ್ದಿತು. ಇಬ್ಬರು ವ್ಯಕ್ತಿಗಳ ನಡುವೆ ನಡೆಯುವ ಚರ್ಚೆಯಲ್ಲಿ ಪ್ರತಿಯೊಬ್ಬರೂ ತೀರ ವಿರುದ್ಧವಾಗಿರುವ ದೃಷ್ಟಿಕೋನದಿಂದ ಸತ್ಯ ವಿಷಯವನ್ನು ಪ್ರತಿಪಾದಿಸುತ್ತಾರೆ. ಕೊನೆಯಲ್ಲಿ ಅವರು ತಮ್ಮ ಅಭಿಪ್ರಾಯವನ್ನು ಬಿಟ್ಟು ನೂತನ ಹಾಗೂ ಇನ್ನೂ ಹೆಚ್ಚು ವ್ಯಾಪಕವಾದ ದೃಷ್ಟಿಕೋನವನ್ನು ಅಳವಡಿಸಿಕೊಂಡು ವಿಷಯವನ್ನು ನಿಷ್ಪಕ್ಷಪಾತವಾಗಿ ವೀಕ್ಷಿಸಲು ಒಪ್ಪಿಕೊಳ್ಳುತ್ತಾರೆ. ಇದರಿಂದ ಮೊದಲಿನ ವಿರೋಧವು ಉತ್ತಮಮಟ್ಟದ ಸಂಯೋಜನೆಯಾಗಿ ಸರಿಹೊಂದಿಕೊಳ್ಳುತ್ತದೆ.

ಇದೇ ಹೆಗಲನ ಪ್ರಖ್ಯಾತವಾದ "ಪ್ರಮೇಯ-ವಿರೋಧ ಪ್ರಮೇಯ, ಸಂಯೋಜನೆಯ" ತರ್ಕಕ್ಕೆ ಮೂಲಾಧಾರವಾಗಿರುವ ವಿಚಾರಸರಣಿ. ಅವನ ಪ್ರಕಾರ, ಆಲೋಚನಾ ಕ್ರಮವೂ ಸಹ ಇದೇ ಮಾದರಿಯನ್ನು ಅನುಸರಿಸುತ್ತದೆ. ಮೊದಲು ಅದು ಒಂದು ವಾಸ್ತವಿಕ ಪ್ರಮೇಯದೊಂದಿಗೆ ಆರಂಭವಾಗುತ್ತದೆ. ಆ ಪ್ರಮೇಯವನ್ನು ಅದಕ್ಕೆ ವಿರುದ್ಧವಾದ ಪರಮೇಯವು ನಿರಾಕರಿಸುತ್ತದೆ. ಕೊನೆಯಲ್ಲಿ ಅವು ಎರಡೂ ಒಂದಾಗಿ ಉತ್ತಮ ಸಂಯೋಜನೆಯನ್ನು ಉಂಟು ಮಾಡುತ್ತವೆ. ಪುನಃ ಆ ಸಂಯೋಜನೆಯಿಂದ ಇನ್ನೊಂದು ವಿರೋಧವು ತಲೆ ಎತ್ತಿಕೊಳ್ಳುತ್ತದೆ. ಹೀಗೆ ರಚನೆ, ಸಂಕೀರ್ಣತೆ ಹಾಗೂ ಏಕತೆಯ ಉತ್ತಮ ಮಟ್ಟಗಳನ್ನು ತಲುಪುತ್ತದೆ. ಕೊನೆಯಲ್ಲಿ ಆರಂಭದ ಹಂತಕ್ಕೆ ಸಮವಾಗಿರುವ ಸಂಯೋಜನೆ ಉಂಟಾಗುತ್ತದೆ. ಇತಿಹಾಸವು ಒಂದು ತಾರ್ಕಿಕ ಚಲನೆ; ಕ್ರಾಂತಿಗಳ ಸರಣಿ; ಅದರಲ್ಲಿ ಜನತೆ ಒಂದಾದ ಮೇಲೊಂದರಂತೆ, ಮೇಧಾವಿಗಳು ಒಬ್ಬರಾದ ಮೇಲೆ ಇನ್ನೊಬ್ಬರಂತೆ ಪರತತ್ತ್ವದ ಅಭಿಕರಣವಾಗಿ ಕಾರ್ಯ ಮಾಡುತ್ತಾರೆ. ಬುದ್ಧಿಶಕ್ತಿ ಈ ತಾರ್ಕಿಕ ಪ್ರಕ್ರಿಯೆಯನ್ನು ಗ್ರಹಿಸುವುದಕ್ಕೆ ಅನಿವಾರ್ಯವಾದ ಅಂಗವಾಗಿರುತ್ತದೆ. ಅದರ ವಿಕಾಸವು ನಿಗೂಢ ಪ್ರಜ್ಞೆ ಜಾಗೃತಾವಸ್ಥೆ ಹಾಗೂ ತಾರ್ಕಿಕ ಸಂಕಲ್ಪಶಕ್ತಿಯ ಮೂಲಕವಾಗಿ ಆ ಸಂಕಲ್ಪ ಶಕ್ತಿಯ ಮೂರ್ತರೂಪವಾದ ಮಾನವ ಇತಿಹಾಸ ಹಾಗೂ ಸಂಸ್ಥೆಗಳ ಮೂಲಕವಾಗಿ ಕೊನೆಗೆ ಕಲೆ, ಮತಧರ್ಮ ಮತ್ತು ದರ್ಶನದತ್ತ ಸಾಗುತ್ತದೆ. ಅಲ್ಲಿ ಅಂತಿಮವಾಗಿ ಮಾನವವ್ಯಕ್ತಿ ತಾನು ಆತ್ಮ ಎಂಬುದಾಗಿ ಭಗವಂತನೊಂದಿಗೆ ಒಂದಾಗಿರುವುದಾಗಿ ಅರಿತುಕೊಳ್ಳುತ್ತಾನೆ. ಹೀಗೆ ಇತಿಹಾಸವು ಮಹಾಚೈತನ್ಯದ ಚರಿತ್ರೆ. ಇತಿಹಾಸದ ಪ್ರಕ್ರಿಯೆಯ ಮೂಲಕ ಮಾನವ ಕುಲವು ನೈತಿಕ ಹಾಗೂ ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸುತ್ತದೆ, ಬದಲಾಗುತ್ತಿರುವ ದೃಶ್ಯಗಳನ್ನು ಮುಂದಿಡುವ ಜಗತ್ತಿನ ಇತಿಹಾಸವು ಚಿನ್ಮಯ ತತ್ತ್ವವನ್ನು ಸ್ಪಷ್ಟವಾಗಿ ಗ್ರಹಿಸಲು ಯತ್ನಿಸುವ ಪ್ರಕ್ರಿಯೆಯಾಗಿರುತ್ತದೆ. ಅದೇ ನಿಜವಾದ ದೇವ ನ್ಯಾಯವಾದ, ಅಂದರೆ ಇತಿಹಾಸದಲ್ಲಿ ಪರತತ್ತ್ವದ ಸಮರ್ಥನೆ.

ಇತಿಹಾಸವನ್ನು ಕುರಿತ ಈ ಭಾವವನ್ನು ಜಗತ್ತಿನ ಅಂತಿಮ ಆಶಯ ಅತವ ಭಗವಂತನ ಕ್ರಮಗಳೊಂದಿಗೆ ಸರಿಹೊಂದಿಸುವುದಕ್ಕಾಗಿ ಹೆಗಲನು ತರ್ಕದ ತಂತ್ರ ಅಥವಾ ಕೌಶಲ ಎಂಬ ಭಾವರೂಪವನ್ನು ಬಳಸಿದನು. ಅದು ದೈವಿಕ ನಿಯಾಮಿತ ಎಂಬ ಭಾವನೆಯ ತಾರ್ಕಿಕ ಅಭಿವ್ಯಕ್ತಿ ಎಂಬುದಾಗಿ ಅವನು ಎಣಿಸಿದನು. ಅವನ ಪ್ರಕಾರ, ಇತಿಹಾಸದ ದರ್ಶನವು ನೀಡುವ ವಿಚಾರವೆಂದರೆ ತರ್ಕ ಎಂಬ ಸರಳಭಾವ. ತರ್ಕವು ವಿಶ್ವದ ತಿರುಳು; ಜಗತ್ತಿನ ವಿನ್ಯಾಸವು ಸಂಪೂರ್ಣವಾಗಿ ತಾರ್ಕಿಕವಾಗಿದೆ. ತರ್ಕವೇ ಜಗತ್ತಿನ ಪರಮಶಕ್ತಿ, ಆದ್ದರಿಂದ ಪ್ರಪಂಚದ ಚರಿತ್ರೆಯು ಒಂದು ತಾರ್ಕಿಕ ಪ್ರಕ್ರಿಯೆಯನ್ನು ಮುಂದಿಡುತ್ತದೆ.

ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಇತಿಹಾಸದ ಪ್ರತಿ ಹೆಗಲ್ ಬೆಳೆಸಿಕೊಂಡಿದ್ದ ಅಭಿಪ್ರಾಯವು ಭಗವಂತನ ಉದ್ದೇಶ ಸಾಧಿಸುವುದೇ ಚರಿತೆ ಮತ್ತು ಕ್ರಮೇಣವಾಗಿ ಮಾನವ ಸ್ವಾತಂತ್ರ್ಯದ ಸಾಧನೆಯೇ ಆ ಉದ್ದೇಶ ಎಂಬ ನಂಬಿಕೆಯನ್ನು ಅವಲಂಬಿಸಿಕೊಂಡಿದ್ದಿತು. ಕಲಹ ಹಾಗೂ ಕೆಡಕು ಕೇವಲ ನಿಷೇಧಾರ್ಥಕವಾದ ಕಲ್ಪನೆಗಳಲ್ಲ, ಅವುಗಳು ವಾಸ್ತವವಾದುವೇ. ಹೋರಾಟವು ಬೆಳವಣಿಗೆಯ ನಿಯಮ;

ಕಳವಳ, ಗಲಿಬಿಲಿಗಳ ಕಾಲದಲ್ಲಿ ವ್ಯಕ್ತಿಗಳ ಶೀಲಸ್ವಭಾವ ರೂಪಿತವಾಗುತ್ತದೆ ಮತ್ತು ನಿರ್ಬಂಧ, ಹೊಣೆಗಾರಿಕೆ, ನೋವು ಹಾಗೂ ಕಷ್ಟಸಂಕಟಗಳ ಮೂಲಕ ಮಾನವ ವ್ಯಕ್ತಿಯು ತನ್ನ ಜೀವನದಲ್ಲಿ ಎತ್ತರಕ್ಕೆ ಏರುತ್ತಾನೆ. ಬದುಕಿರುವುದು ಕೇವಲ ಸುಖಾನುಭವಕ್ಕಲ್ಲ, ಸಾಧನೆಗಾಗಿ.

ಹೆಗಲನ ಪ್ರಕಾರ, ಪರತತ್ತ್ವದ ಆತ್ಮವಿಕಾಸವು ರಾಜಕೀಯವಾಗಿ ಅವನ ಕಾಲದ ಪ್ರಷ್ಯಾದ ರಾಜ್ಯದಲ್ಲಿ ತನ್ನ ಗುರಿಯನ್ನು ಮುಟ್ಟಿತು. ಅದು ಪರತತ್ತ್ವದ ಈಚಿನ ಅಭಿವ್ಯಕ್ತಿಯಾಯಿತು. ಪೌರಸ್ತ್ಯ ದೇಶದವರು ಕಣಿ ಹೇಳುವುದು ಹಾಗೂ ದಿವ್ಯವಾಣಿ ಮುಂತಾದ ಸಾಧನಗಳ ಮೂಲಕ ಪರಮ ನಿರ್ಣಯಗಳನ್ನು ರೂಪಿಸುತ್ತಿದ್ದ ಬಾಹ್ಯ ನಿಯತಿಯಲ್ಲಿ ನಂಬಿಕೆಯನ್ನು ಇಟ್ಟಿದ್ದರು. ಕ್ರೈಸ್ತಮತವು ಪರತತ್ತ್ವಕ್ಕೆ ಸಂಬಂಧಿಸಿದಂತೆ ಯಥಾರ್ಥ ಆತ್ಮಜ್ಞಾನವನ್ನು ಬೆಳೆಸುವುದರ ಮೂಲಕ ಮಾನವ ವ್ಯಕ್ತಿಯನ್ನು ಎಲ್ಲಾ ಪರಕೀಯ ಅಧಿಕಾರದಿಂದ ಮುಕ್ತಗೊಳಿಸಿತು. ಅದರ ನೂತನ ತತ್ತ್ವದ ಅಕ್ಷದ ಮೇಲೆ ಜಗತ್ತಿನ ಇತಿಹಾಸ ಚಕ್ರವು ತಿರುಗುತ್ತದೆ. ಅದೇ ಚರಿತ್ರೆಯ ಆರಂಭ ಬಿಂದು ಹಾಗೂ ಗುರಿ. ಹೀಗೆ ಹೆಗಲನ ದೃಷ್ಟಿಯಲ್ಲಿ ಜಗತ್ತಿನ ಇತಿಹಾಸವು ಅವಶ್ಯಕವಾಗಿ ಕ್ರಿ.ಪೂ. ಹಾಗೂ ಕ್ರಿ.ಶ.ದ ಚರಿತ್ರೆಯೇ ಆಗಿದೆ. ಕ್ರೈಸ್ತಮತವೇ ಪರಮಸತ್ಯ ಎಂಬ ಊಹಾ ಪ್ರತಿಜ್ಞೆಯ ಆಧಾರದ ಮೇಲೆ ಅವನು ಕ್ರಮಬದ್ಧವಾಗಿ ಚೀನಾದಿಂದ ಆರಂಭಿಸಿ ಫ್ರೆಂಚ್ ಮಹಾಕ್ರಾಂತಿಯವರೆಗೆ ವಿಶ್ವ ಇತಿಹಾಸವನ್ನು ರಚಿಸಿದನು; ಈ ರೀತಿಯಲ್ಲಿ ಅವನು ಕ್ರೈಸ್ತ ಸಂಪ್ರದಾಯದಿಂದ ನಿಯಂತ್ರಿಸಲ್ಪಟ್ಟತು, ಶಿಸ್ತಿನಲ್ಲಿಡಲಾಗಿದ್ದ ಇತಿಹಾಸ ಪ್ರಜ್ಞೆಯನ್ನು ಹೊಂದಿದ ಕೊನೆಯ ಇತಿಹಾಸ ದಾರ್ಶನಿಕನಾಗಿದ್ದನು.

ಕ್ರೈಸ್ತಧರ್ಮವೇ ಪರಮ ಸತ್ಯ ಎಂಬ ನಂಬಿಕೆಯ ಕಾರಣ ಹೆಗಲನು ವಿವಿಧ ಮತಧರ್ಮಗಳನ್ನು ತಾರ್ಕಿಕವಾದ ಹಾಗೂ ಅನುಕ್ರಮಿಕ ಶ್ರೇಣಿಯಾಗಿ ವ್ಯವಸ್ಥೆ ಮಾಡಿದನು. ಅದು ಮಂತ್ರ, ಮಾಟ ಹಾಗೂ ಪ್ರಾಕೃತ ಮತಧರ್ಮದಿಂದ ಆರಂಭಿಸಿ ಚೀಣಾ, ಭಾರತ, ಪರ್ಷಿಯಾ, ಈಜಿಪ್ಟ್, ಯೆಹೂದ್ಯ (ಪರಮೋದಾತ್ತ) ಮತ್ತು ಗ್ರೀಸಿನ (ಸೌಂದರ್ಯದ) ಮತಧರ್ಮಗಳು ರೋಮ್‌ನ (ವ್ಯಾವಹಾರಿಕ) ಮತಧರ್ಮಗಳ ಮೂಲಕ ಹಾದು ಹೋಗಿ ಪರಮ ಧರ್ಮವಾದ ಕ್ರೈಸ್ತಧರ್ಮದಲ್ಲಿ ಅಂತ್ಯಗೊಳ್ಳುತ್ತದೆ. ತನಗೆ ಬಲಿಬಿದ್ದವರನ್ನು ಹಿಗ್ಗಿಸಿಯೊ, ಕತ್ತರಿಸಿಯೊ ತನ್ನ ಹಾಸಿಗೆಗೆ ತಕ್ಕಂತೆ ಸರಿಪಡಿಸಿಕೊಳ್ಳುತ್ತಿದ್ದ ಪ್ರೋಕ್ರಸ್ಟೀಸ್‌ನ ಕ್ರಮದಂತೆ ಮತಧರ್ಮದ ಇತಿಹಾಸವನ್ನು ತಾರ್ಕಿಕ ಸುಪ್ಪತ್ತಿಗೆಗೆ ಸರಿಹೊಂದಿಸುವ ಪ್ರಯತ್ನದಲ್ಲಿ ಹೆಗಲ್ ಇಸ್ಲಾಂ ಧರ್ಮವನ್ನು ಸಂಪೂರ್ಣವಾಗಿ ಕೈಬಿಟ್ಟನು.

ಹೆಗಲನ ಈ ಇತಿಹಾಸ ದರ್ಶನವು ಕ್ರಾಂತಿಕಾರಕ ನಿರ್ಣಯಗಳಿಗೆ ಕಾರಣವಾಗಿರುವಂತೆ ತೋರುತ್ತದೆ. ಕಾರಣ ತಾರ್ಕಿಕ ಪ್ರಕ್ರಿಯೆಯು ಬದಲಾವಣೆಗಳನ್ನು ಬದುಕಿನ ಮೂಲತತ್ತ್ವವನ್ನಾಗಿಸುತ್ತದೆ. ಯಾವ ಪರಿಸ್ಥಿತಿಯೂ ಬದಲಾಗದೇ ಇರುವುದಿಲ್ಲ. ಹೆಗಲನು ಇತಿಹಾಸವನ್ನು ನಿತ್ಯ ಬದಲಾವಣೆ ಮತ್ತು ಸ್ವಾತಂತ್ರ್ಯದ ಬೆಳವಣಿಗೆ ಎಂಬುದಾಗಿ ವಿವರಿಸಿದನು. ಸ್ವಾತಂತ್ರ್ಯವೇ ರಾಜ್ಯದ ಅತಿಶಯವಾದ ನಿಯಮ. ಅಂದರೆ, ಅದು ಬದಲಾವಣೆಗೆ ತೆರೆದ ಮಾರ್ಗ. ಹೆಲಗನು ರಾಜ್ಯಕ್ಕೆ ಅತ್ಯಂತ ಹೆಚ್ಚಿನ ಗಮನವನ್ನು ಕೊಟ್ಟಿದ್ದಾನೆ ಹಾಗೂ ಅದರ ಬಗ್ಗೆ ಅತ್ಯಂತ ಗೌರವಸೂಚಕ ಹಾಗೂ ಪ್ರಶಂಸಾರ್ಹ ಮಾತುಗಳನ್ನು ಬಳಸಿದ್ದಾನೆ. ಒಂದರ್ಥದಲ್ಲಿ

ಅವನು 'ರಾಜ್ಯವು ಸುವ್ಯವಸ್ಥಿತ ಸಂಸ್ಕೃತಿ ಜೀವನ' ಎಂಬ ಅರಿಸ್ಟಾಟಿಲ್‌ನ ಅಥವಾ ಗ್ರೀಕ್ ಕಲ್ಪನೆಯನ್ನು ಪುನರುಜ್ಜೀವನಗೊಳಿಸಲು ಯತ್ನಿಸಿದನೆಂಬುದಾಗಿ ಹೇಳಬಹುದು.

ಹೆಗಲನು ಇತಿಹಾಸದಲ್ಲಿ 'ಕಾರ್ಯ-ಕಾರಣ ಸಂಬಂಧ ತತ್ತ್ವದ' ಭಾವವನ್ನು ಬೆಳೆಸಿದನು. ಅವನ ಆದರ್ಶಾತ್ಮಕ ಸಿದ್ಧಾಂತದ ಪ್ರಕಾರ, ಒಂದು ಸಮಾಜವು ಸಾಧಿಸಲು ಯತ್ನಿಸುವ ಆದರ್ಶವು ಅಂತಿಮ ಕಾರಣವಾಗಿ ಅದು ಅದರ ಎಲ್ಲಾ ವರ್ತನಾ ಮಾದರಿಗಳನ್ನು ನಿರ್ಧರಿಸುತ್ತದೆ. ಮತಧರ್ಮವು ಆದರ್ಶವನ್ನು ಒದಗಿಸುತ್ತದೆ. ಮಹಾಧರ್ಮಗಳು ತಮ್ಮ ಅನುಯಾಯಿಗಳ ಮುಂದಿಟ್ಟಿರುವ ವಿವಿಧ ಆದರ್ಶಗಳ ನಮೂನೆಗಳು ಮಾನವ ಸಂಸ್ಕೃತಿಯನ್ನು ನಿರ್ಧರಿಸುತ್ತವೆ. ಯೆಹೂಧ್ಯ ಧರ್ಮವು ಕರ್ತವ್ಯವನ್ನು ಕನ್‌ಫ್ಯೂಶಿಯಸ್ ಧರ್ಮವು ವ್ಯವಸ್ಥೆಯನ್ನು, ಇಸ್ಲಾಂ ನ್ಯಾಯವನ್ನು, ಕ್ರೈಸ್ತಧರ್ಮವು ಪ್ರೀತಿಯನ್ನು, ಬೌದ್ಧಧರ್ಮವು ಸಹನೆಯನ್ನು ಹಾಗೂ ಹಿಂದೂಧರ್ಮವು ಸಹಿಷ್ಣುತೆಯನ್ನು ಆದರ್ಶಗಳಾಗಿ ಎತ್ತಿಹಿಡಿದುವು. ಆ ಧರ್ಮಗಳನ್ನು ಅನುಸರಿಸಿದ ಸಮಾಜಗಳು ಬೆಳೆಸಿದ ಸಂಸ್ಕೃತಿಯ ಮಾದರಿಗಳು ಅವುಗಳು ನಿಗದಿಪಡಿಸಿದ ಆದರ್ಶಗಳಿಗೆ ಹೆಚ್ಚು-ಕಡಿಮೆ ಸರಿಹೊಂದಿಕೊಂಡಿದ್ದುವು. ಆ ಸಮಾಜಗಳಿಗೆ ಪ್ರೇರಕಶಕ್ತಿಯ ಮುಖ್ಯ ಸಂಕೇತವೂ ಮತ್ತು ಮಾರ್ಗದರ್ಶನ ಸತ್ತ್ವವೂ ಆಗಿ ಅವುಗಳಿಗೆ ವೈಶಿಷ್ಟ್ಯತೆಯನ್ನು ನೀಡಿದ ಆದರ್ಶಗಳು ಅವುಗಳ ಪ್ರತಿ ಸಾಧನೆಗೂ ಕಾರಣಗಳಾದುವು. ಅವುಗಳ ಸಂಸ್ಕೃತಿಗಳು ಆ ಆದರ್ಶವನ್ನು ಬಿಟ್ಟು ದೂರ ಹೋದ ಕೂಡಲೇ ಅನುಪಯುಕ್ತವಾಗಿ ಹೋದುವು.

ಈ ವಾದವು ಸ್ವಲ್ಪ ಮಟ್ಟಿಗೆ ಮಾತ್ರ ನಿಜ. ಕಾರಣ, ಆದರ್ಶಗಳನ್ನು ಪೂರ್ಣವಾಗಿ ಸಾಧಿಸುವುದು ಅಸಾಧ್ಯ. ಹೆಗಲನ ಪ್ರಮೇಯ-ವಿರುದ್ಧ, ಪ್ರಮೇಯ-ಸಂಯೋಜನೆಯ ತಾರ್ಕಿಕ ಕ್ರಮದಲ್ಲಿ ಅಂತರ್ಗತವಾಗಿರುವ ವಿರೋಧಗಳು ಸಂಸ್ಕೃತಿಯ ಕಾರಣ ಹಾಗೂ ಬೆಳವಣಿಗೆಯನ್ನು ವಿವರಿಸುವ ಅವನ ಆದರ್ಶಾತ್ಮಕ ಸಿದ್ಧಾಂತವನ್ನು ನಿರರ್ಥಕಗೊಳಿಸುತ್ತವೆ. ಅವನು ತನ್ನ ವಿಚಾರ ವ್ಯವಸ್ಥೆಯನ್ನು ಜಗತ್ತಿನ ಸ್ವಾಭಾವಿಕ ನಿಯಮಗಳ ಭಾಗವಾಗಿ ಎಣಿಸಿದನು. ಆದರೆ ತಾನು ಬಳಸಿದ ತಾರ್ಕಿಕ ಕ್ರಮದ ಪ್ರಕಾರ ತನ್ನ ವಿಚಾರಧಾರೆಯೂ ಸಹ ಬದಲಾವಣೆಗೊಳಗಾದುದು, ಅನಿತ್ಯವಾದುದು ಹಾಗೂ ಅಮುಖ್ಯವಾಗಿ ಹೋಗಬಹುದು ಎಂಬುದನ್ನು ಮರೆತನು. ಅವನ ಐತಿಹಾಸಿಕ ದೃಷ್ಟಿ ಸೀಮಿತವಾಗಿದ್ದಿತು. ಕ್ರೈಸ್ತ ಯೂರೋಪೇ ಅವನ ಜಗತ್ತಾಗಿದ್ದಿತು. ಅವನು ಪ್ರಷ್ಯಾದ ಬಗ್ಗೆ ಹಾಗೂ ಯೂರೋಪು ಖಂಡವು ಇತಿಹಾಸದ ಗುರಿಯಾಗಿದೆ ಎಂಬುದಾಗಿ ನೀಡಿರುವ ಹೇಳಿಕೆಗಳು ಅಸಂಬದ್ಧವಾದವುಗಳು.

ಹೆಗಲನ ಇತಿಹಾಸ ದರ್ಶನದ ವಿಚಾರಧಾರೆಯು 19ನೆಯ ಶತಮಾನದಲ್ಲಿ ಪ್ರಬಲವಾಗಿದ್ದ ಬೌದ್ಧಿಕ ಅಲೆಗಳನ್ನು ಎಬ್ಬಿಸಿತು. ಅವನ ಯೋಚನಾ ಪ್ರಕ್ರಿಯೆಯು ದೃಷ್ಟಪ್ರಮಾಣವಾದಕ್ಕೆ ಕೊನೆಯ ಆಧಾರವಾಯಿತು. ಇದರಿಂದ ಭಾವನಾ ಸರಪಣಿಯಲ್ಲಿ ಹೇಗೆ ಭಾವನೆಗಳು ಪರಸ್ಪರ ಸೇರಿಕೊಂಡಿವೆ ಮತ್ತು ಹೇಗೆ ಅವುಗಳ ಕ್ರಿಯೆ ಹಾಗೂ ಪ್ರತಿಕ್ರಿಯೆಯಿಂದ ನೂತನ ಸಂಯೋಜನೆ ಉಂಟಾಗುತ್ತದೆ ಎಂಬುದು ಸ್ಪಷ್ಟವಾಯಿತು. ಪ್ರಮೇಯ-ವಿರುದ್ಧ, ಪ್ರಮೇಯ-ಸಂಯೋಜನೆ ಎಂಬ ತತ್ತ್ವವು ಮಾನವ ಸಂಸ್ಥೆಗಳ ವಿಕಾಸದ ಗತಿಯು ವಿವಿಧ ಅನಿವಾರ್ಯ ಹಂತಗಳ ಮೂಲಕ ಸಾಗುತ್ತದೆ ಎಂಬುದನ್ನು ಗುರುತಿಸುವ ಸಾಮಾನ್ಯ ಕ್ರಮಕ್ಕೆ

ಮೂಲವಾಗಿದೆ. ಸಾಮಾನ್ಯವಾಗಿ ಸ್ಪೆನ್ಸರನ ಹೆಸರಿನೊಂದಿಗೆ ಸಂಬಂಧಿಸಿರುವ ಈ ಬಗೆಯ ಕಾರಣಪೂರ್ವಕ ಇತಿಹಾಸದ ಬೇರುಗಳನ್ನು ಹೆಗಲ್ ಹಾಗೂ ಷಿಲ್ಲಿಂಗನ ದರ್ಶನದಲ್ಲಿ ಕಾಣಬಹುದು. ಹೆಗಲ್ ತನ್ನ ಸಾಮಾನ್ಯ ವಿಧಾನ ಹಾಗೂ ನಿರ್ದಿಷ್ಟ ಅಭಿಪ್ರಾಯಗಳ ಮೂಲಕವಾಗಿ ಸಾಮಾಜಿಕ ವಿಜ್ಞಾನಿಗಳ ಮೇಲೆ ಗಾಢವಾಗಿದ್ದ ಪ್ರಭಾವವನ್ನು ಬೀರಿದನು. ನೀತಿಶಾಸ್ತ್ರವು ಪ್ರಮುಖವಾಗಿ ಸಾಮಾಜಿಕವಾದುದಾಗಿರಬೇಕು, ವ್ಯಕ್ತಿಗಳ ಭೌತಿಕ ಅವಶ್ಯಕತೆಗಳು ಪರಸ್ಪರ ಅವಲಂಬಿಸಿ–ಕೊಂಡಿರುತ್ತವೆ. ಇದರಲ್ಲಿ ಕುಟುಂಬ ಹಾಗೂ ಸಮಾಜದ ಹಿತಾರ್ಥಗಳೂ ಇರುತ್ತವೆ. ಸಮಾಜವು ನಿರ್ದಿಷ್ಟ ವರ್ಗಗಳಾಗಿ ವಿಭಾಗಿಸಲ್ಪಟ್ಟಿರುತ್ತದೆ ಮತ್ತು ಕಲೆಯು ಸಮುದಾಯದ ಸಾಮಾಜಿಕ ಜೀವನದ ಅವಿಭಾಜ್ಯ ಅಂಗವಾಗಿರುತ್ತದೆ ಎಂಬ ಅವನ ಅಭಿಪ್ರಾಯಗಳು ಸ್ತುತ್ಯರ್ಹವಾದುವು. ಮತಧರ್ಮ ಹಾಗೂ ಸರ್ಕಾರವು ನಿರಂತರವಾಗಿ ಬೆಳೆದು ಬಂದ ವ್ಯವಸ್ಥೆಗಳು ಎಂಬ ಭಾವನೆಯು ಅವುಗಳ ಐತಿಹಾಸಿಕ ಬೆಳವಣಿಗೆಯನ್ನು ಕುರಿತು ಅಧ್ಯಯನ ಮಾಡುವುದಕ್ಕೆ ಸ್ಫೂರ್ತಿಯನ್ನು ನೀಡಿತು. ಅವನ ದರ್ಶನ ವ್ಯವಸ್ಥೆಯು ನಿರ್ದಿಷ್ಟ ವ್ಯಕ್ತಿಗಳನ್ನು ಹಾಗೂ ಅವರ ಸಹಜ ಶಕ್ತಿ–ಸಾಮರ್ಥ್ಯಗಳನ್ನು ಗಮನಿಸದೆ ವಿಭಿನ್ನ ಯುಗಗಳ ಪ್ರಧಾನ ಅಮೂರ್ತ ಭಾವನೆಗಳ ಪರಿಭಾಷೆಯಲ್ಲಿ ಚರಿತ್ರೆಯನ್ನು ಮತ್ತು ಕಲೆ ಹಾಗೂ ದರ್ಶನವನ್ನು ಕುರಿತ ಇತಿಹಾಸವನ್ನೂ ಸಹ ರಚಿಸುವ ಪ್ರಯತ್ನಕ್ಕೆ ಪ್ರೇರಕವಾಯಿತು. ಅವನು ಸಾಮಾಜಿಕ ವಿಜ್ಞಾನಗಳಲ್ಲಿ ಜೈವಿಕ ಹಾಗೂ ಇತಿಹಾಸ ವಿಧಾನವನ್ನು ಮತ್ತು ಚರಿತ್ರೆಯಲ್ಲಿ ಅಮೂರ್ತ ಭಾವನಾ ಸಮುಚ್ಚಯವನ್ನು ಬಳಸುವಂತೆ ಮಾಡಲು ಸಹಾಯ ಮಾಡಿದನು ಎಂಬುದಾಗಿ ಹೇಳಬಹುದು. ಪ್ರಾಟೆಸ್ಟಂಟನಾಗಿ ಹಾಗೂ 18ನೆಯ ಶತಮಾನದ ಪ್ರಭಾವಶಾಲಿ ಮಗುವಾಗಿ, ಸ್ವಾತಂತ್ರ್ಯ ಹಾಗೂ ತಾರ್ಕಿಕ ಜ್ಞಾನೋದಯದ ಕಲ್ಪನೆಯಲ್ಲಿ ನಂಬಿಕೆ ಬೆಳೆಸಿಕೊಂಡು ತನ್ನ ಬೌದ್ಧಿಕ ಜೀವನವನ್ನು ಆರಂಭಿಸಿದ ಹೆಗಲ್ ಶುದ್ಧ ತರ್ಕಕ್ರಮವನ್ನು ಬಳಸಿದನು. ಅವನು ವಾಸ್ತವಾಂಶಗಳ ಪ್ರತಿ ಅಪಾರವಾಗಿದ್ದ ಗೌರವ ಹಾಗೂ ಎಚ್ಚರಿಕೆಯನ್ನು ಬೆಳೆಸಿಕೊಂಡನು. ಅವನು ವಿವರಗಳಿಗೆ ಬಹು ಹೆಚ್ಚಿನ ಗಮನವನ್ನು ಕೊಡುತ್ತಿದ್ದನು. ಅವನ ಬರಹಗಳನ್ನು ಅಧ್ಯಯನ ಮಾಡಿದವರಿಗೆ ಅವನ ತೀಕ್ಷ್ಣದೃಷ್ಟಿ, ಅವನ ಮನೋಭಾವ, ವಿವೇಚನಾ ಸಾಮರ್ಥ್ಯ ಹಾಗೂ ಅಗಾಧವಾಗಿದ್ದ ಪಾಂಡಿತ್ಯ ಸ್ಪಷ್ಟವಾಗಿ ತಿಳಿದುಬರುತ್ತವೆ. ಅವನಿಗೆ ಭಾಷೆಯ ಮೇಲೆ ಸಂಪೂರ್ಣ ಹಿಡಿತವಿದ್ದಿತು. ಅವನ ಮುಂಚಿನ ಬರಹಗಳಲ್ಲಿ ಕಂಡುಬರುವ ಉತ್ತಮ ರೂಪಾಲಂಕಾರಗಳು, ಅನಂತರದ ರಚನೆಗಳಲ್ಲಿ ನೋಡಬಹುದಾದ ನಿಷ್ಕೃಷ್ಟತೆ ಹಾಗೂ ಸಂಗ್ರಹ ನಿರೂಪಣೆ ಬಹು ಗಮನಾರ್ಹವಾದ ವಿಷಯಗಳಾಗಿವೆ. ಒಟ್ಟಿನಲ್ಲಿ ಹೆಗಲನ ವಿಚಾರಧಾರೆಯು ಚಿನ್ಮಯ ತತ್ತ್ವ ಹಾಗೂ ಪ್ರಕೃತಿ, ಆದರ್ಶ ಹಾಗೂ ವಾಸ್ತವಿಕತೆ, ಹಿಂದಿನವರ ಆಂಶಿಕವಾದ ಹಾಗೂ ವಿರೋಧಾತ್ಮಕವದ ದರ್ಶನಗಳನ್ನು ಮೀರಿಸಿರುವಂತಹ ಸಂಯೋಜನೆಯೂ ಆಗಿದೆ ಎಂಬುದಾಗಿ ಸಂಕ್ಷಿಪ್ತವಾಗಿ ಹೇಳಬಹುದು. ಅದು ಒಂದೇ ಸಮಯದಲ್ಲಿ ಆದರ್ಶವಾದವೂ ಹಾಗೂ ವಸ್ತುಸತ್ಯವಾದವೂ ಆಗಿದೆ. ಆದ್ದರಿಂದ ಅವನಾದ ಮೇಲೆ ಬಂದ ಪಂಡಿತರು ಅವನ ವಿಚಾರಧಾರೆಯಲ್ಲಿನ ಒಂದಲ್ಲ ಒಂದು ವಿಷಯವನ್ನು ಎತ್ತಿಹಿಡಿದು ವಿಭಿನ್ನ ರೀತಿಯಲ್ಲಿ ವಿಶದೀಕರಿಸಲು ಪ್ರಯತ್ನಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ. ಮುಂದೆ ತಲೆ ಎತ್ತಿಕೊಂಡ ಮಾರ್ಕ್ಸ್‌ವಾದ, ದೃಷ್ಟಪ್ರಮಾಣವಾದ, ಇತಿಹಾಸವಾದ ಅಥವಾ ಅಸ್ತಿತ್ವವಾದ ಮುಂತಾದ ಸಿದ್ಧಾಂತಗಳಿಗೆ ಬೇಕಾದ ವಿಷಯ ಸಾಮಗ್ರಿಗಳನ್ನು ಒದಗಿಸಿಕೊಟ್ಟ ಕೀರ್ತಿ "ಹೆಗಲನ ವಿಚಾರಧಾರೆ" ಗೆ ಸೇರುತ್ತದೆ.

## 13.2.2 ಕಾರ್ಲ್‌ಮಾರ್ಕ್ಸ್ (1818–1883)

**ಜೀವನ ಮತ್ತು ಹಿನ್ನೆಲೆ**

ಅತ್ಯಂತ ವಾದಾಸ್ಪದವಾಗಿದ್ದ ಇತಿಹಾಸ ದರ್ಶನವನ್ನು ನೀಡಿದ ಹಾಗೂ ಸಮಾಜವಾದೀಯ ಚಿಂತನಾ ಚರಿತ್ರೆಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ತಂದ ಜರ್ಮನಿಯ ಇನ್ನೊಬ್ಬ ಅತ್ಯುತ್ತಮ ವೈಜ್ಞಾನಿಕ ಚಿಂತಕ ಹಾಗೂ ಇತಿಹಾಸ ದಾರ್ಶನಿಕನೆಂದರೆ ಕಾರ್ಲ್‌ಮಾರ್ಕ್ಸ್. ಅವನು ಟ್ರೈಯರ್ ನಗರದಲ್ಲಿ 1818ರ ಮೇ 5 ರಂದು ಯೆಹೂದ್ಯರಾಗಿದ್ದ ಹೆನ್ರಿಚ್ ಹಾಗೂ ಹೆನ್ರಿಟ್ಟ ಮಾರ್ಕ್ಸ್‌ರ ಜೇಷ್ಠಪುತ್ರನಾಗಿ ಜನಿಸಿದನು. ಯೆಹೂದ್ಯ ಜನರಿಗೆ ನಾಗರಿಕ ಹಕ್ಕುಗಳೇನೂ ಇರಲಿಲ್ಲವಾದ್ದರಿಂದ ತನ್ನ ವಕೀಲಿ ವೃತ್ತಿ ಎಲ್ಲಿ ಕೈಬಿಟ್ಟು ಹೋಗುವುದೋ ಎಂಬ ಭಯದಿಂದ ಅವನ ತಂದೆಯು ಉದಾರವಾದಿ ಲೂಥರ್ ಪಂಥಕ್ಕೆ ಸೇರಿಕೊಂಡನು. ಅಂದರೆ, ಪ್ರಾಟೆಸ್ಟಂಟ್ ಮತಾವಲಂಬಿಯಾದನು. ಅಲ್ಪಸಂಖ್ಯಾತರ ಸ್ಥಾನವನ್ನು ಹೊಂದಿ ಬಿಕ್ಕಟ್ಟಿನಿಂದ ಕೂಡಿದ್ದ ಮಧ್ಯಮವರ್ಗದ ಕುಟುಂಬದಲ್ಲಿ ಬೆಳೆದ ಮಾರ್ಕ್ಸ್ ಮೇಲೆ ಅವನ ಅವಿದ್ಯಾವಂತ ತಾಯಿ ಬೀರಿದ ಪ್ರಭಾವ ಅತ್ಯಲ್ಪ. ಅವನಿಗೆ ಜ್ಞಾನೋದಯ ಕಾಲದಲ್ಲಿ ಗ್ರೀಕ್ ಹಾಗೂ ರೋಮ್‌ನ ಪ್ರೌಢ ಪ್ರಾಚೀನ ಕೃತಿಗಳನ್ನು ಪರಿಚಯ ಮಾಡಿಕೊಟ್ಟ ಅವನ ತಂದೆಯ ಪ್ರಭಾವ ಅವನ ಮೇಲೆ ಗಾಢವಾಗಿದ್ದಿತು. ಅವನ ತಂದೆಯು ಅಧಿಕಾರಕ್ಕೆ ತಲೆಬಾಗಿ ತಗ್ಗಿಬಗ್ಗಿ ನಡೆಯುತ್ತಿದ್ದ ರೀತಿ ಅವನಿಗೆ ಸರಿಬೀಳಲಿಲ್ಲವಾದರೂ, ಅವನೊಂದಿಗೆ ಬೆಳೆಸಿಕೊಂಡಿದ್ದ ಬೌದ್ಧಿಕ ಸಂಬಂಧಗಳು ಕೊನೆಯವರೆಗೂ ಮುಂದುವರಿದುಕೊಂಡು ಬಂದುವು.

ಈ ಸಮಯದಲ್ಲಿ ಮಾರ್ಕ್ಸ್‌ನಿಗೆ ಪುಸ್ತಕಗಳನ್ನು ನೀಡಿ ಪ್ರೋತ್ಸಾಹಿಸಿದವನೆಂದರೆ ಆಧ್ಯಾತ್ಮಿಕ ಸಲಹೆಗಾರನಾಗಿದ್ದ ಮತ್ತು ಪ್ರಾಚೀನ ಹಾಗೂ ಆಧುನಿಕ ದರ್ಶನದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದ ಬಹುಭಾಷಾ ಪಂಡಿತನಾಗಿದ್ದ ವೆಸ್ಟ್‌ಫೆಲನ್. ಟ್ರೈಯರ್‌ನಲ್ಲಿದ್ದ ಮೇಲು ದರ್ಜೆಯ ವಿದ್ಯಾಶಾಲೆಯಲ್ಲಿ ಶಿಕ್ಷಣ ಪಡೆದ ನಂತರ ಮಾರ್ಕ್ಸ್ ತನ್ನ ತಂದೆಯ ಸಲಹೆಯ ಮೇರೆಗೆ ತನ್ನ 17ನೆಯ ವರ್ಷದಲ್ಲಿ ಬಾನ್ ವಿಶ್ವವಿದ್ಯಾನಿಲಯದಲ್ಲಿ ಕಾನೂನು ಇಲಾಖೆಯ ವಿದ್ಯಾರ್ಥಿಯಾಗಿ ಸೇರಿದನು; ನಂತರ 1836ರಲ್ಲಿ ಅಲ್ಲಿಂದ ಬರ್ಲಿನ್ ವಿಶ್ವವಿದ್ಯಾನಿಲಯಕ್ಕೆ ಹೋದನು. ಇದು ಅವನ ಜೀವನದಲ್ಲಿ ಅತ್ಯಂತ ನಿರ್ಧಾರಕವಾಗಿದ್ದ ತಿರುವಾಯಿತು. ಕಾರಣ ಅಲ್ಲಿ ಅವನು ಹೆಗಲನ ಬರಹಗಳ ಪ್ರಭಾವಕ್ಕೆ ಒಳಗಾದನು. ಕಾನೂನು ಇಲಾಖೆಯಲ್ಲಿ ಅವನು ತನ್ನ ಅಧ್ಯಾಪಕರಾಗಿದ್ದ ಸವಿನ್ನಿ ಹಾಗೂ ಗಾನ್ಸ್ ಅವರಿಂದ ಬಹುಮಟ್ಟಿಗೆ ಪ್ರಭಾವಿತನಾದರೂ ಅವನಲ್ಲಿ ನೂತನ ಬೌದ್ಧಿಕ ದೃಷ್ಟಿ ಬೆಳೆಯುವುದಕ್ಕೆ ಕಾರಣರಾದವರು ಹೆಗಲನ ಪಂಥದ ತರುಣ ಅನುಯಾಯಿಗಳು. ಅವನು ಕಾನೂನು ಶಿಕ್ಷಣವನ್ನು ಕೈಬಿಟ್ಟು ಬರ್ಲಿನ್‌ನಲ್ಲಿದ್ದ ಪ್ರತಿಷ್ಠಿತರ ಕೂಟಗಳಿಗೆ ಸೇರಿಕೊಂಡು ಅಲ್ಲಿ ಹೆಗಲನ ವಿಚಾರಧಾರೆಯ ಬಗ್ಗೆ ನಡೆಯುತ್ತಿದ್ದ ಚರ್ಚೆಗಳಿಂದ ಲಾಭ ಪಡೆದನು. 1841ರಲ್ಲಿ ಜಿನಾ ವಿಶ್ವವಿದ್ಯಾನಿಲಯಕ್ಕೆ ಆನ್ ದಿ ಡಿಫರೆನ್ಸ್ ಬಿಟ್ವೀನ್ ದಿ ನ್ಯಾಚುರಲ್ ಫಿಲಾಸೊಫಿ ಆವ್ ಡೆಮಾಕ್ರಿಟಸ್ ಆ್ಯಂಡ್ ಎಪಿಕ್ಯೂರಸ್ ಎಂಬ ವಿಷಯವಾಗಿ ಮಹಾಪ್ರಬಂಧವನ್ನು ಬರೆದುಕೊಟ್ಟಾಗ ಅವನ ವಿದ್ಯಾರ್ಥಿ ದೆಸೆ ಮುಗಿಯಿತು.

ನಂತರ ಮಾರ್ಕ್ಸ್‌ನಿಗೆ ಭವಿಷ್ಯದ ಚಿಂತೆ ಉಂಟಾಯಿತು. ಆಗ ಉದ್ರೇಕಕಾರಿ ಸಮಾಜವಾದಿಯಾಗಿದ್ದ ಮೋಸಸ್ ಹೆಸ್‌ನ ಕೋರಿಕೆಯ ಮೇರೆಗೆ ಅವನು ನೂತನ ತೀವ್ರ ಸುಧಾರಣಾ ತತ್ತ್ವಕ್ಕೆ ಅನುಸಾರವಾಗಿದ್ದ ಮಧ್ಯಮವರ್ಗದ ಪತ್ರಿಕೆಗೆ ಗಮನಾರ್ಹವಾಗಿದ್ದ ಲೇಖನಗಳನ್ನು ಬರೆದುಕೊಡಲಾರಂಭಿಸಿದನು ಹತ್ತು ತಿಂಗಳ ನಂತರ ಅದರ ಪ್ರಧಾನ ಸಂಪಾದಕನಾದನು ಮತ್ತು ಅಲ್ಲಿಂದ ತನ್ನ ಜನ್ಮಸ್ಥಳವಾಗಿದ್ದ ರೈನ್‌ಲ್ಯಾಂಡಿಗೆ ಹಿಂತಿರುಗಿ ಅಲ್ಲಿಯೂ ಒಂದು ಪ್ರಮುಖ ಪತ್ರಿಕೆಯ ಸಂಪಾದಕನಾಗಿ ಆ ಕಾಲದ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಲೇಖನಮಾಲೆಗಳನ್ನು ಪ್ರಕಟಿಸಿದನು. ಆದರೆ ಅದಕ್ಕಾಗಿ ಅಲ್ಲಿ ಸರ್ಕಾರದ ಪ್ರಕಟನಾ ನಿರ್ಬಂಧ ಅಧಿಕಾರಿಗಳ ಜೊತೆ ಕಾದಾಡಬೇಕಾಗಿ ಬಂದು ಕೊನೆಗೆ ಅವನು ಪತ್ರಿಕೆಯನ್ನು ನಿಲ್ಲಿಸಬೇಕಾಯಿತು. ಹೀಗೆ ಆರು ತಿಂಗಳೊಳಗೆ ಈ ಸಾಹಸೋದ್ಯಮ ಮುಕ್ತಾಯಗೊಂಡು ಪುನಃ ಮಾರ್ಕ್ಸ್ ಜೀವನೋಪಾಯಕ್ಕಾಗಿ ಬೇರೆ ಪ್ರಯತ್ನಗಳನ್ನು ಮಾಡಬೇಕಾಯಿತು. ಏತನ್ಮಧ್ಯೆ ಅವನು 1843ರ ಏಪ್ರಿಲ್ ತಿಂಗಳಲ್ಲಿ ಜೆನ್ನಿವ್ಯಾನ್‌ವೆಸ್ಟ್ ಫೆಲನ್‌ಳನ್ನು ವಿವಾಹವಾದನು. ಆ ಸಮಯದಲ್ಲೂ ಅವನು ಓದುವುದನ್ನು ಬಿಡದೆ, ಮಾಂಟೆಸ್ಕ್ಯೂವಿನ ಸ್ಪಿರಿಟ್ ಆವ್ ದಿ ಲಾಸ್, ರೂಸೋವಿನ ಸೋಷಲ್ ಕಾಂಟ್ರಾಕ್ಟ್ ಸೇರಿದಂತೆ ಸುಮಾರು ನೂರು ಗ್ರಂಥಗಳಿಂದ ಉದ್ಧೃತ ಭಾಗಗಳನ್ನು ಐದು ದೊಡ್ಡ ಪುಸ್ತಕಗಳಲ್ಲಿ ಬರೆದಿಟ್ಟುಕೊಂಡನು. ಜರ್ಮನಿಯಲ್ಲಿ ತಕ್ಕ ಹುದ್ದೆ ಸಿಗುವ ಭರವಸೆ ಇಲ್ಲವಾಗಿ ಅವನು 1843ರ ಡಿಸೆಂಬರ್ ತಿಂಗಳಲ್ಲಿ ಪತ್ನಿಯೊಡನೆ ಪ್ಯಾರಿಸಿಗೆ ಹೋದನು.

ಪ್ಯಾರಿಸ್ ನಗರದಲ್ಲಿ 1843 ರಿಂದ 1845 ರವರೆಗೆ ಕಳೆದ ದಿನಗಳಲ್ಲಿ ಮಾರ್ಕ್ಸ್‌ನಲ್ಲಿ ಉಂಟಾದ ಬೌದ್ಧಿಕ ಬೆಳವಣಿಗೆಯು ಅತ್ಯಂತ ಗಮನಾರ್ಹವಾಗಿದ್ದಿತು. ಯೂರೋಪಿನ ಕ್ರಾಂತಿಕಾರಿಗಳಿಗೆ ಹಾಗೂ ತೀವ್ರ ಸುಧಾರಣಾವಾದಿಗಳಿಗೆ ಕೇಂದ್ರವಾಗಿದ್ದ ಆನಗರದಲ್ಲಿ ಅವನು ಜರ್ಮನಿಯಲ್ಲಿ ಸಿಗದೇ ಇದ್ದ ಎಲ್ಲಾ ಗ್ರಂಥಗಳನ್ನು ಅಧ್ಯಯನ ಮಾಡಿದನಲ್ಲದೆ, ಅನೇಕ ಸುಧಾರಣಾವಾದಿಗಳನ್ನು ನೇರವಾಗಿ ಭೇಟಿ ಮಾಡಿ ಅವರೊಂದಿಗೆ ಚರ್ಚೆಗಳನ್ನು ನಡೆಸಿದನು. ಎಲ್ಲಕ್ಕಿಂತ ಹೆಚ್ಚಾಗಿ ಅವನಿಗೆ ಲಭ್ಯವಾಗಿದ್ದ ಅಮೂಲ್ಯ ನಿಧಿ ಎಂದರೆ ಒಬ್ಬ ಬಟ್ಟೆ ಉತ್ಪಾದಕನ ಮಗನಾಗಿದ್ದ ಏಂಜಲ್ಸ್‌ನ ಗಾಢಮೈತ್ರಿ. ಅವನಿಂದ ಮಾರ್ಕ್ಸ್‌ನಿಗೆ ಕಾರ್ಮಿಕರ ದುರ್ಭರ ಜೀವನದ ಪೂರ್ಣ ಪರಿಚಯವಾಯಿತು. ಹೀಗೆ ಆ ಪರಿಸರದಲ್ಲಿ ತೀವ್ರಗಾಮಿ ಉದಾರವಾದಿಯಾಗಿದ್ದ ಮಾರ್ಕ್ಸ್ ಸಮಾಜವಾದಿಯಾಗಿ ಮಾರ್ಪಟ್ಟನು. ಅದೇ ಸಮಯದಲ್ಲಿ ಅವನು ಎಕೊನಾಮಿಕ್ಸ್ ಆ್ಯಂಡ್ ಫಿಲೊಸೊಫಿಕಲ್ ಮ್ಯಾನ್ಯುಸ್ಕ್ರಿಪ್ಟ್ಸ್, ದಿ ಜರ್ಮನ್ ಐಡಿಯಾಲೊಜಿ ಮತ್ತು ದಿ ಹೋಲಿ ಫ್ಯಾಮಿಲಿ ಇತ್ಯಾದಿ ಕೃತಿಗಳನ್ನು ರಚಿಸಿದನು. ಅವನ ದಿ ಮಿಸೆರಿ ಆವ್ ಫಿಲಾಸೊಫಿ 1847ರಲ್ಲಿ ಪ್ರಕಟವಾಯಿತು.

ಏತನ್ಮಧ್ಯೆ 1845ರ ಆರಂಭದಲ್ಲಿ ಪ್ಯಾರಿಸ್ ಸರ್ಕಾರ ಮಾರ್ಕ್ಸ್‌ನಿಗೆ ಬಹಿಷ್ಕಾರ ಶಿಕ್ಷೆ ವಿಧಿಸಿದ್ದರಿಂದ ಅವನು ಬ್ರಸೆಲ್ಸ್‌ಗೆ ಹೋದನು ಹಾಗೂ ಅಲ್ಲಿದ್ದ ಜರ್ಮನ್ ನಿರಾಶ್ರಿತರೊಂದಿಗೆ ಹಾಗೂ ಅನೇಕ ಸಮಾಜವಾದಿ ವ್ಯವಸ್ಥೆಗಳೊಂದಿಗೆ ಸಂಪರ್ಕಗಳನ್ನು ಬೆಳೆಸಿಕೊಂಡನು. ಆ ವ್ಯವಸ್ಥೆಗಳಲ್ಲಿ ಒಂದಾಗಿದ್ದ ಜರ್ಮನ್ ಕಾರ್ಮಿಕರ ಶೈಕ್ಷಣಿಕ ಸಂಘವು ತನ್ನ ಗುರಿ ಹಾಗೂ ನಂಬಿಕೆಗಳನ್ನು ಪ್ರತಿಪಾದಿಸುವಂತಹ ದಸ್ತೈವಜವನ್ನು ಸಿದ್ಧಪಡಿಸಬೇಕೆಂಬುದಾಗಿ 1847ರಲ್ಲಿ ಮಾಡಿದ ಕೋರಿಕೆಯ ಮೇರೆಗೆ ಅವನು ಸುಪ್ರಸಿದ್ಧ ದಿ ಕಮ್ಯೂನಿಸ್ಟ್ ಮ್ಯಾನಿಫೆಸ್ಟೊ ವನ್ನು ರಚಿಸಿದನು. ನಂತರ 1848ರ ಕ್ರಾಂತಿಯ ಜ್ವಾಲೆ ತಲೆಎತ್ತಿಕೊಂಡಾಗ ಅವನು ಪುನಃ

ರೈನ್‌ಲ್ಯಾಂಡಿಗೆ ಬಂದು ಒಂದು ತೀವ್ರಗಾಮಿ ಪತ್ರಿಕೆಯ ಸಂಪಾದಕನಾದನು; ಆದರೆ ಪುನಃ ದೇಶಭ್ರಷ್ಟನಾಗಬೇಕಾಗಿ ಬಂದಿತು. 1849ರ ಆಗಸ್ಟ್‌ನಲ್ಲಿ ಫ್ರೆಂಚ್ ಸರ್ಕಾರವೂ ಸಹ ಅವನು ದೇಶವನ್ನು ಬಿಟ್ಟುಹೋಗುವಂತೆ ವಿಧಿಸಿದ್ದರಿಂದ ಅವನು ಲಂಡನ್ನಿಗೆ ಹೋದನು. ಅಲ್ಲಿ ಅವನು ದಿಕ್ಲಾಸ್ ಸ್ಟ್ರಗ್ಲ್ ಇನ್ ಫ್ರಾನ್ಸ್ (1850) ಮತ್ತು ದಿ ಎಯ್ಟೀನ್ಸ್ ಬ್ರೂಮೆರ್ ಆವ್ ಲೂಯಿ ಬೋನಪಾರ್ಟೆ (1852) ಮುಂತಾದ ಮಹಾ ಕ್ರಾಂತಿಕಾರಿ ಭಾವನೆಗಳಿಂದ ಕೂಡಿದ ಅತ್ಯುತ್ತಮ ಐತಿಹಾಸಿಕ ಲಘು ಪುಸ್ತಕಗಳನ್ನು ಬರೆದನು ಮತ್ತು ಅಲ್ಲಿ ಇನ್ನೊಂದು ಮಹಾಕ್ರಾಂತಿಯ ಜ್ವಾಲೆ ತಲೆದೋರಬಹುದೆಂಬ ಭರವಸೆಯಿಂದ ಇದ್ದನು. ಆದರೆ 1848ರ ಕ್ರಾಂತಿಯಾಗಿ ಅದು ನಂದಿ ಹೋಯಿತೆಂಬುದು ಅವನಿಗೆ ಮನದಟ್ಟಾಯಿತು. ಇದರಿಂದ ಅವನು ಹಾಗೂ ಏಂಜಲ್ಸ್ ತಮ್ಮ ಸಂಪರ್ಕಗಳನ್ನೆಲ್ಲಾ ಸೀಮಿತಗೊಳಿಸಿಕೊಂಡರು.

1863ರಲ್ಲಿ ಕಾರ್ಮಿಕ ನಾಯಕರುಗಳು ಸೇರಿ ಎಲ್ಲಾ ಕಾರ್ಮಿಕರ ಅಂತರರಾಷ್ಟ್ರೀಯ ಸಂಘವನ್ನು ಸ್ಥಾಪಿಸಿದಾಗ ಮಾರ್ಕ್ಸ್ ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿ ಅದರ ಮಾರ್ಗದರ್ಶಕನಾದನು. ಅವನು ಸಿದ್ಧಪಡಿಸಿದ ಸಂಘದ ಉದ್ಘಾಟನಾ ಭಾಷಣವು ಪ್ರಸಿದ್ಧ ಐತಿಹಾಸಿಕ ದಸ್ತೈವಜೇ ಆಯಿತು. ಅದರ ಚಳವಳಿಯು ಸ್ಥಾಪಿತ ಸಮಾಜ ವ್ಯವಸ್ಥೆಯ ಪರವಾಗಿದ್ದವರಲ್ಲಿ ಭಯವನ್ನು ಉಂಟು ಮಾಡಿತು. 1867ರಲ್ಲಿ ಮಾರ್ಕ್ಸ್‌ನ ಜಗತ್ಪ್ರಸಿದ್ಧ 'ದಾಸ್ ಕ್ಯಾಪಿಟಲ್' ಪ್ರಕಟವಾಯಿತು. 1871ರಲ್ಲಿ ಪ್ಯಾರಿಸ್‌ನಲ್ಲಿ ಕಾರ್ಮಿಕ ವರ್ಗವು ಅಧಿಕಾರಕ್ಕೆ ಅಧಿಕಾರಕ್ಕೆ ಬಂದಾಗ ಮಾರ್ಕ್ಸ್‌ನ ಕನಸು ನನಸಾಗುವಂತೆ ತೋರಿಬಂದಿತು. ಆದರೆ ಅದು ಕೊನೆಗೆ ಆ ಅಂತರರಾಷ್ಟ್ರೀಯ ಕಾರ್ಮಿಕ ಸಂಘಕ್ಕೆ ಸಾವಿನ ಗಂಟೆಯಾಗಿ ಪರಿಣಮಿಸಿ ಆ ಸಂಘವು 1876ರಲ್ಲಿ ಕಣ್ಮರೆಯಾಗಿ ಹೋಯಿತು. ಮಾರ್ಕ್ಸ್ ತನ್ನ ಜೀವನದ ಸಂಧ್ಯಾಕಾಲದಲ್ಲಿ ಕಾಯಿಲೆಯಿಂದ ಜರ್ಝರಿತನಾಗಿ ಹೋಗಿ ಪ್ರಧಾನ ಕೃತಿಗಳನ್ನೇನನ್ನೂ ರಚಿಸಲಿಲ್ಲ. ಆದರೆ 1875ರಲ್ಲಿ ಅವನ ಅನುಯಾಯಿಗಳು ಗೋಥದಲ್ಲಿ ಒಂದು ಸಂಘಟಿತ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದಾಗ ಅವನು ಅವರ ಕಾರ್ಯಕ್ರಮದ ಬಗ್ಗೆ ವಿಮರ್ಶಾತ್ಮಕ ಟಿಪ್ಪಣಿಗಳನ್ನು ಬರೆದು ಸಮಾಜವಾದಿ ಚಳವಳಿಯನ್ನು ನಿರ್ದೇಶಿಸುವ ಸಿದ್ಧಾಂತ ಹಾಗೂ ಅನುಷ್ಠಾನದ ಬಗ್ಗೆ ತನಗಿದ್ದ ಕಲ್ಪನೆಯನ್ನು ಕೊನೆಯ ಸಲ ಸ್ಪಷ್ಟವಾಗಿ ನಿರೂಪಿಸಿದನು. ಅವನ ಮರಣಾನಂತರ ಪ್ರಕಟವಾದ ಕ್ರಿಟೀಕ್ ಆವ್ ದಿ ಗೋಥ ಪ್ರೋಗ್ರ್ಯಾಮ್ ಅವನ ಕೊನೆಯ ಪ್ರಧಾನ ಕೃತಿ.

ಮಾರ್ಕ್ಸ್‌ನು ತನ್ನ ಜೀವನದ ಉಳಿದಿದ್ದ ಅಲ್ಪ ವರ್ಷಗಳನ್ನು ಸುಖ ಹಾಗೂ ನೆಮ್ಮದಿಯಿಂದ ಕಳೆದನು. ಅದಕ್ಕೆ ಕಾರಣ ಅವನ ಆಪ್ತಮಿತ್ರ ಏಂಜಲ್ಸ್ ನೀಡುತ್ತಿದ್ದ ವರ್ಷಾಶನ.

### 13.2.2.1 ಇತಿಹಾಸವನ್ನು ಕುರಿತು ಮಾರ್ಕ್ಸ್‌ನ ವಿಚಾರಧಾರೆ

ಮಾರ್ಕ್ಸ್‌ನ ವಿಚಾರಧಾರೆಯು ಆ ಕಾಲದಲ್ಲಿ ಪ್ರಚಲಿತವಾಗಿದ್ದ ಶಾಂತಿಯುತ ಅಥವಾ ಘರ್ಷಣಾತ್ಮಕ ಪ್ರಗತಿ, ಅನ್ಯಾಕ್ರಾಂತತೆ, ಪರಿಪೂರ್ಣತೆ ಮತ್ತು ಸಮಾಜ ಹಾಗೂ ಐತಿಹಾಸಿಕ ಶಕೆಗಳ ಬಗ್ಗೆ ಬೆಳೆಸಿದ ಸಮಷ್ಟಿ ದೃಷ್ಟಿ ಇತ್ಯಾದಿಗಳನ್ನು ಕುರಿತು ಭಾವನೆಗಳ ಗಾಢವಾಗಿದ್ದ ಪ್ರಭಾವಕ್ಕೆ ಒಳಗಾಗಿದ್ದಿತ್ತಲ್ಲದೆ, ಅದು ಫ್ರೆಂಚ್ ಹಾಗೂ ಜರ್ಮನಿಯ ಜ್ಞಾನೋದಯ ಕಾಲದ ಚಿಂತನೆ ಮುಖ್ಯವಾಗಿ ಹೆಗಲ್ ಪ್ರತಿಪಾದಿಸಿದ ಜರ್ಮನಿಯ ಆದರ್ಶವಾದ ಹೆಗಲನ ತರುಣ ಅನುಯಾಯಿಗಳು ಅವನ ವಿಚಾರದ ಬಗ್ಗೆ ಬೆಳೆಸಿದ ವಿಮರ್ಶಾಥ್ಮಕ

ಸಂಪ್ರದಾಯ, ಪ್ಯೂಯರ್‌ಬಚನ ಮಾನವಶಾಸ್ತ್ರೀಯ ದೃಷ್ಟಿ, ಫ್ರಾನ್ಸಿನ ಸಾಮಾಜಿಕ ಚಿಂತನೆ, ಮುಖ್ಯವಾಗಿ ಸೆಯ್‌ಂಟ್ ಸೈಮನನ ಪ್ರತಿಪಾದನೆ ಹಾಗೂ ಬ್ರಿಟಿಷ್ ರಾಜಕೀಯ ಅರ್ಥವ್ಯವಸ್ಥೆ ಮುಂತಾಗಿ ಯೂರೋಪಿನ ವಿವಿಧ ವಿಚಾರವಾಹಿನಿಗಳ ಸಂಗಮಸ್ಥಾನದಲ್ಲಿದ್ದಿತು. ಅವನು ಬೆಳೆಸಿರುವ ಇತಿಹಾಸ ದರ್ಶನವು ಒಂದು ವಿಸ್ತೃತ ಆರ್ಥಿಕ ಸಿದ್ಧಾಂತದಿಂದ ವ್ಯಾಪ್ತವಾಗಿದೆ. ಅವನ ಪ್ರಕಾರ, ಜಗತ್ತಿನ ಕ್ರಾಂತಿ ಹಾಗೂ ನವೀಕರಣದತ್ತ ಮುನ್ನಡೆಯುತ್ತಿರುವ ಆರ್ಥಿಕ ಪ್ರಕ್ರಿಯೆಯು ಸಮಗ್ರ ಇತಿಹಾಸವನ್ನು ಒಳಗೊಳ್ಳುತ್ತದೆ. ಅವನ ಐತಿಹಾಸಿಕ ಮನೋಭಾವದ ಮಹತ್ತ್ವವು ಎಪಿಕ್ಯೂರಸ್ ಹಾಗೂ ಡಿಮಾಕ್ರಿಟಿಸ್‌ರ ದರ್ಶನದ ಬಗ್ಗೆ ಮಂಡಿಸಿದ್ದ ಮಹಾಪ್ರಬಂಧದಲ್ಲಿ ಸ್ಪಷ್ಟವಾಗಿ ಗೋಚರಕ್ಕೆ ಬಂದಿತು.

ಮಾರ್ಕ್ಸ್‌ನ ವಾದವನ್ನು ಎರಡು ಮೂಲಭೂತ ಆಧಾರ ಪ್ರತಿಜ್ಞೆಗಳಾಗಿ ಹಾಗೂ ಕೆಲವು ಅನುಸಿದ್ಧಾಂತಗಳಾಗಿ ವಿವರಿಸಬಹುದು. ಆರ್ಥಿಕ ನಿಯತಿವಾದವು ಪ್ರಥಮ ಆಧಾರ ಪ್ರತಿಜ್ಞೆ ಅದರ ಪ್ರಕಾರ, ಆರ್ಥಿಕ ಅಂಶವು ಸಮಾಜದ ರಚನೆ ಹಾಗೂ ಬೆಳವಣಿಗೆಯ ಮೂಲಭೂತ ನಿರ್ಧಾರಕವಾಗಿದೆ. ಮುಖ್ಯವಾಗಿ ಉತ್ಪಾದನೆಯ ಔದ್ಯೋಗಿಕ ಮಾಧ್ಯಮಗಳನ್ನು ಒಳಗೊಂಡಿರುವ ಈ ಅಂಶವು ಉತ್ಪಾದನೆಯ ಸಾಮಾಜಿಕ ರಚನೆಯನ್ನು ಅಂದರೆ ಮಾನವ ವ್ಯಕ್ತಿಗಳು ಪ್ರತ್ಯೇಕವಾಗಿದ್ದುಕೊಂಡು ಉತ್ಪಾದಿಸುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ಸಾಮಗ್ರಿಗಳನ್ನು ಉತ್ಪಾದಿಸುವುದಕ್ಕಾಗಿ ಬೆಳೆಸಿಕೊಳ್ಳುವ ಸಂಬಂಧಗಳನ್ನು ನಿರ್ಧರಿಸುತ್ತದೆ. ಉತ್ಪಾದನೆಯು ಪ್ರಧಾನ ಸಾಮಾಜಿಕ ಚಟುವಟಿಕೆಯಾಗುತ್ತದೆ. ಅದರಲ್ಲಿ ವ್ಯಕ್ತಿಗಳು ಉತ್ಪಾದನಾ ಕೆಲಸಕ್ಕೆ ಹಾಗೂ ಅದರ ಫಲದ ವಿತರಣೆಗೆ ಅನುಗುಣವಾಗಿ ಸಂಬಂಧಗಳನ್ನು ಬೆಳೆಸಿಕೊಳ್ಳುತ್ತಾರೆ. ಉತ್ಪಾದನಾ ಮಾಧ್ಯಮಗಳಿಗೆ ಸಂಬಂಧಿಸಿದಂತೆ ಅವರಿಗಿರುವ ಸಾಪೇಕ್ಷ ಸ್ಥಾನಮಾನಗಳು ಈ ಸಂಬಂಧಗಳನ್ನು ರೂಪಿಸಿ ನಿಯಂತ್ರಿಸುತ್ತವೆ. ಈ ಸಂಬಂಧಗಳು ಮಾನವ ಸಂಕಲ್ಪಶಕ್ತಿಗೆ ಒಳಪಡದೆ ಸ್ವತಂತ್ರವಾಗಿ ಬೆಳೆದು ಬರುತ್ತವೆ. ಅದೂ ಅಲ್ಲದೆ, ಉತ್ಪಾದನೆಯ ವ್ಯವಸ್ಥೆಯು ಹಾಗೂ ಈ ಸಂಬಂಧಗಳು ಅಂದರೆ ಸಮಾಜದ ಆರ್ಥಿಕ ಅಡಿಕಟ್ಟಡವು ರಾಜಕೀಯ ರಚನೆ, ಕಾನೂನು, ಮತಧರ್ಮ, ದರ್ಶನ, ಕಲೆ, ಸಾಹಿತ್ಯ, ವಿಜ್ಞಾನ ಹಾಗೂ ನೀತಿ ನಿಯಮ ಮುಂತಾಗಿ ಸಮಗ್ರ ಮೇಲ್ ಕಟ್ಟಡವನ್ನು ಸೀಮಿತಗೊಳಿಸುತ್ತದೆಯಲ್ಲದೆ ಅದನ್ನು ರೂಪಿಸುತ್ತದೆ.

ಬೇರೆ ಮಾತುಗಳಲ್ಲಿ ಹೇಳಬೇಕಾದರೆ ಪ್ರಕೃತಿಯಿಂದ ಜೀವನೋಪಾಯವನ್ನು ಬಲಾತ್ಕಾರವಾಗಿ ಪಡೆಯಲು ನಡೆಸುವ ನಿರಂತರ ಕಾದಾಟದಲ್ಲಿ ವ್ಯಕ್ತಿಗಳು ಪರಸ್ಪರ ಸಂಬಂಧಪಟ್ಟಿರುವ ರೀತಿಯು ಇತಿಹಾಸದಲ್ಲಿ ಪ್ರೇರಕಶಕ್ತಿಯಾಗಿದೆ. ಅವರುಗಳು ಲಾಭಕರ ಗುರಿಸಾಧನೆಗಾಗಿ ಇರುವ ಕಚ್ಚಾಸಾಮಗ್ರಿ ಹಾಗೂ ಯಾಂತ್ರಿಕ ಕೌಶಲಗಳನ್ನು ಬಳಸಿಕೊಳ್ಳುತ್ತಾ ಆರ್ಥಿಕ ಜೀವನದಲ್ಲಿ ಪಾಲ್ಗೊಳ್ಳುವಾಗ ಬೆಳೆಸಿಕೊಳ್ಳುವ ಪರಸ್ಪರ ಸಂಬಂಧಗಳು ನಿಜವಾದ ತಳಪಾಯವಾಗುತ್ತವೆ. ಅವುಗಳ ಆಧಾರದ ಮೇಲೆ ಸಮಗ್ರ ಸಾಂಸ್ಕೃತಿಕ ಮೇಲುಕಟ್ಟಡವನ್ನು ನಿರ್ಮಿಸಲಾಗುತ್ತದೆ. ಭೌತಿಕ ಜೀವನದಲ್ಲಿ ಬಳಸಲಾಗುವ ಉತ್ಪಾದನಾ ರೀತಿಯ ಬದುಕಿನ ಸಾಮಾಜಿಕ, ರಾಜಕೀಯ ಹಾಗೂ ಆಧ್ಯಾತ್ಮಿಕ ಪ್ರಕ್ರಿಯೆಗಳ ಸಾಮಾನ್ಯ ಸ್ವರೂಪವನ್ನು ನಿರ್ಧರಿಸುತ್ತವೆ. ರಾಜಕೀಯ, ಶಾಸನ, ದರ್ಶನ, ಸಾಹಿತ್ಯ ಹಾಗೂ ಕಲೆಯ ಬೆಳವಣಿಗೆಯು ಆರ್ಥಿಕಾಂಶವನ್ನು

ಅವಲಂಬಿಸಿರುತ್ತದೆ. ಸಮಾಜದ ಯಾವುದೇ ಮುಖವನ್ನು ಅರಿಯಬೇಕಾದರೂ ಅದರ ಉತ್ಪಾದನಾ ಶಕ್ತಿ ಹಾಗೂ ಆರ್ಥಿಕ ರಚನೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕು.

ಮಾರ್ಕ್ಸ್‌ನ ಸಿದ್ಧಾಂತದ ಎರಡನೆಯ ಆಧಾರ ಪ್ರತಿಜ್ಞೆಯು ಬದಲಾವಣಾ ಪ್ರಕ್ರಿಯೆಗೆ ಸಂಬಂಧ ಪಟ್ಟಿದೆ. ಅದರ ಪ್ರಕಾರ, ಪರಿವರ್ತನೆಯನ್ನು ಸದಾ ಇರುವ ಅದರ ಮೂರು ಅವಸ್ಥೆಗಳಲ್ಲಿ ಗುರುತಿಸಬೇಕು. ಇದೇ ಮಾರ್ಕ್ಸ್ ತಲೆಕೆಳಗು ಮಾಡಿರುವ ಸ್ಥಿರೀಕರಣ ಅಥವಾ ಇರುವ ವಿಷಯ ಅದರ ನಿಷೇಧ ಅಥವಾ ವಿರೋಧ ಮತ್ತು ವಿರುದ್ಧವಾದುವುಗಳ ಸಮನ್ವಯ ಅಥವಾ ಸಂಯೋಜನೆ ಎಂಬ ಮೂರು ಹಂತಗಳಿಂದ ಕೂಡಿರುವ ಹೆಗಲನ ತಾರ್ಕಿಕ ವಿನ್ಯಾಸ. ಈ ಸಂಯೋಜನೆಯು ಉನ್ನತ ಮಟ್ಟದಲ್ಲೂ ಸಹ ಯಾವಾಗಲೂ ಐತಿಹಾಸಿಕ ಪ್ರಕ್ರಿಯೆಯಲ್ಲಿ ವಿಶಿಷ್ಟವಾಗಿರುವ ಘರ್ಷಣೆ ಹಾಗೂ ಹೊಂದಿಕೆಯ ಲಕ್ಷಣಗಳೊಂದಿಗೆ ತಾರ್ಕಿಕ ಪ್ರಕ್ರಿಯೆಯು ಮುಂದುವರಿಯುತ್ತದೆ.

ಮಾರ್ಕ್ಸ್‌ನ ಈ ಎರಡು ಮೂಲಭೂತ ಆಧಾರ ಪ್ರತಿಜ್ಞೆಗಳ ಸಂಯೋಗದಿಂದ ಕೆಲವು ಅನುಸಿದ್ಧಾಂತಗಳು ಉದ್ಭವಿಸಿವೆ. ಪ್ರತಿ ಆರ್ಥಿಕ ಉತ್ಪಾದನಾ ವ್ಯವಸ್ಥೆಯು ಸ್ಥಿರೀಕರಣದೊಂದಿಗೆ ಆರಂಭವಾಗುತ್ತದೆ. ಅದು ಆ ಕಾಲಕ್ಕೆ ಅತ್ಯುತ್ತಮ ರಚನೆಯಾಗಿರುತ್ತದೆ. ಅದು ಸಾಮಾಜಿಕವಾಗಿ ಭದ್ರವಾಗಿ ನಿಂತಾಗ ಅದು ನೂತನ ಔದ್ಯೋಗಿಕ ತಂತ್ರ, ಹೊಸದಾಗಿ ಕಂಡುಹಿಡಿಯಲಾದ ಮಾರುಕಟ್ಟೆ ಮತ್ತು ಕಚ್ಚಾಸಾಮಗ್ರಿಗಳ ಸರಬರಾಜಿಗೆ ಅಡಚಣೆಯಾಗುತ್ತದೆ. ಐತಿಹಾಸಿಕ ವಿಕಾಸವಾಹಿನಿಯು ಆ ಹಂತದಲ್ಲಿ ನಿಂತುಬಿಡಲಾರದು. ಆದ್ದರಿಂದ ಆ ವ್ಯವಸ್ಥೆಗೆ ವಿರುದ್ಧವಾದುದೊಂದು ತಲೆ ಎತ್ತಿಕೊಳ್ಳುತ್ತದೆ. ಆಗ ಸಾಮಾಜಿಕ ಕ್ರಾಂತಿಯು ಆ ಹಳೆಯ ರಚನೆಯನ್ನು ತೆಗೆದುಹಾಕಿ ನೂತನ ಉದ್ಪಾದನಾ ವ್ಯವಸ್ಥೆಯನ್ನು ಸೃಷ್ಟಿಸುತ್ತದೆ. ಅದು ಹಳೆಯ ಹಾಗೂ ಹೊಸ ರಚನೆಗಳ ಸಂಯೋಜನೆಯಾಗಿರುತ್ತದೆ. ಪ್ರತಿ ಸಮಾಜದಲ್ಲೂ ಹಿಂದೆ ಬಿದ್ದುಹೋಗುತ್ತಿರುವ ಹಾಗೂ ಹುಟ್ಟುತ್ತಲ್ಲಿರುವ ಉತ್ಪಾದನಾ ವ್ಯವಸ್ಥೆಗಳನ್ನು ಪ್ರತಿನಿಧಿಸುವಂತಹ ಎರಡು ಮೂಲವರ್ಗಗಳಿರುತ್ತವೆ. ಇಲ್ಲಿಯವರೆಗೆ ಇರುವ ಸಮಾಜದ ಇತಿಹಾಸವು ವರ್ಗಕಲಹದ ಚರಿತ್ರೆಯೇ ಆಗಿದೆ. ಇತಿಹಾಸ ಕಾಲದ ಆರಂಭದಿಂದಲೂ ಸ್ವತಂತ್ರ ವ್ಯಕ್ತಿಗಳು ಹಾಗೂ ಗುಲಾಮರು, ಉತ್ತಮ ಕುಲಸ್ಥರು ಹಾಗೂ ಸಾಮಾನ್ಯ ಜನರು, ಭೂಸ್ವಾಮಿ ಹಾಗೂ ಜೀತದ ಆಳು, ವೃತ್ತಿಸಂಘಪತಿ ಮತ್ತು ಕೂಲಿಕಾರ, ಶೋಷಕ ಹಾಗೂ ಶೋಷಿತ ವರ್ಗಗಳ ನಡುವೆ ಪರಸ್ಪರ ಘರ್ಷಣೆಯಾಗುತ್ತಲೇ ಇದೆ. ಪ್ರತಿ ವಿಶಿಷ್ಟ ವರ್ಗಕಲಹದ ಬೇರನ್ನು ನಿರ್ದಿಷ್ಟ ಉತ್ಪಾದನಾ ಕ್ರಮದಲ್ಲಿ ಕಾಣಬಹುದು. ಈ ವರ್ಗಗಳ ಕಲಹದ ಮೂಲಕ ಸಮಾಜವು ಒಂದು ಹಂತದಿಂದ ಮತ್ತೊಂದಕ್ಕೆ ಕ್ರಮವಾಗಿ ವಿಕಾಸಗೊಳ್ಳುತ್ತಾ ಹೋಗುತ್ತದೆ. ಈ ಕಾದಾಟದಲ್ಲಿ ವಿಜಯಿಯಾದ ವರ್ಗವು ನೂತನ ಉತ್ಪಾದನಾ ವ್ಯವಸ್ಥೆಯನ್ನು ಸ್ಥಾಪಿಸುತ್ತದೆ. ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ನಿರ್ದಿಷ್ಟ ಉತ್ಪಾದನಾ ರೀತಿಗೆ ಸಂಬಂಧಿಸಿರುವ ವರ್ಗವಿರೋಧವು ನೂತನ ವರ್ಗಗಳ ಉದಯಕ್ಕೆ ಕಾರಣವಾಗುತ್ತದೆ. ಅವುಗಳ ಹಿತಾರ್ಥಗಳನ್ನು ಹಳೆಯ ವ್ಯವಸ್ಥೆಯ ಚೌಕಟ್ಟಿನೊಳಗೆ ಅಳವಡಿಸುವುದು ಸಾಧ್ಯವಾಗದೇ ಹೋಗಿ ನೂತನ ಉತ್ಪಾದನಾ ತತ್ತ್ವವನ್ನು ಎತ್ತಿಹಿಡಿಯುವ ಆ ಹೊಸ ವರ್ಗಗಳು ಹಳೆಯ ವ್ಯವಸ್ಥೆಯನ್ನು ನಾಶಪಡಿಸುತ್ತವೆ. ಈ ತರಹದ ಪ್ರತಿ ನವೀನ ವ್ಯವಸ್ಥೆಯು ಹಿಂದಿನ

ರಚನೆಯಲ್ಲಿ ತಲೆದೋರಿದ ವಿರೋಧಗಳ ಮೂಲಕ ಅಸ್ತಿತ್ವಕ್ಕೆ ಬರುತ್ತದೆ. ಆ ವ್ಯವಸ್ಥೆಯಲ್ಲೇ ಅದರ ನಾಶದ ಬೀಜ ಅಡಗಿರುತ್ತದೆ.

ಮಾರ್ಕ್ಸ್ ಸಮಕಾಲೀನ ಪಾಶ್ಚಾತ್ಯ ಸಮಾಜವನ್ನು ವಿಶ್ಲೇಷಿಸುವಾಗ ಈ ತಾರ್ಕಿಕ ತತ್ತ್ವವನ್ನು ಬಳಸಿದನು. ಅದನ್ನು ಬಂಡವಾಳಶಾಹಿ ಸಮಾಜ ಎಂದು ಕರೆದನು. ಆಧುನಿಕ ಕೈಗಾರಿಕೆ ಹಾಗೂ ಅದರಿಂದ ಉಂಟಾದ ಅದ್ಭುತ ಫಲಗಳು ಪ್ರಧಾನವಾಗಿ ಈ ಸಮಾಜವು ಈಜಿಪ್ಟಿನ ಪಿರಮಿಡ್ಡು, ರೋಮ್‌ನ ಕಾಲುವೆ ಮತ್ತು ಗಾತಿಕ್ ಆರಾಧನಾ ಮಂದಿರಗಳನ್ನು ಮೀರಿಸಿದಂಥ ಅತ್ಯಾಶ್ಚರ್ಯಕರ ಸಾಧನೆಗಳನ್ನು ಗಳಿಸಿದೆ.

ಉತ್ತಮ ಜೀವನವನ್ನು ಸಾಧಿಸಲು ಬೇಕಾದ ನೂತನ ಉತ್ಪಾದನೆಯ ಬಗೆ ಹಾಗೂ ಸಾಮಾಜಿಕ ರಚನೆಯನ್ನು ಪ್ರತಿನಿಧಿಸುವಂತಹ ನೂತನ ವರ್ಗವಾಗಿರುವ ಕಾರ್ಮಿಕರು ಸಮಾಜವನ್ನು ರಕ್ಷಿಸಿ, ಉದ್ಧಾರಮಾಡಬಲ್ಲ ಏಕಮಾತ್ರ ಕ್ರಾಂತಿಕಾರಕ ಶಕ್ತಿಯಾಗಿರುತ್ತದೆ. ಪ್ರತಿ ಕಾಲದಲ್ಲೂ ಸಮಾಜದಲ್ಲಿರುವ ಉತ್ಪಾದನಾ ಮಾಧ್ಯಮಗಳ ಮೇಲೆ ಅಧಿಕಾರವುಳ್ಳವರ ಭಾವನೆಗಳು ಪ್ರಧಾನವಾಗಿರುತ್ತವೆ. ಭಾವನೆಗಳು ಐತಿಹಾಸಿಕ ಫಲಗಳಾಗಿರುತ್ತವೆ. ಬಂಡವಾಳಶಾಹಿ ಸಮಾಜದಲ್ಲಿ ಬಂಡವಾಳಗಾರರ ಭಾವನೆಗಳು ಪ್ರಧಾನವಾಗಿದ್ದುವು. ಶೋಷಿತ ವರ್ಗಕ್ಕೆ ಸೇರಿರುವ ಕಾರ್ಮಿಕರು ಅದಕ್ಕೆ ವಿರುದ್ಧವಾದ ಭಾವನಾಸಮುಚ್ಚಯವನ್ನು ಬೆಳೆಸುತ್ತಾರೆ. ಅವರಲ್ಲಿ ಇರುವ ಸಾಮಾನ್ಯ ಹಿತಾಸಕ್ತಿಗಳ ಕಾರಣ ವರ್ಗಪ್ರಜ್ಞೆ ಮೂಡಿ ಅವರು ವ್ಯವಸ್ಥಿತಗೊಂಡು, ಇನ್ನೊಂದು ವರ್ಗದ ವಿರುದ್ಧ ಹೋರಾಡುತ್ತಾರೆ. ವರ್ಗ ಕಲಹವು ಒಂದು ನಿರ್ಧಾರಕ ಘಟ್ಟವನ್ನು ಮುಟ್ಟಿರುವ ಸಮಯದಲ್ಲಿ ಅವರು ಇತಿಹಾಸದ ಸಮಗ್ರ ಗತಿಯನ್ನೇ ಬದಲಾಯಿಸುವರು. ಆ ಕ್ರಾಂತಿಯ ಅಥವಾ ಅದಕ್ಕೆ ಹಿಂದಿನ ಸಮಯದಲ್ಲಿ ಬಂಡವಾಳಗಾರರ ಒಂದು ವರ್ಗದವರು ಕಾರ್ಮಿಕರೊಂದಿಗೆ ಸೇರಿಕೊಳ್ಳುತ್ತಾರೆ.

ಮಾರ್ಕ್ಸ್‌ನ ವಾದವು ಸಂಪೂರ್ಣವಾಗಿ ಸರಿಯಾದುದಲ್ಲ. ಅದು ಅನೇಕ ಟೀಕೆಗಳಿಗೆ ಗುರಿಯಾಗಿದೆ. ಮೊದಲನೆಯದಾಗಿ, ಸಮಾಜದ ಇತರ ಎಲ್ಲಾ ಸಂಸ್ಥೆಗಳು ಹಾಗೂ ಸಾಂಸ್ಕೃತಿಕ ಮೇಲ್ ಕಟ್ಟಡವು ಅದರ ಆರ್ಥಿಕ ಅಡಿಪಾಯವನ್ನೇ ಅವಲಂಬಿಸಿವೆ ಎಂಬುದನ್ನು ಮಾರ್ಕ್ಸ್ ಸರಿಯಾಗಿ ಸಮರ್ಥಿಸಿಲ್ಲ. ಮಾನವವ್ಯಕ್ತಿಗಳು ಆರ್ಥಿಕ ಬೆಂಬಲವಿಲ್ಲದೆ ಕಲೆ, ದರ್ಶನ, ಮತಧರ್ಮ ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗುವುದು ಸಾಧ್ಯವಿಲ್ಲ ಎಂಬ ಅವನ ವಾದ ಸರಿಯಾದುದಲ್ಲ. ಕಾರಣ ಅವರ ಆರ್ಥಿಕ ಜೀವನೋಪಾಯವು ಅವರ ಕಲೆ, ದರ್ಶನ, ಮತಧರ್ಮ ಇತ್ಯಾದಿಗಳನ್ನು ನಿರ್ಧರಿಸಲಾರದು. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯು ಇದ್ದ ಕಾಲದಲ್ಲಿ ದರ್ಶನ, ಕಲೆ ಹಾಗೂ ಇತರ ಸಾಂಸ್ಕೃತಿಕ ವಿಷಯಗಳು ವೈವಿಧ್ಯಮಯವಾಗಿದ್ದುವು. ಜೀವನದ ಮೂಲಭೂತ ಅವಶ್ಯಕತೆಗಳಾಗಿರುವ ಆಹಾರ, ಉಡುಪು ಹಾಗೂ ವಸತಿ ಸೆರೆಮನೆಯಲ್ಲಿ ಸಿಗುವುದಾದರೂ ಯಾರೂ ಅಲ್ಲಿಗೆ ಹೋಗಿರಲು ಇಚ್ಛಿಸುವುದಿಲ್ಲ. ಎರಡನೆಯದಾಗಿ, ಕೈಗಾರಿಕಾ ಕ್ರಾಂತಿಯ ಯುಗದಲ್ಲಿ ಬಾಳಿದ ಮಾರ್ಕ್ಸ್ ಅದರ ಅತೀವ ಪ್ರಭಾವಕ್ಕೆ ಮಾರುಹೋಗಿ ಐತಿಹಾಸಿಕ ಘಟನೆಗಳ ಬಗ್ಗೆ ಅನುಭವಾತ್ಮಕ ಹಾಗೂ ವೈಜ್ಞಾನಿಕ ವೃತ್ತಾಂತವನ್ನು ನೀಡಬೇಕೆಂಬ ಉದ್ದೇಶದಿಂದ ಇತಿಹಾಸದ ಬಗ್ಗೆ ಭೌತಕಲ್ಪನೆಯನ್ನು ಬೆಳೆಸಿದನು ಮತ್ತು ಕೈಗಾರಿಕೆ ಹಾಗೂ

ಅರ್ಥವಿಚಾರವನ್ನು ಮೂಲಭೂತ ಅಂಶಗಳಾಗಿ ಎಣಿಸಿ ಅವುಗಳಿಗೆ ಹೆಚ್ಚಿನ ಪ್ರಾಮುಖ್ಯವನ್ನು ಕೊಟ್ಟನು. ಮುಖ್ಯವಾದ ಔದ್ಯೋಗಿಕ ಪರಿವರ್ತನೆಗಳು ಜೀವನದ ರೀತಿ, ಆಲೋಚನೆ ಹಾಗೂ ಕಾನೂನು ಇತ್ಯಾದಿಗಳನ್ನು ಬದಲಾಯಿಸಿದರೂ ಅವುಗಳ ಫಲವಾಗಿ ಸಮಾಜವೇ ನಿಷ್ಕೃಷ್ಟವಾಗಿ ಹಾಗೂ ಸಂಪೂರ್ಣವಾಗಿ ಪರಿವರ್ತನೆಗೊಳ್ಳುವುದಿಲ್ಲ. ಮೂರನೆಯದಾಗಿ, ಮಾರ್ಕ್ಸ್‌ನ ಪ್ರಕಾರ, ಉತ್ಪಾದನಾ ಮಾಧ್ಯಮಗಳಲ್ಲಿ ಉಂಟಾಗುವ ಬದಲಾವಣೆಗಳು ವರ್ಗಕಲಹವನ್ನು ಉಂಟುಮಾಡುತ್ತವೆ. ಅದರ ಫಲವಾಗಿ ಸಾಮಾಜಿಕ ಕ್ರಾಂತಿಗಳು ತಲೆದೋರುತ್ತವೆ ಮತ್ತು ಅವುಗಳಿಂದ ನೂತನ ಜೀವನದ ಬಗ್ಗೆ ಹಾಗೂ ಆಲೋಚನಾ ಮಾದರಿಗಳು ಉದ್ಭವಿಸುತ್ತವೆ. ಆದರೆ ಇದು ಸಂಪೂರ್ಣ ಸರಿಯಾದುದಲ್ಲ. ಉದಾಹರಣೆಗೆ, ಫ್ರೆಂಚ್ ಮಹಾಕ್ರಾಂತಿಗೆ ಕಾರಣಗಳು ಹಲವಾರು. ಅದು ಕೇವಲ ಉತ್ಪಾದನಾ ಬಗೆಯಲ್ಲಿ ಉಂಟಾದ ಪರಿವರ್ತನೆಯ ಫಲವಲ್ಲ. ನಾಲ್ಕನೆಯದಾಗಿ ಇತಿಹಾಸವೆಲ್ಲವೂ ವರ್ಗಕಲಹದ ಇತಿಹಾಸವೇ ಆಗಿದೆ ಎಂಬುದಾಗಿ ಭಾವಿಸಿಕೊಂಡರೂ, ವರ್ಗಕಲಹವೇ ಇತರ ಎಲ್ಲಾ ವಿಷಯಗಳನ್ನು ನಿರ್ಧರಿಸುವ ಅತ್ಯಾವರ್ಶಯಕ ಅಂಶವಾಗಿದೆ ಎಂಬುದಾಗಿ ಯಾವ ವೈಜ್ಞಾನಿಕ ವಿಶ್ಲೇಷಣೆಯಿಂದಲೂ ಅನುಮಾನಿಸುವುದು ಸಾಧ್ಯವಿಲ್ಲ. ಹಾಗೆಯೇ 'ಬೂರ್‌ಷ್ವಾ' ಹಾಗೂ 'ಪ್ರೋಲಿಟೇರಿಯೆಟ್' ಎಂಬ ಎರಡೇ ಭಾವರೂಪಗಳ ಆಧಾರದ ಮೇಲೆ ಇತಿಹಾಸವು ಈ ಎರಡು ಪಕ್ಷಗಳ ನಡುವೆ ತೀವ್ರವಾಗುತ್ತಿರುವ ಕಾದಾಟದ ವೃತ್ತಾಂತ ಎಂಬ ಸಾಮಾನ್ಯ ಭಾವನೆ ಮತ್ತು ಅದರ ಕೌತುಕಭರಿತ ಪರಾಕಾಷ್ಠೆಯ ನಿರೀಕ್ಷಣೆ ಇತ್ಯಾದಿಗಳನ್ನು ಸಂಪೂರ್ಣವಾಗಿ ಪ್ರಾಯೋಗಿಕ ಕ್ರಮದಲ್ಲಿ ಪರೀಕ್ಷಿಸುವುದು ಸಾಧ್ಯವಿಲ್ಲ. ಐದನೆಯದಾಗಿ, ಐತಿಹಾಸಿಕವಾಗಿ ವೀಕ್ಷಿಸಿದರೆ, ಮಾರ್ಕ್ಸ್ ಹೇಳುವಂತೆ ಒಂದು ಬಗೆಯ ಉತ್ಪಾದನಾ ಸಾಮಾಜಿಕ ರಚನೆಯಿಂದ ಇನ್ನೊಂದಕ್ಕೆ ಆಗುವ ಪರಿವರ್ತನೆಯು ಅನಿವಾರ್ಯವಾಗಿ ಶೋಷಿತ ವರ್ಗ ಗಳಿಸುವ ವಿಜಯದ ಪರಿಣಾಮವಾಗಿರುವುದಿಲ್ಲ. ಉದಾಹರಣೆಗೆ, ಯೂರೋಪಿನ ಇತಿಹಾಸದಲ್ಲಿ, ಜೀತದ ಆಳುಗಳ ವರ್ಗಗಳಿಗಿಂತ ಹೆಚ್ಚಾಗಿ ಸಾಪೇಕ್ಷವಾಗಿ ಚಿಕ್ಕದಾಗಿದ್ದ ಹಾಗೂ ಪ್ರಬಲವಾಗಿದ್ದ ಮಧ್ಯಮ ವರ್ಗಗಳು ಮಾಡಿದ ಪ್ರಯತ್ನಗಳ ಫಲವಾಗಿ ಊಳಿಗಮಾನ್ಯ ಪದ್ಧತಿಯು ಅಂತ್ಯಗೊಂಡಿತು. ಆರನೆಯದಾಗಿ ಔದ್ಯೋಗಿಕವಾಗಿ ಹೆಚ್ಚು ಮುಂದುವರಿದಿರುವ ರಾಷ್ಟ್ರಗಳಲ್ಲಿ ಮಧ್ಯಮ ವರ್ಗದ ಅವನತಿ ಉಂಟಾಗುತ್ತದೆ; ಸಮಾಜವಾದ ಯಶಸ್ವಿಯಾಗುತ್ತದೆ ಎಂಬ ಮಾರ್ಕ್ಸ್‌ನ ಭವಿಷ್ಯವಾಣಿ ನಿಜವಾಗಲಿಲ್ಲ. ಅವುಗಳು ವಾಸ್ತವಿಕ ಐತಿಹಾಸಿಕ ಘಟನೆಗಳಿಗೆ ಪ್ರತಿಯಾದುವು. ಕೊನೆಯದಾಗಿ, ಆರ್ಥಿಕ ವಿಷಯವೇ ಸಾಮಾಜಿಕ ಬದಲಾವಣೆಯನ್ನು ನಿರ್ಧರಿಸುವ ಏಕಮಾತ್ರ ಅಂಶ ಎಂಬ ಅವನ ಬಲವಾದ ವಾದವು ಸಾಮಾಜಿಕ ಪರಿವರ್ತನೆಯ ಸಂಕೀರ್ಣ ಪ್ರಕ್ರಿಯೆ ಮತ್ತು ಸಾಮಾಜಿಕ ರಚನೆ ಹಾಗೂ ಸಾಂಸ್ಕೃತಿಕ ಮಾದರಿಗಳ ಜಟಿಲಸ್ವರೂಪವನ್ನು ಅತ್ಯಂತ ಸರಳವನ್ನಾಗಿಸುತ್ತದೆ, ಅವುಗಳನ್ನು ತಪ್ಪಾಗಿ ತೋರಿಸುತ್ತದೆ.

ಆದರೂ ಆಧುನಿಕ ಸಮಾಜದ ಮೇಲೆ ಮಾರ್ಕ್ಸ್‌ನ ವಿಚಾರಧಾರೆಯು ಬೀರಿದ ಅಥವಾ ಬೀರುತ್ತಿರುವ ಪ್ರಭಾವ ಗಾಢವಾಗಿದೆ ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಅವನು ಮಾನವ ಸಮಾಜದ ಏರಿಳಿತಗಳನ್ನು ವಿವರಿಸುವುದಕ್ಕಾಗಿ ನೂತನ ಅನ್ವೇಷಣಾ ವಿಧಾನ, ಭಾವರೂಪ ಹಾಗೂ ದಿಟ್ಟ ಉಪಕಲ್ಪನೆಗಳನ್ನು ಬೆಳೆಸಿದನು. ಮಾನವ ಸಮಾಜಗಳು ಸಮಷ್ಟಿಗಳಾಗಿವೆ. ಅವುಗಳಲ್ಲಿ ಸಾಮಾಜಿಕ ಸಮೂಹ, ಸಂಸ್ಥೆ, ನಂಬಿಕೆ ಇತ್ಯಾದಿಗಳೆಲ್ಲಾ ಪರಸ್ಪರ ಸಂಬಂಧಪಟ್ಟಿವೆ. ಆ ಅನ್ಯೋನ್ಯ ಸಂಬಂಧಗಳ ಬೆಳಕಿನಲ್ಲಿ

ಅವುಗಳನ್ನು ಕುರಿತು ವಿಚಾರ ಮಾಡಬೇಕೇ ಹೊರತು ಅವುಗಳನ್ನು ಪ್ರತ್ಯೇಕಿಸಿಟ್ಟು ಪರಿಶೀಲಿಸಬಾರದು ಮತ್ತು ಮಾರ್ಪಡುವ ವ್ಯವಸ್ಥೆಗಳಾಗಿರುವ ಸಮಾಜಗಳಲ್ಲಿ ಹೆಚ್ಚಾಗಿ ಆಂತರಿಕ ವಿರೋಧ ಹಾಗೂ ಘರ್ಷಣೆಗಳ ಕಾರಣ ಪರಿವರ್ತನೆಗಳಾಗುತ್ತವೆ ಎಂಬ ವಿಚಾರಗಳು ಅವನು ನೀಡಿದ ಅಮೂಲ್ಯ ಕೊಡುಗೆಗಳಾಗಿವೆ.

### 13.2.3 ಲಿಯೋಪಾಲ್ಡ್ ವ್ಯಾನ್ ರಾಂಕೆ (1795–1886)

ಜರ್ಮನಿಯ ಇನ್ನೊಬ್ಬ ಹೆಮ್ಮೆಯ ಚರಿತ್ರಲೇಖಕ ರಾಂಖೆ. ಯೂರೋಪಿನ 19ನೆಯ ಶತಮಾನದ ಪಾಂಡಿತ್ಯ ಕ್ಷೇತ್ರದಲ್ಲಿ ಪ್ರಧಾನ ಪಂಡಿತನೂ ಮತ್ತು ಆಧುನಿಕ ಇತಿಹಾಸಶಾಸ್ತ್ರದ ಜನಕನೂ ಆಗಿದ್ದ ಅವನು 1795ರ ಡಿಸೆಂಬರ್ 21 ರಂದು ಸಾಕ್ಸನಿ ರಾಜ್ಯದ ಥೂರಿನ್‌ಗಿಯಾ ಎಂಬ ಚಿಕ್ಕ ಪಟ್ಟಣದಲ್ಲಿ ಲೂಥರ್ ಮತಧರ್ಮ ಅಧಿಕಾರಿಗಳ ಕುಟುಂಬದಲ್ಲಿ ಒಬ್ಬ ವಕೀಲನ ಪುತ್ರನಾಗಿ ಜನಿಸಿದನು. ಅವನು ಜರ್ಮನಿಯ ಸುಪ್ರಸಿದ್ಧ ಸಾರ್ವಜನಿಕ ಶಾಲೆಗಳಲ್ಲಿ ಒಂದಾಗಿದ್ದ ಸ್ಕಲ್ಪ್‌ಫಾರ್ಟ್‌ದ ಶಾಲೆಯಲ್ಲಿ ಶಿಕ್ಷಣ ಪಡೆದು, ನಂತರ ಲೆಪ್‌ಸಿಗ್ ವಿಶ್ವವಿದ್ಯಾನಿಲಯದಲ್ಲಿ ಭಾಷಾಶಾಸ್ತ್ರ, ದೇವತಾಶಾಸ್ತ್ರ ಮತ್ತು ಪ್ರಾಚೀನ ಗ್ರೀಕ್ ಹಾಗೂ ಲ್ಯಾಟಿನ್ ಸಾಹಿತ್ಯವನ್ನು ಅಧ್ಯಯನ ಮಾಡಿದನು. ಹಿಬ್ರೂ ಭಾಷೆಯಲ್ಲಿ ಹಳೆಯ ಒಡಂಬಡಿಕೆಯನ್ನು ಓದಲು ಕಲಿತನು ಮತ್ತು ಆಸಕ್ತಿಯಿಂದ ಕಾಂಟನ ಹಾಗೂ ಫಿಚೆಯ ಕೃತಿಗಳನ್ನು ಓದಿದನು. 1818ರಲ್ಲಿ ಅವನು ಫ್ರಾಂಕ್‌ಫೋರ್ಟಿನ ಪ್ರೌಢಶಾಲೆಯಲ್ಲಿ ಗ್ರೀಕ್, ಲ್ಯಾಟಿನ್ ಭಾಷೆಗಳ ಅಧ್ಯಾಪಕನಾಗಿ ಸೇವೆ ಸಲ್ಲಿಸಿದನು. ಅಲ್ಲಿ ಕಳೆದ 7 ವರ್ಷಗಳು ಬಹುಮುಖ್ಯವಾಗಿದ್ದುವು. ಕಾರಣ ಅವನು ಭಾಷಾಶಾಸ್ತ್ರದಿಂದ ಇತಿಹಾಸದತ್ತ ತಿರುಗಿದನು. 1824ರಲ್ಲಿ ಅವನ ಹಿಸ್ಟೋರಿ ಆವ್ ದಿ ಲ್ಯಾಟಿನ್ ಆ್ಯಂಡ್ ಟೂಟಾನಿಕ್ ನೇಷನ್ಸ್ ಎಂಬ ಪ್ರಥಮ ಕೃತಿಯು ಪ್ರಕಟವಾದಾಗ ಅವನು ಹೆಸರುವಾಸಿಯಾದನು. ಬರ್ಲಿನ್ ವಿಶ್ವವಿದ್ಯಾನಿಲಯವು ಅವನನ್ನು 1825ರಲ್ಲಿ ಸಹಾಯಕ ಪ್ರಾಧ್ಯಾಪಕನನ್ನಾಗಿ ಮತ್ತು 1834ರಲ್ಲಿ ಪ್ರಾಧ್ಯಾಪಕನನ್ನಾಗಿ ನೇಮಿಸಿತು. ಪ್ರಷ್ಯಾದ ಸರ್ಕಾರವು ಅವನಿಗೆ ಸಂಶೋಧನೆಗಾಗಿ ಪ್ರವಾಸಗಳನ್ನು ಕೈಗೊಳ್ಳಲು ಧನಸಹಾಯವನ್ನು ನೀಡಿತು. ಆ ಕಾರಣ ಅವನು ನಾಲ್ಕು ವರ್ಷಗಳನ್ನು ಮುಖ್ಯವಾಗಿ ಇಟಲಿಯಲ್ಲಿ ಕಳೆದನು. ಅವುಗಳು ಅವನ ಐತಿಹಾಸಿಕ ಭಾವನೆಗಳ ಬೆಳವಣಿಗೆಯಲ್ಲಿ ನಿರ್ಧಾರಕವಾಗಿದ್ದ ವರ್ಷಗಳಾದುವು. ಅವನು 1831ರಲ್ಲಿ ಬರ್ಲಿನ್‌ಗೆ ಹಿಂತಿರುಗಿದನು. ಜರ್ಮನ್, ಫ್ರಾನ್ಸ್ ಹಾಗೂ ಇಂಗ್ಲೆಂಡಿನ ಸರ್ಕಾರಿ ಪತ್ರಾಗಾರಗಳಲ್ಲಿ ಸಂಶೋಧನೆ ನಡೆಸುವುದಕ್ಕಾಗಿ ಪ್ರವಾಸಗಳನ್ನು ಕೈಗೊಳ್ಳುತ್ತಿದ್ದುದನ್ನು ಬಿಟ್ಟರೆ ಅವನು ತನ್ನ ಜೀವಿತ ಕಾಲವನ್ನೆಲ್ಲಾ ಬರ್ಲಿನ್‌ನಲ್ಲೇ ಕಳೆದನು. ಅತ್ಯುತ್ತಮ ಇತಿಹಾಸಕಾರನಾಗಿದ್ದ ಅವನು 19ನೆಯ ಶತಮಾನದಲ್ಲಿ ಸುಪ್ರಸಿದ್ಧರಾಗಿದ್ದ ಜರ್ಮನ್ ಚರಿತ್ರಲೇಖಕರಲ್ಲಿ ಅನೇಕರನ್ನು ತಯಾರು ಮಾಡಿದನು. ಅವನು 1871ರಲ್ಲಿ ಶಿಕ್ಷಕ ವೃತ್ತಿಯಿಂದ ನಿವೃತ್ತನಾದರೂ ಕೊನೆಯವರೆಗೆ ವಿಶ್ವ ಇತಿಹಾಸವನ್ನು ರಚಿಸುವ ಕಾರ್ಯದಲ್ಲಿ ತೊಡಗಿದ್ದನು ಮತ್ತು 1880ರ ಕೊನೆಯ ಹೊತ್ತಿಗೆ ಎರಡು ಸಂಪುಟಗಳು ತಲೆದೋರಿದವು. ತನ್ನ 85ನೆಯ ವಯಸ್ಸಿನಲ್ಲಿ ಈ ಮಹಾಕಾರ್ಯವನ್ನು ಕೈಗೊಂಡಿದ್ದ ಆ ವೃದ್ಧ ಮಹಾಪುರುಷನ ಕೆಚ್ಚನ್ನು ಕಂಡು ಬೌದ್ಧಿಕ ಜಗತ್ತು ದಿಗ್ಭ್ರಮೆಗೊಂಡಿತು. 1865ರಲ್ಲಿ ಪ್ರಷ್ಯಾದ ದೊರೆಯು ಅವನಿಗೆ ರಾಜಮರ್ಯಾದೆಯನ್ನು ಮಾಡಿದನು. ಅವನು ಗಳಿಸಿಕೊಂಡಿದ್ದ ಅಪಾರ ಪಾಂಡಿತ್ಯ ಹಾಗೂ ನೀಡಿದ ಅಮೂಲ್ಯ ಕೊಡುಗೆಗಾಗಿ ಜಗತ್ತಿನ ಎಲ್ಲಾ ಮುಖ್ಯ ರಾಷ್ಟ್ರಗಳ ಗೌರವಾದರಗಳಿಗೆ ಪಾತ್ರನಾಗಿ ಅವನು 1886ರ ಮೇ 23 ರಂದು ಬರ್ಲಿನ್‌ನಲ್ಲಿ ಕಾಲವಾದನು.

### 13.2.3.1 ರಾಂಕೆಯ ವಿಚಾರಧಾರೆ

ಸಾಮಾನ್ಯವಾಗಿ ರಾಂಕೆಯನ್ನು ಆಧುನಿಕ ಚರಿತ್ರಲೇಖಕರಲ್ಲಿ ಮೊದಲಿಗನೆಂಬುದಾಗಿ ಎಣಿಸಲಾಗುತ್ತದೆ. ಆರಂಭದಲ್ಲಿ ಅವನು ಇತಿಹಾಸದಲ್ಲಿ ಅಷ್ಟೇನೂ ಆಸಕ್ತಿಯನ್ನು ತೋರಲಿಲ್ಲ. ಆದರೆ ನೀಬರನ ರೋಮ್‌ನ ಚರಿತ್ರೆಯ ಅಧ್ಯಯನ ಅವನ ಬೌದ್ಧಿಕ ಜೀವನದಲ್ಲಿ ಒಂದು ತಿರುವನ್ನು ಉಂಟು ಮಾಡಿತು. ಮೊದಲು ಅವನು ಪ್ರಾಚೀನ ಚರಿತ್ರಲೇಖಕರ, ಮುಖ್ಯವಾಗಿ ಥೂಸಿಡಿಡಿಸನ ಕೃತಿಗಳ ಅಧ್ಯಯನಕ್ಕೆ ಹೆಚ್ಚಿನ ಗಮನವನ್ನು ನೀಡಿದನು. ಲಿವಿ ಹಾಗೂ ಹೆರಡೋಟಸನ ವಿಚಾರಗಳ ಬಗ್ಗೆ ಉಪನ್ಯಾಸ ನೀಡುವುದು ಹಾಗೂ ನೀಬರನ ಕೃತಿಗಳನ್ನು ಓದುವುದು ಅವನಿಗೆ ಅತ್ಯಂತ ಪ್ರಿಯವಾಗಿದ್ದ ಕಾರ್ಯವಾಯಿತು. ಕ್ರಮೇಣ ಅವನು ತನ್ನ ಬೌದ್ಧಿಕ ದಿಗಂತವನ್ನು ವಿಸ್ತರಿಸಿ ಮಧ್ಯಯುಗಗಳ ಕಡೆಗೂ ಗಮನವನ್ನು ಹರಿಸಿದನು. ಇತಿಹಾಸದಲ್ಲಿ ಮುಖ್ಯವಾಗಿ ಮಾನವೀಯ ಮುಖ ಅವನನ್ನು ಆಕರ್ಷಿಸಿತು.

ರಾಂಕೆಯು ತನ್ನ ಮೊದಲ ಗ್ರಂಥದ ಅನುಬಂಧದಲ್ಲಿ ಮೂಲಾಧಾರವಾಗಿ ಬಳಸಲಾಗುತ್ತಿದ್ದ ಸಮಕಾಲೀನರ ಇತಿಹಾಸ ಕೃತಿಗಳು ವೈಯಕ್ತಿಕ ಪೂರ್ವಾಗ್ರಹ ಹಾಗೂ ರಾಜಕೀಯ ದುರಭಿಪ್ರಾಯಗಳಿಂದ ತುಂಬಿ ದೋಷಯುಕ್ತವಾಗಿದ್ದರಿಂದ ಅವುಗಳನ್ನು ಬಹು ಎಚ್ಚರಿಕೆಯಿಂದ ಬಳಸಬೇಕು ಎಂಬುದನ್ನು ಸ್ಪಷ್ಟಪಡಿಸಿದನು. ಅವನು ತನ್ನ ಮೊದಲ ಕೃತಿಯ ಮೂಲಕ ಇತಿಹಾಸ ಕ್ಷೇತ್ರಕ್ಕೆ ಮಾಡಿದ ಪ್ರಥಮ ಪ್ರವೇಶವು ಮುಖ್ಯ ವ್ಯಕ್ತಿಗಳ ವಿಚಾರದಲ್ಲಿ ಅವನಿಗಿದ್ದ ಆಸಕ್ತಿ ಮತ್ತು ಅವನ ಧಾರ್ಮಿಕ ಒಲವನ್ನು ಎತ್ತಿತೋರಿತು. ಅವನು ವೆನಿಸ್‌ನಲ್ಲಿದ್ದಾಗ ಅಲ್ಲಿನ ರಾಯಭಾರಿಗಳು ರಾಜಸಭೆಯ ಮುಂದೆ ಮಂಡಿಸಿದ ವರದಿಗಳು ಗತಕಾಲದ ಬಗ್ಗೆ ಸತ್ಯಸಂಗತಿಗಳನ್ನು ಕಂಡುಹಿಡಿಯುವುದಕ್ಕೆ ಕಥನ ರೂಪದಲ್ಲಿದ್ದ ಮೂಲಾಧಾರಗಳಿಗಿಂತ ಹೆಚ್ಚು ನಂಬಲರ್ಹವಾದುವುಗಳೆಂಬುದನ್ನು ಮನಗಂಡನು. ಈ ಅಧಿಕೃತ ವರದಿಗಳ ಅಧ್ಯಯನದ ಕಾಲವು ಅವನ ಬಾಳಿನಲ್ಲಿ ಒಂದು ಶಕೆಯೇ ಆಯಿತು. ಕಾರಣ ಅವುಗಳು ಒಂದು ಕ್ಷಣದಲ್ಲಿ ಆಧುನಿಕ ಯೂರೋಪಿನ ಇತಿಹಾಸವನ್ನು ಹೊಸದಾಗಿದ್ದ ಸಮಕಾಲೀನ ವಿಷಯ ಸಾಮಗ್ರಿಗಳ ಬೆಳಕಿನಲ್ಲಿ ಪುನರ್ರಚಿಸಬೇಕು ಎಂಬುದನ್ನು ಅವನಿಗೆ ಎತ್ತಿತೋರಿದುವು. ಪ್ರೇಕ್ಷಕನ ಹಾಗೆ ನಿಷ್ಪಕ್ಷಪಾತ ದೃಷ್ಟಿಯಿಂದ ಚರಿತ್ರೆಯನ್ನು ಬರೆಯುವುದು ಅವನ ಅಭ್ಯಾಸವಾಯಿತೆಂಬುದನ್ನು ದೃಢಪಡಿಸಿದವು.

ರಾಂಕೆಯು ಸರ್ಕಾರದ ಪತ್ರಾಗಾರಗಳಲ್ಲಿ ಸಂಶೋಧನೆಗಳನ್ನು ನಡೆಸಿ ತನ್ನ ಕೃತಿಗಳನ್ನು ಬರೆದನು. ವೆನಿಸ್‌ನ ಅಧಿಕೃತ ವರದಿಗಳ ಆಧಾರದ ಮೇಲೆ ಬೆಳಕಿಗೆ ಬಂದ ಮತ್ತು ಪ್ರಿನ್ಸಸ್ ಆ್ಯಂಡ್ ಪೀಪಲ್ಸ್ ಆವ್ ಸದರ್ನ್ ಯೂರೋಪ್ ಎಂಬ ಸಾಮಾನ್ಯ ಶಿರೋನಾಮೆಯಡಿಯಲ್ಲಿ ಬರೆಯಬೇಕೆಂದು ಯೋಜಿಸಲಾದ ಕೃತಿಗಳ ಶ್ರೇಣಿಯಲ್ಲಿ ಮೊದಲನೆಯದಾದ ಆಟೋಮನ್ ಆ್ಯಂಡ್ ಸ್ಪಾನಿಷ್ ಮಾನರ್ಕಿ ಇನ್ ದಿ ಸಿಕ್ಸ್‌ಟೀನ್ತ್ ಆ್ಯಂಡ್ ಸೆವೆನ್‌ಟೀನ್ತ್ ಸೆಂಚುರೀಸ್‌ನಲ್ಲಿ ರಾಜರು ಹಾಗೂ ರಾಜನೀತಿಜ್ಞರ ಚಿತ್ರ ಸಂಗ್ರಹವನ್ನು ಕಾಣಬಹುದಲ್ಲದೆ, ಘಟನೆಗಳ ಹಿನ್ನಲೆಯಾಗಿದ್ದ ಪರಿಸ್ಥಿತಿಗಳನ್ನು ಕುರಿತು ಅಧ್ಯಯನ ಮಾಡಲು ಯತ್ನಿಸಿರುವುದು ಕಂಡುಬರುತ್ತದೆ. ಇವುಗಳಲ್ಲದೆ ಪ್ರತ್ಯಕ್ಷದರ್ಶಿಗಳ ವಿವರಣೆಗಳನ್ನು ವೈಯಕ್ತಿಕವಾಗಿ

ಪರಿಶೀಲಿಸಿ, ರಚಿಸಿ, 1879ರಲ್ಲಿ ಪ್ರಕಟಿಸಲಾದ ಹಿಸ್ಟೋರಿ ಆವ್ ದಿ ರೆವೊಲ್ಯೂಷನ್ ಇನ್ ಸರ್ಬಿಯ, ಇತಿಹಾಸ ಸಂಶೋಧನೆಯ ಮಹಾಸಾಧನೆಯು ಮಾತ್ರವಲ್ಲದೆ, ಪರಿಪೂರ್ಣ ಕಲಾಕೃತಿಯೂ ಆಗಿದೆ. ಪರಿಪೂರ್ಣ ವಿವರ ಹಾಗೂ ಸಾಮಾನ್ಯೀಕರಣವನ್ನು ಸಂಯೋಜಿಸಿದ ಹಿಸ್ಟೋರಿ ಆವ್ ದಿ ಪೋಪ್ಸ್ (1834–36), ಹಸ್ತಪ್ರತಿಗಳ ವಿಷಯ ಸಾಮಗ್ರಿಗಳ ಮೇಲೆ ಆಧಾರಿತವಾಗಿದ್ದ ಜರ್ಮನ್ ಹಿಸ್ಟೋರಿ ಇನ್ ದಿ ಟೈಂ ಆವ್ ದಿ ರಿಫರ್ಮೇಷನ್ (1839–47), ಪ್ರಷ್ಯಾ, ಫ್ರಾನ್ಸ್ ಹಾಗೂ ಇಂಗ್ಲೆಂಡಿನ ಸರ್ಕಾರಗಳ ಪತ್ರಾಗಾರಗಳಲ್ಲಿ ನಡೆಸಲಾದ ಸಂಶೋಧನೆಗಳ ಮೇಲೆ ಬರೆಯಲಾದ ಪ್ರಷ್ಯನ್ ಹಿಸ್ಟೋರಿ (1847–48), ಫ್ರೆಂಚ್ ಹಿಸ್ಟೋರಿ (1852) ಮತ್ತು ಇಂಗ್ಲಿಷ್ ಹಿಸ್ಟೋರಿ (1859–69) ಅವನ ಐವತ್ನಾಲ್ಕು ಸಂಪುಟಗಳನ್ನು ಒಳಗೊಂಡಿರುವ ಸಂಗ್ರಹಿತ ಕೃತಿಗಳಲ್ಲಿ ಮುಖ್ಯವಾದುವು. ನಂತರ ಅವನು ಇತಿಹಾಸ ಪ್ರಬಂಧಗಳ ವರ್ಗಕ್ಕೆ ಸೇರಿಸಬಹುದಾದಂತಹ ಅನೇಕ ಲೇಖನಗಳನ್ನು ಬರೆದನು. 1867ರಲ್ಲಿ ಅವನು ತನ್ನ ಕೃತಿಗಳನ್ನು ಪುನಃ ಪರಿಷ್ಕರಿಸಿ, ಕೆಲವು ಸಲ ಅವುಗಳಿಗೆ ಹೆಚ್ಚು ವಿಷಯಗಳನ್ನು ಸೇರಿಸಿ ಅವುಗಳ ಸಂಪೂರ್ಣ ಆವೃತ್ತಿಗಳನ್ನು ಪ್ರಕಟಿಸಲಾರಂಭಿಸಿದನು. ಅವನು ತನ್ನ 82ನೆಯ ವಯಸ್ಸಿನಲ್ಲಿ ಹಾರ್ಡನ್‌ಬರ್ಗ್‌ನ ಬಗ್ಗೆ ಬರೆದ ದೊಡ್ಡ ಗ್ರಂಥವು ನೆಪೋಲಿಯನ್ ಶಕೆಯ ಚರಿತ್ರೆಯಾಗಿ ಘನವಾದ ಕೊಡುಗೆಯಾಗಿದೆ.

ಜೀವನದ ಎಲ್ಲಾ ಕ್ಷೇತ್ರಗಳ ಪರಸ್ಪರ ಸಂಬಂಧದ ಬಗ್ಗೆ ರಾಂಕೆಯು ಚೆನ್ನಾಗಿ ತಿಳಿದುಕೊಂಡಿದ್ದನಾದರೂ, ಅವನು ಮುಖ್ಯವಾಗಿ ರಾಜಕೀಯ ಹಾಗೂ ರಾಯಭಾರ ನಿರ್ವಹಣ ಕೌಶಲದ ಚರಿತ್ರಲೇಖಕನಾಗಿದ್ದನು. ಕಾರಣ ಅವನು ಬೆಳೆಯುತ್ತಿದ್ದ ರಾಷ್ಟ್ರೀಯತೆಯ ಕಾಲಕ್ಕೆ ಸೇರಿದ್ದನು. ಅವನು ಯೂರೋಪಿನ ಪ್ರಧಾನ ಹಾಗೂ ಪ್ರಬಲ ರಾಷ್ಟ್ರಗಳಲ್ಲಿ ಆಸಕ್ತಿ ವಹಿಸಿದನು ಮತ್ತು ಅವುಗಳನ್ನು ಪ್ರತ್ಯೇಕ ಅಸ್ತಿತ್ವ ಹಾಗೂ ವೈಶಿಷ್ಟ್ಯವುಳ್ಳ ಘಟಕಗಳಾಗಿ ಮತ್ತು ವಿಭಿನ್ನ ಭಾವನೆಗಳ ಅಭಿವ್ಯಕ್ತಿಗಳಾಗಿ ಎಣಿಸಿದನು. ಅವನ ದಿ ಡೈಅಲಾಗ್ ಆನ್ ಪಾಲಿಟಿಕ್ಸ್ ಎಂಬ ಪ್ರಬಂಧದಲ್ಲಿ ಈ ಅಭಿಪ್ರಾಯಗಳ ಸ್ಪಷ್ಟ ನಿರೂಪಣೆಯನ್ನು ನೋಡಬಹುದು. ಅದರಲ್ಲಿ ಅವನು 1830ರ ಕ್ರಾಂತಿಕಾರಕ ಚಳವಳಿಗಳ ವಿರುದ್ಧವಾಗಿ ಅಸ್ತಿತ್ವದಲ್ಲಿದ್ದ ಸರ್ಕಾರಗಳ ಪರವಾಗಿ ವಾದಿಸಿದನು. 1870–71ರ ಘಟನೆಗಳನ್ನು ಕ್ರಾಂತಿಗಳ ವಿರುದ್ಧ ಸಂಪ್ರದಾಯವಾದಿ ಯೂರೋಪು ಗಳಿಸಿದ ವಿಜಯ ಎಂಬುದಾಗಿ ಎಣಿಸಿದನು. ಉದಾರವಾದವು ಸಾಮಾನ್ಯವಾಗಿ, ಸಮಂಜಸವಾಗಿದ್ದ ರಾಜಕೀಯ ಮಾದರಿಯನ್ನು ರೂಪಿಸಲಾರದು. ಕಾರಣ ಪ್ರತಿ ರಾಜ್ಯವು ಪರಸ್ಪರಾವಲಂಬಿ ಭಾಗಗಳಿಂದ ಕೂಡಿರುವ ಮತ್ತು ಪ್ರತ್ಯೇಕ ಅಸ್ತಿತ್ವ ಹಾಗೂ ವಿಶಿಷ್ಟ ಲಕ್ಷಣಗಳನ್ನು ಹೊಂದಿರುವ ಜೀವಂತ ಸಮಷ್ಟಿಯಾಗಿದೆ ಮತ್ತು ರಾಜ್ಯಗಳು ತಮ್ಮದೇ ಆಗಿದ್ದ ನಿರ್ದಿಷ್ಟ ಸಂಸ್ಥಾಯಿಕ ಬಗೆಗಳನ್ನು ಹೊಂದಿರಬೇಕು ಎಂಬುದಾಗಿ ಅಭಿಪ್ರಾಯಪಟ್ಟನು. ಹೀಗೆ ಮೂಲಭೂತವಾಗಿ ಅವನು ಸಂಪ್ರದಾಯವಾದಿಯಾಗಿದ್ದನು.

ರಾಂಕೆಯ ಇತಿಹಾಸ ದರ್ಶನವು ವಿರೋಧಾಭಾಸಗಳಿಂದ ಕೂಡಿದೆ. ಇತಿಹಾಸದಲ್ಲಿ ವಸ್ತುನಿಷ್ಠತೆ ಇರಬೇಕು ಎಂಬ ಅವನ ಹೇಳಿಕೆಯೊಂದಿಗೆ ಚರಿತ್ರೆಯಲ್ಲಿ ಭಗವಂತ ನೆಲೆಸಿರುತ್ತಾನೆ ಎಂಬ ಅಭಿಪ್ರಾಯವನ್ನು ಸರಿಹೊಂದಿಸುವುದು ಕಷ್ಟ. ಅವನು ಇತರ ಚಿಂತಕರ ದಾರ್ಶನಿಕ ಹಾಗೂ ಆಧ್ಯಾತ್ಮಿಕ ದೃಷ್ಟಿಕೋನ ಹಾಗೂ ವಿಚಾರವನ್ನು ತಿರಸ್ಕರಿಸಿದರೂ, ಸೆಯಿಂಟ್ ಆಗಸ್ಟೀನನ ಕೃತಿಗಳಂತೆ ಅವನ ಬರಹಗಳೂ ಸಹ ಧಾರ್ಮಿಕ ಮೌಲ್ಯಗಳಿಂದ ಪೂರ್ತಿ ತುಂಬಿವೆ. ಪರಮಾತ್ಮನು ಇತಿಹಾಸದಲ್ಲಿ ನೆಲೆಸಿದ್ದಾನೆ ಎಂಬ ಹೇಳಿಕೆಯು

ದೇವನಗರವು ಮಾನವ ನಗರಕ್ಕಿಂತ ಅತ್ಯುತ್ತಮವಾದುದೆಂಬ ನಿರೂಪಣೆಯಷ್ಟೇ ಬಲವಾದುದು. ಅವನಿಗೆ ರಾಜ್ಯ ಎಂಬುದು ನೈತಿಕ ಕಲ್ಪನೆಯಾಗಿದೆ. ಚರ್ಚು ಹಾಗೂ ರಾಜ್ಯದ ಪರವಾಗಿ ವಾದಿಸುವಾಗ ಅವನು ಆಗಾಗ ಪೂರ್ವಾಗ್ರಹ ಪೀಡಿತನಾಗಿರುವಂತೆ ತೋರುತ್ತದೆ. ಅವನ ವಿಮರ್ಶಕರ ಪ್ರಕಾರ, ಅವನಲ್ಲಿ ಮಂತ್ರಾಲೋಚನ ಸಭಾಸ್ಥಳದ ಕಿಟಕಿಗಳ ಮೂಲಕ ಘಟನೆಗಳ ಸಮೀಕ್ಷೆ ನಡೆಸುವ, ಜನಸಾಮಾನ್ಯರ ಜೀವನವನ್ನು ಅಲಕ್ಷಿಸುವ ಮತ್ತು ಆರ್ಥಿಕ ಶಕ್ತಿಗಳ ಒತ್ತಡವನ್ನು ಉಪೇಕಿಸುವ ಪ್ರವೃತ್ತಿ ಇದ್ದಿತು. ಅವನ ಕೃತಿಗಳಲ್ಲಿ ಮುಖ್ಯವಾಗಿದ್ದುದು ರಾಜಕೀಯ ಚರಿತ್ರೆಯೇ ಮತ್ತು ಸಾಂಸ್ಕೃತಿಕ ಹಾಗೂ ಆರ್ಥಿಕ ಇತಿಹಾಸಕ್ಕೆ ಅಷ್ಟೇನೂ ಪ್ರಾಮುಖ್ಯತೆ ಇರಲಿಲ್ಲ. ಅವನ ರಾಜಕೀಯ ಅಭಿಪ್ರಾಯಗಳು ನಿಷ್ಕೃಷ್ಟವಾಗಿ ಸಂಪ್ರದಾಯಬದ್ಧವಾಗಿದ್ದುವು. ಅವನ ಶತಮಾನದಲ್ಲೇ ಕೈಗಾರಿಕೀಕರಣದ ಕಾರಣ ಉಂಟಾಗಿದ್ದ ಬದಲಾವಣೆಗಳ ಮಹತ್ತ್ವದ ಬಗ್ಗೆ ಅವನಿಗೆ ತಿಳಿದಿದ್ದುದು ಅತ್ಯಲ್ಪ. ಅವನು ಗತಕಾಲವನ್ನು ಕುರಿತು ಸಮೀಕ್ಷೆ ಮಾಡಿದ್ದುದು ರಾಜನೀತಿಜ್ಞನಂತಲ್ಲ, ಕಲೆಗಾರನಂತೆ. ಅವನದು ಪ್ರಗತಿ ವಿರೋಧಿ ದೃಷ್ಟಿ ಎಂಬುದಾಗಿ ಜರ್ಮನಿಯ ತರುಣ ಪಂಡಿತರು ಅಭಿಪ್ರಾಯ ಪಟ್ಟರು.

ಟೀಕೆಗಳೇನೇ ಇರಲಿ, ರಾಂಕೆಯು ಶ್ರೇಷ್ಠ ಇತಿಹಾಸಕಾರನಾಗಿದ್ದನು ಎಂಬುದು ನಿರ್ವಿವಾದ. ಅವನು ಇತಿಹಾಸರಚನಾ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳು ಅಮೂಲ್ಯವಾದುವುಗಳು. ಮೊದಲನೆಯದಾಗಿ, ಅವನು ಇಂದಿನ ಸಮಯದಲ್ಲಿ ಮುಖ್ಯವಾಗಿರುವ ಭಾವೋದ್ರೇಕಗಳ ಬೆಳಕಿನಲ್ಲಿ ಹಿಂದಿನ ಕಾಲವನ್ನು ಕುರಿತು ಅಧ್ಯಯನ ಮಾಡದೆ, ವಾಸ್ತವಿಕವಾಗಿ ಸಂಭವಿಸಿದ ಘಟನೆಗಳನ್ನು ಯಥಾರ್ಥವಾಗಿ ನಿರೂಪಿಸಬೇಕೆಂಬುದನ್ನು ಸ್ಪಷ್ಟಪಡಿಸಿದನು. ಎರಡನೆಯದಾಗಿ, ಅವನು ಇತಿಹಾಸ ರಚನೆಗೆ ನಿಷ್ಕೃಷ್ಟವಾಗಿ ಸಮಕಾಲೀನ ಮೂಲಾಧಾರಗಳು ಆಧಾರವಾಗಿರ–ಬೇಕಾದ ಅವಶ್ಯಕತೆಯನ್ನು ಎತ್ತಿಹಿಡಿದನು. ರಾಜ್ಯ ಪತ್ರಾಗಾರಗಳನ್ನು ಬಳಸಿದವರಲ್ಲಿ ಅವನೇ ಮೊದಲಿಗನಾಗಿದ್ದನು. ಮೂರನೆಯದಾಗಿ, ಅವನು ಸರಿಯಾದ, ಸಮಂಜಸವಾದ ಹಾಗೂ ಸಮರ್ಪಕವಾದ ವಿಷಯಸಾಮಗ್ರಿಗಳನ್ನು ಅನ್ವೇಷಿಸಬೇಕಾದರೆ ಇತಿಹಾಸಕಾರನು ಪತ್ರಾಗಾರ ಹಾಗೂ ಪ್ರಾಮಾಣಿಕ ದಸ್ತೈವಜುಗಳನ್ನು ಬಳಸಿಕೊಳ್ಳಬೇಕು ಮತ್ತು ಯಾವ ವಿಧವಾದ ಪೂರ್ವಕಲ್ಪಿತ ಅಭಿಪ್ರಾಯ ಹಾಗೂ ಮೌಲ್ಯ ನಿರ್ಣಯಗಳಿಲ್ಲದ ವಸ್ತುನಿಷ್ಠ ಸಂಶೋಧನೆಯನ್ನು ನಡೆಸುವುದು ಅವನ ಗುರಿಯಾಗಬೇಕೆಂದು ಹೇಳಿ ತಾನೇ ಆ ಗುರಿ ಸಾಧಿಸಲು ಸತತವಾಗಿ ಪರಿಶ್ರಮಿಸಿ ಬಹುಮಟ್ಟಿಗೆ ಯಶಸ್ವಿಯಾದನು. ಅವನು ಲೇಖನಿ ಹಿಡಿದು ಬರೆಯಲು ಆರಂಭಿಸಿದಾಗ, ಚರಿತ್ರ ಲೇಖಕರು ಚಾರಿತ್ರಿಕ ವೃತ್ತಾಂತ ಹಾಗೂ ಬಖೈರುಗಳನ್ನು ಪ್ರಮಾಣ ಗ್ರಂಥಗಳೆಂಬುದಾಗಿ ನಂಬಿಕೊಂಡಿದ್ದರು. ಅವನು ಬರೆದು ಮುಗಿಸಿ ಲೇಖನಿಯನ್ನು ಕೆಳಗಿಟ್ಟಾಗ ಪ್ರತಿ ಪಂಡಿತನೂ ತಾನು ಆರಿಸಿಕೊಂಡ ಘಟನೆಗಳಲ್ಲಿ ಪಾತ್ರವಹಿಸಿದವರ ಹಾಗೂ ಅವುಗಳೊಂದಿಗೆ ನೇರವಾಗಿ ಸಂಪರ್ಕ ಹೊಂದಿದವರ ಕಾಗದ ಹಾಗೂ ಪತ್ರ ವ್ಯವಹಾರಗಳನ್ನು ಆಧಾರವಾಗಿ ಬಳಸಲಾರಂಭಿಸಿದನು ಮತ್ತು ಪ್ರತ್ಯಕ್ಷದರ್ಶಿಗಳು ನೀಡಿದ ವಿವರಣೆ ಮತ್ತು ರಾಜ್ಯದ ಪತ್ರಾಗಾರಗಳಲ್ಲಿ ಸಂರಕ್ಷಿಸಿಡಲಾದ ಯಥಾರ್ಥವಾದ ದಸ್ತೈವಜುಗಳನ್ನು ಬಿಟ್ಟು, ಆಧುನಿಕ ಇತಿಹಾಸವನ್ನು ರಚಿಸಲು ಯತ್ನಿಸುವುದು ಅಸಾಧ್ಯ ಎಂಬುದನ್ನು ಮನಗಂಡರು.

ನಾಲ್ಕನೆಯದಾಗಿ, ರಾಂಕೆಯು ಸಮಕಾಲೀನ ಅಥವಾ ಇತರ ಪ್ರಮಾಣ ಗ್ರಂಥಗಳನ್ನು, ಅವುಗಳ ಲೇಖಕರಿಗಿದ್ದ ಚಿತ್ತವೃತ್ತಿ ಮತ್ತು ಜ್ಞಾನಾರ್ಜನೆಗಿದ್ದ ಅವಕಾಶದ ಬೆಳಕಿನಲ್ಲಿ ಇತರ ಬರಹಗಾರರು ನೀಡಿದ್ದ ಪ್ರಮಾಣಗಳೊಂದಿಗೆ ಹೋಲಿಸುವುದರ ಮೂಲಕ ಅವುಗಳನ್ನು ವಿಶ್ಲೇಷಿಸಿ ಆ ಮೂಲಕವಾಗಿ ಪ್ರಮಾಣಗಳನ್ನು ಕುರಿತ ವಿಜ್ಞಾನವನ್ನು ಬೆಳೆಸಿದನು. ಆದ್ದರಿಂದ ಅವನ ತರುವಾಯ ಬಂದ ಚರಿತ್ರಲೇಖಕರು ತಮಗೆ ವಿಷಯಗಳನ್ನು ತಿಳಿಸಿದ ಸಾಕ್ಷಿಗಳು ಯಾವ ಮೂಲದಿಂದ ಅವುಗಳನ್ನು ಪಡೆದರೆಂಬುದನ್ನು ಪರಿಶೀಲಿಸಿದ ನಂತರ ಇತಿಹಾಸವನ್ನು ರಚಿಸಬೇಕಾಯಿತು. ಯಥಾರ್ಥವಾದ ಇತಿಹಾಸವು ಸರ್ಕಾರದ ಕಾಗದಪತ್ರ ಹಾಗೂ ಅಭಿಲೇಖನಗಳ ಸಂಶೋಧನೆಯ ಮೇಲೆ ಆಧಾರಿತವಾಗಿರಬೇಕು ಮತ್ತು ಮೂಲಾಧಾರವಾಗಿರುವ ಪ್ರಾಮಾಣಿಕ ದಸ್ತೈವಜುಗಳನ್ನು ಸಂಪಾದಿಸಿ ಹೆಚ್ಚಿನ ಪ್ರಮಾಣದಲ್ಲಿ ಪ್ರಕಟಿಸಬೇಕೆಂಬ ಪ್ರಸ್ತಾಪಗಳಿಗೆ ಅವನು ಬಳಸಿದ ನೂತನ ವಿಮರ್ಶಾತ್ಮಕ ವಿಧಾನವು ಮೂಲವಾಯಿತು. ಐದನೆಯದಾಗಿ, ಈ ನೂತನ ಐತಿಹಾಸಿಕ ವಿಷಯ ಸಾಮಗ್ರಿಗಳು ಸಾಮಾಜಿಕ ವಿಜ್ಞನಗಳ ಮೇಲೆ ನಿರ್ದಾರಕವಾಗಿದ್ದ ಪ್ರಭಾವವನ್ನು ಬೀರಿ ಕ್ರಾಂತಿಯನ್ನೇ ಉಂಟು ಮಾಡಿದುವೆಂಬುದಾಗಿ ಹೇಳಬಹುದು. ಕಾರಣ, ಈ ನೂತನ ವಿಷಯನಿಧಿಯಿಂದ ಮಾನವ ಜೀವನದ ವೀಕ್ಷಣೆಯಲ್ಲಿ ಅಳವಡಿಸಿಕೊಳ್ಳಲಾದ ಸಾಮಾಜಿಕ, ಆರ್ಥಿಕ, ರಾಜಕೀಯ, ಮನೋವೈಜ್ಞಾನಿಕ ಹಾಗೂ ದಾರ್ಶನಿಕ ದೃಷ್ಟಿಕೋನಗಳ ಬಗ್ಗೆ ನೂತನ ಸೂಕ್ಷ್ಮ ಪರಿಜ್ಞಾನ ಉಂಟಾಯಿತು. ಈ ನೂತನ ವಾಸ್ತವಾಂಶಗಳ ಕಾರಣ ಎಲ್ಲಾ ಬಗೆಯ ಸಾಮಾಜಿಕ ಸಂಶೋಧನೆಗಳಿಗೆ ಬಹು ಪ್ರೋತ್ಸಾಹ ಸಿಕ್ಕಿ ಹೆಚ್ಚಿನ ಅನುಕೂಲ ಉಂಟಾಯಿತು. ಆರನೆಯದಾಗಿ, ರಾಂಕೆಯು ಶ್ರೇಷ್ಠ ಲೇಖಕನಾಗಿದ್ದನು. ಅವನ ಗ್ರಂಥಗಳು ಕೇವಲ ಇತಿಹಾಸ ಮಾತ್ರವಾಗಿರಲಿಲ್ಲ. ಅವುಗಳು ಉತ್ತಮ ಸಾಹಿತ್ಯ ಕೃತಿಗಳೂ ಆಗಿದ್ದುವು. ಅರ್ಥಾತ್ ಪ್ರತಿ ದೇಶದ ಬಗ್ಗೆ ಅತ್ಯುತ್ತಮ ಕೃತಿಯನ್ನು ರಚಿಸಿದ್ದುದಕ್ಕಾಗಿ ಅವನನ್ನು ಅಭಿನಂದಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ. ಏಳನೆಯದಾಗಿ, ಅವನು ಮಾಡಿದ ಪ್ರಯತ್ನಗಳ ಫಲವಾಗಿ ಇತಿಹಾಸವು ವಿಶೇಷ ತರಬೇತು ಹಾಗೂ ಸರ್ಕಾರದ ಪತ್ರಾಗಾರಗಳಲ್ಲಿ ಸಂಶೋಧನೆ ನಡೆಸುವುದಕ್ಕೆ ಅಗತ್ಯವಾಗಿ ಬೇಕಾಗಿದ್ದ ಒಂದು ಪ್ರೌಢಶಾಸ್ತ್ರವಾಯಿತು. ಅವನು ಅದನ್ನು ಒಂದು ವಿಜ್ಞಾನವಾಗಿ ಬೆಳೆಸುವುದಕ್ಕೆ ಸತತವಾಗಿ ಶ್ರಮಿಸಿದನು. ಆಧುನಿಕ ಯೂರೋಪಿನ ಇತಿಹಾಸವನ್ನು ಸ್ಪಷ್ಟವಾಗಿ ನಿರೂಪಿಸಿದ, ಅದರ ಏಕತೆಯನ್ನು ಎತ್ತಿ ತೋರಿದ ಮತ್ತು ಆ ಮಹಾನಾಟಕದಲ್ಲಿನ ಪ್ರಧಾನ ಪಾತ್ರಧಾರಿಗಳನ್ನು ಸುಸ್ಪಷ್ಟವಾಗಿ ಚಿತ್ರಿಸಿದ ಕೀರ್ತಿ ಅವನಿಗೇ ಸಲ್ಲಬೇಕು. ಕೊನೆಯದಾಗಿ, ಗತಯುಗದ ಪ್ರತಿಕಾಲವೂ ಮುಖ್ಯವಾದುವು, ವಿಶಿಷ್ಟವಾದುದು ಎಂಬುದಾಗಿ ಒತ್ತಿ ಹೇಳಿ, ಅವನು ಮೌಲ್ಯಗಳ ಸಾಪೇಕ್ಷತೆಯನ್ನು ಸ್ಪಷ್ಟವಾಗಿ ಸೂಚಿಸಿದನು ಮತ್ತು ಪರಕೀಯ ಸಂಸ್ಕೃತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಅಡಚಣೆಯಾಗಿದ್ದ ಅಂಶಗಳನ್ನು ಕಿತ್ತೊಗೆಯುವುದಕ್ಕೆ ಸಹಾಯ ಮಾಡಿದನು.

ಒಟ್ಟಿನಲ್ಲಿ, ರಾಂಕೆಯು ಆಧುನಿಕ ಅತ್ಯುತ್ತಮ ಇತಿಹಾಸಲೇಖಕನಾಗಿದ್ದಾನೆ. ಕಾರಣ ಅವನು ವಿಷಯ ಸಾಮಗ್ರಿಗಳ ವೈಜ್ಞಾನಿಕ ಅಧ್ಯಯನಕ್ಕೆ ಬೇಕಾಗಿದ್ದ ಕ್ರಮವನ್ನು ಬೆಳೆಸಿದನು. ದೀರ್ಘ ಜೀವನ ನಡೆಸಿದ್ದರೂ ಹಾಗೂ ವಯಸ್ಸಾಗಿದ್ದರೂ ಕುಂದದ ಶಕ್ತಿ ಸಾಮರ್ಥ್ಯಗಳ ಕಾರಣ ಅವನು ಇತರರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅತ್ಯುತ್ತಮ ಕೃತಿಗಳನ್ನು ರಚಿಸಿದನು. ಅವನು ಇತಿಹಾಸವಾದದ ಜನಕ ಮತ್ತು ಆಧುನಿಕ ಇತಿಹಾಸದ ಕೊಲಂಬಸ್‌ನೆಂಬ ಬಿರುದಿಗೆ ಅರ್ಹನಾಗಿದ್ದಾನೆ ಎಂಬುದರಲ್ಲಿ ಸಂದೇಹವಿಲ್ಲ.

## 13.2.4 ಆಸ್ವಾಲ್ಡ್ ಸ್ಪೆಂಗ್ಲರ್ (1880–1936)

ಜರ್ಮನಿಯ ಇನ್ನೊಬ್ಬ ಮುಖ್ಯ ದಾರ್ಶನಿಕ ಹಾಗೂ ಇತಿಹಾಸಕಾರ ಸ್ಪೆಂಗ್ಲರ್. ಆಧುನಿಕ ಕಾಲದ ಮಹಾಚಿಂತಕರಲ್ಲಿ ಒಬ್ಬನೂ ಮತ್ತು ಸಾಮಾಜಿಕ ವಿಜ್ಞಾನ, ಶುದ್ಧ ದರ್ಶನ ಹಾಗೂ ಇತಿಹಾಸ ದರ್ಶನ ಕ್ಷೇತ್ರಗಳಲ್ಲಿ ಪರಿಣಾಮಕಾರಿ ಹಾಗೂ ವಿವಾದಾಸ್ಪದ ಅತ್ಯುತ್ತಮ ಕೃತಿಗಳಲ್ಲಿ ಒಂದಾಗಿದ್ದ ದಿ ಡಿಕ್ಲೈನ್ ಆವ್ ದಿ ವೆಸ್ಟ್ ಎಂಬ ಗ್ರಂಥದ ಕರ್ತೃವೂ ಆಗಿದ್ದ ಅವನು 1880ರ ಮೇ 29 ರಂದು ಬ್ಲಾಕೆನ್‌ಬರ್ಗ್‌ನಲ್ಲಿ ಪ್ರಾಟೆಸ್ಟಂಟ್ ಕುಟುಂಬದಲ್ಲಿ ಜನಿಸಿದನು. ಅವನ ತಂದೆಯ ಕಡೆಯವರು ಇಂಜಿನಿಯರ್‌ಗಳಾಗಿದ್ದರು. ಅವನ ತಾಯಿ ಕಡೆಯವರು ಸಾಹಿತ್ಯ–ಸಂಸ್ಕೃತಿಗಳಲ್ಲಿ ಆಸಕ್ತಿ ಹೊಂದಿವರಾಗಿದ್ದರು. ಅವನ ವ್ಯಕ್ತಿತ್ವದಲ್ಲಿ ಈ ಎರಡೂ ಪ್ರತಿಬಿಂಬಿತವಾಗಿದ್ದುವು. ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಅವನಲ್ಲಿ ಒಂದು ಕಡೆ ವೈಜ್ಞಾನಿಕ ಆಸಕ್ತಿಗಳು, ಇನ್ನೊಂದು ಕಡೆ ಸಿದ್ಧಾಂತ ಸೂತ್ರಗಳನ್ನು ಉತ್ತಮ ಸಾಹಿತ್ಯ ಶೈಲಿಯಲ್ಲಿ ರೂಪಿಸುವ ಶಕ್ತಿಸಾಮರ್ಥ್ಯ ಇದ್ದುವು. ಹಾಲ್ಲೆಯಲ್ಲಿ ಮೇಲ್ದರ್ಜೆಯ ವಿದ್ಯಾಶಾಲೆಯಲ್ಲಿ ಶಿಕ್ಷಣ ಪಡೆದ ನಂತರ ಸ್ಪೆಂಗ್ಲರ್ ಮ್ಯೂನಿಚ್. ಬರ್ಲಿನ್ ಹಾಗೂ ಹಾಲ್ಲೆಯ ವಿಶ್ವವಿದ್ಯಾನಿಲಯಗಳಲ್ಲಿ ಗಣಿತ ಹಾಗೂ ಸ್ವಾಭಾವಿಕ ವಿಜ್ಞಾನಗಳನ್ನು ಅಧ್ಯಯನ ಮಾಡಿ ಹಾಲ್ಲೆಯಲ್ಲಿ ಹಿರಾಕ್ಲಿಟಸನ ಬಗ್ಗೆ ಒಂದು ಪ್ರೌಢ ಪ್ರಬಂಧವನ್ನು ರಚಿಸಿ ಡಾಕ್ಟರೇಟ್ ಪದವಿಯನ್ನು ಪಡೆದನು. ಆ ಪ್ರಬಂಧದಲ್ಲಿ ಅವನು ಮುಂದೆ ಬರೆದ ಮೇರುಕೃತಿಯ ಪ್ರಧಾನ ಭಾವನೆಗಳ ಮುನ್‌ಚಿತ್ರಣ ಕಂಡುಬಂದಿತು. ನಂತರ ಅವನು ವಿವಿಧ ಶಾಲೆಗಳಲ್ಲಿ, ಕೊನೆಯಲ್ಲಿ ಹ್ಯಾಂಬರ್ಗ್‌ನಲ್ಲಿ ಅಧ್ಯಾಪಕನಾಗಿ ಸೇವೆ ಸಲ್ಲಿಸಿ ಜೀವನೋಪಾಯವನ್ನು ಗಳಿಸಿ, 1911ರಲ್ಲಿ ಮ್ಯೂನಿಚ್‌ಗೆ ಬಂದು ನೆಲಸಿದನು; ಆಗಲೇ ಮುಂದೆ ಇತಿಹಾಸದ ಜಗತ್ತನ್ನೇ ಪ್ರಚೋದಿಸಿದಂತಹ ತನ್ನ ಮಹಾಗ್ರಂಥದ ಮೂಲ ರೂಪರೇಖೆಯನ್ನು ಯೋಜಿಸಿದನು.

ಸ್ವಲ್ಪಮಟ್ಟಿನ ಪಿತ್ರಾರ್ಜಿತ ಆಸ್ತಿ ಕೈ ಸೇರಿದ್ದರಿಂದ ಸ್ಪೆಂಗ್ಲರ್ ಖಾಸಗಿ ವಿದ್ವಾಂಸನಾಗಿ ಕಾರ್ಯ ಆರಂಭಿಸಿ ತನ್ನ "ದಿ ಡಿಕ್ಲೈನ್ ಆವ್ ದಿ ವೆಸ್ಟ್" ಕೃತಿಯ ಕರಡು ಪ್ರತಿಯನ್ನು ಜಗತ್ತಿನ ಪ್ರಥಮ ಮಹಾಯುದ್ಧ ಆರಂಭವಾಗುವ ಹೊತ್ತಿಗೆ ಸಿದ್ಧಪಡಿಸಿದನು. ಆ ಮಹಾಗ್ರಂಥದ ಪ್ರಥಮ ಸಂಪುಟವು 1918 ಜನವರಿಯಲ್ಲಿ ಪ್ರಕಟವಾಗಿ, ಅವನು ಸಾಮಾನ್ಯ ಜನರಲ್ಲಿ ಪ್ರಖ್ಯಾತನಾದನು; 1922ರಲ್ಲಿ ಅದರ ದ್ವಿತೀಯ ಸಂಪುಟವು ಮತ್ತು 1923ರಲ್ಲಿ ಪ್ರಥಮ ಸಂಪುಟದ ಪರಿಷ್ಕೃತ ಪಾಠಾಂತರ ಪ್ರಕಟವಾದುವು. ಸ್ಪೆಂಗ್ಲರ್ 1919ರ ಅನಂತರ ತಾನು ಗಳಿಸಿದ ಖ್ಯಾತಿಯನ್ನು ಬಳಸಿಕೊಂಡು ರಾಜಕೀಯ ವ್ಯಾಖ್ಯಾನಕಾರನಾಗಿ ಕಾರ್ಯ ನಿರ್ವಹಿಸಲು ಯತ್ನಿಸಿ ವಿಫಲನಾದನು. ಅವನು ಹೆಚ್ಚು ಹೆಚ್ಚು ಏಕಾಂಗಿಯಾದನು. ಅವನ ಕೃತಿಯನ್ನು ರಾಷ್ಟ್ರೀಯ ಸಮಾಜವಾದಿಗಳು ಟೀಕಿಸಲಾರಂಭಿಸಿದರು. ಇವರಿಂದ ಜುಗುಪ್ಸೆಗೊಂಡು ಅವನು 1936ರ ಮೇ 8 ರಂದು ಹೃದಯಾಘಾತದಿಂದ ಮರಣ ಹೊಂದಿದನು.

### 13.2.4.1 ಸ್ಪೆಂಗ್ಲರನ ವಿಚಾರಧಾರೆ

ಸ್ಪೆಂಗ್ಲರನ ಮೇರು ಕೃತಿಯು ಇತಿಹಾಸ ದರ್ಶನ ಅಥವಾ ಇತಿಹಾಸ ಆಕೃತಿ ರಚನಾ ಶಾಸ್ತ್ರದ ಅಧ್ಯಯನವಾಗಿದೆ. ಅವನ ದರ್ಶನವು ಇತಿಹಾಸದ ಕಾಲಗಳನ್ನು ಪ್ರಾಚೀನ, ಮಧ್ಯ ಹಾಗೂ ಆಧುನಿಕ

ಯುಗಗಳೆಂಬುದಾಗಿ ವಿಭಾಗಿಸುವ ರೀತಿಯ ಖಂಡನೆಯೊಡನೆ ಆರಂಭವಾಗಿ, ಅದು ವಿಷಯಗಳನ್ನು ಪರಸ್ಪರ ಸಂಬಂಧವೇ ಇಲ್ಲದ ಪ್ರತ್ಯೇಕ ವಿಭಾಗಗಳಾಗಿ ಮಾಡುವ ಕ್ರಮಕ್ಕೆ ಅವಕಾಶ ನೀಡದೆ, ಭಾರತ, ಅರೇಬಿಯಾ, ಚೀಣಾ, ಈಜಿಪ್ಟ್, ಬ್ಯಾಬಿಲೋನಿಯಾ ಹಾಗೂ ಮೆಕ್ಸಿಕೋವಿನ ಸಂಸ್ಕೃತಿಗಳು, ಪಾಶ್ಚಾತ್ಯ ಅಥವಾ ಪ್ರಾಚೀನ ಗ್ರೀಕ್–ಲ್ಯಾಟಿನ್ ಸಂಸ್ಕೃತಿಗಳಷ್ಟೇ ಮುಖ್ಯವಾದುದೆಂಬುದಾಗಿ ಎಣಿಸಿದ ಕೊಪರ್ನಿಕಸ್‌ನ ಅಭಿಪ್ರಾಯವನ್ನು ಎತ್ತಿಹಿಡಿಯಿತು. ಅದರ ಪ್ರಕಾರ, ವಸ್ತುಸ್ಥಿತಿಯಲ್ಲಿ ಜಗತ್ತಿನ ಪ್ರಕೃತಿ ಮತ್ತು ಜಗತ್ತಿನ ಚರಿತ್ರೆ ಎಂಬ ಎರಡು ಮುಖಗಳಿವೆ. ಸಾಮಾನ್ಯ ವ್ಯಕ್ತಿಗೆ ಪ್ರಕೃತಿಯನ್ನು ಅರಿಯುವುದು ಅಷ್ಟು ಸುಲಭವಲ್ಲ. ಅದರ ವಸ್ತುಗಳನ್ನು ಮಾನವಹಿತ ಸಾಧನೆಗೆ ಬಳಸುವುದಕ್ಕಾಗಿ ಅವುಗಳನ್ನು ಅವಲೋಕಿಸಿ, ಅವುಗಳ ಸ್ವರೂಪ, ಲಕ್ಷಣ ಹಾಗೂ ಉಪಯೋಗಗಳನ್ನು ತಿಳಿದುಕೊಳ್ಳಲು ವಿಜ್ಞಾನಿಗಳು ಯತ್ನಿಸುತ್ತಾರೆ; ಪರ್ವತ, ಕಣಿವೆ, ನದಿ ಮುಂತಾದ ಪ್ರಾಕೃತಿಕ ಅಂಶಗಳಿಗೆ ಮುಖ್ಯವಾದುದು ಕಾಲವಲ್ಲ ಸ್ಥಳ. ಇತಿಹಾಸವು ಕಾಲಾನುಕ್ರಮವಾಗಿ ಗತಕಾಲದಿಂದ ಆರಂಭಿಸಿ ವರ್ತಮಾನ ಕಾಲದ ಮೂಲಕ ಭವಿಷ್ಯದತ್ತ ಸಾಗಿಹೋಗುವ ಜೀವನದಿಯಂತೆ ಅದರಲ್ಲಿ ಪ್ರತಿಹಂತದಲ್ಲಿ ಬದಲಾವಣೆ ತಲೆದೋರುತ್ತದೆ. ಬೇರೆ ಮಾತುಗಳಲ್ಲಿ ಹೇಳಬೇಕಾದರೆ ಪ್ರಕೃತಿಯು ಭಗವಂತನ ಸೃಷ್ಟಿ, ಇತಿಹಾಸವು ಮಾನವ ನಿರ್ಮಿತವಾದುದು.

ನಂತರ ಸ್ಪೆಂಗ್ಲರ್ ಇತಿಹಾಸವು ಸುಸಂಗತವಾದ ವಿಕಾಸವನ್ನು ಕುರಿತು ವಿಚಾರ ಮಾಡುವುದಿಲ್ಲ. ಅದು ಸಂಸ್ಕೃತಿಗಳ ತುಲನಾತ್ಮಕ ಅಧ್ಯಯನವಾಗಿದೆ ಎಂಬುದಾಗಿ ಎಣಿಸಿ, ಉತ್ತಮ ಸಂಸ್ಕೃತಿಯು ಇತಿಹಾಸ ಅಧ್ಯಯನದ ಘಟಕ ಎಂಬುದಾಗಿ ಭಾವಿಸಿ ಅದನ್ನು ಪರಿಶೀಲಿಸಿದನು. ಪ್ರತಿ ಸಂಸ್ಕೃತಿಯು ಮಾನವ ವ್ಯಕ್ತಿಯಂತೆ ಹುಟ್ಟಿ, ಬೆಳೆದು, ಪ್ರೌಢಾವಸ್ಥೆಯನ್ನು ತಲುಪಿ, ಕೊನೆಗೆ ಮೃತಿಹೊಂದುತ್ತದೆ. ಪ್ರತಿಯೊಂದಕ್ಕೂ ಬಾಲ್ಯ, ಯೌವನ, ಪ್ರಾಯ ಹಾಗೂ ವಾರ್ಧಕ್ಯದ ಅವಸ್ಥೆಗಳಿರುತ್ತವೆ. ಸ್ಪೆಂಗ್ಲರನ ಪ್ರಕಾರ, ಈಜಿಪ್ಟ್, ಬ್ಯಾಬಿಲೋನಿಯಾ, ಭಾರತ, ಚೀಣಾ, ಗ್ರೀಕ್–ರೋಮನ್, ಅರೇಬಿಯಾ, ಮೆಕ್ಸಿಕೊ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳೆಂಬ ಎಂಟು ಶ್ರೇಷ್ಠ ಸಂಸ್ಕೃತಿಗಳಿವೆ. ಮುಂದೆ ರಷ್ಯಾ ಉತ್ತಮ ಸಂಸ್ಕೃತಿಯನ್ನು ಬೆಳೆಸುತ್ತದೆ ಎಂಬ ಅವನ ಪ್ರಾಗುಕ್ತಿ ನಿಜವಾಯಿತು. ಈ ಪ್ರತಿ ಸಂಸ್ಕೃತಿಯಲ್ಲೂ ಒಂದು ಪ್ರಧಾನ ಸಂಕೇತವಿರುತ್ತದೆ. ಉದಾಹರಣೆಗೆ, ಈಜಿಪ್ಟ್, ಗ್ರೀಕ್ ಹಾಗೂ ಭಾರತ ಸಂಸ್ಕೃತಿಗಳಿಗೆ ಕ್ರಮವಾಗಿ ಶಿಲೆ, ಸೌಂದರ್ಯದ ಆದರ್ಶ ಹಾಗೂ ಮೋಕ್ಷದ ಕಲ್ಪನೆ ಪ್ರಧಾನ ಸಂಕೇತಗಳಾಗಿವೆ. ಅವುಗಳು ಆ ಸಂಸ್ಕೃತಿಗಳ ವಿಜ್ಞಾನ, ದರ್ಶನ, ಕಲೆ, ನಂಬಿಕೆ, ಜೀವನದ ಕ್ರಮ ಇತ್ಯಾದಿಗಳ ಸ್ವರೂಪವನ್ನು ನಿರ್ಧರಿಸುತ್ತವೆ. ಆ ಸಂಕೇತಗಳು ವಿಭಿನ್ನವಾಗಿರುವುದರಿಂದ ಅವುಗಳ ಕಲೆ ಹಾಗೂ ವಿಜ್ಞಾನಗಳೂ ಸಹ ಭಿನ್ನವಾಗಿರುತ್ತವೆ. ಹೀಗೆ ಸಂಸ್ಕೃತಿಗಳು ತಮ್ಮದೇ ಆದ ಭಾವನೆ ಹಾಗೂ ಜೀವನ ಸ್ವರೂಪ ಇತ್ಯಾದಿಯನ್ನು ಹೊಂದಿರುತ್ತವೆ. (ಸ್ಪೆಂಗ್ಲರನ ಐತಿಹಾಸಿಕ ಸಾಪೇಕ್ಷವಾದ). ಆದ್ದರಿಂದ ಒಂದೇ ಬಗೆಯ ಗಣಿತ ಅಥವಾ ಜೀವಶಾಸ್ತ್ರ ಇತ್ಯಾದಿ ಇರುತ್ತವೆ ಎಂಬುದು ಮಿಥ್ಯೆ. ಒಂದು ಗಿಡ ಬೆಳೆದು ಒಣಗಿಹೋಗುವ ಬಗೆಯಲ್ಲಿ ಮೊದಲೇ ನಿಶ್ಚಯಿಸಿರುವ ಮಾದರಿಯ ಮೇರೆಗೆ ಈ ಎಲ್ಲಾ ಸಂಸ್ಕೃತಿಗಳ ಹುಟ್ಟು, ಬೆಳವಣಿಗೆ, ಪಕ್ವತೆ ಹಾಗೂ ಅವನತಿ ಉಂಟಾಗುತ್ತದೆ (ಸ್ಪೆಂಗ್ಲರನ ನಿಯತಿವಾದ).

ಇಷ್ಟು ಮಾತ್ರವಲ್ಲದೆ, ಈ ಎಲ್ಲಾ ಸಂಸ್ಕೃತಿಗಳ ಜೀವನಚಕ್ರದಲ್ಲಿ ಹಲವು ಮುಖ್ಯ ಹಂತಗಳಿರುತ್ತವೆ. ಸಂಸ್ಕೃತಿಯ ಪೂರ್ವದ ಹಂತ ಮೊದಲನೆಯದು. ಆಗ ಮಾನವ ನಗ್ನನೂ, ಮಾಂಸಹಾರಿಯೂ ಹಾಗೂ ಅಲೆಮಾರಿಯೂ ಆಗಿದ್ದನು. ಎರಡನೆಯದು ಕೃಷಿಹಂತ. ಅಲ್ಲಿ ಗಮನಾರ್ಹ ಬದಲಾವಣೆ ಉಂಟಾಯಿತು. ಆದರೂ ಅಲ್ಲಿ ರಾಜಕೀಯವಿರಲಿಲ್ಲ, ವರ್ಗಗಳಿರಲಿಲ್ಲ, ಜನತೆ ಇರಲಿಲ್ಲ, ರಾಜ್ಯವಿರಲಿಲ್ಲ. ಮೂರನೆಯ ಹಂತವು ಸಂಸ್ಕೃತಿಯ ಅರುಣೋದಯದ ಕಾಲ. ಅದರಲ್ಲಿ ಊಳಿಗಮಾನ್ಯ ಪದ್ಧತಿ ಮತ್ತು ಶ್ರೀಮಂತ ವರ್ಗದ ರಾಜ್ಯ ಎಂಬ ಎರಡು ಉಪಹಂತಗಳಿದ್ದುವು. ಊಳಿಗಮಾನ್ಯ ಪದ್ಧತಿಯ ಯುಗವು ಇತಿಹಾಸದ ಆರಂಭದ ಕಾಲ. ಆಗ ನಗರ ತಲೆದೋರಿತು. ಮುಖ್ಯವಾಗಿದ್ದ ಕುಲೀನ ಹಾಗೂ ಪುರೋಹಿತ ವರ್ಗಗಳು ವ್ಯವಸ್ಥಿತಿಗೊಂಡುವು. ಕೋಟೆಮನೆ ಹಾಗೂ ಬಿಷಪ್ಪಿನ ಪೀಠದಿಂದ ಕೂಡಿದ್ದ ಆರಾಧನಾ ಮಂದಿರಗಳು ತಲೆಎತ್ತಿಕೊಂಡುವು. ಧಾರ್ಮಿಕ ಶ್ರದ್ಧೆ ಹಾಗೂ ಹುರುಪು, ಆದರ್ಶವಾದ ಹಾಗೂ ವೀರಕೌಶಲ ಮುಖ್ಯ ಲಕ್ಷಣಗಳಾದುವು. ಎರಡನೆಯ ಉಪಹಂತದಲ್ಲಿ ಶ್ರೀಮಂತ ವರ್ಗದ ರಾಜ್ಯ ಅಸ್ತಿತ್ವಕ್ಕೆ ಬಂದುನಗರ ಹಾಗೂ ಪ್ರಜ್ಞಾಶಾಲಿಗಳ ಪಾತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಉಂಟಾಯಿತು. ನಾಲ್ಕನೆಯ ಹಂತದಲ್ಲಿ ರಾಜ್ಯ ಹಾಗೂ ರಾಷ್ಟ್ರೀಯ ಸರ್ಕಾರದ ಭಾವನೆಯ ಉದಯವಾಯಿತು. ಕುಲೀನ ಹಾಗೂ ಪುರೋಹಿತ ವರ್ಗವಲ್ಲದೆ ಮಧ್ಯಮ ವರ್ಗವು ಮುಖ್ಯವರ್ಗವಾಗಿ ಬೆಳೆಯಿತು. ನಗರವು ಪರಿಮಾಣಾತ್ಮಕವಾಗಿ ಹಾಗೂ ಗುಣಾತ್ಮಕವಾಗಿ ಬೆಳೆದು ಮುಖ್ಯ ಘಟಕವಾಯಿತು ಮತ್ತು ರಾಜಕೀಯವಾಗಿ, ಆರ್ಥಿಕವಾಗಿ, ಔದ್ಯೋಗಿಕವಾಗಿ ಹಾಗೂ ಬೌದ್ಧಿಕವಾಗಿ ಗ್ರಾಮಪ್ರದೇಶದ ಮೇಲೆ ಅಧಿಕಾರವನ್ನು ಚಲಾಯಿಸಲಾರಂಭಿಸಿತು. ನಗರದ ಮೌಲ್ಯಗಳು ಕೃಷಿ ಮೌಲ್ಯಗಳಿಗೆ ಬದಲಿಯಾಗಿ ತೋರಿದುವು.

ಕೊನೆಯ ಹಂತವೇ ನಾಗರಿಕತೆ. ಒಂದು ಸಂಸ್ಕೃತಿಯು ಈ ಅಂತಿಮ ಹಂತವನ್ನು ಮುಟ್ಟಿದೆ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಲು ಸಹಾಯಕವಾದ ಕೆಲವು ಲಕ್ಷಣಗಳಿರುತ್ತವೆ. ಮೊದಲನೆಯದಾಗಿ, ಆ ಅವಸ್ಥೆಯಲ್ಲಿ ಮನೆ, ಜನಾಂಗ, ರಕ್ತಸಂಬಂಧಿ ಸಮೂಹ ಹಾಗೂ ಸ್ವದೇಶ ಅಥವಾ ತಂದೆನಾಡಿಗೆ ಬದಲಾಗಿ ವಿಶ್ವನಾಗರಿಕ ಅಧಿಕಾರ ಹಾಗೂ ಮಹಾನಗರಗಳು ಮುಖ್ಯವಾಗಿರುತ್ತವೆ; ಲಂಡನ್, ಪ್ಯಾರಿಸ್, ಬರ್ಲಿನ್, ನ್ಯೂಯಾರ್ಕ್ ಹಾಗೂ ಟೋಕಿಯೋ ಇತ್ಯಾದಿ ನಗರಗಳ ಬೆಳವಣಿಗೆಯಿಂದ ಸಮೈಕ್ಯತೆ ಮತ್ತು ರಕ್ತಸಂಬಂಧ, ಜನಾಂಗ, ಬಾಂಧವ್ಯ ಹಾಗೂ ಸಾಮಾಜಿಕ ಸಂಘಟನೆ ಮುಂತಾದ ಸಾಂಪ್ರದಾಯಿಕ ಮೌಲ್ಯಗಳು ನಾಶವಾಗುತ್ತವೆ. ಎರಡನೆಯದಾಗಿ, ವೈಜ್ಞಾನಿಕ ನಾಸ್ತಿತ್ವ ಮತ್ತು ಅಮೂರ್ತ ಹಾಗೂ ನಿರ್ಜೀವ ಆಧ್ಯಾತ್ಮಿಕ ಶಾಸ್ತ್ರವು ಹೃದಯಕ್ಕೆ ಸಂಬಂಧಿಸಿದ ಯಥಾರ್ಥ ಮತಧರ್ಮಕ್ಕೆ ಬದಲಿಯಾಗುತ್ತವೆ. ತರ್ಕವು ನಂಬಿಕೆಯನ್ನು ಅಳಿಸಿಹಾಕುತ್ತದೆ. ಅತಿ ಹೆಚ್ಚಾದ ಅಮೂರ್ತ ಭೌತಾತೀತ ಭಾವನೆಯು ಆಧ್ಯಾತ್ಮಿಕ ಮೌಲ್ಯಗಳನ್ನು ನಾಶಪಡಿಸಿ, ಜನರು ಉತ್ತಮರಾಗುವುದಕ್ಕೆ ಬದಲಾಗಿ ಕಪಟಿಗಳಾಗುವಂತೆ ಮಾಡುತ್ತದೆ. ಜೀವದಾಯಕ ಹಾಗೂ ಜೀವನೋದ್ಧಾರಕ ಮೌಲ್ಯಗಳು ನಾಶವಾಗಿ, ಸ್ವಾರ್ಥಭಾವನೆಯು ಸಮಗ್ರ ಪರಿಸರವನ್ನು ಮಲಿನಗೊಳಿಸುತ್ತದೆ. ಆಧುನಿಕ ಕೈಗಾರಿಕೆಯು ಸಾಪೇಕ್ಷ ಮೌಲ್ಯಗಳನ್ನು ನಿರುಪಾಧಿಕ ಮೌಲ್ಯಗಳನ್ನಾಗಿಸುತ್ತದೆ. ಮೂರನೆಯದಾಗಿ, ವ್ಯಕ್ತಿಗಳ ಜೀವನ ಕೃತಕವಾಗುತ್ತದೆ. ಅವರು ಯಂತ್ರಗಳಿಗೆ ದಾಸರಾಗಿರುತ್ತಾರೆ. ಧನದ ಮೋಹ ಅವರಲ್ಲಿ ಅಧಿಕವಾಗಿರುತ್ತದೆ. ಐಹಿಕ ಜೀವನದಲ್ಲಿ ಮಾತ್ರ ಅವರಿಗೆ ಅತ್ಯಾಸಕ್ತಿ ಇರುತ್ತದೆ. ನಗರದಲ್ಲಿ ಒಂದು ಕಡೆ ಅತ್ಯಧಿಕ ಸಂಪತ್ತು, ಮತ್ತೊಂದೆಡೆ ಅತೀವ ದಾರಿದ್ರ್ಯ, ಒಂದೆಡೆ ಅಗಾಧ ಪಾಂಡಿತ್ಯ, ಮತ್ತೊಂದೆಡೆ ಅಪಾರ

ಅಜ್ಞಾನ ಮುಂತಾದ ವಿರೋಧಾಭಾಸಗಳು ಕಂಡುಬರುತ್ತವೆ. ನಗರವು ಕೃತಕವಾಗಿ ಬೆಳೆದಂತೆ ಬುದ್ಧಿಜೀವಿಗಳು ಹಣವಿರುವವರು ಹಾಗೂ ಮಧ್ಯಮ ವರ್ಗದವರು ರಾಜಕೀಯ ನಾಯಕರಾಗುತ್ತಾರೆ. ರಾಜ್ಯದ ಬದಲಾಗಿ ಬೌದ್ಧಿಕವಾಗಿ ಹಾಗೂ ಆರ್ಥಿಕವಾಗಿ ಪ್ರಬಲವಾಗಿರುವವರು ಪ್ರಧಾನವಾಗಿರುವ ರಾಜಕೀಯ ಪಕ್ಷ ತಲೆದೋರುತ್ತದೆ. ಮೊದಮೊದಲು ಪ್ರಜಾಪ್ರಭುತ್ವದಲ್ಲಿ ಬುದ್ಧಿಜೀವಿಗಳು ಮುಖ್ಯ ಪಾತ್ರ ವಹಿಸಿದರೂ, ನಂತರ ಧನಿಕರ ನಾಯಕರಾಗಿ ತಮ್ಮ ಹಣದ ಬಲದಿಂದ ಮತಗಳನ್ನು ಗಿಟ್ಟಿಸಿಕೊಳ್ಳುತ್ತಾರೆ ಮತ್ತು ಪತ್ರಿಕೆ ಹಾಗೂ ಇತರ ಪ್ರಚಾರ ಮಾಧ್ಯಮಗಳನ್ನು ತಮ್ಮ ಹತೋಟಿಯಲ್ಲಿಟ್ಟು ಕೊಳ್ಳುತ್ತಾರೆ.

ನಾಲ್ಕನೆಯದಾಗಿ, "ನನ್ನ ದೇಶ", "ನನ್ನ ರಾಷ್ಟ್ರ" ಎಂಬ ಭಾವನೆಗೆ ಬದಲಾಗಿ ವಿಶ್ವ ಸಮಾಜದ ಕಲ್ಪನೆಯು ಪ್ರಧಾನವಾಗಿ ಅದು ಉಂಟುಮಾಡುವ ಕಲಬೆರಕೆಯ ಸಂಸ್ಕೃತಿಯಲ್ಲಿ ಜನಾಂಗ ಬಿಕ್ಕಟ್ಟು ಹೆಚ್ಚುತ್ತದೆ. ಭಾಷಾ ಸಂಬಂಧವಾದ ಆರ್ಥಿಕ ಹಾಗೂ ಸಾಮಾಜಿಕ ಅಡೆತಡೆಗಳು ಪ್ರಗತಿ ಉಂಟಾಗದಂತೆ ಮಾಡುತ್ತವೆ. ರಾಜಕೀಯ ಹಾಗೂ ಸಾಮಾಜಿಕ ರಚನೆಯು ಸಂಕೀರ್ಣವಾಗಿ ಜೀವನದ ಪ್ರತಿ ಕ್ಷೇತ್ರದಲ್ಲೂ ಅಪಾಯಕಾರಿ ಸ್ಪರ್ಧೆ ಹಾಗೂ ಭ್ರಷ್ಟಾಚಾರ ಪ್ರಧಾನವಾಗಿ ಸಮತೋಲನ ಹಾಳಾಗುತ್ತದೆ. ಐದನೆಯದಾಗಿ, ಲೈಂಗಿಕ ಜೀವನದ ಪವಿತ್ರತೆ ಕಣ್ಮರೆಯಾಗಿ ಹೋಗುತ್ತದೆ. ಕುಟುಂಬಗಳು ಶಿಥಿಲಗೊಳ್ಳುತ್ತವೆ, ವಿವಾಹಗಳು ವಿಚ್ಛೇದನದಲ್ಲಿ ಕೊನೆಗೊಳ್ಳುತ್ತವೆ, ಅನೇಕ ಹೃದಯಗಳು ಚೂರು ಚೂರಾಗಿ ಒಡೆದು ಹೋಗುತ್ತವೆ ಮತ್ತು ಮಕ್ಕಳು ತಮ್ಮ ತಂದೆ–ತಾಯಿಗಳನ್ನು ಉಪೇಕ್ಷಿಸುವುದರಿಂದ ಅವರು ತಮ್ಮ ಜೀವನದ ಕೊನೆಯ ದಿನಗಳನ್ನು ವೃದ್ಧಾಶ್ರಮಗಳಲ್ಲಿ ಕಳೆಯಬೇಕಾಗುತ್ತದೆ. ಆರನೆಯದಾಗಿ, ರಾಜ್ಯವಿಸ್ತರಣೆ, ನಗರೀಕರಣ ಮತ್ತು ಅಂತರರಾಷ್ಟ್ರೀಯತೆಯು ಒಟ್ಟಾಗಿ ಕೂಡಿಕೊಂಡಿರುವ ಸಮಾಜವು ರಾಷ್ಟ್ರ ಹಾಗೂ ಗ್ರಾಮಗಳಿಗೆ ಬದಲಿಯಾಗಿ ತಓರಿ, ಅಂತರರಾಷ್ಟ್ರೀಯ ಘರ್ಷಣೆ, ಕೈಗಾರಿಕಾ ಕ್ಷೋಭೆ, ಪರಿಸರ ಮಾಲಿನ್ಯ ಮತ್ತು ಸಾಮಾಜಿಕ ಬಿಕ್ಕಟ್ಟುಗಳನ್ನು ಸೃಷ್ಟಿಸುತ್ತದೆ. ಕೊನೆಯದಾಗಿ, ಅಧಿಕಾರದ ಮೋಹ ಹಾಗೂ ವರ್ಗಕಲಹಗಳು ಸಮಾನತೆ, ಏಕತೆ ಹಾಗೂ ನೆಮ್ಮದಿ–ತೃಪ್ತಿಗಳನ್ನು ಅಳಿಸಿಹಾಕಿ, ಸಮಾಜವು ಆತ್ಮಘಾತುಕವಾದ ಯೋಜನೆಗಳನ್ನು ಕೈಗೊಳ್ಳುವಂತೆ ಮಾಡುತ್ತವೆ; ಕಂಟಕಪ್ರಭುತ್ವದ ಸ್ಥಾಪನೆಗಾಗಿ ಅಧಿಕಾರ–ಕೀರ್ತಿ–ಪ್ರತಿಷ್ಠೆಗಳ ಮೋಹ ಮತ್ತು ವಿಭಿನ್ನ ವಿಚಾರ ಪದ್ಧತಿಗಳ ಅನುಯಾಯಿಗಳ ನಡುವೆ ತೋರುವ ಭಿನ್ನಾಭಿಪ್ರಾಯ ಹಾಗೂ ವಿರೋಧಗಳು ಸಮಾಜವನ್ನು ಪತನದ ಪ್ರಪಾತದ ಅಂಚಿನತ್ತ ಎಳೆದೊಯ್ಯುತ್ತವೆ. ನಿರಂಕುಶ ಸರ್ಕಾರ ಅಥವಾ ಪೀಡಕ ಪ್ರಭುತ್ವವು ಸಂಸ್ಕೃತಿ ನಾಟಕದ ಕೊನೆಯ ದೃಶ್ಯ, ಅಂತಿಮ ಅಂಕವಾಗುತ್ತದೆ. ನಾಶವಾಗುವುದಕ್ಕೆ ಮೊದಲು ಸಂಸ್ಕೃತಿ ನಾಗರಿಕತೆಯು ದ್ವಿತೀಯ ಬಾರಿಗೆ ಅತೀ ಮತಧರ್ಮಶ್ರದ್ಧೆಯ ಮೋಡಿಗೆ ಒಳಗಾಗುತ್ತದೆ ಮತ್ತು ನೂತನ ಧಾರ್ಮಿಕ ಆತ್ಮಾಭಿಮಾನದ ಜ್ವರದ ತಾಪವನ್ನು ಅನುಭವಿಸುತ್ತದೆ. ಆ ಸ್ಥಿತಿಯು ಆ ಸಂಸ್ಕೃತಿಯ ಸಾವನ್ನು ಮತ್ತು ಪ್ರಾಯಶಃ ನೂತನ ಸಂಸ್ಕೃತಿಯ ಉದಯವನ್ನು ಸೂಚಿಸುತ್ತದೆ.

ಈ ರೀತಿ ಸ್ಪೆಂಗ್ಲರ್ ನಾಗರಿಕತೆಯ ಹಂತವನ್ನು ಮುಟ್ಟಿದ ಸಮಾಜವನ್ನು ವಿಶ್ಲೇಷಿಸಿದನು ಮತ್ತು ಈ ಎಲ್ಲಾ ಚಿಹ್ನೆಗಳು ಸಮಕಾಲೀನ ಪಾಶ್ಚಾತ್ಯ ನಾಗರಿಕತೆಯಲ್ಲಿ ಕಂಡುಬಂದಿರುವುದರಿಂದ ಅದರ ಅವನತಿ ಖಂಡಿತ ಎಂಬುದಾಗಿ ಘೋಷಿಸಿದನು. ವಿಕೋವಿನಂತೆ ಅವನೂ ಸಹ ಆಧುನಿಕ ಪಾಶ್ಚಾತ್ಯ ನಾಗರಿಕತೆಯನ್ನು ಗ್ರೀಕ್–ರೋಮನ್ ನಾಗರಿಕತೆಯೊಂದಿಗೆ ಹೋಲಿಸಿ ಪುರಾತನ ನಾಗರಿಕತೆಯು ಅಳಿವಿನ ಹಂತದಲ್ಲಿದ್ದಾಗ

ಕಂಡುಬಂದ ಚಿಹ್ನೆಗಳನ್ನೇ ಅದರಲ್ಲೂ ಕಾಣಬಹುದು ಎಂಬುದಾಗಿ ಹೇಳಿದನು. ಅದು ಸೃಜನಶೀಲ ಹಂತದಿಂದ ನಾಗರಿಕತೆಯ ಹಂತವನ್ನು ತಲುಪಿರುವುದರಿಂದ ಮುಂದಿನದು ಅದರ ಅವನತಿಯ ಕಾಲವೇ. ಆ ಪ್ರಕ್ರಿಯೆಯನ್ನು ಬದಲಾಯಿಸುವುದು ಸಾಧ್ಯವಿಲ್ಲ; ಕಾರಣ ಸ್ವಾಭಾವಿಕ ಜೀವಿಗಳಂತೆ ನಾಗರಿಕತೆಗಳು ಹುಟ್ಟಿ, ಬೆಳೆದು, ಅರಳಿ, ಅಂತ್ಯಗೊಳ್ಳುತ್ತವೆ. ಅವುಗಳನ್ನು ಪುನರುಜ್ಜೀವನಗೊಳಿಸುವುದು ಅಸಾಧ್ಯ. ಹೀಗೆ ಪಾಶ್ಚಾತ್ಯ ಸಂಸ್ಕೃತಿಯ ಭವಿಷ್ಯದ ಬಗ್ಗೆ ಸ್ಪೆಂಗ್ಲರನು ಕೊಟ್ಟಿರುವ ವಿವರಣೆಯು ಅತ್ಯಂತ ನಿರಾಶಾದಾಯಕವಾದುದು, ನೀಡಿರುವ ಚಿತ್ರಣವು ಕಳಾಹೀನ–ವಾದುದು.

ಸ್ಪೆಂಗ್ಲರನ ಪ್ರಖ್ಯಾತಿಗೆ ಮೂಲವಾಗಿದ್ದ ದಿ ಡಿಕ್ಲೈನ್ ಆವ್ ದಿ ವೆಸ್ಟ್ ಮೇರುಕೃತಿಯನ್ನು ವಿದ್ವಾಂಸರು ಒಪ್ಪದೆ ಟೀಕಿಸಿದರು. ಅವರ ಪ್ರಕಾರ, ಅವನು ಸಂಸ್ಕೃತಿಯ ಮೂಲ ಮತ್ತು ಅನಿರೀಕ್ಷಿತ ಹಾಗೂ ಗಾಢ ಪರಿವರ್ತನೆ ಇತ್ಯಾದಿಗಳ ಬಗ್ಗೆ ನೀಡಿರುವ ವಿವರಣೆ ಅಸ್ಪಷ್ಟವಾಗಿದೆ.

ಸ್ಪೆಂಗ್ಲರ್ ಗತಕಾಲದ ವಿಚಾರದಲ್ಲಿ ಬಹಳ ದೂರ–ದೂರವಿರುವ ಟ್ರೋಜನ್ ಯುದ್ಧ ಹಾಗೂ ಧರ್ಮಯುದ್ಧಗಳಂತಹ ಘಟನೆಗಳಲ್ಲಿ "ಸಮಕಾಲೀನತೆ"ಯನ್ನು ಕಂಡನು. ಅಂದರೆ, ಅವನ ಪ್ರಕಾರ, ಅವುಗಳಿಗೂ ಸಮಕಾಲೀನ ಸಂಭವಗಳಿಗೂ ಸ್ವಾಮ್ಯವಿದೆ. ಅವನು ಮಹಾನಗರದ ಕೃತಕ ಜೀವನದ ಬಗ್ಗೆ ನೀಡಿರುವ ವಿವರಣೆ ಅತ್ಯಂತ ತೀಕ್ಷ್ಣವಾದುದು ಹಾಗೂ ಸತ್ಯವಾದುದು. ಅವನು ಎತ್ತಿ ತೋರಿದ ಸಮಸ್ಯೆಯು ಇಂದೂ ಸಹ ಸಮಾಜಶಾಸ್ತ್ರಜ್ಞರಿಗೆ ಸವಾಲಾಗಿಯೇ ಇದೆ. ಅವನು ನೀಡಿದ ಅನೇಕ ಪ್ರಾಗುಕ್ತಿಗಳು ಇಂದು ನಿಜವಾಗಿವೆ. ಅವನ ಸಿದ್ಧಾಂತವು ನೂತನ ಸಾಮಾಜಿಕ ದೃಷ್ಟಿಕೋನಗಳ ಬೆಳವಣಿಗೆಗೆ ದಾರಿಮಾಡಿಕೊಟ್ಟಿದೆ. ಅವನದು ಸಾಂಸ್ಕೃತಿಕ ಹಾಗೂ ಐತಿಹಾಸಿಕ ನಿರಾಶಾವಾದದ ಗೀತಿಕೆಯಾಗಿದೆಯಾದರೂ, ನಿರಾಶೆಯ ಕತ್ತಲಲ್ಲಿ ತಡಕಾಡುತ್ತಿರುವ 20ನೆಯ ಶತಮಾನದ ಸ್ಪಷ್ಟ ಪ್ರತಿಬಿಂಬ ಅದರಲ್ಲಿ ಕಂಡುಬರುತ್ತದೆ. ಜರ್ಮನ್ ದರ್ಶನದ ಸಾರಸಂಗ್ರಹವಾದ ಕೃತಿಯನ್ನು ಬರೆದ ಟಾಯ್ನಬಿಯಂತಹ ಚರಿತ್ರಲೇಖಕರು, ಸೋರೋಕಿನ್‌ರಂತಹ ಸಮಾಜವಿಜ್ಞಾನಿಗಳು ಮತ್ತು ಕ್ರೋಬರ್‌ರವರಂಥ ಮಾನವಶಾಸ್ತ್ರಜ್ಞರು ಮುಂತಾದವರ ಮೇಲೆ ಗಾಢವಾದ ಪ್ರಬಾವವನ್ನು ಬೀರಿದ ಸ್ಪೆಂಗ್ಲರ್ ಶ್ರೇಷ್ಠ ಇತಿಹಾಸಕಾರನೆಂಬುದರಲ್ಲಿ ಸಂದೇಹವಿಲ್ಲ.

## 13.3 ಫ್ರಾನ್ಸಿನ ವಿಚಾರಪಂಥ

ಫ್ರಾನ್ಸಿನ ವಿಚಾರಪಂಥವನ್ನು ಅಲಂಕರಿಸಿದ ವಿದ್ವನ್ಮಣಿಗಳಲ್ಲಿ ಪ್ರಮುಖನಾಗಿದ್ದವನು. ಜ್ಞಾನೋದಯ ಕಾಲದಲ್ಲಿ ಇತಿಹಾಸ ಲೇಖನ ಕಲೆಯ ಪ್ರಧಾನ ಪ್ರತಿನಿಧಿಯಾಗಿದ್ದವನು ಮತ್ತು ಅತ್ಯುತ್ತಮ ಫ್ರೆಂಚ್ ಬರಹಗಾರರಲ್ಲಿ ಮುಖ್ಯನಾಗಿದ್ದವನು ಫ್ರಾಂಕೋನ್ ಮೇರಿ ಆರೋಯಟ್ ಡಿ ವಾಲ್ಟೇರ್. ಅವನು ಪ್ಯಾರಿಸ್ಸಿನಲ್ಲಿ 1694ರ ನವೆಂಬರ್ 21 ರಂದು ಒಂದು ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದನು. ಅವನು ಹುಟ್ಟಿದ ವಿಚಾರವನ್ನು ಗುಪ್ತವಾಗಿಡಲಾಗಿದ್ದಿತು ಎಂಬ ಹೇಳಿಕೆ ತಪ್ಪಾದುದಲ್ಲ. ಕಾರಣ ತಾನು 1694ರ ಫೆಬ್ರವರಿ 20 ರಂದು ಹುಟ್ಟಿದುದಾಗಿ ಮತ್ತು ತನ್ನ ತಂದೆ ಹಾಡುಗಳನ್ನು ಬರೆಯುತ್ತಿದ್ದ ರೋಚೆಬ್ರೂನೆ ಎಂಬ ಅಧಿಕಾರಿ ಎಂಬುದಾಗಿ ಹೇಳಿಕೊಂಡಿದ್ದಾನೆ. ಆದರೆ ಅವನ ತಂದೆಯಾಗಿದ್ದವನು ಫ್ರಾಂಕೋಸ್ ಆರೋಯಟ್ ಎಂಬ

ಪ್ರತೀತಿ ಇದೆ. ಅವನಿಗೆ ಚಿಕ್ಕಂದಿನಲ್ಲಿ ಕುಟುಂಬದಲ್ಲಿ ಪ್ರೀತಿ ಸಿಗದೆ ಅವನು ಸಂತನೊಬ್ಬನ ಪ್ರೀತಿಯಿಂದಲೇ ಬೆಳೆದನು. ತನ್ನ 7ನೆಯ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡ ಅವನು ಪ್ಯಾರಿಸಿನ ಲೂಯಿ–ಲೆ–ಗ್ರಾಂಡ್ ಕಾಲೇಜಿನಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದಾಗ ಜೆಸ್ಯುಯಿಟ್‌ರನ ಪ್ರಭಾವಕ್ಕೆ ಒಳಗಾಗಿ ಸಾಹಿತ್ಯ, ನಾಟಕರಂಗ ಹಾಗೂ ಸಾಮಾಜಿಕ ಜೀವನದ ಪ್ರತಿ ಒಲವನ್ನು ಬೆಳೆಸಿಕೊಂಡನು. ಆದರೆ ಪಾದ್ರಿಗಳು ಮಾಡಿದ ಧರ್ಮ ಬೋಧನೆಗಳು ಅವನನ್ನು ಸಂದೇಹವಾದಿ ಹಾಗೂ ನಾಸ್ತಿಕನ್ನಾಗಿಸಿದುವು.

ನಂತರ ವಾಲ್ಟೇರ್ ಕಾಲೇಜನ್ನು ಬಿಟ್ಟ ಮೇಲೆ ಕಾನೂನು ಶಾಸ್ತ್ರವನ್ನು ಅಧ್ಯಯನ ಮಾಡುವ ನಿರ್ಧಾರವನ್ನು ಕೈಬಿಟ್ಟು, ಹೇಗ್‌ನಲ್ಲಿದ್ದ ರಾಯಭಾರಿ ಕಛೇರಿಯಲ್ಲಿ ಕಾರ್ಯದರ್ಶಿಯಾಗಿ ನೇಮಕಗೊಂಡನು. ಆದರೆ ಒಂದು ಪ್ರಣಯ ವ್ಯವಹಾರದ ಕಾರಣ ಆ ಕೆಲಸವನ್ನು ಕಳೆದುಕೊಂಡು ಅವನು ಪ್ಯಾರಿಸಿಗೆ ಹಿಂತಿರುಗಿದನು. ಅಲ್ಲಿ ಅವನು ವಾಕ್ಚಾತುರ್ಯದಿಂದ ಜನಪ್ರಿಯನಾದನು. ಅವನು ರಚಿಸಿದ ಚತುರೋಕ್ತಿಗಳನ್ನು ಉದ್ಧರಿಸುವುದು ವಾಡಿಕೆಯಾಯಿತು. ಆದರೆ ಅವನು ರಾಜಪ್ರತಿನಿಧಿಯನ್ನು ಹಾಸ್ಯ ಮಾಡುತ್ತಿದ್ದುದರಿಂದ 1717ರಲ್ಲಿ ಸುಮಾರು ಒಂದು ವರ್ಷ ಕಾಲ ಬಾಸ್ಟಿಲೊ ಸೆರೆಮನೆಯ ವಾಸದ ರುಚಿಯನ್ನು ಅನುಭವಿಸಬೇಕಾಯಿತು. ನಂತರ 1718ರಲ್ಲಿ ಅವನು ರಚಿಸಿದ ದುರಂತ ನಾಟಕವು ಯಶಸ್ವಿಯಾಗಿ ಅವನು ಹೆಸರುವಾಸಿಯಾದ ನಾಟಕ ಕರ್ತೃವಾದನು. ಆಗಲೇ ಅವನು ವಾಲ್ಟೇರ್ ಎಂಬಕಾವ್ಯನಾಮವನ್ನು ಇಟ್ಟುಕೊಂಡನು. ನಂತರ ಅವನು ಮಹಾಕಾವ್ಯಗಳನ್ನು ರಚಿಸಿ, ಎಲ್ಲರನ್ನೂ ಆಕರ್ಷಿಸಿ, ಆಸ್ಥಾನಕವಿಯಾದನು. ಆ ಸಮಯದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಹಾಗೂ ಬುದ್ಧಿಶಾಲಿಗಳಿಗೆ ಗೌರವ ನೀಡುತ್ತಿದ್ದ ಇಂಗ್ಲೆಂಡ್ ಅವನನ್ನು ಆಕರ್ಷಿಸಿ, ಅವನು ಫ್ರಾನ್ಸಿನಲ್ಲಿದ್ದ ಬೋಲಿಂಗ್ ಬ್ರೂಕನನ್ನು ಭೇಟಿಮಾಡಿ, ಅವನ ಆದೇಶದ ಮೇರೆಗೆ ಇಂಗ್ಲಿಷ್ ಭಾಷೆಯನ್ನು ಕಲಿಯಲಾರಂಭಿಸಿದನು. ಏತನ್ಮಧ್ಯೆ ಕುಲೀನನೊಬ್ಬನೊಂದಿಗೆ ಉಂಟಾದ ಜಗಳಗಳ ಕಾರಣ ಅವನು ಪುನಃ ಬಾಸ್ಟಿಲೊ ಸೆರೆಮನೆಯನ್ನು ಸೇರಬೇಕಾಯಿತು. 15 ದಿನಗಳ ನಂತರ ಅವನು ದೇಶಭ್ರಷ್ಟನಾಗಿ ಇಂಗ್ಲೆಂಡಿಗೆ (1726–29) ಹೋದಾಗ ಅಲ್ಲಿ ಪೋಪ್ ಮುಂತಾದವರ ಸಹವಾಸದಲ್ಲಿ ಹೆಚ್ಚು ಅನುಭವವನ್ನು ಗಳಿಸಿ 1728ರ ಕೊನೆಯಲ್ಲಿ ಅಥವಾ 1729ರ ಆರಂಭದಲ್ಲಿ ಹಣ ಹಾಗೂ ಹಸ್ತಪ್ರತಿಗಳಿಂದ ಕೂಡಿದ್ದ ಚೀಲಗಳೊಂದಿಗೆ ಫ್ರಾನ್ಸಿಗೆ ಹಿಂತಿರುಗಿದನು.

ಆಮೇಲೆ ವಾಲ್ಟೇರ್ ತನ್ನ ಸಂಪತ್ತನ್ನು ದ್ವಿಗುಣಗೊಳಿಸಿಕೊಂಡನು. ಕಾರಣ ಅವನು ಸಾಹಿತ್ಯ ರಚನೆಗಳಲ್ಲಿ ಮಾತ್ರವಲ್ಲದೆ, ವಾಣಿಜ್ಯ ಕ್ಷೇತ್ರದಲ್ಲೂ ಬಹು ಸಮರ್ಥನಾಗಿದ್ದನು. ಅದೇ ಸಮಯದಲ್ಲಿ ಅವನ ದೃಷ್ಟಿ ಇತಿಹಾಸ ಕ್ಷೇತ್ರದತ್ತ ತಿರುಗಿತು. ಲಂಡನ್ನಿನಲ್ಲಿದ್ದಾಗ 12ನೆಯ ಚಾರ್ಲೆಸ್‌ನಿಂದ ಆಕರ್ಷಿತನಾಗಿದ್ದ ಅವನು 1713ರಲ್ಲಿ ಆ ದೊರೆಯ ಬಗ್ಗೆ ಜಾಗರೂಕತೆಯಿಂದ ಆರಿಸಲಾಗಿದ್ದ ಪ್ರಮಾಣಗಳ ಮೇಲೆ ಆಧಾರಿತವಾಗಿದ್ದ ಹಾಗೂ ಕಾದಂಬರಿಯಂತೆ ಚಿತ್ತಾಕರ್ಷಕವಾಗಿ ಓದಿಸಿಕೊಂಡು ಹೋಗುತ್ತಿದ್ದ ಐತಿಹಾಸಿಕ ವೃತ್ತಾಂತವನ್ನು ರಚಿಸಿದನು. 1734ರಲ್ಲಿ ಅವನು ಪ್ರಕಟಿಸಿದ ಲೆಟರ್ ಆನ್ ದಿ ಇಂಗ್ಲಿಷ್ ಎಂಬ ಉತ್ತಮ ಕೃತಿಯು ಇಂಗ್ಲೆಂಡಿನಲ್ಲಿದ್ದ ರಾಜಕೀಯ ಹಾಗೂ ಬೌದ್ಧಿಕ ಸ್ವಾತಂತ್ರ್ಯವನ್ನು ಫ್ರಾನ್ಸಿನ ನಿರಂಕುಶಾಧಿಪತ್ಯ ಹಾಗೂ ಗುಲಾಮಗಿರಿಯೊಂದಿಗೆ ಹೋಲಿಸಿ ಫ್ರಾನ್ಸಿನ ರಾಜಕೀಯ ಹಾಗೂ ಕ್ರೈಸ್ತಮಠೀಯ ಅಸಹಿಷ್ಣುತೆಯನ್ನು ಖಂಡಿಸಿತಲ್ಲದೆ, ಇಂಗ್ಲಿಷ್ ಸಾಹಿತ್ಯ ಹಾಗೂ ಸಂಸ್ಥೆಗಳು ಜನಪ್ರಿಯವಾಗುವಂತೆ ಮಾಡಿತು.

ಅವನು 1778ರಲ್ಲಿ ಕೊನೆಯ ಬಾರಿಗೆ ಫ್ರಾನ್ಸಿಗೆ ಬಂದಾಗ ಅವನಿಗೆ ಜನತೆಯು ಅದ್ದೂರಿಯಾಗಿದ್ದ ಸ್ವಾಗತವನ್ನು ನೀಡಿತು. ಅವನು 1778ರ ಮೇ 30 ರಂದು ಮೃತ್ಯು ಹೊಂದಿದನು.

## 13.3.1 ವಾಲ್ಟೇರನ ಕೊಡುಗೆ

ನೈತಿಕ ಹಾಗೂ ಮಾನವೀಯ ದೃಷ್ಟಿಯನ್ನು ಪ್ರಧಾನವಾಗಿ ಹೊಂದಿದ್ದ ಇತಿಹಸದ ದರ್ಶನವನ್ನು ಬೆಳೆಸಿದ ವಾಲ್ಟೇರ್ ಹುಲುಸಾದ ಬೆಳೆಯಂಥ ಅಮೂಲ್ಯ ಸಾಹಿತ್ಯ ನಿಧಿಯನ್ನು ಮಾನವ ಕುಲಕ್ಕೆ ಕಾಣಿಕೆಯಾಗಿ ನೀಡಿದ್ದಾನೆ. ಅವನ ಬರಹಗಳು ಕವಿತೆ, ಮಹಾಕಾವ್ಯ ಇತಿಹಾಸ ಇತ್ಯಾದಿಗಳನ್ನು ಒಳಗೊಂಡಿವೆ. ಅವನ ಸಾಹಿತ್ಯ ಸಂಪತ್ತು ಪದ್ಯ, ನಾಟಕ, ಕಥೆ, ಇತಿಹಾಸ, ವಾದವಿವಾದಗಳು, ಲೋಕ ಪ್ರಚಾರಕೃತಿಗಳು ಹಾಗೂ ಖಾಸಗಿ ಪತ್ರಗಳು ಮುಂತಾಗಿ 70 ಸಂಪುಟಗಳಾಗಿ ಬೆಳೆದುಬಂದಿದೆ. ಅವನ ಏಜ್ ಆವ್ ಲೂಯಿ 14 ಎಂಬುದು ಐತಿಹಾಸಿಕ ಮೂಲಾಧಾರಗಳ ಜಾಗರೂಕ ಹಾಗೂ ವಿಮರ್ಶಾತ್ಮಕ ಪರಿಶೀಲನೆ. ಆ ದೊರೆಯ ಕಾಲಕ್ಕೆ ಸೇರಿದ್ದ ಹಾಗೂ ಜೀವಂತರಾಗಿದ್ದ ಸಾವಿರಾರು ಪ್ರತ್ಯಕ್ಷದರ್ಶಿಗಳನ್ನು ಸಂದರ್ಶಿಸಿ ವಿಷಯಗಳನ್ನು ಸಂಗ್ರಹಿಸಿರುವ ಕ್ರಮ ಮತ್ತು ಸಂಗ್ರಹಿಸಲಾಗಿದ್ದ ಕ್ರಮ ಮತ್ತು ಸಂಗ್ರಹಿಸಲಾಗಿದ್ದ ಪ್ರಮಾಣಗಳ ನಿಷ್ಕೃಷ್ಟ ಪರೀಕ್ಷೆ ಹಾಗೂ ವಿಮರ್ಶೆ ಇತ್ಯಾದಿಗಳಿಗಾಗಿ ಇತಿಹಾಸ ಲೇಖನ ಕಲಾಕ್ಷೇತ್ರದಲ್ಲಿ ಶ್ರೇಷ್ಠ ಗ್ರಂಥವಾಗಿದೆ.

ವಾಲ್ಟೇರನ ದೃಷ್ಟಿಯಲ್ಲಿ ಭವಿಷ್ಯವನ್ನು ರೂಪಿಸುವ ಆದರ್ಶಗಳ ಶೋಧನೆ ಇತಿಹಾಸದ ಗುರಿಯೇ ಹೊರತು ಕುತೂಹಲ ತೃಪ್ತಿಯಲ್ಲ, ಅಥವಾ ವಿಷಯಗಳ ಸಂಗ್ರಹಣೆಯಲ್ಲ, ದರ್ಶನದ ಬೆಳಕಿನಲ್ಲಿ ರಾಜಕೀಯ ಘಟನೆಗಳ ಹೊನಲಿನ ತಳದಲ್ಲಿ ಅಡಗಿಕೊಂಡಿದ್ದ ಮಾನವ ಬುದ್ಧಿಯ ಇತಿಹಾಸವನ್ನು ಬೆಳಕಿಗೆ ತರಬೇಕು. ಎಲ್ಲಾ ರಾಷ್ಟ್ರಗಳಲ್ಲಿ ಮಿಥ್ಯಾಕಥೆಗಳು ಚರಿತ್ರೆಯ ನಿಜಸ್ವರೂಪವನ್ನು ಮರೆಮಾಡಿ ಅದನ್ನು ಕುರೂಪಗೊಳಿಸಿದ್ದುವು. ಸುಳ್ಳು ಸಂಗತಿಗಳನ್ನು ಸಮರ್ಥಿಸುವುದಕ್ಕಾಗಿ ಬಹಳವಾಗಿ ಸಂಪ್ರದಾಯ, ಸ್ಮಾರಕ ಇತ್ಯಾದಿಗಳನ್ನು ಬಳಸಲಾಯಿತು. ವಾಲ್ಟೇರ್ ಸುಳ್ಳಿನ ಕಂತೆಗಳ ಗಣಿಯಲ್ಲಿ ಮನುಕುಲದ ಯಥಾರ್ಥ ಚರಿತ್ರೆಗೆ ಸಂಬಂಧಿಸಿದ್ದ ಸತ್ಯವೆಂಬ ಚಿನ್ನದ ಕಣಗಳನ್ನು ಕಂಡುಹಿಡಿಯಲು ಗಣಿ ಕೆಲಸದವನಂತೆ ಶ್ರಮಿಸಿದನು ಮತ್ತು ಹಿಸ್ಟೋರಿ ಆವ್ ರಷ್ಯಾ, ಹಿಸ್ಟೋರಿ ಆವ್ ಚಾರ್ಲೆಸ್ 12, ದಿ ಏಜ್ ಆವ್ ಲೂಯಿ 13 ಇತ್ಯಾದಿಗಳನ್ನು ಪೂರ್ವ ಸಿದ್ಧತೆಯ ಅಧ್ಯಯನ ಗ್ರಂಥಗಳಾಗಿ ಸಿದ್ಧಪಡಿಸಿದನು. ಅವನು ತನಗೆ ದೊರಕಿದ್ದ ಹಾಗೂ ತನ್ನ ವಿಷಯಕ್ಕೆ ಸಂಬಂಧಿಸಿದ್ದ ಪ್ರತಿ ಬರಹವನ್ನು ಓದಿದರೂ, ನೂರಾರು ಬಖೈರು ಅಥವಾ ಸ್ವಂತ ಜೀವನದ ಚರಿತ್ರೆಗಳನ್ನು ಜಾಗರೂಕತೆಯಿಂದ ಅಧ್ಯಯನ ಮಾಡಿ ವಿಚಾರ ಮಾಡಿದನು. ಇತಿಹಾಸದ ಸುಪ್ರಸಿದ್ಧ ಘಟನೆಗಳನ್ನು ವೀಕ್ಷಿಸಿದ್ದ ಹಾಗೂ ಸಾಯದೆ ಉಳಿದಿದ್ದ ವ್ಯಕ್ತಿಗಳಿಗೆ ವಿಷಯಗಳನ್ನು ತಿಳಿಸುವಂತೆ ಕೋರಿ ನೂರಾರು ಪತ್ರಗಳನ್ನು ಬರೆದನು ಮತ್ತು ತನ್ನ ಕೃತಿಗಳು ಪ್ರಕಟವಾದ ಮೇಲೆಯೂ ಅಧ್ಯಯನವನು ಮುಂದುವರಿಸಿ ಅವುಗಳನ್ನು ಪರಿಷ್ಕರಿಸುತ್ತಿದ್ದನು.

ಒಟ್ಟಿನಲ್ಲಿ, ವಾಲ್ಟೇರನು ತಾನು ರಚಿಸಿದ ಚರಿತ್ರೆಯು ಚಳವಳಿ, ಜನಸಾಮಾನ್ಯರು, ಮಾನವಕುಲ ಮತ್ತು ಮಾನವ ಬುದ್ಧಿಯ ಮುನ್ನಡೆಯನ್ನು ಕುರಿತು ವಿಚಾರ ಮಾಡಬೇಕೇ ಹೊರತು ಅದು ದೊರೆಗಳು, ರಾಷ್ಟ್ರಗಳು ಮತ್ತು ಯುದ್ಧಗಳ ಇತಿಹಾಸವಾಗಬಾರದು ಎಂಬುದಾಗಿ ನಿಶ್ಚಯಿಸಿದನು. ಅವನು ಸಮಾಜವನ್ನು ಕುರಿತು ಚರಿತ್ರೆಯನ್ನು ರಚಿಸಬೇಕು, ಜನರು ತಮ್ಮ ಕುಟುಂಬದೊಳಗೆ ಹೇಗೆ ಜೀವನವನ್ನು ನಡೆಸುತ್ತಿದ್ದರು, ಅವರು ಸಾಮಾನ್ಯವಾಗಿ ಬೆಳೆಸಿದ ಕಲೆಗಳಾವುವು ಎಂಬುದನ್ನು ದೃಢಪಡಿಸಿಕೊಳ್ಳಬೇಕು ಎಂಬುದು ತನ್ನ ಬಯಕೆಯೇ ಹೊರತು, ಯುದ್ಧಗಳ ಇತಿಹಾಸವನ್ನು ಬರೆಬೇಕೆಂಬುದಲ್ಲ ಮತ್ತು ಮಾನವರು ಯಾವ ಹಂತಗಳ ಮೂಲಕವಾಗಿ ಅನಾಗರಿಕತೆಯಿಂದ ನಾಗರಿಕತೆಯತ್ತ ಸಾಗಿಬಂದರು ಎಂಬುದನ್ನು ತಿಳಿಯುವ ಇಚ್ಛೆ ತನಗಿದೆ ಎಂದು ಹೇಳಿಕೊಂಡಿದ್ದಾನೆ. ಅವನು ಬೌದ್ಧಿಕ ಕ್ಷೇತ್ರದಲ್ಲಿ ಮಾಡಿದ ಕೃಷಿಯು ಇಂದಿನ ವಿಶೇಷಿತ ಸಾಮಾಜಿಕ ವಿಜ್ಞಾನಗಳಿಗೆ ಮೂಲವಾಯಿತು ಎಂಬುದಾಗಿ ಹೇಳಬಹುದು. ಬಕಲನ ಪ್ರಕಾರ, ಅವನ ಕೃತಿಯು ಆಧುನಿಕ ಇತಿಹಾಸ ವಿಜ್ಞಾನಕ್ಕೆ ಆಸ್ತಿಭಾರವನ್ನು ಹಾಕಿತು. ಗಿಬನ್, ನೀಬರ್, ಬಕಲ್ ಹಾಗೂ ಗ್ರೋಟೆ ಅವನಿಗೆ ಋಣಿಗಳಾಗಿದ್ದಂತೆ ಅನುಯಾಯಿಗಳಾಗಿಯೂ ಇದ್ದರು.

ಇಂದಿನ ಪ್ರಮಾಣಗಳಿಂದಲೂ ವಾಲ್ಟೇರನ ಕೊಡುಗೆಯನ್ನು ಪರಿಶೀಲಿಸಿದರೆ ಇತಿಹಾಸಕಾರನಾಗಿ ಅವನು ತೋರಿರುವ ಶಕ್ತಿ ಸಾಮರ್ಥ್ಯಗಳು ಅವನ ದೋಷಗಳಿಗಿಂತ ಹೆಚ್ಚಾಗಿವೆ ಎಂಬುದು ಸ್ಪಷ್ಟವಾಗುತ್ತದೆ. ಕವಿ, ರಾಜಕೀಯ ಚಿಂತಕ, ಇತಿಹಾಸಕಾರ, ಕಾದಂಬರಿಕಾರ, ಪ್ರಬಂಧ ಲೇಖಕ, ನಾಟಕ ಕರ್ತೃ, ವಿಮರ್ಶಕ ಹಾಗೂ ದಾರ್ಶನಿಕ ಎಲ್ಲಾ ಆಗಿದ್ದ ಅವನು ವಿಮರ್ಶಾತ್ಮಕ ದೃಷ್ಟಿ, ತೀಕ್ಷ್ಣವಾದ ರಸಿಕೋಕ್ತಿ, ಅಸೀಮ ಬುದ್ಧಿಚಾತುರ್ಯ ಮತ್ತು ಹುಲುಸಾದ ಬೆಳೆಯಂತಹ ಅಪಾರ ಬರಹಗಳಿಗೆ ಹೆಸರುವಾಸಿಯಾಗಿದ್ದನು. ಅವನ ಕೃತಿಗಳು ಚಿಂತನೆಯ ಅಗಾಧತೆ, ಶೈಲಿಯ ಸೊಬಗು ಹಾಗೂ ಶ್ರೇಷ್ಠತೆ ಮತ್ತು ನಿರೂಪಣೆಯ ನವೀನತೆಗಾಗಿ ಪ್ರಖ್ಯಾತವಾಗಿದ್ದುವು. ಚತುರೋಕ್ತಿ, ವಿನೋದಲಹರಿ ಮತ್ತು ಕಿರುದೆರೆಗಳಿಂದ ಕೂಡಿರುವ ನೀರಿನಲ್ಲಿ ಹಾದುಹೋಗುವ ಸೂರ್ಯನ ಬೆಳಕಿನಂತೆ ಸ್ಪಷ್ಟತೆ, ನಿಷ್ಕೃಷ್ಟತೆ ಹಾಗೂ ಓಟ ಇತ್ಯಾದಿ ಸ್ತುತ್ಯರ್ಹ ಲಕ್ಷಣಗಳಿಂದ ಕೂಡಿರುವ ಅವನ ಬರಹಗಳಿಗೆ ಈಡಿಲ್ಲ. ವಿಡಂಬನ ಹಾಗೂ ವಿನೋದ, ರಸಿಕೋಕ್ತಿ ಹಾಗೂ ರಮ್ಯತೆಯಿಂದ ಕೂಡಿರುವ ವಿಶಿಷ್ಟ ಶೈಲಿಯನ್ನು ಬೆಳೆಸಿಕೊಂಡಿದ್ದ ಅವನು ಕೆಚ್ಚೆದೆಯ ವಿಮರ್ಶಕನಾಗಿದ್ದನು.

ವಾಲ್ಟೇರ್ ತನ್ನ ಜೀವನಪೂರ್ತಿ ಪ್ರತಿಷ್ಠಾಪಿತ ವ್ಯವಸ್ಥೆ ಮತ್ತು ಕ್ಯಾತೊಲಿಕ್ ಚರ್ಚ್‌ನ ವಿರುದ್ಧವಾಗಿ ವಾಚಿಕ ಕದನಗಳನ್ನು ನಡೆಸಿದನು. ಅವನು ಕ್ರೈಸ್ತ ಮತದ ವಿರುದ್ಧವಾಗಿ ನಡೆಸಿದ ದಾಳಿ ಬಹು ತೀವ್ರವಾಗಿದ್ದಿತು. ಅದು ಅನೇಕ ಶತಮಾನಗಳವರೆಗೆ ನಾಗರಿಕತೆಯ ಮುನ್ನಡೆಯನ್ನು ತಡೆಗಟ್ಟಿದ್ದಿತು ಎಂಬುದು ಅವನ ನಂಬಿಕೆಯಾಗಿದ್ದಿತು. ತನ್ನ ಟ್ರೀಟಿಸ್ ಆನ್ ಟಾಲೆರೇಷನ್‌ನಲ್ಲಿ ಪಾದ್ರಿಗಳ ಅಸಹಿಷ್ಣುತೆಯನ್ನು ಖಂಡಿಸಿ ಅಲೌಕಿಕತೆಯಲ್ಲಿ ನಂಬಿಕೆಗಳಿಗೆ ಮತ್ತು ಸಾಮಾಜಿಕ ಅನ್ಯಾಯಗಳಿಗೆ ನೀಡಿದ ಬೆಂಬಲಕ್ಕಾಗಿ ಅವನು ವ್ಯವಸ್ಥಿತ ಕ್ರೈಸ್ತಮತವನ್ನು ದ್ವೇಷಿಸಿದನು.

ವಾಲ್ಟೇರನ ಜ್ಞಾನಕ್ಷೇತ್ರ ಎಷ್ಟು ವ್ಯಾಪಕವಾಗಿದ್ದಿತ್ತೆಂದರೆ ಅವನು ವಿಚಾರ ಮಾಡದೇ ಬಿಟ್ಟಿದ್ದ ಮುಖ್ಯ ವಿಷಯವಾವುದೂ ಇರಲಿಲ್ಲ. ಧಾರ್ಮಿಕ ಸಹಿಷ್ಣುತೆ ಹಾಗೂ ಆರ್ಥಿಕ ಸಂಪತ್ತಿನ ಅಭಿವೃದ್ಧಿ, ಚಿತ್ರಹಿಂಸೆ ಹಾಗೂ

ನಿಷ್ಪ್ರಯೋಜಕ ಕ್ರೂರ ಶಿಕ್ಷೆಗಳನ್ನು ಅಳಿಸಿಹಾಕುವುದರ ಮೂಲಕ ಮಾನವ ಹಕ್ಕು ಬಾಧ್ಯತೆಗಳಿಗೆ ಗೌರವ ತೋರಿ ಸಂರಕ್ಷಿಸುವ ಅವಶ್ಯಕತೆ ಮುಂತಾದ ವಿಷಯಗಳಲ್ಲಿ ಅವನಿಗೆ ಅತ್ಯಾಸಕ್ತಿ ಇದ್ದಿತು ಮತ್ತು ಅವುಗಳ ಬಗ್ಗೆ ನಿರಂತರವಾಗಿ ವಿಚಾರಮಂಥನ ಮಾಡುತ್ತಿದ್ದನು. ಅವನು ಮಾನವನು ತನ್ನ ವ್ಯಕ್ತಿತ್ವ ಹಾಗೂ ಸಮಾಜವನ್ನು ತಾನೇ ರೂಪಿಸಿಕೊಳ್ಳಬಲ್ಲ ಎಂಬ ತತ್ತ್ವವನ್ನು ತನ್ನ ಸುಪ್ರಸಿದ್ಧ ಕ್ಯಾಂಡೀಡ್ ಎಂಬ ಕೃತಿಯಲ್ಲಿ ಸಂಗ್ರಹಿಸಿ ವಿವರಿಸಿದ್ದಾನೆ. ಒಟ್ಟಿನಲ್ಲಿ ವಾಲ್ಟೇರ್ ಅವಿರತವಾಗಿ ಅಧ್ಯಯನ ಮಾಡಿ ಬರೆಯುವ ಕಾರ್ಯವನ್ನು ಮುಂದುವರಿಸಿ ಆ ಶಕೆಯಲ್ಲಿ ಎಲ್ಲರಿಗಿಂತ ಹೆಚ್ಚು ಸಾಧನೆಗಳನ್ನು ಗಳಿಸಿದನು. ಅವನು ಸೋಮಾರಿತನವನ್ನು ಬಹುವಾಗಿ ದ್ವೇಷಿಸಿದನು ಮತ್ತು ದುಡಿಮೆಯಲ್ಲಿ ಅತ್ಯಾನಂದವನ್ನು ಕಂಡನು. ವ್ಯಕ್ತಿಯು ಆತ್ಮಹತ್ಯೆಯನ್ನು ಮಾಡಿಕೊಳ್ಳದಿರಬೇಕಾದರೆ ಅವನು ಯಾವಾಗಲೂ ಏನ್ನನಾದರೂ ಮಾಡುತ್ತಿಬೇಕು ಎಂಬುದು ಅವನ ಮತವಾಗಿದ್ದಿತು. ನಗು ಅವನ ಬದುಕಿನ ಬತ್ತದ ಚಿಲುಮೆಯಾಗಿದ್ದಿತು. ಕಾಲದ ಬೆಲೆ ಅವನಿಗೆ ಚೆನ್ನಾಗಿ ತಿಳಿದಿದ್ದಿತು. ಅವನ ಜೀವನವು 1694 ರಇಂದ 1776 ರವರೆಗಿನ ವರ್ಷಗಳ ಸಾಧನೆಗಳ ಸಾರವೇ ಆಗಿದ್ದಿತು. ಆ ಸಮಯವು ಅವನ ಬದುಕು ಹಾಗೂ ಸಾಧನೆಗಳ ಶಕೆಯೇ ಆಯಿತು. ನಿಸ್ಸಂದೇಹವಾಗಿ ಅವನು ಆಧುನಿಕ ಯೂರೋಪಿನ ಅತ್ಯುತ್ತಮ ಬರಹಗಾರನಾಗಿದ್ದನು. ಬಹಿಷ್ಕಾರ, ಸೆರೆಮನೆವಾಸ ಮತ್ತು ಪಾದ್ರಿಗಳು, ರಾಜರ ಹಾಗೂ ರಾಜಪ್ರತಿನಿಧಿಗಳ ಆಕ್ರಮಣಗಳಿಗೆ ತುತ್ತಾಗಿದ್ದರೂ, ಧೃತಿಗೆಡದೆ ತನ್ನ ಸತ್ಯಪಥವನ್ನು ಕಂಡುಕೊಂಡು ನಡೆದ ಪ್ರತಿಭಾವಂತ ವಾಲ್ಟೇರನಂತೆ ಮತ್ತ್ಯಾರೂ ತನ್ನ ಜೀವಿತ ಕಾಲದಲ್ಲಿ ಇಷ್ಟೊಂದು ಪ್ರಭಾವವನ್ನು ಬೀರಲಿಲ್ಲ. ಅವನು ತನ್ನ ಯುಗಕ್ಕೆ ಸ್ಫೂರ್ತಿಯ ಸೆಲೆಯೂ ಮತ್ತು ಉದ್ದೀಪಕ ವಾಣಿಯೂ ಆಗಿದ್ದನು.

### 13.3.2 ಆಗಸ್ಟ್ ಕಾಂಪ್ಟ್ (1798–1857)

ಫ್ರಾನ್ಸಿನ ಇನ್ನೊಬ್ಬ ಮೇಧಾವಿಯಾಗಿದ್ದ ಚಿಂತಕ ಆಗಸ್ಟ್ ಮೇರಿ ಫ್ರಾಂಕೊಸ್ ಜೇವಿರ್ ಕಾಂಪ್ಟ್ ದೃಷ್ಟಪ್ರಮಾಣವಾದಿಯೂ ಮತ್ತು ಸಮಾಜಶಾಸ್ತ್ರದ ಜನಕನೂ ಆಗಿದ್ದನು. ಅವನು 1798ರ ಜನವರಿ 19 ರಂದು ಮಾಂಟ್‌ಪೆಲಿಯರ್ ಎಂಬ ಸ್ಥಳದಲ್ಲಿ ನಿಷ್ಠಾವಂತ ಕ್ಯಾತೊಲಿಕನೂ, ರಾಜಪ್ರಭುತ್ವವಾದಿಯೂ ಹಾಗೂ ಶಿಸ್ತಿನ ವ್ಯಕ್ತಿಯೂ ಆಗಿದ್ದ ಸಣ್ಣ ಸರ್ಕಾರಿ ಅಧಿಕಾರಿಯೋರ್ವನ ಮಗನಾಗಿ ಹುಟ್ಟಿದನು. ಅವನು ತನ್ನ 9ನೆಯ ವಯಸ್ಸಿನಲ್ಲಿ ಸ್ಥಳೀಯ ಶಾಲೆಯಲ್ಲಿ ಶಿಕ್ಷಣ ಪಡೆದನು. ಹಠಮಾರಿ, ಅವಿಧೇಯ ವಿದ್ಯಾರ್ಥಿಯಾಗಿದ್ದ ಅವನ ಮೇಲೆ ಗಣಿತಶಾಸ್ತ್ರದ ಅಧ್ಯಾಪಕ ಡೇನಿಯಲ್ ಎನ್‌ಕಾಂಟ್ರೆಯು ಹೆಚ್ಚಿನ ಪ್ರಬವ ಬೀರಿ ಅವನಲ್ಲಿ ಗಣಿತಶಾಸ್ತ್ರದ ಬಗ್ಗೆ ಒಲವು ಮೂಡುವಂತೆ ಮಾಡಿದನು.

ನಂತರ 1814ರಲ್ಲಿ ಕಾಂಪ್ಟ್ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಜಯಗಳಿಸಿ ಪ್ಯಾರಿಸಿನ ಪ್ರತಿಷ್ಠಿತ ಪಾಲಿಟೆಕ್ನಿಕ್‌ನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದನು. ಆದರೆ ಅಲ್ಲಿ ಹಳೆಯ ನಿಷ್ಪ್ರಯೋಜಕ ಪರೀಕ್ಷಾ ರೀತಿಯನ್ನು ವಿರೋಧಿಸಿದನು. ಆ ಕಾರಣ ಆರು ವಿದ್ಯಾರ್ಥಿಗಳಲ್ಲಿ ಅವನು ಒಬ್ಬನಾಗಿ ಎಕೋಲೆಯನ್ನು ಬಿಡಬೇಕಾಗಿ ಬಂದಿತು. ಕೋಪದಿಂದ ತನ್ನ ಜನ್ಮಸ್ಥಳಕ್ಕೆ ಹಿಂತಿರುಗಿದನಾದರೂ ಅಲ್ಲಿರಲಾರದೆ ಪುನಃ ಜುಲೈ ತಿಂಗಳಲ್ಲಿ ಪ್ಯಾರಿಸಿಗೆ ಬಂದು ಅಲ್ಲಿ ಗಣಿತಶಾಸ್ತ್ರದಲ್ಲಿ ಖಾಸಗಿ ಪಾಠ ಹೇಳಿಕೊಡುವ ಉಪಾಧ್ಯಾಯನಾಗಿ ಜೀವನೋಪಾಯ ಗಳಿಸಿದನು ಹಾಗೂ ಇಂಗ್ಲಿಷಿನಲ್ಲಿದ್ದ ಜ್ಯಾಮಿತಿ ಪುಸ್ತಕವನ್ನು ತರ್ಜುಮೆ ಮಾಡಿದನು.

1817ರಲ್ಲಿ ಕಾಂಪ್ಟನಿಗೆ ಸುಪ್ರಸಿದ್ಧ ಹೆನ್ರಿ ಸೆಯ್‌ಂಟ್ ಸೈಮನನ ಪರಿಚಯವಾಗಿ ಅವನ ಕಾರ್ಯದರ್ಶಿ ಹಾಗೂ ಸಹೋದ್ಯೋಗಿಯಾಗಿ ಕಾರ್ಯ ಮಾಡಿದನು. ಸೈಮನನು ಅವನ ಮೇಲೆ ಸಾಕಷ್ಟು ಪ್ರಭಾವ ಬೀರಿದನು. ಅವನ ಸಂಪರ್ಕದಲ್ಲಿ ಕಾಂಪ್ಟನ ಮನಸ್ಸಿನಲ್ಲಿ ಸ್ಪಷ್ಟವಾಗಿದ್ದ ಭಾವನೆಗಳು ರೂಪಿತವಾದುವು. 1819 ಹಾಗೂ 1824ರ ನಡುವಿನ ವರ್ಷಗಳಲ್ಲಿ ಅವನು ಬರೆದ ಪ್ರಬಂಧಗಳಲ್ಲಿ ಮುಂದೆ ಅವನು ಪ್ರತಿಪಾದಿಸಿದ ಪ್ರಧಾನ ಭಾವನೆಗಳ ಸೂಕ್ಷ್ಮ ಪ್ರತಿಬಿಂಬ ಕಂಡುಬಮದಿತು. ಆದರೆ 1824ರಲ್ಲಿ ಬೌದ್ಧಿಕ ಹಾಗೂ ಆರ್ಥಿಕ ಕಾರಣಗಳಿಂದ ಅವನಿಗೂ ಸೈಮನನಿಗೂ ಜಗಳವಾಗಿ ಅವನು ಬೇರೆಯಾದನು. ಕಾಂಪ್ಟನ ಬರಹಗಳನ್ನು ಮೆಚ್ಚಿ ಅನೇಕರು ಪತ್ರಗಳನ್ನು ಬರೆದರಾದರೂ, ಪ್ಯಾರಿಸಿನ ಸಾಹಿತ್ಯ ಕ್ಷೇತ್ರದಲ್ಲಿ ಯಾವ ಸ್ಥಾನವೂ ಸಿಗದೆ ಅವನು ಅದರ ಅಂಚಿನಲ್ಲೇ ನಿಲ್ಲಬೇಕಾಯಿತು. 1825ರಲ್ಲಿ ಅವನು ಕ್ಯಾರೋಲಿನ್ ಮ್ಯೂಸಿನ್ ಎಂಬಾಕೆಯನ್ನು ಮದುವೆಯಾದನು. ಆದರೆ ಅವನಿಗೆ ವೈವಾಹಿಕ ಜೀವನ ಮುಳ್ಳಿನ ಹಾಸಿಗೆಯಾಯಿತು. ರಸಾಯನ ಎಂಜಿನಿಯರ್ ಆಗಲು ಬಯಸದೆ ಅವನು ಖಾಸಗಿ ಪಾಠ ಹಾಗೂ ನಿಯತಕಾಲಿಕಕ್ಕೆ ಲೇಖನಗಳನ್ನು ಬರೆಯುವುದರ ಮೂಲಕ ತನ್ನ ಜೀವನವನ್ನು ಸಾಗಿಸಲಾರಂಭಿಸಿದನು.

1826ರ ಏಪ್ರಿಲ್ ತಿಂಗಳಲ್ಲಿ ಕಾಂಪ್ಟ್ ತನ್ನ ವಿಚಾರಪಂಥದ ಬಗ್ಗೆ ನೀಡಿದ ಮೂರು ಉಪನ್ಯಾಸಗಳನ್ನು ಕೇಳಲು ಬೌದ್ಧಿಕ ಕ್ಷೇತ್ರದಲ್ಲಿ ಪ್ರಮುಖರಾಗಿದ್ದ ವ್ಯಕ್ತಿಗಳು ನೆರದಿದ್ದರು. ಆದರೆ, ಮಾನಸಿಕ ಆಘಾತಕ್ಕೆ ಒಳಗಾಗಿ ಅವನಿಗೆ ನಾಲ್ಕನೆಯ ಉಪನ್ಯಾಸವನ್ನು ಮಾಡಲಾಗಲಿಲ್ಲ. ಕೊನೆಗೆ 1828ರ ಆಗಸ್ಟ್ ಹೊತ್ತಿಗೆ ಅವನು ಗುಣಮುಖನಾಗಿ ತಾನು ಆ ಕಾಯಿಲೆಯ ಹಿಡಿತದಿಂದ ಮುಕ್ತನಾಗಿದ್ದರ ಸಂಕೇತವಾಗಿ ಇರಿಟೇಷನ್ ಆ್ಯಂಡ್ ಫಾಲಿ ಎಂಬ ಗ್ರಂಥಕ್ಕೆ ವಿಮರ್ಶೆ ಬರೆದನು. ಪುನಃ 1829ರಲ್ಲಿ ಅವನು ತನ್ನ ಉಪನ್ಯಾಸವನ್ನು ಮುಂದುವರಿಸಿದನು. ತನ್ನ ಕೋರ್ಸ್ ಡಿ ಫಿಲಾಸೊಫಿ ಪಾಸಿಟಿವ್ ಎಂಬ ಮೇರುಕೃತಿಯನ್ನು ರಚಿಸಿದ ವರ್ಷಗಳಲ್ಲಿ (1830–1842) ಅವನು ಬಹುಕಷ್ಟದಿಂದ ಜೀವನವನ್ನು ಸಾಗಿಸಬೇಕಾಯಿತು. ಎಕೋಲೆಯ ಬಾಹ್ಯ ಪರೀಕ್ಷಕನಾಗಿ ನೇಮಕಗೊಂಡಾಗ ಅವನಿಗೆ ಸ್ವಲ್ಪ ಅನುಕೂಲವಾಯಿತು. ಖಾಸಗಿ ಶಾಲೆಯೊಂದರಲ್ಲಿ ಗಣಿತಶಾಸ್ತ್ರದ ಅಧ್ಯಾಪಕನಾಗಿ ಕೆಲಸ ಮಾಡಿದನು. ಇದರಿಂದ ದಾರಿದ್ರ್ಯ ರೇಖೆಯ ಸ್ವಲ್ಪ ಮೇಲಕ್ಕೆ ಬಂದು ಬದುಕುವುದು ಅವನಿಗೆ ಸಾಧ್ಯವಾಯಿತು. ಅವನ ಮೇರುಕೃತಿಯು ಪ್ರಕಟವಾದಾಗ ಜೇಮ್ಸ್ ಮಿಲ್ ಮುಂತಾದವರ ಮೆಚ್ಚಿಗೆ ಹಾಗೂ ಸ್ನೇಹ ಲಭ್ಯವಾಯಿತು. ಆದರೆ ಅವನ ವೈವಾಹಿಕ ಜೀವನ ವಿಚ್ಛೇದದಲ್ಲಿ ಕೊನೆಗೊಂಡಿತು. ಎಕೋಲೆಯಲ್ಲಿ ತನ್ನ ವರ್ತನೆಯಿಂದ ಅನೇಕರ ಶತ್ರುತ್ವವನ್ನು ಗಳಿಸಿಕೊಂಡಿದ್ದ ಅವನಿಗೆ ಇದ್ದ ಕೆಲಸವು ಹೋಗಿ 1844ರಲ್ಲಿ ಅವನು ಅತೀವ ಅಪಮಾನಕ್ಕೆ ಗುರಿಯಾದನು.

ಅದೇ ವರ್ಷವು ಕಾಂಪ್ಟನಿಗೆ ಸಂತಸವನ್ನು ತಂದುಕೊಟ್ಟಿತು. ಕಾರಣ ಅವನು ಕ್ಲೊತಿಲ್ಡಿ ಡಿ ವಾಕ್ಸ್ ಎಂಬ ಮಹಿಳೆಯಲ್ಲಿ ಅನುರಕ್ತನಾದನು. ಈ ಪ್ರೀತಿಯ ಕಾರಣ ಅವನು ತನ್ನಲ್ಲಿ ಸುಪ್ತವಾಗಿದ್ದ ಭಾವೋದ್ರೇಕವನ್ನೆಲ್ಲಾ ಸ್ಪಷ್ಟವಗಿ ವ್ಯಕ್ತಪಡಿಸಿದನು. ಆದರೆ ಆ ಪ್ರೇಯಸಿಯು ಒಂದೇ ವರ್ಷದಲ್ಲಿ ಮೃತಳಾದಳು. ಅವನು ಅವಳ ಸ್ಮರಣಾರ್ಥವಾಗಿ ಸಿಸ್ಟಿಮೆ ಡಿ ಪಾಲಿಟಿಕ್ ಪಾಸಿಟಿವ್ ಎಂಬ ಇನ್ನೊಂದು ಗ್ರಂಥವನ್ನು (1851–1854) ಬರೆದನು. ಅವನು ಪ್ರತಿಪಾದಿಸಿದ ಆ ಯುಗದ ಎಲ್ಲಾ ಸಮಸ್ಯೆಗಳಿಗೆ ಪ್ರೇಮವೇ

ಸರಿಯಾದ ಪರಿಹಾರ ಎಂಬ ತತ್ತ್ವವನ್ನು ಎತ್ತಿಹಿಡಿದ ಆ ಗ್ರಂಥವನ್ನು ಪ್ರಕಟಿಸಿದಾಗ ಅವನ ಹಿಂದಿನ ವೈಚಾರಿಕ ಮಿತ್ರರು ದೂರವಾದರು. 1848ರಲ್ಲಿ ಅವನು ಸ್ಥಾಪಿಸಿದ ಒಂದು ನುತನ ಸಮಾಜವು ಅವನ ಉಪದೇಶಗಳಿಗೆ ಪ್ರಧಾನ ಕೇಂದ್ರವಾಯಿತು. ವ್ಯವಸ್ಥೆ ಮತ್ತು ಪ್ರಗತಿ ಎಂಬುವು ಅದರ ಎರಡು ಗುರಿಗಳಾದುವು. ಅವನು 1857ರ ಸೆಪ್ಟೆಂಬರ್ 5 ರಂದು ಕ್ಯಾನ್ಸರ್ ಕಾಯಿಲೆಗೆ ಬಲಿಯಾದನು.

## ಕಾಂಪ್ಟನ ವಿಚಾರಧಾರೆ

ಜ್ಞಾನೋದಯ ಕಾಲದ ಶಿಶುವಾಗಿದ್ದ ಕಾಂಪ್ಟ್ ಪ್ರಗತಿ, ವ್ಯವಸ್ಥೆ ಹಾಗೂ ಉದಾರವಾದ ಸಂಪ್ರದಾಯಗಳಿಂದ ಪ್ರಭಾವಿತನಾದನು. ಅವನು ಹ್ಯೂಮ್, ಕಾಂಟ್, ಅರಿಸ್ಟಾಟಲ್, ಮಾಂಟೆಸ್ಕ್ಯೂ, ಕಾಂಟರ್‌ಸೆಟ್, ಟರ್ಗಾಟ್, ವಿಕೋ, ಆಡಂಸ್ಮಿತ್ ಮುಂತಾದವರ ಪ್ರಧಾನ ವಿಚಾರಗಳನ್ನು ನೀತಿ ಹಾಗೂ ರಾಜಕೀಯ ದರ್ಶನ, ಇತಿಹಾಸದರ್ಶನ ಮತ್ತು ವಿಶಿಷ್ಟ ಶಾಸ್ತ್ರಗಳ ಇತಿಹಾಸ ಹಾಗೂ ವಿಧಾನಗಳ ಕ್ಷೇತ್ರಗಳ ಕೊಡುಗೆಗಳನ್ನು ಉತ್ತಮವಾಗಿ ಸಂಯೋಜಿಸಿ ದೃಷ್ಟಪ್ರಮಾಣವಾದವನ್ನು ಬೆಳೆಸಿದನು. ಫ್ರೆಂಚ್ ಮಹಾಕ್ರಾಂತಿಯ ಕಾರಣ ಸಮಾಜದಲ್ಲಿ ಉಂಟಾಗಿದ್ದ ಅವ್ಯವಸ್ಥೆ ಹಾಗೂ ಅವನತಿಯ ಸ್ವರೂಪ ಮತ್ತು ಅದಕ್ಕೆ ಕಾರಣಗಳನ್ನು ವಿಶ್ಲೇಷಿಸಿ ಸಮಾಜದ ಪುನರ್ರಚನೆಗೆ ತಕ್ಕ ಕ್ರಮಗಳನ್ನು ಯೋಜಿಸಿ ಅದಕ್ಕೆ ಬೇಕಗಿದ್ದ ಜ್ಞಾನವ್ಯವಸ್ಥೆ ಮತ್ತು ನೈತಿಕ ಮಾರ್ಗದರ್ಶನವನ್ನು ಒದಗಿಸಿ ಕೊಡುವುದೇ ಅವನ ಗುರಿಯಾಗಿದ್ದಿತು. ಅವನ ದೃಷ್ಟಪ್ರಮಾಣವಾದದಲ್ಲಿ ಮೂರು ಪರಸ್ಪರ ಸಂಬಂಧಿತ ವಿಚಾರಗಳು ಪ್ರಧಾನವಾಗಿವೆ: (1) ದೃಷ್ಟಪ್ರಮಾಣ ದರ್ಶನ ಹಾಗೂ ವಿಜ್ಞಾನದ ಕಲ್ಪನೆ, (2) ಮೂರು ಹಂತಗಳ ನಿಯಮ ಮತ್ತು (3) ವಿಜ್ಞಾನಿಗಳ ಶ್ರೇಣಿ ವ್ಯವಸ್ಥೆ.

ಕಾಂಪ್ಟನ ದೃಷ್ಟಿಯಲ್ಲಿ ವೈಜ್ಞಾನಿಕ ಸರ್ವಸಾಮಾನ್ಯ ತತ್ತ್ವಗಳ ವಿಶೇಷ ಅಧ್ಯಯನವಾದ ದೃಷ್ಟ ಪ್ರಮಾಣದರ್ಶನವು ವ್ಯಕ್ತಿಗಳಿಗೆ ಉತ್ತರ ಹೇಳಲು ಸಾಧ್ಯವಾದಂತಹ ಪ್ರಶ್ನೆಗಳಲ್ಲಿ ಮಾತ್ರ ಆಸಕ್ತಿಯನ್ನು ವಹಿಸುತ್ತದೆ. ಅವರ ಅನುಭವ ಕ್ಷೇತ್ರದಾಚೆಗಿರುವ ವಿಷಯಗಳನ್ನು ಕುರಿತ ಪ್ರಶ್ನೆಗಳನ್ನು ಉತ್ತರಿಸುವುದು ಸಾಧ್ಯವಿಲ್ಲ. ದೃಷ್ಟಪ್ರಮಾಣಶಾಸ್ತ್ರವು ಅಧ್ಯಯನ ವಿಷಯಗಳ ನಿಯಮಗಳನ್ನು ಅಂದರೆ ವಾಸ್ತವಾಂಶಗಳು ಪರಸ್ಪರ ಸಂಬಂಧಪಟ್ಟಿರುವ ಕ್ರಮವನ್ನು ಕುರಿತ ಹೇಳಿಕೆಗಳನ್ನು ಕಂಡುಹಿಡಿಯುವುದರಲ್ಲಿ ಆಸಕ್ತವಾಗಿರುತ್ತದೆ. ಸಹಜೀವನ ಮತ್ತು ಅನುಕ್ರಮದ ನಿಯಮಗಳೆಂಬ ಎರಡು ಬಗೆಯ ನಿಯಮಗಳಿವೆ. ಸಹಜೀವನದ ನಿಯಮಗಳು ಅಧ್ಯಯನ ಮಾಡಲಾಗುವ ವಿಷಯಗಳ ಮೂಲಾಂಶಗಳ ಸಾರ್ವತ್ರಿಕವಾಗಿರುವ ಪರಸ್ಪರಾವಲಂಬನಕ್ಕೆ ಸಂಬಂಧಿಸಿರುವ ಹೇಳಿಕೆಗಳಾದರೆ, ಮೂರ್ತ ಐತಿಹಾಸಿಕ ಪರಿವರ್ತನೆಗಳನ್ನು ಕುರಿತ ಹೇಳಿಕೆಗಳು ಅನುಕ್ರಮದ ನಿಯಮಗಳಾಗುತ್ತವೆ. ಅಂದರೆ, ಪ್ರತಿ ಅಧ್ಯಯನ ವಸ್ತುವಿನಲ್ಲೂ ಸ್ಥಿರವಾದ ಹಾಗೂ ಬದಲಾಗುವ ಅಂಶಗಳಿರುತ್ತವೆ. ಪ್ರತಿ ವಿಜ್ಞಾನದಲ್ಲೂ ವಿಷಯಗಳ ಸ್ಥಿರಮುಖವನ್ನು ಅಧ್ಯಯನ ಮಾಡುವ ಸ್ಥಿತಿಶಾಸ್ತ್ರ ಮತ್ತು ಬದಲವಣೆಯ ಮುಖವನ್ನು ಕುರಿತು ವಿಚಾರ ಮಾಡುವ ಗತಿಶಾಸ್ತ್ರ ಎಂಬ ಎರಡು ಶಾಖೆಗಳನ್ನು ಕಾಣಬಹುದು. ಕಾಂಪ್ಟ್ ವಿಷಯವನ್ನು ಐತಿಹಾಸಿಕವಾಗಿ ಅರ್ಥಮಾಡಿಕೊಳ್ಳದಿದ್ದರೆ ಅದನ್ನು ದಾರ್ಶನಿಕವಾಗಿ ಅರಿಯುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದಾಗಿ ಅಭಿಪ್ರಾಯ ಪಟ್ಟನು.

ದೃಷ್ಟಪ್ರಮಾಣವಾದವು ಮೊದಲು ನಿರುಪಾಧಿಕ ಎಂಬುದಾಗಿ ಎಣಿಸಲಾಗಿದ್ದ ಭಾವನೆಗಳನ್ನು ಸಾಪೇಕ್ಷ ಎಂಬುದಾಗಿ ಎಣಿಸಿತು. ಮಾನವ ಬುದ್ಧಿಯ ನಿರಂತರ ಐತಿಹಾಸಿಕ ಬೆಳವಣಿಗೆ ಮತ್ತು ಅದರ ಪ್ರಗತಿಪರ ಗತಿಯನ್ನು ಸ್ಪಷ್ಟಪಡಿಸುವುದೇ ಅದರ ಉದ್ದೇಶ. ಈ ನಿರಂತರ ಬೆಳವಣಿಗೆಯ ಫಲವಾಗಿ ಜೀವನದ ಸುಧಾರಣೆ ಹಾಗೂ ಉತ್ತಮೀಕರಣ ಉಂಟಾಯಿತು.

ಈ ಸಾಮಾನ್ಯ ಬೆಳವಣಿಗೆಯ ಅಧ್ಯಯನದ ಆಧಾರದ ಮೇಲೆ ಕಾಂಪ್ಟ್ ನಮ್ಮ ನಾಗರಿಕತೆ ಹಾಗೂ ಜ್ಞಾನದ ಪ್ರತಿ ಶಾಖೆಯು ಮತೀಯ ಅಥವಾ ಕಾಲ್ಪನಿಕ (ಬಾಲ್ಯ), ಆಧ್ಯಾತ್ಮಿಕ ಅಥವಾ ಅಮೂರ್ತ (ತಾರುಣ್ಯ) ಮತ್ತು ವೈಜ್ಞಾನಿಕ ಅಥವಾ ಪ್ರತ್ಯಕ್ಷ ಪ್ರಮಾಣದ (ಪ್ರೇಮದೆಶೆ) ಹಂತಗಳೆಂಬ ಮೂರು ವಿಭಿನ್ನ ಹಂತಗಳ ಮೂಲಕ ಹಾದು ಹೋಗುತ್ತವೆ ಎಂಬ ಮೂಲಭೂತ ನಿಯಮಗಳನ್ನು ತಾರ್ಕಿಕವಾಗಿ ಅನುಮಾನಿಸಿದನು. ಈ ಬೌದ್ಧಿಕ ಬೆಳವಣಿಗೆಗೆ ಸಮಾನಾಂತರವಾಗಿ ಸಾಮಾಜಿಕ ರಚನೆಯಲ್ಲಿ ಬೆಳವಣಿಗೆ ಉಂಟಾಯಿತು. ಮೊದಲನೆಯ ಹಂತದಲ್ಲಿ ವಸ್ತುಗಳ ಸ್ವರೂಪ, ಕಾರಣ ಇತ್ಯಾದಿಗಳನ್ನು ತಿಳಿಯಲು ಮಾನವನು ಮಾಡಿದ ಪ್ರಯತ್ನದಲ್ಲಿ ಕಲ್ಪನಾಕ್ರಮ ಮುಖ್ಯವಾಗಿದ್ದಿತು. ಅವನು ತನ್ನ ಜೀವನದ ಹಾಗೂ ಪರಿಸರದಲ್ಲಿ ಕಂಡುಬಂದ ಎಲ್ಲಾ ಪರಿವರ್ತನೆ ಹಾಗೂ ಪರಿಣಾಮಗಳಿಗೆ ಅಂತಿಮ ಹಾಗೂ ನೇರ ಕಾರಣ ಅಲೌಕಿಕ ಜೀವಿಗಳೆಂಬುದಾಗಿ ನಂಬಿಕೊಂಡಿದ್ದನು. ಆ ಸಮಯದಲ್ಲಿ ಮಿಲಿಟರಿ ಸಾಮಾಜಿಕ ರಚನೆ ಪ್ರಧಾನವಾಗಿದ್ದಿತು. ಕುಟುಂಬವು ಸಮಾಜದ ಘಟಕವಾಗಿದ್ದಿತು ಮತ್ತು ಪುರೋಹಿತರು ಅತ್ಯಂತ ಪ್ರಬಲರಾಗಿದ್ದರು. ಮಿಲಿಟರಿಯವರು ಜನರನ್ನು ಆಳುತ್ತಿದ್ದರು. ಈ ಹಂತದಲ್ಲಿ ವಸ್ತುಪೂಜೆ, ಬಹುದೇವತಾರಾಧನೆ ಮತ್ತು ಏಕದೇವತಾರಾಧನೆ ಎಂಬುದಾಗಿ ಬೌದ್ಧಿಕ ಬೆಳವಣಿಗೆಯಲ್ಲಿ ಮೂರು ಉಪಹಂತಗಳು ಕಂಡುಬಂದುವು. ಏಕದೇವವಾದವನ್ನು ಎತ್ತಿಹಿಡಿದ ಆಲೋಚನಾ ಪ್ರವೃತ್ತಿಗಳು ಮಾನವರಲ್ಲಿ ತಲೆದೋರಿದ ಮೇಲೆ ಎರಡನೆಯ ಹಂತವು ಆರಂಭವಾಯಿತು.

ಮಾನವನ ಬುದ್ಧಿ, ಚಿಂತನೆ ಹಾಗೂ ಸಾಮಾಜಿಕ ರಚನೆ ಮಾತ್ರವಲ್ಲದೆ, ಪ್ರತಿಶಾಸ್ತ್ರವೂ ಸಹ ಈ ಮೂರು ಹಂತಗಳ ಮೂಲಕ ವಿಕಾಸಹೊಂದಿದೆ. ಕಾಂಪ್ಟನ ವಾದದ ಪ್ರಕಾರ, ಪ್ರಾಕೃತಿಕ ವಿಜ್ಞಾನಗಳ ವಿಧಾನ ಹಾಗೂ ಸಾಧನೆಗಳನ್ನು ವ್ಯಕ್ತಿ ಹಾಗೂ ಸಮಾಜವನ್ನು ಕುರಿತು ಅಧ್ಯಯನಕ್ಕೆ ಅನ್ವಯಮಾಡಬೇಕಾದುದು ಆಗ ಅವಶ್ಯಕವಾಯಿತು. ಆದ್ದರಿಂದ ಅಲ್ಲಿಯವರೆಗೆ ವಿಕಾಸ ಹೊಂದಿದ್ದ ವಿಜ್ಞಾನಗಳನ್ನು (1) ಅವುಗಳ ಐತಿಹಾಸಿಕ ಉದಯ ಹಾಗೂ ಬೆಳವಣಿಗೆಯ ಅನುಕ್ರಮ, (2) ಅವುಗಳ ಪರಸ್ಪರ ಅವಲಂಬನೆಯ ಕ್ರಮ, (3) ಕಡಮೆಯಾಗುತ್ತಿದ್ದ ಅವುಗಳ ಅಧ್ಯಯನ ವಸ್ತುಗಳ ಸರ್ವ ಸಾಮಾನ್ಯತೆ ಮತ್ತು ಹೆಚ್ಚುತ್ತಿದ್ದ ಸಂಕೀರ್ಣತೆಗೆ ಅನುಸಾರವಾಗಿ ಕ್ರಮಬದ್ಧವಾಗಿ ವರ್ಗೀಕರಿಸಬಹುದು. ವಿಭಿನ್ನ ವಿಜ್ಞಾನಗಳು ವಿಭಿನ್ನ ಪ್ರಮಾಣದಲ್ಲಿ ಬೆಳೆಯುತ್ತವೆ. ಆ ಶ್ರೇಣಿ ವ್ಯವಸ್ಥೆಯಲ್ಲಿ ಮೊದಲು ಗಣಿತಶಾಸ್ತ್ರ, ನಂತರ ಕ್ರಮವಾಗಿ ಖಗೋಳವಿಜ್ಞಾನ, ಭೌತಶಾಸ್ತ್ರ, ರಸಾಯನ ವಿಜ್ಞಾನ, ಜೀವಶಾಸ್ತ್ರ ಮತ್ತು ಸಮಾಜಶಾಸ್ತ್ರ ಒಂದರ ಮೇಲೆ ಮತ್ತೊಂದರಂತೆ ಕ್ರಮವಾಗಿ ಇರುತ್ತವೆ. ಸಮಾಜವಿಜ್ಞಾನವು ಹಿಂದಿನ ಎಲ್ಲಾ ಶಾಸ್ತ್ರಗಳ ಸಾಧನೆಗಲಣ್ನು ಬಳಸಿಕೊಳ್ಳುತ್ತದೆ. ವಿಜ್ಞಾನಗಳ ಶ್ರೇಣಿಯಿಂದ ಮಾನವನು ಜಗತ್ತನ್ನು ತಿಳಿಯುವ ಪ್ರಯತ್ನದಲ್ಲಿ ಕಂಡ ವಾಸ್ತವಾಂಶಗಳನ್ನು ವಿವರಿಸುವುದಕ್ಕೆ ಬೇಕಾದ ನಿಯಮಗಳನ್ನು ರೂಪಿಸುವುದಕ್ಕಾಗಿ ವಿಜ್ಞಾನಗಳು ಬೆಳೆದು ಬಂದುವು; ಪ್ರತಿ

ಶಾಸ್ತ್ರಕ್ಕೂ ಸ್ವತಂತ್ರವಾಗಿರುವ ಅಧ್ಯಯನ ಕ್ಷೇತ್ರವಿದೆ ಮತ್ತು ತನಗೆ ವಿಶಿಷ್ಟವಾಗಿರುವ ಅಧ್ಯಯನ ವಿಷಯಗಳಿಗೆ ಅನುಗುಣವಾದ ವಿಧಾನಗಳನ್ನು ಬೆಳೆಸುವುದಕ್ಕೆ ಅವಶ್ಯಕವಾದ ಸ್ವಾತಂತ್ರ್ಯವಿದೆ ಎಂಬುದು ಸ್ಪಷ್ಟವಾಗುತ್ತದೆ. ಸಾಮಾಜಿಕ ವಾಸ್ತವಾಂಶಗಳನ್ನು ನಿಯಮಗಳಿಗೆ ಇಳಿಸಿ ಸಮಗ್ರಜ್ಞಾನ ಸಂಚಯವನ್ನು ಸಂಯೋಜಿಸುವ ಸಮಾಜಶಾಸ್ತ್ರವು ಈ ಶ್ರೇಣಿಯ ವ್ಯವಸ್ಥೆಗೆ ಮುಕುಟಪ್ರಾಯವಾಗಿದೆ ಮತ್ತು ಸಮಾಜದ ಪುನರ್ರಚನೆಗೆ ಬೇಕಾದ ಮಾರ್ಗದರ್ಶನವನ್ನು ನೀಡುವ ಶಾಸ್ತ್ರವಾಗಿದೆ. ಮಾನವಕ್ರಿಯೆ ಹಾಗೂ ಉದ್ದೇಶಗಳನ್ನು ಸಾಮಾಜಿಕವಾಗಿ ನಿಯಂತ್ರಿಸುವುದರ ಅವಶ್ಯಕತೆಯನ್ನು ಎತ್ತಿ ಹಿಡಿದಿರುವುದರ ಮೂಲಕ ಕಾಂಪ್ಟ್ ಸಾಮಾಜಿಕ ಇತಿಹಾಸದ ಬೆಳವಣಿಗೆಗೆ ಅಸ್ತಿಭಾರವನ್ನು ಹಾಕಿದನು. ಸಾಮಾಜಿಕ ವಾಸ್ತವಾಂಶಗಳೆಲ್ಲಾ ಬೇರ್ಪಡಿಸಿಲಾಗದಂತೆ ಪರಸ್ಪರ ಸಂಬಂಧಪಟ್ಟಿವೆ. ಐತಿಹಾಸಿಕ ದೃಷ್ಟಿಕೋನವಿಲ್ಲದೆ ಸಮಕಾಲೀನ ಸಾಮಾಜಿಕ ವಿಷಯಗಳನ್ನು ಅವಲೋಕಿಸಿ ಅರ್ಥಮಾಡಿಕೊಳ್ಳಬಹುದೆಂಬುದು ಭ್ರಮೆ ಎಂಬ ಕಾಂಪ್ಟನ ಅಭಿಪ್ರಾಯ ಸಮಂಜಸವಾದುದು. ಒಟ್ಟಿನಲ್ಲಿ, ಇತಿಹಾಸವನ್ನು ಸ್ಪಷ್ಟವಾಗಿ ವಿವರಿಸುವುದಕ್ಕಾಗಿ ಬೇಕಾದ ನಿಯಮ ಅಥವಾ ಕಾರ್ಯಾತ್ಮಕ ಉಪಕಲ್ಪನೆಗಳನ್ನು ನಿರೂಪಿಸುವುದೇ ದೃಷ್ಟ ಪ್ರಮಾಣವಾದದ ಗುರಿಯಾಗಿದೆ.

ಇಷ್ಟು ಮಾತ್ರವಲ್ಲದೆ, ಕಾಂಪ್ಟ್ ಮುಂದೆ ತಲೆದೋರಬೇಕಾದ ಉತ್ತಮ ಸಮಾಜದ ನಕ್ಷೆಯನ್ನು ವಿವರವಾಗಿ ರೂಪಿಸಿ, ಅದರಲ್ಲಿ ಬ್ಯಾಂಕ್ ಹಾಗೂ ಕೈಗಾರಿಕೆಯ ಪ್ರಮುಖರೂ ಹಾಗೂ ನೂತನ ಮತಧರ್ಮದ ಪುರೋಹಿತರೂ ತಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಬಳಸಿ ಮಾರ್ಗದರ್ಶಕ ಮುಂದಾಳುಗಳಾಗುತ್ತಾರೆ ಎಂಬುದಾಗಿ ಸ್ಪಷ್ಟಪಡಿಸಿದನು. ಅವನು ಎತ್ತಿಹಿಡಿದ ಮನುಷ್ಯೋತ್ಕರ್ಷ ಧರ್ಮದ ಕಲ್ಪನೆಯೂ ಸಹ ಇತರ ಭಾವರೂಪಗಳಂತೆ ಸಾಪೇಕ್ಷವಾದುದು. ಮಾನವ ಕುಲದಲ್ಲಿ ಸಹಾನುಭೂತಿಯುತ ಆಸಕ್ತಿ, ಅತ್ಯುತ್ತಮ ಮಾನವಾದರ್ಶಗಳನ್ನು ಸಾಧಿಸುವ ಹೆಬ್ಬಯಕೆ ಮತ್ತು ಮಾನವ ಹಾಗೂ ಅವನ ಪರಿಸರದ ಪರಿಸ್ಥಿತಿಗಳನ್ನು ಉತ್ತಮಪಡಿಸುವ ಪ್ರಯತ್ನವೇ ಈ ನೂತನ ಧರ್ಮ, ಭಗವಂತದಲ್ಲಿ ಪ್ರೀತಿಗೆ ಬದಲಾಗಿ ಮಾನವ ಜಾತಿಯಲ್ಲಿ ಪ್ರೇಮ ತೋರುವುದೇ ಅದರ ಮುಖ್ಯ ಗುರಿ. ಈ ನೂತನ ರಚನೆಯಲ್ಲಿ ಪ್ರೀತಿಯೇ ತತ್ತ್ವ, ವ್ಯವಸ್ಥೆಯೇ ಆಸ್ತಿಭಾರ ಮತ್ತು ಪ್ರಗತಿಯೇ ಗುರಿ. ಈ ಭೂಗ್ರಹದ ಮೇಲೆ ಈ ಸಾಪೇಕ್ಷ ದೇವರಾಜ್ಯವನ್ನು ಸ್ಥಾಪಿಸುವುದಕ್ಕಾಗಿ ಕಾಂಪ್ಟ್‌ನು ದೇವತಾಶಾಸ್ತ್ರವನ್ನು ಸಮಾಜಶಾಸ್ತ್ರವನ್ನಾಗಿ ದೇವಪ್ರಭುತ್ವವನ್ನು ಸಮಷ್ಟಿ ಪ್ರಭುತ್ವವನ್ನಾಗಿ ಮತ್ತು ಭಗವಂತನ ಆರಾಧನೆಯನ್ನು ಮಾನವ ಕುಲದ ಉಪಾಸನೆಯನ್ನಾಗಿ ಬದಲಾಯಿಸಿದನು.

ಆದರೂ ಕಾಂಪ್ಟನು ನೀಡಿರುವ ಬೌದ್ಧಿಕ ಕೊಡುಗೆಗಳು ಅಮೂಲ್ಯವಾದುವು. ವಿವಿಧ ವಿಜ್ಞಾನಗಳ ಜ್ಞಾನ ಸಂಚಯವು ಸಂಘಟಿತವಾದುದು ಎಂಬ ಅವನ ವಾದವು ಒಪ್ಪತಕ್ಕದ್ದಾಗಿದೆ. ಅವನ ಮೂರು ಹಂತಗಳ ನಿಯಮವು ಜಗತ್ತನ್ನು ಕುರಿತು ವಿಚಾರ ಮಾಡುವ ನೂತನ ಕ್ರಮವನ್ನು ಎತ್ತಿತೋರಿತು ಮತ್ತು ಇತಿಹಾಸದ ವಿವಿಧ ಹಂತಗಳಲ್ಲಿದ್ದ ವ್ಯಕ್ತಿಗಳು ಹೇಗೆ ವಿಭಿನ್ನ ಬಗೆಯಲ್ಲಿ ಸಮಾಜವನ್ನು ವ್ಯವಸ್ಥೆಗೊಳಿಸಿದರು ಎಂಬುದನ್ನು ವಿಶದಪಡಿಸಿತು. ಮಾನವ ವಿಕಾಸವು ನಿರ್ದಿಷ್ಟ ನಿಯಮಗಳ ಅನುಸಾರವಾಗಿ ಮುಂದುವರಿಯುತ್ತದೆ ಎಂಬುದಾಗಿ ಅವನು ನಂಬಿದ್ದನು. ಆದ್ದರಿಂದ ಅವನು ಐತಿಹಾಸಿಕ ಪರೀಕ್ಷಾಕ್ರಮ ಹಾಗೂ ವೈಜ್ಞಾನಿಕ ರೀತಿಯಲ್ಲಿ ಅವುಗಳನ್ನು ಪ್ರತ್ಯೇಕಿಸಿ ಸಮರ್ಥಿಸಬೇಕಾದುದು ಅತ್ಯಾವಶ್ಯಕ ಎಂಬುದಾಗಿ

ಎಣಿಸಿದನು. ಅವನ ಮನುಷ್ಯೋತ್ಕರ್ಷ ಧರ್ಮದ ವಿವರಣೆಯು ಸುಧಾರಣಾ ಪ್ರವೃತ್ತಿಗಳನ್ನು ಪ್ರೋತ್ಸಾಹಿಸಿತಲ್ಲದೆ, ಮಾನವತಾವಾದವೇ ಮುಂತಾದ ಲೌಕಿಕ–ಧಾರ್ಮಿಕ ಚಳವಳಿಗಳಿಗೆ ಪ್ರೇರಕವಾಯಿತು. ಸಮಾಜಶಾಸ್ತ್ರ ಎಂಬ ನೂತನ ವಿಜ್ಞಾನವನ್ನು ಹೆಸರಿಸಿ ಬೆಳಸಿದ್ದುದು ಅವನ ಅತ್ಯುತ್ತಮ ಸಾಧನೆ. ಅದು ಸಮಾಜದಲ್ಲಿ ವ್ಯಕ್ತಿಗಳಿಗಿದ್ದ ಪರಸ್ಪರ ಸಂಬಂಧಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಮತ್ತು ಹೇಗೆ ಇತಿಹಾಸದ ಗತಿಯಲ್ಲಿ ಆ ಸಂಬಂಧಗಳು ಪರಿವರ್ತನೆಗೊಳ್ಳುತ್ತವೆ ಎಂಬುದನ್ನು ಅರಿಯುವುದಕ್ಕೆ ಸಹಾಯ ಮಾಡುತ್ತದೆ. ಇದರೊಂದಿಗೆ ಕಾಂಪ್ಟ್ ಸಾಮಾಜಿಕ ನಿಯಮಗಳನ್ನು ಅನ್ವೇಷಿಸಲು ಇತಿಹಾಸದ ವಿಧಾನಗಳು ಎಷ್ಟು ಮುಖ್ಯ ಎಂಬುದನ್ನು ದೃಢಪಡಿಸಿದನು. ಅವನು ಗಣನೀಯವಾದ ಹಾಗೂ ಬೆಲೆ ಬಾಳುವಂತಹ ಕೊಡುಗೆಗಳನ್ನು ನೀಡಿದ್ದಾನೆ ಎಂಬುದರಲ್ಲಿ ಸಂದೇಹವಿಲ್ಲ.

## 13.4 ಗಿಯಾಂಬಟ್ಟಿಸ್ಟ ವಿಕೋ (1668–1744)

ಇತಿಹಾಸ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಗಳನ್ನು ಕೊಟ್ಟು ಅದು ಬೆಳೆಯುವುದಕ್ಕೆ ಸಹಾಯ ಮಾಡುವ ಮಹಾಕಾರ್ಯದಲ್ಲಿ ಇಟಲಿ ದೇಶವು ಹಿಂದೆ ಬೀಳಲಿಲ್ಲ ಎಂಬುದನ್ನು ಅದರ ವರಪುತ್ರರಾಗಿದ್ದ ವಿಕೋ ಹಾಗೂ ಕ್ರೊಚೆ ತಮ್ಮ ಬರಹಗಳ ಮೂಲಕ ಸಾಬೀತುಪಡಿಸಿದರು.

ಮಾನವಕುಲವನ್ನು ಕುರಿತು ನೂತನ ಶಾಸ್ತ್ರದ ಪ್ರಸಿದ್ಧ ಪ್ರತಿಪಾದಕನಾಗಿದ್ದ ವಿಕೋ ನೇಪಲ್ಸ್ ನಗರದಲ್ಲಿ 1668ರ ಜೂನ್ 23 ರಂದು ಒಬ್ಬ ಬಡ ಪುಸ್ತಕ ವ್ಯಾಪಾರಿಯ ಮಗನಾಗಿ ಹುಟ್ಟಿದನು. ಅವನು ವಿವಿಧ ಶಾಲೆಗಳಲ್ಲಿ ಶಿಕ್ಷಣವನ್ನು ಪಡೆದನು. ಆದರೂ ಸ್ವಪ್ರಯತ್ನದಿಂದ ವಿದ್ಯಾರ್ಜನೆ ಮಾಡಿದ, ಸ್ವಯಂಶಿಕ್ಷಿತ ವ್ಯಕ್ತಿತ್ವ ಅವನದ್ದಾಗಿದ್ದಿತು. ಅವನು ಒಂಭತ್ತು ವರ್ಷಗಳ ಕಾಲ ಇಸ್ಕಿಯಾದ ಪಾದ್ರಿಯ ಸೋದರಳಿಯಂದಿರಿಗೆ ಖಾಸಗಿ ಅಧ್ಯಾಪಕನಾಗಿ ವಿದ್ಯೆಯನ್ನು ಹೇಳಿಕೊಟ್ಟನು. ಮೊಟ್ಟಮೊದಲು ಅವನು ನ್ಯಾಯಶಾಸ್ತ್ರದಲ್ಲಿ ಆಸಕ್ತಿ ವಹಿಸಿ 1694ರಲ್ಲಿ ನೇಪಲ್ಸ್ ವಿಶ್ವವಿದ್ಯಾನಿಲಯದಲ್ಲಿ ನ್ಯಾಯಶಾಸ್ತ್ರದಲ್ಲಿ ಪದವೀಧರನಾದನು. ಆ ಶಾಸ್ತ್ರದ ಬಗ್ಗೆ ಹಲವಾರು ಕೃತಿಗಳನ್ನು ರಚಿಸಿದನು ಮತ್ತು ಆ ವಿಶ್ವವಿದ್ಯಾನಿಲಯದಲ್ಲಿ 1699 ರಿಂದ 1741ರ ವರೆಗೆ ಅಲಂಕಾರಶಾಸ್ತ್ರದ ಪ್ರಾಧ್ಯಾಪಕನಾಗಿ ಸೇವೆ ಸಲ್ಲಿಸಿದನು. ಏತನ್ಮಧ್ಯೆ 1723ರಲ್ಲಿ ಲೌಕಿಕ ನ್ಯಾಯಶಾಸ್ತ್ರದ ಪ್ರಾಚಾರ್ಯನಾಗಲು ಮಾಡಿದ ಪ್ರಯತ್ನ ಯಶಸ್ವಿಯಾಗದಿದ್ದರಿಂದ ಅವನು ಇತಿಹಾಸದ ಅಧ್ಯಯನದಲ್ಲಿ ಆಸಕ್ತಿ ವಹಿಸಲಾರಂಭಿಸಿದನು ಹಾಗೂ ತನ್ನ ಅಂತ್ಯಕಾಲದವರೆಗೆ ನ್ಯೂ ಸೈಎನ್ಸ್ ಕೃತಿಯ ರಚನೆಯಲ್ಲಿ ತೊಡಗಿದನು. 1735ರಲ್ಲಿ ಅವನನ್ನು ನೇಪಲ್ಸ್ ರಾಜಾಸ್ಥಾನದಲ್ಲಿ ಇತಿಹಾಸ ಲೇಖಕನಾಗಿ ನೇಮಿಸಲಾಯಿತು. ಆದರೆ ಅದು ವಿದ್ಯೆಗೆ ತನ್ನನ್ನು ಅರ್ಪಿಸಿಕೊಂಡಿದ್ದ ಮತ್ತು ನಿರಂತರವಾಗಿ ದಾರಿದ್ರ್ಯ, ವೈವಾಹಿಕ ದುರಂತ, ಸಾರ್ವಜನಿಕರ ಅನಾದರಣೆ ಮತ್ತು ಪೋಷಕರ ಮೋಸಕ್ಕೆ ಬಲಿಯಾಗಿದ್ದ ಆ ಮೇಧಾವಿಗೆ ಕಾಲ ಮೀರಿದ ನಂತರ ನೀಡಿದ ಅತ್ಯಲ್ಪ ಸಂಭಾವನೆಯಾಯಿತು. ಅವನು 1744ರ ಜನವರಿ 22–23ರ ನಡುರಾತ್ರಿಯಲ್ಲಿ ನೇಪಲ್ಸ್ ನಗರದಲ್ಲೇ ಮೃತ್ಯುವಶನಾದನು.

## 13.4 ವಿಕೋವಿನ ಕೊಡುಗೆ

ಆ ಕಾಲದ ರೂಢಿಯಂತೆ ಅಲಂಕಾರಶಾಸ್ತ್ರದ ಪ್ರಾಧ್ಯಾಪಕನಾಗಿದ್ದ ವಿಕೋ ಶೈಕ್ಷಣಿಕ ವರ್ಷವನ್ನು ದಿ ಸ್ಟಡೀಸ್ ಆವ್ ಔಅರ್ ಟೈಂ ಎಂಬ ಶಿರೋನಾಮೆಯೊಂದಿಗೆ 1709ರಲ್ಲಿ ಪ್ರಕಟವಾಯಿತು. ಅದನ್ನು ಅನುಸರಿಸಿ ಬಂದ ಇನ್ನೊಂದು ಪ್ರಬಂಧವೇ ಆನ್ ದಿ ಏನ್ಷೆಂಟ್ ವಿಸ್‌ಡಂ ಆವ್ ದಿ ಇಟಾಲಿಯನ್ಸ್, ಅವನು ಆತ್ಮಚರಿತ್ರೆಯನ್ನು ರಚಿಸಿದನಲ್ಲದೆ ಮಾರ್ಷಲ್ ಆಂಟೋನಿಯೊ ಕರಫನ ಜೀವನ ಚರಿತ್ರೆ (1916) ಮತ್ತು ಮೂರು ಸಂಪುಟಗಳಲ್ಲಿ ಯೂನಿವರ್ಸಲ್ ಲಾ ಎಂಬ ಗ್ರಂಥಗಳನ್ನು ಬರೆದನು. ಅವನ ಮೇರುಕೃತಿ ದಿ ನ್ಯೂ ಸೈಎನ್ಸ್ (1725); ಅದರಲ್ಲಿ ಐತಿಹಾಸಿಕ ಪ್ರಕ್ರಿಯೆಯ ಬಗ್ಗೆ ಟ್ಯಾಸಿಟಸನು ನೀಡಿದ ಸೂಕ್ಷ್ಮ ಪರಿಜ್ಞಾನ ಮತ್ತು ಬೇಕನನು ಬೆಳೆಸಿದ ನಿಗಮನ ವಿಧಾನವನ್ನು ಆಕಾಲದ ವಿಭಿನ್ನ ದಾರ್ಶನಿಕವಾದ ಮತ್ತು ಶಾಸ್ತ್ರಗಳೊಂದಿಗೆ ಸಂಯೋಜಿಸಿದನು. ಅವನು ಮಾನವನು ಯಾವಾಗಲೂ ವಿಚಾರವಾದಿಯಾಗಿರುತ್ತಾನೆ ಎಂದು ಹೇಳಿ ಕಲೆ, ಕಾನೂನು ಹಾಗೂ ಇತಿಹಾಸ ಅಷ್ಟೇನೂ ಮುಖ್ಯವಾದುದಲ್ಲ ಎಂಬ ಡೆಕಾರ್ಟನ ಸಿದ್ಧಾಂತವನ್ನು ಒಪ್ಪದೆ ಚರಿತ್ರೆ ಹಾಗೂ ಸಾಮಾಜಿಕ ವಿಕಾಸದ ಬಗ್ಗೆ ಕ್ರಾಂತಿಕಾರಕ ಸಿದ್ಧಾಂತವನ್ನು ಪ್ರತಿಪಾದಿಸಿದನು. ಅವನು ಒಂದೇ ಒಂದು ಅನ್ವೇಷಣಾ ವಿಧಾನ ಸಮಂಜಸವಾದುದು, ಅದನ್ನೇ ಎಲ್ಲಾ ಶಾಸ್ತ್ರಗಳು ಅನುಸರಿಸಬೇಕು ಎಂಬುದು ತಪ್ಪು ಎಂಬುದಾಗಿ ಸಮರ್ಥಿಸಿ, ಇತಿಹಾಸವು ತನ್ನ ಅಧ್ಯಯನ ವಿಷಯಕ್ಕೆ ಅನುಗುಣವಾದ ವಿಧಾನವನ್ನು ಬಳಸಿದರೆ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಬಹುದು ಎಂಬುದಾಗಿ ವಾದಿಸಿದನು. ಐತಿಹಾಸಿಕ ಚಟುವಟಿಕೆಗಳಿಗೂ, ಪ್ರಾಕೃತಿಕ ಜಗತ್ತಿನ ಕ್ರಿಯೆಗಳಿಗೂ ವ್ಯತ್ಯಾಸವಿದೆ. ಇತಿಹಾಸ ರಚನೆಯಲ್ಲಿ ಬಳಸುವ ವಿಷಯ ಸಾಮಗ್ರಿಗಳೂ ಹಾಗೂ ಕಾಲ್ಪನಿಕ ಕಥೆ, ಐತಿಹ್ಯ, ಭಾಷೆ, ಸಂಪ್ರದಾಯ, ದಾಖಲೆ ಮುಂತಾದ ಮೂಲಾಧಾರಗಳು ಕಾಲ–ಕಾಲಕ್ಕೆ, ದೇಶ–ದೇಶಕ್ಕೆ, ಸಮೂಹ–ಸಮೂಹಕ್ಕೆ ಬದಲಾಗುತ್ತಿರುತ್ತವೆ. ಆದ್ದರಿಂದ ಐತಿಹಾಸಿಕ ವಿಷಯಗಳನ್ನು ತಿಳಿಯಲು ಬಳಸುವ ತಂತ್ರಗಳು ಭೌತವಿಜ್ಞಾನಗಳ ಕ್ರಮಗಳಿಂದ ಬೇರೆಯಾಗಿರಬೇಕು.

ಇತಿಹಾಸ ಹಾಗೂ ವಿಧಾನವನ್ನು ಕುರಿತು ವಿಚಾರ ಮಾಡುವಾಗ ವಿಕೋ ತನ್ನ ದಿ ನ್ಯೂ ಸೈಎನ್ಸ್ ಎಂಬ ಕೃತಿಯಲ್ಲಿ ಒಂದು ಪ್ರಶ್ನೆಯನ್ನು ಎತ್ತಿದನು. ಹೇಗೆ ಮೂಲಭೂತವಾಗಿ ಸ್ವಾರ್ಥಿಗಳೂ ಹಾಗೂ ದುಷ್ಟರೂ ಆಗಿರುವ ಮಾನವ ವ್ಯಕ್ತಿಗಲೂ, ಸಮುದಾಯಗಳನ್ನು ಕಟ್ಟಲು ಕಾನೂನಿನ ಆಳ್ವಿಕೆಗೆ ತಲೆಬಾಗಲು ಮತ್ತು ತಮ್ಮ ಹಿತಾರ್ಥವನ್ನಲ್ಲದೆ ಇತರರ ಒಳಿತನ್ನು ಸಾಧಿಸಲು ಸಮರ್ಥರಾಗುತ್ತಾರೆ ಎಂಬುದೇ ಆ ಪ್ರಶ್ನೆ. ಅದಕ್ಕೆ ತಕ್ಕ ಉತ್ತರವನ್ನು ಕೊಡಲು ಯತ್ನಿಸುವಾಗ ಅವನು ಸಾಂಸ್ಕೃತಿಕ ವಸ್ತುಗಳು ಮಾನವ ಪ್ರಜ್ಞೆಯ ಸೃಷ್ಟಿಗಳು, ಗತಕಾಲದಲ್ಲಿ ಮಾನವಬುದ್ಧಿಯ ಕಾರ್ಯಚರಣೆಯು ಇಂದಿನಂತೆಯೇ ಇದ್ದಿತು ಮತ್ತು ವ್ಯಕ್ತಿಗಲು ಮಾನವ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಶಕ್ತರು, ಆ ಕಾರಣ ಆ ಕ್ರಮದಲ್ಲಿ ಪ್ರಾಕೃತಿಕ ವಿಷಯಗಳನ್ನು ಅರಿಯುವುದು ಸಾಧ್ಯವಿಲ್ಲ ಎಂಬ ಮೂರು ಆಧಾರರಹಿತ ಕಲ್ಪನೆಗಳನ್ನು ಪ್ರತಿಪಾದಿಸಿ ಮೂರನೆಯ ಕಲ್ಪನೆಯನ್ನು ಒಪ್ಪಿಕೊಂಡನು; ಅದರ ಫಲವೇ ವ್ಯಕ್ತಿಯು ತಾನು ಸೃಷ್ಟಿಸಿದ್ದುದನ್ನು ಮಾತ್ರ ಅರಿಯಬಲ್ಲ ಎಂಬ ತತ್ತ್ವಪ್ರತಿಪಾದನೆ.

ಹೀಗೆಂದ ಮಾತ್ರಕ್ಕೆ ಹಿಂದಿನ ಮತ್ತು ಇಂದಿನ ಸಮಸ್ಯೆಗಳು ಒಂದೇ ಆಗಿವೆ ಅಥವಾ ಹಿಂದಿನ ಸಮಸ್ಯೆಗಳಿಗೆ ವ್ಯಕ್ತಿಗಳು ನೀಡಿದ ನಿರ್ದಿಷ್ಟ ಉತ್ತರಗಳು ಮತ್ತು ಇಂದಿನ ವ್ಯಕ್ತಿಗಳು ಕೊಡುತ್ತಿರುವ ಉತ್ತರಗಳು ಸಮವಾಗಿವೆ ಎಂದರ್ಥವಲ್ಲ. ಅದಕ್ಕೆ ವಿರುದ್ಧವಾಗಿ ಪ್ರತಿ ಕಾಲದಲ್ಲೂ ವಿಶಿಷ್ಟ ಸಮಸ್ಯೆಗಳಿರುತ್ತವೆ. ಹಿಂದಿನ ಸಂಸ್ಕೃತಿಯಲ್ಲಿ ಕಂಡುಬಂದ ವಿಚಾರ ವಾದದ ಮಟ್ಟಕ್ಕೆ ಅನುಗುಣವಾಗಿ ಆ ಸಮಸ್ಯೆಗಳಿಗೆ ನೀಡಿದ ಪರಿಹಾರಗಳು ವಿಭಿನ್ನವಾಗಿರುತ್ತವೆ. ಪ್ರತಿ ಶಕೆಯಲ್ಲೂ ಅದರದೇ ಆದ ಅವಶ್ಯಕತೆ ಹಾಗೂ ಸಾಮರ್ಥ್ಯಗಳಿರುತ್ತವೆ. ಪ್ರತಿ ಕಾಲದಲ್ಲೂ ಜನರು ತಾವು ಕಲ್ಪಿಸಿಕೊಂಡ ಜಗತ್ತಿನೊಡನೆ ವ್ಯವಹರಿಸುವುದಕ್ಕೆ ಬೇಕಾದ ಸಂಸ್ಥೆ ಹಾಗೂ ಮೌಲ್ಯಗಳನ್ನು ಬೆಳೆಸುತ್ತಾರೆ.

ವಿಕೋವಿನ ಪ್ರಕಾರ, ಎಲ್ಲಾ ರಾಷ್ಟ್ರಗಳಲ್ಲಿ ಅನಾಗರಿಕತೆಯಿಂದ ನಾಗರಿಕತೆಯ ಹಂತಕ್ಕೆ ಆದ ಬೆಳವಣಿಗೆಯಲ್ಲಿ ಆವರ್ತದ ಈ ಮೂಲ ಮಾದರಿಯೇ ಪ್ರಧಾನವಾಗಿದೆ. ಅವನು ಸಮಾಜಗಳು ಪರಸ್ಪರ ಸಾಂಸ್ಕೃತಿಕ ಅಂಶಗಳನ್ನು ಎರವಲು ತೆಗೆದುಕೊಳ್ಳುತ್ತವೆ ಎಂಬುದನ್ನು ಎತ್ತಿ ತೋರಿದನು. ವಿಕಾಸದ ನಿರ್ದಿಷ್ಟ ಹಂತದಲ್ಲಿರುವ ಒಂದು ಸಂಸ್ಕೃತಿಯು ಆ ಸಮಯದಲ್ಲಿ ತನ್ನ ಅವಶ್ಯಕತೆಗಳಿಗೆ ಅನುಗುಣವಾಗಿರುವ ಭಾವನೆ, ಸಂಸ್ಥೆ ಅಥವಾ ಮೌಲ್ಯಗಳನ್ನು ಮಾತ್ರ ಇತರ ಸಂಸ್ಕೃತಿಗಳಿಂದ ತೆಗೆದುಕೊಳ್ಳುತ್ತದೆ. ಅತ್ಯಂತ ಮುಂದುವರಿದಿರುವ ಸಂಸ್ಕೃತಿಗಳೊಂದಿಗೆ ಘರ್ಷಣೆ ಉಂಟಾದಾಗ ರಾಷ್ಟ್ರಗಳ ಬೆಳವಣಿಗೆ ಕುಂಠಿತವಾಗಬಹುದು, ಅವುಗಳು ನಾಶವಾಗಿ ಹೋಗಬಹುದು. ಒಟ್ಟಿನಲ್ಲಿ, ಸಂಸ್ಕ್ರತಿಗಳು ತಮ್ಮ ಬೆಳವಣಿಗೆಯ ಆವರ್ತಗಳಲ್ಲಿ ಒಂದು ನಿರ್ದಿಷ್ಟ ಸಮಯದಲ್ಲಿ ತಮಗೆ ವಿಶಿಷ್ಟವಾಗಿರುವ ಅವಶ್ಯಕತೆ ಹಾಗೂ ಬಯಕೆಗಳಿಗೆ ಅನುಗುಣವಾಗಿ ವಿಕಾಸ ಹೊಂದುತ್ತವೆ. ಇವುಗಳೆಲ್ಲವೂ ಮಾನವನಾವಶ್ಯಕತೆಗಳಿಗೆ ಮತ್ತು ಸಂಸ್ಥಾಯಿಕ ಬಗೆ ಹಾಗೂ ಅಭಿವ್ಯಕ್ತಿ ಕ್ರಮಗಳಿಗೆ ಇರುವ ಸಂಬಂಧಗಳನ್ನು ಎತ್ತಿ ತೋರುತ್ತವೆ

ಒಟ್ಟಿನಲ್ಲಿ ವಿಕೋ ಮಾನವ ಕುಲವು ಕೆಳಮಟ್ಟದಿಂದ ಮೇಲಿನ ಆತ್ಮಪ್ರಜ್ಞೆ ಹಾಗೂ ವಿಚಾರವಾದದ ಹಂತಕ್ಕೆ ಏಕರೇಖಾತ್ಮಕ ಮಾದರಿಯಲ್ಲಿ ವಿಕಾಸ ಹೊಂದಿದೆ ಎಂದು ಅಭಿಪ್ರಾಯವನ್ನು ಒಪ್ಪಲಿಲ್ಲ. ಕಾರಣ ಅನೇಕ ಸಂಸ್ಕೃತಿಗಳಲ್ಲಿ ಎರಡನೆಯ ಹಂತವು ಮೊದಲನೆಯ ಹಂತಕ್ಕಿಂತ ಉತ್ತಮವಾಗಿದ್ದಿತು. ಮೂರನೆಯ (ದಾರ್ಶನಿಕ ಅಥವಾ ವೈಜ್ಞಾನಿಕ) ಹಂತವನ್ನು ಅನುಸರಿಸಿ ಬರುವುದು ಅವನತಿಯ ಕಾಲ, ಮೊದಲು ದೈವ ನಿಯಾಮಕವು ಪ್ರಬಲವಾಗಿ ಸ್ವಾರ್ಥ ಭಾವನೆಗೆ ಬದಲಾಗಿ ನಿಸ್ವಾರ್ಥಹಿತ ಸಾಧನೆಯನ್ನು ಮುಖ್ಯವನ್ನಾಗಿಸುತ್ತದೆ. ಆದರೆ ನೂತನ ವಿಜ್ಞಾನದ ಸಹಾಯದಿಂದ ಎಲ್ಲಾ ಬಗೆಯ ಭೀತಿಯಿಂದ ಮುಕ್ತರಾದ ವ್ಯಕ್ತಿಗಳಲ್ಲಿ ಸ್ವಾರ್ಥ ಮತ್ತು ಸುಖಾನುಭವದ ಇಚ್ಛೆ ಪ್ರಬಲವಾಗಿ ಸಂಸ್ಕೃತಿಯ ವಿಘಟನೆ ಆರಂಭವಾಗುತ್ತದೆ. ಈ ರೀತಿಯಲ್ಲಿ ಮಾನವ ಇತಿಹಾಸದಲ್ಲಿ ವಿಕಾಸವು ಏಕರೇಖಾತ್ಮಕವಾಗಿರುವುದಿಲ್ಲ. ಅದು ಚಕ್ರಗತಿಯ ಮಾದರಿಗಿಂತ ಹೆಚ್ಚಾಗಿ ಸುರುಳಿ–ಸುರುಳಿಯಾಗಿ ಮುಂದುವರಿಯುತ್ತದೆ ಎಂದು ಹೇಳಬಹುದು. ಕಾರಣ ಅದರಲ್ಲಿ ಎರಡು ಹೆಜ್ಜೆ ಮುನ್ನಡೆಯಾದರೆ ಒಂದು ಹಿನ್ನಡೆಯಾಗುತ್ತದೆ. ಈ ಕಲ್ಪನೆಯು ನಂತರದ ಕಾಲದಲ್ಲಿ ಹೆಗಲ್ ಹಾಗೂ ಮಾರ್ಕ್ಸ್ ಬಳಸಿದ ತಾರ್ಕಿಕ ಮಾದರಿಗೆ ಸಮನಾಗಿದೆ. ವ್ಯಕ್ತಿಯು ಭೌತಿಕ ಪ್ರಕ್ರಿಯೆ ಅಥವಾ ದೇವ ಸಂಕಲ್ಪದ ಫಲದಲ್ಲಿ ತನ್ನ ನಿಯತಿಯನ್ನು ತಾನೇ ಸೃಷ್ಟಿಸಿಕೊಳ್ಳುವ ಸ್ವತಂತ್ರ ಜೀವಿ ಎಂಬುದಾಗಿ ವಿಕೋ ಸ್ಪಷ್ಟಪಡಿಸಿದನು. ಅವನ ವಿಚಾರಧಾರೆಯು ಮುಂದೆ 18ನೆಯ ಶತಮಾನದ ರೊಮ್ಯಾಂಟಿಕ್ ಪಂಥದ

ಮಾದರಿಯನ್ನು ಸರಿಪಡಿಸಿ, ಸಂಯೋಜಿಸಿ ಪರಿವರ್ತಿಸಿದಂತಹ ಐತಿಹಾಸಿಕ ವಿವರಣೆ ಹಾಗೂ ಸಿದ್ಧಾಂತಗಳ ಸೃಷ್ಟಿ ಮಾಡಿತು.

ವಿಚಾರ ಹಾಗೂ ಅಧ್ಯಯನ ಕ್ರಮಗಳ ವಿಚಾರದಲ್ಲಿ ಅವನು ಆ ಕಾಲಕ್ಕಿಂತ ಬಹು ಮುಂದಿದ್ದರಿಂದ ಅವನು ತನ್ನ ಸಮಕಾಲೀನರ ಮೇಲ ಅಷ್ಟು ಪ್ರಭಾವ ಬೀರುವುದು ಸಾಧ್ಯವಾಗಲಿಲ್ಲ. 19ನೆಯ ಶತಮಾನದಲ್ಲಿ ಮುಖ್ಯವಾಗಿ ಮೆಕೈಲಟನು ಅವನ ಕೃತಿಗಳನ್ನು ಜನಪ್ರಿಯಗೊಳಿಸಿದ ಮೇಲೆ ಅವನು ಅತ್ಯಂತ ಸುಪ್ರಸಿದ್ಧನಾದನು. 19ನೆಯ ಶತಮಾನದ ಸಾಮಾಜಿಕ ಹಾಗೂ ಸಾಹಿತ್ಯಾತ್ಮಕ ಸಿದ್ಧಾಂತಗಳ ಮೇಲೆ ಅವನು ಬೀರಿದ ಪ್ರಭಾವ ಅತ್ಯಂತ ಗಾಢವಾಗಿದ್ದಿತು. ಗಟೆ, ಮ್ಯಾಸಿನಿ, ಕೋಲ್‌ರಿಡ್ಜ್, ಥಾಮಸ್ ಆರ್ನಾಲ್ಡ್, ಮಾರ್ಕ್ಸ್ ಮತ್ತು ಎಂಜಲ್ಸ್ ಮುಂತಾದವರೆಲ್ಲರೂ ತಾವು ಅವನಿಗೆ ಋಣಿಗಳಾಗಿರುವುದಾಗಿ ಹೇಳಿಕೊಂಡಿದ್ದಾರೆ. ಈ ಶತಮಾನದಲ್ಲಿ ಅವನು ವಿವಿಧ ಶಾಸ್ತ್ರಕ್ಷೇತ್ರಗಳ ಪ್ರಧಾನ ಚಿಂತಕರ ಮೇಲೆ ಇನ್ನೂ ಹೆಚ್ಚಿನ ಪ್ರಭಾವವನ್ನು ಬೀರಿದ್ದಾನೆ ಎಂದು ಹೇಳಬಹುದು. ಉದಾಹರಣೆಗೆ, ತತ್ತ್ವಶಾಸ್ತ್ರರಂಗದಲ್ಲಿ ಕ್ರೊಚೆ ಹಾಗೂ ಕಾಲಿಂಗ್‌ವುಡ್, ಸಾಹಿತ್ಯ ಕ್ಷೇತ್ರದಲ್ಲಿ ಜೇಮ್ಸ್, ಇತಿಹಾಸ ಲೇಖನ ಕಲಾರಂಗದಲ್ಲಿ ಟಾಯ್ನಬಿ, ಸಾಮಾಜಿಕ ವಿಜ್ಞಾನ ಕ್ಷೇತ್ರದಲ್ಲಿ ಪ್ಯಾರೆಟೊ ಹಾಗೂ ಸೋರೋಕಿನ್, ಸಾಹಿತ್ಯ ವಿಮರ್ಶೆಯಲ್ಲಿ ಎಡ್‌ಮಂಡ್ ವಿಲ್ಸನ್ ಮುಂತಾದವರು ಅವನಿಂದ ಬಹುವಾಗಿ ಪ್ರಭಾವಿತರಾಗಿದ್ದಾರೆ. ಇಂದು ಅವನ ಆತ್ಮಚರಿತ್ರೆ ಬಹುವಾಗಿ ಮೆಚ್ಚಿಗೆಗೆ ಪಾತ್ರವಾಗಿದೆ. ಅದರಲ್ಲಿ ಅವನು ತನ್ನ ಬೌದ್ಧಿಕ ವಿಕಾಸವನ್ನು ವಿಶ್ಲೇಷಿಸುವಾಗ ತನ್ನ ನೂತನ ವಿಜ್ಞಾನ ಕೃತಿಯಲ್ಲಿ ಪ್ರತಿಪಾದಿಸಿರುವ ತತ್ತ್ವಗಳನ್ನು ಬಳಸಿರುವುದನ್ನು ಕಾಣಬಹುದು. ಒಂದು ಕಡೆ ಇತಿಹಾಸವನ್ನು ಮತ್ತೊಂದು ಕಡೆ ಸಾಮಾಜಿಕ ವಿಜ್ಞಾನಗಳನ್ನು ಒಮ್ಮುಖವಾಗುವಂತೆ ಹಾಗೂ ಪರಸ್ಪರ ವ್ಯಾಪ್ತವಾಗುವಂತೆ ಮಾಡಿ ಆ ಮೂಲಕ ಮಾನವ ಕುಲವನ್ನು ಕುರಿತ ಶಾಸ್ತ್ರವನ್ನು ಬೆಳೆಸಲು ಶ್ರಮಿಸಿದನು. ನಿಸ್ಸಂದೇಹವಾಗಿ ವಿಕೋ ಆಧುನಿಕಕಾಲದಲ್ಲಿ ಇತಿಹಾಸದ ಪರಿಮಾಣಗಳನ್ನು ವಿಸ್ತರಿಸಿ, ಅದಕ್ಕೆ ನೂತನ ಸಂಶೋಧನಾ ವಿಧಾನವನ್ನು ಕಾಣಿಕೆಯಾಗಿ ನೀಡಿದ ಅತ್ಯುತ್ತಮ ಚಿಂತಕನಾಗಿದ್ದಾನೆ.

### 13.4.1 ಬೆನಡೆಟ್ಟೊ ಕ್ರೊಚೆ (1866–1952)

ಇಟಲಿ ದೇಶದ ಇನ್ನೊಬ್ಬ ಹೆಮ್ಮೆಯ ದಾರ್ಶನಿಕ ಹಾಗೂ ಬರಹಗಾರ ಕ್ರೊಚೆ. ಪ್ರಪಂಚದ ಒಂದನೆಯ ಮಹಾಯುದ್ಧದ ಸಮಯದಿಂದ 20ನೆಯ ಶತಮಾನದ ಮಧ್ಯಭಾಗದವರೆಗೆ ಇಟಲಿಯ ಬೌದ್ಧಿಕ ಜೀವನಕ್ಷೇತ್ರದಲ್ಲಿ ಪ್ರಧಾನ ವ್ಯಕ್ತಿಯಾಗಿದ್ದ ಅವನು 1866ರ ಫೆಬ್ರವರಿ 25 ರಂದು ಅಕ್ವಿಲಾ ಪ್ರಾಂತ್ಯದಲ್ಲಿದ್ದ ಪೆಸ್ಕಾಸರೋಲಿ ಎಂಬ ಸಣ್ಣ ಪಟ್ಟಣದಲ್ಲಿ ಒಂದು ಧನಿಕ ಕ್ಯಾತೊಲಿಕ್ ಹಾಗೂ ಸಂಪ್ರದಾಯಬದ್ಧ ಕುಟುಂಬದಲ್ಲಿ ಏಕಮಾತ್ರ ಪುತ್ರನಾಗಿ ಜನಿಸಿದನು. ಅವನ ಕುಟುಂಬವು ನೇಪಲ್ಸ್‌ಗೆ ಬಂದು ನೆಲಸಿದ್ದರಿಂದ ಅವನು ಅಲ್ಲಿನ ಕ್ಯಾತೊಲಿಕ್ ಶಾಲೆಯಲ್ಲಿ ಶಿಕ್ಷಣ ಪಡೆದನು. 1883 ಅವನಿಗೆ ದುರಾದೃಷ್ಟದ ವರ್ಷವಾಗಿದ್ದಿತು. ಕಾರಣ ಭೂಕಂಪದಲ್ಲಿ ಅವನ ತಂದೆ–ತಾಯಿಗಳು ಸಾವಿಗೀಡಾದರಲ್ಲದೆ, ಅವನ ಮೂಳೆಗಳು ಮುರಿದು ಅವನು ಬಹಳ ದಿನಗಳವರೆಗೆ ಹಾಸಿಗೆ ಹಿಡಿಯಬೇಕಾಯಿತು. ಈ ದೌರ್ಭಾಗ್ಯವು ಅವನಿಗೆ ವರವೇ ಆಯಿತು. ಕಾರಣ ಅವನು ಆ ಸಮಯದಲ್ಲಿ ವ್ಯಾಸಂಗ ಮಾಡಿ ಪಾಂಡಿತ್ಯವನ್ನು ಗಳಿಸಿಕೊಂಡನು ಮತ್ತು ತನಗೆ ಬಂದ

ಆಸ್ತಿಯನ್ನು ಬಳಸಿ ಪುಸ್ತಕಗಳನ್ನು ಕೊಂಡು, ಇಟಲಿಯ ಅತ್ಯುತ್ತಮ ಗ್ರಂಥಭಂಡಾರವನ್ನು ಬೆಳೆಸಿದನು. ಅವನು ರೋಮ್‌ನಲ್ಲಿ ತಕ್ಕ ಚಿಕ್ಕಪ್ಪನೊಡನೆ ಇದ್ದು ಅಲ್ಲಿಯ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿದ್ದನಾದರೂ, ಅಲ್ಲಿ ತನ್ನ ಶಿಕ್ಷಣವನ್ನು ಮುಂದುವರಿಸಲಿಲ್ಲ. 1886ರಲ್ಲಿ ನೇಪಲ್ಸ್‌ಗೆ ಹಿಂದಿರುಗಿ ಅವನು ಸ್ಥಳೀಯ ಇತಿಹಾಸ ಹಾಗೂ ಪುರಾತನ ಅವಶೇಷ, ಸಂಪ್ರದಾಯಗಳ ಅನ್ವೇಷಣೆಯಲ್ಲಿ ತೊಡಗಿದನು. 1893 ಹಾಗೂ 1895ರಲ್ಲಿ ಇತಿಹಾಸದ ಸ್ವರೂಪ ಮತ್ತು ಸಾಹಿತ್ಯ ವಿಮರ್ಶೆ ವಿಧಾನವನ್ನು ಕುರಿತು ಬರೆದ ಎರಡು ಪ್ರಬಂಧಗಳು ಇತಿಹಾಸ ದರ್ಶನಕ್ಕೆ ಅವನು ನೀಡಿದ ಪ್ರಥಮ ಕೊಡುಗೆಗಳಾದುವು ಹಾಗೂ 1900 ಹಾಗೂ 1905ರಲ್ಲಿ ಸಿದ್ಧಪಡಿಸಿದ ಲೇಖನಗಳಲ್ಲಿ ಮೊದಲಿನ ಪ್ರಬಂಧಗಳಲ್ಲಿ ಮಂಡಿಸಿದ್ದ ವಿಷಯಗಳನ್ನು ವಿಶದಪಡಿಸಿದನು. 1896 ಹಾಗೂ 1900ರ ನಡುವಿನ ವರ್ಷಗಳಲ್ಲಿ ಅವನು ಮಾರ್ಕ್ಸ್‌ನ ಆರ್ಥಿಕ ಸಿದ್ಧಾಂತದ ಬಗ್ಗೆ ಹಲವಾರು ಪ್ರಬಂಧಗಳನ್ನು ಪ್ರಕಟಿಸಿದನು ಮತ್ತು 1902ರಲ್ಲಿ "ಫಿಲಾಸೊಫಿ ಆವ್ ದಿ ಸ್ಪಿರಿಟ್" ಎಂಬ ಗ್ರಂಥ ರಚಿಸಿದನು. ಇದರಲ್ಲಿ ಸೌಂದರ್ಯ ತತ್ತ್ವಶಾಸ್ತ್ರ, ತರ್ಕಶಾಸ್ತ್ರ, ನೀತಿಶಾಸ್ತ್ರ, ಹಾಗೂ ಅರ್ಥಶಾಸ್ತ್ರಗಳಿದ್ದುವು. ಈ ಕಾರಣ ಕ್ರೊಚೆಯನ್ನು 'ದಾರ್ಶನಿಕ' ಎನ್ನುವಂತಾಯಿತು.

1903ರಲ್ಲಿ ಕ್ರೊಚೆಯು "ಲಾಕ್ರಿಟಿಕ" ಎಂಬ ನಿಯತಕಾಲಿಕವನ್ನು ಆರಂಭಿಸಿದನು. ಅದೇ ಸಮಯದಲ್ಲಿ ಅವನು ಯೂರೋಪಿನಲ್ಲಿ ಪ್ರಕಟವಾಗಿದ್ದ ಮುಖ್ಯವಾಗಿದ್ದ ಎಲ್ಲಾ ಇತಿಹಾಸ, ದರ್ಶನ ಹಾಗೂ ಸಾಹಿತ್ಯ, ಕೃತಿಗಳ ವಿಮರ್ಶೆ ಮಾಡಿದನು. ಜೀವನ ಪೂರ್ತಿ ವಿದ್ಯಾರ್ಥಿಯೂ ಹಾಗೂ ಸಾಹಿತ್ಯ ಪ್ರೇಮಿಯೂ ಆಗಿದ್ದಲ ಅವನು ಅನಿರೀಕ್ಷಿತವಾಗಿ ರಾಜಕೀಯ ರಂಗವನ್ನು ಪ್ರವೇಶಿಸಿದನು. ಅವನು 1910ರಲ್ಲಿ ಶಾಶನ ಸಭೆಯ ಸದಸ್ಯನೂ, 1920–21ರಲ್ಲಿ ಶಿಕ್ಷಣ ಮಂತ್ರಿಯೂ ಆದನು ಮತ್ತು 1925ರಲ್ಲಿ ಫ್ಯಾಸಿಸ್ಟ್ ಪಕ್ಷದ ವಿರುದ್ಧವಾಗಿ ಒಂದು ಘೋಷಣೆಯನ್ನು ಸಿದ್ಧಪಡಿಸಿದನು. ಅದರ ಫಲವಾಗಿ 1926ರಲ್ಲಿ ಫ್ಯಾಸಿಸ್ಟ್ ಪಕ್ಷದವರು ಅವನ ಮನೆಯ ಮೇಲೆ ದಾಳಿ ಮಾಡಿದರು. ಅವನ ಪಾಂಡಿತ್ಯದ ಮೇಲಿದ್ದ ಗೌರವ ಹಾಗೂ ಪ್ರಖ್ಯಾತಿಯ ಬಗ್ಗೆ ಇದ್ದ ಭೀತಿಯ ಕಾರಣ, ಮುಸೋಲಿನಿಯು ಅವನು ಮುಂದೆ ಯಾವುದನ್ನೂ ಬರೆದು ಪ್ರಕಟಿಸದಿರುವಂತೆ ನಿಷೇಧಿಸುವ ಧೈರ್ಯ ಮಾಡಲಿಲ್ಲ. 1943 ರಲ್ಲಿ ಕ್ರೊಚೆ ಉದಾರ ಪಕ್ಷವೊಂದನ್ನು ಕಟ್ಟಿ ಅದರ ಅಧ್ಯಕ್ಷನಾದನು. ಅವನು 1944ರಲ್ಲಿ ಇಲಾಖೆ ಇಲ್ಲದ ಮಂತ್ರಿಯೂ, 1945 ಮತ್ತು 1946–47ರಲ್ಲಿ ಕ್ರಮವಾಗಿ ಸಲಹಾ ಮಂಡಲಿಯ ಮತ್ತು ರಾಜ್ಯ ವ್ಯವಸ್ಥಾ ಸಭೆಯ ಸದಸ್ಯನೂ ಆದನು. 1947ರಲ್ಲಿ ಕ್ರಮವಾಗಿ ಸಲಹಾ ಮಂಡಲಿಯ ಮತ್ತು ರಾಜ್ಯ ವ್ಯವಸ್ಥಾ ಸಭೆಯ ಸದಸ್ಯನೂ ಆದನು. 1947ರಲ್ಲಿ ಅವನು ನೇಪಲ್ಸ್‌ನಲ್ಲಿ ತನ್ನ ಮನೆಯ ಮುಂದೆ ಒಂದು ಭಾಗದಲ್ಲಿ ಇತಿಹಾಸ ಅಧ್ಯಯನಗಳಲ್ಲಿ ಇಟಲಿಯ ಸಂಸ್ಥೆಯನ್ನು ಸ್ಥಾಪಿಸಿದನು. ಅದೇ ಒಂದು ದಶಕದಲ್ಲಿ ಕ್ರೊಚೆಯ ಸಂಪ್ರದಾಯಕ್ಕನುಸಾರವಾಗಿ ಅನೇಕ ಗಮನಾರ್ಹ ಕೃತಿಗಳನ್ನು ಹೊರತಂದಿತು. ಕ್ರೊಚೆಯು 1952ರ ನವೆಂಬರ್ 20 ರಂದು ನಿಧನನಾದನು.

### 13.5.1 ಕ್ರೋಚೆಯ ಕೊಡುಗೆಗಳು

ಇತಿಹಾಸ, ಸಾಹಿತ್ಯ ವಿಮರ್ಶೆ, ಮುಖ್ಯವಾಗಿ ನೀತಿಶಾಸ್ತ್ರ, ಸೌಂದರ್ಯ ಶಾಸ್ತ್ರ ಮತ್ತು ಇತಿಹಾಸ ದರ್ಶನದ ಬಗ್ಗೆ ಅರವತ್ತಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿದ ಕ್ರೊಚೆಯು ಬಹುವಾಗಿ ವಿಕೋವಿನ ಪ್ರಭಾವಕ್ಕೆ

ಒಳಗಾದನು; ಆದರೂ ಸ್ವಂತಿಕೆಯಿಂದ ಕೂಡಿದ್ದ ವಿಚಾರಧಾರೆಗಳನ್ನು ನೀಡಿದನು. ಅವನ ದೃಷ್ಟಿಯಲ್ಲಿ ಮಾನವ ಅನುಭವವನ್ನು ಹೊರತಾಗಿ ಮತ್ತಾವ ವಸ್ತುಸ್ಥಿತಿಯೂ ಇಲ್ಲ; ಅದೇ ಜ್ಞಾನಕ್ಕೆ ಅತ್ಯುತ್ತಮ ಮೂಲಾಧಾರವಾಗುತ್ತದೆ. ಇತಿಹಾಸ ದಾರ್ಶನಿಕವಾಗಿದ್ದ ಅವನು ಜರ್ಮನಿಯ ತನ್ನ ಹಿಂದಿನ ಹಾಗೂ ಸಮಕಾಲೀನ ಪಂಡಿತರನ್ನು ಕಂಗೆಡಿಸಿದ್ದ ಅನೇಕ ಸಮಸ್ಯೆಗಳನ್ನು ಕಡೆಗಣಿಸಿ, ವಿಜ್ಞಾನ, ಇತಿಹಾಸ ಹಾಗೂ ದರ್ಶನದ ಕ್ಷೇತ್ರಗಳನ್ನು ಪ್ರತ್ಯೇಕಿಸಿದನು. ಅವನು ಹೆಗಲ್‌ನಂತೆ ದರ್ಶನವನ್ನು ಚರಿತ್ರೆಯ ಮೇಲೆ ಹೇರುವುದಕ್ಕೆ ಬದಲಾಗಿ ಅದನ್ನು ಚರಿತ್ರೆಯೊಳಕ್ಕೆ ಒಂದು ಭಾಗವಾಗಿ ಸೇರಿಸಿದನು ಮತ್ತು ಇತಿಹಾಸದ ವಿಧಾನಶಾಸ್ತ್ರವನ್ನು ರೂಪಿಸುವುದೇ ಅದರ ಕಾರ್ಯವೆಂಬುದಾಗಿ ಹೇಳಿದನು. ಅವನು ಈ ದಾರ್ಶನಿಕ ಬಗೆಯ ಇತಿಹಾಸವು ಪ್ರಧಾನವಾದುದು ಮತ್ತು ಇತಿಹಾಸಕಾರನು ಬಳಸುವ ತರ್ಕ ಮತ್ತು ತನ್ನ ಚಿತ್ತದಲ್ಲಿ ಹಿಂದಿನ ಪೀಳಿಗೆಯವರ ವಿಚಾರ ಹಾಗೂ ಕ್ರಿಯೆಗಳ ಚಿತ್ರವನ್ನು ಪುನರ್ರಚಿಸುವ ಕೌಶಲದಲ್ಲಿ ಚರಿತ್ರೆಯ ಸತ್ಯವನ್ನು ಕಾಣಬಹುದು ಎಂಬುದಾಗಿ ಅಭಿಪ್ರಾಯ ಪಟ್ಟನು.

ನಂತರ ಕ್ರೊಚೆಯು ಮಾನವನ ಪ್ರಗತಿಗೆ ಕಾರಣವಾಗಿರುವ ಈ ನಾಲ್ಕು ಮೂಲಭೂತ ಶಕ್ತಿಗಳು ಹೇಗೆ ಚರಿತ್ರೆಗೆ ಅವಶ್ಯಕವಾಗಿವೆ ಎಂಬುದನ್ನು ವಿವರಿಸಲು ಯತ್ನಿಸಿದನು. ಅವನ ಪ್ರಕಾರ, ಕಲೆ ಅಥವಾ ರಸಶಾಸ್ತ್ರವು ಜ್ಞಾನದ ಮೊದಲ ರೂಪ. ಕಾರಣ ಮಾನವನು ಈ ಜಗತ್ತನ್ನು ತಾರ್ಕಿಕವಾಗಿ ತಿಳಿಯುವುದಕ್ಕೆ ಮೊದಲೇ ತನ್ನ ಕಲಾ ಸಾಮರ್ಥ್ಯಗಳನ್ನು ಪ್ರದರ್ಶಿಸಿದ್ದಾನೆ. ಉದಾಹರಣೆಗೆ, ಮಗುವು ಒಂದು ಕಾಗದದ ಮೇಲೆ ಏನನ್ನೋ ಗೀಚಿ ತಾನು ಒಂದು ಪಕ್ಷಿಯನ್ನೋ ಅಥವ ಪ್ರಾಣಿಯನ್ನೋ ಬರೆದಿರುವುದಾಗಿ ಹೇಳಿಕೊಳ್ಳುತ್ತದೆ. ಪೂರ್ವೇತಿಹಾಸ ಕಾಲದ ಗುಹೆವಾಸಿಯು ಶಿಲೆಗಳ ಮೇಲೆ ಚಿತ್ರಗಳನ್ನು ಬಿಡಿಸಿ ತನ್ನ ಕಲಾ ಕೌಶಲ್ಯವನ್ನು ಪ್ರದರ್ಶಿಸಿದ್ದಾನೆ. ಇಂದಿನ ಪೀಳಿಗೆಯವರಿಗೆ ಸಿಕ್ಕಿರುವ ಗತಕಾಲದ ಅಮೂಲ್ಯ ನಿಧಿ ಎಂದರೆ ಕಲಾಸಂಪತ್ತು, ಕಲ್ಪನೆಯ ಸಹಾಯದಿಂದ ಮತ್ತು ಬುದ್ಧಿಶಕ್ತಿಯ ಮೂಲಕ ಗಳಿಸುವ ಜ್ಞಾನ ಕ್ಷೇತ್ರದಲ್ಲಿ ಎರಡು ಬಗೆಗಳನ್ನು ಕಾಣಬಹುದು. ಕಲೆಯಲ್ಲಿ ಕಲ್ಪನಾ ಕ್ರಮವು ಪ್ರಧಾನವಾದುದು. ಇತಿಹಾಸಕ್ಕೂ ಹಾಗೂ ಕಲೆಗೂ ಅನ್ಯೋನ್ಯ ಸಂಬಂಧವಿದೆ. ಕಾರಣ ಕಲೆಯಂತೆ ಮತ್ತಾವ ಮಾಧ್ಯಮವೂ ಗತಕಾಲದ ವೈಭವದ ಇಷ್ಟು ಸ್ಪಷ್ಟ ಪ್ರತಿಬಿಂಬವನ್ನು ತೋರುವುದಿಲ್ಲ. ಇತಿಹಾಸವೂ ಸಂಗೀತ, ಸಾಹಿತ್ಯ, ಚಿತ್ರಕಲೆ ಹಾಗೂ ಶಿಲ್ಪಕಲೆ ಮುಂತಾದ ಕಲೆ ಬಗೆಗಳಿಗಿಂತ ವಿಭಿನ್ನವಾಗಿದ್ದರೂ ಅದೂ ಸಹ ಕಲೆಯೇ ಆಗಿದೆ. ಮೂಲಾಧಾರಗಳನ್ನು ಬಳಸಿ ಕಲ್ಪನಾ ಕ್ರಮದ ಮೂಲಕ ಗತಕಾಲವನ್ನು ಪುನರ್ರಚಿಸುವ ಪರ್ಯಾಲೋಚಕ ಶಕ್ತಿ ಮತ್ತು ಸೊಗಸಾದ ನಿರೂಪಣೆಯಲ್ಲಿ ಇತಿಹಾಸವು ಕಲೆಯಾಗಿದೆ ಎಂಬುದು ತಿಳಿದುಬರುತ್ತದೆ. ಅದು ಅಸಮಾನ ಘಟನೆ ಹಾಗೂ ವ್ಯಕ್ತಿತ್ವಗಳನ್ನು ಕುರಿತು ವಿಚಾರ ಮಾಡುವುದರಿಂದ ಅದೂ ಕಲೆಯೇ ಆಗುತ್ತದೆ ಎಂದು ಹೇಳಬಹುದು.

ನಿಸ್ಸಂದೇಹವಾಗಿ ಕ್ರೊಚೆ 20ನೆಯ ಶತಮಾನದ ಆದರ್ಶ ಹಂತದ ಅತಿ ಮುಖ್ಯವಾದ ಪ್ರತಿನಿದಿ–ಯಾಗಿದ್ದಾನೆ. ಆದ್ದರಿಂದ ಅವನ ಸಿದ್ಧಾಂತದಲ್ಲಿ ಆದರ್ಶವಾದದ ಹಲವಾರು ದೋಷಗಳನ್ನು ನೋಡಬಹುದು. ಅದರಲ್ಲಿ ವಿಜ್ಞಾನವನ್ನು ತೃಣೀಕರಿಸುವ ಪ್ರವೃತ್ತಿ ಕಂಡುಬರುತ್ತದೆ ಮತ್ತು ವಿಷಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಇತಿಹಾಸಕಾರನು ಅನುಸರಿಸುವ ಪ್ರಕ್ರಿಯೆಗಳ ಬಗ್ಗೆ ಸ್ಪಷ್ಟವಾದ ವಿವರಣೆ ಇಲ್ಲ. ಈ ಸಂದರ್ಭದಲ್ಲಿ ಕ್ರೊಚೆಗೆ 20ನೆಯ ಶತಮಾನದ ವಿಜ್ಞಾನ ದರ್ಶನದ ಬಗ್ಗೆ ಏನೂ ತಿಳಿದಿರಲಿಲ್ಲ.

ಅವನು ಫ್ರಾಯ್ಡ್ ಮತ್ತು ಮ್ಯಾಕ್ಸ್ ವೆಬರ್‌ರವರಂತಹ ಪ್ರಧಾನರಾಗಿದ್ದ ಸಮಕಾಲೀನರ ಕೃತಿಗಳಿಗೆ ಗಮನವನ್ನು ಕೊಡಲಿಲ್ಲ ಎಂಬುದು ಗಮನಾರ್ಹವಾಗಿದೆ. ವಾಸ್ತವಿಕವಾದ ಗತಕಾಲವನ್ನು ಕಂಡುಹಿಡಿಯುವುದು ಅಷ್ಟು ಸುಲಭವಲ್ಲ ಎಂಬುದನ್ನು ಅವನು ಒಪ್ಪಿಕೊಂಡನು. ಪ್ರತಿ ಇತಿಹಾಸವು ಸಮಕಾಲೀನ ಚರಿತ್ರೆಯಾಗಿರುತ್ತದೆ ಎಂಬ ಅವನ ಹೇಳಿಕೆಯು ಅತ್ಯಂತ ಅರ್ಥಗರ್ಭಿತವಾಗಿದೆ. ಕಾರಣ ಅದು ಇತಿಹಾಸ ವಿಷಯಗಳು ಸಮಕಾಲೀನ ಸಮಾಜಕ್ಕೆ ಸುಸಂಬದ್ಧವಾಗಿವೆ ಎಂಬುದನ್ನು ತೊರುವುದರ ಮೂಲಕ ಇತಿಹಾಸ ರಚನೆಯನ್ನು ಕೇವಲ ಪ್ರಾಚೀನಾನ್ವೇಷಣೆಗೆ ಸೀಮಿತಗೊಳಿಸದೆ ಅದನ್ನು ಇನ್ನೂ ಮೇಲ್ಮಟ್ಟಕ್ಕೆ ತರಬಹುದು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆದರೂ ಇದರಿಂದ ಸಮಸ್ಯೆಯೊಂದು ತಲೆದೋರಿತು. ಕ್ರೋಚೆಯು ತನ್ನ ಜೀವನದ ಕೊನೆಯ ಕಾಲದಲ್ಲಿ ಮೌಲ್ಯ ಹಾಗೂ ನೈತಿಕ ರಾಜಕೀಯ ಚರಿತ್ರೆಯಲ್ಲಿ ಬೆಳೆಸಿಕೊಂಡ ಆಸಕ್ತಿಯ ಕಾರಣ, ಸಾಂಪ್ರದಾಯಿಕವಾದ ಆದರ್ಶಾತ್ಮಕ ಇತಿಹಾಸ ಲೇಖನ ಕಲೆಯಲ್ಲಿ ಪ್ರಮುಖವಾಗಿದ್ದ ಗತಕಾಲವನ್ನು ಅದರ ಪ್ರಮಾಣದ ಬೆಳಕಿನಲ್ಲಿ ಅರಿಯಲು ಯತ್ನಿಸಬೇಕೆಂಬ ತತ್ತ್ವಕ್ಕೆ ಬದಲಾಗಿ "ತರ್ಕ" ಮತ್ತು "ಸ್ವಾತಂತ್ರ್ಯ" ಎಂಬ ಅಮೂರ್ತ ಭಾವನೆಗಳನ್ನು ಎತ್ತಿಹಿಡಿದನು. ಇಷ್ಟು ಮಾತ್ರವಲ್ಲದೆ, ಅವನು ಈ ಮೌಲ್ಯಗಳು ನಿರುಪಾಧಿಕವಾದುವೇ ಅಥವಾ ಸಾಪೇಕ್ಷವಾದುವೇ ಎಂಬುದರ ಬಗ್ಗೆ ಸ್ಪಷ್ಟವಾದ ವಿವರಣೆಯನ್ನುಇ ನೀಡಲಿಲ್ಲ.

ಆದರೂ ಕ್ರೋಚೆಯು ಐತಿಹಾಸಿಕ ಚಿಂತನೆಗೆ ಅಮೂಲ್ಯ ಕೊಡುಗೆ ನೀಡಿದವನು ಎಂದರೆ ತಪ್ಪಾಗುವುದಿಲ್ಲ. ಅವನು ಇತಿಹಾಸವು ದರ್ಶನಕ್ಕೆ ಅಧೀನವಾದ ಶಾಸ್ತ್ರವಲ್ಲ ಎಂದು ಸಮರ್ಥಿಸಿ ಅದಕ್ಕೆ ಹೆಚ್ಚಿನ ಪ್ರಾಮುಖ್ಯವನ್ನು ಕೊಟ್ಟನು ಮತ್ತು ಇತಿಹಾಸದ ಭಾವರೂಪಗಳು ವೈಜ್ಞಾನಿಕ ಕಲ್ಪನೆಗಳಿಗಿಂತ ವಿಭಿನ್ನವಾದುವು ಎಂಬುದನ್ನು ತೋರಿ, ಚರಿತ್ರೆಯು ವಿಜ್ಞಾನಕ್ಕೆ ಉಪಾಂಗವಾದ ಶಾಸ್ತ್ರವಾಗಿರಬೇಕಾಗಿಲ್ಲ ಎಂಬುದಾಗಿ ನಿರೂಪಿಸಿದನು. ಅವನು ದರ್ಶನವು ಇತಿಹಾಸಕ್ಕೆ ಆಧಾರವಾಗಿದೆ ಹಾಗೂ ವೈಜ್ಞಾನಿಕ ಸಾಮಾನ್ಯೀಕರಣಗಳನ್ನು ನಿರೂಪಿಸುವುದಕ್ಕೆ ಬೇಕಾದ ವಿವರಗಳನ್ನು ಒದಗಿಸುವುದರಿಂದ ಚರಿತ್ರೆಯು ವಿಜ್ಞಾನಕ್ಕೆ ಪೂರ್ವಗಾಮಿಯಾಗಿದೆ ಎಂಬುದಾಗಿ ಒತ್ತಿ ಹೇಳಿದನು. ಎಲ್ಲಾ ಇತಿಹಾಸವು ಸಮಕಾಲೀನ ಚರಿತ್ರೆಯಾಗಿದೆ ಎಂಬ ಹೇಳಿಕೆಯು ಅವನ ಇನ್ನೊಂದು ಮುಖ್ಯವಾದ ಕೊಡುಗೆ. ಅಂದರೆ ವರ್ತಮಾನ ಕಾಲಕ್ಕೆ ಸೇರಿರುವ ಇತಿಹಾಸಕಾರನ ಚಿತ್ತದ ತೆರೆಯ ಮೇಲೆ ಮೂಡುವ ಗತಕಾಲದ ಚಿತ್ರಣವು ಅವನು ಕಲ್ಪನೆಯಲ್ಲಿ ಮಾಡಿಕೊಳ್ಳುವ ಗತಕಾಲದ ಘಟನೆಗಳ ಪುನರ್‌ರಚನೆ ಎಂದರ್ಥವಾಗುತ್ತದೆ. ಕ್ರೋಚೆಯು ಇತಿಹಾಸ ಅಧ್ಯಯನದ ವಿಧಾನವನ್ನು ಉತ್ತಮಪಡಿಸಿದನು ಎಂದು ಹೇಳಬಹುದು. ಕಾರಣ ಅವನು ಚರಿತ್ರಲೇಖಕನು ವಿವರಗಳನ್ನು ಸಂಗ್ರಹಿಸಿ ನಂತರ ನಿಗಮನ ತರ್ಕ ಕ್ರಮವನ್ನು ಬಳಸಿ ವಿವರಿಸಬೇಕು ಮತ್ತು ಸಾಮಾನ್ಯೀಕರಣ–ಗಳನ್ನು ನಿರೂಪಿಸಬೇಕು ಎಂಬುದನ್ನು ಸ್ಪಷ್ಟಪಡಿಸಿದನು. ಅವನು ಘಟನೆಗಳಿಗೆ ಅನೇಕ ಕಾರಣಗಳಿವೆ ಎಂಬ ತತ್ತ್ವವನ್ನು ಎತ್ತಿಹಿಡಿದನು. ಸಮಕಾಲೀನ ಬೌದ್ಧಿಕ ಜಗತ್ತಿನ ಮೇಲೆ ಅವನ ವಿಚಾರಧಾರೆಯ ಪ್ರಭಾವ ಗಾಢವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಅವನು ಇತಿಹಾಸದ ಪ್ರಾಧಾನ್ಯವನ್ನು ಎತ್ತಿಹಿಡಿದ ದಿಟ್ಟೆದೆಯ ಸಮರ್ಥಕನಾಗಿದ್ದನು ಎಂಬುದು ನಿರ್ವಿವಾದ.

## 13.5 ಸಾರಾಂಶ

ಈ ಘಟಕದ ಅಧ್ಯಯನ ನಂತರ ನಾವುಗಳು ಈ ಕೆಳಗಿನ ಅಂಶಗಳನ್ನು ತಿಳಿದುಕೊಂಡೆವು,

- ಹೆಗಲ್‌ನು ಇತಿಹಾಸದಲ್ಲಿ ಕಾರ್ಯಕಾರಣ ಸಂಬಂಧ ತತ್ತ್ವದ ಭಾವವನ್ನು ಬೆಳೆಸಿದನ್ನು ನೋಡಬಹುದು.
- ಕಾರ್ಲ್‌ಮಾರ್ಕ್ಸ್ ಒಬ್ಬ ತತ್ತ್ವಜ್ಞಾನಿ ಇತಿಹಾಸಕಾರನೆಂಬುದು.
- ಸಂಭವಿಸಿದ ಘಟನೆಗಳನ್ನು ಯಥಾರ್ಥವಾಗಿ ತಿಳಿಯುವ ತಂತ್ರವನ್ನು ರಾಂಕೆಯು ಬೆಳೆಸಿದನ್ನು ತಿಳಿದುಕೊಂಡೆವು.
- ಸ್ಪೆಂಗ್ಲರ್‌ನ ಜೀವನ ಮತ್ತು ವಿಚಾರ ವೈಚಾರಿಕತೆಯನ್ನು ತಿಳಿದುಕೊಂಡೆವು.
- ಫ್ರಾನ್ಸಿನ ವಾಲ್ಟೇರ್ ಹಾಗೂ ಆಗಸ್ಟ್ ಕಾಂಪ್ಟೆ ರವರ ಜೀವನ ಮತ್ತು ಅವರ ವಿಚಾರಧಾರೆಯ ಬಗ್ಗೆ ತಿಳಿದುಕೊಂಡೆವು.
- ಗಿಯಾಂಬಟ್ಟಿಸ್ಟ ವಿಕೋರವರು ಇತಿಹಾಸಕ್ಕೆ ನೀಡಿದ ಕೊಡುಗೆಯ ಬಗ್ಗೆ ತಿಳಿದುಕೊಂಡೆವು.
- ಬೆನಡೆಟ್ಟೋ ಕ್ರೋಚೆಯ ಇತಿಹಾಸ ನಿರೂಪಣೆಯನ್ನು ತಿಳಿದುಕೊಂಡೆವು.

## 13.6 ಪ್ರಮುಖ ಪದಗಳು

1. ರೂಢಿ ತಪ್ಪಿದ: ಬಳಕೆಯಲ್ಲಿದಲ್ಲದ
2. ಸಂದರ್ಯದ: ತಾತ್ವಿಕ ಸಿದ್ಧಾಂತ

## 13.7 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಕಾರ್ಲ್‌ಮಾರ್ಕ್ಸ್‌ನ ಇತಿಹಾಸದ ನಿರೂಪಣೆಯನ್ನು ವಿವರಿಸಿ? 13.2.2
2. ಸ್ಪೆಂಗ್ಲರನ ಸಂಸ್ಕೃತಿ ನಾಗರೀಕತೆಯನ್ನು ಕುರಿತು ಬರೆಯಿರಿ. 13.2.4
3. ಬೆನೆಡಿಟ್ಟೋ ಕ್ರೋಚೆಯ ಇತಿಹಾಸ ಬರವಣಿಗೆಯ ರೂಪುರೇಖೆಯನ್ನು ವಿವರಿಸಿ. 13.3.4

## 13.8 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 13.2.2 ನೋಡಿ
2. ವಿಭಾಗ 13.2.4 ನೋಡಿ
3. ವಿಭಾಗ 13.3.4 ನೋಡಿ

## 13.9 ಪರಾಮರ್ಶನ ಗ್ರಂಥಗಳು

1. Sheik Ali B : History its Theory and Method
2. ಚೇತನಾ ಪಬ್ಲಿಕೇಷನ್ಸ್ : ಇತಿಹಾಸ ಸಂಶೋಧನಾ ಮಾರ್ಗ

**ಪಠ್ಯವನ್ನು ರಚಿಸಿದವರು:**
**ಡಾ॥ ವೈ.ಎಚ್.ನಾಯಕವಾಡಿ**

# ಬ್ಲಾಕ್ – 4: ಭಾರತೀಯ ಇತಿಹಾಸ ಲೇಖನಕಾರರು

## ಘಟಕ– 14 ಆರಂಭದ ಹಾಗೂ ಮಧ್ಯಕಾಲೀನ ಭಾರತದ ಇತಿಹಾಸಕಾರರು ಹಾಗೂ ಜೀವನ ಚರಿತ್ರೆಕಾರರು

**ರಚನೆ**


**14.0** ಉದ್ದೇಶಗಳು

**14.1** ಪೀಠಿಕೆ

**14.2** ಪ್ರಾಚೀನ ಉತ್ತರ ಭಾರತದಲ್ಲಿ ಇತಿಹಾಸ ಲೇಖನ

**14.3** ಪ್ರಾಚೀನ ದಕ್ಷಿಣ ಭಾರತದಲ್ಲಿ ಇತಿಹಾಸ ಲೇಖನ

**14.4** ಐತಿಹಾಸಿಕ ಜೀವನ ಚರಿತ್ರೆ

**14.5** ಮಧ್ಯಕಾಲೀನ ಉತ್ತರ ಭಾರತದಲ್ಲಿ ಇತಿಹಾಸ ಲೇಖನ

**14.6** ಮಧ್ಯಕಾಲೀನ ದಕ್ಷಿಣ ಭಾರತದಲ್ಲಿ ಇತಿಹಾಸ ಲೇಖನ

**14.7** ಸಾರಾಂಶ

**14.8** ಪ್ರಮುಖ ಪದಗಳು

**14.9** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**14.10** ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

**14.11** ಪರಾಮರ್ಶನ ಗ್ರಂಥಗಳು

## 14.0 ಉದ್ದೇಶಗಳು

ಪ್ರಸ್ತುತ ಈ ಅಧ್ಯಯನದಲ್ಲಿ ಪ್ರಾಚೀನ ಕಾಲದ, ಮಧ್ಯಕಾಲೀನ ಇತಿಹಾಸ ರಚನೆಗೆ ಲಭ್ಯವಿರುವ ಆಕರಗಳ ಅಧ್ಯಯನದ ವಿಧಾನವನ್ನು ಕುರಿತು ವಿವರಿಸುವ ಉದ್ದೇಶವನ್ನೊಳಗೊಂಡಿದೆ. ಅಂದರೆ ಇತಿಹಾಸ ಗತಿಸಿದ ಘಟನೆಗಳನ್ನು ಅಲ್ಲಿ ದಾಖಲು ಮಾಡಲಾಗಿದೆಯೇ? ಇಲ್ಲವೇ? ಎಂಬುದನ್ನು ಕುರಿತು ಚರ್ಚಿಸಬೇಕಾಗಿದೆ. ಜರುಗಿದ ಘಟನೆಗಳನ್ನು ಕಾಲಾನುಕ್ರಮವಾಗಿ ಲಿಖಿತ ದಾಖಲೆಗಳಲ್ಲಿ ಬರೆದಿಡಲಾಗಿದೆಯೇ? ಎಂಬುವುದನ್ನು ಪರಿಶೀಲಿಸುವುದಾಗಿದೆ. ನಮ್ಮ ಪೂರ್ವಿಕರು ಗತಿಸಿದ ಘಟನೆಗಳ ವಿವರಗಳನ್ನು ತಮಗೆ ಅನಿಸಿದ ರೀತಿಯಲ್ಲಿ ದಾಖಲಿಸಿದ್ದಾರೆ. ಆದುದರಿಂದ ನಾವು ಅವುಗಳನ್ನು ವಿಂಗಡಿಸಿ ಕಾಲಾನುಕ್ರಮದಂತೆ ಇತಿಹಾಸ ಲೇಖನನ್ನು ಅಧ್ಯಯಿನಿಸುವ ಉದ್ದೇಶವನ್ನು ಈ ಘಟಕ ಒಳಗೊಂಡಿದೆ. ಅಂದರೆ ಪ್ರಾಚೀನ ಉತ್ತರ ಭಾರತದ ಇತಿಹಾಸ ಲೇಖನ, ಪ್ರಾಚೀನ ದಕ್ಷಿಣ ಭಾರತದ ಇತಿಹಾಸ ಲೇಖನ, ಐತಿಹಾಸಿಕ ಜೀವನ ಚರಿತ್ರೆ, ಮಧ್ಯಕಾಲೀನ ಉತ್ತರ ಭಾರತದ ಇತಿಹಾಸ ಲೇಖನ ಮತ್ತು ಮಧ್ಯಕಾಲೀನ ದಕ್ಷಿಣ ಭಾರತದ ಇತಿಹಾಸ ಲೇಖನವನ್ನು ಕುರಿತು ಈ ಘಟಕದಲ್ಲಿ ವಿವರವಾಗಿ ಚರ್ಚಿಸುವ ಉದ್ದೇಶವನ್ನೊಳಗೊಂಡಿದೆ.

ಐತಿಹಾಸಿಕ ಭಾವನೆಗಳು ಪೂರ್ಣವಾದ ವಸ್ತುವಿನ ರೂಪದಲ್ಲಿ ವೈದಿಕ ಯುಗದ ವಿವಿಧ ಸಾಹಿತ್ಯಕ ರೂಪಗಳಲ್ಲಿ ಕಂಡು ಬರುತ್ತದೆ. ಅವುಗಳಲ್ಲಿ ಅತಿ ಮುಖ್ಯವಾದುವುಗಳೆಂದರೆ ಗಾಥಾಗಳು ಮತ್ತು ಪುರಾಣ. ಪುರೋಹಿತರಿಂದ ರಚಿಸಲ್ಪಟ್ಟ ಈ ಸಾಹಿತ್ಯದ ರೂಪಗಳು ವಿಭಿನ್ನ ಬುಡಕಟ್ಟುಗಳ ಒಳಸಂಚುಗಳನ್ನು ಒಳಗೊಂಡಿದ್ದಿತು. ವಾಚಕವಾಗಿದ್ದ ಈ ಸಾಹಿತ್ಯ ರೂಪಗಳನ್ನು ಸಭೆ ಅಥವಾ ಕೂಟಗಳಲ್ಲಿ ಹಾಡುತ್ತಿದ್ದರು. ನಂತರ ಅವುಗಳು ಲಿಖಿತ ಸಂಪ್ರದಾಯದಲ್ಲಿ ಸೇರ್ಪಡೆಯಾದವು.

ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ಇತಿಹಾಸದ ಪರಂಪರೆಯನ್ನು ಬಿಡಿಸಬಹುದು. ಪ್ರತಿಯೊಂದು ಸಮಾಜವೂ ತನ್ನ ಗತಕಾಲದ ಭಾವನೆಯನ್ನು ಹೋದಿರುತ್ತದೆ. ಏಳನೆಯ ಶತಮಾನಕ್ಕೆ ಪೂರ್ವದಲ್ಲಿ ಭಾರತೀಯ ಐತಿಹಾಸಿಕ ಪರಂಪರೆಯು ಮುಖ್ಯವಾಗಿ ರಾಜಕೀಯ ಘಟನೆಗಳನ್ನು ದಾಖಲು ಮಾಡುವುದಕ್ಕೆ ಸೀಮಿತವಾಗಿರಲಿಲ್ಲ. ಈ ಕಾರಣಕ್ಕಾಗಿ, ಪ್ರಾಚಿನ ಭಾರತದ ಸಾಹಿತ್ಯದಲ್ಲಿ ಸೂಚಿತವಾಗಿರುವ ಐತಿಹಾಸಿಕ ಭಾವನೆಯ ರೂಪವನ್ನು ಇತರ ಪ್ರಾಚೀನ ಕ್ಲಾಸಿಕಲ್ ಸಂಸ್ಕೃತಿಗಳ ಸಾಹಿತ್ಯದ ಮೇಲೆ ನಿರ್ಧರಿಸಬೇಕು. ಇಲ್ಲಿ ಅತಿ ಮುಖ್ಯವಾದುದೆಂದರೆ, ಪ್ರಾಚೀನರು ಯಾವುದನ್ನು ಸುಸಂಬದ್ಧವೆಂದು ಪರಿಗಣಿಸಿದರು ಮತ್ತು ಏಕೆ ಎಂಬುದನ್ನು ತಿಳಿಯುವ ಪ್ರಯತ್ನ.

## 14.1 ಪೀಠಿಕೆ

ಪ್ರಾಚೀನ ಭಾರತದಲ್ಲಿ ಐತಿಹಾಸಿಕ ಸಾಹಿತ್ಯದ ಕೊರತೆಯನ್ನು ನಾವು ಸಮಾಧಾನಕರವಾಗಿ ವಿಶ್ಲೇಷಿಸಲಾಗುವದಿಲ್ಲ. ಪ್ರಾಚೀನ ಭಾರತಿಯರು ದೊಡ್ಡ ಪ್ರಮಾಣದಲ್ಲಿ ಐತಿಹಾಸಿಕ ಸಾಹಿತ್ಯವನ್ನು

ಹೊಂದಿದ್ದರು. ಆದರೆ ಅವೆಲ್ಲವೂ ಕಾಲದ ಹಾವಳಿಯಿಂದ ಮತ್ತು ದಂಡಯಾತ್ರೆಗಳ ಪರಿಣಾಮವಾಗಿ ನಾಶ ಹೊಂದಿದವು. ಕ್ರಿ.ಶ. ಏಳನೆಯ ಶತಮಾನದಲ್ಲಿ ಭಾರತದಲ್ಲಿ ಸಂಚರಿಸಿದ ಚೀನಾ ದೇಶದ ಬೌದ್ಧ ಯಾತ್ರಿಕ ಯುವಾನ್ ಚ್ವಾಂಗ್ ಇತಿಹಾಸ ಗ್ರಂಥಗಳ ಪಟ್ಟಿಯನ್ನು ಕೊಟ್ಟಿದ್ದಾನೆ. ಅಲ್ಲದೆ ಅವುಗಳಲ್ಲಿ ಕೆಲವು ಗ್ರಂಥಗಳನ್ನು ಕ್ರಿ.ಶ. 13ನೆಯ ಶತಮಾನದಲ್ಲಿ ಕಲ್ಹಣನು ತನ್ನ ಗ್ರಂಥ ರಾಜ ತರಂಗಿಣಿಯನ್ನು ಬರೆಯಲು ಉಪಯೋಗಿಸಿಕೊಂಡನು.

ಆದರೆ ಈ ಐತಿಹಾಸಿಕ ಕೃತಿಗಳು ನಮಗೆ ಲಭ್ಯವಾಗಿಲ್ಲವೆಂಬುದು ಗಮನಾರ್ಹವಾದ ಅಂಶವಾಗಿದೆ. ನಿರ್ಲಕ್ಷತೆ ಮತ್ತು ಓದಲು ಯಾರೂ ಕಾಳಜಿ ವ್ಯಕ್ತಪಡಿಸದ ಕಾರಣ ಕೆಲವು ಗ್ರಂಥಗಳು ಸುಸ್ಥಿತಿಗೆ ತರಲಾಗದಂತೆ ನಾಶವಾಗಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಆದರೆ ಮಾನವ ಹಾಗೂ ಪ್ರಕೃತಿಯ ಹಾವಳಿಗಳು ಐತಿಹಾಸಿಕ ಸಾಹಿತ್ಯ ಗ್ರಂಥಗಳನ್ನು ಮಾತ್ರ ತಮ್ಮ ವಿಶೇಷ ಯಜ್ಞ ಪಶುಗಳನ್ನಾಗಿ ಮಾಡಿಕೊಡವೆಂಬುದು ಸೋಜಿಗದ ಸಂಗತಿಯಾಗಿದೆ. ಕೆಲವು ಗ್ರಂಥಗಳು ನಾನಾ ಕಾರಣಗಳಿಂದಾಗಿ ನಾಶವಾಗಿರಬಹುದೆಂಬುದನ್ನು ಒಪ್ಪಬಹುದಾಗಿದೆ.

ಆದರೆ ಸಾಹಿತ್ಯದ ಒಂದು ಭಾಗ ಸಂಪೂರ್ಣವಾಗಿ ನಾಶವಾಯಿತೆಂಬ ವಾದವನ್ನು ಒಪ್ಪಲು ಸಾಧ್ಯವಾಗುವದಿಲ್ಲ. ಆ ರೀತಿಯಾಗಿದ್ದಲ್ಲಿ ಅದು ಒಂದು ಅದ್ಭುತ ಪವಾಡವೇ ಸರಿ. ಆದರೆ ಭಾರತಿಯರಲ್ಲಿ ಐತಿಹಾಸಿಕ ಪ್ರಜ್ಞೆ ಇದ್ದಿತು ಮತ್ತು ಅದು ವ್ಯಕ್ತಿಯ ಜೀವನದ ವಿಶಿಷ್ಟ ದೃಷ್ಟಿಕೋನಗಳನ್ನು ಒಳಗೊಂಡಿದ್ದಿತೆಂಬ ಸಂಗತಿಯನ್ನು ಅಲ್ಲಗಳೆಯಲಾಗುವದಿಲ್ಲ. ಇತಿಹಾಸವು ರಾಜರ ಕಥೆಯಲ್ಲ. ಅದು ಅವರ ಸಾಧನೆಗಳಿಗೆ ಮೀಸಲಾಗಿಲ್ಲ. ಆದರೆ ಅದು ಜನತೆಯ ಆಚಾರ ಪದ್ಧತಿ, ಆ ಯುಗದ ಭಾವ ಅಥವಾ ಗುಣ ಮತ್ತು ಆ ಕಾಲಗಳ ಚೈತನ್ಯ ಅಥವಾ ಸಹಾಸಗಳನ್ನು ಚಿತ್ರಿಸುತ್ತದೆ. ಭಾರತೀಯರು ಈ ವಿಚಾರದಲ್ಲಿ ತಲೆ ತಗ್ಗಿಸಬೇಕಾಗಿಲ್ಲ. ಏಕೆಂದರೆ ಅವರು ಈ ಸಾಹಸದಲ್ಲಿ ಖಂಡಿತವಾಗಿಯೂ ನಮ್ಮನ್ನು ನರ್ಲಕ್ಷಿಸಿಲ್ಲ.

ಒಟ್ಟಾರೆ ಹೇಳುವುದಾದರೆ, ಪ್ರಾಚೀನ ಭಾರತೀಯ ಇತಿಹಾಸ ಲೇಖನಾ ಪರಂಪರೆಯು ಸಮಸ್ಯೆಗಳ ಸಂಕೀರ್ಣವನ್ನು ಮುಂದುವರಿಸುತ್ತದೆ. ನಮ್ಮ ಪೂರ್ವಿಕರ ಆಸಕ್ತಿಗಳು ಇತಿಹಾಸಕ್ಕಿಂತ ಇತರ ಕ್ಷೇತ್ರಗಳಲ್ಲಿ ಹೆಚ್ಚಾಗಿದ್ದಿತು. ಆದರೆ ಇತಿಹಾಸವು ಮಾನವನ ಜೀವನಕ್ಕೆ ಸಂಬಂಧಿಸಿದ ಅವಶ್ಯಕವಾದ ಚಟುವಟಿಕೆಯಾಗಿರುವುದರಿಂದ ಮತ್ತು ಮಾನವನ ಜೀವನವು ನಮ್ಮ ಪೂರ್ವಿಕರ ಅಧ್ಯಯನದ ಮೂಲ ಉದ್ದೇಶವಾಗಿದ್ದುದರಿಂದ ಅವರು ಐತಿಹಾಸಿಕ ಪ್ರಜ್ಞೆಯನ್ನು ಹೊಂದಿರಲಿಲ್ಲವೆಂದು ಹೇಳಲಾಗುವುದಿಲ್ಲ. ಈ ಪ್ರಜ್ಞೆಯು ಅವರಲ್ಲಿ ಸಮೃದ್ಧವಾಗಿತ್ತು. ಆದರೆ ಅದು ಗಾಢವಾದ ರೂಪವನ್ನು ತಾಳಿತ್ತು. ಅವರು ಘಟನೆಗಳ ಕಾರಣಗಳು, ಪರಿಣಾಮಗಳು, ಸ್ಥಿತಿಗಳು ಮತ್ತು ಪ್ರವೃತ್ತಿಗಳನ್ನು ಪರಿಶೀಲಿಸಿದ್ದಾರೆ. ಆದರೆ ಅವುಗಳನ್ನು ಯಾವ ಒಂದು ಪ್ರದೇಶ, ರಾಜಸಂತತಿ ಅಥವಾ ವ್ಯಕ್ತಿಗೆ ಪ್ರಯೋಗಿಸಿಲ್ಲ.

ಇತಿಹಾಸವು ಸಮಾಜದ ಸಂಸ್ಕೃತಿಯ ಅಳತೆ ಮಾಪನ ಮಾಡುವ ವಾಯುಭಾರ ಮಾಪಕ ಯಂತ್ರವಾಗಿದ್ದರೆ ಮತ್ತು ಸಂಸ್ಕೃತಿಯು ಮಾನವನು ಸಮಾಜದ ಒಬ್ಬ ಸದಸ್ಯನಾಗಿ ಗಳಿಸಿದ ಜ್ಞಾನ, ನಂಬಿಕೆ,

ನೀತಿ, ಕಲೆ, ಸಂಪ್ರಧಾಯಗಳು ಹಾಗೂ ಇತರ ಸಾಮರ್ಥ್ಯಗಳು ಮತ್ತು ಅಭ್ಯಾಸಗಳ ಸಂಕೀರ್ಣವಾಗಿದ್ದರೆ, ಪ್ರಾಚೀನ ಭಾರತೀಯರು ಉತ್ತಮವಾದ ಸಂಸ್ಕೃತಿಗೆ ಸಾಕಷ್ಟು ಹಕ್ಕುಗಳನ್ನು ಸ್ಥಾಪಿಸಿದ್ದಾರೆ. ಆದ್ದರಿಂದ ಅವರು ಐತಿಹಾಸಿಕ ಪ್ರಜ್ಞೆಯಿಂದ ರಹಿತವಾಗಿರಲಿಲ್ಲ. ಆದರೆ ಅವರು ತಮ್ಮ ಭಾವನೆಗಳನ್ನು ಸರಿಯಾದ ರೂಪದಲ್ಲಿ ಅಣಿ ಮಾಡಲಿಲ್ಲ. ಪ್ರಾಚೀನ ಭಾರತವು ಇತಿಹಾಸಕಾರರಿಗೆ ಜನ್ಮವೀಯಲಿಲ್ಲ. ಆದರೆ ಇತಿಹಾಸ ತತ್ವಜ್ಞಾನಿಗಳು ಅಥವಾ ಇತಿಹಾಸ ದಾರ್ಶನಿಕರಿಗೆ ಜನ್ಮವಿತ್ತಿತು ಎಂಬ ಹೇಳಿಕೆಯನ್ನು ಸಮರ್ಥಿಸಬಹುದಾಗಿದೆ.

## 14.2 ಪ್ರಾಚೀನ ಉತ್ತರ ಭಾರತದಲ್ಲಿ ಇತಿಹಾಸ ಲೇಖನ

ಪ್ರಾಚೀನ ಭಾರತದಲ್ಲಿ ವ್ಯಾಪಕವಾದ ಹಾಗೂ ವಿವಿಧ ಐತಿಹಾಸಿಕ ಗ್ರಂಥಗಳು ರಚಿಸಲ್ಪಟ್ಟವು. ವೇದಗಳಲ್ಲಿ ಇತಿಹಾಸ ಅಂಶಗಳು ಅಡಕವಾಗಿವೆ. ಸೈನಿಕ ದಾಳಿಗಳು ಮತ್ತು ಯುದ್ಧದ ದೃಶ್ಯಗಳ ವಿತರಣೆಯನ್ನು ಋಗ್ವೇದದಲ್ಲಿ ಪಡೆಯಬಹುದು. ಇದರಲ್ಲಿ ಅತಿ ಪ್ರಖ್ಯಾತವಾದುದೆಂದರೆ ದಾಶರಾಜ್ಞ, ಇದು ಭರತರು ಮತ್ತು ಇತರ ಹತ್ತು ಬುಡಕಟ್ಟುಗಳ ಒಕ್ಕೂಟದ ಯುದ್ಧಕ್ಕೆ ಸಂಬಂಧಿಸಿದೆ. ಈ ಹತ್ತು ಬುಡಕಟ್ಟುಗಳಲ್ಲಿ ಹೆಚ್ಚು ಹೆಸರಾಂತ ಬುಡಕಟ್ಟುಗಳೆಂದರೆ ಪುರು, ದೃಹ್ಯೂ, ಅನು, ತೂರ್ವಾಸ ಮತ್ತು ಯಕ್ಷ/ಯದು ಅವರನ್ನು ಪಾಂಚಜನ್ಯಹಃ ಎಂದು ಕರೆಯಲಾಗಿದೆ. ಭರತ ಬಡಕಟ್ಟಿನವರು ದಾಸರ ನಾಯಕ ಶಂಬರ ಹಾಗೂ ದನಗಳನ್ನು ಕಳ್ಳತನದಿಂದ ಹೊಡೆದುಕೊಂಡು ಹೋಗುತ್ತಿದ್ದ ಪ್ರಾಣಿಗಳೊಡನೆ ಕದನಗಳಲ್ಲಿ ತೊಡಗಿದ್ದರು. ತೂರ್ವಾಸರು ಮತ್ತು ಯದುಗಳು ಭರತರ ದಿವೋದಾಸನ ವಿರುದ್ಧ ಹೋರಾಟದಲ್ಲಿ ತೊಡಗಿದ್ದರು ಮತ್ತು ದಿವೊದಾಸನ ಮಗ ಸುದಾಸನಿಂದ ಸೋಲಿಸಲ್ಪಟ್ಟರು. ಶ್ರೀಂಜಯರು, ತೂರ್ವಾಸರು, ವೃಷ್ಣಿವಂತರು, ಭರತರು ಮತ್ತು ಸತ್‌ವಂತರನ್ನು ಸೋಲಿಸಿದನು.

ಆರ್ಯನ್ನರು ಗಂಗಾ–ಯಮುನಾ ದೋಆಬ್ ಪ್ರದೇಶಕ್ಕೆ ವಲಸೆ ಹೋಗುತ್ತಿದ್ದರೆಂಬುದನ್ನು ಈ ಹೋರಾಟಗಳು ಸೂಚಿಸುತ್ತವೆ. ಋಗ್ವೇದದಲ್ಲಿನ ಈ ಉಲ್ಲೇಖಗಳು ಐತಿಹಾಸಿಕ ರಚನೆಗಳ ವಾಚಕ ಸಂಪ್ರದಾಯವು ಆಸ್ತಿತ್ವದಲ್ಲಿದ್ದುದನ್ನು ಸೂಚಿಸುತ್ತವೆ. ಇವು ಬಹುಶಃ ಕ್ರಮೇಣದಲ್ಲಿ ಲಿಖಿತ ಧಾರ್ಮಿಕ ಸಂಪ್ರದಾಯದ ಮೇಲೆ ಪ್ರಭಾವ ಭೀರಿದಂತೆ ಸೂಚಿಸುತ್ತವೆ. ಋಗ್ವೇದದ ವಿವಿಧ ಶ್ಲೋಕಗಳು ಇತಿಹಾಸವನ್ನು ಪ್ರಾಸಂಗಿಕವಾಗಿ ಪ್ರಸ್ತಾವಿಸುತ್ತವೆಂದು ನಿರುಕ್ತ, ಭಾಗುರು, ಯಕ್ಷ ಮತ್ತು ಶುನಕರು ಪರಿಗಣಿಸಿದ್ದಾರೆ. ಹೊಸ ನೆಲಸುನಾಡುಗಳು ಅಥವಾ ವಸಾಹತುಗಳು ಮತ್ತು ಬುಡಕಟ್ಟುಗಳ ಯುದ್ಧದ ಸಂದರ್ಭದಲ್ಲಿ ರಾಜರ ವಂಶಾವಳಿಗಳು ಐತಿಹಾಸಿಕ ಸಂಪ್ರದಾಯದ ಮೂಲ ಭಾಗವಾಯಿತು. ಕರ್ತವ್ಯದ ಉದ್ದೇಶಕ್ಕಾಗಿ, ಮುಖ್ಯವಾಗಿ ನ್ಯಾಯಯುತ ಹಕ್ಕುಗಳ ಸಮರ್ಥನೆ ಮತ್ತು ಸಾಮಾಜಿಕ ಅಂತಸ್ತು ಮತ್ತು ಬುಡಕಟ್ಟಿನ ಗುರುತನ್ನು ಕಾಪಾಡುವ ಉದ್ದೇಶದಿಂದ ಈ ವಂಶಾವಳಿಗಳನ್ನು ಸಂರಕ್ಷಣೆ ಮಾಡಿಕೊಂಡು ಬಂದುದು ಇತಿಹಾಸ ರಚನೆಗೆ ಅಗತ್ಯವಾದ ತಳಹದಿಯನ್ನು ಒದಗಿಸಿದಂತಾಯಿತು.

ತಾವು ಸ್ಥಾಪಿಸಿದ ಧರ್ಮವನ್ನು ಸಂರಕ್ಷಿಸಲು ಮತ್ತು ವಿಸ್ತರಿಸಲು ಜೈನರು ಮತ್ತು ಬೌದ್ಧರು ತಾವು ಸ್ಥಾಪಿಸಿದ ಸಂಘಕ್ಕೆ ಸಂಬಂಧಿಸಿದಂತೆ ಒಂದು ರೀತಿಯ ಮಠದ ಇತಿಹಾಸವನ್ನು ರಚಿಸಿದರು. ಬೌದ್ಧ

ಸಾಹಿತ್ಯದಲ್ಲಿ ತ್ರಿಪಿಟಕಗಳು ಪ್ರಮುಖ ಸ್ಥಾನವನ್ನು ಪಡೆದಿವೆ. ಪಾಳಿ ಭಾಷೆಯಲ್ಲಿ ರಚಿತವಾಗಿರುವ ಈ ತ್ರಿಪಿಟಕಗಳಲ್ಲಿ ವಿನಯ, ಸುತ್ತ ಮತ್ತು ಅಭಿದಮ್ಮ ಎಂಬ ಮೂರು ಪೀಟಕಗಳಿವೆ. ವಿನಯ ಪೀಟಕದಲ್ಲಿ ನಿವೇದನ ನಿಯಮಗಳು ಮತ್ತು ಬುದ್ಧ ಹಾಗೂ ಆತನ ಕೆಲವು ಅನುಯಾಯಿಗಳ ಜೀವನ ಚರಿತ್ರೆಯ ವಿವರಣೆಗಳಿವೆ. ಸುತ್ತ ಪೀಟಕವು ಹೆಚ್ಚು ಆಸಕ್ತಿಯನ್ನು ಕೆರಳಿಸುತ್ತದೆ. ಬುದ್ಧನ ಜೀವನದ ಹಲವಾರು ಉಪಕಥೆಗಳು ಮತ್ತು ವಿವಿಧ ಸಂದರ್ಭಗಳಲ್ಲಿ ಬುದ್ಧನು ನೀಡಿದ ಉಪದೇಶಗಳನ್ನು ಆತನ ಶಿಷ್ಯ, ಆನಂದ ದಾಖಲು ಮಾಡಿದ್ದಾನೆ. ಇದರಲ್ಲಿ ದಿಘ, ಮಜ್ಜಿಮ, ಸಂಯುಕ್ತ, ಅಂಗುತ್ತರ, ಖುದ್ದಕ ಎಂಬ ಐದು ಸಂಗ್ರಹಗಳಿವೆ. ಅಭಿದಮ್ಮವು ಧರ್ಮವನ್ನು ವ್ಯಾಖ್ಯಾನಿಸುತ್ತದೆ. ಬೌದ್ಧ ಸನ್ಯಾಸಿಗಳ ವೈಯಕ್ತಿಕ ಅನುಭವಗಳನ್ನು ಥೇರಗಥದಲ್ಲಿ ವಿವರಿಸಲಾಗಿದೆ. ಥೇರಗತಿಯು ಸಾಮಾಜಿಕ ಜೀವನವನ್ನು ಚಿತ್ರಿಸುತ್ತದೆ.

12 ಮತ್ತು 13ನೆಯ ಶತಮಾನದ ಹೆಚ್ಚು ಭಾವೋತ್ಪಾದಕ ಕೃತಿಗಳೆಂದರೆ ಪಶ್ಚಿಮ ಭಾರತದ ಜೈನ ಗುರುಗಳ ರಚನೆಗಳು. ಇವು ಶೈಲಿಯ ದೃಷ್ಟಿಯಿಂದ ಆಸ್ಥಾನ ಸಂಪ್ರದಾಯದ ಮಾದರಿಯ ಐತಿಹಾಸಿಕ ಜೀವನ ಚರಿತ್ರೆಗಳಾಗಿವೆ. ಆದರೆ ಇಲ್ಲಿ ಜೈನ ಕೃತಿಕಾರರು ನೀತಿಯ ಕಥನಕ್ಕೆ ಆಸ್ಥಾನದ ಮೌಲ್ಯಗಳನ್ನು ಅಧೀನ ಪಡಿಸಿಕೊಂಡಿದ್ದಾರೆ. ಐತಿಹಾಸಿಕ ಸಂಪ್ರದಾಯವನ್ನು ಜೈನರು ಎರಡು ವರ್ಗಗಳ ಸಾಹಿತ್ಯದಲ್ಲಿ ಸಂರಕ್ಷಿಸಿದ್ದಾರೆ. ಮೊದಲನಯದು, ಪ್ರಬಂಧಗಳ ಬರವಣಿಗೆಯನ್ನು ಮುಂದುವರಿಸಿದುದು. ಈ ಕಥನಗಳು ರಾಜ ವಂಶದವರಿಗೆ ಸಂಬಂಧಿಸಿದುದಾಗಿವೆ. ಆಳುತ್ತಿರುವ ಅರಸರ ಕಾರ್ಯಗಳಿಗೆ ನೀತಿಯನ್ನು ನಿರ್ದೇಶಿಸುವ ಉದ್ದೇಶದಿಂದ ಸಂಚಾರೀ ಜೈನ ಸಂನ್ಯಾಸಿಗಳು ಈ ಕಥನಗಳನ್ನು ಸಂರಕ್ಷಿಸಿದರು. ಜೈನ ಗುರುಗಳು ಈ ಯುಗದಲ್ಲಿ ತಮ್ಮ ಧರ್ಮದಲ್ಲಿ ಸುಧಾರಣೆಗಳನ್ನು ತರುವ ಪ್ರಯತ್ನ ಹಾಗೂ ಈ ಬರವಣಿಗೆ ಏಕ ಕಾಲದಲ್ಲಿ ಸಂಭವಿಸಿದವು. ಎರಡನೆಯದು, ಸ್ಥಳೀಯ ರಾಜರು ಮತ್ತು ರಾಜ್ಯಗಳಿಗೆ ಸಂಬಂಧಿಸಿದ ವಂಶಾವಳಿಗಳು ಮತ್ತು ವೃತ್ತಾಂತಗಳು. ಜೈನ ಗುರುಗಳು ಮತ್ತು ಸಂನ್ಯಾಸಿಗಳು ಐತಿಹಾಸಿಕ ಪರಂಪರೆಗೆ ವಿಶಿಷ್ಟಾಸಕ್ತಿಯನ್ನು ವ್ಯಕ್ತಪಡಿಸಿದರು.

ಮೌರ್ಯರಿಂದ ಪ್ರಾರಂಭಗೊಂಡು ಗುಪ್ತ ರಾಜ್ಯ ಸಂತತಿಯ ಸ್ಥಾಪನೆಯವರೆಗೆ ಶುದ್ಧವಾದ ಇತಿಹಾಸ ಬರವಣಿಗೆ ಇದ್ದಿತೆಂಬುದಕ್ಕೆ ಯಾವ ಪುರಾವೆಯೂ ಇಲ್ಲ. ಸೂತರು ಮತ್ತು ಮಾಗಧರು ಹಾಗೂ ಅಧಿಕೃತ ಪತ್ರಗಾರ ಪಾಲಕರು ನಿಶ್ಚಿಂತತೆಯಿಂದ ತಮ್ಮ ಚಟುವಟಿಕೆಗಳನ್ನು ಮುಂದುವರಿಸಿದರು. ಏಕೆಂದರೆ ಅವರು ವಿಷಯಗಳನ್ನು ಸಂಗ್ರಹಿಸಿ ಅವುಗಳಿಗೆ ಒಂದು ಸಾಹಿತ್ಯಕ ರೂಪವನ್ನು ನೀಡಿದ ಮೇಲೆ ಅವುಗಳನ್ನು ಕ್ರಿ.ಶ. 4ನೆಯ ಶತಮಾನದ ಗ್ರಂಥಗಳಲ್ಲಿ ಸೇರಿಸಿಕೊಳ್ಳಲಾಯಿತು.

## 14.3 ಪ್ರಾಚೀನ ದಕ್ಷಿಣ ಭಾರತದಲ್ಲಿ ಇತಿಹಾಸ ಲೇಖನ

ದಕ್ಷಿಣ ಭಾರತದ ಬಗ್ಗೆ ಹೇಳುವುದಾದರೆ, ಐತಿಹಾಸಿಕ ಪ್ರಜ್ಞೆ ಅಥವಾ ಅರಿವು ಹಾಗೂ ಇತಿಹಾಸ ರಚನೆಯಲ್ಲಿ ಉತ್ತರ ಮತ್ತು ದಕ್ಷಿಣ ಭಾರತಗಳ ನಡುವೆ ಯಾವ ವ್ಯತ್ಯಾಸವೂ ಕಂಡು ಬರುವದಿಲ್ಲ. ತಮಿಳು ಮತ್ತು ಕನ್ನಡ ಭಾಷೆಗಳಲ್ಲಿ ಇತಿಹಾಸ ವಿಷಯಗಳಿಗೆ ಸಂಬಂಧಿಸಿದ ಸಾಹಿತ್ಯ ರಚನೆಯನ್ನು ಕಾಣಬಹುದು.

ಇತಿಹಾಸಕ್ಕೆ ಸಮೀಪದಲ್ಲಿರುವ ಮತ್ತೊಂದು ಸಾಹಿತ್ಯ ವರ್ಗವೆಂದರೆ ಪ್ರಬಂಧಗಳು ಅಥವಾ ಇತಿಹಾಸ ವೃತ್ತಾಂತಗಳ ಸಂಗ್ರಹಗಳು. ಮೇರುತುಂಗನ ಪ್ರಬಂಧ ಚಿಂತಾಮಣಿ ಇದರ ಒಂದು ಉದಾಹರಣೆಯಾಗಿದೆ. ತಮಿಳು ಸಂಗಂ ಗ್ರಂಥಗಳಲ್ಲಿ ಪ್ರಾಚೀನ ದಕ್ಷಿಣ ಭಾರತದಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಬೆಳವಣಿಗೆಗೆ ಸಂಬಂಧಿಸಿದಂತೆ ಇತಿಹಾಸ ವಿಷಯಗಳು ಅಡಕವಾಗಿದೆ. ತಮಿಳು ಭಾಷೆಯ ಪ್ರಸಿದ್ಧ ಮಹಾಕಾವ್ಯಗಳಾದ ಮಣಿಮೇಖಲೈ ಮತ್ತು ಶಿಲಪದ್ದಿಕಾರಂ ಉಪಯುಕ್ತವಾದ ಐತಿಹಾಸಿಕ ವಿವರಗಳನ್ನು ಒಳಗೊಂಡಿದೆ. ಕನ್ನಡದಲ್ಲಿ ರಾಜಕೀಯ ಜೀವನ ಚರಿತ್ರೆಗಳಾದ ಪಂಪನಿಂದ ವಿರಚಿತ ವಿಕ್ರಮಾರ್ಜುನ ವಿಜಯ ಅಥವಾ ಪಂಪ ಭಾರತ ಹಾಗೂ ರನ್ನನ ಸಾಹಸ ಭೀಮ ವಿಜಯ ಅಥವಾ ಗಧಾಯುದ್ಧ ಇವುಗಳು ಆ ಕಾಲದ ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸದ ಮೇಲೆ ಬೆಳಕು ಬೀರುತ್ತವೆ.

## 14.4 ಐತಿಹಾಸಿಕ ಜೀವನ ಚರಿತ್ರೆ

ಕ್ರಿ.ಶ. 7 ನೆಯ ಶತಮಾನದ ನಂತರ ಇತಿಹಾಸ–ಪುರಾಣ ಭಾವದಲ್ಲಿ ವ್ಯಕ್ತವಾಗಿರುವ ಐತಿಹಾಸಿಕ ಸಂಪ್ರದಾಯವು ವಿಸ್ತರಣ ಪ್ರಕ್ರಿಯೆಗೆ ಒಳಗಾಯಿತು. ಸಂಪ್ರದಾಯದಲ್ಲಿನ ವಂಶಾವಳಿಯ ರೂಪವನ್ನು ಶಿಕ್ಷಿಸಲಾಯಿತಲ್ಲದೆ ಅದನ್ನು ವಿಭಿನ್ನ ವಂಶಾವಳಿಗಳಲ್ಲಿ ಅತಿಶಯಿಸಲಾಯಿತು. ಈ ಅತಿಶಯಿಸಿದ ವಂಶಾವಳಿಗಳನ್ನು ಅನೇಕ ರಾಜ್ಯಗಳು ತಮ್ಮ ವೃತ್ತಾಂತಗಳಲ್ಲಿ ಸಂರಕ್ಷಿಸಿದವು. ಈ ಸಂಪ್ರದಾಯವು ಹೊಸ ಶೈಲಿಯ ಇತಿಹಾಸ ರಚನೆಗೆ ಎಡೆಮಾಡಿಕೊಟ್ಟವು. ಹೀಗೆ ಐತಿಹಾಸಿಕ ಜೀವನ ಚರಿತ್ರೆಗಳು ಉದಯಿಸಿದವು. ಇದಕ್ಕೆ ಕಾರಣಗಳು ಹಲವಾರು. ಸಣ್ಣ ಪ್ರಾದೇಶಿಕ ರಾಜ್ಯಗಳ ಉದಯವು ಸ್ಥಳಿಯ ನಿಷ್ಠೆ ಹಾಗೂ ಇತಿಹಾಸಕ್ಕೆ ಆ ಪ್ರದೇಶದ ಸಂಬಂಧಕ್ಕೆ ಎಡೆಮಾಡಿಕೊಟ್ಟಿತು. ಕೇಂದ್ರದ ಆಸಕ್ತಿಯು ಬುಡಕಟ್ಟಿನಿಂದ ರಾಜ ಮತ್ತು ಆತನ ಆಸ್ಥಾನಕ್ಕೆ ಚಲಿಸಿತು. ಇದರಿಂದಾಗಿ, ವಿರೋಚಿತ ಸಂಪ್ರದಾಯವು ರಾಜ ಮತ್ತು ಆತನ ಆಸ್ಥಾನ ಮತ್ತು ಆಸ್ಥಾನಕವಿಗೆ ಸ್ಥಳಾಂತರವಾಯಿತು.

ಆಸ್ಥಾನ ಕವಿಗಳು ಧರ್ಮನಿರಪೇಕ್ಷಕ್ಕೆ ಹೆಚ್ಚಿನ ಆಸಕ್ತಿ ತೋರಿದರು. ಆದರೆ ಅವರು ಇತಿಹಾಸ ಸತ್ಯತೆಯನ್ನು ನಾಟಕೀಯ ದೃಶ್ಯಗಳಿಗಾಗಿ ಆಹುತಿ ಕೊಟ್ಟರು. ತಮ್ಮ ಆಶ್ರಯದಾತನನ್ನು ಪ್ರಶಂಶಿಸುವುದು ಅವರ ಉದ್ದೇಶವಾಗಿತ್ತು. ಹೀಗಾಗಿ ಅವರ ಬಿಂದುವು ಸಂಕುಚಿತವಾಗಿತ್ತು. ಆದಾಗ್ಯೂ, ಇತಿಹಾಸ ಸಂಪ್ರದಾಯದೊಂದಿಗೆ ಸಂಬಂಧಿವನ್ನು ತಪ್ಪದೆ ಉಳಿಸಿಕೊಂಡು ಬಂದರು. ಈ ಬಗೆಯ ಇತಿಹಾಸ ಜೀವನ ಚರಿತ್ರೆಗಳಲ್ಲಿ ಹರ್ಷ ಚರಿತ, ವಿಕ್ರಮಾಂಕ ದೇವ ಚರಿತ, ಕುಮಾರಪಾಲ ಚರಿತ, ಪೃಥ್ವೀರಾಜ ವಿಜಯ, ರಾಮ ಚರಿತ, ಸೋಮಪಾಲವಿಲಾಸ ಮೊದಲಾದುವುಗಳನ್ನು ಹೆಸರಿಸಬಹುದಾಗಿದೆ. ಸಾಂಪ್ರದಾಯಿಕ ಶೈಲಿಯಲ್ಲಿ ರಚಿತವಾಗಿರುವ ಈ ಕೃತಿಗಳು ಶ್ರೇಷ್ಠ ಸ್ತುತಿಗಳಾಗಿವೆ.

## 14.5 ಮಧ್ಯಕಾಲೀನ ಉತ್ತರ ಭಾರತದಲ್ಲಿ ಇತಿಹಾಸ ಲೇಖನ

ದೆಹಲಿಯಲ್ಲಿ ಸುಲ್ತಾನರ ಆಳ್ವಿಕೆಯ ಸ್ಥಾಪನೆಯೊಂದಿಗೆ ಕಾಲಕ್ರಮಾಗತ ದಾಖಲೆಗಳು ಮತ್ತು ಅಧಿಕೃತ ದಾಖಲೆಗಳನ್ನೊಳಗೊಂಡ ಪ್ರಶಸ್ಥವಾದ ಸಾಹಿತ್ಯವು ಬೆಳೆಯಲು ಆರಂಭವಾಯಿತು. ಈ ಯುಗದ ಇತಿಹಾಸ ಲೇಖನ ಕಲೆಯ ಬೆಳವಣಿಗೆಯು ಮಧ್ಯಯುಗದ ಯೂರೋಪಿನೊಂದಿಗೆ ನಿಖಟವಾದ ಹೋಲಿಕೆಯನ್ನು ತೋರಿಸುತ್ತದೆ. ಮಧ್ಯ ಯುರೋಪಿನ ಕಾಲಾನುಗತ ದಾಖಲೆಗಳನ್ನು ಹೋಲುವ ದಾಖಲೆಗಳನ್ನು ಭಾರತದ ಸಮಸ್ತ ಮುಸಲ್ಮಾನ ಸುಲ್ತಾನರು ಹೊಂದಿದ್ದರು. ಇವುಗಳನ್ನು ಮೊಗಲ್ ಯುಗದ ಪೂರ್ವ ಮತ್ತು ಮೊಗಲರ ಯುಗಕ್ಕೆ ಸೇರಿದವುಗಳೆಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಮೊಗಲ್ ಯುಗದ ಪೂರ್ವದ ಇತಿಹಾಸಕಾರರಲ್ಲಿ ಅಮೀರ್ ಖುಸ್ರು, ಜಿಯಾವುದ್ದೀನ್ ಬರಾನಿ ಮತ್ತು ಇಬನ್ ಬತೂತ ಪ್ರಮುಖರಾಗಿದ್ದಾರೆ.

ಕವಿಗಳಲ್ಲಿ ಅರಸು ಹಿಂದ್‌ನ ಗಿಣಿ (ತುತಿ–ಇ–ಹಿಂದ್) ಮುಂತಾಗಿ ಕರೆಯಲ್ಪಡುತ್ತಿದ್ದ ಖುಸ್ರು ಸುಲ್ತಾನ್ ಬಲ್ಬನ್‌ನ ಮಗ ಮಹಮದ್, ಅಲ್ಲಾವುದೀನ್, ಮುಬಾರಕ್, ಘಿಯಾಸುದ್ದೀನ್ ತೊಗಲಕ್ ಮೊದಲಾದ ಆರು ವಿಭಿನ್ನ ಸುಲ್ತಾನರ ಆಳ್ವಿಕೆಯಲ್ಲಿ ಜೀವಿಸಿದ್ದರು. ಪರ್ಷಿಯನ್ ಭಾಷೆಯಲ್ಲಿ ಶ್ರೇಷ್ಠ ಕವಿಯಾದ ಖುಸ್ರು ಫಲವಂತ ಬರಹಗಾರನೂ ಆಗಿದ್ದು ಸುಮಾರು 92 ಗ್ರಂಥಗಳನ್ನು ರಚಿಸಿದನು. ಕವಿ, ಗದ್ಯಕಾರ, ಗಾಯಕ, ಬ್ರಹ್ಮಜ್ಞಾನಿ, ತತ್ವಜ್ಞಾನಿ ಮತ್ತು ರಾಜಕಾರಣಿ ಆಗಿದ್ದ ಆತನು ಬಹುಮುಖ ಪ್ರತಿಭೆಯುಳ್ಳವನಾಗಿದ್ದನು. ಆತನು ಇತಿಹಾಸಕಾರನಿಗಿಂತ ಮಿಗಿಲಾಗಿ ಕವಿಯಾಗಿದ್ದನು. ಆತನ ಕೃತಿಗಳಲ್ಲಿ ವಿಷಯ ವಸ್ತು ಮತ್ತು ಕಾಲಗಣನೆಯ ಐಕ್ಯತೆಯ ಕೊರತೆ ಕಂಡು ಬಂದರೂ ಶೈಲಿಯ ದೃಷ್ಟಿಯಿಂದ ಪರ್ಷಿಯನ್ ಕಾಲಾನುಗತ ದಾಖಲೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ.

ಆತನ ಆರು ಇತಿಹಾಸ ಕೃತಿಗಳಲ್ಲಿ ತಾರಿಖ್–ಇ–ಅಲಾಯ್ ಅಥವಾ ಖಜಾರಿನ್–ಉಲ್–ಫುತುಹಃ ಗದ್ಯ ಕೃತಿಯಾಗಿದ್ದು ಅಲ್ಲಾವುದ್ದೀನ್ ಖಿಲ್ಜಿಯ ದಂಡಯಾತ್ರೆಗಳ ಅಧಿಕೃತ ಇತಿಹಾಸವಾಗಿದೆ. ಮಧ್ಯಯುಗದ ಆದಿಭಾಗದಲ್ಲಿ ಪ್ರಚಲಿತದಲ್ಲಿದ್ದ ಯುದ್ಧ ಕಲೆಯನ್ನು ಅರಿಯಲು ಇದು ಸಹಾಯಕವಾಗುತ್ತದೆ. ಅಷಿಖ ಎಂಬ ಮತ್ತೊಂದು ಕೃತಿಯು ದೇವಲ್ ದೇವಿ ಮತ್ತು ಖಿಜರ್ ಖಾನ್ ಅವರ ಪ್ರಣಯ ಕಥನವಾಗಿದೆ. ನೂಹ್ ಸ್ಪಿಹರ್ ಅಥವಾ ಒಂಭತ್ತು ಆಕಾಶಗಳು ಮುಬಾರಕನ ಕಥೆಗೆ ಸೀಮಿತವಾಗಿದೆ. ತೊಗಲಕ್ ನಾಮದಲ್ಲಿ ಘಿಯಾಸುದ್ದೀನ್ ತೊಗಲಕನ ಕುರಿತಾದ ವಿವರಣೆಗಳನ್ನು ಹೊಂದಿದೆ.

ದೆಹಲಿಯ ಆಡಳಿತ ಮಂಡಲಗಳಲ್ಲಿ ನಿಕಟ ಸಂಬಂಧವನ್ನು ಪಡೆದಿದ್ದ ಬರಾನಿಯು ಇತಿಹಾಸವನ್ನು ರಚಿಸಲು ಅರ್ಹನಾಗಿದ್ದನು. ಆತನು ರಚಿಸಿದ ಸುಮಾರು ಹತ್ತು ಕೃತಿಗಳಲ್ಲಿ ತಾರಿಖ್–ಇ–ಫಿರೋಜ್ ಷಾಹಿ ಹೆಚ್ಚು ಪ್ರಖ್ಯಾತವಾಗಿದೆ. ಸುಲ್ತಾನ್ ಬಲ್ಬನ್ನನ ಆಳಿಕೆಯಿಂದ ಮೊದಲುಗೊಂಡು ಫಿರೋಜ್ ಷಾನ ಆಳಿಕೆಯ ಮೊದಲ ಆರು ವರ್ಷಗಳ ಇತಿಹಾಸವನ್ನು ಈ ಕೃತಿಯು ವಿವರಿಸುತ್ತದೆ. ಬಲ್ಬನ್ ಮತ್ತು ಅಲ್ಲಾವುದ್ದಿನ್

ಖಿಲ್ಜಿಗೆ ಹೆಚ್ಚು ಸ್ಥಳವನ್ನು ವಿನಿಯೋಗಿಸಿದ್ದಾನೆ. ಆತನ ಫತ್ವ–ಇ–ಜಹಂದರಿಯಲ್ಲಿ ವಿಶ್ವದ ಸೃಷ್ಟಿ, ಪ್ರವಾದಿಗಳ ಭೋಧನೆಗಳು, ಆಡಳಿತದ ಮತ್ತು ಸರ್ಕಾರದ ಧ್ಯೇಯಗಳನ್ನು ವಿವರಿಸಿದ್ದಾನೆ.

ಮಧ್ಯಕಾಲ ಭಾರತದ ಇತಿಹಾಸದಲ್ಲಿ ಮೊಗಲರ ಇತಿಹಾಸವು ಅತ್ಯುತ್ತಮವಾದ ಅಧ್ಯಾಯವಾಗಿದೆ. ಮಾತ್ರವಲ್ಲ, ಇದು ಉತ್ತಮ ಅಧ್ಯಯನ ನಡೆದಿರುವ ಯುಗಗಳಲ್ಲಿಯೂ ಒಂದಾಗಿದೆ. ಮುಸಲ್ಮಾನರ ಇತಿಹಾಸವು ಒಂದು ಗಣನೀಯವಾದ ಪ್ರಮಾಣದಲ್ಲಿ ಈ ಯುಗದಲ್ಲಿ ರಚಿಸಲ್ಪಟ್ಟಿತು. ಇದು ಪೂರ್ವ ಸಂಪ್ರದಾಯವನ್ನು ಉತ್ತಮಪಡಿಸುವ ಹಾಗೂ ಕೆಲವು ನೂತನ ಮೂಲತತ್ವಗಳನ್ನು ಅಳವಡಿಸಿಕೊಳ್ಳುವ ಉದ್ದೇಶವನ್ನು ಹೊಂದಿದ್ದರೂ ಸಹ, ಅದು ಸಂಪೂರ್ಣವಾಗಿ ಹೊಸ ಬೆಳವಣಿಗೆಗೆ ಅಥವಾ ವಿಕಾಸನಕ್ಕೆ ಕಾರಣವಾಯಿತೆಂದು ಹೇಳಲಾಗುವದಿಲ್ಲ. ಮೊಗಲ್ ಯುಗದಲ್ಲಿ ಅಮೀರ್ ಖುಸ್ರುವಿನಂತಹ ಕಲಾತ್ಮಕವಾದ ಬರವಣಿಗೆಯು ಕಂಡು ಬರುವದಿಲ್ಲ.

ಇಲ್ಲಿಕಂಡುಬರುವುದು ಜೀವನಚರಿತ್ರೆಗಳು ಅಥವಾ ಆತ್ಮಕಥೆಗಳು. ರಾಜಕೀಯ ವಿಷಯಗಳನ್ನೊಳಗೊಂಡಿರುವ ಐನ್–ಇ–ಅಕ್ಬರಿ, ಸಾರ್ವತ್ರಿಕ ಇತಿಹಾಸಗಳು, ವಿಶೇಷವಾಗಿ ಆಳ್ವಿಕೆಗೆ ಸಂಬಂಧಿಸಿದ ಕಾಲಕ್ರಮಾಗತ ದಾಖಲೆಗಳು, ಸ್ಥಳೀಯ ಹಾಗೂ ಪ್ರಾದೇಶಿಕ ಕಾಲಕ್ರಮಾಗತ ದಾಕಲೆಗಳು ಈ ಯುಗದಲ್ಲಿ ರಚಿಸಲ್ಪಟ್ಟವು. ಈ ಯುಗದಲ್ಲಿ ಕಂಡು ಬರುವ ಮತ್ತೊಂದು ವೈಶಿಷ್ಟ್ಯವೆಂದರೆ ಹಿಂದೂ ಮತ್ತು ಮುಸಲ್ಮಾನ್ ಬರಹಗಾರರು ಪರ್ಷಿಯನ್ ಭಾಷೆಯಲ್ಲಿ ತಮ್ಮ ಕೃತಿಗಳನ್ನು ರಚಿಸಿದುದಾಗಿದೆ.

ಮುಸಲ್ಮಾನ ಬರಹಗಾರರು ಇತಿಹಾಸ ಲೇಖನ ಸಂಪ್ರದಾಯದಲ್ಲಿ ಅವರ ದೃಷ್ಟಿಯಲ್ಲಿ ನ್ಯೂನತೆಗಳನ್ನು ಹೊಂದಿದ್ದರೆ. ಅವರ ಹಿಂದೂ ಅನುಕರಣಕಾರರು ಹೆಚ್ಚು ಕೊರತೆಗಳನ್ನು ಹೊಂದಿದ್ದರು. ಎಚ್.ಇಲಿಯಟ್ ಅವರು ತಿಳಿಸಿರುವಂತೆ. "ಅನ್ಯಾಯಗಳಿಗೆ ತುತ್ತಾದ ಹಿಂದುಗಳ ಸಂವೇದನೆಗಳು, ನಿರೀಕ್ಷೆಗಳು, ನಂಬಿಕೆಗಳು, ಮತ್ತು ಬಯಕೆಗಳ ಮೇಲೆ ಅವರ ಬೆಳಕು ಬೀರುವದಿಲ್ಲ ಮತ್ತು ಅವರು ಆಜ್ಞೆಯಿಂದ ಹೇಳಿ ಬರೆಯಿಸಿದಂತೆ ಬರೆದರು; ಮತ್ತು ಪ್ರತಿಯೊಂದು ವಾಕ್ಸಂಪ್ರದಾಯವೂ ಒಬ್ಬ ಗರ್ವಿಷ್ಠ ಮುಸಲ್ಮಾನ ಪೋಷಕನ ಯಥಾಭಿಮಾನವನ್ನು ಮುಖಸ್ತುತಿ ಮಾಡುವತ್ತ ಜಾಗರುಕತೆಯಿಂದ ಹಾಗೂ ಸೇವಾ ವೃತ್ತಿಯಿಂದ ರೂಪಿಸಲಾಗಿದೆ ಮತ್ತು ವಿಜಯಿಗಳ ಹಿಗ್ಗಿಸಿದ ಭಾಷೆ ಮತ್ತು ಕ್ರಮವಾದ ವಾಕ್ಸಂಪ್ರದಾಯಗಳಿಗೆ ಅವರು ಮಗ್ನರಾಗಿದ್ದರು." ಆದರೆ ಜೆ.ಎನ್. ಸರ್ಕಾರ್ ಅವರು ಈ ಬರಹಗಾರರ ಬಗ್ಗೆ ಹೆಚ್ಚು ಪ್ರಶಂಸಾ ಪೂರ್ಣವಾದ ಚಿತ್ರವನ್ನು ಕೊಡುತ್ತಾರೆ. ಅವರ ಪ್ರಕಾರ. ಈ ಇತಿಹಾಸಕಾರರು "ಆ ಕಾಲದ ಐತಿಹಾಸಿಕ ಘಟನೆಗಳನ್ನು ಸಮಂಜಸವಾಗಿ ಅರಿಯಲು ಪ್ರಸಿದ್ಧ ಮೊಗಲ್ ಅಧಿಕಾರಿಗಳ ಹತ್ತಿರದಲ್ಲಿಯೇ ಇರುತ್ತಿದ್ದರು. ಆದರೆ ಮುಖಸ್ತುತಿಕಾರರನ್ನು ವಂಚಿಸಲಾಗುವಂತೆ ಸಿಂಹಾಸನದ ಸನಿಹದಲ್ಲಿರಲಿಲ್ಲ".

## 14.6 ಮಧ್ಯಕಾಲೀನ ದಕ್ಷಿಣ ಭಾರತದಲ್ಲಿ ಇತಿಹಾಸ ಲೇಖನ

ಮಧ್ಯಕಾಲೀನ ದಕ್ಷಿಣ ಭಾರತದ ಇತಿಹಾಸಕ್ಕೆ ಸಂಬಂಧಿಸಿದಂತೆ ಹಲವಾರು ಇತಿಹಾಸಕಾರರು ಕಾರ್ಯನಿರ್ವಹಿಸಿದ್ದಾರೆ. ವಿಜಯನಗರ ರಾಜ್ಯ ಮತ್ತು ಸಮಾಜವನ್ನು ಕುರಿತು ಗಂಗಾದೇವಿಯ 'ಮಧುರಾವಿಜಯಂ' 'ಸಾಳ್ವಾಭ್ಯುದಯಂ' 'ಅಚ್ಯುತರಾಯಾಭ್ಯುದಯಂ' ಮತ್ತು ಕೃಷ್ಣದೇವರಾಯನ 'ಮನೋಲ್ಲಾಸ' ಗ್ರಂಥಗಳು ಪ್ರಮುಖವಾದವುಗಳು. ಹಾಗೆಯೇ ವಿಜಯನಗರ ಉತ್ತರ ಕಾಲದ ಇತಿಹಾಸ ಮತ್ತು ಸಮಾಜವನ್ನು ಕುರಿತು ಕೆಳದಿಲಿಂಗಣ್ಣರ 'ಕೆಳದಿನೃಪವಿಜಯಂ' ಮತ್ತು ಬಸವರಾಜರ 'ಶಿವತತ್ವರತ್ನಾಕರ' ಮುಂತಾದ ಕೃತಿಗಳು ಮಧ್ಯಕಾಲೀನ ದಕ್ಷಿಣ ಭಾರತದ ಇತಿಹಾಸ ಸಮಾಜ ಮತ್ತು ಸಂಸ್ಕೃತಿಯನ್ನು ಬಿಂಬಿಸುತ್ತವೆ. ಇಲ್ಲಿಕಂಡುಬರುವುದು ಜೀವನಚರಿತ್ರೆಗಳು ಅಥವಾ ಆತ್ಮಕಥೆಗಳು. ರಾಜಕೀಯ ವಿಷಯಗಳನ್ನೊಳಗೊಂಡಿರುವ, ಸಾರ್ವತ್ರಿಕ ಇತಿಹಾಸಗಳು, ವಿಶೇಷವಾಗಿ ಆಳ್ವಿಕೆಗೆ ಸಂಬಂಧಿಸಿದ ಕಾಲಕ್ರಮಾಗತ ದಾಖಲೆಗಳು, ಸ್ಥಳೀಯ ಹಾಗೂ ಪ್ರಾದೇಶಿಕ ಕಾಲಕ್ರಮಾಗತ ದಾಕಲೆಗಳು ಈ ಯುಗದಲ್ಲಿ ರಚಿಸಲ್ಪಟ್ಟವು. ಈ ಯುಗದಲ್ಲಿ ಕಂಡು ಬರುವ ಮತ್ತೊಂದು ವೈಶಿಷ್ಟ್ಯವೆಂದರೆ ಹಿಂದೂ ಮತ್ತು ಮುಸಲ್ಮಾನ್ ಬರಹಗಾರರು ಪರ್ಷಿಯನ್ ಭಾಷೆಯಲ್ಲಿ ತಮ್ಮ ಕೃತಿಗಳನ್ನು ರಚಿಸಿದುದಾಗಿದೆ.

ಮುಸಲ್ಮಾನ ಬರಹಗಾರರು ಇತಿಹಾಸ ಲೇಖನ ಸಂಪ್ರದಾಯದಲ್ಲಿ ಅವರ ದೃಷ್ಟಿಯಲ್ಲಿ ನ್ಯೂನತೆಗಳನ್ನು ಹೊಂದಿದ್ದರೆ. ಅವರ ಹಿಂದೂ ಅನುಕರಣಕಾರರು ಹೆಚ್ಚು ಕೊರತೆಗಳನ್ನು ಹೊಂದಿದ್ದರು. ಎಚ್.ಇಲಿಯಟ್ ಅವರು ತಿಳಿಸಿರುವಂತೆ. "ಅನ್ಯಾಯಗಳಿಗೆ ತುತ್ತಾದ ಹಿಂದುಗಳ ಸಂವೇದನೆಗಳು, ನಿರೀಕ್ಷೆಗಳು, ನಂಬಿಕೆಗಳು, ಮತ್ತು ಬಯಕೆಗಳ ಮೇಲೆ ಅವರ ಬೆಳಕು ಬೀರುವದಿಲ್ಲ ಮತ್ತು ಅವರು ಆಜ್ಞೆಯಿಂದ ಹೇಳಿ ಬರೆಯಿಸಿದಂತೆ ಬರೆದರು; ಮತ್ತು ಪ್ರತಿಯೊಂದು ವಾಕ್ಸಂಪ್ರದಾಯವೂ ಒಬ್ಬ ಗರ್ವಿಷ್ಠ ಮುಸಲ್ಮಾನ ಪೋಷಕನ ಯಥಾಭಿಮಾನವನ್ನು ಮುಖಸ್ತುತಿ ಮಾಡುವತ್ತ ಜಾಗರುಕತೆಯಿಂದ ಹಾಗೂ ಸೇವಾ ವೃತ್ತಿಯಿಂದ ರೂಪಿಸಲಾಗಿದೆ ಮತ್ತು ವಿಜಯಿಗಳ ಹಿಗ್ಗಿಸಿದ ಭಾಷೆ ಮತ್ತು ಕ್ರಮವಾದ ವಾಕ್ಸಂಪ್ರದಾಯಗಳಿಗೆ ಅವರು ಮಗ್ನರಾಗಿದ್ದರು." ಆದರೆ ಜೆ.ಎನ್.ಸರ್ಕಾರ್ ಅವರು ಈ ಬರಹಗಾರರ ಬಗ್ಗೆ ಹೆಚ್ಚು ಪ್ರಶಂಸಾ ಪೂರ್ಣವಾದ ಚಿತ್ರವನ್ನು ಕೊಡುತ್ತಾರೆ. ಅವರ ಪ್ರಕಾರ. ಈ ಇತಿಹಾಸಕಾರರು "ಆ ಕಾಲದ ಐತಿಹಾಸಿಕ ಘಟನೆಗಳನ್ನು ಸಮಂಜಸವಾಗಿ ಅರಿಯಲು ಪ್ರಸಿದ್ಧ ಮೊಗಲ್ ಅಧಿಕಾರಿಗಳ ಹತ್ತಿರದಲ್ಲಿಯೇ ಇರುತ್ತಿದ್ದರು. ಆದರೆ ಮುಖಸ್ತುತಿಕಾರರನ್ನು ವಂಚಿಸಲಾಗುವಂತೆ ಸಿಂಹಾಸನದ ಸನಿಹದಲ್ಲಿರಲಿಲ್ಲ".

## 14.7 ಸಾರಾಂಶ

ಹೀಗೆ ಪ್ರಾಚೀನ, ಮಧ್ಯಕಾಲಿನ ಭಾರತದ ಇತಿಹಾಸಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಆಧಾರಗಳು ಈ ಯುಗದ ಇತಿಹಾಸವನ್ನು ರಚಿಸಲು ಯೂರೋಪಿನ ಇತಿಹಾಸಕಾರರಿಗೆ ನೆರವಾದವು. ಜೇಮ್ಸ್ ಮಿಲ್ ಹಿಂದೂ ಯುಗಕ್ಕಿಂತ ಹೆಚ್ಚಾಗಿ ಮುಸಲ್ಮಾನ ಯುಗದ ಇತಿಹಾಸಕ್ಕೆ ಸ್ವರಭಾರ ಹಾಕಲು ಇದು ಕಾರಣವಾಯಿತು. 16 ನೆಯ ಶತಮಾನದ ಅಂತ್ಯದವರೆಗೆ ಮಧ್ಯಕಾಲೀನ ಭಾರತದ ಇತಿಹಾಸಗಳು

ಮಧ್ಯಕಾಲೀನ ಕಾಲಕ್ರಮಾಗತ ದಾಖಲೆಗಳ ಆಧಾರದ ಮೇಲೆ ನಿಂತಿವೆ. ಈ ಅನುಕೂಲಗಳಿದ್ದಾಗ್ಯೂ ಈ ಇತಿಹಾಸ ಲೇಖನ ಸಂಪ್ರದಾಯದಲ್ಲಿ ಒಂದು ಕೊರತೆ ಎದ್ದು ಕಾಣುತ್ತಿತ್ತು. ಸಿದ್ಧಪಡಿಸಿದ ವಿಷಯಗಳು ಲಭ್ಯವಿದ್ದುದರಿಂದ ಇಂಗ್ಲೀಷ್ ಇತಿಹಾಸಕಾರರು ಮೂಲಾಧಾರಗಳ ಪರಿಶೋಧನೆಯಲ್ಲಿ ತೊಡಗಲಿಲ್ಲ. ಇದರ ಪರಿಣಾಮವಾಗಿ ಇತಿಹಾಸ ಲೇಖನ ಪರಂಪರೆಯಲ್ಲಿ ಪ್ರಾಚೀನ ಭಾರತಕ್ಕಿಂತ ಹೆಚ್ಚಿನ ಬೆಳವಣಿಗೆಯನ್ನು ಈ ಯುಗದಲ್ಲಿ ನಾವು ಕಾಣುವದಿಲ್ಲ.

ಈ ಎರಡು ಯುಗಗಳ ಇತಿಹಾಸ ಲೇಖನ ಪರಂಪರೆಯ ಬೆಳವಣಿಗೆ ಸಮಾನಾಂತರ ಸಾಲುಗಳಲ್ಲಿ ಮುಂದುವರಿಯಿತು. ವಿದೇಶಿ ಪ್ರವಾಸಿಗಳ ವರದಿಯನ್ನು ಪರಿಶೋಧಿಸಿ ಪ್ರಕಟಿಸಿದುದರಿಂದ ಪ್ರಾಚೀನ ಹಾಗೂ ಮಧ್ಯಕಾಲೀನ ಭಾರತಗಳ ಬಗ್ಗೆ ನಮ್ಮ ತಿಳುವಳಿಕೆಯು ಶ್ರೀಮಂತವಾಗಿದೆ. ಮಾತ್ರವಲ್ಲ, ಹೊಸ ಇತಿಹಾಸ ಗ್ರಂಥಗಳ ಪರಿಶೋಧನೆ, ಅವುಗಳ ವಿಮರ್ಶಾತ್ಮಕ ಅಧ್ಯಯನ, ಅರ್ಥ ವಿವರಣೆ, ಆಂಗ್ಲ ಭಾಷೆಗೆ ಅವುಗಳ ಭಾಷಂತರ ಮತ್ತು ಪ್ರಕಟಣೆ, ಪುರತತ್ವ ಶೋಧನೆ, ಭೂ ಶೋಧನೆಯಿಂದ ನಾಣ್ಯಗಳು ಹಾಗೂ ಶಾಸನಗಳನ್ನು ಬೆಳಕಿಗೆ ತಂದುದು ಐತಿಹಾಸಿಕ ಕಾಲದ ಕಾಲಕ್ರಮಾಗತ ದಾಖಲೆಗಳಲ್ಲಿ ದೊರೆಯುವ ವಿಷಯ ವಿವರಣೆಗಳನ್ನು ಸರಿಪಡಿಸಲು, ಮಾರ್ಪಡಿಸಲು, ಪುರವಣಿ ಕೂಡಿಸಲು ಇವು ಇತಿಹಾಸಕಾರನಿಗೆ ಸಹಾಯಕವಾದವು. ಹಿಗಿದ್ದಾಗ್ಯೂ, ಪ್ರಾಚೀನ ಭಾರತದ ಇತಿಹಾಸ ಅಧ್ಯಯನಕ್ಕೆ ಹೋಲಿಸಿದರೆ ಮಧ್ಯಕಾಲೀನ ಭಾರತದ ಇತಿಹಾಸ ಲೇಖನ ಪರಂಪರೆಯಲ್ಲಿ ಗಮನಾರ್ಹವಾದ ಬೆಳವಣಿಗೆ ಕಂಡು ಬರುವುದಿಲ್ಲ.

## 14.8 ಪ್ರಮುಖ ಪದಗಳು

1. ಪ್ರಾಚೀನ: ಮಧ್ಯ ಯುಗಕ್ಕಿಂತ ಮೊದಲಿನ ಕಾಲ
2. ಪೂರ್ವಾಗ್ರಹ: ಪೂರ್ವ ತೀರ್ಪು

## 14.9 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಆರಂಭಿಕ ಮುಸ್ಲಿಂ ಇತಿಹಾಸಜ್ಞರ ಬೆಳವಣಿಗೆ ಮತ್ತು ಪ್ರಗತಿಯನ್ನು ಚರ್ಚಿಸಿ.

## 14.10 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 14.2 ನೋಡಿ.

## 14.11 ಪರಾಮರ್ಶನ ಗ್ರಂಥಗಳು


1. ಗೋಪಾಲ ಬಾ.ರಾ, ಇತಿಹಾಸಶಾಸ್ತ್ರ ಮತ್ತು ಸಿದ್ಧಾಂತ, ಮೈಸೂರು,1996.
2. ಶ್ರೀನಿವಾಸಮೂರ್ತಿ.ಎಚ್.ವಿ, ಇತಿಹಾಸ ಸಂಶೋಧನಾ ಸಮೀಕ್ಷೆ, ಬೆಂಗಳೂರು, 2000.
3. ವೆಂಕಟರತ್ನಂ.ಎ.ವಿ, ಪದ್ಮ.ಎಂ.ಬಿ, ಇತಿಹಾಸ ಸಂಶೋಧನಾ ಮಾರ್ಗ, ಬೆಂಗಳೂರು, 1985.
4. ರಾಜಯ್ಯನ್.ಕೆ, ಹಿಸ್ಟರಿ–ಥಿಯರಿ ಆಂಡ್ ಮೆತಡ್, ಮಧುರೈ, 1976.
5. ಷೇಕ್ ಅಲಿ.ಬಿ, ಹಿಸ್ಟರಿ ಇಟ್ಸ್‌ಥಿಯರಿ ಆಂಡ್ ಮೆಥಡ್, ನ್ಯೂಡೆಲ್ಲಿ, 2001.
6. ಶ್ರೀಧರನ್.ಇ, ಎ ಟೆಕ್ಸ್ಟ್‌ಬುಕ್ ಆಫ್ ಹಿಸ್ಟರಿಯಾಗ್ರಫಿ, ನ್ಯೂಡೆಲ್ಲಿ, 2000.
7. ಕಾಲಿಂಗ್‌ವುಡ್.ಆರ್.ಜಿ, ದಿ ಐಡಿಯಾ ಆಫ್ ಹಿಸ್ಟರಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, 1961.
8. ಕಾರ್.ಇ.ಎಚ್, ವಾಟ್ ಇಸ್ ಇಸ್ಟರಿ, ಪೆಲಿಕನ್ ಪಬ್ಲಿಷರ್ಸ್, 1964.
9. ಹೊಮರ್ ಸಿ. ಹಾಕೆಟ್, ದಿ ಕ್ರಿಟಿಕಲ್ ಮೆಥಡ್ ಇನ್ ಹಿಸ್ಟಾರಿಕಲ್ ರಿಸರ್ಚ ಅಂಡ್ ರೈಟಿಂಗ್, ನ್ಯೂಯಾರ್ಕ,1955.



**ಪಠ್ಯವನ್ನು ರಚಿಸಿದವರು:**
**ಡಾ.ವೈ.ಹೆಚ್.ನಾಯಕವಾಡಿ**

## ಘಟಕ–15 ಮಧ್ಯಯುಗದ ಚರಿತ್ರೆಕಾರರು ಹಾಗೂ ಜೀವನಚರಿತ್ರೆಕಾರರು

**ರಚನೆ**

**15.0** ಉದ್ದೇಶಗಳು

**15.1** ಪೀಠಿಕೆ

**15.2** ಮಧ್ಯಯುಗದ ಚರಿತ್ರೆಕಾರರು

**15.2.1** ರಾಬರ್ಟ್ ಆರ್ಮ್

**15.2.2** ಜೇಮ್ಸ್ ಟಾಡ್

**15.2.3** ಜೆ.ಡಿ. ಕನ್ನಿಂಗ್‌ಹ್ಯಾಮ್

**15.2.4** ಜೆ.ಸಿ. ಗ್ರಾಂಟ್ ಡಫ್

**15.2.6** ಡಾ. ಬಾಲಕೃಷ್ಣ

**15.3** ಸಾರಾಂಶ

**15.4** ಪ್ರಮುಖ ಪದಗಳು

**15.5** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**15.6** ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

**15.7** ಪರಾಮರ್ಶನ ಗ್ರಂಥಗಳು

## 15.0 ಉದ್ದೇಶಗಳು

ಮಧ್ಯಯುಗದ ಚರಿತ್ರೆಕಾರರು ಹಾಗೂ ಜೀವನಚರಿತ್ರೆಕಾರರ ಪರಿಚಯ ಮಾಡಿಕೊಡುವುದೇ ಈ ಅಧ್ಯಾಯದ ಉದ್ದೇಶವಾಗಿದೆ.

## 15.1 ಪೀಠಿಕೆ

ಮಧ್ಯಯುಗದ ಚರಿತ್ರೆಕಾರರು ಭಾರತದಲ್ಲಿ ಬ್ರಿಟೀಷ್ ರಾಷ್ಟ್ರದ ಸೈನಿಕ ಕಾರ್ಯಾಚರಣೆಗಳ ಬಗ್ಗೆ ಹಾಗೂ ಭಾರತವನ್ನು ಆಳಿದ್ದ ಹಲವಾರು ಸಣ್ಣ ಸಣ್ಣ ರಾಜವಂಶಗಳ ಇತಿಹಾಸದ ಬಗ್ಗೆ ಬರೆದಿದ್ದಾರೆ.

## 15.2 ಮಧ್ಯಯುಗದ ಚರಿತ್ರೆಕಾರರು

ಮಧ್ಯಯುಗದ ಚರಿತ್ರೆಕಾರರು ಈ ಕೆಳಗಿನವರು:

### 15.2.1 ರಾಬರ್ಟ್ ಆರ್ಮ್ (1728–1801)

ಈಸ್ಟ್ ಇಂಡಿಯಾ ಕಂಪೆನಿಯ ಉದ್ಯೋಗಿಯಾಗಿದ್ದ ಇಂಗ್ಲೆಂಡಿನವನಾದ ರಾಬರ್ಟ್ ಆರ್ಮ್ ಕ್ರಿ.ಶ. 1728 ರಲ್ಲಿ ಜನಿಸಿದನು. ಹ್ಯಾರೋದಲ್ಲಿ ಶಿಕ್ಷಣವನ್ನು ಪೂರೈಸಿದ ಬಳಿಕ ಕಲ್ಕತ್ತಾಗೆ ಬಂದ ಈತ ತನ್ನ 15ನೆಯ ವಯಸ್ಸಿನಲ್ಲಿಯೇ ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ಉದ್ಯೋಗಕ್ಕೆ ಸೇರಿಕೊಂಡನು. ಹಾಗಾಗಿ ಕ್ರಿ.ಶ. 1754 ರಲ್ಲಿ ಈತನಿಗೆ 26 ವರ್ಷ ವಯಸ್ಸಾಗಿರುವಾಗಲೇ ಕೌನ್ಸಿಲ್ ಆಫ್ ಮದ್ರಾಸ್‌ನ ಸದಸ್ಯನನ್ನಾಗಿ ನೇಮಿಸಲಾಯಿತು. ಕ್ರಿ.ಶ. 1769–1801 ರವರೆಗೆ ಈತ ಕಂಪೆನಿಯ ಅಧಿಕೃತ ಚರಿತ್ರೆಕಾರನಾಗಿ ಕೂಡ ಕಾರ್ಯನಿರ್ವಹಿಸಿದ ಈ 1801ರಲ್ಲಿ ಮರಣಹೊಂದಿದನು.

ಆತನ ಕೃತಿಗಳು: ಇತಿಹಾಸ ಕ್ಷೇತ್ರದಲ್ಲಿ ಪ್ರಸಿದ್ಧಿಯನ್ನು ತಂದುಕೊಟ್ಟಂಥ ಎರಡು ಕೃತಿಗಳನ್ನು ಇವನು ಬರೆದಿದ್ದಾನೆ:

1. ಎ ಹಿಸ್ಟರಿ ಆಫ್ ದ ಮಿಲಿಟರಿ ಟ್ರಾನ್ಸಾಕ್ಷನ್ಸ್ ಆಫ್ ಬ್ರಿಟಿಷ್ ನೇಷನ್ ಇನ್ ಇಂಡೊಸ್ತಾನ್ ಫ್ರಮ್ ಇಯರ್ 1745.
2. ಹಿಸ್ಟಾರಿಕಲ್ ಫ್ರಾಗ್ಮೆಂಟ್ ಆಫ್ ಮುಘಲ್ ಎಂಪೈರ್

ಆತನ ಈ ಎರಡು ಕೃತಿಗಳು ಕ್ರಮವಾಗಿ ಕ್ರಿ.ಶ. 1745 ಹಾಗೂ 1782 ರಲ್ಲಿ ಪ್ರಕಟವಾದವು. ಮೊದಲನೆಯ ಕೃತಿಯಲ್ಲಿ ಈತ ಈಸ್ಟ್ ಇಂಡಿಯಾ ಕಂಪೆನಿಯ ಸೈನ್ಯದ ಕಾರ್ಯಾಚರಣೆಯ ಬಗ್ಗೆ

ಬರೆದಿದ್ದಾನೆ. ಬ್ರಿಟೀಷರು ಭಾರತದಲ್ಲಿ ಇನ್ನೂ ಅಧಿಕಾರ ಸ್ಥಾಪಿಸಿರದಿದ್ದ ಕಾಲದ ಭಾರತದ ಇತಿಹಾಸದ ಅತಿ ಪ್ರಕ್ಷುಬ್ಧ ಕಾಲದ ಬಗೆಗಿನ ಬಹಳ ಮುಖ್ಯವಾದ ಮಾಹಿತಿಗಳು ಈ ಪುಸ್ತಕದಲ್ಲಿ ದೊರೆಯುತ್ತವೆ. ದೊರೆಯುತ್ತವೆ. ತನ್ನ ಉದ್ದೇಶ ಸಾಧನೆಗಾಗಿ ಕಂಪೆನಿಯು ಭಾರತದ ರಾಜರ ಜೊತೆ ಯುದ್ಧಗಳಲ್ಲಿ ತೊಡಗಿತ್ತು. ತನ್ನ ಕೃತಿಯನ್ನು ಪೂರ್ಣಗೊಳಿಸಲು ರಾಬರ್ಟ್ ನೇರ ತನಿಖೆ, ಅನ್ವೇಷಣೆಯನ್ನಷ್ಟೇ ಅಲ್ಲದೆ ಹೆಚ್ಚುವರಿ ಆಕರಗಳು ಹಾಗೂ ಜನಪದ ಆಕರಗಳನ್ನು ಸಹ ಅವಲಂಬಿಸಿದ್ದಾನೆ. ಮಧ್ಯಯುಗದ ಮುಸ್ಲಿಂ ಇತಿಹಾಸಕಾರರ ಕೃತಿಗಳ ನೆರವನ್ನು ಕೂಡ ಪಡೆದಿದ್ದಾನೆ. ಪ್ರೊ.ಆರ್.ಸಿ. ಮಜುಮ್‌ದಾರ್ ಅವರ ಪ್ರಕಾರ, "ಆರ್ಮ್‌ನು ಆಧುನಿಕ ಚರಿತ್ರೆ ಲೇಖನದ ವಿಚಾರಗಳಿಂದ ಪ್ರೇರಿತನಾಗಿ ಕಲೆಹಾಕಿದ ಪುಸ್ತಕಗಳು, ಹಸ್ತಪ್ರತಿಗಳು ಮುಂತಾದ ಆಕರಗಳನ್ನು ಇಂದು ಇಂಡಿಯಾ ಆಫೀಸ್ ಲೈಬ್ರರಿಯಲ್ಲಿ ಕಾಣಬಹುದು".

ಮಡ್ರಾಸ್ ಕೌನ್ಸಿಲ್‌ನ ಉದ್ಯೋಗಿಯಾಗಿದ್ದರಿಂದ ರಾಬರ್ಟ್ ಆರ್ಮ್‌ನಿಗೆ ಹಲವಾರು ಮೂಲದಾಖಲೆಗಳನ್ನು ಪಡೆದುಕೊಳ್ಳುವುದು ಸಾಧ್ಯವಾಯ್ತು. ಹಾಗಾಗಿ ಇಂಥ ಮೂಲದಾಖಲೆಗಳು ಹಾಗೂ ಇತರ ಇತಿಹಾಸಕಾರರು ದಾಖಲಿಸಿಟ್ಟ ಘಟನೆಗಳ ಮಾಹಿತಿಗಳ ಆಧಾರದ ಮೇಲೆ ಆತನ ಕೃತಿಯು ಸಿದ್ಧವಾಯಿತು. ಆದರೆ ದೊರೆತ ಆಕರಗಳ ಸತ್ಯಾಸತ್ಯತೆಯನ್ನು ಆತನು ಪರಾಮರ್ಶಿಸಿ ನೋಡಲಿಲ್ಲವಾದ್ದರಿಂದ ಪುಸ್ತಕದ ಗುಣಮಟ್ಟವು ಕಡಿಮೆಯಾಯಿತು. ಆದಾಗ್ಯೂ ಕೂಡ ಈತ ಮೂಲದಾಖಲೆಗಳನ್ನು ಹೆಚ್ಚಾಗಿ ಆಧರಿಸಿರುವುದರಿಂದ ಈ ಕೃತಿಯು ಮಹತ್ವದ್ದಾಗಿದೆ.

### 15.2.2 ಜೇಮ್ಸ್ ಟಾಡ್ (ಕ್ರಿ.ಶ. 1782–1835)

ಮತ್ತೊಬ್ಬ ಪ್ರಮುಖ ಇತಿಹಾಸಕಾರನಾದ ಜೇಮ್ಸ್ ಟಾಡ್ ಇಸ್ಲಿಂಗ್‌ಟನ್ ಎಂಬಲ್ಲಿ ಜನಿಸಿದನು. ಅಮೇರಿಕದವನಾದ ಆತನ ತಂದೆಯು ಭಾರತದ ಉತ್ತರಪ್ರದೇಶ ರಾಜ್ಯದ ಮಿರ್ಜಾಪುರಕ್ಕೆ ಬಂದು ನೆಲೆಸಿದನು. ಜೇಮ್ಸ್ ಟಾಡ್ 16 ನೆಯ ವಯಸ್ಸಿನಲ್ಲಿ ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ಸೈನಿಕನಾಗಿ ಕೆಲಸಕ್ಕೆ ಸೇರಿಕೊಂಡನು. ಬಹುಬೇಗ ಲೆಫ್ಟಿನೆಂಟ್ ಹುದ್ದೆಗೇರಿದ ಈತನನ್ನು ಸಿಂಧಿಯಾದ ಆಸ್ಥಾನಕ್ಕೆ ಕಂಪೆನಿಯ ಪ್ರತಿನಿಧಿಯಾಗಿ ಕಳುಹಿಸಲಾಯಿತು. ಅಲ್ಲಿಯೂ ಕೂಡ ತನ್ನ ಕಾರ್ಯದಕ್ಷತೆಯನ್ನು ತೋರಿಸಿದ ಈತನನ್ನು ಪಶ್ಚಿಮ ರಜಪೂತ ರಾಜ್ಯಗಳಿಗೆ ಬ್ರಿಟೀಷ್ ಪ್ರತಿನಿಧಿಯನ್ನಾಗಿ ನೇಮಕ ಮಾಡಲಾಯಿತು. ರಾಜಸ್ತಾನದಲ್ಲಿದ್ದಾಗ ಈತ ಹಲವಾರು ರಜಪೂತ ರಾಜರೊಡನೆ ಉತ್ತಮ ಸ್ನೇಹವನ್ನು ಹೊಂದಿದ್ದನು. ರಜಪೂತರ ಇತಿಹಾಸದ ಬಗ್ಗೆ ಕುತೂಹಲ ಹೊಂದಿದ್ದ ಈತ 1832 ರಲ್ಲಿ ಎರಡು ಸಂಪುಟಗಳಲ್ಲಿ 'ಅನ್ನಾಲ್ಸ್ ಅಂಡ್ ಆ್ಯಂಟಿಕ್ವಿಟೀಸ್ ಆಫ್ ರಾಜಸ್ತಾನ್' ಎಂಬ ಕೃತಿಯನ್ನು ಪ್ರಕಟಿಸಿ ಬಹಳ ಪ್ರಸಿದ್ಧಿ ಪಡೆದನು. ಈ ಕೃತಿಯ ಪ್ರಕಟನೆಯ ನಂತರ ಈತ ಪ್ರಸಿದ್ಧ ಇತಿಹಾಸಕಾರರ ಪಟ್ಟಿಯಲ್ಲಿ ಸ್ಥಾನ ಪಡೆದನು.

ಟಾಡ್‌ನ ಇನ್ನೊಂದು ಕೃತಿ 'ಟ್ರಾವೆಲ್ಸ್ ಇನ್ ವೆಸ್ಟರ್ನ್ ಇಂಡಿಯಾ' ಆತನ ಮರಣಾನಂತರ ಪ್ರಕಟವಾಯಿತು. ಈ ಕೃತಿಯಲ್ಲಿ 1822ರಲ್ಲಿ ಆತನು ಜೈನರು ಮತ್ತು ಹಿಂದೂಗಳ ಪವಿತ್ರ ಶಿಖರಗಳಿಗೆ ಕೈಗೊಂಡ ಪ್ರವಾಸಗಳ ಕದನವನ್ನು ಹೊಂದಿದೆ ಮತ್ತು ಅಂದಿನ ಭೌಗೋಳಿಕತೆ, ಧಾರ್ಮಿಕ ಸಾಮಾಜಿಕ

ಹಾಗೂ ರಾಜಕೀಯ ಪರಿಸ್ಥಿತಿಗಳ ಬಗ್ಗೆ ಅಮೂಲ್ಯ ಮಾಹಿತಿಯನ್ನು ನೀಡುತ್ತದೆ. ಈ ಕೃತಿಯಲ್ಲಿ ಟಾಡ್ ಪ್ರಾಚೀನ ನಗರವಾದ ಅನ್ಹಿಲ್‌ವಾರಾದ ಇತಿಹಾಸಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದಾನೆ.

ಮೊದಲನೆಯ ಪುಸ್ತಕದಲ್ಲಿ ರಜಪೂತರ ಇತಿಹಾಸ ಹಾಗೂ ಸಮಾಜದ ವರ್ಣನೆ ಇದೆ. ರಜಪೂತರು ಹೇಗೆ ತಮ್ಮ ಅಂತರಾಳದಿಂದ ಸ್ವಾತಂತ್ರಕ್ಕಾಗಿ ಹಪಹಪಿಸುತ್ತಿದ್ದರು ಎಂಬುದನ್ನು ಈ ಕೃತಿಯು ವಿವರಿಸುತ್ತದೆ. ವಿಶ್ಲೇಷಣೆಗಿಂತ ವಾಸ್ತವತೆಗೇ ಹೆಚ್ಚು ಬೆಲೆಕೊಡುವ ಈ ಕೃತಿಯು ರಜಪೂತರ ಜೀವನ ಪ್ರತಿಯೊಂದು ಮಗ್ಗುಲಿನ ಬಗ್ಗೆಯೂ ಅಮೂಲ್ಯವಾದ ಮಾಹಿತಿಯ್ನನು ನೀಡುತ್ತದೆ. ಕ್ರಮವಾಗಿ ಮರಾಠರು ಹಾಗೂ ಸಿಖ್ಖರ ಬಗ್ಗೆ ಬರೆದಿರುವ ತನ್ನ ಸಮಕಾಲೀನ ಇತಿಹಾಸಕಾರರಾದ ಕನ್ನಿಂಗ್‌ಹ್ಯಾಮ್ ಹಾಗೂ ಡಫ್‌ರಿಗಿಂತ ವಿಶಾಲ ದೃಷ್ಟಿಕೋನವನ್ನು ಟಾಡ್ ಹೊಂದಿದ್ದನು. ಆಕರಗಳ ಹುಡುಕಾಟಕ್ಕಾಗಿ ಆತ ಬಹಳ ಪ್ರಯಾಸಪಡುತ್ತಿದ್ದನು. ರಜಪೂತರ ಇತಿಹಾಸಕ ಮೇಲೆ ಬೆಳಕು ಚೆಲ್ಲುವಂಥ ಯಾವುದೇ ಮಾಹಿತಿಯನ್ನು ತಡಕಾಡಲು ಆತ ಸ್ಥಳೀಯ ಇತಿಹಾಸಕಾರರ ನೆರವಿನೊಂದಿಗೆ ಲಭ್ಯವಿರುವ ಎಲ್ಲ ಆಕರಗಳನ್ನೂ ಜಾಲಾಡುತ್ತಿದ್ದನು. ಆತನ ಅದ್ಭುತ ಕೃತಿಗಳು ಬೇರೆ ಇತಿಹಾಸಕಾರರಿಗೆ ರಾಜಸ್ತಾನದ ಇತಿಹಾಸದ ಬಗ್ಗೆ ಬರೆಯುವಂತೆ ಪ್ರೇರಣೆ ನೀಡಿದವು.

ಜೇಮ್ಸ್ ಟಾಡ್‌ನ ಕೃತಿಗಳು ಪೂರ್ವಗ್ರಹಗಳಿಂದ ಮುಕ್ತವಾಗಿಲ್ಲದಿದ್ದರೂ ಕೂಡ ಆತ ಆಧುನಿಕ ರಾಜಸ್ತಾನದ ಇತಿಹಾಸಕಾರರಲ್ಲಿ ಅಗ್ರಮಾನ್ಯನಾಗಿದ್ದಾನೆ. ಪ್ರೊ.ಕ್ವಾನಂಗೊ ಅವರು ಆತನ ಪ್ರಾಮುಖ್ಯತೆಯನ್ನು ಹೀಗೆ ವರ್ಣಿಸಿದ್ದಾರೆ, ಆತನಲ್ಲಿ ಹಿಂದೂಸ್ತಾನದ ಹೆಲ್ಲಾಸ್ ಹಾಗೂ ಹೆರೊಡೊಟಸ್‌ನ ಸಮ್ಮಿಲನವನ್ನು ಕಾಣಬಹುದು. ಆಧುನಿಕ ಇತಿಹಾಸಕಾರರಿಗೆ ಅಗತ್ಯವಾದ ಸ್ಫೂರ್ತಿಯನ್ನು ಈತನ ಕೃತಿಗಳು ನೀಡಿದವು ಮತ್ತು ಶತಮಾನಕ್ಕೂ ಅಧಿಕ ಕಾಲ ಜನರ ಕಲ್ಪನೆಯನ್ನು ಆರಳಿಸಿದವು. ಆತನ ಅನ್ನಾಲ್‌ಗಳು ಭಾಗಶಃ ಹಳತಾಗಿವೆ ಎನಿಸಿದರೂ ಕೂಡ ಎಂದಿಗೂ ಘನತೆ ಹಾಗೂ ದೇಶವ್ಯಕ್ತಿಗೆ ಮೂಲವಾಗಿ ಉಳಿಯುವಂಥವಾಗಿವೆ.

### 15.2.3 ಜೆ.ಡಿ. ಕನ್ನಿಂಗ್‌ಹ್ಯಾಮ್

ಜೋಸೆಫ್ ಡೇವಿ ಕನ್ನಿಂಗ್‌ಹ್ಯಾಮ್ ಅವರು ಜೂನ್ 1812 ರಲ್ಲಿ ಲ್ಯಾಂಬೆತ್‌ನಲ್ಲಿ ಜನಿಸಿದರು ಅವರ ತಂದೆ ಅಲೆನ್ ಕನ್ನಿಂಗ್‌ಹ್ಯಾಮ್ ಅವರು ಲೇಖಕರು ಹಾಗೂ ವಿದ್ವಾಂಸರಾಗಿದ್ದರು. ಲಂಡನ್ನಿನ ಹಲವು ಖಾಸಗಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿದ ನಂತರ ಜೆ.ಡಿ.ಕನ್ನಿಂಗ್‌ಹ್ಯಾಮ್ ಅವರನ್ನು ಈಸ್ಟ್ ಇಂಡಿಯಾ ಕಂಪೆನಿಯ ಕೆಡೆಟ್ ಆಗಿ ನೇಮಕ ಮಾಡಲಾಯಿತು. ಕಂಪೆನಿಯ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಕೊನೆಗೆ ಈತ 1845ರಲ್ಲಿ ಭವಲ್‌ಪುರ ರಾಜ್ಯಕ್ಕೆ ಬ್ರಿಟಿಶ್ ಪ್ರತಿನಿಧಿಯಾಗಿ ನೇಮಕಗೊಂಡನು. ನಂತರ ಈತ ಭೋಪಾಲದಲ್ಲಿ ಬ್ರಿಟಿಶ್ ರಾಜಕೀಯ ಪ್ರತಿನಿಧಿಯಾದನು. ಭೋಪಾಲ್ ಹಾಗೂ ಪಂಜಾಬಿನಲ್ಲಿರುವಾಗ ಈತ ಸಿಖ್ಖರ ಸಂಪರ್ಕ ಹೊಂದಿ ಅವರ ರೀತಿ ನೀತಿಗಳ ಬಗ್ಗೆ ಬಹಳಷ್ಟು ತಿಳಿದುಕೊಂಡನು. ಆತ ಸಿಖ್ಖರ ಇತಿಹಾಸವನ್ನು ರಚಿಸಿದಾಗ ಸರ್ಕಾರದ ಅನುಮತಿಯಿಲ್ಲದೆ ರಹಸ್ಯ ಮಾಹಿತಿ ಹಾಗೂ ದಾಖಲೆಗಳನ್ನು ಬಳಸಿಕೊಂಡಿದ್ದಕ್ಕಾಗಿ ಆತನನ್ನು ಸೇವೆಯಿಂದ ಅಮಾನತು ಮಾಡಲಾಯಿತು. ಹೀಗೆ ಬರವಣಿಗೆಯ ಮೇಲಿನ

ಪ್ರೀತಿಯಿಂದ ಹುದ್ದೆಯನ್ನು ಕಳೆದುಕೊಳ್ಳಬೇಕಾಗಿ ಬಂದರೂ ಕೂಡ ಆ ಪುಸ್ತಕ ಪ್ರಕಟವಾದ ನಂತರ ಆ ವಿಷಯಕ್ಕೆ ಸಂಬಂಧಿಸಿದಂತೆ ಅಧಿಕಾರವಾಣಿಯಿಂದ ಮಾತನಾಡಬಲ್ಲ ವಿದ್ವಾಂಸನೆಂದು ಈತನನ್ನು ಪರಿಗಣಿಸಲಾಯಿತು.

ಈತನಿಗೆ ಬಹಳ ಹೆಸರು ತಂದುಕೊಟ್ಟ ಈತನ 'ಹಿಸ್ಟರಿ ಆಫ್ ಸಿಖ್ಸ್' ಕೃತಿಯನ್ನು ಬರೆಯಲು ಈತ ನಾಲ್ಕು ವರ್ಷಗಳ ಕಾಲ ಶ್ರಮಿಸಿದ್ದನು. ಪಂಜಾಬ್ ಪ್ರದೇಶ ಹಾಗೂ ಅಲ್ಲಿನ ಜನರ ಕದಾನಕದೊಂದಿಗೆ ಆರಂಭವಾಗುವ ಈ ಕೃತಿಯಲ್ಲಿ ಸಿಖ್ ಗುರುಗಳ ಬೋಧನೆಗಳ ಬಗ್ಗೆ ಹಾಗೂ ಸಿಖ್ಖರು ಯುದ್ಧಪ್ರಿಯ ಜನರಾಗಿ ಬದಲಾದ ವೃತ್ತಾಂತದ ಬಗ್ಗೆಯೂ ಬರೆಯಲಾಗಿದೆ. ಬಂದಾ ಬಹಾದುರ್, ಹಲವು ಮಿಸಾಲ್‌ಗಳಾಗಿ ಸಿಖ್ಖರ ವಿಭಜನೆ ಮತ್ತು ಪಂಜಾಬಿನ ಸಿಂಹ ರಂಜಿತ್ ಸಿಂಘ್ ಅವರ ಬಗ್ಗೆಯೂ ಈ ಪುಸ್ತಕದಲ್ಲಿ ಬರೆಯಲಾಗಿದೆ. ರಂಜಿತ್ ಸಿಂಘ್ ಇಡೀ ಪಂಜಾಬ್ ಪ್ರಾಂತ್ಯದ ಮೇಲೆ ಅಧಿಕಾರ ಸ್ಥಾಪಿಸಿದ್ದು ಹೇಗೆ, ಆತನ ಮರಣಾನಂತರ ಸಿಖ್ಖರಲ್ಲಿ ಉಂಟಾದ ಒಳಜಗಳ ಹೇಗೆ ಬ್ರಿಟಿಶರ ವಿರುದ್ಧದ ಮೊದಲ ಸಿಖ್ ಯುದ್ಧಕ್ಕೆ ಕಾರಣವಾಯಿತು ಮತ್ತು ಆಂಗ್ಲರು ಹಾಗೂ ಸಿಖ್ಖರ ಸಂಬಂಧ ಇವುಗಳನ್ನು ಕುರಿತು ಈ ಕೃತಿಯು ವಿಸ್ತಾರವಾಗಿ ಚರ್ಚಿಸುತ್ತದೆ. ಈ ಎರಡನೇ ಆಂಗ್ಲೋ-ಸಿಖ್ ಯುದ್ಧದ ಬಗ್ಗೆ ಏನನ್ನೂ ಬರೆದಿಲ್ಲ ಆದರೆ ಮಹಾರಾಜ ರಂಜಿತ್ ಸಿಂಘ್ ಹಾಗೂ ಆತನ ಉತ್ತರಾಧಿಕಾರಿಗಳ ಅಡಿಯಲ್ಲಿ ಪಂಜಾಬಿನಲ್ಲಿ ನಡೆದ ಆಡಳಿತದ ಬಗ್ಗೆ ಈ ಕೃತಿಯಲ್ಲಿ ಸವಿಸ್ತಾರವಾದ ವರ್ಣನೆಯಿದೆ.

ಈ ಕೃತಿಗೆ ಆಕರವಾಗಿ ಹಲವಾರು ಸರ್ಕಾರಿ ದಾಖಲೆಗಳು ಮತ್ತು ಮೂಲಗ್ರಂಥಗಳಾದ ಆದಿಗ್ರಂಥ, ದಾಬಿಸ್ತಾನ್-ಎ-ಮಜಹಿತ್ ಮತ್ತು ಸಿಯಾರ್-ಉಲ್-ಮುತಖರೇನ್ ಮುಂತಾದವುಗಳನ್ನು ಬಳಸಿಕೊಳ್ಳಲಾಗಿದೆ. ಜೊತೆಗೆ ಲೇಖಕನ ವೈಯಕ್ತಿಕ ಅಭಿಪ್ರಾಯಗಳನ್ನು ದಾಖಲಿಸಿರುವುದನ್ನು ಕೂಡ ನೋಡಬಹುದು.

ಒಟ್ಟಿನಲ್ಲಿ ಹೇಳುವುದಾದರೆ ಜೆ.ಡಿ. ಕನ್ನಿಂಗ್‌ಹ್ಯಾಮ್ ಒಬ್ಬ ಸತ್ಯವಂತ ಹಾಗೂ ನಿಷ್ಪಕ್ಷಪಾತಿ ಚರಿತ್ರಕಾರನಾಗಿದ್ದ, ಆದ್ದರಿಂದಲೇ ಆತ ಬ್ರಿಟಿಶ್ ಸರಕಾರದ ಟೀಕೆಯನ್ನೆದುರಿಸಬೇಕಾಯಿತು. ಆದರೆ ಕೇವಲ ಆತನ ಒಂದು ಕೃತಿಯಿಂದಲೇ ಆತ ಮಧ್ಯಯುಗದ ಇತಿಹಾಸಕಾರರ ಪಟ್ಟಿಯಲ್ಲಿ ಅಗ್ರಮಾನ್ಯನಾಗಿ ನಿಲ್ಲುತ್ತಾನೆ.

### 15.2.4 ಜೆ.ಸಿ. ಗ್ರ್ಯಾಂಟ್ ಡಫ್ (ಕ್ರಿ.ಶ. 1789–1858)

ಮಧ್ಯಯುಗದ ಇತರ ಇತಿಹಾಸಕಾರರಂತೆ ಗ್ರ್ಯಾಂಟ್ ಡಫ್ ಹಾಗೂ ಗೋವಿಂದ ಸಖಾರಾಮ್ ಸರದೇಸಾಯಿ ಕೂಡ ಭಾರತದ ಚರಿತ್ರಲೇಖನ ಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆ ನೀಡಿದ್ದಾರೆ. ಈ ಇಬ್ಬರೂ ಕೂಡ ಬಹಳ ಪ್ರಸಿದ್ಧ ಇತಿಹಾಸಕಾರರಾಗಿದ್ದರು ಮತ್ತು ಇವರ ಕೃತಿಗಳು ನಂತರದ ಹಲವಾರು ಇತಿಹಾಸಕಾರರಿಗೆ ಸ್ಫೂರ್ತಿಯನ್ನೊದಗಿಸಿದವು.

ಗ್ರ್ಯಾಂಟ್ ಡಫ್ ಅವರು ಕ್ರಿ.ಶ. 1789 ರಲ್ಲಿ ಇಂಗ್ಲೆಂಡಿನಲ್ಲಿ ಸ್ಕಾಟಿಶ್ ಕುಟುಂಬವೊಂದರಲ್ಲಿ ಜನಿಸಿದರು. ಅಟೆರ್‌ಡೀನ್‌ನಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ ಹದಿನಾರನೆಯ ವಯಸ್ಸಿನಲ್ಲಿ ಭಾರತಕ್ಕೆ ಬಂದು ಬಾಂಬೆ ಮಿಲಿಟರಿ ಸರ್ವೀಸಿನಲ್ಲಿ ಸೈನಿಕನಾಗಿ ಕೆಲಸಕ್ಕೆ ಸೇರಿದರು. ಹಲವಾರು ಯುದ್ಧಗಳಲ್ಲಿ ಭಾಗವಹಿಸಿದ ಇವರು ನಂತರ 1818 ರಲ್ಲಿ ಕ್ಯಾಪ್ಟನ್ ಪದವಿಗೇರಿದರು. ಎಲ್ಫಿನ್‌ಸ್ಟೋನ್ ಅವರು ಇವರನ್ನು ಸತಾರಾ ರಾಜ್ಯಕ್ಕೆ ರಾಜಕೀಯ ಪ್ರತಿನಿಧಿಯನ್ನಾಗಿ ನೇಮಿಸಿದರು. ಈ ಹುದ್ದೆಯಲ್ಲಿ ಇವರು ರಾಜನಿಗೆ ಹಾಗೂ ಇತರ ಅಧಿಕಾರಿಗಳಿಗೆ ತರಬೇತಿ ನೀಡಿ ಅವರು ಯಾವುದೇ ತಕರಾರಿಲ್ಲದೆ ರಾಜ್ಯವನ್ನು ಬ್ರಿಟಿಶರಿಗೆ ಒಪ್ಪಿಸುವಂತೆ ಮಾಡಬೇಕಿತ್ತು. ಇವರು 1822ರವರೆಗೆ ಅಂದರೆ ನಾಲ್ಕು ವರ್ಷಗಳ ಕಾಲ ಈ ಹುದ್ದೆಯಲ್ಲಿದ್ದರು. ಮರಾಠರ ಇತಿಹಾಸದ ವಿದ್ವಾಂಸರಾಗಿದ್ದ ಇವರು ಆ ರಾಜ್ಯದಲ್ಲಿದ್ದಷ್ಟು ಅವಧಿಯಲ್ಲಿ ಅಲ್ಲಿನ ಇತಿಹಾಸದ ಬಗ್ಗೆ ಸಾಕಷ್ಟು ಆಕರಗಳನ್ನು ಕಲೆಹಾಕಿದರು. ಇವುಗಳಲ್ಲಿ ಮುಘಲ್ ರಾಜರು ಹಾಗೂ ಸೈಯದ್ ಸಹೋದರರು ಬರೆದ ಪತ್ರಗಳ ಮೂಲಪ್ರತಿಗಳು ಮತ್ತು ಮಹಮ್ಮದ್ ಷಾನು ಮರಾಠರಿಗೆ ನೀಡಿದ ದತ್ತಿಯ ದಾಖಲೆಗಳು ಸೇರಿವೆ. ಪೇಶ್ವೆಯವರ ಪತ್ರಗಳು ಕೂಡ ಮುಖ್ಯವಾದ ದಾಖಲೆಗಳಾಗಿವೆ. ಸತಾರಾದ ರಾಜ, ಚಿಟ್ನಿಸ್ ವಂಶ ಮತ್ತು ಹಲವು ಘಟನೆಗಳ ಪ್ರತ್ಯಕ್ಷ ದರ್ಶಿಗಳಾದ ಕೆಲವು ಮುಖ್ಯ ವ್ಯಕ್ತಿಗಳಿಂದ ಮೂಲ ದಾಖಲೆಗಳನ್ನು ಪಡೆಯುವಲ್ಲಿಯೂ ಇವರು ಯಶಸ್ವಿಯಾದರು.

ದೊರೆತ ದಾಖಲೆಗಳ ಬಳಕೆಯಲ್ಲಿ ಗ್ರ್ಯಾಂಟ್ ಡಫ್ ವೈಜ್ಞಾನಿಕ ಕ್ರಮವನ್ನನುಸರಿಸಿದರು. ದೊರೆ ದಾಖಲೆಗಳು ಹಾಗೂ ಇತರ ಆಕರಗಳ ಸತ್ಯಾಸತ್ಯತೆಯನ್ನು ಮೊದಲು ಪರೀಕ್ಷಿಸಿ ನಂತರ ಅವುಗಳನ್ನು ಆಧರಿಸಿ ಕೃತಿಯ ರಚನೆಗೆ ತೊಡಗುತ್ತಿದ್ದರು. ಇವರ ಹಸ್ತಪ್ರತಿಗಳನ್ನು ಪ್ರಸಿದ್ಧ ವಿದ್ವಾಂಸರು ಹಾಗೂ ಇತಿಹಾಸಕಾರರಾದ ಎಲ್ಫಿನ್‌ಸ್ಟೋನ್, ವಿಲಿಯಂ ಎರ್‌ಸ್ಕೈನ್, ಜೊಹಾನ್ ಬ್ರಿಗ್ಸ್ ಮುಂತಾದವರು ಓದಿದರು. ಇವರ ಕೃತಿಯನ್ನು ಕೂಲಂಕುಷವಾಗಿ ಓದಿದ ನಂತರ ಎಲ್ಫಿನ್‌ಸ್ಟೋನ್ ಅವರು ಹೀಗೆ ಹೇಳಿದರು. “ಈ ಪುಸ್ತಕವು ಅದ್ಭುತವಾಗಿದೆ ಮತ್ತು ಇದುವರೆಗೂ ತಿಳಿದಿರದಿದ್ದ ಹಲವಾರು ವಿಚಾರಗಳ ಬಗ್ಗೆ ಕುತೂಹಲ ತಣಿಸುವಂತಿದೆ. ಮರಾಠರ ಹಿರಿಮೆಯನ್ನು ಓದುಗರಿಗೆ ಸಂಪೂರ್ಣ ತೃಪ್ತಿಯಾಗುವ ಹಾಗೆ ಸವಿವರವಾಗಿ ಚಿತ್ರಿಸಲಾಗಿದೆ. ‘ಮರಾಠ ಹಿಸ್ಟರಿ’ ಎಂಬ ಈ ಕೃತಿಯು ಒಂದು ಅಮೂಲ್ಯ ಹಾಗೂ ಜನಪ್ರಿಯವೂ ಆದ ಕೃತಿಯಾಗುತ್ತದೆಯೆನ್ನುವುದರಲ್ಲಿ ನನಗೆ ಯಾವುದೇ ಸಂದೇಹವಿಲ್ಲ.

ಆದರೆ ವಿಮರ್ಶಾ ಮನೋಭಾವದ ಮರಾಠರ ಇತಿಹಾಸದ ವಿದ್ವಾಂಸರೊಬ್ಬರು ಗ್ರ್ಯಾಂಟ್ ಡಫ್‌ರ ಕೃತಿಯಲ್ಲಿ ತಪ್ಪುಗಳನ್ನು ಗುರುತಿಸಿದ್ದಾರೆ, ಮತ್ತು ಈ ಕೃತಿಯು ‘ಅಪೂರ್ಣ ಹಾಗೂ ನಂಬಲರ್ಹವಲ್ಲದ್ದು’ ಎಂದು ಹೇಳಿದ್ದಾರೆ. ಡಫ್‌ಅವರು ವೃತ್ತಿಪರ ಚರಿತ್ರಕಾರರಾಗಿರಲಿಲ್ಲ ಎಂಬುದನ್ನು ನಾವಿಲ್ಲಿ ಮರೆಯುವಂತಿಲ್ಲ, ಅವರು ಸಾಮಾನ್ಯ ಶೈಲಿಯಲ್ಲಿ ಬರೆದಿದ್ದರಿಂದ ಅವರ ಕೃತಿಗಳಲ್ಲಿನ ತಪ್ಪುಗಳು ಸಹಜವಾಗಿ ಆಗಿರುವಂಥವು ಎನ್ನಬಹುದು. ಜೊತೆಗೆ ಅವರಿಗೆ ದೊರೆತ ಅಗಾಧ ಪ್ರಮಾಣದ ದಾಖಲೆಗಳನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಲು ಒಬ್ಬ ತರಬೇತಿ ಹೊಂದಿದ ಇತಿಹಾಸಕಾರನೇ ಬೇಕು.

ಎ.ಆರ್.ಕುಲಕರ್ಣಿಯವರು ಡಫ್‌ರ ಕೃತಿಯನ್ನು ಪ್ರಶಂಸಿಸುತ್ತ ಹೀಗೆ ಹೇಳಿದ್ದಾರೆ, **"ಮರಾಠರ** ಇತಿಹಾಸಕ್ಕೆ ಪ್ರತ್ಯೇಕವಾಗಿ ಹಾಗೂ ಒಟ್ಟಾರೆಯಾಗಿ ಆಧುನಿಕ ಭಾರತದ ಚರಿತ್ರಲೇಖನ ಕ್ಷೇತ್ರಕ್ಕೆ ಡಫ್ ಅವರ ಕೊಡುಗೆ ಅನನ್ಯವಾದದ್ದು. ಅದು 1810ರಲ್ಲಿ ಸ್ಕಾಟ್‌ವೇರಿಂಗ್ ಅವರು ಬರೆದ ಮರಾಠರ ಇತಿಹಾಸಕ ಉತ್ತಮೀಕರಣವಷ್ಟೇ ಅಲ್ಲದೆ ಭಾರತದಲ್ಲಿ ಮರಾಠರ ಇತಿಹಾಸದ ವಿಮರ್ಶಾತ್ಮಕ ಅಧ್ಯಯನಕ್ಕೆ ನಾಂದಿ ಹಾಡಿತು. ಕಿಂಚೇಡ್ ಮತ್ತು ಪರಸ್ಕೀಸ್, ರಾವ್ ಬಹದ್ದೂರ್, ಜಿ.ಎಸ್.ಸರ್ದೇಸಾಯಿ, ಸರ್ ಜೆ–ಎನ್. ಸರ್ಕಾರ್, ಎಸ್.ಎನ್.ಸೇನ್ ಮತ್ತು ಬಾಲಕೃಷ್ಣ ಮುಂತಾದ ವಿದ್ವಾಂಸರು ತಮ್ಮ ವಿವರವಾದ ವಿಮರ್ಶಾತ್ಮಕ ಅಧ್ಯಯನಗಳಿಂದ ಈ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ**"**.

## 15.2.5 ಸರ್ ಶಫತ್ ಅಹ್ಮದ್ ಖಾನ್

ಭಾರತದ ಮಧ್ಯಯುಗದ ಚರಿತ್ರಲೇಖನಕ್ಕೆ ಮಹತ್ವದ ಕೊಡುಗೆ ನೀಡಿದ ಬಹುದೊಡ್ಡ ವಿದ್ವಾಂಸರಾದ ಸರ್ ಶಫತ್ ಅಹ್ಮದ್ ಖಾನ್ ಅವರು ಮುರಾದಾಬಾದಿನ ಮಧ್ಯಮವರ್ಗದ ಕುಟುಂಬವೊಂದರಲ್ಲಿ ಜನಿಸಿದರು. ಆರಂಭಿಕ ಶಿಕ್ಷಣವನ್ನು ಭಾರತದಲ್ಲಿ ಪೂರೈಸಿದ ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ತೆರಳಿ ಡಬ್ಲಿನ್ ವಿಶ್ವವಿದ್ಯಾಲಯದಿಂದ **'ಡಾಕ್ಟರ್ ಆಫ್ ಲೆಟರ್ಸ್'** ಪದವಿಯನ್ನು ಪಡೆದರು. ಭಾರತಕ್ಕೆ ಮರಳುವ ಮುನ್ನ ಲಂಡನ್ ಕಂಟ್ರಿ ಕೌನ್ಸಿಲ್ ಸ್ಕೂಲ್ ಆಫ್ ಎಜುಕೇಶನ್‌ನಲ್ಲಿ ಬೋಧನೆ ಮಾಡುತ್ತಿದ್ದರು. ಭಾರತಕ್ಕೆ ಮರಳಿದ ನಂತರ ಮೊದಲಿಗೆ ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರ ವಿಭಾಗದಲ್ಲಿ ರೀಡರ್ ಆಗಿ ಕಾರ್ಯನಿರ್ವಹಿಸಿದರು. ನಂತರ ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ಪ್ರೊ.ರಶಬ್ರೂಕ್ ವಿಲಿಯಮ್ಸ್ ಇವರ ಸ್ಥಳದಲ್ಲಿ ಇತಿಹಾಸ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥರಾಗಿ ನೇಮಕಗೊಂಡರು. ರಾಷ್ಟ್ರ ರಾಜಕಾರಣದಲ್ಲಿ ಸಕ್ರಿಯವಾಗಿದ್ದ ಅವರು ಉತ್ತರಪ್ರದೇಶದ ಪ್ರಾವಿನ್ಶಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಚುನಾಯಿತರಾದರು. 1946ರಲ್ಲಿ ತಾತ್ಕಾಲಿಕ ಸರ್ಕಾರದ ರಚನೆಯ ಸಂದರ್ಭದಲ್ಲಿ ಪಂಡಿತ್ ಜವಾಹರಲಾಲ್ ನೆಹರೂ ಅವರು ಇವರನ್ನು ತಮ್ಮ ಸರ್ಕಾರದಲ್ಲಿ ಸೇರಿಸಿಕೊಂಡರು. ಉದಾರವಾದಿಯಾಗಿದ್ದ ಇವರು ಜೀವನದುದ್ದಕ್ಕೂ ರಾಜಕೀಯದಲ್ಲಿ ಸಕ್ರಿಯವಾಗಿದ್ದುಕೊಂಡೇ ತಮ್ಮ ಸಂಶೋಧನೆಯನ್ನು ಮುಂದುವರೆಸಿದರು. ಶಫ್‌ತ್ ಅಹ್ಮದ್ ಖಾನ್ ಅವರು ಮಧ್ಯಯುಗದ ಭಾರತದ ಚರಿತ್ರಲೇಖನಕ್ಕೆ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ. ಅವರು ಬರೆದ ಪುಸ್ತಕಗಳು ಅವರಿಗೆ ಬಹಳ ಪ್ರಸಿದ್ಧಿಯನ್ನು ತಂದುಕೊಟ್ಟಿವೆ ಅವುಗಳಲ್ಲಿ ಕೆಲವು:

1. ಈಸ್ಟ್ ಇಂಡಿಯಾ ಟ್ರೇಡ್ ಇನ್ ಸೆವೆಂಟೀಂತ್ ಸೆಂಚುರಿ
2. ಹಿಸ್ಟರಿ ಆಫ್ ದ ಹಿಸ್ಟೋರಿಯನ್ಸ್ ಆಫ್ ಬ್ರಿಟಿಶ್ ಇಂಡಿಯಾ
3. ಇಂಡಿಯನ್ ಫೆಡರೇಶನ್
4. ಆಂಗ್ಲೊ–ಪೋರ್ಚುಗೀಸ್ ನೆಗೊಂಶಿಯೇಶನ್ಸ್ ರಿಲೇಟಿಂಗ್ ಟು ಬಾಂಬೆ 166–1677
5. ಫೆಡರಲ್ ಫೈನಾನ್ಸ್
6. ಜಾನ್ ಮಾರ್ಶಲ್ ಇನ್ ಇಂಡಿಯಾ
7. ಸೌರ್ಸಸ್ ಆಫ್ ಹಿಸ್ಟರಿ ಆಫ್ ಬ್ರಿಟಿಶ್ ಇಂಡಿಯಾ ಇನ್ ಸೆವೆಂಟೀಂತ್ ಸೆಂಚುರಿ.

ಅವರ ಪ್ರಕಾರ ಒಬ್ಬ ಇತಿಹಾಸಕಾರನು ಆಕರಗಳನ್ನು ಕೇವಲ ಕಲೆಹಾಕುವುದಷ್ಟೇ ಅಲ್ಲದೆ ಆ ಮೂಲಗಳನ್ನು ಚೆನ್ನಾಗಿ ಪರಾಮರ್ಶಿಸಿ ನೋಡಬೇಕು. ಒಂದು ನಿಷ್ಪಕ್ಷಪಾತಿ ನಿಲುವನ್ನು ಹೊಂದಲು ಇದರ ಅಗತ್ಯವಿದೆ. ಅವರು ವೈಜ್ಞಾನಿಕ ದೃಷ್ಟಿಕೋನವನ್ನು ಹೊಂದಿದ್ದರು ಹಾಗೂ ಅವರ ಕೃತಿಗಳು ಅವರ ವಿಷಯಜ್ಞಾನದ ವಿಸ್ತಾರವನ್ನು ತೋರಿಸುತ್ತವೆ. ಚರಿತ್ರಲೇಖನದ ಬಗ್ಗೆ ತಮ್ಮ ನಿಲುವುಗಳನ್ನು ಅವರು ತಮ್ಮ "ಹಿಸ್ಟರಿ ಅಂಡ್ ಹಿಸ್ಟೋರಿಯನ್ಸ್ ಆಫ್" ಬ್ರಿಟಿಶ್ ಇಂಡಿಯಾ" ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. "ನಾನು ಯಾವಾಗಲೂ ವೈಜ್ಞಾನಿಕ ಇತಿಹಾಸದಲ್ಲಿ ನಂಬಿಕೆಯುಳ್ಳವನು ಮತ್ತು ಒಬ್ಬ ಇತಿಹಾಸಕಾರನ ಮೂಲ ಕರ್ತವ್ಯವು ದಾಖಲೆ ಹಾಗೂ ಮಾಹಿತಿಗಳನ್ನು ಕಲೆಹಾಕಿ ಅವುಗಳನ್ನು ತೀವ್ರವಾಗಿ ಪರೀಕ್ಷಿಸುವುದು ಎಂದು ನಂಬಿರುವವನು. ಈ ಕಾರ್ಯವನ್ನು ತೃಪ್ತಿಕರವಾಗಿ ಮಾಡಿದಾಗ ಆತ ನಿಷ್ಪಕ್ಷಪಾತಿಯಾಗಿ ಯಾವುದೇ ಪೂರ್ವಗ್ರಹಗಳಿಲ್ಲದಂಥ ಇತಿಹಾಸವನ್ನು ಬರೆಯುವುದು ಸಾಧ್ಯವಿದೆ, "ಎಂದು ಶಫತ್ ಅವರು ಹೇಳಿದ್ದಾರೆ.

ಶಫತ್ ಅವರ ಕೃತಿಗಳ ಮುಖ್ಯ ಲಕ್ಷಣವೆಂದರೆ ಯಾವುದೇ ವಿಷಯದ ಬಗ್ಗೆ ಅವರು ಬರೆದರೂ ಕೂಡ ಮೊದಲು ಈ ವಿಷಯದ ಬಗ್ಗೆ ವ್ಯಾಪಕವಾದ ಮಾಹಿತಿಯನ್ನು ಕಲೆಹಾಕಿ ಅವುಗಳ ಸತ್ಯಾಸತ್ಯತೆಯನ್ನು ಪರೀಕ್ಷಿಸಿದ ನಂತರವೇ ಅವನ್ನು ಬಳಸುವುದು. ಅವರ ಪ್ರಕಾರ ಚರಿತ್ರಲೇಖನದ ಮೂರು ಮುಖ್ಯ ಅಂಶಗಳೆಂದರೆ ಮಾಹಿತಿ, ಮೂಲಗಳ ಸಂಗ್ರಹಣೆ, ಅವುಗಳ ಪರಾಮರ್ಶೆ, ಮತ್ತು ಅವುಗಳ ವ್ಯಾಖ್ಯಾನ. ಈ ಮೂರು ಅಂಶಗಳನ್ನು ಅವರು ಜತನದಿಂದ ಪಾಲಿಸಿದ್ದರಿಂದಲೇ ಅವರು ಒಬ್ಬ ಮಹತ್ವದ ಇತಿಹಾಸಕಾರರಾಗಿ ಹೊರಹೊಮ್ಮಿದರು.

## 15.2.6 ಡಾ. ಬಾಲಕೃಷ್ಣ

1882ರಲ್ಲಿ ಮುಲ್ತಾನಿನಲ್ಲಿ ಜನಿಸಿದ ಇವರನ್ನು ಇವರು ಜನಿಸಿದ ಕೂಡಲೇ ತಂದೆ-ತಾಯಿಯರು ತ್ಯಜಿಸಿದ್ದರಿಂದ ಒಬ್ಬ ಮುಸ್ಲಿಂ ರೈತನು ಇವರನ್ನು ಸಾಕಿ ಬೆಳೆಸಿದನು. ಬಾಲ್ಯವನ್ನು ಬಡತನದಿಂದಲೇ ಕಳೆದ ಇವರು ತಮ್ಮ ಅಜ್ಜನ ಸಹಾಯದಿಂದ ವಿದ್ಯಾಭ್ಯಾಸವನ್ನು ಮುಂದುವರೆಸಿದರು. ಇವರು ಲಾಹೋರಿನಲ್ಲಿ ತಮ್ಮ ಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದರು. ವಿದ್ಯಾಭ್ಯಾಸ ಪೂರ್ಣವಾದ ಕೂಡಲೇ ಇವರನ್ನು ಗುರುಕುಲ ಕಂಗ್ರಿಯಲ್ಲಿ ಅರ್ಥಶಾಸ್ತ್ರ ಹಾಗೂ ರಾಜ್ಯಶಾಸ್ತ್ರದ ಪ್ರೊಫೆಸರ್ ಆಗಿ ನೇಮಕ ಮಾಡಲಾಯಿತು. ನಂತರ ಇವರು ಉಪಪ್ರಾಂಶುಪಾಲ ಹಾಗೂ ಪ್ರಾಂಶುಪಾಲ ಹುದ್ದೆಗೇರಿದರು. 1919ರಲ್ಲಿ ಇಂಗ್ಲೆಂಡಿಗೆ ಹೋಗಿ ಅಲ್ಲಿನ ಲಂಡನ್ ವಿಶ್ವವಿದ್ಯಾಲಯದಿಂದ ಡಾಕ್ಟರ್ ಪದವಿಯನ್ನು ಪಡೆದರು ಅದಕ್ಕಾಗಿ ಅವರು 'ಕಮರ್ಶಿಯಲ್ ರಿಲೇಶನ್ಸ್ ಬ್ರಿಟನ್ ಇಂಡಿಯ ಅಂಡ್ ಇಂಗ್ಲೆಂಡ್' ಎಂಬ ಪ್ರಬಂಧ ಮಂಡಿಸಿದರು. ಇಂಗ್ಲೆಂಡಿನಿಂದ ಹಿಂತಿರುಗಿದ ಮೇಲೆ 1940ರಲ್ಲಿ ನಿದನರಾಗುವವರೆಗೂ ರಾಜಾರಾಂ ಕಾಲೇಜಿನ ಪ್ರಾಂಶುಪಾಲರಾಗಿದ್ದರು.

ಡಾ.ಬಾಲಕೃಷ್ಣ ಅವರು ಭಾರತೀಯ ಧರ್ಮ, ಸಂಸ್ಕೃತಿ, ಅರ್ಥಶಾಸ್ತ್ರ, ರಾಜಕೀಯ ಮತ್ತು ಇತಿಹಾಸಕ ಬಗ್ಗೆ ಅಪಾರ ಪಾಂಡಿತ್ಯ ಹೊಂದಿದ್ದರು. ಇತಿಹಾಸ ಕ್ಷೇತ್ರಕ್ಕೆ ಇವರು ನೀಡಿರುವ ಕೊಡುಗೆ ಬಹಳ ಮಹತ್ವದ್ದು.

ಹದಿನೆಂಟು ವರ್ಷಗಳ ಸತತ ಪರಿಶ್ರಮದಿಂದ ತಮ್ಮ ಅದ್ಭುತ ಕೃತಿ 'ಶಿವಾಜಿ ದಿ ಗ್ರೇಟ್' ಅನ್ನು ಐದು ಸಂಪುಟಗಳಲ್ಲಿ ಪ್ರಕಟಿಸಿದರು ಇದನ್ನು ಪ್ರಕಟಿಸುವ ಮುನ್ನ ವ್ಯಾಪಕವಾಗಿ ಪ್ರವಾಸ ಮಾಡಿ ಲಂಡನ್, ಬಟಾವಿಯಾ, ಹೇಗ್, ಬಾಂಗೆ, ಗೋವಾ, ಮದ್ರಾಸ್, ಪಾಂಡಿಚೆರಿ, ಸತಾರಾ, ತಂಜಾವೂರು ಮತ್ತು ಪೂನಗಳಿಂದ ಶಿವಾಜಿಯ ಬಗ್ಗೆ ಅಗಾದ ಮಾಹಿತಿ ಕಲೆಹಾಕಿದರು. ಹೇಗ್ ಮತ್ತು ಬಟಾವಿಯಾದಲ್ಲಿನ ಡಚ್ ದಾಖಲೆಗಳ ಸಹಾಯದಿಂದ ಇವರಿಗೆ ಶಿವಾಜಿಯ ಜೀವನಚರಿತ್ರೆಯಲ್ಲಿ ಬಿಟ್ಟುಹೋಗಿದ್ದ ಮಾಹಿತಿಗಳನ್ನು ತುಂಬಲು ಸಾಧ್ಯವಾಯಿತು. ಇವರು ಶಿವಾಜಿಯ ಪೂರ್ವಜರ ಬಗ್ಗೆಯಷ್ಟೇ ಅಲ್ಲದೆ ಆತನ ಜೀವನದಲ್ಲಿ ಕೂಡ ಮಹತ್ವದ ವಿಚಾರಗಳನ್ನು ಪತ್ತೆ ಹಚ್ಚಿದ್ದಾರೆ. ಹೊರದೇಶದ ಇತಿಹಾಸಕಾರನೊಬ್ಬ ಶಿವಾಜಿಯನ್ನು ಬೆಟ್ಟದ ಇಲಿ ಎಂದು ಚಿತ್ರಿಸಿದ ಕಳಂಕವನ್ನು ಹೋಗಲಾಡಿಸಿ ಶಿವಾಜಿ ಮಹಾರಾಷ್ಟ್ರದ ಸಿಂಹ ಎಂಬುದನ್ನು ದೃಢವಾಗಿ ಚಿತ್ರಿಸಿದ್ದಾರೆ.

ತಮ್ಮ ಮಿತಿಯ ಅರಿವಿದ್ದ ಬಾಲಕೃಷ್ಣ ಅವರು ತಮ್ಮ ಕೃತಿಯ ಬಗ್ಗೆ ಹೀಗೆ ಹೇಳಿದ್ದಾರೆ, "ನಡೆದ ಘಟನೆಗಳಿಗಿಂತ ಮುಖ್ಯ ಹಾಗೂ ಸತ್ಯವಾದುದು ಬೇರೇನೂ ಅಲ್ಲದಿರುವುದರಿಂದ ಅತಿ ಎನಿಸಿದರೂ ಕೂಡ ನಾನು ಸಮಕಾಲೀನರು ನೋಡಿ ಬರೆದಂಥ ಅವರ ನೇರ ಮಾತುಗಳನ್ನೇ ಕೃತಿಯಲ್ಲಿ ದಾಖಲಿಸಿದ್ದೇನೆ ಇದರಿಂದ ಓದುಗರಿಗೆ ಆ ಕಾಲದ ಸ್ಪಷ್ಟ ಹಾಗೂ ನೇರ ಚಿತ್ರಣ ದೊರೆಯುತ್ತದೆ" ಏನೇ ಆದರೂ ಡಾ.ಬಾಲಕೃಷ್ಣ ಅವರ ಕೃತಿಯು ಬಹಳ ಮಹತ್ವದ ಇತಿಹಾಸ ಗ್ರಂಥವಾಗಿದೆ.

ಬಾಲಕೃಷ್ಣ ಅವರು ಇತಿಹಾಸ ಕ್ಷೇತ್ರಕ್ಕೆ ಮುಖ್ಯವಲ್ಲದಂಥ ಇತರ ಹಲವು ಕೃತಿಗಳನ್ನೂ ಬರೆದಿದ್ದಾರೆ. ಅವುಗಳೆಂದರೆ, "ದ ಇಂಡಸ್ಟ್ರಿಯಲ್ ಡಿಕ್ಲೈನ್ ಆಫ್ ಇಂಡಿಯಾ", "ಕಮರ್ಶಿಯಲ್ ರಿಲೇಶನ್ಸ್ ಬಿಟ್ವೀನ್ ಇಂಡಿಯಾ ಅಂಡ್ ಇಂಗ್ಲೆಂಡ್", "ದಿ ವೇದಿಕ್ ಸಾಮ್ಸ್", "ದ ಥಿಯರಿ ಆಫ್ ದ ಸ್ಟೇಟ್ ಇ ಏನ್ಶೆಂಟ್ ಇಂಡಿಯಾ" ಮತ್ತು "ಫ್ರಮ್ ದ ಕೌಂಟರ್ ಟು ದ ಕ್ರೌನ್,"ಇತ್ಯಾದಿ.

ಮೇಲೆ ವಿವರಿಸಿದ ಇತಿಹಾಸಕಾರರ ಜೊತೆಗೆ ಎಂ.ಆರ್.ರಾನಡೆ, ರಾಜವಾಡೆ, ಕೆ.ಎಂ.ಜವೇರಿ, ಡಿ.ಕೆ.ಶಾಸ್ತ್ರಿ, ವಾಸುದೇವ ವಾಮನಶ್ರೀ ಖಾರೆ, ಸೀತಾರಾಮ ಕೊಹ್ಲಿ ಇಂದು ಭೂಷಣ ಬ್ಯಾನರ್ಜಿ ಮುಂತಾದ ಇತರ ವಿದ್ವಾಂಸರು ಹಾಗೂ ಪ್ರಸಿದ್ಧ ಇತಿಹಾಸಕಾರರು ಕೂಡ ಭಾರತದ ಮಧ್ಯಯುಗದ ಚರಿತ್ರಲೇಖನಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ.

## 15.3 ಸಾರಾಂಶ

ಇವರಷ್ಟೇ ಅಲ್ಲದೆ ಮಹಾನ್ ವಿದ್ವಾಂಸರಾದ ಎಂ.ಆರ್.ರಾನಡೆ, ರಾಜವಾಡೆ, ಸೀತಾರಾಮ ಕೊಹ್ಲಿ ಮುಂತಾದವರು ಕೂಡ ಮಧ್ಯಯುಗದ ಭಾರತದ ಚರಿತ್ರಲೇಖನಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ.

## 15.4 ಪ್ರಮುಖ ಪದಗಳು

1. ರಾಬರ್ಟ್ ಓರ್ಮ್: ಈಸ್ಟ್ ಇಂಡಿಯಾ ಕಂಪನಿಯ ಉದ್ಯೋಗಿ ಮತ್ತು ಬ್ರಿಟಿಷ್ ಪ್ರಜೆ
2. ಜೇಮ್ಸ್ ಟಾಡ್: 'ದಿ ಆನಲ್ಸ್ ಅಂಡ್ ಆಂಟಿಕ್ವಿಟೀಸ್ ಆಫ್ ರಾಜಸ್ತಾನ್' ಕೃತಿಯ ಕರ್ತೃ

## 15.5 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**1**. ಮಧ್ಯಯುಗದ ಚರಿತ್ರೆಕಾರರು ಹಾಗೂ ಜೀವನಚರಿತ್ರೆಕಾರರ ಕೊಡುಗೆಗಳನ್ನು ಚರ್ಚಿಸಿ

## 15.6 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 15.2 ನೋಡಿ

## 15.7 ಪರಾಮರ್ಶನ ಗ್ರಂಥಗಳು

1. Harbans Mukhia: Historians and historiography during the reign of Akbar.
2. Sheikh Ali B: History: Its Theory and Method

**ಪಠ್ಯವನ್ನು ರಚಿಸಿದವರು:**
**ಡಾ. ಜಿ.ಟಿ. ಸೋಮಶೇಖರ**

# ಘಟಕ–16 ಇಂಡೋ–ಇಸ್ಲಾಮಿಕ್ ಇತಿಹಾಸಕಾರರು

## ರಚನೆ

**16.0** ಉದ್ದೇಶಗಳು

**16.1** ಪೀಠಿಕೆ

**16.2** ಮಧ್ಯಕಾಲೀನ ಪೂರ್ವ ಭಾರತದ ಇತಿಹಾಸಕಾರರು

**16.3** ದೆಹಲಿ ಸುಲ್ತಾನರ ಕಾಲದ ಇತಿಹಾಸಕಾರರು

**16.4** ಮೊಗಲರ ಕಾಲದ ಇತಿಹಾಸಕಾರರು

**16.5** ಮಧ್ಯಕಾಲೀನ ದಕ್ಷಿಣ ಭಾರತದ ಇತಿಹಾಸಕಾರರು

**16.6** ಸಾರಾಂಶ

**16.7** ಪ್ರಮುಖ ಪದಗಳು

**16.8** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**16.9** ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

**16.10** ಪರಾಮರ್ಶನ ಗ್ರಂಥಗಳು

## 16.0 ಉದ್ದೇಶಗಳು

ಇಲ್ಲಿ ಕೆಲವು ಪ್ರಮುಖ ಇತಿಹಾಸಕಾರರ ರಚನೆಗಳನ್ನು ಪರಿಶೀಲಿಸಬಹುದಾಗಿದೆ. ಮೊಗಲ್ ಯುಗದ ಪೂರ್ವದ ಇತಿಹಾಸಕಾರರಲ್ಲಿ ಅಮೀರ್ ಖುಸ್ರು, ಜಿಯಾವುದ್ದೀನ್ ಬರಾನಿ ಮತ್ತು ಇಬನ್ ಬತೂತ ಪ್ರಮುಖರಾಗಿದ್ದಾರೆ. ದೆಹಲಿ ಸುಲ್ತಾನರ ಕಾಲದ ಇತರ ಇತಿಹಾಸಕಾರರಲ್ಲಿ ತಬಕತ್–ಇ–ನಾಸಿರಿಯ ಕರ್ತೃ ಮಿಹ್ಹಾಜ್–ಅಸ್–ಸಿರಾಜ್, ಬರನಾನಿಯ ತಬಕತ್–ಇ–ನಾಸಿರಿಯನ್ನು ಮುಂದುವರೆಇಸಿದ ಶಾಮ್–ಇ–ಸಿರಾಜ್ ಅಫಿಫ್, ಪುತಹ:–ಅಸ್–ಸಲತಿನ್ ರಚಿಸಿದ ಇಸಾಮಿ ಇವುಗಳನ್ನು ಹೆಸರಿಸಬಹುದಾಗಿದೆ. ಫಿರೋಜ್ ಷ ತೊಘಲಕ್‌ನ ಆಳ್ವಿಕೆಯ ಬಗ್ಗೆ ಆತನ ಆತ್ಮಕತೆ, ಫತುಹ:–ಇ–ಫಿರೋಜ್ ಷಾಹಿ ಮತುತ ಅನಾಮಧೇಯನೊಬ್ಬನು ರಚಿಸಿಚ ಸಿರತ್–ಇ–ಫಿರೋಜ್ ಷಾಹಿ ಎಂಬ ಇತಿಹಾಸ ಗ್ರಂಥಗಳು ನೆರವಾಗುತ್ತವೆ.

ಮೊಗಲ್ ಯುಗದಲ್ಲಿ ಅಮೀರ್ ಖುಸ್ರುವಿನಂತಹ ಕಲಾತ್ಮಕವಾದ ಬರವಣಿಗೆಯು ಕಂಡು ಬರುವದಿಲ್ಲ. ಇಲ್ಲಿ ಕಂಡುಬರುವುದು ಜೀವನ ಚರಿತ್ರೆಗಳು ಅಥವಾ ಆತ್ಮಕಥೆಗಳು. ರಾಜಕೀಯ ವಿಷಯಗಳನ್ನೊಳಗೊಂಡಿರುವ ಐನ್–ಇ–ಅಕ್ಬರಿ, ಸಾರ್ವತ್ರಿಕ ಇತಿಹಾಸಗಳು, ವಿಶೇಷವಾಗಿ ಆಳ್ವಿಕೆಗೆ ಸಂಬಂಧಿಸಿದ ಕಾಲಕ್ರಮಾಗತ ದಾಖಲೆಗಳು, ಸ್ಥಳೀಯ ಹಾಗೂ ಪ್ರಾದೇಶಿಕ ಕಾಲಕ್ರಮಾಗತ ದಾಖಲೆಗಳು ಈ ಯುಗದಲ್ಲಿ ರಚಿಸಲ್ಪಟ್ಟವು. ಈ ಯುಗದಲ್ಲಿ ಕಂಡು ಬರುವ ಮತ್ತೊಂದು ವೈಶಿಷ್ಟ್ಯವೆಂದರೆ ಹಿಂದೂ ಮತ್ತು ಮುಸಲ್ಮಾನ್ ಬರಹಗಾರರು ಪರ್ಷಿಯನ್ ಭಾಷೆಯಲ್ಲಿ ತಮ್ಮ ಕೃತಿಗಳನ್ನು ರಚಿಸಿದುದಾಗಿದೆ.

## 16.1 ಪೀಠಿಕೆ

ಮಧ್ಯಯುಗದ ಭಾರತೀಯ ಇತಿಹಾಸ ರಚನಾ ಕಲೆ ಎಂದರೆ ಮುಸಲ್ಮಾನ ಇತಿಹಾಸ ರಚನಾ ಕಲೆ ಎಂದು ಕರೆಯಬಹುದೆಂದು ಎನ್.ಸುಬ್ರಮಣ್ಯಂ ಅಭಿಪ್ರಾಯ ಪಟ್ಟಿದ್ದಾರೆ. ಮಧ್ಯಯಗದ ಇತಿಹಾಸಕ್ಕೆ ಅವರು ಸಾರಭುತವಾದ ಇತಿಹಾಸ ವಿಷಯಗಳನ್ನು ಒದಗಿಸಿದರಲ್ಲದೆ ಮುಂಬರುವ ಇತಿಹಾಸ ರಚನಾ ಸಂಪ್ರದಾಯಗಳ ನಡೆಯನ್ನು ಸರಿಪಡಿಸಿದರು. ವಿಶ್ವಾಸಾರ್ಹವಾದ ವರದಿಗಾರರ ಹೇಳಿಕೆಗಳು ಮತ್ತು ಪ್ರಮಾಣದ ಮೇಲೆ ಆಧಾರಿತವಾದುದನ್ನು ಅವರು ಇತಿಹಾಸವೆಂದು ಪರಿಗಣಿಸಿದರು. ಮೂಲ ಸಂಶೋಧನೆಯನ್ನು ನಡೆಸುವುದು ಇತಿಹಾಸಕಾರನ ಕರ್ತವ್ಯವಾಗಿರಲಿಲ್ಲ. ಆದರೆ ವಿಷಯ ವಸ್ತುವನ್ನು ಅಲಂಕರಿಸಿ ಸಂಗತಿಗಳ ಕಥೆಯನ್ನು ಹೆಣೆಯಲಾಗಿದೆ. ಮುಸಲ್ಮಾನ ಸಂಪ್ರದಾಯದಲ್ಲಿ ಇತಿಹಾಸವು ಸ್ವತಂತ್ರವಾದ ಶಿಸ್ತಾಗಿರದೆ ಅವರ ಬೌದ್ಧಿಕ ಜೀವನದ ಅಧೀನದಲ್ಲಿತ್ತು.

ಇಸ್ಲಾಂ ಧರ್ಮದ ಐತಿಹಾಸಿಕ ಕಲ್ಪನೆಯು ಸಾರಭೂತವಾಗಿ ಆಸ್ತಿಕವಾಗಿತ್ತು. ಏಕೆಂದರೆ, ಅದು ಸಂಗತಿಗಳ ಪರಿಭಾವನೆಯಾಗಿರದೆ, ಅವರ ಪವಿತ್ರ ಗ್ರಂಥ ಕೋರಾನಿನಿಂದ ಪಡೆದುದಾಗಿತ್ತು. ಇತಿಹಾಸದಲ್ಲಿ ಸಂಭವಿಸಿದ ಘಟನೆಗಳಿಗೆ ದೈವವು ಹೊಣೆಯೆಂದು ಪ್ರತಿಪಾದಿಸಲಾಗಿದೆ. ದೈವವು ವ್ಯಕ್ತಿಗಳ ಮೂಲಕ

ಕಾರ್ಯನಿರ್ವಹಿಸುತ್ತವೆಯೇ ವಿನಃ ವರ್ಗಗಳು, ಸಾಮಾಜಿಕ ಶಕ್ತಿಗಳು ಅಥವಾ ಯುಗದ ಧೃತಿಯ ಮೂಲಕವಲ್ಲ. ಅಸ್ತಿತ್ವ ಹಾಗೂ ವಿನಾಶಕ್ಕೆ ದೈವವೇ ಹೊಣೆಯಾಗಿತ್ತು. ಆದರಿಂದ ಮುಸಲ್ಮಾನ ಇತಿಹಾಸ ಲೇಖನಾ ಪರಂಪರೆಯು ದೈವಾಧೀನ ವಾದದತ್ತ ವಾಲುತ್ತದೆ. ಇತಿಹಾಸವು ಉದ್ದೇಶಪೂರಿತವೂ ಹಾಗೂ ನಿರ್ದೇಶಿತವಾಗಿದ್ದಿತೇ ಹೊರತು ಅಂತರ ಸಂಬಂಧಿತ ಮತ್ತು ಪ್ರಗತಿಶೀಲವಾಗಿರಲಿಲ್ಲ. ಭಾರತದ ಮುಸಲ್ಮಾನ ಇತಿಹಾಸಕಾರರು ಆಂತರಿಕ ಪ್ರಗತಿಯಲ್ಲಿ ಹೆಚ್ಚು ಆಸಕ್ತರಾಗಿದ್ದರು. ಆದರೆ ಅವರ ಚಿಂತನೆಯು ಮುಸಲ್ಮಾನ ದೊರೆಗಳ ವ್ಯವಹಾರಗಳನ್ನು ಕುರಿತದ್ದಾಗಿತ್ತು. ಅರ್ಥ ಹೇಳುವುದಕ್ಕಿಂತ ಅಥವಾ ಕಾರಣವನ್ನು ತಿಳಿಸುವುದಕ್ಕಿಂತ ಕಥಿಸುವ ವಿಧಾನವನ್ನು ಅವರು ಅನುಸರಿಸಿದರು.

## 16.2 ಮಧ್ಯಕಾಲೀನ ಪೂರ್ವ ಭಾರತದ ಇತಿಹಾಸಕಾರರು

ಕ್ರಿ.ಶ. 973 ರಲ್ಲಿ ಮಧ್ಯ ಏಷ್ಯಾದ ಖಿವ ಎಂಬ ಸ್ಥಳದಲ್ಲಿ ಜನಿಸಿದ ಅಲ್ಬೇರೋನಿಯು ಘಜ್ನಿ ಮಹಮದನ ದಂಡಯಾತ್ರೆಗಳೊಂದಿಗೆ ಭಾರತಕ್ಕೆ ಭೇಟಿ ಕೊಟ್ಟು ಮುಲ್ತಾನ್ ಮತ್ತು ಪೆಷಾವರಗಳಲ್ಲಿ ಬಹಳ ಕಾಲ ತಂಗಿದ್ದನು. ಈ ವೇಳೆಯನ್ನು ಆತನು ಸಂಸ್ಕೃತ, ವಿಜ್ಞಾನ. ಸಾಹಿತ್ಯ ಮತ್ತು ಕಲೆಗಳನ್ನು ಕಲಿಯಲು ಉಪಯೋಗಿಸಿಕೊಂಡನು. ತತ್ವಜ್ಞಾನ ಮತ್ತು ವಿಜ್ಞಾನಗಳಿಗೆ ಸಂಬಂಧಿಸಿದ ಸಂಸ್ಕೃತ ಗ್ರಂಥಗಳನ್ನು ಅರಬ್ ಭಾಷೆಗೆ ತರ್ಜುಮೆ ಮಾಡಿದನು. ಭಾರತವನ್ನು ಕುರಿತು ಸುಮಾರು 20 ಗ್ರಂಥಗಳನ್ನು ರಚಿಸಿದನು. ಇವುಗಳಲ್ಲಿ ತಾರೀಖ್–ಇ–ಹಿಂದ್ ಹೆಚ್ಚು ಪ್ರಸಿದ್ಧವಾಗಿದೆ.

ಅಲ್ಬೆರೋನಿಯು ಪ್ರಾಚಿನ ಕಾಲದಿಂದ ಮಧ್ಯಯುಗಕ್ಕೆ ಸಂಕ್ರಮಣವನ್ನು ಉದ್ದೇಶಿಸುತ್ತಾನೆ. ಮಾನವ ವಿಜ್ಞಾನವೂ ಆತನ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿತ್ತು. ತತ್ವಜ್ಞಾನ, ಗಣಿತಶಾಸ್ತ್ರ, ಕಾಲಗಣನಾಶಾಸ್ತ್ರ, ವೈದ್ಯಕೀಯ, ಹೀಗೆ ಯಾವೂದೂ ಆತನ ಗಮನದಿಂದ ತಪ್ಪಿಸಿಕೊಳ್ಳಲಿಲ್ಲ. ಭಾರತವನ್ನು ಕುರಿತಾದ ಆತನ ಪ್ರಸಿದ್ಧ ಗ್ರಂಥವು ಧರ್ಮ, ತತ್ವಜ್ಞಾನ, ಸಾಹಿತ್ಯ, ಕಾಲಗಣನೆ, ಖಗೋಳಶಾಸ್ತ್ರ, ಸಂಪ್ರದಾಯಗಳು, ನಿಯಮಗಳು ಮತ್ತು ಫಲ ಜೋತಿಷ್ಯ ಮೊದಲಾದ ವಿಷಯಗಳ ಮೇಲೆ ಉತ್ತಮವಾದ ವಿವರಣೆಗಳನ್ನುಳಗೊಂಡಿದೆ. ಭಾರತದಲ್ಲಿ ಇತಿಹಾಸ ಸಾಹಿತ್ಯದ ಕೊರತೆಗೆ ಕಾರಣವನ್ನು ಗುರುತಿಸಿದನು. ಯಾವ ಜನತೆ ತಾವು ಪರಿಪೂರ್ಣರೆಂದು ಭಾವಿಸುತ್ತಾರೋ ಅಂತಹವರು ಇತಿಹಾಸ ಭಾವನೆಯನ್ನು ಹೊಂದಿರಲಾರದು ಎಂದು ಹೇಳಿದ್ದಾನೆ. ಒಬ್ಬ ನಿಷ್ಪಕ್ಷಪಾತ ಇತಿಹಾಸಕಾರನಾದ ಅಲ್ಬೆರೋನಿಯು ಮುಸಲ್ಮಾನ ಇತಿಹಾಸಕಾರರಲ್ಲಿ ಪ್ರಮುಖ ಸ್ಥಾನವನ್ನು ಗಮನಿಸಿದ್ದಾನೆ.

## 16.3 ದೆಹಲಿ ಸುಲ್ತಾನರ ಕಾಲದ ಇತಿಹಾಸಕಾರರು

ದೆಹಲಿಯಲ್ಲಿ ಸುಲ್ತಾನರ ಆಳ್ವಿಕೆಯ ಸ್ಥಾಪನೆಯೊಂದಿಗೆ ಕಾಲಕ್ರಮಾಗತ ದಾಖಲೆಗಳು ಮತ್ತು ಅಧಿಕೃತ ದಾಖಲೆಗಳನ್ನೊಳಗೊಂಡ ಪ್ರಶಸ್ಥವಾದ ಸಾಹಿತ್ಯವು ಬೆಳೆಯಲು ಆರಂಭವಾಯಿತು. ಈ ಯುಗದ ಇತಿಹಾಸ ಲೇಖನ ಕಲೆಯ ಬೆಳವಣಿಗೆಯು ಮಧ್ಯಯುಗದ ಯೂರೋಪಿನೊಂದಿಗೆ ನಿಖಟವಾದ ಹೋಲಿಕೆಯನ್ನು

ತೋರಿಸುತ್ತದೆ. ಮಧ್ಯ ಯುರೋಪಿನ ಕಾಲಾನುಗತ ದಾಖಲೆಗಳನ್ನು ಹೋಲುವ ದಾಖಲೆಗಳನ್ನು ಭಾರತದ ಸಮಸ್ತ ಮುಸಲ್ಮಾನ ಸುಲ್ತಾನರು ಹೊಂದಿದ್ದರು. ಇವುಗಳನ್ನು ಮೊಗಲ್ ಯುಗದ ಪೂರ್ವ ಮತ್ತು ಮೊಗಲರ ಯುಗಕ್ಕೆ ಸೇರಿದವುಗಳೆಂದು ಎರಡು ಭಾಗಗಳಾಗಿ ವಿಂಗಡಿಸಬಹುದು. ಮೊಗಲ್ ಯುಗದ ಪೂರ್ವದ ಇತಿಹಾಸಕಾರರಲ್ಲಿ ಅಮೀರ್ ಖುಸ್ರು, ಜಿಯಾವುದ್ದೀನ್ ಬರಾನಿ ಮತ್ತು ಇಬನ್ ಬತೂತ ಪ್ರಮುಖರಾಗಿದ್ದಾರೆ.

ಕವಿಗಳಲ್ಲಿ ಅರಸು ಹಿಂದ್‌ನ ಗಿಣಿ ಮುಂತಾಗಿ ಕರೆಯಲ್ಪಡುತ್ತಿದ್ದ ಖುಸ್ರು ಸುಲ್ತಾನ್ ಬಲ್ಬನ್‌ನ ಮಗ ಮಹಮದ್, ಅಲ್ಲಾವುದೀನ್, ಮುಬಾರಕ್, ಘಿಯಾಸುದ್ದೀನ್ ತೊಗಲಕ್ ಮೊದಲಾದ ಆರು ವಿಭಿನ್ನ ಸುಲ್ತಾನರ ಆಳ್ವಿಕೆಯಲ್ಲಿ ಜೀವಿಸಿದ್ದರು. ಪರ್ಷಿಯನ್ ಭಾಷೆಯಲ್ಲಿ ಶ್ರೇಷ್ಠ ಕವಿಯಾದ ಖುಸ್ರು ಸುಮಾರು 92 ಗ್ರಂಥಗಳನ್ನು ರಚಿಸಿದನು. ಕವಿ, ತತ್ವಜ್ಞಾನಿ ಮತ್ತು ರಾಜಕಾರಣಿ ಆಗಿದ್ದ ಆತನು ಬಹುಮುಖ ಪ್ರತಿಭೆಯುಳ್ಳವನಾಗಿದ್ದನು. ಆತನು ಇತಿಹಾಸಕಾರನಿಗಿಂತ ಮಿಗಿಲಾಗಿ ಕವಿಯಾಗಿದ್ದನು. ಆತನ ಕೃತಿಗಳಲ್ಲಿ ವಿಷಯ ವಸ್ತು ಮತ್ತು ಕಾಲಗಣನೆಯ ಐಕ್ಯತೆಯ ಕೊರತೆ ಕಂಡು ಬಂದರೂ ಶೈಲಿಯ ದೃಷ್ಟಿಯಿಂದ ಪರ್ಷಿಯನ್ ಕಾಲಾನುಗತ ದಾಖಲೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿವೆ.

ಆತನ ಆರು ಇತಿಹಾಸ ಕೃತಿಗಳಲ್ಲಿ ತಾರಿಖ್–ಇ–ಅಲಾಯ್ ಅಥವಾ ಖಜಾರಿನ್–ಉಲ್–ಫುತುಹಃ ಗದ್ಯ ಕೃತಿಯಾಗಿದ್ದು ಅಲ್ಲಾವುದ್ದೀನ್ ಖಿಲ್ಜಿಯ ದಂಡಯಾತ್ರೆಗಳ ಅಧಿಕೃತ ಇತಿಹಾಸವಾಗಿದೆ. ಮಧ್ಯಯುಗದ ಆದಿಭಾಗದಲ್ಲಿ ಪ್ರಚಲಿತದಲ್ಲಿದ್ದ ಯುದ್ಧ ಕಲೆಯನ್ನು ಅರಿಯಲು ಇದು ಸಹಾಯಕವಾಗುತ್ತದೆ. ಅಷಿಖ ಎಂಬ ಮತ್ತೊಂದು ಕೃತಿಯು ದೇವಲ್ ದೇವಿ ಮತ್ತು ಖಿಜರ್ ಖಾನ್ ಅವರ ಪ್ರಣಯ ಕಥನವಾಗಿದೆ. ನೂಹ್ ಸ್ಪಿಹರ್ ಅಥವಾ ಒಂಭತ್ತು ಆಕಾಶಗಳು ಮುಬಾರಕನ ಕಥೆಗೆ ಸೀಮಿತವಾಗಿದೆ. ತೊಗಲಕ್ ನಾಮದಲ್ಲಿ ಘಿಯಾಸುದ್ದೀನ್ ತೊಗಲಕನ ಕುರಿತಾದ ವಿವರಣೆಗಳನ್ನು ಹೊಂದಿದೆ.

ದೆಹಲಿಯ ಆಡಳಿತಜಲ್ಲಿ ನಿಕಟ ಸಂಬಂಧವನ್ನು ಪಡೆದಿದ್ದ ಬರಾನಿಯು ಇತಿಹಾಸವನ್ನು ರಚಿಸಲು ಅರ್ಹನಾಗಿದ್ದನು. ಆತನು ರಚಿಸಿದ ಸುಮಾರು ಹತ್ತು ಕೃತಿಗಳಲ್ಲಿ ತಾರಿಖ್–ಇ–ಫಿರೋಜ್ ಷಾಹಿ ಹೆಚ್ಚು ಪ್ರಖ್ಯಾತವಾಗಿದೆ. ಸುಲ್ತಾನ್ ಬಲ್ಬನ್ನನ ಆಳಿಕೆಯಿಂದ ಮೊದಲುಗೊಂಡು ಫಿರೋಜ್ ಷಾನ ಆಳಿಕೆಯ ಮೊದಲ ಆರು ವರ್ಷಗಳ ಇತಿಹಾಸವನ್ನು ಈ ಕೃತಿಯು ವಿವರಿಸುತ್ತದೆ. ಬಲ್ಬನ್ ಮತ್ತು ಅಲ್ಲಾವುದ್ದಿನ್ ಖಿಲ್ಜಿಗೆ ಹೆಚ್ಚು ಸ್ಥಳವನ್ನು ವಿನಿಯೋಗಿಸಿದ್ದಾನೆ. ಆತನ ಫತ್ವ–ಇ–ಜಹಂದರಿಯಲ್ಲಿ ವಿಶ್ವದ ಸೃಷ್ಟಿ ಪ್ರವಾದಿಗಳ ಭೋಧನೆಗಳು ಆಡಳಿತದ ಮತ್ತು ಸರ್ಕಾರದ ಧ್ಯೇಯಗಳನ್ನು ವಿವರಿಸಿದ್ದಾನೆ.

ಇತಿಹಾಸವನ್ನು ರಚಿಸುವಲ್ಲಿ ಬರಾನಿಯು ಪ್ರಾಯೋಗಿಕ ಉದ್ದೇಶವನ್ನು ಹೊಂದಿದ್ದನು. ಆತನಿಗೆ ಇತಿಹಾಸವು ನಿಜವಾದ ಧರ್ಮವಾಗಿತ್ತಲ್ಲದೆ, ಈ ಜಗತ್ತಿನಲ್ಲಿ ಉತ್ತಮ ಬದುಕಿಗೆ ಅದರ ಅಧ್ಯಯನವು ಅತ್ಯಾವಶ್ಯಕವಾಗಿತ್ತು. ಇತಿಹಾಸಕಾರನ ಕರ್ತವ್ಯಗಳು ಮತ್ತು ಜವಾಬ್ದಾರಿಗಳನ್ನು ಆತನು ಬಲ್ಲವನಾಗಿದ್ದನು. ಇತಿಹಾಸಕಾರನು ಯಾರಿಗೂ ಅಂಜದೆ ನಿಜವನ್ನು ಹೇಳಬೇಕೆಂದು ತಿಳಿಸಿದ್ದಾನೆ. ಇತಿಹಾಸಕಾರನ

ವಿಮರ್ಶಾತ್ಮಕ ಕಾರ್ಯಪ್ರವೃತ್ತಿಯ ಬಗ್ಗೆ ತನ್ನ ನಿಲುವನ್ನು ಹೀಗೆ ವ್ಯಕ್ತಪಡಿಸಿದ್ದಾನೆ. 'ವಿಷಯಗಳನ್ನು ಪರೀಕ್ಷಿಸಿ ನೋಡುವಲ್ಲಿ ಮತ್ತು ಕೃತ್ರಿಮ ರಚನೆ ಹಾಗೂ ನೈಜವಾದ ವಿಷಯಗಳ ನಡುವೆ ವ್ಯತ್ಯಾಸಗಳನ್ನು ಕಂಡು ಹಿಡಿಯುವಲ್ಲಿ ನಾನು ಎಚ್ಚರಿಕೆ ವಹಿಸಿದ್ದೇನೆ'. ಘಟನೆಗಳನ್ನು ಅವಲೋಕಿಸಿವುದು ಮತ್ತು ಅವುಗಳನ್ನು ನೈಜವಾದ ರೀತಿಯಲ್ಲಿ ರಚಿಸುವುದು ಇತಿಹಾಸಕಾರನ ಕರ್ತವ್ಯವೆಂದು ಹೇಳಿದ್ದಾನೆ. ಇತಿಹಾಸಕಾರನು ಮತಭ್ರಾಂತಿಯಿಂದ ಹೊರತಾಗಿರುವುದರ ಅಗತ್ಯವನ್ನು ತಿಳಿದಿದ್ದನು. ಇತಿಹಾಸ ರಚನೆಯಲ್ಲಿ ಘಟನೆಗಳ ಹಿಂದಿನ ಸತ್ಯದ ಮಹತ್ವವನ್ನು ಅರಿತಿದ್ದನು. ಆತನು ಉದಾತ್ತ ಧ್ಯೇಯಗಳನ್ನು ಹೊಂದಿದ್ದರೂ ವೈಯಕ್ತಿಕ ದುರಭಿಮಾನವು ಆತನ ಬರವಣಿಗೆಯ ಮೇಲೆ ಪ್ರಭಾವ ಬೀರಿದ್ದಿತ್ತೆಂದು ಕೆಲವರು ಅಭಿಪ್ರಾಯಪಡುತ್ತಾರೆ.

ಈ ಯುಗದ ಮತ್ತೊಬ್ಬ ಇತಿಹಾಸಕಾರ ಇಬನ್ ಬತೂತ, ಪ್ರಸಿದ್ಧ ಪ್ರವಾಸಿಗನಾಗಿದ್ದನು. ಟಾಂಜಿಯರ್‌ನಲ್ಲಿ (ಈಜಿಪ್ಟ್) ನಲ್ಲಿ 1304ರಲ್ಲಿ ಜನಿಸಿದ ಆತನು ಪ್ರವಾಸದಲ್ಲಿ ಅನುರಾಗವುಳ್ಳವನಾಗಿದ್ದನು. ಸುಮಾಋುಉ 25 ವರ್ಷಗಳ ಕಾಲ ಆತನು ಉತ್ತರ ಆಫ್ರಿಕ, ಅರೇಬಿಯಾ, ಪರ್ಷಿಯಾ, ಮಿದಲಾದ ದೇಶಗಳಲ್ಲಿ ಪ್ರವಾಸವನ್ನು ಕೈಗೊಂಡು ಸುಲ್ತಾನ್ ಮಹಮದ್ ಬಿನ್ ತುಘಲಕ್‌ನ ಆಳ್ವಿಕೆಯಲ್ಲಿ ಭಾರತಕ್ಕೆ ಭೇಟಿ ಇತ್ತನು. ಆತನ ಪಾಂಡಿತ್ಯವನ್ನು ಮೆಚ್ಚಿಕೊಂಡ ಸುಲ್ತಾನ್ ಮಹಮದ್ ಆತನನ್ನು ದೆಹಲಿಯ ಖಾಜಿಯನ್ನಾಗಿ ನೇಮಕ ಮಾಡಿದನು. ಬತೂತನು ಈ ಹುದ್ದೆಯನ್ನು ಸುಮಾರು ಎಂಟು ವರ್ಷಗಳವರೆಗೆ ಅಲಂಕರಿಸಿದ್ದನು. ಸುಲ್ತಾನನ ಅವಕೃಪೆಗೆ ತುತ್ತಾದ ಆತನು ಕೆಲಕಾಲ ಬಂಧಿಸಲ್ಪಟ್ಟಿದ್ದನು. ಬಂಧನದಿಂದ ವಿಮೋಚನೆಯಾದ ಮೇಲೆ ಸುಲ್ತಾನನ ರಾಯಭಾರಿಯಾಗಿ ಚೀನಾ ದೇಶಕ್ಕೆ ಕಳುಹಿಸಲ್ಪಟ್ಟನು. ಆದರೆ ಮಾರ್ಗದಲ್ಲಿ ಹಡಗು ಒಡೆದು ಹೋದ ಕಾರಣ ಮಾಲ್ಡೀವ್ ದ್ವೀಪದಲ್ಲಿ ಬಂದಿಳಿದನು. ಅನಂತರ ದಕ್ಷಿಣ ಭಾರತ, ಚೀನಾ, ಶ್ರೀಲಂಕಾ ಮತ್ತು ಸ್ಪೈನ್ ದೇಶಗಳಲ್ಲಿ ಪ್ರವಾಸ ಮಾಡಿ, ತನ್ನ ಪ್ರವಾಶದ ಅನುಭವಗಳು ಮತ್ತು ಸಾಹಸಗಳನ್ನು ಮೊರಾಕೊಗೆ ಹಿಂತಿರುಗಿದ ಮೇಲೆ ತನ್ನ ರೇಹ್ಲ ಎಂಬ ಗ್ರಂಥದಲ್ಲಿ ವರ್ಣಿಸಿದ್ದಾನೆ. ಆತನು ತನ್ನ 73ನೆಯ ವಯಸ್ಸಿನಲ್ಲಿ ಮರಣ ಹೊಂದಿದ್ದನು.

ವಿದ್ವಾಂಸ ವೇದಾಂತಿ, ಪರಶೋಧಕ, ಸಾಹಸಿ, ವಿಶ್ವ ಪ್ರವಾಸಿಗ ಹಾಗೂ ಕಾನೂನು ವಿದ್ವಾಂಸನಾದ ಬತೂತನು ಅರ್ಹತೆ ಹಾಗೂ ಇತಿಹಾಸದ ಪ್ರಾಮಾಣಿಕ ವಿಚಾರಕನಾಗಿ ಬರೂನಿಗಿಂತ ಪ್ರಖ್ಯಾತವಾದ ಸ್ಥಾನವನ್ನು ಪಡೆದಿದ್ದಾನೆ. ಅವಲೋಕನಾ ಚಕ್ಷುಗಳು ಮತ್ತು ಹರಿತವಾದ ಗ್ರಾಹಕ ಶಕ್ತಿಯನ್ನು ಪಡೆದ ಆತನು ಸಂಗತಿಗಳ ಬಗ್ಗೆ ಸಮಂಜಸವಾದ ವಿವರಗಳನ್ನು ಸಂಗ್ರಹಿಸಲು ಬರಾನಿಗಿಂತ ಹೆಚ್ಚಿನ ಅನುಕೂಲಗಳನ್ನು ಪಡೆದಿದ್ದನು. ಈ ಅನುಕೂಲಗಳ ಸದುಪಯೋಗಪಡಿಸಿಕೊಂಡು ಕುತುಬುದ್ದೀನ್ ಐಬಕ್‌ನಿಂದ ಪ್ರಾರಂಭಗೊಂಡು ಮಹಮದ್ ಬಿನ್ ತೊಘಲಕ್‌ವರೆಗೆ ದಎಹಲಿ ಸುಲ್ತಾನರ ಆಳ್ವಿಕೆಯ ಕಾಲದಲ್ಲಿ ಭಾರತದ ಭೌಗೋಳಿಕ ಸ್ಥಿತಿ, ಸಾಮಾಜಿಕ ಜೀವನ, ಆರ್ಥಿಕ ಪರಿಸ್ಥಿತಿಗಳು, ರಾಜಕೀಯ ಸಂಘ ಸಂಸ್ಥೆಗಳು, ಆಡಳಿತ ವ್ಯವಸ್ಥೆ ಮೊದಲಾದವುಗಳನ್ನು ಕುರಿತು ಪ್ರಾಮಾಣಿಕವಾದ ಮತ್ತು ವಿಶ್ವಾಸನೀಯವಾದ ವಿವರಣೆಯನ್ನು ತನ್ನ ಸ್ವಂತ ಅನುಭವಗಳ ಹಾಗೂ ಭಾರತದಲ್ಲಿ ತನ್ನ ಪರಿಚಿತರುಗಳ ಹೇಳಿಕೆಗಳ ಆಧಾರದ ಮೇಲೆ ನೀಡಿದ್ದಾನೆ.

## 16.4 ಮೊಗಲರ ಕಾಲದ ಇತಿಹಾಸಕಾರರು

ಭಾರತದ ಇತಿಹಾಸದಲ್ಲಿ ಮೊಗಲರ ಇತಿಹಾಸವು ಅತ್ಯುತ್ತಮವಾದ ಅಧ್ಯಾಯವಾಗಿದೆ. ಮುಸಲ್ಮಾನರ ಇತಿಹಾಸವು ಒಂದು ಗಣನೀಯವಾದ ಪ್ರಮಾಣದಲ್ಲಿ ಈ ಯುಗದಲ್ಲಿ ರಚಿಸಲ್ಪಟ್ಟಿತು. ಇದು ಪೂರ್ವ ಸಂಪ್ರದಾಯವನ್ನು ಉತ್ತಮಪಡಿಸುವ ಹಾಗೂ ಕೆಲವು ನೂತನ ಮೂಲತತ್ವಗಳನ್ನು ಅಳವಡಿಸಿಕೊಳ್ಳುವ ಉದ್ದೇಶವನ್ನು ಹೊಂದಿದ್ದರೂ ಸಹ, ಅದು ಸಂಪೂರ್ಣವಾಗಿ ಹೊಸ ಬೆಳವಣಿಗೆಗೆ ಅಥವಾ ವಿಕಾಸನಕ್ಕೆ ಕಾರಣವಾಯಿತೆಂದು ಹೇಳಲಾಗುವದಿಲ್ಲ. ಮೊಗಲ್ ಯುಗದಲ್ಲಿ ಅಮೀರ್ ಖುಸ್ರುವಿನಂತಹ ಕಲಾತ್ಮಕವಾದ ಬರವಣಿಗೆಯು ಕಂಡು ಬರುವದಿಲ್ಲ. ಇಲ್ಲಿ ಕಂಡುಬರುವುದು ಜೀವನ ಚರಿತ್ರೆಗಳು ಅಥವಾ ಆತ್ಮಕಥೆಗಳು. ರಾಜಕೀಯ ವಿಷಯಗಳನ್ನೊಳಗೊಂಡಿರುವ ಐನ್–ಇ–ಅಕ್ಬರಿ, ಸಾರ್ವತ್ರಿಕ ಇತಿಹಾಸಗಳು, ವಿಶೇಷವಾಗಿ ಆಳ್ವಿಕೆಗೆ ಸಂಬಂಧಿಸಿದ ಕಾಲಕ್ರಮಾಗತ ದಾಖಲೆಗಳು, ಸ್ಥಳೀಯ ಹಾಗೂ ಪ್ರಾದೇಶಿಕ ಕಾಲಕ್ರಮಾಗತ ದಾಖಲೆಗಳು ಈ ಯುಗದಲ್ಲಿ ರಚಿಸಲ್ಪಟ್ಟವು. ಈ ಯುಗದಲ್ಲಿ ಕಂಡು ಬರುವ ಮತ್ತೊಂದು ವೈಶಿಷ್ಟ್ಯವೆಂದರೆ ಹಿಂದೂ ಮತ್ತು ಮುಸಲ್ಮಾನ್ ಬರಹಗಾರರು ಪರ್ಷಿಯನ್ ಭಾಷೆಯಲ್ಲಿ ತಮ್ಮ ಕೃತಿಗಳನ್ನು ರಚಿಸಿದುದಾಗಿದೆ. ಅಬುಲ್ ಫಸಲ್‌ನ ಪ್ರಖ್ಯಾತ ಗ್ರಂಥ ಅಕ್ಬರ್ ನಾಮ. ಈ ಕೃತಿಯನ್ನು ಫಸಲ್ ಅಕ್ಬರನ ಆಜ್ಞೆಯ ಮೇರೆಗೆ ರಚಿಸಿದನು. ಅತ್ಯುತ್ತಮ ಘಟನೆಗಳ ಮತ್ತು ರಾಜ್ಯದ ಅಧಿಕ ವಿಜಯಗಳನ್ನು ರಚಿಸಬೇಕೆಉ ಎಂಬುದು ಅಕ್ಬರನ ಆಜ್ಞೆಯಾಗಿತ್ತು. ಅಕ್ಬರ್ ನಾಮವು ಅಕ್ಬರನ ಆಳ್ವಿಕೆಯ ವ್ಯಾಪಕವಾದ ಇತಿಹಾಸವಾಗಿದೆ. ಮೂರು ಸಂಪುಟಗಳ ಈ ಗ್ರಂಥದಲ್ಲಿ ಅಬುಲ್ ಫಸಲ್ ತೈಮೂರನಿಂದ ಮೊದಲುಗೊಂಡು ಅಕ್ಬರನ ವಂಸಪರಂಪರೆ ಮತ್ತು ಹುಮಾಯೂನ್ ಹಾಗೂ ಅಕ್ಬರನ ಆಳ್ವಿಕೆಗಳನ್ನು ವಿವರವಾಗಿ ಚಿತ್ರಿಸಿದ್ದಾನೆ. ಕಾಲಗಣನೆಯು ಹೆಚ್ಚೂ ಕಡಿಮೆ ಸಮಂಜಸವಾಗಿದೆ. ರಾಜಕೀಯ ಪರಿಸ್ಥಿತಿಗಳ ವಿವರಣೆಗಳು ಪರಿಪೂರ್ಣವಾಗಿದೆ.

ಐನ್–ಅಕ್ಬರಿಯು ಅಕ್ಬರ್ ನಾಮದ ಪುರವಣಿಯಾಗಿದೆ. ಈ ಕೃತಿಯಲ್ಲಿ ಅಬುಲ್ ಫಸಲ್ ಕಂದಾಯ ವ್ಯವಸ್ಥೆ, ಸಾಮಾಜಿಕ, ಆಡಳಿತ, ಇವುಗಳನ್ನು ವಿವರಿಸಿದ್ದಾನೆ. ಈ ಕೃತಿಯ ಕಲ್ಪನಾ ಶಕ್ತಿ ಮತ್ತು ಐತಿಹಾಸಿಕ ಮಹತ್ವವು ಉನ್ನತವಾಗಿವೆ. ವಿ.ಎ.ಸ್ಮಿತ್ ತಿಳಿಸಿರುವಂತೆ, "ಇತ್ತೀಚಿನ ಕಾಲದವರೆಗೆ ಯೂರೋಪಿನಲ್ಲಿಯೂ ಸಹ ಈ ಬಗೆಯ ಪ್ರಾಮಾಣಿಕ ಸಂಕಲನೆಯನ್ನು ಕಾಣುವುದು ಕಷ್ಟವಾಗುತ್ತದೆ. ಪೇಚಿನಲ್ಲಿ ಸಿಕ್ಕಿಸುವಂತಹ ವಿಷಯಗಳ ಸಮೂಹವನ್ನು ನಿಶ್ಚಲ ಪ್ರಯತ್ನ ಮತ್ತು ಕೌಶಲ್ಯದಿಂದ ವಿಮರ್ಶಿಸುವುದಕ್ಕೆ ಅನಂತರ ಯುಗಗಳ ಕೃತಜ್ಞತೆಗೆ ಪಾತ್ರನಾಗಿದ್ದಾನೆ." ಭಗವದ್ಗೀತೆಯನ್ನು ಪರ್ಷಿಯನ್ ಭಾಷೆಗೆ ಅನುವಾದಿಸಿದನು. ಅಬುಲ್ ಫಸಲ್ ಮತ್ತು ಬದೌನಿಯನ್ನು ಪ್ರತಿದ್ವಂಧಿ ಇತಿಹಾಸಕಾರರಾಗಿ ನೋಡಲಾಗುತ್ತದೆ. ಇಬ್ಬರೂ ಸಹ ಅಕ್ಬರನ ಆಳ್ವಿಕೆಯನ್ನು ಪರಿಶೀಲಿಸಿದ್ದಾರೆ. ಆದರೆ ವಿಭಿನ್ನ ದೃಷ್ಟಿಕೋನಗಳಿಂದ ಅಕ್ಬರ ನೀತಿಗಳನ್ನು ಅನುಮೋದಿಸಿದವರು ಅಬುಲ್ ಫಸಲ್.

ಬದೌನಿಯ ಮುಂತಖಾಬ್–ಉತ್–ತವಾರಿಖ್ ಒಂದು ರಾಜಕೀಯ ವೃತ್ತಾಂತವಾಗಿದ್ದು ವಿಭಿನ್ನ ಟೀಕೆಗಳು ಮತ್ತು ವಿಭಿನ್ನ ಪ್ರೇರಣೆಯನ್ನು ಹೊಂದಿದೆ. ಅಕ್ಬರನ ಆಳ್ವಿಕೆಯ ಕಾಲದಲ್ಲಿ ಅದನ್ನು ಪ್ರಕಟಿಸಿದ್ದರೆ ಬದೌನಿಗೆ ಹೆಚ್ಚು ಅಪಾಯವಾಗುತ್ತಿತ್ತು. ಏಕೆಂದರೆ, ಈ ಕೃತಿಯು ಅಕ್ಬರ ಧಾರ್ಮಿಕ ನಿಲುವುಗಳ ವಿರುದ್ಧದ

ಆಪಾದನೆಗಳ ಪಟ್ಟಿಯಾಗಿದೆ. ಆತನ ಕೃತಿಯು ಆ ಯುಗದ ರಾಜಕೀಯ, ಧಾರ್ಮಿಕ ಮತ್ತು ಸಾಹಿತ್ಯಕ ಪ್ರವೃತಿಗಳು ಹಾಗೂ ಅವುಗಳ ಪರಸ್ಪರ ಪ್ರಭಾವನ್ನು ಸ್ಪಷ್ಟವಾಗಿ ವರ್ಣಿಸುತ್ತದೆ. ಆತನ ಪೂರ್ವಕಲ್ಪಿತ ಅಭಿಪ್ರಾಯಗಳ ಹೊರತಾಗಿ, ಆತನು ಒಂದು ವ್ಯಾಪಕವಾದ ಇತಿಹಾಸದ ನೋಟವನ್ನು ಹೊಂದಿದ್ದನು. ಆ ಯುಗದ ಬೌದ್ಧಿಕ ಹಾಗೂ ಧಾರ್ಮಿಕ ಭಾವನೆಗಳು ಹಾಗೂ ಸಾಧನೆಗಳ ಇತಿಹಾಸವನ್ನು ರಚಿಸಲು ರಾಜನ ಆಸ್ಥಾನ ಮತ್ತು ಮದ್ರಸಗಳಿಂದ ವಿಷಯಗಳನ್ನು ಸಂಗ್ರಹಿಸಿದನು.

ಮಧ್ಯಕಾಲೀನ ಇತಿಹಾಸ ಲೇಖನ ಪರಂಪರೆಯಲ್ಲಿ ಬದೌನಿಯು ತನ್ನದೇ ಆದ ಸ್ಥಾನವನ್ನು ಪಡೆದಿದ್ದಾನೆ. ಆತನು ತನ್ನ ಕೃತಿಯಲ್ಲಿ ವಿಭಿನ್ನ ವರ್ಗಗಳಿಗೆ ಸೇರಿದ ಜನತೆಯ ಸಾಹಿತ್ಯಕ, ಧಾರ್ಮಿಕ, ಹಾಗೂ ಸಾಮಾಜಿಕ ಚಟುವಟಿಕೆಗಳ ವಿವರಣೆಯನ್ನು ನೀಡಿದ್ದಾನೆ. ಆತನ ವಿಚಾರಗಳ ಹೊರತಾಗಿ, ಮಧ್ಯಕಾಲೀನ ಭಾರತದ ಧಾರ್ಮಿಕ ಮತ್ತು ಬೌದ್ಧಿಕ ಇತಿಹಾಸದ ಅಧ್ಯಯನಕ್ಕೆ ಮಂತಖಾಬ್ ಅಮೂಲ್ಯವಾಗಿದೆ. ಬದೌನಿಯು ತನ್ನ ದೃಷ್ಟಿಯನ್ನು ಕೇವಲ ಆಸ್ಥಾನದ ಮೇಲೆ ಕೇಂದ್ರೀಕರಿಸದೆ ಜನಜೀವನದ ಪೂರ್ಣ ನೋಟವನ್ನು ಪಡೆಯುವ ಉದ್ದೇಶದಿಂದ ಹರಿಸಿದ್ದಾನೆ. ಅಕ್ಬರನ ಕಾಲದ ರಾಜಕೀಯ ವೃತ್ತಾಂತಗಳಲಿ ಬದೌನಿಯು ಮಾತ್ರ ತನ್ನದೇ ಆದ ದೃಷ್ಟಿಯನ್ನು ಹೊಂದಿದ್ದನು.

ಇತಿಹಾಸದ ಬಗ್ಗೆ ಬದೌನಿಗೆ ಗಾಢವಾದ ಗೌರವವಿತ್ತು. ಆತನ ಪ್ರಕಾರ, ಜ್ಞಾನದ ಶಾಖೆಗಳಲ್ಲಿ ಇತಿಹಾಸವು ಒಂದು ಶ್ರೇಷ್ಠವಾದ ವಿಜ್ಞಾನ ಮತ್ತು ಬೋಧಪ್ರದ ಕಲೆಯಾಗಿದೆ. ವಿವೇಕಿಗಳಿಗೆ ಇತಿಹಾಸವು ಉದಾಹರಣೆಗಳ ಆದಾರವಾಗಿದೆ. ಮತ್ತು ಪಾಂಡಿತ್ಯ ಪಡೆದವರು ಹಾಗೂ ವಿವೇಚಿಸುವವರ ಅರ್ಹ ಅನುಭವವಾಗಿದೆ ಎಂದು ಹೇಳಿದ್ದಾನೆ. ಆದ್ದರಿಂದ ಬದೌನಿಯು ತನ್ನ ಮುಂತಖಬ್‌ನ್ನು ಸಚ್ಚಾರಿತ್ರ್ಯವುಳ್ಳವರು, ಶ್ರೇಷ್ಠ ಮನಸ್ಸುಳ್ಳವರು ಮತ್ತು ನ್ಯಾಯದ ಬಗ್ಗೆ ಸ್ವಾಭಾವಿಕವಾದ ಮನೋಧರ್ಮ ಉಳ್ಳವರಿಗೆ ಮಾತ್ರ ಸಂಭೋಧಿಸಿದ್ದಾನೆಯೇ ವಿನ: ಮೂಲಭೂತವಾದ ಹಾಗೂ ಸಾಧಿತ ನಿಯಮವನ್ನು ಉಲ್ಲಂಘಿಸುವವರಿಗಲ್ಲ.

## 16.5 ಮಧ್ಯಕಾಲೀನ ದಕ್ಷಿಣ ಭಾರತದ ಇತಿಹಾಸಕಾರರು

ಮಧ್ಯಕಾಲೀನ ದಕ್ಷಿಣ ಭಾರತದ ಇತಿಹಾಸಕ್ಕೆ ಸಂಬಂಧಿಸಿದಂತೆ ಹಲವಾರು ಇತಿಹಾಸಕಾರರು ಕಾರ್ಯನಿರ್ವಹಿಸಿದ್ದಾರೆ. ವಿಜಯನಗರ ರಾಜ್ಯ ಮತ್ತು ಸಮಾಜವನ್ನು ಕುರಿತು ಗಂಗಾದೇವಿಯ 'ಮಧುರಾವಿಜಯಂ' 'ಸಾಳ್ವಾಭ್ಯುದಯಂ' 'ಅಚ್ಯುತರಾಯಾಭ್ಯುದಯಂ' ಮತ್ತು ಕೃಷ್ಣದೇವರಾಯನ 'ಮನೋಲ್ಲಾಸ' ಗ್ರಂಥಗಳು ಪ್ರಮುಖವಾದವುಗಳು. ಹಾಗೆಯೇ ವಿಜಯನಗರಉತ್ತರ ಕಾಲದ ಇತಿಹಾಸ ಮತ್ತು ಸಮಾಜವನ್ನು ಕುರಿತು ಕೆಳದಿಲಿಂಗಣ್ಣರ 'ಕೆಳದಿನೃಪವಿಜಯಂ' ಮತ್ತು ಬಸವರಾಜರ 'ಶಿವತತ್ವರತ್ನಾಕರ' ಮುಂತಾದ ಕೃತಿಗಳು ಮಧ್ಯಕಾಲೀನ ದಕ್ಷಿಣ ಭಾರತದ ಇತಿಹಾಸ ಸಮಾಜ ಮತ್ತು ಸಂಸ್ಕೃತಿಯನ್ನು ಬಿಂಬಿಸುತ್ತವೆ. ಇಲಿ ್ಲಕಂಡುಬರುವುದು ಜೀವನಚರಿತ್ರೆಗಳು ಅಥವಾ ಆತ್ಮಕಥೆಗಳು. ರಾಜಕೀಯ ವಿಷಯಗಳನ್ನೊಳಗೊಂಡಿರುವ 'ಮನೋಲ್ಲಾಸ', ಸಾರ್ವತ್ರಿಕ ಇತಿಹಾಸಗಳು, ವಿಶೇಷವಾಗಿ

ಆಳ್ವಿಕೆಗೆ ಸಂಬಂಧಿಸಿದ ಕಾಲಕ್ರಮಾಗತ ದಾಖಲೆಗಳು, ಸ್ಥಳೀಯ ಹಾಗೂ ಪ್ರಾದೇಶಿಕ ಕಾಲಕ್ರಮಾಗತ ದಾಕಲೆಗಳು ಈ ಯುಗದಲ್ಲಿ ರಚಿಸಲ್ಪಟ್ಟವು. ಈ ಯುಗದಲ್ಲಿ ಕಂಡು ಬರುವ ಮತ್ತೊಂದು ವೈಶಿಷ್ಟ್ಯವೆಂದರೆ ಹಿಂದೂ ಬರಹಗಾರರು ಪರ್ಷಿಯನ್ ಭಾಷೆಯಲ್ಲಿ ತಮ್ಮ ಕೃತಿಗಳನ್ನು ರಚಿಸಿದುದಾಗಿದೆ.

ಮುಸಲ್ಮಾನ ಬರಹಗಾರರು ಇತಿಹಾಸ ಲೇಖನ ಸಂಪ್ರದಾಯದಲ್ಲಿ ನ್ಯೂನತೆಗಳನ್ನು ಹೊಂದಿದ್ದರೆ. ಎಚ್.ಇಲಿಯಟ್ ಅವರು ತಿಳಿಸಿರುವಂತೆ. "ಅನ್ಯಾಯಗಳಿಗೆ ತುತ್ತಾದ ಹಿಂದುಗಳ ಸಂವೇದನೆಗಳು, ನಿರೀಕ್ಷೆಗಳು, ನಂಬಿಕೆಗಳು, ಮತ್ತು ಬಯಕೆಗಳ ಮೇಲೆ ಅವರ ಬೆಳಕು ಬೀರುವದಿಲ್ಲ ಮತ್ತು ಅವರು ಆಜ್ಞೆಯಿಂದ ಹೇಳಿ ಬರೆಯಿಸಿದಂತೆ ಬರೆದರು ಮತ್ತು ಪ್ರತಿಯೊಂದು ವಾಕ್ಸಂಪ್ರದಾಯವೂ ಒಬ್ಬ ಗರ್ವಿಷ್ಠ ಮುಸಲ್ಮಾನ ಪೋಷಕನ ಯಥಾಭಿಮಾನವನ್ನು ಮುಖಸ್ತುತಿ ಮಾಡುವತ್ತ ಜಾಗರುಕತೆಯಿಂದ ಹಾಗೂ ಸೇವಾ ವೃತ್ತಿಯಿಂದ ರೂಪಿಸಲಾಗಿದೆ ಮತ್ತು ವಿಜಯಿಗಳ ಹಿಗ್ಗಿಸಿದ ಭಾಷೆ ಮತ್ತು ಕ್ರಮವಾದ ವಾಕ್ಸಂಪ್ರದಾಯಗಳಿಗೆ ಅವರು ಮಗ್ನರಾಗಿದ್ದರು." ಆದರೆ ಜೆ.ಎನ್.ಸರ್ಕಾರ್ ಅವರು ಈ ಬರಹಗಾರರ ಬಗ್ಗೆ ಹೆಚ್ಚು ಪ್ರಶಂಸಾ ಪೂರ್ಣವಾದ ಚಿತ್ರವನ್ನು ಕೊಡುತ್ತಾರೆ. ಅವರ ಪ್ರಕಾರ. ಈ ಇತಿಹಾಸಕಾರರು "ಆ ಕಾಲದ ಐತಿಹಾಸಿಕ ಘಟನೆಗಳನ್ನು ಸಮಂಜಸವಾಗಿ ಅರಿಯಲು ಅಧಿಕಾರಿಗಳ ಹತ್ತಿರದಲ್ಲಿಯೇ ಇರುತ್ತಿದ್ದರು. ಆದರೆ ಮುಖಸ್ತುತಿಕಾರರನ್ನು ವಂಚಿಸಲಾಗುವಂತೆ ಸಿಂಹಾಸನದ ಸನಿಹದಲ್ಲಿರಲಿಲ್ಲ".

## 16.6 ಸಾರಾಂಶ

ಹೀಗೆ ಮಧ್ಯಕಾಲಿನ ಭಾರತದ ಇತಿಹಾಸಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಆಧಾರಗಳು ಈ ಯುಗದ ಇತಿಹಾಸವನ್ನು ರಚಿಸಲು ಯೂರೋಪಿನ ಇತಿಹಾಸಕಾರರಿಗೆ ನೆರವಾದವು. ಜೇಮ್ಸ್ ಮಿಲ್ ಹಿಂದೂ ಯುಗಕ್ಕಿಂತ ಹೆಚ್ಚಾಗಿ ಮುಸಲ್ಮಾನ ಯುಗದ ಇತಿಹಾಸಕ್ಕೆ ಸ್ವರಭಾರ ಹಾಕಲು ಇದು ಕಾರಣವಾಯಿತು. 16 ನೆಯ ಶತಮಾನದ ಅಂತ್ಯದವರೆಗೆ ಮಧ್ಯಕಾಲೀನ ಭಾರತದ ಇತಿಹಾಸಗಳು ಮಧ್ಯಕಾಲೀನ ಕಾಲಕ್ರಮಾಗತ ದಾಖಲೆಗಳ ಆಧಾರದ ಮೇಲೆ ನಿಂತಿವೆ. ಈ ಅನುಕೂಲಗಳಿದ್ದಾಗ್ಯೂ ಈ ಇತಿಹಾಸ ಲೇಖನ ಸಂಪ್ರದಾಯದಲ್ಲಿ ಒಂದು ಕೊರತೆ ಎದ್ದು ಕಾಣುತ್ತಿತ್ತು. ಸಿದ್ಧಪಡಿಸಿದ ವಿಷಯಗಳು ಲಭ್ಯವಿದ್ದುದರಿಂದ ಇಂಗ್ಲೀಷ್ ಇತಿಹಾಸಕಾರರು ಮೂಲಾಧಾರಗಳ ಪರಿಶೋಧನೆಯಲ್ಲಿ ತೊಡಗಲಿಲ್ಲ. ಇದರ ಪರಿಣಾಮವಾಗಿ ಇತಿಹಾಸ ಲೇಖನ ಪರಂಪರೆಯಲ್ಲಿ ಪ್ರಾಚೀನ ಭಾರತಕ್ಕಿಂತ ಹೆಚ್ಚಿನ ಬೆಳವಣಿಗೆಯನ್ನು ಈ ಯುಗದಲ್ಲಿ ನಾವು ಕಾಣುವದಿಲ್ಲ.

ಈ ಎರಡು ಯುಗಗಳ ಇತಿಹಾಸ ಲೇಖನ ಪರಂಪರೆಯ ಬೆಳವಣಿಗೆ ಸಮಾನಾಂತರ ಸಾಲುಗಳಲ್ಲಿ ಮುಂದುವರಿಯಿತು. ವಿದೇಶಿ ಪ್ರವಾಸಿಗಳ ವರದಿಯನ್ನು ಪರಿಶೋಧಿಸಿ ಪ್ರಕಟಿಸಿದುದರಿಂದ ಪ್ರಾಚೀನ ಹಾಗೂ ಮಧ್ಯಕಾಲೀನ ಭಾರತಗಳ ಬಗ್ಗೆ ನಮ್ಮ ತಿಳುವಳಿಕೆಯು ಶ್ರೀಮಂತವಾಗಿದೆ. ಮಾತ್ರವಲ್ಲ, ಹೊಸ ಇತಿಹಾಸ ಗ್ರಂಥಗಳ ಪರಿಶೋಧನೆ, ಅವುಗಳ ವಿಮರ್ಶಾತ್ಮಕ ಅಧ್ಯಯನ, ಅರ್ಥ ವಿವರಣೆ, ಆಂಗ್ಲ ಭಾಷೆಗೆ ಅವುಗಳ ಭಾಷಂತರ ಮತ್ತು ಪ್ರಕಟಣೆ, ಪುರತತ್ವ ಶೋಧನೆ, ಭೂ ಶೋಧನೆಯಿಂದ ನಾಣ್ಯಗಳು ಹಾಗೂ ಶಾಸನಗಳನ್ನು

ಬೆಳಕಿಗೆ ತಂದುದು ಐತಿಹಾಸಿಕ ಕಾಲದ ಕಾಲಕ್ರಮಾಗತ ದಾಖಲೆಗಳಲ್ಲಿ ದೊರೆಯುವ ವಿಷಯ ವಿವರಣೆಗಳನ್ನು ಸರಿಪಡಿಸಲು, ಮಾರ್ಪಡಿಸಲು, ಪುರವಣಿ ಕೂಡಿಸಲು ಇವು ಇತಿಹಾಸಕಾರನಿಗೆ ಸಹಾಯಕವಾದವು. ಹಿಗಿದ್ದಾಗ್ಯೂ, ಪ್ರಾಚೀನ ಭಾರತದ ಇತಿಹಾಸ ಅಧ್ಯಯನಕ್ಕೆ ಹೋಲಿಸಿದರೆ ಮಧ್ಯಕಾಲೀನ ಭಾರತದ ಇತಿಹಾಸ ಲೇಖನ ಪರಂಪರೆಯಲ್ಲಿ ಗಮನಾರ್ಹವಾದ ಬೆಳವಣಿಗೆ ಕಂಡು ಬರುವುದಿಲ್ಲ. ಮಧ್ಯಕಾಲೀನ ಮುಸಲ್ಮಾನ ಇತಿಹಾಸ ಲೇಖನ ಪರಂಪರೆಯು ಪ್ರಾಚೀನ ಭಾರತೀಯ ನಿರರ್ಥಕತೆಗಳು ಮತ್ತು ಆಧುನಿಕ ಭಾರತೀಯ ಪರಿಪೂರ್ಣ ಇತಿಹಾಸಗಳ ನಡುವೆ ಅರ್ಥಮಾರ್ಗದ ಮನೆಯಿದ್ದಂತೆ ಎಂದು ಡಾ. ಎನ್. ಸುಬ್ರಮಣಿಯನ್ ಅಭಿಪ್ರಾಯ ಪಟ್ಟಿದ್ದಾರೆ.

## 16.7 ಪ್ರಮುಖ ಪದಗಳು

1. ಇಮಾಮ್: ಮಸೀದಿಯಲ್ಲಿ ಪ್ರಾರ್ಥನೆ ನಡೆಸುವವ
2. ಇಬಾದತ್ ಖಾನಾ: ಪ್ರಾರ್ಥನೆ ಮಾಡುವ ಸಭಾಂಗಣ

## 16.8 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಸುಲ್ತಾನರ ಅವಧಿಯಲ್ಲಿ ಇಂಡೋ–ಇಸ್ಲಾಮಿಕ್ ತಿಹಾಸಕಾರರ ಬೆಳವಣಿಗೆಯನ್ನು ಚರ್ಚಿಸಿ.
2. ಮೊಘಲರ ಅವಧಿಯಲ್ಲಿ ಇಂಡೋ–ಇಸ್ಲಾಮಿಕ್ ತಿಹಾಸಕಾರರ ಬೆಳವಣಿಗೆ ಮತ್ತು ಪ್ರಗತಿಯನ್ನು ಚರ್ಚಿಸಿ.

## 16.9 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 16.2 ನೋಡಿ
2. ವಿಭಾಗ 16.3 ನೋಡಿ

## 16.10 ಪರಾಮರ್ಶನ ಗ್ರಂಥಗಳು


1. Harbans Mukhia: Historians and Historiography during the Reign of Akbar
2. Sreedharan.E: A Textbook of Historiography, 500 BC to A.D. 2000, New Delhi



**ಪಠ್ಯವನ್ನು ರಚಿಸಿದವರು:**
**ಡಾ.ವೈ.ಹೆಚ್.ನಾಯಕವಾಡಿ**

# ಘಟಕ– 17 ವಸಹಾತುಶಾಹಿ ಇತಿಹಾಸಕಾರರು – ಓರಿಯಂಟಲ್ – ಆಡಳಿತಗಾರ ಇತಿಹಾಸಕಾರರು

**ರಚನೆ**


**17.0** ಉದ್ದೇಶಗಳು

**17.1** ಪೀಠಿಕೆ

**17.2** ಓರಿಯಂಟಲ್; ಅರ್ಥವಿವರಣೆ

**17.2.1** ವಿಲಿಯಮ್ ಮೋರ್ ಲ್ಯಾಂಡ್

**17.2.2** ಜೇಮ್ಸ್ ಫರ್ಗೋಸನ್

**17.2.3** ಲೇಡಿ ಬೌರಿಂಗ್

**17.2.4** ಜೆ. ಡುಬ್ರಾಯಿಲ್

**17.2.5** ಪ್ರಾನ್ಸಿಸ್ ಕೀಲ್ ಹಾರ್ನ್

**17.2.6** ಜೇಮ್ಸ್ ಮಿಲ್

**17.2.7** ಮೌಂಟ್ ಸ್ಟೂವರ್ಟ್ ಎಲ್‌ಫಿಲ್‌ಸ್ಟೋನ್

**17.2.8** ಥಾಮಸ್ ಬಾಬಿಂಗ್‌ಟನ್ ಮಕಾಲೆ

**17.3** ಸಾಮ್ರಾಜ್ಯಶಾಹಿ ಇತಿಹಾಸಕಾರರು

**17.4** ಸಾರಾಂಶ

**17.5** ಪ್ರಮುಖ ಪದಗಳು

**17.6** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**17.7** ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

**17.8** ಪರಾಮರ್ಶನ ಗ್ರಂಥಗಳು

## 17.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನಾವು,

- ಓರಿಯಂಟಲ್ ಪದದ ಆರ್ಥವಿವರಣೆ, ಸಾಮ್ರಾಜ್ಯಶಾಹಿ ಇತಿಹಾಸಕಾರರ ಬಗ್ಗೆ ತಳಿದುಕೊಳ್ಳುವೆವು.

## 17.1 ಪೀಠಿಕೆ

ಭಾರತದ ಇತಿಹಾಸದಲ್ಲಿ ಆಧುನಿಕ ಕಾಲವನ್ನು ಯೂರೋಪಿಯನ್ನರ ಆಗಮನದಿಂದ ಗುರುತಿಸಲಾಗಿದೆ. ಬ್ರಿಟಿಷ್ ಆಳ್ವಿಕೆಯು ಇಲ್ಲಿ ಆರಂಭವಾದುದು. 1757ರಲ್ಲಿ ಅಂದಿನಿಂದ ಬ್ರಿಟಿಷರನ್ನೊಳಗೊಂಡಂತೆ ಫ್ರೆಂಚರು, ಪೋರ್ಚುಗೀಸರು, ಜರ್ಮನರು, ಅಮೆರಿಕನ್ನರು, ಜಪಾನೀಯರು, ಆಸ್ಟ್ರೇಲಿಯನರು ಮತ್ತು ಇತರ ಯೂರೋಪಿಯನರು ಬರತೊಡಗಿದರು. ಅವರಲ್ಲಿ ಬಹುತೇಕರು ಆಡಳಿತಗಾರರಾಗಿಯೂ (ಮಿಲಿಟರಿ ಮತ್ತು ಸಿವಿಲ್ ಅಧಿಕಾರಿಗಳಾಗಿ) ಕೆಲವರು ಪಾದ್ರಿಗಳಾಗಿಯೂ, ಇನ್ನೂ ಕೆಲವರು ವಿದ್ವಾಂಸರಾಗಿಯೂ ಇದ್ದರು. ಹಾಗಾಗಿ ಭಾರತೀಯ ಜನಜೀವನ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಭಾಷಾ ವೈವಿಧ್ಯತೆಗಳನ್ನು ಅರಿತುಕೊಳ್ಳುವುದು ಇವರಿಗೆ ಅನಿವಾರ್ಯವಾಯಿತು. ಮೇಲಾಗಿ ಈ ಅಧಿಕಾರಿಗಳು (ಗವರ್ನರ್‌ಗಳು, ಕಲೆಕ್ಟರ್ಸ್, ರಕ್ಷಣಾಧಿಕಾರಿಗಳು, ಮೇಜರ್ಸ್, ಕರ್ನಲ್ಸ್ ಇತ್ಯಾದಿ). ಭಾರತದ ಬಗ್ಗೆ ಇಂಗ್ಲೆಂಡಿನಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯ ತಮ್ಮ ಮೇಲಾಧಿಕಾರಿಗಳಿಗೆ ವರದಿ ಮಾಡುವುದು ಅವರ ಕರ್ತವ್ಯವಾಯಿತು. ಈ ವರದಿಗಳು ಕ್ರಮೇಣ ಇತಿಹಾಸ ರಚನೆಗೆ ದಾರಿ ಮಾಡಿದುವು. ಅಲ್ಲದೆ ಭಾರತದಲ್ಲಿ ನಾವು ಕಂಡು ಕೇಳಿದ ಐತಿಹ್ಯಗಳೂ ಮತ್ತು ಸ್ಮಾರಕಗಳು, ಶಾಸನಗಳು ಮೊದಲಾದವು ಅವರ ಕುತೂಹಲವನ್ನು ಕೆರಳಿಸಿದುವು. ಪರಿಣಾಮವಾಗಿ ಅವುಗಳನ್ನು ಕುರಿತು ಅಧ್ಯಯನ ಮತ್ತು ರಚನೆಯಲ್ಲಿ ತೊಡಗಿದರು. ಇವರನ್ನು ವಸಾಹತು ಇತಿಹಾಸಕಾರರೆಂದೂ, ಕ್ರಮೇಣ ಆಡಳಿತಗಾರ ಇತಿಹಾಸಕಾರರೆಂದೂ, ಓರಿಯಂಟಲ್ ಅಥವಾ ಪೂರ್ವಾತ್ಯ ಇತಿಹಾಸಕಾರರೆಂದೂ, ಇಂಡಾಲಜಿಸ್ಟರೆಂದೂ ಕರೆಯುವುದು ರೂಢಿಯಲ್ಲಿ ಬಂದಿತು.

ಭಾರತಕ್ಕೆ ಅಧಿಕಾರಿಗಳನ್ನಗಿ ಕಳುಹಿಸುವುದಕ್ಕೆ ಮುಂಚೆ ಇಂಗ್ಲೆಂಡಿನ ಅಭ್ಯರ್ಥಿಗಳಿಗೆ ಹೇಲ್ಸ್ ಬರಿ ಟ್ರೈನಿಂಗ್ ಕಾಲೇಜಿನಲ್ಲಿ ತರಬೇತಿ ನೀಡಲಾಗುತ್ತಿತ್ತು. ತರಬೇತಿ ಸಮಯದಲ್ಲಿ ಭಾರತದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಹಾಗೂ ಪ್ರಚಲಿತವಿದ್ದ ಕಾನೂನು ಕಾಯಿದೆಗಳನ್ನು ಅಭ್ಯರ್ಥಿಗಳಿಗೆ ಮನದಟ್ಟು ಮಾಡಲಾಗುತ್ತಿದ್ದಿತು. ಇವೆಲ್ಲವುಗಳನ್ನು ಬೋಧಿಸುವಾಗ ಸಹಜವಾಗಿ ಇತಿಹಾಸ ರಚನೆ ರೂಪುಗೊಳ್ಳ ತೊಡಗಿತು. ಹಾಗಾಗಿ ಸುಮಾರು 1800 ರಿಂದ ಬ್ರಿಟಿಷ್ ಇಂಡಿಯನ್ ಹಿಸ್ಟೋರಿಯೋಗ್ರಫಿ (ಇತಿಹಾಸ ರಚನೆ) ಬ್ರಿಟಿಷ್ ಅಧಿಕಾರಿಗಳಿಂದ ಆರಂಭವಾಯಿತು.

## 17.2 ಓರಿಯಂಟಲ್: ಅರ್ಥವಿವರಣೆ

ಪೂರ್ವಾತ್ಯ ಇತಿಹಾಸಕಾರರೆಂಬುದನ್ನು ಓರಿಯಂಟಲಿಸ್ಟ್ ಎಂಬ ಪದದಿಂದ ತೆಗೆದುಕೊಳ್ಳಲಾಗಿದೆ. ಲ್ಯಾಟಿನ್ ಭಾಷೆಯಲ್ಲಿ ಓರಿಯನ್ ಎಂದರೆ ಸೂರ್ಯೋದಯದ ಪ್ರದೇಶಗಳು ಎಂದರ್ಥ. ಯೂರೋಪಿಯನರಿಗೆ ಏಷ್ಯಾದ ಪ್ರದೇಶಗಳು ಸೂರ್ಯೋದಯದ ಪ್ರದೇಶಗಳಾಗಿದ್ದವು. ಅಂದರೆ ಪೂರ್ವದ ದೇಶಗಳಾಗಿದ್ದುವು. 16ನೇ ಶತಮಾನದಿಂದ ಈಚೆಗೆ ಯೂರೋಪಿಯನರು ಭಾರತ, ಸಿಲೋನ್ ಮತ್ತು ಪೂರ್ವ ಏಷ್ಯಾ ಹಾಗೂ ಆಗ್ನೇಯ ಏಷ್ಯಾ ದೇಶಗಳನ್ನು ವಶಪಡಿಸಿಕೊಂಡ ಮೇಲೆ ಅಲ್ಲಿನ ಭಾಷೆ ಸಾಹಿತ್ಯ ಕಲೆ, ಸಂಸ್ಕೃತಿ, ಇತಿಹಾಸ ಅಧ್ಯಯನ ಮಾಡಿ ಕೃತಿಗಳನ್ನು ರಚಿಸ ತೊಡಗಿದರು. ಯೂರೋಪಿನ ಪೂರ್ವಾತ್ಯ ಅಥವಾ ಓರಿಯಂಟಲ್ ವಿದ್ವಾಂಸರಲ್ಲಿ ಪೋರ್ಚುಗಲ್ಲಿನ ಜೆಸ್ಯೂಯಿಟ್ ಪಾದ್ರಿಗಳು ಮೊದಲಿಗರಾಗಿದ್ದಾರೆ. ಬ್ರಿಟಿಷ್ ಓರಿಯಂಟಲಿಸ್ಟರಲ್ಲಿ ಖ್ಯಾತನಾದ ಪಾರ್ಗಿಟರ್ ಪ್ರಾಚೀನ ವಂಶಾವಳಿಗಳನ್ನು ಕುರಿತು ಆಳವಾಗಿ ಅಧ್ಯಯನ ಮಾಡಿ 'ಏನ್‌ಷಿಯಂಟ್ ಇಂಡಿಯನ್ ಹಿಸ್ಟಾರಿಕಲ್ ಟ್ರೆಡಿಷನ್ಸ್' ಕೃತಿ ರಚಿಸಿದ್ದಾನೆ. ಈ ಐರೋಪ್ಯರು ಸಂಸ್ಕೃತ, ವ್ಯಾಕರಣ ಮತ್ತು ಸಾಹಿತ್ಯಗಳನ್ನು ಕುರಿತು ಅಧ್ಯಯನ ಮಾಡಿ ವಿಮರ್ಶಾ ಗ್ರಂಥಗಳನ್ನು ಬರೆದರು. ಅವರಲ್ಲಿ: ಫಾದರ್ ಹ್ಯಾನ್ಸ್ ಲೇಡನ್ ಎಂಭುವನು 'ಸಾನ್ ಸ್ಕ್ರಿಟ್ ಗ್ರಾಮರ್' ಎಂಬ ಕೃತಿಯನ್ನು ಪೋರ್ಚುಗೀಸ್ ಭಾಷೆಯಲ್ಲಿ ರಚಿಸಿದನು (1732). ಫಾದರ್ ಕೊಡೋರ್(ಕ್ಸ್) 'ಇಂಡೋ–ಯೂರೋಪಿಯನ್ ಲಾಂಗ್ವೇಜಸ್' ಎಂಬ ಕೃತಿ ರಚಿಸಿದಾನೆ. ಅವರು ತಮ್ಮ ದೇಶದ ರಾಜಧಾನಿಗಳು ಹಾಗೂ ಪ್ರಮುಖ ನಗರಗಳಾದ: ಲಿಸ್ಬನ್, ಮಾಡ್ರಿಡ್, ಲಂಡನ್, ಪ್ಯಾರಿಸ್, ಬರ್ಲಿನ್, ವೆನಿಸ್, ವಿಯನ್ನ, ಟುಬಿಂಜನ್, ಫ್ರಾಂಕ್ ಫರ್ಟ್ ಮೊದಲಾದ ಸ್ಥಳಗಳಲ್ಲಿ ಓರಿಯಂಟಲ್ ಅಸೋಸಿಯೇಷನ್‌ಗಳನ್ನು ಸ್ಥಾಪಿಸಿಕೊಂಡು ಚರ್ಚಾಕೂಟಗಳನ್ನು ನಡೆಸಿ ಬಿಡಿ ಲೇಖನಗಳು ಹಾಗೂ ಗ್ರಂಥಗಳನ್ನು ಪ್ರಕಟಿಸತೊಡಗಿದರು. ಅನಂತರ ಬೊಂಬಾಯಿ, ಕಲ್ಕತ್ತ ಮೊದಲಾದ ಕಡೆ ಏಷ್ಯಾಟಿಕ್ ಸೊಸೈಟಿಗಳನ್ನು ಸ್ಥಾಪಿಸಿ ಪೂರ್ವಾತ್ಯ ಸಂಸ್ಕೃತಿಗಳನ್ನು ಅಧ್ಯಯನ ಮಾಡಿ ಪ್ರಕಟಿಸತೊಡಗಿದರು. ಇವರನ್ನು ಓರಿಯಂಟಲ್ ಸ್ಕಾಲರ್ಸ್ ಮತ್ತು ಓರಿಯಂಟಲ್ ಹಿಸ್ಟಾರಿಯನ್ಸ್ ಎಂದು ಕರೆಯಲಾಯಿತು.

### 17.2.1 ವಿಲಿಯಮ್ ಮೋರ್ ಲ್ಯಾಂಡ್ (1868–1938)

ಇವನ ಪೂರ್ಣ ಹೆಸರು ವಿಲಿಯಮ್ ಹ್ಯಾರಿಸನ್ ಮೋರ್‌ಲ್ಯಾಂಡ್. ಐರ್‌ಲ್ಯಾಂಡ್ ದೇಶದವನಾದ ಇವನು ಕೇಂಬ್ರಿಡ್ಜ್‌ನಲ್ಲಿ ಅಧ್ಯಯನ ಮಾಡಿ ಬ್ರಿಟಿಷಂ ಭಾರತದಲ್ಲಿ ಐ.ಸಿ.ಎಸ್. ಅಧಿಕಾರಿಯಾಗಿ ಬಂದನು. ಬಹುಕಾಲ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಆಗಿ ಸೇವೆ ಸಲ್ಲಿಸಿದನು. ಆ ಅವಧಿಯಲ್ಲಿ ಅವನು ಬರೆದ ಕೃತಿಗಳು:

1) ದಿ ಅಗ್ರಿಕಲ್ಚರ್ ಆಫ್ ಯು.ಪಿ. (1904)
2) ರೆವಿನ್ಯು ಅಡ್ಮಿನಿಸ್ಟ್ರೇಷನ್ ಆಫ್ ಯು.ಪಿ. (1911)
3) ಅಗ್ರೇರಿಯನ್ ಸಿಸ್ಟಮ್ ಆಫ್ ಮೊಗಲ್ ಇಂಡಿಯ (1918) (ಅಕ್ಬರನ ಭೂಕಂದಾಯ)
4) ಇಂಡಿಯ ಅಟ್ ದಿ ಡೆತ್ ಆಫ್ ಅಕ್ಬರ್ (1920)
5) ಅಗ್ರೇರಿಯನ್ ಸಿಸ್ಟಮ್ ಆಫ್ ಮುಸ್ಲಿಂ ಇಂಡಿಯ (1929)

6) ಎಕನಾಮಿಕ್ಸ್ ಫಾರ್ ಇಂಡಿಯನ್ ಸ್ಟೂಡೆಂಟ್ಸ್ (1929)

ಈ ಕೃತಿಗಳನ್ನು ಟೈಲ್ಸ್‌ಬರಿ ಕಾಲೇಜಿನ ಐ.ಸಿ.ಎಸ್. ತರಬೇತಿ ಅಭ್ಯರ್ಥಿಗಳ ಪಠ್ಯವಾಗಿ ನಿಗಧಿಗೊಳಿಸಲಾಗಿದ್ದಿತು. ಭಾರತದ ಆರ್ಥಿಕ ಇತಿಹಾಸ ರಚನೆಗೆ ಪ್ರಥಮ ಬಾರಿಗೆ ಚಾಲನೆ ಕೊಟ್ಟ ಇವನ್ನು ಆರ್ಥಿಕ ಇತಿಹಾಸ ರಚನಾ ಪಿತಾಮಹಾ ಎಂದು ಪರಿಗಣಿಸಬಹುದಾಗಿದೆ.

ಮೋರ್‌ಲ್ಯಾಂಡ್ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಆಡಳಿತಾತ್ಮಕ ಇತಿಹಾಸದ ಅಧ್ಯಯನ ಮಾಡಿದ್ದನು. ಆ ಹಿನ್ನೆಲೆಯಲ್ಲಿ ಕೃಷಿ ಹಾಗೂ ಕಂದಾಯಾಡಳಿತ ಬಗ್ಗೆ ಹೆಚ್ಚು ಗಮನಹರಿಸಿ ಕೃತಿಗಳನ್ನು ರಚಿಸಿದನು. ಈ ಅಧ್ಯಯನದಲ್ಲಿ ವಸ್ತು ವಿನಿಮಯ ಪದ್ಧತಿ, ಕೂಲಿಗಾಗಿ ಕಾಳು ಪದ್ಧತಿ, ಕಾಳಿನ ರೂಪದಲ್ಲಿ ಭೂಗಂದಾಯ, ನಗದು ರೂಪದಲ್ಲಿ ಭೂಗಂದಾಯ, ಉಪ್ಪಿನ ವಿನಿಮಯ ಪದ್ಧತಿ ಮೊದಲಾದವುಗಳನ್ನು ಕೂಲಂಕುಷವಾಗಿ ವಿವರಿಸಿದ್ದಾನೆ. ಉಪ್ಪಿನ ವಿನಿಮಯ ಎಂದರೆ ಉಪ್ಪನ್ನು ನಗದಿನ ಬದಲಾಗಿ ವಿನಿಮಯದಲ್ಲಿ ಬಳಸಲಾಗುತ್ತಿದ್ದಿತು.

ಮೊಗಲರ ಕಾಲದಲ್ಲಿ ತೋದರಮಲ್ಲನಿಂದ ರೂಪುಗೊಂಡ ಸುಧಾರಿತ ಕಂದಾಯ ಪದ್ಧತಿಯನ್ನು ಬ್ರಿಟಿಷರು ಮುಂದುವರಿಸಿಕೊಂಡು ಬಂದುದನ್ನು ಮೋರ್ ಲ್ಯಾಂಡ್ ಮೆಚ್ಚಿಕೊಂಡಿದ್ದಾನೆ. ಅದನ್ನು ಮೊಗಲರ ಕಾಲದಲ್ಲಿದ್ದ ದೌರ್ಜನ್ಯಗಳನ್ನು ಬ್ರಿಟಿಷರ ಕಾಲದಲ್ಲಿ ಕಡಿಮೆ ಮಾಡಲಾಯಿತು ಎಂಬುದನ್ನು ನಿರೂಪಿಸಿದ್ದಾನೆ. ಅಲ್ಲದೆ ವಾಣಿಜ್ಯ ವ್ಯಾಪಾರ ಅಳವಡಿಸಿಕೊಂಡಿದ್ದ ಸ್ವಾರ್ಥ ಪರನೀತಿಯನ್ನು ಕಮಡು ಖಂಡಿಸಿದ್ದ ಕೈಗಾರಿಕೆಗಳ ಮೇಲೆ ವಿಧಿಸಿದ್ದ ನಿರ್ಬಂಧಗಳನ್ನು ತೆಗೆದುಹಾಕಿ ಅವುಗಳಿಗೆ ಉತ್ತೇಜನ ನೀಡಬೇಕೆಂದು ಬ್ರಿಟಿಷ್ ಯೋಜನಕಾರರಿಗೆ ಸಲಹೆ ನೀಡಿದ್ದಾನೆ. ಮೋರ್‌ಲ್ಯಾಂಡ್ ಇಷ್ಟೊಂದು ನಿರ್ಭೀತಿಯಿಂದ ಬರೆಯಲು ಕಾರಣ ಇಂಗ್ಲೆಂಡಿನಲ್ಲಿ ಆಗ ಬೌದ್ಧಿಕ ಉದಾರತೆಯ ಗಾಳಿ ಬೀಸುತ್ತಿದ್ದಿತು. ಹೀಗಾಗಿ ಅವನು ಇತಿಹಾಸ ರಚನೆಯಲ್ಲಿ ಉತ್ತಮ ಮಾದರಿಯ ಇತಿಹಾಸ ರಚನಾ ಮಾರ್ಗವನ್ನು ಅನುಸರಿಸಲು ಸಾಧ್ಯವಾಯಿತು. ಇವನಿಂದ ಸ್ಫೂರ್ತಿ ಪಡೆದ ನವರೋಜಿ, ಇರ್ಫಾನ್, ಹಬೀಬ್, ರಾಜೇಂದ್ರಲಾಲ್ ಮಿತ್ರ ಮೊದಲಾದವರು ಭಾರತದ ಆರ್ಥಿಕ ಇತಿಹಾಸ ರಚನೆ ಮಾಡತೊಡಗಿದರು. ವೇರ ಆನ್‌ಸ್ಟೆ ಎಂಬುಗಳ 'ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯ' ಅದೇ ಮಾದರಿಯಲ್ಲಿದೆ.

## 17.2.2 ಜೇಮ್ಸ್ ಫರ್ಗೂಸಸ್ (1710–1776)

ಬ್ರಿಟಿಷ್ ಅಧಿಕಾರಿ ಹಾಗೂ ವಿದಾಂಸನಾದ ಜೇಮ್ಸ್ ಫರ್ಗೂಸಸ್ ಓರಿಯಂಟಲಿಸ್ಟ್ಸ್ ಅಥವಾ ಪೂವಾತ್ಯ ವಿದ್ವಾಂಸರಲ್ಲಿ ಒಬ್ಬನಾಗಿದ್ದಾನೆ. ಇವನು ಕೇವಲ ಚಿತ್ರಕಾರನಾಗಿರದೆ ಗಣಿತಜ್ಞನೂ ಖಗೋಳಶಾಸ್ತ್ರಜ್ಞನೂ ಲಂಡನ್ನಿನ ರಾಯಲ್ ಸೊಸೈಟಿಯ ಸದಸ್ಯನೂ ಆಗಿದ್ದನು. ಅವನ ಮೇರುಕೃತಿಗಳು (1) ಇಂಡಿಯನ್ ಆರ್ಕಿಟೆಕ್ಚರ್ (2) ಟ್ರೀ ಅಂಡ್ ಸರ್ಪೆಂಟ್ ವರ್ಷಿಪ್ ಇತ್ಯಾದಿ. ಈ ಕೃತಿಗಳಲ್ಲಿ ಭಾರತೀಯ ಕಲಾ ವೈಶಿಷ್ಟ್ಯತೆಯನ್ನು ಮುಕ್ತ ಮನಸ್ಸಿನಿಂದ ಕೊಂಡಾಡಿದ್ದಾನೆ. ಕಲಾ ಅಧ್ಯಯನದಲ್ಲಿ ಫರ್ಗೂಸಸ್

ಮೇಧಾವಿ ಹಾಗೂ ಅನುಭವಿ ಕಲಾವಿಮರ್ಶಕನಾಗಿದ್ದು ಕಲಾ ಇತಿಹಾಸ ರಚನಾಕಾರರಿಗೆ ಮಾರ್ಗದರ್ಶಿಯಂತಿದ್ದಾನೆ.

### 17.2.3 ಲೇಡಿ ಬೌರಿಂಗ್ (1880)

ಮೈಸೂರಿನ ಬ್ರಿಟಿಷ್ ಕಮೀಷನರ್ ಲೂಯಿ ಬೆಂಥ್ಯಾಮ್ ಬೌರಿಂಗನ ಮಡದಿಯಾಗಿ ಲೇಡಿ ಬೌರಿಂಗ್ ಇಲ್ಲಿ ಹೆಚ್ಚು ಕಾಲ ತಂಗಿದ್ದಳು. ಸಾಮಾಜಿಕ ಕಳಕಳಿ ಉಳ್ಳವಳಾಗಿದ್ದ ಲೇಡಿ ಬೌರಿಂಗ್ ಇಲ್ಲಿನ ಉನ್ನತ ವರ್ಗದ ಹಾಗೂ ರಾಜಮನೆತನದೊಡನೆ ನಿಕಟ ಸಂಬಂಧ ಹೊಂದಿದ್ದಳು. ಅವರ ರೀತಿನೀತಿ, ನಡೆನುಡಿ, ಸಮಾರಂಭಗಳು, ಉತ್ಸವಗಳು, ಹಬ್ಬಗಳು ಹಾಗೂ ಸಾಮಾಜಿಕ ಸಂಬಂಧಗಳನ್ನು ಕುರಿತು 'ಈಸ್ಟ್ರನ್ ಎಕ್ಸ್‌ಪೀರಿಯನ್ಸ್‌ಸ್' ಎಂಬ ಆತ್ಮಕತೆಯಲ್ಲಿ ಸ್ವಾರಸ್ಯಕರವಾಗಿ ಬರೆದಿದ್ದಾಳೆ. ಅದರಲ್ಲೂ 10ನೇ ಚಾಮರಾಜ ಒಡೆಯರ್‌ನ ಪಟ್ಟಾಭಿಷೇಕ ಮಹೋತ್ಸವದ (1868) ವಿವರಗಳನ್ನು ಕಣ್ಣಿಗೆ ಕಟ್ಟುವಂತೆ ಬರೆದಿದ್ದಾಳೆ. ಈ ಕೃತಿ ಯಾವುದೇ ಉತ್ಪ್ರೇಕ್ಷೆಗಳಿಂದಾಗಲೀ, ರಾಗದ್ವೇಷಗಳಿಂದಾಗಲೀ, ಧಾರ್ಮಿಕ ಸೋಂಕಿನಿಂದಾಗಲಿ ಕೂಡಿರದ ಸತ್ಯ ಹಾಗೂ ವಸ್ತುನಿಷ್ಠವಾದುದಾಗಿದೆ.

### 17.2.4 ಜೆ.ಡುಬ್ರಾಯಿಲ್

ಬ್ರಿಟಿಷ್ ಓರಿಯಂಟಾಲಿಸ್ಟರಲ್ಲಿ ಒಬ್ಬನಾದ ಇವನು ದಕ್ಷಿಣ ಭಾರತದ ಇತಿಹಾಸದ ಬಗ್ಗೆ ಹೆಚ್ಚು ಅಧ್ಯಯನ ಮಾಡಿದವನು. ಇವನ ಕೃತಿಗಳಲ್ಲಿ ಪ್ರಮುಖವಾದುದು 'ಏನ್ಷಿಯಂಟ್ ಹಿಸ್ಟರಿ ಆಫ್ ಡೆಕನ್'.

### 17.2.5 ಫ್ರಾನ್ಸಿಸ್ ಕೀಲ್ ಹಾರ್ನ್ (1840–1908)

ಜರ್ಮನ್ ಇತಿಹಾಸಜ್ಞ, ಹಾಗೂ ಶಾಸನ ತಜ್ಞನಾಗಿದ್ದ ಕೀಲ್ ಹಾರ್ನ್ ಇಂಗ್ಲಿಷ್, ಪಾಲಿ, ಪ್ರಾಕೃತ, ಕನ್ನಡ, ಮರಾಠಿ ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಗಳಿಸಿದ್ದನು. ಪ್ರೊ॥ ಮ್ಯಾಕ್ಸ್ ಮುಲರ್ ಮತ್ತು ಪ್ರೊ॥ ಮೋನಿಯರ್ ವಿಲಿಯಮ್ಸ್‌ರಿಗೆ ಸಂಶೋಧನಾ ಕಾರ್ಯದಲ್ಲಿ ಸಹಾಯಕನಾಗಿದ್ದನು. ಪೂನಾದ ಡೆಕನ್ ಕಾಲೇಜಿಗೆ ಓರಿಯಂಟಲ್ ಭಾಷೆಗಳ (ಸಂಸ್ಕೃತ, ಪಾಲಿ, ಪ್ರಾಕೃತ ಇತ್ಯಾದಿ) ಪ್ರಾಧ್ಯಾಪಕನಾಗಿಬಂದನು. ಮುಂಬೈ ಪ್ರಾಂತಕ್ಕೆ ಸೇರಿದ್ದ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಕನ್ನಡ ಶಾಸನಗಳನ್ನು ಸಂಗ್ರಹಿಸಿ ವಿದ್ಯುತ್ ಪೂರ್ಣ ಟಿಪ್ಪಣಿಗಳನ್ನು ಬರೆದನು. ಆ ಶಾಸನಗಳು ಮುಖ್ಯವಾದುವು. ಪುಲಿಕೇಶಿಯ ಐಹೊಳೆ ಪ್ರಶಸ್ತಿ ಶಾಸನ, ಮೈಸೂರು ರಾಜ್ಯದ ತಾಳಗುಂದ ಶಾಸನ ಇತ್ಯಾದಿ. ಈ ಶಾಸನಗಳ ಮೂಲಕ ದಕ್ಷಿಣ ಭಾರತದ ಇತಿಹಾಸ ರಚನೆಗೆ ಇವನ ಕೊಡುಗೆ ಅಪಾರವಾಗಿದೆ.

## 17.2.6 ಜೇಮ್ಸ್ ಮಿಲ್ (1773–1836)

ಪ್ರಯೋಜನವಾದ ಪಂಥದ ವಿಚಾರವನ್ನು ಅನುಸರಿಸಿದ್ದ ದಾರ್ಶನಿಕನೂ, ಅರ್ಥಶಾಸ್ತ್ರಜ್ಞನೂ ಹಾಗೂ ವಿವಾದಾಸ್ಪದ ಬರಹಗಾರನೂ ಆಗಿದ್ದ ಪ್ರಧಾನ ಬ್ರಿಟಿಷ್ ಚರಿತ್ರಲೇಖಕನೇ ಜೇಮ್ಸ್ ಮಿಲ್. 1773ರ ಏಪ್ರಿಲ್ 6 ರಂದು ಜೇಮ್ಸ್ ಮಿಲ್ನೆ ಅಥವಾ ಮಿಲ್ ಎಂಬ ಚಮ್ಮಾರನ ಜ್ಯೇಷ್ಠ ಪುತ್ರನಾಗಿ ಜನಿಸಿದ ಅವನಿಗೆ ವಿದ್ಯಾವಂತನಾಗುವಂತೆ ಪ್ರೋತ್ಸಾಹಿಸಿದವಳು ಅವನ ತಾಯಿ ಇಸಬೆಲ್ ಫೆನ್‌ಟನ್. ಮೊದಲು ಅವನು ಪ್ಯಾರಿಸ್ ಶಾಲೆಯಲ್ಲಿ ಶಿಕ್ಷಣವನ್ನು ಪಡೆದ ನಂತರದ ಮ್ಯಾಂಟ್ರೋಸ್ ಅಕ್ಯಾಡೆಮಿಯಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದನು. ಕ್ರೈಸ್ತ ಪೌರೋಹಿತ್ಯ ಕಾರ್ಯಕ್ಕಾಗಿ ಬಡಯುವಕರನ್ನು ತರಬೇತು ಮಾಡಲು ಯತ್ನಿಸುತ್ತಿದ್ದ ಸರ್ ಜಾನ್ ಸ್ಟೂವರ್ಟ್ ಎಂಬ ಪ್ಯಾರಿಸ್‌ನ ನಿವಾಸಿಯು ಅವನಿಗೆ ಆಶ್ರಯದಾತನಾದನು. ಮಿಲ್ 1790ರಲ್ಲಿ ಎಡಿನ್‌ಬರೋ ವಿಶ್ವವಿದ್ಯಾನಿಲಯದಲ್ಲಿ ಗ್ರೀಕ್ ಸಾಹಿತ್ಯವನ್ನು ಓದಿ ಅಗಾಧ ಪಾಂಡಿತ್ಯವನ್ನು ಗಳಿಸಿ ಪ್ರಮುಖ ಪಂಡಿತನಾದನು ಮತ್ತು 1794ರಲ್ಲಿ ದೇವತಾಶಾಸ್ತ್ರವನ್ನು ಕುರಿತು ಅಧ್ಯಯನ ಮಾಡಲಾರಂಭಿಸಿದನು. 1798ರಲ್ಲಿ ಅವನಿಗೆ ಧರ್ಮೋಪದೇಶವನ್ನು ಮಾಡಲು ಅನುಮತಿ ಸಿಕ್ಕಿ ಅವನು ತನ್ನ ಜಿಲ್ಲೆಯಲ್ಲಿ ಧರ್ಮಪ್ರವಚನವನ್ನು ಮಾಡಿದನು. ಬಹುಶಃ ಅವನು ಘನಪಂಡಿತನಾಗಿದ್ದರಿಂದ ಬಹು ಜನರಿಗೆ ಅವನ ಪಾಂಡಿತ್ಯಪೂರ್ಣ ಧರ್ಮಬೋಧನೆಗಳು ಅರ್ಥವಾಗಲಿಲ್ಲ ಎಂದು ಕಾಣುತ್ತದೆ.

ಸರ್ ಜಾನ್ ಸ್ಟೂವರ್ಟ್ ಮಿಲ್‌ನನ್ನು ಲಂಡನ್ನಿಗೆ ಕರೆದೊಯ್ದನು. ಅಲ್ಲಿ ಮಿಲ್ ಸೆಯಿಂಟ್ ಜೇಮ್ಸಸ್ ಕ್ರಾನಿಕಲ್ ಎಂಬ ನಿಯತಕಾಲಿಕದ ಸಂಪಾದಕನಾದನು. ಧನಿಕ ವಿಧವೆಯೊಬ್ಬಳ ಮಗಳನ್ನು ಮದುವೆಯಾದನು ಮತ್ತು 1806 ಮೇ 20ರಂದು ಹುಟ್ಟಿದ ತನ್ನ ಪ್ರಥಮ ಪುತ್ರನಿಗೆ ತನ್ನ ಆಶ್ರಯದಾತನ ಹೆಸರಿನ ಮೇರೆಗೆ ಜಾನ್ ಸ್ಟೂವರ್ಟ್ ಮಿಲ್ ಎಂದು ನಾಮಕರಣ ಮಾಡಿದನು. ಅದೇ ವರ್ಷದ ಕೊನೆಯ ಹೊತ್ತಿಗೆ ಅವನು ದಿ ಹಿಸ್ಟೋರಿ ಆವ್ ಬ್ರಿಟಿಷ್ ಇಂಡಿಯಾ ಎಂಬ ಮೇರುಕೃತಿಯ ರಚನೆಯನ್ನು ಆರಂಭಿಸಿದನು. ಭಾರತಕ್ಕೆ ಭೇಟಿ ಕೊಡದೆಯೇ ಭಾರತವನ್ನು ಕುರಿತ ಇತಿಹಾಸವನ್ನು ಬರೆಯಲು ಪ್ರಾರಂಭಿಸಿ ಅದನ್ನು 3 ವರ್ಷಗಳಲ್ಲಿ ಮುಗಿಸಲು ಉದ್ದೇಶಿಸಿದ್ದನಾದರೂ ವಾಸ್ತವದಲ್ಲಿ ಅದನ್ನು ಮುಕ್ತಾಯಗೊಳಿಸಲು ಅವನಿಗೆ 12 ವರ್ಷಗಳು ಬೇಕಾದುವು. ಅದು ಮೂರು ಸಂಪುಟಗಳಲ್ಲಿ 1818 ಹಾಗು 1819ರಲ್ಲಿ ಪ್ರಕಟವಾಯಿತು. ಈ ಕೃತಿಯಲ್ಲಿ ಅವನು ಭಾರತದ ಬ್ರಿಟಿಷ್ ಆಳ್ವಿಕೆಯನ್ನು ಟೀಕಿಸಿದ್ದರೂ ಅವನಿಗೆ ಇಂಡಿಯಾ ಹೌಸಿನಲ್ಲಿ ಒಂದು ಹುದ್ದೆ ದೊರಕಿ 1830ರಲ್ಲಿ ಅದರ ಮುಖ್ಯಸ್ಥನಾದನು. ಅವನು ಆ್ಯನ್ಟಿ–ಜಾಕೋಬಿನ್ ರಿವ್ಯೂ, 'ದಿ ಬ್ರಿಟಿಷ್ ರಿವ್ಯೂ', 'ದಿ ಎಡಿನ್‌ಬರೋ ರಿವ್ಯೂ', 'ದಿ ವೆಸ್ಟ್ ಮಿನಿಸ್ಟರ್ ರಿವ್ಯೂ', ಮುಂತಾದ ನಿಯತಕಾಲಿಕಗಳಿಗೆ ನಿಯತವಾಗಿ ಲೇಖನಗಳನ್ನು ಬರೆದುಕೊಡುತ್ತಿದ್ದನಲ್ಲದೆ, 1911ರಲ್ಲಿ ವಿಲಿಯಂ ಅಲೆನ್ ಜೊತೆಯಲ್ಲಿ 'ಫಿಲ್ಯಾಂತ್ರೋಪಿಸ್ಟ್' ಎಂಬ ನಿಯತಕಾಲಿಕವನ್ನು ಪ್ರಕಟಿಸಿದನು. ಏತನ್ಮಧ್ಯೆ ಅವನಿಗೆ ಪ್ರಯೋಜನವಾದದ ದಾರ್ಶನಿಕ ಜರಿಮಿ ಬೆಂತಂನ ಪರಿಚಯವಾಯಿತು. ಅವನು 1821ರಲ್ಲಿ ಅರ್ಥಶಾಸ್ತ್ರದ ಬಗ್ಗೆ ಎಲಿಮೆಂಟ್ಸ್ ಆವ್ ಪೊಲಿಟಿಕಲ್ ಎಕೊನಾಮಿ ಎಂಬ ಪ್ರಥಮ ಪಠ್ಯಪುಸ್ತಕವನ್ನು 1829ರಲ್ಲಿ ಅನ್ಯಾಲಿಸಿಸ್ ಆವ್ ದಿ ಫಿನಾಮೆನ ಆವ್ ದಿ ಮೈಂಡ್, 1835ರಲ್ಲಿ ಫ್ರಾಗ್‌ಮೆಂಟ್ ಆನ್ ಮ್ಯಾಕಿನ್‌ಟಾಷ್ ಎಂಬ ಗ್ರಂಥಗಳನ್ನು ಬರೆದನು. ಅವನು 1836ರ ಜೂನ್ 23 ರಂದು ಕಾಲವಾದನು.

ಮಿಲ್ ಸ್ವಂತಿಕೆಯಿಂದ ಕೂಡಿದ್ದ ಚಿಂತಕನಾಗಿರಲಿಲ್ಲ. ಆದರೂ ಅವನ ಅಪಾರ ಬುದ್ಧಿಶಕ್ತಿ ಹಾಗೂ ಸ್ಫುಟವಾಗಿದ್ದ ಸಾಹಿತ್ಯ ಶೈಲಿ ಮೆಚ್ಚತಕ್ಕದ್ದೇ ಆಗಿದ್ದುವು. ಅವನ ಪ್ರಧಾನ ಗ್ರಂಥವಾಗಿದ್ದ ದಿ ಹಿಸ್ಟೊರಿ ಆವ್ ಬ್ರಿಟಿಷ್ ಇಂಡಿಯಾ ಮುಂದೆ ಬಂದ ಕಾಲಗಳಲ್ಲಿ ಕಂಡುಬಂದ ಇತಿಹಾಸ ರಚನೆಯ ಮೇಲೆ ಪ್ರಬಲ ಪ್ರಭಾವವನ್ನು ಬೀರಿತು. ಈಸ್ಟ್ ಇಂಡಿಯಾ ಕಂಪೆನಿಯ ಕಛೇರಿಯಲ್ಲಿ ಇದ್ದಿದ್ದರಿಂದ ಅವನಿಗೆ ಭಾರತಕ್ಕೆ ಸಂಬಂಧಿಸಿದ್ದ ಎಲ್ಲಾ ಕಾಗದಪತ್ರಗಳು ಸುಲಭವಾಗಿ ಸಿಕ್ಕುತ್ತಿದ್ದರಿಂದ ಭಾರತ ಚರಿತ್ರೆಯನ್ನು ಬರೆಯಲು ಅವನಿಗೆ ಎಲ್ಲಾ ವಿಧದಲ್ಲೂ ಅನುಕೂಲವಾಯಿತು. ಕಾನೂನು ಮತ್ತು ಸರ್ಕಾರದ ಮೂಲಕ ಜನರ ರೀತಿ ನೀತಿಗಳನ್ನು ಉತ್ತಮಪಡಿಸಬಹುದು ಮತ್ತು ಜನರ ಪರಿಸ್ಥಿತಿಗಳನ್ನು ಸುಧಾರಿಸುವುದಕ್ಕೆ ಹೆಚ್ಚಿನ ಗಮನವನ್ನು ಕೊಡಬೇಕಾದುದು ರಾಜ್ಯದ ಪ್ರಧಾನ ಹೊಣೆಗಾರಿಕೆ ಎಂಬ ಪ್ರಯೋಜನವಾದದ ತತ್ವವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಅವನು ಭಾರತ ಇತಿಹಾಸವನ್ನು ರಚಿಸಿದನು. ಅವನು ಬರೆದಿರುವ ಹಿಂದೂ ಹಾಗೂ ಮುಸ್ಲಿಂ ಕಾಲಗಳ ಚರಿತ್ರೆಯು ಒಂದು ನಿರ್ದಿಷ್ಟ ಸಿದ್ಧಾಂತವನ್ನು ಎತ್ತಿಹಿಡಿದ ಪಕ್ಷಪಾತಯುಕ್ತ ದಾಖಲೆಯಾಗಿದ್ದಿತು.

ದೋಷಗಳೇನೇ ಇರಲಿ, ನೀಡಿರುವ ಸವಿಸ್ತರ ವಿವರಣೆ. ಆ ಕಾಲದ ಬಗ್ಗೆ ಅಳವಡಿಸಿಕೊಂಡಿದ್ದ ನೂತನ ದೃಷ್ಟಿಕೋನ ಮತ್ತು ಬ್ರಿಟಿಷ್ ರಾಜನೀತಿಗಳ ಬಗ್ಗೆ ಚರ್ಚಿಸುವಾಗ ತೋರಲಾದ ಸೂಕ್ಷ್ಮ ಪರಿಜ್ಞಾನ ಇತ್ಯಾದಿಗಳಿಗಾಗಿ ಅವನ ಕೃತಿ ಅಮೂಲ್ಯವಾದುದು ಎಂಬುದಾಗಿ ಹೇಳಬಹುದು. ಭಾರತೀಯ ಚರಿತ್ರಲೇಖಕರು ಅವನ ಗ್ರಂಥವನ್ನು ಒಂದು ಸವಾಲಾಗಿ ತೆಗೆದುಕೊಂಡರು. ಕಾರಣ ಅವನು ಮಂಡಿಸಿದ್ದ ಕಟುಟೀಕೆಗಳಷ್ಟು ಮತ್ತ್ಯಾವುದೂ ಅವರ ರಾಷ್ಟ್ರಾಭಿಮಾನ ಹಾಗೂ ಸೂಕ್ಷ್ಮ ಭಾವನೆಗಳನ್ನು ಅಷ್ಟು ತೀವ್ರವಾಗಿ ಕೆರಳಿಸಲಿಲ್ಲ.

ಅದೃಷ್ಟವಶಾತ್ 1826 ಹಾಗೂ 1837ರಲ್ಲಿ ಕ್ರಮವಾಗಿ ಪ್ರಕಟವಾದ ಸರ್ ಜಾನ್ ಮಾಲ್ಕಾಂನ ಪೊಲಿಟಿಕಲ್ ಹಿಸ್ಟೊರಿ ಆವ್ ಇಂಡಿಯಾ ಮತ್ತು ಪೀಟರ್ ಅಬರನ ರೈಸ್ ಆ್ಯಂಡ್ ಪ್ರೋಗ್ರೆಸ್ ಆವ್ ದಿ ಬ್ರಿಟಿಷ್ ಪವರ್ ಇನ್ ಇಂಡಿಯಾ ಮುಂತಾದ ಗ್ರಂಥಗಳು ಮಿಲ್ ನೀಡಿದ್ದ ಪ್ರಾಚೀನ ಭಾರತ ಇತಿಹಾಸದ ನಿರೂಪಣೆಯಲ್ಲಿ ಕಂಡುಬಂದ ದೋಷಗಳಿಂದ ಮುಕ್ತವಾಗಿದ್ದುವು. ಅಬರನ ಕೃತಿಯು ಪ್ರಕಟವಾದ ಎರಡು ವರ್ಷಗಳ ನಂತರ ಬೆಳಕಿಗೆ ಬಂದಿದ್ದುದು ಮೌಂಟ್ ಸ್ಟೂವರ್ಟ್ ಎಲ್‌ಫಿನ್‌ಸ್ಟೋನನ ಸುಪ್ರಸಿದ್ಧ ಹಿಸ್ಟೊರಿ ಆವ್ ಇಂಡಿಯಾ ಕೃತಿ.

## 17.2.7 ಮೌಂಟ್ ಸ್ಟೂವರ್ಟ್ ಎಲ್‌ಫಿಲ್‌ಸ್ಟೋನ್ (1779–1859)

ಮಿಲ್‌ನಿಗೆ ವಿರುದ್ಧವಾಗಿ ಭಾರತದ ಬಗ್ಗೆ ಸಹಾನುಭೂತಿಯುತ ಅಭಿಪ್ರಾಯವನ್ನು ಬೆಳೆಸಿಕೊಂಡು ಪ್ರತಿಪಾದಿಸಿದವನು ಅವನ ಸಮಕಾಲೀನನಾಗಿದ್ದ ಎಲ್‌ಫಿನ್‌ಸ್ಟೋನ್. ಅವನು ಬ್ರಿಟಿಷ್ ವಸಾಹತು ಆಡಳಿತಗಾರನೂ ಮತ್ತು ದಖನ್ ಹಾಗೂ ಬೊಂಬಾಯಿಯಲ್ಲಿ ಪ್ರಗತಿಪರ ಸರ್ಕಾರದ ಸ್ಥಾಪಕನೂ ಆಗಿದ್ದನು. ಅವನು ಡಂಬರ್ಟನ್‌ಷೈರಿನಲ್ಲಿ 1790ರ ಅಕ್ಟೋಬರ್ 6 ರಂದು 11ನೆಯ ಬ್ಯಾರನ್ ಎಲ್‌ಫಿನ್‌ಸ್ಟೋನನ ನಾಲ್ಕನೆಯ ಮಗನಾಗಿ ಹುಟ್ಟಿದನು. ಅವನು 1796ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಸೇವಾಖಾತೆಗೆ

ಸೇರಿಕೊಂಡು ಕಲ್ಕತ್ತಾವಿಗೆ ಬಂದು ನೆಲಸಿದನು; 1801ರಲ್ಲಿ ಪೂನಾದಲ್ಲಿ ಮರಾಠ ಒಕ್ಕೂಟದ ನಾಮಕಾವಸ್ಥೆ ಮುಖ್ಯಸ್ಥನಾಗಿದ್ದ ಪೇಷ್ವೆ 2ನೆಯ ಬಾಜೀರಾಯನ ಆಸ್ಥಾನದಲ್ಲಿದ್ದ ಬ್ರಿಟಿಷ್ ರೆಸಿಡೆಂಟನಿಗೆ ಸಹಾಯಕನಾಗಿ ಕೆಲಸ ಮಾಡಿದನು; 1803ರಲ್ಲಿ ನಡೆದ ಮರಾಠ ಕದನದಲ್ಲಿ ಸೇನಾಧಿಕಾರಿ ವೆಲ್ಲೆಸ್ಲಿಯ ರಾಜಕೀಯ ನಿಯೋಗಿ ಹಾಗೂ ಸಹಾಯಕನಾಗಿ ಬಹು ಸಮರ್ಪಕವಾಗಿ ಕರ್ತವ್ಯವನ್ನು ನಿರ್ವಹಿಸಿ ಹೆಸರುವಾಸಿಯಾದನು ಮತ್ತು 1804ರಲ್ಲಿ ನಾಗಪುರದಲ್ಲಿ ಬ್ರಿಟಿಷ್ ರೆಸಿಡೆಂಟನಾಗಿ ನೇಮಕಗೊಂಡನು. 1807ರಲ್ಲಿ ಅವನನ್ನು ಅಲ್ಲಿಂದ ಸಿಂಧಿಯಾವಿನ ಆಸ್ಥನಕ್ಕೆ ವರ್ಗಾಯಿಸ–ಲಾಯಿತಾದರೂ ಮುಂದಿನ ವರ್ಷ ಆಫ್‌ಘನ್ ದೊರೆ ಷಾ ಶೂಜನೊಂದಿಗೆ ಸಂಧಿ ಮಾಡಿಕೊಳ್ಳಲು ಮಾತುಕತೆ ನಡೆಸುವುದಕ್ಕಾಗಿ ಆ ಮೂಲಕ ಭಾರತದ ಮೇಲೆ ನೆಪೋಲಿಯನ್ನನು ಆಕ್ರಮಣ ಮಾಡದಿರುವಂತೆ ತಡೆಯುವುದಕ್ಕಾಗಿ ಅವನನ್ನು ಆಫ್‌ಘಾನಿಸ್ಥಾನಕ್ಕೆ ಕಳುಹಿಸಲಾಯಿತು. ಅವನು 1811ರಲ್ಲಿ ಪೂನಾಕ್ಕೆ ಬಂದು ರೆಸಿಡೆಂಟನಾದನು; ಬಹು ಚಾತುರ್ಯದಿಂದ ಮರಾಠದಲ್ಲಿ ಒಡಕು ಉಂಟಾಗುವಂತೆ ಮಾಡಿ ಅವರು ಒಟ್ಟುಗೂಡದಂತೆ ನೋಡಿಕೊಂಡನು; ಬರೋಡದ ಪ್ರತಿನಿಧಿ ಗಂಗಾಧರ್ ಶಾಸ್ತ್ರಿಯ ಕೊಲೆಯನ್ನು ನೆಪವಾಗಿಟ್ಟು ಪೇಷ್ವೆಯು ಒಂದು ಅತ್ಯಂತ ಅಪಮಾನಕರವಾಗಿದ್ದ ಸಂಧಿಗೆ ಒಪ್ಪಿಕೊಳ್ಳುವಂತೆ ಒತ್ತಾಯ ಪಡಿಸಿದನು ಮತ್ತು 1817ರ ನವೆಂಬರ್ ತಿಂಗಳಲ್ಲಿ ಪೇಷ್ವೆಯು ಬ್ರಿಟಿಷರ ವಿರುದ್ಧ ಕತ್ತಿಯನ್ನು ಹಿಡಿದಾಗ ಅವನನ್ನು ಸದೆಬಡಿಯುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದನು.

ನಂತರ ಎಲ್‌ಫಿನ್‌ಸ್ಟೋನನು 1818ರಲ್ಲಿ ಆಕ್ರಮಿಸಿಕೊಳ್ಳಲಾಗಿದ್ದ ಮರಾಠ ಪ್ರದೇಶಗಳಲ್ಲಿ ಮೊದಲು ದಖನಿನ ಕಮಿಷನರಾಗಿ ನಂತರ 1819ರಿಂದ 1827ರವರೆಗೆ ಬೊಂಬಾಯಿಯ ಗವರ್ನರನಾಗಿ ಬ್ರಿಟಿಷ್ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸುವುದಕ್ಕೆ ಕಾರಣಕರ್ತನಾದನು. ಅಂಗೀಕರಿಸಲಾಗಿದ್ದ ಸರ್ಕಾರ ಪದ್ಧತಿಯನ್ನು ಇಷ್ಟಪಡದ ಅವನು ಹಿಂದಿನ ಮರಾಠ ಸಂಸ್ಥೆಗಳಲ್ಲಿದ್ದ ಒಳ್ಳೆಯ ಪದ್ದತಿಗಳನ್ನು ಸಂರಕ್ಷಿಸಿ ಮುಂದುವರಿಸಲು ಮತ್ತು ಮರಾಠರ ಸ್ವಾಭಿಮಾನ ಹಾಗೂ ಸೂಕ್ಷ್ಮ ಭಾವನೆಗಳಿಗೆ ತಕ್ಕ ಗೌರವವನ್ನು ತೋರಲು ಯತ್ನಿಸಿದನು. ಅವನು ಸತಾರದ ರಾಜನಿಗೆ ಅವನ ರಾಜ್ಯವನ್ನು, ಪ್ರಮುಖ ಜಮೀನ್ದಾರರಿಗೆ ಅವರವರ ಭೂಮಿ, ವಿಶೇಷಾಧಿಕಾರ ಹಾಗೂ ನಿರ್ಣಯ ತೀರ್ಮಾನ ಮಾಡುವ ಹಕ್ಕುಗಳನ್ನು ಮತ್ತು ಬ್ರಾಹ್ಮಣರಿಗೆ ಅವರ ದೇವಾಲಯಗಳ ಭೂಮಿ ಮತ್ತು ಪಾಂಡಿತ್ಯಕ್ಕಾಗಿ ಕೊಡಲಾಗಿದ್ದ ಬಹುಮಾನಗಳನ್ನು ಹಿಂತಿರುಗಿಸಿಕೊಟ್ಟನು. ಅಷ್ಟು ಮಾತ್ರವಲ್ಲದೆ ಅವನು ಗ್ರಾಮಗಳ ಮುಖಂಡ ಹಾಗೂ ಪಂಚಾಯತ್ ಪ್ರತಿನಿಧಿಗಳ ಅಧಿಕಾರವನ್ನು ಕಿತ್ತುಕೊಳ್ಳದೆ ಅವರ ಸೇವೆಯನ್ನು ಬಳಸಿಕೊಳ್ಳಲು ಪ್ರಯತ್ನಿಸಿದನು. ಅವನು ಹಿಂದಿನ ಅನುಭವಸ್ಥ ಮರಾಠ ಅಧಿಕಾರಿಗಳ ಕೈ ಬಿಡದೆ ಅವರವರ ಪದವಿಗಳಲ್ಲೇ ಮುಂದುವರಿಯುವಂತೆ ಮಾಡಿ ಅವರ ವೇತನ ಹಾಗೂ ಅಂತಸ್ತನ್ನು ಹೆಚ್ಚಿಸಿದನು.

ಇದರೊಂದಿಗೆ ಎಲ್‌ಫಿನ್‌ಸ್ಟೋನ್ ಹಿಂದಿನ ಸಂಸ್ಥೆಗಳನ್ನು ಸುಧಾರಿಸಲು ಕ್ರಮಗಳನ್ನು ಕೈಗೊಂಡನು; ಹಿಂದೂ ಅಧ್ಯಯನಗಳಿಗಾಗಿ ಪೂನಾ ಕಾಲೇಜನ್ನು ಸ್ಥಾಪಿಸುವುದಕ್ಕೆ ಸಹಾಯ ಮಾಡಿದನು; ಪಾಶ್ಚಾತ್ಯ ವಿಜ್ಞಾನಗಳಲ್ಲಿ ಶಿಕ್ಷಣವನ್ನು ನೀಡಬೇಕೆಂಬುದಾಗಿ ಪ್ರಚೋದಿಸಿದ್ದಲ್ಲದೆ, ಒತ್ತಾಯ ಪಡಿಸಿದನು; ಹಿಂದೂ ಹಾಗೂ ಸಾಂಪ್ರದಾಯಿಕ ಕಾನೂನುಗಳನ್ನು ಕ್ರೋಢೀಕರಿಸಿ 'ಎಲ್‌ಫಿನ್‌ಸ್ಟೋನ್ ಕ್ರೋಡೀಕೃತ ನ್ಯಾಯಶಾಸ್ತ್ರ'

ಎಂಬ ನಿಬಂಧನೆಗಳ ಸಂಹಿತೆಯನ್ನು ರಚಿಸಿದನು. ನಂತರ ಅವನು ಸೇವಾವೃತ್ತಿಯಿಂದ ನಿವೃತ್ತನಾದರೂ ಸರ್ಕಾರವು ಆಗಾಗ್ಗೆ ಅವನ ಸಲಹೆಗಳನ್ನು ಕೇಳುತ್ತಿದ್ದಿತು. ಅವನು 1859ರ ನವೆಂಬರ್ 20 ರಂದು ಮೃತನಾದನು.

ಹಿಸ್ಟೋರಿ ಆವ್ ಇಂಡಿಯಾ (2 ಸಂಪುಟಗಳು 1841) ಮತ್ತು ಪ್ರಮಾಣ ಕೃತಿಯೇ ಆಗಿದ್ದ ಅಕೌಂಟ್ ಆವ್ ದಿ ಕಿಂಗ್‌ಡಂ ಅವ್ ಕಾಬೂಲ್ (1815) ಎಲ್‌ಫಿನ್‌ಸ್ಟೋನನು ಇತಿಹಾಸ ಕ್ಷೇತ್ರಕ್ಕೆ ನೀಡಿದ್ದ ಅಮೂಲ್ಯ ಕಾಣಿಕೆಗಳೂ. ಅವನು ಭಾರತ ಸಮಾಜವನ್ನು ಸಹಾನುಭೂತಿಯುತ ದೃಷ್ಟಿಯಿಂದ ವೀಕ್ಷಿಸಿ, ಅದರ ಸಮಸ್ಯೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದನು. ಅವನು ಮಿಲ್‌ನ ಇತಿಹಾಸವನ್ನು ಸವಿಸ್ತರವಾದುದು ಎಂಬುದಾಗಿ ಒಪ್ಪಿಕೊಂಡರೂ, ಭಾರತದ ಬಗ್ಗೆ ಅವನು ವ್ಯಕ್ತಪಡಿಸಿದ್ದ ಪಕ್ಷಪಾತ ಹಾಗೂ ಪೂರ್ವಾಗ್ರಹಯುಕ್ತ ಅಭಿಪ್ರಾಯವನ್ನು ವಿರೋಧಿಸಿ, ಅದು ತಪ್ಪಾದುದೆಂಬುದನ್ನು ತೋರುವ ಉದ್ದೇಶವನ್ನು ಹೊಂದಿದ್ದನು. ಎಲ್‌ಫಿನ್‌ಸ್ಟೋನನು ಭಾರತದ ಹಿಂದೂ ಹಾಗೂ ಮುಸ್ಲಿಂ ಕಾಲಗಳ ಬಗ್ಗೆ ಏನನ್ನೂ ತಿಳಿಯದಿದ್ದ ಬ್ರಿಟಿಷ್ ಜನತೆಯು ಅವುಗಳ ಅಧ್ಯಯನದಲ್ಲಿ ಆಸಕ್ತಿ ತಳೆಯುವಂತೆ ಮಾಡುವ ಉದ್ದೇಶದಿಂದ ತನ್ನ ಹಿಸ್ಟೋರಿ ಆವ್ ಇಂಡಿಯಾ ಗ್ರಂಥವನ್ನು 1834ರಲ್ಲಿ ಆರಂಭೀಸಿ 1841ರ ಹೊತ್ತಿಗೆ ಭಾರತದ ಮೇಲೆ ಬ್ರಿಟಿಷ್ ಆಕ್ರಮಣದ ಕಾಲದವರೆಗೆ ಸಂಭವಿಸಿದ್ದ ಘಟನೆಗಳನ್ನು ಕುರಿತು ಇತಿಹಾಸವನ್ನು ರಚಿಸಿದನು. ಭಾರತದ ಪ್ರಾಚೀನ ಹಾಗೂ ಮಧ್ಯಕಾಲಗಳ ಬಗ್ಗೆ ಸಹಾನುಭೂತಿಯಾಗಿದ್ದ ವಸ್ತುನಿಷ್ಠವಾಗಿದ್ದ ನಿರೂಪಣೆಯನ್ನು ನೀಡಿರುವ ಅವನ ಇತಿಹಾಸ ಗ್ರಂಥವು ಇಂಗ್ಲಿಷ್ ಜನತೆಗೆ ಪ್ರಮಾಣ ಕೃತಿಯಾಯಿತು.

ಎಲ್‌ಫಿನ್‌ಸ್ಟೋನ್ ವೈಯಕ್ತಿಕ ಸಂಪರ್ಕ ಹಾಗೂ ಅವಲೋಕನೆಗಳಿಂದ ಹಿಂದೂಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದನು ಹಾಗೂ ಭಾರತದ ಇತಿಹಾಸದ ಬಗ್ಗೆ ಆಗ ಲಭ್ಯವಿದ್ದ ಎಲ್ಲಾ ಸಾಹಿತ್ಯವನ್ನು ಬಹು ಎಚ್ಚರಿಕೆಯಿಂದ ಅಧ್ಯಯನ ಮಾಡಿದನು. ಅದೂ ಅಲ್ಲದೆ ಅವನಿಗೆ ಆಧುನಿಕ ಇತಿಹಾಸ ಲೇಖನ ಕಲೆಯ ಬೆಳವಣಿಗೆಯ ಬಗ್ಗೆ ಪರಿಪೂರ್ಣ ಅರಿವಿದ್ದಿತು. ಆದ್ದರಿಂದ ಯಥಾರ್ಥ ಇತಿಹಾಸಕ್ಕೂ ಕೇವಲ ಐತಿಹ್ಯ ಹಾಘೂ ಮಿಥ್ಯಾ ಕಥೆಗಳಿಗೂ ಇದ್ದ ಭೇದವು ಚೆನ್ನಾಗಿ ತಿಳಿದಿದ್ದಿತು. ಅವನು ಪ್ರಾಚೀನ ಭಾರತದ ಚರಿತ್ರೆಗೆ ಒಂದು ನಿರ್ದಿಷ್ಟ ಕಾಲಗಣನಾ ಚೌಕಟ್ಟು ಅವಶ್ಯಕ ಎಂಬುದನ್ನು ಮನಗಂಡಿದ್ದ ಭಾರತದ ಪ್ರಥಮ ಬ್ರಿಟಿಷ್ ಇತಿಹಾಸಕಾರನೆಂಬುದಾಗಿ ಹೇಳಬಹುದು. ಆ ಕಾಲದಲ್ಲಿ ಲಭ್ಯವಿದ್ದ ವಿಷಯ ಸಾಮಗ್ರಿಗಳು ಅಲ್ಪವಾಗಿದ್ದರೂ ಅವನು ಗಳಿಸಿದ್ದ ಯಶಸ್ಸು ಗಮನಾರ್ಹವಾಗಿದ್ದಿತು. ಅವನು ಹಿಂದೂಗಳು ಬೆಳೆಸಿದ್ದ ನಾಲ್ಕು ಯುಗಗಳೆಂಬ ಸಾಂಪ್ರದಾಯಿಕ ಕಲ್ಪನೆಯನ್ನು ಒಪ್ಪದೆ ನಿಗದಿಪಡಿಸಲಾಗಿದ್ದ ಋಗ್ವೇದದ ಸಂಕಲನ ಕಾಲದಿಂದ ಹಿಂದೂಗಳ ಇತಿಹಾಸವನ್ನು ಆರಂಭಿಸಿದನು. ಕ್ರೈಸ್ತನಿಗೆ 14 ಶತಮಾನಗಳ ಮೊದಲು ಋಗ್ವೇದವನ್ನು ಸಂಕಲಿಸಲಾಯಿತು ಎಂಬುದಾಗಿ ಅವನು ನೀಡಿರುವ ಅಭಿಪ್ರಾಯವನ್ನು ಸಾಧಾರಣವಾಗಿ ಇಂದೂ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. 1837ರಲ್ಲಿ ಅಶೋಕನ ಶಾಸನಗಳನ್ನು ಓದಿ ಅರ್ಥವನ್ನು ತಿಳಿಸುವುದರಲ್ಲಿ ಜೇಮ್ಸ್ ಪ್ರಿನ್ಸೆಪ್ ಗಳಿಸಿದ ಮಹಾ ಯಶಸ್ಸು, ಪ್ರಥಮ ಬಾರಿಗೆ ವೈಜ್ಞಾನಿಕ ಆಧಾರದ ಮೇಲೆ ಚರಿತ್ರಾರ್ಹ ಬರಹಗಳ ರಚನೆ, ಪ್ರಾಚ್ಯವಸ್ತು ಶೋಧಕರ ಅನ್ವೇಷಣೆಯ ಫಲವಾಗಿ ದೊರೆತ ಹೊಸ ಫಲಿತಾಂಶ ಇವುಗಳನ್ನು ಬಳಸಿಕೊಂಡ

ಅವನು ಚಂದ್ರಗುಪ್ತ ಮೌರ್ಯನ ಕಾಲವನ್ನು ಕ್ರಿ.ಪೂ.4ನೆಯ ಶತಮಾನವೆಂದೂ ನಿರ್ಧರಿಸಿದನು. ನಂತರ ಆ ಕಾಲದಿಂದ ಹಿಂದಕ್ಕೆ, ಮುಂದಕ್ಕೆ ಎಣಿಸಿ ಮಹಾಭಾರತ ಯುದ್ಧದರಿಂದ ಹಿಡಿದು ಕ್ರಿ.ಶ.4ನೆಯ ಶತಮಾನದಲ್ಲಿ ತಲೆದೋರಿದ ಗುಪ್ತರ ಕಾಲದವರೆಗೆ ಪುರಾಣಗಳಲ್ಲಿ ವಿವರಿಸಲಾಗಿದ್ದ ಆಳಿದ ಸಂತತಿಗಳ ಕಾಲವನ್ನು ಸುಮಾರಾಗಿ ನಿರ್ಣಯಿಸಿದನು. ಅವನ ಕಾಲದಿಂದೀಚೆಗೆ ಕಂಡುಬಂದಿರುವ ನಾಣ್ಯ, ಶಾಸನ ಇತ್ಯಾದಿಗಳ ಕಾರಣ ಸ್ವಲ್ಪಮಟ್ಟಿಗೆ ಬದಲಾವಣೆಯಾಗಿದ್ದರೂ ಅವನು ಅನುಸರಿಸಿದ್ದ ಕಾಲಗಣನಾ ಕ್ರಮವನ್ನು ಇಂದೂ ಅನುಸರಿಸಲಾಗುತ್ತಿದೆ.

ಆದರೂ ಅವನು ಹಿಂದೂಗಳ ಸಾಂಸ್ಕೃತಿಕ ಸಾಧನೆಗಳ ಬಗ್ಗೆ ಒತ್ತಿ ಹೇಳಿ, ಅವರ ಆಡಳಿತ ಪದ್ಧತಿ, ಸಮಾಜ, ಮತಧರ್ಮ, ಸಾಹಿತ್ಯ, ದರ್ಶನ, ಕಲೆಗಳು ಹಾಗೂ ವಿಜ್ಞಾನ, ಸಂಪ್ರದಾಯ, ರೀತಿನೀತಿ, ವ್ಯಾಪಾರ ಇತ್ಯಾದಿಗಳ ಬಗ್ಗೆ ಸವಿಸ್ತರ ವೃತ್ತಾಂತಗಳನ್ನು ನೀಡುವುದರ ಮೂಲಕ ತನಗೆ ಆಧುನಿಕ ಇತಿಹಾಸ ರಚನಾ ವಿಧಾನದ ಬಗ್ಗೆ ಇದ್ದ ಅರಿವು ಹಾಗೂ ಒಲವನ್ನು ಸ್ಪಷ್ಟಪಡಿಸಿದ್ದನಲ್ಲದೆ, ಅನುಕ್ರಮಿತ ಕಾಲಗಳಲ್ಲಿ ಅವುಗಳು ಕ್ರಮೇಣ ಹೊಂದಿದ್ದ ಪರಿವರ್ತನೆಗಳನ್ನು ಗುರುತಿಸುವುದರ ಮೂಲಕ ತನಗಿದ್ದ ಐತಿಹಾಸಿಕ ಪರಿಜ್ಞಾನವು ಎಷ್ಟು ಅದ್ವಿತೀಯವಾಗಿ–ತ್ತೆಂಬುದನ್ನು ಎತ್ತಿ ತೋರಿದನು. ಅವನು ಉತ್ತರ ಹಾಗೂ ದಕ್ಷಿಣ ಭಾರತಕ್ಕಿದ್ದ ಭೇದವನ್ನು ಗುರುತಿಸಿದ್ದನಲ್ಲದೆ, ನರ್ಮದಾ ನದಿಗೆ ದಕ್ಷಿಣಕ್ಕಿದ್ದ ಭಾರತ ಪ್ರದೇಶದ ರಾಜಕೀಯ ಚರಿತ್ರೆಯ ಸಂಕ್ಷಿಪ್ತ ರೂಪುರೇಖೆಯನ್ನು ಕೊಟ್ಟಿದ್ದಾನೆ. ಎಲ್ಲಕ್ಕಿಂತ ಹೆಚ್ಚು ಸ್ವಾರಸ್ಯಕರವಾಗಿರುವ ವಿಷಯವೆಂದರೆ ಹಿಂದೂಗಳು ಸಮುದ್ರದಾಚೆ ಇದ್ದ ಪ್ರದೇಶಗಳಿಗೆ ಹೋಗಿ ನಡೆಸಿದ್ದ ವ್ಯಾಪಾರ ಹಾಗೂ ಕಡಲ ಸಂಬಂಧವಾಗಿದ್ದ ಇತರ ಚಟುವಟಿಕೆಗಳು ಮತ್ತು ಜಾವ, ಸುಮಾತ್ರ ಮತ್ತಿತರ ದ್ವೀಪಗಳಲ್ಲಿ ಅವರು ಸ್ಥಾಪಿಸಿದ್ದ ವಸಾಹತುಗಳ ಬಗ್ಗೆ ಅವನು ನೀಡಿರುವ ವರ್ಣನೆ.

ಒಟ್ಟಿನಲ್ಲಿ, ಎಲ್‌ಫಿನ್‌ಸ್ಟೋನ್ ಆ ಸಮಯದಲ್ಲಿ ದೊರಕಿದ್ದ ಐತಿಹಾಸಿಕ ವಿಷಯ ಸಾಮಗ್ರಿಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ ಬಳಸಿಕೊಂಡನು ಮತ್ತು ಪ್ರಾಚೀನ ಭಾರತದ ಸಾಂಸ್ಕೃತಿಕ ಇತಿಹಾಸಕ್ಕೆ ಅಸ್ತಿಭಾರವನ್ನು ಹಾಕಿದನು ಎಂಬುದಾಗಿ ಹೇಳಬಹುದು. ಆದ್ದರಿಂದಲೇ ತಪ್ಪು ಒಪ್ಪುಗಳಿದ್ದರೂ, ಅವನ ಹಿಸ್ಟೋರಿ ಆವ್ ಇಂಡಿಯಾ ಗ್ರಂಥವನ್ನು ಬಹುಕಾಲದವರೆಗೆ ವಿಶ್ವವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿ ಬಳಸಲಾಗುತ್ತಿದ್ದಿತು. ಮಿಲ್ ಮಾಡಿದ್ದ ಟೀಕೆಗಳು ಭಾರತೀಯ ಇತಿಹಾಸಕಾರರನ್ನು ಕೆರಳಿಸಿದರೆ, ಎಲ್‌ಫಿನ್‌ಸ್ಟೋನನ ಬರಹಗಳು ಒಂದು ಸೃಜನಶೀಲ ಹಾಗೂ ವಿಮರ್ಶಾತ್ಮಕ ಮನೋಭಾವವನ್ನು ಮೂಡಿಸಿ ಭಾರತೀಯರು ತಮ್ಮ ನಾಡಿನ ಸಮಸ್ಯೆಗಳನ್ನು ಸರಿಯಾಗಿದ್ದ ದೃಷ್ಟಿಕೋನದಿಂದ ವೀಕ್ಷಿಸಿ ಅಧ್ಯಯನ ಮಾಡುವಂತೆ ಪ್ರಚೋದಿಸಿದುವು. ಅವನ ಹಿಸ್ಟೋರಿ ಆವ್ ಇಂಡಿಯಾವನ್ನು ಉತ್ತಮ ಕೃತಿ ಎಂಬುದಾಗಿ ಶ್ಲಾಘಿಸಿ ಅವನನ್ನು ಆಧುನಿಕ ಭಾರತದ ಟ್ಯಾಸಿಟಸ್ ಎಂಬುದಾಗಿ ಕರೆಯಲಾಯಿತು.

### 17.2.8 ಥಾಮಸ್ ಬಾಬಿಂಗ್‌ಟನ್ ಮಕಾಲೆ (1800–1859)

ಬ್ರಿಟಿಷ್ ಚರಿತ್ರಲೇಖಕರಲ್ಲಿ ಹೆಸರಿಸಬಹುದಾದ ಇನ್ನೊಬ್ಬ ಪ್ರಸಿದ್ಧ ಚಿಂತಕನೆಂದರೆ ಮಕಾಲೆ. ಸುಪ್ರಸಿದ್ಧ ಹಿಸ್ಟೋರಿ ಆವ್ ಇಂಗ್ಲೆಂಡ್ ಎಂಬ ಕೃತಿಯ ಕರ್ತೃವೂ, ಪ್ರಬಂಧ ಲೇಖಕನೂ ಹಾಗೂ ರಾಜಕೀಯಪಟುವೂ

ಆಗಿದ್ದ ಮಕಾಲೆ 1800ರ ಅಕ್ಟೋಬರ್ 5 ರಂದು ಜನೋಪಕಾರಿ ಹಾಗೂ ಧರ್ಮನಿಷ್ಠ ಜಕರಿ ಮಕಾಲೆಯ ಮಗನಾಗಿ ಹುಟ್ಟಿ ಧರ್ಮನಿಷ್ಠೆ, ಆತ್ಮಪರೀಕ್ಷೆ ಹಾಗೂ ಮಾನವ ಹಿತಾಸಕ್ತಿ ಮುಂತಾದ ಮೌಲ್ಯಗಳು ಪ್ರಧಾನವಾಗಿದ್ದ ಪರಿಸರದಲ್ಲಿ ಬೆಳೆದುಬಂದನು. ಬಾಲಪ್ರೌಢನಾಗಿದ್ದ ಅವನು ತನ್ನ 8ನೆಯ ವಯಸ್ಸಿನಲ್ಲೇ ವಿಶ್ವ ಇತಿಹಾಸದ ಸಾರಾಂಶವನ್ನು ಬರೆದನಲ್ಲದೆ, ಸರ್ ವಾಲ್ಟರ್ ಸ್ಕಾಟನ ಶೈಲಿಯಲ್ಲಿ ಒಂದು ಪದ್ಯರಚನೆ ಮಾಡಿದನು. ಖಾಸಗಿ ಶಾಲೆಯ ಶಿಕ್ಷಣ ಪಡೆದ ನಂತರ ಅವನು ಕೇಂಬ್ರಿಡ್ಜ್‌ನ ಟ್ರಿನಿಟಿ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದನು. 1824ರಲ್ಲಿ 3ನೆಯ ವಿಲಿಯಂನ ಶೀಲ ಸ್ವಭಾವದ ಬಗ್ಗೆ ಅವನು ಬರೆದ ಪ್ರಬಂಧಕ್ಕೆ ಬಹುಮಾನ ಬಂದಿತು. 1826ರಲ್ಲಿ ಅವನು ವಕೀಲನಾದನು. ಎಡಿನ್‌ಬರೋ ರಿವ್ಯೂವಿನಲ್ಲಿ ಪ್ರಕಟವಾದ ಮಿಲ್ಟನನ್ನು ಕುರಿತು ಪ್ರಬಂಧದಿಂದ ಅವನು ಸುಪ್ರಸಿದ್ಧನಾದನು. ಅವನು ಅದ್ವಿತೀಯ ವಾಗ್ಮಿಯಾಗಿದ್ದನು. 1830ರಲ್ಲಿ ಅವನು ಪಾರ್ಲಿಮೆಂಟಿನ ಸದಸ್ಯನಾಗಿ ಯೆಹೂದ್ಯರ ಕುಂದುಕೊರತೆಗಳನ್ನು ನಿವಾರಿಸುವುದರ ಬಗ್ಗೆ ಪ್ರಥಮ ಭಾಷಣ ಮಾಡಿ ಎಲ್ಲರ ಮೆಚ್ಚಿಗೆ ಹಾಗೂ ಪ್ರಶಂಸೆಗೆ ಪಾತ್ರನಾದನು. 1832ರಲ್ಲಿ ಸುಧಾರಣಾ ಮಸೂದೆಯನ್ನು ಜಾರಿಗೆ ತರುವ ಸಂದರ್ಭದಲ್ಲಿ ಅವನು ಮಾಡಿದ್ದ ವಾದ ಅದ್ಭುತವಾಗಿದ್ದಿತು. ಅವನು ನಿಯಂತ್ರಣ ಮಂಡಳಿಯ ಕಾರ್ಯದರ್ಶಿಯಾದನು. ಎಡಿನ್‌ಬರೋ ರಿವ್ಯೂವಿಗೆ ಮುಖ್ಯವಾಗಿದ್ದ ಲೇಖನಗಳನ್ನು ಬರೆದುಕೊಟ್ಟನು. ಜೊತೆಗೆ ದಿ ಆರ್ಮೇಡ ಎಂಬ ಲಘು ಕಾವ್ಯವನ್ನು ರಚಿಸಿದನು.

ನಂತರ ಮಕಾಲೆ ಭಾರತದ ಪ್ರಧಾನ ಮಂತ್ರಾಲೋಚನ ಸಭೆಯ ಸದಸ್ಯನಾಗಿ ಭಾರತಕ್ಕೆ ಬಂದನು. ಇಲ್ಲಿ ಅವನು ಮುದ್ರಣ ಸ್ವಾತಂತ್ರ್ಯದ ಪರವಾಗಿ ವಾದಿಸಿದನು; ಕಾನೂನಿನ ಮುಂದೆ ಯೂರೋಪಿನವರು ಹಾಗೂ ಭಾರತೀಯರು ಸಮಾನರು ಎಂಬುದಾಗಿ ಒತ್ತಿ ಹೇಳಿದನು; ಸಾರ್ವಜನಿಕ ಶಿಕ್ಷಣ ಸಮಿತಿಯ ಅಧ್ಯಕ್ಷನಾಗಿ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಉದ್ಘಾಟಿಸಿದನು ಮತ್ತು ಐತಿಹಾಸಿಕವಾಗಿ ಪ್ರಖ್ಯಾತವಾಗಿದ್ದ ಮಿನಿಟ್ ಆನ್ ಇಂಡಿಯನ್ ಎಡ್ಯುಕೇಷನ್ ಎಂಬ ಕರಡು ಲೇಖನವನ್ನು ಸಿದ್ಧಪಡಿಸಿ ಇಂಗ್ಲಿಷ್ ಭಾಷೆಯು ಶಿಕ್ಷಣ ಮಾಧ್ಯಮವಾಗಬೇಕೆಂದು ಸಲಹೆ ಮಾಡಿದನು. ನಂತರ ಅವನು ತಯಾರಿಸಿದ್ದ ದಂಡನಾ ಕಾಯಿದೆಯ ಕರಡು ಪ್ರತಿಯು ಭಾರತೀಯ ಅಪರಾಧ ಕಾನೂನಿಗೆ ಮೂಲವಾಯಿತು. ಹೀಗೆ ಅವನು ಭಾರತದ ಇತಿಹಾಸ ಕ್ಷೇತ್ರಕ್ಕೆ ಎರಡು ಮುಖ್ಯ ಕೊಡುಗೆಗಳನ್ನು ಕೊಟ್ಟನು. ಅವನು ಭಾರತಕ್ಕೆ ಸಂಬಂಧಿಸಿದಂತೆ ಬರೆದಿರುವ ಇತರ ಐತಿಹಾಸಿಕ ಬರಹಗಳು ಪ್ರಬಂಧಗಳ ರೂಪದಲ್ಲಿವೆ. ಅವುಗಳಲ್ಲಿ ಮುಖ್ಯವಾದುವು ಕ್ಲೈವ್ ಹಾಗೂ ವಾರನ್ ಹೇಸ್ಟಿಂಗ್ಸ್ ಬಗ್ಗೆ ಬರೆದಿರುವ ಪ್ರಬಂಧಗಳು. ಅವುಗಳಲ್ಲಿ ಗಮನಾರ್ಹವಾಗಿದ್ದ ಅಂಶಗಳೆಂದರೆ ಅತ್ಯಂತ ಸುಂದರ ಶೈಲಿ ಮತ್ತು ಅಧಿಕಾರಿಗಳು ಮಾಡಿದ್ದ ಮೋಸ ಹಾಗೂ ದುರಾಸೆಯ ಸ್ಪಷ್ಟ ಚಿತ್ರಣ. ಅವುಗಳು ಒಂದು ಬಗೆಯ ರಾಜಕೀಯ ಆತ್ಮ ವಿಮರ್ಶೆಯಾಗಿದ್ದುವು. ಅದು ನಿಜಕ್ಕೂ ಬ್ರಿಟಿಷ್ ಇತಿಹಾಸ ಬರಹಗಳಲ್ಲಿ ಒಂದು ಉತ್ತಮ ಪ್ರವೃತ್ತಿಯಾಯಿತು.

## 17.3 ಸಾಮ್ರಾಜ್ಯಶಾಹಿ ಇತಿಹಾಸಕಾರರು

ಎಲ್‌ಫಿನ್‌ಸ್ಟೋನನ ಸಮಕಾಲೀನರಾಗಿದ್ದ ಅಥವಾ ಅವನಾದ ಮೇಲೆ ಬಂದು ಭಾರತದ ಬಗ್ಗೆ ಇತಿಹಾಸವನ್ನು ಬರೆದ ಬ್ರಿಟಿಷ್ ಚರಿತ್ರಲೇಖಕರ ಕೃತಿಗಳು ದೋಷಯುಕ್ತವಾಗಿದ್ದರೂ, ಮುಂದಿನ ಕಾಲಗಳಲ್ಲಿ ಆದ ಇತಿಹಾಸ ಲೇಖನ ಕಲೆಯ ಬೆಳವಣಿಗೆಗೆ ಅವುಗಳು ಬಹು ಸಹಾಯಕವಾದುವು. ಅವುಗಳನ್ನು ಸಾಮಾನ್ಯ ಮತ್ತು ಪ್ರಾದೇಶಿಕ ಇತಿಹಾಸಗಳು ಎಂಬುದಾಗಿ ಎರಡು ವರ್ಗಗಳಾಗಿ ವಿಭಾಗಿಸಬಹುದು. ಸರ್ ಜಾನ್ ಮಾಲ್‌ಕಾಂನು 2 ಸಂಪುಟಗಳಲ್ಲಿ ಬರೆದ ಪೊಲಿಟಿಕಲ್ ಹಿಸ್ಟೋರಿ ಆವ್ ಇಂಡಿಯಾ ಫ್ರಮ್ 1784 ಟು 1823; ಆರ್.ಮಾಂಟೆಗೊಮೆರಿ ಮಾರ್ಟಿನನ ಹಿಸ್ಟೋರಿ ಆವ್ ದಿ ಪ್ರೊಸೆಷನ್ಸ್ ಆವ್ ದಿ ಆನರಬ್‌ಲ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಮೂರು ಸಂಪುಟಗಳ ಹಿಸ್ಟೋರಿ ಆನ್ಟಿಕ್ವಿಟೀಸ್ ಟೊಪಾಗ್ರಫಿ ಆ್ಯಂಡ್ ಸ್ಟಟಿಸ್ಟಿಕ್ಸ್ ಆವ್ ಈಸ್ಟರನ್ ಇಂಡಿಯಾ ಇತ್ಯಾದಿಗಳನ್ನು ಮೊದಲನೆಯ ವರ್ಗಕ್ಕೂ ಮತ್ತು ಫ್ರಾನ್ಸಿಸ್ ಬುಚಾನನ್ ಹ್ಯಾಮಿಲ್ಟನನ ಅಕೌಂಟ್ ಆವ್ ಅಸ್ಸಾಂ (1807), ಜೇಮ್ಸ್ ಗ್ರಾಂಟ್‌ಡಫ್‌ನ ಹಿಸ್ಟೋರಿ ಆಫ್ ದಿ ಮರಾಟಾಸ್ (1826), ಜೇಮ್ಸ್‌ಟಾಡನ ಆ್ಯನಲ್ಸ್ ಆ್ಯಂಡ್ ಆನ್ಟಿಕ್ವಿಟೀಸ್ ಆವ್ ದಿ ರಾಜಾಸ್ಥಾನ್ (1829–32), ಮಾರ್ಷ್‌ಮ್ಯಾನನ ಹಿಸ್ಟೋರಿ ಆವ್ ಬೆಂಗಾಲ್ ಮತ್ತು ಕನ್ನಿಂಗ್ ಹ್ಯಾಮನ ಹಿಸ್ಟೋರಿ ಆವ್ ದಿ ಸಿಕ್ಸ್ ಇತ್ಯಾದಿಗಳನ್ನು ಎರಡನೆಯ ವರ್ಗಕ್ಕೂ ಉದಾಹರಣೆಯಾಗಿ ನೀಡಬಹುದು. ಈ ಪಟ್ಟಿಯು ಯೂರೋಪಿನ ಮುಖ್ಯವಾಗಿ ಬ್ರಿಟನ್ನಿನ ಇತಿಹಾಸಕಾರರು ಎಷ್ಟರಮಟ್ಟಿಗೆ ಭಾರತದ ಇತಿಹಾಸದಲ್ಲಿ ಆಸಕ್ತಿಯನ್ನು ತೋರಿ 19ನೆಯ ಶತಮಾನದ ಮಧ್ಯಭಾಗದಲ್ಲಿ ಇತಿಹಾಸ ಲೇಖನ ಕಲೆಯು ಬೆಳೆಯುವುದಕ್ಕೆ ಕಾರಣರಾದರು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಅನಂತರ ಪ್ರಾಚೀನ ಭಾರತದ ಇತಿಹಾಸ ರಚನೆಯ ಎರಡನೆಯ ಹಂತದಲ್ಲಿ ಎರಡು ಅಂಶಗಳು ಪ್ರಧಾನವಾಗಿದ್ದುವು. ಮೊದಲನೆಯದಾಗಿ ಕೃತಿ ಹಾಗೂ ದಾಖಲೆಗಳ ವಿಮರ್ಶಾತ್ಮಕ ಅಧ್ಯಯನವನ್ನು ಕೈಗೊಳ್ಳಲಾಯಿತು. ಸರ್ಕಾರ ಹಾಗೂ ಖಾಸಗಿ ಸಂಸ್ಥೆ ಮತ್ತು ವ್ಯಕ್ತಿಗಳು ತೋರಿದ ಅತ್ಯಾಸಕ್ತಿಯ ಕಾರಣ ಅನೇಕ ಹಸ್ತಪತ್ರಿಕೆಗಳು ಬೆಳಕಿಗೆ ಬಂದು ಅವುಗಳ ವರ್ಣನಾತ್ಮಕ ಪಟ್ಟಿಗಳು ಪ್ರಕಟವಾದುವು. ಅನೇಕ ಕೃತಿಗಳನ್ನು ಸಂಪಾದಿಸಿ ಇಂಗ್ಲಿಷ್ ಭಾಷೆಗೆ ತರ್ಜುಮೆ ಮಾಡಲಾಯಿತು. ಈ ದಿಸೆಯಲ್ಲಿ ಮನುಸಂಹಿತೆಯನ್ನು ಭಾಷಾಂತರಿಸಿದ ಸರ್ ವಿಲಿಯಂ ಜೋನ್ಸ್ ಮೂಲಕರ್ತನಾದನು. ಅವನು ಹಾಕಿದ ಮೇಲ್ಪಂಕ್ತಿಯನ್ನು ಅನುಸರಿಸಿದ ಪಂಡಿತರಲ್ಲಿ 1805ರ ಹೊತ್ತಿಗೆ ಯೂರೋಪಿಗೆ ವೇದವನ್ನು ಪರಿಚಯ ಮಾಡಿಕೊಟ್ಟ ಗಣಿತಶಾಸ್ತ್ರಜ್ಞ ಕೋಲ್‌ಬ್ರೂಕ್ ಮತ್ತು ಋಗ್ವೇದ ಹಾಗೂ ಜೆಂಡ್ ಅವೆಸ್ಟ ಪವಿತ್ರ ಗ್ರಂಥಗಳಲ್ಲಿ ಬಳಸಲಾಗಿದ್ದ ಭಾಷೆಗಳ ಸಂಬಂಧವನ್ನು ಗುರುತಿಸಿ, ಆರ್ಯರ ಚರಿತ್ರೆಯಲ್ಲಿ ಸಂಸ್ಕೃತ ಭಾಷೆಯ ಸ್ಥಾನವನ್ನು ಎತ್ತಿತೋರಿದ ಬರ್ನಾಫ್ ಪ್ರಮುಖರು. ಭಾರತದ ಗತಕಾಲದ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲಿದ ಕೀರ್ತಿ ಮುಖ್ಯವಾಗಿ ಜರ್ಮನ್ ವಿದ್ವಾಂಸರಿಗೆ ಸಲ್ಲಬೇಕು. ಅವರಿಗೆಲ್ಲ ಕಳಶಪ್ರಾಯನಾಗಿದ್ದವನು ಋಗ್ವೇದವನ್ನು ಸಂಪೂರ್ಣವಾಗಿ ಸಂಪಾದಿಸಿದ. 1859ರಲ್ಲಿ ಹಿಸ್ಟೋರಿ ಆವ್ ಸ್ಯಾನ್‌ಸ್ಕ್ರಿಟ್ ಲಿಟರೇಚರ್ ಎಂಬ ಗ್ರಂಥವನ್ನು ಬರೆದ ಮತ್ತು ಸೇಕ್ರೆಡ್ ಬುಕ್ ಆವ್ ದಿ ಈಸ್ಟ್ ಎಂಬ ಅಮೂಲ್ಯ ಕೊಡುಗೆಯನ್ನು ಕೊಟ್ಟ ಫ್ರೆಡರಿಚ್ ಮ್ಯಾಕ್ಸ್‌ಮುಲ್ಲರ್ ನೂತನವಾಗಿ ಸಂಶೋಧಿಸಲಾಗಿದ್ದ ವಿಷಯ ಸಾಮಗ್ರಿಗಳನ್ನು ಬಳಸಿಕೊಂಡು ನಾಲೆಡ್ಜ್ ಆವ್ ಇಂಡಿಯನ್ ಆ್ಯನ್ಟಿಕ್ವಿಟೀಸ್

ಎಂಬುದಾಗಿ ನಾಲ್ಕು ಸಂಪುಟಗಳಲ್ಲಿ ಪ್ರಾಚೀನ ಭಾರತದ ಇತಿಹಾಸವನ್ನು ಬರೆಯಲು ಪ್ರಯತ್ನಿಸಿದವನು. ಕ್ರಿಶ್ಚಿಯನ್ ಲಾಸನ್ ಜಾಕೋಬಿ ಮುಂತಾದವರು ಬೌದ್ಧ ಹಾಗೂ ಜೈನ ಗ್ರಂಥಗಳನ್ನು ಸಂಪಾದಿಸಿದರು ಅಥವಾ ಭಾಷಾಂತರ ಮಾಡಿದರು. ಓಲ್ಡೆನ್‌ಬರ್ಗ್ ಬೌದ್ಧ ಧರ್ಮದ ಬಗ್ಗೆ ಬರೆದಿರುವ ಪ್ರಕರಣ ಗ್ರಂಥವು ಬಹು ಮುಖ್ಯವಾಗಿದ್ದಿತು.

ಈ ಅಧ್ಯಯನಗಳು ಇತಿಹಾಸ ಲೇಖನ ಕಲೆಯ ಮೇಲೆ ಬೀರಿದ ಪ್ರಭಾವಕ್ಕೆ ಹೆನ್ರಿ ಬಿವಿರಿಡ್ಜ್ ಮೂರು ಸಂಪುಟಗಳಲ್ಲಿ ರಚಿಸಿದ ಮತ್ತು 1865ರಲ್ಲಿ ಪ್ರಕಟವಾದ ಎ ಕಾಂಪ್ರಿಹೆನ್ಸಿವ್ ಹಿಸ್ಟೋರಿ ಆವ್ ಇಂಡಿಯಾ, ಸಿವಿಲ್, ಮಿಲಿಟರಿ, ಆ್ಯಂಡ್ ಸೋಷಲ್, ಫ್ರಾಮ್ ದಿ ಫರ್ಸ್ಟ್ ಲ್ಯಾಂಡಿಂಗ್ ಆವ್ ದಿ ಇಂಗ್ಲಿಷ್ ಟು ದಿ ಸಪ್ರೆಷನ್ ಆವ್ ದಿ ಸೀಪಾಯ್ ರಿವೋಲ್ಟ್, ಇನ್‌ಕ್ಲೂಡಿಂಗ್ ಎನ್ ಔಟ್‌ಲೈನ್ ಆವ್ ದಿ ಆರ್ಲಿ ಹಿಸ್ಟೋರಿ ಆವ್ ಹಿಂದೂಸ್ಥಾನ್ ಎಂಬ ಗ್ರಂಥವು ಒಳ್ಳೆಯ ಉದಾಹರಣೆಯಾಗಿದೆ. ಗ್ರಂಥಕರ್ತನು ತಾನು ಬಹು ಜಾಗರೂಕತೆಯಿಂದ ಸಂಶೋಧನೆ ನಡೆಸಿ ನಿಷ್ಪಕ್ಷಪಾತ ದೃಷ್ಟಿಯಿಂದ ಇತಿಹಾಸವನ್ನು ಬರೆದಿರುವುದಾಗಿ ಹೇಳಿದ್ದಾನೆ. ಬ್ರಿಟಿಷ್ ಕಾಲವನ್ನು ಕುರಿತುಬರೆಯುವಾಗ, ಅವನು ಯಾವ ಪೂರ್ವಾಗ್ರಹಕ್ಕೂ ಒಳಗಾಗದೆ ನ್ಯಾಯಾಧೀಶನ ದೃಷ್ಟಿಯಿಂದ ಘಟನೆಗಳನ್ನು ನೋಡಿ ಗವರ್ನರ್–ಜನರಲ್ ಕಾರ್ಯಗಳ ಗುಣಾವಗುಣಗಳನ್ನು ಸ್ಪಷ್ಟವಾಗಿ ವಿವರಿಸಿದ್ದಾನೆ. ಇದಕ್ಕೆ ಇನ್ನೊಂದು ಉತ್ತಮ ಉದಾಹರಣೆ ಎಂದರೆ ಅವನು 1886ರಲ್ಲಿ ಪ್ರಕಟಿಸಿದ ಟ್ರೈಅಲ್ ಆವ್ ನಂದಕುಮಾರ್ ಎ ನ್ಯಾರಟಿವ್ ಆಫ್ ಜುಡಿಷನ್ ಮರ್ಡರ್ ಎಂಬ ಪುಸ್ತಕ.

ಎರಡನೆಯದಾಗಿ ಈ ಹಂತದಲ್ಲಿ ಪ್ರಾಚ್ಯವಸ್ತು ಶೋಧನೆ ಹಾಗೂ ಭೂಶೋಧನೆಗಳಿಂದ ಬೆಳಕಿಗೆ ತರಲಾದ ಹಳೆಯ ಶಾಸನ ಮತ್ತು ಸ್ಮಾರಕಗಳ ಅಧ್ಯಯನವನ್ನು ಕೈಗೊಳ್ಳಲಾಯಿತು. ಬ್ರಾಹ್ಮೀ, ಖರೋಷ್ಠಿ ಲಿಪಿಗಳನ್ನು ಓದಿ ಅರ್ಥೈಸಲಾಯಿತು. ಪ್ರಿನ್ಸೆಪನು ಬ್ರಾಹ್ಮೀ ಲಿಪಿಯನ್ನು ಓದುವುದನ್ನು ಕಂಡುಹಿಡಿದಿದ್ದರಿಂದ ಪ್ರಾಚೀನ ಭಾರತಕ್ಕೆ ಸಂಬಂಧಿಸಿದ್ದ ಅಮೂಲ್ಯವಾಗಿದ್ದ ಅನೇಕ ಶಾಸನ ಹಾಗೂ ದಾಖಲೆಗಳ ಮೌಲ್ಯವು ಪಂಡಿತರಿಗೆ ತಿಳಿದುಬಂದಿತಲ್ಲದೆ, ಅವುಗಳ ತೇದಿಯನ್ನು ಸರಿಸುಮಾರಾಗಿ ನಿರ್ಧರಿಸುವುದಕ್ಕೆ ಬೇಕಾಗಿದ್ದ ಒಂದು ನಿರ್ದಿಷ್ಟ ಕ್ರಮ ಗೊತ್ತಾಯಿತು. ಸರ್ಕಾರ ನಡೆಸಿದ ಭೂಶೋಧನೆಗಳ ಫಲವಾಗಿ ಶಾಸನಗಳ ಜೊತೆಗೆ ಪ್ರಾಚೀನ ನಾಣ್ಯ ಹಾಗೂ ಸ್ಮಾರಕಗಳನ್ನೂ ಸಹ ಬೆಳಕಿಗೆ ತರಲಾಯಿತು. ಭಾರತದ ಪ್ರಾಚ್ಯ ಶೋಧನಶಾಸ್ತ್ರದ ಜನಕನೆಂಬ ಬಿರುದನ್ನು ಪಡೆದಿದ್ದ ಸರ್ ಅಲೆಗ್ಸಾಂಡರ್ ಕನ್ನಿಂಗ್‌ಹ್ಯಾಮನು 1862ರಲ್ಲಿ ಪ್ರಾಚ್ಯವಸ್ತು ಶೋಧನ ಇಲಾಖೆಯ ನಿರ್ದೇಶಕನಾಗಿ ಭಾರತದ ಅನೇಕ ಸ್ಥಳಗಳಲ್ಲಿ ಭೂಶೋಧನೆಗಳನ್ನು ನಡೆಸಿ ಅವುಗಳ ಬಗ್ಗೆ ವಾರ್ಷಿಕ ದಾಖಲೆಗಳನ್ನು ಸಿದ್ಧಪಡಿಸಿದನು. 1833ರಲ್ಲಿ ಭಾರತಕ್ಕೆ ಬಂದು ಮಿಲಿಟರಿ ಇಲಾಖೆಯಲ್ಲಿ ಅಭಿಯಂತನಾಗಿ ಸೇವೆ ಸಲ್ಲಿಸಿದ ಅವನು ಪ್ರಾಚ್ಯವಸ್ತು ಶೋಧನೆಯಲ್ಲಿ ಆಸಕ್ತಿ ವಹಿಸಿ ಭಾರತದ ಉತ್ತರ ಹಾಗೂ ಮಧ್ಯಭಾಗಗಳಲ್ಲಿ ತಾನು ನಡೆಸಿದ ಸಮೀಕ್ಷೆಗಳ ಸಂಪುಟಗಳನ್ನು ರಚಿಸಿದನು ಮತ್ತು ಎನ್ಷೆಂಟ್ ಜಿಆಗ್ರಫಿ ಆವ್ ಇಂಡಿಯಾ ಎಂಬ ಕೃತಿಯನ್ನು ಮತ್ತು ಸಾಂಚಿ ಹಾಗೂ ಬರಹತ್ ಎರಡು ಸ್ತೂಪಗಳನ್ನು ಕುರಿತು ಬರೆದನು.

ಹಳೆಯ ಸಾಹಿತ್ಯ ಕೃತಿಗಳ ಬಗ್ಗೆ ನಡೆಸಿದ ವಿಮರ್ಶಾತ್ಮಕ ಅಧ್ಯಯನ ಮತ್ತು ಶಾಸನ, ನಾಣ್ಯ ಹಾಗೂ ಸ್ಮಾರಕಗಳನ್ನು ಶೋಧಿಸಿ ಬೆಳಕಿಗೆ ತಂದು ಮಾಡಿದ ಪರಿಶೀಲನೆ ಮತ್ತು ಇತಿಹಾಸ ಲೇಖನ ಕಲೆಯನ್ನು ಕುರಿತು ಪಾಶ್ಚಿಮಾತ್ಯ ದೇಶಗಳಿಂದ ಹರಿದು ಬಂದ ನೂತನ ವಿಚಾರಗಳ ಕಾರಣ ಪ್ರಾಚೀನ ಭಾರತವನ್ನು ಕುರಿತ ಇತಿಹಾಸಲೇಖನ ಕಲೆಯ ಬೆಳವಣಿಗೆಯಲ್ಲಿ ಮೂರನೆಯ ಹಂತ ತಲೆದೋರಿತು. ಆಗ ಈ ನೂತನ ವಿಷಯಗಳನ್ನು ಬಳಸಿ ಒಪ್ಪಿಕೊಳ್ಳಲಾಗಿದ್ದ ವೈಜ್ಞಾನಿಕ ವಿಧಾನಕ್ಕೆ ಅನುಸಾರವಾಗಿ ಯಥಾರ್ಥ ಇತಿಹಾಸವನ್ನು ಪುನರ್ರಚಿಸಲು ಪ್ರಯತ್ನಿಸಲಾಯಿತು. ಈ ದಿಸೆಯಲ್ಲಿ ಯಶಸ್ವಿಯಾಗಿ ಯತ್ನಿಸಿದವರು ಡೈನಸ್ಟೀಸ್ ಆವ್ ಕ್ಯನರೀಸ್ ಡಿಸ್ಟ್ರಿಕ್ಟ್ (1896) ಗ್ರಂಥಕರ್ತೃ ಜೆ.ಎಫ್.ಫ್ಲೀಟ್ ಮತ್ತು ಆರ್ಲಿ ಹಿಸ್ಟೊರಿ ಆವ್ ದಿ ದಖನ್ (1895) ಕೃತಿಯ ಕರ್ತೃ ಆರ್.ಜಿ.ಭಂಡಾರ್‌ಕರ್.

ಯೂರೋಪಿನ ಬರಹಗಾರರು ಮಧ್ಯಕಾಲೀನ ಭಾರತದ ಇತಿಹಾಸವನ್ನು ರಚಿಸುವಾಗ ಮಧ್ಯಯುಗದಲ್ಲಿ ಮುಸ್ಲೀಂ ಲೇಖಕರು ಬರೆದಿದ್ದ ಅನೇಕ ವೃತ್ತಾಂತಗಳನ್ನು ಬಳಸಿಕೊಂಡರು. 1877 ಹಾಗೂ 1877ರ ನಡುವಿನ ವರ್ಷಗಳಲ್ಲಿ ಇಲಿಯಟ್ ಪ್ರಕಟಿಸಿದ ಹಿಸ್ಟೊರಿ ಆವ್ ಇಂಡಿಯಾ ಆ್ಯಸ್ ಟೋಲ್ಡ್ ಬೈ ಇಟ್ಸ್ ಹಿಸ್ಟೋರಿಯನ್ಸ್ ಅವರುಗಳಿಗೆ ಬಹುಮುಖ್ಯವಾಗಿದ್ದ ಆಧಾರವಾಯಿತು. ಅವರಿಗೆ ಸಿದ್ಧ ಸಾಮಗ್ರಿಗಳು ದೊರಕಿದ್ದರಿಂದ ಅವರು ನೂತನ ವಿಷಯಗಳನ್ನು ಅರಸುವ ಗೋಜಿಗೆ ಹೋಗಲಿಲ್ಲ. 19ನೆಯ ಶತಮಾನದ ಅಂತ್ಯಭಾಗ ಹಾಗೂ 20ನೆಯ ಶತಮಾನದ ಆದಿಭಾಗಗಳಲ್ಲಿ ಮಧ್ಯಕಾಲೀನ ಮುಸ್ಲಿಂ ಐತಿಹಾಸಿಕ ಬರಹಗಳನ್ನು ವಿಮರ್ಶಿಸದೆ ಒಪ್ಪಿಕೊಳ್ಳುವ ಪ್ರವೃತ್ತಿಯನ್ನು ಪ್ರತಿಭಟಿಸಿದ ಒಂದು ಹೊಸ ವಿಚಾರ ಪಂಥವು ತಲೆ ಎತ್ತಿಕೊಂಡಿತು. ಅದು ಮೂಲಾಧಾರಗಳನ್ನು ಮುಖ್ಯವಾಗಿ ಸಮಕಾಲೀನ ದಾಖಲೆಗಳನ್ನು ಶೋಧಿಸಿ ಸಂಗ್ರಹಿಸುವ ಕಾರ್ಯಕ್ಕೆ ಹೆಚ್ಚಿನ ಗಮನವನ್ನು ಕೊಟ್ಟಿತು. ಈ ಹಿತಕರ ಪರಿವರ್ತನೆಗೆ ಕಾರಣರಾಗಿದ್ದವರು ಸರ್ ವಿಲಿಯಂ ಇರ್ವಿನ್ ಮತ್ತು ಸರ್ ಜಾದೂನಾಥ್ ಸರ್ಕಾರ್. ಇರ್ವಿನ್ 1797ರಲ್ಲಿ ಸಂಭವಿಸಿದ್ದ ಔರಂಗಜೇಬನ ಮರಣದಿಂದ ಹಿಡಿದು 1803ರಲ್ಲಿ ಇಂಗ್ಲಿಷರು ದೆಹಲಿಯನ್ನು ಆಕ್ರಮಿಸಿಕೊಂಡವರೆಗಿನ ಇತಿಹಾಸವನ್ನು ಬರೆಯಲು ಉದ್ದೇಶಿಸಿ 1809ರಲ್ಲಿ ಬರೆಯುವ ಕೆಲಸವನ್ನು ಆರಂಭಿಸಿದನು. ಲಭ್ಯವಿದ್ದ ಎಲ್ಲಾ ಹಸ್ತಪ್ರತಿಗಳನ್ನು ಓದಿ, ಪ್ರತಿ ವಿವರವನ್ನು ಪರಿಶೀಲಿಸಲು ತೊಡಗಿದ್ದರಿಂದ ಅವನಿಗೆ 1738ರವರೆಗಿನ ಚರಿತ್ರೆಯನ್ನು ಬರೆಯಲು ಹನ್ನೆರಡು ವರ್ಷಗಳು ಬೇಕಾದವು. ಏತನ್ಮಧ್ಯೆ ತನ್ನ ಇತರ ಮುಖ್ಯಕೃತಿಗಳನ್ನು ರಚಿಸಲು ತೊಡಗಿದ್ದರಿಂದ ಅವನು ಈ ಕೆಲಸವನ್ನು ನಿಲ್ಲಿಸಬೇಕಾಯಿತು. ಅವನ ಅಪೂರ್ಣ ಕೃತಿಯನ್ನು ಸಂಪಾದಿಸಿದ ಸರ್ ಜಾದೂನಾಥ್ ಸರ್ಕಾರ್ ಅವನು ಉದ್ದೇಶಿಸಿದ ಕಾರ್ಯವನ್ನು ಮುಂದುವರಿಸಿ ಮುಗಿಸಿದರು.

ಇಷ್ಟು ಮಾತ್ರವಲ್ಲದೆ, ಹಂಟರ್, ಲಾಯಲ್ ಮುಂತಾದವರು ದಾರ್ಶನಿಕ ಇತಿಹಾಸವನ್ನು ಬರೆಯಲು ಯತ್ನಿಸಿದರು. ಬ್ರಿಟಿಷ್ ಅಧಿಕಾರಿಯಾಗಿ ಭಾರತದಲ್ಲಿ ಸೇವೆ ಸಲ್ಲಿಸಿದ್ದ ಹಂಟರ್ ಲಾರ್ಡ್ ಮೇಯೋವಿನ ಆದೇಶದ ಮೇರೆಗೆ ಭಾರತದ ಬಗ್ಗೆ ಅಂಕಿಅಂಶಗಳ ಸಮೀಕ್ಷೆಯನ್ನು ನಡೆಸಿ ದಾಖಲೆಯನ್ನು ಸಿದ್ಧಪಡಿಸುವುದಕ್ಕಾಗಿ ಭಾರತದಲ್ಲೆಲ್ಲಾ ಸಂಚರಿಸಿ ಇಂಪೀಯ್ರಿಯಲ್ ಗ್ಯಾಸೆಟಿಯರ್ ಆವ್ ಇಂಡಿಯಾ ಎಂಬುದಾಗಿ ಕರೆಯಲಾದ 14 ಸಂಪುಟಗಳನ್ನು ತುಂಬುವುದಕ್ಕೆ ಬೇಕಾದಷ್ಟು ವಿಷಯವನ್ನು ಸಂಗ್ರಹಿಸಿದನು. ಅವನ ದಿ ಆ್ಯನಲ್ಸ್ ಆವ್ ರೂರಲ್ ಇಂಡಿಯಾ ಉತ್ತಮ ಕೃತಿ. ಅದರಲ್ಲಿ ಅಜ್ಞಾತರಾಗಿದ್ದ ಜನಸಾಮಾನ್ಯರ

ಬಗ್ಗೆ ಚರಿತ್ರೆಯನ್ನು ರಚಿಸಲು ಮಾಡಿದ ಪ್ರಥಮ ಪ್ರಯತ್ನವನ್ನು ಕಾಣಬಹುದು. ಭಾರತದ ಪ್ರಭುಗಳು ಎಂಬ ಮಾಲೆಯ ಸಂಪಾದಕನಾಗಿ ಅವನು ಲೈಫ್ ಆ್ಯಂಡ್ ವರ್ಕ್ ಆವ್ ಲಾರ್ಡ್ ಡಾಲ್‌ಹೌಸಿ ಮತ್ತು ಲೈಫ್ ಆವ್ ಮೇಯೋ ಎಂಬ ಪುಸ್ತಕಗಳನ್ನು ಬರೆದನು. ಅವನು ತನ್ನ ದಿ ಇಂಡಿಯನ್ ಮುಸಲ್ಮಾನ್ಸ್ ಎಂಬ ಕೃತಿಯಲ್ಲಿ ಮುಸ್ಲಿಮರ ಬಗ್ಗೆ ತನಗಿದ್ದ ಸಹಾನುಭೂತಿಯನ್ನು ವ್ಯಕ್ತಪಡಿಸಿದನು. ಅವನು ರಿಪ್ಪನ್‌ನ ಕಾಲದಲ್ಲಿ ಉತ್ತಮ ಶಿಕ್ಷಣ ಸಮಿತಿಯ ಮುಖ್ಯಸ್ಥನಾಗಿ ನೇಮಕಗೊಂಡನು. ಹಂಟರ್ ಸಮಿತಿ ಎಂಬುದಾಗಿ ಪ್ರಸಿದ್ಧವಾಗಿದ್ದ ಅದು ನೀಡಿದ ವರದಿಯನ್ನು ಸರ್ಕಾರ ಒಪ್ಪಿಕೊಂಡಿತು. ಅವನು ಆರಂಭಿಸಿದ್ದ ಹಿಸ್ಟೋರಿ ಆವ್ ಬ್ರಿಟಿಷ್ ಇಂಡಿಯಾ ಎಂಬ ಗ್ರಂಥವನ್ನು ಪಿ.ಇ.ರಾಬರ್ಟ್ ಮುಕ್ತಾಯಗೊಳಿಸಿದನು. ಜಿ.ಬಿ.ಮಲ್ಲೆಸನ್, ಸ್ಟ್ಯಾನ್ಲೆ, ಲೇನ್‌ಪೂಲ್ ಮುಂತಾದ ಇತಿಹಾಸ ಲೇಖಕರನ್ನು ಸೃಷ್ಟಿಸಿ ಹೆಸರುವಾಸಿಯನ್ನಾಗಿಸಿದ ಕೀರ್ತಿ ಅವನಿಗೆ ಸಲ್ಲಬೇಕು.

ಲಾಯಲ್ ಭಾರತದ ಬಗ್ಗೆ ಬೆಳೆದುಬಂದಿದ್ದ ತಪ್ಪು ಅಭಿಪ್ರಾಯವನ್ನು ಸರಿಪಡಿಸಲು ಯತ್ನಿಸಿದನು. ಅವನ ಪ್ರಕಾರ, ಭಾರತದಲ್ಲಿ ಬ್ರಿಟಿಷರು ಗಳಿಸಿದ್ದ ಯಶಸ್ಸಿಗೆ ಕಾರಣ ಅಲ್ಲಿದ್ದ ಅನೈಕ್ಯಮತ್ಯ ಮಾತ್ರವಲ್ಲ, ದೊರೆಯ ವೈಯಕ್ತಿಕ ಸಾಮರ್ಥ್ಯದ ಮೇಲೆ ಆಧಾರಿತವಾಗಿದ್ದ ಹಾಗೂ ಬಹುವಾಗಿ ಕೇಂದ್ರೀಕೃತವಾಗಿದ್ದ ಅಧ್ಯಕ್ಷ ಸರ್ಕಾರ ರಚನೆ, ಬ್ರಿಟಿಷರ ನೌಕಾ ಸಾಮರ್ಥ್ಯ ಮತ್ತು ರಾಜಕೀಯವಾಗಿ ಭಾರತ ಎಷ್ಟು ದುರ್ಬಲವಾಗಿತ್ತೆಂಬುದರ ಬಗ್ಗೆ ಬ್ರಿಟಿಷರಿಗಿದ್ದ ಅರಿವು ಇತ್ಯಾದಿ.

'ಆಕ್ಸ್‌ಫರ್ಡ್ ಹಿಸ್ಟೋರಿ ಆವ್ ಇಂಡಿಯಾ' ಕೃತಿಯ ಕರ್ತೃ ವಿ.ಎ.ಸ್ಮಿತ್ ಭಾರತವನ್ನು ಕುರಿತು ಬರೆದ ಇತಿಹಾಸಕಾರರ ಹಳೆಯ ಪಂಥದ ಕೊನೆಯ ಸುಪ್ರಸಿದ್ಧ ಚರಿತ್ರಲೇಖಕನಾಗಿದ್ದನು. ಅವನು ಬ್ರಿಟಿಷ್ ಆಡಳಿತ ವಿಭಾಗದಲ್ಲಿ ಜವಾಬ್ದಾರಿಯುತ ಹುದ್ದೆಗಳನ್ನು ಅಲಂಕರಿಸಿದ್ದರೂ ಇತಿಹಾಸ ಅಧ್ಯಯನದಲ್ಲಿ ಆಸಕ್ತಿ ವಹಿಸಿದನು. 1900ರಲ್ಲಿ ನಿವೃತ್ತಿ ಹೊಂದಿದ ನಂತರ ಸಾವಿನ ಕರೆ ಬರುವವರೆಗೆ ಅವನು ಭಾರತದ ಇತಿಹಾಸ ಅಧ್ಯಯನಗಳಲ್ಲಿ ತೊಡಗಿದನು. ಅಶೋಕ ದಿ ಬುದ್ಧಿಸ್ಟ್ ಎಂಪರರ್ ಆವ್ ಇಂಡಿಯಾ, ಅಕ್ಬರ್ ದಿ ಗ್ರೇಟ್ ಮೊಘಲ್, 'ಏ ಹಿಸ್ಟೋರಿ ಆವ್ ಫೈನ್ ಆರ್ಟ್ಸ್ ಇನ್ ಇಂಡಿಯಾ ಆ್ಯಂಡ್ ಸಿಲೋನ್, ಕ್ಯಾಟಲಾಗ್ಸ್ ಆವ್ ಕಾಯನ್ಸ್ ಇನ್ ಇಂಡಿಯನ್ ಮ್ಯುಸೀಯಮ್' ಮುಂತಾದವು ಅವನ ಮುಖ್ಯ ಗ್ರಂಥಗಳು.

ಸಂಕ್ಷೇಪದಲ್ಲಿ ಬ್ರಿಟಿಷ್ ಆಳ್ವಿಕೆಯ ಸ್ಥಾಪನೆಯಾದ ಮೇಲೆ ಭಾರತದ ಇತಿಹಾಸವನ್ನು ಬರೆದಿದ್ದ ಹೆಚ್ಚು ಕಡಿಮೆ ಎಲ್ಲಾ ಬ್ರಿಟಿಷ್ ಚರಿತ್ರ ಲೇಖಕರು ಬ್ರಿಟಿಷ್ ಸರ್ಕಾರದ ಆಡಳಿತ ಅಥವಾ ಸೇನಾ ಇಲಾಖೆಗಳಲ್ಲಿ ಸೇವೆಯನ್ನು ಸಲ್ಲಿಸಿದ್ದವರು. ಆದ್ದರಿಂದ ಸಂಭವಿಸಿದ್ದ ಘಟನೆಗಳ ಪ್ರತ್ಯಕ್ಷದರ್ಶಿಗಳಾಗಿ ಅವಲೋಕನೆ ಮಾಡಲು ಜನರನ್ನು ನೇರವಾಗಿ ವೀಕ್ಷಿಸಿ, ಅವರ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಮತ್ತು ಮೂಲ ವಿಷಯ ಸಾಮಗ್ರಿಗಳನ್ನು ಆರಿಸಿ ಬಳಸಿಕೊಳ್ಳಲು ಅವರಿಗೆ ಸದವಕಾಶಗಳಿದ್ದುವು ಆದರೆ ಅವರುಗಳು ಪೂರ್ವಾಗ್ರಹ ಪೀಡಿತರಾಗಿ ಭಾರತದಲ್ಲಿ ನಡೆದ ಘಟನೆ ಹಾಗೂ ಇದ್ದ ರೀತಿನೀತಿ ಇತ್ಯಾದಿಗಳನ್ನು ಟೀಕಿಸಿ ಖಂಡಿಸಿದ್ದಾರೆ. ಕೆಲವರು ಪ್ರಶಂಸಿಸಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಬ್ರಿಟಿಷ್ ಆಡಳಿತ ಪದ್ಧತಿ ಹಾಗೂ ರಾಜನೀತಿಗಳನ್ನು ಉಜ್ವಲ ವರ್ಣಗಳಲ್ಲಿ ಚಿತ್ರಿಸುವುದೇ ಅವರ ಉದ್ದೇಶವಾಗಿದ್ದಿತು. ಉದಾಹರಣೆಗೆ, ವಿ.ಎ.ಸ್ಮಿತ್ ತನ್ನ ಆರ್ಲಿ ಹಿಸ್ಟೋರಿ

ಆವ್ ಇಂಡಿಯಾದಲ್ಲಿ ಹರ್ಷವರ್ಧನನ ಆಳ್ವಿಕೆಯ ಅನಂತರ ಬಂದ ಕಾಲದ ಇತಿಹಾಸವು ಅನೇಕ ಸಣ್ಣಪುಟ್ಟ ರಜ್ಯಗಳ ಗೊಂದಲಮಯವಾಗಿದ್ದ ವೃತ್ತಾಂತ ಮಾತ್ರವಾಗಿದ್ದಿತು ಎಂದು ಹೇಳಿದ್ದಾನೆ. ಆದರೆ ಅದೇ ಸಮಯದಲ್ಲಿ ಪಾಲ, ಘೂರ್ಜರಪ್ರತೀಹಾರ ಮತ್ತು ಚೋಳರ ಪ್ರಬಲ ಸಾಮ್ರಾಜ್ಯಗಳು ತಲೆ ಎತ್ತಿಕೊಂಡಿದ್ದುವು ಎಂಬ ಸತ್ಯಾಂಶ ಅವನಿಗೆ ತಿಳಿದಿದರೂ ಅವನು ಬ್ರಿಟಿಷ್ ಆಳ್ವಿಕೆಯಿಂದ ಬಹು ಉಪಯೋಗವಾಗುತ್ತಿದೆಯೆಂದು ತಿಳಿಸುವುದಕ್ಕಾಗಿ ಈ ವೃತ್ತಾಂತಗಳಿಂದ ಪರಮಾಧಿಕಾರದ ನಿಯಂತ್ರಣವಿಲ್ಲದಿದ್ದಾಗ ಭಾರತದ ಸ್ಥಿತಿ ಹೇಗಿದ್ದಿತು, ಹಾಗೆಯೇ ಜನೋಪಯೋಗಿ ಬ್ರಿಟಿಷ್ ಪರಮಾಧಿಕಾರ ಇಲ್ಲದೇ ಹೋಗಿದಿದ್ದರೆ ಭಾರತದ ಪರಿಸ್ಥಿತಿಯೂ ಅಷ್ಟೇ ಗೊಂದಲಮಯವಾಗಿರುತ್ತಿದ್ದಿತು ಎಂಬುದು ಸ್ಪಷ್ಟವಾಗುತ್ತದೆ ಎಂದಿದ್ದಾನೆ.

ಯೂರೋಪಿನ ಇತಿಹಾಸಕಾರರು ತಮ್ಮ ತಮ್ಮ ಅಭಿಪ್ರಾಯ ಹಾಗೂ ದೃಷ್ಟಿಕೋನಗಳನ್ನು ಮುಖ್ಯವಾದುವು ಎಂಬುದಾಗಿ ಎತ್ತಿಹಿಡಿಯುತ್ತಿದ್ದಾಗ ಆಧುನಿಕ ಇತಿಹಾಸ ಲೇಖನ ಕಲಾಕ್ಷೇತ್ರವನ್ನು ವಿಳಂಬವಾಗಿ ಪ್ರವೇಶಿಸಿದ್ದ ಭಾರತೀಯ ಇತಿಹಾಸಕಾರರು ಮೊದಮೊದಲು ಪರಕೀಯ ಇತಿಹಾಸಕಾರರ ಹೆಜ್ಜೆಯ ಗುರುತುಗಳನ್ನು ಅನುಸರಿಸಿದರೂ, ಪಶ್ಚಿಮ ರಾಷ್ಟ್ರಗಳಿಂದ ಹರಿದುಬಂದ ಇತಿಹಾಸವನ್ನು ಕುರಿತು ನೂತನ ವಿಚಾರವಾಹಿನಿಗಳು ಹಾಗೂ ಪಾಶ್ಚಾತ್ಯ ಶಿಕ್ಷಣ, ರಾಜಾರಾಮ್ ಮೋಹನ್‌ರಾಯ್ ಉದ್ಘಾಟಿಸಿದ ಭಾರತೀಯ ಬೌದ್ಧಿಕ ಪುನರುಜ್ಜೀವನ ಶಕೆ ಇತ್ಯಾದಿಗಳ ಕಾರಣ ಅವರು ತಮ್ಮದೇ ಆಗಿದ್ದ ನಿರ್ದಿಷ್ಟ ಅಭಿಪ್ರಾಯಗಳನ್ನು ಎತ್ತಿಹಿಡಿದು ಭಾರತದ ಬಗ್ಗೆ ಬ್ರಿಟಿಷ್ ಬರಹಗಾರರು ಮೂಡಿಸಿದ್ದ ಅನೇಕ ಸಿದ್ಧಾಂತ ಹಾಗೂ ನಿರ್ಣಯಗಳನ್ನು ತಪ್ಪೆಂದು ತೋರಲು ಪ್ರಯತ್ನಿಸಿದರು. ಮಿಲ್ ಮುಂತಾದ ಬ್ರಿಟಿಷ್ ಪಂಡಿತರು ಭಾರತದ ವಿರುದ್ಧ ಮಾಡಿದ್ದ ಅನ್ಯಾಯಕರವಾಗಿದ್ದ ಉಗ್ರಟೀಕೆಗಳ ಕಾರಣ ಉದ್ರಿಕ್ತರಾದ ಭಾರತೀಯ ವಿದ್ವಾಂಸರು ಅತ್ಯಂತ ನಿಷ್ಠೆಯಿಂದ ಪಾಳಿ, ಪ್ರಾಕೃತ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ಘನ ಪಂಡಿತರಾಗಿ ಎಲ್ಲಾ ಮೂಲಾಧಾರಗಳನ್ನು ಶೋಧಿಸಿ, ಪರಿಶೀಲಿಸಿ ತಮ್ಮ ಇತಿಹಾಸಜ್ಞಾನ ದಿಗಂತವನ್ನು ವಿಸ್ತರಿಸಿಕೊಂಡರು. ಭಾರತದ ಗತವೈಭವದ ಬಗ್ಗೆ ಕಂಡ ಬೆಳಕು ಅವರಲ್ಲಿ ರಾಷ್ಟ್ರೀಯ ಪ್ರೇಮಜ್ಯೋತಿ ಉಜ್ವಲವಾಗಿ ಪ್ರಕಾಶಿಸುವಂತೆ ಮಾಡಿತು. ಈ ಜ್ಞಾನದ ಆಧಾರದ ಮೇಲೆ ಅವರು ಬ್ರಿಟಿಷ್ ಬರಹಗಾರರು ಭಾರತದ ವಿರುದ್ಧವಾಗಿ ಮಾಡಿದ್ದ ಟೀಕೆಗಳಲ್ಲಿ ಹುರುಳಿಲ್ಲ ಎಂಬುದಾಗಿ ಸಮರ್ಥಿಸಲು ಯತ್ನಿಸಿದರು.

ಆಗ ರಾಷ್ಟ್ರೋದ್ದೇಶ ಸಾಧನಾ ಕಾರ್ಯಕ್ಷೇತ್ರದಿಂದ ಮುಸ್ಲಿಮರನ್ನು ಪ್ರತ್ಯೇಕಿಸಿಟ್ಟರೆ ಉಂಟಾಗುವ ಅನರ್ಥಗಳನ್ನು ಅರಿತಿದ್ದ ಹಲವು ಹಿಂದೂ ಚರಿತ್ರಲೇಖಕರು ಹಿಂದೂ ಮುಸ್ಲಿಮರ ನಡುವೆ ಇದ್ದ ಸ್ವಾಮ್ಯಗಳನ್ನು ಎತ್ತಿ ಹೇಳಿ ಹಿಂದೆ ಹಿಂದೂ–ಮುಸ್ಲಿಮರ ನಡುವೆ ಸಮಸ್ಯೆಯೇ ಇರಲಿಲ್ಲ. ಅದು ಬ್ರಿಟಿಷರ ಒಡೆದು ಆಳುವ ನೀತಿಯ ಕಾರಣ ತಲೆ ಎತ್ತಿಕೊಂಡಿತು ಎಂಬುದಾಗಿ ವಿವರಿಸಿ. ಹಿಂದೂ ಮುಸ್ಲಿಂ ಏಕತೆಯನ್ನು ಸಾಧಿಸಲು ಯತ್ನಿಸಿದರು. ಡಾ.ತಾರಾಚಂದ್, ಡಾ.ತ್ರಿಪಾಠಿ, ಡಾ.ಈಶ್ವರೀಪ್ರಸಾದ್ ಮುಂತಾದ ವಿದ್ವಾಂಸರು ಈ ದಿಸೆಯಲ್ಲಿ ಬಹು ಶ್ರದ್ಧೆಯಿಂದ ಕೆಲಸ ಮಾಡಿದರೂ, ಇತಿಹಾಸ ಲೇಖನ ಕಲೆಯ ಕೇಂದ್ರವನ್ನು ಒಳಹೊಕ್ಕಿದ್ದ ಅಪಾಯಕಾರಿ ಕೋಮುವಾರು ಭಾವನೆಯ ಅನಿಷ್ಟ ಪ್ರಭಾವದ ವಿಷವನ್ನು

ನಿವಾರಿಸುವುದು ಸಾಧ್ಯವಾಗಲಿಲ್ಲ. ಪ್ರಷ್ಯಾದಲ್ಲಿ ಇತಿಹಾಸವು ಜರ್ಮನಿಯ ಏಕೀಕರಣಕ್ಕೆ ಸಾಧಕವಾಗಿದ್ದರೆ, ಭಾರತದಲ್ಲಿ ಅದು ಒಂದಾಗಿದ್ದ ನಾಡನ್ನು ಎರಡಾಗಿ ಸೀಳುವುದಕ್ಕೆ ಒಂದು ಪ್ರಬಲ ಉಪಕರಣವಾಯಿತು.

ಹೀಗೆ ಭಾರತೀಯ ಚರಿತ್ರ ಲೇಖಕರು ಇತಿಹಾಸ ರಚನೆಗೆ ಸಂಬಂಧಿಸಿದಂತೆ ವಿವಿಧ ವಿಚಾರ ಹಾಗೂ ದೃಷ್ಟಿಕೋನಗಳನ್ನು ಅಳವಡಿಸಿಕೊಂಡರು. ಇದರಿಂದ ವಿಭಿನ್ನ ವಿಚಾರ ಪಂಥಗಳು ಬೆಳೆದು ಬಂದುವು. ರಾಜ್‌ನಾರಾಯಣ್ ಬಸು, ಬಂಕಿಮ್‌ಚಂದ್ರ ಚಟರ್ಜಿ, ಕೆ.ಪಿ.ಜಯಸ್ವಾಲ್ ಮುಂತಾದ ಘನ ಪಂಡಿತರನ್ನು ಒಳಗೊಂಡಿದ್ದ ಪಂಥವು ಪಾಶ್ಚಾತ್ಯ ಸಂಸ್ಕೃತಿಗಿಂತ ಹಿಂದೂ ಸಂಸ್ಕೃತಿಯು ಅತ್ಯುತ್ತಮವಾಗಿದ್ದಿತು ಎಂಬುದನ್ನು ಎತ್ತಿ ತೋರಲು ಯತ್ನಿಸಿದರೆ ಮೇಜರ್ ಡಿ.ಬಸು, ಮಜುಂದಾರ್, ಸಿ.ವೈ.ಚಿಂತಾಮಣಿ ಹಾಗೂ ಸುರೇಂದ್ರನಾಥ್ ಬ್ಯಾನರ್ಜಿಯವರು ಪ್ರತಿನಿಧಿಸಿದ್ದ ಇನ್ನೊಂದು ಪಂಥವು ರಾಷ್ಟ್ರದ ಸ್ವಾತಂತ್ರ್ಯ ಸಾಧನೆಗಾಗಿ ಹೋರಾಡುತ್ತಿದ್ದ ರಾಷ್ಟ್ರೀಯವಾದಿಗಳ ಬಲವನ್ನು ಹೆಚ್ಚಿಸುವ ಉದ್ದೇಶದಿಂದ ಬ್ರಿಟಿಷರು ಭಾರತವನ್ನು ಆರ್ಥಿಕವಾಗಿ ಹೇಗೆ ಶೋಷಿಸಿದರು ಎಂಬುದನ್ನು ಸ್ಪಷ್ಟಪಡಿಸಲು ಪ್ರಯತ್ನಿಸಿತು. ರಾಜೇಂದ್ರಪಾಲ್ ಮಿಟ್ಟಲ್, ಆರ್.ಸಿ.ದತ್, ಆರ್.ಜಿ.ಭಂಡಾರ್‌ಕರ್, ರಾಯ್‌ಚೌಧುರಿ ಮುಂತಾದ ಮಹಾವಿದ್ವಾಂಸರಿಂದ ಕೂಡಿದ್ದ ವಿಚಾರವಾದಿ ಪಂಥವು ಭಾರತ ಇತಿಹಾಸಕ್ಕೆ ಸಂಬಂಧಿಸಿದಂತೆ ಯೂರೋಪಿನವರು ಮಾಡಿದ್ದ ತಪ್ಪುಗಳನ್ನು ತಿದ್ದುವುದಕ್ಕಾಗಿ ಘಟನೆಗಳನ್ನು ವಸ್ತುನಿಷ್ಠವಾಗಿ ವೀಕ್ಷಿಸಿ ವಿಚಾರ ಮಾಡಿತು. ಹಿರೇನ್ ಮುಖರ್ಜಿ, ಕೌಶಾಂಬಿ ಮುಂತಾದ ಘನ ವಿದ್ವಾಂಸರ ಇನ್ನೊಂದು ಪಂಥವು ಮಾರ್ಕ್ಸ್‌ನ ವಿಚಾರಧಾರೆಯಿಂದ ಆಕರ್ಷಿತವಾಗಿ, ಆ ದೃಷ್ಟಿಕೋನದಿಂದ ಭಾರತ ಚರಿತ್ರೆಯ ಸಮಸ್ಯೆಗಳನ್ನು ವಿವರಿಸಲು ಯತ್ನಿಸಿತು. ಜಾದೂನಾಥ್ ಸರ್ಕಾರ್, ಎಸ್.ಎನ್.ಸೇನ್, ಸರ್ ದೇಸಾಯ್, ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್, ವೆಂಕಟೇಶ್ವರುಲು ಮುಂತಾದ ಮಹಾಪಂಡಿತರ ಪಂಥವು ಭಾವನಾತ್ಮಕ ಘರ್ಷಣೆಗಳನ್ನು ಬದಿಗೊತ್ತಿ ರಾಂಕೆಯ ಕ್ರಮಗಳನ್ನು ಅನುಸರಿಸಿ ಇತಿಹಾಸವನ್ನು ರಚಿಸಲು ಶ್ರಮಿಸಿತು.

19ನೆಯ ಶತಮಾನದಲ್ಲಿ ಇಂಗ್ಲಿಷ್ ಕೃತಿಗಳ ಭಾಷಾಂತರದೊಂದಿಗೆ ಆರಂಭಿಸಿ ಭಾರತೀಯ ಇತಿಹಾಸ ಲೇಖಕರು ಕ್ರಮೇಣ ತಮ್ಮದೇ ಆಗಿದ್ದ ವಿಚಾರ ಪದ್ಧತಿ ಹಾಗೂ ಬರವಣಿಗೆಯ ಕ್ರಮವನ್ನು ಬೆಳೆಸಿಕೊಂಡರು. ಬಂಗಾಳದ ತರುಣ ಬುದ್ಧಿಜೀವಿಗಳು 1840 ಹಾಗೂ 1843ರ ನಡುವಿನ ವರ್ಷಗಳಲ್ಲಿ ಭಾರತದ ಇತಿಹಾಸ ಹಾಗೂ ಸಂಸ್ಕ್ರತಿಯ ವಿವಿಧ ಮುಖಗಳನ್ನು ಕುರಿತಂತೆ ಲೇಖನಗಳ ಮೂರು ಸಂಪುಟಗಳನ್ನು ರಚಿಸಿದರು. ಅದೇ ಶತಮಾನದಲ್ಲಿ ತಲೆದೋರಿದ ಪ್ರಮುಖ ಪಂಡಿತರಲ್ಲಿ ಭಗವಾನ್ ಲಾಲ್ ಇಂದ್ರಾಜಿ, ರಾಜೇಂದ್ರಲಾಲ್ ಮಿತ್ರ ಐತಿಹಾಸಿಕ ಅಧ್ಯಯನಗಳ ಕ್ಷೇತ್ರಕ್ಕೆ ಅಮೂಲ್ಯ ಕಾಣಿಕೆಗಳನ್ನು ಕೊಟ್ಟರೂ, ಇಂದ್ರಾಜಿ ಹೆಚ್ಚಾಗಿ ಶಾಸನ ಹಾಗೂ ಹಸ್ತಪ್ರತಿಗಳನ್ನು ಸಂಪಾದಿಸಿದರು ಹಾಗೂ ಭಾರತದ ಇತಿಹಾಸದ ಮುಂಚಿನ ಕಾಲಗಳ ವಿವಿಧ ಸಾಮಾಜಿಕ ಸಮಸ್ಯೆಗಳ ಬಗ್ಗೆ ಸೀಮಿತವಾಗಿ ಲೇಖನಗಳನ್ನು ಬರೆಯುವ ಕಾರ್ಯಕ್ಕೆ ಗಮನಕೊಟ್ಟರು. ಅವರಲ್ಲಿ ಮಿತ್ರ ಅವರನ್ನು ಆಧುನಿಕ ಭಾರತದ ಪ್ರಥಮ ವೈಜ್ಞಾನಿಕ ಇತಿಹಾಸಕಾರರೆಂಬುದಾಗಿ ಹೇಳಬಹುದು. ಕಾರಣ ಅವರು ಮೂಲ ಸಂಶೋಧನೆಯ ಸಂಪ್ರದಾಯವನ್ನು ಆರಂಭಿಸಿ ಭಾರತೀಯ ಇತಿಹಾಸ, ಪ್ರಾಚೀನ ಶೋಧನಾ ಶಾಸ್ತ್ರ ಹಾಗೂ ಸಂಸ್ಕೃತಿಯ ಬಗ್ಗೆ ನೂರಾರು ಮೂಲ ಲೇಖನಗಳನ್ನು ಬರೆದರು. 2 ಸಂಪುಟಗಳಲ್ಲಿ ಬರೆಯಲಾದ ಆ್ಯನ್ವಿಕ್ವಿಟೀಸ್ ಆವ್ ಒರಿಸ್ಸಾ ಅವರ ಮೇರುಕೃತಿ. ಪ್ರಾಚೀನ ಶೋಧನಶಾಸ್ತ್ರಕ್ಕೆ

ಸಂಬಂಧಿಸಿದ್ದ ಅವರ ಬೌದ್ಧಗಯಾ ಎಂಬ ಪೂರ್ಣ ದಾಖಲೆ, ಬಂಗಾಳದ ಪಾಲ ಹಾಗೂ ಸೇನರ ಬಗ್ಗೆ ಮಾಡಿದ್ದ ಮೂಡಿದ ಆಳವಾಗಿದ್ದ ಅಧ್ಯಯನ, ಅಪರೂಪವಾಗಿದ್ದ ಹಸ್ತಪ್ರತಿ ಹಾಗೂ ಶಾಸನಗಳ ಸಂಪಾದನೆ, ಇತ್ಯಾದಿಗಳ ಕಾರಣ ಅವರಿಗೆ ಭಾರತದ ಐತಿಹಾಸಿಕ ಅಧ್ಯಯನಗಳ ಆದಿ ಪರಿಶೋಧಕರ ಪಂಕ್ತಿಯಲ್ಲಿ ಅಗ್ರಸ್ಥಾನವನ್ನು ಕೊಡಲಾಗಿದೆ.

ಅವರಿಂದ ಸ್ಫೂರ್ತಿಗೊಂಡಿದ್ದ ಹರಪ್ರಸಾದ್ ಶಾಸ್ತ್ರಿಯವರು ಬಂಗಾಳದ ಬೌದ್ಧ ಧರ್ಮದ ಬಗ್ಗೆ ಅಧ್ಯಯನಗಳನ್ನು ಕೈಗೊಂಡು ಸುಮಾರು ಮೂವತ್ತು ಮೂಲ ಲೇಖನಗಳನ್ನು ಬರೆದರು. ಅಕ್ಷಯ್‌ಕುಮಾರ್ ಮಿತ್ರ ಸಿರಾಜುದ್ದೌಲನ ಬಗ್ಗೆ ಮಾಡಿದ್ದ ವಿಮರ್ಶಾತ್ಮಕ ಅಧ್ಯಯನವು ಆ ಯುಗದ ಅಂತ್ಯಭಾಗದಲ್ಲಿ ತೀವ್ರ ಪ್ರತಿಕ್ರಿಯೆಯನ್ನು ಉಂಟು ಮಾಡಿತು. ಐದು ಸಂಪುಟಗಳಲ್ಲಿ ಮೇವಾರದ ಇತಿಹಾಸವನ್ನು ರಚಿಸಿದ ಕವಿರಾಜ್ ಶ್ಯಾಮಲ್ ದಾಸ್ ರಾಜಪುತಾಣದಲ್ಲಿ ಆಧುನಿಕ ಕ್ರಮದ ಅನುಸಾರವಾಗಿ ಇತಿಹಾಸ ಸಂಶೋಧನಾ ಕಾರ್ಯವನ್ನು ವ್ಯವಸ್ಥಿತಗೊಳಿಸಿದರು. ಅವರು ಎಲ್ಲಾ ಬಗೆಯ ಆಧಾರಗಳನ್ನು ಬಳಸಿ ಮೂಲಸಂಶೋಧನಾ ಕಾರ್ಯವನ್ನು ಆರಂಭಿಸಿ ತಮ್ಮ ಅತ್ಯುತ್ತಮ ಉತ್ತರಾಧಿಕಾರಿ ಗೌರಿಶಂಕರ್ ಹೀರಾಚಂದ್ರ ಓಜಾವಿಗೆ ದಾರಿ ಮಾಡಿಕೊಟ್ಟರು. ಈ ಯುಗದ ಮರಾಠ ಇತಿಹಾಸಕಾರರಲ್ಲಿ ಕಾಶೀನಾಥ್ ತ್ರಿಂಬಕ್ ತೆಲಂಗ್, ವಿಶ್ವನಾಥ್ ಕಾಶೀನಾಥ್ ರಾಜ್‌ವಾಡೆ, ವಾಸುದೇವ್ ವಾಮನ್‌ಶಾಸ್ತ್ರಿ ಖಾರೆ ಉಲ್ಲೇಖನಾರ್ಹರು. ತೇಲಂಗ್ ಭಾರತ ಸಂಸ್ಕೃತಿ ಹಾಗೂ ಶಾಸನಗಳ ಬಗ್ಗೆ ಕೆಲವು ಲೇಖನಗಳನ್ನು ಪರಕೀಯರ ಪೂರ್ವಾಗ್ರಹಪೀಡಿತ ಅಭಿಪ್ರಾಯಗಳನ್ನು ಖಂಡಿಸಲು ಬರೆದರಾದರೂ ಪೇಷ್ವೆಗಳ ಕಾಲದಲ್ಲಿದ್ದ ಮಹಾರಾಷ್ಟ್ರದ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಜೀವನವನ್ನು ಕುರಿತ ಅವರ ಗ್ಲೀನಿಂಗ್ಸ್ ಫ್ರಾಮ್ ಮರಾಠ ಕ್ರಾನಿಕ್‌ಲ್ಸ್ (1900) ಇತಿಹಾಸ ಲೇಖನ ಕಲೆಗೆ ಅವರು ನೀಡಿದ ಕಾಣಿಕೆ.

19ನೆಯ ಶತಮಾನದ ಮುಸ್ಲಿಂ ಲೇಖಕರಲ್ಲಿ ಇಂಗ್ಲಿಷ್ ಮಾಧ್ಯಮಿಕ ಆಧಾರ ಮತ್ತು ಉರ್ದು ಹಾಗೂ ಪರ್ಷಿಯನ್ ಮೂಲಾಧಾರಗಳನ್ನು ಬಳಸಿ ಪಂಜಾಬಿನ ಜನರ ಬಗ್ಗೆ ಪುರಾತನ ಕಾಲದಿಂದ ಹಿಡಿದು 1880 ರವರೆಗಿನ ಇತಿಹಾಸವಾಗಿದ್ದ ಹಿಸ್ಟೋರಿ ಆವ್ ದಿ ಪಂಜಾಬ್ ಎಂಬ ಕೃತಿಯನ್ನು ಬರೆದ ಮಹಮದ್ ಲತೀಫ್ ಮತ್ತು ಆಲಿಘರ್ ಚಳವಳಿಯ ಜನಕನು ಮತ್ತು ಭಾರತದ ಮುಸ್ಲಿಂ ಸಮುದಾಯವನ್ನು ಆಧುನಿಕವನ್ನಾಗಿಸಿದ್ದ ಸೈಯದ್ ಅಹಮದ್ ಖಾನರನ್ನು ಹೆಸರಿಸಬಹುದು. ಲತೀಫ್‌ಗೆ ವಸ್ತುನಿಷ್ಠ ಇತಿಹಾಸದ ಕಲ್ಪನೆ ಇದ್ದರೂ ಮತ್ತು ತನ್ನ ಬರವಣಿಗೆಯು ಪಕ್ಷ ಅಥವಾ ಪಂಥಾಭಿಮಾನದ ಪ್ರಭಾವಕ್ಕೆ ಒಳಗಾಗಿಲ್ಲ ಎಂದು ಅವನು ಹೇಳಿಕೊಂಡರೂ, ಅವನು ಬ್ರಿಟಿಷ್ ಆಳ್ವಿಕೆಯ ಬಗ್ಗೆ ಹೆಚ್ಚಿನ ಒಲವನ್ನು ತೋರಿದನು. ಅವನು ನೀಡಿದ ಸಿಕ್ ಗುರುಗಳ ನಿರೂಪಣೆ ಪೂರ್ವಾಗ್ರಹಪೀಡಿತವಾಗಿದ್ದಿತು. ಆದರೂ ಮೊದಲ ಬಾರಿಗೆ ಪಂಜಾಬಿನ ಬಗ್ಗೆ ಸಂಪೂರ್ಣ ವೃತ್ತಾಂತವನ್ನು ನೀಡಿರುವ ಅವನ ಗ್ರಂಥವನ್ನು 19ನೆಯ ಶತಮಾನದ ಭಾರತ ಇತಿಹಾಸ ಲೇಖನ ಕಲೆಯಲ್ಲಿ ಮುಖ್ಯವಾದುದು ಎಂಬುದಾಗಿ ಎಣಿಸಬಹುದು. ಲಾಹೋರ್ ಇಟ್ಸ್ ಹಿಸ್ಟೋರಿ, ಆರ್ಕಿಟೆಕ್ಚರ್, ರಿಮೇನ್ಸ್ ಆ್ಯಂಡ್ ಆ್ಯಂಟ್ವಿಕ್ವಿಟೀಸ್ ಎಟ್‌ಸೆಟೆರ ಮತ್ತು ಆಗ್ರಾ ಆ್ಯನ್ ಹಿಸ್ಟಾರಿಕಲ್ ಆ್ಯಂಡ್ ಡಿಸ್ಕ್ರಿಪ್‌ಷನ್ ಅವನ ಇತರ ಐತಿಹಾಸಿಕ ಬರಹಗಳು.

ಸರ್ ಸಯ್ಯದ್ ಅಹಮದ್ ಖಾನ್ ಭಾರತದಲ್ಲಿ ಹಾಗೂ ಹೊರನಾಡಿನಲ್ಲಿ ಸಂಭವಿಸಿದ್ದ ಹಾಗೂ ಮುಸ್ಲಿಮರಿಗೆ ಸಂಬಂಧಿಸಿದ್ದ ಗತಕಾಲದ ಘಟನೆಗಳಲ್ಲಿ ಅವರಿಗೆ ಆಸಕ್ತಿ ಮೂಡುವಂತೆ ಮಾಡುವ ಉದ್ದೇಶದಿಂದ ಇತಿಹಾಸದ ಅಧ್ಯಯನವನ್ನು ಕೈಗೊಂಡನು. ದೆಹಲಿಯ ಮುಸ್ಲಿಂ ಇತಿಹಾಸಕಾರ ಸಂಪ್ರದಾಯದ ಪರಿಸರದಲ್ಲಿ ಬೆಳೆದ ಅವನು ಇತಿಹಾಸ ಮತ್ತು ಮತಧರ್ಮದಲ್ಲಿ ಆಸಕ್ತಿ ಹೊಂದಿದ್ದನು. ಬ್ರಿಟಿಷರ ಅಧಿಪತ್ಯ ಆರಂಭವಾದ ಮೇಲೆ ಮುಸ್ಲಿಂರಲ್ಲಿದ್ದ ಆತ್ಮನಂಬಿಕೆ ಹೋಗಿ ಅವರು ಬ್ರಿಟಿಷ್ ವಿರೋಧಿ ಭಾವನೆಗಳನ್ನು ಬೆಳೆಸಿಕೊಂಡಿದ್ದರು. ಖಾನ್ ಬ್ರಿಟಿಷರ ಬಗ್ಗೆ ಇದ್ದ ಶತ್ರುತ್ವಭಾವವನ್ನು ಬಿಟ್ಟು ಇಂಗ್ಲಿಷ್, ಪಾಶ್ಚಾತ್ಯ ಕಲೆ ಹಾಗೂ ವಿಜ್ಞಾನಗಳನ್ನು ಕಲಿತುಕೊಳ್ಳುವಂತೆ ಮುಸ್ಲಿಂರನ್ನು ಪ್ರಚೋದಿಸಿದನು. ಅಹ್ಮದ್‌ಖಾನ್ 1855 ಹಾಗೂ 1864ರ ನಡುವಿನ ಕಾಲದಲ್ಲಿ ಅಬುಲ್ ಫಸಲನ ಆಯಿನಿ–ಅಕ್ಬರಿ, ಬರನಿಯ ತಾರೀಖೆ–ಫಿರ್‌ಮಾಸಿ ಮತ್ತು ಜಹಾಂಗೀರನ ಆತ್ಮಕಥೆಯನ್ನು ಸಂಪಾದಿಸಿದನು. ಅವನು ಇತಿಹಾಸದ ಬಗ್ಗೆ ಮುಸ್ಲಿಮರಿಗಿದ್ದ ಕಲ್ಪನೆಯನ್ನು ಆಧುನೀಕರಿಸಿ ಅದನ್ನು ಮತಧರ್ಮದ ಹಿಡಿತದಿಂದ ಮುಕ್ತಗೊಳಿಸಿ ಚರಿತ್ರೆಯನ್ನು 19ನೆಯ ಶತಮಾನದ ಉದಾರ ಭಾವನೆಗಳ ದೃಷ್ಟಿಯಿಂದ ವೀಕ್ಷಿಸಿ ರಚಿಸಬೇಕೆಂಬುದಾಗಿ ಮುಸ್ಲಿಂ ಇತಿಹಾಸ ಲೇಖಕರಿಗೆ ಕರೆಯನ್ನಿತ್ತನು. ಅವನಿಗೆ ಪಾಶ್ಚಾತ್ಯ ಆಧುನಿಕ ಇತಿಹಾಸ ರಚನೆಯ ಮೂಲತತ್ವಗಳು ಚೆನ್ನಾಗಿ ತಿಳಿದಿದ್ದುವು ಎಂಬುದು ಅವನ ಬರಹಗಳಿಂದ ಸ್ಪಷ್ಟವಾಗುತ್ತದೆ.

ಖಾನ್ ಮುಸ್ಲಿಮರು ಇಸ್ಲಾಮಿನ ಚರಿತ್ರೆಯ ಕಡೆಗೆ ಗಮನವನ್ನು ಹರಿಸುವಂತೆ ಮಾಡಿದರೆ ಮೌಲಾನಾ ಅಬುಲ್ ಕಲಂ ಆಜಾದ್ ರಾಜಕೀಯ ಚರಿತ್ರೆಯಲ್ಲಿ ಅವರು ಆಸಕ್ತಿ ತೋರುವಂತೆ ಮಾಡಿದರು. ಅವರು ತಮ್ಮ ಅಲ್–ಹಿಲಾಲ್ ಪತ್ರಿಕೆಯ ಮೂಲಕ ಮುಸ್ಲಿಮರಲ್ಲಿ ಐತಿಹಾಸಿಕ ಪ್ರಜ್ಞೆಯು ಜಾಗ್ರತವಾಗುವಂತೆ ಮಾಡಿ ಅವರು ರಾಷ್ಟ್ರೀಯ ಇತಿಹಾಸಕಾರರೊಂದಿಗೆ ಸೇರಿ ರಾಷ್ಟ್ರದ ಧ್ಯೇಯವನ್ನು ಸಾಧಿಸಬೇಕೆಂಬುದಾಗಿ ಒತ್ತಿ ಹೇಳಿದರು. ಖಿಲಾಫತ್ ಚಳವಳಿ ಆರಂಭವಾದಂತೆ ಮುಸ್ಲಿಮರು ರಾಷ್ಟ್ರವಾದಿಗಳಾದರು. ಮೊದಮೊದಲು ಅವರು ತಮ್ಮ ಮತಧರ್ಮದ ವಿರುದ್ಧ ಕ್ರೈಸ್ತಪಾದ್ರಿಗಳು ಮಾಡಿದ ಟೀಕೆಗಳಿಗೆ ತಕ್ಕ ಉತ್ತರವನ್ನು ನೀಡುವುದಕ್ಕೆ ಯತ್ನಿಸಿದರು; ನಂತರ ಭಾರತದ ಮುಸ್ಲಿಂ ಆಳ್ವಿಕೆಯ ವಿರುದ್ಧ ಬ್ರಿಟಿಷ್ ಹಾಗೂ ಹಿಂದೂ ಬರಹಗಾರರು ಮಾಡಿದ ಟೀಕೆಗಳಿಗೆ ಪ್ರತಿಕ್ರಿಯೆ ತೋರಿದರು. 19ನೆಯ ಶತಮಾನದಲ್ಲಿ ಅವರ ಇತಿಹಾಸ ಲೇಖನ ಕಲೆಯಲ್ಲಿ ಮೂರು ಪ್ರವೃತ್ತಿಗಳು ಪ್ರಧಾನವಾಗಿದ್ದುವು. ಮೊದಲನೆಯದಾಗಿ, ರಾಷ್ಟ್ರೀಯ ಇತಿಹಾಸವನ್ನು ರಚಿಸಿ ಮುಸ್ಲಿಮರು ತಮಗೂ ಹಾಗೂ ಹಿಂದೂಗಳಿಗೂ ಇದ್ದ ಸಾಮ್ಯವನ್ನು ಎತ್ತಿ ತೋರಿದರು. ಎರಡನೆಯದಾಗಿ, ಅವರು ಏಕಪಕ್ಷೀಯ ರಚನೆಗಳನ್ನು ಬರೆದು ತಮಗೂ ಹಾಗೂ ಹಿಂದೂಗಳಿಗೂ ನಡುವೆ ಇದ್ದ ಭೇದವನ್ನು ಎತ್ತಿ ತೋರಿದರು. ಮೂರನೆಯದಾಗಿ, ಕೆಲವು ಮುಸ್ಲಿಂ ಬರಹಗಾರರು ಹೆಚ್ಚು ವಸ್ತುನಿಷ್ಠ ದೃಷ್ಟಿಯಿಂದ ಕೂಡಿ ಇತಿಹಾಸವನ್ನು ರಚಿಸಲು ಯತ್ನಿಸಿದರು. 19ನೆಯ ಶತಮಾನ ಹಾಗೂ 20ನೆಯ ಶತಮಾನದ ಮೊದಲ ಅರ್ಧಭಾಗದಲ್ಲಿ ಭಾರತದ ಇತಿಹಾಸಲೇಖನ ಕಲಾಕ್ಷೇತ್ರದಲ್ಲಿ ಮುಸ್ಲಿಂ ಬರಹಗಾರರು ಪ್ರಾಚೀನ ಹಾಗೂ ಬ್ರಿಟಿಷ್ ಕಾಲಗಳಿಗಿಂತ ಹೆಚ್ಚಾಗಿ ಮಧ್ಯಯುಗಕ್ಕೆ ಸಂಬಂಧಿಸಿದಂತೆ ಹೆಚ್ಚು ಕೃತಿಗಳನ್ನು ಬರೆದರು.

## 17.4 ಸಾರಾಂಶ

ಹೀಗೆ ಜೆ.ಎಸ್.ಮಿಲ್‌ರವರು ಆರ್ಯರ ಆಗಮನದಿಂದ ಬ್ರಿಟೀಷರ ಆಗಮನದವರೆಗೆ ಭಾರತೀಯ ಸಮಾಜವು ಗಣನೀಯವಾಗಿ, ಬದಲಾಗದೆಯೇ ಉಳಿದಿತ್ತು ಎಂದು ಹೇಳುತ್ತಾರೆ. ಮಿಲ್‌ರವರ, ಭಾರತೀಯ ಇತಿಹಾಸದ ಹಿಂದೂ, ಮುಸ್ಲಿಂ ಮತ್ತು ಬ್ರಿಟೀಷರ ಕಾಲಗಳೆನ್ನುವ ವಿಭಾಗವು ನಮ್ಮ ಕಾಲದವರೆಗೂ ಮುಂದುವರೆದಿದೆ. ವಿ.ಎ.ಸ್ಮಿತ್‌ರವರು ಹೇಳುವಂತೆ ರಾಜಕೀಯ ಏಕತೆಗಾಗಿ ಭಾರತೀಯರ ಅಪೇಕ್ಷೆಯು ಬ್ರಿಟೀಷ್ ಆಡಳಿತಕ್ಕೆ ಅವರ ಸಹಮತದಲ್ಲಿ ಮತ್ತು ರಾಜ ಚಕ್ರವರ್ತಿಗೆ, ನಿಷ್ಠಾವಂತ ಭಕ್ತಿಯ ಆವೇಗದ ಆಸ್ಫೋಟಗಳಲ್ಲಿ ವ್ಯಕ್ತವಾಗಿದೆ. ಸಂಸ್ಕೃತ ಅಧ್ಯಯನಗಳ ಪುನರುಜ್ಜೀವನ ಮತ್ತು ಪ್ರಗತಿಯು ಭಾರತದ ಬಗ್ಗೆ ಹಗೆತನವನ್ನು ಕಡಿಮೆ ಮಾಡುವುದರ ಬದಲು, ಬ್ರಿಟೀಷ್ ಆಳ್ವಿಕೆಯ ಮುಂದುವರಿಕೆಯ ಬಗ್ಗೆ ಸೈದ್ಧಾಂತಿಕ ನ್ಯಾಯಬದ್ಧತೆಯನ್ನು ಒದಗಿಸುವ ಕೆಲಸವನ್ನಷ್ಟೇ ಮಾಡಿತು. ಬ್ರಿಟೀಷ್ ವಸಾಹಾತುಷಾಹಿ ಬರಹಗಾರರು ಭಾರತೀಯ ಜೀವನ ಮತ್ತು ಸಂಸ್ಕೃತಿಯ ಬಗ್ಗೆ ಯಾವ ಆಸಕ್ತಿಯನ್ನೂ ಹೊಂದಿರಲಿಲ್ಲ. ಮತ್ತು ಆರ್ಥಿಕ ವಿಷಯಗಳು ಮಾತ್ರ ಅವು ರಾಕಜಕೀಯವಾಗಿ ಬಳಸಲ್ಪಡುವವರೆಗೆ ಗುರಿಯಾಗಿದ್ದವು. ರಚಿಸಲ್ಪಟ್ಟ ಕೃತಿಗಳು ಬ್ರಿಟೀಷರ ಕಾಲಕ್ಕೆ ಹೆಚ್ಚಾಗಿ ಸೀಮಿತವಾಗಿದ್ದವು. ಮತ್ತು ಬ್ರಿಟೀಷ್ ಚಟುವಟಿಕೆಗಳಿಗೆ ಮಾತ್ರ ಸಂಬಂಧಿಸಿದ್ದವು. ಅವು ಯಾವಾಗಲೂ ಬ್ರಿಟೀಷರ ದೃಷ್ಟಿಕೋನವನ್ನು ಮಾತ್ರ ಪ್ರತಿನಿಧಿಸುತ್ತಿದ್ದವು.

## 17.5 ಪ್ರಮುಖ ಪದಗಳು

1. ಜೇಮ್ಸ್ ಸ್ಟುವರ್ಟ್ ಮಿಲ್: ಆಂಗ್ಲ ಇತಿಹಾಸಕಾರ
2. ಲಾರ್ಡ್ ಮೆಕಾಲೆ: 'ಹಿಸ್ಟರಿ ಆಫ್ ಇಂಗ್ಲೆಂಡ್' ಮಾಲಿಕೆಯ ಹಲವಾರು ಆವೃತ್ತಿಗಳನ್ನು ಹೊರತಂದವನು.

## 17.6 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಭರತದ ಇತಿಹಾಸ ರಚನೆಯಲ್ಲಿ ಮೌಂಟ್ ಸ್ಟೂವರ್ಟ್ ಎಲ್‌ಫಿಲ್‌ಸ್ಟೋನ್‌ರ ಕೊಡುಗೆಗಳೇನು?
2. ಜೆ.ಎಸ್. ಮಿಲ್‌ರ ಕೃತಿಗಳು ಮತ್ತು ಚಿಂತನೆಗಳ ಬಗ್ಗೆ ವಿವರಿಸಿ.
3. ಇತಿಹಾಸರಚನೆಯ ಅಭಿವೃದ್ಧಿಗೆ ಲ್ಲಿ ಸಾಮ್ರಾಜ್ಯಶಾಹಿ ಇತಿಹಾಸರಚನೆಕಾರರ ಕೊಡುಗೆಗಳನ್ನು ಚರ್ಚಿಸಿ.

## 17.7 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 17.2 ನೋಡಿ
2. ವಿಭಾಗ 17.3 ನೋಡಿ
3. ವಿಭಾಗ 17.6 ನೋಡಿ

## 17.8 ಪರಾಮರ್ಶನ ಗ್ರಂಥಗಳು

1. B.Sheik Ali: History its theory and method, Bangalore, 1999
2. R.K.Majumdar and A.N.Srivastva Historiography, Delhi, 1975

ಪಠ್ಯವನ್ನು ರಚಿಸಿದವರು:
ಜಿ.ಟಿ.ಸೋಮಶೇಖರ್

## ಘಟಕ– 18 ಭಾರತದ ರಾಷ್ಟ್ರೀಯ ಇತಿಹಾಸ ಲೇಖನ ಕಲೆ

**ರಚನೆ**

**18.0** ಉದ್ದೇಶಗಳು

**18.1** ಪೀಠಿಕೆ

**18.2** ಹಿನ್ನೆಲೆ

**18.3** ಕೆ.ಪಿ.ಜಯಸ್ವಾಲ್

**18.4** ಆರ್.ಜಿ.ಭಂಡಾರ್‌ಕರ್

**18.5** ಸರ್. ಜಾದೂನಾಥ್ ಸರ್ಕಾರ್

**18.6** ಹೆಚ್.ಸಿ.ರಾಯ್‌ಚೌಧರಿ

**18.7** ಸರ್ದಾರ್ ಕೆ.ಎಂ.ಪಣಿಕ್ಕರ್

**18.8** ರಾಧಾಕಮಲ್ ಮುಖರ್ಜಿ

**18.9** ರೋಮೇಶ್ ಚಂದ್ರದಲ್

**18.10** ಸಾರಾಂಶ

**18.11** ಪ್ರಮುಖ ಪದಗಳು

**18.12** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**18.13** ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

**18.14** ಪರಾಮರ್ಶನ ಗ್ರಂಥಗಳು

## 18.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನಾವು

ಭಾರತೀಯ ರಾಷ್ಟ್ರೀಯ ಇತಿಹಾಸ ಲೇಖನ ಕಲೆಯು ಬೆಳೆದು ಬಂದ ರೀತಿ, ಪ್ರಮುಖ ರಾಷ್ಟ್ರೀಯವಾದಿಗಳಾದ ಆರ್.ಜಿ.ಭಂಡಾರ್ಕರ್, ಆರ್.ಸಿ.ದತ್, ಕೆ.ಪಿ.ಜಯಸ್ವಾಲ್, ದಾದಾಬಾಯಿ ನವರೋಜಿ, ಹೆಚ್.ಸಿ.ರಾಯ್‌ಚೌಧರಿ ಮುಂತಾದ ಇತಿಹಾಸಕಾರರ ಬರವಣಿಗೆಯ ಬಗ್ಗೆ ತಿಳಿದುಕೊಳ್ಳುತ್ತೇವೆ.

## 18.1 ಪೀಠಿಕೆ

ಯೂರೋಪಿನ ಇತಿಹಾಸಕಾರರು ತಮ್ಮ ತಮ್ಮ ಅಭಿಪ್ರಾಯ ಹಾಗೂ ದೃಷ್ಟಿಕೋನಗಳನ್ನು ಮುಖ್ಯವಾದವು ಎಂಬುದಾಗಿ ಎತ್ತಿಹಿಡಿಯುತ್ತಿದ್ದಾಗ ಆಧುನಿಕ ಇತಿಹಾಸ ಲೇಖನ ಕಲಾಕ್ಷೇತ್ರವನ್ನು ವಿಳಂಬವಾಗಿ ಪ್ರವೇಶಿಸಿದ ಭಾರತೀಯ ಇತಿಹಾಸಕಾರರು ಮೊದಮೊದಲು ಪರಕೀಯ ಇತಿಹಾಸಕಾರ ಹೆಜ್ಜೆಯ ಗುರುತುಗಳನ್ನು ಅನುಸರಿಸಿದರೂ ಪಶ್ಚಿಮ ರಾಷ್ಟ್ರಗಳಿಂದ ಹರಿದುಬಂದ ಇತಿಹಾಸವನನು ಕುರಿತ ನೂತನ ವಿಚಾರ ಹಾಗೂ ಪಾಶ್ಚಾತ್ಯ ಶಿಕ್ಷಣ, ರಾಜಾರಾಮ್ ಮೋಹನ್ ರಾಯ್ ಉದ್ಘಾಟಿಸಿದ ಭಾರತೀಯ ಬೌದ್ಧಿಕ ಶಕೆ ಇತ್ಯಾದಿಗಳ ಕಾರಣ ಅವರು ತಮ್ಮದೇ ಆದ ನಿರ್ದಿಷ್ಟ ಅಭಿಪ್ರಾಯಗಳನ್ನು ಎತ್ತಿಹಿಡಿದು ಭಾರತದ ಬಗ್ಗೆ ಬ್ರಿಟಿಷ್ ಬರಹಗಾರರು ಮೂಡಿಸಿದ್ದ ಅನೇಕ ಸಿದ್ಧಾಂತ ಹಾಗೂ ನಿರ್ಣಯಗಳನ್ನು ತಪ್ಪೆಂದು ತೋರಲು ಪ್ರಯತ್ನಿಸಿದರು. ಬ್ರಿಟಿಷರ ಸಾಮ್ರಾಜ್ಯಶಾಹಿತ್ವ ಮತ್ತು ಪ್ರಜಾಪ್ರಭುತ್ವದ ಹಿರಿಮೆಗಳು ಭಾರತೀಯ ರಾಷ್ಟ್ರೀಯ ಇತಿಹಾಸಕಾರರು ಮೂಡಿಬರಲು ಕಾರಣವಾದವು.

## 18.2 ಹಿನ್ನೆಲೆ

ಭಾರತದಲ್ಲಿ 19ನೇ ಶತಮಾನದವರೆಗೂ ರಾಷ್ಟ್ರೀಯ ಇತಿಹಾಸಕಾರರು ಮೂಡಿಬರಲಿಲ್ಲ. ಅಂದರೆ ಅಖಂಡ ಭಾರತದ ಇತಿಹಾಸ ರಚನೆಯಾಗಿರಲಿಲ್ಲ. ಉದಾ: ಬಾಣನ ಹರ್ಷಚರಿತೆ (ಕ್ರಿ.ಶ. 612) ಯಾಗಲೀ, ಬಿಲ್ಹಣನ ವಿಕ್ರಮಾಂಕ ದೇವಚರಿತೆ (ಕ್ರಿ.ಶ. 1100) ಯಾಗಲೀ, ಕಲ್ಹಣನ ರಾಜತರಂಗಿಣಿ (ಕ್ರಿ.ಶ. 1150) ಯಾಗಲೀ, ಅನಂತರ ಇತರ ಕೃತಿಗಳಾಗಲೀ ರಾಷ್ಟ್ರೀಯ ಇತಿಹಾಸಗಳಾಗಿ ಮೂಡಿ ಬರಲಿಲ್ಲ. ಅವು ಕೇವಲ ಪ್ರಾದೇಶಿಕ ಇತಿಹಾಸಗಳಾಗಿದ್ದವು.

ಮೌರ್ಯ ಸಾಮ್ರಾಜ್ಯ ಮತ್ತು ಗುಪ್ತಸಾಮ್ರಾಜ್ಯ ಮೊದಲಾದವು ರಾಷ್ಟ್ರಮಟ್ಟದ ಸಾಮ್ರಾಜ್ಯಗಳಾಗಿದ್ದರೂ ಕೂಡ ಅವುಗಳ ರಾಷ್ಟ್ರಮಟ್ಟದ ಇತಿಹಾಸವನ್ನು ರಚಿಸುವವರು ಮೂಡಿಬರಲಿಲ್ಲ. ಮೇಲಾಗಿ ಆ ಚಕ್ರವರ್ತಿಗಳು ಕೂಡ ಅಂತಹ ಇತಿಹಾಸವನ್ನು ಬರೆಸಲೂ ಇಲ್ಲ. ದೆಹಲಿ ಸುಲ್ತಾನರು ಮತ್ತು ಮೊಗಲ್ ಚಕ್ರವರ್ತಿಗಳು ಆಸ್ಥಾನ ವಿದ್ವಾಂಸರಿಂದ ತಮ್ಮ ಸಾಮ್ರಾಜ್ಯದ ಇತಿಹಾಸ ಬರೆಸಿದರು. ಆದರೆ ಅವು ರಾಷ್ಟ್ರೀಯ

ಇತಿಹಾಸವೆನಿಸಿಕೊಳ್ಳಲಾರವು. ಏಕೆಂದರೆ ಆಳಿದವರು ಪರದೇಶಿಯವರಾದ ತುರ್ಕೊ ಆಫ್ಘನರು, ಮಂಗೋಲರು, ಬರೆದವರೂ ಪರದೇಶಿಯರು ಭಾಷೆ ಕೂಡ ಪರದೇಶಿಯವಾದ ಪರ್ಶಿಯನ್ ಆಗಿದ್ದಿತು.

ಮರಾಠರ ಕಾಲದಲ್ಲಿ ರಚಿಸಿದ ಇತಿಹಾಸ ಪ್ರಾಂತೀಯ ಇತಿಹಾಸವಾಗಿತ್ತೇ ಹೊರತು ರಾಷ್ಟ್ರೀಯ ಲಕ್ಷಣ ಹೊಂದಿರಲಿಲ್ಲ.

ಬ್ರಿಟಿಷರ ಆಳ್ವಿಕೆಯಲ್ಲಿ ಭಾರತ ಮತ್ತೊಮ್ಮೆ ಏಕೀಕರಣವನ್ನು ಪಡೆಯಿತು (ಕೆಲವು ಪ್ರದೇಶಗಳು ಪರೋಕ್ಷವಾಗಿಯೂ ಹಲವು ನೇರ ಆಳ್ವಿಕೆಯಲ್ಲೂ ಸೇರಿದ್ದುವು) ಹಾಗಾಗಿ ಬ್ರಿಟಿಷ್ ಇತಿಹಾಸಕಾರರು ಮೊದಲ ಬಾರಿಗೆ ಭಾರತದ ಸಮಗ್ರ ಇತಿಹಾಸವನ್ನು ರಚಿಸಿದರು. ವಿದೇಶೀಯರಾಗಿದ್ದುದರಿಂದ ಅವರನ್ನು ಓರಿಯಂಟಲ್ ಹಿಸ್ಟಾರಿಯನ್ಸ್ ಎಂದು ಪರಿಗಣಿಸಬಹುದಾಗಿದೆ. ಭಾರತದ ಸಮಗ್ರ ಇತಿಹಾವನ್ನು ಪ್ರಥಮ ಬಾರಿಗೆ 1806 ರಲ್ಲಿ ಹಿಸ್ಟರಿ ಆಫ್ ಬ್ರಿಟಿಷ್ ಇಂಡಿಯ ಫ್ರಂ ದಿ ಅರ್ಲಿಯಸ್ಟ್ ಟೈಮ್ಸ್ ಪ್ರಕಟಿಸಿದ ಕೀರ್ತಿ ಜೇಮ್ಸ್ ಮಿಲ್‌ಗೆ ಸೇರುತ್ತದೆ. ಅನಂತರ ಜೆ.ಟಿ.ವ್ಹೀಲರ್, ವಿನ್ಸೆಂಟ್ ಅರ್ಥರ್ ಸ್ಮಿತ್ ಭಾರತವನ್ನು ಕುರಿತು ಸಮಗ್ರ ಇತಿಹಾಸ ರಚಿಸಿದರು (ಇವರೆಲ್ಲ ವಿದೇಶಿ ಓರಿಯಂಟಾಲಿಸ್ಟ್ ಆಗಿರುವರು).

ಬ್ರಿಟಿಷರು ಜಾರಿಗೊಳಿಸಿದ ಇಂಗ್ಲೀಷ್ ಶಿಕ್ಷಣ ಹಾಗೂ ಅವರು ಇಲ್ಲಿ ನಡೆಸಿದ ಪ್ರಾಕ್ತನ ಸಂಶೋಧನೆಗಳು ಭಾರತೀಯ ಸಂಸ್ಕೃತಿಯ ಮೇಲೆ ಅಪಾರ ಬೆಳಕು ಚೆಲ್ಲಿದುವು. ಇದು ಭಾರತೀಯರ ರಾಷ್ಟ್ರೀಯತೆಯನ್ನು ಜಾಗೃತಿಗೊಳಿಸಿತು. ಹೀಗೆ ಪ್ರಭಾವಿತಗೊಂಡ ಭಾರತೀಯ ಇತಿಹಾಸಜ್ಞರು ರಾಷ್ಟ್ರೀಯ ಇತಿಹಾಸ ರಚಿಸತೊಡಗಿದರು.

ಭಾರತದ ರಾಷ್ಟ್ರೀಯ ಇತಿಹಾಸ ರಚನೆಯಲ್ಲಿ ಮೂರು ಪ್ರಭಾವಗಳನ್ನು ಗುರುತಿಸಬಹುದಾಗಿದೆ.

1) ಸಾಂಸ್ಕೃತಿಕ ಪುನರುಜ್ಜೀವನ ಮತ್ತು ರಾಷ್ಟ್ರೀಯ ಪ್ರಚೋದನೆ
2) ರಾಜಕೀಯ ಏಕತೆ ಮತ್ತು ರಾಷ್ಟ್ರೀಯತೆಯ ಪ್ರಚೋದನೆ
3) ಕ್ರೈಸ್ತ ಧರ್ಮ ಮತ್ತು ರಾಷ್ಟ್ರೀಯ ಪ್ರಚೋದನೆ

ಸಾಂಸ್ಕೃತಿಕವಾಗಿ ಭಾರತ ವಿಶ್ವದಲ್ಲೆ ಅಗ್ರಪಂಗ್ತಿಯಲ್ಲಿದ್ದಿತು. ವಿದೇಶಿ ಆಕ್ರಮಣಗಳ ಕಾಲಚಕ್ರದಲ್ಲಿ ಸಿಲುಕಿದ ಭಾರತ ಮಧ್ಯಯುಗದಲ್ಲಿ ಮುಸ್ಲಿಮರ ದೌರ್ಜನ್ಯಗಳ ಮಧ್ಯೆ ತನ್ನ ಪರಂಪರೆಯನ್ನು ಉಳಿಸಿಕೊಂಡು ಬರಲು ಹೆಣಗಾಡಬೇಕಾಯಿತು. ರಾಜಾಶ್ರಯವಿಲ್ಲದುದರಿಂದ ಅದರ ಪ್ರಗತಿ ಕುಂಠಿತವಾಗಿದ್ದಿತು. ಆದರೆ ಬ್ರಿಟಿಷರ ಆಗಮನದಿಂದ ಭಾರತೀಯ ಸಾಂಸ್ಕೃತಿಕ ಪರಂಪರೆಗೆ ಹೊಸ ಜೀವ ಬಂದಂತಾಯಿತು. ವಿಲಿಯಮ್ ಜೋನ್ಸ್, ಮ್ಯೂಕ್ಸ್ ಮ್ಯುಲ್ಲರ್, ಬರ್ಗೆಸ್ ರೈಸ್‌ಡೆವಿಡ್ಸ್ ಹಂಟರ್, ವಿಲ್ಸನ್ ಮೊದಲಾದ ಬ್ರಿಟಿಷ್ ವಿದ್ವಾಂಸರು ಸಂಸ್ಕೃತ, ಪಾಲಿ, ಪ್ರಾಕೃತ ಮೊದಲಾದ ಭಾರತೀಯ ಭಾಷೆ, ವಾಸ್ತುಶಿಲ್ಪ, ಕಲೆ, ತತ್ವಜ್ಞಾನಗಳ ಸಾಹಿತ್ಯ ಅಧ್ಯಯನದಲ್ಲಿ ತೊಡಗಿದರು. ಅನಂತರ ಇಲ್ಲಿ ಅವರು ಕೈಗೊಂಡ ಪ್ರಾಕ್ತನ ಶಾಸ್ತ್ರಾಧ್ಯಯನಗಳು ಭಾರತೀಯ ಸಾಂಸ್ಕೃತಿಕ ಪ್ರಾಚೀನತೆ ಹಾಗೂ ಭವ್ಯತೆಯ ಮೇಲೆ ಬೆಳಕು ಚೆಲ್ಲಿದರು. ಅದು ಭಾರತೀಯರಲ್ಲಿ

ತಾವು ವಿಶ್ವದಲ್ಲಿ ಉನ್ನತ ಪರಂಪರೆಯುಳ್ಳವರೆಂಬ ಅಭಿಮಾನವನ್ನು ಮೂಡಿಸಿತು. ಅದರಿಂದ ಪ್ರೇರಿತರಾದ ಭಾರತೀಯ ವಿದ್ವಾಂಸರು ರಾಷ್ಟ್ರೀಯ ಇತಿಹಾಸವನ್ನು ಹೆಮ್ಮೆಯಿಂದ ರಚಿಸಲಾರಂಭಿಸಿದರು. ಅವರಲ್ಲಿ ಪ್ರಮುಖರಾದವರು : ರಾಜೇಂದ್ರಪಾಲ್ ಮಿತ್ರ, ಆರ್.ಡಿ.ಬಂದೋಪಾಧ್ಯಾಯ, ಆರ್.ಜಿ.ಭಂಡಾರ್ಕರ್, ಆರ್.ಕೆ.ಮುಖರ್ಜಿ, ಕೆ.ಪಿ.ಜಯಸ್ವಾಲ್, ನೀಲಕಂಠಶಾಸ್ತ್ರ, ಎಚ್.ಸಿ.ರಾಯಚೌಧರಿ, ಆರ್.ಸಿ.ಮಜುಮ್‌ದಾರ್, ಜೆ.ಎನ್.ಸರ್ಕಾರ್, ಕೃಷ್ಣಸ್ವಾಮಿ ಐಯ್ಯಂಗಾರ್, ಕೆ.ಎಂ.ಫಣಿಕ್ಕರ್, ಆರ್.ಆರ್.ದಿವಾಕರ್, ಡಿ.ದಾಮೋದರ್ ಕೋಸಂಬಿ, ರೋಮಿಲಾ ಥಾಪರ್, ಎಸ್.ಎನ್.ಸೇನ್, ವಿ.ಡಿ.ಸಾವರ್ಕರ್, ಜವಹರಲಾಲ್ ನೆಹರೂ ಮೊದಲಾದವರು.

ರಾಷ್ಟ್ರೀಯ ಇತಿಹಾಸಕಾರರಲ್ಲಿ 6 ವರ್ಗಗಳನ್ನು ಗುರ್ತಿಸಬಹುದಾಗಿದೆ:

**1) ವೈದಿಕ ಸಂಪ್ರದಾಯ ಪಂಥ :** ಈ ಪಂಥೀಯರಲ್ಲಿ ಪ್ರಮುಖರದವರು ಎನ್.ಬೋಸ್, ಚಂದ್ರನಥಬಸು, ಕೆ.ಪಿ.ಜಯಸ್ವಾಲ್, ಬಾಲಗಂಗಾಧರ ತಿಲಕ್, ವಿ.ಡಿ.ಸಾವರ್ಕರ್ ಮೊದಲಾದವರು. ಇವರು ವೈದಿಕ ಪರಂಪರೆಗೆ ಒತ್ತು ಕೊಟ್ಟು ಅದರ ಉಳಿವು ಮತ್ತು ಬೆಳವಣಿಗೆಗೆ ಬದ್ಧರಾಗಿದ್ದರು.

**2) ವೈಚಾರಿಕ ಪಂಥ :** ಈ ಪಂಥೀಯರು ಇತಿಹಾಸ ರಚನೆಯಲ್ಲಿ ಪ್ರಗತಿಪರ ವಿಚಾರಗಳಿಗೆ ಹೆಚ್ಚು ಒತ್ತು ಕೊಟ್ಟರು. ಅವರಲ್ಲಿ ಪ್ರಮುಖರಾದವರು ಆರ್.ಎಲ್.ಮಿತ್ರ, ಆರ್.ಸಿ.ಮಜುಮ್‌ದಾರ್, ರಾಯಚೌಧರಿ, ಆರ್.ಜೆ.ಭಂಡಾರ್ಕರ್ ಮತ್ತು ಇತರರು.

**3) ಸಾಮಾಜಿಕ (ಜಾತೀಯ) ಪಂಥ :** ಸಾಮಾಜಿಕ ಸಮತೆಗೆ ಒತ್ತು ಕೊಟ್ಟು ರಾಷ್ಟ್ರೀಯ ಇತಿಹಾಸ ರಚನೆ ಮಾಡಿದ ಇವರು ವೈದಿಕ ಅಸಮಾನತೆಗಳ ವಿರೋಧಿಗಳು. ಅವರುಗಳಲ್ಲಿ ಕೆ.ಎಂ.ಫಣಿಕ್ಕರ್ ಪ್ರಮುಖನಾಗಿದ್ದಾನೆ.

**4) ಆರ್ಥಿಕ ಪಂಥ :** ಆರ್ಥಿಕ ಸ್ವಾತಂತ್ರ್ಯವೇ ರಾಷ್ಟ್ರೀಯತೆಯ ಬುನಾದಿ ಎಂದು ಪ್ರತಿಪಾದಿಸಿದವರು: ಡಿ.ಡಿ.ಬಸು, ಎಸ್.ಮಜುಮ್‌ದಾರ್, ಸಿ.ವೈ.ಚಿಂತಾಮಣಿ, ಆರ್.ಸಿ.ದತ್, ದಾದಾಭಾಯಿ ನವರೋಜಿ ಮೊದಲಾದವರು. ಇವರು ಬ್ರಿಟಿಷರ ಆರ್ಥಿಕ ಶೋಷಣೆಯನ್ನು ಕಟುವಾಗಿ ಟೀಕಿಸಿ ರಾಷ್ಟ್ರೀಯ ಹೋರಾಟಕ್ಕೆ ತಮ್ಮಕೃತಿಗಳ ಮೂಲಕ ಹೊಸ ತಿರುವು ಕೊಟ್ಟರು.

**5) ಕಮ್ಯುನಿಸ್ಟ್ (ಸಮತಾವಾದಿ) ಪಂಥ :** ರೈತ ಹಾಗೂ ಕಾರ್ಮಿಕ ವರ್ಗಗಳ ವಿಮೋಚನೆಯೇ ನಿಜವಾದ ರಾಷ್ಟ್ರೀಯತೆ ಎಂದು ಒತ್ತಿ ಹೇಳಿದವರು ಕಮ್ಯುನಿಸ್ಟ್ ಪಂಥೀಯರೆನಿಸಿದರು. ಅವರುಗಳೆಂದರೆ: ಹೀರೇಂದ್ರನಾಥ್ ಮುಖರ್ಜಿ, ಎಮ್.ಎನ್.ರಾಯ್, ಪಾಮೆದತ್ತ, ಡಿ.ಡಿ.ಕೊಶಾಂಬಿ, ಈ.ಎಂ.ಎಸ್. ನಂಬೂದ್ರಿಪಾದ್ ಮತ್ತು ಇತರರು.

**6) ಉದಾರ ಹಾಗೂ ರಾಷ್ಟ್ರೀಯ ಪಂಥ :** ಜಾತ್ಯಾತೀತ ತತ್ವದಲ್ಲಿ ನಂಬಿಕೆ ಇಟ್ಟ ರಾಷ್ಟ್ರೀಯ ಪಂಥೀಯರಾದ ಜೆ.ಎನ್.ಸರ್ಕಾರ್, ಎಸ್.ಎನ್.ಸೇನ್, ಜೆ.ಎಲ್.ನೆಹರು, ಷಾಫತ್ ಅಹಮದ್ ಖಾನ್,ಕೃಷ್ಣಸ್ವಾಮಿ ಐಯ್ಯಂಗಾರ್ ಮತ್ತು ಇತರರು ರಾಷ್ಟ್ರೀಯ ಇತಿಹಾಸ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಇವರನ್ನು ಉದಾರ ಹಾಗೂ ರಾಷ್ಟ್ರೀಯ ಇತಿಹಾಸಕಾರರೆಂದು ಕರೆಯಬಹುದಾಗಿದೆ.

ರಾಜಕೀಯವಾಗಿ ಪ್ರಾಬಲ್ಯ ಗಳಿಸಿದ ಬ್ರಿಟಿಷರು ತಮ್ಮ ಸಾರ್ವಭೌಮತ್ವದಲ್ಲಿ ಭಾರತದಲ್ಲಿ ಏಕತೆಯನ್ನುಂಟು ಮಾಡಿದರು. ಅದಲ್ಲದೆ ರಾಬರ್ಟ್ ಓರ್ಮೆ, ಜೇಮ್ಸ್ ಮಿಲ್, ಎಲ್ಫಿನ್‌ಸ್ಟನ್, ವಿನ್ಸೆಂಟ್ ಸ್ಮಿತ್ ಮೊದಲಾದವರು ಭಾರತದ ಇತಿಹಾಸ ರಚನೆ ಮಾಡಿದರು. ಆ ಕೃತಿಗಳಲ್ಲಿ ಭಾರತಕ್ಕೂ ಪ್ರಾಚೀನ ಗ್ರೀಸ್ ಮತ್ತು ಪರ್ಶಿಯನ್ ಸಂಸ್ಕೃತಿಗಳಿಗೂ ಇರುವ ಹೋಲಿಕೆಗಳನ್ನು ಗುರ್ತಿಸಿ ಭಾರತದ ಮೇಲೆ ವಿದೇಶಿ ಪ್ರಭಾವವನ್ನು ಒತ್ತಿ ಹೇಳಿದರು. ಅಲ್ಲದೆ ಭಾರತೀಯರು ಗ್ರೀಕೋ ಪರ್ಶಿಯನರಿಗೆ ಸಾಹಿತ್ಯ, ವಿಜ್ಞಾನ, ಕಲೆ ಮೊದಲಾದ ಕ್ಷೇತ್ರಗಳಲ್ಲಿ ಋಣಿಯಾಗಿದ್ದಾರೆ ಎಂಬ ರೀತಿಯಲ್ಲಿ ವಿಶ್ಲೇಷಿಸಲಾಯಿತು. ಇದು ಭಾರತೀಯ ವಿದ್ವಾಂಸರಲ್ಲಿ ಸುಪ್ತವಾಗಿದ್ದ ರಾಷ್ಟ್ರೀಯತೆಯನ್ನು ಬಡಿದೆಬ್ಬಿಸಿತು. ಬ್ರಿಟಿಷರ ಸಾಮ್ರಾಜ್ಯ ಶಾಹಿತ್ವ ಮತ್ತು ಪ್ರಜಾಪ್ರಭುತ್ವದ ಹಿರಿಮೆಗಳು ಭಾರತೀಯ ರಾಷ್ಟ್ರೀಯ ಇತಿಹಾಸಕಾರರು ಮೂಡಿಬರಲು ಕಾರಣವಾದವು. ಅಂತಹ ಹಿನ್ನೆಲೆಯಲ್ಲಿ ಮೂಡಿಬಂದ ಉಗ್ರ ರಾಷ್ಟ್ರೀಯರಲ್ಲಿ ಕೆ.ಪಿ.ಜಯಸ್ವಾಲ್ ಅಗ್ರಗಣ್ಯನಾಗಿದ್ದಾನೆ. ಬ್ರಿಟಿಷರು ತಮ್ಮ ಸಾಮ್ರಾಜ್ಯ ಮತ್ತು ಆಧುನಿಕ ಪಾರ್ಲಿಮೆಂಟರಿ ವ್ಯವಸ್ಥೆ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡರೆ ಜಯಸ್ವಾಲ್ ಭಾರತದ ಮೌರ್ಯ, ಗುಪ್ತ ಮತ್ತು ಇತರ ಸಾಮ್ರಾಜ್ಯಗಳ ಬಗ್ಗೆ ಹಾಗೂ ಪ್ರಾಚೀನ ಗಣರಾಜ್ಯಗಳ ಬಗ್ಗೆ ಅತ್ಯಂತ ಅಭಿಮಾನ ಪೂರ್ವಕವಾಗಿ ಹೇಳಿಕೊಂಡು ರಾಷ್ಟ್ರೀಯ ಇತಿಹಾಸ ರಚನೆಯಲ್ಲಿ ತೊಡಗಿದನು. ಇದೇ ಆರ್.ಜಿ.ಭಂಡಾರ್ಕರ್ ಮೊದಲಾದವರು ಸೌಮ್ಯ ರಾಷ್ಟ್ರೀಯವಾದಿಗಳಾಗಿದ್ದು ಭಾರತದ ರಾಷ್ಟ್ರೀಯ ಇತಿಹಾಸ ರಚಿಸಿದ್ದಾರೆ. ರಾಧಾಕುಮುದ್ ಮುಖರ್ಜಿ ಬ್ರಿಟಿಷರ ನೌಕಾ ಪ್ರಾಬಲ್ಯದ ಹೆಗ್ಗಳಿಕೆಗೆ ಪ್ರತಿಯಾಗಿ ಭಾರತದ ಪ್ರಾಚೀನ ನೌಕಾ ಪಡೆಗಳ ಬಗ್ಗೆ 'ಎನ್ಷಿಯಂಟ್ ಇಂಡಿಯನ್ ಷಿಪ್ಪಿಂಗ್ ಅಂಡ್ ಮಾರಿಟೈಮ್ ಆಕ್ಟಿವಿಟಿ' ಎಂಬ ಸಂಶೋಧನಾ ಗ್ರಂಥವನ್ನು ರಚಿಸಿದನು. ಇದು ಭಾರತೀಯರಲ್ಲಿ ಹೆಮ್ಮೆಯನ್ನು ಮೂಡಿಸಿತು.

ಧಾರ್ಮಿಕವಾಗಿ ಕ್ರೈಸ್ತ ಪಾದ್ರಿಗಳು ತಮ್ಮ ಕೃತಿಗಳಲ್ಲಿ ಭಾರತೀಯ ಸಾಮಾಜಿಕ ದೋಷಗಳನ್ನು ಅಂಧಶ್ರದ್ಧೆಗಳು, ಮೂಢನಂಬಿಕೆಗಳು, ನರಬಲಿ, ಪ್ರಾಣಿಬಲಿ, ಸತಿ ಪದ್ಧತಿ, ಜಾತಿಪದ್ಧತಿ ಮೊದಲಾದವುಗಳನ್ನು ಟೀಕಿಸಿ ಬರೆದರು. ಇಂತಹ ಬರಹಗಳು ಕೂಡ ಭಾರತೀಯರಲ್ಲಿ ರಾಷ್ಟ್ರೀಯ ಭಾವನೆಗಳನ್ನು ಕೆರಳಿಸಿದವು. ಪರಿಣಾಮವಾಗಿ ಭಾರತೀಯ ವಿದ್ವಾಂಸರು ತಮ್ಮ ಸಂಸ್ಕೃತಿಯ ಆಚಾರ ವಿಚಾರಗಳನ್ನು ಸಮರ್ಥಿಸಿಕೊಳ್ಳುವ ಪ್ರಯತ್ನದಲ್ಲಿ ಕ್ರೈಸ್ತರ ಧಾರ್ಮಿಕ ಮತ್ತು ಸಾಮಾಜಿಕ ಲೋಪದೋಷಗಳನ್ನು ಎತ್ತಿ ತೋರಿಸಿ ಅವರ ಬಾಯಿ ಮುಚ್ಚಿಸಲೆತ್ನಿಸಿದರು. ಜಾತಿ ಪದ್ಧತಿಯನ್ನು ಉದ್ಯೋಗ ಆಧಾರಿತ ಸಾಮಾಜಿಕ ವಿಭಜನೆ ಎಂದು ಸಮರ್ಥಿಸಿ (ಶ್ರಮ ವಿಭಜನೆ) ಕೊಳ್ಳಲಾಯಿತು. ಪ್ರಾಚೀನ ಕಾಲದಲ್ಲೆ ಭಾರತೀಯರು ಖಗೋಳಗಣಿತ, ಆಯುರ್ವೇದ, ಸಿಡಿಮದ್ದಿನ ಬಳಕೆ, ಪ್ಲಾಸ್ಟಿಕ್ ಸರ್ಜರಿ, ಪುಷ್ಪಕ ವಿಮಾನ ಮೊದಲಾದುವನ್ನು ಸಾಧಿಸಿದ್ದರೆಂಬ ರಾಷ್ಟ್ರಾಭಿಮಾನದ ಬರಹಗಳು ಪ್ರಕಟಗೊಂಡವು.

ಭಾರತ ವಿರೋಧಿ ಧೋರಣೆಗಳು ತಾಳಿದ ಬ್ರಿಟಿಷ್ ವಿದ್ವಾಂಸರು ಹಾಗೂ ಅವರ ಆಚಾರ ವಿಚಾರಗಳನ್ನು ಅದೇ ಧಾಟಿಯಲ್ಲಿ ಟೀಕಿಸಿದ ಭಾರತೀಯರಲ್ಲಿ ಪ್ರಮುಖರಾದವರು; ರಾಜನಾರಾಯಣ್ ಬೋಸ್, ಬಂಕಿಮ್ ಚಟರ್ಜಿ, ಬುದ್ಧದೇವ್ ಮುಖರ್ಜಿ, ಚಂದ್ರನಾಥ ಬಸು, ಇತರರು. ಇವರು ಕ್ರೈಸ್ತರ ಮೌಢ್ಯಗಳನ್ನೂ, ಕ್ಯಾಥೊಲಿಕ್ ಮತ್ತು ಪ್ರಾಟೆಸ್ಟಂಟರ ನಡುವಿನ ರಕ್ತಪಾತಗಳ, ಇನ್‌ಕ್ವಿಜಿಷನ್ ಪದ್ಧತಿ, ಇಂಡಲ್ ಜನ್ಸೆಸ್ (ಕ್ಷಮಾಪತ್ರಗಳು), ಸರ್ಫ್‌ಡಮ್ (ಗುಲಾಮಪದ್ಧತಿ) ಮೊದಲಾದ ಲೋಪದೋಷ, ಅನ್ಯಾಯ ಅಸಮಾನತೆಗಳನ್ನು ಕಟುವಾಗಿ ಟೀಕಿಸಿದರು. ಬ್ರಿಟಿಷರು ಪ್ರತಿಪಾದಿಸಿದ 'ಭಾರತಕ್ಕೆ ಆರ್ಯರ ಆಗಮನ' ಸಿದ್ಧಾಂತವನ್ನು ತಿರಸ್ಕರಿಸಿದ ರಾಷ್ಟ್ರೀಯ ಇತಿಹಾಸಕಾರರು ಆರ್ಯರು ಭಾರತದಿಂದಲೇ ಯೂರೋಪಿಗೆ ವಲಸೆ ಹೋದರೆಂದು ಸಾಕಷ್ಟು ಪುರಾವೆಗಳಿಲ್ಲದಿದ್ದರೂ ಕೂಡ ಪ್ರತಿಪಾದಿಸತೊಡಗಿದರು. ಅಲ್ಲದೆ ಕ್ಲೈವ್ ಮತ್ತು ವಾರನ್ ಹೇಸ್ಟಿಂಗ್ಸ್ ಮೊದಲಾದವರ ಕಾಲದಲ್ಲಿ ನಡೆದ ಭ್ರಷ್ಟಾಚಾರ ಮತ್ತು ಅನಂತರ ಶೋಷಣೆಗಳನ್ನು ಕಟುವಾಗಿ ಟೀಕಿಸಲಾಯಿತು. ಆದರೆ ರಾಜೇಂದ್ರಲಾಲ್ ಮಿತ್ರ, ಹರಪ್ರಸಾದ ಶಾಸ್ತ್ರಿ, ಶಾಮಲ್‌ದಾಸ್, ಆರ್.ಸಿ.ದತ್, ಭಂಡಾರ್ಕರ್, ರಾಯಚೌಧರಿ ಮೊದಲಾದವರು ಸುಧಾರಣಾತ್ಮಕವಾಗಿ ಬ್ರಿಟಿಷರ ಶೋಷಣೆ ವಿರುದ್ಧ ಸೌಮ್ಯವಾಗಿ ಆಪಾದನೆ ಮಾಡತೊಡಗಿದರು.

## 18.3 ಕೆ.ಪಿ.ಜಯಸ್ವಾಲ್ (1871–1937)

ಉತ್ತರ ಪ್ರದೇಶದ ಮಿರ್ಜಾಪುರದಲ್ಲಿ ಜನಿಸಿ, ಆಕ್ಸ್‌ಫರ್ಡಿನಲ್ಲಿ ಶಿಕ್ಷಣ ಪಡೆದು, ಕಲ್ಕತ್ತಾದ ಶ್ರೇಷ್ಠ ನ್ಯಾಯಾಲಯದಲ್ಲಿ ವಕೀಲರಾಗಿ ಕೆಲಸ ಮಾಡಿದ ಕಾಶೀ ಪ್ರಸಾದ್ ಜಯಸ್ವಾಲ್ ಸಂಸ್ಕೃತ ಪಂಡಿತರೂ, ಶಾಸನತಜ್ಞರೂ ಹಾಗೂ ನಾಣ್ಯ ಶಾಸ್ತ್ರಜ್ಞರೂ ಆಗಿದ್ದರು. ಅವರು ಒರಿಸ್ಸಾದ ಖರವೇಲನ ಶಾಸನಗಳನ್ನು ಓದಿ ಅರ್ಥ ವಿವರಣೆ ನೀಡಲು ಪ್ರಯತ್ನಿಸಿದರು. ಅವರಿಗೆ ಭಾರತದ ಅತ್ಯುನ್ನತ ಆದರ್ಶ, ಸಂಪ್ರದಾಯ ಮತ್ತು ಗತ ವೈಭವದಲ್ಲಿ ಅಚಲ ಬಂಡೆಯಂತಹ ನಂಬಿಕೆ ಇದ್ದಿತು. ಆದ್ದರಿಂದ ಭಾರತದ ಸಂಸ್ಕೃತಿಯ ಬಗ್ಗೆ ಪಾಶ್ಚಾತ್ಯ ಪಂಡಿತರು ಮಾಡಿದ್ದ ಟೀಕೆಗಳು ಅವರಿಗೆ ಹಿಡಿಸದೆ ಅವುಗಳಿಗೆ ಬಹು ಕಟುವಗಿ ಉತ್ತರವನ್ನು ನೀಡಿ ಖಂಡಿಸಲು ಯತ್ನಿಸಿದರು. ರಾಷ್ಟ್ರೀಯ ಭಾವನೆಗಳ ಪ್ರವಾಹದಲ್ಲಿ ಮುಳುಗಿಹೋಗಿದ್ದ ಭಾರತೀಯ ಇತಿಹಾಸಕಾರರಲ್ಲಿ ಪ್ರಮುಖರಾಗಿದ್ದ ಅವರು ಎಂತಹ ಕಟ್ಟಾ ರಾಷ್ಟ್ರಾಭಿಮಾನಿಯಾಗಿದ್ದರೆಂದರೆ, ಐತಿಹಾಸಿಕ ವಸ್ತುನಿಷ್ಠತೆಯು ಎಷ್ಟು ಅವಶ್ಯಕ ಎಂಬುದನ್ನು ಮರೆತು ತಕ್ಕ ಪ್ರಮಾಣವಿಲ್ಲದೆ ಹಲವಾರು ಹೇಳಿಕೆಗಳನ್ನು ನೀಡಿದರು. ಉದಾಹರಣೆಗೆ, ಭಾರತವು ಸ್ವತಂತ್ರ ರಾಷ್ಟ್ರವಾಗುವುದಕ್ಕೆ ತಕ್ಕದ್ದಾಗಿದೆ ಎಂಬುದನ್ನು ಸಮರ್ಥಿಸುವುದಕ್ಕಾಗಿ ಅವರು ಪ್ರಜಾಪ್ರಭುತ್ವದ ಕಲ್ಪನೆ ಪ್ರಾಚೀನ ಕಾಲದಲ್ಲೇ ಭಾರತದಲ್ಲಿದ್ದಿತು ಎಂಬುದಾಗಿ ವಾದಿಸಿದರು. ಅವರು ತಮ್ಮ"ಹಿಂದೂ ಪಾಲಿಟಿ" ಎಂಬ ಪ್ರಸಿದ್ಧ ಗ್ರಂಥದಲ್ಲಿ ಪ್ರಾಚೀನ ಭಾರತದಲ್ಲಿ ಪಾರ್ಲಿಮೆಂಟ್ ಬಗೆಯ ಸರ್ಕಾರವಿದ್ದಿತು. ರಾಜನ ಅಧಿಕಾರವನ್ನು ಧರ್ಮವು ನಿಯಂತ್ರಿಸುತ್ತಿದ್ದರಿಂದ ಅಲ್ಲೂ ಸಂವಿಧಾನಾತ್ಮಕ ರಾಜಪ್ರಭುತ್ವವಿತ್ತು. ಆಗಿದ್ದ ಪ್ರಜಾಧಿಪತ್ಯಗಳು ಆಧುನಿಕ ಕಾಲದ ಪ್ರಜಾಪ್ರಭುತ್ವಗಳಂತಿದ್ದವು ಎಂಬುದಾಗಿ ವಿಪರೀತ ಅಭಿಪ್ರಾಯಗಳನ್ನು ಪ್ರತಿಪಾದಿಸಿದರು. ಪ್ರಾಚೀನ ಸನ್ನಿವೇಶಗಳಿಗೆ ಆಧುನಿಕ ಕಲ್ಪನೆ ಮತ್ತು ಸಂಸ್ಥೆಗಳನ್ನು ಆರೋಪಿಸಿ ನೀಡಿರುವ ವಿವರಣೆಗಳಿಗೆ ಕಾರಣ ಅವರಿಗಿದ್ದ ತೀವ್ರ ರಾಷ್ಟ್ರಪ್ರೇಮ. ಆದ್ದರಿಂದ ಅವರ ಕೆಲವು ತೀರ್ಮಾನಗಳು ಪೂರ್ವಾಗ್ರಹಪೀಡಿತವಾಗಿದ್ದಂತೆ ಕಂಡುಬಂದಿದ್ದರಲ್ಲಿ ಆಶ್ಚರ್ಯವೇನಿಲ್ಲ.

## 18.4 ಆರ್.ಜಿ.ಭಂಡಾರ್‌ಕರ್ (1837–1925)

ಭಾರತದ ಇತಿಹಾಸಲೇಖನ ಕಲೆಯನ್ನು ವೈಜ್ಞಾನಿಕ ಹಂತಕ್ಕೆ ಒಯ್ದವರು ರತ್ನಗಿರಿ ಜಿಲ್ಲೆಯಲ್ಲಿದ್ದ ಒಬ್ಬ ಬಡಕುಟುಂಬವೊಂದರಲ್ಲಿ ಹುಟ್ಟಿ ಬೊಂಬಾಯಿಯ ಎಲ್‌ಫಿನ್‌ಸ್ಟೋನ್ ಸಂಸ್ಥೆಯಲ್ಲಿ ಶಿಕ್ಷಣ ಪಡೆದ ರಾಮಕೃಷ್ಣ ಗೋಪಾಲ್ ಭಂಡಾರ್‌ಕರ್. ಗಣಿತಶಾಸ್ತ್ರ ಅವರಿಗೆ ಬಹು ಪ್ರಿಯವಾಗಿದ್ದ ವಿಷಯವಾಗಿದ್ದಿತು. ಆದರೆ ಅವರು ಹೋವರ್ಡನ ಪ್ರಭಾವಕ್ಕೆ ಒಳಗಾಗಿ ಸಂಸ್ಕೃತ ಹಾಗೂ ಭಾರತೀಯ ಸಂಸ್ಕೃತಿಯ ಅಧ್ಯಯನದಲ್ಲಿ ಅತ್ಯಾಸಕ್ತಿ ವಹಿಸಿ, ಸಂಸ್ಕೃತ ಹಾಗೂ ಪಾಳಿ ಭಾಷೆಯಲ್ಲಿ ಅಗಾಧ ಪಾಂಡಿತ್ಯವನ್ನು ಸಂಪಾದಿಸಿಕೊಂಡರು. ಆದ್ದರಿಂದ ಅವರು ಪೂನಾದ ದಖನ್ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾದುದರಲ್ಲಿ ಆಶ್ಚರ್ಯವೇನಿಲ್ಲ. ನಂತರ 1893 ರಿಂದ 1895 ರವರೆಗೆ ಅವರು ಬೊಂಬಾಯಿ ವಿಶ್ವವಿದ್ಯಾನಿಲಯದ ಕುಲಪತಿಗಳಾದರು. 1903 ರಲ್ಲಿ ವೈಸ್‌ರಾಯನ ಶಾಸನಸಭೆಯ ಸದಸ್ಯರಾದರು ಮತ್ತು 1911 ರಲ್ಲಿ ದೆಹಲಿ ದರ್ಬಾರಿನಲ್ಲಿ ನೈಟ್ ಪದವಿಯನ್ನು ಪಡೆದರು. ದರ್ಶನ ಹಾಗೂ ಮತಧರ್ಮ ಶಾಸ್ತ್ರದಲ್ಲಿ ಅದ್ವಿತೀಯ ಪಾಂಡಿತ್ಯವನ್ನು ಪಡೆದಿದ್ದ ಅವರು ತಮ್ಮ ಕಾಲದಲ್ಲಿ ಪ್ರಚಲಿತವಾಗಿದ್ದ ಅನೇಕ ಸಂಪ್ರದಾಯಗಳು ಪ್ರಾಚೀನ ಹಿಂದೂ ಧರ್ಮಕ್ಕೆ ಅಪರಿಚಿತವಾಗಿದ್ದವು ಎಂಬುದನ್ನು ವಸ್ತುನಿಷ್ಠವಾಗಿ ಪರಿಶೀಲಿಸಿ ಮನದಟ್ಟು ಮಾಡಿಕೊಂಡು, ವೈಜ್ಞಾನಿಕ ರೀತಿಯಲ್ಲಿ ಹಿತಕರವಾಗಿದ್ದ ಸಾಮಾಜಿಕ ಹಾಗೂ ಧಾರ್ಮಿಕ ಬದಲಾವಣೆಗಳನ್ನು ಉಂಟುಮಾಡಬೇಕೆಂಬುದಾಗಿ ಬಯಸಿದರು. ಪ್ರಾಚೀನ ಕಾಲದಿಂದ ಹಿಡಿದು ಮುಸ್ಲಿಂ ಆಕ್ರಮಣದವರೆಗೆ ದಖನ್‌ನ ಬಗ್ಗೆ ಒಂದು ಕ್ರಮಬದ್ಧ ಕಥನವನ್ನು ನೀಡಿರುವ ಪ್ರಥಮ ಚರಿತ್ರೆಯಾಗಿರುವ ಮತ್ತು ಅಲ್ಲಿಯವರೆಗೆ ದೊರಕಿದ್ದ ಎಲ್ಲಾ ಆಧಾರಗ್ರಂಥಗಳ ಸಂಪೂರ್ಣ ಹಾಗೂ ವಿಮರ್ಶಾತ್ಮಕ ವಿಶ್ಲೇಷಣೆಯ ಮೇಲೆ ಆಧಾರಿತವಾಗಿರುವ ಅರ್ಲಿ ಹಿಸ್ಟೊರಿ ಆಫ್ ದಿ ದಖನ್ (1884), ಮೌರ್ಯರ ಕಾಲದಿಂದ ಹಿಡಿದು ಗುಪ್ತರ ಕಾಲದ ಅಂತ್ಯದವರೆಗೆ ಭಾರತ ಚರಿತ್ರೆಯ ನಿರೂಪಣೆಯಾಗಿರುವ ಎ ಪೀಪ್ ಇನ್ ಟು ದಿ ಅರ್ಲಿ ಹಿಸ್ಟೊರಿ ಆವ್ ಇಂಡಿಯಾ (1890) ಅವರು ಬರೆದ ಎರಡು ಉತ್ತಮ ಇತಿಹಾಸಕೃತಿಗಳು. ಅವುಗಳಲ್ಲದೆ ಅವರು ವೈಷ್ಣವಿಸಂ ಶೈವಿಸಂ ಆ್ಯಂಡ್ ಮೈನರ್ ರಿಲಿಜಸ್ ಸಿಸ್ಟೆಂಸ್ ಎಂಬ ಇನ್ನೊಂದು ಪುಸ್ತಕವನ್ನು ಪ್ರಕಟಿಸಿದರು. ಮತ್ತು ರಾಯಲ್ ಏಷಿಆಟಿಕ್ ಸೊಸೈಟಿ ನಿಯತಕಾಲಿಕ, ಇಂಡಿಯನ್ ಆನ್ಟಿಕ್ವರಿ ಮತ್ತು ಎಫಿಗ್ರಾಫಿಯಾ ಇಂಡಿಕಾಗಳಿಗೆ ಹಲವಾರು ಲೇಖನಗಳನ್ನು ಬರೆದುಕೊಟ್ಟರು.

ಇತಿಹಾಸ ರಚನೆಯಲ್ಲಿ ವಿಶ್ಲೇಷಣಾತ್ಮಕ ವಿಮರ್ಶಾತ್ಮಕ ಕ್ರಮಗಳನ್ನು ಹಾಗೂ ತತ್ತ್ವಗಳನ್ನು ಬಳಸಿ, ಎಲ್ಲಾ ಮೂಲಾಧಾರಗಳ ವಿವರಗಳನ್ನು ಅತ್ಯಂತ ಎಚ್ಚರಿಕೆಯಿಂದ ಪರಿಶೀಲಿಸಿ ತಾರ್ಕಿಕ ತೀರ್ಮಾನಗಳನ್ನು ನೀಡಿದ್ದ ಮತ್ತು ಸರಳ ಹಾಗೂ ವೈಜ್ಞಾನಿಕ ಸುಂದರ ಶೈಲಿಯನ್ನು ಅಳವಡಿಸಿಕೊಂಡ ಪ್ರಥಮ ಭಾರತೀಯ ಇತಿಹಾಸಕಾರರು ಭಂಡಾರ್‌ಕರ್. ಅವರ ಬರಹಗಳಲ್ಲಿ ನಿಷ್ಪಕ್ಷಪಾತತೆ, ವಸ್ತುನಿಷ್ಠತೆ, ವಾಸ್ತವಿಕ ಪ್ರಜ್ಞೆ ಹಾಗೂ ವಿವೇಚನೆ ಪ್ರಧಾನವಾಗಿದ್ದುವು. ಅವರು ಭಾರತದ ಪುರಾತನ ಅವಶೇಷಗಳ ಅಧ್ಯಯನದಲ್ಲಿ ಆ ಪಾಶ್ಚಾತ್ಯ ವಿಧಾನಗಳನ್ನು ಬಳಸಿದ್ದ ಮತ್ತು ಪಾಶ್ಚಾತ್ಯ ವಿಷಯ ಹಾಗೂ ಮೌಲ್ಯಗಳನ್ನು ಪರಿಶೀಲಿಸಿದ ಪ್ರಥಮ ಭಾರತೀಯ ಪಂಡಿತರು. ಆದ್ದರಿಂದ ಅವರಿಗೆ ಬ್ರಿಟಿಷರೇ ಶ್ರೇಷ್ಠ ಅಥವಾ ಭಾರತೀಯರೇ ಅತ್ಯುತ್ತಮರೆಂಬ ವಾದಗಳು ಸರಿದೋರಲಿಲ್ಲ. ಧಾರ್ಮಿಕ ಮನೋವೃತ್ತಿಯನ್ನು ಹೊಂದಿದ್ದರೂ ಅವರು ಐತಿಹಾಸಿಕ ದೃಷ್ಟಿಯನ್ನು ಅದು ಮಂಕಾಗಿಸುವುದಕ್ಕೆ ಅವಕಾಶ ಕೊಡಲಿಲ್ಲ. ಒಟ್ಟಿನಲ್ಲಿ, ವಸ್ತುನಿಷ್ಠ ದೃಷ್ಟಿಯಿಂದ

ಇತಿಹಾಸವನ್ನು ರಚಿಸಲು ಪ್ರಯತ್ನಿಸಿ ಯಶಸ್ವಿಯಾದ ಕೆಲವೇ ಭಾರತೀಯ ಇತಿಹಾಸಕಾರರಲ್ಲಿ ಭಂಡಾರ್‌ಕರ್ ಒಬ್ಬರಾಗಿದ್ದರು. ಭಾಷಾಂ ಪ್ರಕಾರ, ಅವರು ಪ್ರಾಚೀನ ಭಾರತವನ್ನು ಕುರಿತು ಬರೆದ ಮೊದಲಿನ ಹಾಗೂ ಪ್ರಮುಖ ಸ್ವದೇಶಿ ಇತಿಹಾಸಕಾರರು. ಪ್ರಾಚೀನ ಭಾರತವನ್ನು ಕುರಿತು ಇತಿಹಾಸವನ್ನು ಬರೆದ ಯೂರೋಪಿನ ಲೇಖಕರಿಗಿಂತ ಅವರು ಇನ್ನೂ ವಿಮರ್ಶಾತ್ಮಕವಾಗಿ ತಮ್ಮ ಆಧಾರ ಗ್ರಂಥಗಳನ್ನು ಪರಿಶೀಲಿಸಿದರು. ಅವರನ್ನು ಇತಿಹಾಸ ಅಧ್ಯಯನ ಹಾಗೂ ರಚನೆಯಲ್ಲಿ ರಾಂಕೆಯ ವಿಧಾನಗಳನ್ನು ಬಳಸಿದ ಪ್ರಥಮ ಭಾರತೀಯ ಪಂಡಿತರು, ಅಥವಾ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಭಾರತದ ರಾಂಕೆಯೇ ಅವರು ಎಂಬುದಾಗಿ ಕರೆಯಬಹುದು.

## ಡಾ.ಜಿ.ಎಸ್.ದೇಸಾಯ್ (1865–1965)

ಮಹಾರಾಷ್ಟ್ರದ ಇನ್ನೊಬ್ಬ ಮಹಾ ಚರಿತ್ರಲೇಖಕರೇ ಗೋವಿಂದ ಸಖಾರಾಂ ಸರ್ ದೇಸಾಯ್, ಅವರ ಆತ್ಮಕಥೆಯ ಪ್ರಕಾರ, ರತ್ನಗಿರಿ ಜಿಲ್ಲೆಯ ಹಸೋಲ್ ಎಂಬಲ್ಲಿ 1865 ರ ಮೇ 17ರಂದು ಜನಿಸಿದ ಅವರು ಪೂನಾದ ಫರ್ಗೂಸನ್ ಕಾಲೇಜಿನಲ್ಲಿ ಉನ್ನತ ಶಿಕ್ಷಣವನ್ನ ಪಡೆದು ಬೊಂಬಾಯಿಯ ಎಲ್‌ಫಿನ್‌ಸ್ಟೋನ್ ಕಾಲೇಜಿನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿ 1888 ರಲ್ಲಿ ಪದವೀಧರರಾದರು. ಅವರು ಅತ್ಯಂತ ಕಷ್ಟದೆಸೆಯಿಂದ ಮೇಲೇರಿ ಬಂದವರು. 1889 ರಿಂದ 1925 ರವರೆಗೆ ಅವರ ಬರೋಡಾದ ಮಹಾರಾಜರಿಗೆ ಓದುಗರಾಗಿ, ಗುಮಾಸ್ತರಾಗಿ, ನಂತರ ರಾಜಕುಮಾರರಿಗೆ ಉಪಾಧ್ಯಾಯರಾಗಿ, ಕೊನೆಗೆ ಅವರ ವೈಯುಕ್ತಿಕ ಲೆಕ್ಕಪತ್ರಗಳ ಮೇಲ್ವಿಚಾರಕರಾಗಿ ಸೇವೆ ಸಲ್ಲಿಸಿದರು. ಅವರು ರಾಜಕುಮಾರರಿಗೆ ಇತಿಹಾಸ ಪಾಠವನ್ನು ಹೇಳಿಕೊಡುವುದಕ್ಕಾಗಿ ಮಾಡಿಕೊಂಡಿದ್ದ ಟಿಪ್ಪಣಿಗಳು 12 ಸಂಪುಟಗಳಲ್ಲಿ ರಿಯಾಸತ್ ಎಂಬ ಹೆಸರಿನಿಂದ ಪ್ರಕಟವಾದವು. ಮಾಧ್ಯಮಿಕ ಆಧಾರಗಳನ್ನು ಅವಲಂಬಿಸಿ ಬರೆಯಲಾಗಿದ್ದ ಮೊದಲ 2 ಸಂಪುಟಗಳು ಮುಸ್ಲಿಂ ಯುಗಕ್ಕೆ, ಇನ್ನೆರಡು ಬ್ರಿಟಿಷ್ ಕಾಲಕ್ಕೆ ಮತ್ತು ಮರಾಠಿ ಭಾಷೆಯಲ್ಲಿದ್ದ ಹಾಗೂ ಹಂಚಿಹೋಗಿದ್ದ ಎಲ್ಲಾ ಸಂಬಂಧಪಟ್ಟ ವಿಷಯ ಸಾಮಗ್ರಿಗಳನ್ನು ಹೊಂದಿದ್ದ ಮಿಕ್ಕ 8 ಸಂಪುಟಗಳ ಮರಾಠಕಾಲಕ್ಕೆ ಸಂಬಂಧಿಸಿದ್ದುವು ಮತ್ತು ಈ 8 ಸಂಪುಟಗಳು ಮೊದಲ ಎರಡು ರಿಯಾಸತ್‌ಗಳಿಗಿಂತ ಅತ್ಯುತ್ತಮವಾಗಿದ್ದುವು. ಈ ಸಂಪುಟಗಳ ರಚನೆಯ ಅವರನ್ನು ರಿಯಾಸತ್‌ಕರ್ ಎಂಬುದಾಗಿ ಕರೆಯಲಾಯಿತು.

ಹೀಗೆ ಮೊದಮೊದಲು ಇತಿಹಾಸ ಅಧ್ಯಯನ ಕೈಗೊಂಡ ದೇಸಾಯಿಯವರನ್ನು ಕೊನೆಗೆ ಚರಿತ್ರೆಯೇ ಸಂಪೂರ್ಣವಾಗಿ ಆಕರ್ಷಿಸಿಬಿಟ್ಟಿತು. ಅವರು ಷಾಹಜಿಯ ಕಾಲದಿಂದ ಹಿಡಿದು 2ನೆಯ ಬಾಜೀರಾಯನ ಪತನದವರೆಗೆ ಸಮಗ್ರ ಮರಾಠ ಇತಿಹಾಸವನ್ನು ಬರೆಯಬೇಕೆಂದು ಯೋಚಿಸಿ, ಅದರ ಪ್ರಕಾರ ಮೊದಲು ಅದನ್ನು ಮರಾಠಿ ಭಾಷೆಯಲ್ಲಿ 8 ಸಂಪುಟಗಳಲ್ಲಿ ಬರೆದು, ನಂತರ ನ್ಯೂ ಹಿಸ್ಟೊರಿ ಆವ್ ದಿ ಮರಾಠಸ್ ಎಂಬ ಹೆಸರಿನಿಂದ 3 ಸಂಪುಟಗಳಲ್ಲಿ ಅದನ್ನು ಇಂಗ್ಲಿಷ್ ಭಾಷೆಗ ಭಾಷಾಂತರ ಮಾಡಿದರು. ಮುಖ್ಯವಾಗಿ ಮರಾಠಿ ಆಧಾರಗಳನ್ನು, ಮಾಧ್ಯಮಿಕ ಆಧಾರಗಳಾಗಿದ್ದ ಡಚ್, ಫ್ರೆಂಚ್ ಮತ್ತು ಪೋರ್ಚುಗೀಸ್ ಬರಹಗಾರರ ಕೃತಿಗಳನ್ನು ಮತ್ತ ಡಫ್ ರಾನಡೆ, ಸರ್ಕಾರ್ ಮುಂತಾದವರು ಬರೆದಿರುವ ಗ್ರಂಥಗಳನ್ನು

ಅವಲಂಬಿಸಿ ಬರೆದಿರುವ ಪ್ರಥಮ ಸಂಪುಟದಲ್ಲಿ ಶಿವಾಜಿಯ ಬಗ್ಗೆ; ಪ್ರಧಾನವಾಗಿ ಮರಾಠಿ ಹಾಗೂ ಪರ್ಷಿಯನ್ ಆಧಾರ ಗ್ರಂಥಗಳ ಮೇಲೆ ಅವಲಂಬಿತವಾಗಿರುವ ದ್ವಿತೀಯ ಸಂಪುಟದಲ್ಲಿ ಮರಾಠ ರಾಜ್ಯ ವಿಸ್ತರಣೆಯ ಬಗ್ಗೆ ಮತ್ತು ಸರ್ಕಾರಿ ಕಾಗದ ಪತ್ರ ಹಾಗೂ ದಾಖಲೆಗಳ ಆಧಾರದ ಮೇಲೆ ರಚಿಸಲಾದ ತೃತೀಯ ಸಂಪುಟದಲ್ಲಿ ಮರಾಠ ಅಧಿಕಾರ ಸೂರ್ಯನ ಅಸ್ತಮದ ಬಗ್ಗೆ ಸವಿಸ್ತರ ಚಿತ್ರಣಗಳನ್ನು ನೋಡಬಹುದು. ಅವರ ಪಾಟ್ನ ವಿಶ್ವವಿದ್ಯಾನಿಲಯದಲ್ಲಿ ಮೇಯ್ನ್ ಕರೆಂಟ್ ಆವ್ ಮರಾಠ ಹಿಸ್ಟೊರಿ ಎಂಬ ಶಿರೋನಾಮೆಯಲ್ಲಿ ಮಾಡಿದ ಏಳು ಉಪನ್ಯಾಸಗಳು ಮರಾಠ ಚರಿತ್ರೆಯ ಪ್ರಧಾನ ವ್ಯಕ್ತಿ ಹಾಗೂ ಘಟನೆಗಳ ಗಚ್ಚದ್ ವಿಮರ್ಶೆಯಾಗಿದೆ.

ದೇಸಾಯ್ ಅನೇಕ ಮೂಲ ಕೃತಿಗಳನ್ನು ಸಂಪಾದಿಸಿದರು. ಅವುಗಳಲ್ಲಿ ಐದು ಸಂಪುಟಗಳ ಪೂನಾ ರೆಸಿಡೆನ್ಸಿ ಕಾರಿಸ್ಪಾಂಡನ್ಸ್, ನಲವತ್ತೈದು (45) ಸಂಪುಟಗಳ ಸಿಲೆಕ್ಷನ್ಸ್ ಫ್ರಾಮ್ ಪೇಷ್ವಾ ದಫ್ತರ್ ಒಂದು ಮೂಲ ದಾಖಲೆಗಳ ಸಂಪುಟ ಮತ್ತು ಐತಿಹಾಸಿಕ್ ಪತ್ರ ವ್ಯವಹಾರ್ ಮುಖ್ಯವಾದುವು. ಅವುಗಳನ್ನು ಸರ್ಕಾರ್ ಅವರು ಪ್ರಶಂಸಿಸಿದ್ದಾರೆ. ಇದರೊಂದಿಗೆ ದೇಸಾಯ್ ಮಹಾರಾಜರ ಆದೇಶದ ಮೇರೆಗೆ ಮ್ಯಾಕೆವಲ್ಲಿಯ ದಿ ಪ್ರಿನ್ಸ್ ಎಂಬ ಗ್ರಂಥವನ್ನು ರಾಜಧರ್ಮ ಎಂದೂ ಮತ್ತು ಸೀಲಿಯ ಎಕ್ಸ್‌ಪ್ಯಾಂಷನ್ ಆವ್ ಇಂಗ್ಲೆಂಡ್ ಎಂಬ ಕೃತಿಯನ್ನ ಇಂಗ್ಲೆಂಡ್ ದೇಶಾಚಾರ್ ವಿಸ್ತಾರ್ ಎಂಬುದಾಗಿ ಮರಾಠಿ ಭಾಷೆಗೆ ತರ್ಜುಮೆ ಮಾಡಿದರು. ಅವರ ಆಪ್ತಮಿತ್ರ ಸರ್ಕಾರ್ ಜಾಗರೂಕ ಆತ್ಮ ವಿಮರ್ಶೆ, ವಸ್ತುನಿಷ್ಠತೆ ಅವರ ಬರಹಗಳ ಪ್ರಧಾನ ಲಕ್ಷಣಗಳಾಗಿವೆ ಎಂಬುದಾಗಿ ಹೇಳಿರುವುದು ಒಂದು ಅಭಿನಂದನೆಯೇ ಹೊರತು ವಿಮರ್ಶೆಯಲ್ಲ. ಕಾರಣ ಸರ್‌ದೇಸಾಯಿ ಇತಿಹಾಸಕಾರರಾಗಿ ತರಬೇತನ್ನು ಪಡೆದವರಲ್ಲ. ಅವರು ಆಧಾರಗಳನ್ನು ಬಳಸಿಕೊಳ್ಳುವಾಗ ಹೆಚ್ಚಾಗಿ ತಮ್ಮ ಸಾಮಾನ್ಯ ಜ್ಞಾನವನ್ನು ಅವಲಂಬಿಸಿದ್ದರು. ಆದ್ದರಿಂದ ಅವರು ಮರಾಠರ ಪ್ರತಿ ಹೆಚ್ಚಿನ ಒಲವನ್ನು ತೋರಿದರು. ಮರಾಠರ ಇತಿಹಾಸದ ಉಜ್ವಲ ಮುಖವನ್ನು ಎತ್ತಿ ತೋರುವುದೇ ಅವರ ಉದ್ದೇಶವಗಿದ್ದಿತು. ಅವರು ಮರಾಠ ನಾಯಕರನ್ನು ಶ್ಲಾಘಿಸುವಾಗ ವೈಜ್ಞಾನಿಕ ಮೇರೆಗಳನ್ನು ಮೀರಿರುವಂತೆ ತೋರುತ್ತದೆ. ಅವರು ಶಿವಾಜಿಯ ಬಗ್ಗೆ ಚಿತ್ರಣವು ಕಾರ್ಲೈಲನ ಕಲ್ಪನೆಗೆ ಅನುಗುಣವಾಗಿದೆ. ಅವರು ಮುಸ್ಲಿಂ ಹಾಗೂ ಬ್ರಿಟಿಷರ ಆಳ್ವಿಕೆಯ ಬಗ್ಗೆ ವಿಚಾರ ಮಾಡುವಾಗ ನಿಷ್ಪಕ್ಷಪಾತ ದೃಷ್ಟಿಯನ್ನು ಅಳವಡಿಸಿಕೊಂಡಿದ್ದಂತೆ ತೋರುವುದಿಲ್ಲ. ಅವರು ಆಕ್ರಮಣಕಾರಿ ಲಕ್ಷಣದಿಂದ ಕೂಡಿದ್ದ ರಾಷ್ಟ್ರೀಯತೆಯ ಪ್ರಭಾವಕ್ಕೆ ಒಳಗಾಗಿದ್ದರು. ಅವರು ತಮ್ಮ ಅಧ್ಯಯನದಲ್ಲಿ ಅರ್ಥಶಾಸ್ತ್ರ, ಸಮಾಜ ವಿಜ್ಞಾನ ಹಾಗೂ ಮಾನವಶಾಸ್ತ್ರ, ನಾಣ್ಯ ವಿಜ್ಞಾನ, ಶಾಸನಶಾಸ್ತ್ರ ಇತ್ಯಾದಿಗಳ ಜ್ಞಾನ ಹಾಗೂ ವಿಧಾನಗಳನ್ನು ಬಳಸಿಕೊಳ್ಳಲಿಲ್ಲ. ಅವರ ಕೃತಿಯಲ್ಲಿ ಮರಾಠರ ಸಾಮಾಜಿಕ ಇತಿಹಾಸವಾಗಲಿ, ಆರ್ಥಿಕ ವಿವರಗಳಾಗಲಿ ಮತ್ತು ಸಂಸ್ಕೃತಿ ಚರಿತ್ರೆಯಾಗಲಿ ಕಂಡುಬರುವುದಿಲ್ಲ.

ಇತಿಮಿತಿಗಳೇನೇ ಇರಲಿ, ಮರಾಠರ ಬಗ್ಗೆ ವ್ಯಾಪಕ ಹಾಗೂ ಕ್ರಮಬದ್ಧ ಚರಿತ್ರೆಯನ್ನು ರಚಿಸಿದ ಏಕಮಾತ್ರ ಇತಿಹಾಸಕಾರರು ಸರ್‌ದೇಸಾಯ್, ಅವರಿಗೆ ಆಧುನಿಕ ಭಾರತದ ಇತಿಹಾಸಲೇಖನ ಕಲೆಯಲ್ಲಿ ಪ್ರಮುಖ ಸ್ಥಾನವಿದೆ. ಅವರು ಚರಿತ್ರೆಯು ವ್ಯಾವಹಾರಿಕವಾಗಿ ಉಪಯುಕ್ತವಾದುದು ಎಂಬುದನ್ನು ಒಪ್ಪಿಕೊಂಡಿದ್ದರು. ಇಂದಿನ ಉಪಯೋಗಕ್ಕಾಗಿ ಗತಕಾಲದ ಪಟಗಳನ್ನು ತಿಳಿಸಬೇಕಾದುದು ಚರಿತ್ರೆಯ ನಿಜವಾದ ಕಾರ್ಯ ಹಾಗೂ ಮರಾಠ ಇತಿಹಾಸದಿಂದ ತಿಳಿದುಬಂರುವ ರಾಜಕೀಯ ಪಾಠವು ಭಾರತಕ್ಕೆ ಅವಶ್ಯಕ

ಎಂದು ಅವರು ಎಣಿಸಿದರು. ಅವರ ಪ್ರಕಾರ ಇತಿಹಾಸದಲ್ಲಿ ಅನಿಶ್ಚಯತೆ ನಾಟಕವನ್ನು ಕಾಣಬಹುದು. ವಿಕಾಸ ಹಾಗೂ ಪ್ರಗತಿಯ ಭಾವನೆಗಳಿಂದಲೂ ಅವರು ಪ್ರಭಾವಿತರಾಗಿದ್ದರು. ಇತಿಹಾಸದಲ್ಲಿ ವ್ಯಕ್ತಿಯ ಪಾತ್ರ ಪ್ರಮುಖ ಎಂಬುದಾಗಿ ಎಣಿಸಿದರೂ, ಅವರು ಇತಿಹಾಸ ವಾಹಿನಿಯ ಮುನ್ನಡೆಗೆ ಕಾರಣರಾಗಿದ್ದ ಸಾವಿರಾರು ಸಾಮಾನ್ಯ ಜನರ ತ್ಯಾಗ ಹಾಗೂ ಸೇವೆಯ ಬೆಲೆ ಎಷ್ಟೆಂಬುದನ್ನು ಅರಿತಿದ್ದರು. ಯಥಾರ್ಥ ನಿರೂಪಣೆ ನೀಡಲು ಮಾಡಿದ ಸತತ ಪ್ರಯತ್ನ, ನಿಷ್ಠೆ, ಪ್ರಾಮಾಣಿಕತೆ, ವಿಷಯಗಳನ್ನು ಆಳವಾಗಿ ಪರಿಶೀಲಿಸುವ ಪ್ರವೃತ್ತಿ ಇತ್ಯಾದಿಗಳು ಅವರ ಕೃತಿಗಳ ನಿರ್ಧಿಷ್ಟ ಲಕ್ಷಣಗಳಾಗಿವೆ. ಮೊದಮೊದಲು ಶೈಲಿಯ ವಿಚಾರದಲ್ಲಿ ಅವರಿಗೆ ಸ್ವಲ್ಪ ತೊಂದರೆಯಾದರೂ ತಮ್ಮ ಆತ್ಮೀಯ ಮಿತ್ರ ಸರ್ಕಾರ್‌ರ ಸಲಹೆ ಮೇರೆಗೆ ಯೂರೋಪಿನ ವಿದ್ವಾಂಸರ ಗ್ರಂಥಗಳನ್ನು ಓದಿ ಉತ್ತಮಪಡಿಸಿಕೊಂಡರು. ನಮ್ರತೆ ಅವರ ಇನ್ನೊಂದು ಪ್ರಶಂಸಾರ್ಹ ಗುಣ. ಅವರು ತಾವು ಕೇವಲ ಪಾಯದ ಕೆಲಸ ಮಾಡಿರುವುದಾಗಿ ಅಂದರೆ ಪೀಠಿಕಾ ಕಾರ್ಯ, ಮಾಡಿರುವುದಾಗಿ ಹೇಳಿಕೊಂಡಿದ್ದಾರೆ.

## 18.5 ಸರ್‌ಜಾದೂನಾಥ್ ಸರ್ಕಾರ್ (1870– 1958)

ಆಧುನಿಕ ಭಾರತದ ವೈಜ್ಞಾನಿಕ ಇತಿಹಾಸಲೇಖನ ಕಲೆಯ ಜನಕ ಜಾದೂನಾಥ್ ಸರ್ಕಾರ್, ಬಂಗಾಳದ ರಾಜ್‌ಷಹಿ ಜಿಲ್ಲೆಯಲ್ಲಿ ಉದಾರವಾದಿ ಹಾಗೂ ಧರ್ಮನಿಷ್ಠ ಜಮೀನ್ದಾರ್ ರಾಜ್‌ಕುಮಾರ್ ಸರ್ಕಾರ್‌ರ ಮೂರನೆಯ ಮಗನಾಗಿ 1870 ರ ಡಿಸೆಂಬರ್ 10 ರಂದು ಹುಟ್ಟಿದ ಸರ್ಕಾರ್ ರಾಜ್‌ಷಹಿಯಲ್ಲಿ ಪ್ರಾರಂಭ ಶಿಕ್ಷಣ ಪಡೆದು, ನಂತರ ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜ್ ಹಾಗೂ ವಿಶ್ವವಿದ್ಯಾನಿಲಯದಲ್ಲಿವಿದ್ಯಾಭ್ಯಾಸವನ್ನು ಮುಂದುವರಿಸಿ ಅತ್ಯುತ್ತಮ ವಿದ್ಯಾರ್ಥಿಯಾಗಿ ಇಂಗ್ಲಿಷ್ ಹಾಗೂ ಇತಿಹಾಸ ವಿಷಯಗಳಲ್ಲಿ ಘನ ಪಾಂಡಿತ್ಯ ಪದವಿಯನ್ನು ಪಡೆದು 1892 ರಲ್ಲಿ ಇಂಗ್ಲಿಷ್‌ನಲ್ಲಿ ಎಂ.ಎ.ಪದವೀಧರರಾದರು. ನಂತರ ರಿಪ್ಪನ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಕಾರ್ಯವನ್ನು ಆರಂಭಿಸಿದ ಅವರು ಕ್ರಮೇಣ ಚರಿತ್ರೆಯಿಂದ ಆಕರ್ಷಿತರಾಗಿ ಕೊನೆಗೆ ಇತಿಹಾಸದ ಅಧೀದೇವತೆ ಕ್ಲಯೊವಿನ ಪರಮಭಕ್ತರಾದರು. 1898 ರಿಂದ 1981 ರವರೆಗೆ ಬಂಗಾಳದ ಶಿಕ್ಷಣ ಇಲಾಖೆಯಲ್ಲಿ ಯಶಸ್ವಿಯಾಗಿ ಕರ್ತವ್ಯವನ್ನು ನೆರವೇರಿಸಿ, ಬಡತಿಯನ್ನು ಪಡೆದು 1926 ರಲ್ಲಿ ನಿವೃತ್ತರಾದ ಅವರು ತಮ್ಮ ಅಸಾಧಾರಣ ಪ್ರತಿಭೆಯ ಫಲವಾಗಿ 2 ವರ್ಷಗಳ ಕಾಲ ಕಲ್ಕತ್ತಾ ವಿಶ್ವವಿದ್ಯಾನಿಲಯದ ಕುಲಪತಿಗಳಾದರು. ಇನ್ನೊಂದು ಎರಡು ವರ್ಷಗಳು ಕುಲಪತಿಗಳಾಗಿರಬೇಕೆಂಬ ಸರ್ಕಾರದ ಪ್ರಾರ್ಥನೆಯನ್ನ ನಿರಾಕರಿಸಿ ಅವರು 1928 ರಿಂದ 1958 ರವರೆಗೆ ಇತಿಹಾಸದ ಅಧ್ಯಯನಗಳಿಗೆ ತಮ್ಮನ್ನು ಪೂರ್ತಿಯಾಗಿ ಅರ್ಪಿಸಿಕೊಂಡರು.

ಸರ್ಕಾರ್ ಅವರ ಮೇಲೆ ಅಪಾರ ಪ್ರಭಾವವನ್ನು ಬೀರಿ ಅವರನ್ನು ಅದ್ವಿತೀಯ ಚರಿತ್ರಲೇಖಕರನ್ನಾಗಿ ರೂಪಿಸಿದ ಅಂಶಗಳು ಮೂರು. ಮೊದಲನೆಯದು ಅವರ ಕೌಟುಂಬಿಕ ಪರಿಸರ, ಅವರ ತಂದೆ ಅವರಲ್ಲಿ ಇತಿಹಾಸದ ಬಗ್ಗೆ ಅತ್ಯಾಸಕ್ತಿ ಮೂಡುವಂತೆ ಮಾಡಿದರು ಹಾಗೂ ಅವರ ಅಮೂಲ್ಯ ಗ್ರಂಥಾಲಯ ಸರ್ಕಾರ್‌ರ ಮೇಲೆ ಬಹು ಹಿತರಕವಾಗಿದ್ದ ಪರಿಣಾಮವನ್ನು ಬೀರಿತು. ಎರಡನೆಯದಾಗಿಸರ್ಕಾರ್ ತಾವು ಅಧ್ಯಯನ ಮಾಡಿದ ಯೂರೋಪಿನ ಹಂಟ್, ಕಾರ್ಲೈಲ್, ರಾಂಕೆ, ಆಕ್ಟನ್, ಮೇಟ್‌ಲ್ಯಾಂಡ್, ಮಕಾಲೆ,

ಗಿಬನ್, ಗ್ರೀನ್ ಮುಂತಾದ ಲೇಖಕರ ಕೃತಿಗಳಿಂದ ಬಹುಮಟ್ಟಿಗೆ ಪ್ರಭಾವಿತರಾದರು. ಅವರು ಆ ಲೇಖಕರ ಪ್ರಖ್ಯಾತಿಗೆ ಕಾರಣವಾಗಿದ್ದ ಎಲ್ಲಾ ಮುಖ್ಯಾಂಶಗಳನ್ನು ತಮ್ಮದನ್ನಾಗಿಸಿಕೊಂಡು ಬೌದ್ಧಿಕವಾಗಿ ಬೆಳೆದರು. ಅವರ ಪಶ್ಚಿಮ ರಾಷ್ಟ್ರಗಳ ಇತಿಹಾಸ ನಿಧಿಯ ಫಲ, ಅಲ್ಲಿನ ತಿರುಳೇ ಆದರು ಯೂರೋಪಿನ ಪಾಂಡಿತ್ಯದ ಭಾರತೀಯ ರೂಪವಾದರು. ಮೂರನೆಯದಾಗಿ ಭಾರತದ ಶೋಚನೀಯ ಪರಿಸ್ಥಿತಿ ಅವರ ಮೇಲೆ ಗಾಢ ಪ್ರಭಾವನ್ನು ಬೀರಿತು. ಈ ಎಲ್ಲಾ ಪ್ರಭಾವಗಳಿಗೆ ಒಳಗಾಗಿ ಅಪೂರ್ವ ರೀತಿಯಲ್ಲಿ ಬೆಳೆದ ಅವರು ಇತಿಹಾಸ ಕ್ಷೇತ್ರಕ್ಕೆ ಅಮೂಲ್ಯ ಕಾಣಿಕೆ ಕೊಟ್ಟರು.

ಮೊಘಲ್ ಅಧ್ಯಯನ, ಮರಾಠ ಅಧ್ಯಯನ ಹಾಗೂ ಇತರ ಕೆಲಸಗಳೆಂಬುದಾಗಿ ಅವರ ಬರವಣಿಗೆಯನ್ನು ಮೂರು ಭಾಗಗಳಾಗಿ ವಿಭಾಗಿಸಬಹುದು. ಎ.ಎಲ್.ಶ್ರೀವಾಸ್ತವ ಅವರ ಪ್ರಕಾರ, ಮೊದಲು ಸರ್ಕಾರ್‌ರವರು 1857 ರಲ್ಲಿ ಸಂಭವಿಸಿದ ಮಹಾ ಘಟನೆಯನ್ನು ತಮ್ಮ ಅಧ್ಯಯನ ವಿಷಯವಾಗಿ ಆರಿಸಿಕೊಳ್ಳಲು ಯೋಚಿಸಿದರು. ಹಾಗೂ ಮೈಸೂರಿನ ಟಿಪ್ಪು ಸುಲ್ತಾನನ ಬಗ್ಗೆ ಅಧ್ಯಯನ ಮಾಡಬೇಕೆಂದು ಬಯಸಿದರು. ವಾಸ್ತವದಲ್ಲಿ ಇಲ್ಲೇ ಇತಿಹಾಸ ಕಾರಾಖಾನೆಯಲ್ಲಿ ಅವರ ತರಬೇತು ಆರಂಭವಾಯಿತು.

ಸುಗ್ಗಿ ಬೆಳೆಯಂತಹ ಅಪಾರ ಐತಿಹಾಸಿಕ ಸಾಹಿತ್ಯವಿದ್ದಿದ್ದರಿಂದ ಮತ್ತು ಮೊಘಲ್ ಇತಿಹಾಸಕ್ಷೇತ್ರವು ಉತ್ತಿ, ಬಿತ್ತಿ, ಬೆಳೆ ಬೆಳೆಯದೇ ಇದ್ದ ಭೂಮಿಯಾಗಿದ್ದರಿಂದ ಸರ್ಕಾರ್ ಅದನ್ನು ತಮ್ಮ ಸಂಶೋಧನಾ ವಿಷಯವನ್ನಾಗಿ ಆರಿಸಿಕೊಂಡರು. ಹೇಗೆ ರೋಮ್‌ನ ಅವನತಿ ಹಾಗೂ ಪತನದ ವಿಚಾರವು ಗಿಬನನಿಗೆ ಹಾಗೂ ಗ್ಯಾರಿಬಾಲ್ಡಿಯ ಶೌರ್ಯ ಸಾಹಸಗಳ ವಿಷಯವು ಜಿ.ಎಂ.ಟ್ರೆವಿಲಾನ್‌ಗೆ ಸೂಕ್ತ ವಿಷಯಗಳಾದುವೋ, ಅದೇ ರೀರಿ 17ನೆಯ ಹಾಗೂ 18ನೆಯ ಶತಮಾನಗಳ ಮೊಘಲ್ ಸಾಮ್ರಾಜ್ಯವು ಅತ್ಯಂತ ವ್ಯಾಪಕ ದೃಷ್ಟಿಕೋನವನ್ನು ಹೊಂದಿದ್ದ ಸರ್ಕಾರ್ ಅವರಿಗೆ ಯೋಗ್ಯ ಸಂಶೋಧನಾ ವಿಷಯವಾಯಿತು. ಅವರು ಇಂಡಿಯಾ ಆವ್ ಔರಂಗಜೇಬ್ ಇಟ್ಸ್ ಟೊಪೊಗ್ರಾಫಿ, ಸ್ಟಟಿಸ್ಟಿಕ್ಸ್ ಆ್ಯಂಡ್ ರೋಡ್ಸ್ (1901) ಎಂಬ ಏಕವಿಷಯ ಪ್ರಬಂಧದೊಂದಿಗೆ ಐತಿಹಾಸಿಕ ಪಾಂಡಿತ್ಯ ರಾಜ್ಯವನ್ನು ಪ್ರವೇಶಿಸಿದರು.

ಮೂಲ ಪರ್ಷಿಯನ್ ಕೃತಿಗಳ ವಿಮರ್ಶಾತ್ಮಕ ಹಾಗೂ ತುಲನಾತ್ಮಕ ಪರಿಶೀಲನೆಯ ಮೇಲೆ ಆಧಾರಿತವಾಗಿದ್ದ ಅದು ಅವರು ಮೊಘಲ್ ಇತಿಹಾಸ ಎಂಬ ಕಾರಖಾನೆಯಲ್ಲಿ ಹೊಂದಿದ್ದ ಜಯಪ್ರದ ತರಬೇತಿನ ಫಲದಂತೆ ಕಂಡುಬಂದಿತು. ಅದರಲ್ಲಿ ರಸ್ತೆ, ನದಿಮಾರ್ಗ ಮುಂತಾದ ಭೌಗೋಳಿಕ ಪರಿಸ್ಥಿತಿ, 17ನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ಮೊಘಲ್ ಭಾರತಕ್ಕೆ ಸಂಬಂಧಿಸಿದ ಅಂಕಿಅಂಶಗಳ ವಿವರಣೆ ಇತ್ಯಾದಿಗಳನ್ನು ಕಾಣಬಹುದು. ನಂತರ ಅವರು ಸತತವಾಗಿ 30 ವರ್ಷಗಳ ಕಾಲ ನಿಷ್ಠೆಯಿಂದ ಕಾರ್ಯ್ಯಾಡಿ ಐದು ಸಂಪುಟಗಳಲ್ಲಿ ಭಾರತದ ಇತಿಹಾಸಲೇಖನ ಕಲಾಕ್ಷೇತ್ರದಲ್ಲಿ ಮಹಾಕಾವ್ಯದಂತಿದ್ದ ಸ್ಟಡಿ ಆವ್ ಔರಂಗ್‌ಜೇಬ್ (191201924) ಎಂಬ ಮೇರುಕೃತಿಯನ್ನು ರಚಿಸಿದರು. ಅದು ಐದು ಅಂಕಗಳ ದುರಂತ ನಾಟಕ. ಏತನ್ಮಧ್ಯೆ ವರು ಬಂಗಾಳದ ವಿಭಜನೆ ಹಾಗೂ ಸ್ವದೇಶಿ ಚಳವಳಿಯ (1905–1908) ಕಾರಣ ಉಂಟಾದ ಪರಿಸ್ಥಿತಿಯಿಂದ ಉತ್ತೇಜಿತರಾಗಿ ಎಕೊನಾಮಿಕ್ಸ್ ಆವ್ ಬ್ರಿಟಿಷ್ ಇಂಡಿಯಾ (1909) ಎಂಬ ಏಕವಿಷಯ ಪ್ರಬಂಧವನ್ನು ಬರೆದು ಭಾರತದ ಅರ್ಥ ವ್ಯವಸ್ಥೆಗೆ ಸಂಬಂಧಿಸಿದ ಭೌಗೋಳಿಕಾಂಶ, ಗ್ರಾಮ

ಅರ್ಥವ್ಯವಸ್ಥೆ, ಬ್ರಿಟಿಷ್ ಭೂ ಕಂದಾಯ ವ್ಯವಸ್ಥೆ, ಸಾರ್ವಜನಿಕ ಹಣಕಾಸು ಇತ್ಯಾದಿ ವಿಷಯಗಳನ್ನು ಕುರಿತು ಚರ್ಚಿಸಿದರು. ನಂತರ ಅವರು ಮೊಘಲ್ ಚರಿತ್ರೆಗೆ ಅನುಬಂಧವಾಗಿ ಔರಂಗಜೇಬನ ಪ್ರಬಲ ವೈರಿಯಾಗಿದ್ದ ಶಿವಾಜಿಯನ್ನು ಕುರಿತು ಶಿವಾಜಿ ಆ್ಯಂಡ್ ಹಿಸ್ ಟೈಮ್ಸ್ (1919) ಎಂಬ ಉತ್ತಮ ಕೃತಿಯನ್ನು ರಚಿಸಿದರು. ಐತಿಹ್ಯ ಹಾಗೂ ಪವಾಡಗಳಿಂದ ಮುಕ್ತವಾಗಿದ್ದ ಅದು ಇತಿಹಾಸದಲ್ಲಿ ಶಿವಾಜಿಯ ನಿಜವಾದ ಸ್ಥಾನವೇನೆಂಬುದನ್ನು ಸ್ಪಷ್ಟಪಡಿಸಿ, ಮರಾಠ ಇತಿಹಾಸ ಅಧ್ಯಯನದಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ಉಂಟುಮಾಡಿತು. ಇಷ್ಟು ಮಾತ್ರವಲ್ಲದೆ, ಅವರು ಇರ್ವಿನನ ಲೇಟರ್ ಮೊಘಲ್ಸ್ ಎಂಬ ಕೃತಿಯನ್ನು ಎರಡು ಸಂಪುಟಗಳಲ್ಲಿ ಸಂಪಾದಿಸಿ, ಪೀಠಿಕೆ ಹಾಗೂ ನಾದಿರ್‌ಷಾನನ್ನು ಕುರಿತು ಮೂರು ಅಧ್ಯಾಯಗಳನ್ನು (11, 12, 13) ಬರೆದರು. ಅದೇ ಸಮಯದಲ್ಲಿ ಗಿಬನನ ಮಾದರಿಯ ಮೇರೆಗೆ ಮೊಘಲ್ ಸಾಮ್ರಾಜ್ಯದ ಪತನವನ್ನು ವಿವರಿಸುವ ಯೋಜನೆಯನ್ನು ಹಾಕಿಕೊಂಡು ನಾಲ್ಕು ಸಂಪುಟಗಳಲ್ಲಿ ಫಾಲ್ ಆವ್ ಮೊಘಲ್ ಎಂಪಯ್‌ರ್ (1932–1950) ರಚಿಸಿದರು.

ಈ ಮಹಾಕೃತಿಗಳನ್ನು ಮಾತ್ರವಲ್ಲದೆ, ಸರ್ಕಾರ್ ಕೃಷ್ಣದಾಸ್ ಕವಿರಾಜರ ಚೈತನ್ಯ ಚರಿತಾಮೃತವನ್ನು ಚೈತನ್ಯಾಸ್ ಲೈಫ್ ಅಂಡ್ ಟೀಚಿಂಗ್ಸ್ (1922) ಎಂಬುದಾಗಿ ಭಾಷಾಂತರಿಸಿ ಅದಕ್ಕೆ ತಕ್ಕ ಪೀಠಿಕೆ ಹಾಗೂ ವ್ಯಾಖ್ಯಾನಗಳನ್ನು ಬರೆದರು. ಅವರ ಸ್ಟಡೀಸ್ ಇನ್ ಮೊಘಲ್ ಇಂಡಿಯಾ (1919) ಮತ್ತು ಸ್ಟಡೀಸ್ ಇನ್ ಔರಂಗ್‌ಜೇಬ್ಸ್ ರೆಯ್ನ್ (1933) ಮೊಘಲ್ ಆಧ್ಯಯನಗಳಿಗೆ ಅನುಪೂರಕವಾದುವು. ಅವರು ಷಹಜಹಾನ್ ಹಾಗೂ ಔರಂಗಜೇಬನ ದಿನನಿತ್ಯ ಜೀವನ, ಜೆಬುನ್ನೀಸ ಮುಂತಾದ ಮುಖ್ಯ ಮೊಘಲ್ ಸ್ತ್ರೀಯರು, ಔರಂಗಜೇಬನ ಕಂದಾಯ ನಿಬಂಧನೆ ಮುಂತಾದ ವಿಷಯಗಳ ಬಗ್ಗೆ ಉತ್ತಮ ಪ್ರಬಂಧಗಳನ್ನು ಬರೆದು ತಾವು ಅತ್ಯುತ್ತಮ ಪ್ರಬಂಧ ಲೇಖಕರೂ ಆಗಿದ್ದರೆಂಬುದನ್ನು ಸ್ಪಷ್ಟಪಡಿಸಿದರು. ಅವರ ಮೊಘಲ್ ಆ್ಯಡ್‌ಮಿನಿಸ್ಟ್ರೇಷನ್ (1920) ಮೊಘಲ್ ಪೌರ ವ್ಯವಸ್ಥೆ, ಅದರ ಮೂಲತತ್ತ್ವಗಳು, ಚಕ್ರವರ್ತಿಯ ಸ್ಥಾನಮಾನ, ವಿವಿಧ ಇಲಾಖೆಗಳು ಹಾಗೂ ಅವುಗಳ ಮುಖ್ಯಸ್ಥರು, ಪ್ರಾಂತೀಯ ಆಡಳಿತ, ಕಂದಾಯ ನೀತಿ ಮತ್ತು ಮೊಘಲ್ ಆಳ್ವಿಕೆಯ ಜಯಾಪಜಯಗಳ ದಾರ್ಶನಿಕ ಸಮೀಕ್ಷೆ ಇತ್ಯಾದಿಗಳ ಪಾಂಡಿತ್ಯಪೂರ್ಣ ವಿಶ್ಲೇಷಣೆಯಾಗಿದೆ. ಷಾಜಿ, ಶಿವಾಜಿ, ಹಾಗೂ ಶಾಂಬೂಜಿಯನ್ನು ಕುರಿತ ಪ್ರಬಂಧಗಳು, ರಾಜಕುಮಾರ ಅಕ್ಬರ್, ಔರಂಗಜೇಬನ ಪುತ್ರ ಮತ್ತು ನಾಲ್ವರು ಮರಾಠ ಇತಿಹಾಸಕಾರರನ್ನು ಕುರಿತ ಬರಹಗಳ ಸಂಗ್ರಹವಾಗಿರುವ ಹೌಸ್ ಆವ್ ಶಿವಾಜಿ (1940) ಎಂಬ ಪುಸ್ತಕವು ಅವರ ಶಿವಾಜಿ ಆಂಡ್ ಹಿಸ್ ಟೈಮ್ಸ್‌ಗೆ ಅನುಬಂಧವಾಗಿವೆ. ಆರ್ಯ, ಬೌದ್ಧ, ಇಸ್ಲಾಂ ಹಾಗೂ ಬ್ರಿಟಿಷ್ ಎಂಬುದಾಗಿ ಭಾರತ ಸಂಸ್ಕೃತಿಯ ನಾಲ್ಕು ನಿರ್ದಿಷ್ಟ ಮುಖಗಳನ್ನು ವಿಶ್ಲೇಷಿಸಿ ಚರ್ಚಿಸಿರುವ ಅವರ ಇಂಡಿಯಾ ತ್ರೂದಿ ಏಜಸ್ (1927) ಎಂಬ ಕೃತಿಯು ಅವರಿಗೆ ವಿಷಯದ ಮೇಲಿದ್ದ ಹಿಡಿತ, ಅವರ ವಿಶಾಲ ದೃಷ್ಟಿ ಹಾಗೂ ಅಗಾಧ ಪಾಂಡಿತ್ಯಕ್ಕೆ ನಿರ್ವಿವಾದ ಸಾಕ್ಷಿಯಾಗಿದೆ. ಇಷ್ಟು ಮಾತ್ರವಲ್ಲದೆ, ಅವರು ಕೇಂಬ್ರಿಡ್ಜ್ ಹಿಸ್ಟೊರಿ ಆವ್ ಇಂಡಿಯಾ ಸಂಪುಟಕ್ಕೆ 7, 10, 11, 13ನೆಯ ಅಧ್ಯಾಯಗಳನ್ನು ಬರೆದುಕೊಟ್ಟರು. ಪೂನಾ ರೆಸಿಡೆನ್ಸಿ ಕಾರಿಸ್ಪಾಂಡೆನ್ಸ್ ಎಂಬ ಹೆಸರಿನಲ್ಲಿ ಅನೇಕ ಸರ್ಕಾರಿ ಪತ್ರಗಳನ್ನು ಸಂಪಾದಿಸಿದರು. ಮತ್ತು ಮರಾಠ ಇತಿಹಾಸಕ್ಕೆ ಬೇಕಾಗಿದ್ದ ಪರ್ಷಿಯನ್ ದಾಖಲೆಗಳನ್ನು ಇಂಗ್ಲಿಷ್ ಭಾಷೆಗೆ ತರ್ಜುಮೆ ಮಾಡಿಸಿದರು. ಆಯಿನಿ ಅಕ್ಬರಿಯನ್ನು ಸಂಪಾದಿಸಿ, ಅಕಾಮಿ ಆಲಂಗೀರಿ ಹಾಗೂ ಮಾಶರಿ ಆಲಂಗೀರಿ ಎಂಬ ಪುಸ್ತಕಗಳನ್ನು ಸಂಪಾದಿಸಿ ಭಾಷಾಂತರ ಮಾಡಿದರು.

(1912, 1947). ಅವರು ಸಂಪಾದಿಸಿ ಅತಿ ಮುಖ್ಯ ಕೃತಿ ಎಂದರೆ ಹಿಸ್ಟೋರಿ ಆವ್ ಬೆಂಗಾಲ್ (ಸಂಪುಟ 11, 1947) ಶಿವಾಜಿ ಏ ಸ್ಟಡಿ ಇನ್ ಲೀಡರ್‌ಷಿಪ್ (1949), ಬೆಂಗಾಲ್ ನವಾಬ್ಸ್ (1952) ಮತ್ತು ಹಿಸ್ಟೋರಿ ಆವ್ ದಿ ದಸ್‌ನಾಮಿ ಸೆಕ್ಟ್ಸ್ ಎಂಬ ಗೌಣವಾದ ಆದರೆ ಪಾಂಡಿತ್ಯಪೂರ್ಣ ಅಧ್ಯಯನಗಳು ಮಾತ್ರವಲ್ಲದೆ, ತಮ್ಮ ಜೀವನದ ಕೊನೆಯ ವರ್ಷಗಳಲ್ಲಿ ಅವರು ರಚಿಸಿದ ಇನ್ನೊಂದುಪ್ರಧಾನ ಗ್ರಂಥವೆಂದರೆ ಮಿಲಿಟರಿ ಹಿಸ್ಟೋರಿ ಆವ್ ಇಂಡಿಯಾ (1960). ಅದು ಭಾರತದ ಯುದ್ಧಕಲೆಯನ್ನು ಕುರಿತ ಪ್ರಥಮ ಕೃತಿ.

ಸರ್ಕಾರ್ ಬರೆದ ಮೂರು ಮಹಾಕೃತಿಗಳು ಭಾರತದ ಇತಿಹಾಸಲೇಖನ ಕಲಾರಂಗದಲ್ಲಿ ಅದ್ವಿತೀಯವಾಗಿರುವುದಕ್ಕೆ ಕಾರಣ ಅವರು ಬಳಸಿದ ಅಪಾರ ವಿಷಯ ಸಾಮಗ್ರಿಗಳು. ಅವರು ಪರ್ಷಿಯನ್, ಮರಾಠಿ, ಹಿಂದಿ, ಸಂಸ್ಕೃತ, ಇಂಗ್ಲಿಷ್, ಫ್ರೆಂಚ್, ಡಚ್ ಹಾಗೂ ಪೋರ್ಚುಗೀಸ್ ಕೃತಿಗಳಿಂದ ಮತ್ತ ಅಧಿಕೃತ ಇತಿಹಾಸ, ಖಾಸಗಿ ಚರಿತ್ರೆ, ಆ ಕಾಲದ ನಿರ್ದಿಷ್ಟ ವ್ಯಕ್ತಿ ಹಾಗೂ ಘಟನೆಗಳಿಗೆ ಸಂಬಂಧಿಸಿದ್ದ ಏಕ ವಿಷಯ ಪ್ರಬಂಧಗಳು, ರಾಜಸ್ಥಾನಗಳ ಲಘು ಪ್ರಕಟಣೆಗಳು, ಪ್ರಧಾನ ವ್ಯಕ್ತಿಗಳ ಪತ್ರಗಳು, ಚರಿತ್ರಾಂಶಗಳ ಸಂಗ್ರಹಗಳು ಯೂರೋಪಿನ ಪ್ರವಾಸಿಗಳ ಕಥನಗಳು ಸಮಕಾಲೀನ ದಾಖಲೆಗಳು, ಪ್ರಾಂತೀಯ ಚರಿತ್ರೆ ಹಾಗೂ ಸಾಮ್ರಾಜ್ಯದ ವಿಚಾರಕೋಶ ಮುಂತಾದ ಮೂಲಾಧಾರಗಳಿಂದ ಕಚ್ಚಾ ವಿಷಯಸಾಮಗ್ರಿಗಳನ್ನು ಸಂಗ್ರಹಿಸಿ, ಅವುಗಳನ್ನು ಬಹು ಎಚ್ಚರಿಕೆಯಿಂದ ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿ, ತಾಳೆ ನೋಡಿ ಕ್ರಮಬದ್ಧವಾಗಿ ಅಣಿಮಾಡಿಕೊಂಡಿದ್ದರು. ಅನಂತರ ವಿಶ್ಲೇಷಣೆ ಹಾಗೂ ತುಲನಾತ್ಮಕ ವಿಧಾನದ ಮೂಲಕ ಅವುಗಳ ಯಥಾರ್ಥತೆಯನ್ನು ಪರೀಕ್ಷಿಸಿದರು ಮತ್ತು ಯಾವ ತೆರಪು ಇರದಂತೆ ಮಾಡುವುದಕ್ಕಾಗಿ ಲಭ್ಯವಿದ್ದ ಇತರ ಮೂಲಾಧಾರಗಳ ಬೆಳಕಿನಲ್ಲಿ ಅವುಗಳನ್ನು ಪರಿಶೀಲಿಸಿದರು. ಅವರು ವಿಷಯಗಳ ಕಾಲವನ್ನು ನಿರ್ದಿಷ್ಟವಾಗಿ ನಿರ್ಧರಿಸುವುದಕ್ಕೆ ಬಹು ಹೆಚ್ಚಿನ ಗಮನವನ್ನು ನೀಡಿದರು. ಅವರು ತಮ್ಮ ಬರಹಗಳಲ್ಲಿ ತಾವು ಅನುಸರಿಸಿದ ವಿಧಾನವನ್ನು ಸೂಚಿಸಿದ್ದಾರೆ.

ಸರ್ಕಾರ್ ದಾಖಲು ಮಾಡುವಾಗ ವಸ್ತುನಿಷ್ಠ ವೈಜ್ಞಾನಿಕ ಕ್ರಮ ಮತ್ತು ಯಥಾರ್ಥತೆಗೆ ಹೆಚ್ಚಿನ ಪ್ರಾಮುಖ್ಯವನ್ನು ಕೊಟ್ಟಿದ್ದಾರೆ. ಸಮಕಾಲೀನ ಮೂಲಾಧಾರಗಳ ಬಳಕೆ, ಮೂಲಗ್ರಂಥಗಳಲ್ಲಿ ಬಳಸಲಾಗಿದ್ದ ಭಾಷೆಗಳ ಪೂರ್ಣ ಪರಿಚಯ, ಮೂಲ ವಿಷಯಸಾಮಗ್ರಿಗಳನ್ನು ನೀಡಿದ್ದ ವ್ಯಕ್ತಿಗಳ ಮನೋಭಾವ ಹಾಗೂ ವ್ಯಕ್ತಿತ್ವದ ಅಧ್ಯಯನ, ಇತರ ಬಗೆಯ ಮೂಲಾಧಾರ ಹಾಗೂ ಇತರ ಬರಹಗಾರರು ನೀಡಿರುವ ವಿವರಗಳೊಂದಿಗೆ ಹೋಲಿಸುವುದರ ಮೂಲಕ ಎಲ್ಲಾ ವಿಷಯಗಳ ಪರಿಶೀಲನೆ, ಎಲ್ಲಾ ಬಗೆಯ ವಿಷಯಗಳ ಬಳಕೆ, ವಿಚಾರ ಮಾಡುವುದರಲ್ಲಿ ಸ್ವಂತಿಕೆ ಮತ್ತು ಎಲ್ಲಾ ಭಾಗಗಳ ಕ್ರಮಬದ್ಧ ಸಂಘಟನೆ ಅವರ ವಿಧಾನದಲ್ಲಿ ಕಂಡುಬರುವ ಪ್ರಮುಖ ಲಕ್ಷಣಗಳಾಗಿವೆ. ಒಂದು ಘಟನೆಯನ್ನು ವರ್ಣಿಸುವುದಕ್ಕೆ ಮೊದಲು, ಅವರು ವಿವಿಧ ಆಧಾರಗಳ ಸಹಾಯದಿಂದ ಅದರ ಸತ್ಯಾಸತ್ಯತೆಗಳನ್ನು ದೃಢೀಕರಿಸಿಕೊಂಡು, ತಾವು ಬಳಸಿದ ಮೂಲಗ್ರಂಥಗಳನ್ನು ಸ್ಪಷ್ಟವಾಗಿ ಉಲ್ಲೇಖಿಸುತ್ತಿದ್ದರು. ಯಾವ ಆಧಾರಗ್ರಂಥವನ್ನೂ ಕುರುಡರಂತೆ ಅನುಸರಿಸುತ್ತಿರಲಿಲ್ಲ; ಒಂದು ಕಥನವನ್ನು ಪುನರ್ರಚಿಸಿದ್ದಿದ್ದರೆ ಅದನ್ನು ಸ್ಪಷ್ಟವಾಗಿ ಹೇಳಿ, ಅದಕ್ಕಾಗಿ ಬಳಸಿದ್ದ ಎಲ್ಲಾ ವಿವರಗಳನ್ನು ನೀಡುತ್ತಿದ್ದರು. ಮತ್ತು ವಿಭಿನ್ನ ಆಧಾರಗಳಿಂದ ವಿಚಾರಗಳ ತುಣುಕುಗಳನ್ನು ಸಂಗ್ರಹಿಸಿ ಒಂದು ಘಟನೆಯನ್ನು ಪುನರ್ರಚಿಸಿದ್ದರೆ ಅವುಗಳನ್ನೆಲ್ಲಾ ಅನುಬಂಧದಲ್ಲಿ ಸ್ಪಷ್ಟವಾಗಿ ನಿರೂಪಿಸುತ್ತಿದ್ದರು.

ಒಂದು ನಿರ್ಧಿಷ್ಟ ಘಟನೆಯನ್ನು ವಿವರಿಸುವಾಗ ಅವರು ಭಾರತದ ಇತರ ಭಾಗಗಳಲ್ಲಿ ಅಥವಾ ಹೊರನಾಡಿನಲ್ಲಿ ಸಂಭವಿಸಿದ್ದ ಅದಕ್ಕೆ ಸರಿಸಮಾನವಾಗಿದ್ದ ಸಂಭವಗಳನ್ನು ಉಲ್ಲೇಖಿಸುತ್ತಿದ್ದರು. ಉದಾಹರಣೆಗೆ, ಅವರು ಶಿವಾಜಿಯ ತಾಯಿ ಜೀಜಾಬಾಯಿಯ ಬಗ್ಗೆ ಚರ್ಚಿಸುವಾಗ ಸಾತಕರ್ಣಿಯ ಮಾತೆ ಗೌತಮಿಯನ್ನು ಉಲ್ಲೇಖಿಸಿದ್ದಾರೆ. ಅವರಿಗಿದ್ದ ಕಲ್ಪನಾಶಕ್ತಿ ಅದ್ವಿತೀಯವಾಗಿದ್ದಿತು. ಆದ್ದರಿಂದ ಚಲನಚಿತ್ರ ನಿರ್ದೇಶಕರಂತೆ ಪ್ರತಿ ಘಟನೆಯ ಅತ್ಯಲ್ಪ ವಿವರವನ್ನೂ ಬಿಡದೆ ಅದನ್ನು ಯಥಾವತ್ತಾಗಿ ಕಲ್ಪಿಸಿ ಚಿತ್ರಿಸುವುದು ಮತ್ತು ಗತಕಾಲವನ್ನು ಸಂಪೂರ್ಣವಾಗಿ ವೀಕ್ಷಿಸಿ ವಿವರಿಸುವುದೂ ಅವರಿಗೆ ಸಾಧ್ಯವಾಯಿತು.

ನಿಷ್ಪಕ್ಷಪಾತ ದೃಷ್ಟಿ, ಸೃಜನಶೀಲ ಕಲ್ಪನಾಶಕ್ತಿ ಮತ್ತು ಎಲ್ಲಾ ಮೂಲಾಧಾರಗಳ ವಿಮರ್ಶಾತ್ಮಕ ಪರಿಶೀಲನೆಯಿಂದ ಗಳಿಸಿಕೊಂಡ ಶುದ್ಧ ಜ್ಞಾನದಿಂದ ಕೂಡಿದ್ದ ಸರ್ಕಾರ್ ಅತ್ಯಂತ ವಿರಳ, ಸುಂದರ ಹಾಗೂ ಅತ್ಯಾಕರ್ಷಕ ಶೈಲಿಯಲ್ಲಿ ವಿವರಣೆಗಳನ್ನು ನೀಡಿದರು. ಅವರು ನೀಡಿರುವ ವ್ಯಕ್ತಿಚಿತ್ರಣಗಳು ಅತ್ಯಂತ ಮನೋಹರವಾಗಿವೆ. ಅವರು ನೀಡಿರುವ ಯುದ್ಧವರ್ಣನೆಗಳಿಗೆ ಸರಿಸಮವಾದುದು ಯಾವುದೂ ಇಲ್ಲ ಎಂದು ಹೇಳಲಾಗುತ್ತದೆ. ಚಿಕ್ಕವಯಸ್ಸಿನಲ್ಲಿ ಜೋಮಿನಿಯ ಆರ್ಟ್ ಆವ್ ವಾರ್ ಎಂಬ ಪುಸ್ತಕದಿಂದ ಪ್ರಭಾವಿತರಾಗಿದ್ದ ಅವರು ಐತಿಹಾಸಿಕ ಯುದ್ಧಗಳ ವರದಿಗಾರರಂತೆ ಅತ್ಯಂತ ಸುಸ್ಪಷ್ಟವಾಗಿದ್ದ ರೀತಿಯಲ್ಲಿ, ಒಂದು ವಿವರವನ್ನೂ ಬಿಡದಂತೆ ಕದನಗಳನ್ನು ವರ್ಣಿಸಿದರು. ತಾವು ನಿರೂಪಿಸಿದ ಐತಿಹಾಸಿಕ ಘಟನೆಗಳಿಗೆ ಸಂಭಂಧಿಸಿದ್ದ ಭೌಗೋಳಿಕ ಪರಿಸ್ಥಿತಿಗಳನ್ನು ತಿಳಿಯಲು ವಿವಿಧ ಪ್ರದೇಶಗಳಿಗೆ ಭೇಟಿಕೊಟ್ಟರು ಮತ್ತು ಭೂಪಟಗಳನ್ನು ಬಳಸಿದರು. ಆದ್ದರಿಂದ ಅವರು ನೀಡಿರುವ ಕದನಗಳ ವರ್ಣನೆಗಳು ಸುಪ್ರಸಿದ್ಧ ಮಿಲಿಟರಿ ಇತಿಹಾಸಕಾರರು ಕೊಟ್ಟಿರುವ ವಿವರಣೆಗಳಿಗಿಂತ ಉತ್ತಮವಾಗಿವೆ ಎಂದು ಹೇಳಲಾಗುತ್ತದೆ. ಜಗತ್ತಿನ ಇತಿಹಾಸ ಹಾಗೂ ಸಾಹಿತ್ಯದಿಂದ ತಕ್ಕ ಉಲ್ಲೇಖ ಹಾಗೂ ನಿದರ್ಶನಗಳನ್ನು ಕೊಟ್ಟು ವಿವರಿಸುವುದು ಅವರ ಶೈಲಿಯ ಇನ್ನೊಂದು ವಿಶಿಷ್ಟ ಲಕ್ಷಣ.

ಸರ್ಕಾರ್ ರಾಂಕೆಯ ಕ್ರಮಗಳನ್ನು ಅನುಸರಿಸಿದರೂ, ಇತಿಹಾಸಕಾರನು ನಿರ್ಣಯಗಳನ್ನು ನೀಡಬಾರ–ದೆಂಬ ಅವನ ಅಭಿಪ್ರಾಯವನ್ನು ಒಪ್ಪದೆ ಚರಿತ್ರಲೇಖಕನು ವ್ಯಕ್ತಿ ಹಾಗೂ ಘಟನೆಗಳನ್ನು ಪರೀಕ್ಷಿಸಿ ತೀರ್ಮಾನಿಸಬೇಕು ಎಂಬುದಾಗಿ ಹೇಳಿದರು. ಅವರು ಇತಿಹಾಸವು ವ್ಯಾವಹಾರಿಕವಾಗಿ ಉಪಯುಕ್ತವಾದುದು ಎಂಬುದಾಗಿ ಅಭಿಪ್ರಾಯಪಟ್ಟರು. ಗತಕಾಲದ ಅರಿವು ವರ್ತಮಾನ ಕಾಲದ ಸಮಸ್ಯೆಗಳನ್ನು ಪರಿಹರಿಸಲು ಸಹಾಯಕವಾಗುತ್ತದೆ ಮತ್ತು ಭವಿಷ್ಯತ್ತಿಗೆ ಮಾರ್ಗದರ್ಶಕವಾಗುತ್ತದೆ. ಅವರಿಗೆ ಪ್ರಗತಿಯ ಕಲ್ಪನೆ, ಮಾನವ ವ್ಯವಹಾರಗಳಲ್ಲಿ ದೇವರು ಪಾತ್ರ ವಹಿಸುತ್ತಾನೆ ಮತ್ತು ಇತಿಹಾಸವು ದೈವಸಂಕಲ್ಪದಂತೆ ಮುಂದುವರಿಯುತ್ತದೆ ಎಂಬ ವಿಷಯಗಳಲ್ಲಿ ನಂಬಿಕೆ ಇದ್ದಿತು. ಹಲವಾರು ಕಡೆ ಅವರು ದೇವನ್ಯಾಯದ ಬಗ್ಗೆ ಉಲ್ಲೇಖಿಸಿದ್ದಾರೆ. ಅವರು ನಿಯತಿ, ಪ್ರತೀಕಾರ ನ್ಯಾಯ ಹಾಗೂ ದುಷ್ಕರ್ಮ ಫಲಗಳನ್ನು ಮಾನವ ಸಮಗ್ರ ಕ್ರಿಯೆಯೊಂದಿಗೆ ಸಮೀಕರಿಸಿದರು. ಸತ್ಯವು ಪ್ರಿಯವೋ, ಅಪ್ರಿಯವೋ, ಜನರಿಗೆ ಸಮ್ಮತವಾದುದೋ, ಇಲ್ಲವೋ, ತಮಗೆ ಅದು ಮುಖ್ಯವಲ್ಲ, ತಾವು ಸತ್ಯವನ್ನೇ ಅನ್ವೇಷಿಸುವುದಾಗಿ, ಒಪ್ಪಿಕೊಳ್ಳುವುದಾಗಿ ಹೇಳಿಕೊಂಡಿದ್ದಾರೆ; ಇದು ಬಹುಶಃ ಅವರ ಇತಿಹಾಸ ದರ್ಶನದ ಕೇಂದ್ರ ತತ್ತ್ವವಾಗಿದ್ದಿತು. ಅವರ ಪ್ರಕಾರ, ಇತಿಹಾಸಕಾರನು ಸತ್ಯದ ಪ್ರತಿ ಅಪಾರ ಗೌರವ ಹಾಗೂ ನಿಷ್ಪಕ್ಷಪಾತ ದೃಷ್ಟಿಯನ್ನು ಮಾತ್ರವಲ್ಲದೆ, ಸಹಾನುಭೂತಿಯನ್ನು ಬೆಳೆಸಿಕೊಳ್ಳಬೇಕು, ಅವರು

ಐತಿಹಾಸಿಕ ವಿಷಯಗಳ ಉದಾರ, ಪ್ರಾಮಾಣಿಕ ಹಾಗೂ ಸಹಾನುಭೂತಿಯುತ ನಿರೂಪಣೆಯನ್ನು ಎತ್ತಿಹಿಡಿದರು.

ಸರ್ಕಾರ್ ಅವರ ಬರಹಗಳಲ್ಲೂ ಆ ಕಾಲದಲ್ಲಿ ಪ್ರಮುಖವಾಗಿದ್ದ ರಾಷ್ಟ್ರೀಯತೆಯ ಪ್ರಭಾವವನ್ನು ಕಾಣಬಹುದು. ಅವರ ಅಧ್ಯಯನಗಳಲ್ಲಿ ಹೆಚ್ಚಾಗಿ ರಾಜಕೀಯ ಹಾಗೂ ಮಿಲಿಟರಿ ವಿಷಯಗಳು ಪ್ರಧಾನವಾಗಿದ್ದುವು. ಅವರೂ ತಮ್ಮ ಕಾಲದಲ್ಲಿ ಶೀಘ್ರವಾಗಿ ಬೆಳೆಯುತ್ತಿದ್ದ ಮಾನವಶಾಸ್ತ್ರ, ಸಮಾಜವಿಜ್ಞಾನ, ಅರ್ಥಶಾಸ್ತ್ರ ಮುಂತಾದ ಸಂಬಂಧಿತ ಸಾಮಾಜಿಕ ವಿಜ್ಞಾನಗಳನ್ನು ತಮ್ಮ ಅಧ್ಯಯನಗಳಲ್ಲಿ ಬಳಸಿಕೊಳ್ಳಲಿಲ್ಲ. ಅವರು ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ವಿಷಯಗಳಿಗೆ ಅಷ್ಟೇನು ಗಮನವನ್ನು ಕೊಡಲಿಲ್ಲ. ಕೆಲವರು ಅವರ ಮೊಘಲರ ಹಾಗೂ ಬ್ರಿಟಿಷ್ ಆಳ್ವಿಕೆಯ ಪ್ರತಿ ಹೆಚ್ಚು ಒಲವನ್ನು ತೋರಿದರು ಎಂಬುದಾಗಿ ಟೀಕಿಸಿದ್ದಾರೆ. ಟೀಕೆಗಳೇನಿದ್ದರೂ ಅವರು ಭಾರತದ ಅತ್ಯುತ್ತಮ ಚರಿತ್ರಲೇಖಕರೆಂಬುದರಲ್ಲಿ ಸಂದೇಹವೇ ಇಲ್ಲ. ಇತಿಹಾಸ ರಚನಾ ಕಾರ್ಯ ಅವರಿಗೆ ಎಷ್ಟು ಮುಖ್ಯವಾಗಿದ್ದಿತ್ತೆಂದರೆ ಅವರು ಯಾವ ಸಾಮಾಜಿಕ ಸಮಾರಂಭಗಳಲ್ಲೂ ಭಾಗವಹಿಸುತ್ತಿರಲಿಲ್ಲ. ಅನೇಕ ಇತಿಹಾಸ ವಿದ್ಯಾರ್ಥಿಗಳನ್ನು ಮುಖ್ಯವಾಗಿ ಆಪ್ತಮಿತ್ರ ಸರ್‌ದೇಸಾಯಿ ಅವರನ್ನು, ದೊಡ್ಡ ಚರಿತ್ರಲೇಖಕರನ್ನಾಗಿ ಕಡೆದ ಶಿಲ್ಪಿ ಅವರು. ಅವರ ಮಹತ್ಸಾಧನೆಗಾಗಿ ಅವರನ್ನು 'ಮೊಘಲ್ ಇತಿಹಾಸದ ಕೊಲಂಬಸ್' ಎಂಬುದಾಗಿ ಮತ್ತು 17–18ನೆಯ ಶತಮಾನಗಳನ್ನು 'ಜಾದೂನಾಥ್ ಶತಮಾನಗಳು' ಎಂಬುದಾಗಿ ಕರೆಯಲಾಗಿದೆ. ಭಾರತ ಇತಿಹಾಸ ಕ್ಷೇತ್ರಕ್ಕೆ ಬಹು ಬೆಲೆಬಾಳುವ ಶಾಶ್ವತ ನಿಧಿಗಳನ್ನು ನೀಡಿರುವ ಸರ್ಕಾರ್ ಭಾರತ ಇತಿಹಾಸ ಪಾಂಡಿತ್ಯ ಆಗಸದಲ್ಲಿ ಅತ್ಯುಜ್ವಲವಾಗಿ ಪ್ರಕಾಶಿಸುತ್ತಿರುವ ಅದ್ವಿತೀಯ ತಾರೆ.

## 18.6 ಹೆಚ್.ಸಿ.ರಾಯ್ ಚೌಧರಿ

ಭಾರತದ ಗತಕಾಲವನ್ನು ಅತ್ಯುಜ್ವಲ ವರ್ಣಗಳಲ್ಲಿ ಚಿತ್ರಿಸಲು ಹಾತೊರೆದು ಪ್ರಯತ್ನಿಸುತ್ತಿದ್ದ ಇತಿಹಾಸಕಾರರಿಗೆ ಅಪವಾದವಾಗಿದ್ದವರು ರಾಯ್ ಚೌಧರಿ. ಅವರ ಪೊಲಿಟಿಕಲ್ ಹಿಸ್ಟೊರಿ ಆವ್ ಏನ್ಸೆಂಟ್ ಇಂಡಿಯಾ ಒಂದು ಪ್ರೌಢ ಕೃತಿಯೇ ಆಗಿದೆ. ಸತ್ಯವನ್ನೇ ಗುರಿಯಾಗಿಟ್ಟುಕೊಂಡಿದ್ದ ಅವರು ಪ್ರಾಚೀನ ಭಾರತಕ್ಕೆ ಸಂಬಂಧಿಸಿದ್ದ ಪ್ರತಿ ಸಮರ್ಪಕ ಅಂಶವನ್ನು ಸಂಗ್ರಹಿಸಿ ವಿವರಿಸಿದರು. ಅವರ ಗ್ರಂಥವು ಸಮರ್ಪಕ ವಿವರಗಳ ಸಂಗ್ರಹಣೆ ಮತ್ತು ವಸ್ತುನಿಷ್ಠ ನಿರೂಪಣೆಗೆ ಮಾದರಿಯೇ ಆಗಿದೆ. ಅವರು ಯಾವ ಪೂರ್ವಾಗ್ರಹವೂ ಇಲ್ಲದೆ ತೆರೆದ ಬುದ್ಧಿಯಿಂದ ಬುದ್ಧನಿಗೆ ಪೂರ್ವದ ಭಾರತಕ್ಕೆ ಸಂಬಂಧಿಸಿದ್ದ ಸತ್ಯಸಂಗತಿಗಳನ್ನು ಗೊಂದಲಮಯ ಸಂಪ್ರದಾಯ, ಐತಿಹ್ಯ ಹಾಗೂ ಕಟ್ಟುಕಥೆಗಳಿಂದ ಬೇರ್ಪಡಿಸಿ ವಿವರಿಸಿ ಎಲ್ಲರ ಪ್ರಶಂಸೆಗೆ ಪಾತ್ರರಾದರು. ಅವರು ವೈಜ್ಞಾನಿಕ ಕ್ರಮವನ್ನು ಅನುಸರಿಸಿದವರು ಮತ್ತು ಇತಿಹಾಸವು ನಿರ್ದಿಷ್ಟ ಮಾದರಿಯನ್ನು ಅನುಸರಿಸುತ್ತದೆ ಎಂಬುದು ಅವರ ನಂಬಿಕೆಯಾಗಿದ್ದಿತು. ಆದ್ದರಿಂದ ಅವರ ಇತಿಹಾಸ ನಿರೂಪಣೆಯು ಮೌಲ್ಯ ನಿರ್ಣಯಗಳಿಂದ ಮುಕ್ತವಾಗಿದೆ. ಆ ಬಗೆಯ ನಿರ್ಣಯಗಳಣ್ನು ನೀಡಲೇಬೇಕಾಗಿ ಬಂದಾಗ, ಅವರು ನೀಡಿರುವ ನಿರ್ಣಯಗಳು ಊಟದಲ್ಲಿ ಮೆಣಸು ಹಾಗೂ ಉಪ್ಪಿನಂತೆ

ಹಿತಕರವೂ, ಯಥೋಚಿತವೂ ಆಗಿವೆ. ಅವರು ಇತಿಹಾಸವನ್ನು ನೋಡಿರುವ ದೃಷ್ಟಿ ಸಂಪ್ರದಾಯಬದ್ಧವಾದುದಲ್ಲ ಅಥವಾ ಭಾವನಾಧಾರಿತವಾದುದಲ್ಲ, ಅದು ವ್ಯಾವಹಾರಿಕವಾದುದಾಗಿದೆ.

## 18.7 ಸರ್ದಾರ್ ಕೆ.ಎಂ.ಫಣಿಕ್ಕರ್ (1895–1963)

ಆಧುನಿಕ ಭಾರತದ ರಾಯಭಾರಕುಶಲಿ ಇತಿಹಾಸಕಾರರೂ, ಭವ್ಯ ವ್ಯಕ್ತಿತ್ವ ಹಾಗೂ ಅಪರೂಪ ಸೃಜನಶೀಲ ಕಲ್ಪನಾಶಕ್ತಿಯಿಂದ ಕೂಡಿ ಭಾರತದ ಇತಿಹಾಸದ ಬಗ್ಗೆ ಒಂದು ನೂತನವಾಗಿದ್ದ ದೃಷ್ಟಿಕೋನವನ್ನು ಬೆಳೆಸಿಕೊಂಡಿದ್ದ ಮಹಾಲೇಖಕರೂ ಆಗಿದ್ದ ಕಾವಲಂ ಮಾಧವ ಫಣಿಕ್ಕರ್.

1895 ರಲ್ಲಿ ಕೇರಳದ ಕಾವಲಂನಲ್ಲಿ ಹುಟ್ಟಿ, ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಶಿಕ್ಷಣವನ್ನು ಪಡೆದು, ಆಕ್ಸ್‌ಫರ್ಡಿನಲ್ಲಿ ಇತಿಹಾಸದ ವಿಷಯದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ, ನಂತರ ವಕೀಲರಾದರು; 1922 ವರೆಗೆ ಅಲಿಘರ್ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು ಮತ್ತು 1924 ರಲ್ಲಿ ದೆಹಲಿನಲ್ಲಿ ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆ ಪ್ರಾರಂಭವಾದಾಗ ಅದರ ಸಂಪಾದಕರಾದರು. ನಂತರ ಪತ್ರಿಕೋದ್ಯಮ ಕ್ಷೇತ್ರವನ್ನು ಬಿಟ್ಟು ಅವರ ರಾಜರ ಮಂಡಳಿಯ ಕಾರ್ಯದರ್ಶಿಯಾದರು; 1936 ರಿಂದ 1939 ರವರೆಗೆ ಪಾಟಿಯಾಲಾ ರಾಜ್ಯದಲ್ಲಿ ಮತ್ತು 1939 ರಿಂದ 1944 ರವರೆಗೆ ಬಿಕನಿರ್ ಸಂಸ್ಥಾನದಲ್ಲಿ ವಿದೇಶಾಂಗ ಮಂತ್ರಿಯಾಗಿದ್ದರು; 1944 ರಲ್ಲಿ ಬಿಕನಿರ್ ರಾಜ್ಯದ ಪ್ರಧಾನ ಮಂತ್ರಿಯಾಘಿ ಸೇವೆ ಸಲ್ಲಿಸಿದರು. ಅಲ್ಲಿ ಅವರಿಗೆ "ಸರ್ದಾರ್" ಎಂಬ ರಾಜಪುತ್ರ ಬಿರುದನ್ನು ಕೊಡಲಾಯಿತು. 1930 ಹಾಗೂ 1933 ರ ನಡುವಿನ ವರ್ಷಗಳಲ್ಲಿ ದುಂಡು ಮೇಜು ಸಭೆಗೆ ಭಾರತ ಸಂಸ್ಥಾನಗಳ ನಿಯೋಗದ ಕಾರ್ಯದರ್ಶಿಯಾಗಿ ಮತ್ತು 1942 ರಲ್ಲಿ ಕೆನಡಾದಲ್ಲಿ ನಡೆದ ಫೆಸಿಫಿಕ್ ರಿಲೇಷನ್ಸ್ ಸಭೆಯಲ್ಲಿ ಭಾರತ ರಾಜ್ಯಗಳ ಪ್ರತಿನಿಧಿಯಾಗಿ ಹೋಗಿ ಕರ್ತವ್ಯವನ್ನು ನಿರ್ವಹಿಸಿದರು. ಇದರಿಂದ ಅವರಿಗೆ ಭಾರತದ ಸಮಸ್ಯೆಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಅಪಾರ ಅನುಭವವನ್ನು ಪಡೆಯುವುದಕ್ಕೆ ಅವಕಾಶವಾಯಿತು. ಭಾರತದಲ್ಲಿ ಸ್ವಾತಂತ್ರ್ಯ ಸೂರ್ಯನ ಉದಯವಾದಂತೆ, ಭಾಋತದ ಪ್ರಥಮ ಪ್ರಧಾನಮಂತ್ರಿ ಜವಹರ್‌ಲಾಲ್ ನೆಹರೂರವರ ಕರೆಗೆ ಓಗೊಟ್ಟು ಅವರು ನಾಡಿನ ಸೇವೆಗೆ ಮುಂದಾದರು. ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಭಾರತದ ರಾಯಭಾರಿಯಾಗಿ ಕಾರ್ಯವನ್ನು ನಿರ್ವಹಿಸಿದರು. ಮತ್ತು ಭಾರತ ಹಾಗೂ ಚೀಣಾದ ನಡುವೆ ಸ್ನೇಹಸೇತುವೆಯನ್ನು ನಿರ್ಮಿಸಿದ ಶಿಲ್ಪಿ ಅವರು. ಹೀಗೆ ರಾಜಕೀಯ ಕ್ಷೇತ್ರದಲ್ಲಿ ಗುರುತರವಾಗಿದ್ದ ಹೊಣೆಗಾರಿಕೆಯನ್ನು ನಿರ್ವಹಿಸಿ, ಅವರು ಪುನಃ ಶಿಕ್ಷಣ ರಂಗಕ್ಕೆ ಹಿಂತಿರುಗಿ 1961 ರಲ್ಲಿ ಕಾಶ್ಮೀರ ವಿಶ್ವವಿದ್ಯಾನಿಲಯದಲ್ಲಿ, ನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕುಲಪತಿಗಳಾದರು; 1963 ರ ಡಿಸೆಂಬರ್ 11 ರಂದು ಮೈಸೂರಿನಲ್ಲಿ ಮೃತ್ಯುವಿನ ವಶವಾದರು; ಹೀಗೆ ಶಿಕ್ಷಣ ಕ್ಷೇತ್ರದಲ್ಲಿ ಆರಂಭವಾದ ಅವರ ಸೇವಾ ಜೀವನ, ಅದೇ ರಂಗದಲ್ಲಿ ಮುಕ್ತಾಯಗೊಂಡಿತು ಹಾಗೂ ಒಂದು ಸಾರ್ಥಕ ಜೀವನಚಕ್ರದ ಆವರ್ತ ಕೊನೆಗೊಂಡಿತು.

ಜೀವನದ ವಿವಿಧ ರಂಗಗಳಲ್ಲಿ ಇಷ್ಟೊಂದು ಜವಾಬ್ದಾರಿಯುತ ಕೆಲಸಗಳನ್ನು ನಿರ್ವಹಿಸುತ್ತಿದ್ದರೂ, ಫಣಿಕ್ಕರ್ ಆಳವಾಗಿದ್ದ ಪಾಂಡಿತ್ಯವನ್ನು ಸಂಪಾದಿಸಿಕೊಂಡು ಇತಿಹಾಸ ರಚನೆಯನ್ನು ಒಂದು ಹವ್ಯಾಸವಾಗಿ, ಅದಕ್ಕಿಂತ ಹೆಚ್ಚಾಗಿ ಒಂದು ಪವಿತ್ರ ಧ್ಯೇಯ ಹಾಗೂ ಕರ್ತವ್ಯವಾಗಿ ಎಣಿಸಿ ಚರಿತ್ರೆಯ ಕ್ಷೇತ್ರಕ್ಕೆ ಅತ್ಯಂತ ಬೆಲೆಬಾಳುವ ಕಾಣಿಕೆಗಳನ್ನು ನೀಡಿದರು. ಅವರ ಇತಿಹಾಸ ಕೃತಿಗಳನ್ನು ಈ ಕೆಳಕಂಡಂತೆ ಮೂರು ಭಾಗಗಳಾಗಿ ವಿಭಾಗಿಸಬಹುದು;

(1) ಫಣಿಕ್ಕರ್ ಅಲಿಘರ್‌ನಲ್ಲಿದ್ದಾಗ ಬರೆದ ಶ್ರೀ ಹರ್ಷ ಆವ್ ಕನೂಜ್ – ಏ ಮಾನೊಗ್ರಾಫ್ ಆವ್ ದಿ ಹಿಸ್ಟೊರಿ ಆವ್ ಇಂಡಿಯಾ ಇನ್ ದಿ ಫರ್ಸ್ಟ್ ಹಾಫ್ ಆವ್ ದಿ ಸೆವೆನ್ತ್ ಸೆಂಚುರಿ ಏ.ಡಿ. (1922); ಅವರಿಗೆ ಪ್ರಾಚೀನ ಭಾರತದ ಇತಿಹಾಸದಲ್ಲಿದ್ದ ಆಸಕ್ತಿಯನ್ನು ಪ್ರತಿಬಿಂಬಿಸಿದ ಹಾಗೂ ಹಿಂದೂಗಳಲ್ಲಿ ರಾಜ್ಯಶಾಸ್ತ್ರವು ಗಂಭೀರ ವಿಷಯವಾಗಿರಲಿಲ್ಲ ಎಂಬ ಯೂರೋಪಿನ ಬರಹಗಾರರ ತಪ್ಪು ಟೀಕೆಯನ್ನು ಸರಿಪಡಿಸುವ ಉದ್ದೇಶದಿಂದ ಕೂಡಿದ್ದ ಆರಿಜಿನ್ ಆ್ಯಂಡ್ ಎವೊಲ್ಯೂಷನ್ ಆವ್ ಕಿಂಗಷಿಪ್ ಇನ್ ಇಂಡಿಯಾ (1938); 16ನೆಯ ಶತಮಾನದ ಆರಂಭದಿಂದ ಹಿಡಿದು 18ನೆಯ ಶತಮಾನದ ಅಂತ್ಯದವರೆಗೆ ಯೂರೋಪಿಗೂ, ಭಾರತದ ಪಶ್ಚಿಮ ಕರಾವಳಿಗೂ ಇದ್ದ ಸಂಪರ್ಕವನ್ನು ವಿವರಿಸಿದ ಪರಸ್ಪರ ಪೂರಕ ಕೃತಿಗಳಾಗಿದ್ದ ಮಲಬಾರ್ ಆ್ಯಂಡ್ ದಿ ಪೋರ್ಚುಗೀಸ್, ಎಟ್‌ಸೆಟೆರ ಮತ್ತು ಮಲಬಾರ್ ಆ್ಯಂಡ್ ದಿ ಡಚ್ (1931) ಮತ್ತು ನಂತರ ಒಂದೇ ಸಂಪುಟವಾಗಿ ಪ್ರಕಟವಾದ ಏ ಹಿಸ್ಟೊರಿ ಆವ್ ಕೇರಳ (1498–1801); ಭಾರತದ ಶಿಕ್ಷಣ ಸಮಸ್ಯೆಯನ್ನು ಕುರಿತ ಎಸ್ಸೇಸ್ ಆನ್ ಎಡ್ಯುಕೇಷನಲ್ ರಿಕನ್ಸ್ಟ್ರಕ್ಷನ್ ಇನ್ ಇಂಡಿಯಾ (1920); ಮುಂದೆ ಬ್ರಿಟಿಷರಿಂದ ಭಾರತೀಯರಿಗೆ ಆದ ಅಧಿಕಾರ ವರ್ಗಾವಣೆಯನ್ನು ಮುಂಭಾವಿಸಿ ಭಾರತ ಸಂವಿಧಾನದ ಮುಂದಿನ ಚೌಕಟ್ಟಿನ ಬಗ್ಗೆ ವ್ಯಕ್ತಪಡಿಸದ ಅಭಿಪ್ರಾಯಗಳಿಂದ ಕೂಡಿದ್ದ ಫೆಡೆರಲ್ ಇಂಡಿಯಾ (1930); ಸಂವಿಧಾನಾತ್ಮಕ ಸಮಸ್ಯೆಗಳನ್ನು ಕುರಿತ ಸ್ಪಷ್ಟ ಅಬಿಪ್ರಾಯಗಳನ್ನು ಒಳಗೊಂಡಿದ್ದ ದಿ ವರ್ಕಿಂಗ್ ಆವ್ ಡೈಅರ್ಕಿ, 1919–1928 (1928); ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಹಿಂದಿನ ವರ್ಷ ಬರೆಯಲಾದ ಮತ್ತು ಹಿಂದೂ ಮಹಾಸಾಗರ ಪ್ರದೇಶದ ರಕ್ಷಣಾ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಬ್ರಿಟನ್ ಹಾಗೂ ಭಾರತದ ನಡುವಿನ ಮುಂದಿನ ಬಾಂಧವ್ಯವನ್ನು ವಿವರಿಸಿರುವ ದಿ ಬೇಸಿಸ್ ಆವ್ ಆ್ಯನ್ ಇಂಡೋ ಬ್ರಿಟಿಷ್ ಟ್ರೀಟಿ (1946); ಭೂ ರಾಜನೀತಿಗೆ ಸಂಬಂಧಿಸಿದ್ದ ಹಾಗೂ ಮುಖ್ಯವಾಗಿದ್ದ ಇಂಡಿಯಾ ಆ್ಯಂಡ್ ದಿ ಇಂಡಿಯನ್ ಓಷನ್ – ಆ್ಯನ್ ಎಸ್ಸೇ ಆನ್ ದಿ ಇನ್‌ಫ್ಲೂಯೆನ್ಸ್ ಆವ್ ಸೀಪೌಆರ್ ಆನ್ ಇಂಡಿಯನ್ ಹಿಸ್ಟೊರಿ (1945) ಮತ್ತು ಜೀಒಗ್ರಾಫಿಕಲ್ ಫ್ಯಾಕ್ಟರ್ಸ್ ಇನ್ ಇಂಡಿಯನ್ ಹಿಸ್ಟೊರಿ (1955); ಅತ್ಯಂತ ಹಿಂದಿನ ಕಾಲದಿಂದ ಹಿಡಿದು ಇಂದಿನ ಶತಮಾನದವರೆಗೆ ಭಾರತದ ಇತಿಹಾಸದ ಸಾಮಾನ್ಯ ವಿಶ್ಲೇಷಣೆಯಾದ ಏ ಸರ್ವೆ ಆವ್ ಇಂಡಿಯನ್ ಹಿಸ್ಟೊರಿ (1947); ಸಿಪಾಯಿ ದಂಗೆಯ ಶತಮಾನೋತ್ಸವದ ಸಂದರ್ಭದಲ್ಲಿ ಬರೆದ ಹಾಗೂ ಅದೊಂದು ಜನರ ದಂಗೆಯಾಗಿದ್ದಿತೆಂದು ಸಾಧಿಸಿದ ಇನ್ 1857 ಎಂಬ ಅತ್ಯಂತ ಸ್ವಾರಸ್ಯಕರ ಲಘುಪುಸ್ತಕ; ನೂತನ ದೃಷ್ಟಿಕೋನದಿಂದ ಮಾಡಲಾದ ಭಾರತ ಇತಿಹಾಸ ಹರವಿನ ಸಮರ್ಪಕ ಸಮೀಕ್ಷೆಯಾಗಿರುವ ದಿ ಡಿಟರ್ಮಿನಿಂಗ್ ಪೀರಿಯಡ್‌ಸ್ ಆವ್ ಇಂಡಿಯನ್ ಹಿಸ್ಟೊರಿ (1963); ಅಪ್ರತ್ಯಕ್ಷವಾಗಿ ಹಿಂದೂ ಸಂಸ್ಕೃತಿಯ ಸತ್ತ್ವವನ್ನು ಸಮರ್ಥಿಸಿದ ದಿ ಫೌಂಡೇಷನ್ ಆವ್ ನ್ಯೂ ಇಂಡಿಯಾ (1963) ಮುಂತಾದ ಭಾರತ ಚರಿತ್ರೆಯ ದೃಶ್ಯಪರಂಪರೆಯನ್ನು ತೆರೆದು ತೋರಿಸುವ ಪ್ರಧಾನ ಗ್ರಂಥಗಳು.

(2) ದಿ ಎವೊಲ್ಯೂಷನ್ ಆನ್ ಬ್ರಿಟಿಷ್ ಪಾಲಿಸಿ ಟುವರ್ಡ್ಸ್ ಇಂಡಿಯನ್ ಸ್ಟೇಟ್ಸ್ (1774–1858) ಎಂಬ ವಿಷಯವಾಗಿ ಕಲ್ಕತ್ತಾದಲ್ಲಿ ಮಾಡಿದ ಭಾಷಣಗಳ ಪರಿಷ್ಕೃತ ಸಂಪುಟವಾಗಿದ್ದ ಇಂಡಿಯನ್ ಸ್ಟೇಟ್ಸ್ ಆ್ಯಂಡ್ ದಿ ಗವರ್ನ್‌ಮೆಂಟ್ ಆವ್ ಇಂಡಿಯಾ (1952); ರಾಜರ ಆಳ್ವಿಕೆಗೆ ಒಳಪಟ್ಟಿದ್ದ ಸಂಸ್ಥಾನಗಳ ಸಮಸ್ಯೆಗಳ ಕಾನೂನು ಸಂಬಂಧವಾದ ಅಂಶಗಳನ್ನು ಚರ್ಚಿಸಿದ ಇಂಟರ್‌ಸ್ಟೇಟ್ ಲಾ – ದಿ ಲಾ ಅಫೆಕ್ಟಿಂಗ್ ದಿ ರಿಲೇಷನ್ಸ್ ಆವ್ ಇಂಡಿಯನ್ ಸ್ಟೇಟ್ಸ್ ವಿತ್ ದಿ ಬ್ರಿಟಿಷ್ ಕ್ರೌನ್; ಭಾರತದ ರಾಜ್ಯಗಳ ಬಗ್ಗೆ ಇದ್ದ ಅಭಿಪ್ರಾಯಗಳ ಸಾರಾಂಶವಾಗಿದ್ದ ಆಕ್ಸ್‌ಫರ್ಡ್ ಪ್ಯಾಂಫ್ಲೆಟ್ ಆವ್ ಇಂಡಿಯನ್ ಅಫೇರ್ಸ್ (1922); ಕಾಶ್ಮೀರದ ಮಹಾರಾಜ ಗುಲಾಬ್ ಸಿಂಗರ ಮತ್ತು ಬಿಕನಿರ್ ಮಹಾರಾಜರ ಜೀವನ ಚರಿತ್ರೆಗಳಾದ ದಿ ಫೌಂಡಿಂಗ್ ಆವ್ ದಿ ಕಾಶ್ಮೀರ್ ಸ್ಟೇಟ್, ಎ ಬಯಾಗ್ರಫಿ ಆವ್ ಮಹಾರಾಜ ಗುಲಾಬ್‌ಸಿಂಗ್ (1930) ಮತ್ತು ಹಿಸ್ ಹೈನೆಸ್ ದಿ ಮಹಾರಾಜ ಆವ್ ಬಿಕನಿರ್: ಎ ಬಯಾಗ್ರಫಿ (1937); ಮತ್ತು ಯಥಾರ್ಥ ನಿರೂಪಣೆಯಾಗಿರುವ ಎ ಇಂಡಿಯನ್ ಪ್ರಿನ್ಸ್ ಇನ್ ಕೌನ್ಸಿಲ್ – ಎ ರಿಕಾರ್ಡ್ ಆವ್ ದಿ ಚಾನ್ಸೆಲರ್‌ಷಿಪ್ ಆವ್ ಹಿಸ್ ಹೈನೆಸ್ ದಿ ಮಹಾರಾಜ ಆವ್ ಪಾಟಿಯಾಲ ಇತ್ಯಾದಿ ಭಾರತೀಯ ದೊರೆಗಳ ಆಳ್ವಿಕೆಗೆ ಒಳಪಟ್ಟಿದ್ದ ಸಂಸ್ಥಾನಗಳಿಗೆ ಸಂಬಂಧಿಸಿದ ಕೃತಿಗಳು ಮತ್ತು

(3) ಭಾರತೀಯ ವಲಸೆಯ ಸಮಸ್ಯೆಗಳಿಗೆ ಕುರಿತ ಪ್ರಾಬ್ಲಂಸ್ ಆವ್ ಗ್ರೇಟರ್ ಇಂಡಿಯಾ (1961); ಸಮಗ್ರ ಆಗ್ನೇಯ ಏಷ್ಯಾವಿಗೆ ಸಂಬಂಧಪಟ್ಟ ಯುದ್ಧಾನಂತರದ ಯೋಜನೆಯ ವಿಷಯವಾಗಿ ವ್ಯಾಪಕವಾಗಿ ಚರ್ಚಿಸಿರುವ ದಿ ಫ್ಯೂಚರ್ ಆವ್ ಇಂಡಿಯಾ ಆ್ಯಂಡ್ ಸೌತ್‌ಈಸ್ಟ್ ಏಷ್ಯಾ (1845); ಚೀಣಾ–ಭಾರತ ಸಂಬಂಧದ ಅಧ್ಯಾಯವಾಗಿರುವ ಇಂಡಿಯಾ ಆ್ಯಂಡ್ ಚೀಣಾ (1957); ನೂತನವಾಗಿ ತಲೆ ಎತ್ತಿಕೊಳ್ಳುತ್ತಿದ್ದ ಏಷ್ಯಾ ಹಾಗೂ ಆಫ್ರಿಕಾದ ರಾಜ್ಯಗಳ ಸಮಸ್ಯೆಗಳನ್ನು ಚರ್ಚಿಸಿ ತಕ್ಕ ಪರಿಹಾರಗಳನ್ನು ಸೂಚಿಸಿರುವ ದಿ ಆಫ್ರೋ–ಏಷ್ಯನ್ ಸ್ಟೇಟ್ಸ್ ಆ್ಯಂಡ್ ದೇರ್ ಪ್ರಾಬ್ಲಂಸ್ (1959); ಪಾಂಡಿತ್ಯ ಜಗತ್ತನ್ನು ಆಶ್ಚರ್ಯಚಕಿತಗೊಳಿಸಿದ. ಇತಿಹಾಸ ನಿಧಿಗೆ ಮಹತ್ತ್ವಪೂರಿತ ಕಾಣಿಕೆಯಾಗಿದ್ದ 1498 ಹಾಗೂ 1945 ರ ನಡುವಿನ ವರ್ಷಗಳಲ್ಲಿ ಏಷ್ಯಾದ ದೇಶಗಳಿಗೂ ಹಾಗೂ ಯೂರೋಪಿಗೂ ಉಂಟಾದ ಸಂಪರ್ಕದ ವಿಮರ್ಶಾತ್ಮಕ ಸಮೀಕ್ಷೆಯಾಗಿರುವ ಮತ್ತು ಈ ಸಮಸ್ಯೆಯನ್ನು ಏಷ್ಯಾದ ದೃಷ್ಟಿಕೋನದಿಂದ ವೀಕ್ಷಿಸಿ ವಿಚಾರ ಮಾಡಿದ ಏಷ್ಯಾ ಆ್ಯಂಡ್ ವೆಸ್ಟ್ರ್ನ್ ಡಾಮಿನೆನ್ಸ್ (1953) ಮುಂತಾದ ಭಾರತ ದಿಗಂತದಾಚೆಗೆ ವ್ಯಾಪಿಸಿರುವ ವಿಶಾಲ ದೃಷ್ಟಿಕೋನದಿಂದ ಇತರ ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಭಾರತಚರಿತ್ರೆಯ ನಿರೂಪಣೆಯಾಗಿರುವ ಮತ್ತು ಏಷ್ಯಾದ ದೃಷ್ಟಿಕೋನವೇ ಎದ್ದುಕಾಣುವಂತೆ ಇರುವ ಗ್ರಂಥಗಳು.

ಫಣಿಕ್ಕರ್ ಭಾರತವನ್ನು ಕುರಿತ ಬ್ರಿಟಿಷ್ ಇತಿಹಾಸಲೇಖನ ಕಲೆಯಲ್ಲಿದ್ದ ಹಲವಾರು ಕುಂದುಕೊರತೆಗಳನ್ನು ಸ್ಪಷ್ಟಪಡಿಸಿದರು. ಮೊದಲನೆಯದಾಗಿ, ಭಾರತದಲ್ಲಿ ಬ್ರಿಟಿಷ್ ಅಧಿಕಾರಿಗಳು ನಡೆಸಿದ ಪ್ರತಿ ಕಾರ್ಯಕ್ರಮವನ್ನು ಸಮರ್ಥಿಸುವುದು, ಅಸಮರ್ಥನೀಯವಾದಾಗ, ವಿಷಯಗಳನ್ನು ತೇಲಿಸಿಬಿಡುವುದು ಮತ್ತು ಈ ನಾಡಿನಲ್ಲಿ ಬ್ರಿಟಿಷ್ ಅಧಿಕಾರವನ್ನು ವಿರೋಧಿಸಿದ್ದ ಎಲ್ಲಾ ಚಳವಳಿಗಳನ್ನು ತಪ್ಪಾಗಿ ನಿರೂಪವಿಸುವುದು ಹಾಘೂ ಎಲ್ಲಾ ವ್ಯಕ್ತಿಗಳಿಗೂ ಕಳಂಕವನ್ನು ಹೊರೆಸಿ ಮಸಿ ಬಳಿಯುವುದು ಈ ಎಲ್ಲಾ ಬರಹಗಳ ಏಕಮಾತ್ರ ಉದ್ದೇಶವಾಗಿದ್ದಿತು. ಎರಡನೆಯದಾಗಿ, ಅವುಗಳಲ್ಲಿದ್ದ ಇನ್ನೊಂದು ದೊಡ್ಡ

ದೋಷವೆಂದರೆ, ಭಾರತದಲ್ಲಿ ಯಾವ ಮುಖ್ಯ ಸಾಧನೆಯೂ ಕಂಡುಬರಲಿಲ್ಲ. ಹಾಗೇನಾದರೂ ಇದ್ದರೆ ಅದಕ್ಕೆ ಯೂರೋಪ್ ಮೂಲ ಎಂಬುದಾಗಿ ಸಾಧಿಸುವ ಅನ್ಯಾಯಕರ ಪ್ರವೃತ್ತಿ. ಈ ಮುಂಚಿನ ಬರಹಗಳಲ್ಲಿ ಹೆಚ್ಚಾಗಿ ದೊರೆ ಹಾಗೂ ಆಳುವ ಸಂತತಿಗಳಿಗೆ ಪ್ರಾಧನ್ಯತೆಯನ್ನು ನೀಡುರುವುದು ಮೂರನೆಯ ಕೊರತೆ. ಆದ್ದರಿಂದ ಭಾರತ ಇತಿಹಾಸ ನೀರಸವಾಗಿ ಅದು ಕೇವಲ ಟೆಲಿಫೋನ್ ಹೆಸರು, ವಿಳಾಸ ಸೂಚಿಯಂತಿದ್ದಿತು. ಕೊನೆಯದಾಗಿ ಭಾರತ ಚರಿತ್ರೆಯನ್ನು ಪರಸ್ಪರ ಸಂಬಂಧವೇ ಇಲ್ಲದ ಹಿಂದೂ, ಮುಸ್ಲಿಂ ಹಾಗೂ ಬ್ರಿಟಿಷ್ ಕಾಲಗಳೆಂಬುದಾಗಿ ವಿಭಾಗಿಸುವ ಕ್ರಮ ಅವೈಜ್ಞಾನಿಕವಾದುದು. ಆದ್ದರಿಂದ ಭಾರತ ಇತಿಹಾಸವನ್ನು ಪುನಃ ಶೋಧಿಸಿ ಕಂಡುಹಿಡಿಯಬೇಕು; ಭಾರತದ ಅಮೂಲ್ಯನಿಧಿ, ಶತಶತಮಾನಗಳಿಂದ ಆದ ಅದರ ವಿಕಾಸ, ಪರಿವರ್ತನೆ ಹಾಗೂ ಅವಿಚ್ಛಿನ್ನತೆಯ ಸ್ಪಷ್ಟ ವಿಶದೀಕರಣವೇ ಭಾರತ ಇತಿಹಾಸದ ನಿಜವಾದ ತಿರುಳು; ಭಾರತದಲ್ಲಿ ಮುಖ್ಯವಾಗಿದ್ದ ಐತಿಹಾಸಿಕ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಂಡು ಭಾರತೀಯ ದೃಷ್ಟಿಯಿಂದ ಭಾರತ ಇತಿಹಾಸಲೇಖನ ಕಲೆಯನ್ನು ಬೆಳೆಸುವುದು; ತೆರಪುಗಳನ್ನು ತುಂಬುವುದು ಮತ್ತು ಭಾರತವನ್ನು ಕುರಿತ ಬ್ರಿಟಿಷ್ ಲೇಖಕರ ಬರಹಗಳಲ್ಲಿ ಇದ್ದ ತಪ್ಪುಗಳನ್ನು ತಿದ್ದುವುದು ಪಣಿಕ್ಕರ್‌ಗೆ ಒಂದು ಆಧ್ಯಾತ್ಮಿಕ ಸಾಹಸೋದ್ಯಮವಾಯಿತು.

ಹೀಗೆ ತಾವು ಕೈಗೊಳ್ಳಬೇಕಾದ ನಿರ್ದಿಷ್ಟ ಕಾರ್ಯವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡು ಪಣಿಕ್ಕರ್ ಐತಿಹಾಸಿಕ ಸಮಸ್ಯೆಗಳನ್ನು ಅತ್ಯಂತ ನೂತನವಾಗಿದ್ದ ದೃಷ್ಟಿಕೋನದಿಂದ ವೀಕ್ಷಿಸಿದರು. ಅಧ್ಯಯನ ವಿಧಾನದ ವಿಚಾರದಲ್ಲಿ ಹಳೆಯ ರೂಢಿ ಮಾರ್ಗವನ್ನು ಅನುಸರಿಸಲಿಲ್ಲ. ಅಂದರೆ, ಗ್ರಂಥಾಲಯ, ಸರ್ಕಾರಿ ಪತ್ರಾಗಾರ, ಮತ್ತು ಇತರ ಆಧಾರಗಳಿಂದ ವಿಷಯಗಳನ್ನು ಸಂಗ್ರಹಿಸಿ, ಕ್ರಮಬದ್ಧವಾಗಿ ವರ್ಗೀಕರಿಸಿ, ಅಡಿಟಿಪ್ಪಣಿ ಹಾಗೂ ಆಕರಗಳಿಂದ ತುಂಬಿ ತುಳುಕುವಂತಹ ಸಂಶೋಧನಾ ವರದಿಯನ್ನು ಬರೆಯುವುದು, ದಾಖಲೆಯಾಧಾರಿತವಾದ ಸಂಶೋಧನೆಯನ್ನು ನಡೆಸುವುದು ಹಾಗೂ ಇಲ್ಲಿ ಹರಿದು ಅಲ್ಲಿ ಅಂಟಿಸುವುದು ಅವರ ಕ್ರಮವಾಗಿರಲಿಲ್ಲ. ಅವರು ತಮ್ಮದೇ ಆಗಿದ್ದ ತಂತ್ರವೊಂದನ್ನು ಬೆಳೆಸಿದರು; ಅದೇ ವಿಶ್ಲೇಷಣಾ ತಂತ್ರ. ಸಂಶೋಧನಾ ವ್ಯಕ್ತಿ ಹಾಗೂ ಘಟನೆಗಳನ್ನು ಆಯಾಯ ಕಾರ್ಯಕ್ಷೇತ್ರಗಳಿಗೆ ಸಂಬಂಧಿಸಿದಂತೆ ವೀಕ್ಷಿಸಿ ಮೌಲ್ಯವನ್ನು ನಿರ್ಧರಿಸಿ ಅವುಗಳಿಗಿರುವ ಮೂಲಭೂತ ಏಕತೆಯನ್ನು ಕಂಡುಹಿಡಿಯುವ ವಿಶಿಷ್ಟ ಯೋಗ್ಯತೆ, ಸೃಜನಶೀಲ ಕಲ್ಪನೆ, ಸಹಾನುಭೂತಿ ಮತ್ತು ವಿಷಯಗಳನ್ನು ಬಲು ಸೊಗಸಾದ ಶೈಲಿಯಲ್ಲಿ ವಿವರಿಸುವ ಕಲೆ ಅವರಲ್ಲಿದ್ದ ಪ್ರಶಂಸಾರ್ಹ ಗುಣಗಳು. ನೀರಿನ ಕಿರುದೆರೆಗಳ ಮೇಲೆ ಹಾದುಹೋಗುವ ಸೂರ್ಯನ ಹೊಂಗಿರಣಗಳಂತೆ ಸರಳ, ಸುಲಲಿತ ಹರಿವು ಅವರ ಬರಹದಲ್ಲಿದೆ. ಇದಕ್ಕೆ ಕಾರಣ ಅವರು ಚರಿತ್ರೆಯ ವಸ್ತುಸ್ಥಿತಿಯನ್ನು ಕಂಡುಹಿಡಿದು, ಪರಿಶೀಲಿಸಿ, ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಶ್ರಮಿಸಿದರು. ಅವರಲ್ಲಿದ್ದ ಸೂಕ್ಷ್ಮವಾಗಿ ಅವಲೋಕಿಸುವ ಹಾಗೂ ವಿಶ್ಲೇಷಿಸುವ ಸೃಜನಶೀಲ ದೃಷ್ಟಿಯು ವಿಷಯ ಸಂಗ್ರಹಣೆಗೆ ಮೂಲವಾಯಿತು; ಅದರಲ್ಲಿದ್ದ ಮೂಲಾರ್ಥಗಳನ್ನು ಸಮಗ್ರವಾಗಿ, ಸ್ಪಷ್ಟವಾಗಿ ವಿವರಿಸುವ ಸಾಮರ್ಥ್ಯವು ಅವರ ಲೇಖನಿಯನ್ನು ಶಕ್ತಿಯುತವನ್ನಾಗಿಸಿ ಬರಹ ಸುಲಲಿತವಾಗಿ ಮುಂದುವರಿಯು-ವಂತೆ ಮಾಡಿತು ಮತ್ತು ಇತಿಹಾಸದ ಪ್ರತಿ ಇದ್ದ ತೀವ್ರಾಸಕ್ತಿಯು ಅವರ ಬರಹದ ವೇಗ ಹಾಗೂ ಗತಿಯನ್ನು ಎತ್ತಿಹಿಡಿದು ಮುಂದುವರಿಸಿತು. ಅವರು ವಿಭಿನ್ನವಾದ ಮನರಂಜಕ ಹಾಗೂ ಚಿತ್ತಾಕರ್ಷಕ ವಿನ್ಯಾಸ ಹಾಗೂ ಬಣ್ಣಗಳಲ್ಲಿ ಗತಕಾಲವನ್ನು ಚಿತ್ರಿಸಿದ ಕಲೆಗಾರರಾಗಿದ್ದರು.

ಕಾರಣ ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಇತಿಹಾಸವನ್ನು ರಚಿಸುವುದು ಅವರ ಉದ್ದೇಶವಾಗಿದ್ದಿತು. ಅವರ ಪ್ರಕಾರ, ನಾಗರಿಕತೆಯನ್ನು ಕಟ್ಟಲು, ತಮ್ಮ ಜೀವನಮಟ್ಟವನ್ನು ಉತ್ತಮಪಡಿಸಿಕೊಳ್ಳಲು ಮತ್ತು ಸುಖಕರವಾದ ಉತ್ತಮ ಜೀವನವನ್ನು ನಡೆಸಲು ಸಾಮಾನ್ಯ ಜನರು ಪ್ರಜ್ಞಾಪೂರ್ವಕವಾಗಿ ಮಾಡಿದ ಪ್ರಯತ್ನಗಳನ್ನು ಅಲಕ್ಷಿಸಿದರೆ, ಇತಿಹಾಸಕ್ಕೆ ಬೆಲೆ ಇರುವುದಿಲ್ಲ. ಉದಾಹರಣೆಗೆ, ಬ್ರಿಟಿಷರ ಕಾಲದಲ್ಲಿ ಭಾರತೀಯರು ಸಂಘಟಿತರಾಗಿ ನಡೆಸಿದ ಕಾರ್ಯಕ್ರಮಗಳಲ್ಲಿ ಭಾರತ ಇತಿಹಾಸದ ಮೌಲ್ಯವಿರುವುದೇ ಹೊರತು ಬ್ರಿಟಿಷ್ ಸರ್ಕಾರದ ಚಟುವಟಿಕೆಗಳ ನಿರೂಪಣೆಯಲ್ಲಲ್ಲ. ಮಧ್ಯಯುಗದಲ್ಲಿ ಹೇಗೆ ಭಕ್ತಿಪಂಥದ ಪ್ರಭಾವವು ಸಮಾಜದ ಕೆಳವರ್ಗಗಳಲ್ಲಿ ವ್ಯಾಪಿಸಿತು ಮತ್ತು ಹೇಗೆ ನಗರ ಕ್ರಾಂತಿಯ ಕಾರಣ ಉಂಟಾದ ಪರಿವರ್ತನೆಯಿಂದ ಸಮಾಜ ಬದಲಾಗಿ ಮಂಗೋಲರ ದಾಳಿಯನ್ನು ತಡೆಗಟ್ಟಲು ಶಕ್ತವಾಯಿತು ಎಂಬ ಕಥನವೇ ಮಧ್ಯಕಾಲದ ನಿಜವಾದ ಚರಿತ್ರೆಯೇ ಹೊರತು ಸುಲ್ತಾನರು, ಅರಮನೆ ಹಾಗೂ ರಣರಂಗಗಳಲ್ಲಿ ನಡೆಸಿದ ಕಾರ್ಯಕ್ರಮಗಳ ಕಥೆಯಲ್ಲ. ಅದೇ ರೀತಿ ಪ್ರಾಚೀನ ಭಾರತದ ಯಥಾರ್ಥ ಇತಿಹಾಸ ಕಂಡುಬರುವುದು ಆ ಸಮಯದ ದರ್ಶನ, ಕಲೆ, ಸಾಹಿತ್ಯ, ಧರ್ಮ ಇತ್ಯಾದಿಗಳನ್ನು ರೂಪಿಸಿದ ಭಾವನೆ ಹಾಗೂ ಸಂಸ್ಕೃತಿಗಳ ನಿರೂಪಣೆಯಲ್ಲಿಯೇ ಹೊರತು, ಆಳಿದ ಸಂತತಿಗಳ ಹಾಗೂ ರಾಜರ ಪಟ್ಟಿಯಲ್ಲಲ್ಲ. ಹಾಗೆಯೇ ಸಮಕಾಲೀನ ಭಾರತ ಇತಿಹಾಸದ ಮಹತ್ತ್ವ ಇರುವುದು ಈ ಸಮಾಜವನ್ನು ಒಂದು ಸಮೈಕ್ಯ ಸಮಷ್ಟಿಯಾಗಿ ಸಂಘಟಿತವಾಗಿ ರೂಪಿಸಿದ್ದ ಹಾಗೂ ಪ್ರತ್ಯೇಕಿಸುವ ಶಕ್ತಿಗಳನ್ನು ತಡೆಗಟ್ಟಲು ಶಕ್ತವಾಗಿದ್ದ ನೂತನ ಭಾವನೆಗಳ ಸ್ಪಷ್ಟೀಕರಣದಲ್ಲಿಯೇ ಹೊರತು, ಈ ನಾಡಿನ ಔದ್ಯೋಗಿಕ ಪ್ರಗತಿ ಸಾಧನೆಯ ವಿವರಣೆಯಲ್ಲಲ್ಲ.

ಪಣಿಕ್ಕರ್ ಯಾವ ಪ್ರಾದೇಶಿಕ ಪ್ರೇಮವನ್ನು ಬೆಳೆಸಿಕೊಳ್ಳದೇ ಇದ್ದರೂ, ಹಿಂದೂ ಸಂಸ್ಕೃತಿಯು ಆಳವಾಗಿ ಬೇರು ಬಿಟ್ಟಿರುವ ದಕ್ಷಿಣ ಭಾರತದ ಬಗ್ಗೆ ಅವರಲ್ಲಿ ಬೆಳೆದುಬಂದಿದ್ದ ಹೆಮ್ಮೆಯ ಕಾರಣ ಅವರು ಪೂರ್ವಾಗ್ರಹದಿಂದ ಮುಕ್ತರಾಗಿರಲಿಲ್ಲ. ಹಿಂದೂ ಸಂಸ್ಕೃತಿಯ ಅಪೂರ್ವ ಸತ್ತ್ವವನ್ನು ಎತ್ತಿಹಿಡಿಯುವ ಕಾತುರದಲ್ಲಿ ಅವರು ಏಕಪಕ್ಷೀಯ ಮನೋಭಾವವನ್ನು ಬೆಳೆಸಿಕೊಂಡರು ಮತ್ತು ಈ ಹಿಂದೂ ಅಭಿಮಾನದ ಜೊತೆಗೆ ಅವರು ಕ್ರೈಸ್ತ–ಪಾದ್ರಿ–ವಿರೋಧಿ ಭಾವನೆಯನ್ನು ಬೆಳೆಸಿಕೊಂಡಿದ್ದರು ಎಂಬುದಾಗಿ ಟೀಕಿಸಲಾಗಿದೆ. ಇಷ್ಟು ಮಾತ್ರವಲ್ಲದೆ, ಅವರು ಒಂದು ಕಡೆ ಭಾರತದ ಮೂಲಭೂತ ಏಕತೆಯನ್ನು ಸಂಯೋಜನಾ ಸಾಮರ್ಥ್ಯವನ್ನು ಎತ್ತಿಹಿಡಿದರು; ಇನ್ನೊಂದು ಕಡೆ ಪಾಕಿಸ್ತಾನದ ಉದಯವನ್ನು ಸಹಜ ಎಂಬುದಾಗಿ ಎಣಿಸಿದರು; ಹೀಗೆ ಅವರ ವಿಚಾರಸರಣಿಯಲ್ಲಿ ವಿರೋಧವಾದ ಹೇಳಿಕೆಗಳಿವೆ ಎಂಬುದಾಗಿ ಸಹ ಆಪಾದಿಸಲಾಗಿದೆ.

ಪಣಿಕ್ಕರ್ ಭಾರತ ಸಂಸ್ಕೃತಿಯನ್ನು ಶ್ರೇಷ್ಠವಾದುದು ಎಂದು ಹೇಳಿದರೂ ಸಂಪ್ರದಾಯ ಬದ್ಧತೆಯನ್ನು ಎತ್ತಿಹಿಡಿದವರಲ್ಲ; ಅವರು ಪುನರುಜ್ಜೀವನ ತತ್ತ್ವಗಳನ್ನು ಅನುಸರಿಸಿದ ಇತಿಹಾಸಕಾರರಲ್ಲ; ಭಾರತದ ಸುವರ್ಣಯುಗ ಅಥವಾ ಅತ್ಯುತ್ತಮ ಗತಸಂಪ್ರದಾಯದಲ್ಲಿ ನಂಬಿಕೆಯನ್ನು ಬೆಳೆಸಿಕೊಂಡವರಲ್ಲ; ಭಾರತ ಇತಿಹಾಸದ ನಿರ್ದಿಷ್ಟ ವಿಚಾರ ಪಂಥಕ್ಕೆ ಸೇರಿದವರಲ್ಲ ಹಾಗೂ ಒಂದು ವಿಶಿಷ್ಟ ಐತಿಹಾಸಿಕ ವಿಚಾರಧಾರೆಯನ್ನು ಪ್ರತಿಪಾದಿಸಿದವರಲ್ಲ. ಅವರು ಭಾರತ ಇತಿಹಾಸವನ್ನು ಸೃಜನಶೀಲ ಕಲ್ಪನೆ ಹಾಗೂ

ಸಹಾನುಭೂತಿಯಿಂದ ರಚಿಸಲು ಬಯಸಿದ ವಸ್ತುನಿಷ್ಠ ಇತಿಹಾಸಕಾರರಾಗಿದ್ದರು. ಪಾಶ್ಚಾತ್ಯ ದೇಶದಲ್ಲಿ ತರಬೇತನ್ನು ಪಡೆದಿದ್ದರೂ ಅವರು ಬ್ರಿಟಿಷ್ ಸಾರ್ವಭೌಮಾಧಿಕಾರದ ಪರವಾಗಿದ್ದ ಲೇಖಕರಾಗಿರಲಿಲ್ಲ. ಅಥವಾ ರಾಷ್ಟ್ರವಾದಿ ಬರಹಗಾರರಾಗಿರಲಿಲ್ಲ. ರಷ್ಯಾ ಹಾಗೂ ಚೀಣಾವನ್ನು ಮೆಚ್ಚಿಕೊಂಡಿದ್ದರೂ, ಅವರು ಸಮಾಜವಾದಿ ಚರಿತ್ರಲೇಖಕರಾಗಿರಲಿಲ್ಲ. ಅವರು ಶೋಷಣೆಯನ್ನು ಅಳಿಸಿಹಾಕಬೇಕೆಂದು ಬಯಸಿದರೂ, ಸಾಮಾಜಿಕ ಪರಿವರ್ತನೆಗೆ ಹಿಂಸಾತ್ಮಕ ಮಾಧ್ಯಮ ಸರಿಯಾದುದು ಎಂಬುದನ್ನು ಒಪ್ಪಲಿಲ್ಲ. ಅವರು ನೋವಾಗಿದ್ದ ಭಾಗಗಳಿಗೆ ಮಾರ್ಕ್ಸ್‌ನು ಸೂಚಿಸಿದ್ದ ಮುಲಾಮನ್ನು ಹೆಚ್ಚಬೇಕೆಂದು ಸಲಹೆ ಮಾಡಿದರೇ ವಿನಹ ಸಂಪೂರ್ಣ ಶಸ್ತ್ರಚಿಕಿತ್ಸೆಯನ್ನು ಎತ್ತಿಹಿಡಿದವರಲ್ಲ. ಅವರ ದೃಷ್ಟಿಯಲ್ಲಿ, ಇತಿಹಾಸವು ಒಂದು ಸಂಯೋಜಿತ ಕಲ್ಪನೆ; ಒಂದು ಜೀವಂತ ಸತ್ಯ ಮತ್ತು ಜನರ ವಿಕಾಸದ ಶಕ್ತಿ ಹಾಗೂ ರಾಷ್ಟ್ರದ ಗತಕಾಲ, ಇಂದಿನ ಹಾಗೂ ಮುಂದಿನ ಯುಗಗಳನ್ನು ಕುರಿತ ಸಮಗ್ರ ಚಿಂತನೆಯಾಗಿದೆ; ಆದ್ದರಿಂದ ಅದನ್ನು ಅಸಂಘಟಿತ ಕ್ರಮದಲ್ಲಿ ರಚಿಸುವುದು ಸಾಧ್ಯವಿಲ್ಲ. ಪಣಿಕ್ಕರ್ ಜ್ಞಾನರಂಗದಲ್ಲಿ ಕ್ಷೇತ್ರದಿಂದ ಕ್ಷೇತ್ರಕ್ಕೆ ಹಾರಿ ಹೋಗಿ ಸಮಗ್ರವನ್ನು ಸಮೀಕ್ಷೆಯನ್ನು

## 18.8 ರಾಧಾ ಕಮಲ್ ಮುಖರ್ಜಿ (1889–1968)

ಇತಿಹಾಸ ಎಂದರೆ ನಾಗರಿಕತೆಯ ಚರಿತ್ರೆ, ಅಂದರೆ ಕಲೆ ಮತ್ತು ಸಂಸ್ಕೃತಿ, ದರ್ಶನ ಹಾಗೂ ಮತಧರ್ಮ, ಸಾಹಿತ್ಯ, ಕಾನೂನು ಹಾಗೂ ನೀತಿ, ಸರ್ಕಾರ, ಸಮಾಜ ಹಾಗೂ ಅರ್ಥವ್ಯವಸ್ಥೆಯ ಚರಿತ್ರೆ ಎಂಬುದಾಗಿ ಎಣಿಸಿದವರು ರಾಧಾಕಮಲ್ ಮುಖರ್ಜಿ. ಅವರು ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ಬರಹಾನ್‌ಪುರದ ಸುಸಂಸ್ಕೃತ ಬ್ರಾಹ್ಮಣ ಕುಟುಂಬದಲ್ಲಿ 1889 ರಲ್ಲಿ ಜನಿಸಿ ಬೆಳೆದು ಬಂದರು. ಅವರ ತಂದೆ ಗೋಪಾಲ ಚಂದ್ರ ಮುಖರ್ಜಿ ದೊಡ್ಡ ಪಂಡಿತರಾಗಿದ್ದರು. ಸುಪ್ರಸಿದ್ಧ ಇತಿಹಾಸಕಾರ ರಾಧಾಕುಮುದ್ ಮುಖರ್ಜಿ ಅವರು ಹಿರಿಯಣ್ಣನಾಗಿದ್ದರು. ಅವರು ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಇತಿಹಾಸ ಅರ್ಥಶಾಸ್ತ್ರಗಳನ್ನು ಪ್ರಧಾನ ವಿಷಯಗಳನ್ನಾಗಿ ತೆಗೆದುಕೊಂಡು ಪದವೀಧರರಾದರು ಮತ್ತು ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ಲಕ್ನೋ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿದ್ದರು. ಉಪಾಧ್ಯಾಯರಾಗಿ ಸೇರಿಕೊಂಡ ಅವರು ಕೊನೆಗೆ ಕುಲಪತಿಗಳಾದರು. ಅವರ ಸುದೀರ್ಘ ಹಾಗೂ ಸಾರ್ಥಕ ಜೀವನವು 1968 ರಲ್ಲಿ ಕೊನೆಗೊಂಡಿತು.

ಅಪಾರವಾಗಿ ಓದಿ, ಅಗಾಧ ಪಾಂಡಿತ್ಯವನ್ನು ಪಡೆದುಕೊಂಡಿದ್ದ ಮುಖರ್ಜಿ ಅನೇಕ ಮೂಲಾಧಾರಗಳನ್ನು ಆದ್ಯಂತವಾಗಿ ಪರಿಶೀಲಿಸಿ ವಿಭಿನ್ನ ಬಗೆಯ ಅಪಾರ ವಿಷಯ ಸಾಮಗ್ರಿಗಳನ್ನು ಬಳಸಿ ಭಾರತ ಸಂಸ್ಕೃತಿಯನ್ನು ಕುರಿತು ಸಂಪುಟಗಳನ್ನು ರಚಿಸಿದರು. ಸಂಸ್ಕೃತಿ, ಕಲೆ ಹಾಗೂ ಮಾನವನಿಂದ ಸೃಷ್ಟಿವಾದುದೆಲ್ಲದರಲ್ಲಿ ಇದ್ದ ಆಸಕ್ತಿಯ ಕಾರಣ ಅವರು ಇತಿಹಾಸದ ಬಗ್ಗೆ ವ್ಯಾಪಕ ದೃಷ್ಟಿಯನ್ನು ಬೆಳೆಸಿಕೊಂಡಿದ್ದರು. ಅರ್ಥಶಾಸ್ತ್ರ ಹಾಗೂ ಸಮಾಜವಿಜ್ಞಾನದ ಪ್ರಾಧ್ಯಾಪಕರಾಗಿದ್ದ ಅವರಿಗೆ ಮುಖ್ಯವಾಗಿದ್ದ ಸಾಮಾಜಿಕ ವಿಜ್ಞಾನಗಳ ಪೂರ್ಣ ಪರಿಚಯವಿದ್ದಿತು. ಆದ್ದರಿಂದ ಆ ಶಾಸ್ತ್ರಗಳಲ್ಲಿ ತಮಗಿದ್ದ ಜ್ಞಾನ ಹಾಗೂ ಅವುಗಳ ಅಧ್ಯಯನ ವಿಧಾನಗಳನ್ನು ತಮ್ಮ ಸಂಸ್ಕೃತಿ ಅಧ್ಯಯನದಲ್ಲಿ ಬಳಸಿಕೊಳ್ಳಲು ಅವರಿಗೆ

ಸಾಧ್ಯವಾಯಿತು. ಅವರ ಪ್ರಕಾರ, ಇತಿಹಾಸಕಾರನು, ಮುಖ್ಯವಾಗಿ ಸಾಂಸ್ಕೃತಿಕ ಚರಿತ್ರಲೇಖಕನು, ಮಾನವವಿಜ್ಞಾನ, ಪ್ರಾಚೀನ ಶೋಧನ ಶಾಸ್ತ್ರ, ಸಮಾಜವಿಜ್ಞಾನ, ಅರ್ಥಶಾಸ್ತ್ರ ಮುಂತಾದ ಇತರ ಸಂಬಂಧಪಟ್ಟ ವಿಜ್ಞಾನಗಳ ಸಹಾಯವನ್ನು ತೆಗೆದುಕೊಳ್ಳಬೇಕು. ಕಾರಣ ಅವನು ಜನಜೀವನವನ್ನು ಸಮಗ್ರವಾಗಿ ವೀಕ್ಷಿಸಿ ವಿಚಾರಮಾಡಬೇಕು. ಹೀಗೆ ಅವರಿಗೆ ಇತಿಹಾಸ ಅಧ್ಯಯನದಲ್ಲಿ ಬಳಸಬೇಕಾದ ವಿಧಾನಗಳ ಬಗ್ಗೆ ಸ್ಪಷ್ಟ ಅಭಿಪ್ರಾಯವಿದ್ದಿತು.

ಬೇರೆ ಮಾತುಗಳಲ್ಲಿ ಹೇಳಬೇಕಾದರೆ, ಸತ್ಯವನ್ನು ಕಂಡುಹಿಡಿಯಲು ಅತ್ಯುತ್ತಮ ವಿಧಾನವೆಂದರೆ ಬಹು ಪರಿಮಾಣ ಅಥವಾ ಸಮಗ್ರ ಸಾಂಸ್ಕೃತಿಕ ಕ್ರಮ. ಅವರು ವಿಜ್ಞಾನ ಹಾಘೂ ಕಲಾಶಾಸ್ತ್ರಗಳನ್ನು ಪ್ರಕೃತಿವಾದ ಹಾಗೂ ಆದರ್ಶವಾದಗಳನ್ನು ಪ್ರತ್ಯೇಕಿಸಿಡುವ ಇಂದಿನ ಪ್ರವೃತ್ತಿಯನ್ನು ನಿಷೇಧಿಸುವ ವೈಜ್ಞಾನಿಕ ಅನುಭವಾತ್ಮಕ ದಾರ್ಶನಿಕ ಕ್ಲುಪ್ತ ಪ್ರಮಾಣದ ತತ್ತ್ವ ಹಾಗೂ ವಿಧಾನಗಳ ಸಂಘಟಿತ ಕ್ರಮವು ಇತಿಹಾಸ ಅಧ್ಯಯನಕ್ಕೆ ತಕ್ಕ ವಿಧಾನ ಎಂಬುದಾಗಿ ಹೇಳಿದರು. ಇತರ ಎಲ್ಲಾ ದೃಷ್ಟಿಕೋನ ಹಾಗೂ ವಿಧಾನಗಳು ಅಪರಿಪೂರ್ಣವಾದವು ಎಂಬುದು ಅವರ ಅಭಿಪ್ರಾಯವಾಗಿದ್ದಿತು. ಇತಿಹಾಸಲೇಖನ ಕಲೆಯ ಬಗ್ಗೆ ತಾವು ಬೆಳೆಸಿಕೊಂಡಿದ್ದ ಸಂಪ್ರದಾಯಬದ್ಧವಾಗಿಲ್ಲದ ಭಾವನೆಗಳನ್ನು ಬಳಸಿ ಅವರು ಪಾಂಡಿತ್ಯಪೂರ್ಣವಾಗಿದ್ದ ಕೃತಿಗಳನ್ನು ರಚಿಸಿದರು.

ಮುಖರ್ಜಿಯವರ ಹಿಸ್ಟೋರಿ ಆವ್ ಇಂಡಿಯನ್ ಸಿವಿಲಿಸೇಷನ್ (1956–66) ಎಂಬ ಎರಡು ಸಂಪುಟಗಳು ಸಿಂಧೂನದಿ ನಾಗರಿಕತೆಯ ಕಾಲದಿಂದ ಹಿಡಿದು 20ನೆಯ ಶತಮಾನದ ಸಾಂಸ್ಕೃತಿಕ ಸಂಯೋಜನೆಯವರೆಗೆ ಭಾರತ ಸಂಸ್ಕೃತಿಯ ಇತಿಹಾಸವಾಗಿದೆ. ಕಲ್ಚರ್ ಆ್ಯಂಡ್ ಆರ್ಟ್ ಆವ್ ಇಂಡಿಯಾ (1959) ಕೃತಿಯಲ್ಲಿ ಬಹು ಮುಂಚಿನ ಕಾಲದಿಂದ ಹಿಡಿದು ಇಂಡೋ ಬ್ರಿಟಿಷ್ ಪುನರುಜ್ಜೀವನ ಕಾಲದವರೆಗೆ ಆದ ಭಾರತ ಸಂಸ್ಕೃತಿಕ ಮುನ್ನೆಡೆಯ ಕಥೆ ಇದೆ. ದಿ ಕಾಸ್ಮಿಕ್ ಆರ್ಟ್ ಆವ್ ಇಂಡಿಯಾ (1965) ಮತ್ತು ದಿ ಫ್ಲವರಿಂಗ್ ಆವ್ ಇಂಡಿಯನ್ ಆರ್ಟ್ಸ್ (1964) ಎಂಬ ಕೃತಿಗಳಲ್ಲಿ ಭಾರತದ ಕಲೆಯ ವಿಕಾಸ ಮತ್ತು ಪ್ರಸಾರವನ್ನು ಕುರಿತು ವಿಚಾರಮಾಡಲಾಗಿದೆ. ದಿ ಯೂನಿವರ್ಸಲ್ ಪ್ರಿನ್ಸಿಪಲ್ ಫಾರ್ಮ್ಸ್ ಆವ್ ವಿಸಿಲಿಸೇಷನ್ (1961) ಮತ್ತು ದಿ ಇಂಡಿಯನ್ ಸ್ಕೀಮ್ ಆವ್ ಲೈಫ್ (1951) ಗಳಲ್ಲಿ ಭಾರತ ಜನಜೀವನದ ಮೂಲತತ್ತ್ವಗಳ ವಿವರಣೆ ಇದೆ. ದಿ ಚೇಂಜಿಂಗ್ ಫೇಸ್ ಆವ್ ಬೆಂಗಾಲ್ – ಎ ಸ್ಟಡಿ ಇನ್ ರಿವರೇನ್ ಇಕೊನಾಮಿ (1937) ಮತ್ತು ದಿ ಎಕೊನಾಮಿಕ್ ಹಿಸ್ಟೋರಿ ಆವ್ ಇಂಡಿಯಾ (1600–1800) ಗಳಲ್ಲಿ ಕ್ರಮವಾಗಿ ವಿಭಜನೆಗೆ ಪೂರ್ವದ ಬಂಗಾಳದ ಅರ್ಥವ್ಯವಸ್ಥೆಯ ನಸುನೋಟವನ್ನು ಮತ್ತು (1600–1800) ವರ್ಷಗಳಲ್ಲಿ ಭಾರತದಲ್ಲಿದ್ದ ಅರ್ಥವ್ಯವಸ್ಥೆಯ ಸಂಕ್ಷಿಪ್ತ ಸಮೀಕ್ಷೆಯನ್ನು ಕಾಣಬಹುದು. ಅವರು ತಮ್ಮ ದಿ ಡೆಸ್ಟಿನಿ ಆವ್ ಸಿವಿಲಿಸೇಷನ್ (1964) ಮತ್ತು ದಿ ಸಿಕ್‌ನೆಸ್ ಆವ್ ಸಿವಿಲಿಸೇಷನ್ (1964) ಎಂಬ ಪುಸ್ತಕಗಳಲ್ಲಿ ರಾಷ್ಟ್ರಗಳ ನಡುವೆ ಉಂಟಾಗುತ್ತಿದ್ದ ಘರ್ಷಣೆ ಹಾಗೂ ಬಿಕ್ಕಟ್ಟಿನ ಕಾಲದಲ್ಲಿ ನಾಗರಿಕತೆಯ ಉಳಿವು ಅಳಿವಿನ ಬಗ್ಗೆ ತಮಗಿದ್ದ ಕಾತರ ಹಾಗೂ ಕಾಳಜಿಯನ್ನು ಸ್ಪಷ್ಟವಾಗಿ ವಿವರಿಸಿದ್ದಾರೆ.

ಮುಖರ್ಜಿ ಭಾರತ ಸಂಸ್ಕೃತಿ, ನಾಗರಿಕತೆ, ಮತಧರ್ಮ ಹಾಗೂ ಕಲೆಯನ್ನು ಮೂಲಭೂತವಾಗಿ ಐತಿಹಾಸಿಕ ದೃಷ್ಟಿಯಿಂದ ವೀಕ್ಷಿಸಿ ವಿಚಾರಮಾಡಿದ್ದಾರೆ ಹಾಗೂ ಅವುಗಳ ಬಗ್ಗೆ ವ್ಯಾಪಕವಾದ ವಿವರಣೆಯನ್ನು ನೀಡಿದ್ದಾರೆ. ಅವರು ಒಂದು ಸಂಯೋಜಿತ ಸಂಸ್ಕೃತಿಯನ್ನು ರೂಪಿಸುವ ಮಾನವಶಾಸ್ತ್ರೀಯ, ಸಮಾಜಶಾಸ್ತ್ರೀಯ ಹಾಗೂ ಪ್ರಾದೇಶಿಕ ಅಂಶಗಳನ್ನು ಪರಿಗಣಿಸಿದ್ದಾರೆ. ಅವರು ಪ್ರಾಚೀನ ಭಾರತದ ಸಮಾಜ ಹಾಗೂ ಜೀವನಕ್ರಮವನ್ನು ಬಹು ಸ್ಪಷ್ಟವಾಗಿ ವಿಶ್ಲೇಷಿಸಿ ನೀಡಿರುವ ವಿವರಣೆ ಅವರ ಸ್ವಂತಿಕೆಗೆ ಸಾಕ್ಷಿಯಾಗಿದೆ. ಮಗಧ ಸಾರ್ವಭೌಮಾಧಿಕಾರಕ್ಕೆ ಮೂಲವಾಗಿದ್ದ ಸಾಮಾಜಿಕ ಆಧಾರವನ್ನು ವಿವರಿಸುವುದರಲ್ಲಿ ಅವರ ಐತಿಹಾಸಿಕ ಸೂಕ್ಷ್ಮಪರಿಜ್ಞಾನ ಸ್ಪಷ್ಟವಾಗಿ ವ್ಯಕ್ತವಾಗಿದೆ. ಅವರು ಇತಿಹಾಸದ ಅಧ್ಯಯನದಲ್ಲಿ ವ್ಯಾಪಕವಾದ ಮಾನವೀಯ ಆದರ್ಶಾತ್ಮಕ ದೃಷ್ಟಿಕೋನವನ್ನು ಅಳವಡಿಸಿಕೊಂಡಿದ್ದಾರೆ. ಅವರ ಪ್ರಕಾರ, ವಿಶ್ವ ಇತಿಹಾಸ, ಮಾನವಕುಲದ ಮುನ್ನಡೆಯ ಕಥೆಯೇ ನಿಜವಾದ ಇತಿಹಾಸ. ಅವರು ಚರಿತ್ರೆಯನ್ನು ಒಂದು ನಿರಂತರವಾದ ಜೀವಂತ ಸಂಸ್ಕೃತಿ ಎಂಬುದಾಗಿ ಎಣಿಸುತ್ತಾರೆ. ಅವರು ಇತಿಹಾಸ ಅಧ್ಯಯನ ಅತಿ ಉಪಯುಕ್ತವಾದುದು ಎಂಬುದಾಗಿ ನಂಬಿದ್ದಾರೆ. ಅವರ ಭಾರತ ಚರಿತ್ರೆಯ ಅಧ್ಯಯನದಲ್ಲಿ ಅತಿ ಮುಖ್ಯವಾಗಿರುವ ಅಂಶವೆಂದರೆ, ಅದು ಕೇವಲ ರಾಜಕೀಯ ನಾಯಕರ ನಿರ್ಮಾಣವಲ್ಲ; ಬುದ್ಧ, ಮಹಾವೀರ, ಕಬೀರ್, ರಮಾನಂದ, ನಾನಕ್, ಚೈತನ್ಯರಂತಹ ಮಹಾಚೇತನಗಳು ಬೀರಿರುವ ಪ್ರಭಾವವು ರಾಜಕೀಯ ಪಟುಗಳು ಬೀರಿರುವ ಪ್ರಭಾವಕ್ಕಿಂತ ಹೆಚ್ಚು ಖಾಯಂ ಆದುದು. ಜೀವದಾಯಕವೂ ಹಾಗೂ ಜೀವೋತ್ಕರ್ಷವೂ ಆದುದು ಎಂಬ ನೂತನ ವಿವರಣೆ. ಅವರ ಶೈಲಿ ಶಕ್ತಿಯುತವೂ, ಸುಲಲಿತವೂ, ಸುಂದರವೂ ಆಗಿದೆ. ಉದಾಹರಣೆಗೆ, ಅವರು ಬುದ್ಧನ ಬಗ್ಗೆ ನೀಡಿರುವ ವರ್ಣನೆ ಚಿತ್ತಾಕರ್ಷಕವಾಗಿದೆ. ಅವರ ದೃಷ್ಟಿಕೋನ ವಸ್ತುನಿಷ್ಠವಾಗಿಲ್ಲ ಮತ್ತು ಅವರು ನೀಡಿರುವ ಸಾಮಾನ್ಯೀಕಣಗಳು ಕ್ರಮಬದ್ಧವಾಗಿಲ್ಲದಿದ್ದರೂ ಅವರು ಇತಿಹಾಸ ರಚನಾ ಕ್ಷೇತ್ರದಲ್ಲಿ ನಿರ್ಧಿಷ್ಟವಾದ ಪ್ರವೃತ್ತಿ ತಲೆದೋರುವುದಕ್ಕೆ ಮೂಲ ಕಾರಣರಾದರು ಮತ್ತು ಭಾರತ ಸಾಂಸ್ಕೃತಿಕ ಚರಿತ್ರಲೇಖಕರ ಪಂಕ್ತಿಯಲ್ಲಿ ಅಗ್ರಸ್ಥಾನವನ್ನು ಅಲಂಕರಿಸಲು ಸರ್ವವಿಧದಲ್ಲೂ ಅರ್ಹರು ಎಂಬುದರಲ್ಲಿ ಸಂದೇಹವಿಲ್ಲ.

## 18.9 ರೋಮೇಶ್ ಚಂದ್ರದತ್

ಬಂಗಾಳದ 19ನೆಯ ಶತಮಾನದ ಪುನರುಜ್ಜೀವನ ಕಾಲದ ಅತ್ಯುತ್ತಮ ಪ್ರತಿನಿಧಿ ಮತ್ತು ಬ್ರಿಟಿಷರ ಶೋಷಣೆ, ಅದರ ಫಲವಾಗಿ ಭಾರತದಲ್ಲಿ ಉಂಟಾದ ದಾರಿದ್ರ್ಯವನ್ನು ಬೆಳಕಿಗೆ ತರುವುದಕ್ಕಾಗಿ ಬ್ರಿಟಿಷರ ಸರ್ಕಾರದ ಅರ್ಥವ್ಯವಸ್ಥೆಯ ಸ್ವರೂಪವನ್ನು ಕುರಿತು ಅಧ್ಯಯನ ಮಾಡಿದ ಪ್ರಮುಖ ಆರ್ಥಿಕ ಇತಿಹಾಸಕಾರ ಆರ್.ಸಿ.ದತ್, ಕಲ್ಕತ್ತಾದ ಸುಪ್ರಸಿದ್ಧ ರಾಮ್ ಬಗನ್ ದತ್ ಕುಟುಂಬದಲ್ಲಿ 1848 ರಲ್ಲಿ ಜನಿಸಿದ ಅವರು ಮೊದಲಿನಿಂದಲೂ ಮಹಾಮೇಧಾವಿಯಾಗಿದ್ದರು. ಆದ್ದರಿಂದ ಅವರು ಜಿಲ್ಲಾಧಿಕಾರಿಯಾದುದರಲ್ಲಿ ಆಶ್ಚರ್ಯವೇನಿಲ್ಲ. 1897 ರಲ್ಲಿ ಸ್ವ ಇಚ್ಛೆಯಿಂದ ನಿವೃತ್ತರಾದ ಅವರು ಇಂಗ್ಲೆಂಡಿಗೆ ಹೋಗಿ ಅಲ್ಲಿ ಲಂಡನ್ನಿನ ಯೂನಿವರ್ಸಿಟಿ ಕಾಲೇಜಿನಲ್ಲಿ ಭಾರತ ಇತಿಹಾಸದ ಅಧ್ಯಾಪಕರಾದರು. 1904 ರಿಂದ ಹಿಡಿದು ತಾವು ಮೃತ್ಯುವಶವಾಗುವವರೆಗೆ (1909) ಅವರು ಬರೋಡಾದ ಮಹಾರಾಜರ ಮಂತ್ರಿಯಾಗಿದ್ದರು.

ಆರ್.ಸಿ.ದತ್ ಪಾಶ್ಚಾತ್ಯ ಸಂಶೋಧನಾ ವಿಧಾನಗಳನ್ನು ಚೆನ್ನಾಗಿ ಅರಿತಿದ್ದರು. ಮತ್ತು ಜೆ.ಎಸ್.ಮಿಲ್, ಟಾಡ್, ಡಿಕನ್ಸ್ ಮುಂತಾದ ಪಂಡಿತರ ಪ್ರಭಾವಕ್ಕೆ ಒಳಗಾಗಿದ್ದರು. ಅರ್ಥಶಾಸ್ತ್ರಜ್ಞರಾಗಿಲ್ಲದಿದ್ದರೂ, ತಮ್ಮ ನಾಡು ಹಾಗೂ ಜನರ ಬಗ್ಗೆ ಅಪಾರ ಒಲವನ್ನು ಬೆಳೆಸಿಕೊಂಡಿದ್ದ ಅವರನ್ನು 10ನೆಯ ಶತಮಾನದಲ್ಲಿ ತಲೆದೋರಿದ ಭಯಂಕರ ಕ್ಷಾಮಗಳು ಭಾರತದ ಆರ್ಥಿಕ ಇತಿಹಾಸದ ಅಧ್ಯಯನವನ್ನು ಕೈಗೊಳ್ಳುವಂತೆ ಪ್ರಚೋದಿಸಿದವು. ಅವರು ತಮ್ಮ ಜನರ ಬಡತನಕ್ಕೆ ಮೂಲಕಾರಣವಾಗಿದ್ದ ಅಂಶಗಳನ್ನು ಬೆಳಕಿಗೆ ತರುವುದಕ್ಕಾಗಿ ಬ್ರಿಟಿಷ್ ಭಾರತದ ಆರ್ಥಿಕ ಇತಿಹಾಸವನ್ನು ರಚಿಸಲು ಹೊರಟರು. ಹಲವಾರು ಕೃತಿಗಳು ಅವರ ಲೇಖನಿಯಿಂದ ಬಂಗಾಳದ ರೈತರ ಪರಿಸ್ಥಿತಿಯ ಸಮೀಕ್ಷೆಯನ್ನು ನೀಡಿದ ದಿ ಪೆಸಂಟ್ರಿ ಆವ್ ಬೆಂಗಾಲ್, 1785 ರಿಂದ 1885 ರವರೆಗೆ ಕಂಡುಬಂದ ಪ್ರಗತಿಯ ಸಂಕ್ಷಿಪ್ತ ಐತಿಹಾಸಿಕ ದಾಖಲೆಯಾಗಿದ್ದ ಇಂಗ್ಲೆಂಡ್ ಆ್ಯಡ್ ಇಂಡಿಯಾ, ಓಪನ್ ಲೆಟರ್ಸ್ ಟು ಲಾರ್ಡ್ ಕರ್ಜನ್ ಆನ್ ಫ್ಯಾಮಿನ್ಸ್ ಆ್ಯಂಡ್ ಲ್ಯಾಂಡ್ ಅಸೆಸ್‌ಮೆಂಟ್ಸ್ ಇನ್ ಇಂಡಿಯಾ (1900), ಸ್ಪೀಚ್‌ಸ್ ಆ್ಯಂಡ್ ಪೇಪರ್ಸ್ ಆನ್ ಇಂಡಿಯನ್ ಕ್ವೆಸ್ಚನ್ಸ್ 1897–1900 (1902) ಮತ್ತು ಎ ಪ್ರೆಫೇಸ್ ಟು ಸರ್ ಫಿಲಿಪ್ ಫ್ರಾನ್ಸಿಸ್ ಮಿನಿಟ್ಸ್ ಆನ್ ದಿ ಸಬ್‌ಜೆಕ್ಟ್ ಆಫ್ ಎ ಪರ್ಮನೆಂಟ್ ಸೆಟ್‌ಲ್‌ಮೆಂಟ್ ಫಾರ್ ಬೆಂಗಾಲ್, ಬಿಹಾರ್ ಆ್ಯಂಡ್ ಒರಿಸ್ಸಾ (1901) ಇತ್ಯಾದಿಗಳು ಅವರ ಮೇರುಕೃತಿಗೆ ಪೀಠಿಕಾಧ್ಯಯನಗಳಾದವು.

ದತ್‌ರವರ ದಿ ಎಕೊನಾಮಿಕ್ ಹಿಸ್ಟೋರಿ ಆವ್ ಇಂಡಿಯಾ ಅಂಡರ್ ಅರ್ಲಿ ಬ್ರಿಟಿಷ್ ರೂಲ್ ಎಂಬ ಪ್ರಸಿದ್ಧ ಪುಸ್ತಕವು ಪ್ಲಾಸಿಕದನದಿಂದ ಹಿಡಿದು ವಿಕ್ಟೋರಿಯಾ ರಾಣಿಯ ಸಿಂಹಾಸನಾರೋಹಣದವರೆಗಿನ ಕಾಲಗಳಲ್ಲಿ ಇದ್ದ ಭಾರತದ ಅರ್ಥವ್ಯವಸ್ಥೆಯ ಇತಿಹಾಸವಾಗಿದೆ. ದಿ ಎಕೊನಾಮಿಕ್ ಹಿಸ್ಟೋರಿ ಆವ್ ಇಂಡಿಯಾ ಇನ್ ದಿ ವಿಕ್ಟೋರಿಯನ್ ಏಜ್ (1837–1900) ಉತ್ತಮವಾಗಿ ಯೋಜಿಸಿ ರಚಿಸಲಾದ ಗ್ರಂಥ. ಇವುಗಳು ತಕ್ಕ ಪ್ರಮಾಣಗಳ ಮೇಲೆ ಆಧಾರಿತವಾಗಿರುವ ಇತಿಹಾಸ ಕೃತಿಗಳು. ಮುಖ್ಯವಾಗಿ ಸರ್ಕಾರಿ ದಾಖಲೆ, ವಿಚಾರಣಾ ಸಮಿತಿ ಹಾಗೂ ಆಯೋಗಗಳ ದಾಖಲೆ, ಇತ್ಯಾದಿ ಪ್ರಾಥಮಿಕ ಆಧಾರಗಳನ್ನು ಅವಲಂಬಿಸಿ ಮತ್ತು ಪ್ರಮಾಣ ಇತಿಹಾಸ ಗ್ರಂಥಗಳು, ಜೀವನ ಚರಿತ್ರೆ, ಪ್ರವಾಸ ಕಥನ, ಅಂಕಿ ಅಂಶಗಳ ದಾಖಲೆ ಮುಂತಾಗಿ ಎಲ್ಲಾ ಮುಖ್ಯಾಧಾರಗಳನ್ನು ಪರಿಶೀಲಿಸಿ, ವಿವರಗಳನ್ನು ಸಂಗ್ರಹಿಸಿ, ಪರೀಕ್ಷಿಸಿ ಈ ಗ್ರಂಥಗಳನ್ನು ಬರೆಯಲಾಗಿದೆ. ಅವುಗಳಲ್ಲಿ ಭೂಕಂದಾಯ ಹಾಗೂ ಸಂಬಂಧಿತ ಕೃಷಿ ಸಮಸ್ಯೆಗಳಿಗೆ ಹೆಚ್ಚಿನ ಪ್ರಾಮುಖ್ಯವನ್ನು ಕೊಡಲಾಗಿದೆ. ದತ್ ಅವರ ಭಾರತದ ಸಾರ್ವಜನಿಕ ಸಾಲದ ಮೂಲ ವಿಶ್ಲೇಷಣೆಯನ್ನು ಇಂದೂ ಒಪ್ಪಿಕೊಳ್ಳಲಾಗಿದೆ. ಒಟ್ಟಿನಲ್ಲಿ, ಅವರ ಮೇರು ಕೃತಿಗಳು ಭಾರತದ ಸಮಗ್ರ ಬ್ರಿಟಿಷ್ ಆಳ್ವಿಕೆಯ ವಿಮರ್ಶಾತ್ಮಕ ಸಿಂಹಾಲವಲೋಕನವಾಗಿದೆ. ಅವರೂ ಸಹ ಆರ್ಥಿಕ ಕಲ್ಯಾಣ ಸಾಧನೆಗೆ ಪರಿಣಾಮಕಾರಿಯಾಗಿದ್ದ ಮಾಧ್ಯಮವೆಂದರೆ ಆರ್ಥಿಕ ಸ್ವದೇಶಿ ಎಂಬುದಾಗಿ ಅಭಿಪ್ರಾಯಪಟ್ಟರು.

ದಾರ್ಶನಿಕರಾಗಿದ್ದ ದತ್ ಆರ್ಥಿಕ ಬೆಳವಣಿಗೆಯನ್ನು ವ್ಯಾಪಕ ಹಾಗೂ ದಾರ್ಶನಿಕ ದೃಷ್ಟಿಯಿಂದ ವೀಕ್ಷಿಸಿರುವುದು ಸಹಜವಾಗಿಯೇ ಇದೆ. ಅವರ ಅಭಿಪ್ರಾಯದಲ್ಲಿ ಜನರ ನೈತಿಕ ಹಾಗೂ ಭೌತಿಕ ಪರಿಸ್ಥಿತಿ, ವ್ಯಾಪಾರ, ಕೈಗಾರಿಕೆ ಹಾಗೂ ಕೃಷಿಯ ಕಥೆಯೇ ನಿಜವಾದ ಇತಿಹಾಸವಾಗಿದೆ; ಆರ್ಥಿಕ ನಿಯಮಗಳು ಏಷ್ಯಾ ಹಾಗೂ ಯೂರೋಪಿಗೆ ಒಂದೇ ಆಗಿವೆ; ಕೃಷಿ, ಉತ್ಪಾದನೆ, ವ್ಯಾಪಾರ ಹಾಗೂ ಭದ್ರವಾದ ಹಣಕಾಸಿನ

ವ್ಯವಸ್ಥೆಗಳು ಎಲ್ಲಾ ರಾಷ್ಟ್ರಗಳ ಸಂಪತ್ತಿಗೆ ಮೂಲಾಧಾರವಾಗಿರುತ್ತವೆ. ಅವರಿಗೆ ಪ್ರಗತಿಯ ಭಾವನೆಯಲ್ಲಿ ನಂಬಿಕೆ ಇದ್ದಿತು. ಆದರೂ ದತ್ ಭೂಕಂದಾಯದ ಖಾಯಂ ವ್ಯವಸ್ಥೆಗೆ ನೀಡಿರುವ ಪ್ರಾಮುಖ್ಯ ಅಸಮರ್ಥನೀಯವಾಗಿದೆ. ಅವರು ಭಾರತದಲ್ಲಿ ಕೈಗಾರಿಕೀಕರಣದ ಕಾರಣ ಉಂಟಾದ ಸಮಸ್ಯೆ ಬೆಳೆಯುತ್ತಿದ್ದ ಯಂತ್ರಾಧಾರಿತ ಕೈಗಾರಿಕೆಗಳು ಹೆಚ್ಚುತ್ತಿದ್ದ ಕಾರ್ಮಿಕರ ಸಮಸ್ಯೆ, ಬೆಳೆಯುತ್ತಿದ್ದ ಯಂತ್ರಾಧಾರಿತ ಕೈಗಾರಿಕೆಗಳು ಹೆಚ್ಚುತ್ತಿದ್ದ ಕಾರ್ಮಿಕರ ಸಮಸ್ಯೆ, ಸಹಕಾರಿ ಸಮಾಜಗಳು ಇತ್ಯಾದಿ ಮುಖ್ಯ ವಿಷಯಗಳಿಗೆ ಗಮನವನ್ನು ಕೊಟ್ಟಿಲ್ಲ. ಅವರು ಎಲ್ಲಾ ಬಗೆಯ ಆರ್ಥಿಕ ನಾಶಕ್ರಮ ಮತ್ತು ಭಾರತೀಯ ಕಾರ್ಮಿಕರ ಶೋಷಣೆ ಇತ್ಯಾದಿಗಳನ್ನು ವಿವರಿಸಿಲ್ಲ. ಅವರ ಶೈಲಿ ಸುಂದರ ಹಾಗೂ ಸುಲಲಿತವಾಗಿದ್ದರೂ ಕೆಲವು ಸಲ ಅಲಂಕಾರಿಕ ಪದಗಳನ್ನು ಬಳಸುವ ಪ್ರವೃತ್ತಿ ಕಂಡುಬರುತ್ತದೆ. ಅವರು ತಮ್ಮ ದತ್ತಾಂಶಗಳನ್ನು ವಿವರಿಸುವಾಗ ಆರ್ಥಿಕ ಸಿದ್ಧಾಂತವಾವುದನ್ನೂ ಬಳಸಿಕೊಳ್ಳಲಿಲ್ಲ. ಇತಿಮಿತಿಗಳೇನೇ ಇರಲಿ, ದತ್‌ರವರ ಮೇರುಕೃತಿಗಳು ಕೇವಲ ಆರ್ಥಿಕ ಚರಿತ್ರೆ ಮಾತ್ರವಾಗಿರದೆ, ರಾಜಕೀಯ, ಸಾಮಾಜಿಕ, ಆಡಳಿತ ಇತಿಹಾಸಗಳ ಅಧ್ಯಯನಗಳೂ ಆಗಿವೆ. ಅವುಗಳಿಗೆ ಸರಿಸಮವಾಗಿರುವ ಗ್ರಂಥವಾವುದೂ ರಚಿತವಾಗಿಲ್ಲವೆಂದು ಹೇಳಬಹುದು. ಪ್ರಮುಖ ಆರ್ಥಿಕ ಇತಿಹಾಸಕಾರರಾಗಿರುವ ಅವರಿಗೆ ಭಾರತಚರಿತ್ರೆಯ ರಂಗದಲ್ಲಿ ಉನ್ನತ ಸ್ಥಾನ ಈಗಲೂ ಮೀಸಲಾಗಿದೆ.

## 18.10 ಸಾರಾಂಶ

- ಭಾರತೀಯ ರಾಷ್ಟ್ರೀಯ ಇತಿಹಾಸದ ಹಿನ್ನೆಲೆಯನ್ನು ತಿಳಿದುಕೊಂಡೆವು.
- ಆರ್.ಜಿ.ಭಂಡಾರ್ಕರ್, ದಾದಾಬಾಯಿ ನವರೋಜಿ, ಆರ್.ಸಿ.ದತ್, ಕೆ.ಪಿ.ಜಯಸ್ವಾಲ್, ಫಣಿಕ್ಕರ್, ಮುಂತಾದ ರಾಷ್ಟ್ರೀಯ ಇತಿಹಾಸಕಾರರು ಮತ್ತು ಅವರ ಬರವಣಿಗೆಗಳ ಬಗ್ಗೆ ತಿಳಿದುಕೊಂಡೆವು.

## 18.11 ಪ್ರಮುಖ ಪದಗಳು

1. ವಿಲಿಯಂ ವಿಲ್ಸನ್ ಹಂಟರ್: ಬಂಗಾಳದ ಗ್ರಾಮೀಣ ಭಾಗದ ಆನಲ್‌ಗಳ ಬಗ್ಗೆ ಕೃತಿ ರಚಿಸಿದ್ದಾನೆ.
2. ಪ್ರಾಚೀನ್ ಬಂಗ ಪತ್ರ ಸಂಕಲಮ್:ಹಳೆಯ ಬೆಂಗಾಲಿ ಪತ್ರಗಳ ಮತ್ತು ಭಾರತದ ಪ್ರವಾಸದ ಬರಹಗಳ ಸಂಗ್ರಹ

## 18.12 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಆರ್.ಜಿ.ಭಂಡಾರ್ಕರ್‌ರವರ ಜೀವನ ಮತ್ತು ಬರವಣಿಗೆಯ ಬಗ್ಗೆ ತಿಳಿಸಿ?
2. ಆರ್.ಸಿ.ಮಜುಂದಾರ್ ಮತ್ತು ಜೆ.ಎನ್.ಸರ್ಕಾರ್‌ರವರ ಇತಿಹಾಸ ಲೇಖನ ಕಲೆಗೆ ನೀಡಿರುವ ಕೊಡುಗೆಗಳನ್ನು ಚರ್ಚಿಸಿ.

## 18.13 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 18.4 ನೋಡಿ
2. ವಿಭಾಗ 18.5 ನೋಡಿ

## 18.14 ಪರಾಮರ್ಶನ ಗ್ರಂಥಗಳು


1. Sheik Ali B - History: its Theory and Method, Bangalore, 1999.
2. Fred N. Kerlinget - Foundation of Behavioural Research, Delhi, 1983.
3. R.K.Majumdar and - Historiography, Delhi, 1975, A.N.Srivastva.



**ಪಠ್ಯವನ್ನು ರಚಿಸಿದವರು:**

**ಡಾ ॥ ಜಿ.ಟಿ.ಸೋಮಶೇಖರ್**

# ಬ್ಲಾಕ್ – 5: ಇತ್ತೀಚಿನ ಇತಿಹಾಸ ಲೇಖನದ ವಿಧಾನಗಳು

## ಘಟಕ – 19 ಮಾರ್ಕ್ಸವಾದಿ/ಸಮಾಜವಾದಿ ಇತಿಹಾಸಕಾರರು

**ರಚನೆ**


**19.0** ಉದ್ದೇಶಗಳು

**19.1** ಪೀಠಿಕೆ

**19.2** ಮಾರ್ಕ್ಸವಾದಿ ಇತಿಹಾಸ ಲೇಖನದ ಸ್ವರೂಪ

**19.3** ಮಾರ್ಕ್ಸವಾದಿ ಇತಿಹಾಸ ಲೇಖನದಲ್ಲಿನ ಬದಲಾವಣೆ

**19.4** ಭಾರತೀಯ ಮಾರ್ಕ್ಸವಾದಿ ಇತಿಹಾಸ ಲೇಖನ

**19.5** ಮಾರ್ಕ್ಸವಾದಿ ಇತಿಹಾಸಕಾರರು

**19.6** ಸಮಾಜವಾದಿ ಇತಿಹಾಸಕಾರರು

**19.7** ಸಾರಾಂಶ

**19.8** ಪ್ರಮುಖ ಪದಗಳು

**19.9** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**19.10** ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

**19.11** ಪರಾಮರ್ಶನ ಗ್ರಂಥಗಳು

## 19.0 ಉದ್ದೇಶಗಳು

ಪ್ರಸ್ತುತ ಅಧ್ಯಯನದಲ್ಲಿ 19 ಮತ್ತು 20ನೇ ಶತಮಾನದಲ್ಲಿ ಹುಟ್ಟಿಕೊಂಡ ಮಾರ್ಕ್ಸವಾದ ಅಥವಾ ಸಮಾಜವಾದಿ ಸಿದ್ಧಾಂತದ ಹುಟ್ಟು, ಬೆಳವಣಿಗೆ ಮತ್ತು ಪ್ರಭಾವವನ್ನು ಕುರಿತು ವಿವರವಾಗಿ ಅಧ್ಯಯನ ಮಾಡುವ ಉದ್ದೇಶವನ್ನೊಳಗೊಂಡಿದೆ.

19ನೇ ಶತಮಾನದ ಚಿಂತನಾಕಾರರಲ್ಲಿ ಜರ್ಮನ್ ಮೂಲದ ಕಾರ್ಲ್‌ಮಾರ್ಕ್ಸ್ ಸಮಾಜ ವಿಜ್ಞಾನಗಳ ಬೆಳವಣಿಗೆಗೆ ಕೊಟ್ಟ ಕೊಡುಗೆ ಅಪಾರ. ಅವನು ಬಳಕೆಗೆ ತಂದ ಚಾರಿತ್ರಿಕ ದ್ರವ್ಯವಾಸ್ತವತವಾದ ಮುಂದೆ ಮಾರ್ಕ್ಸ್‌ಸಿಸ್ಟ್ ಇತಿಹಾಸ ಲೇಖನ ಎಂದೇ ಪ್ರಖ್ಯಾತಿ ಹೊಂದಿತು. ಕಾರ್ಲ್ ಮಾರ್ಕ್ಸ್ 19–20ನೇ ಶತಮಾನದ ಐತಿಹಾಸಿಕ ಲೇಖನ ಮೇಲೆ ಬೀರಿದ ಪ್ರಭಾವ ಅಸಾಧಾರಣವಾದುದು. ಕರ್ಲ್‌ಮಾರ್ಕ್ಸ್‌ನ ತತ್ವ ಹಾಗೂ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಐತಿಹಾಸಿಕ ಘಟನಾವಳಿಗಳನ್ನು ಅಧ್ಯಯನ ಮಾಡುವ ಪ್ರಯತ್ನಗಳು ಪ್ರಪಂಚದಾದ್ಯಂತ ನಡೆದು ಇದರ ಪರ ಹಾಗೂ ವಿರೋಧಿ, ವಾದ ಚರ್ಚೆಗಳು ಐತಿಹಾಸಿಕ ಅಧ್ಯಯನಗಳನ್ನು ಶ್ರೀಮಂತಗೊಳಿಸಿವೆ.

ಭಾರತೀಯ ಎಡಪಂಥೀಯ ಇತಿಹಾಸಕಾರರು 1980ರ ನಂತರ ಭಾರತದಲ್ಲಿ ಹಿಂದೂ ರಾಷ್ಟ್ರವಾದವು ಪ್ರಬಲವಾಗುತ್ತಿದ್ದಂತೇ ಸೆಕ್ಯೂಲರ್ ವಾದವನ್ನು ಇತಿಹಾಸದ ಮೂಲಕ ಕಟ್ಟಿಕೊಡುವ ಕಾಯಕಕ್ಕೆ ಬದ್ಧರಾದರು. ಇವರು ಭಾರತೀಯ ಸಂಸ್ಕೃತಿಯು ಹೇಗೆ ಹಿಂದೂ ರಾಷ್ಟ್ರೀಯವಾದೀ ನಿರೂಪಣೆಗೆ ಒಗ್ಗುವುದಿಲ್ಲ ಎಂಬುದನ್ನು ಒಂದು ರಾಜಕೀಯ ಬದ್ಧತೆಗಾಗಿ ಆಧ್ಯತೆ ನೀಡಿ ವಾದಿಸಿದರು ಹಾಗೂ ಜೊತೆಗೆ ಹಿಂದೂ ರಾಷ್ಟ್ರವಾದದ ಪುನರುತ್ಥಾನವಾದೀ ಹಾಗೂ ಪ್ರತಿಗಾಮಿ ಪ್ರವೃತ್ತಿಯನ್ನೂ ಎಡಪಂಥೀಯ ಚಿಂತಕರಾಗಿ ಖಂಡಿಸಿದರು. ಆದರೆ ಸಾಂಪ್ರದಾಯಿಕತೆ, ದೈವೀಶ್ರದ್ಧೆ ಮತ್ತು ರೂಢಿಗಳು ಜನ ಜೀವನದಲ್ಲಿ ಯಾವ ರೀತಿ ವಾಸ್ತವಗಳಾಗಿವೆ ಎಂಬುದನ್ನು ವಿಶ್ಲೇಷಣೆಗೆ ಒಡ್ಡಲಿಲ್ಲ, ಬದಲಾಗಿ ತೀರ ವಿಚಾರವಾದಿಗಳಾಗಿ ಆ ಜಗತ್ತನ್ನು ತಮ್ಮ ನಿರೂಪಣೆಯಿಂದ ಹೊರಗಿಟ್ಟರು, ಇಲ್ಲವೇ ರಷಿಯಾ ಮಾಕ್ಸವಾದದ ಮಾದರಿಯಲ್ಲಿ ಅವನ್ನು ಜೋಡಿಸಿ ಅವುಗಳ ಆರ್ಥಿಕ ನಿರ್ಣಾಯಕತೆಯ ಕುರಿತು ವ್ಯಾಖ್ಯಾನಿಸಿದರು. ಮಧ್ಯಕಾಲಿನ 'ಫ್ಯೂಡಲಿಸಂ, ಬಗ್ಗೆ ವಾದಿಸುವ ಇತಿಹಾಸಕಾರರಂತೂ 1980ರ ದಶಕದಲ್ಲಿ ಈ ಮೇಲಿನ ಸಿದ್ಧಾಂತಕ್ಕೆ ಇಡೀ ಇತಹಾಸವನ್ನು ಭಟ್ಟಿ ಇಳಿಸುವ ಕಾರ್ಯ ನಡೆಸಿದ್ದು ಕಂಡುಬರುತ್ತದೆ. ಆದರೆ ಕಳೆದೊಂದು ದಶಕದಿಂದ ಈ ಇತಿಹಾಸಕಾರರು ತಮ್ಮ ಈ ಮಿತಿಯನ್ನು ಅರಿತು ಹೊಸ ಹಾದಿಗಳನ್ನು ಅವಿಷ್ಕರಿಸುತಿದ್ದಾರೆ.

ಸ್ವಾತಂತ್ರ್ಯ ನಂತರ ಭಾರತದಲ್ಲಿ ಒಂದು ಹೊಸ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯನ್ನು ಕಟ್ಟುವ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ ಹಾಗೂ ಸಮಾನತೆ ಹೆಚ್ಚು ಒತ್ತು ಕೊಟ್ಟದ್ದನ್ನು ನಾವು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಮಾರ್ಕ್ಸ್‌ಸಿಸ್ಟ್ ತತ್ವ ಹಾಗೂ ಸಿದ್ಧಾಂತಗಳ ಒಲವುಳ್ಳ ಇತಿಹಾಸಕಾರರ ಬರವಣಿಗೆಗಳನ್ನು ಅವಲೋಕಿಸಬುದಾಗಿದೆ.

## 19.1 ಪೀಠಿಕೆ

ಮಾರ್ಕ್ಸವಾದ ಎಂಬ ಹೆಸರೇ ಸೂಚಿಸುವಂತೆ ಇದು ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕಾರ್ಲಮಾರ್ಕ್ಸ ಅವರು ಮಂಡಿಸಿದ ಸಿದ್ಧಾಂತವಾಗಿದೆ. 20ನೇ ಶತಮಾನದ ಪ್ರಾರಂಭದಲ್ಲಿ ರಷ್ಯಾದಲ್ಲಿ ಅಧಿಕಾರವನ್ನು ಹಿಡಿದ ಕಮ್ಯುನಿಷ್ಟ ಮಾರ್ಕ್ಸವಾದಿಗಳು ಇದಕ್ಕೊಂದು ರಾಜಕೀಯ ಕಾರ್ಯಕ್ರಮದ ಸ್ವರೂಪವನ್ನು ನೀಡಿದರು. ಆ ಸಂದರ್ಭದಲ್ಲಿ ಮಾರ್ಕ್ಸವಾದದ ಒಂದು ನಿರ್ದಿಷ್ಟ ಮಾರ್ಗದ ನಿರೂಪಣೆಗಳು ಕಮ್ಯುನಿಸಂ ಕಾರ್ಯಕ್ರಮದ ಅಂಗವಾಗಿ ಜಗತ್ತಿನ ಬೇರೆ ಬೇರೆ ಭಾಗದಲ್ಲಿ ಪ್ರಚಲಿತದಲ್ಲಿ ಬಂದವು. ಈ ಸಂಪ್ರದಾಯವು ಮಾರ್ಕ್ಸನ ಚಿಂತನೆಗಳನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಬೆಳೆಸಿತ್ತು ಹಾಗೂ ಈ ಬೆಳವಣಿಗೆಯೇ 20ನೇ ಶತಮಾನದ ಆದಿಭಾಗದಲ್ಲಿ ಮಾರ್ಕ್ಸವಾದವೆಂದರೆ ಇದೇ ಎಂಬಂಥ ನಿರೂಪಣೆಗಳನ್ನು ಗಟ್ಟಿಮಾಡಿತು.

19ನೇ ಶತಮಾನದ ಚಿಂತನಾಕಾರರಲ್ಲಿ ಜರ್ಮನ್ ಮೂಲದ ಕಾರ್ಲ್‌ಮಾರ್ಕ್ಸ್ ಸಮಾಜ ವಿಜ್ಞಾನಗಳ ಬೆಳವಣಿಗೆಗೆ ಕೊಟ್ಟ ಕೊಡುಗೆ ಅಪಾರ. ಅವನು ಬಳಕೆಗೆ ತಂದ ಚಾರಿತ್ರಿಕ ದ್ರವ್ಯವಾಸ್ತವತವಾದ ಮುಂದೆ ಮಾರ್ಕ್ಸಿಸ್ಟ್ ಇತಿಹಾಸ ಲೇಖನ ಎಂದೇ ಪ್ರಖ್ಯಾತಿ ಹೊಂದಿತು. ಕಾರ್ಲ್ ಮಾರ್ಕ್ಸ್ 19–20ನೇ ಶತಮಾನದ ಐತಿಹಾಸಿಕ ಲೇಖನ ಮೇಲೆ ಬೀರಿದ ಪ್ರಭಾವ ಅಸಾಧಾರಣವಾದುದು. ಕರ್ಲ್‌ಮಾರ್ಕ್ಸ್‌ನ ತತ್ವ ಹಾಗೂ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಐತಿಹಾಸಿಕ ಘಟನಾವಳಿಗಳನ್ನು ಅಧ್ಯಯನ ಮಾಡುವ ಪ್ರಯತ್ನಗಳು ಪ್ರಪಂಚದಾದ್ಯಂತ ನಡೆದು ಇದರ ಪರ ಹಾಗೂ ವಿರೋಧಿ, ವಾದ ಚರ್ಚೆಗಳು ಐತಿಹಾಸಿಕ ಅಧ್ಯಯನಗಳನ್ನು ಶ್ರೀಮಂತಗೊಳಿಸಿವೆ.

ಹೆಗಲ್‌ನ ಪರಾಮರ್ಶೆಯಿಂದ ಪ್ರಭಾವಿತನಾದ ಕಾರ್ಲ್‌ಮಾರ್ಕ್ಸ್ ಅದನ್ನು ತನ್ನದೇ ಆದ ರೀತಿಯಲ್ಲಿ ಬಳಸಿಕೊಂಡು ಮಾನವನ ಎಲ್ಲಾ ಸಂಬಂಧಗಳು ಮೂಲತಃ ಸಮಾಜದ ಆರ್ಥಿಕ ವ್ಯವಸ್ಥೆಯನ್ನವಲಂಬಿಸಿದೆ ಎಂಬ ತೀರ್ಮಾನಕ್ಕೆ ಬಂದನು. ಉತ್ಪಾದನಾ ಪದ್ಧತಿ ಮಾನವನ ಲೌಕಿಕ ಜೀವನಕ್ಕನುಗುಣವಾದ ಅವರ ನಡುವಣ ಸಾಮಾಜಿಕ, ಆರ್ಥಿಕ ಹಾಗೂ ಪಾರಮಾರ್ಥಿಕ ಸಂಬಂಧಗಳನ್ನು ರೂಢಿಸುತ್ತದೆ. ಈ ಉತ್ಪಾದನೆ ಸಂಬಂಧಿಸಿದ ಸಾಮಾಜಿಕ ಸಂಬಂಧಗಳು ಕಾಲಕಾಲಕ್ಕೆ ಬದಲಾಗುತ್ತಾ ಹೋಗುತ್ತದೆ. ಈ ರೀತಿ ಬದಲಾಗುವ ಮಾನವ ನಿರ್ಮಿತ ಸಂಬಂಧಗಳು ಇತಿಹಾಸದ ವಿವಿಧ ಘಟ್ಟಗಳಲ್ಲಿ ಉತ್ಪನ್ನಕಾರಕ ಶಕ್ತಿಗಳು ಆಳುವ ವರ್ಗಗಳಾಗಿ ಮಾರ್ಪಟ್ಟು ಉತ್ಪನ್ನ ಶಕ್ತಿಗಳ ಮೇಲೆ ತಮ್ಮ ಹಿಡಿತವನ್ನು ಬಿಗಿಗೊಳಿಸುತ್ತವೆ. ಇಂತಹ ಸಂದರ್ಭದಲ್ಲಿ ಸಹಜವಾಗಿಯೇ ಘರ್ಷಣೆಗಳುಂಟಾಗುತ್ತವೆ. ಇತಿಹಾಸ ಕೇವಲ ವರ್ಗಗಳ ನಡುವಣ ಘರ್ಷಣೆಗಳ ಕಥೆ. ಇದು ಸೂಕ್ಷ್ಮವಾಗಿ ಮಾರ್ಕ್ಸ್‌ನ ಸಿದ್ಧಾಂತ.

## 19.2 ಮಾರ್ಕ್ಸ್‌ವಾದಿ ಇತಿಹಾಸ ಲೇಖನ ಸ್ವರೂಪ

ಕಾರ್ಲ್‌ಮಾರ್ಕ್ಸ್‌ನ ಅಧ್ಯಯನ ವಿಶೇಷವಾಗಿ ಯೂರೋಪ್ ಕೇಂದ್ರವುಳ್ಳದಾಗಿದ್ದರೂ ಕೂಡ ಅವನ ಬರವಣಿಗೆಗಳಲ್ಲಿ ಭಾರತವನ್ನು ಕುರಿತು ಹಲವು ಪ್ರಸ್ತಾಪಗಳು ವ್ಯಕ್ತವಾಗಿದೆ. ಭಾರತವನ್ನು ಕುರಿತು ಕಾರ್ಲ್‌ಮಾರ್ಕ್ಸ್ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಎರಡು ಹಂತಗಳಲ್ಲಿ ಚರ್ಚಿಸಬಹುದು. ಮೊದಲನೆಯದಾಗಿ ಆಧುನಿಕ ಪೂರ್ವ ಭಾರತದ ಸಾಮಾಜಿಕ ವ್ಯವಸ್ಥೆ, ಎರಡನೆಯದಾಗಿ ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಸ್ವರೂಪ ಹಾಗೂ ಅದರ ಪರಿಣಾಮಗಳು.

ಆಧುನಿಕ ಪೂರ್ವ ಭಾರತದ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಚರ್ಚಿಸುವ ಸಂದರ್ಭದಲ್ಲಿ ಕಾರ್ಲ್‌ಮಾರ್ಕ್ಸ್ 'ಬದಲಾವಣೆಗೆ ಒಳಗಾಗದ ತಟಸ್ಥ ಸ್ವರೂಪದ ಸಾಮಾಜಿಕ ಆರ್ಥಿಕ ವ್ಯವಸ್ಥೆ' ಎಂದೂ, ಭಾರತದ ಗ್ರಾಮಗಳು ಸಾವಿರಾರು ವರ್ಷಗಳಿಂದ ಯಾವುದೇ ಬದಲಾವಣೆ ಇಲ್ಲದೆ, ಮುಂದುವರಿದವೆಂದೂ ವ್ಯಾಖ್ಯಾನಿಸಿ ಇಂತಹ ವ್ಯವಸ್ಥೆಯನ್ನು 'ಪೌರಾತ್ಯ ನಿರಂಕುಶ ಪ್ರಭುತ್ವ' ಎಂದು ವ್ಯಾಖ್ಯಾನಿಸಿದ್ದಾರೆ. ಕಾರ್ಲ್‌ಮಾರ್ಕ್ಸ್ ಭಾರತದ ಇತಿಹಾಸದ ಬಗ್ಗೆ ಅರಿಯಲು ಭಾರತೀಯ ಮೂಲಾಧಾರಗಳನ್ನು ಅಧ್ಯಯನಿಸದೆ ಸಮಕಾಲೀನ ಬ್ರಿಟಿಷ್ ಮೂಲದ ವರದಿಗಳು, ಪ್ರಕಟಣೆಗಳು ಹಾಗೂ ದಾಖಲೆಗಳನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ಹೀಗಾಗಿ ಅವನು ನೀಡಿರುವ ಚಿತ್ರಣ ಅಪೂರ್ಣ ಹಾಗೂ ಅಸ್ಪಷ್ಟತೆಯಿಂದ ಕೂಡಿದೆ.

ಬ್ರಿಟಿಷ್ ಆಳ್ವಿಕೆ ಕಾಲದ ಭಾರತದ ಸ್ಥಿತಿಗತಿಗಳ ಬಗ್ಗೆ ಬರೆಯಲು ವೈವಿಧ್ಯಮಯ ದಾಖಲೆಗಳನ್ನು ಹಾಗೂ ವಿಫುಲವಾದ ಮೂಲಾಧಾರಗಳನ್ನು ಅಭ್ಯಸಿಸಿದ ಕಾರಣ ಅವನ ಬರವಣಿಗೆಗಳಲ್ಲಿ ಈ ಕಾಲವನ್ನು ಕುರಿತಂತೆ ಹೆಚ್ಚು ಸ್ಪಷ್ಟತೆ ಹಾಗೂ ಖಚಿತತೆಯನ್ನು ನಾವು ಕಾಣಬಹುದಾಗಿದೆ. ಪರಂಪರಾನುಗತ ಸಾಮಾಜಿಕ ಹಾಗೂ ಆರ್ಥಿಕ ಜೀವನದಲ್ಲಿ ಬ್ರಿಟಿಷ್ ಆಳ್ವಿಕೆ ಬದಲಾವಣೆಯ ಗಾಳಿ ಬೀಸಿತು ಎಂಬ ಅಭಿಪ್ರಾಯಕ್ಕೆ ಕಾರ್ಲ್‌ಮಾರ್ಕ್ಸ್ ಬರುತ್ತಾರೆ. ಬ್ರಿಟಿಷ್ ಸರ್ಕಾರ ಲೋಕೋಪಯೋಗಿ ಕಾರ್ಯಗಳನ್ನು ನಿರ್ಲಕ್ಷಿಸಿದ ಕಾರಣ ಕೃಷಿಯಲ್ಲಿ ಹಿನ್ನಡೆ ಉಂಟಾಯಿತೆಂದು, ಬ್ರಿಟಿಷರ ವ್ಯಾಪಾರದಿಂದ ಭಾರತ ಆರ್ಥಿಕ ವ್ಯವಸ್ಥೆ ದಿವಾಳಿಯಾಯಿತೆಂದು ತನ್ನ ಬರವಣಿಗೆಗಳಲ್ಲಿ ದಾಖಲಿಸಿದ್ದಾನೆ. ಬ್ರಿಟಿಷ್ ಆಳ್ವಿಕೆ ಕಾಲದ ಭಾರತದ ಚಿತ್ರಣ ಕೊಡುವಲ್ಲಿ ಕಾರ್ಲ್‌ಮಾರ್ಕ್ಸ್‌ನ ಬರವಣಿಗೆಗಳಲ್ಲಿ ಹೆಚ್ಚು ನಿಖರತೆ ಕಂಡುಬರುತ್ತದೆ.

## 19.3 ಮಾರ್ಕ್ಸ್‌ವಾದಿ ಇತಿಹಾಸ ಲೇಖನದಲ್ಲಿನ ಬದಲಾವಣೆ

ಯುರೋಪಿನಲ್ಲಿ 20ನೇ ಶತಮಾನದ ಉತ್ತರಾರ್ಧದಲ್ಲಿ ಮಾರ್ಕ್ಸ್‌ವಾದಿ ಇತಿಹಾಸ ಲೇಖನ ಹಾಗೂ ಚಿಂತನೆಗಳಲ್ಲಿ ಅಮೂಲಾಗ್ರ ಬದಲಾವಣೆಗಳಾದವು. ಅದು 20ನೇ ಶತಮಾನದ ಪೂರ್ವಾರ್ಧದಲ್ಲಿ ಇಟಲಿಯ ಫ್ಯಾಸಿಸಂ ಬೆಳವಣಿಗೆಗೆ ಸಾಕ್ಷಿಯಾಗಿದ್ದ ಅಂಟೋನಿಯೋ ಗ್ರಾಮ್‌ಶಿಯವರ 'ಸೆರೆಮನೆ ಟಿಪ್ಪಣಿ'ಗಳಲ್ಲಿ ಪ್ರಪ್ರಥಮ ಬಾರಿಗೆ ಕಾಣಿಸಿಕೊಳ್ಳುತ್ತದೆ. ಅವನು ಆರ್ಥಿಕ ನಿರ್ಣಾಯಕತೆ ಹಾಗೂ ವರ್ಗ ನಿರ್ಣಾಯಕತೆಯಲ್ಲಿ ಮೂಲೆಗುಂಪಾಗಿದ್ದ ಸಂಸ್ಕೃತಿಯನ್ನು ಪ್ರಧಾನ ಸ್ಥಾನಕ್ಕೆ ತಂದು ನಿಲ್ಲಿಸುತ್ತಾನೆ. ಹಾಗೂ

ಯಾವುದೇ ಆಳ್ವಿಕೆ ಭೌತಿಕ ಬಲ ಪ್ರಯೋಗದ ಮೂಲಕವೇ ಅಸ್ತಿತ್ವಕ್ಕೆ ಬರುವುದಿಲ್ಲ. ಅದನ್ನು ಧರಿಸಬಲ್ಲ ಸಾಂಸ್ಕೃತಿಕ ಯಾಜಮಾನ್ಯ ಆ ಸಮಾಜದಲ್ಲಿ ಬೆಳೆಯುವುದು ಆಳ್ವಿಕೆಯ ಅಸ್ತಿತ್ವಕ್ಕೆ ನಿರ್ಣಾಯಕ ಎನ್ನುತ್ತಾರೆ. ಅಲ್ಲೂತ್ತಸರ್ ಎಂಬ ಚಿಂತಕನು ಸಂಸ್ಕೃತಿ, ಚಿಂತನೆ, ಉತ್ಪಾದನೆ ಮುಂತಾದವೆಲ್ಲ ಪರಸ್ಪರಗಳನ್ನು ರೂಪಿಸುತ್ತಿರುತ್ತವೆ ಎಂಬ ರಚನಾವಾದೀ ಪರಾಮರ್ಶೆಯನ್ನು ನಡೆಸಿದರು.

ಇದೆಲ್ಲಕ್ಕಿಂತ ಮಾರ್ಕ್ಸ್‌ವಾದಿ ಇತಿಹಾಸ ಲೇಖನಕ್ಕೆ ತೀರ ಮಹತ್ವ ಪೂರ್ಣವಾದ ಬೆಳವಣಿಗೆ ಎಂದರೆ ಎಡಪಂಥೀಯರು. ಈ ಚಿಂತಕರು 1960ರ ಸುಮಾರಿಗೆ ಇಂಗ್ಲೇಂಡಿನಲ್ಲಿ ಪ್ರಾಧಾನ್ಯತೆ ಪಡೆದರು. ಇವರು ರಷ್ಯಾದ ಮಾರ್ಕ್ಸ್‌ವಾದಿಗಳ ಆರ್ಥಿಕ ನಿರ್ಣಾಯಕತೆ, ವರ್ಗಸಂಘರ್ಷದ ತರ್ಕ ಮುಂತಾದವುಗಳನ್ನು ಪ್ರಶ್ನಿಸಿದರು. ಹಾಗೂ ಅದು ಮಾರ್ಕ್ಸ್‌ನ ಬರವಣಿಗೆಯ ತಪ್ಪು ನಿರೂಪಣೆ ಎಂಬುದನ್ನು ತೋರಿಸಿದರಲ್ಲದೆ ಮಾರ್ಕ್ಸ್‌ನ ಬರವಣಿಗೆಯಲ್ಲೇ ಇದ್ದ ಮಿತಿಗಳನ್ನೂ ಸಂದಿಗ್ಧಗಳನ್ನೂ ಕೂಡ ವಿಶ್ಲೇಷಿಸಿದರು. ಮನುಷ್ಯನ ಸಂಸ್ಕೃತಿ, ಅನುಭವ ಮುಂತಾದ 'ಮೇಲ್ಕಟ್ಟಡ'ಗಳನ್ನು ಹೆಚ್ಚು ಸೂಕ್ಷ್ಮ ಅಧ್ಯಯನಗಳಿಗೊಳಪಡಿಸಿ–Base ಹಾಗೂ Superstructure ಎಂಬ ಪ್ರತ್ಯೇಕತೆಯನ್ನು ನಿರಾಕರಿಸಿದರು. ಈ ಇತಿಹಾಸಕಾರರಲ್ಲಿ ಇ.ಟಿ.ಥಾಮ್ಸ್‌ನ್ ಪ್ರಮುಖನಾಗಿದ್ದಾನೆ.

ಈ ರೀತಿ ಮಾರ್ಕ್ಸ್‌ವಾದೀ ಇತಿಹಾಸ ಲೇಖನ ಎಂಬುದು ಏಕರೂಪೀ ಸಂಪ್ರದಾಯವಲ್ಲ. ಅದು ಸದಾ ತನ್ನ ಮಿತಿಗಳನ್ನು ಪರಾಮರ್ಶೆಗೊಳ ಪಡಿಸಿಕೊಳ್ಳುತ್ತ ಬೆಳೆದ ಮಾರ್ಗವಾಗಿದೆ. ಆದರೆ ಈ ಚಿಂತನೆಗಳೆಲ್ಲವೂ ಕಾರ್ಲ್‌ಮಾರ್ಕ್ಸ್‌ನ ತತ್ವ ಹಾಗೂ ಬರಹಗಳನ್ನಾಧರಿಸಿಯೇ ಇದ್ದುದರಿಂದ ಮಾತ್ರ ಅವನ್ನು ಮಾರ್ಕ್ಸ್‌ವಾದೀ ಎಂದು ಕರೆಯಬಹುದು.

## 19.4 ಭಾರತೀಯ ಮಾರ್ಕ್ಸ್‌ವಾದಿ ಇತಿಹಾಸ ಲೇಖನ

ಭಾರತೀಯ ಮಾರ್ಕ್ಸ್‌ವಾದಿ ಇತಿಹಾಸ ಲೇಖನದ ಹಾದಿ ಎಂದರೆ ರಷ್ಯಾ ಮಾರ್ಕ್ಸವಾದದಿಂದ ನಿರಂತರವಾಗಿ ತನ್ನ ತನವನ್ನು ಪ್ರತ್ಯೇಕಿಸಿಕೊಳ್ಳುವ ಪ್ರಯೋಗದಂತಿದೆ. ಹಾಗಾಗಿ ಅದು ಅಂತಿಮವಾಗಿ ಒಂದು ಪರಿಷ್ಕರಿಸಿದ ಸೆಕ್ಯೂಲರ್ ರಾಷ್ಟ್ರೀಯ ಇತಿಹಾಸವಾಗಿ ತನ್ನನ್ನು ತಾನು ಕಂಡುಕೊಂಡಿದೆ. ಈ ಬೆಳವಣಿಗೆಯ ಹಿಂದೆ ಸೋವಿಯೆಟ್ ರಷ್ಯಾಯಾದ ವಿಘಟನೆ ಹಾಗೂ ಪತನಗಳು ವಹಿಸಿದ ಪಾತ್ರಕ್ಕಿಂತ ಭಾರತೀಯ ಮಾರ್ಕ್ಸವಾದೀ ಇತಿಹಾಸದ ಹಾಗೂ ಭಾರತಿಯ ರಾಷ್ಟ್ರ ರಾಜಕರಣದ ಬೆಳವಣಿಗೆಗಳೇ ನಿಣಾಯಕವಾಗಿದ್ದುದೂ ಕಂಡುಬರುತ್ತದೆ. ಹಾಗಾಗಿ 1950ರಲೇ ಪಕ್ಷರಾಜಕೀಯದ ಮಾರ್ಕ್ಸವಾದ ಹಾಗೂ ಇತಿಹಾಸಕಾರರ ಮಾರ್ಕ್ಸವಾದಗಳು ಬೇರೆ ಬೇರೆ ಎಂದು ಇತಿಹಾಸಕಾರರು ಗುರುತಿಸಿಕೊಂಡಿದ್ದನ್ನು ಡಿ.ಡಿ.ಕೋಸಾಂಬಿಯವರ ಬರಹಗಳಲ್ಲಿ ಗಮನಿಸಬಹುದು.

ಭಾತೀಯ ಇತಿಹಾಸದ ಕುರಿತು ಭಾರತೀಯರಿಂದಲೆ ಬಂದ ಪ್ರಪ್ರಥಮ ಗ್ರಂಥವೆಂದರೆ ಎಸ್.ಎ.ದಾಂಗೆಯವರ 'ಇಂಡಿಯಾ ಫ್ರಮ್ ಪ್ರಿಮಿಡಿವ್ ಕಮ್ಯುನಿಸಂ ಟು ಸ್ಲೇವರಿ' ರಷಿಯಾದ

ಮಾರ್ಕ್ಸ್‌ವಾದೀ ಇತಿಹಾಸದ ಪುನರುತ್ಪಾದನೆಯಾಗಿದೆ. 1950ರ ದಶಕದಲ್ಲಿ ಭಾರತೀಯ ಇತಿಹಾಸ ಲೇಖನವನ್ನು ಪ್ರಕಟಿಸಲು ತೊಡಗಿದ ಡಿ.ಡಿ.ಕೊಸಾಂಬಿಯವರು ಪ್ರಮುಖವಾಗಿ ಎರಡು ಸಂಪ್ರದಾಯಗಳನ್ನು ಪರಿಷ್ಕರಿಸುತ್ತಿದ್ದರು. ಅವೆಂದರೆ ರಚಿಯಾ ಮಾಕ್ಸವಾದೀ ಇತಿಹಾಸ ಲೇಖನ ಹಾಗೂ ಭಾರತೀಯ ರಾಷ್ಟ್ರೀಯತಾವಾದಿ ಇತಿಹಾಸ ಲೇಖನ. ರಷಿಯಾ ಮಾರ್ಕ್ಸ್‌ವಾದಿಗಳ ಪ್ರಕಾರ ಏಶಿಯಾದ ದೇಶಗಳಲ್ಲಿ ಉತ್ಪಾದನಾ ವಿಧಾನಗಳ ಏಳು ಬೀಳು ಹಾಗೂ ವಿಕಾಸ ನಡೆಯಲಿಲ್ಲ. ಹಾಗಾಗಿ ಅದೊಂದು ಜೇಮ್ಸ್ ಮಿಲ್ ನಂಥ ಇತಿಹಾಸಕಾರರ ಚಿತ್ರಣದಂತೆಯೇ ಇತ್ತು. ಮಾರ್ಕ್ಸ್ ಕೂಡ ತನ್ನ ಬರಹದಲ್ಲಿ ಏಶಿಯಾಟಿಕ್ ಉತ್ಪಾದನಾ ವಿಧಾನ ಎಂಬ ಪ್ರತ್ಯೇಕ ಪರಿಭಾಷೆಯನ್ನು ಒಮ್ಮೆ ಅನುಮಾನದಿಂದ ಬಳಸಿದ್ದರೂ, ನಂತರದ ರಷಿಯಾ ಮಾರ್ಕ್ಸ್‌ವಾದಿಗಳು ಅದನ್ನ ಗಟ್ಟಿಮಾಡಿದ್ದರು.

ಡಿ.ಡಿ.ಕೊಸಾಬಿಯವರು ಭಾರತೀಯ ಇತಿಹಾಸ ಕೂಡ ಇಂಥ ಸಾಮಾಜಿಕ ವಿಕಾಸವನ್ನು ಕಂಡಿದೆ ಎಂದು ತಮ್ಮ ಮೊದಲ ಕೃತಿ 'ಇಂಟ್ರೊಡೆಕ್ಷ್ಯನ್ ಟು ಇಂಡಿಯನ್ ಹಿಸ್ಟರಿ'ಯಲ್ಲಿ ಪ್ರಸ್ತಾಪಿಸುತ್ತಾರೆ. ಹಾಗಾಗಿ ಮಾರ್ಕ್ಸ್‌ನ ಅಭಿಪ್ರಾಯವನ್ನು ಅವರು ಅಲ್ಲಗಳೆಯುತ್ತಿದ್ದಾರೆ ಎಂದು ಈ ರಷಿಯಾ ಮಾರ್ಕ್ಸ್‌ವಾದಿಗಳು ಟೀಕಿಸಿದರು. ರಾಷ್ಟ್ರೀಯವಾದಿಗಳು ವಸಹಾತು ಇತಿಹಾಸ ಲೇಖನವನ್ನು ಎದುರುಸಿದಂತೇ ಕೊಸಾಂಬಿಯವರು ರಷಿಯಾ ಮಾರ್ಕ್ಸ್‌ವಾದಿಗಳ ಗ್ರಹಿಕೆಯನ್ನು ಅಲ್ಲಗಳೆದು ಭಾರತೀಯ ಇತಿಹಾಸಕ್ಕೂ ಒಂದು ಸ್ವಂತಿಕೆಯನ್ನು ನೀಡಲು ಪ್ರಯತ್ನಿಸಿದ್ದು ಇಲ್ಲಿ ಕಂಡುಬರುತ್ತದೆ. ಆದರೆ ಅವರು ಅಂದಿನ ಮಾರ್ಕ್ಸ್‌ವಾದೀ ಚೌಕಟ್ಟಿನಲ್ಲೇ ಇತಿಹಾಸವನ್ನು ಕಟ್ಟಿದರು. ಕೊಸಾಂಬಿಯವರು ತಮ್ಮ ಕಾಲದ ಮಾರ್ಕ್ಸ್‌ವಾದವನ್ನು ತೀರ ಸೂಕ್ಷ್ಮವಾದ ಹಾಗೂ ಭಾರತೀಯ ಸಂದರ್ಭಕ್ಕೆ ಪ್ರಸ್ತುತವಾದ ರೀತಿಯಲ್ಲಿ ಇತಿಹಾಸವನ್ನಾಗಿ ಪರಿವರ್ತಿಸಿದರು. ಹಾಗಾಗಿ ಅವರು 'ಮಿಥ್ ಎಂಡ್ ರಿಯಾಲಿಟಿ'ಯ ಪ್ರಕಾರದ ಗ್ರಂಥಗಳನ್ನು ರಚಿಸಲು ಸಾಧ್ಯವಾಯಿತು. ಮಿಥ್ ಎಂಡ್ ರಿಯಾಲಿಟಿಯಲ್ಲಿ ರಾಷ್ಟ್ರೀಯವಾದೀ ಸಾಂಸ್ಕೃತಿಕ ಇತಿಹಾಸದ ವೈದಿಕ ಹಾಗೂ ಸಂಸ್ಕೃತ ಪ್ರಧಾನ ನಿರೂಪಣೆಗಳನ್ನು ನಿರಾಕರಿಸಿ ಜಾನಪದ ಅಧ್ಯಯನ ಪ್ರಾಕ್ತಾನಶಾಸ್ತ್ರ ಹಾಗೂ ಕ್ಷೇತ್ರಕಾರ್ಯ ವಿಧಾನಗಳ ಮೂಲಕ ಭಾರತದ ಸಾಂಸ್ಕೃತಿಕ ವರ್ತಮಾನವನ್ನು ಗ್ರಹಿಸಿ ಬರೆದರು. ಹಾಗಾಗಿ ಭಾರತೀಯ ಸಾಂಸ್ಕೃತಿಕ ಇತಿಹಾಸ ಲೇಖನಕ್ಕೆ ಅವರು ಹೊಸ ಮಾನದಂಡವನ್ನು ಸೃಷ್ಟಿಸಿದರು.

ಈ ರೀತಿ ಕೊಸಾಂಬಿಯವರು ರಾಷ್ಟ್ರೀಯ ಇತಿಹಾಸ ಮಾರ್ಗವನ್ನು ತ್ಯಜಿಸಿ ಹೊಸ ಮಾರ್ಗವನ್ನು ಹುಟ್ಟುಹಾಕಿದರು. ಅವರ ಇತಿಹಾಸ ರಾಜವಂಶಗಳ ಇತಿಹಾಸ ಆಗಿರದೇ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ನಿರ್ಮಾಣಗಳ ಇತಿಹಾಸವಾಗಿದೆ. ಹಾಗೂ ಈ ಇತಿಹಾಸದ ರಚನೆಗೆ ಮಾರ್ಕ್ಸ್‌ವಾದೀ ಚಿಂತನೆಗಳನ್ನು ಅವರು ಆಶ್ರಯಿಸಿದ್ದರೂ ಯಾವುದೇ ಘೋಷಿತ ಮಾರ್ಕ್ಸ್‌ವಾದೀ ಕಾರ್ಯಕ್ರಮಗಳನ್ನು ಉದ್ದೇಶಪೂರ್ವಕವಾಗಿ ಪ್ರತಿಪಾದಿಸಲು ಹೋಗಲಿಲ್ಲ.

ಆರ್.ಎಸ್.ಶರ್ಮ ಅವರು ಭಾರತೀಯ 'ಫ್ಯೂಡಲಿಸಂ' ಕುರಿತು ವಿಶೇಷವಾಗಿ ಸಂಶೋಧನ ನಡೆಸಿದರು. 1920ರ ದಶಕದಲ್ಲಿ 'ಫ್ಯೂಡಲಿಸಂ' ಕುರಿತ ಚರ್ಚೆ ಭಾರತೀಯ ಪ್ರಾಚೀನ–ಮಧ್ಯಕಾಲೀನ

ಇತಿಹಾಸದಲ್ಲಿ ಇತಿಹಾಸಕಾರರ ಮೂಲವಸ್ತುವಾಯಿತು. ಪ್ರಾಚೀನ ಭಾರತೀಯ ರಾಜಕೀಯ, ಮತಸಂಪ್ರದಾಯ, ತಾತ್ವಿಕತೆ, ಅರ್ಥವ್ಯವಸ್ಥೆ, ಸಮಾಜ, ಕಲೆ ವಾಸ್ತುಶಿಲ್ಪ ಮುಂತಾದವುಗಳಲ್ಲಿ 'ಫ್ಯೂಡಲ್ ವ್ಯವಸ್ಥೆ' ಹೇಗೆ ಅಭಿವ್ಯಕ್ತಿಯಾಗುತ್ತದೆ ಎಂಬುದನ್ನು ಪರಿಶೀಲಿಸುವ ಕುತೂಹಲಕ್ಕೆ ಅನೇಕ ಇತಿಹಾಸಕಾರರು ಬದ್ಧರಾದರು. ಅವರಲ್ಲಿ ಡಿ.ಎನ್.ಝಾ., ಬಿ.ಎನ್.ಎಸ್.ಯಾದವ., ಆರ್.ಎನ್.ನಂದಿ. ಮುಂತಾದವರು ಪ್ರಮುಖರಾಗಿದ್ದಾರೆ.

ಪ್ರಾಚೀನ ಭಾರತೀಯ ಇತಿಹಾಸ ಲೇಖನದಲ್ಲಿ ಈ ಎಲ್ಲ ಪ್ರಭಾವಗಳಿಂದಲೂ ತಪ್ಪಿಸಿಕೊಂಡು ತಮ್ಮದೇ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡ ಒಬ್ಬ ಇತಿಹಾಸಕಾರರೆಂದರೆ ರೋಮಿಲಾ ಥಾಪರ್ ಅವರು. ಅವರು ಪ್ರಧಾನವಾಗಿ ಮೌರ್ಯ ಹಾಗೂ ಮೌರ್ಯ ಪೂರ್ವಕಾಲದ ರಾಜ್ಯ ನಿರ್ಮಾಣ ಹಾಗೂ ಸಾಮಾಗಿಕ ಸಾಂಸ್ಕೃತಿಕ ಇತಿಹಾಸದ ಕುರಿತು ಅನೇಕ ಒಳನೋಟಗಳನ್ನು ನೀಡುತ್ತಾರೆ. ಥಾಪರ್ ಅವರ ಈ ಎಲ್ಲ ಲೇಖನಗಳೂ ನಮ್ಮ ಭಾರತೀಯ 'ಸೆಕ್ಯುಲರ್ ರಾಷ್ಟ್ರ' ಪರಿಕಲ್ಪನೆಯನ್ನು ನಿರ್ಮಿಸಿಕೊಳ್ಳಲಿಕ್ಕೆ ಹಾಗೂ ಹಿಂದೂ ರಾಷ್ಟ್ರವಾದಿಗಳ ಸಾಂಸ್ಕೃತಿಕ ಇತಿಹಾಸವನ್ನು ಅಲ್ಲಗಳೆಯಲಿಕ್ಕೆ ಹಾಗೂ ರಾಷ್ಟ್ರೀಯತಾ ಯುಗದ ಸಾಮಾಜಿಕ ಇತಿಹಾಸದ ಜಡ ಚೌಕಟ್ಟನ್ನು ಮೀರಿ ಚಲನಶೀಲತೆಯನ್ನು ಗ್ರಹಿಸಲಿಕ್ಕೆ ಸಮರ್ಥವಾದ ಆಕರಗಳಾಗಿವೆ.

ಮಧ್ಯಕಾಲೀನ ಭಾರತತದ ಇತಿಹಾಸದ ಕುರಿತು ಎಡಪಂಥೀಯ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಬರೆಯುವ ಸಂಪ್ರದಾಯಕ್ಕೆ ಮಹಮ್ಮದ ಹಬೀಬ ಅವರು ಬುನಾದಿ ಹಾಕಿದರು. ಇರ್ಫಾನ್ ಹಬೀಬ ಅವರು ಮಧ್ಯಕಾಲೀನ ಇತಿಹಾಸ ಲೇಖನದಲ್ಲಿ ನಾವು ಗುರುತಿಸಬಹುದಾದ ಸರ್ವಶ್ರೇಷ್ಠ ಇತಿಹಾಸಕಾರರಾಗಿದ್ದಾರೆ. ಅವರು ಮೊಘಲ್ ಕಾಲದ ಆಡಳಿತ, ಕೃಷಿ, ವಾಣಿಜ್ಯ ವ್ಯವಸ್ಥೆಯ ಕುರಿತು ಹಾಗೂ ಭೂಗೋಳದ ಕುರಿತು ವಿಸ್ತೃತ ಅಧ್ಯಯನವನ್ನು ನಡೆಸಿದ್ದಾರೆ. ಈ ಮೇಲಿನ ಇಬ್ಬರೂ ವಿದ್ವಾಂಸರು ರಾಷ್ಟ್ರೀಯವಾದೀ ಇತಿಹಾಸವು ಮಧ್ಯಕಾಲೀನ ಕುರಿತು ಕಟ್ಟಿದ ಕೆಲ ಪೂರ್ವಗ್ರಹ ಪೀಡಿತ ನಿರ್ಣಯಗಳನ್ನು ಅಲ್ಲಗಳೆಯುವ ಕಾರ್ಯಕ್ರಮವನ್ನು ಕೂಡ ಹೊಂದಿದ್ದರು ಹಾಗೂ ಎಡಪಂಥೀಯ ವಿಶ್ಲೇಷಣೆ ಅವರಿಗೆ ಒಂದು ಸಾಧನವಾಯಿತು. ಜೊತೆಗೆ ಹೊಸಹಾತು ಶಾಹಿ ಇತಿಹಾಸ ಲೇಖನ ಮಧ್ಯ ಕಾಲದ ಕುರಿತು ಕಟ್ಟಿದ ನಿರೂಪಣೆಗಳನ್ನು ಕೂಡ ಇವರು ತಿದ್ದುಪಡಿ ಮಾಡುತ್ತಾರೆ. ಮಧ್ಯಕಾಲೀನ ಇತಿಹಾಸ ಕುರಿತು ಇವರಲ್ಲದೆ ಹರ್ಬನ್ಸ್ ಮುಖಿಯಾ ಸತೀಶ್‌ಚಂದ್ರ, ಮುಂತಾದ ವಿಧ್ವಾಂಸರನ್ನು ಇಲ್ಲಿ ಉಲ್ಲೇಖಿಸಬಹುದು.

ಬಿಪಿನ್‌ಚಂದ್ರ ಅವರ ಕಾಲದಿಂದ ಎಡಪಂಥೀಯರ ಆಧುನಿಕ ಇತಿಹಾಸ ಲೇಖನವು ರಾಷ್ಟ್ರೀಯವಾದಿಯಾಗಿ ಪರಿವರ್ತನೆ ಹೊಂದಿತು. ಹಾಗೂ 'ಸೆಕ್ಯುಲರಿಸಂ'ನ ವಕ್ತಾರರಾಗಿ ಈ ಇತಿಹಾಸಕಾರರು ಮಹತ್ವ ಗಳಿಸಿದರು. ಇವರಲ್ಲಿ ಕೆ.ಎನ್.ಪಣಿಕ್ಕರ್, ಸರ್ವಪಳ್ಳಿ ಗೋಪಾಲ, ಸುಮಿತ್ ಸರ್ಕಾರ್ ಮುಂತಾದವರನ್ನು ಹೆಸರಿಸಬಹುದು.

## 19.5 ಮಾರ್ಕ್ಸ್‌ವಾದಿ ಇತಿಹಾಸಕಾರರು

1950ರ ದಶಕದಲ್ಲಿ ಇತಿಹಾಸದ ಅಧ್ಯಯನದಲ್ಲಿ ತೊಡಗಿಸಿಕೊಂಡ ಡಿ.ಡಿ.ಕೋಸಂಬಿ ಹಾಗೂ ಆರ್.ಎಸ್.ಶರ್ಮ, ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತಗಳಿಂದ ಪ್ರಭಾವಿತರಾದರೂ ಕೂಡ ಕರ್ಲ್‌ಮಾರ್ಕ್ಸ್‌ನ ಅಭಿಪ್ರಾಯಗಳನ್ನು ಮಾರ್ಪಾಡು ಮಾಡಿಕೊಳ್ಳುವ ಹಾಗೂ ಕೆಲವು ಸಂಧರ್ಭದಲ್ಲಿ ತಿರಸ್ಕರಿಸುವ ಪ್ರವೃತ್ತಿ ಕಾಣಬಹುದಾಗಿದೆ. ಕೋಸಂಬಿ ತಮ್ಮ ಅಧ್ಯಯನಗಳಲ್ಲಿ ಆರ್ಥಿಕ ಉತ್ಪಾದನಾ ವ್ಯವಸ್ಥೆಗಳಲ್ಲಾದ ಬದಲಾವಣೆಗಳನ್ನು ಗುರುತಿಸಲು ಆ ಬದಲಾವಣೆಗಳ ಹಿನ್ನೆಲೆಯಲ್ಲಿ ಐತಿಹಾಸಿಕ ಘಟನೆಗಳನ್ನು ಅರಿಯಲು ಪ್ರಯತ್ನ ನಡೆಸಿದರು. ಕೋಸಂಬಿಯವರ ಅಭಿಪ್ರಾಯದಂತೆ ಮಾರ್ಕ್ಸ್‌ಸಿಸ್ಟ್ ಸಿದ್ಧಾಂತ ಒಂದು ವಿಶ್ಲೇಷಣಾ ಮಾರ್ಗವೇ ಹೊರತು ಅದು ಇಡೀ ಭಾರತದ ಇತಿಹಾಸವನ್ನು ಅರಿಯಲು ಲಭ್ಯವಿರುವ ಸಿದ್ಧಾ ಸೂತ್ರವಲ್ಲ ಎಂಬ ಅಭಿಪ್ರಾಯಕ್ಕೆ ಬಂದರು. ತಮ್ಮ ಬದಲಾವಣೆಗಳಲ್ಲಿ ಕಾರ್ಲ್‌ಮಾರ್ಕ್ಸ್‌ರು ಬಳಸಿದ ಸಿದ್ಧಾಂತವನ್ನು ತಿರಸ್ಕರಿಸಿ ಊಳಿಗಮಾನ್ಯ ಪದ್ಧತಿ ಸಿದ್ಧಾಂತವನ್ನು ಬಳಸಿರುವುದನ್ನು ಕಾಣಬಹುದು.

ಇರ್ಫಾನ್ ಹಬೀಬ್ ಮಧ್ಯಕಾಲೀನ ಭಾರತದ ಕೃಷಿ ವ್ಯವಸ್ಥೆಯನ್ನು ಚರ್ಚಿಸುವ ಸಂದರ್ಭದಲ್ಲಿ ಕಾರ್ಲ್‌ಮಾರ್ಕ್ಸ್‌ನ ಬರವಣಿಗೆಗಳಿಂದ ಪ್ರಭಾವಿತರಾದರೂ ಕೂಡ ಕಾರ್ಲ್‌ಮಾರ್ಕ್ಸ್ ಬಳಸಿದ Asiatic Mode of Production ಹಾಗೂ ಊಳಿಗಮಾನ್ಯ ಪದ್ಧತಿ ಪರಿಕಲ್ಪನೆಗಳನ್ನು ಬಳಸುವಲ್ಲಿ ಉತ್ಸಾಹ ತೋರದೆ ಭಾರತದ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗೆ ಸರಿಹೊಂದುವ 'ಮಧ್ಯಕಾಲೀನ ಭಾರತ ವ್ಯವಸ್ಥೆ' ಎಂಬ ಪರಿಕಲ್ಪನೆಯನ್ನು ಆಧುನಿಕ ಪೂರ್ವ ಭಾರತದ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳನ್ನು ಗುರುತಿಸಲು ಬಳಸುತ್ತಾರೆ.

ರೋಮಿಲಾ ಥಾಪರ್ ಅವರು ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತವನ್ನು ಕೆಲವು ಬದಲಾವಣೆಗಳೊಂದಿಗೆ ಪ್ರಾಚಿನ ಹಾಗೂ ಮಧ್ಯಕಾಲೀನ ಸಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳನ್ನು ಚರ್ಚಿಸುವ ಸಂದರ್ಭದಲ್ಲಿ ಬಳಸಿದ್ದಾರೆ. ಕಾರ್ಲ್‌ಮಾರ್ಕ್ಸ್‌ನ ಅಭಿಪ್ರಾಯದಂತೆ ಪ್ರಾಚೀನ ಭಾರತದ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆ ಸ್ಥಾಯಿ ಸ್ವಭಾವದಲ್ಲವೆಂದೂ, ಹಲವು ಬದಲಾವಣೆಗಳು ಉಂಟಾದವೆಂದೂ, ರುಜುವಾತು ಪಡಿಸುವುದರೊಂದಿಗೆ ನೀರಾವರಿ ವ್ಯವಸ್ಥೆಯ ಮಹತ್ವವನ್ನು ಒತ್ತಿ ಹೇಳಿದ್ದಾರೆ. ಪ್ರಾಚೀನ ಕಾಲದಲ್ಲಿ ಭೂಮಿಯ ಮೇಲೆ ಸಮುದಾಯ ಒಡೆತನವಿದ್ದು ಈ ಪರಿಸ್ಥಿತಿ ಚೋಳರ ಕಾಲದಲ್ಲಿ ಬದಲಾಯಿತು. ಚೋಳ ಅರಸರು ಬ್ರಾಹ್ಮಣರಿಗೆ, ದೇವಾಲಯಗಳಿಗೆ ನೀಡಿದ ದಾನಗಳ ಪರಿಣಾಮವಾಗಿ ಆ ಭೂಮಿಗಳಲ್ಲಿ ಕೆಲಸ ಮಾಡುವ ಒಂದು ಗುಲಾಮಿವರ್ಗ ಅಸ್ಥಿತ್ವಕ್ಕೆ ಬಂತೆಂದು ವಾದ ಮಂಡಿಸುತ್ತಾರೆ. ಚೋಳ ಹಾಗೂ ಹಾಗೂ ವಿಜಯನಗರ ಆಳ್ವಿಕೆ ಕಾಲದ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳಿಗೆ ವಿಶೇಷ ಒತ್ತು ನೀಡಿದ್ದಾರೆ.

ಇವರಲ್ಲದೆ ಇತರ ಕೆಲವು ಇತಿಹಾಸಕಾರರು ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತಗಳನ್ನು ಪೂರ್ತಿಯಾಗಿ ಒಪ್ಪದಿದ್ದರೂ ಅವುಗಳಿಂದ ಪ್ರಭಾವಿತವಾಗಿರುವುದನ್ನು ನಾವು ಸ್ಪಷ್ಟವಾಗಿ ಕಾಣಬಹುದಾಗಿದೆ. ಬಹುತೇಕ ಮಾರ್ಕ್ಸ್‌ಸಿಸ್ಟ್ ಇತಿಹಾಸಕಾರರು ಕಾರ್ಲ್‌ಮಾರ್ಕ್ಸ್ ಸಿದ್ಧಾಂತಗಳನ್ನು ಯಥಾವತ್ತಾಗಿ ಭಾರತದ ಸಂದರ್ಭಕ್ಕೆ

ಬಳಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯಕ್ಕೆ ಬಂದರೂ ಕಾರ್ಲ್‌ಮಾರ್ಕ್ಸ್‌ನ ಬರವಣಿಗೆಗಳಲ್ಲಿರುವ ಒಳನೋಟಗಳನ್ನು ಭಾರತದ ಇತಿಹಾಸ ಅಧ್ಯಯನ ಸಂದರ್ಭದಲ್ಲಿ ಬಳಸಿಕೊಳ್ಳುವಲ್ಲಿ ಒಲವು ತೋರಿದ್ದಾರೆ.

## 19.6 ಸಮಾಜವಾದಿ ಇತಿಹಾಸಕಾರರು

ಸಮಾಜವಾದಿ ಇತಿಹಾಸಕಾರರಲ್ಲಿ ಎಂ ಎನ್ ರಾಯ್, ಸುಮಿತ್ ಸರ್ಕಾರ್, ಬಿಪಿನ್ ಚಂದ್ರರವರು ಪ್ರಮುಖರಾಗಿದ್ದಾರೆ. ಆಧುನಿಕ ಇತಿಹಾಸದ ಎಡಪಂಥೀಯ ನಿರೂಪಣೆಗಳು 1940ರ ದಶಕದಲ್ಲಿ ಪ್ರಾರಂಭವಾಗುತ್ತದೆ. ಪಾಮೆದತ್ ಅವರ 'ಇಂಡಿಯಾ ಟುಡೆ' ಅಂಥ ಪ್ರಥಮ ಪ್ರಯತ್ನವಾಗಿದ್ದು ವಸಾಹಾತು ಶಾಹಿಯ ಆರ್ಥಿಕ ಅಂಶಗಳನ್ನು ಅದು ವಿಶ್ಲೇಷಿಸುತ್ತದೆ. ಎ.ಆರ್. ದೇಸಾಯಿಯವರ 'ಸೋಶಿಯಲ್ ಬ್ಯಾಕ್‌ಗ್ರೌಂಡ್ ಆಫ್ ಇಂಡಿಯನ್ ನ್ಯಾಶನಾಲಿಸಂ' ರಾಷ್ಟ್ರೀಯ ಚಳುವಳಿಯ ವರ್ಗ ವಿಶ್ಲೇಷಣೆಯಾಗಿದೆ. ಇವರ ಜೊತೆಗೆ ಇ.ಎಂ.ಎಸ್. ನಂಬೂದರಿಪಾಡ್ ಅವರನ್ನೂ ಉಲ್ಲೇಖಿಸಬಹುದು. ಇವರೆಲ್ಲ ವಸಹಾತುಶಾಹಿಯ ಶೋಷಣಾತ್ಮಕ ವ್ಯವಸ್ಥೆ ಹಾಗೂ ರಾಷ್ಟ್ರೀಯ ಚಳುವಳಿಯ ಮಿತಿಗಳನ್ನು ರಷ್ಯನ್ ಮಾರ್ಕ್ಸ್‌ವಾದದ ಪರಿಭಾಷೆಯಲ್ಲಿ ಅರ್ಥೈಸುತ್ತಾರೆ.

ವಸಾಹಾತುಶಾಹಿ ಬಂಡವಾಳಶಾಹಿಯ ಒಂದು ಬೆಳೆದ ಅವಸ್ಥೆಯಾಗಿದ್ದು ಭಾರತೀಯ ರಾಷ್ಟ್ರೀಯ ಚಳುವಳಿ ಬೂರ್ಜ್ವಾ ವರ್ಗದವರು ತಮ್ಮ ಅಧಿಕಾರಕ್ಕಾಗಿ ನಡೆಸಿದ ಹೋರಾಟ ಎಂದು ಅರ್ಥೈಸಿದರು. ಏಕೆಂದರೆ ಲಿಬರಲ್ ರಾಷ್ಟ್ರೀಯತಾವಾದೀ ಚಳುವಳಿಯು ಯುರೋಪಿನಲ್ಲಿ ಬಂಡವಾಳ ಶಾಹಿಯು ಹಳೆಯ ವ್ಯವಸ್ಥೆಯನ್ನು ಕಿತ್ತೊಗೆಯಲು ಹುಟ್ಟಿಕೊಂಡ ಬೂರ್ಜ್ವಾಗಳ ಚಳುವಳಿಯಾಗಿದೆ ಎಂಬ ಸ್ಟಾಲಿನ್ ಕಾಲದ ವಾದವನ್ನು ಅವರ ಭಾರತಕ್ಕೆ ಅಳವಡಿಸಿದರು ಹಾಗೂ ಇವರು ಭಾರತೀಯ ಸಮಾಜದ ವೈಶಿಷ್ಟ್ಯಗಳಾದ ಜಾತಿಯನ್ನು ಒಂದು ಸಾಮಾಜಿಕ ವಾಸ್ತವವನ್ನಾಗಿ ವಿಶ್ಲೇಷಣೆಗೆ ತೆಗೆದುಕೊಳ್ಳಲಿಲ್ಲ. ಹಾಗೂ ಭಾರತದಲ್ಲಿ ತಲೆ ಎತ್ತುತ್ತಿದ್ದ ಕೋಮುವಾದವನ್ನು ಸಾಮಾಜಿಕವಾಗಿ ವಿಶ್ಲೇಷಿಸುವ ವಿಧಾನಗಳನ್ನು ಹುಡುಕಲಿಲ್ಲ. ಬದಲಾಗಿ ಅದೊಂದು ವರ್ಗ ಸಂಘರ್ಷ ಎಂಬಂತೇ ನೋಡಿದರು.

ಆದರೆ ಈ ಮೇಲಿನವಾದಗಳನ್ನು ಬಿಪಿನ್‌ಚಂದ್ರ ಅವರು ಅಲ್ಲಗಳೆಯುತ್ತಾರೆ. ಅವರು ರಾಷ್ಟ್ರೀಯ ಹೋರಾಟವು ಬೂರ್ಜ್ವಾ ಸ್ವರೂಪದ್ದಾಗಿರಲಿಲ್ಲ ಎನ್ನುವುದಲ್ಲದೇ ರಾಷ್ಟ್ರೀಯ ಹೋರಾಟವು ಹೊಸಹಾತು ಶಾಹಿಯನ್ನು ಕೊನೆಗೊಳಿಸಲಿಕ್ಕೆ ಅಗತ್ಯವಾಗಿತ್ತು ಎಂದು ಅಭಿಪ್ರಾಯ ಪಡುತ್ತಾರೆ. ರಾಷ್ಟ್ರೀಯ ಹೋರಾಟದ ಮುಂದಾಳತ್ವವನ್ನು, ಅದರಲ್ಲೂ ಗಾಂಧಿಯುಗವನ್ನು ಟೀಕಿಸುವವರು ವಸಹಾತುಶಾಹಿ ಪರವಾದ ವಾದವನ್ನು ಮಂಡಿಸಿದಂತೇ ಆಗುತ್ತದೆ. ಎಂದ ಬಿಪಿನ್‌ಚಂದ್ರ ಅವರು ಭಾರತಕ್ಕೆ ವಸಹಾತು ಶಾಹಿಯಿಂದ ಯಾವ ರೀತಿ ಹಿಂದುಳಿದಿರುವಿಕೆಯ ಪಟ್ಟ ಬಂತು ಎಂಬುದನ್ನು ತಮ್ಮ ಲೇಖನಗಳಲ್ಲಿ ನಿದರ್ಶಿಸುತ್ತಾರೆ. ಹಾಗೂ ಈ ಕಾಲದಲ್ಲಿ ಬೆಳೆದು ಬಂದ ಕೋಮು ವಾದವು ಒಂದು ಸುಳ್ಳು ನಿರೂಪಣೆ ಎನ್ನುವ ಮೂಲಕ ನಿಜವಾದ ರಾಷ್ಟ್ರೀಯತೆಯು ಸೆಕ್ಯೂಲರ್ ಆಗಿತ್ತು ಎನ್ನುತ್ತಾರೆ.

## 19.7 ಸಾರಾಂಶ

ಈ ಮೇಲಿನ ಎಲ್ಲ ಮಿತಿಗಳ ಜೊತೆಗೂ ಮಾರ್ಕ್ಸ್‌ವಾದೀ ಇತಿಹಾಸ ಲೇಖನವು ಭಾರತೀಯ ಇತಿಹಾಸ ಲೇಖನದಲ್ಲಿ ತುಂಬ ಮಹತ್ವ ಪೂರ್ಣವಾದ ಘಟ್ಟವಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಮೊಟ್ಟಮೊದಲನೆಯದಾಗಿ ಭಾರತೀಯ ಇತಿಹಾಸವನ್ನು ಮಾಹಿತಿಗಳ ಜೋಡಣೆ, ರಾಜವಂಶಗಳ ರಾಜಾವಳಿಯ ಹಂತದಿಂದ ಒಂದು ಸಾಮಾಜಿಕ ರಚನೆಗಳ ವಿಶ್ಲೇಷಣೆಯ ಹಂತಕ್ಕೆ ಇವರು ಏರಿಸಿದ್ದಾರೆ. ಈ ಇತಿಹಾಸಕಾರರು ರಾಷ್ಟ್ರೀಯ ಯುಗದ ಮಾಹಿತಿಗಳ ಜೊತೆಗೇ ತಮ್ಮ ವಿಶ್ಲೇಷಣೆಗೆ ಪೂರಕವಾದ ಅಗಾಧ ಮಾಹಿತಿಯನ್ನು ಕೂಡ ಸಂಗ್ರಹಿಸಿದ್ದಾರೆ. ಮಾಹಿತಿ ಸಂಗ್ರಹವನ್ನಷ್ಟೇ ಅಲ್ಲದೇ ವಿಶ್ಲೇಷಣೆಯನ್ನೂ ವೈಜ್ಞಾನಿಕವಾಗಿ ಹೇಗೆ ನಿರ್ವಹಿಸಬಹುದೆಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಇದೆಲ್ಲಕ್ಕಿಂತ ಮಹತ್ವಪೂರ್ಣವಾದದ್ದೆಂದರೆ ಭಾರತೀಯ ಸಂಸ್ಕೃತಿಯ ಬಹುಮುಖತೆಯನ್ನು ಇವರು ಶೋಧಿಸಿ ಕೋಮುವಾದಕ್ಕೆ ಜಾರಿಕೊಳ್ಳುತ್ತಿದ್ದ ಭಾರತೀಯ ಇತಿಹಾಸವನ್ನು 'ಸೆಕ್ಯುಲರ್' ಅಡಿಪಾಯದ ಮೇಲೆ ನಿಲ್ಲಿಸುವ ಕಾಯಕಕ್ಕೆ ಬದ್ಧರಾಗಿದ್ದಾರೆ. ಅಂದರೆ 20ನೇ ಶತಮಾನದ ಮಧ್ಯಭಾಗದಲ್ಲಿ ಅವರು ಪ್ರಾರಂಭಿಸಿದ ದಾರಿಯಲ್ಲಿ ಭಾರತೀಯ ಅರ್ಥವಂತಿಕೆಯನ್ನೂ, ರಾಷ್ಟ್ರೀಯ ಇತಿಹಾಸದ ಪರಿಷ್ಕೃತ ರೂಪವನ್ನು ಶೋಧಿಸುತ್ತಾ ಇಂದು ರಾಷ್ಟ್ರೀಯ ಇತಿಹಾಸಕಾರರಾಗಿ ತಮ್ಮನ್ನು ಕಂಡುಕೊಂಡಿದ್ದಾರೆ.

ಕಳೆದ ಐವತ್ತು ವರ್ಷಗಳಿಂದ ಭಾರತದ ಇತಿಹಾಸದ ವಿವಿಧ ಆಯಾಮಗಳನ್ನು ಕರಿತು ಚರ್ಚಿಸಿರುವ ಮಾರ್ಕ್ಸ್‌ಸಿಸ್ಟ್ ಇತಿಹಾಸಕಾರರು ಭಾರತದ ಇತಿಹಾಸದ ಅಧ್ಯಯನಕ್ಕೆ ಒಂದು ಸೈದ್ಧಾಂತಿಕ ಚೌಕಟ್ಟನ್ನು ನೀಡುವ ಪ್ರಯತ್ನ ನಡೆಸಿದ್ದಾರೆ. ಸಾಮಾಜಿಕ, ಆರ್ಥಿಕ ಬದಲಾವಣೆ ಹಾಗೂ ಸಂಘರ್ಷಕ್ಕೆ ಅವರು ಕೊಟ್ಟಿರುವ ಮಹತ್ವ ಭಾರತದ ಇತಿಹಾಸದ ವಿಸ್ತಾರವನ್ನು ಹೆಚ್ಚಿಸಿದಲ್ಲದೆ ಹೆಚ್ಚು ಅರ್ಥಪೂರ್ಣವಾಗಿದೆ. ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತದ ಬಗ್ಗೆ ಹಾಗೂ ಅದನ್ನು ಭಾರತದ ಐತಿಹಾಸಿಕ ಸಂದರ್ಭಕ್ಕೆ ಬಳಸಿಕೊಳ್ಳುವ ಕುರಿತು ನಡೆದ ಚರ್ಚೆಗಳು ಭಾರತದ ಇತಿಹಾಸದ ಗುರಿಹಾಗೂ ಉದ್ದೇಶಗಳನ್ನು ಸ್ಪಷ್ಟಪಡಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ.

## 19.8 ಪ್ರಮುಖ ಪದಗಳು

1. ಕಾರ್ಲ್ ಮಾರ್ಕ್ಸ್: ಆಧುನಿಕ ಸಮಾಜವಾದದ ಪಿತಾಮಹ
2. ಎಯ್ಟೀನ್ ಫಿಫ್ಟಿ ಸೆವೆನ್: ಡಾ.ಸೇನ್ ಅವರ ಸ್ಮರಣೀಯ ಕೃತಿ

## 19.9 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಮಾರ್ಕ್ಸವಾದಿ ಇತಿಹಾಸ ಲೇಖನದ ಸ್ವರೂಪ ಹಾಗೂ ಲಕ್ಷಣಗಳನ್ನು ಕುರಿತು ಬರೆಯಿರಿ 19.2

2. ಮಾರ್ಕ್ಸ್‌ವಾದಿ ಇತಿಹಾಸ ಲೇಖನದಲ್ಲಿನ ಬದಲಾವಣೆಗಳೇನು? 19.3
3. ಭಾರತೀಯ ಮಾರ್ಕ್ಸ್‌ವಾದಿ ಇತಿಹಾಸ ಲೇಖನದ ಬಗ್ಗೆ ಬರೆಯಿರಿ. 19.4

## 19.10 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 19.2 ನೋಡಿ
2. ವಿಭಾಗ 19.3 ನೋಡಿ
3. ವಿಭಾಗ 19.4 ನೋಡಿ

## 19.11 ಪರಾಮರ್ಶನ ಗ್ರಂಥಗಳು


1. ಗೋಪಾಲ ಬಾ.ರಾ, ಇತಿಹಾಸಶಾಸ್ತ್ರ ಮತ್ತು ಸಿದ್ಧಾಂತ, ಮೈಸೂರು,1996.
2. ಶ್ರೀನಿವಾಸಮೂರ್ತಿ.ಎಚ್.ವಿ, ಇತಿಹಾಸ ಸಂಶೋಧನಾ ಸಮೀಕ್ಷೆ, ಬೆಂಗಳೂರು, 2000.
3. ವೆಂಕಟರತ್ನಂ.ಎ.ವಿ, ಪದ್ಮ.ಎಂ.ಬಿ, ಇತಿಹಾಸ ಸಂಶೋಧನಾ ಮಾರ್ಗ, ಬೆಂಗಳೂರು, 1985.
4. ರಾಜಯ್ಯನ್.ಕೆ, ಹಿಸ್ಟರಿ–ಥಿಯರಿ ಆಂಡ್ ಮೆತಡ್, ಮಧುರೈ, 1976.
5. ಷೇಕ್ ಅಲಿ.ಬಿ, ಹಿಸ್ಟರಿ ಇಟ್ಸ್ ಥಿಯರಿ ಆಂಡ್ ಮೆಥಡ್, ನ್ಯೂಡೆಲ್ಲಿ, 2001.
6. ಶ್ರೀಧರನ್.ಇ, ಎ ಟೆಕ್ಸ್ಟ್ ಬುಕ್ ಆಫ್ ಹಿಸ್ಟರಿಯಾಗ್ರಫಿ, ನ್ಯೂಡೆಲ್ಲಿ, 2000.
7. ಕಾಲಿಂಗ್‌ವುಡ್.ಆರ್.ಜಿ, ದಿ ಐಡಿಯಾ ಆಫ್ ಹಿಸ್ಟರಿ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರಸ್, 1961.
8. ಕಾರ್.ಇ.ಎಚ್, ವಾಟ್ ಈಸ್ ಹಿಸ್ಟರಿ, ಪೆಲಿಕನ್ ಪಬ್ಲಿಷರ್ಸ್, 1964.
9. ಹೊಮರ್ ಸಿ. , ದಿ ಕ್ರಿಟಿಕಲ್ ಮೆಥಡ್ ಇನ್ ಹಿಸ್ಟಾರಿಕಲ್ ರಿಸರ್ಚ ಅಂಡ್ ರೈಟಿಂಗ್, ನ್ಯೂಯಾರ್ಕ,1955.



**ಪಠ್ಯವನ್ನು ರಚಿಸಿದವರು:**
**ಡಾ.ವೈ.ಹೆಚ್.ನಾಯಕವಾಡಿ**

# ಘಟಕ–20 ಕೆಳಸ್ತರದ ಇತಿಹಾಸ ಲೇಖನ ಕಲೆ ಮತ್ತು ಕೆಳಸ್ತರದ ಇತಿಹಾಸ ಲೇಖಕರು

**ರಚನೆ**

**20.0** ಉದ್ದೇಶಗಳು

**20.1** ಪೀಠಿಕೆ

**20.2** ಕೆಳಸ್ತರ ಇತಿಹಾಸ ಲೇಖನಾ ಕಲೆಯ ಸ್ವರೂಪ

**20.3** ಕೆಳಸ್ತರ ಇತಿಹಾಸ ಲೇಖನ ಕಲೆಗೆ ಉದಾಹರಣೆಗಳು

**20.3.1** ರಣಜಿತ್ ಗುಹಾ

**20.3.2** ಸುಮೀತ್ ಸರ್ಕಾರ್

**20.3.3** ಪಾರ್ಥ ಚಟರ್ಜಿ

**20.3.4** ದೀಪೇಶ್ ಚಕ್ರಭರ್ತಿ

**20.3.5** ಸುಗತಾ ಬೊಸ್

**20.3.6** ತಾನಿಕ ಸರಾರ್

**20.3.7** ಜ್ಞಾನೇಂದ್ರ ಪಾಂಡೆ

**20.3.8** ಡೇವಿಡ್ ಅರ್ನಾಲ್ಡ್

**20.3.9** ಅರವಿಂದ್ ದಾಸ್

**20.3.10** ಶಾಹೀದ್ ಅಮೀನ್

**20.3.11** ಗೌತಮ್ ಬಾದ್ರ

**20.4** ಸಾರಾಂಶ

**20.5** ಪ್ರಮುಖ ಪದಗಳು

**20.6** ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

**20.7** ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

**20.8** ಪರಾಮರ್ಶನ ಗ್ರಂಥಗಳು

## 20.0 ಉದ್ದೇಶಗಳು

ಈ ಘಟಕದ ಆಧ್ಯಯನದಿಂದ,

- ಕೆಳಸ್ತರ ಇತಿಹಾಸ ಲೇಖನಾ ಕಲೆಯ ಸ್ವರೂಪವನ್ನು ತಿಳಿದುಕೆಳ್ಳಬಹುದು.
- ಕೆಳಸ್ತರ ಇತಿಹಾಸ ಲೇಖನ ಕಲೆಗೆ ಉದಾಹರಣೆ ಮತ್ತು ಲೇಖನಕಾರರ ಕೊಡುಗೆಗಳನ್ನು ಅರ್ಥಮಾಡಿಕೊಳ್ಳಬಹುದು.

## 20.1 ಪೀಠಿಕೆ

ಭಾರತದ ಇತಿಹಾಸ ಬರವಣಿಗೆಯಲ್ಲಿ ಈ ಇತಿಹಾಸ ಲೇಖನ ಕಲೆ ಒಂದು ಹೊಸ ಬೆಳವಣಿಗೆಯಾಗಿದೆ ಎನ್ನಬಹುದು. ಏಕೆಂದರೆ ಯಾವುದೇ ಒಂದು ರೀತಿಯಾದಂತಹ ಸಮಾಜದಲ್ಲಿ, ರಾಷ್ಟ್ರದಲ್ಲಿ ಎಲ್ಲಾ ವರ್ಗದ ಮತ್ತು ಎಲ್ಲಾ ರೀತಿಯಾದಂತಹ ಜನರು ವಾಸಿಸುತ್ತಿರುವ ಪ್ರತಿಯೊಂದು ವರ್ಗವು ತನ್ನದೇ ಆದಂತಹ ಕೊಡುಗೆಯನ್ನು ನೀಡುತ್ತಾ ಬಂದಿರುವುದನ್ನು ಕಾಣಬಹುದು.

ಅಂದರೆ ಕೆಳಸ್ತರದ ಇತಿಹಾಸ ಲೇಖನ ಕಲೆ ಎಂದರೆ ಸಮಾಜದ ಕೆಳವರ್ಗದವರನ್ನು ಕುರಿತು ಅಧ್ಯಯನ ಮಾಡಿ ಅವರನ್ನು ಕುರಿತು ಬರೆಯುವುದನ್ನು ಕೆಳಸ್ತರ ಇತಿಹಾಸ ಲೇಖನ ಕಲೆ ಎಂದು ಕರೆಯುತ್ತಾರೆ. ಉದಾಹರಣೆಗೆ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಾನ್ ನಾಯಕರುಗಳ ಜೊತೆ ಸಾಮಾನ್ಯ ವರ್ಗದ ಜನರನ್ನು ಅಥವಾ ಪ್ರಜೆಗಳ ಹೋರಾಟವನ್ನು ಚಿತ್ರಿಸಿರುವುದಿಲ್ಲ. ಆದ್ದರಿಂದ ಕೆಳವರ್ಗದವರನ್ನು ಕುರಿತು ರಚನೆಯಾದಂತಹ ಇತಿಹಾಸವನ್ನು ಕೆಳವರ್ಗದ ಇತಿಹಾಸ ಲೇಖನ ಕಲೆ ಎಂದು ಕರೆಯುತ್ತಾರೆ.

ಭಾರತದ ಇತಿಹಾಸ ಬರವಣಿಗೆಯಲ್ಲಿ ಈ ಇತಿಹಾಸ ಲೇಖನ ಕಲೆ ಒಂದು ಹೊಸ ಬೆಳವಣಿಗೆಯಾಗಿದೆ. ರಣಜಿತ್ ಗುಹರವರ ನೇತೃತ್ವದಲ್ಲಿ ಒಂದು ಇತಿಹಾಸಕಾರರ ಗುಂಪು ಸ್ವಂತ ಇತಿಹಾಸ ಲೇಖನಕಾರರು ಎಂದು ಕರೆದುಕೊಳ್ಳುತ್ತಾರೆ. ಈ ಸಬಾಲ್ಟನ್ ಇತಿಹಾಸ ಲೇಖನವನ್ನು ತಿಳಿಯುವುದಕ್ಕೆ ಮೊದಲು ನಾವು ಭಾರತೀಯ ಇತಿಹಾಸ ಲೇಖನದ ಹಿನ್ನೆಲೆಯನ್ನು ನೋಡಬೇಕು.

ಭಾರತದ ಇತಿಹಾಸದಲ್ಲಿ ವೈಜ್ಞಾನಿಕ ಬರವಣಿಗೆಯ 19ನೇ ಶತಮಾನದಿಂದ ಮಾತ್ರ ಕಾಣಸಿಗುತ್ತದೆ. 19ನೇ ಶತಮಾನ ವಸಾಹತು ಆಡಳಿತದ ಪ್ರಭಾವಕ್ಕೆ ಸಂಪೂರ್ಣವಾಗಿ ಒಳಗಾಗಿತ್ತು. ಸಾಮಾನ್ಯವಾಗಿ ವಸಾಹತುಶಾಹಿ ಚಿಂತನೆಯ 19ನೇ ಶತಮಾನದ ಬ್ರಿಟಿಷರ ಬರವಣಿಗೆಗಳಲ್ಲಿ ನಮಗೆ ಕಾಣಿಸುತ್ತದೆ. ಅದು ವಿ.ಎ.ಸ್ಮಿತ್ ಅಥವಾ ಇತರೆ ಯಾವುದೇ ಕಂದಾಯ ಅಧಿಕಾರಿಗಳಾಗಿದ್ದರು ಮತ್ತು ಅದರಿಂದ ಚಿಂತನೆಗಳು ಮೂಲಭೂತವಾಗಿ ವಸಾಹತುಶಾಹಿ ಚಿಂತನೆಗಳಾಗಿದ್ದವು. 1947ರ ನಂತರ ಪ್ರಾರಂಭಗೊಂಡ ಇನ್ನೊಂದು

ಗುರಿ ತಲುಪಿತು. ಆರ್.ಸಿ.ಮುಜುಂದಾರ್, ತಾರಾಚಂದ್‌ರಂತವರು ಭಾರತೀಯ ರಾಷ್ಟ್ರೀಯತೆಯನ್ನು ತೋರಿಸಲು ಪ್ರಯತ್ನಿಸಿದರು. ಇದರಲ್ಲಿ ವೈಭವೀಕರಣ ವ್ಯಕ್ತಿಪೂಜೆ ಕೋಮುವಾದವನ್ನು ರಾಷ್ಟ್ರೀಯ ಇತಿಹಾಸಕಾರರ ದೃಷ್ಟಿಯಾಗಿತ್ತು.

ಈ ಮಾರ್ಕ್ಸ್ ಆಧಾರಿತ ಇತಿಹಾಸವು ಡಿ.ಡಿ.ಕೊಸಾಂಬಿ, ಆರ್.ಆರ್.ಶರ್ಮ, ಆರ್.ಸಿ.ದತ್, ಇರ್ಫಾನ್ ಹಬೀಬ್, ರೋಮಿಯಾ ಥಾಪರ್ ಇತರರಿಂದ ಬೆಳವಣಿಗೆಗೊಂಡಿತು. ಇವರು ತಮ್ಮ ಬರವಣಿಗೆಯಲ್ಲಿ ರಾಜಕೀಯ, ಆಡಳಿತ, ರಾಜತಾಂತ್ರಿಕ ಇತಿಹಾಸವನ್ನು ಬಿಟ್ಟು ಸಾಮಾಜಿಕ ಮತ್ತು ಆರ್ಥಿಕ ಇತಿಹಾಸದ ಬಗ್ಗೆ ಹೆಚ್ಚು ಒತ್ತು ಕೊಡುತ್ತಾರೆ. ಮಾನವನ ಬೌದ್ಧಿಕ ಜೀವನವು ಈ ಮಾರ್ಕ್ಸ್ ಇತಿಹಾಸಕರ ಕೇಂದ್ರವಾಗಿರುತ್ತದೆ. ಇವರು ರೈತರ ಸಮಸ್ಯೆ, ಕಂದಾಯ ವ್ಯವಸ್ಥೆ ಸಾಮಾಜಿಕ ವರ್ಗಗಳು ಗುಲಾಮಿ ಪದ್ಧತಿ ನಗರೀಕರಣ, ಸಾಮಾಜಿಕ ವ್ಯವಸ್ಥೆ ಮತ್ತು ಇತರ ಸಂಬಂಧಿತ ವಿಷಯಗಳ ಬಗ್ಗೆ ಅಧ್ಯಯನ ಮಾಡುತ್ತಾರೆ.

## 20.2 ಕೆಳಸ್ತರ ಇತಿಹಾಸ ಲೇಖನಾ ಕಲೆಯ ಸ್ವರೂಪ

**ಕೆಳಸ್ತರ ಇತಿಹಾಸ ಲೇಖನ ಕಲೆಯ ಉದಯ**

ಇದು 18 ಮತ್ತು 19ನೇ ಶತಮಾನದಲ್ಲಿ ಉದಯಗೊಂಡಿತು. ವಸಾಹತು ಮತ್ತು ರಾಷ್ಟ್ರೀಯ ಇತಿಹಾಸ ಲೇಖನ ಕಲೆಗೆ ವಿರುದ್ಧವಾಗಿದ್ದಲ್ಲದೇ ಮಾರ್ಕ್ಸ್ ಇತಿಹಾಸ ಲೇಖನ ಕಲೆಗೆ ಸವಾಲಾಗಿ ಬೆಳೆಯುತ್ತದೆ. ಸಬಾಲ್ಟನ್ ಎಂಬ ಪದವು ಸೈನ್ಯದ ಸಾಮಾನ್ಯ ಸೈನಿಕ ಎಂದಾಗುತ್ತದೆ. ಇವನು ಉನ್ನತ ಅಧಿಕಾರಿಗಳಿಂದ ಕೇವಲ ಆಜ್ಞೆ ಸ್ವೀಕರಿಸುತ್ತಾನೆ. ಈ ಸಬಾಲ್ಟನ್‌ಗಳು ಯುದ್ಧ ಭೂಮಿಯಲ್ಲಿದ್ದರೂ ಅವರ ಹೋರಾಟವು ಇತಿಹಾಸದ ಪುಸ್ತಕಗಳಲ್ಲಿ ಗುರುತರವಾಗಿಲ್ಲ.

ಇತಿಹಾಸ ಪುಸ್ತಕಗಳು ಕೇವಲ ನಾಯಕರ ಕೊಡುಗೆ ಮತ್ತು ಸಾಧನೆಯನ್ನು ಮಾತ್ರ ದಾಖಲಿಸುತ್ತದೆ. ಉದಾ: ಮಹಾತ್ಮಗಾಂಧಿ, ನೆಹರೂ, ಪಟೇಲ್, ರಾಜಾಜಿ, ಜಯಪ್ರಕಾಶ್ ನಾರಾಯಣ್ ಮತ್ತು ಇತರರನ್ನು ಐತಿಹಾಸಿಕ ದಾಖಲೆಗಳಲ್ಲಿ ಕಾಣಬಹುದು. ಆದರೆ ಸಾವಿರಾರು ಸಾಮಾನ್ಯ ಪ್ರಜೆಗಳ ಹೋರಾಟ (ಒಜಟಿ & ಘಂಟಜಟಿ) ದ ಬಗ್ಗೆ ಕಾಳಜಿ ವಹಿಸುವುದಿಲ್ಲ. ಈ ಸಾವಿರಾರು ಜನರು ದೇಶಕ್ಕೋಸ್ಕರ ತ್ಯಾಗ ಮಾಡಿದರೂ ಅವರ ಕೊಡುಗೆ ಇತಿಹಾಸ ಪುಸ್ತಕದಲ್ಲಿ ದಾಖಲೆಯಾಗುವುದಿಲ್ಲ. ಯಾವಾಗ ನೆಪೋಲಿಯನ್ ವಾಟರ್ ಲೂ ಕದನದಲ್ಲಿ ಗುರುತಿಸಲ್ಪಟ್ಟಿತು. ಆದರೆ ಅವರು ಸಾವಿರಾರು ಅಶ್ವದಳ ಅವರು ಇತಿಹಾಸದ ಗತಿಯನ್ನೇ ಬದಲಾಯಿಸಿದರೂ ತಿರಸ್ಕಾರಕ್ಕೆ ಒಳಗಾದರೂ ಇದು ಒಂದು ರೀತಿಯ ಉನ್ನತ ವರ್ಗದ ಬಗ್ಗೆ ಅಂದರೆ ರಾಟರು ಸೇನಾಪತಿ ಮತ್ತು ಸಾಮೂಹಿಕ ನಾಯಕರುಗಳ ಬಗ್ಗೆ ಇತಿಹಾಸದಲ್ಲಿ ದಾಖಲೆಯಾಗಿದೆ. ಆದರೆ ಇತಿಹಾಸದಲ್ಲಿ ನಿಜವಾಗಿಯೂ ಮನುಷ್ಯನ ಹಣೆಬರಹವನ್ನೇ ಬದಲಾಯಿಸಿದ ಸಾವಿರಾರು ಜನರನ್ನು ದಾಖಲಿಸಲಾಗಿಲ್ಲ.

## 20.3 ಕೆಳಸ್ತರ ಇತಿಹಾಸ ಲೇಖನ ಕಲೆಗೆ ಉದಾಹರಣೆಗಳು

**ಅಂತೋನಿಯಾ ಗ್ರಾಂಶಿ ಮತ್ತು ಗಣಜಿತ್ ಗುಹಾ**

ಈ ಸಾಬಾಲ್ಟನ್ನ ಚಿಂತನೆಯುಇ ಮೊದಲು ಅಂತೋನಿಯಾ ಗ್ರಾಂಶಿಯ ಬರವಣಿಗೆಯಲ್ಲಿ ಕಾಣಸಿಗುತ್ತದೆ. ನಿರ್ದಿಷ್ಟವಾದ ಅವನ ಜನಪ್ರಿಯ ಪುಸ್ತಕದ ಕಡ್ಠಿಠಟಜಡಿ ಓಠಣಜಥಠಠಞ ಇವನು ಒಬ್ಬ ಇಟಲಿಯ ಮಾರ್ಕ್ಸ್‌ವಾದಿ ಮತ್ತು ಕಾರ್ಮಿಕ ನೇತಾರ ಇವನು. ಮುಸಲೋನಿಯಿಂದ ಬಂಧನಕ್ಕೊಳಗಾದ ಮುಸಲೋನಿ ಇಟಲಿಯ ಫ್ಯಾಸಿಸ್ಟ್, ನಿರಂಕುಶ. ಇದು ಎರಡನೇ ಮಹಾಯುದ್ಧಕ್ಕಿಂತ ಮೊದಲು ನಡೆಯಿತು. (ಇವನು ಸೆರೆವಾಸದಲ್ಲಿ ಹೊಸ ಚಿಂತನೆಯನ್ನು ಅಭಿವೃದ್ಧಿಪಡಿಸಿದ. ಇದನ್ನು ಮಾರ್ಕ್‌ವಾದಿ ಸಿದ್ಧಾಂತದ ಮೇಲೆ ಅಭಿವೃದ್ಧಿಪಡಿಸಿದ) ಇವನು ಮೊದಲಿ ಸಮಕಾಲೀನ ಇಟಾಲಿಯನ್ ಮಾರ್ಕಿಸ್ಟ್ ಚಳುವಳಿ ಮತ್ತು ಅದರ ಮಿತಿಗಳನ್ನು ಟೀಕಿಸುತ್ತಾರೆ. (ಇವನು ಪಕ್ಷದ ಸಾಮಾನ್ಯ ಕಾರ್ಮಿಕರ ಮೇಲೆ ಪಕ್ಷದ ಬುದ್ಧಿಜೀವಿಗಳ ಮತ್ತು ನಾಯಕರ ಪ್ರಾಬಲ್ಯ ಮತ್ತು ಅಧಿಕಾರಿಗಳನ್ನು ಟೀಕಿಸುತ್ತಾನೆ. ಗ್ರಾಂಶಿಯು ಇದು ಸಂಪೂರ್ಣ ತಾತ್ಸಾರ ಭಾವನೆ ಎಂದು ಹೇಳುತ್ತಾನೆ. ಏಕೆಂದರೆ ಕಾರ್ಮಿಕರು ಸ್ವತಃ ತಮ್ಮ ಬಗ್ಗೆ ಸ್ವಂತ ಚಿಂತನೆ ಹೊಂದಿದ್ದಾರೆ. ಅದು ಗುರುತಿಸಲ್ಪಡಬೇಕು).

ಗ್ರಾಂಶಿಯು ಪ್ಯಾಸಿಸಂನ್ನು ತೀವ್ರವಾಗಿ ಟೀಕಿಸುತ್ತಾನೆ. ಏಕೆಂದರೆ ಇದು ಮುಸಲೋನಿಯನ್ನ ದೇವಮಾನವ ಎಂದು ಬಿಂಬಿಸುತ್ತದೆ ಮತ್ತು ಶಾಲಾ ಪಠ್ಯದಲ್ಲಿ ಮುಸಲೋನಿಯ ಜೀವನ ಚರಿತ್ರೆ ಮತ್ತು ಫ್ಯಾಸಸಂ ಚಿಂತನೆ ಮತ್ತು ಇದು ಮೂಢವ್ಯಕ್ತಿಯ ಪೂಜೆಯನ್ನು ವಿದ್ಯಾರ್ಥಿಗಳಲ್ಲಿ ಪ್ರಚೋದಿಸುತ್ತದೆ. ಆದ್ದರಿಂದ ಅವನು ಅಸ್ತಿತ್ವದಲ್ಲಿದ್ದಂತಹ ಬೌದ್ಧಿಕ ಸಂಪ್ರದಾಯದ ವಿಶ್ಲೇಷಣೆಯ ನಂತರ ಎಲ್ಲಾ ರಾಜಕೀಯ ಚಳುವಳಿಯಲ್ಲಿ ಉನ್ನತ ವರ್ಗದ ಪ್ರಾಬಲ್ಯ ಮತ್ತು ತಮ್ಮ ಗ್ರಹಿಕೆಯನ್ನು ತಪ್ಪಿಸಬೇಕು ಎಂದು ಗ್ರಾಂಶಿ ಹೇಳುತ್ತಾನೆ. ಆದ್ದರಿಂದ ಅವನು ಅಸ್ತಿತ್ವದಲ್ಲಿದ್ದಂತಹ ಬೌದ್ಧಿಕ ಸಂಪ್ರದಾಯದ ವಿಶ್ಲೇಷಣೆಯ ನಂತರ ಎಲ್ಲಾ ರಾಜಕೀಯ ಚಳುವಳಿಯಲ್ಲಿ ಉನ್ನತ ವರ್ಗದ ಪ್ರಾಬಲ್ಯ ಮತ್ತು ತಪ್ಪು ಗ್ರಹಿಕೆಯನ್ನು ತಪ್ಪಿಸಬೇಕು ಎಂದು ಗ್ರಾಂಶಿ ಹೇಳುತ್ತಾನೆ. ಆದ್ದರಿಂದ ಈ ಸಬಾಲ್ಟನ್ ತತ್ವವನ್ನು ಪರ್ಯಾಯ ತತ್ವವಾಗಿ ಆಯ್ಕೆ ಮಾಡಿಕೊಳ್ಳಬೇಕೆಂದು ಹೇಳುತ್ತಾನೆ.

ಡಾ॥ರಣಜಿತ್ ಗುಹಾ ಮತ್ತು ಭಾರತೀಯ ಯುವಕರ ಗುಂಪು ಗ್ರಾಂಶಿ ಸಿದ್ಧಾಂತವನ್ನು ಒಪ್ಪಿಕೊಂಡು ಇದನ್ನು ಭಾರತೀಯ ಇತಿಹಾಸ ಲೇಖನ ಕಲೆಗೆ ಅಳವಡಿಸಿಕೊಂಡರು. ಅವರು ಆಧುನಿಕ ಇತಿಹಾಸವನ್ನು ಅರ್ಥೈಸಲು ಈ ರೀತಿಯಾದ ಒಂದು ವಿಭಿನ್ನ ಸಿದ್ಧಾಂತವನ್ನು ಅಳವಡಿಸುವುದು ಒಂದು ಕ್ರಾಂತಿಕಾರಕವಾದು–ದಾಗಿದೆ. ರಣಜಿತ್ ಗುಹಾ ಮತ್ತು ಇತಿಹಾಸಕಾರರ ಗುಂಪು ಕಳೆದ 2 ದಶಕಗಳಿಂದ ಈ ಸಬಾಲ್ಟನ್ ಇತಿಹಾಸ ಲೇಖನ ಕಲೆಯ ಮೇಲೆ ಹಲವಾರು ಸಂಪುಟಗಳನ್ನು ಹೊರತಂದು ಈ ಸಂಘಗಳು ಸಾಮಾನ್ಯ ಜನರ ಕ್ರಿಯೆ ಬಗ್ಗೆ ಹೆಚ್ಚು ಅಧ್ಯಯನ ಮಾಡಿದ ಲೇಖನಗಳಲ್ಲಿ ಒಳಗೊಂಡಿದ್ದವು. ಉದಾ: ಬರಗಾಲದಲ್ಲಿ ಸಾಮಾನ್ಯ ಜನರು ಹಸಿವು ಮತ್ತು ಬಳಲಿಕೆಯನ್ನು ಹೊಂದಿದಾಗ ಅವರು ಉಗ್ರಾಣಗಳ ಮೇಲೆ ದಾಳಿ ಮಾಡುತ್ತಾರೆ. ಇಲ್ಲಿ ಯಾವುದೇ ಮಾರ್ಗದರ್ಶನವನ್ನಾಗಲೀ ಅಥವ ತರಬೇತಿಯನ್ನಾಗಲಿ

ಪಡೆದಿರುವುದಿಲ್ಲ. ಗುಹಾರವರು ಈ ರೀತಿಯ ಘಟನೆಗಳ ಬಗ್ಗೆ ಮಾತನಾಡುತ್ತಾರೆ. ಅದರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಗಾಂಧಿ ಮತ್ತು ಇತರ ನಾಯಕರು ಸಮುದಾಯದ ಮೇಲೆ ತಮ್ಮ ಹಿಡಿತವನ್ನು ಕಳೆದುಕೊಂಡಿದ್ದರು. ಸಾವಿರಾರು ಜನರು ತಮ್ಮಲ್ಲೇ ಸಂಘಟನೆಗೊಂಡು ಮತ್ತು ಕ್ವಿಟ್ ಇಂಡಿಯಾ ಹೋರಾಟವನ್ನು ಯಾವುದೇ ರಾಷ್ಟ್ರೀಯ ನಾಯಕರ ಮಾರ್ಗದರ್ಶನವಿಲ್ಲದೆ ಮುನ್ನಡೆಸಿದರು. ದೇಶದಲ್ಲಿ ಸೇತುವೆ ನಾಶ, ರೈಲ್ವೆಹಳಿನಾಶ, ಬೃಹತ್ ಕಟ್ಟಡಗಳ ನಾಶ ಇವುಗಳು ಒಂದು ಸಾಮಾನ್ಯ ಕಾರ್ಯಕ್ರಮವಾಗಿತ್ತು. ಇದು ಹಿಂಸಾತ್ಮಕ ಚಳುವಳಿ. ಗಾಂಧಿಯವರು ಹಿಂಸಾತ್ಮಕ ವಾದವನ್ನು ತಿರಸ್ಕರಿಸಿದಾಗ ಚಳುವಳಿ ಮುಂದುವರೆಯಿತು. ವಿಕೆಂಡರ್‌ನ ಕ್ವಿಟ್ ಇಂಡಿಯಾ ಚಳುವಳಿಯ ಮೇಲಿನ ರಹಸ್ಯ ವರದಿಗಳು ಗಾಂಧೀಜಿಯ ಅಹಿಂಸಾತ್ಮಕ ಹೋರಾಟಕ್ಕೆ ಹೊಸ ಅರ್ಥವನ್ನು ನೀಡಿದರು ಈ ಪ್ರಕಾರ ಮನುಷ್ಯರನ್ನು ಅಹಿಂಸಾತ್ಮಕ ಹೋರಾಟ ಎನ್ನುತ್ತಾರೆ. ಹಲವಾರು ಸ್ಥಳೀಯ ಹೋರಾಟ ಮತ್ತು ಭೂಗತ ಚಳುವಳಿಗಳು ಕ್ವಿಟ್ ಇಂಡಿಯಾದಲ್ಲಿದ್ದುದನ್ನು ಸಬಾಲ್ಟನ್ ಇತಿಹಾಸವನ್ನು ಬಳಸುವುದರ ಮೂಲಕ ಅರ್ಥಮಾಡಿಕೊಳ್ಳಬಹುದು.

**ಸಾಮುದಾಯಿಕ ಪ್ರಜ್ಞೆ**

ಸಬಾಲ್ಟನ್ ಗುಂಪು ಸಾಮಾನ್ಯ ಜನರ ಸಾಮುದಾಯಿಕ ಪ್ರಜ್ಞೆಯ ಬಗ್ಗೆ ಹೆಚ್ಚು ಆಸಕ್ತಿ ವಹಿಸಿದ್ದಾರೆ. ಇಲ್ಲಿ ಅವರು ಬುಡಕಟ್ಟು ಜನರು ಮತ್ತು ಬಡರೈತರು ಅಥವಾ ಕೃಷಿ ಕೆಲಸಗಾರರ ಮೇಲೆ ನಾಯಕರ ಪ್ರಭಾವವನ್ನು ಟೀಕಿಸುತ್ತಾರೆ. ಇವರು ತಮ್ಮದೇ ಸ್ವಂತ ಸಾಮುದಾಯಿಕ ಪ್ರಜ್ಞೆಯನ್ನು ಹೊಂದಿದ್ದು ದಂಗೆ ಸಂದರ್ಭದಲ್ಲಿ ಇದು ನಿರ್ದಿಷ್ಟ ಸ್ವರೂಪವನ್ನು ಹೊಂದಿತ್ತು. ಸಬಾಲ್ಟನ್ ಇತಿಹಾಸಕಾರರು ಬುಡಕಟ್ಟು ಜನರು, ಗೇಣಿದಾರರು, ದಲಿತರು, ಮಹಿಳೆಯರು ಮತ್ತು ಆಧುನಿಕ ಭಾರತದ ಇಂತಹ ಹೋರಾಟದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದರು.

ಸಬಾಲ್ಟನ್ ಇತಿಹಾಸ ಲೇಖನ ಕಲೆಗೆ ಪರ್ಯಾಯ ಆಧಾರಗಳ ಬಗ್ಗೆ ಮಾತನಾಡುತ್ತದೆ. ಸರ್ಕಾರಿ ಆಧಾರಗಳ ಹೊರತಾಗಿರುವುದು ಆದಾಗ ಇದು ಸರ್ಕಾರಿ ಆಧಾರಗಳು ವೈರಿಗಳ ಆಧಾರವಾಗಿದೆ. ಈ ಆಧಾರಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಲು ಬಳಸುತ್ತಾರೆ. ಇದಕ್ಕೆ ಪೂರಕವಾಗಿ ಪ್ರಾದೇಶಿಕ ಭಾಷೆಯ ಆಧಾರಗಳು, ಸಂಘರ್ಷ, ಕಂಠಪಾಠದ ಆಧಾರಗಳು ನಮ್ಮ ಸಾಮಾನ್ಯ ಜನರ ಇತಿಹಾಸವನ್ನು ತಿಳಿಯಲು ಈ ಸಬಾಲ್ಟನ್ ಇತಿಹಾಸ ಲೇಖನ ಕಲೆಯಲ್ಲಿ ಬಳಸಲಾಗುತ್ತದೆ. ಇದು ಐತಿಹಾಸಿಕವಾದ ಎಲ್ಲಾ ಸಮಸ್ಯೆಗಳಿಗೂ ಉತ್ತರ ನೀಡಿದ್ದರೂ ಅದು ಇತಿಹಾಸದ ಕೆಲವು ಸಮಸ್ಯೆಗಳಿಗೆ ಉತ್ತರ ನೀಡುತ್ತದೆ. ಇವುಗಳು ಸಾಂಪ್ರದಾಯಿಕ ಹಿಸ್ಟೋರಿಯಾಗ್ರಾಫರ್‌ಗಳೆಂದು ಉತ್ತರಿಸಲಾಗುವುದು. ರೈಟರ್ ಪ್ರಶ್ನೆಯನ್ನು ಸರ್ಕಾರಿ ದಾಖಲೆಯನ್ನು ಆಧರಿಸಿ ಸರ್ಕಾರಿ ದೃಷ್ಟಿಯಿಂದ ಅಧ್ಯಯನ ಮಾಡಿದರೆ ಈ ಸಬಾಲ್ಟನ್ ಇತಿಹಾಸ ಲೇಖನ ಕಲೆಯ ಜನರಿಂದ ಆಧಾರ ಸಂಗ್ರಹಿಸುತ್ತಿದ್ದರು. ಇದನ್ನು ತಮ್ಮದೆಯಾದ ಸ್ವಂತ ದೃಷ್ಟಿಕೋನದಿಂದ ಮಾಡುತ್ತಿದ್ದರು. ಆದ್ದರಿಂದ ಇದನ್ನು ಉಝಣಠಡಿಥಿ ಜಿಡಿಠಟ ಭಜಟಠಿ ಎಂದು ಪರಿಗಣಿಸಲ್ಪಟ್ಟಿವೆ.

### 20.3.1 ರಣಜಿತ್ ಗುಹ

ರಣಜಿತ್ ಗುಹನು ಇತಿಹಾಸದಲ್ಲಿ ನಿಮ್ನ ವರ್ಗಗಳನ್ನು ಬರಿದೇ ವಸ್ತಗಳಂತೆ ನೋಡಲಾಗಿದೆಯಲ್ಲದೆ ಎಂದೂ ಪ್ರಜೆಗಳಂತೆ ಮತ್ತು ಅವರದೇ ಆದ ಸಾಮಾಜಿಕ ಪ್ರಜ್ಞೆಯ ರೂಪಗಳಲ್ಲಿ ಅವರದೇ ಇತಿಹಾಸದ ರಚನೆಕಾರರಾಗಿ ಎಂದೂ ಪರಿಗಣಿಸಲ್ಪಟ್ಟಿದ್ದುದೇ ಇಲ್ಲವೆಂಬುದನ್ನು ಒತ್ತಿ ಹೇಳಿದ್ದಾನೆ. ಅವರು ಚಾರಿತ್ರಿಕ ವಿಶ್ಲೇಷಣೆಯಲ್ಲಿ ಬರಿದೇ ಮೌನ ಬಲಗಳಂತೆ ಕಂಡರೆ ಯಾವಾಗಲಾದರೊಮ್ಮೆ ಒಂದು ವಿಶಾಲವಾದ ರಾಷ್ಟ್ರೀಯ ಅಥವಾ ಹೊಸ ಶಕೆಯ ಇತಿಹಾಸ ರಚನೆಯಲ್ಲಿ ಉದಾಹರಿಸಲ್ಪಟ್ಟಿದ್ದಾರೆಯಷ್ಟೆ.

ಮೇಲೆ ಚರ್ಚಿಸಿದ ನಿಮ್ನ ವರ್ಗದ ಚೌಕಟ್ಟಿನೊಳಗೆ ಕೆಳಸ್ತರದ ಇತಿಹಾಸಕಾರರಿಂದ ಆಧುನಿಕ ಭಾರತದ ವಿವರಣೆಯನ್ನು ಅರ್ಥಮಾಡಿಕೊಳ್ಳಲು ಸಲಹೆ ಮಾಡುತ್ತೇವೆ. ಅವರ ಅಭಿಪ್ರಾಯದಲ್ಲಿ ರಾಷ್ಟ್ರೀಯತೆಯ ಮೇಲೆ ಈಗಿರುವ ಇತಿಹಾಸ ಲೇಖನವು ಮೇಲ್ವರ್ಗಗಳ ದೃಷ್ಟಿಕೋನದಿಂದ ಬರೆಯಲಾಗಿದೆ. ಇದುವರೆವಿಗೆ ರಾಷ್ಟ್ರೀಯತೆಯ ಮೇಲೆ ಇತಿಹಾಸ ಲೇಖನವು ಸಂಗತಿಯ ಸ್ವಭಾವಕ್ಕೆ ಹೊಂದಿಕೊಳ್ಳುವಂತೆ ಸಾಮಾಜಿಕ ತಳಹದಿಯನ್ನು ಸರಿಯಾಗಿ ವಿಸ್ತರಿಸಲಾಗಿಲ್ಲ ಮತ್ತು ವಿಭಿನ್ನ ಸಾಮಾಜಿಕ ಸ್ತರಗಳನ್ನು ಸೇರಿಸದಂತೆ ಸಂಗತಿಯ ಎಲ್ಲಾ ಸಾಧ್ಯವಿರುವ ಕೋನಗಳನ್ನು ಪರಿಗಣಿಸುತ್ತಾ ಒಂದು ವಿಶಾಲ ದೃಷ್ಟಿಕೋನದಿಂದ ಮತೀಯ ಗಲಭೆಗಳನ್ನು ತೀರ್ಮಾನಿಸಲು ಮೇಲ್ವರ್ಗಗಳ ಅಸಮರ್ಥತೆ ಇದೆಂದು ಮುಂದೆ ಅವರು ವಾದಿಸುತ್ತಾರೆ.

ನಿಮ್ನ ವರ್ಗದ ಇತಿಹಾಸಕಾರರು ರಾಷ್ಟ್ರೀಯತೆಯ ದಿನಗಳಲ್ಲಿ ಈ ಸಾಮಾನ್ಯ ವರ್ಗದವರ ಮೇಲೆ ಕಾರಣಗಲನ್ನು ವರ್ಗಾಯಿಸಲು ಮೇಲ್ವರ್ಗದ ಜನರು ಹೇಗೆ ಕೆಳಸ್ತರದವರನ್ನು ಕವಚದಂತೆ ಬಳಸಿದ್ದರೆಂಬುದನ್ನು ತೋರಿದ್ದಾರೆ. ಹೇಗೆ ಕೆಳಸ್ತರದವರನ್ನು ಮೇಲ್ವರ್ಗದವರು ಶೋಷಿಸಿದರು ಮತ್ತು ಅಪರಾಧಿಗಳನ್ನಾಗಿ ಮಾಡಿದರು ಮತ್ತು ಹೇಗೆ ಇದು ಕಾಲ ಸರಿದಂತೆ ರಾಷ್ಟ್ರೀಯ ಚಳುವಳಿಯ ಒಂದು ವಿಶಿಷ್ಟ ರೀತಿಯ ವಿಶ್ಲೇಷಣೆಯ ಬೆಳವಣಿಗೆಗೆ ದಾರಿ ಮಾಡಿತೆಂಬುದೂ ಸಹ ಕೆಳವರ್ಗದ ಇತಿಹಾಸಕಾರರಿಗೆ ಸಂಬಂಧಿಸಿದುದಾಗಿದೆ. ಭಾರತೀಯ ಇತಿಹಾಸ ಕಥನದ ಮೇಲೆ ಅಧ್ಯಯನ ನಡೆಸಿರುವ ಪ್ರಮುಖ ಕೆಳವರ್ಗದ ಇತಿಹಾಸಕಾರರೆಂದರೆ ಸುಮಿತ್ ಸರಕಾರ್, ಪಾರ್ಥ ಚಟರ್ಜಿ, ಜ್ಞಾನೇಂದ್ರ ಪಾಂಡೆ, ತಣಿಕಾ ಸರ್ಕಾರ್, ದಿಪೇಶ್ ಚಕ್ರಬರ್ತಿ ಮತ್ತು ಸುಗತಾ ಬೋಸ್. ಈ ಇತಿಹಾಸಕಾರರು ಆಧುನಿಕ ಭಾರತವನ್ನು ರಾಷ್ಟ್ರೀಯ ಚಳುವಳಿಯ ವಿಶಿಷ್ಟ ಅಧ್ಯಯನದ ಮೂಲಕ ಅರ್ಥಮಾಡಿಕೊಳ್ಳಲು ಒಂದು ಪ್ರಯತ್ನವನ್ನು ಮಾಡಿದ್ದಾರೆ ಮತ್ತು ಮುಖ್ಯವಾಗಿ ಭಾರತದ ಉತ್ತರ ಭಾಗಕ್ಕಷ್ಟೇ ಸೀಮಿತಗೊಂಡಿದ್ದಾರೆ.

### 20.3.2 ಸುಮಿತ್ ಸರಕಾರ್

ಸುಮಿತ್ ಸರಕಾರ್‌ರವರು ರಾಷ್ಟ್ರೀಯತೆಯನ್ನು ಅಗತ್ಯವಾಗಿ ಒಂದು ಆಧುನಿಕ ವಿಚಾರಧಾರೆ ಎಂದು ಮತ್ತು ಲಭ್ಯವಿರುವ ಸರಕಾರೀ ಉದ್ಯೋಗಗಳು ಮತ್ತು ರಾಜಕೀಯ ಕೃಪೆಗಾಗಿ ಮೇಲ್ವರ್ಗಗಳ ಘರ್ಷಣೆಗಳ ಒಂದು ಪರಿಣಾಮವೆಂದು ಭಾವಿಸುತ್ತಾರೆ. ಅವರು ಗಣ್ಯರ ರಾಜಕೀಯ ಕೃಪೆಯ ಸಂದರ್ಭದಲ್ಲಿ

ರಾಷ್ಟ್ರೀಯತೆಯನ್ನು ವಿಶ್ಲೇಷಿಸುತ್ತಾರೆ. ಅವರು ರಾಷ್ಟ್ರೀಯತೆಯನ್ನು ಮೇಲ್ವರ್ಗಗಳ ರಾಜಕೀಯ ಸಂದರ್ಭದಲ್ಲಿ ವಿಶ್ಲೇಷಿಸುತ್ತಾರೆ ಮತ್ತು ಸಾಮೂಹಿಕ ಗಲಭೆಗಳನ್ನು ಗಣ್ಯರ ರಾಜಕೀಯಕ್ಕೆ ಸಂಬಂಧಿಸಿದುದಾಗಿ ಪರಿಗಣಿಸುತ್ತಾರೆ. ಸುಮಿತ್ ಸರಕಾರ್‌ರವರು ಬಂಗಾಳ ಪ್ರದೇಶದಲ್ಲಿ ಕೋಮು ಗಲಭೆಗಳನ್ನು ವಿಶ್ಲೇಷಿಸುವಾಗ ನಿಮ್ನ ವರ್ಗಗಳ ಅತೃಪ್ತಿಯನ್ನೂ ಮತ್ತು ಜಾತೀಯ ಜಾತಿ, ಅಥವಾ ಪ್ರಾದೇಶಿಕ ಪ್ರಜ್ಞೆಯ ವಿವಿಧ ರೀತಿಗಳ ಅಷ್ಟು ಸ್ಪಷ್ಟವಿಲ್ಲದ ವರ್ಗೀಯ ರೀತಿಯನ್ನೂ ಗಣನೆಗೆ ತೆಗೆದುಕೊಂಡಿದ್ದಾರೆ.

ಸುಮಿತ್ ಸರಕಾರ್‌ರವರು ಕೋಮು ಗಲಭೆಗಳ ಬೆಳವಣಿಗೆಯಲ್ಲಿ 'ವಿಭಜಿಸಿ ಆಳು' ಎನ್ನುವ ಬ್ರಿಟಿಷ್ ನೀತಿಯನ್ನು ಒತ್ತಿ ಹೇಳಿದ್ದಾರೆ. ವಿಭಿನ್ನ ಸಾಮಾಜಿಕ ಸ್ತರಗಳಲ್ಲಿ ವಿಭಾಗಗಳು ಸಂಬಂಧಿಸಿರುವುದರಲ್ಲಿ 1920ರಲ್ಲಿ ಕೋಮುವಾದದ ಬೆಳವಣಿಗೆಯ ಹಿಂದೆ ಬಹು ಮುಖ್ಯಾಂಶವು 1919ರ ನಂತರದ ರಾಜಕೀಯ ರಚನೆಯಲ್ಲಿ ಭಾಗವಹಿಸುವಿಕೆಯ ತರ್ಕಕ್ಕೆ ಸಂಬಂಧಿಸಿದುದಾಗಿತ್ತು. ಸುಮಿತ್ ಸರಕಾರ್‌ರವರ ಪ್ರಕಾರ ಮಾಂಟ್‌ಫರ್ಡ್ ಸುಧಾರಣೆಗಳು ಮತದಾನವನ್ನು ಹಿಗ್ಗಿಸಿದುವು. ಆದರೆ ಪ್ರತ್ಯೇಕ ಮತದಾರರನ್ನು ಕಾಯ್ದಿರಿಸಿದುವು ಮತ್ತು ವಿಸ್ತರಿಸಿದುವು ಕೂಡ 1920ರಲ್ಲಿ ಸಮನಾದ ಉದ್ಯೋಗಾವಕಾಶಗಳಲ್ಲಿ ಬೆಳವಣಿಗೆಯಿಲ್ಲದೆ ಶಿಕ್ಷಣವು ಸಾಕಷ್ಟು ಹರಡಿದುದು ಕೋಮುವಾದಕ್ಕೆ ಕಾರಣವಾದ ಮತ್ತೊಂದು ಅಂಶ. ಶಾಲೆಗಳ, ಕಛೇರಿಗಳ, ಮತ್ತು ಅಂಗಡಿಗಳ ಅಸಮಾಧಾನ ಮತ್ತು ಕಹಿಯು ಉದ್ಯೋಗಾವಕಾಶಗಳ ಏರುತ್ತಿದ್ದ ನಿರೀಕ್ಷೆಗಳ ನಿರಾಶೆಯಿಂದ ಇನ್ನೂ ತೀವ್ರವಾಯಿತು ಮತ್ತು ಕೊರೆಯಾದ ಸಂಪನ್ಮೂಲಗಳಿಗಾಗಿ ಸೆಣೆಸಾಟವು ಮತೀಯ ದ್ವೇಷವನ್ನು ಹೊತ್ತಿಸಿದುವು.

## 20.3.3 ಪಾರ್ಥ ಚಟರ್ಜಿ

ಪಾರ್ಥ ಚಟರ್ಜಿಯವರು ಪೂರ್ವ ಬಂಡವಾಳಶಾಹಿತನದಿಂದ ಬಂಡವಾಳಶಾಹಿಗೆ ಸಮಾಜದ ಸ್ಥಿತ್ಯಂತರದ ಚೌಕಟ್ಟಿನಲ್ಲಿ ಆಧುನಿಕ ಇತಿಹಾಸದ ಲೇಖನವನ್ನು ಮತ್ತು 1925 ರಿಂದ 1935ರ ಕಾಲದಲ್ಲಿ ಬಂಗಾಳ ಪ್ರಾಂತ್ಯದ ರಾಜಕೀಯ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಒಂದು ಪ್ರಯತ್ನವನ್ನು ಮಾಡಿದ್ದಾರೆ. ಚಟರ್ಜಿಯವರ ಪ್ರಕಾರ 18ನೇ ಶತಮಾನದ ಮಧ್ಯಭಾಗದಲ್ಲಿ ಬಂಗಾಳದಲ್ಲಿ ವಸಾಹತು ಆಳ್ವಿಕೆಯ ಸ್ಥಾಪನೆಯು ಎರಡು ಮುಖ್ಯ ಪರಿಣಾಮಗಳಿಗೆ ದಾರಿ ಮಾಡಿಕೊಟ್ಟಿತು. ಒಂದು ಬಂಡವಾಳ ಷಾಹಿಗಳ ಸಾಂವಿಧಾನಿಕ ತತ್ತ್ವಗಳನ್ನು ಆಧರಿಸಿ ಒಂದು ಸಾಂಸ್ಥಿಕ ರಾಜಕೀಯ ವಿಧಾನದಂತೆ ರಾಜ್ಯದ ಆಡಳಿತ ಯಂತ್ರದ ವಿಕಾಸ ಮತ್ತು ಎರಡೂ ವಸಾಹತು ಧೋರಣೆಯ ಪರಿಣಾಮವಾಗಿ ರೈತವರ್ಗದಲ್ಲಿ ಭೇದಭಾವದ ಇಡೀ ಹೊಸ ವಿಧಾನ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಮಾರುಕಟ್ಟೆ ಅರ್ಥವ್ಯವಸ್ಥೆಯ ವಿಸ್ತೃತ ಕಾರ್ಯವಿಧಾನ.

ಪಾರ್ಥ ಚಟರ್ಜಿಯವರು ಮತೀಯ ಘರ್ಷಣೆಗಳನ್ನು ಹುಟ್ಟು ಹಾಕುವ ವಸಾಹತು ರಾಜ್ಯದ ಪಾತ್ರವನ್ನು ಸಹ ವಿಶ್ಲೇಷಿಸುತ್ತಾರೆ ಮತ್ತು ಇವರಿಗೆ ಪರಿಧಿಯೊಳಗಿನ ಸಮುದಾಯಗಳನ್ನು ಅಧೀನದಲ್ಲಿಟ್ಟುಕೊಳ್ಳಲು ಮತ್ತು ಆಳಲು ಸಂಸ್ಥೆಗಳನ್ನು ಮತ್ತು ಆಡಳಿತಾತ್ಮಕ ವಿಧಾನಗಳನ್ನು ರೂಪಿಸಿದರು.

ರಾಜ್ಯದ ಆಳ್ವಿಕೆಯ ವಿಸ್ತರಣೆಯ ಈ ವಿಧಾನದಲ್ಲಿ 'ಕಾನೂನಿನ ಮುಂದೆ ಸಮಾನತೆಯ ಬಂಡವಾಳಷಾಹೀ ತತ್ವಗಳನ್ನು ಪೂರ್ಣವಾಗಿ ಜಾರಿಗೆ ತರಲಾಯಿತು. 'ಸಮುದಾಯ'ದ ವಿಚಾರವು ರೈತವರ್ಗದ ಪ್ರಜ್ಞೆಯಲ್ಲಿ ಸಜೀವ ಶಕ್ತಿಯಾಗಿ ವರ್ತಿಸುತ್ತ ಮುಂದುವರೆಯಿತು. ಅವರನ್ನು ರಾಜ್ಯದ ಆಳ್ವಿಕೆಯಡಿ ತರಲಾಯಿತು. ಪಾಳೆಯಗಾರರೆಂದು ಅಥವಾ ರಾಜ್ಯದ ನಿಯೋಗಿಗಳೆಂದು ಅವರ ವಿಧೇಯತೆ ಮತ್ತು ಉತ್ಪಾದನೆಯ ಮೇಲೆ ಹೊರ ಹಕ್ಕುದಾರರೆಂದು ಗುರುತಿಸಲಾಯಿತು.

ಪಾರ್ಥ ಚಟರ್ಜಿಯವರು ವಸಾಹತುಷಾಹೀ ರಾಜ್ಯ ನಿರ್ಮಾಣಕ್ಕೆ ತಗುಲಿಹಾಕಿಕೊಂಡಿದ್ದ ರಾಜಕೀಯದ ವಿವಿಧ ರೀತಿಗಳ ನಡುವೆ ಅರ್ಥಪೂರ್ಣವಾಗಿ ಪ್ರತ್ಯೇಕಿಸಲು ಭಾರತೀಯ ಇತಿಹಸದ ಮೇಲೆ ಒಂದು ವಿಶ್ಲೇಷಣಾತ್ಮಕ ಚೌಕಟ್ಟನ್ನು ಕೊಟ್ಟಿದ್ದಾರೆ. ಅವರು ಕೋಮುವಾದವನ್ನು ರೈತವರ್ಗದಲ್ಲಿ ತಾರತಮ್ಯ ಭವವು ಪ್ರಾರಂಭಿಕ ಹಂತದಲ್ಲಿರುವ ಕಾಲದಲ್ಲಿಯೇ ರಾಜಕೀಯ ಹಾದಿಯ ಮೇಲೆ ಅರ್ಥಮಾಡಿಕೊಂಡರು. ಈ "ಚೌಕಟ್ಟನ್ನು" ಬಳಸಿ ಚಟರ್ಜಿಯವರು ರೈತ ಕೋಮುವಾದೀ ವಿಚಾರದ ಸ್ವಾಯತ್ತತೆಯ ಗುರುತನ್ನು ಮತ್ತು ರಾಜ್ಯದ ವಿರುದ್ಧ ಕ್ರಿಯೆ ಮತ್ತು ಪಾಳೆಯಗಾರಿಕೆಯ ಮತ್ತು ವ್ಯಾಪಾರೀ ಶೋಷಣೆಯ ವಿರುದ್ಧ ಮತ್ತು ಸಂಘಟಿತ ರಾಜಕೀಯದ ವಿರುದ್ಧ ಸಂಬಂಧದ ಸ್ವಭಾವವನ್ನು ಸ್ಥಾಪಿಸಲು ಪ್ರಯತ್ನಿಸಿದರು.

## 20.3.4 ದೀಪೇಶ್ ಚಕ್ರವರ್ತಿ

ದೀಪೇಶ್ ಚಕ್ರವರ್ತಿಯ ಆಧುನಿಕ ಭಾರತೀಯ ಇತಿಹಾಸದ ವಿಶ್ಲೇಷಣೆಯು 1890ರ ಮಧ್ಯೆ ಕಲ್ಕತ್ತ ಸೆಣಬು ಗಿರಣಿಯ ಗಲಭೆಗಳ ಅಧ್ಯಯನವನ್ನು ಆಧರಿಸಿದೆ. ದೀಪೇಶ್ ಚಕ್ರವರ್ತಿಯವರು ಹೇಳುವಂತೆ ಸ್ವಾರಸ್ಯಕರವಾಗಿ 1894 ಮತ್ತು 1897ರ ನಡುವಿನ ಕಾಲದ ಗಲಭೆಗಳಲ್ಲಿ ಹೆಚ್ಚಿನವು ಧಾರ್ಮಿಕ ಮತ್ತು ಸಮುದಾಯದ ಭಾವನೆಗಳ ಮೇಲಿನವಾಗಿದ್ದವು ಮತ್ತು ಪೂರ್ಣತಃ ಆರ್ಥಿಕ ಸಮಸ್ಯೆಗಳ ಸುತ್ತ ಅಲ್ಲ. ಚಕ್ರವರ್ತಿಯವರು ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ವಲಸೆ ಕಾರ್ಮಿಕರಲ್ಲಿ ಉಂಟಾದ ಬಲವಾದ ಮತೀಯ ವಿಭಾಗಗಳು ಹೇಗೆ ಒಂದು ಹೊಸ ಸಮುದಾಯ ಪ್ರಜ್ಞೆಯನ್ನು ಹೊರಗೆಡವಿತೆಂಬುದನ್ನು ತೋರ ಬಯಸುತ್ತಾರೆ. ಮುಸ್ಲಿಂ ವಲಸೆ ಕಾರ್ಮಿಕರು ಇಸ್ಲಾಂನ ಗುರುತಿಗೆ ಒತ್ತುಕೊಟ್ಟರು ಮತ್ತು ಹಿಂದೂಗಳು ತಮ್ಮದೇ ಆದ ಧಾರ್ಮಿಕ ಗುರುತಿಗೆ ಒತ್ತುಕೊಟ್ಟರು.

ಚಕ್ರವರ್ತಿಯವರು 1894–97ರ ವೇಳೆಗೆ ದೇಶದ ಮೇಲ್ಮುಖದ ಗಿರಣಿಗಳ ಭಾಗಗಳ ಸಾಕಷ್ಟು ಬೆಳವಣಿಗೆ ಇತ್ತು. ತಾನು ಅಧ್ಯಯನ ನಡೆಸಿದ ಪ್ರದೇಶದಲ್ಲಿ ಇದು ಕೈಗಾರಿಕಾ ಕಾರ್ಮಿಕರಿಗೆ ಸಂಪೂರ್ಣವಾಗಿ ಹೊಸದಾಗಿತ್ತು ಎಂಬುದನ್ನು ಗಮನಿಸಿದರು. ವಲಸೆ ಕಾಮಿಕರ ಹಿಂದಿನ ಮನೋಭಾವಗಳು ನೆನಪುಗಳು ಮತ್ತು ಅಸೂಯೆಗಳು ಹೊಸ ಫಲಿತಾಂಶಗಳನ್ನುಂಟು ಮಾಡಿದುದು ಸಹಜವಾಗಿತ್ತು ಎಂದು ಚಕ್ರವರ್ತಿಯವರು ಮುಂದುವರೆಸುತ್ತಾರೆ. ಅಲ್ಲಿ ಏನು ನಡೆಯುತ್ತಿತ್ತೆಂದರೆ ಹಿಂದಿನ ಮನೋಭವಗಳಿಂದ ಕೈಗಾರಿಕಾ ಕೆಲಸಕ್ಕಾಗಿ ಒಂದು ಹೊಸ ಸನ್ನಿವೇಶಕ್ಕೆ ಬರಿದೇ ವರ್ಗಾವಣೆ ಮಾತ್ರವಲ್ಲ. ಕೈಗಾರಿಕೆಗಳಲ್ಲಿ ಅಂತಹ ಮನೋಭಾವಗಳು ಉಳಿದು ಬೆಳೆಯಲು ಸಹಾಯ ಮಾಡಿದ ಅಂಶಗಳಿದ್ದವು.

ಕೋಮು ಭಾವನೆಗಳ ಬೆಳವಣಿಗೆಯನ್ನು ವಿಶ್ಲೇಷಿಸುವಾಗ ಚಕ್ರವರ್ತಿಯವರು ವಲಸೆ ಗಿರಣಿ ಕಾರ್ಮಿಕರ ಮತ್ತು ಬಂಗಾಳೀ ಬುದ್ಧಿಜೀವಿಗಳ ನಡುವೆ ಸಾಂಸ್ಕೃತಿಕ ಕಂದಕವನ್ನೂ ಮಾರಾಮಾರಿಗಳ ಮತ್ತು ಹಿಂದೂ ಮಹಾಸಭಾದ ಪಾತ್ರವನ್ನು ಸಹ ಗಣನೆಗೆ ತೆಗೆದುಕೊಂಡರು. ಕಾಲಾನುಕ್ರಮದಲ್ಲಿ ಅವು ಹಿಂದೂ ಕೋಮುವಾದದ ಮುಖ್ಯ ಆಶ್ರಯತಾಣಗಲಾಗಿ ಬಿಟ್ಟಿದ್ದವು. ಮತೀಯವಾದದ ಆರ್ಥಿಕಾಂಶಕ್ಕೆ ಒತ್ತು ಕೊಡುವಾಗ ಶ್ರಮದ ಮಾರುಕಟ್ಟೆಗಳ ಬೆಳವಣಿಗೆಗೆ ಮತ್ತು ಕೋಮುವಾದದ ಕಾರಣಕ್ಕೆ ಅದರ ನಂತರದ ಪ್ರಭಾವಕ್ಕೆ ಸಂಬಂಧಪಟ್ಟಂತೆ ಚಕ್ರವರ್ತಿಯವರು ಸರದಾರೀ ಪದ್ಧತಿಗೆ ಹೆಚ್ಚು ಒತ್ತು ಕೊಟ್ಟರು.

## 20.3.5 ಸುಗತ ಬೋಸ್

ಸುಗತ ಬೋಸ್ ಆರ್ಥಿಕ ಸಮಸ್ಯೆಗಳ ರೀತಿಯ ಮತ್ತು ರೈತ ವರ್ಗ ಹಣಕೊಡುವವರು ಮತ್ತು ಜಮೀನುದಾರರ ನಡುವೆ ಕೃಷಿಕ ವರ್ಗದ ಘರ್ಷಣೆಗಳ ಸಂದರ್ಭದಲ್ಲಿ ಭಾರತೀಯ ಇತಿಹಾಸವನ್ನು ನಿರೂಪಿಸುತ್ತಾರೆ ಮತ್ತು ಈ ಸಂಬಂಧದ ಕುಸಿತವನ್ನು ಗಣನೆಗೆ ತೆಗೆದುಕೊಂಡಿದ್ದಾರೆ. ಅವರ ಅಧ್ಯಯನ "ಗ್ರಾಮೀಣ ಬಂಗಾಳದಲ್ಲಿ ಕೋಮು ಹಿಂಸೆಯ ಬೇರುಗಳು" 1930ರ ಕಿಶೋರ್‌ಗಂಜ್ ಗಲಭೆಗಳ ಒಂದು ಅಧ್ಯಯನದಲ್ಲಿ ಸುಗತಾ ಬೋಸ್, ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ ಹಿಂಸೆಯಲ್ಲದೆ ಹಿಂದೂ-ಮುಸ್ಲಿಂ ಗಲಭೆಗಳು ನಗರವಾಸಿಗಳ ಮುಖ್ಯವಾಗಿ ನಗರವಾಸಿಗಳನ್ನೊಳಗೊಂಡು ಅದು ನಗರದ ಅಂಶದ ಲಕ್ಷಣವನ್ನು ಹೊಂದಿತ್ತು. ಬಂಗಾಳಿಗಳನ್ನಲ್ಲ ಎಂದು ವಾದಿಸುತ್ತಾರೆ. ಮತೀಯ ಪ್ರಜ್ಞೆಯ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ಅದರಲ್ಲಿಯೂ ಕಿಶೋರ್‌ಗಂಜ್ ಗಲಭೆಯಿಂದ (1930ರ ಕಾಲದ ನಂತರ) ಲೇಖಕಿಯು ಹಿಂದೂ ತಾಲ್ಲೂಕುದಾರರು, ವ್ಯಾಪಾರಿಗಳು ಮತ್ತು ಮಹಾಜನರ ವಿರುದ್ಧ ಮುಸ್ಲಿಂ ಕೃಷಿಕ ವರ್ಗದ ಸಾಮೂಹಿಕ ಹಿಂಸೆಯ ಘಟನೆಯ ಉದಾಹರಣೆಗಳನ್ನು ಕೊಡುತ್ತಾರೆ.

ಸುಗತಾ ಬೋಸ್‌ರವರ ಪ್ರಕಾರ ಸಾಲಕ್ಕೆ ತುತ್ತಾದ ಮುಸ್ಲಿಂ ರೈತವರ್ಗದ ಮೇಲಿನ ಹಿಡಿತದ ಮಾಧ್ಯಮವು ಅತ್ಯಗತ್ಯವಾಗಿ ಅಧಿಕ ಬಡ್ಡಿಯ ಮೂಲಕ ಆರ್ಥಿಕವಾದುದಾಗಿತ್ತು. ಲೇಖಕಿಯು ರಾಜ್ಯದ ಒಟ್ಟು ಅರ್ಥವ್ಯವಸ್ಥೆಯಲ್ಲಿ ಮಂದಗತಿಯ ಬೆಳವಣಿಗೆಯನ್ನೂ ಮತ್ತು 1928-19ರ ಮಹಾ ಆರ್ಥಿಕ ಕುಸಿತದ ಹಾನಿಕಾರಕ ಪರಿಣಾಮಗಳನ್ನು ಮತೀಯ ಗಲಭೆಗಳಿಗೆ ಕಾರಣದ ಅಂಶಗಳಾಗಿ ಗಣನೆಗೆ ತೆಗೆದುಕೊಂಡರು. ಮಹಾಜನರಿಗಿದ್ದ ಹಳೆಯ ಮನ್ನಣೆಯು ಮರೆಯಾಯಿತು ಮತ್ತು ಅವರು ರೈತರ ಜೀವಿತದ ಭದ್ರತೆಗೆ ಜವಾಬ್ದಾರಿಯನ್ನು ತೆಗೆದುಕೊಳ್ಳದಾದರು. ಸುಗತಾ ಬೋಸ್ ಕೊನೆಯಲ್ಲಿ 1930ರ ನಂತರದಿಂದ ಪಶ್ಚಿಮ ಬಂಗಾಳದ ಹಿಂದೂ ತಾಲ್ಲೂಕುದಾರರು ಮತ್ತು ವ್ಯಾಪಾರಿಗಳು ದ್ವೇಷಕ್ಕೆ ಪಾತ್ರರಾದದ್ದು ಮಾತ್ರವಲ್ಲ, ಹೆಚ್ಚಾಗಿ ಪೂರ್ಣವಾಗಿ ಮಿತಿಮೀರಿದವರೆಂಬ ಆಗ್ರಹಕ್ಕೆ ಪಾತ್ರರಾದರು. 1947ರಲ್ಲಿ ಅವರು ತಮ್ಮ ಸಾಮಾನು ಸರಂಜಾಮುಗಳನ್ನು ಕಟ್ಟಲು ಮತ್ತು ಹೊಸದಾಗಿ ವಿಭಜಿಸಿದ್ದ ಭಾರತದ ಗಡಿಯ ಕಡೆಗೆ ಹಾದಿ ಹುಡುಕಲು ಒತ್ತಾಯಿಸಲ್ಪಟ್ಟರು/ತಳ್ಳಲ್ಪಟ್ಟರು.

## 20.3.6 ತಾನಿಕ ಸಾಕರ್

ತನಿಕಾ–ಸಾಕರ್‌ರವರು ಭಾರತೀಯ ಇತಿಹಾಸವನ್ನು ಅರ್ಥಮಾಡಿಕೊಂಡಿರುವುದು ಬಂಗಾಳದಲ್ಲಿ. ಅದರಲ್ಲೂ 1930ರಲ್ಲಿ ಡಕ್ಕನ್ ಮೈಮೆನಿಸಿಂಘ್‌ನ ಮತ್ತು 1931ರಲ್ಲಿ ಚಿತ್ತನ್‌ಗಾಂಗ್‌ನ ಪ್ರದೇಶದಲ್ಲಿ ಹಿಂದೂ–ಮುಸ್ಲಿಂ ಆರ್ಥಿಕ ಸಂಬಂಧದ ಸಂದರ್ಭದಲ್ಲಿ. ತಾನಿಕ್ ಸರಕಾರ್‌ರವರು ವಿಶೇಷ ಕೋಮು ಗಲಭೆಗಳು ಮತ್ತು ಗುಂಪು ನಡವಳಿಕೆಯ ಸಂದರ್ಭ ಮತ್ತು ಮಾದರಿಯು ಮತೀಯ ಘರ್ಷಣೆಗಳ ಮೇಲ್ಮೆಯ ತಳದಲ್ಲಿ ಅನೇಕ ರೀತಿಯ ಆತಂಕಗಳನ್ನು ಬಯಲು ಮಾಡಿದೆ ಎಂದು ಹೇಳುತ್ತಾರೆ. ಆ ರೀತಿಯ ಒತ್ತಡಗಳು ಮತ್ತು ಗಲಭೆಗಳ ಒಂದು ವಿಶ್ಲೇಷಣೆಯ ಮೂಲಕ ತಾನಿಕ ಸರಕಾರ್‌ರವರು ಒಂದು ಕೈಗಾರಿಕಾ ಪೂರ್ವದ ಗುಂಪು ಅಥವಾ ಒಂದು ತುಳಿಯಲ್ಪಟ್ಟ ರೈತವರ್ಗದ ವಿಶಿಷ್ಟ ಸಾಮಾಜಿಕ ಗುಂಪುಗಳ ಲಕ್ಷಣಗಳೆನ್ನುವಂತೆ ಗುಂಪು ಗಳಿಸಿದ ಅಲ್ಪತೆಯನ್ನು ಗುರುತಿಸಲು ಇಷ್ಟಪಡುತ್ತಾರೆ. ಮೇಲೆ ಹೇಳಿದ ಗಲಭೆಗಳಲ್ಲಿ ಆ ರೀತಿಯ ಆತಂಕಗಳು ಏಕೆ ಮತೀಯ ರೂಪವನ್ನು ಪಡೆದವರು ಮತ್ತು ಮತೀಯ ಗಲಭೆಗಳೆಂದು ಹಣೆಪಟ್ಟಿ ಪಡೆದವೆಂಬುದನ್ನು ಪರೀಕ್ಷಿಸಲು ಸಲಹೆ ಮಾಡುತ್ತಾರೆ.

ಮತೀಯ ಧೃವೀಕರಣಕ್ಕೆ ಸಹಾಯ ಮಾಡಿದ ಗ್ರಾಮೀಣ ಬಲಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ತಾನಿಕ ಸರಕಾರ್‌ರವರು ಹೇಗೆ ಬಂಗಾಳ ಪ್ರಾಂತ್ಯದ ಬಹುತೇಕ ಭಾಗಗಳಲ್ಲಿ ಹಿಂದೂಗಳನ್ನೊಳಗೊಂಡ ಪ್ರಬಲ ಆರ್ಥಿಕ ವರ್ಗಗಳು ಅಧಿಕ ಬಡ್ಡಿಯನ್ನು ಹೇರುವ ಮೂಲಕ ಮುಸ್ಲಿಂ ಕೃಷಿಕ ವರ್ಗದ ಮೇಲೆ ಏಕಸ್ವಾಮ್ಯವನ್ನು ಹೊಂದಿ ಶೋಷಿಸಿದರೆಂದು ತೋರುತ್ತಾರೆ. ಲೇಖಕಿಯು ಸರಿಯಾದ ವ್ಯವಹಾರದ ಪದ್ಧತಿಯ ಅನುಪಸ್ಥಿತಿಯನ್ನು ಸಹ ಸಾಲ ಕೊಡುವವರು ಮತ್ತು ಜಮೀನುದಾರರಿಂದ ಮುಸ್ಲಿಂ ಸಮುದಾಯದ ಶೋಷಣೆಯನ್ನು ಗಮನಿಸಿದ್ದಾರೆ. ಗಲಭೆಯ ಮಾದರಿ ಮುಖ್ಯ ಗುರಿಗಳು ಮುಖ್ಯ ಭಾಗವಹಿಸುವವರು, ಗಲಭೆಕೋರರ ಉದ್ದಿಶ್ಯ. ಇವು ತನಿಕ ಸರಕಾರ್‌ರವರ ಪ್ರಕಾರ ಗ್ರಾಮೀಣ ಅಥವಾ ನಗರ ಪ್ರದೇಶಗಳಲ್ಲಿನ ಗಲಭೆಗಳು ಮುಸ್ಲಿಂ ದಾಳಿಗಳ ಹಿಂಸೆ, ಮುಖಗಳ ಹಿಂದೆ ಸಾಮಾಜಿಕ ವಿರೋಧವನ್ನು ಹೊರಗೆಡವಿದುವು. ಆಕೆಯು ಮತೀಯ ಗಲಭೆಯನ್ನು ಮುಸ್ಲಿಂ ಸಮುದಾಯದಿಂದ ಪ್ರಬಲ ಹಿಂದೂ ಸಮುದಾಯದ ಮೇಲೆ ಸಾಮಾಜಿಕ ವಿರೋಧದ ಅರ್ಥದಲ್ಲಿ/ ಸನ್ನಿವೇಶದಲ್ಲಿ ಗುರುತಿಸುತ್ತಾರೆ.

## 20.3.7 ಜ್ಞಾನೇಂದ್ರ ಪಾಂಡೆ

ಜ್ಞಾನೇಂದ್ರ ಪಾಂಡೆಯವರು "ಇತ್ತೀಚಿನ ದಿನಗಳಲ್ಲಿ ಇಡಿಯಾಗಿ ಭಾರತೀಯ ಸಮಾಜ ಮತ್ತು ರಾಜಕೀಯದ ರಚನೆಯನ್ನು ತಿಳಿದುಕೊಳ್ಳಲು" ಕೆಳಸ್ತರದವರ ಇತಿಹಾಸ ಲೇಖನಕ್ಕೆ ಓರ್ವ ಮುಖ್ಯ ಕಾಣಿಕೆದಾರರಾಗಿ ಭಾರತೀಯ ಇತಿಹಾಸದ ಮೇಲೆ ಒಂದು ವ್ಯಾಪಕವಾದ ಅಧ್ಯಯನವನ್ನು ಮಾಡಿದ್ದಾರೆ. ಶೈಕ್ಷಣಿಕ ಶೋಧನೆಗಳಲ್ಲಿ ಭಾರತೀಯ ಇತಿಹಾಸವು ಧಾರ್ಮಿಕ ಸಮುದಾಯದ ಘೋಷಿತ ಆಸಕ್ತಿಗಳನ್ನು ಆಧರಿಸಿ ಸಾಮಾನ್ಯವಾಗಿ ಬೇರೊಂದು ಧಾರ್ಮಿಕ ಸಮುದಾಯಗಳ ನಿಜವಾದ ಅಥವಾ ಕಲ್ಪಿತ ಬೆದರಿಕೆಗೆ ಪ್ರತಿಕ್ರಿಯೆಯಾಗಿ ಸಂಘಟಿತ ರಾಜಕೀಯ ಚಳುವಳಿಗಳ ಸಂದರ್ಭದಲ್ಲಿ ಅರ್ಥೈಸಲಾಗಿದೆ ಎಂದು ಅವರು

ವಾದಿಸುತ್ತಾರೆ. ಅದು ಉದ್ಯೋಗಗಳಲ್ಲಿ ಶಿಕ್ಷಣದಲ್ಲಿ ಮತ್ತು ಶಾಸಕಾಂಗದ ಸ್ಥಾನಮಾನಗಳಿಗಾಗಿ ಕೊಡಲಾಗಿರುವ ಪಾಲಿಗಾಗಿ ಸರಕಾರದ ನೀತಿಯ ಮೇಲೆ ವರ್ಗೀಯ ಬೇಡಿಕೆಗಳನ್ನು ಮಾಡುವ ಒಂದು ಚಳುವಳಿಯನ್ನು ಅದು ಸೂಚಿಸುತ್ತದೆ. ಇದು ಕೆಲವು ವೇಳೆ ಹೊಸ ಪ್ರಾಂತ್ಯಗಳ ಮತ್ತು ರಾಜ್ಯಗಳ ಸೃಷ್ಟಿಗಾಗಿ ದಾರಿ ಮಾಡಿಕೊಡುತ್ತದೆ. ವಸಾಹತುಶಾಹಿ ಭಾರತವು ವ್ಯಾಪಕವಾದ ಶ್ರೇಣಿಯ ಸ್ಥಿತಿಗಳು, ಸಂಸ್ಕೃತಿಗಳು ಮತ್ತು ಅಭಿರುಚಿಗಳು ಮತ್ತು ಅದರ ಜನರನ್ನು ಹೊಂದಿತ್ತು. ಈಗ ಆಧುನಿಕ (ವಸಾಹತುಶಾಹಿ) ಮತ್ತು ಮಧ್ಯಕಾಲೀನ (ವಸಾಹತುಶಾಹಿ ಹಾಗೆಯೇ ಪೂರ್ವ ವಸಾಹತುಶಾಹಿ) ಅಧಿಕಾರ ಮತ್ತು ಶೋಷಣೆಯ ಒಂದು ವಿಚಿತ್ರ ಸಂಯೋಜನತೆಯನ್ನು ಅನುಭವಿಸಿತು. ಈ ಸಂದರ್ಭದಲ್ಲಿ ಜಾತಿ, ಭಾಷೆ ಮತ್ತು ಧಾರ್ಮಿಕ ಸಮುದಾಯ ಮೊದಲಾದವುಗಳ ಬಗ್ಗೆ ಇದ್ದ ಭಾವನೆಗಳ ಸುತ್ತ ಹೊಸ ಹೊಂದಾಣಿಕೆ ಬೆಳೆಯಿತು. ಕೋಮುವಾದ ಎಂಬ ವಿಚಾರವು ಕಾಣತೊಡಿಗದ್ದು ಇಲ್ಲಿಯೇ.

ಜ್ಞಾನೇಂದ್ರ ಪಾಂಡೆಯವರು ಗ್ರಾಮೀಣ ಮತ್ತು ನಗರದ ಸಂದರ್ಭದಲ್ಲಿ ವರ್ಗ ಸಂಬಂಧಗಳ ಕೇಂದ್ರೀಯ ಉದ್ದೇಶವನ್ನು ಜಾತಿಯ ಉದ್ಧಾರದ ಚಳುವಳಿಗಳು ಮತ್ತು ವಿಭಿನ್ನ ರೀತಿಗಳ ಜನಪ್ರತಿಯ ಚಳುವಳಿಗಳಲ್ಲಿ ಅದರಲ್ಲಿಯೂ ಕೆಳವರ್ಗಗಳ ಶ್ರಮಿಕರನ್ನು ಸಜ್ಜುಗೊಳಿಸುವ ವಿಧಾನ. ಇವುಗಳನ್ನು ಗಮನದಲ್ಲಿಟ್ಟುಕೊಂಡು ಸಮಾಜ ಮತ್ತು ರಾಜಕೀಯದ ವಿವಿಧ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾ ಭಾರತೀಯ ಇತಿಹಾಸವನ್ನು ವಿಶ್ಲೇಷಿಸುತ್ತಾರೆ.

19.3.8 ಡೇವಿಡ್ ಆರ್‌ನಾಲ್ಡ್

1839–1924ರಲ್ಲಿ ಆಂಧ್ರದ ಗುಡೆಮ್ ಮತ್ತು ರಂಪಾಗುಡ್ಡ ಪ್ರದೇಶಗಳಲ್ಲಿ ಗುಡ್ಡಗಾಡು ಜನರ ಗಲಭೆಗಳು ಮತ್ತು ದಂಗೆಗಳ ದೀರ್ಘ ಸರಣಿಗಳ ಕಥೆಯನ್ನು ಬೆಳಕಿಗೆ ತರುತ್ತಾರೆ. 1876–78ರ ಮದರಾಸಿನ ಕ್ಷಾಮದ ಅಧ್ಯಯನ ನಡೆಸುತ್ತಾ ಇದೇ ಲೇಖಕರು ಜೀವನೋಪಾಯ ಮತ್ತು ಬದುಕು ಸಾಗಿಸುವಂತಹ ಬಿಕ್ಕಟ್ಟುಗಳಲ್ಲಿ ರೈತ ಪ್ರಜ್ಞೆ ಮತ್ತು ರೈತರ ಕಾರ್ಯಗಳ ಬಗ್ಗೆ ಬರೆಯುತ್ತಾರೆ. ಆರ್‌ನಾಲ್ಡ್‌ರವರು ಭಾರತದ ಕ್ಷಾಮದ ಮೇಲೆ ಬೃಹತ್ ಗಾತ್ರದ ಸಾಹಿತ್ಯವು ಆ ವಿಷಯವನ್ನು ಮಾನವ ಅನುಭವದ ದೃಷ್ಟಿಯಿಂದ ಪರಿಗಣಿಸಿಲ್ಲ ಮತ್ತು ಅಭಾವದ ರೈತನ ಅನುಭವ ಮತ್ತು ಕ್ಷಾಮಗಳು ಬಹುಪಾಲು ವ್ಯತ್ಯಾಸವಿಲ್ಲದೆ ಸರಕಾರದ ನೀತಿ ಮತ್ತು ಪರಿಹಾರ ಆಡಳಿತದ ವಿವರಣೆಗಳ ಅಧೀನಕ್ಕೊಳಪಡಿಸಲಾಗಿದೆ ಎಂದು ದೂರುತ್ತಾರೆ.

**20.3.9 ಅರವಿಂದ್ ದಾಸ್**

ಅರವಿಂದ ದಾಸ್‌ರವರು ಬಿಹಾರನಲ್ಲಿ 1947–78ರಲ್ಲಿ ಕೃಷಿ ಕ್ಷೇತ್ರದ ಬದಲಾವಣೆಗಳನ್ನು ಮೇಲ್ವರ್ಗದವರು ಯೋಜಿಸಿದ ಭೂಸುಧಾರಣೆಗಳೆಂದು ಹೇಳುವುದು ಎಷ್ಟು ತಪ್ಪಾಗಿ ಗ್ರಹಿಸಲಾಗಿದೆ ಎಂದು ನಿರೂಪಿಸುತ್ತಾರೆ. ಕೃಷಿಕ ಬದಲಾವಣೆಗಳಲ್ಲಿ ಎರಡು ಮುಖ್ಯ ಪ್ರಯತ್ನಗಳು ಮೇಲಿನವುಗಳನ್ನು ರೂಪಿಸಿವೆ. ಅದು ಜಮೀನುದಾರಿ ಪದ್ಧತಿಯ ರದ್ದಿನ ಮೂಲಕ ಮತ್ತು ಭೂದಾನ ಚಳುವಳಿ. ಇವು ಮೇಲ್ವರ್ಗಗಳು ಪ್ರಾರಂಭಿಸಿದುದಲ್ಲ. ಆದರೆ ರೈತರ ಅತೃಪ್ತಿಗೆ ಪ್ರತಿಕ್ರಿಯೆಗಳು. ಮೊದಲನೆಯದು ಸ್ವಾಮಿ ಸಹಜಾನಂದ ಸರಸ್ವತಿ

ಮತ್ತು ಬಲವಾದ ಕಿಸಾನ್–ಸಭಾದ ವರುಷಗಳ ಹೋರಾಟದಿಂದ ಬಂದುದು ಮತ್ತು ಎರಡನೆಯದು ತೆಲಂಗಾಣದಲ್ಲಿ ಸೈನಿಕ ಕಮ್ಯುನಿಷ್ಟರಿಂದ ಪ್ರಾರಂಭವಾದ ರೈತರ ದಂಗೆಯಿಂದ ಬಂದುದು. ಎರಡೂ ಬಿಹಾರ್ ದೇಶದ ಕಡೆ ವರ್ಗ ಸಂಘರ್ಷವನ್ನು ಮೊದಲೇ ಪ್ರತಿಬಂಧಿಸುವ ಕ್ರಮಗಳಾಗಿದ್ದವು. ಲೇಖಕರು ಹೀಗೆ ಹೇಳುತ್ತಾರೆ: ಕೃಷಿ ಕ್ಷೇತ್ರದ ಬದಲಾವಣೆಯನ್ನು ಪ್ರಾಥಮಿಕವಾಗಿ ಮೇಲ್ವರ್ಗಗಳಿಂದ ಪ್ರಾರಂಭವಾದ ಭೂಸುಧಾರಣೆಯೆಂದು ವಿವರಿಸುವುದು/ನಿರೂಪಿಸುವುದು. ವಸ್ತುವನ್ನು/ವಿಷಯವನ್ನು ಗ್ರಹಿಸಲು ಪ್ರಯತ್ನಿಸದೆ ಅದರ ನೆರಳನ್ನು ಅಟ್ಟಿಸಿಕೊಂಡು ಹೋದಂತಾಗುವುದು.

### 20.3.10 ಶಾಹಿದ್ ಆಮಿನ್

ಶಾಹಿದ್ ಆಮಿನ್ ರವರು ಗಾಂಧಿಯ ಮೇಲೆ ತಮ್ಮ ಪ್ರಬಂಧದಲ್ಲಿ ಮಹಾತ್ಮರ ವರ್ಚಸ್ಸು, ರೈತ ಪ್ರಜ್ಞೆಯ ಮೇಲೆ ಹೇಗೆ ಛಾಪು ಮೂಡಿಸಿತೆಂಬುದನ್ನು ತಿಳಿದುಕೊಳ್ಳಲು ಆಸಕ್ತರಾಗಿದ್ದಾರೆ. ಆ ವರ್ಚಸ್ಸಿನಲ್ಲಿ ಒಂದು ಮುಖ್ಯ ವಿಚಾರವೆಂದರೆ ಅಂಧಶ್ರದ್ಧೆ ಮತ್ತು ಪವಾಡಗಳಲ್ಲಿರುವ ರೈತನ ನಂಬಿಕೆ ಎಂದು ಕಂಡುಕೊಂಡಿದ್ದಾರೆ. ಡೇವಿಡ್ ಹಾರ್ಡಿಮನ್‌ರವರ ದಕ್ಷಿಣ ಗುಜರಾತಿನ ಬುಡಕಟ್ಟು ಜನರಲ್ಲಿ ದೇವಿ ಸುಧಾರಣಾ ಚಳುವಳಿಯ ಮೇಲಿನ ಪ್ರಬಂಧವು ಬುಡಕಟ್ಟು ಜನರ ಪ್ರಜ್ಞೆಯ ಬಗ್ಗೆ ಆಳವಾದ ನೋಟವನ್ನೂ ಸೆಳೆಯಬೇಕಾಗಿದೆ.

### 20.3.11 ಗೌತಮ ಭದ್ರ

ಗೌತಮ ಭದ್ರ ಅವರು ತಮ್ಮ "1857ರ ನಾಲಕ್ಕು ದಂಗೆಕೋರರು"ನಲ್ಲಿ 1857ರ ಮಹಾದಂಗೆಯ ಮೇಲೆ ಇತಿಹಾಸ ಲೇಖನದ ಎಲ್ಲಾ ರೀತಿಗಳು ಎಸ್.ಬಿ.ಚೌಧರಿಯವರ ಬರಹಗಳಲ್ಲಿ ಉದಾಹರಿಸಿರುವಂತೆ 'ರಾಷ್ಟ್ರೀಯ'ವಿರಲಿ ಅಥವಾ ಪ್ರಮೋದ ಸೇನ ಗುಪ್ತಾ ಮತ್ತು ದತ್ತಾರವರು ಮೇಲ್ವರ್ಗದವರ ಮೇಲಿನ ಮತ್ಸರದೊಂದಿಗೆ ತಿಳಿಸಿರುವಂತೆ ತೀವ್ರತೆಯ ಕಮ್ಯುನಿಸ್ಟ್–ಏ–ಇರಲಿ ಈ ಮಹಾನ್ ಘಟನೆಯನ್ನು ಮೇಲ್ವರ್ಗದವರ ಸಾಹಸವೆಂದು ಬಿಂಬಿಸಲಾಗಿದೆ ಎಂದು ಗಮನಿಸುತ್ತಾರೆ. ಸಾಮಾನ್ಯ ಪ್ರತಿಭಟನೆಕಾರ ಅವನ ಪಾತ್ರ ಮತ್ತು ವಿದೇಶೀ ಆಳ್ವಿಕೆಯ ಕುರಿತು ಅವನ ಗ್ರಹಿಕೆ ಮತ್ತು ಸಮಕಾಲೀನ ಬಿಕ್ಕಟ್ಟು ಇವೆಲ್ಲವನ್ನು ಈ ಮಹಾದಂಗೆಯ ಚಾರಿತ್ರಿಕ ಸಾಹಿತ್ಯದಿಂದ ಹೊರಗಿಡಲಾಗಿದೆ. ಭದ್ರದ ಪ್ರಬಂಧವು 1857ರ ಅಂತಹ ದಂಗೆಯ ನಾಲಕ್ಕೂ ಪಾತ್ರಗಳ ಬಗ್ಗೆ ಚರ್ಚಿಸುತ್ತದೆ. ಶಾಮಾಲ್, ದೇವಿ ಸಿಂಗ್, ಗೊನೂ ಮತ್ತು ಮೌಲ್ವಿ ಅಹ್ಮದುಲ್ಲಾ ಷಾ ಇವರ ಕಥೆಗಳು, 1857ರಲ್ಲಿ ಗ್ರಾಮ್ಸಿ ಹೇಳಿದ "ಪ್ರಜ್ಞಾವಂತ ನಾಯಕತ್ವದಲ್ಲಿ ಅನೇಕ ಅಂಶಗಳು" ಅಸ್ತಿತ್ವದ ಬಗ್ಗೆ ಬೆರಳು ತೋರಿಸುತ್ತವೆ.

## 20.4 ಸಾರಾಂಶ

ಹೀಗೆ ಕೆಳವರ್ಗಗಳ ಇತಿಹಾಸಕಾರರು ಭಾರತೀಯ ಇತಿಹಾಸ ಲೇಖನವನ್ನು ಮೇಲ್ವರ್ಗಗಳ ಜಾರಿಕೊಳ್ಳುವ ರಾಜಕೀಯದ ಸಂದರ್ಭದಲ್ಲಿ ಅದರ ವಿವಿಧ ದೃಷ್ಟಿಕೋನಗಳಲ್ಲಿ ಮತ್ತು ಕೆಳವರ್ಗಗಳಿಗೆ ಯಾವುದೇ ರೀತಿಯ ಸಾಮಾಜಿಕವಾಗಿ ಸಮ್ಮತವಾದ ಸ್ಥಾನವನ್ನು ಕೊಡದೆ ಅವರನ್ನು ಕೆಲಸ ಮಾಡಲು ಒತ್ತಾಯಿಸುವುದರಲ್ಲಿ ಕೆಳಸ್ತರವರ ಮೇಲೆ ಮೇಲಿನವರು ಹೊಂದಿದ ಅಧಿಕಾರ/ದರ್ಪದ ರೀತಿಯನ್ನು ತೋರಲು ಪ್ರಯತ್ನಿಸಿದ್ದಾರೆ. ಮೇಲ್ವರ್ಗಗಳ ಅಧಿಪತ್ಯದ ಬೆದರಿಕೆಯಿಂದ ಅವರ ಜೀವವನ್ನು ರಕ್ಷಿಸಲು ಮೇಲಿನವರನ್ನು ಜನಪ್ರಿಯ ರಾಜಕೀಯದಿಂದ ಬೇರೆಮಾಡಿದ್ದ ಸಾಮಾಜಿಕ ಅಡೆತಡೆಗಳನ್ನು ದಾಟುವ ವಿಧಾನದಲ್ಲಿ ಅವರು ತಮ್ಮದೇ ಆದ ಇತಿಹಾಸ ಮತ್ತು ಸಂಸ್ಕೃತಿಯನ್ನು ಮರುಶೋಧಿಸಲು ಒತ್ತಾಯಿಸಲ್ಪಟ್ಟರು.

ಈ ರೀತಿಯ ವಿಶ್ಲೇಷಣೆಯಿಂದ ರಾಷ್ಟ್ರೀಯತೆಯು ಸ್ಥಾಪಿತವಾದ ಸಾಂಸ್ಥಿಕ ಮತ್ತು ಸಾಂಸ್ಥಿಕವಲ್ಲದ ರೀತಿ ಮತ್ತು ಆಚರಣೆಗಳ ನಡುವೆ ಕೆಳಸ್ತರದಲ್ಲಿ ಕೆಲಸ ಮಾಡಿತೆನ್ನುವುದು ಸ್ಪಷ್ಟವಾಗಿದೆ. ಆದರೂ ಇತಿಹಾಸ ಲೇಖನವು ಮೇಲ್ವರ್ಗಗಳ ಅನುಕೂಲಗಳು, ಕೆಳವರ್ಗಗಳವರಿಗಿಂತ ಎಷ್ಟೋ ಪಾಲು ಉನ್ನತವಾಗಿದ್ದ ಪರಿಸ್ಥಿತಿಯಲ್ಲಿ ಪ್ರಾರಂಭವಾಯಿತು. ಕೆಳಸ್ತರದ ಇತಿಹಾಸಕಾರರು ಕೆಳಸ್ತರದ ಜನರ ಜೀವನ ಶೈಲಿಗಳನ್ನೂ ಅವರ ನಡವಳಿಕೆಗಳನ್ನು ಮೇಲಿನ ಸಂಸ್ಕೃತಿ ಮತ್ತು ರಾಜಕೀಯಕ್ಕೆ ಅವರ ಪ್ರತಿಕ್ರಿಯೆಯನ್ನು ಅನ್ವೇಷಿಸುತ್ತಾ ಇತಿಹಾಸ ಲೇಖನದ ಜ್ಞಾನವನ್ನು ವಿಸ್ತೃತಗೊಳಿಸಿದರು.

ಕೆಳವರ್ಗಗಳ ಇತಿಹಾಸ ಕಥನವು ಭಾರತೀಯ ಸಮಾಜದ ತಳಪಾಯಗಳಿಗೆ ಚಾರಿತ್ರಿಕ ತನಿಖೆಗಳನ್ನು ತರುತ್ತಿದೆ. ಶ್ರಮಿಕರ, ರೈತರ ಮತ್ತು ಬುಡಕಟ್ಟು ಜನಾಂಗದವರ ಹೋರಾಟವನ್ನು ಎತ್ತಿಹಿಡಿಯುವ ಕಾತರತೆಯಲ್ಲಿ ಕೆಳವರ್ಗದವರು ಸಾಂಪ್ರದಾಯಿಕ ಇತಿಹಾಸ ಕಥನವನ್ನು ಮಾತ್ರವಲ್ಲ, ಮಾರ್ಕ್ಸ್‌ನ ವಿಚಾರ ವಾದವನ್ನು ಏರುಪೇರು ಮಾಡಿದ್ದಾರೆ. ಕೆಳವರ್ಗದ ಇತಿಹಾಸ ಕಥನವು ಅಗತ್ಯವಾಗಿ ಉಪಚರಿತ್ರೆಯ ವಿಧಕ್ಕೆ ಸೇರುತ್ತದೆ. ಅಥವಾ ಮುಖ್ಯವಾಹಿನಿಯ ಚಾರಿತ್ರಿಕ ವರದಿಗಳಿಗೆ ಪೂರಕವಾಗಿ ಮತ್ತು ಅದನ್ನು ಶ್ರೀಮಂತಗೊಳಿಸುತ್ತ ಮತ್ತು ಅವುಗಳಲ್ಲಿನ ಲೋಪವನ್ನು ಮುಚ್ಚುತ್ತಾ ಸಾಗುತ್ತದೆ. ಸಡಿಲವಾದ ಋಣಾತ್ಮಕವಾದ ಮೇಲ್ವರ್ಗ ಮತ್ತು ಕೆಳವರ್ಗಗಳ ಎರಡು ವಿಭಾಗಗಳಲ್ಲಿ ಜನಪ್ರಿಯ ಸೈನಿಕ ಹೋರಾಟ ಮತ್ತು ಪ್ರಜ್ಞೆಗಿಂತ ಹೆಚ್ಚಿನ ವಿಷಯವಿಲ್ಲಾ. ಅದರ ಪಾಠಗಳು ಯಾವುದೇ ರೀತಿಯ ಸಂಬಂಧ ಅಥವಾ ಸಂದರ್ಭವಿಲ್ಲದೆ ಕಠಿಣವಾಗಿ ವಿಭಜಿಸಲ್ಪಟ್ಟಿವೆ. ಒಂದು ತಡೆರಹಿತ ಮತ್ತು ಸಂಕ್ಷಿಪ್ತ ವಿವರಣೆ ಅದರ ವ್ಯಾಪ್ತಿಯ ಹೊರಗಿದೆ. ಆದರೂ ಅದರ ಧನಾತ್ಮಕ ಭಾಗವು ಕೆಳವರ್ಗದ ಇತಿಹಾಸ ಕಥನದ ದೃಷ್ಟಿಯಿಂದ ಮರೆಯಾಗಬಾರದು. ಅನೇಕ ಕಥೆಗಳಿಗೆ ನಂಬಿಕೆ ಮತ್ತು ಹೋರಾಟಕ್ಕೆ ಕತ್ತಲ ಮತ್ತು ಮಲಿನ ಕೊಠಡಿಗಳಲ್ಲಿ ಧೂಳು ತುಂಬಿದ ಕಪಾಟುಗಳಲ್ಲಿ ನಮ್ಮ ಅಸಂಖ್ಯಾತ ದಾಖಲೆಗಳು ಈ ಮಾತಿಗೆ ಸಾಕ್ಷಿಯಾಗಿ ನಿಲ್ಲುತ್ತವೆ.

ಒಟ್ಟಾರೆಯಾಗಿ ಭಾರತದ ಇತಿಹಾಸ ಲೇಖನ ಕಲೆಯಲ್ಲಿ ಕೆಳವರ್ಗದ ಇತಿಹಾಸ ಲೇಖನ ಕಲೆಯ ಅಥವಾ ಬರವಣಿಗೆ ಒಂದು ಉತ್ತಮ ಬೆಳವಣಿಗೆಯಾಗಿದೆ ಎನ್ನಬಹುದು. ಆದ್ದರಿಂದ ಇಂದು ಕೆಳವರ್ಗದ

ಅಥವಾ ಸಾಮಾನ್ಯ ಜನರ ಅಥವಾ ಪ್ರಜೆಗಳ ಕೊಡುಗೆ ಸಾಕಷ್ಟು ಇರುತ್ತದೆ ಎಂದು ಮರೆಯಲು ಸಾಧ್ಯವಿಲ್ಲ. ಹಾಗೆಯೇ ಯಾವುದೇ ಕಾರ್ಯ ಯಶಸ್ವಿಯಾಗಲು ಯಾವುದೇ ಒಬ್ಬ ನಾಯಕರ ಕೊಡುಗೆ ಮಾತ್ರವಲ್ಲ, ಪ್ರತಿಯೊಬ್ಬ ಪ್ರಜೆಯೂ ತನ್ನದೇ ಆದ ಕೊಡುಗೆಯನ್ನು ನೀಡುತ್ತಾನೆ ಎಂಬುದನ್ನು ಈ ಕೆಳವರ್ಗದ ಇತಿಹಾಸವನ್ನು ತಿಳಿಸುತ್ತಾರೆ.

## 20.5 ಪ್ರಮುಖ ಪದಗಳು

1. ಸಬ್ ಆಲ್ಟರ್ನ್ ಸ್ಟಡೀಸ್: ಪರಸ್ಪರ ಸಂಪರ್ಕ ಇಲ್ಲದ ವಿಚಾರಗಳ ಬಗೆಗಿನ ಪ್ರಬಂಧಗಳ ಸಂಗ್ರಹ
2. ಗಣ್ಯ: ಅಸಮನಾದ ಸಂಪತ್ತು ಮತ್ತು ರಾಜಕೀಯ ಶಕ್ತಿಯನ್ನು ನಿಯಂತ್ರಿಸುವ ಸಣ್ಣ ಗುಂಪಿನ ಜನರು. ಸಾಮಾನ್ಯವಾಗಿ ಗಣ್ಯರು ಎಂದರೆ ಹೆಚ್ಚಿನ ಸಾಮರ್ಥ್ಯದ ಜನರ ಗುಂಪು.

‘

## 20.6 ನಿಮ್ಮ ಪ್ರಗತಿಯನ್ನು ಪರಿಶೀಲಿಸಿ

1. ಭಾರತದಲ್ಲಿ ಕೆಳವರ್ಗದ ಇತಿಹಾಸ ಲೇಖನ ಕಲೆಯ ಸ್ವರೂಪದ ಬಗ್ಗೆ ವಿಮರ್ಶಾತ್ಮಕವಾಗಿ ಚರ್ಚಿಸಿ.
2. ಕೆಳವರ್ಗದ ಇತಿಹಾಸ ಲೇಖನಕಾರರ ಕೊಡುಗೆಗಳನ್ನು ವಿವರಿಸಿ.

## 20.7 ನಿಮ್ಮ ಪ್ರಗತಿಯನ್ನು ಪರಿಶೀಲಿಸಲು ಉತ್ತರಗಳು

1. ವಿಭಾಗ 20.2 ನೋಡಿ
2. ವಿಭಾಗ 20.3 ನೋಡಿ

## 20.8 ಪರಾಮರ್ಶನ ಗ್ರಂಥಗಳು


1. Bajaj, Satish, K., *‘Recent Trends in Historiography’*, New Delhi, 1988.
2. Carr C H, *‘What is History’*, London, 1983.
3. Gyanendra Pandy, ‘*Construction of Communalism in Colonial North India’*, 1992, Delhi.
4. Majumdar, R C., *‘Historiography in Modern India’*, Bombay, 1967.
5. Mushirul Hassan, *‘Nationalism and communal politics in India: 1885, 1930, 1992’*, Delhi.

ಪಠ್ಯವನ್ನು ರಚಿಸಿದವರು:
ಜಿ.ಟಿ.ಸೋಮಶೇಖರ್